
ಹಿಮಾಂಶು

ಡಾ. ಸಾ. ಶಿ. ಮರುಳಯ್ಯ

ಗೌರವ ಗ್ರಂಥ

ಪ್ರಧಾನ ಸಂಪಾದಕರು:
ಡಾ. ಪಿ. ವಿ. ನಾರಾಯಣ್



ಇಷ್ಟಾಂಶು

ಡಾ. ಸಾಶಿಮ ಗೌರವ ಗ್ರಂಥ

ಇಷಾಂಶು

ಡಾ. ಸಾಶಿಮ ಗೌರವ ಗ್ರಂಥ

ಪ್ರಧಾನ ಸಂಪಾದಕರು :

ಡಾ. ಪಿ. ವಿ. ನಾರಾಯಣ

ಸಂಪಾದಕರು :

ಡಾ. ಸಂಗಮೇಶ ಸವದತ್ತಿಮಠ

ಡಾ. ಸಾ. ಶಿ. ಮರುಳಯ್ಯ ಅಭಿನಂದನ ಸಮಿತಿ

'ಗುರುಪ್ರಸಾದ', ನಂ. ೮೪೫, ೪ನೇ ಮುಖ್ಯರಸ್ತೆ

ವಿಜಯನಗರ, ಬೆಂಗಳೂರು - ೫೬೦ ೦೪೦

ಶ್ರೀ ಜಗದ್ಗುರು ರಂಭಾಪುರೀ ವೀರಸಿಂಹಾಸನ ಮಹಾಸಂಸ್ಥಾನ ಪೀಠ

ಬಾಳೆಹೊನ್ನೂರು - 577 112

ISHAMSHU - A felicitation volume containing articles about the life and works of Dr. S.S. Marulaiah, presented on his 70th Birthday, Chief Editor : P.V. Narayana, Published by Sa. Shi. Marulaiah Abhinandana Samithi, 'Guruprasada', 845, 4th Main, Vijayanagara, Bangalore - 560 040.

Pages : 390 + 18

ಪ್ರಥಮ ಮುದ್ರಣ : 2001

ಬೆಲೆ : 150/-

ಮುಖಪುಟ ವಿನ್ಯಾಸ : **ಚಂದ್ರನಾಥ್ ಆಚಾರ್ಯ**

ಮುದ್ರಕರು :
ಅನುಭವ ಪ್ರಿಂಟರ್ಸ್
1213, 5ನೇ ಬ್ಲಾಕ್, ರಾಜಾಜಿನಗರ,
ಬೆಂಗಳೂರು - 560 10.
ದೂರವಾಣಿ : 340 1577, 3401955

ಅರ್ಪಣೆ

ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ

ಶ್ರೀ ಶ್ರೀ ಶ್ರೀ ೧೦೦೮ ಜಗದ್ಗುರು

ಪ್ರಸನ್ನ ರೇಣುಕ ವೀರಸೋಮೇಶ್ವರ

ರಾಜದೇಶಿಕೇಂದ್ರ, ಶಿವಾಚಾರ್ಯ

ಮಹಾಸ್ವಾಮಿಗಳವರ

ದಿವ್ಯ ಮಹಾಸನ್ನಿಧಿಯಲ್ಲಿ

ಭಕ್ತಿಪೂರ್ವಕವಾಗಿ ಸಮರ್ಪಿಸಲಾಗಿದೆ.

ಶ್ರೀಮದ್ ರಂಭಾಪುರೀ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರಸೋಮೇಶ್ವರರಾಜ ದೇಶಿಕೇಂದ್ರಶಿವಾಚಾರ್ಯ ಮಹಾಸ್ವಾಮಿಗಳವರು

ಪ್ರೊ. ಆರ್. ರಾಚಪ್ಪ

ಮಲಯಾಚಲ ಮಧ್ಯದಲ್ಲಿ ವಿರಾಜಮಾನವಾಗಿರುವ ಶ್ರೀಶ್ರೀಶ್ರೀ ರೇಣುಕಾಚಾರ್ಯ ಜಗದ್ಗುರುಗಳಿಂದ ಸ್ಥಾಪಿಸಲ್ಪಟ್ಟ ಶ್ರೀಮದ್ ರಂಭಾಪುರಿ ವೀರಸಿಂಹಾಸನದ 121ನೇ ಜಗದ್ಗುರುಗಳಾಗಿ 6.2.1992ರಂದು ಶಿವಗಂಗಾ ಮೇಲಣ ಗವಿಮಠಾಧೀಶರಾಗಿದ್ದ ಶ್ರೀ ಷ.ಬ್ರ. ಸಿದ್ಧಲಿಂಗ ಶಿವಾಚಾರ್ಯರು ಜಗದ್ಗುರು ಶ್ರೀ ಪ್ರಸನ್ನ ರೇಣುಕ ವೀರರುದ್ರಮುನಿದೇವರ ಮರಣ ಶಾಸನದಂತೆ ಶ್ರೀಶ್ರೀಶ್ರೀ ಪ್ರಸನ್ನ ರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯರೆಂಬ ನೂತನಾಭಿದಾನದೊಂದಿಗೆ ಪೀಠಾರೋಹಣ ಮಾಡಿದರು.

ಧರ್ಮಗುರು ಅಧಿಕಾರ ವಹಿಸಿಕೊಳ್ಳುವ ಪೂರ್ವದಲ್ಲಿಯೇ ಸಾಹಿತ್ಯಭಿರುಚಿ ಹೊಂದಿದ್ದ ಶ್ರೀಶ್ರೀಗಳು ಧರ್ಮ-ಸಾಹಿತ್ಯ-ಸಂಸ್ಕೃತಿಗಳ ತ್ರಿವೇಣಿ ಸಂಗಮ. 'ನೂರೆಂಟು ನುಡಿಗಳ ಮುತ್ತುಗಳು' - ಮಹಾತಪಸ್ವಿ ಶ್ರೀ ಉಜ್ಜಯನಿ ಸಿದ್ಧಲಿಂಗ ಜಗದ್ಗುರುಗಳವರ ಚರಿತ್ರೆ'', 'ಒಳಕಲ್ಲು ತೀರ್ಥಮಹಿಮೆ', 'ಶಿವಗಂಗಾದರ್ಶನ', 'ಗುರುಮಹಿಮೆ', 'ಶ್ರೀಜಗದ್ಗುರು ರೇಣುಕವಚನಾಮೃತ', 'ವೀರಶೈವ ಸಂಸ್ಕೃತಿ', 'ಶ್ರೀಜಗದ್ಗುರು ರುದ್ರಮುನೀಶ್ವರರ ಜೀವನ ಚರಿತ್ರೆ', 'ಶ್ರೀಮದ್ರಂಭಾಪುರೀ ಜಗದ್ಗುರುಗಳವರ ಶುಭಾಶೀರ್ವಾದ ಸಂದೇಶ' ಮೊದಲಾದ ಕೃತಿಗಳನ್ನು ರಚಿಸಿ ಸಂಪಾದಿಸಿ ಸಹೃದಯರ ಅಧ್ಯಯನಕ್ಕೆ ನೀಡಿದ್ದಾರೆ. ಶ್ರೀಗಳವರು ''ಸಮರ್ಪಣೆ', 'ಧರ್ಮಜ್ಯೋತಿ', ಮತ್ತು 'ಗುರುವಂದನೆ', ಸ್ಮರಣ ಸಂಪುಟಗಳನ್ನೂ ಸಮರ್ಥವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. 'ಅಮರಜೀವನ' ಮಾಸಪತ್ರಿಕೆಯ ಸಂಪಾದಕರಾಗಿ ಹಲವಾರು ವರ್ಷ ಧರ್ಮ ಪ್ರಚಾರವನ್ನು ಸಾಹಿತ್ಯ ಸಾಹಚರ್ಯದೊಂದಿಗೆ ನಡೆಸಿದ್ದಾರೆ.

ಶ್ರೀಗಳವರ ಧರ್ಮ-ಸಾಹಿತ್ಯ ಸೇವೆಯನ್ನು ಮನಗಂಡ ಶ್ರೀಮದ್ ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ 1008 ಜಗದ್ಗುರು ಪ್ರಸನ್ನ ರೇಣುಕ ವೀರರುದ್ರಮುನಿ ಶಿವಾಚಾರ್ಯ ಮಹಾಸ್ವಾಮಿಗಳವರು 1985ರಲ್ಲಿ ಹುಬ್ಬಳ್ಳಿಯಲ್ಲಿ ನಡೆದ ದಸರಾ ದರ್ಬಾರಿನಲ್ಲಿ 'ಶಿವಾದ್ವೈತ ಸಾಹಿತ್ಯ ತಪಸ್ವಿ' ಎಂಬ ಪ್ರಶಸ್ತಿ ಹಾಗೂ 1991ರಲ್ಲಿ ನೆಲಮಂಗಲದಲ್ಲಿ ನಡೆದ ದಸರಾ ದರ್ಬಾರಿನಲ್ಲಿ 'ಧರ್ಮ ಸಾಹಿತ್ಯ ಭೂಷಣ' ಪ್ರಶಸ್ತಿಗಳನ್ನು ದಯಪಾಲಿಸಿ ಗೌರವಿಸಿದ್ದಾರೆ. 1978ರಿಂದ ಶ್ರೀರಂಭಾಪುರೀಪೀಠದ ವಾರ್ತಾಕಾರ್ಯದರ್ಶಿಗಳಾಗಿಯೂ ಕರ್ತವ್ಯ ನಿರ್ವಹಿಸಿದರು.

1992ರಲ್ಲಿ ವೀರಸಿಂಹಾಸನಾರೂಢರಾದ ನಂತರದಲ್ಲಿ ಶ್ರೀಪೀಠದಲ್ಲಿ


ಸಾಹಿತ್ಯ-ಸಂಸ್ಕೃತಿ-ಧರ್ಮಗಳ ಸಂವರ್ಧನೆಗೆ ಸತತವಾಗಿ ಶ್ರಮಿಸುತ್ತಿದ್ದಾರೆ. ಜಗದ್ಗುರುಗಳಾಗಿ ಅಧಿಕಾರ ಸ್ವೀಕಾರಮಾಡಿದ ದಿನದಿಂದಲೂ, ಕರ್ಣಾಟಕ-ಆಂಧ್ರ, ಮಹಾರಾಷ್ಟ್ರಗಳಲ್ಲಿ ಸಂಚರಿಸಿ ಧರ್ಮಡಿಂಡಿಮವನ್ನು ಬಾರಿಸಿ ವೀರಶೈವ ಧರ್ಮ ಪ್ರಸಾರಕ್ಕೆ ಹೊಸ ಚಾಲನೆ ನೀಡಿದ್ದಾರೆ.

ಶಿಕ್ಷಣ ಪ್ರೇಮಿಗಳಾದ ಜಗದ್ಗುರುಗಳು, ಶ್ರೀಪೀಠದಲ್ಲಿ ಅಸ್ತಿತ್ವದಲ್ಲಿದ್ದ ಐ.ಟಿ.ಐ. ಕೈಗಾರಿಕಾ ತರಬೇತಿ ಕೇಂದ್ರವನ್ನು ಗಟ್ಟಿಗೊಳಿಸಿದ್ದಲ್ಲದೆ 'ಕ್ಷೇತ್ರನಾಥ ವೀರಭದ್ರಸ್ವಾಮಿ ಹಾಗೂ ಜಗದ್ಗುರು ರೇಣುಕಾಚಾರ್ಯ ರುದ್ರಾಭಿಷೇಕ ನಿಧಿ'', ''ಶ್ರೀ ಜಗದ್ಗುರು ರೇಣುಕಾಚಾರ್ಯ ನಿತ್ಯದಾಸೋಹನಿಧಿ'', ''ಶ್ರೀಜಗದ್ಗುರು ರಂಭಾಪುರೀಶ್ವರ ಗ್ರಂಥಮಾಲೆ'. 'ಶ್ರೀ ಜಗದ್ಗುರು ರೇಣುಕಾಚಾರ್ಯ ಶಿಕ್ಷಣ ಪ್ರತಿಷ್ಠಾನ', 'ಶ್ರೀ ಜಗದ್ಗುರು ರೇಣುಕಾಚಾರ್ಯ ಗುರುಕುಲ', ಶ್ರೀ ಜಗದ್ಗುರು ರುದ್ರಮುನೀಶ್ವರ ಸಂಯುಕ್ತ ಪ್ರೌಢಶಾಲೆಗಳನ್ನು ಸ್ಥಾಪಿಸಿ ಅವು ಯಶಸ್ವಿಯಾಗಿ ಕಾರ್ಯನಿರ್ವಹಿಸುವಂತೆ ಆಶೀರ್ವದಿಸಿದ್ದಾರೆ. 'ರಂಭಾಪುರೀ ಬೆಳಗು' ದ್ವೈಮಾಸಿಕ ಪತ್ರಿಕೆಯನ್ನು ಆರಂಭಿಸಿ ಧರ್ಮ, ಸಾಹಿತ್ಯ-ಸಂಸ್ಕೃತಿಗಳ ಸಂವರ್ಧನೆಗೆ ನವಚೈತನ್ಯ ತುಂಬಿದ್ದಾರೆ.

ಶ್ರೀಶ್ರೀಶ್ರೀ ಜಗದ್ಗುರುಗಳವರ ಧರ್ಮ-ಸಾಹಿತ್ಯ-ಸಂಸ್ಕೃತಿಗಳ ಸಂಪ್ರೀತಿ ಸಮಾಜಕ್ಕೆ ಒಂದು ವರವಾಗಿ ಪರಿಣಮಿಸಿ ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸತತವಾಗಿ ಸಾಗುತ್ತಿದೆ.



ಶ್ರೀಮದ್ರಂಭಾಪುರಿ ವೀರಸಿಂಹಾಸನಾಧೀಶ್ವರ ಶ್ರೀಶ್ರೀಶ್ರೀ೧೦೦೮ ಜಗದ್ಗುರು
ಪ್ರಸನ್ನರೇಣುಕ ವೀರಸೋಮೇಶ್ವರ ರಾಜದೇಶಿಕೇಂದ್ರ ಶಿವಾಚಾರ್ಯಭಗವತ್ಪಾದರು
ಬಾಳೇಹೊನ್ನೂರು



[illegible]



ಪರಮ [illegible] ಷ|| ಬ್ರ|| ಶ್ರೀ [illegible]
ಶಿವಾಚಾರ್ಯ ಮಹಾಸ[illegible]
[illegible]

‘ಇಷಾಂಶು’ ಡಾ ಸಾ.ಶಿ.ಮ. ಗೌರವ ಗ್ರಂಥದ ರೂವಾರಿದ್ವಯರಿಗೆ ಕೃತಜ್ಞತಾಪೂರ್ವಕ ಪ್ರಣಾಮಗಳು

ಡಾ|| ಸಾ.ಶಿ. ಮರುಳಯ್ಯ ಅಭಿನಂದನೆ

ಪೋಷಕರು
ಕೆ. ಶಿವರಾಂ, ಐ.ಎ.ಎಸ್.

ಗೌರವಾಧ್ಯಕ್ಷರು
ಡಾ|| ಎಂ. ಎಂ. ಕಲಬುರ್ಗಿ

ಕಾರ್ಯಾಧ್ಯಕ್ಷರು
ಜಯಾ ರಾಜಶೇಖರ್

ಸ್ವಾಗತಾಧ್ಯಕ್ಷರು
ವತ್ಸಲಾ ಆರ್. ಪ್ರಭು

ಉಪಾಧ್ಯಕ್ಷರು

ಡಾ|| ಎಸ್. ವಿದ್ಯಾಶಂಕರ   ಕೆ. ಎ. ಸೋಮಯ್ಯ   ಎಸ್. ಶ್ರೀನಿವಾಸ ಉಡುಪ
ಸಿ. ಕೆ. ಪರಶುರಾಮಯ್ಯ   ಕೆ. ಎಸ್. ಜಯಲಿಂಗಪ್ಪ   ಟಿ. ಮಹಾಬಲೇಶ್ವರ ಭಟ್ಟ
ಪಿ. ಆರ್. ಮಲ್ಲಿಕಾರ್ಜುನಯ್ಯ

ಕಾರ್ಯದರ್ಶಿಗಳು

ಡಾ|| ಸಿ.ಯು. ಮಂಜುನಾಥ್   ಎ.ಎಸ್. ಭಟ್

ಸಹ ಕಾರ್ಯದರ್ಶಿಗಳು

ಎಚ್. ಜಯಮ್ಮ ಕರಿಯಣ್ಣ   ಕೆ. ಪಿ. ಮನೋಹರಯ್ಯ

ಕೋಶಾಧ್ಯಕ್ಷರು

ಎನ್. ಎಂ. ಶಿವಕುಮಾರ್

ಲೆಕ್ಕ ಪರಿಶೋಧಕರು

ಸದಾಶಿವ್ ಅಂಡ್ ಕೊ.

ಸಂಪಾದಕರ ಮಾತು

ಮಾತುಗಾರಿಕೆ ಅವರನ್ನು ಒಲಿದದ್ದರಿಂದ ಮರುಳಯ್ಯನವರು ಅಧ್ಯಾಪಕರಾದರೋ, ಅಧ್ಯಾಪನದಿಂದಾಗಿ ಅವರ ವಾಗ್ಮಿತೆ ಬೆಳೆಯಿತೋ ಎಂದು ನನಗೆ ಆಚ್ಚರಿಯಾಗಿದೆ. ಆದರೆ ಅವರ ಕುಟುಂಬ ಪರ್ಯಾಲಕ್ಕೆ ಅಧ್ಯಾಪನ ಅಂಟಿ ಬಂದದ್ದು. ಅವರ ತಂದೆಯೇ ಕೂಲಿಮಠದ ಓಜಯ್ಯಗಳು. ಅವರ ದೊಡ್ಡಪ್ಪ, ಸೋದರ ಮಾವ ಕೂಡ ಅಷ್ಟೇ. ಹೀಗಾಗಿ ಮರುಳಯ್ಯನವರಿಗೆ ಅಧ್ಯಾಪನ ಪ್ರವೃತ್ತಿ ವಂಶಪಾರಂಪರ್ಯವಾಗಿ ಬಂದದ್ದು. ಹಾಗೆಯೇ ಅವರ ಬರವಣಿಗೆಯ ಹವ್ಯಾಸವೂ. ''ಕಥಾಶ್ರವಣ ಮಾಡ್ಯೆ'' ಎಂಬ ಒಂದು ಪುಸ್ತಕವನ್ನು ಅವರೇ ಸಂಪಾದಿಸಿದ್ದಾರೆ. ಅದರಲ್ಲಿರುವುದು ತಮ್ಮ ಮನೆಯಲ್ಲಿ ಹಿರಿಯರುಗಳು ಬರೆದಿಟ್ಟಿದ್ದ ಹರಿಕಥೆ ಪ್ರವಚನಗಳನ್ನು ಮಾಡಲು ಸಿದ್ಧಪಡಿಸಿದ್ದ ಬರಹಗಳು. ಅಂದರೆ ಅವರ ಮನೆಯಲ್ಲಿ ಸಾಹಿತ್ಯದ ವಾತಾವರಣವೂ ಇತ್ತಾದ್ದರಿಂದ ಮರುಳಯ್ಯನವರಿಗೆ ಅಧ್ಯಾಪನ-ಲೇಖನಗಳೆರಡರಲ್ಲೂ ಸಹಜವಾದ ಆಸಕ್ತಿ ಮೊದಲಿನಿಂದಲೇ ಮೂಡಿತು. ಜೊತೆಗೆ ಆಳವಾದ ಅಧ್ಯಯನವು ಸೇರಿ ಅವರನ್ನು ವಿದ್ವಾಂಸರ ಸಾಲಿನಲ್ಲಿಯೂ ನಿಲ್ಲಿಸಿತು. ಅವರು ವಿದ್ವತ್ತು-ಭಾವುಕತೆ ಇವುಗಳ ವಿಶಿಷ್ಟ ಸಮ್ಮಿಶ್ರ ಹದದ ಬರವಣಿಗೆಗೆ ಹೆಸರಾಗಿದ್ದಾರೆ. ಅವರ ಮಾತುಗಾರಿಕೆಯೂ ಹಾಗೆಯೇ ಇರುವುದರಿಂದ ತಕ್ಷಣವೇ ಎದುರಿಗಿರುವವರನ್ನು ಆಕರ್ಷಿಸುತ್ತದೆ.

ವಿವಿಧ ಜಾಗಗಳ ಸರ್ಕಾರಿ ಕಾಲೇಜುಗಳಲ್ಲಿ ಸಾವಿರಾರು ವಿದ್ಯಾರ್ಥಿಗಳಿಗೆ ಸಾಹಿತ್ಯಸ್ಫೂರ್ತಿಯನ್ನುಣಬಡಿಸಿ, ಕೆಲ ವರ್ಷಗಳು ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ವಿಶ್ವಕೋಶದ ಸಂಪಾದಕರಾಗಿ, ರಾಜ್ಯಭಾಷಾ (ವಿಧಾಯೀ) ಆಯೋಗದ ಸದಸ್ಯರಾಗಿ ಡಾ. ಮರುಳಯ್ಯನವರು ಕೆಲಸ ಮಾಡಿದರು. ಮಂಗಳೂರಿನ ಸರ್ಕಾರಿ ಕಾಲೇಜಿನಲ್ಲಲ್ಲದೆ ಚೆನ್ನಪಟ್ಟಣದ ಕುವೆಂಪು ಮಹಾವಿದ್ಯಾಲಯದಲ್ಲಿಯೂ ಪ್ರಾಂಶುಪಾಲರಾಗಿ ಕೆಲಕಾಲ ಕೆಲಸ ಮಾಡಿದರು. ಹೋದೆಡೆಯಲ್ಲೆಲ್ಲ ಅವರು ಜಯಭೇರಿ ಬಾರಿಸಿದರು. ಅವರು ಪಾಠ ಹೇಳಿದ್ದು ಸರ್ಕಾರಿ ಕಾಲೇಜುಗಳಲ್ಲಾದ್ದರಿಂದ ರಾಜಕಾರಣಿಗಳು ಮಠಾಧೀಶರು ಡಾಕ್ಟರರು ಇಂಜಿನಿಯರುಗಳು ಉನ್ನತ ಅಧಿಕಾರಿಗಳು ಕಾಲೇಜುಗಳಲ್ಲಿ ಅವರಿಂದ ನೇರವಾಗಿ ಪಾಠ ಕೇಳಿದವರು. ನಿವೃತ್ತಿಯ ನಂತರ, ಕನ್ನಡ ಎಂ.ಎ. ಬಾಹ್ಯ ವಿದ್ಯಾರ್ಥಿಗಳ ಅನುಕೂಲಕ್ಕೆಂದು ಅವರು ತರಗತಿಗಳನ್ನು ನಡೆಸುವುದರಿಂದ ಎಷ್ಟೋ ಮಂದಿ ವ್ಯಾಪಾರಿಗಳು ವೃತ್ತಿನಿರತರುಗಳಲ್ಲಿ ಸಾಹಿತ್ಯದ ಹುಚ್ಚನ್ನು ಅವರು ಬೆಳೆಸಿದ್ದಾರೆ. ಅಲ್ಲದೆ, ಅವರು ಕನ್ನಡವನ್ನು ಐಚ್ಛಿಕವಾಗಿ ಆರಿಸಿಕೊಂಡ ಐ.ಎ.ಎಸ್ ಅಭ್ಯರ್ಥಿಗಳಿಗೆ ಮಾರ್ಗದರ್ಶನ ಮಾಡುತ್ತಾರಾಗಿ, ಪ್ರಸ್ತುತ ರಾಜ್ಯದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಅನೇಕ ಮಂದಿ ಐ.ಎ.ಎಸ್. ಅಧಿಕಾರಿಗಳು ಈ ಅರ್ಥದಲ್ಲಿ ಅವರ ಶಿಷ್ಯರಾಗಿದ್ದವರು.

ಮರುಳಯ್ಯನವರ ಸಾಹಿತ್ಯ ಪ್ರತಿಭೆ ಹತ್ತು ದಿಸೆಗಳಲ್ಲಿ ಹರಿದಿದೆ; ಹತ್ತಾರು ಬಗೆಯ ಕೃತಿಗಳನ್ನು ನಿರ್ಮಿಸಿದೆ. ಸೃಜನ-ವಿಮರ್ಶನ-ಸಂಶೋಧನ - ಈ ಎಲ್ಲ ಬಗೆಯ ಪ್ರತಿಭೆ

ಅವರದು. ಸುಮಾರು ಎಂಬತ್ತು ಕೃತಿಗಳನ್ನು ರಚಿಸಿದ್ದರೂ, ಜನರು ಅವರನ್ನು ಮುಖ್ಯವಾಗಿ ಕವಿ ಎಂದು ಗುರುತಿಸುತ್ತಾರೆ; ಅವರಿಗೂ ಹಾಗೆನ್ನಿಸಿಕೊಳ್ಳುವುದು ಇಷ್ಟ. ''ಸುಮ ಸುಂದರ ತರು ಲತೆಗಳ ಬೃಂದಾವನ ಲೀಲೆ'' ಎಂದು ಮೊದಲಾಗುವ ಅವರ ಕವನವು ಆಕಾಶವಾಣಿ-ದೂರದರ್ಶನಗಳಲ್ಲಿ ಆಗಾಗ ಪ್ರಸಾರವಾಗುತ್ತ ತನ್ನ ಶಬ್ದ ಲಾಲಿತ್ಯದಿಂದ ಕೇಳುಗರ ಮನಸ್ಸನ್ನು ಸೆಳೆದಿದೆ. ಅವರು ವಿಶೇಷ ಹೆಸರು ಮಾಡಿರುವುದು ತಮ್ಮ ನೃತ್ಯನಾಟಕ ರಚನೆಗಳಿಗಾಗಿ. ಅವರ ''ಶಿವಲೀಲೆ'' ''ಭಕ್ತಿಭಾವಕಿ'' ''ನಾಟ್ಯಾಂಜಲಿ'' ಮುಂತಾದ ಹಲವಾರು ಸಂಕಲನಗಳು ಹೊರಬಿದ್ದಿವೆ. ''ಸ್ನೋವೈಟ್'' ಎಂಬ ಅವರ ನೃತ್ಯರೂಪಕವಂತೂ ನೂರಾರು ಪ್ರದರ್ಶನಗಳನ್ನು ಕಂಡು ತನ್ನ ಕಸುಬುಗಾರಿಕೆಯ ಶೈಲಿಯಿಂದಾಗಿ ಮಕ್ಕಳ ಹಾಗೂ ಹಿರಿಯರ ಮನ ಗೆದ್ದಿದೆ. ಇದಲ್ಲದೆ, ಮರುಳಯ್ಯನವರ ಪ್ರತಿಭೆ ನಾಲ್ಕಾರು ಸಾಹಿತ್ಯ ಪ್ರಕಾರಗಳಲ್ಲಿ ಕೆಲಸ ಮಾಡಿದೆ. ''ಭಾಸನ ಮಕ್ಕಳು'' ಎಂಬ ಅವರ ವಿಮರ್ಶಾ ಸಂಕಲನವು ೧೯೬೮ರಲ್ಲಿ ದೇವರಾಜ ಬಹದ್ದೂರ್ ಪ್ರಶಸ್ತಿಯನ್ನು ಗೆದ್ದುಕೊಂಡಿದೆ. ''ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು'', ''ಮಾಸ್ತಿಯವರ ಕಾವ್ಯಗಳು'', ''ಮಾಸ್ತಿ ಕಾವ್ಯ : ಒಂದು ಸಮೀಕ್ಷೆ'' ಇವು ಇತರ ವಿಮರ್ಶಾಕೃತಿಗಳು. ಅವರು ಇತ್ತೀಚೆಗೆ ''ಪರಿಕಲ್ಪನೆಗಳು'' ಎಂಬ ಸಂಶೋಧನ-ವಿಮರ್ಶನ ಲೇಖನಗಳ ಸಂಕಲನವೊಂದನ್ನು ಹೊರತಂದಿದ್ದಾರೆ. ಅದರಲ್ಲಿ ಸೇರ್ಪಡೆಯಾಗಿರುವ ''ಗಿಲ್ಗಮಿಶ್'', ''ಗಾಥಾ ಸಪ್ತಶತಿ'' ಮತ್ತು ''ಶುಕ ಸಪ್ತತಿ''ಗಳ ಬಗೆಗಿನ ಲೇಖನಗಳು ಅವರ ಅತ್ಯುತ್ತಮ ಬರವಣಿಗೆಯ ನಿದರ್ಶನಗಳು. ಗಿಲ್ಗಮಿಶ್ ಎಂಬುದು ಅಸ್ಸೀರಿಯನ್ ಬಾಬಿಲೋನಿಯನ್ ಭಾಷೆಗಳಲ್ಲಿನ ಜಾನಪದ ಮಹಾಕಾವ್ಯದ ಹೆಸರು. ಅದರ ಕಥಾಸಾರ ಮತ್ತು ರಚನಾವೈಶಿಷ್ಟ್ಯ ಮತ್ತು ವಸ್ತು ವಿಶ್ಲೇಷಣೆಗಳಲ್ಲದೆ, ಮರುಳಯ್ಯನವರು ಅದರ ಹಿನ್ನೆಲೆಯಾದ ಸಾಂಸ್ಕೃತಿಕ ಬದುಕಿನ ಸಾರವನ್ನೂ ಹಿಡಿದಿಟ್ಟಿದ್ದಾರೆ. ಅಂತೆಯೇ ಗಾಥಾ ಸಪ್ತಶತಿ ಮತ್ತು ಶುಕಸಪ್ತತಿಗಳ ಬಗ್ಗೆ ಬರೆದ ಲೇಖನಗಳು. ಆಯಾ ಕತೆಗಳ ಮೂಲ, ಇತರ ಭಾಷೆಗಳಲ್ಲಿ ಅವು ಪಡೆದ ರೂಪ ಮತ್ತು ವಿಕಾಸಗಳ ರೀತಿ ಇವುಗಳ ಬಗ್ಗೆ ಸಂಶೋಧಕನ ನೆಲೆಯಲ್ಲಿ ಮಾಹಿತಿ ಸಂಗ್ರಹಿಸಿ ಕೃತಿ ವಿಶ್ಲೇಷಣೆ ಮಾಡಿದ್ದಾರೆ. ಅಲ್ಲದೆ, ಇವುಗಳಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವಿದೆ. ಆ ಕಾವ್ಯಗಳ ಬಗ್ಗೆ ಹೇಳುವಾಗ ಅಲ್ಲಲ್ಲಿ ಅವುಗಳಿಂದ ಉದ್ಧರಿಸಿರುವ ಭಾಗಗಳ ಅನುವಾದಗಳು ಅತ್ಯಂತ ಸಹಜ ಶೈಲಿಯಲ್ಲಿ ಬಂದಿವೆ. ಗಿಲ್ಗಮಿಶ್ ಅಂತಹ ಅಪರೂಪದ ಕಾವ್ಯವನ್ನು ಮರುಳಯ್ಯನವರು ಏಕೆ ಸಮಗ್ರವಾಗಿ ಅನುವಾದಿಸಲಿಲ್ಲ ಎಂದು ಓದುಗರು ಅಸಮಾಧಾನಗೊಳ್ಳುವುದು ಸಹಜ; ಅವು ಅಷ್ಟು ಸುಂದರವಾಗಿದೆ.

ಅವರು ತಮ್ಮ ಪಿಎಚ್.ಡಿ. ಅಧ್ಯಯನಕ್ಕೆ ಆರಿಸಿಕೊಂಡ ''ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ'' ಎಂಬುದು ಆ ಕ್ಷೇತ್ರಕ್ಕೆ ಅವರು ಸಲ್ಲಿಸಿರುವ ಒಂದು ಕೊಡುಗೆಯಾಗಿದೆ. ಸಂಶೋಧನೆಯ ಶಿಸ್ತಿಗೆ ಒಳಪಟ್ಟೇ ಸೃಜನಶೀಲತೆಯನ್ನು ತೋರುವ ಮರುಳಯ್ಯನವರ ಶೈಲಿ ಈ ದೃಷ್ಟಿಯಿಂದ ಅನನ್ಯ. ಇತರರೊಂದಿಗೆ ಅವರು ಸಂಪಾದಿಸಿರುವ ''ಅವಳಿ ಪಡೆನುಡಿ ಕೋಶ''ವು ಕನ್ನಡದ ನಿಘಂಟುಗಳ ಸಾಲಿನಲ್ಲಿ ನಿಲ್ಲಬಲ್ಲ ಕೃತಿಯಾಗಿದೆ. ಮರುಳಯ್ಯನವರು ಎಂ.ಎ. ಮತ್ತು ಐ.ಎ.ಎಸ್. ತರಗತಿಗಳಲ್ಲಿ

ಮಾಡಿದ ಉಪನ್ಯಾಸಗಳ ಟಿಪ್ಪಣಿಗಳನ್ನು ತಮ್ಮ ವಿದ್ಯಾರ್ಥಿಗಳಿಂದ ಪಡೆದು ಅದನ್ನು ಪರಿಶೀಲಿಸಿ ಪ್ರಕಟಿಸಿದ ಗ್ರಂಥಗಳು ''ಕನ್ನಡ ಭಾಷೆಯ ಚರಿತ್ರೆ'', ''ಛಂದೋಪ್ರಬಂಧಗಳು'', ''ಕೇಶಿರಾಜನ ಗರಡಿಯಲ್ಲಿ'' - ಇವುಗಳು. ಟಿಪ್ಪಣಿ ಮಾಡಿಕೊಡಿದ್ದ ವಿದ್ಯಾರ್ಥಿಗಳ ಹೆಸರನ್ನು ಸಹ ಲೇಖಕರೆಂಬಂತೆ ಪುಸ್ತಕದ ಮೇಲೆ ಮುದ್ರಿಸಿರುವುದು ಮರುಳಯ್ಯನವರ ಸೌಜನ್ಯವನ್ನು ಮೆರೆಯುತ್ತದೆ. ಕಾವ್ಯಮೀಮಾಂಸೆ ಮತ್ತು ಸಾಹಿತ್ಯ ವಿಮರ್ಶೆಯ ಮೂಲತತ್ವಗಳ ಬಗ್ಗೆಯೂ ಹೀಗೆ ಮಾಡಬೇಕೆಂಬ ಹಂಬಲ ಅವರಿಗಿದೆ.

ಪ್ರಾಚೀನ ಕನ್ನಡ ಕಾವ್ಯಗಳ ಸಂಪಾದನೆಗೆ ಕೂಡ ಅವರಿಂದ ಸೇವೆ ಸಂದಿದೆ. ''ಶ್ರೀ ಸಿದ್ಧಲಿಂಗೇಶ್ವರ ಶತಕ'' ''ಅರುವಿನಾಗರದಲ್ಲಿ'' ಎಂಬಿವುಗಳಲ್ಲದೆ ನೀಲಮ್ಮ ಮತ್ತು ಮಹಾದೇವಿಯಕ್ಕನ ವಚನಗಳನ್ನು ಅವರು ಹೊಸದಾಗಿ ಸಂಪಾದಿಸಿಕೊಟ್ಟಿದ್ದಾರೆ. ವಚನ ಸಾಹಿತ್ಯದ ಬಗ್ಗೆ ಅವರಿಗೆ ವಿಶೇಷ ಆದರ. ಮೇಲೆ ಹೇಳಿದ ವಚನಕಾರರ ವಚನಗಳನ್ನು ಸಂಪಾದಿಸಿರುವುದರ ಜೊತೆಗೆ ಅನೇಕ ಕಡೆಗಳಲ್ಲಿ ಅವರು ಆ ಸಾಹಿತ್ಯದ ಬೇರೆ ಬೇರೆ ಆಯಾಮಗಳ ಬಗ್ಗೆ ಉಪನ್ಯಾಸ ನೀಡಿದ್ದಾರೆ. ಶೂನ್ಯಸಂಪಾದನೆಯ ಬಗ್ಗೆ ಅವರು ಒಂದು ವಿಚಾರ ಸಂಕಿರಣಕ್ಕೆ ಪ್ರೇರಕರಾಗಿದ್ದರು ಮತ್ತು ಅಲ್ಲಿ ಮಂಡಿತವಾದ ಪ್ರಬಂಧಗಳ ಸಂಪುಟವನ್ನು ಸಂಪಾದಿಸಿ ಹೊರತಂದಿರುವುದರ ಜೊತೆಗೆ, ತಾವೇ ''ಶೂನ್ಯಸಂಪಾದನೆಗೊಂದು ಮುನ್ನುಡಿ'' ಎಂಬ ಸ್ವತಂತ್ರ ಗ್ರಂಥವನ್ನು ಪ್ರಕಟಿಸಿದ್ದಾರೆ. ಹಾಗೆಯೇ ಕನಕದಾಸನ ಕೃತಿಗಳನ್ನು ಸರ್ಕಾರದ ಪ್ರಕಟಣೆಗಾಗಿ ಸಂಪಾದಿಸಿದ್ದಾರೆ. ಅವುಗಳಿಗೆ ಮರುಳಯ್ಯನವರು ಬರೆದಿರುವ ಪ್ರಸ್ತಾವನೆಗಳು ಆಯಾ ಕೃತಿಗಳ ಬಗ್ಗೆ ಅನೇಕ ವೇಳೆ ಹೊಸ ದೃಷ್ಟಿಕೋನವನ್ನೂ ತೋರಿಸುತ್ತವೆ.

ಸಾಹಿತ್ಯದ ಹಲವಾರು ಪ್ರಕಾರಗಳಲ್ಲಿ ಗಣನೀಯವಾಗಿ ಕೃತಿರಚನೆ ಮಾಡಿರುವ ಮರುಳಯ್ಯನವರಿಗೆ ಸಿಕ್ಕಬೇಕಾದಷ್ಟು ಬಹುಮಾನಗಳು ಬಂದಿಲ್ಲವೆಂದೇ ಹೇಳಬೇಕು. ಸಾಹಿತ್ಯ ಅಕಾಡೆಮಿ ಮುಂತಾದವುಗಳ ಬಹುಮಾನಗಳಿಗೆ ಕೃತಿಗಳನ್ನು ಲೇಖಕರು ಕಳಿಸಬೇಕಾಗಿರುವ ಕಾರಣ ಆಲಸ್ಯಪಡುವವರಿಗೆ ಮತ್ತು ತಮ್ಮ ಪಾಡಿಗೆ ತಾವಿರುವವರಿಗೆ ಪ್ರಶಸ್ತಿಗಳು ತಪ್ಪುವುದು ಸಹಜ. ಇವರು ಕಳಿಸಿದ್ದಿದ್ದರೆ ಹಲವು ಆಯಾ ವರ್ಷದಲ್ಲಿ ಬಹುಮಾನ ಗಿಟ್ಟಿಸುತ್ತಿದ್ದುದರಲ್ಲಿ ಸಂಶಯವಿಲ್ಲ. ಸಮಾಧಾನಕರ ಅಂಶವೆಂದರೆ, ಸಾಹಿತ್ಯ ಅಕಾಡೆಮಿ ೧೯೯೯ರಲ್ಲಿ ಅವರಿಗೆ ಗೌರವ ಪ್ರಶಸ್ತಿಯನ್ನಿತ್ತಿತು. ಅದೇ ವರ್ಷ ಕರ್ನಾಟಕ ಸರ್ಕಾರವು ಅವರಿಗೆ ರಾಜ್ಯೋತ್ಸವ ಪ್ರಶಸ್ತಿಯನ್ನೂ ನೀಡಿ ಗೌರವಿಸಿತು. ಅಸೀಮ ಮಾತುಗಾರರಾದ ಮರುಳಯ್ಯನವರು ಅನೇಕ ಸಾಹಿತ್ಯ ಗೋಷ್ಠಿಗಳ ಅಧ್ಯಕ್ಷತೆಯನ್ನು ಅಲಂಕರಿಸಿದ್ದಾರೆ. ಕೆಲ ಕಾಲ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಗಳಾಗಿದ್ದುದಲ್ಲದೆ, ೧೯೯೫-೧೯೯೮ರ ಅವಧಿಗೆ ಅವರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಆಯ್ಕೆಯಾಗಿ ಆ ಕಾರ್ಯವನ್ನು ಸಮರ್ಥವಾಗಿ ನಿರ್ವಹಿಸಿದ್ದಾರೆ. ಕನ್ನಡಕ್ಕಾಗಿ ದುಡಿದ ಎಷ್ಟೋ ಹಿರಿಯ ಚೇತನಗಳಿಗೆ ನಾಡು ಸನ್ಮಾನಿಸಿದುದರ ಹಿಂದೆ ಡಾ. ಮರುಳಯ್ಯನವರ ಶ್ರಮವಿದೆ.

ಅಂತಹ ಮರುಳಯ್ಯನವರಿಗೆ ಎಪ್ಪತ್ತು ತುಂಬಿರುವಾಗ ಅವರ ಶಿಷ್ಯರು, ಅಭಿಮಾನಿಗಳು, ಸ್ನೇಹಿತರು, ಹಿತೈಷಿಗಳು ಸೇರಿ ಮಾಡುತ್ತಿರುವ ಸನ್ಮಾನದ ಒಂದು ಭಾಗವಾಗಿ ಈ ಗೌರವ ಗ್ರಂಥ ಪ್ರಕಟವಾಗುತ್ತಿದೆ. ಇಲ್ಲಿ ಅನೇಕ ಹಿರಿಯರು ಅವರ ಬರಹದ ಬಗ್ಗೆ ಮೆಚ್ಚುಗೆಯನ್ನು ವ್ಯಕ್ತಪಡಿಸಿ ಶುಭ ಹಾರೈಸಿದ್ದಾರೆ. ಅವರನ್ನು ಹತ್ತಿರದಿಂದ ಬಲ್ಲ ಅನೇಕರು ಅವರ ಬಗ್ಗೆ ಆತ್ಮೀಯ ನೆನಪುಗಳನ್ನು ಕೊಟ್ಟಿದ್ದಾರೆ. ಇನ್ನೂ ಕೆಲವರು ಅವರ ವಿವಿಧ ಸಾಹಿತ್ಯ ಕೃತಿಗಳ ಬಗ್ಗೆ ಪರಿಚಯ ವಿಮರ್ಶೆಗಳ ಮೂಲಕ ತಮ್ಮ ಗೌರವವನ್ನು ತೋರಿಸಿದ್ದಾರೆ. ನಮ್ಮ ಕೋರಿಕೆಯನ್ನು ಮನ್ನಿಸಿ ಲೇಖನಗಳನ್ನಿತ್ತ ಎಲ್ಲ ಲೇಖಕರಿಗೆ ನಾನು ಸಂಪಾದಕ ಮಂಡಳಿಯ ಪರವಾಗಿ ಕೃತಜ್ಞತೆಯನ್ನು ಅರ್ಪಿಸುತ್ತೇನೆ. ಸುಂದರವಾಗಿ ಗ್ರಂಥವನ್ನು ಮುದ್ರಿಸಿಕೊಟ್ಟ ಅನುಭವ ಮುದ್ರಣಾಲಯದವರಿಗೆ, ವಿಶೇಷವಾಗಿ ಶ್ರೀ ಬಸವರಾಜ ಜಿಗಳೂರು ಅವರಿಗೆ ನನ್ನ ವಂದನೆಗಳು. ರಕ್ಷಾಕವಚವನ್ನು ವಿನ್ಯಾಸಗೊಳಿಸಿದ ಶ್ರೀ ಚಂದ್ರನಾಥ್ ಅವರಿಗೆ, ಗ್ರಂಥದ ಸಂಪಾದಕರಾದ ಡಾ. ಸಂಗಮೇಶ ಸವದತ್ತಿಮಠ ಅವರಿಗೆ, ಸಂಪಾದಕ ಮಂಡಳಿ ಸದಸ್ಯರಾದ ಶ್ರೀಮತಿ ಪ್ರೇಮಾಭಟ್, ಶ್ರೀಮತಿ ತ್ರಿವೇಣಿ ಶಿವಕುಮಾರ್, ಶ್ರೀ ಎಸ್.ಎಲ್. ಶ್ರೀನಿವಾಸ ಮೂರ್ತಿ, ಶ್ರೀ ಎಸ್. ಬಸವರಾಜ್ ಮತ್ತು ಶ್ರೀಮತಿ ರೇಣುಕಾ ರಾಜಶೇಖರ್ ಅವರುಗಳಿಗೆ ನನ್ನ ನೆನಕೆಗಳು ಸಲ್ಲುತ್ತವೆ. ಈ ಪುಸ್ತಕವು ಹೊರಬರಲು ನನಗಿಂತ ಹೆಚ್ಚು ಶ್ರಮಿಸಿದ ಶ್ರೀ ಎಸ್.ಎಲ್. ಶ್ರೀನಿವಾಸಮೂರ್ತಿಯವರಿಗೆ ನನ್ನ ವಿಶೇಷ ಕೃತಜ್ಞತೆಗಳು.


ಡಾ ಪಿ.ವಿ. ನಾರಾಯಣ
ಪ್ರಧಾನ ಸಂಪಾದಕರು

ಪರಿವಿಡಿ

ಭಾಗ 1 ಸಾಶಿಮ ವ್ಯಕ್ತಿತ್ವ

ಭಾಗ 2 ಸಾಶಿಮ ಕೃತಿಗಳ ಅವಲೋಕನ

ಡಾ। ಸಾಶಿಮ ಚಿತ್ರಸಂಪುಟ



ಅಮೇರಿಕಾ ಪ್ರವಾಸದ ಸವಿನೆನಪುಗಳು
1989

ಡಾ॥ ಸಾ. ಶಿ. ಮರುಳಯ್ಯ ಮತ್ತು ಕನ್ನಡ ಸಾಹಿತ್ಯ ಪರಿಷತ್ತು







ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಪದವಿ ಸ್ವೀಕಾರ
ಗೊರುಚ ಅವರಿಂದ



ಕಿರಿಯ ಮಗನ ಮದುವೆಯಲ್ಲಿ
ವೀಣಾ, ರವಿ, ಶೈಲ,
ನಾಗರತ್ನ ಸೋಮಶೇಖರ್
ಮತ್ತು
ಸೋಮಶೇಖರ್‌ರವರುಗಳೊಂದಿಗೆ



ಆರತಕ್ಷತೆ ಸಂದರ್ಭವೊಂದರಲ್ಲಿ
ಪ್ರೇಮಾಭಟ್ ದಂಪತಿಗಳು
ಮತ್ತು ಆತ್ಮೀಯರೊಂದಿಗೆ



ಸಾಗರದಲ್ಲಿ ಟಿ. ಮಹಾಬಲೇಶ್ವರ ಭಟ್ಟರ ಬೇಗೂರು ಮನೆಯಲ್ಲಿ ಆತ್ಮೀಯರೊಂದಿಗೆ



ಡಾ॥ ಶಿವರಾಮ ಕಾರಂತರೊಂ
ಶಿವಮೊಗ್ಗೆಯ ಸಹ್ಯಾದ್ರಿ ಕಾಲೇ
ವಿದ್ಯಾ ್ಥನಿಯರ ನಡುವೆ (19



ರಾಷ್ಟ್ರಕವಿಗೆ "ಉದಯರವಿ"ಯಲ್ಲಿ
ಗೌರವ ಸಮರ್ಪಣೆ



ಸಂಶೋಧಕ
ಸೇಡಿಯಾಪು ಕೃಷ್ಣಭಟ್ಟರಿಗೆ
ಮಣಿಪಾಲದ ಅವರ ಗೃಹದ
"ಚಿದಾನಂದ" ಪ್ರಶಸ್ತಿ ಪ್ರದ



ಸಾಗರದಲ್ಲಿ ನಡೆದ ದ. ರಾ. ಬೇಂದ್ರೆ ಸಾಹಿತ್ಯ ಕುರಿತ ವಿಚಾರ ಸಂಕಿರಣದಲ್ಲಿ
ಟಿ. ಮಹಾಬಲೇಶ್ವರ ಭಟ್ಟ ಮತ್ತು ಟಿ. ಪಿ. ಅಶೋಕ್ ಅವರೊಂದಿಗೆ (1994)



ಸುಳ್ಯದ ಕಾರ್ಯಕ್ರಮವೊಂದರಲ್ಲಿ ಕೋಟ ವಸಂತರಾವ್,
ಮೊಳಿಯಾರ್ ಮೊದಲಾದವರೊಡನೆ



ಡಾ॥ ವೀರೇಂದ್ರ ಹೆಗ್ಗಡೆಯವರಿಗೆ ಪರಿಷತ್ತಿನ ಗೌರವ



ಕಾರ್ಖಾನೆಯೊಂದರಲ್ಲಿ ಸಸಿ ನೆಡುವ ಕಾರ್ಯಕ್ರಮ
ಡಾ॥ ಯು. ಆರ್. ಅನಂತಮೂರ್ತಿಯವರೊಂದಿಗೆ



ತಿ. ತಾ. ಶರ್ಮ ಸ್ಮರಣೆ ಕಾರ್ಯಕ್ರಮದಲ್ಲಿ
ನಿಟ್ಟೂರು ಶ್ರೀನಿವಾಸರಾವ್, ನಿಸಾರ್ ಅಹಮದ್ ಮತ್ತು ಡಿ. ಲಿಂಗಯ್ಯ ಇವರೊಡನೆ



ಮಂಗಳೂರಿನಲ್ಲಿ ನಡೆದ ವಿದ್ಯಾರ್ಥಿ ಸಮ್ಮೇಳನದಲ್ಲಿ

ಡಾ|| ಸಾಶಿಮ ಚಟುವಟಿಕೆಗಳು - ಒಂದು ಪಕ್ಷಿನೋಟ



''ಮುಳಿಯ ಸ್ಮರಣೆ'' ಪ್ರಿನ್ಸಿಪಾಲ್ ಮರುಳಯ್ಯನವರ ಅಧ್ಯಕ್ಷೀಯ ಭಾಷಣ



ಡಾ|| ವಿ. ಕೃ. ಗೋಕಾಕ್ ಅವರೊಂದಿಗೆ ಸಮಾರಂಭವೊಂದರಲ್ಲಿ



ಗೋಕಾಕ್ ಚಳುವಳಿ ಸಂದರ್ಭದಲ್ಲಿ ಪೊಲೀಸರು ದಸ್ತಗಿರಿ ಮಾಡಿದಾಗ




ವಿದುಷಿ ಶ್ರೀಮತಿ ಜಯಲಕ್ಷ್ಮಿ ಇನಾಂದಾರ್ ಅಭಿನಂದನೆ
ಗಂಗೂಬಾಯಿ ಹಾನಗಲ್ ಮೊದಲಾದವರೊಡನೆ



ಆದಿಚುಂಚನಗಿರಿ ಜಗದ್ಗುರು ಶ್ರೀ ಬಾಲಗಂಗಾಧರನಾಥ ಸ್ವಾಮಿಗಳ
ಪೀಠಾರೋಹಣ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ವಿಶೇಷ ಸನ್ಮಾನ



ಕಾರ್ಕಳದ ಭುವನೇಂದ್ರ ಕಾಲೇಜಿನಲ್ಲಿ ದಿ॥ ದಾಮೋದರ ಕಿಣಿ ಸ್ಮರಣೆ
ಶ್ರೀ ಎಂ. ರಾಮಚಂದ್ರ ಮೊದಲಾದವರೊಡನೆ



'ಶ್ರೀ ಕುವೆಂಪು' ಷಷ್ಟ್ಯಬ್ದಿ ಸನ್ಮಾನ ಸಮಿತಿ

ಶಿವಮೊಗ್ಗ 6-2-1965

ಕುಳಿತಿರುವವರು : (ಎಡದಿಂದ ಬಲಕ್ಕೆ) ಎನ್.ಡಿ. ವೆಂಕಟೇಶ್, ಪಿ.ಆರ್. ರತ್ನಾಕರ್ (ಕೋಶಾಧ್ಯಕ್ಷರು), ಡಾ॥ ಡಿ. ಕೃಷ್ಣಮೂರ್ತಿ, ಶೀರನಾಳಿ ಎಸ್.ಎಂ. ಚಂದ್ರಶೇಖರ್, ಡಿ.ಪಿ. ಒಡೆಯರ್ (ಕಾರ್ಯದರ್ಶಿ), ಆರ್.ಬಿ. ನಾಯಕ್, ಎಂ. ಆನಂದರಾವ್, ಜಿ.ಎನ್. ರಾಜಗೋಪಾಲ್ (ಸ್ವಾಗತಾಧ್ಯಕ್ಷ), ದ.ರಾ. ಬೇಂದ್ರೆ (ಕವಿ), ಶ್ರೀ ಕುವೆಂಪು (ರಾಷ್ಟ್ರಕವಿ), ಹಸೂಡಿ ದತ್ತಾತ್ರಿಶಾಸ್ತ್ರಿಗಳು (ಉಪಾಧ್ಯಕ್ಷರು), ಭೂಪಾಳಂ ಚಂದ್ರಶೇಖರಯ್ಯ, ಎಸ್. ನರಸಿಂಹಮೂರ್ತಿ, ಡಿ.ಕೆ. ಸುಬ್ಬಣ್ಣ (ಕಾರ್ಯದರ್ಶಿ), ಡಾ॥ ಶ್ಯಾಮರಾವ್, ಕೆ. ನಾಗೇಂದ್ರಪ್ಪ ವೆಂಕಟರಾಮಾಶಾಸ್ತ್ರಿ ಶ್ರೀ ರಂಗರಾಜು, ಸಾ.ಶಿ. ಮರುಳಯ್ಯ (ಕಾರ್ಯದರ್ಶಿ)

ನಿಂತಿರುವವರು : ಮಧ್ಯದ ಸಾಲು (ಎಡದಿಂದ ಬಲಕ್ಕೆ) ಲಕ್ಷ್ಮೀನಾರಾಯಣ್, ಮಾ.ಗ. ರೇಣುಕಪ್ರಸನ್ನ, ಅನಂತರಾಮ ಮಧ್ಯಸ್ಥ, ಶ್ರೀಕಂಠಯ್ಯ, ನವಲೆ ವೀರಭದ್ರಪ್ಪ, ಹೆಚ್. ಆರ್. ಮಲ್ಲಾರಾಧ್ಯ, ಕುಮಾರಿ ರಾಜಲಕ್ಷ್ಮಿ, ಎಂ. ಪಿ. ಉಷಾದೇವಿ, ಶಾರದ, ವಸಂತಮಲ್ಲಿಗಾ, ಟಿ.ಎನ್. ನಾಗರತ್ನ ವಿ.ವಿ. ಪದ್ಮಾವತಿ, ರಮಾಗಿರಿಮಾಜಿ, ಸರ್ವಮಂಗಳ, ಮ. ಅರುಣಾದೇವಿ, ಬಳ್ಳೇಕೆರೆ ಹನುಮಂತಪ್ಪ, ಜಿ. ಸುಬ್ರಹ್ಮಣ್ಯಂ, ಕೋಣಂದೂರು ವೆಂಕಪ್ಪಗೌಡ.

ನಿಂತಿರುವವರು : ಮೇಲಿನ ಸಾಲು (ಎಡದಿಂದ ಬಲಕ್ಕೆ) ಸತೀಶ್, ಹಾ.ಮಾ. ಪ್ರಭಾಕರ, ಮೋಹನದಾಸ ಎಂ. ಶೆಟ್ಟಿ, ಮಾ.ರಾ. ಶೇಷಗಿರಿ, ರಮೇಶ್, ಎಲ್. ನರಸಿಂಹಣ್ಣ, ಬಿ.ಸಿ. ಪ್ರಭಾಕರ, ಕೆ. ಗೋವಿಂದಪ್ಪ, ಕೆ.ಆರ್. ವಿಜಯಪ್ಪಹೆಗ್ಗಡೆ, ಟಿ.ಎಂ. ಸುಬ್ಬರಾಯ, ಎಸ್.ಎಂ. ಹಳದಪ್ಪ.



ದಕ್ಷಿಣ ಕನ್ನಡ ಜಿಲ್ಲಾ ಒಂಭತ್ತನೆಯ ಸಾಹಿತ್ಯ ಸಮ್ಮೇಳನದಲ್ಲಿ



ಮುಂಬಯಿ ವಿಶ್ವವಿದ್ಯಾಲಯದಲ್ಲಿ 'ವಿನಾಯಕ' ವಾಙ್ಮಯ ವಿಚಾರ ಸಂಕಿರಣದಲ್ಲಿ
ಶ್ರೀಮತಿ ಗೋಕಾಕ್, ತಾಳ್ತಜೆ ವಸಂತಕುಮಾರ್ ಮತ್ತು ಹಂಪನಾ ಜೊತೆ



ಡಾ॥ ವಿ. ಕೃ. ಗೋಕಾಕ್‌ರೊಂದಿಗೆ



ಡಾ॥ ರಾಜ್‌ಕುಮಾರ್
ಅವರೊಂದಿಗೆ



ಾ॥ ವೀರೇಂದ್ರ ಹೆಗ್ಗಡೆಯವರೊಂದಿಗೆ



ಪರಮಪೂಜ್ಯ ಜಗದ್ಗುರು ಗದಗಿನ
ಶ್ರೀ ತೋಂಟದಾರ್ಯ ಮಹಾಸ್ವಾಮಿಗಳೊಂದಿಗೆ

ಸಾಹಿಮ ಬಾಳಹಾದಿಯಲ್ಲಿ



ಷಷ್ಠ್ಯಬ್ದಿಯಲ್ಲಿ ಪತ್ನಿಗೆ
ಕುಂಕುಮಧಾರಣೆ



ಷಷ್ಠ್ಯಬ್ದಿಯಲ್ಲಿ ಮತ್ತೊಂದು
ಮಾಂಗಲ್ಯ



ಶ್ರೀಕ್ಷೇತ್ರ ಕುಪ್ಪೂರು ಗದ್ದಗೆ ಮಠದಲ್ಲಿ
ತುಲಾಭಾರ - ಯಾರು ಹೆಚ್ಚು ಭಾರ?



ಕವಿ
ಕೆ.ಎಸ್. ನರಸಿಂಹಸ್ವಾಮಿಯವರಿಗೆ
ಗೌರವ ಸಮರ್ಪಣೆ - ಕವಿ
ಚೆನ್ನವೀರ ಕಣವಿಯವರೊಡನೆ

ಡಾ|| ಜಿ.ಎಸ್. ಶಿವರುದ್ರಪ್ಪನವರಿಗೆ
ಗೌರವ ಸಮರ್ಪಣೆ





ಡಾ|| ಜಿ. ಎಸ್. ಆಮೂರರಿಗೆ
ಗೌರವ ಸಮರ್ಪಣೆ -
ಕವಿ ಚೆನ್ನವೀರ ಕಣವಿಯವರೊಡನೆ

ನೆನಪಿನ ನೋಟಗಳು



ಕಾಶ್ಮೀರದ ಕಣಿವೆಯಲ್ಲಿ
ಕಾಶ್ಮೀರಿಗಳಾಗಿ ಸಾಶಿಮ ದಂಪತಿಗಳು



ಅಮೃತಸರದ
ಸ್ವರ್ಣ ಮಂದಿರದಲ್ಲಿ



ಧರ್ಮಸ್ಥಳದ ಧರ್ಮಾಧಿಕಾರಿಗಳ ಗೃಹದಲ್ಲಿ



ಸಾಂಟಾಕ್ರೂಝ್‌ನ
ಸಮುದ್ರ ತೀರದಲ್ಲಿ

ಅಂಝಾ ಮೆಮೊರಿಯಲ್
ಪಾರ್ಕ್, ಕುಪರ್‌ಟಿನೋ
ಅಮೇರಿಕಾ





ಉತ್ತರ ಅಮೇರಿಕೆಯ
ಸ್ಯಾನ್‌ಹೋಸೆಯಲ್ಲಿರುವ
ಇಜಿಪ್ಷಿಯನ್ ಮ್ಯೂಸಿಯಂ
ಮುಂದೆ




ಮೆರಿನ್‌ಲ್ಯಾಂಡ್ ಆಫ್ರಿಕ
ಯು.ಎಸ್.ಎ.



ಹಾಲಿವುಡ್‌ನ ಯೂನಿವರ್ಸಲ್
ಸ್ಟುಡಿಯೋಸ್ ಮುಂದೆ



ಹಾಲಿವುಡ್ ಬಳಿಯಿರು
ಗ್ರಿಫಿತ್ ಅಬ್ಸರ್ವೇಟರಿ
ಕಟ್ಟಡದ ನೆತ್ತಿಯಲ್ಲಿ



ಸ್ಟಾನ್‌ಫರ್ಡ್
ವಿಶ್ವವಿದ್ಯಾಲಯದಲ್ಲಿ



ಅದ್ಭುತ ನಯಾಗರಾದ
ಮುಂದೆ



ಗ್ರ್ಯಾಂಡ್ ಕ್ಯಾನ್ಯನ್ ಪಾರ್ಕ್‌ನಲ್ಲಿ



ಡಾ॥ ಎಸ್. ವಿ. ಪರಮೇಶ್ವರ ಭಟ್ಟರಿಗೆ
ಉಡುಪಿಯಲ್ಲಿ
'ಚಾವುಂಡರಾಯ' ಪ್ರಶಸ್ತಿ ಪ್ರದಾನ -
ಕಯ್ಯಾರ ಕಿಞ್ಞಣ್ಣರೈ,
ಹರಿಕೃಷ್ಣ ಪುನರೂರು
ಮೊದಲಾದವರೊಡನೆ



ಕವಿ ಕೆ. ಎಸ್. ನರಸಿಂಹಸ್ವಾಮಿಯವರಿಗೆ
ಪರಿಷತ್ ಪರವಾಗಿ
ಡಾ॥ ವೀರೇಂದ್ರ ಹೆಗ್ಗಡೆಯವರಿಂದ
ಗೌರವ ಸಮರ್ಪಣೆ



ಪರಿಷತ್ ವತಿಯಿಂದ ಕನ್ನಡ ಸಾಹಿತ್ಯದ ದಿಗ್ಗಜಗಳಿಗೆ ಸನ್ಮಾನ



ಕವಿ ಚೆನ್ನವೀರ ಕಣವಿಯವರಿಗೆ ಪರಿಷತ್ ಗೌರವ



ಡಾ॥ ಎಂ. ಎಂ. ಕಲಬುರ್ಗಿಯವರಿಗೆ ಪರಿಷತ್ ಗೌರವ



ಹಾಲಿವುಡ್‌ನ
ಯೂನಿವರ್ಸಲ್ ಸ್ಟುಡಿಯೋಸ್
ಮೇಲ್ಭಾಗದಲ್ಲಿ



ಸಾಂಟಾಕ್ರೂಜ್‌ನ
ಬೀಚ್ ಬೋರ್ಡ್
ವಾಕ್‌ನಲ್ಲಿ



ಅಮೇರಿಕದ ರಾಷ್ಟ್ರಪತಿ ಭವ
ವೈಟ್‌ಹೌಸ್ ಮುಂಭಾಗದ



ವಾಷಿಂಗ್‌ಟನ್ ಡಿ.ಸಿ.ಯಲ್ಲಿ



ಸಾಂಟಾಕ್ರೂಜ್‌ನ
ಫಿಷರ್‌ಮನ್ಸ್
ವಾರ್ಫ್‌ನಲ್ಲಿ



ಸ್ಯಾನ್‌ಹೋಸೆ ಮ್ಯೂಸಿಯಂ
ಮುಂದೆ



ಲಾಸ್ ಏಂಜಲೀಸ್‌ನ
ಡಿಸ್ನಿಲ್ಯಾಂಡಿನಲ್ಲಿ



ಲಾಸ್ ಏಂಜಲೀಸ್‌ನ
ಡಿಸ್ನಿಲ್ಯಾಂಡಿನಲ್ಲಿ



ಕೆನಡಾದಲ್ಲಿ ನಯಾಗರಾ ಮುಂದೆ

ಭಾಗ ೧

ಸಾಶಿಮ ವ್ಯಕ್ತಿತ್ವ

ಸುಸಂಸ್ಕೃತ ಸಹೃದಯ ಸ್ನೇಹಿತ

ಚೆನ್ನವೀರ ಕಣವಿ

ಡಾ. ಸಾ.ಶಿ. ಮರುಳಯ್ಯನವರು ಕಳೆದ ಅರ್ಧ ಶತಮಾನದಿಂದ ಕನ್ನಡ ನಾಡು, ನುಡಿ ಹಾಗೂ ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿರುವ ಅವಿರತ ಸೇವೆಯನ್ನು ನೆನೆದು ಆ ಬಗ್ಗೆ ನಮ್ಮ ಜನ ಅವರಿಗೆ ಕೃತಜ್ಞತೆ ವ್ಯಕ್ತಪಡಿಸುವುದು ಅತ್ಯಂತ ಉಚಿತವಾದ ಕೆಲಸ. ಈ ಸಂದರ್ಭದಲ್ಲಿ ಒಂದು ಸಂಭಾವನಾ ಗ್ರಂಥ ಹೊರಬರುತ್ತಿರುವುದು ತಿಳಿದು ಬಹಳ ಸಂತೋಷವಾಯಿತು. ಅವರ ಸರಳತೆ, ಸ್ನೇಹಪರತೆ ಹಾಗೂ ಸವಿಬಗೆಯನ್ನು ಸವಿದು ನಾನು ಪ್ರೀತಿಯಿಂದಲೂ ಶುಭಾಶಯಗಳಿಂದಲೂ ನಾಲ್ಕು ಮಾತು ಬರೆಯುತ್ತಿದ್ದೇನೆ.

1980ರಲ್ಲಿ 'ಚೆಂಬೆಳಕು' ಅಭಿನಂದನ ಗ್ರಂಥಕ್ಕೆ ಅವರು ಆಸ್ಥೆವಹಿಸಿ ಬರೆದ 'ಕವಿ ವಿಮರ್ಶಕನಾಗಿ, ವಿಮರ್ಶಕನು ಕವಿಯಾಗಿ' ಎಂಬ ಲೇಖನ ಅವರ ಅಧ್ಯಯನದ ವ್ಯಾಪ್ತಿ ಹಾಗೂ ತೌಲನಿಕ ದೃಷ್ಟಿಯಿಂದ ನನ್ನ ಗಮನವನ್ನು ವಿಶೇಷವಾಗಿ ಸೆಳೆದುಕೊಂಡಿತು. 1985ರಲ್ಲಿ ಪ್ರಕಟವಾದ ಮರುಳಯ್ಯನವರ ಅದುವರೆಗಿನ ಸಮಗ್ರಕಾವ್ಯ 'ನನ್ನ ಕವನಗಳು' ಗುಣದಲ್ಲಿಯೂ ಗಾತ್ರದಲ್ಲಿಯೂ ಒಂದು ಉತ್ತಮವಾದ ಕೊಡುಗೆ ಎನಿಸಿತು. ಪ್ರಕೃತಿ, ಪ್ರೀತಿ, ಸಮಾಜ, ದೈವೀಶ್ರದ್ಧೆಯ ಪ್ರಾರಂಭದ ಪ್ರೇರಣೆಗಳೇ ಕಳೆಗೊಂಡು ಬೆಳೆದು, ಆಗಾಗ ವಿಡಂಬನೆಯನ್ನು, ನಾಡು-ನುಡಿಯ ಅಭಿಮಾನವನ್ನು ಮೈಗೂಡಿಸಿಕೊಂಡು, ಕಥನ ಕಲೆಯ ಹೊಳತನ್ನು ತಳೆದು, ಗೋಮಾತೆಗೆ ಒಲಿದು, ಭಾವಬಂಧುರವಾಗಿಯೇ ಅವರ ಕಾವ್ಯ ಪ್ರವಹಿಸಿದೆ. 'ಕೋಟಿದೀಪದ ನಡುವೆ ನಮ್ಮ ದೀವಿಗೆಯಿರಿಸಿ ಹಾಡೋಣ ಅನುರಾಗ ರಾಗವನ್ನು' ಎಂದು ಅವರು ತಮ್ಮ ಪ್ರಥಮ ಸಂಕಲನದಲ್ಲಿಯೇ ಹಾಡಿದ್ದುಂಟು. ಅದರ ತನಿವೆಳೆಗು ಕಾವ್ಯ ರಸಿಕರಕನ್ನು, ಸುಗಮಸಂಗೀತಗಾರರನ್ನು ಏಕಪ್ರಕಾರವಾಗಿ ಆಕರ್ಷಿಸುತ್ತ ಬಂದಿದೆ.

ಸಾಹಿತ್ಯ ಸಂಶೋಧನೆ ಹಾಗೂ ಸಾಹಿತ್ಯ ವಿಮರ್ಶೆಯಲ್ಲಿಯ ಅವರ ಕೃಷಿ ಪರಸ್ಪರ ಪೂರಕವೂ ಪೋಷಕವೂ ಆಗಿರುವಂತೆ ಕಂಡು ಬರುತ್ತದೆ. ಅಧ್ಯಯನ-ಅಧ್ಯಾಪನ ಅವರಿಗೆ ಜೀವಾಳವಿದ್ದಂತೆ. ನಿರರ್ಗಳವಾದ ಅವರ ಮಾತುಗಾರಿಕೆಯಲ್ಲಿ ವಿದ್ವತ್ತು ಭಾರವಾಗದಂತೆ ಕುಳಿತು, ನವಿರಾದ ಹಾಸ್ಯದೊಂದಿಗೆ ಚಕ್ಕಂದವಾಡಿ, ಗುಣಗ್ರಹಣದ ಮುಖ್ಯ ಆಶಯದೊಂದಿಗೆ ಶ್ರೋತೃಗಳ ಸುಖವನ್ನು ಹೆಚ್ಚಿಸುವಂತಿರುತ್ತದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದಾಗಲೂ ಅಧಿಕಾರದ ದರ್ಪವನ್ನು ಎಳ್ಳಷ್ಟೂ ಮೆರೆಯದೆ ಶಬ್ದಶಃ ತನುಮನಧನದಿಂದ ಸೇವೆಗೈದಿರುವುದು ಬಹುಜನರ ಗಮನಕ್ಕೆ ಬಂದಿರಬಹುದು. ಉದಯೋನ್ಮುಖ ಬರಹಗಾರರಿಗೆ ಸಾಕಷ್ಟು ಪ್ರೋತ್ಸಾಹ ನೀಡಿ, ಎಲ್ಲ ಪಂಥದ ಲೇಖಕರನ್ನು ಸೌಜನ್ಯದಿಂದ ಕಂಡು, ಹಿರಿಯ ಸಾಹಿತಿಗಳನ್ನು ಪೂಜ್ಯಭಾವದಿಂದ ಗೌರವಿಸಿದ್ದಾರೆ.

ಜೀವನೋತ್ಸಾಹದ ಸರಸಸಜ್ಜನಿಕೆಯ ಇಂಥ ಸುಸಂಸ್ಕೃತ ಸ್ನೇಹಿತರಿಗೆ ಶುಭಶಾಂತಿಗಳನ್ನು ಹೃತ್ಪೂರ್ವಕವಾಗಿ ಕೋರುತ್ತೇನೆ. ಅವರ ಬದುಕು ಕೃತಿಪೂರ್ಣವೂ ಕೃತಾರ್ಥವೂ ಆಗಲೆಂದು ಸರ್ವದಾ ಹಾರಯಿಸುತ್ತೇನೆ.

ಸ್ನೇಹಜೀವಿ - ಆತ್ಮೀಯ ವ್ಯಕ್ತಿ

ಡಾ|| ತೀ.ನಂ. ಶಂಕರನಾರಾಯಣ

ನಾನು ಸಾ.ಶಿ. ಮರುಳಯ್ಯನವರ ಹೆಸರನ್ನು ಕೇಳಿದ್ದು 40 ವರ್ಷಗಳ ಹಿಂದೆ. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ತೀರ್ಥಪುರ ನನ್ನ ಹುಟ್ಟೂರು. ಪ್ರೈಮರಿ ಸ್ಕೂಲಿನಲ್ಲಿ ಓದಿದ್ದ ನಾನು, ಅಲ್ಲಿ ಮಾಧ್ಯಮಿಕ ಶಾಲೆ ಇಲ್ಲದಿದ್ದುದರಿಂದ ಹದಿನೈದು ಮೈಲಿ ದೂರದಲ್ಲಿದ್ದ ಶೆಟ್ಟೀಕೆರೆಯ ಮಾಧ್ಯಮಿಕ ಶಾಲೆಯಲ್ಲಿ ಓದಬೇಕಾಗಿತ್ತು. ಅಲ್ಲಿ ನಾನು ನನ್ನ ಸೋದರತ್ತೆ ಶ್ರೀಮತಿ ಶಾರದಮ್ಮ ಮತ್ತು ಮಾವ ಶ್ರೀ ಎಸ್.ಬಿ. ಕೃಷ್ಣಮೂರ್ತಿ ಅವರ ಮನೆಯಲ್ಲಿದ್ದುಕೊಂಡು ಓದುತ್ತಿದ್ದೆ. ಸಾ.ಶಿ. ಮರುಳಯ್ಯನವರು ಒಳ್ಳೆಯ ವಾಗ್ಮಿಗಳೆಂದೂ, ಕವಿ ಮತ್ತು ನಾಟಕಕಾರರೆಂದೂ ನನಗೆ ತಿಳಿಸಿದರು ನನ್ನ ಸೋದರತ್ತೆಯ ಮಗ ಶ್ರೀ ಕೆ. ನಾಗರಾಜ ಅವರು. ಸಾ.ಶಿ. ಮರುಳಯ್ಯನವರು ಶೆಟ್ಟೀಕೆರೆಯ ಮಾಧ್ಯಮಿಕ ಶಾಲೆಯಲ್ಲಿ ಓದಿದವರೆಂಬುದು ಹಾಗೂ ಅವರು ಅಲ್ಲಿಂದ ಎರಡು ಕಿಲೋಮೀಟರ್ ದೂರದ ಸಾಸಲು ಗ್ರಾಮದವರೆಂದೂ ನನಗೆ ತಿಳಿದಿತ್ತು. ಅವರನ್ನು ಕಾಣುವ ಕುತೂಹಲ ಇದ್ದರೂ ಭೇಟಿಯಾಗುವ ಸಂದರ್ಭ ಒದಗಿ ಬರಲಿಲ್ಲ. ನಾನು ಬಿ.ಆರ್. ಪ್ರಾಜೆಕ್ಟಿನಲ್ಲಿ ಆರಂಭವಾದ ಮೈಸೂರು ವಿಶ್ವವಿದ್ಯಾನಿಲಯ ಸ್ನಾತಕೋತ್ತರ ಕೇಂದ್ರದಲ್ಲಿ ಅಧ್ಯಾಪಕನಾಗಿ ಸೇರಿಕೊಂಡ ಮೇಲೆ ಅವರು 'ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ' ಎಂಬ ವಿಷಯದ ಬಗ್ಗೆ ಪಿ.ಎಚ್‌ಡಿ. ಗಾಗಿ ಸಂಶೋಧನೆ ಮಾಡಿದ ವಿಷಯ ಹಾಗೂ ಸಹ್ಯಾದ್ರಿ ಕಾಲೇಜಿನಲ್ಲಿ ಅವರು ತುಂಬ ಜನಪ್ರಿಯ ಅಧ್ಯಾಪಕರೆಂದು ಕೀರ್ತಿ ಪಡೆದಿದ್ದ ವಿಷಯ ತಿಳಿಯಿತು. ನಮ್ಮ ಕನ್ನಡ ವಿಭಾಗದ ದಶಮಾನೋತ್ಸವದ ಅಂಗವಾಗಿ 1983ರಲ್ಲಿ 'ಪಾಶ್ಚಾತ್ಯ ಮಹಾಕಾವ್ಯಗಳು' ವಿಚಾರ ಸಂಕಿರಣದಲ್ಲಿ ಅವರು ಗಿಲ್‌ಗಮಿಷ್ ಎಂಬ ಮಹಾಕಾವ್ಯದ ಬಗ್ಗೆ ಒಂದು ಒಳ್ಳೆಯ ಪ್ರಬಂಧ ಮಂಡಿಸಿದರು. ಆ ಸಂದರ್ಭದಲ್ಲಿ ನನಗೆ ಅವರ ನಿಕಟವಾದ ಪರಿಚಯವಾಗಲು ಸಾಧ್ಯವಾಯಿತು. ಅವರು ನಮ್ಮ ಮನೆಗೆ ಬಂದು ನಮ್ಮ ಆತಿಥ್ಯವನ್ನು ಸ್ವೀಕರಿಸಿ ಬಹಳ ಹೊತ್ತು ಮಾತನಾಡಿದರು. ನಾನೂ ಕೂಡ ಶೆಟ್ಟೀಕೆರೆಯ ಮಾಧ್ಯಮಿಕ ಶಾಲೆಯಲ್ಲಿಯೇ ಓದಿದ ವಿಷಯವನ್ನು ತಿಳಿದು ಸಂತೋಷಪಟ್ಟರು. ಅಂದಿನಿಂದ ನಮ್ಮ ನಡುವೆ ಆತ್ಮೀಯತೆ ಆರಂಭವಾಯಿತು. ನಾನು ಬೆಂಗಳೂರಿಗೆ ಹೋದಾಗ ಅವರ ಮನೆಗೆ ಹಲವಾರು ಬಾರಿ ಹೋಗಿದ್ದೇನೆ. ಅವರ ಆತ್ಮೀಯವಾದ ಆತಿಥ್ಯವನ್ನು ಪಡೆದಿದ್ದೇನೆ.

ಚಿಕ್ಕನಾಯಕನ ಹಳ್ಳಿಯಲ್ಲಿ ಅಲ್ಲಿನ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಎಂ.ಪಿ. ನಾಗರಾಜ್ ಅವರ ನೇತೃತ್ವದಲ್ಲಿ ಕಳೆದ ಹತ್ತು ಹದಿನೈದು ವರ್ಷಗಳಿಂದ ಹಲವಾರು ಸಾಹಿತ್ಯ ಸಂಸ್ಕೃತಿ ಸಂಬಂಧವಾದ ಕಾರ್ಯಕ್ರಮಗಳು ನಡೆದವು. ಇಂತಹ ಒಂದು ಕಾರ್ಯಕ್ರಮಕ್ಕೆ ಬಂದಿದ್ದಾಗ ತಮ್ಮ ಹುಟ್ಟಿದ ಊರು ಸಾಸಲಿಗೆ ಕರೆದುಕೊಂಡು ಹೋಗಿದ್ದರು. ಆ ದಿನ ರಾತ್ರಿ ನಾವಿಬ್ಬರೂ ಅವರ ತಮ್ಮ ಶಾಂತಮೂರ್ತಿಯವರ ಮನೆಯಲ್ಲಿ ಉಳಿದಿದ್ದೆವು. ನಮ್ಮ ತಾಲ್ಲೂಕಿನ ಸಾಹಿತ್ಯಕ,

ಸಾಂಸ್ಕೃತಿಕ ಸ್ಥಿತಿಗತಿಗಳ ಬಗ್ಗೆ, ಅವರ ಬಾಲ್ಯ ಜೀವನದ ಕಷ್ಟಾಕಾರ್ಪಣ್ಯಗಳ ಬಗ್ಗೆ ಬಹಳ ಹೊತ್ತಿನವರೆಗೂ ಮಾತನಾಡುತ್ತಿದ್ದವು. ಅವರ ಮನೆಯಲ್ಲಿ ತುಂಬ ರುಚಿಯಾದ ಹಲಸಿನ ಹಣ್ಣು ತಿಂದದ್ದು ನನ್ನ ಮನಸ್ಸಿನಲ್ಲಿ ಹಸಿರಾಗಿ ಉಳಿದಿದೆ. ಚಿಕ್ಕನಾಯಕನಹಳ್ಳಿಯಲ್ಲಿ ಸಾ.ಶಿ. ಮರುಳಯ್ಯನವರಿಗೆ ಅಭಿನಂದನೆಯ ಸಮಾರಂಭ ಹಾಗೂ ಶ್ರೀ ಆರ್. ಬಸವರಾಜ್ ಅವರ **ಸಾಶಿಮ : ಬದುಕು-ಬರಹ** ಪುಸ್ತಕದ ಬಿಡುಗಡೆಯ ಕಾರ್ಯಕ್ರಮವಿತ್ತು. ಅದರಲ್ಲಿ ನಾನು 'ಸಾ.ಶಿ. ಮರುಳಯ್ಯನವರ ಗದ್ಯಸಾಹಿತ್ಯ' ಎಂಬ ವಿಷಯವಾಗಿ ಉಪನ್ಯಾಸ ಮಾಡಿದೆ. ಅವರ ಗದ್ಯಬರಹಗಳಲ್ಲಿ **ಅವಸ್ಥಾ, ಆತ್ಮೀಯ** ಮತ್ತು **ಮನಿಷಾ** ಮುಖ್ಯವಾದ ಕೃತಿಗಳಾಗಿವೆ. ಇವುಗಳಲ್ಲಿ ಆತ್ಮೀಯ ಸಾಹಿತಿಗಳು ಕಲಾವಿದರು ಮತ್ತು ವಿದ್ವಾಂಸರನ್ನು ಕುರಿತ ಆತ್ಮೀಯ ವ್ಯಕ್ತಿಚಿತ್ರಗಳಿವೆ. ಭಾಷಾಶೈಲಿ ರೋಮ್ಯಾಂಟಿಕ್ ಆಗಿದೆ.

ಡಾ. ಡಿ.ಎಸ್. ಕರ್ಕಿ ಅವರನ್ನು ಸಾ.ಶಿ. ಮರುಳಯ್ಯನವರು ಪರಿಚಯ ಮಾಡಿಕೊಡುವ ರೀತಿ ಹೀಗಿದೆ:

> *ಕರ್ಕಿ ಕನ್ನಡ ನೆಲದ ಕರಿಕೆ. ಕರು ತಿಂದಾಗ ಕರಗದ, ಜನ ಜಾನುವಾರ ತುಳಿದಾಗ ನಶಿಸದ, ಬಿದಿರಿನಂತೆ ಬೆಳೆಯದ, ನಾಚಿಕೆ ಮುಳ್ಳಿನಂತೆ ಮುದುಡದ ಸ್ವಭಾವ ಅವರದು. ಅತಿಯಾದದ್ದನ್ನು ಆಶಿಸದ, ಮಿತಿಯಲ್ಲಿ ಬದುಕುವ ವ್ಯಕ್ತಿಯನ್ನು ಕುರಿತು ಹೇಳುತ್ತಾರೆ: 'ಅವನೇ.... ಅವನೊಂದು ಕರತಿಂದ ಕರಿಕೆ' ಡಾ. ಕರ್ಕಿಯವರು 'ಕರು ತಿಂದ ಕರಿಕೆ'. ನಾನು ದಾವಣಗೆರೆಯ ಧ.ರಾ.ಮ. ಇಂಟರ್‌ಮೀಡಿಯೇಟ್ ಕಾಲೇಜಿನಲ್ಲಿ ಅಧ್ಯಾಪಕನಾಗಿದ್ದಾಗ ಕರ್ಕಿಯವರನ್ನು, ಚೆನ್ನವೀರ ಕಣವಿಯವರನ್ನು ಸಮಾರಂಭವೊಂದಕ್ಕೆ ಕರೆಸಿದೆವು. ಕರ್ಕಿ ಹೇಳಿದರು : ಎಲ್ಲಿ ಕಣವಿ (ಕಣಿವೆ) ಇರುತ್ತೆ ಅಲ್ಲಿ ಕರ್ಕಿ (ಗರಿಕೆ ಹುಲ್ಲು) ಇರುವುದು ಸಹಜ. ನಾನು ಹಾಂಗೆ ಬಂದಿದೀನಿ' ಅಂದರು. ಅಂತಹ ವಿನಯಸಂಪನ್ನತೆ ಕರ್ಕಿಯವರದು. ಸಾಹಿತ್ಯದಲ್ಲೂ, ಸಂಪತ್ತಿನಲ್ಲೂ ಆರಕ್ಕೇರದ, ಮೂರಕ್ಕಿಳಿಯದ ಮಧ್ಯಮಮಟ್ಟ. ಆಳ್ತನದಲ್ಲಿ ಒಂದಂಗುಲ ಉದ್ದಕ್ಕೂ ಇಲ್ಲ. ಒಂದುಂಗುಲ ಗಿಡ್ಡಯೂ ಇಲ್ಲ. ಐದೇ ಐದು ಅಡಿ ಎತ್ತರ. ಗಾತ್ರದಲ್ಲೂ ಅಷ್ಟೇ. ಪಾತ್ರಕ್ಕೆಷ್ಟು ಬೇಕೋ ಅಷ್ಟೇ. ಬ್ರಿಟಿಷ್ ಬಿಳುಪಲ್ಲ. ನೀಗ್ರೋ ಕಪ್ಪಲ್ಲ. ನೋಡಿದವರಲ್ಲಿ ಮೋಹಕ ಮೂಡಿಸುವ ವರ್ಚಸ್ಸು. ಸಾಕಷ್ಟು ಸ್ಫುರದ್ರೂಪಿ.*

ಮರುಳಯ್ಯನವರು ಹೀಗೆ ತುಂಬ ಆಕರ್ಷಕವಾಗಿ ಬರೆಯಬಲ್ಲರು!

'ಮನಿಷಾ' ಕನ್ನಡ ವಿದ್ವತ್ತಿನ ಕ್ಷೇತ್ರಕ್ಕೆ ಮಹತ್ವದ ಕೊಡುಗೆ. ಈ ಸಂಕಲನದಲ್ಲಿರುವ 'ಗಿಲ್ಗಮಿಷ್', 'ಗಾಥಾಸಪ್ತಶತಿ', 'ಶುಕಸಪ್ತತಿ', 'ವಡ್ಡಾರಾಧನೆ' - ಈ ನಾಲ್ಕು ವಿಶೇಷ ಅಧ್ಯಯನದಿಂದ ರೂಪುಗೊಂಡ ವಿದ್ವತ್ ಪೂರ್ಣ ಲೇಖನಗಳು. ಅಸ್ಸೀರಿಯನ್, ಬ್ಯಾಟಲೋನಿಯನ್ ಸಂಸ್ಕೃತಿಗೆ ಸೇರಿದ ಗಿಲ್ಗಮಿಷ್ ಜಾನಪದ ಮಹಾಕಾವ್ಯದ ಬಗ್ಗೆ ಅಮೇರಿಕಾದಲ್ಲಿದ್ದಾಗ ಅವರು ಅಭ್ಯಾಸ ಮಾಡಿದರು. ಅಮೇರಿಕಾದಲ್ಲಿ ಮಗಳ ಮನೆಯಲ್ಲಿದ್ದಾಗ ಹತ್ತಿರದಲ್ಲಿದ್ದ ಸ್ಯಾನ್‌ಹೋಸೆಯ ಈಜಿಪ್ಷಿಯನ್ ಮ್ಯೂಸಿಯಂನಲ್ಲಿ

ಮೂಲ ದಾಖಲೆಗಳನ್ನು ಅಭ್ಯಾಸ ಮಾಡಿ ಬರೆದಿರುವ ಈ ಲೇಖನ ತುಂಬ ಉಪಯುಕ್ತ ಕೊಡುಗೆಯಾಗಿದೆ.

ಸಾಸಲು ಗ್ರಾಮದಲ್ಲಿ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಮೊದಲನೆಯ ಕನ್ನಡ ಸಾಹಿತ್ಯ ಸಮ್ಮೇಳನ 1998ರ ಫೆಬ್ರವರಿ 13 ಮತ್ತು 14ರಂದು ಎರಡು ದಿನಗಳ ಕಾಲ ನಡೆಯಿತು. ಆಗ ಸಾ.ಶಿ. ಮರುಳಯ್ಯನವರು ಆಗ ರಾಜ್ಯ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ಅವರಿಗೆ ತಮ್ಮ ಊರಾದ ಸಾಸಲಿನಲ್ಲಿ ತಾಲ್ಲೂಕು ಸಮ್ಮೇಳನ ನಡೆಯಲೆಂಬ ಅಪೇಕ್ಷೆ. ಈ ಸಮ್ಮೇಳನಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಆಯ್ಕೆಮಾಡಿದ್ದರು. ನಾನು ಓದಿದ ಸ್ಥಳದ ಸಮೀಪದಲ್ಲಿಯೇ ಈ ಸಮ್ಮೇಳನ ಅದ್ದೂರಿಯಾಗಿ ನಡೆಯಿತು. ತಿಪಟೂರು-ಚಿಕ್ಕನಾಯಕನಹಳ್ಳಿ ಗ್ರಾಮಸೂಚಿ ಫಲಕದ ಬಳಿ ನಿರ್ಮಿಸಿದ್ದ ಜಿ.ವಿ. ನಾರಾಯಣಮೂರ್ತಿ ಹೆಬ್ಬಾಗಿಲಿನಿಂದ ಅನೇಕ ಜಾನಪದ ಕಲಾಮೇಳಗಳು, ಸ್ತಬ್ಧಚಿತ್ರಗಳಿಂದ ಕೂಡಿದ ಮೆರವಣಿಗೆ ಶ್ರೀಬನಶಂಕರಿ ತೋಪಿನ ಬಳಿ ಇರುವ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ನಿರ್ಮಿಸಿದ್ದ ತೀ.ನಂ.ಶ್ರೀ ಮಂಟಪದವರೆಗೆ ಸಾಗಿಬಂದಿತು. ಇಡೀ ಸಮಾರಂಭದಲ್ಲಿ ಗ್ರಾಮೀಣ ಪ್ರದೇಶದ ಹಬ್ಬ ಮತ್ತು ಜಾತ್ರೆಯ ವಾತಾವರಣವನ್ನು ಕಾಣಬಹುದಾಗಿತ್ತು. ಊರಿನ ಜನರಲ್ಲಿ ಅಷ್ಟೊಂದು ಉತ್ಸಾಹ, ಸಡಗರ ಸಂಭ್ರಮ, ಈ ಸಮಾರಂಭದಲ್ಲಿ ಅನೇಕ ಹಿರಿಯ, ಕಿರಿಯ ಸಾಹಿತಿಗಳು, ವಿದ್ವಾಂಸರು ಭಾಗವಹಿಸಿದ್ದರು. ನನಗೆ ಮತ್ತು ನನ್ನ ಪತ್ನಿ ನಾಗಲಕ್ಷ್ಮಿಗೆ ಸನ್ಮಾನ ಮಾಡಿದರು. ನನ್ನ ತಂದೆ ಶ್ರೀ ಟಿ.ಎಸ್. ನಂಜುಂಡಯ್ಯನವರು, ನನ್ನ ತಾಯಿ ಸತ್ಯಭಾಮಮ್ಮ ಅವರು ಹಾಗೂ ನನ್ನ ಬಂಧು ಬಾಂಧವರು, ಸ್ನೇಹಿತರು ಈ ಸಮಾರಂಭದಲ್ಲಿ ಇದ್ದುದು ನನಗೆ ವಿಶೇಷವಾಗಿ ಸಂತೋಷ ಉಂಟುಮಾಡಿತು. ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಶಾಸಕರಾಗಿದ್ದ ಶ್ರೀಮಧುಸ್ವಾಮಿ ಹಾಗೂ ತುಮಕೂರು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಶ್ರೀ ಬಿ.ವೀರಭದ್ರಯ್ಯನವರು ಸಮ್ಮೇಳನದ ಯಶಸ್ಸಿಗೆ ಕಾರಣರಾದರು. ಸಾಸಲು ಗ್ರಾಮದ ಶ್ರೀಚಂದ್ರಶೇಖರ್, ಶ್ರೀ ಪುಟ್ಟಸೋಮಾಚಾರ್, ಶ್ರೀ ಓಂಕಾರಸ್ವಾಮಿ, ಅವರು ಸಮ್ಮೇಳನಕ್ಕಾಗಿ ದುಡಿದರು. ನನ್ನ ಜೀವನದಲ್ಲಿ ಈ ರೀತಿಯ ಸಮ್ಮೇಳನದಲ್ಲಿ ನಾನು ನೇರವಾಗಿ ಭಾಗಿಯಾಗಿದ್ದದ್ದು ಇದೇ ಮೊದಲ ಸಲ. ಈ ಸಮ್ಮೇಳನ ಇಷ್ಟೊಂದು ಅದ್ದೂರಿಯಾಗಿ ಆತ್ಮೀಯವಾಗಿ ನಡೆಯಲು ಪ್ರಮುಖ ಕಾರಣಕರ್ತರು ಸಾ.ಶಿ. ಮರುಳಯ್ಯನವರು. ಊರಿನ ಜನರಿಗೆ ಅವರ ಬಗ್ಗೆ ಅದೇ ಬಗೆಯ ಪ್ರೀತಿ, ವಿಶ್ವಾಸ. ತುಂಬ ಬಡತನದಿಂದ ಬಂದ ಅವರು ಬಹಳ ಕಷ್ಟಪಟ್ಟು ಓದಿ ವಿದ್ಯಾವಂತರಾದರು; ಜನಪ್ರಿಯ ಅಧ್ಯಾಪಕರಾದರು. ಪ್ರಾಧ್ಯಾಪಕರಾದರು, ಪ್ರಿನ್ಸಿಪಾಲರಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದರು. ಉನ್ನತ ಹುದ್ದೆಗಳಲ್ಲಿದ್ದವರು ಅವರು ತಮ್ಮ ಊರನ್ನು, ತಮ್ಮ ಜನರನ್ನು ಮರೆಯಲಿಲ್ಲ. ಜನರನ್ನು ಪ್ರೀತಿ ವಿಶ್ವಾಸಗಳಿಂದ ಗೆಲ್ಲುವುದು ಅವರ ವ್ಯಕ್ತಿತ್ವದ ವಿಶಿಷ್ಟ ಗುಣ. ಅವರು ಕೆಲಸ ಮಾಡಿದ ಕಡೆಗಳಲ್ಲೆಲ್ಲಾ ಅವರು ಜನರ ಪ್ರೀತಿ, ವಿಶ್ವಾಸಗಳನ್ನು ಇಂದಿಗೂ ಉಳಿಸಿಕೊಂಡಿದ್ದಾರೆ. ಶಿವಮೊಗ್ಗಾ ಜಿಲ್ಲೆಯಲ್ಲಿ ಕೆಳದಿ ಅರಸರ ಕಾಲದ ಸಾಹಿತ್ಯದ ಬಗ್ಗೆ ಅವರು ಮಾಡಿದ ಸಂಶೋಧನೆಯಿಂದ ಹಾಗೂ ಸಹ್ಯಾದ್ರಿ ಕಾಲೇಜಿನಲ್ಲಿ ಒಳ್ಳೆಯ

ಅಧ್ಯಾಪಕರಾಗಿ ಕೆಲಸ ಮಾಡಿದ್ದರಿಂದ ಶಿವಮೊಗ್ಗ ಜಿಲ್ಲೆಯಲ್ಲಿ ಜನರಿಗೆ ಅವರ ಬಗ್ಗೆ ಅಪಾರವಾದ ಗೌರವವಿದೆ. ಅವರಿಗೆ ಅನೇಕ ಸನ್ಮಾನ ಸಮಾರಂಭಗಳು ನಡೆದಿವೆ. ಅಧ್ಯಾಪಕ ವೃತ್ತಿಯಿಂದ ನಿವೃತ್ತರಾದರೂ ಅವರು ಈಗಲೂ ಸಾಹಿತ್ಯ ರಚನೆ, ಸಂಘ ಸಂಸ್ಥೆಗಳ ಕಾರ್ಯಕ್ರಮಗಳು, ಆಡಳಿತಾತ್ಮಕ ಪರೀಕ್ಷೆಗಳನ್ನು ತೆಗೆದುಕೊಳ್ಳುವ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮೊದಲಾದ ಅನೇಕ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದಾರೆ. ನಮ್ಮ ಜನಪ್ರಿಯ ಕವಿಗಳಲ್ಲಿ ಅವರು ಪ್ರಮುಖರು. ಅವರ ಭಾವಗೀತೆಗಳ ಕ್ಯಾಸೆಟ್‌ಗಳು ಜನಪ್ರಿಯವಾಗಿವೆ. ''ಸುಮಸುಂದರ ತರುಲತೆಗಳ ಬೃಂದಾವನ ಲೀಲೆ'' ಎಂಬ ಅವರ ಭಾವಗೀತೆ ನನಗೆ ತುಂಬ ಪ್ರಿಯವಾದುದು. ಅವರು ನನ್ನ ಬಗ್ಗೆ ತೋರಿಸಿರುವ ಪ್ರೀತಿ ವಿಶ್ವಾಸಗಳನ್ನು ನಾನು ಮರೆಯಲಾರೆ. ಅವರು ಸ್ನೇಹಶೀಲರು, ಆತ್ಮೀಯರು, ಸರಳಸ್ವಭಾವದ ಹಿರಿಯರು. ನನ್ನಂತಹ ಅನೇಕರಿಗೆ ಅವರು ಪ್ರೋತ್ಸಾಹ ನೀಡಿದ್ದಾರೆ. ಅವರಿಗೆ ಇನ್ನೂ ಹೆಚ್ಚು ಆಯುರಾರೋಗ್ಯಗಳು ದೊರೆತು ಅವರು ಇನ್ನೂ ಅನೇಕ ಕಾಲ ಸಾಹಿತ್ಯಕ್ಷೇತ್ರದಲ್ಲಿ ಕೆಲಸ ಮಾಡುವಂತಾಗಲಿ ಎಂದು ನಾನು ಆಶಿಸುತ್ತೇನೆ.

ಮರೆಯಲಾಗದ ಮಿತ್ರ

ಹೆಚ್. ನಂಜೇಗೌಡ

ಕನ್ನಡದಲ್ಲಿ ಒಂದು ಗಾದೆಮಾತಿದೆ. 'ತುಂಬಿದ ಕೊಡ ತುಳುಕುವುದಿಲ್ಲ' ಖಾಲಿ ಕೊಡಕ್ಕೆ ಭರಾಟೆ ಹೆಚ್ಚು. ಸಂಸ್ಕೃತದ ಶ್ಲೋಕವೊಂದು ಹೀಗೆ ಹೇಳುತ್ತದೆ. ''ವಿದ್ಯೆಯು ವಿನಯವನ್ನು ತಂದು ಕೊಡುತ್ತದೆ. ಆ ವಿನಯವು ಉತ್ತಮ ವ್ಯಕ್ತಿತ್ವವನ್ನು ರೂಪಿಸುತ್ತದೆ.' ಈ ಎರಡೂ ಉಕ್ತಿಗಳಿಗೂ ಸಾ.ಶಿ. ಮರುಳಯ್ಯನವರು ಭಾಷ್ಯ. ಶಾಲಾ ಕಾಲೇಜುಗಳಲ್ಲಿ ಓದಿ ದೊಡ್ಡ ದೊಡ್ಡ ಪದವಿಗಳನ್ನೂ ಪ್ರಶಸ್ತಿಗಳನ್ನೂ ಪಡೆದವರೆಲ್ಲರೂ ವಿದ್ಯಾವಂತರೇ! ಆದರೆ ಇವರಲ್ಲಿ ವಿನಯಶೀಲರೆಷ್ಟು ಜನ? ಆ ವಿನಯಶೀಲತೆಯಿಂದ ತಮ್ಮ ವ್ಯಕ್ತಿತ್ವವನ್ನು ಎತ್ತರಿಸಿಕೊಂಡವರೆಷ್ಟು ಜನ ಕೇವಲ ಬೆರಳೆಣಿಕೆಯಷ್ಟು ಮಾತ್ರ. ಈ ಬೆರಳೆಣಿಕೆಯ ವಿರಳಪಂಕ್ತಿಯಲ್ಲಿ ಡಾ॥ ಸಾ.ಶಿ. ಮರುಳಯ್ಯನವರೂ ಒಬ್ಬರು.

ಇವರ ಪರಿಚಯ ನನಗೆ ತುಂಬ ದಿನಗಳದ್ದೇನೂ ಅಲ್ಲ. ನಾನು ಅವರ ಸಹಪಾಠಿಯೂ ಅಲ್ಲ; ಸಹೋದ್ಯೋಗಿಯೂ ಅಲ್ಲ. ಅವರ ಪರಿಚಯ ಆಕಸ್ಮಿಕ. ಈ ಆಕಸ್ಮಿಕ ಭೇಟಿ ನಮ್ಮಿಬ್ಬರನ್ನು ಸೋದರರಂತೆ ಬೆಸೆದದ್ದು ಒಂದು ಆಶ್ಚರ್ಯದ ಸಂಗತಿ. ಅಂದಿನಿಂದ ನಮ್ಮಿಬ್ಬರ ಸಂಬಂಧ 'ಎರಡು ದೇಹ, ಒಂದು ಜೀವ' ಇದನ್ನು ಪೂರ್ವಾರ್ಜಿತ ಪುಣ್ಯವೆಂದೂ ಹಿಂದಿನ ಜನ್ಮದಲ್ಲಿ ನಾವು ಸೋದರರಾಗಿದ್ದೇವೇನೋ ಅಂದುಕೊಳ್ಳುತ್ತೇನೆ. ನನ್ನ ೭೧ ವರ್ಷದ ಜೀವನಾನುಭವದಲ್ಲಿ ಇಂತಹ ಅನೇಕ ಸಂಬಂಧಗಳನ್ನು ಹೊಂದಿದ್ದೇನೆ. ಪುನರ್ಜನ್ಮವನ್ನು ಕೆಲವು ಧರ್ಮಗಳೂ ಕೆಲವು ವ್ಯಕ್ತಿಗಳೂ ಒಪ್ಪುವುದಿಲ್ಲ. ಆದರೆ ನನಗೆ ಇದರಲ್ಲಿ ನಂಬಿಕೆ ಇದೆ. ಇದಕ್ಕೆ ಒಂದು ಸಣ್ಣ ನಿದರ್ಶನ ಕೊಡಬಹುದು. ಕೆಲವು ಸಾರಿ ನಮ್ಮ ದೇಹದಲ್ಲೇನಾದರೂ ಬಾಧೆ ಕಾಣಿಸಿಕೊಂಡರೆ 'ಅಯ್ಯೋ! ಜೀವ ಹೋದಾಗೆ ಆಗುತ್ತೆ; ಅಬ್ಬಾ ಈ ನೋವು ತಡೆಯೊಕ್ಕಾಗೋದಿಲ್ಲ, ನರಕ ಯಾತನೆ' ಮುಂತಾಗಿ ಉದ್ಗರಿಸುತ್ತೇವೆ. ನಮಗೆ ಈಗ ಸತ್ತಾಗ ಆಗುವ ನೋವಿನ ಪರಿಚಯವಿಲ್ಲ. ಯಾಕೆಂದರೆ ಸತ್ತು ತಕ್ಷಣ ನಮಗೆ ಈ ದೇಹಕ್ಕೆ ಜೀವ ಬಂದಿಲ್ಲ. ನರಕಕ್ಕೆ ಹೋಗಿ ಬಂದಿಲ್ಲ. ಅಂದಮೇಲೆ 'ನರಕಯಾತನೆ' ಎಂದು ಉದ್ಗರಿಸುವುದಾದರೆ ಅರ್ಥವಾದರೂ ಏನು? ಬಹುಶಃ ಹಿಂದಿನ ಜನ್ಮದಲ್ಲಿ ಅನುಭವಿಸಿದ ನೋವಿನ ಸ್ಮರಣೆ ಇದಾಗಿರಬೇಕಲ್ಲವೆ? ಇದು ನನ್ನ ಅನುಭವದ ಮಾತೇ ಹೊರತು ಸಿದ್ಧಾಂತವಲ್ಲ.

೧೯೭೬-೭೭ರ ಸುಮಾರಿನಲ್ಲಿ ಶ್ರೀ ಎಸ್. ಮಂಚಯ್ಯನವರು ಪಠ್ಯಪುಸ್ತಕ ನಿರ್ದೇಶನಾಲಯದ ನಿರ್ದೇಶಕರಾಗಿದ್ದರು. ಜ್ಞಾನಗಂಗೋತ್ರಿ ಸಂ. ೮ನ್ನು ಸಂಪಾದಿಸಲು ಡಾ॥ ಸಾ.ಶಿ. ಮರುಳಯ್ಯನವರನ್ನು ಪ್ರಧಾನ ಸಂಪಾದಕರನ್ನಾಗಿ ನಿಯೋಜಿಸಿಕೊಂಡಿದ್ದರು. ಪಠ್ಯಪುಸ್ತಕ ನಿರ್ದೇಶನಾಲಯದಲ್ಲಿ ನನ್ನ ಆತ್ಮೀಯ ಸ್ನೇಹಿತರಾದ ಶ್ರೀ ಭೋಗನಂಜಪ್ಪನವರು ಸಹಾಯಕ ನಿರ್ದೇಶಕರಾಗಿದ್ದರು. ನಾನು ಪಠ್ಯಪುಸ್ತಕ ಸಮಿತಿಯ ಅಧ್ಯಕ್ಷನಾಗಿ ಮತ್ತು ಸದಸ್ಯನಾಗಿ ಕೆಲಸ ಮಾಡುತ್ತಿದ್ದುದರಿಂದ

ತಿಂಗಳಿಗೊಮ್ಮೆಯಾದರೂ ಪಠ್ಯಪುಸ್ತಕ ರಚನಾ ಸಮಿತಿಯ ಸಭೆಗಳಿಗೆ ಹಾಜರಾಗುತ್ತಿದ್ದೆನು. ಒಂದು ಸಭೆಗೆ ಹೋದಾಗ ಶ್ರೀಭೋಗನಂಜಪ್ಪನವರು 'ಅಣ್ಣಯ್ಯ - ಈಗ ಶ್ರೀ ಮರುಳಯ್ಯನವರು ನಮ್ಮ ನಿರ್ದೇಶನಾಲಯಕ್ಕೆ ಬಂದಿದ್ದಾರೆ. ಹೋಗಿ ಮಾತನಾಡಿಸಿಕೊಂಡು ಬನ್ನಿ' ಅಂದರು. ನಾನು ಶ್ರೀ ಸಾ.ಶಿ. ಮರುಳಯ್ಯನವರ ಹೆಸರನ್ನು ಕೇಳಿದ್ದನೇ ಹೊರತು ನೋಡಿರಲಿಲ್ಲ. 'ಇಲ್ಲಪ್ಪ ಅವರ ಪರಿಚಯ ನನಗಿಲ್ಲ. ಅವರ ಹೆಸರು ಕೇಳಿದ್ದೇನೆಯೇ ಹೊರತು ನೋಡಿಯೂ ಇಲ್ಲ. ಬನ್ನಿ ಪರಿಚಯ ಮಾಡಿಕೊಡಿ' ಅಂದೆ. ನನ್ನನ್ನು ಅವರ ಬಳಿಗೇ ಕರೆದೊಯ್ದು ಪರಿಚಯಿಸಿದರು. ನನ್ನ ಹೆಸರು ಹೇಳಿದ ಕೂಡಲೇ 'ಬನ್ನಿ ಗೌಡರೇ ನಿಮ್ಮ ಹೆಸರು ಕೇಳಿದ್ದೆ. ಗುರುಗಳಾದ ಶಾಮರಾಯರು ನಿಮ್ಮ ಹೆಸರು ತುಂಬಾ ಹೇಳುತ್ತಿರುತ್ತಾರೆ. ಒಮ್ಮೆಯೂ ಭೇಟಿಯಾಗಲು ಕಾಲವೇ ಒದಗಿಬರಲಿಲ್ಲ. ಕೂತ್ಕೊಳ್ಳಿ' ಎಂದು ಕೂರಿಸಿ ಅನಂತರ ಅವರು ಕುಳಿತುಕೊಂಡರು. ಅವರು ಸೌಜನ್ಯ, ಸಜ್ಜನಿಕೆ, ವಿನಯಕೆ ನಾನು ಮಾರುಹೋದೆ. ನಾನು ಒಬ್ಬ ಟ್ರೈನಿಂಗ್ ಕಾಲೇಜಿನ ಮೇಷ್ಟ್ರು. ಅವರು ಕನ್ನಡದ ಉದ್ದಾಮ ಪಂಡಿತರು, ಮೇಲಾಗಿ ಅಧಿಕಾರಿ. ನನ್ನದು ಪ್ರಥಮ ಭೇಟಿ. ಪರಿಚಯ ಮಾಡಿದಾಗ ಕೈಮೇಲಕ್ಕೆತ್ತಿ ಟಾಟಾ ಹೇಳಿ, ಸ್ವಲ್ಪ ಮಾತನಾಡಿಸಿ ತಮ್ಮ ಅಧಿಕಾರ ಗತ್ತು ತೋರಿಸಿ ಅನಂತರ ಏನೋ ಮರೆತವರಂತೆಯೋ ಅಥವಾ ಅವರ ಮೈಮೇಲೆ ಯಾರಾದರೂ ತಣ್ಣೀರೆರಚಿದರೆ ಬೆಚ್ಚಿಬೀಳುವಂತೆಯೋ ನಟಿಸಿ 'ಅಯ್ಯೋ, ನಿಂತೇ ಇದ್ದೀರಲ್ಲ ಕೂತ್ಕೊಳ್ಳಿ' ಎಂದು ಹೇಳುವ ಅಧಿಕಾರಿಗಳನ್ನೇ ಅಲ್ಲಿಯವರೆಗೆ ನಾನು ನೋಡಿದ್ದು. ಇವರೇ ಮೊದಲ ಅಧಿಕಾರಿ ಎದ್ದು ನಿಂತು ಸಾಮಾನ್ಯನೊಬ್ಬನನ್ನು ಗೌರವಿಸಿದ್ದು. ತಕ್ಷಣ ಕಾಫಿ ತರಿಸಿಕೊಂಡು ಏನನ್ನೋ ಮನವಿಮಾಡಿಕೊಳ್ಳುವವರ ರೀತಿಯಲ್ಲಿ 'ಗೌಡರೇ ತಮ್ಮಿಂದ ಒಂದು ಕೆಲಸ ಆಗಬೇಕು. ಇಲ್ಲಿಗೆ ಬಂದಾಗ ಕೇಳುತ್ತಿದ್ದಾನೆಂದು ಭಾವಿಸಬೇಡಿ. ಜ್ಞಾನಗಂಗೋತ್ರಿಯ ಎಂಟನೆಯ ಸಂಪುಟಕ್ಕೆ ಕೆಲವು ಲೇಖನಗಳು ಬೇಕು. ದಯೆಯಿಟ್ಟು ಬರೆದುಕೊಡಿ please' ಅಂದರು. 'ಇಲ್ಲ ಸಾರ್ ಈ ಸಂಪುಟಕ್ಕೆ ಲೇಖನ ಬರೆಯುವಷ್ಟು ಸಮರ್ಥನಲ್ಲ ಅನ್ನಿಸುತ್ತೆ. ದೊಡ್ಡವರ ಕೈಯಲ್ಲಿ ಬರೆಸಿ' ಅಂದೆ. ''ಬಲ್ಲವರು ಬರುತ್ತೆ ಅನ್ನುತ್ತಾರೆಯೇ, ನಿಮ್ಮ ಲೇಖನ ನನಗೆ ಬೇಕು ಹೇಗಾದರೂ ಬರೆಯಿರಿ' ಅಂದರು. 'ಮೊದಲ ಪರಿಚಯ ದೊಡ್ಡವರು, ಅಪ್ಪಣೆ ಬುದ್ಧಿ ಬರೆದುಕೊಡುತ್ತೇನೆ. ಲೇಖನ ಬಂದ ಮೇಲೆ ನೀವು ಒಮ್ಮೆ ಓದಿ ತಪ್ಪುಗಳಿದ್ದರೆ ತಿದ್ದಿ ಅನಂತರ ಅಚ್ಚಿಗೆ ಕೊಡಿ' ಅಂದೆ. 'ಅಯ್ಯೋ ಎಂತಹ ಮಾತನಾಡ್ತೀರಿ ಅಪ್ಪಣೆ ಅಂದುಬಿಟ್ರಲ್ಲ' ಎಂದು ವಿನಯದಿಂದ ಕೈಮುಗಿದರು. ಅವರ ಸೌಜನ್ಯಕ್ಕೆ ಬೆರಗಾದೆ.

'ನ. ಭದ್ರಯ್ಯ, ಮೂಗೂರು ಶ್ರೀಕಂಠಮೂರ್ತಿ, ಬಳ್ಳಾರಿ ಲಲಿತ, ಸಿ.ಅಶ್ವತ್ಥ, ಕರ್ನಾಟಕದ ಆಭರಣಗಳು' ಇವುಗಳನ್ನು ಕುರಿತು ಲೇಖನ ಬರೆಯಬೇಕು ಅಂದರು. ಒಪ್ಪಿದೆ. 'ಆಯ್ತು ನೀವು ಒಪ್ಪಿದ್ದು ನನಗೆ ತುಂಬ ಸಂತೋಷ ಗೌಡರೇ. ಒಂದು ತಿಂಗಳಿನೊಳಗೆ ಲೇಖನ ಕೊಡಲು ಸಾಧ್ಯವೇ? ಸಂಪುಟವನ್ನು ಬೇಗ ಹೊರತರಬೇಕೆಂದಿದ್ದೇವೆ' ಅಂದರು. ಒಪ್ಪಿದೆ. ಅನಂತರ ನನ್ನನ್ನು ಅವರ ಕಛೇರಿಯ ಬಾಗಿಲವರೆಗೂ ಬಂದು ನನ್ನನ್ನು ಬೀಳ್ಕೊಟ್ಟರು.

ಒಂದು ತಿಂಗಳಳೊಗಾಗಿಯೇ ಲೇಖನಗಳನ್ನು ಬರೆದು ನಾನೇ ಖುದ್ದಾಗಿ ತೆಗೆದುಕೊಂಡು ಹೋಗಿ ಕೊಟ್ಟೆ. ಅವರಿಗೆ ತುಂಬ ಆಶ್ಚರ್ಯವಾಯಿತು. ನನ್ನ ಲೇಖನ ಚೆನ್ನಾಗಿ ಇವೆ ಎಂದಲ್ಲ, ಹೇಳಿದ ಕಾಲಕ್ಕೆ ಮುಂಚೆಯೇ ಕೊಡುತ್ತಿದ್ದಾರಲ್ಲ ಅಂತ. 'ಗೌಡರೇ ಲೇಖನದಾರರಿಗೆ ಕನಿಷ್ಟ ಪಕ್ಷ ಒಂದೆರಡು ಜ್ಞಾಪನಾಪತ್ರವನ್ನಾದರೂ ಬರೆಯಬೇಕು. ನೀವು ಇಷ್ಟು ಜಾಗ್ರತೆ ಮುಗಿಸಿಕೊಟ್ರಲ್ಲ. ತುಂಬ ಸಂತೋಷ' ಅಂದರು. 'ಒಮ್ಮೆ ನೋಡ್ತೀನಿ ಗೌಡ್ರೇ' ಅಂದರು. ನನಗನ್ನಿಸಿತು 'ಇಷ್ಟು ಜಾಗ್ರತೆ ಐದು ಲೇಖನ ಬರೆದಿದದ್ದಾರಲ್ಲ, ಅವು ಇನ್ನೆಷ್ಟು ಚೆನ್ನಾಗಿದ್ದಾವೋ ಅನ್ನಿಸಿರಬೇಕು ಅಂತ'.

ಒಂದು ವಾರದನಂತರ ಅವರಿಂದ ನನಗೊಂದು ಪತ್ರ ಬಂತು. ಅದರಲ್ಲಿ ನನ್ನ ಲೇಖನಗಳ ಬಗ್ಗೆ ಪ್ರಸ್ತಾಪಿಸಿದ್ದರು. 'ನಿಮ್ಮ ಲೇಖನಗಳು ತುಂಬ ಚೆನ್ನಾಗಿವೆ. ನೀವು ಇಷ್ಟೊಂದು ವಿದ್ವಾಂಸರು ಅಂತ ಗೊತ್ತೇ ಇರಲಿಲ್ಲ. ಉಪಯುಕ್ತ ಮಾಹಿತಿ ಒದಗಿಸಿದ್ದೀರಿ. ಶ್ರೀಕಂಠಮೂರ್ತಿ, ಬಳ್ಳಾರಿ ಲಲಿತ ಅವರ ಬಗ್ಗೆ ಬರೆದಿರುವ ಲೇಖನಗಳನ್ನು ಓದಿದಮೇಲೆ ನೀವೂ ಒಬ್ಬರು ಕಲಾವಿದರು ಅಂತ ತಿಳೀತು. ಇಲ್ಲವಾದರೆ ಅಷ್ಟೊಂದು ಸೊಗಸಾಗಿ ಒಬ್ಬ ಕಲಾವಿದನನ್ನು ಪರಿಚಯಿಸುವುದು ಕಷ್ಟ. ಅವರ ಜೀವನ ಚರಿತ್ರೆಗಳನ್ನೇ ಏಕೆ ಬರೀಬಾರದು ನನ್ನ ಆತ್ಮೀಯರೆಂದು ತಿಳಿದು ಅಲ್ಲಲ್ಲಿ ಸಣ್ಣಪುಟ್ಟ ಭಾಷಾದೋಷಗಳನ್ನು ತಿದ್ದಿದ್ದೇನೆ. ಅನ್ಯಥಾ ಭಾವಿಸಬಾರದು' ಎಂದು ಹೇಳಿದ್ದರು. ಇಷ್ಟೊಂದು ಬಿಚ್ಚು ಹೃದಯ ಶ್ರೀಮಂತಿಕೆ ಯಾರಿಗಿದೆ? ಹೊಸಪರಿಚಯವಾದರೂ ಮುಜುಗರವಿಲ್ಲದೆ ಇದ್ದದ್ದನ್ನು ಇದ್ದ ಹಾಗೆ ಹೇಳುವ ಸ್ವಭಾವ ಎಷ್ಟು ಜನ ವಿದ್ವಾಂಸರಿಗಿದೆ? ಇದು ಮರುಳಯ್ಯನವರಲ್ಲಿರುವ ಒಂದು ವಿಶಿಷ್ಟಗುಣ. ಅನಂತರ ಸುಮಾರು ಜನ ನನ್ನ ಸ್ನೇಹಿತರು ನನ್ನ ಲೇಖನಗಳ ಬಗ್ಗೆ ಮರುಳಯ್ಯನವರು ಪ್ರಶಂಸೆ ಮಾಡಿದುದಾಗಿ ಹೇಳಿ ಅಭಿನಂದಿಸಿದರು. ಒಬ್ಬ ಹಿರಿಯ ಲೇಖಕ ಬೇರೆ ಲೇಖಕರನ್ನು ಬರವಣಿಗೆಗೆ ತೊಡಗಿಸುವ ತಂತ್ರ ಮರುಳಯ್ಯನವರದು.

ಆ ಪ್ರಸಂಗದಿಂದ ನಮ್ಮ ಅವರ ಸ್ನೇಹ ತುಂಬ ಹತ್ತಿರವಾಯಿತು. ಮತ್ತೊಂದು ಪ್ರಸಂಗ. ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ಪಠ್ಯಕ್ರಮವನ್ನನುಸರಿಸಿ ಪ್ರಾಥಮಿಕ ಒಂದರಿಂದ ನಾಲ್ಕನೆಯ ತರಗತಿಯವರೆಗೆ ಯೂನಿಸೆಫ್ ನೆರವಿನಿಂದ ಪ್ರಾಯೋಗಿಕ ಪಠ್ಯಪುಸ್ತಕಗಳ ರಚನೆಯಾಗಬೇಕಾಗಿತ್ತು. ದೆಹಲಿಯಲ್ಲಿ ೧೯೮೧ರಲ್ಲಿ ನಡೆದ ರಾಷ್ಟ್ರೀಯ ಹೊಸ ಶಿಕ್ಷಣ ನೀತಿಯ ಪಠ್ಯಕ್ರಮ ರಚನಾ ಕಾರ್ಯಾಗಾರರಲ್ಲಿ ಕನ್ನಡ ಭಾಷಾ ತಜ್ಞನಾಗಿ ಕರ್ನಾಟಕವನ್ನು ಪ್ರತಿನಿಧಿಸಿದ್ದುದರಿಂದ ಭಾಷಾಪಠ್ಯಪುಸ್ತಕ ರಚನಾ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಹೊಣೆ ನನ್ನದಾಗಿತ್ತು. ಒಂದನೆಯ ತರಗತಿಗೆ ಬರೆದ ಪಠ್ಯಪುಸ್ತಕಕ್ಕೆ 'ಕನ್ನಡ ಪ್ರಾಥಮಿಕ' ಎಂದು ಹೆಸರಿಸಲಾಯಿತು. ಎರಡು, ಮೂರು, ನಾಲ್ಕಕ್ಕೆ ಏನು ಹೆಸರಿಡುವುದು ಎಂಬ ವಿಚಾರ ಚರ್ಚೆಗೆ ಬಂತು. 'ಕನ್ನಡ ನುಡಿ' ಎಂದು ಹೆಸರಿಡುವುದೆಂದು ತೀರ್ಮಾನಕ್ಕೆ ಬಂದೆವಾದರೂ 'ಒಂದು ದಿನ ಅವಕಾಶ ಕೊಡಿ ನಾಳೆ ನಿರ್ಧರಿಸೋಣ' ಎಂದು ಹೇಳಿ ಶ್ರೀ ಮರುಳಯ್ಯನವರ ಬಳಿಗೆ ಹೋಗಿ ಈ ವಿಚಾರ ಮಂಡಿಸಿದೆ. 'ಗೌಡರು ಇಟ್ಟಮೇಲೆ ಅದು ಅಸ್ತು. ಚೆನ್ನಾಗಿ ಹೆಸರಿಟ್ಟಿದ್ದೀರಿ ಬಿಡಿ' ಎಂದು

ಲೋಕಾರೂಢಿಯಾದ ಮಾತುಗಳನ್ನಾಡುತ್ತ ಸಮಯವರಿತು 'ಗೌಡ್ರೇ ನೀವು ಹೇಳಿದಿರಲ್ಲ ಅದನ್ನೇ ಹಿಂದುಮುಂದು ಮಾಡಿದರೆ ಹೇಗಿರುತ್ತೆ. 'ಸುಡಿಗನ್ನಡ'' ಎಂದು ನಯವಾಗಿಯೇ ಸಲಹೆಯಿತ್ತರು. ನನಗೆ ತುಂಬ ಹಿಡಿಸಿತು. ಅದಕ್ಕೆ ದೊಡ್ಡವರು ಒಂದು ಕೆಲಸ ಮಾಡುವಾಗ ನಾಲ್ಕು ಜನರ ಜೊತೆ ಸಮಾಲೋಚಿಸಬೇಕು ಅಂತ ಹೇಳೋದು. ''ನೋಡಿ ಗೌಡರೇ ನನ್ನ ಮುಜಗರಕ್ಕಾಗಿ ಒಪ್ಪಿಕೋಬೇಡಿ. ನೀವು ಸಮಿತಿ ಅಧ್ಯಕ್ಷರು. ಏನೋ ಹೊಳೀತು ಹೇಳಿದೆ. ಇದು ನನ್ನದೇನು ಹೊಸದಲ್ಲ. ನಿಮ್ಮದನ್ನೇ ಹಿಂದುಮುಂದು ಮಾಡಿದೆ'' ಅಂದರು.

ಈ ಸಂದರ್ಭದಲ್ಲಿ ಪಂಪ ರನ್ನರ ಮಾತುಗಳು ಸ್ಮರಣೆಗೆ ಬರುತ್ತದೆ. ದುರ್ಯೋಧನನು ವೈಶಂಪಾಯನ ಕೊಳದಲ್ಲಿ ತಲೆಮರೆಸಿಕೊಂಡಿದ್ದಾಗ ಅವನನ್ನು ಮೇಲೇಳಿಸಲು ಭೀಮನು ದಡದಲ್ಲಿ ನಿಂತು ಮೂದಲಿಸಿದುದನು ಪಂಪ ''ಈಭೂತು ಎನ್ನಸರಂಗೇಳ್ದೊಡಲ್ಲದೆ ಪೊರಮಡುವನಲ್ಲಂ'' ಎಂದರೆ ರನ್ನ ಅವನ ಮಾತನ್ನೇ ಹಿಂದುಮುಂದೆ ಮಾಡಿ 'ಎನ್ನ ಸರಂಗೇಳ್ದೊಡಲ್ಲದೀ ಭೂತು ಪೊರಮಡುವನಲ್ಲಂ' ಎಂದು ಹೇಳಿದನು. ಇಲ್ಲಿ ''ಈ ಭೂತು'' ಎಂಬುದು ಮುಖ್ಯ. 'ಈ' ಎಂಬ ಸರ್ವನಾಮದಲ್ಲಿ ಇಬ್ಬರು ಕವಿಗಳೂ ದುರ್ಯೋಧನನ ಕೆಟ್ಟಗುಣಗಳನ್ನು ಧ್ವನಿಸಿದ್ದಾರೆ. 'ಈ' ಎಂಬುದು ದುರ್ಯೋಧನನ್ನು ಭೀಮನಿಗೆ ವಿಷ ಉಣಿಸಿದ್ದು, ಸರೋವರಕ್ಕೆ ಎಸೆದದ್ದೂ, ಅರಗಿನ ಮನೆಪ್ರಸಂಗ, ದ್ರೌಪದಿಯ ಮಾನಭಂಗ ಪ್ರಯತ್ನ, ಕಪಟದ್ಯೂತ ಇತ್ಯಾದಿ ದುಷ್ಕೃತ್ಯಗಳನ್ನೆಲ್ಲ ಧ್ವನಿಸುತ್ತದೆಯಾದರೂ ಆ ಸರ್ವನಾಮಕ್ಕೆ ಒತ್ತು ಸಿಗದಿದ್ದರೆ ಧ್ವನಿ ಮೂಡುವುದಿಲ್ಲ. ಸರ್ವನಾಮವನ್ನು ವಾಕ್ಯದ ಆದಿಯಲ್ಲಿಟ್ಟರೆ ಒತ್ತಿ ಹೇಳಲು ಸಾಧ್ಯವಿಲ್ಲ. 'ಈ ಭೂತು' ಇಲ್ಲಿ 'ಈ'ಯನ್ನು ಆದಿಯಲ್ಲಿರುವುದರಿಂದ ಒತ್ತಲು ಸಾಧ್ಯವೇ ಇಲ್ಲ. ಇದನ್ನರಿತ ರನ್ನ ಪಂಪನ ಮಾತನ್ನೇ ಹಿಂದುಮುಂದು ಮಾಡಿ ಸರ್ವನಾಮವನ್ನು ವಾಕ್ಯದ ಅದಿಯಿಂದ ತೆಗೆದು ವಾಕ್ಯದ ಮಧ್ಯಕೆ ಬದಲಾಯಿಸಿ 'ಯೆನ್ನ ಸರಂಗೇಳ್ದೊಡಲ್ಲದೆ ಈ ಭೂತ ಪೊಱಮಡುವನಲ್ಲಂ' ಎಂದನು. ವಾಕ್ಯದ ಮಧ್ಯೆ ಬಂದದ್ದರಿಂದ ಒತ್ತಿ ಹೇಳಲು ಸಾಕಷ್ಟು ಅವಕಾಶವಿದ್ದು 'ಈ' ಎಂಬ ಸರ್ವನಾಮ ವರ್ಣಧ್ವನಿಯನ್ನು ಪಡೆದುಕೊಂಡು ಒಂದೇ ವರ್ಣ ದುರ್ಯೋಧನನ ಹೀನಗುಣವನ್ನೆಲ್ಲ ಧ್ವನಿಸುತ್ತದೆ.ಆದುದರಿಂದಲೇ ಕುವೆಂಪು ರನ್ನನನ್ನು 'ಶಕ್ತಿಕವಿ' ಎಂದು ಕರೆದರು. ಇಲ್ಲಿ ಮರುಳಯ್ಯನವರೂ ಶಕ್ತಿಕವಿಯೇ ಎಂಬುದು ನನ್ನ ಭಾವನೆ.

ಶ್ರೀ ಮಂಚಯ್ಯನವರು ಕನ್ನಡ ಭಾಷಾ ಪ್ರೇಮಿಯಲ್ಲದೆ ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಪರಿಣತಿ ಹೊಂದಿದ್ದ ಶಿಕ್ಷಣತಜ್ಞರು.ಹಿರಿಯ ಪ್ರಾಥಮಿಕ ಐದು, ಆರು, ಏಳನೆಯ ತರಗತಿಗಳಿಗೆ ಒಂದು ವ್ಯಾಕರಣದ ಪ್ರಯೋಗ ಪುಸ್ತಕಗಳನ್ನು ರಚಿಸಬೇಕೆಂದು ತೀರ್ಮಾನಿಸಿ ಒಂದೊಂದು ತರಗತಿಗೂ ಒಂದೊಂದು ಸಮಿತಿಯನ್ನು ರಚಿಸಿ ಐದನೆ ತರಗತಿಗೆ ಶ್ರೀ ತ.ಸು. ಶಾಮರಾಯರನ್ನು ಆರನೆಯ ತರಗತಿಗೆ ಶ್ರೀ ಮಂಚಯ್ಯನವರು ಮತ್ತು ಏಳನೆಯ ತರಗತಿಗೆ ಸಾ.ಶಿ. ಮರುಳಯ್ಯನವರನ್ನು ಅಧ್ಯಕ್ಷರನಾಗಿ ನೇಮಿಸಿ ಅವರ ಸಹಾಯಕ್ಕೆ ಕೆಲವು ಸದಸ್ಯರನ್ನು ನೇಮಕ ಮಾಡಿದರು. ನನ್ನನ್ನು ಶಾಮರಾಯರು ಸದಸ್ಯನನ್ನಾಗಿ ಆರಿಸಿಕೊಂಡರು.

ಈ ಪುಸ್ತಕಗಳು ಪ್ರಾಯೋಗಿಕ ಪುಸ್ತಕಗಳು. (work book) ತರಗತಿಯಲ್ಲಿಯೇ ಶಿಕ್ಷಕರ ಸಹಾಯದಿಂದ ಬರೆದು ಮುಗಿಸಬೇಕು. ಇದಕ್ಕೆ ಹೆಸರು ಏನು ಇಡುವುದೆಂದು ಚರ್ಚೆ ನಡೆಯಿತು. ಒಬ್ಬೊಬ್ಬರು ಒಂದೊಂದು ಹೆಸರು ಸಲಹೆ ಮಾಡಿದರು. ಆದರೆ ಯಾರಿಗೂ ಅಷ್ಟಾಗಿ ಒಪ್ಪಿಗೆಯಾಗಲಿಲ್ಲ. ನಾನು 'ಏನೇ ಇಡಿ 'ಪ್ರಯೋಗ' ಪದ ಬರಬೇಕು' ಅಂದೆ. ಇಷ್ಟೆಲ್ಲಾ ನಡೆದದ್ದು ಗುಬ್ಬಿಯಲ್ಲಿ ನೆಲೆಸಿದ್ದ ತ.ಸು.ಶಾಮರಾಯರ ಮನೆಯಲ್ಲಿ ನಡೆದ ಮೂರು ದಿವಸಗಳ ಸಭೆಯಲ್ಲಿ. ಮರುಳಯ್ಯನವರು ಶಾಮರಾಯರನ್ನು 'ಸಾರ್ ನನಗೂ ಈಗೌಡಜ್ಜನಿಗೂ ಈ ಕೆಲಸ ಬಿಡಿ. ಸಾಯಂಕಾಲದವರೆಗೆ ಅವಕಾಶ ಕೊಡಿ' ಅಂದರು. ತಕ್ಷಣ ಶಾಮರಾಯರು, ಇಬ್ಬರು ಶಿಷ್ಯರ ತೀರ್ಮಾನವೇ ನಮಗೆ ಒಪ್ಪಿಗೆ ಎಂದರು. ಅಂದು ಏಕೆ ಅವರು 'ಗೌಡಜ್ಜ' ಅಂತ ಕರೆದರೋ ತಿಳಿಯದು. ಅವರ ಬಾಯಲ್ಲಿ ನಾನು ಇಂದೂ ಗೌಡಜ್ಜನಾಗಿಯೇ ಉಳಿದುಕೊಂಡಿದ್ದೇನೆ. ಸಾಯಂಕಾಲ ಗುಬ್ಬಿ ರೈಲ್ವೇದಾರಿಯಲ್ಲಿ ಪುಸ್ತಕದ ಹೆಸರಿನ ಬಗೆಯೇ ಚಿಂತಿಸುತ್ತಾ ಹೋದೆವು. 'ಪ್ರಯೋಗ' ಎಂಬ ಪದ ಎಂದು ಉಳಿಸಿಕೊಂಡು ಅದರ ಹಿಂದಕ್ಕೆ ಇಲ್ಲವೇ ಮುಂದಕ್ಕೆ ಒಂದು ಪದ ಸೇರಿಸಬೇಕಲ್ಲ ಅಂತ ಮೇಲಕು ಹಾಕುತ್ತ ''ಗೌಡಜ್ಜ ನಿನ್ನ 'ಪ್ರಯೋಗಕ್ಕೆ' ನನ್ನ 'ನಂದನ' ಸೇರಿಸಿ 'ಪ್ರಯೋಗನಂದನ' ಹೆಸರಿಡೋಣ. ನೀವು ಅನುಮತಿಸಿದರೆ'' ಅಂದರು. ಕೂಡಲೇ ಒಪ್ಪಿ ತುಂಬ ಚೆನ್ನಾಗಿದೆ. ಎರಡನೆಯ ಯೋಚನೆಯೇ ಬೇಡವೆಂದು ತೀರ್ಮಾನಿಸಿ ಸಾಯಂಕಾಲದ ಸಭೆಯಲ್ಲಿ ಮಂಡಿಸಿದೆವು. ಒಕ್ಕೊರಲಿನಿಂದ ಒಪ್ಪಿದರು. 'ಪ್ರಯೋಗನಂದನ' ಪುಸ್ತಕಗಳು ಎಲ್ಲ ಶಿಕ್ಷಕ ವರ್ಗದ ಮನ್ನಣೆ ಪಡೆದವು. ಆ ವೇಳೆಗೆ ಶ್ರೀ ಮಂಚಯ್ಯನವರು ಸಾರ್ವಜನಿಕ ಶಿಕ್ಷಣ ಇಲಾಖೆಯ ನಿರ್ದೇಶಕರಾಗಿ ಬಡ್ತಿ ಪಡೆದು ಅಧಿಕಾರವಹಿಸಿಕೊಂಡರು. ಇಂತಹ ಉತ್ತಮವಾದ ಪುಸ್ತಕ ಅಚ್ಚುಕೂಟದ ಬಾಗಿಲಿಗೆ ಹೋಗಲೇ ಇಲ್ಲ. ಆಸಕ್ತರಿಲ್ಲದ ಅಧಿಕಾರಿಗಳು ಇಲ್ಲದಿದ್ದರೆ ಎಲ್ಲ ಒಳ್ಳೆಯ ಕೆಲಸಗಳ ಗತಿಯೇ ಹೀಗೆ.

ಹೀಗೆ ನಮ್ಮಿಬ್ಬರ ಸ್ನೇಹ ಬಲವಾಗಿ ಬೆಳೆಯಿತು. ಇಲ್ಲಿಂದ ಮುಂದೆ ಅನೇಕ ಶೈಕ್ಷಣಿಕ ಕಾರ್ಯಕ್ರಮಗಳಲ್ಲಿ ಒಟ್ಟಾಗಿ ಕೆಲಸ ಮಾಡಿದೆವು. ಅವರ ಜಾಣ್ಮೆ, ಸಮಯ ಸ್ಫೂರ್ತಿ ಮೆಚ್ಚುವಂತದ್ದು. ತುಂಬ ಕುಶಲಿ. ಅವರು ಅಧ್ಯಕ್ಷರಾದರೂ ರಚನಾ ಸಮಿತಿಯ ಮೊದಲ ಸಭೆಯಲ್ಲಿಯೇ ''ಮಿತ್ರರೇ ನೀವೆಲ್ಲ ತರಗತಿಯ ಅಧ್ಯಾಪಕರು. ನಾನು ಕಾಲೇಜು ಮೇಷ್ಟ್ರು. ಆ ಗೌರವಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ್ದಾರೆ. ನಿಮ್ಮ ಮುಂದೆ ನಾನೆಷ್ಟರವನು.ನಮಗೆ ವಯಸ್ಸಿನಲ್ಲಿ, ಅನುಭವದಲ್ಲಿ ನಮ್ಮ ಗೌಡಜ್ಜ ಹಿರಿಯರು ಅವರು ಈ ಸಮಿತಿಯ ಅಧ್ಯಕ್ಷರು, ಅನಧಿಕೃತವಾಗಿ. ಈಗಾಗಲೇ ಬೇಕಾದಷ್ಟು ಪುಸ್ತಕ ರಚಿಸಿದ ಅನುಭವವಿದೆ. ಅವರ ಮಾರ್ಗದರ್ಶನದಲ್ಲಿ ಕೆಲಸ ಮಾಡೋಣ'' ಎಂದು ಹೇಳಿ ಕೆಲಸವನ್ನು ಹಂಚಿ ಮಾರ್ಗದರ್ಶನ ಕೊಡಿಸಿ ಪಠ್ಯಗಳನ್ನು ಅಂತಿಮಘಟ್ಟಕ್ಕೆ ತರುವಾಗ ನಯವಾಗಿ ಚರ್ಚಿಸಿ ಸದಸ್ಯರು ಮಾಡಿರುವ ತಪ್ಪುಗಳನ್ನು ಒಳ್ಳೆಯ ಮಾತಿನಿಂದಲೇ ತಿದ್ದಿ ಮಾರ್ಗದರ್ಶನ ಮಾಡಿ ಉತ್ತಮ ಪುಸ್ತಕ ರಚಿಸುವಂತೆ ಪ್ರೋತ್ಸಾಹಿಸುತ್ತಿದ್ದರು. ಯಾವುದಾದರೂ ಒಂದು ಪಾಠವಿವಾದಕ್ಕೆ ಒಳಗಾಗುತ್ತದೆ ಎಂದು ಅವರ ಮನಸ್ಸಿಗೆ

ಬಂದರೆ ಉಪಾಯದ ಮಾತುಗಳಿಂದಲೇ ಆ ಪಾಠವನ್ನು ಸದ್ದುಗದ್ದಲವಿಲ್ಲದೆ ಕೈಬಿಡಿಸುತ್ತಿದ್ದರು.

ಇಂತಹ ಪ್ರಸಂಗ ನಾವೇ ರಚಿಸಿರುವ ಹತ್ತನೆಯ ತರಗತಿಯ ಕನ್ನಡ ಪಠ್ಯಪುಸ್ತಕ ''ಕನ್ನಡ ಭಾರತಿ-೧೦''(ಹಾಲಿ ಪುಸ್ತಕ)ಯನ್ನು ರಚಿಸುವಾಗ ಆಯಿತು. ರಚನಾ ಸಮಿತಿಯ ಅಧ್ಯಕ್ಷರಾಗಿ ಸಾ.ಶಿ. ಮರುಳಯ್ಯನವರು ಇದ್ದರು. ನಾನು ಮತ್ತು ಇನ್ನು ಕೆಲವರು ಸಮಿತಿಯ ಸದಸ್ಯರಾಗಿದ್ದರು. ಮೊದಲ ಸಭೆಯಲ್ಲಿ ಪಾಠಗಳ ಹಂಚಿಕೆ. ಯಾರು ಯಾರು ಯಾವ ಯಾವ ಪಾಠ ಬರೆಯಬೇಕೆನ್ನುವಾಗ ಸದಸ್ಯರಲ್ಲಿ ಕೆಲವರು ನಾನು ಈ ಪಾಠವನ್ನು ಬರೆಯುತ್ತೇನೆಂದು ಹಠ ಹಿಡಿಯುವುದುಂಟು. ಸಾಮಾನ್ಯವಾಗಿ ಅಧ್ಯಕ್ಷರೇ 'ಇಂತಿಂಥ ಸದಸ್ಯರು ಇಂತಿಂಥ ಪಾಠ ಬರೆಯಬೇಕು. ಅವುಗಳಿಗೆ ಬೇಕಾದ ಅಭ್ಯಾಸವನ್ನು ಅವರೇ ಬರೆದು ತರಬೇಕು' ಎಂದು ಹೇಳುವುದು ರೂಢಿ. ಆದರೆ ಈ ಸಭೆಯಲ್ಲಿ ಹೀಗಾಗಲಿಲ್ಲ. ಒಬ್ಬ ಸದಸ್ಯರು 'ಈ ಪಾಠವನ್ನು ನಾನೇ ಬರೆಯಬೇಕು. ತುಂಬ ಶೋಷಣೆಮಾಡಿ ಬಿಟ್ಟಿದ್ದಾರೆ. ಆ ಬಗ್ಗೆ ಪ್ರಸ್ತಾಪಿಸಬೇಕು. ಇದು ಮಕ್ಕಳಿಗೆ ಗೊತ್ತಾಗಬೇಕು' ಎಂದೆಲ್ಲ ಮಾತನಾಡಿದರು. ತಕ್ಷಣವೇ ಅಧ್ಯಕ್ಷರಿಗೆ ಇದರಿಂದ ಅನೇಕ ಸಮಸ್ಯೆಗಳನ್ನು ಎದುರಿಸಬೇಕೆಂಬುದರ ಅರಿವಾಯಿತು. ಇದನ್ನು ಹೇಗೆ ಬಗೆಹರಿಸುವುದೆಂಬ ಸಂಶಯ ಕಾಡಿತು. 'ಆಯಿತು ನೀವೇ ಬರೆಯಬೇಕಾದದ್ದು. ನಾನೇ ನಿಮಗೆ ಹೇಳಬೇಕೆಂದಿದ್ದೆ. ನೀವೇ ವಿಷಯ ಮಂಡಿಸಿದಿರಿ. ಪಠ್ಯಪುಸ್ತಕ ಬರೆಯುವಲ್ಲಿ ಕೆಲವು ನಿಯಮಗಳನ್ನು ಅನುಸರಿಸಬೇಕಾಗಿದೆ. ಮೊದಲು ಆ ಬಗ್ಗೆ ಚರ್ಚಿಸಿ, ಮಧ್ಯಾಹ್ನ ಊಟ ಮಾಡಿಬಂದನಂತರ ನಿಯಮಗಳನ್ನು ಪೂರ್ಣಗೊಳಿಸಿ ನಾಳೆ ಪಾಠ ಹಂಚಿಕೆ ಮಾಡೋಣ' ಎಂದು ಹೇಳಿ, ಕೆಲವು ನಿಯಮಗಳನ್ನು ಓದಿ ಹೇಳಿದರು. ಪಠ್ಯಪುಸ್ತಕದಲ್ಲಿ ಗದ್ಯಪಾಠಗಳು ಇಷ್ಟಿರಬೇಕು. ಅವು ಹಿಂದಿನ ತರಗತಿಗಳಲ್ಲಿ ಬಂದಿರುವ ವಿಷಯಗಳನ್ನು ಅಧ್ಯಯನ ಮಾಡಿ ಅಲ್ಲಿಲ್ಲದಿರುವ ಮತ್ತು ಆ ತರಗತಿಯಲ್ಲಿ ಪಠ್ಯಪುಸ್ತಕದಲ್ಲಿ ಬಂದಿರುವ ಭಾಷೆಗಿಂತ ಸ್ವಲ್ಪ ಕಠಿಣವೂ ವೈವಿಧ್ಯಮಯವಾದ ಶೈಲಿಯಿರಬೇಕು. ಹಳಗನ್ನಡ, ನಡುಗನ್ನಡ, ಹೊಸಗನ್ನಡಕ್ಕೇ ಇಷ್ಟಿಷ್ಟು ಪುಟಗಳಿರಬೇಕು. ಹಾಗೆಯೇ ಪದ್ಯಭಾಗದಲ್ಲಿಯೂ ಇದೇ ನಿಯಮ ಅನುಸರಿಸಬೇಕು. ಕರ್ನಾಟಕದ ಪ್ರಮುಖ ಬರಹಗಾರರಿಂದ ಕವಿಗಳಿಂದ ವಸ್ತುವನ್ನು ಆರಿಸಿಕೊಳ್ಳಬೇಕು. ಎಲ್ಲಿಯೂ ಜಾತಿ, ಮತ ಇವುಗಳ ಮೇಲೆ ಪ್ರಭಾವ ಬೀರುವ ಇಲ್ಲವೇ ಧಕ್ಕೆಯಾಗುವಂತಹ ಅಂಶಗಳಿರಬಾರದೆಂಬ ಅನೇಕ ನಿಯಮಗಳಿವೆ ಎಂದು ಅವುಗಳನ್ನು ವಿವರಿಸುವುದರಲ್ಲಿಯೇ ಆ ದಿನದ ಸಭೆಯನ್ನು ಮುಗಿಸಿದರು.

ಸಾಯಂಕಾಲ ಮನೆಗೆ ಜೊತೆಯಲ್ಲಿಯೇ ಹೋದೆವು. 'ಏನಪ್ಪ ಗೌಡಜ್ಜ, ಒಳ್ಳೆ ತಾಪತ್ರಯದ ಸದಸ್ಯ ಸಿಕ್ಕಿದ. ಅವನು ಉದ್ದೇಶಿಸಿರುವ ಪಾಠವನ್ನು ಅವನ ಕೈಲೇ ಬರೆಸಿದರೆ ನಾವು ದಿವಸ ಪತ್ರಿಕೆಯಲ್ಲಿ ಬರುವ ಆಪಾದನೆಗಳಿಗೆ ಉತ್ತರ ಬರೆಯುವುದೇ ಆಗುತ್ತದೆ. ಇದನ್ನು ಹೇಗೆ ತಪ್ಪಿಸೋದು?' ಅಂದರು. ''ಒಂದು ಕೆಲಸ ಮಾಡಿ ಬುದ್ಧಿ ನಾಳೆ ಸಭೆ ಪ್ರಾರಂಭವಾಗುತ್ತಿದ್ದಂತೆಯೇ ನಾನೇ ಮುಂದಾಗಿ 'ಅಧ್ಯಕ್ಷರೇ ಯಾರು ಯಾರು

ಯಾವ ಯಾವ ಪಾಠ ಬರೆಯಬೇಕೆಂಬುದನ್ನು ವಹಿಸಲಿ. ನಮ್ಮ ನಿಮ್ಮಲ್ಲಿಯೇ ಗೊಂದಲವಾಗುವುದು ಬೇಡ' ಎಂದು ಹೇಳುತ್ತೇನೆ. ನೀವು ಆ ಮನುಷ್ಯ ಬರೆಯಬೇಕೆಂದಿರುವ ಪಾಠವನ್ನೇ ಕೈಬಿಡಿ. ಜೊತೆಗೆ ಈ ಸಭೆಯಲ್ಲಿರುವ ಯಾವ ಸದಸ್ಯರ ಪುಸ್ತಕಗಳಿಂದಲೂ ಪಾಠ ಆರಿಸಿಕೊಳ್ಳುವುದು ಬೇಡವೆಂಬ ಸಲಹೆಯನ್ನು ಕೊಡುತ್ತೇನೆ. ಅದಕ್ಕೆ ಒಪ್ಪಿಗೆ ಪಡೆಯಿರಿ. ಅವರನ್ನು ಜಾಣತನದಿಂದಲೇ ತಳ್ಳಿಹಾಕಬಹುದು'' ಎಂದೆ. 'ಅವರು ಒಪ್ಪಬೇಕಲ್ಲ ಗೌಡಜ್ಜ' ಅಂದರು. 'ಒಪ್ಪದಿದ್ದಾಗ ಅಧ್ಯಕ್ಷರ ರೂಲು ಇದ್ದೇ ಇದೆಯಲ್ಲ ' ಅಂದೆ.

ಮಾರನೆ ದಿನ ಸಭೆ ಪ್ರಾರಂಭವಾಯಿತು. ಆ ಸದಸ್ಯರು ತಾವು ಬರೆದಿದ್ದ ಜೀವನ ಚರಿತ್ರೆ ಪುಸ್ತಕವನ್ನು ಅಧ್ಯಕ್ಷರ ಮುಂದಿಟ್ಟರು. 'ಸಭೆ ಪ್ರಾರಂಭಿಸೋಣವೇ ಗೌಡಜ್ಜ ಈಗ ಹೇಗೆ ತೀರ್ಮಾನಕ್ಕೆ ಬರೋಣ' ಅಂದರು. ನಾನು ಹಿಂದಿನ ದಿನ ಹೇಳಿದ ಅಂಶಗಳನ್ನೇ ಸಭೆ ಮುಂದಿಟ್ಟೆ. ಆತ 'ಅಧ್ಯಕ್ಷರೇ ಹೇಳಿದ ಹಾಗೆ ಕೇಳೋದಾದರೆ ನಮಗೇನು ಸ್ವಾತಂತ್ರ್ಯವಿದೆ? ಹಾಗೆ ಆಗೋಲ್ಲ ಸಾರ್. ನಮಗೂ ಆಯ್ಕೆಯಲ್ಲಿ ಸ್ವಾತಂತ್ರ್ಯವಿರಬೇಕು' ಎಂದು ಪ್ರತಿಭಟಿಸಿದರು... 'ಇವರೇ ನಿಮ್ಮ ಸ್ವಾತಂತ್ರ್ಯವನ್ನು ಖಂಡಿತ ನಾನು ಕಸಿದುಕೊಳ್ಳುವುದಿಲ್ಲ. ನಿಮಗೂ ಅವಕಾಶವಿದೆ. ಆದರೆ ಸರ್ಕಾರದ ಕೆಲವು ನಿಯಮಗಳನ್ನು ಅನುಸರಿಸಬೇಕಲ್ಲ? ಅದಕ್ಕಾಗಿಯೇ ಒಬ್ಬರು ಅಧ್ಯಕ್ಷರಿರುತ್ತಾರೆ. ಆದುದರಿಂದ ಅವರ ನಿಯಮಕ್ಕೆ ಬದ್ಧರಾಗಬೇಕಲ್ಲವೇ? ನೀವೇ ಅಧ್ಯಕ್ಷರಾದರೂ ಹೀಗೆ ಅಲ್ಲವೇ. ದಯೆಯಿಟ್ಟು ಈ ವಿಷಯದ ಬಗ್ಗೆ ನಿನ್ನೆ ಹೇಳಿದ ನಿಯಮಗಳನ್ನು ಗಮನದಲ್ಲಿಟ್ಟುಕೊಂಡು ಆರಿಸಿಕೊಂಡು ಬನ್ನಿ'. 'ನನ್ನ ಪುಸ್ತಕದಿಂದ ಜೀವನಚರಿತ್ರೆ ಆರಿಸುವುದು ಬೇಡವೇ ಸಾರ್' 'ನಿನ್ನೆಯೇ ನಮ್ಮ ಯಾರ ಪುಸ್ತಕದಿಂದಲೂ ಆಯ್ಕೆ ಮಾಡಬಾರದೆಂದು ತೀರ್ಮಾನವಾಗಿದೆಯಲ್ಲ. ಮತ್ತೆ ಆ ವಿಚಾರ ಪ್ರಸ್ತಾಪಮಾಡುವುದು ಬೇಡ' ಎಂದು ಉಪಾಯವಾಗಿ ತಳ್ಳಿ ಹಾಕಿದರು. ಅಧ್ಯಕ್ಷರ ಕೆಲಸ ಮಾಡೋದು ತುಂಬ ಕಷ್ಟ ಅನ್ನೋದು ತಿಳೀತಲ್ಲ. ಮುಂದಿನ ಸಭೆಗೆ ಆತ ಬರಲೇ ಇಲ್ಲ. ಗೈರು ಹಾಜರಾದರು. ಉಳಿದ ನಾವೇ ಪುಸ್ತಕ ರಚನೆ ಮಾಡಿದುದಾಯಿತು. ಸದ್ಯ ಅವರ ಗೈರು ಹಾಜರಿಯಿಂದ ಒಂದು ದೊಡ್ಡ ಸಮಸ್ಯೆಯೇ ಬಗೆಹರಿಯಿತು. ಮರುಳಯ್ಯನವರ ಜೊತೆಯಲ್ಲಿ ಅನೇಕ ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದೇನೆ. ಎಲ್ಲಿಯೂ ತಾನು ಬುದ್ಧಿವಂತನೆಂದು ಹೇಳಿಕೊಳ್ಳುವುದಿಲ್ಲ. ''ನಮಗಿಂತ ದೊಡ್ಡವರು ನಮ್ಮ ಗೌಡಜ್ಜ ಅವರೇ ನೋಡಿ. ಅವರು ಕೇಶಿರಾಜ, ಕೇಳಿಬಿಡಿ. ಎರಡು ನಿಮಿಷದಲ್ಲಿ ನಿಮ್ಮ ಸಂಶಯ ಬಗೆಹರಿಸಿಬಿಡುತ್ತಾರೆ'' ಎಂದು ಹೇಳಿ ಅನಂತರ ತಮ್ಮ ಅಭಿಪ್ರಾಯ ಹೇಳುತ್ತಿದ್ದರು. ಹೀಗೆ ಹೇಳುತ್ತಾ ಹೋದರೆ ಬೆಳೆದುಕೊಂಡು ಹೋಗ್ತಾನೆ ಇರುತ್ತೆ.

ಮತ್ತೊಂದೆರಡು ಹೇಳಲೇಬೇಕಾದ ವಿಷಯವನ್ನು ಹೇಳಿ ವಿರಮಿಸುತ್ತೇನೆ. ಇವರು ಮಾಡಿದ ಒಂದು ಮಹತ್ಕಾರ್ಯವೆಂದರೆ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಹಿಂದುಳಿದ ವರ್ಗದ ಪದವೀಧರರನ್ನು ಗುರುತಿಸಿ ಅವರನ್ನು ಒಂದೆಡೆ ಸೇರಿಸಿ ಅವರಿಗೆ ಕನ್ನಡದಲ್ಲಿ ಪಾಠ ಹೇಳಿ ಕನ್ನಡ ಮಾಧ್ಯಮದಲ್ಲಿ ಐ.ಎ.ಎಸ್. ಪರೀಕ್ಷೆ ಬರೆಸಿ, ಉನ್ನತ

ಶ್ರೇಣಿಯಲ್ಲಿ ತೇರ್ಗಡೆ ಹೊಂದಿ ಐ.ಎ.ಎಸ್. ಅಧಿಕಾರಿಗಳನ್ನಾಗಿ ಮಾಡಿದ್ದೊಂದು ದೊಡ್ಡ ಸಾಧನೆ. ಇದು ಇವರು ಕನ್ನಡ ಭಾಷೆಗೆ ತಂದು ಕೊಟ್ಟ ಗೌರವ. ಹೀಗೆ ಐ.ಎ.ಎಸ್. ಪದವಿ ಪಡೆದವರಲ್ಲಿ ಮೈಸೂರು ನಗರ ಪಾಲಿಕೆಯ ಆಯುಕ್ತರಾಗಿದ್ದ ಶ್ರೀ ಕೆ. ಶಿವರಾಮು ಅವರು ಒಬ್ಬರು. ಮರುಳಯ್ಯ ಅವರ ಪಾಲಿಗೆ ದೇವರು.

ಶ್ರೀ ಮರುಳಯ್ಯನವರನ್ನು ಕುರಿತು ''ಐ.ಎ.ಎಸ್.ಗೆ ಹಿಂದುಳಿದ ವರ್ಗದವರನ್ನು ತಯಾರು ಮಾಡಿದ್ದು ನಿಮ್ಮ ಕೆಲಸಗಳಲ್ಲಿ ತುಂಬ ಸಾಹಸದ್ದು'' ಎಂದೆ. ''ಇದರಲ್ಲಿ ನನ್ನದ್ದೇನಿದೆ ಗೌಡಜ್ಜ? ಎಲ್ಲ ವಿದ್ಯಾರ್ಥಿಗಳದ್ದು. ಅವರಿಗೆ ನೀವು ಜಾಣರು ಎಂಬ ಉತ್ಸಾಹ ತುಂಬಿದೆ. ಅವರ ಸಾಮರ್ಥ್ಯದ ಬಗ್ಗೆ ನಂಬಿಕೆ ಹುಟ್ಟಿಸಿದೆ, ಪ್ರತಿಭೆ ಅವರದು, ಪ್ರಯತ್ನ ಅವರದು. ಕಲಿಕೆ ಅವರದು, ಛಲ ಅವರದು, ಸಾಮರ್ಥ್ಯ ಅವರದು. ಇವೆಲ್ಲಿ ಅವರ ವ್ಯಕ್ತಿತ್ವದ ವೃಕ್ಷದಲ್ಲಿ ಅರಳಿದ ಹೂವುಗಳು. ಪ್ರೋತ್ಸಾಹ ನನ್ನದು. ಇದು ಕೇವಲ ನಾರು. ನನ್ನ ಪ್ರೋತ್ಸಾಹದ ನಾರಿನಿಂದ ಅವರ ಎಲ್ಲ ಸಾಮರ್ಥ್ಯಗಳ ಹೂವುಗಳನ್ನು ಕ್ರಮವಾಗಿ ಜೋಡಿಸಿದೆ. ಹಾರವಾಯಿತು. ಆ ಹಾರ ದೇವರಿಗೆ ಭಕ್ತಿಯಿಂದ ಅರ್ಪಿತವಾದ ಮೇಲೆ ಫಲ ಸಿಗಲೇಬೇಕಲ್ಲ. ಇದರಲ್ಲಿ ನನ್ನದು ಎನ್ನುವುದು ಏನಿದೆ? ನನ್ನ ಪ್ರಯತ್ನದಿಂದ ನಾಲ್ಕು ಜನ ಹಿಂದುಳಿದವರು ಮುಂದೆ ಬಂದರಲ್ಲ ಸಾಕು. ನನ್ನ ಜೀವನಸಾರ್ಥಕ'' ಅಂದರು. ಎಂತಹ ಸ್ಥಿತಪ್ರಜ್ಞ. ಇವು ನಾನು ಮರುಳಯ್ಯನವರಲ್ಲಿ ಕಂಡ ಹಿರಿಯ ಗುಣ.

ಇವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಮೇಲೆ ಪಾಂಡವಪುರದಲ್ಲಿ ಮಂಡ್ಯ ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನವಾಯಿತು. ಸುಜನಾ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು. ಶ್ರೀ ಮರುಳಯ್ಯನವರದು ಉದ್ಘಾಟನೆ. ಪಾಂಡವಪುರ ನನ್ನೂರು. ಊರಿಗೆ ಆತ್ಮೀಯರು ಬರುವಾಗ ಅವರನ್ನು ಮನೆಗೆ ಆಹ್ವಾನಿಸಬೇಕಾದ್ದು ನನ್ನ ಕರ್ತವ್ಯವಷ್ಟೇ. ಊಟಕ್ಕೆ ಆಹ್ವಾನಿಸಿದೆ. 'ಇದು ಸಮಾರಂಭ, ಸಾಹಿತಿಗಳೆಲ್ಲ ಬರುತ್ತಾರೆ. ಅವರನ್ನು ಬಿಟ್ಟು ನಾವೇ ಬೇರೆ ಹೋಗುವುದು ಸರಿಯಲ್ಲ. ಒಟ್ಟಿಗೆ ಇಲ್ಲೇ ಊಟ ಮಾಡೋಣ'' ಅಂದರು. ನಾನು ಸುಮ್ಮನಾದೆ. ಉದ್ಘಾಟನಾ ಸಮಾರಂಭ ಮುಗಿಯಿತು. ಅವರಿಗೇನನಿಸಿತೋ ತಿಳಿಯದು. 'ಗೌಡಜ್ಜ, ನಡಿ ನಿಮ್ಮ ಮನೆಗೆ ಊಟಕ್ಕೆ ಹೋಗೋಣ' ಎಂದುಹೇಳಿ ತಮ್ಮ ಶ್ರೀಮತಿಯವರನ್ನು ಕರೆದುಕೊಂಡು ಹೊರಟೇಬಿಟ್ಟರು. ಮನೆಗೆ ಬಂದೆವು. ಊಟಕ್ಕೆ ತಟ್ಟೆ ಇಡಿ ಎಂದಾಗ ಮನೆಯವರಿಗೂ ಆಶ್ಚರ್ಯ ಜೊತೆಗೆ ಸಂಕೋಚ. ಸಂಕೋಚ ಏಕೆಂದರೆ ಆದಿನ ಮನೆಯಲ್ಲಿ ಹುರುಳಿಕಾಯಿ, ಸೊಪ್ಪಿನ ಉಪ್ಪು ಸಾರು. ಹುರುಳಿ ಉಪ್ಪು ಸಾರು, ಮುದ್ದೆ ಊಟ ಮಾಡಿದೆವು. ಗಂಡ ಹೆಂಡತಿಯರಿಗೇ ಇದೇ ಅಮೃತಾನ್ನವೆನಿಸಿತು. 'ಇದೇ ಗೌಡಜ್ಜ ಅನ್ನದ ಋಣ ಅನ್ನೋದು. ನಮ್ಮ ಊಟ ನಿನ್ನ ಮನೇಲಿರೋವಾಗ ಅಲ್ಲಿ ಹೇಗೆ ಊಟಮಾಡಿಸಕೊಟ್ಟೀತು' ಅಂದರು. ಅನ್ನದ ಋಣ ಅನ್ನೋ ಮಾತು ಸತ್ಯವಾಯಿತಲ್ಲವೇ; ಗಂಡನಿಗೆ ತಕ್ಕ ಹೆಂಡತಿ. ಆ ತಾಯಿಯ ಸಂತೋಷ ಹೇಳತೀರದು. ''ನನ್ನ ತಂದೆ ಮನೆ ಊಟ ಆದಷ್ಟು ಸಂತೋಷವಾಯಿತು ಗೌಡರೇ'' ಅಂದರು. ಎಂತಹ ಸರಳ ಜೀವಿ.

ಸ್ನೇಹಮಯಿ. ಅದಕ್ಕೆ ನಾನು ಅಂದದ್ದು ಪೂರ್ವಜನ್ಮದ ಬಾಂಧವ್ಯ ಎಂದು. ಇಂತಹ ಯೋಗ ಎಷ್ಟು ಜನರಿಗೆ ಲಭ್ಯ?

ಹಾಸನದಲ್ಲಿ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ನಡೆಸಿದರು. ಪ್ರಧಾನಿಯಾಗಿದ್ದ ಶ್ರೀ ಹೆಚ್.ಡಿ. ದೇವೇಗೌಡರಿಂದ ಉದ್ಘಾಟನೆ. ಆ ಸಮ್ಮೇಳನದ ಹಿಂದಿನ ವರ್ಷ ೧೯೯೫ರಲ್ಲಿ ನನಗೆ 'ರಾಜ್ಯೋತ್ಸವ ಪ್ರಶಸ್ತಿ' ದೊರಕಿತ್ತು. ಸಮ್ಮೇಳನದಲ್ಲಿ ನನ್ನನ್ನು ಸನ್ಮಾನಿಸಲು ಆಹ್ವಾನಿಸಿದ್ದರು. ಶ್ರೀ ಚೆನ್ನವೀರಕಣವಿಯವರು ಸಮ್ಮೇಳನಾಧ್ಯಕ್ಷರು. ಡಾ|| ದೇ.ಜ.ಗೌ ಅವರದು ಸಮಾರೋಪ ಭಾಷಣ. ಸನ್ಮಾನಿಸಿದವರು ಹಾಸನ ಜಿಲ್ಲಾಪರಿಷತ್ ಅಧ್ಯಕ್ಷರಾಗಿದ್ದ ಶ್ರೀ ರುದ್ರೇಶಗೌಡರು. ಸನ್ಮಾನಿತರ ಪರಿಚಯ ಶ್ರೀ ಮರುಳಯ್ಯನವರದೇ. ನನ್ನ ಸರದಿ ಬಂದಾಗ ಆ ವೇದಿಕೆಯಲ್ಲಿಯೂ ನನ್ನನ್ನು ಗೌಡಜ್ಜ ಎಂದು ಸಂಬೋಧಿಸುವುದನ್ನ ಮರೆಯಲಿಲ್ಲ. ನನ್ನ ಹತ್ತಿರ ಬಂದು ಎರಡು ಕೈಗಳಿಂದಲೂ ಬಾಚಿ ತಬ್ಬಿಕೊಂಡು ಕರೆದುಕೊಂಡು ಹೋಗಿ ಶ್ರೀ ಚೆನ್ನವೀರಕಣವಿಯವರಿಗೆ ''ಇವರು ನಮ್ಮ ಗೌಡಜ್ಜ ಸಾರ್' ಅಭಿನವ ಕೇಶೀರಾಜ. ತುಂಬ ದೊಡ್ಡ ವಿದ್ವಾಂಸರು. ನನ್ನ ಅಧಿಕಾರವಧಿಯಲ್ಲಿ ಇವರನ್ನು ಸನ್ಮಾನಿಸುವ ಭಾಗ್ಯ ಬಂದದ್ದು ನನ್ನ ಪುಣ್ಯ'' ಅಂತ ಹೇಳಿ ಕುರ್ಚಿಮೇಲೆ ಕೂರಿಸಿ, 'ರುದ್ರೇಶಗೌಡರೇ ನಮ್ಮ ಗೌಡಜ್ಜನಿಗೆ ಶಾಲು ಹೊದಿಸಿ, ಹೂವಿನಹಾರ ಹಾಕಿ ಫಲಪುಷ್ಪ ಕೊಡಿ' ಅಂತ ತಾವೇ ಓಡಾಡಿಕೊಂಡು ತಂದು ಅವರಿಗೆ ಕೊಟ್ಟು ನನ್ನನ್ನು ಸನ್ಮಾನಿಸಿ ಅದೇ ವೇಷದಲ್ಲಿರಿಸಿ ಕುರ್ಚಿ ಪಕ್ಕದಲ್ಲಿ ನಿಂತು ಫೋಟೊ ತೆಗೆಸಿ ಎದ್ದಕೂಡಲೇ ತಬ್ಬಿಕೊಂಡು 'ಧನ್ಯೋಸ್ಮಿ ಗೌಡಜ್ಜ' ಅಂದರು. ನಾನು ಮೂಕವಿಸ್ಮಿತನಾಗಿ ಅವರ ಮುಖವನ್ನೊಮ್ಮೆ ನೋಡಿದೆ. ಅವರ ಕಣ್ಣುಗಳಲ್ಲಿ ಆನಂದಾಶ್ರು ಮುತ್ತುಗಳಂತೆ ಉದುರಿದವು. ಇದು ಜನ್ಮಜನ್ಮಾಂತರದ ಬಾಂಧವ್ಯವಲ್ಲದೆ ಮತ್ತೇನು?

ಒಂದು ದಿನ ಬೆಳಿಗ್ಗೆ ಒಂಬತ್ತೂ ಗಂಟೆ ಇರಬಹುದು. ನನ್ನ ದೂರವಾಣಿ ಗಂಟೆ ಬಾರಿಸಿತು. ಎತ್ತಿಕೊಂಡೆ. ''ಹಲೋ ಗೌಡಜ್ಜ ನಾನು ಮರುಳಯ್ಯ. ಆರೋಗ್ಯವೇ ಗೌಡರೇ. ಒಂದು ಕೆಲಸಕೊಡ್ತಾ ಇದ್ದೀನಿ. ಅಲ್ಲ ಅನ್ನಬಾರದು. ನನ್ನ ಮಾತು ತೆಗೆಯೋದಿಲ್ಲ ಅಂತ ನೆನ್ನೆ ನಮ್ಮ ಸಭೆಯಲ್ಲಿ ಒಪ್ಪಿಕೊಂಡು ಬಿಟ್ಟಿದ್ದೇನೆ. ನಿಮ್ಮ ಅನುಮತಿ ಇಲ್ಲದೆ ನಮ್ಮ ಪರಿಷತ್ತಿನ ವತಿಯಿಂದ ನಡೆಸಲಾಗುವ ಪರೀಕ್ಷೆಗಳಿಗೆ ಅವುಗಳ ಪಠ್ಯಕ್ರಮವನ್ನನುಸರಿಸಿ ಒಂದು ಕನ್ನಡ ಸಾಹಿತ್ಯ ಚರಿತ್ರೆ ಪುಸ್ತಕವನ್ನು ನಿಮ್ಮ ಕೈಯಲ್ಲಿ ಬರೆಸಿಕೊಡುವಂತೆ ಒಪ್ಪಿಕೊಂಡಿದ್ದೇನೆ. ನಿನ್ನ ಪುಸ್ತಕ ನಮ್ಮ ಪರಿಷತ್ತಿನಲ್ಲಿ ಇರಬೇಕು. ಈಗಾಗಲೇ ಸಮಗ್ರ ಕನ್ನಡ ಸಾಹಿತ್ಯ ಚರಿತ್ರೆ ಬರೆದಿರುವ ನಿಮಗೆ ದೊಡ್ಡದೇನಲ್ಲ. ನನ್ನ ಅಧಿಕಾರವಧಿ ಇನ್ನು ಮೂರೇ ತಿಂಗಳು. ನೀವು ಮೂವತ್ತು ದಿನದಲ್ಲಿ ಮುಗಿಸಿಕೊಡಬೇಕು. ಸಮಯಕ್ಕೆ ಸರಿಯಾಗಿ ಮಾಡಬಲ್ಲಿರಿ ಎಂಬ ನಂಬಿಕೆ ಇದೆ. ಆಧುನಿಕ ಸಾಹಿತ್ಯ ಕುರಿತು ಬರೆಯುವಾಗ ಇವು ನಿಮ್ಮ ಸಹಾಯಕ್ಕೆ ಬಂದರೆ ಧಾರಾಳವಾಗಿ ಉಪಯೋಗಿಸಿಕೊಳ್ಳಿ'' ಎಂದು ಅವರು ತುಮಕೂರು ಸಾಹಿತ್ಯ ಸಮ್ಮೇಳನದಲ್ಲಿ ಆಧುನಿಕ ಸಾಹಿತ್ಯ ಚರಿತ್ರೆಯ ಬಗ್ಗೆ ಮಾಡಿದ ಭಾಷಣದ ಹಸ್ತಪ್ರತಿಯೊಂದನ್ನು ಕಳುಹಿಸಿಕೊಟ್ಟರು. ಅದು ನನಗೆ ಬಂಡಾಯ ಮತ್ತು ದಲಿತ ಸಾಹಿತ್ಯದ ಬಗ್ಗೆ ಬರೆಯಲು ತುಂಬ

ಸಹಾಯವಾಯಿತು. ಅವರ ಮಾತಿನಂತೆ ಮೂವತ್ತು ದಿವಸಗಳಲ್ಲಿಯೇ ಪುಸ್ತಕವನ್ನು ಬರೆದುಕೊಟ್ಟ. ಅವರಿಂದ ಇದೊಂದು ಪುಸ್ತಕ ಹೊರಬಂತು.

ಕಡೇ ಮಾತು. ಮರುಳಯ್ಯ ಅಂದರೆ 'ಹುಚ್ಚ' ಎಂಬ ಅರ್ಥವೂ ಇದೆ. ಈ ದೃಷ್ಟಿಯಿಂದ ಅವರನ್ನು ನಾನು 'ಹುಚ್ಚ' ಎಂದೇ ಕರೆಯುತ್ತೇನೆ — ಈ ಮನುಷ್ಯನಲ್ಲಿ ವಿದ್ವತ್ತು ಇದೆ. ದಕ್ಷತೆ ಇದೆ. ಅಲಂಕರಿಸಿದ ಪದವಿಗೆ ಗೌರವ ತರುವ ಸಾಮರ್ಥ್ಯವೂ ಇದೆ. ಪ್ರಾಮಾಣಿಕತೆಯೂ ಇದೆ. ಇಷ್ಟೆಲ್ಲ ಅರ್ಹತೆಗಳಿದ್ದೂ ನಮ್ಮ ಸರ್ಕಾರದಲ್ಲಿ ಒಂದು ಸ್ಥಾನವನ್ನು ಅಲಂಕರಿಸಲಿಲ್ಲವೇಕೆ ಎಂದರೆ ಇವರ ಹುಚ್ಚುತನ. ಕರ್ನಾಟಕ ಸರ್ಕಾರದಲ್ಲಿರುವಷ್ಟು ಪ್ರಾಧಿಕಾರಗಳು ಭಾರತದ ಯಾವ ರಾಜ್ಯದಲ್ಲಿಯೂ ಇದ್ದಂತೆ ಕಾಣುವುದಿಲ್ಲ. ಕುರಿ, ಕೋಳಿ, ಮಾಂಸ, ಕೊಳಚೆ, ಒಳಚರಂಡಿ, ಹೊರಚರಂಡಿ ಒಂದೇ ಎರಡೇ ನೂರಾರು ಪ್ರಾಧಿಕಾರಗಳು. ಪರಾಕು ಹೇಳಿದವರಿಗೊಂದು ಪ್ರಾಧಿಕಾರದ ಅಧ್ಯಕ್ಷಗಿರಿ. ಗೂಟದೊಂದು ಕಾರು. ಸರ್ಕಾರದೊಂದು ಬಂಗಲೆ. ತನ್ನ ಹೆಸರು ಸರಿಯಾಗಿ ಬರೆಯೋದಕ್ಕೆ ಬಾರದವರು ಅಧ್ಯಕ್ಷರಾಗಿದ್ದವರಿಗೇನೂ ಬರವಿರಲಿಲ್ಲ. ಕನ್ನಡದ ಉದ್ಧಾರಕ್ಕೆ 'ಕನ್ನಡ ಅಭಿವೃದ್ಧಿ ಪ್ರಾಧಿಕಾರ, ನಾಟಕ ಅಕಾಡೆಮಿ, ಜಾನಪದ ಅಕಾಡೆಮಿ, ಕನ್ನಡ ಅಕಾಡೆಮಿ, ಪುಸ್ತಕ ಪ್ರಾಧಿಕಾರ, ಸಂಗೀತನೃತ್ಯ ಅಕಾಡೆಮಿ' ಈ ಆರು ಅಕಾಡೆಮಿಗಳಲ್ಲಿ ಒಂದಕ್ಕಾದರೂ ಇವರು ಅರ್ಹರಾಗಲಿಲ್ಲ. ಏಕೆ? ಕೈಹೊಸೆಯುವ, ತಲೆಕೆರೆಯುವ, ದೇಶಾವರಿ ನಗುವಿನ ಭಟ್ಟಂಗಿತನ, ಹೋದೆಡೆಗೆಲ್ಲ ಹೋಗಿ ಹೊಗಳುವ ಕಲೆಗಳಲ್ಲಿ ಒಂದನ್ನು ಬೆಳೆಸಿಕೊಳ್ಳಲಿಲ್ಲ ಈತ. ಇವರಲ್ಲಿ ಎಷ್ಟು ವಿದ್ವತ್ತಿದ್ದರೇನು, ಈಗ್ಗೆ ಬೇಕಾದ್ದು ತಳುಕಿನ ಕಲೆ. ಇದು ಹುಚ್ಚರ ದರ್ಬಾರು. ಇದರಲ್ಲಿ ಮುನ್ನುಗ್ಗಿ ಉಂಡವರು ಜಾಣರು. ಉಳಿದವರೆಲ್ಲ ಹುಚ್ಚರು. ಮರುಳಯ್ಯನವರು ಈ ಕಲೆಯನ್ನು ಕಲಿಯಲೇ ಇಲ್ಲವಲ್ಲ ಅಂತ ನಾನು ಅವರನ್ನು 'ಮರುಳ' ಅಂತ ಕರೆದದ್ದು. 'ನಿನಗಿದೆಯೋ' ಅಂತ ಕೇಳಬೇಡಿ. ನಾನೂ ಅವರ ಜಾತಿಯವನೇ. ಅಂದರೆ ಅವರ ಸಾಲಿಗೇ ಸೇರಿದವನು. 'ಕಾಲಾಯ ತಸ್ಮೈನಮಃ' ಅಂತಾರೆ. ಆದರೆ ಯಾಕೋ ನಮಗೆ ಅದನ್ನು ಒಪ್ಪಿಕೊಳ್ಳೋಕೆ ಆಗೋದೇ ಇಲ್ಲ. ಇರಲಿ ಬಿಡಿ, ಹುಚ್ಚರ ಕೂಟ ಇನ್ನೇಗೆ ಇದ್ದೀತು. ಅದು ಅವರಿಗೆ ಇರಲಿ, ನಮ್ಮಂತಹವರು ಮತ್ತು ಮರುಳಯ್ಯನಂತಹವರು ಇದರಲ್ಲೇ ಸುಖಕಾಣ್ತಾ ಇರೋವಾಗ ಆ ಹುಚ್ಚರ ಸಹವಾಸ ನಮಗೇಕೆ? ಹುಚ್ಚರ ಸಹವಾಸಕ್ಕೆ ಇಷ್ಟೆಲ್ಲಾ ಕಲೆ ಕಲಿತು ಕಸರತ್ತು ಮಾಡಬೇಕೆ?

ಇನ್ನು ಅವರು ಮಾಡಿರುವ ಸಾಹಿತ್ಯ ಕೃಷಿಯ ವಿಚಾರ. ಇದು ನನ್ನ ಕೆಲಸವಲ್ಲ. ಅದನ್ನು ನನ್ನ ಮಿತ್ರರು ಮಾಡಿದ್ದಾರೆ. ಇಲ್ಲಿ ಅಂದು ಅಪ್ರಸ್ತುತ. ಬಲ್ಲವರಿದ್ದಾರೆ ಬರೀತಾರೆ. ಅವರ ಸಾಹಿತ್ಯಕೃಷಿಯ ಬಗ್ಗೆ ಒಂದೇ ಮಾತು. ಅವರು ಬರೆದುದ್ದೆಲ್ಲ ಬಂಗಾರ.

ಅನಿಮಿತ್ತ ಬಂಧು

ಪ್ರೊ॥ ವಸಂತ ಕುಷ್ಟಗಿ

ಸಕಾರಣ ಬಂಧುಗಳು ರಕ್ತಸಂಬಂಧಿಗಳು ಈ ಪ್ರಪಂಚದಲ್ಲಿ ಅನೇಕರಿರುತ್ತಾರೆ. ರಕ್ತಬಂಧುವಿಲ್ಲದ ಅನಿಮಿತ್ತ ಬಂಧುಗಳು ದೊರೆಯುವುದು ಅಪರೂಪ. ಆ ಅಪರೂಪದಲ್ಲಿಯೇ ಅನಿಮಿತ್ತ ಬಂಧುವಾದ ಪರಮಾತ್ಮನ ಅಂಶವು ತುಂಬಿ ತುಳುಕುತ್ತಿರುತ್ತದೆ. ಅಲ್ಲಿ ಹೇತುವೇ ಇಲ್ಲದ, ಕೇವಲ ಲೇಸಿನ ಬುಗ್ಗಿಯೂ ಚಿಲ್ಲುವರಿಯುತ್ತಿರುತ್ತದೆ. ಅಲ್ಲಿ ಸ್ವಾರ್ಥದ ಕಾಡಿಗೆಯ ಕಣವೂ ಇಲ್ಲದ ಚೆಲುವಯ್ಯ ಚೆಲುವೂ. ಚೆಲುವೆ ಚೆಲುವು.

ಇಂತಹ ಒಬ್ಬ ಚೆಲುವನ ಸಂಬಂಧ ನನಗೆ ೧೯೭೧ರಿಂದ ಸಾಧ್ಯವಾಗತೊಡಗಿತು. ಅದೇ ಆಗ ವಿಶಾಲ ಮೈಸೂರಿನಲ್ಲಿ ಪದವೀಪೂರ್ವ ಶಿಕ್ಷಣದ ಪಿ.ಯು.ಸಿ. ಕೋರ್ಸು ಎರಡು ವರ್ಷಗಳ ಅವಧಿಯನ್ನು ಹೊಂದಿದ ಕಾಲ. ಆ ಎರಡೂ ವರ್ಷಗಳಿಗೂ ಸರಕಾರದ ಮಂಡಳಿಯ ಪರೀಕ್ಷೆಗಳು ನಡೆಯುತ್ತಿದ್ದು ಮೌಲ್ಯಮಾಪನ ಪದ್ಧತಿಯೂ ರೂಡಿಗೆ ಬಂದಿತ್ತು. ಈ ಕಾರ್ಯವು ಬೆಂಗಳೂರಿನಲ್ಲಿ ಈ ಪರ್ವಕಾಲದಲ್ಲಿ ಡೆಪ್ಯುಟಿ ಚೀಫ್‌ರಾಗಿ, ಚೀಫ್‌ರಾದವರ ಸಹಾಯಾರ್ಥ ಕೆಲಸ ಮಾಡುತ್ತಿದ್ದ ಒಬ್ಬ ಮಹಾಶಯನನ್ನು ಕಂಡೆ.

ಆತನ ಕಾರ್ಯವೈಖರಿ ಸುಂದರವಾದದ್ದು. ಮಿದುವಾದದ್ದು. ಪುಣ್ಯಕೋಟಿ ಗೋವಿನಂತಹದ್ದು. ಯಾವುದಕ್ಕೂ ಬೇಸರಿಸದೆ ಸ್ನೇಹ ಸೌಹಾರ್ದಗಳಿಂದ ಪರೀಕ್ಷೆಯ ಬಹುಮುಖ್ಯವಾದ ಮೌಲ್ಯಮಾಪನ ಕೆಲಸವನ್ನು ನಿರಾಯಾಸವಾಗಿ ಮಾಡಿಮುಗಿಸುತ್ತಿದ್ದ ಕಲೆ ಆತನಿಗೆ ಸಾಧಿತವಾಗಿತ್ತು. ಆದರೆ ಸಿಗರೇಟು ಹೊತ್ತಿಸಿ ಕೆಲಸ ಮಾಡುವುದರಲ್ಲಿಯೂ ಸೌಜನ್ಯವು ನನಗೆ ಕಂಡು ಬಂದದ್ದು ಆಶ್ಚರ್ಯ. ಅಥವಾ ಆ ವ್ಯಕ್ತಿಯಲ್ಲಿಯ ಸಜ್ಜನಿಕೆಯು, ಸಿಗರೇಟು ಸುಡಿಸಿ ಆರೋಗ್ಯವನ್ನು ಸುಡಿಸಿಕೊಳ್ಳುವುದನ್ನೂ, ನಿರ್ಹೇತುಕ ಸಲಿಗೆಯು ಮಾಫು ಮಾಡಿತ್ತೋ ಗೊತ್ತಾಗುವುದಿಲ್ಲ.

ಅಂದು ಇದ್ದ 'ಚೀಫ್'ನ ಕಣ್ಣು ತಪ್ಪಿನಿಂದಾಗಿ ಒಂದಿನಿತು ನನಗೆ ಅನ್ಯಾಯವಾಗಿತ್ತು. ನನಗಿಂತಾ ಸೇವಾ ಜೆಷ್ಠತೆ ಕಮ್ಮಿ ಇದ್ದವರನ್ನು ಡೆಪ್ಯುಟ ಚೀಫ್ ಆಗಿ ಬಡ್ತಿ ನೀಡಿದ ಘಟನೆಯೇ ಅದಾಗಿತ್ತು. ಈ ಅಚಾತುರ್ಯವನ್ನು ಚೀಫ್ ಅವರಿಗೆ ಸಹಾಯಾರ್ಥವಿದ್ದ ಡೆಪ್ಯುಟಿ ಚೀಫ್‌ರ ಗಮನಕ್ಕೆ ತಂದೆ. ಆತ ಅದನ್ನು ಸರಿಪಡಿಸಿ ನ್ಯಾಯ ತೋರಿದ. ನನ್ನ ಕಣ್ಣಲ್ಲಿ ಆ ಡೆಪ್ಯುಟಿ ಚೀಫ್‌ರ ದೇವದೂತನಾಗಿ ತುಂಬಿಕೊಂಡಿದ್ದ. ಇದೆಲ್ಲ ನಡೆದದ್ದು ಅನಿಮಿತ್ತವಾಗಿ. ಆದ್ದರಿಂದ ಆತನನ್ನು ಅನಿಮಿತ್ತ ಬಂಧು ಎಂದು ಕರೆಯುವುದು.

ಈ ಅನಿಮಿತ್ತ ಬಂಧು ಮತ್ತೆ ಬೇರೆಯಾರೂ ಅಲ್ಲ. ದೊಡ್ಡ ಹೃದಯದ, ತುಂಬು ನಗೆಯ, ತೋರ ಹಣೆಯ, ಮಾನವತೆಯ ಮಂದಾರವಾದ ಕಣ್ಣುಗಳ ಹೊಗರಿನ ಸರಳ ಸಾದಾ ಪ್ಯಾಂಟು ಬುಷ್‌ಶರ್ಟಿನ, ಸಕಲರಿಗೂ ಲೇಸನ್ನೇ ಬಯಸುವ ಶರಣ ಕೇದಾರನ

ಒಳ ಅರಿವಿನ, ಸಾಸಿವೆಯಷ್ಟು ಕೊಟ್ಟರೆ ಸಾಗರವನ್ನೇ ಹರಿಸುವ ಅಧ್ಯಾತ್ಮದ ಮರುಳರ ಮರುಳ ಸದಾಶಿವನೋಪಾದಿ ಒಳ-ಹೊರಗು ಒಂದಾಗಿರುವ ಸಾ.ಶಿ. ಮರುಳಯ್ಯ ಎಂಬವರು. 'ಸಾಶಿಮ' ಎಂದೇ ಪ್ರಖ್ಯಾತಿಯಾಗಿರುವ ನಡೆನುಡಿ ತೀರ್ಥವಾದ ಸಾಶಿ ಮರುಳಯ್ಯನೇ ಅವರು. ಕನ್ನಡ ಸಾಹಿತ್ಯದ ೨೦ನೆಯ ಶತಮಾನದ ಹಿರಿಯ ತಲೆಗಳಲ್ಲಿ ಒಂದು. ಕಿರಿಕಿರಿ ಮಾಡದ ತಲೆಗಳಲ್ಲಿ ಅಪರೂಪವಾದ ತಲೆ. ನನ್ನನ್ನು ಮರುಳು ಮಾಡಿದ್ದು ಪಿಯುಸಿ ಪರೀಕ್ಷೆಯ ಮೌಲ್ಯ ಮಾಪನಕಾರ್ಯದಲ್ಲಿ. ಅನಂತರ ಆತನನ್ನು ನೆನೆದಾಗ ಕಂಡಾಗ, ಆತನ ಪುಸ್ತಕಗಳನ್ನು ಓದಿದಾಗ, ಮನನಮಾಡುವಾಗ ಮರುಳಾಗುವುದು ನಡೆದೇ ಇದೆ. ಇದು ಅನಂತಕಾಲ ನಡೆಯಲಿ.

ಈತನ ಅಂತಃಕರುಣೆಗೆ ಅನಿಮಿತ್ತವಾಗಿ, ಹುಚ್ಚು ಅರಳಿ ಅರಳು ಮರುಳಾದದ್ದು 'ಹೂವ ತಂದವರು' ಎಂಬ ಉಪಪಠ್ಯವನ್ನು 9ನೆಯ ತರಗತಿಗೆ ರಚನೆ ಮಾಡುವಾಗ, ಅವರು ಆಗ ಪ್ರಧಾನ ಸಂಪಾದಕರು. ಆ ಸಮಿತಿಯಲ್ಲಿ ನಾನೊಬ್ಬ ಸಂಪಾದಕ. ಅವ್ವಾ! ಎಷ್ಟು ಧೈರ್ಯ ತುಂಬಿದ ಸಜ್ಜನಿಕೆ ಅವರದೆಂಬುದನ್ನು ನಾನಾಗ ಕಂಡೆ.

ಅಂದಿನ ಪಠ್ಯಪುಸ್ತಕ ನಿರ್ದೇಶಕರು ಉಪಪಠ್ಯಕ್ಕೆ ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಲು ಹೇಳಿದರು. ನಾನು ಸನ್ನತಿಯ ಚಂದ್ರಲಾಪರಮೇಶ್ವರಿಯ ಚರಿತ್ರೆಯನ್ನು ಆಯ್ದುಕೊಂಡೆ. ಪುಣ್ಯಾತ್ಮ ಆ ನಿರ್ದೇಶಕರು ಕಲಬುರಗಿ ಭಾಗದಲ್ಲಿ ಉಪನಿರ್ದೇಶಕರಾಗಿ ಕಾರ್ಯಗೈದು ಹೋಗಿದ್ದರೂ, ಹಿಂದುಳಿದ ಭಾಗವೆಂದು ಹಣೆಪಟ್ಟಿ ಬಡೆದುಕೊಂಡ ಕಲಬುರಗಿ ಭಾಗದ ಇತಿಹಾಸ ಚರಿತ್ರೆಗೂ ಅದೇ ಪಟ್ಟಿಬಡಿದು ಪೆಟ್ಟು ಹಾಕಿದ. ಆಗ 'ಸಾಶಿಮ' ಸುಮ್ಮನಿರದೆ ಸಿಡಿದೆದ್ದು, 'ಸುಮ್ಮನಿರಿ ಸಾರ್ ನೋಡಿ 'ಚಂದ್ರಲಾ' ಅದ್ಭುತ ಪಠ್ಯವಾಗುತ್ತದೆ' ಎಂದು ನನ್ನನ್ನು ಬೆಂಬಲಿಸಿದ. ನೋಡಿ ಆ ಅನಿಮಿತ್ತವಾದ ವರದ ಹಸ್ತದಿಂದ 'ಚಂದ್ರಲಾ' ಉಪಪಠ್ಯವು ಕರ್ನಾಟಕದ ಮಕ್ಕಳಿಗೆಲ್ಲ ರೋಮಾಂಚನ ನೀಡಿದ ಚರಿತ್ರೆಯಾಯಿತು. ಆ ದೇವಿಯ ಚರಿತ್ರೆಯ ಮಹಿಮೆಯಿಂದ ನನಗೂ ಅಷ್ಟಿಷ್ಟು ಗೌರವ ನಾಡಿನ ಎಳೆಯರ ಎದೆಯಲ್ಲಿ ತುಂಬಿ ತುಳುಕಿತು.

ಈ ನಿಮಿತ್ತವಾಗಿ ಒಂದು ದಿನ ಗೌರವ ಆದರಗಳನ್ನು ತುಂಬಿಕೊಂಡು ಮರುಳಯ್ಯನ ಮನೆಗೆ ನಾ ಹೋದೆ. ಆತನ ತುಂಬು ಸಂಸಾರವನ್ನು ನೋಡಿ ಮೆಚ್ಚಿ ಹರಸಿದೆ. ಈ ಮರುಳ, ವೀಣಾಗೆ ಮರುಳನೋ, ವೀಣಾ ಮರುಳನ ಮರಳೆಯೋ — ಈ ಸಂಸಾರವು ಪಾರ್ವತೀ ಪರಮೇಶ್ವರರಿಗೂ ಸಾಮರಸ್ಯದ ಪಾಠ ಕಲಿಸುವ ಥರ, ಅವರ ಅನ್ಯೋನ್ಯ ಸಂಸಾರದ ತಿರುಳೇನು ಎಂದು ಮೂಕ ವಿಸ್ಮಯನಾದೆ. ಆ 'ಎಮ್ಮ' ನನಗೆ ಯಾವ ಜನ್ಮದ ತಂಗಿಯೋ ಅತ್ತಿಗೆಯೋ ನಾನರಿಯೆ! ಪ್ರೀತಿಯ ಕ್ಷೀರಸಾಗರವನ್ನೇ ಹರಸಿದರು. ಅವರಿಬ್ಬರೂ ಪ್ರೀತಿಯ ಪರಮ ಸಾದೃಶ್ಯವಾದರು. ಮಾನವ ಪ್ರೀತಿಯೆಂದರೆ ಇದು ಎಂದು, ಅಂದು, ಆಕೆ ನೀಡಿದ ಚಿತ್ರಾನ್ನ ಕೋಡಬಳೆ ಕಾಫಿಗಳನ್ನು ನೆನೆಸಿಕೊಂಡು, ಅವರ ಅಪರೂಪ ಜೋಡಿಯ ವ್ಯಕ್ತಿತ್ವಗಳ ಮಹಿಮೆಯನ್ನು ಎಣಿಕೆ ಹಾಕುತ್ತಿರುತ್ತೇನೆ. ಇವರ ಕಾವ್ಯದಂತೆ ಇವರ ಬದುಕು. ಅಬ್ಬಾ ಇದು 'ಸರ್ವಜ್ಞನ' ರೀತಿ. ಕಪ್ಪೆ ಅರೆಭಟ್ಟನ ಶಾಸನದಲ್ಲಿಯ ಸ್ತುತಿಗೆ ಇಲ್ಲಿ ಸತ್ಯವಾದ ನೀತಿ. ಹೀಗೆ ಇವರು ಬಾಳುತ್ತಿರುವುದರಿಂದಲೇ ಇವರ ಶತ್ರುಗಳೂ ಕೂಡ ವಸಿಷ್ಠರಿಗೆ ವಿಶ್ವಾಮಿತ್ರ ಮೆಚ್ಚಿ ಹಾಡಿ

ನಮೋ ಎಂದು ಬಿಡುವುದನ್ನು ಹಾಸನದ ಸಾಹಿತ್ಯ ಸಮ್ಮೇಳನದಲ್ಲಿ ಕಣ್ಣಾರೆ ಕಂಡು ಮನಸಾರೆ ಮನಗಂಡಿದ್ದೇನೆ.

ಹೀಗೆ ಅನಿಮಿತ್ತತೆಯಲ್ಲಿ ಪ್ರೀತಿಯ ಎಳೆ ನೇಯತೊಡಗಿತ್ತು. ಆ ಪ್ರೀತಿಯು ಮನಸ್ಸಿನ ಮಾಟದಲ್ಲಿ ಒಯಸಿಸ್ಸಾಗಿಯಷ್ಟೇ ಉಳಿಯಲಿಲ್ಲ. ಅದು ಕಣ್ಣೊಳಗೂ ತೂರಿಬಂದು, ಕೃಷ್ಣೆ ತುಂಗೆ ಕಾವೇರಿ ಗೋದಾವರಿಯಾಗಿ ಪುಣ್ಯಕೋಟಿ ಕನ್ನಡ ಗೋವಿನ ಹಾಲ್ಗಡಲ ಉಕ್ಕೇರಿ ಆಯಿತು. ನನಗರಿಯದಂತೆ ಹತ್ತನೆಯ ಕನ್ನಡ ಪಠ್ಯದಲ್ಲಿ 'ಹಾರಯಿಕೆ' ಪದ್ಯ ಸೇರಿತು. ಹೀಗೆ ''ಇದೋ ನಿನ್ನ ಪದ್ಯ'' ಎಂದು ಯಾರೋ ನನಗೆ ತೋರಿಸಿದಾಗ ಧ್ರುವನಿಗೆ ನಾರಾಯಣನ ದರ್ಶನವಾದಾಗಿನ ಮನೋಸ್ಥಿತಿ ನನ್ನದಾಗಿತ್ತು. ಇದು ಅನಿಮಿತ್ತ ಬಂಧುತ್ವ; ಗುಣ ಗ್ರಾಹಿತ್ತ್ವ ಎಂದು ನಾನೆಂದರೆ ಧಾಷ್ಟ್ಯವಾದೀತು! ಈ ಪದ್ಯದಿಂದಾಗಿ ಹತ್ತನೆಯ ತರಗತಿಯ ಮಕ್ಕಳ ಪ್ರಪಂಚಕ್ಕೆ, ಈಗ ಕೆಲವು ವರ್ಷಗಳಿಂದ ನಾನೊಬ್ಬ ಆ ಮಕ್ಕಳಿಗೆಲ್ಲ, ಪ್ರಿಯಕವಿಯಾಗಿದ್ದೇನೆ. ಪ್ರತಿವರ್ಷ ನಾಡಿನ ಮೂಲೆಮೂಲೆಗಳ ಮುಗ್ಧ ಮಕ್ಕಳಿಂದ ನೂರಾರು ಪತ್ರಗಳ ಸುರಿಮಳೆಯನ್ನು ಅನುಭವಿಸುತ್ತಿದ್ದೇನೆ. ಹರಪನಹಳ್ಳಿ ತಾಲ್ಲೂಕಿನ ತೆಲಿಗಿ ಗ್ರಾಮಕ್ಕೆ ಗ್ರಾಮವೇ, ಅಗ್ರಾಮದ ಮಕ್ಕಳೆಂದರೆ ಮಕ್ಕಳೆಲ್ಲರೂ ನನ್ನ ಹಾರಯಿಕೆಯ ತೆಕ್ಕೆಗೆ ಬಂದವರೇ ಹೌದು. ಆ ಊರಿನವರು ನನ್ನನ್ನು ಕರೆದು ಗೌರವಿಸಿದ್ದು ಉಂಟು. ಆಗ ಅಲ್ಲೇ ನಾನು ಮುಕ್ತ ಮನಸ್ಸಿನಿಂದ ಆ ಗೌರವವನ್ನು ಈ ಅನಿಮಿತ್ತ ಬಂಧುವಿನ ವೀಣಾ ವಿಲಾಸವೆಂದು ಹೇಳಿದಾಗ, ಮರುಳಯ್ಯ ನನ್ನ ಹಿಂದೆ ನಿಂತು ನಸುನಕ್ಕಂತೆ ಆಯಿತು. ಆತ ಹಾರಯಿಕೆಯನ್ನು ಆಯ್ಕೆ ಮಾಡದಿದ್ದರೆ, ನಾನು ಹಾರಯಿಕೆಯ ಕವಿಯಾಗುತ್ತಿರಲಿಲ್ಲ. ಕೇವಲ ಹಾರಿಕೆಯಾಗಿ ಉಳಿಯುತ್ತಿದ್ದೆ.

ಈ ನಿಮಿತ್ತವೆಲ್ಲ ಬಹುಶಃ ಹನ್ನೆರಡನೆಯ ಶತಮಾನದ ಬೆಳಕಿನಲ್ಲೆ ಬಂದಿರಬೇಕು. ಅದು ಈಗ ಅನಿಮಿತ್ತವಾಗಿ ನಮ್ಮ ಕಸವನ್ನು ರಸಮಾಗಿಸುವ ಕಲಿಯತನವನ್ನು ತೊಳೆದು ಕಲೆಯಾಗಿಸುವ ಜ್ಯೋತಿಯ ಬೆಳಕಾಗಿ ಬಂದಿರುವದಂತೂ ಸತ್ಯ! ಅನಿಮಿತ್ತ ಬಂಧು ಇಂದಿನ ಕನ್ನಡ ಕುಟುಂಬಕ್ಕಂತೂ ಕಾರಣ್ಯದ ಬೆಳಕು, ಒಲವಿನ ಒರತೆ, ಸೋದರತೆಯ ಹೊಳೆ – ಈ ಇದೆಲ್ಲದರ ಈತ ಆನಂದ ವಸಂತವಾಗಿರಲಿ. ಈ ಹೊತ್ತಿಗೆ ನಾನಂತೂ ಅರ್ಥವಿಲ್ಲದ ಸ್ವಾರ್ಥವಿಲ್ಲದ ವಸಂತದ ಭಾವಗೀತ. ಆತನಾದರೋ ಸದಾ ಕಾಲ ಸಾಹಿತ್ಯ ಸಿಂಧುವೂ ಹೌದು; ವೀಣಾ ಮರುಳನಂತೂ ಸರಿಯೇ ಸರಿ; ಅನಿಮಿತ್ತ ಬಂಧುವಂತೂ ಹೌದೇ ಹೌದು.

ಆದರೆ ಈ ಅನಿಮಿತ್ತ ಬಂಧು, ನನ್ನನ್ನೂ ಅನಿಮಿತ್ತ ಬಂಧು ಎಂದೇ ಕರೆಯುತ್ತಾನಲ್ಲ ಇದು ವಿಚಿತ್ರ. ಬಹುಶಃ ಇದು ಆತನ ಸ್ವಾನಂದಿಯ ಸ್ವರೂಪವೇ ಹೌದು.

ಕೆಲವು ನೆನಪುಗಳು

ಪ್ರೊ. ಜಿ.ಎಸ್. ಸಿದ್ಧಲಿಂಗಯ್ಯ

ಆಕಸ್ಮಿಕಗಳು ಕೆಲವೊಮ್ಮೆ ಹಿಗ್ಗಿಗೆ ಕಾರಣವಾಗಬಹುದು ಮತ್ತೆ ಹಲವೊಮ್ಮೆ ಅಪಘಾತಗಳಿಗೂ ಕಾರಣವಾಗಬಹುದು. ನಾವು ಕಾರಣರಲ್ಲವಾದರೂ ಪರಿಣಾಮ ಮಾತ್ರ ಅನಿವಾರ್ಯವಾಗಿ ಅನುಭವಿಸಬೇಕಾದ್ದು.

ಮರುಳಯ್ಯ ಮತ್ತೆ ನಾನು ಮೈಸೂರು ಮಹಾರಾಜ ಕಾಲೇಜಿನಲ್ಲಿ ಸಹಪಾಠಿಗಳಾದದ್ದು ಮತ್ತು ಸುತ್ತೂರು ಉಚಿತ ವಿದ್ಯಾರ್ಥಿನಿಲಯ ಬನ್ನಿಮಂಟಪದಲ್ಲಿ ಸಹವಿದ್ಯಾರ್ಥಿಗಳಾಗಿದ್ದುದು ಎಲ್ಲಾ ಒಂದು ಆಕಸ್ಮಿಕ; ಒಂದು ಸಂತೋಷದ ಆಕಸ್ಮಿಕ ಎಂದೇ ಹೇಳಬೇಕು.

ಈ ಆಕಸ್ಮಿಕದ ಜೊತೆಗೆ ನಮ್ಮನ್ನು ಬಂಧಿಸಿದ್ದದ್ದು ಕನ್ನಡ ಸಾಹಿತ್ಯದ ಅಧ್ಯಯನ. ತಮಿಳನ್ನು ನಾನು ಉಪಭಾಷೆಯಾಗಿ ತೆಗೆದುಕೊಂಡಿದ್ದೆ - ಆತನೂ ಅಷ್ಟೇ.

ನಾವು ಮಹಾರಾಜ ಕಾಲೇಜಿನಲ್ಲಿ ಕನ್ನಡ ಬಿ.ಎ. ಆನರ್ಸ್ ತರಗತಿಗೆ ಪ್ರವೇಶಿಸಿದಾಗ ಇದ್ದವರು ನಾವು ಒಂಬತ್ತು ಜನ ಎಂದು ನನ್ನ ನೆನಪು. ನವಮಣಿಗಳು ಎನ್ನಬೇಕು. ಮೂರು ವರ್ಷ ಕುಂಟಿಕೊಂಡು ಬಂದ ಈ ನವಮಣಿಗಳಲ್ಲಿ ನಾಲ್ಕು ಮಣಿ ಕಿತ್ತು ಹೋದವು. ಕೊನೆಯ ವರ್ಷ ಪರೀಕ್ಷೆಗೆ ಕುಳಿತಾಗ ನಾವು ಕೇವಲ ಐವರಾಗಿದ್ದೆವು. ಹಾ. ಮಾನಪ್ಪ ನಾಯಕ, ಕೆ.ಎಂ. ಸೀತಾರಾಮಯ್ಯ, ಕೆ. ನಾಗೇಂದ್ರಪ್ಪ, ಎಸ್.ಎಸ್. ಮರುಳಯ್ಯ ಮತ್ತು ನಾನೇ ಆ ಐವರು. ಈ ನೆನಪಿನೊಂದಿಗೆ ನಮ್ಮ ಹಿಗ್ಗನ್ನು ಹೆಚ್ಚಿಸುವ ನೆನಪು ನಮ್ಮ ಗುರುವರ್ಗದ್ದು.

ಮಲೆನಾಡಿನ ಮಹಾಭಾರತ ಬರೆದ ಮಹಾಕವಿ ಕುವೆಂಪು, ಚಲಿಸುವ ವಿಶ್ವಕೋಶವೆನಿಸಿದ್ದ ದೊಡ್ಡ ಬೆಲೆಯ ನರಸಿಂಹಾಚಾರ್, ಶ್ವೇತವಸನಧಾರಿಯಾದ ಸುಬ್ಬರಾಯಾಚಾರ್, ಅಸಮಾನ ವಾಗ್ಮಿಯಾಗಿದ್ದ ಪ್ರೊ. ಪುರುಷೊತ್ತಮ್, ಅನಂತರಂಗಾಚಾರ್, ಸಿ.ಡಿ. ಗೋವಿಂದರಾವ್, ಎಸ್.ವಿ. ರಂಗಣ್ಣ ಇವು ಆ ಕೆಲವು ವ್ಯಕ್ತಿಗಳ ಹೆಸರುಗಳು. ಇವುಗಳ ಜೊತೆಗೆ ಸಂಸ್ಕೃತ ಪಾಠ ಮಾಡದೇ ಇದ್ದ ಗುರುಗಳೊಬ್ಬರಿದ್ದರು. ಅವರ ಜೊತೆಗೇ 'ಒಡುಂಬುಕು ನಲ್ಲ ಇಲ್ಲೆ' ಎಂದು ನೆಪ ಹೇಳಿ ಹೆಬ್ಬಾರ್ ಕ್ಯಾಂಟೀನಿನಲ್ಲಿ ಕುಳಿತು ದೋಸೆ ತಿನ್ನುತ್ತಿದ್ದ ತಮಿಳು ಮೇಷ್ಟ್ರು - ಈ ಪಟ್ಟಿ ಹೀಗೆ ಮುಂದುವರಿಯುತ್ತದೆ.

ಆ ಕಾಲದ ಮಹಾರಾಜ ಕಾಲೇಜು ಅಂದರೆ ಕನಸುಗಳನ್ನು ತೂರುವ ವಿದ್ಯಾಪೀಠ. ಯಾರು ಯಾರಿಗೆ ಎಷ್ಟೆಷ್ಟು ಲಭ್ಯವೋ ಅವುಗಳಷ್ಟನ್ನು ವಿದ್ಯಾರ್ಥಿಗಳು ತುಂಬಿಕೊಂಡರು. ಆದರೆ ಪಕ್ಕದಲ್ಲೇ ಹೆಲ್ತ್ ಕ್ಯಾಂಟೀನ್. ಅದರ ಮಾಲೀಕ ಗುಡಾಣ ಹೊಟ್ಟೆಯ ಅಯ್ಯರ್. ಅದರ ಒಂದು ಬದಿಗೆ ಪುಸ್ತಕ ಭಂಡಾರ. ಅದರ ಪಕ್ಕದ ಮಹಡಿಯಲ್ಲಿ ವಾಚಾನಾಲಯ - ಅಗಸ್ತ್ಯನನ್ನೂ ದಣಿಸುವ ಕಲೆಗಳ ಕಡಲುಗಳು ಅಲ್ಲಿ.

ಮಹಾರಾಜ ಕಾಲೇಜಿನ ಹಿಂಭಾಗದ ಕಟ್ಟಡ ಒರಿಯಂಟಲ್ ರಿಸರ್ಚ್ ಇನ್‌ಸ್ಟಿಟ್ಯೂಟ್‌ನದು. ನಮಗೆ ಅಗತ್ಯವಾದ ಹಳಗನ್ನಡ ಪಠ್ಯಗಳನ್ನು ನಮಗೆ ಒದಗಿಸುತ್ತಿದ್ದವರು ಅದರ ನಿರ್ದೇಶಕರಾದ ವಿದ್ವಾಂಸ ಎಚ್. ದೇವೀರಪ್ಪನವರು.

ಮೂರು ವರ್ಷಗಳ ಆನರ್ಸ್ ಅವಧಿಯಲ್ಲಿ ಮೊದಲ ವರ್ಷ ನಮ್ಮ ವಾಸ್ತವ್ಯ - ಬನ್ನಿ ಮಂಟಪದಲ್ಲಿದ್ದ ಸುತ್ತೂರು ವಿದ್ಯಾರ್ಥಿನಿಲಯದಲ್ಲಿ. ಬೆಳಗಿನೂಟ ಮುಗಿಸಿ ಒಟ್ಟಿಗೆ ಕಾಲೇಜಿಗೆ ನಡೆದೇ ಹೋಗುತ್ತಿದ್ದ ದಿನಗಳು ಅವು ಎಂದು ನೆನಪು. ಆಗಿನ ನಮ್ಮ ಚರ್ಚೆಗಳೋ ವಿಶ್ವದ ಮಹಾಕವಿಗಳೆಲ್ಲ ನಮ್ಮ ಮನೆಯಂಗಳದವರೇ ಎಂಬ ಧೋರಣೆಯವು. ಕೇಶಿರಾಜರಂಥವರು ಲೆಕ್ಕಕ್ಕೇ ಇರಲಿಲ್ಲ ಅನ್ನಿ.

ನಾನು ಇಂಟರ್‌ಮೀಡಿಯಟ್ಟಿನಲ್ಲಿದ್ದಾಗಲೆ ಪ್ರಬುದ್ಧ ಕರ್ನಾಟಕ ನನ್ನ ಕವಿತೆಯೊಂದನ್ನು ಪ್ರಕಟಿಸಿತ್ತು. ಇತರ ಪತ್ರಿಕೆಗಳಲ್ಲೂ ನನ್ನ ಕವಿತೆ ಪ್ರಕಟವಾಗುತ್ತಿದ್ದು ನಾನಾಗಲೇ 'ಕವಿ'ಯಾಗಿಬಿಟ್ಟಿದ್ದೆ. ಆನರ್ಸ್ ಓದುತ್ತಿದ್ದಾಗಲೇ - ಬಹುಶಃ ಮೂರನೆ ವರ್ಷ ಇರಬೇಕು - ಮರುಳಯ್ಯ ಕವನ ಸಂಕಲನವೊಂದನ್ನು ಪ್ರಕಟಿಸಿದ.

ಆನರ್ಸ್ ಮುಗಿಯುತ್ತಿದ್ದಂತೆ ದಾವಣಗೆರೆಯ ಧ.ರಾ.ಮ. ಕಾಲೇಜಿಗೆ ನಾನು ಕನ್ನಡ ಅಧ್ಯಾಪಕನಾಗಿ ಹೋದೆ. ಬಹುಶಃ ಎರಡು ವರ್ಷ ಅಲ್ಲಿದ್ದೆ. ಅಲ್ಲಿಂದ ವರ್ಗವಾಗಿ ಬಂದು ತುಮಕೂರಿನಲ್ಲಿ ಅಧ್ಯಾಪಕನಾಗಿದ್ದ ಮರುಳಯ್ಯನಿಗೆ 'ಕೊಕ್' ಕೊಟ್ಟನೆಂದು ನೆನಪು, ಆತ ದಾವಣಗೆರೆ ಕಾಲೇಜಿಗೆ ನನ್ನ ಜಾಗಕ್ಕೆ ಹೋದ. ಅಲ್ಲಿಂದ ಆತ ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿಗೆ ವರ್ಗವಾದ.

ತುಮಕೂರಿನಿಂದ ವರ್ಗವಾಗಿ ನಾನು ಶಿವಮೊಗ್ಗೆಗೆ ಹೋದೆ. ಅಲ್ಲಿ ಐವರು ಆನರ್ಸ್ ಸಹಪಾಠಿಗಳಲ್ಲಿ ನಾಲ್ಕು ಜನ ಒಟ್ಟಾಗಿದ್ದು ಮತ್ತೊಂದು ಆಕಸ್ಮಿಕ. ನಾನು, ಕೆ.ಎಂ. ಸೀತಾರಾಮಯ್ಯ, ಕೆ. ನಾಗೇಂದ್ರಪ್ಪ ಮತ್ತು ಎಸ್.ಎಸ್. ಮರುಳಯ್ಯ ನಮ್ಮ ಜೊತೆಗೆ ಇನ್ನು ಹಲವರಿದ್ದರೆನ್ನಿ, ಕನ್ನಡ ವಿಭಾಗದಲ್ಲಿ.

೧೯೬೬ರಲ್ಲಿ ನಾನು ರೀಡರ್ ಆಗಿ ಆಯ್ಕೆಗೊಂಡು ಬೆಂಗಳೂರಿನ ಆರ್ಟ್ಸ್ ಮತ್ತು ಸೈನ್ಸ್ ಕಾಲೇಜಿಗೆ ಹೋದೆ. ಬಂದ ಮಾರನೆ ವರ್ಷವೂ, ಅನಂತರವೂ ಆನರ್ಸ್ ಕೋರ್ಸನ್ನು ಅಲ್ಲಿ ಆರಂಭಿಸಿದ ನೆನಪು. ಮರುಳಯ್ಯ ಅಲ್ಲಿಗೆ ವರ್ಗವಾಗಿ ಬಂದ.

ಸು. ೧೯೭೩ರಲ್ಲಿ ಮರುಳಯ್ಯನಿಗೆ ಮೊದಲು ವರ್ಗವಾಯಿತು. ಅದನ್ನು ತಪ್ಪಿಸಿಕೊಳ್ಳಲು ಆತ ಚನ್ನಪಟ್ಟಣದ ಖಾಸಗಿ ಕಾಲೇಜಿಗೆ ಪ್ರಾಚಾರ್ಯನಾಗಿ ನಿಯೋಜಿತನಾದ ನೆನಪು. ನನಗೂ ವರ್ಗವಾಗಿ ಚಿತ್ರದುರ್ಗದ ಕಲಾ ಕಾಲೇಜಿನ ಪ್ರಥಮ ಪ್ರಾಚಾರ್ಯನಾಗಿ ಹೋದೆ.

ಆ ಅವಧಿಯಲ್ಲಿ ಮರುಳಯ್ಯ ಅಲ್ಲಿನ ಖಾಸಗಿ ಕಾಲೇಜಿನ ಅತಿಥಿಯಾಗಿದ್ದು ಆ ಸಭೆಗೆ ನಾನು ಅಧ್ಯಕ್ಷತೆ ವಹಿಸಿದ್ದು ಅಲ್ಲಿನವರ ಹಿಗ್ಗನ್ನು ಹೆಚ್ಚಿಸಿತ್ತು. ಈ ಮಧ್ಯೆ ಮತ್ತೆ ನಾನು ಮರುಳಯ್ಯನ ಕಾಲೇಜಿಗೆ ಆಹ್ವಾನಿತನಾಗಿ ಹೋಗಿ ಬಂದ ನೆನಪು. ಹೀಗೆ ವಿದ್ಯಾರ್ಥಿ ದೆಸೆಯಲ್ಲಿ ಮೈಸೂರು ಮಹಾರಾಜ ಕಾಲೇಜಿನಲ್ಲಿ, ಮತ್ತೆ ಸುತ್ತೂರು ವಿದ್ಯಾರ್ಥಿ

ನಿಲಯದಲ್ಲಿ ಸಹಪಾಠಿಗಳಾಗಿದ್ದ ನಾವು ನಿವೃತ್ತರಾದಮೇಲೆ ಮತ್ತೆ ಕನ್ನಡ ಸಾಹಿತ್ಯ ಪರಿಷತ್‌ನಲ್ಲಿ ಒಟ್ಟಾಗಿ ಸೇರಿದ್ದು ಒಂದು ಯೋಗಾಯೋಗ.

೧೯೮೯ರಲ್ಲಿ ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗ ಮರುಳಯ್ಯ ಕೂಡ ಸ್ಪರ್ಧಿಸಿದ್ದ. ಅನಂತರ ಆತ ನನ್ನ ಪರವಾಗಿ ತನ್ನ ಉಮೇದುವಾರಿಕೆ ಹಿಂದಕ್ಕೆ ಪಡೆದ. ಮುಂದೆ ಎರಡು ವರ್ಷ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿ ಆಹ್ವಾನಿಸಿದಾಗ ಬಂದು ಕರ್ತವ್ಯ ನಿರ್ವಹಿಸಿದ. ಕನ್ನಡ ಭಾಷೆ-ಸಾಹಿತ್ಯ-ಮತ್ತದರ ಸೇವೆ ನಮ್ಮನ್ನು ಹೀಗೆ ಒಂದುಗೂಡಿಸಿದ ಸತ್ಯವಾಗಿದೆ.

ಶಿವಮೊಗ್ಗದಲ್ಲಿದ್ದಾಗ ಆತ ರಂಗ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದುದು, ಜನಪ್ರಿಯತೆ ಗಳಿಸಿದ್ದುದು, ನಮ್ಮ ವಿಭಾಗದ ಒಳ್ಳೆಯ ಅಧ್ಯಾಪಕರಲ್ಲೊಬ್ಬನೆಂದು ಹೆಸರು ಪಡೆದಿದ್ದದ್ದು ನನಗೆ ಹಿಗ್ಗನ್ನು ತಂದಿದೆ. ಒಳ್ಳೆಯ ಅಧ್ಯಾಪಕನಾದ ಮರುಳಯ್ಯ ಒಳ್ಳೆಯ ನಟ ಕೂಡ. ಹಲವು ನಾಟಕಗಳನ್ನು ಆತ ಬರೆಸಿ ಆಡಿಸಿದ್ದು ಉಂಟು. ಬಹುಶಃ ಆತನ ರಂಗಸಕ್ತಿಯೇ ಇತರ ಪ್ರತಿಭಾಕ್ರಿಯೆಗಳನ್ನು ದಾಟಿಬಿಡುತ್ತದೆಯೋ ಏನೋ!

ಗೆಳೆಯರಾದ ನಾವು ನೌಕರಿಯಲ್ಲಿ ಎಂದೂ ಗೆಳೆತನಕ್ಕೆ ಬಾಧೆಬರದಂತಿದ್ದೆವು. ಸಾಹಿತ್ಯ ಪರಿಷತ್ತಿನಲ್ಲಿಯೂ ನಮ್ಮ ಅಭಿಪ್ರಾಯಗಳು ಬೇರೆಯಾಗಬಹುದು; ಸ್ನೇಹಕ್ಕೆ ಮಾತ್ರ ಎಂದೂ ಭಂಗ ಬಂದಿಲ್ಲ. ಆಶ್ಚರ್ಯವೆಂದರೆ, ನಮ್ಮ ಸ್ನೇಹವನ್ನು ಮುರಿಯುವ ಹಲವು ಯತ್ನಗಳು - ನಡೆದರೂ ಅವು ಯಶಸ್ವಿಯಾಗದೆ ಹೋಗಿಬಿಟ್ಟಿವೆ.

ಈಗಲೂ ನಮ್ಮದು ಏಕವಚನದ ಮೈತ್ರಿಯೇ. ಈಗ ಆತನಿಗೆ ಸಂಭಾವನಾ ಗ್ರಂಥವೊಂದು ಅರ್ಪಿತವಾಗುತ್ತಿದೆ. ಸಂತೋಷದಿಂದ ನನ್ನ ಕೆಲನೆನಪುಗಳನ್ನು ಇಲ್ಲಿ ದಾಖಲಿಸುತ್ತೇನೆ.

ಒಂದು ಸಂಗತಿ, ಮರೆಯಲು ಸಾಧ್ಯವೇ ಇಲ್ಲದ್ದು, ಅದನ್ನು ಉಲ್ಲೇಖಿಸದೆ ಮುಗಿಸುವುದು ಹೇಗೆ? ನಾನು ವಿಧುರನಾಗಿದ್ದ ದಿನಗಳವು. ಮೂರ್ಖರ ದಿನ ಎಂದೇ ಖ್ಯಾತವಾಗಿದ್ದ ಏಪ್ರಿಲ್ ಒಂದರಂದು ಬೆಳಿಗ್ಗೆ ಮರುಳಯ್ಯ ತಿಂಡಿಗೆ ಆಹ್ವಾನಿಸಿದ. (ಎಷ್ಟೋ ದಿನ ಬೆಳಗಿನ ವಾಯುವಿಹಾರ ಮುಗಿಸಿಬರುವಾಗ ದಾರಿಯಲ್ಲಿದ್ದ ಆತನ ಮನೆಯಲ್ಲಿ ಕಾಫಿ ಕುಡಿದದ್ದಿದೆ) ನನಗೆ ಆಶ್ಚರ್ಯ ಹಾಗೂ ಕುತೂಹಲ ಎರಡೂ. ಅದು ಮೂರ್ಖರ ದಿನ ಅಲ್ಲವೇ? ಅಂದು (೧.೪.೧೯೮೮) ಹೋದೆ. ತಿಂಡಿ ಅವುಗಳೇ ಅಲ್ಲ - ಇನ್ನೂ ಒಂದು ಕೌತುಕ ಅಲ್ಲಿತ್ತು. ನನ್ನ ಬದುಕಿನ ದಿಕ್ಕನ್ನು ಮತ್ತೆ ಬದಲಿಸಿದ ಘಟನೆ ಅದು. ಮೂಲತಃ ನನ್ನ ಮತ್ತು ಮರುಳಯ್ಯನ ಹಳೆಯ ವಿದ್ಯಾರ್ಥಿನಿ ಈಗ - ಡಾ. ಸಿ.ಯು. ಉಮಾದೇವಿ ಎಂ.ಎ., ಪಿ.ಎಚ್.ಡಿ. - ಈಕೆಯ ಪ್ರೇರಣೆ ಅದಕ್ಕೆ. ಅಲ್ಲೇ ನಾನು ನನ್ನ 'ಪ್ರೇಮ'ಳನ್ನು ಕಂಡದ್ದು, ಕೊನೆಗೆ ಅದೇ ತಿಂಗಳು ೧೪ರಂದು ಮದುವೆಯಾದದು.

ಇಂಥ ನನಗೆ ಮತ್ತೆ ಮರುಳಯ್ಯನಿಗೆ ಸಂಬಂಧಿಸಿದ ಸಂಗತಿಗಳು ಇನ್ನೂ ಹಲವಾರಿವೆ.

ಸದ್ಯಕ್ಕೆ ಇಷ್ಟು ಸಾಕು.

ಆತ್ಮೀಯ ಗೆಳೆಯ ಡಾ॥ ಮರುಳಯ್ಯ

ಪ್ರೊ॥ ಡಿ.ಟಿ. ರಂಗಸ್ವಾಮಿ

ಡಾ॥ ಮರುಳಯ್ಯನವರ ಆತ್ಮೀಯತೆ, ಹಸನ್ಮುಖತೆ, ಸರಳತೆ ಮತ್ತು ಅನುಪಮ ಕವಿಹೃದಯದ ಬಗ್ಗೆ ನನಗಂತೂ ಅಪಾರ ಮೆಚ್ಚುಗೆಯಿದೆ. ಕಾಲೇಜಿನ ವ್ಯಾಸಂಗದ ದಿನಗಳಲ್ಲಿ ನಾವು ಆತ್ಮೀಯ ಗೆಳೆಯರು. ಇಂದಿಗೂ ಈ ಗೆಳೆತನ ಆತ್ಮೀಯತೆಯಿಂದ ಕೂಡಿದೆ. ಅಂದು ನಾವು ಸುತ್ತೂರು ಹಾಸ್ಟೆಲ್‌ನಲ್ಲಿ ಪ್ರಸಾದ ಪಡೆಯುತ್ತಿದ್ದೆವು. ಮಾನಸಗಂಗೋತ್ರಿ ಇನ್ನೂ ಉದಯವಾಗಿರಲಿಲ್ಲ. ಬಿ.ಎ. ಆನರ್ಸ್ ಮತ್ತು ಎಂ.ಎ. ವ್ಯಾಸಂಗ ಮಹಾರಾಜಾ ಕಾಲೇಜಿನಲ್ಲಿ ನಡೆಸಿದೆವು. ಡಾ॥ ಮರುಳಯ್ಯ ೧೯೫೬ರಲ್ಲಿ ಎಂ.ಎ. ಉತ್ತೀರ್ಣರಾದರು. ನಾನು ಒಂದು ವರ್ಷ ಸೀನಿಯರ್. ನಮಗೆ ಅಂದಿನ ದಿನಗಳು ನಿಜಕ್ಕೂ ಅತ್ಯಂತ ಚೇತೋಹಾರಿ. ವ್ಯಾಸಂಗವು ಒಂದು ತಪಸ್ಸೇ ಆಗಿದ್ದೀತು. ನಮಗೆ ದೊರೆತಿದ್ದ ಗುರುವರ್ಯರುಗಳು ಚಿರಸ್ಮರಣೀಯರು. ಪ್ರೊ॥ ಎಸ್.ವಿ. ಪರಮೇಶ್ವರ ಭಟ್ಟರ ಕವಿವಾಣಿ ಮತ್ತು ನಾಟಕೀಯತೆ, ಪ್ರೊ. ಡಿ.ಎಲ್. ನರಸಿಂಹಾಚಾರ್ಯರ ದೈತ್ಯ ಪಾಂಡಿತ್ಯ, ಪ್ರೊ॥ ಕುವೆಂಪುರವರ ಮಹಾಕವಿವಾಣಿಯ ಕಾವ್ಯ ಮೀಮಾಂಸೆ ಪಾಠ, ಪ್ರೊ॥ ತ.ಸು. ಶಾಮರಾವ್, ಪ್ರೊ॥ ಭರತರಾಜ್ ಸಿಂಗ್ ಮತ್ತು ಪ್ರೊ॥ ಡಿ. ಜವರೇಗೌಡರ ಹೃದಯಸ್ಪರ್ಶಿ ಪಾಠ - ಇವುಗಳನ್ನು ನಾವು ಮರೆಯುವಂತಿಲ್ಲ. ಈ ಅನುಭವ ಅನಿರ್ವಚನೀಯವಾಗಿದ್ದಿತು. ಈ ಹಿರಿಯ ಚೇತನಗಳು ನಮಗೆ ಅಂದು ದೊರೆತದ್ದು ನಮ್ಮ ಸೌಭಾಗ್ಯ. ನಾವು ಬಿ.ಎ. ಆನರ್ಸ್ ವ್ಯಾಸಂಗಮಾಡಿ ಅನಂತರ ಎಂ.ಎ. ವ್ಯಾಸಂಗಮಾಡಿ ಉತ್ತೀರ್ಣರಾದೆವು. ನಾವು ಮುಂದಿನ ನಮ್ಮ ಅಧ್ಯಾಪಕ ವೃತ್ತಿಜೀವನದಲ್ಲಿಯೂ ಉತ್ತೀರ್ಣರಾಗಿದ್ದೇವೆ.

ನಮ್ಮ ಡಾ॥ ಮರುಳಯ್ಯನವರು ಹೆಸರಿನಲ್ಲಿ ಮಾತ್ರ ಮರುಳಯ್ಯ. ಮರುಳನಲ್ಲದ ನಮ್ಮ ಮರುಳಯ್ಯನವರ ಅಸಾಧಾರಣ ವ್ಯಕ್ತಿತ್ವ ಇಡೀ ಕನ್ನಡ ನಾಡಿಗೇ ದೊರೆತಿದೆ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದಾರೆಂದ ಮೇಲೆ ಇದು ಪೂರ್ಣವಾಗಿದೆಯೆಂದು ಭಾವಿಸಬೇಕು. ಲೋಕದಲ್ಲಿ ಸಾಮಾನ್ಯವಾಗಿ ಎಲ್ಲವನ್ನೂ ತಿಳಿದವನು ಸಾಮಾನ್ಯರ ದೃಷ್ಟಿಯಲ್ಲಿ ಮರುಳರಂತೆ ಇರುತ್ತಾರೆ. ಲೋಕವೇ ಮರುಳರ (ಹುಚ್ಚರ) ಒಂದು ಸಂತೆ ಎಂದು ಸ್ವಾಮಿ ವಿವೇಕಾನಂದರೇ ಒಂದೆಡೆ ಹೇಳಿದ್ದಾರೆ. ಎಂದರೆ ಎಲ್ಲರೂ ಒಂದೇ ಬಗೆಯ ಮರುಳರಲ್ಲ; ಬಗೆಬಗೆಯ ಆಸೆ ಆಕಾಂಕ್ಷೆಗಳುಳ್ಳವರಾಗಿ ವರ್ತಿಸುತ್ತಾರೆಂದು ತಿಳಿಯೋಣ. ಕವಿಗಳಿಗೂ ಒಂದು ರೀತಿಯ ಮರುಳತನವಿರುತ್ತದೆ. ಏಕೆಂದರೆ ಅವರು ವಿಶ್ವದ ಅನಧಿಕೃತ ಶಾಸಕರು; ಲೋಕದ ವ್ಯಥೆಯನ್ನು ಕಥೆಯಾಗಿ ನಿರೂಪಿಸುವವರು; ಲೋಕವಸ್ತುವನ್ನು ಸಾಹಿತ್ಯದ ರಸವಸ್ತುವನ್ನಾಗಿ ಮಾಡಿ, ಲೋಕಕ್ಕೆ ತಮ್ಮ ಅನುಭವಾಮೃತವಾಗಿ ನೀಡುವವರು ಆಗಿರುತ್ತಾರೆ; ಇವರಿಗೆ ಜಾತಿ, ಮತ, ಭಾಷೆ, ದೇಶಗಳ ಎಲ್ಲೆ ಕಟ್ಟುಗಳಿರುವುದಿಲ್ಲ. ಇವರನ್ನು ತಮ್ಮ ಗುಂಪಿಗೆ ಸೇರಿಸಿಕೊಂಡರೆ ತಮಗೇ ಲಾಭವಿದೆಯೆಂದು ಇತರರು ಮರುಳುತನದಿಂದ ಇವರಿಗೆ

ಏನೇನೋ ಬಣ್ಣ ಬಳಿದು ಕುಣಿಯಲು ವೇದಿಕೆ ಸಿದ್ಧಗೊಳಿಸುತ್ತಾರೆ. ಆದರೆ ಕವಿಗೆ ಹೃದಯವೀಣೆ ಸದಾ ಮಿಡಿಯುತ್ತಲೇ ಇರುತ್ತದೆ. ಡಾ|| ಬೇಂದ್ರೆಯವರ ಒಂದು ಭಾವಗೀತದಲ್ಲಿ ''ಅರ್ಥವಿಲ್ಲ, ಸ್ವಾರ್ಥವಿಲ್ಲ, ಬರಿಯ ಭಾವಗೀತ....'' ಎಂಬ ಮಾತಿದೆ. ಎಂದರೆ ಕವಿಗಳು ತಮ್ಮ ಆಶೋತ್ತರಗಳಿಗೆ, ರಾಗಭಾವಗಳಿಗೆ ತಕ್ಕಂತೆ ರಸಾವೇಶಿಗಳಾಗುವುದಿಲ್ಲ. ಲೋಕವೇ ಇವರ ಹೃದಯವೀಣೆಯ ತಂತಿಗಳನ್ನು ಮಿಡಿಯುತ್ತಿರುತ್ತದೆ - ನಿಜವಾದ ಅರ್ಥ.

''ವೀರನಾರಾಯಣನೆ ಕವಿ, ಲಿಪಿಕಾರ ಕುಮಾರವ್ಯಾಸ'' - ನಾರಣಪ್ಪ

ಪಂಪಾಂಬಿಕೆ ಮದೀಯ ಮತಿಗೀಗೆ ಸುಪ್ರಸನ್ನತೆಯನು ಉತ್ಸವದೊಳು

- ರಾಘವಾಂಕ

Make me thy hyre - ಷೆಲ್ಲಿ

ಲೋಕವೀಣೆ, ನಾನೆ ತಂತಿ, ಅವನೇ ವೈಣಿಕ - ಕುವೆಂಪು

ಇದು ಸಹಜ ಕವಿಗಳ ಸಹಜ ರೀತಿ. ಲೋಕದ ಜನರಿಗೆ ಇದು ವಿಚಿತ್ರವಾಗಿಯೂ ಕಾಣಬಹುದು.

ಲೋಕದಲ್ಲಿ ಸಾಹಿತ್ಯಕ್ಕೆ ವಸ್ತುವಾಗದ ವಿಷಯವೇ ಇಲ್ಲ. ವಿಷಯ ಎಂದರೇನೇ ಹಲವಾರು ಅರ್ಥಗಳುಂಟು. ದೇಶ, ಇಂದ್ರಿಯ, ವಸ್ತು, ವಿಚಾರ- ಎಂಬ ಅರ್ಥಗಳುಂಟು. ''ವಿಷಯದ ಪಿತ್ತ ನೆತ್ತಿಗೇರೆ ಮತಿ ಭ್ರಷ್ಟವಾಗಿ.... '', ''ವಿಷಯವೆಂಬ ಹಸಿರನು ಪಸರಿಸಿದಿರಯ್ಯ ಎನ್ನ ಮುಂದೆ. ಹಸುವೇನ ಬಲ್ಲದು...'' ಎಂದು ಹೇಳುವ ದಾಸಿಮಯ್ಯ ಮತ್ತು ಬಸವಣ್ಣನವರ ವಚನಗಳಲ್ಲಿ ಈ ಇಂದ್ರಿಯಗಳ ಪರಿಣಾಮದ ರುದ್ರ ತಾಂಡವವಿದೆ. ರೂಪ, ರಸ, ಗಂಧಾದಿಗಳ ಸುಖವನ್ನು ಕೊಡುವ ಇಂದ್ರಿಯಗಳ ಕಾಮಕ್ರೋಧಾದಿಗಳು ಮಿತಿಯನ್ನು ಮೀರಿದಾಗ ದೈವದ ನೆನಹು ಕೆಟ್ಟುಹೋಗಿ, ಗುರುಹಿರಿಯರೆಂಬುದೂ, ಲಿಂಗ, ಜಂಗಮ, ಪಾದೋದಕ - ಎಂಬಿವೂ ಮಾನವೀಯತೆಯ ಲಕ್ಷ್ಮಣಗೆರೆ ದಾಟಿ ಗತಿಗೆಟ್ಟೂ ಹೋಗುವುದುಂಟು.

ಸಾಹಿತ್ಯವು ಈ ಗತಿಗೆಟ್ಟ ಬಗೆಯನ್ನು ಹಾಗೆಯೇ ಚಿತ್ರಿಸುವುದಿಲ್ಲ; ಸಾಹಿತ್ಯವು ಜೀವನದ ಪ್ರತಿಬಿಂಬವಲ್ಲ; ಜೀವನದ ಗತಿಬಿಂಬ; ಮತಿಬಿಂಬ; ರಸಬಿಂಬ. ಸಾಹಿತ್ಯವು ಜೀವನದ ವ್ಯಾಖ್ಯಾನ, ರಸವಿಮರ್ಶೆ, ಚಿತ್ರಣ ಮತ್ತು ಲೋಕದ ಮರುಳತನಕ್ಕೆ ತನ್ನ ಪ್ರತಿಭಾರತ್ನ ದರ್ಪಣ ಹಿಡಿದು ಲೋಕೋನ್ನತಗೊಳಿಸುವ ಸಾಧನವೂ ಆಗಿದೆ.

ಸರಳ ಜೀವನ, ಉದಾತ್ತ ಚಿಂತನೆಗೆ ಹೆಸರಾದವರು ನಮ್ಮ ಡಾ|| ಮರುಳಯ್ಯನವರು, ನಿಜ, ಸರಳ ಜೀವನ ಎಂದರೆ ಕೇವಲ ನಿರಾಡಂಬರ ಜೀವನವಲ್ಲ; ವಂಚನೆ, ಸುಳ್ಳು, ತಟವಟವಿಲ್ಲದ ಪ್ರಾಮಾಣಿಕ ಪರಿಶುದ್ಧ ಪ್ರಸಾದ-ಜೀವನವೇ ಸರಳ ಜೀವನ. ಅಂತೆಯೇ ಸಮರ್ಥ ಅಧ್ಯಾಪಕ, ಪ್ರಾಧ್ಯಾಪಕರಾಗಿ, ಗ್ರಂಥಕರ್ತರಾಗಿ, ಕವಿಯಾಗಿ, ನಾಟಕಕಾರರಾಗಿ ಸದಾ ಲೋಕಹಿತ ಚಿಂತನೆ ಮಾಡಿ ತಮ್ಮ ಅನುಭಾವದಿಂದ

ಲೋಕದ ಅನುಭವಕ್ಕೆ ಕೊಡುಗೆ ನೀಡುವವರು ಉದಾತ್ತ ಚಿಂತನಶೀಲರು ನಮ್ಮ ಡಾ॥ ಮರುಳಯ್ಯನವರು. ಇವರು ಮೃದುತನದ ಸಾತ್ವಿಕಗುಣದ ಉತ್ಸಾಹೀ ಮನೋಭಾವದ ಧೀಮಂತ ವ್ಯಕ್ತಿ; ಜನಪ್ರಿಯ ವ್ಯಕ್ತಿ; ಕನ್ನಡದ ರಸಗಂಗಾ ಶಕ್ತಿ.

ಸನ್ಮಿತ್ರ, ಡಾ॥ ಮರುಳಯ್ಯನವರು ನೂರಾರು ಕವಿತೆಗಳು, ನಾಟಕಗಳು, ಲೇಖನಗಳು, ಪ್ರಬಂಧಗಳು, ಮುನ್ನುಡಿಗಳು ಮುಂತಾದುವನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

ಡಾ॥ ಮರುಳಯ್ಯನವರು ಸಾಹಿತ್ಯರತ್ನರೂ ಹೌದು; ಕನ್ನಡ ಕುಲರತ್ನರೂ ಹೌದು.

ಆದರಣೀಯ ವ್ಯಕ್ತಿತ್ವ

ಎಸ್.ವಿ. ಶ್ರೀನಿವಾಸರಾವ್

ಡಾ॥ ಸಾಸಲು ಶಿವರುದ್ರಯ್ಯ ಮರುಳಯ್ಯ ಓರ್ವ ಪ್ರಸಿದ್ಧ ಕವಿ, ಹೆಸರಾಂತ ವಿಮರ್ಶಕ, ನಿಷ್ಣಾತ ಸಂಶೋಧಕ, ನುರಿತ ಗ್ರಂಥ ಸಂಪಾದಕ ಹಾಗೂ ಜನಪ್ರಿಯ ಕಾದಂಬರಿಕಾರ. ಇವರ 'ಕೆಂಗನಕಲ್ಲು' ಕವನ ಸಂಗ್ರಹ ರಾಜ್ಯ ಸಾಹಿತ್ಯ ಅಕಾಡೆಮಿಯ ಬಹುಮಾನ ಗಳಿಸಿದ್ದರೆ, 'ಭಾಸನ ಮಕ್ಕಳು' ವಿಮರ್ಶಾಕೃತಿ ದೇವರಾಜ ಬಹದ್ದೂರ್ ಬಹುಮಾನ ಗಳಿಸಿದೆ.

ಶ್ರೀ ಮರುಳಯ್ಯನವರ ಕವಿತೆಗಳಲ್ಲಿ ಸುಂದರ ಕಲ್ಪನೆಯ ಜೊತೆಗೆ ಒಳ್ಳೆಯ ಗೇಯತೆ ಇರುತ್ತದೆ. ಅದಕ್ಕೆ ಅವು ಆಕಾಶವಾಣಿ ಮತ್ತು ದೂರದರ್ಶನ ಮಾಧ್ಯಮಗಳಲ್ಲಿ ಅತ್ಯಂತ ಜನಪ್ರಿಯವಾಗಿರುವುದು. ಪ್ರಸಿದ್ಧ ಗಾಯಕಿ ಬಿ.ಕೆ. ಸುಮಿತ್ರ 'ಡಾ॥ ಸಾ.ಶಿ. ಮರುಳಯ್ಯನವರ ಕವಿತೆಗಳನ್ನು ಹಾಡಲು ನನಗೆ ತುಂಬಾ ಹರ್ಷವಾಗುತ್ತಿದೆ' ಎಂದರೆ ಶಿವಮೊಗ್ಗ ಸುಬ್ಬಣ್ಣ, 'ಕನ್ನಡ ಖ್ಯಾತ ಕವಿಗಳೂ, ವಿದ್ವಾಂಸರು, ಆದ ಡಾ॥ ಸಾ.ಶಿ.ಮ.ರವರ ''ಬೃಂದಾವನ ಲೀಲೆ'' ಕನ್ನಡ ಭಾವಗೀತೆ ಪ್ರಪಂಚಕ್ಕೆ ಒಂದು ಮೌಲಿಕ ಕೊಡುಗೆ' ಎಂದಿದ್ದಾರೆ. ಡಾ॥ ದೊರೆಸ್ವಾಮಿ ಅಯ್ಯಂಗಾರ್ 'ಡಾ॥ ಸಾ.ಶಿ.ಮ. ರವರ ಸುಲಭ ರಚನೆಯಲ್ಲೇ ಸಂಗೀತ ಬೆರೆತಿರುವುದನ್ನು ನಾನು ಗುರುತಿಸಿದ್ದೇನೆ. ಅವರ ಅನೇಕ ಕೃತಿಗಳನ್ನು ಸಂಗೀತಕ್ಕೆ ಯಶಸ್ವಿಯಾಗಿ ಅಳವಡಿಸಿದ್ದೇನೆ' ಎಂದು ಕೃತಿ ಮೌಲ್ಯವನ್ನು ಶ್ಲಾಘಿಸಿದ್ದಾರೆ.

ಪ್ರತಿಭೆ, ವಿದ್ವತ್ತಿನ ಜೊತೆಯಲ್ಲಿ ನಯ, ವಿನಯ, ಸೌಜನ್ಯತೆ ಹಾಸು ಹೊಕ್ಕಾಗಿರುವುದು ಇವರ ವ್ಯಕ್ತಿತ್ವದ ಒಂದು ವೈಶಿಷ್ಟ್ಯ, ಅನುಕರಣೀಯ ಆದರ್ಶ, ಆದರಣೀಯ ಗಾಂಭೀರ್ಯ ಎಲ್ಲರ ಮೆಚ್ಚುಗೆ ಗಳಿಸುತ್ತವೆ.

ನನ್ನ ಅವರ ಪರಿಚಯ ಸುಮಾರು ೧೫-೧೬ ವರ್ಷಗಳಷ್ಟು ಮಾತ್ರ ಹಿಂದಿನದು. ಆದರೆ ಅವರ ಸಾತ್ವಿಕ ಪ್ರವೃತ್ತಿ, ಪ್ರಗಾಢ ವಿದ್ವತ್ತು, ತೆರೆದ ಮನಸ್ಸು, ಸರಳತೆ ನನ್ನನ್ನು ತೀರಾ ಹತ್ತಿರ ಸೆಳೆದಿದೆ. ಆತ್ಮೀಯ ಸ್ನೇಹ ತೆಕ್ಕೆಯಲ್ಲಿ ಹಿಡಿದಿಟ್ಟುಕೊಂಡಿದೆ.

ನನ್ನನ್ನು ಅವರಿಗೆ ಪರಿಚಯಿಸಿದವರು ನನ್ನ ಪ್ರಿಯ ಬಂಧು ಕೆ.ಆರ್. ಕಮಲೇಶ್. ಆಗ ಸಾ.ಶಿ.ಮ.ರವರು ಜ್ಞಾನಗಂಗೋತ್ರಿ (ಮಕ್ಕಳ ವಿಶ್ವಕೋಶ) 8ನೇ ಸಂಪುಟದ ಪ್ರಧಾನ ಸಂಪಾದಕರಾಗಿದ್ದರು. ಕಛೇರಿ ಇದ್ದದ್ದು ಚಾಮರಾಜಪೇಟೆಯಲ್ಲಿ. ಪ್ರಥಮ ಭೇಟಿಯಲ್ಲೇ ನಾನು ಬಹಳ ಪ್ರಭಾವಿತನಾದೆ. ಅವರ ವಿಶ್ವಾಸಪೂರ್ಣ ಮಾತುಗಾರಿಕೆ ವಿಚಾರಪೂರ್ಣ ಸಂವಾದ ನನ್ನನ್ನು ಆಕರ್ಷಿಸಿದ್ದವು. ನನ್ನ ಕೆಲವು ಧಾರಾವಾಹಿ ಕಾದಂಬರಿಗಳನ್ನು 'ಸುಧಾ'ದಲ್ಲಿ ಓದಿದ್ದರಂತೆ. ಕೆಲವು ಕಥಾನಕಗಳನ್ನು ನೆನೆಪಿಸಿಕೊಂಡು ಮೆಚ್ಚುಗೆ ಸೂಚಿಸಿದರು. ನಾನು ರಚಿಸುತ್ತಿದ್ದ ಚಾರಿತ್ರಿಕ ಕಾದಂಬರಿ 'ಪ್ರೌಢಪ್ರತಾಪ

ವೀರರಾಜೇಂದ್ರ'ದ ಬಗ್ಗೆ ಪ್ರಸ್ತಾಪಿಸಿದಾಗ ಬಹಳ ಉಪಯುಕ್ತ ಸಲಹೆಗಳನ್ನಿತ್ತುದಲ್ಲದೆ ಮಹತ್ವದ ಅನೇಕ ಚಾರಿತ್ರಿಕ ವಿಷಯಗಳನ್ನು ಹೇಳಿದರು.

ಕೆಲ ತಿಂಗಳುಗಳ ನಂತರ ಆ ಕಾದಂಬರಿಯನ್ನು ನಾನು ಬರೆದು ಪೂರೈಸಿ ಅದನ್ನು ಪರಿಶೀಲಿಸಿ 'ಹಾರೈಕೆ'ಯ ನಾಲ್ಕು ಮಾತು ಬರೆದು ಕೊಡಬೇಕೆಂದು ವಿನಂತಿಸಿಕೊಂಡಾಗ ಆದರದಿಂದ ಸ್ವೀಕರಿಸಿದರು. ಕೆಲವೇ ದಿನಗಳಲ್ಲಿ ಈ ಬಗ್ಗೆ ಬಂದ ಅವರ ಆತ್ಮೀಯ ಪತ್ರ ನನ್ನನ್ನು ಬಹಳ ಸಂತೋಷಗೊಳಿಸಿತು. ಕೂಲಂಕಷವಾಗಿ ಪರಿಶೀಲಿಸಿದ್ದ ಕೃತಿಯನ್ನು ಬಹಳ ಮೆಚ್ಚಿಕೊಂಡಿದ್ದರು. '...ಹೆಜ್ಜೆ ಹೆಜ್ಜೆಗೂ ಹೋಮರನ ಮಹಾಕಾವ್ಯಗಳ ಘಟನೆಗಳನ್ನು ನೆನಪಿಗೆ ತರುತ್ತದೆ. ಕಾದಂಬರಿಕಾರರ ಕುಸುರಿ ಕೆಲಸದ ಕಲಾ ಕೈವಾಡ ಎಲ್ಲೆಲ್ಲೂ ಮೆರೆದಿರುವುದು ಕಂಡುಬರುತ್ತದೆ. ಸಾಹಿತಿ ಸಹೋದರರ ಈ ಐತಿಹಾಸಿಕ ಪ್ರಯೋಗ ಯಶಸ್ವಿಯಾಗಲಿ' ಎಂದು ತುಂಬು ಹೃದಯದಿಂದ ಹಾರೈಸಿದ್ದರು. ಅವರ ಈ ಹಾರ್ದಿಕ ಹಾರೈಕೆ ಹೊಸ ಸ್ನೇಹಿತನನ್ನು ಮೆಚ್ಚಿಸಬೇಕೆನ್ನುವ ಸಾಂಪ್ರದಾಯಕ ಮಾತಲ್ಲ ಎಂಬುದು ಬಹು ಬೇಗ ವ್ಯಕ್ತವಾಯಿತು. ಪುಸ್ತಕ ಹೊರಬಿದ್ದ ಕೆಲವೇ ತಿಂಗಳಲ್ಲಿ ಬೆಳಗಾಂ ಜಿಲ್ಲೆಯ ಪಾಚ್ಛಾಪುರದ ವಿಶ್ವಭಾರತೀಯ ಪರಿಷತ್ತು ನಡೆಸಿದ್ದ ಕಾದಂಬರಿ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ (ನಾಲ್ಕು ಸಹಸ್ರ ರೂಪಾಯಿಗಳು) ಲಭಿಸಿದ್ದಲ್ಲದೆ ದಶಕದ ಅತ್ಯುತ್ತಮ ಕೃತಿಗಳಲ್ಲೊಂದು ಎಂದು ಮೈಸೂರಿನ 'ನೃಪತುಂಗ ಸಾಹಿತ್ಯ ಪ್ರಶಸ್ತಿ' ಸಹ ದೊರೆಯಿತು. ನನ್ನ ಇತ್ತೀಚಿನ ಕೃತಿ 'ಕನ್ನಡ ನಾಡಿನ ಮರೆಯಬಾರದ ಮಹನೀಯರು - ಮಾಹಿತಿ ಕೋಶ'ವನ್ನು ಮೆಚ್ಚಿ 'ವೈನತೇಯ ಸಾಹಸ'ವೆಂದು ಅಭಿನಂದಿಸಿದ್ದರು. ಇದಕ್ಕೆ ಗೊರೂರು ಪ್ರತಿಷ್ಠಾನದ 'ರನ್ನ ಸಾಹಿತ್ಯ ಪ್ರಶಸ್ತಿ' ಲಭಿಸಿತು. ಇವುಗಳಿಂದಾಗಿ ಮಿತ್ರರ ಹಾರ್ದಿಕ ಹಾರೈಕೆ ಎಷ್ಟೊಂದು ಪ್ರಭಾವಶಾಲಿಯಾಗಿದೆ ಎಂದು ಅವರ ಮೇಲಿನ ಹೆಮ್ಮೆ ಇಮ್ಮಡಿಯಾಗಿದೆ.

ಹೊರ ಬಂದಿರುವ ಇವರ ಇತರ ಸಂಕಲನಗಳು ಶಿವ-ತಾಂಡವ; ಕೆಂಗನ ಕಲ್ಲು; ವಿಪರ್ಯಾಸ; ಘೋಷವತಿ; ಬಾರೊ ಮೈಲಾರಕೆ; ರೂಪಸಿ; ಚೈತ್ರ-ಜ್ಯೋತಿ; ಕಾವ್ಯ ಕುಂಜ; ಸುರಭಿ.

ಸಾ.ಶಿ.ಮ.ರವರು ರಚಿಸಿರುವ ಸೃಜನಾತ್ಮಕ ಕೃತಿಗಳು, ಹೇಮಕೂಟ, ಪುರುಷ ಸಿಂಹ (ಕಾದಂಬರಿಗಳು); ನೆಲದ ಸೊಗಡು (ಕಥಾಸಂಕಲನ); ಮರೀಬೇಡಿ, ವಿಜಯ ವಾತಾಪಿ, ರೇಣುಕ ಪರಂಜ್ಯೋತಿ, ಸ್ನೋವೈಟ್ (ನಾಟಕಗಳು)

ಬಹುಮುಖ ಪ್ರತಿಭೆಯ ಶ್ರೀಯುತರು ಸಾಹಿತ್ಯದ ಇತರ ಕ್ಷೇತ್ರಗಳಾದ ವಿಮರ್ಶೆ, ಸಂಪಾದನೆ, ಭಾಷಾಂತರಗಳಲ್ಲೂ ಸಾಕಷ್ಟು ಕೊಡುಗೆಗಳನ್ನು ನೀಡಿದ್ದಾರೆ. ಮುಖ್ಯವಾದವುಗಳು ಭಾಸನ ಮಕ್ಕಳು, ಶೂನ್ಯ ಸಂಪಾದನೆಗೊಂದು ಮುನ್ನುಡಿ (ವಿಮರ್ಶೆ); ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ (ಮಹಾಪ್ರಬಂಧ); ಹರಿಹರನ ಮತ್ತು ರಗಳೆಗಳು, ಮರುಳು ಸಿದ್ದೇಶ್ವರನ ಮಹಾಪುರಾಣ, ಅಗ್ರ ತಾಂಬೂಲ, ಜನಪದ ಕತೆಗಳು, ಸಾಹಿತ್ಯೋಪಾಸಕ, ಕಾವ್ಯಾನಂದ, ಕನಕ ಸಾಹಿತ್ಯ ದರ್ಶನ-ಭಾಗ

(ಸಂಪಾದನೆ); ಸ್ವಪ್ನವಾಸವದತ್ತ (ಭಾಷಾಂತರ) ಇವಲ್ಲದೆ ಇವರು ಹಲವಾರು ಜೀವನ ಚರಿತ್ರೆಗಳನ್ನೂ ರಚಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದವುಗಳು : ಭಾರತರತ್ನ, ಕನ್ನಡದ ಮೂವರು ಕಟ್ಟಾಳುಗಳು, ವಿಭೂತಿ ಪುರುಷರು.

'ಮಳಿಗೊಂದು ಒಳ್ಳೇ ಮಾತು', 'ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು', 'ಆತ್ಮೀಯ' - ಇತರೇ ಮೌಲಿಕ ಕೃತಿಗಳು. 'ಮನೀಷ' ಮತ್ತು 'ಅವಸ್ಥಾ' ಉತ್ತಮ ಲೇಖನಗಳ ಸಂಕಲನ.

ಶ್ರೀ ಸಾ.ಶಿ.ಮ.ರವರು ಸ್ನಾತಕೋತ್ತರ ಪದವಿ : ಎಂ.ಎ. (ಕನ್ನಡ) ಗಳಿಸಿ ಕನ್ನಡ ಅಧ್ಯಾಪಕರಾಗಿ ವಿಶ್ವವಿದ್ಯಾನಿಲಯ ಸೇರಿ ತುಮಕೂರು, ಚನ್ನಪಟ್ಟಣ, ಚಾಮರಾಜ ನಗರ, ದಾವಣಗೆರೆ, ಶಿವಮೊಗ್ಗ, ಬೆಂಗಳೂರು, ಮಂಗಳೂರು ಮುಂತಾದೆಡೆ ಉಪನ್ಯಾಸಕ, ರೀಡರ್, ಪ್ರೊಫೆಸರ್, ಪ್ರಿನ್ಸಿಪಾಲರಾಗಿ ಸೇವೆ ಸಲ್ಲಿಸಿದ್ದಾರೆ. ಕೆಲಕಾಲ ಜ್ಞಾನ ಗಂಗೋತ್ರಿ 8ನೇ ಸಂಪುಟ (ಮಕ್ಕಳ ವಿಶ್ವಕೋಶ)ದ ಪ್ರಧಾನ ಸಂಪಾದಕರಾಗಿ ಹಾಗೂ ರಾಜ್ಯಭಾಷಾ ಆಯೋಗದ ಸದಸ್ಯರಾಗಿದ್ದು ಈಗ ಸೇವೆಯಿಂದ ನಿವೃತ್ತರಾಗಿದ್ದಾರೆ. ಆದರೂ ಮೂರು ದಶಕಕ್ಕೂ ಹೆಚ್ಚುಕಾಲ ಅಂಟಿದ್ದ ಉಪನ್ಯಾಸಕ ಪ್ರವೃತ್ತಿಯ ನಂಟನ್ನು ಬಿಡಲಾರದ ಶ್ರೀಯುತರು ಈಗಲೂ ಕನ್ನಡ ಎಂ.ಎ., ಐ.ಎ.ಎಸ್., ಐ.ಪಿ.ಎಸ್., ಮುಂತಾದ ಪರೀಕ್ಷೆಗಳಿಗೆ ಕಟ್ಟುವ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ತರಗತಿಗಳನ್ನು ನಡೆಸುತ್ತಿದ್ದಾರೆ. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿಯಾಗಿಯೂ ಕೆಲ ಕಾಲ ಸೇವೆ ಸಲ್ಲಿಸಿದ್ದಾರೆ. ವಿದೇಶಗಳಲ್ಲೂ ಪ್ರವಾಸಮಾಡಿ ಸತ್ವಪೂರ್ಣ ಭಾಷಣಗಳನ್ನು ನೀಡಿ ಅಂತರಾಷ್ಟ್ರೀಯ ಖ್ಯಾತಿ ಗಳಿಸಿದ್ದಾರೆ.

ಡಾ|| ಸಾ.ಶಿ.ಮ. ಮತ್ತು ನನ್ನ ಸ್ನೇಹ ಗಾಢವಾದದ್ದು. ೧೯೮೯ರ ಅನಂತರ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿಗೆ ಚುನಾಯಿತಗೊಂಡ ನಮ್ಮಿಬ್ಬರ ಆಪ್ತ ಮಿತ್ರ ಪ್ರೊ|| ಜಿ.ಎಸ್. ಸಿದ್ದಲಿಂಗಯ್ಯ ಅವರು ಡಾ|| ಸಾ.ಶಿ.ಮ.ರವರನ್ನು ಗೌ|| ಕಾರ್ಯದರ್ಶಿಯಾಗಿ, ನನ್ನನ್ನು ಗೌ|| ಕೋಶಾಧ್ಯಕ್ಷನನ್ನಾಗಿಯೂ ಆಯ್ದುಕೊಂಡಮೇಲೆ ಒಟ್ಟಿಗೆ ದುಡಿಯುವ ಅವಕಾಶ ಲಭಿಸಿ ನಮ್ಮಿಬ್ಬರ ಮಧ್ಯೆ ಆತ್ಮೀಯತೆ ಹೆಚ್ಚತೊಡಗಿತ್ತು. ಸಾ.ಶಿ.ಮ.ರವರ ಹೃದಯವಂತಿಕೆ, ಸ್ನೇಹಪರತೆ, ವಿಶಾಲದೃಷ್ಟಿ, ಕಾರ್ಯಕ್ಷಮತೆ ಬಹುಬೇಗ ಎಲ್ಲರ ಮೇಲೂ ಮೋಡಿ ಮಾಡಿತು. ಹಾಗೆ ಅವರ ಪ್ರಭಾವದ ಮೋಡಿಗೆ ಒಳಗಾದವರಲ್ಲಿ ನಾನೂ ಒಬ್ಬ.

ತುಮಕೂರು ಜಿಲ್ಲೆಯ ಸಾಸಲು ಗ್ರಾಮದ ಶಿವರುದ್ರಯ್ಯ ಮತ್ತು ಸಿದ್ದಮ್ಮನವರ ಸುಪುತ್ರರಾಗಿ ದಿನಾಂಕ ೨೮, ಜನವರಿ ೧೯೩೧ ಜನಿಸಿದ ಶ್ರೀಯುತರು ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಸಮ್ಮೇಳನದಲ್ಲಿ ಗೌರವಾಧ್ಯಕ್ಷರಾಗಿದ್ದದ್ದು ಔಚಿತ್ಯ ಪೂರ್ಣವಾಗಿದೆ.

ಕನ್ನಡದ ಸಾರ್ವಭೌಮ ಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ೧೯೯೬-೯೮, ಮೂರು ವರ್ಷ ಕನ್ನಡದ ಸರ್ವಾಂಗೀಣ ಪ್ರಗತಿಗಾಗಿ ಅಹರ್ನಿಶಿ

ಶ್ರಮಿಸಿದ್ದಾರೆ. ಕನ್ನಡ ಸಾಹಿತ್ಯ ಲೋಕಕ್ಕೆ ಇವರು ನೀಡಿರುವ ಹಾಗೂ ಮೌಲಿಕ ಕೊಡುಗೆಗಳನ್ನು ಗುರುತಿಸಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ೧೯೯೯ರಲ್ಲಿ ಇವರಿಗೆ ಗೌರವ ಅಕಾಡೆಮಿ ಪ್ರಶಸ್ತಿ ನೀಡಿ ಗೌರವಿಸಿದೆ. ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಸನ್ಮಾನಿಸಿದೆ.

ಪ್ರಚಂಡ ವಾಗ್ಮಿ ಹಾಗೂ ಮಹಾವಿದ್ವಾಂಸರಾದ ನನ್ನ ಆತ್ಮೀಯ ಮಿತ್ರ ಡಾ|| ಸಾ.ಶಿ.ಮ.ರವರಿಗೆ ಅಭಿನಂದನ ಗ್ರಂಥ ಸಮರ್ಪಿಸುವುದು ಬಹು ಸಮಯೋಚಿತವಾಗಿದೆ. ಈ ಶುಭಕಾರ್ಯ ಶೀಘ್ರವೇ ವಿಜೃಂಭಣೆಯಿಂದ ನೆರವೇರಲಿ ಎಂದು ಆಶಿಸುತ್ತಾ, ಶ್ರೀಯುತರಿಗೆ ಶೀಘ್ರವೇ ಮಹತ್ವದ ರಾಷ್ಟ್ರೀಯ ಹಾಗೂ ಅಂತರಾಷ್ಟ್ರೀಯ ಪ್ರಶಸ್ತಿ, ಪುರಸ್ಕಾರಗಳು ಅಪಾರವಾಗಿ ಲಭಿಸಲಿ. ಅವರ ಸಾಹಿತ್ಯ ಸೇವೆ ಬಹುಕಾಲ ಅವಿರತ ನಡೆಯುತ್ತಿರಲಿ, ಅವರು ಹಾಗೂ ಅವರ ಕುಟುಂಬದ ಸರ್ವರಿಗೂ ದೇವರು ಆಯುರಾರೋಗ್ಯ ಹಾಗೂ ಸುಖ, ಶಾಂತಿ, ಸಂತೃಪ್ತಿಯನ್ನು ಕರುಣಿಸಲಿ ಎಂದು ತುಂಬು ಹೃದಯದಿಂದ ಹಾರೈಸುತ್ತೇನೆ.

ವಿನಯದ ಖನಿ ಡಾ॥ ಸಾ.ಶಿ.ಮ.

ಪ್ರೊ. ಬಿ.ಕೆ. ಅನಂತಸ್ವಾಮಿ

ಪ್ರಚಂಡ ವಾಗ್ಮಿ, ಖ್ಯಾತ ಪ್ರಾಧ್ಯಾಪಕ ಡಾ॥ ಸಾ.ಶಿ.ಮ. ಅವರ ಹೆಸರನ್ನು ತುಂಬ ಕೇಳಿದ್ದೆ. ೧೯೭೦ರ ಫೆಬ್ರವರಿ ತಿಂಗಳವರೆಗೂ ಅವರನ್ನು ಕಂಡಿರಲಿಲ್ಲ. ಅದೇ ವರುಷ ಜನವರಿ ಹತ್ತರಂದು ಕನ್ನಡ ಸಹೃದಯರ ಸಂಘದ ವತಿಯಿಂದ ಅ.ನ.ಕೃ. ಅಧ್ಯಕ್ಷತೆಯಲ್ಲಿ ಕುಮಾರವ್ಯಾಸ ಭಾರತ ವಾಚನ-ವ್ಯಾಖ್ಯಾನ ಕಾರ್ಯಕ್ರಮ ಆರಂಭವಾಗಿತ್ತು. ಸತತವಾಗಿ ಕಾರ್ಯಕ್ರಮ ನಡೆಸಿಕೊಡುತ್ತಿದ್ದ ಕಲಾವಿದರಿಗೆ ವಾರದಲ್ಲಿ ಒಂದು ದಿನ ಅಂದರೆ ಗುರುವಾರಗಳಂದು ಬಿಡುವು ಕೊಡುವ ನಿರ್ಧಾರವಾಗಿತ್ತು. ಆ ಗುರುವಾರಗಳಂದು ಖ್ಯಾತ ಸಾಹಿತಿಗಳಿಂದ ಒಂದಿಲ್ಲೊಂದು ಉಪನ್ಯಾಸ ಕಾರ್ಯಕ್ರಮ ಏರ್ಪಡಿಸುವ ಕೆಲಸ ನನ್ನ ಮೇಲೆ ಬಿದ್ದಿತು. ಹೀಗೆ ಒಮ್ಮೆ ಡಾ॥ ಅ.ನ.ಕೃ. ಅವರ ಮನೆಯಲ್ಲಿ ಮಾತನಾಡುತ್ತ ಕುಳಿತಿದ್ದಾಗ ಅವರೇ ನಮ್ಮ ಸಂಘದ ಗುರುವಾರದ ಉಪನ್ಯಾಸ ಕಾರ್ಯಕ್ರಮಕ್ಕಾಗಿ ಸೂಚಿಸಿದ ಹೆಸರೇ ಡಾ॥ ಸಾ.ಶಿ.ಮರುಳಯ್ಯ. ಅ.ನ.ಕೃ. ಹೇಳಿದ ವಾರವೇ ಚಾಮರಾಜಪೇಟೆಯ ಅವರ ಮನೆಗೆ ನನ್ನ ದ್ವಿಚಕ್ರ ವಾಹನದಲ್ಲಿ ಧಾಳಿ ನಡೆಸಿದ್ದೆ. ಮನೆಯಲ್ಲಿ ಅವರನ್ನು ಕಾಣಲು ಎರಡು ಬಾರಿ ರಾಜಾಜಿನಗರದಿಂದ ಹೋಗಬೇಕಾಯ್ತು. ಎರಡನೆಯ ಬಾರಿ ಅವರು ಮನೆಯಲ್ಲಿ ಸಿಕ್ಕು ಅವರೊಂದಿಗಿನ ಐದು ನಿಮಿಷದ ಮಾತುಗಾರಿಕೆ ಎಲ್ಲ ದಣಿವನ್ನು ಮರೆಸಿತ್ತು. ಹಾಗೆ ಅವರ ಅನುರೂಪ ಸಹಧರ್ಮಿಣಿಯವರು ನೀಡಿದ ಕಾಫಿ ಹೊಸ ಚೇತನವನ್ನೇ ಮೂಡಿಸಿತ್ತು. 'ಅ.ನ.ಕೃ. ಸಲಹೆ ನೀಡಿದರು ನೇರ ನಿಮ್ಮ ಮನೆಗೆ ಬಂದೆ' ಎನ್ನುತ್ತಿದ್ದಂತೆ 'ಅವರು ನನ್ನ ಗುರುಸಮಾನರು ಅವರು ಹೇಳಿದ ಮೇಲೆ ಆಯಿತು. ಮುಂದಿನ ವಾರ ಉಪನ್ಯಾಸ ಕಾರ್ಯಕ್ರಮಕ್ಕೆ ಬರುವೆ' ಎಂದು ಒಪ್ಪಿಗೆ ನೀಡಿದರು. ಅಂದು ಸುಮಾರು ಮೂವತ್ತು ವರುಷಗಳ ಹಿಂದೆ ಆರಂಭವಾದ ನನ್ನ ಅವರ ಸಂಬಂಧ ದಿನೇದಿನೇ ಬೆಳೆಯುತ್ತ ಬಂದಿದೆ; ಅದು ನನ್ನ ಭಾಗ್ಯ.

ಮಾತು ಕೊಟ್ಟಂತೆ ಸರಿಯಾಗಿ ಮುಂದಿನ ಗುರುವಾರ ಸಂಜೆ ೬.೪೫ಕ್ಕೆಲ್ಲ ಆಟೋರಿಕ್ಷಾದಲ್ಲಿ ಕುಮಾರವ್ಯಾಸ ಮಂಟಪದೆದುರು ಬಂದಿಳಿದದ್ದೆ. ನಾನು ಅಷ್ಟು ಬೇಗ ಬರುತ್ತಾರೆ ಅಂತ ನಿರೀಕ್ಷಿಸಿಯೂ ಇರಲಿಲ್ಲ. ಆಟೋ ಇಳಿಯುತ್ತಿದ್ದಂತೆ ದೂರದಲ್ಲಿದ್ದ ನನ್ನನ್ನು 'ಅನಂತಸ್ವಾಮಿಗಳು, ಇದೋ ನಾನು ಹಾಜರ್' ಅಂದರು. ಅದೊಂದು ಮಾತಿಗೇ ನಾನು ಮರುಳಾದೆ. ಅಂದಿನ ಉಪನ್ಯಾಸದ ವಿಷಯ ಮೊದಲೇ ತಿಳಿಸಿರಲಿಲ್ಲವಾಗಿ 'ನನ್ನ ಗುರುಗಳು ಶ್ರೀ ಜಿ.ಪಿ. ರಾಜರತ್ನಂ ಅವರ ''ಗಂಡುಗೊಡಲಿ'' ನಾಟಕದ ಮೇಲೆ ಮಾತಾಡ್ತೀನಿ ಆಗತ್ತಲ್ಲ' ಅಂದರು. 'ಆಗಲಿ ಸಾರ್' ಅಂದೆ ಇನ್ನೇನು ತಾನೇ ಹೇಳಲು ಸಾಧ್ಯವಿತ್ತು. ಅಂದು ಅವರು ಉಪನ್ಯಾಸವನ್ನು ಸುಮಾರು ೭ ಗಂಟೆಗೆ ಆರಂಭಿಸಿ ಎರಡು ಗಂಟೆಗಳ ಕಾಲ ಸತತವಾಗಿ ಮಾತನಾಡಿದರು. ಕೈಯಲ್ಲಿ ರಾಜರತ್ನಂ

ಅವರ 'ಗಂಡುಗೊಡಲಿ' ಪುಸ್ತಕ ಮುಚ್ಚಿಟ್ಟಿದ್ದು ಹಾಗೆಯೇ ಇತ್ತು; ಒಮ್ಮೆಯಾದರೂ ಒಂದು ಪುಟ ಕೂಡ ತೆಗೆಯಲಿಲ್ಲ. ನಿರ್ಗಳ ವಾಗ್ಝರಿ. ಅವರ ಮಾತಿಗೆ ಅವರೇ ಸಾಟಿ. ಮೇಲು ನೋಟಕ್ಕೆ ಯಾರೇ ಓದಿದರೂ ಅದು ಪರಶುರಾಮನ ಕಥೆ. ನಾಟಕದ ಸಾಲುಗಳನ್ನು ಹೇಳುತ್ತ, ಹೇಳುತ್ತ ಅದಕ್ಕೂ ನಮ್ಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಎಷ್ಟು ಹೊಂದಾಣಿಕೆ ಇದೆ ಅನ್ನುವುದನ್ನು ತಿಳಿಸುತ್ತಾ ಉದಾಹರಣೆಗಳೊಂದಿಗೆ ನಾಟಕಕಾರರ ದೃಷ್ಟಿಯೇ ಅದು, ಬರೀ ಪರಶುರಾಮನ ಕಥೆ ಬಿತ್ತರಿಸುವುದಲ್ಲ ಅಂದರು. ಮೂವತ್ತು ವರುಷಗಳ ಹಿಂದೆ ಕೇಳಿದ ಆ ಮಾತುಗಳು ಇಂದಿಗೂ ನನ್ನ ಕಿವಿಯಲ್ಲಿ ಇನ್ನೂ ಗುಯ್ ಗುಡುತ್ತಲೇ ಇದೆ ಎಂದಲ್ಲಿ ಖಂಡಿತಾ ಅತಿಶಯೋಕ್ತಿಯಲ್ಲ. ಕಾರ್ಯಕ್ರಮ ಮುಗಿಯುತ್ತಿದ್ದಂತೆ ಆಟೋ ತರಲು ಅಲ್ಲೇ ಇದ್ದ ಕರಿಯನಿಗೆ ಹೇಳುತ್ತಿದ್ದಂತೆ ಆಟೋ 'ಯಾಕೆ ಬೇಡಾ ನಿಮಗೆ ತೊಂದರೆ ಆಗದಿದ್ದಲ್ಲಿ ನಿಮ್ಮ ಸ್ಕೂಟರ್‌ನಲ್ಲಿ ಬಿಡಿ' ಅಂದರು. ಮಹಾನ್ ಪ್ರಾಧ್ಯಾಪಕರು, ಪ್ರಾಂಶುಪಾಲರಾಗಿದ್ದವರು ಸ್ಕೂಟರ್‌ನಲ್ಲಿ ಕೂತು ಬರುವುದೆಂದರೇನು? ಅವರು ಹಾಗೆ ಹೇಳುತ್ತಿದ್ದಂತೆಯೇ ನನ್ನ ಮನಸ್ಸಿನಲ್ಲಿ ಹಾದುಹೊದದ್ದು ''ವಿದ್ಯಾದಧಾತಿ ವಿನಯಂ'' ಅವರೇ ವಿನಯದ ಖನಿ ನಮ್ಮ ಸಾ.ಶಿ.ಮ.

ಈ ಕಾರ್ಯಕ್ರಮ ಆದನಂತರ ಸುಮಾರು ಮೂರು ವರುಷಗಳ ಕಾಲ ಅವರನ್ನು ಭೇಟಿ ಮಾಡಲಾಗಲಿಲ್ಲ. ಆ ವೇಳೆಗಾಗಲೇ ಅಂದರೆ ಸುಮಾರು ೧೯೭೫ರ ವೇಳೆಗೆ ಆರ್.ಪಿ.ಸಿ. ಲೇಔಟ್‌ನ ''ರಾಗಿಣಿ'' ಮನೆಗೆ ಬಂದಿದ್ದರು ಅನಿಸುತ್ತೆ. ೧೯೭೫ರಿಂದ ಪ್ರತಿವರುಷವು ನಮ್ಮ ಸಂಘದ ಈಗ ಪ್ರತಿಷ್ಠಾನವಾಗಿರುವ ಕನ್ನಡ ಸಹೃದಯರ ಪ್ರತಿಷ್ಠಾನದ ವಾರ್ಷಿಕೋತ್ಸವ ಹಾಗೂ ಕುಮಾರವ್ಯಾಸ ಜಯಂತಿ ಸಂದರ್ಭದಲ್ಲಿ ಉದ್ಘಾಟನೆ ದಿನದಂದು ತಪ್ಪಿದಲ್ಲಿ ಸಮಾರೋಪ ದಿನದಂದು ತಪ್ಪದೇ ಬಂದು ಹರಸುತ್ತಿದ್ದಾರೆ. ೧೯೯೫ರ ವರೆಗೂ ಅವರನ್ನು ಸ್ಕೂಟರ್‌ನಲ್ಲಿ ಕರೆದುಕೊಂಡು ಬಂದು ಸ್ಕೂಟರ್‌ನಲ್ಲೇ ಬಿಟ್ಟು ಬಂದಿದ್ದೇನೆ. ೧೯೯೫ರ ನಂತರದ ದಿನಗಳಲ್ಲಿ ನಾಲ್ಕು ಚಕ್ರ ವಾಹನದಲ್ಲಿ ಕರೆದುಕೊಂಡು ಬರುವ ಬಿಡುವ ಅನುಕೂಲ ಆದರೂ ಆಗಲೂ ಅವರು ಹೇಳುತ್ತಿದ್ದುದು ''ನೀವು ದ್ವಿಚಕ್ರ ವಾಹನದಲ್ಲೇ ಕರೆದೊಯ್ದರು ನನಗೆ ತೊಂದರೆ ಇಲ್ಲ ಬರುವೆ'' ಅನ್ನುವ ಅಂತಹ ವಿನಯಶೀಲ, ನಿಗರ್ವಿ, ನಿರಾಂಡಬರ ಜೀವಿ, ನಿಷ್ಕಲ್ಮಶ ಹೃದಯಿ ಡಾ|| ಸಾ.ಶಿ.ಮ. ಅವರ ಮನೆಗೆ ಈ ಮೂವತ್ತು ವರುಷಗಳಲ್ಲಿ ಸುಮಾರು ನೂರು ಬಾರಿಯಾದರೂ ಹೋಗಿ ಬಂದಿದ್ದೇನೆ. ಒಮ್ಮೆಯಾದರೂ ಕಾಫಿ ಕುಡಿಸದೆ ನನ್ನನ್ನು ಹೊರಗೆ ಬಿಟ್ಟಿದ್ದಿಲ್ಲ. ಎಷ್ಟೋಸಲ ಸುಮಾರು ಎರಡು ಗಂಟೆಗಳಷ್ಟು ದೀರ್ಘಕಾಲ ಅವರ ಸಂಭಾಷಣೆ ಸವಿಯನ್ನು ಅನುಭವಿಸುವ ಯೋಗ ನನ್ನದಾಗಿದೆ. ಮಾತೆಲ್ಲ ಮುಗಿದು ಹೊರಬರುವಾಗ ತಪ್ಪದೇ ಗೇಟಿನವರೆಗೂ ಬಂದು ಬೀಳ್ಕೊಂಡು ಆತ್ಮೀಯನನ್ನಾಗಿ ನೋಡಿಕೊಳ್ಳುತ್ತಿರುವ ಸ್ನೇಹಜೀವಿ 'ಸಾ.ಶಿ.ಮ.'

ಹೀಗೆ ಬರೆಯುತ್ತ ಹೋದಲ್ಲಿ ನನ್ನಂತ ಅಲ್ಪನನ್ನು ಹಿರಿಯ ಸಾಹಿತಿಗಳಾದ ಸಾ.ಶಿ.ಮ. ನಡೆಸಿಕೊಂಡಿರುವ ರೀತಿ ಅಸದಳ. ಮಿತ್ರ ಶಾಮಂಕೃ ಜೊತೆಗೆ ಹೋದಾಗಲೆಲ್ಲ ಅವರಿಬ್ಬರ ಮಾತು ಕೇಳುತ್ತ ಕೂಡುತ್ತಿದ್ದುದೇ ಒಂದು ರಸದೌತಣ.

ಮಹಾನ್ ಕವಿ ಎಂಬ ಗರ್ವ ಒಂದಿನಿತೂ ಇಲ್ಲ. ತುಂಬಿದ ಕೊಡ ಎಂದರೆ ಅವರಿಗೆ ಮಾತ್ರ ಅನ್ವಯಿಸಬಹುದಾದ ಮಾತು. ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದಾಗ ಹೊಸ ಹೊಸ ಯೋಜನೆಯ ರೂವಾರಿಯಾಗಿ ಭದ್ರಬುನಾದಿ ಹಾಕಿಕೊಟ್ಟು ಆ ವರ್ತುಲದಿಂದ ಹೊರಬಂದವರು. ಸರಸ ಸಜ್ಜನಿಕೆಯ ಮೂರ್ತರೂಪವೇ ಡಾ॥ ಸಾ.ಶಿ.ಮ. ಎಂಬುದೇ ಸರಿಯಾದ ಮಾತು. ಎಲ್ಲವನ್ನೂ ಮೂರೇ ಮಾತಿನಲ್ಲಿ ಕ್ರೋಢೀಕರಿಸಿದಲ್ಲಿ-

''ಸಾರ್ಥಕ ಬದುಕನೇ ಬಾಳಿ ಬದುಕುತಲಿಹರು
ಶಿಷ್ಯವತ್ಸಲರವರು ಸ್ನೇಹಕೇ ಮರುಹೆಸರರವರು
ಮಮತೆಯ ನಿಧಿ ವಿನಯದ ಖನಿ ನಮ್ಮ ಸಾ.ಶಿ.ಮ.ಅವರು.''

ನಾನು ಕಂಡಂತೆ ಡಾ॥ ಸಾ.ಶಿ.ಮ.

ಸಿ.ಎಂ. ವೀರಣ್ಣ

ಸುಮಾರು ಇಪ್ಪತ್ತು ವರ್ಷಗಳ ಹಿಂದೆ ನನ್ನ ದೀಕ್ಷಾಗುರುಗಳಾದ ಪರಮ ಪೂಜ್ಯ ಶ್ರೀ ಡಾ॥ ಜ.ಚ.ನಿ. ಅವರ ಬೆಂಗಳೂರಿನ ನಿಡುಮಾಮಿಡಿನಿವಾಸದಲ್ಲಿ ಪೂಜ್ಯರ ದರ್ಶನಕ್ಕೆಂದು ಹೋಗಿದ್ದಾಗ ಅಲ್ಲಿ ಆಕಸ್ಮಿಕವಾಗಿ ಪೂಜ್ಯ ಡಾ॥ ಸಾ.ಶಿ. ಮರುಳಯ್ಯ ಅವರ ಪರಿಚಯದ ಯೋಗ ಒದಗಿತು. ಅದಕ್ಕೂ ಮೊದಲೇ ತುಮಕೂರಿನ ಶ್ರೀ ಬಿ. ವೀರಭದ್ರಯ್ಯ, ಶ್ರೀ ಬಿ.ಎಂ. ನಂಜುಂಡಪ್ಪ ಇವರ ಸಂಪಾದಿತ ಶರಣ ಸುನೀತದಲ್ಲಿ ಇವರ ''ಆರದಿರು ಹಣತೆ'' ಎಂಬ ಕವನ ಸುನೀತ ನನ್ನನ್ನು ಬಹುವಾಗಿ ಆಕರ್ಷಿಸಿತ್ತು. ಅನೇಕ ಸಭೆ ಸಮಾರಂಭಗಳಲ್ಲಿ ಇದನ್ನು ಹಾಡಿ ಗಣ್ಯರಿಂದ, ಸಭಿಕರಿಂದ ಮೆಚ್ಚುಗೆ ಗಳಿಸಿದ್ದೆ. ಇದೀಗ ಪ್ರತ್ಯಕ್ಷ ನೋಡಿ ಪರಿಚಯಿಸಿಕೊಂಡು ಅದರ ನೆನಪಿನ ಸಂತೋಷ ಹಂಚಿಕೊಂಡೆ. ಇದಕ್ಕು ಮೊದಲು ವಿಜಯಪುರದ ಕನ್ನಡಾಭಿಮಾನಿಗಳು ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ ಊರಿನ ಪೌರರ ಪರವಾಗಿ ಇವರನ್ನು ಸನ್ಮಾನಿಸಿದುದು ನನ್ನ ನೆನಪಿನಲ್ಲಿ ಇನ್ನೂ ಹಸುರಾಗಿ ಉಳಿದಿದೆ.

ಸರಳತೆ, ಸಜ್ಜನಿಕೆ, ವಿನಯಶೀಲತೆಯಲ್ಲಿ ಎಂತಹವರನ್ನೂ ಆಕರ್ಷಿಸುವ ನಗುಮೊಗದ ಶ್ರೀ ಸಾ.ಶಿ.ಮ. ಅವರು ಕನ್ನಡ ಸಾರಸ್ವತ ಪ್ರಪಂಚದಲ್ಲಿ ಅಪಾರ ಅಭಿಮಾನಿ ಬಳಗವನ್ನು ಹೊಂದಿರುವುದು ಅಚ್ಚರಿಯೇನಲ್ಲ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿಯಲ್ಲಿ ತಂದೆ ಶಿವರುದ್ರಪ್ಪ, ತಾಯಿ ಸಿದ್ದಮ್ಮ ಇವರ ಪುಣ್ಯಗರ್ಭದಲ್ಲಿ ದಿ. ೨೮-೧-೧೯೩೧ರಲ್ಲಿ ಸುಪುತ್ರರಾಗಿ ಜನಿಸಿದ ಸಾ.ಶಿ.ಮ. ಅವರು ಎಂ.ಎ. ಪದವೀಧರರಾಗಿದ್ದು, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ, ವಿಶ್ವಕೋಶ ಪ್ರಧಾನ ಸಂಪಾದಕರಾಗಿ ಪ್ರಾಮಾಣಿಕ ಸೇವೆ ಸಲ್ಲಿಸಿ ಕನ್ನಡನಾಡಿನ ಹೆಸರಾಂತ ಹಿರಿಯ ಸಾಹಿತಿಗಳ ಸಾಲಿನಲ್ಲಿ ನಿಂತು ಶ್ರೇಷ್ಠ ಕವಿಯೂ ಆಗಿದ್ದಾರೆ.

೧೯೯೫ರಲ್ಲಿ ಇವರನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಪ್ರಚಂಡ ಬಹುಮತದಿಂದ ಆಯ್ಕೆ ಮಾಡಿದುದು ಇವರ ಜನಾನುರಾಗಕ್ಕೆ ಸಾಕ್ಷಿಯಾಗಿದೆ. ೧೯೯೫-೯೮ರ ಅವಧಿಯಲ್ಲಿ ಸಾಹಿತ್ಯ ಪರಿಷತ್ತಿನ ಸರ್ವತೋಮುಖ ಅಭಿವೃದ್ಧಿಗೆ ಪ್ರಾಮಾಣಿಕವಾಗಿ ಸೇವೆ ಸಲ್ಲಿಸಿರುವುದು ಎಲ್ಲರ ಮನಸ್ಸಿನಲ್ಲಿ ಇಂದೂ ಅಚ್ಚಳಿಯದೆ ಉಳಿದಿದೆ. ಈ ಮೂರು ವರ್ಷಗಳ ಅವಧಿಯ ಪರಿಷತ್ತಿನ ನಿರ್ವಹಣೆಯಲ್ಲಿ ಅನೇಕ ಎಡರುತೊಡರುಗಳು ಬಂದಾಗ್ಯೂ ಸಹ ಅವುಗಳನ್ನೆಲ್ಲ ಸಹನೆಯಿಂದ ಸಹಿಸಿಕೊಂಡು ಹೊಗಳಿಕೆಗೆ ಹಿಗ್ಗದೆ, ತೆಗಳಿಕೆಗೆ ತಗ್ಗದೆ ಸಮಚಿತ್ತರಾಗಿ ವಿಷವುಂಡ ನಂಜುಂಡನಂತೆ ದಿಟ್ಟತನದಿಂದ ಕನ್ನಡ ತಾಯಿಯ ತೇರನ್ನೆಳೆದಿರುವುದು ಸಾಮಾನ್ಯ ಸಂಗತಿಯಲ್ಲ.

ಈ ಸಂದರ್ಭದಲ್ಲಿ ಅಧ್ಯಕ್ಷರ ಸಂದರ್ಶನಕ್ಕಾಗಿ ಬಂದವರು ಹಿರಿಯರಿರಲಿ,

ಕಿರಿಯರಿರಲಿ ಸಮಾನ ದೃಷ್ಟಿಯಿಂದ ಸಂಭಾಷಿಸುತ್ತಿದ್ದುದನ್ನು ನಾನು ಕಣ್ಣಾರೆ ಕಂಡಿದ್ದೇನೆ. ಜಿಲ್ಲಾ ಹಾಗೂ ತಾಲ್ಲೂಕು ಘಟಕಗಳ ಅಧ್ಯಕ್ಷರು, ಪದಾಧಿಕಾರಿಗಳು ಯಾರೇ ಇರಲಿ ಅವರನ್ನು ಪರಿಚಯಿಸಿಕೊಂಡು ಪರಿಷತ್ತಿನ ಬೆಳವಣಿಗೆಗೆ ಸಲಹೆ ಸೂಚನೆಗಳನ್ನಿತ್ತು ಪ್ರೋತ್ಸಾಹಿಸುತ್ತಿದ್ದುದು ಆದರ್ಶ ಅನುಕರಣೀಯ.

ಯೋಗಾಯೋಗವೆಂಬಂತೆ ನಾನೂ ಸಹ ಅದೇ ೧೯೯೫-೯೮ರ ಅವಧಿಯಲ್ಲಿ ದೇವನಹಳ್ಳಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿದ್ದುದು ನಿಜಕ್ಕೂ ನನ್ನ ಭಾಗ್ಯ. ೧೯೯೫ ಸೆಪ್ಟೆಂಬರ್ ತಿಂಗಳು ವಿಜಯಪುರದಲ್ಲಿ ಆಚರಿಸಿದ ತಾಲ್ಲೂಕು ಕ.ಸಾ.ಪ. ಕಾರ್ಯಕ್ರಮಗಳ ಉದ್ಘಾಟನಾ ಸಮಾರಂಭಕ್ಕೆ ನಮ್ಮ ಆಹ್ವಾನವನ್ನು ಮನ್ನಿಸಿ ದಂಪತಿ ಸಮೇತರಾಗಿ ಬಂದು ಜ್ಯೋತಿ ಬೆಳಗಿಸಿ ಉದ್ಘಾಟನೆ ಮಾಡಿ ಆಶೀರ್ವದಿಸಿದುದನ್ನು ಎಂದಿಗೂ ಮರೆಯಲಾರೆ.

ವಿಜಯಪುರ ಪುರಸಭೆಯವರು ಸಾಹಿತ್ಯಭವನ ನಿರ್ಮಾಣಕ್ಕಾಗಿ ಪಟ್ಟಣದ ಮಧ್ಯಭಾಗದಲ್ಲಿ ೧೨೦ × ೫೫ ಅಳತೆಯ ಉತ್ತಮ ನಿವೇಶನವನ್ನು ಅತ್ಯಂತ ರಿಯಾಯಿತಿ ಬೆಲೆಯಲ್ಲಿ ನೀಡಿದ್ದು ಅದನ್ನು ನೋಂದಣಿ ಮಾಡಿಸುವ ಸಂದರ್ಭದಲ್ಲಿಯೂ ಸಹ ನಮ್ಮ ಕೋರಿಕೆಯನ್ನು ಮನ್ನಿಸಿ ದಂಪತಿಗಳಿಬ್ಬರೂ ದಯಮಾಡಿಸಿ ನಿವೇಶನದಲ್ಲಿ ನಾಮಫಲಕ ಉದ್ಘಾಟನೆ ಮಾಡಿ ಹರಸಿದುದು ಇವರ ಸರಳತೆಗೆ ಸಾಕ್ಷಿಯಾಗಿದೆ. ಇದು ನಮ್ಮ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಇತಿಹಾಸದಲ್ಲಿ ಒಂದು ಮೈಲಿಗಲ್ಲು.

ವಿದ್ಯಾಕ್ಷೇತ್ರದಲ್ಲಿಯೂ ಉತ್ತಮ ಸೇವೆ ಸಲ್ಲಿಸಿರುವ ಇವರು ಅಪಾರ ಶಿಷ್ಯಬಳಗವನ್ನು ಹೊಂದಿರುವುದಲ್ಲದೆ ಯಾವ ಸಭೆ ಸಮಾರಂಭಗಳಿರಲಿ ಆತ್ಮೀಯತೆಯ ಆಹ್ವಾನವನ್ನು ನಿರಾಕರಿಸದೆ ಮನ್ನಿಸಿ ನಿರರ್ಗಳವಾಗಿ ಶ್ರೋತೃಗಳ ಮನಮುಟ್ಟುವಂತೆ ಉಪನ್ಯಾಸ ನೀಡುವ ವಾಗ್ವೈಖರಿ ತಾಯಿ ಶಾರದೆಯ ಕೃಪೆಯೆಂದು ಭಾವಿಸಿದರೆ ತಪ್ಪಾಗಲಾರದು.

ಸಾಹಿತ್ಯ ಪರಿಷತ್ತು ಅಧ್ಯಕ್ಷ ಪದವಿಯಿಂದ ನಿರ್ಗಮಿಸಿದ್ದರೂ ಸಹ ೧೯೯೮ರಲ್ಲಿ ನಾನು ಚುಟುಕುಗಳೆಂದು ಭಾವಿಸಿ ಬರೆದಿದ್ದ ''ಕೋಲ್ಮಿಂಚು'' ಪುಸ್ತಕಕ್ಕೆ ಮುನ್ನುಡಿ ಬರೆದುಕೊಡಬೇಕೆಂದು ಪ್ರಾರ್ಥಿಸಿಕೊಂಡಾಗ ಹಿಂದುಮುಂದು ನೋಡದೆ ಸಂತೋಷವಾಗಿ ಒಪ್ಪಿ ಹಸ್ತಪ್ರತಿಯನ್ನು ಸ್ವೀಕರಿಸಿ, ಅದನ್ನು ಅಮೂಲಾಗ್ರವಾಗಿ ಪರಿಶೀಲಿಸಿ ಇದು ಚುಟುಕುಗಳಲ್ಲವೆಂದೂ ಕಗ್ಗ, ಕಂತೆ, ಬೊಂತೆಗಳ ಸಾಲಿಗೆ ಸೇರುವ ಅರ್ಹತೆ ಪಡೆದಿದೆಯೆಂದೂ ಸೂಚಿಸಿ ತುಂಬ ಹೃದಯದಿಂದ ಮುನ್ನುಡಿ ಬರೆದುಕೊಟ್ಟು ಆಶೀರ್ವದಿಸಿದುದು ಕಿರಿಯದರಲ್ಲಿಯೂ ಹಿರಿಯದನ್ನು ಗುರುತಿಸುವ ಸೌಜನ್ಯಶೀಲರೆಂದು ಭಾವಿಸುವುದು ಹೊಗಳಿಕೆಯ ಮಾತಲ್ಲ!

ಬೆಂಗಳೂರು ಆಕಾಶವಾಣಿ ಕೇಂದ್ರದವರು ಪ್ರತಿ ಶನಿವಾರ ಬಿತ್ತರಿಸುತ್ತಿದ್ದ ''ಬಾಳಬಾಳಗು'' ಕಾರ್ಯಕ್ರಮದಲ್ಲಿ ಒಮ್ಮೆ ಕಿವಿಕೊಟ್ಟಾಗ ಪರಿಚಿತ ಧ್ವನಿ ಸಂಭಾಷಣೆಯಲ್ಲಿ ತೊಡಗಿದ್ದುದು ಕೇಳಿ ಕುತೂಹಲ ಕೆರಳಿತು. ನನ್ನ ಊಹೆ

ನಿಜವಾಯಿತು. ಅದು ಡಾ॥ ಸಾ.ಶಿ.ಮ. ಅವರ ಸತಿಪತಿಗಳ ಸಹಜ ಸಂಭಾಷಣೆ. ಕಾರ್ಯಕ್ರಮ ಪೂರ್ತಿ ಕೇಳಿದೆ. ಕಣ್ಣು ಮಿಡಿಯಿತು. ಕನ್ನಡದ ಹೆಸರಾಂತ ಸಪ್ತಾಕ್ಷರಿ ಮಂತ್ರದ ಮುದ್ದಣ ಮನೋರಮೆಯರನ್ನು ನೆನಪಿಗೆ ತಂದಿತು. ಜಗದಣ್ಣ ಬಸವಣ್ಣನವರ ನುಡಿಯಂತೆ ''ಸತಿಪತಿಗಳೊಂದಾದ ಭಕ್ತಿ'' ಮೈಗೂಡಿಸಿಕೊಂಡಿರುವ ಆದರ್ಶ ದಂಪತಿಗಳೆನಿಸಿರುವುದು ಬಹು ಜನ್ಮದ ಪುಣ್ಯವಿಶೇಷ. ಎಂದು ಭಾವಿಸಬಹುದು.

ಇಂತಹ ಪ್ರತಿಭಾನ್ವಿತ ಮಹನೀಯರನ್ನು ಎಪ್ಪತ್ತು ವರ್ಷಗಳು ತುಂಬಿದ ಸವಿನೆನಪಿಗಾಗಿ ಅವರ ಆತ್ಮೀಯ ಅಭಿಮಾನಿಬಂಧುಗಳು ಅಭಿನಂದಿಸುವ ಬೃಹತ್ ಕಾರ್ಯಕ್ರಮ ಹಮ್ಮಿಕೊಂಡಿರುವುದು ಶ್ಲಾಘನೀಯ. ಆ ಸಂದರ್ಭದಲ್ಲಿ ಹೊರತಂದು ಅರ್ಪಿಸಲಿರುವ ಸಂಸ್ಮರಣ ಸಂಚಿಕೆಗೆ ನಾಡಿನ ಹಿರಿಯ ವಿದ್ವಾಂಸರೂ, ಹಿರಿಯ ಸಾಹಿತಿಗಳೂ, ಕವಿಗಳೂ ಬರೆದು ಸಮರ್ಪಿಸುವ ಲೇಖನಗಳ ಮಹಾಪೂರದಲ್ಲಿ ನನ್ನದೊಂದು ಹನಿಯನ್ನು ಅದರಲ್ಲಿ ಸೇರಿಸಬೇಕೆಂಬ ಮಹತ್ವಾಕಾಂಕ್ಷೆ ನನ್ನದು.

ಪೂಜ್ಯ ಡಾ॥ ಸಾ.ಶಿ. ಮರುಳಯ್ಯನವರು ಹಾಗೂ ಕುಟುಂಬವರ್ಗದ ಎಲ್ಲರಿಗೂ ದಯಾಮಯನಾದ ಪರಮಾತ್ಮನು ಆಯುರಾರೋಗ್ಯಭಾಗ್ಯಗಳನ್ನು ಕರುಣಿಸಿ ಇವರ ಸಾಹಿತ್ಯ ಸೇವೆ ನಿಡುಗಾಲ ಕನ್ನಡ ನಾಡಿಗೆ ಸಲ್ಲುವಂತೆ ಅನುಗ್ರಹಿಸಲೆಂದೂ ಪ್ರಾರ್ಥಿಸುತ್ತೇವೆ.

ಏಳು ಹತ್ತು ತುಂಬಿದೆ ಮಹವು ಮನದಿನಿಂದಿದೆ
ಶಿವದ ಬದುಕು ಸಾಗಿದೆ. ಜನತೆ ನಿಮ್ಮ ಮರೆಯದೆ
ಅಭಿನಂದನ ಸಲಿಸಿದೆ !

ನುಡಿಗಾರುಡಿಗ ಸಾ.ಶಿ.ಮ.

ನೀ.ನಾ. ಮಧ್ಯಸ್ಥ

ಅತ್ಯುತ್ತಮ ವಾಗ್ಮಿ, ಪ್ರಾಧ್ಯಾಪಕರಾದ ಡಾ. ಸಾಸಲು ಶಿವರುದ್ರಯ್ಯ ಮರುಳಯ್ಯನವರು ತಮ್ಮ ವಯಸ್ಸಿನ ಸಂಖ್ಯೆಯನ್ನೂ ಮೀರಿ, ಉತ್ತಮ ಗ್ರಂಥಗಳನ್ನು ಈಗಾಗಲೇ ಪ್ರಕಟಿಸಿ ವಿಖ್ಯಾತ ಸಾಹಿತಿಗಳಾಗಿದ್ದಾರೆ. ಅವರು ಶತಾಯುಷಿಗಳಾಗಿ ಶತಕಕ್ಕೂ ಮೀರಿ ಪ್ರಬುದ್ಧ ಕೃತಿಗಳನ್ನು ನೀಡಲಿ ಎಂದು ಹಾರೈಸುವುದರೊಂದಿಗೆ ಅವರ ಮೂರು ಪ್ರಕಟಿತ ಕೃತಿಗಳ ಮೂಲಕ, ನಾನು ಕಂಡ ಅವರ ಹೆಜ್ಜೆ ಗುರುತುಗಳನ್ನು ಅಳೆಯಲು ಪ್ರಯತ್ನಿಸುತ್ತೇನೆ. ಸಾಮಾನ್ಯರ ಕಣ್ಣಿಗೆ ತೀರಾ ಸಾಮಾನ್ಯವಾಗಿ ಕಾಣಿಸುವ ಈ ಮೂರು ಪುಸ್ತಕಗಳಲ್ಲಿ, ಅವರ ಅಸಾಮಾನ್ಯ ವಾಙ್ಮಯ ತಪಸ್ಸಿನ, ಸಾಹಿತ್ಯ ಸರ್ವಾರ್ಥಸಿದ್ಧಿಯ ಮತ್ತು ವಿದ್ವನ್ಮಾನ್ಯತೆಯ ಪರಿಚಯ ಆಗುತ್ತದೆ. ಸಂಖ್ಯೆ ಬೆಳೆಯುತ್ತಾ ಹೋದಂತೆ ಅಂತಃಸತ್ವವೂ ಪರಿಪಕ್ವವಾಗಿ ಪುಸ್ತಕಗಳಲ್ಲಿ ಹೊರಹೊಮ್ಮುವುದು ಅನುಭವ ಸಿದ್ಧವಾದುದರಿಂದ, ಇಷ್ಟಕ್ಕೇ ಅವರನ್ನು ಸೀಮಿತಗೊಳಿಸುವುದು ಧಾರ್ಷ್ಟ್ಯವಾದೀತು. ಬೆಳೆಯ ಗುಣವನ್ನು ಮೊಳಕೆಯಲ್ಲಿ ಕಂಡಂತೆ, ಚರಿಗೆ ತುಂಬಿಸಿದ ಅನ್ನ ಬೆಂದಿರುವುದನ್ನು, ಒಂದೆರಡು ಅಗುಳನ್ನಷ್ಟೇ ಹಿಸುಕಿ ನೋಡುವ ಸಂಸ್ಕೃತದ ಸ್ಥಾಲೀಪುಲಾಕ ನ್ಯಾಯದಂತೆ ಈ ಪ್ರಯತ್ನ.

ಆರಂಭದಿಂದಲೇ ಸಾ.ಶಿ.ಮ. ಮಾತುಗಳಲ್ಲಿ, ರಾಶಿಬರಹಗಳಲ್ಲಿ ಅವರ ನುಡಿಗಾರುಡಿ ಗೋಚರವಾಗುತ್ತದೆ. ಮಾತಿನ ಮೋಡಿ ಎಂಥವರನ್ನೂ ಆಕರ್ಷಿಸುತ್ತದೆ. ಗರಡಿಯಲ್ಲಿ ಪಳಗಿದವರಿಗೆ ಎಲ್ಲೆಲ್ಲೂ ವಿಜಯವೇ. ಗಾರುಡಿ ನಡೆಸುವ ಚಮತ್ಕಾರ ನವ್ಯ ಸಾಕ್ಷಾತ್ಕಾರವೇ ಆಗುತ್ತದೆ. ನಂಜು ಮಂಜಾಗಿ ಕರಗಿ ಹೋಗುತ್ತದೆ. ಆದುದರಿಂದಲೇ ಸಾ.ಶಿ.ಮ. ಎಂದರೆ ನುಡಿಗಾರುಡಿಗ. ''ಹೊಳೆದಂತೆ ಓಡುವ ಸುಕ್ಕು ಸಿಕ್ಕಿಲ್ಲದ ಪದದೋಘ'' ಇವರದೆಂದು'' ಖ್ಯಾತ ಕವಿ ಪು.ತಿ.ನ. ಹೇಳಿದ್ದಾರೆ. ಪರಿಶೀಲನೆಗಾಗಿ, ಪ್ರಕಟಣೆಯ ದೃಷ್ಟಿಯಿಂದ ಸುಮಾರು ಇಪ್ಪತ್ತೈದು ವರ್ಷಗಳ ಅಂತರವುಳ್ಳ ಪುಸ್ತಕಗಳನ್ನು ಆಯ್ದುಕೊಂಡಿದೆ.

''ನೆಲದ ಸೊಗಡು'' ಸಣ್ಣ ಕಥೆಗಳ ಸಂಕಲನ, ೧೯೭೬ರಲ್ಲಿ ಪ್ರಕಾಶನ ಗೊಂಡಿರಬೇಕು. ಆ ಪುಸ್ತಕದಲ್ಲೆಲ್ಲೂ ವರ್ಷದ ಸೂಚನೆಯಿಲ್ಲ. ಇದರಲ್ಲಿ ಬಂದ ಹನ್ನೆರಡು ಕಥೆಗಳೂ ತುಂಬಾ ಹಳೆಯವು. ಕೆಲವು ಆಗಲೇ ಇಪ್ಪತ್ತೈದು ಯುಗಾದಿಗಳನ್ನು ಕಂಡಿವೆಯೆಂದು ಲೇಖಕರೇ ಹೇಳಿದ್ದಾರೆ. ಅಂದರೆ, ಪ್ರೌಢಶಾಲಾ ದಿನಗಳಿಂದ, ಅಧ್ಯಾಪಕನಾಗುವವರೆಗೂ ಆಗಾಗ ಬರೆದ ಕಥೆಗಳಾಗಿವೆ. ಬೆಂಗಳೂರಿನಲ್ಲಿ ಪ್ರಕಟವಾಗುತ್ತಿದ್ದ 'ಪೌರವಾಣಿ'ಯಲ್ಲಿ ಸಾ.ಶಿ.ಮು.ರ ಕಥೆ-ಕವನಗಳು ಪ್ರಕಟಗೊಂಡುವಂತೆ. ೧೯೬೧ರಲ್ಲಿ ತಾಯಿನಾಡು ದಿನಪತ್ರಿಕೆಯ ದೀಪಾವಳಿ ಕಥಾಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದ ಕಥೆ ''ಗ್ರಾಮಗಾಂಧಿ'',

ಜನಪ್ರಗತಿಯಲ್ಲಿ ''ಆವಾವ ಪರಿಯಲ್ಲಿ ಕಾಡಿತ್ತು ಮಾಯೆ'' ಶ್ರೀ ನಾಡಿಗೇರ ಕೃಷ್ಣರಾಯರ ಮೆಚ್ಚುಗೆ ಪಡೆದು ಪ್ರಕಟವಾಗಿತ್ತು. ಶಾಲಾದಿನಗಳಲ್ಲಿಯೇ ಈ ಮೊಳಕೆಯನ್ನು ಗುರುತಿಸಿ ಪ್ರೋತ್ಸಾಹಿಸಲಾಗಿತ್ತು. ಉತ್ಸಾಹಕ್ಕೆ ತಕ್ಕ ಪ್ರೋತ್ಸಾಹ, ಪ್ರತಿಭೆಗೆ ತಕ್ಕ ಪರಿಪೋಷಣೆ, ಅಭ್ಯಾಸಕ್ಕೆ ಅವಕಾಶ, ಉತ್ತಮ ಗುರುಪರಂಪರೆ, ಅರ್ಹತೆಯನ್ನು ಅರಸಿ ಬಂದ ಪ್ರತಿಯೊಂದು ಅವಕಾಶವೂ ಈ 'ನೆಲದ ಸೊಗಡ'ನ್ನು ಹೊರಹೊಮ್ಮಿಸಿದೆ. ಸಾ.ಶಿ.ಮ.ರ ಬಹುಶಃ ಒಂದೇ ಒಂದು ಸಣ್ಣ ಕತೆಗಳ ಸಂಕಲನಕ್ಕೆ ಇಟ್ಟಹೆಸರು. ಅದರಲ್ಲಿರುವ ಅದೇ ಹೆಸರಿನ ಮೊದಲ ಕಥೆಯಂತೆ, ಅವರಿಗೂ ಅನ್ವರ್ಥವಾಗಿದೆ. ಆ ಸಂಕಲನದ ಹೆಚ್ಚಿನ ಕಥೆಗಳಲ್ಲಿ ಒಂದೊಂದು ನೆಲದ ಸೊಗಡು ತೋರಿಬಂದು, ವ್ಯಷ್ಟಿಯ ದೃಷ್ಟಿ, ಸಮಷ್ಟಿಯ ಪುಷ್ಟಿಯಾಗಿದೆಯೆಂದು, ಅಂದು ಹೇಳಲು ಅವಕಾಶವಾಗದೆ ಇಂದು ಹೇಳುತ್ತಿದ್ದೇನೆ. ಸತ್ಯಕ್ಕೆ ಕಾಲಬಂಧನವಿಲ್ಲ. ಆದರೆ, ಸರಕಿಗೆ ಸರಿಯಾದ ಬೆಲೆ ಬರುವುದು ಕಾಲವನ್ನೇ ಅವಲಂಬಿಸಿದೆ. ಬಾರದೆ ಇರುವುದೂ ಇದೆ. ಸರಿಯಾದ ಗಿರಾಕಿಯೂ ಬೇಕಲ್ಲ?

ಸಂಕಲನಕ್ಕೆ ಹೆಸರಾದ 'ನೆಲದ ಸೊಗಡು' ಆಂಗ್ಲ ಕಥಾಧಾರಿತವೆಂದು ಕೊನೆಯಲ್ಲಿ ಕೊಟ್ಟ ಸೂಚನೆಯಿಂದಷ್ಟೇ ತಿಳಿಯಬೇಕು. (ಎಷ್ಟೋ ಮಂದಿ ಬಲ್ಲ ಬಲ್ಲಿದರೂ ಇಂಥಾ ಋಣವನ್ನು ಪ್ರಸ್ತಾಪಿಸಿರುವುದಿಲ್ಲ. ಸಾ.ಶಿ.ಮ. ಪ್ರಾಮಾಣಿಕತೆಯನ್ನು ಮೆಚ್ಚಲೇಬೇಕು) ಭಾರತ ಚೀನಾ ಯುದ್ಧದಲ್ಲಿ ಶತ್ರುಗಳಿಗೆ ಸೆರೆಸಿಕ್ಕ ಭಾರತೀಯ ಯೋಧನ ಕೊನೆಗಾಲದ ಕನಸಾಗಿ, ಅನಿಸಿಕೆಯಾಗಿ ಹಿಂದೆಮುಂದೆ ಸಾಗುವ ಈ ಕಥೆ, ತಂತ್ರದೃಷ್ಟಿಯಿಂದಲೂ ಆ ಕಾಲಕ್ಕೆ ಹೊಸತು. ಇದು ಸಾ.ಶಿ.ಮ. ಮಾರ್ಗ. ನಾಡುನುಡಿಗಳ ಬಗ್ಗೆ, ತಾಯ್ನಾಡಿನ ಪವಿತ್ರ ಮೃತ್ತಿಕೆಯ ಬಗ್ಗೆ ಅದೆಷ್ಟು ಅಭಿಮಾನ! (ಉಪಪಠ್ಯವಾಗಿಯಾದರೂ ಈ ಪುಸ್ತಕ ವಿದ್ಯಾರ್ಥಿಗಳಿಗೆ ಸಿಗುವಂತಾದರೆ, ಮುಂದಿನ ಜನಾಂಗ ಸುಧಾರಿಸೀತು.)

ಎರಡನೆ ಕಥೆ ''ಆವಾವ ಪರಿಯಲ್ಲಿ ಕಾಡಿತ್ತು ಮಾಯೆ'' ಎಲ್ಲರ ಬಾಲ್ಯದ ಕಥೆಯೂ ಹೌದು. ''ಚೀಟಿಲಂಗ, ಚಾಟಿ ಜಡೆಯ ಹುಡುಗಿ ಎಳವೆಯಲ್ಲಿ ಒಡನಾಡಿಯಾಗಿ, ಬಿಳಿಕುಪ್ಪಸ ಬಿರೀತಾ ಇದ್ದಂತೆ ದೂರವಾಗ್ತಾಳೆ. ಮೊನ್ನೆ ಮೊನ್ನೆ ಜೊತೆ ಆಡ್ತಾ ಇದ್ದೋಳು ಈಗ ಹೆಣ್ಣಾಗ್ಗಿ ಬಿಟ್ಟಿದ್ದಾಳೆ, ತಂಗಿಗೆ ತಾಳಿ ಕಟ್ಟುವುದುಂಟೇ?'' ಇದು ಈ ನೆಲದ ಸಂಸ್ಕಾರ (ಸೊಗಡು)

ಮೂರನೆ ಕಥೆಯ ಹೆಸರೇ ''ಭಾರತದರ್ಶನ''. ಅಲೆಗ್ಸಾಂಡರ್ ಪೋರಸರ ಮುಖಾಮುಖಿ ಸಂದರ್ಭ. ಇದನ್ನು ವಿವಿಧ ಸಾಹಿತ್ಯಪ್ರಕಾರಗಳಲ್ಲಿ ಸಾವಿರಾರು ಮಂದಿ ಬರೆದಿದ್ದಾರೆ. ವಸ್ತು ಹಳೆಯವಾದರೂ ಸಾ.ಶಿ.ಮ. ''ಅಭಿವ್ಯಕ್ತಿ'' ಹೊಸದು, ಗ್ರೀಕರಿಗೆ ಕೇವಲ ರುದ್ರನಾಟಕಗಳನ್ನಷ್ಟೇ, ಅಲ್ಲ, ವೈನೋದಿಕ ಪ್ರಹಸನಗಳನ್ನೂ ಅಭಿನಯಿಸುವ ಕಲೆ ಗೊತ್ತಿದೆ. ಆದರೆ, ಇದು ಅಲೆಗ್ಸಾಂಡರ್‌ನ ನಟನೆಯಲ್ಲಿ, ಅಂತರಾತ್ಮನ ಪ್ರೇರಣೆಯಿಂದ ಬಂದ ಸಹಜ ವಿನ್ಯಾಸ. ವೀರ ಮಾತೆಯ ಮಕ್ಕಳೆಲ್ಲರೂ ಸೋದರರೆನ್ನುವ ಪುರುವಿನ ಮಾತು ವಿಶ್ವಕ್ಕೆ ನೀಡಿದ ಭಾರತದರ್ಶನ. ಪರಿಣಾಮವಾಗಿ ಅಲೆಗ್ಸಾಂಡರನಿಂದ, ಗೋಮಾಂಸ ಭೋಜನದ ಸಂಪೂರ್ಣ ನಿಷೇಧ! ಆರೇಳು ತಿಂಗಳ ಮಕ್ಕಳನ್ನು ಬೆಟ್ಟದ ತುದಿಯಿಂದ ತೂರಿ, ಬದುಕಿದವರನ್ನು ಸಾಕಿ ಬೆಳೆಸುವ ದಂತಕಥೆಯನ್ನು

ಗಮನಿಸಬೇಕು. ಹಿಂದುಕುಷ್ ಪರ್ವತದ ಹಾಸುಪ್ರದೇಶದಲ್ಲಿ ಉಪನಿಷತ್ತಿನ ಋಷಿ, ಲಾಂದ್ರವನ್ನಿಟ್ಟುಕೊಂಡ ಅಂಧ, ಬೌದ್ಧ ಭಿಕ್ಷು, ಜೈನ ಶ್ರಾವಕ ಇವರೆಲ್ಲರ ಮೂಲಕ ಭಾರತದರ್ಶನ ಸಾರ್ಥಕವಾಗಿದೆ. ಸೊಗಸಾದ ಕಲ್ಪನೆ ಯಥಾರ್ಥದಂತೆ ಮನಮುಟ್ಟುತ್ತದೆ. ಆದರೆ ಪುಟ ೪೩ ರಲ್ಲಿ ಅಸತೋ ಮಾ, ತವಸೋಮಾ ಪದಗಳ ನಡುವೆ ಅವಗ್ರಹ (ಽ) ಚಿಹ್ನೆ ಹಾಕಿದುದು ತಪ್ಪು. ಈ ಕಥೆಯ ಹಂದರ, ಮಾತಿನ ಶೈಲಿ, ಸತ್ಯಂ ಶಿವಂ ಸುಂದರಂ ಎನ್ನುವ ನಮ್ಮ ವಾಙ್ಮಯ ದರ್ಶನಕ್ಕೊಂದು ಮಾದರಿ.

ಬಹುಮಾನಿತ 'ಗ್ರಾಮಗಾಂಧಿ' ಗ್ರಾಮರಾಜ್ಯ ರಾಮರಾಜ್ಯಗಳ ಆದರ್ಶಹೊಂದಿ ಭಾಷೆಯ ಗ್ರಾಮೀಣ ಸೊಗಡನ್ನು ಮೆರೆದಿದೆ. ತಪ್ಪುಕಲ್ಪನೆಯ ಅನರ್ಥವನ್ನು ಮಣ್ಣಿನ ಭಾಷೆ-ರೇಷೆಗಳಲ್ಲಿ ಮೂಡಿಸಿದೆ. ''ಜನತೆಯನ್ನು ಜಾಗೃತಗೊಳಿಸಿ ಬುವಿಯಿಂದ ಭೂಮಕ್ಕೊಯ್ಯಬಹುದಾದ ಧರ್ಮ ಈಗ ಹೇಗಾಗಿದೆ? ನ್ಯಾಯಾಲಯವಾದರೂ ಅಷ್ಟೇ, ನಾಯಿ ಮಲಗುವ ಸ್ಥಳವಾದರೂ ಅಷ್ಟೇ... ಪರದೇಸಿಯಂತೆ ಅರಣ್ಯದಲ್ಲಿ ಅಡಗಿರುವುದಕ್ಕಿಂತ ತಾಯ್ನಾಡಿನ ಕಾರಾಗೃಹದಲ್ಲಿ ಕೊಳೆತು ಸಾಯುವುದು ಮೇಲು.'' ಇಂಥ ಮಾತುಗಳುಳ್ಳ ''ತೀರ್ಪು'' ಕತೆಯಲ್ಲಿ ಆಪಾದಯಿತ, ಆಪಾದಿತ, ಅನುಮೋದಕ, ಪ್ರತಿರೋಧಕ ಮುಂತಾದ ಪಾರಿಭಾಷಿಕ ಪದಗಳ ರಚನೆಯಾಗಿದೆ. ಈಗಿನ ಆಡಳಿತ ಭಾಷೆಗೆ ಇಂಥಾದ್ದು ಕಾಣಿಸದೇ?

''ಆ ಮುಖ ಈ ಮುಖ ಸ್ತ್ರೀಮುಖ'' ನಮ್ಮ ಸಮಾಜದ ವಿಷಮ ಸ್ಥಿತಿಗೆ ಕನ್ನಡಿ ಹಿಡಿದು ಕಿಡಿ-ನುಡಿಗಳಿಂದ ಚುಚ್ಚಿ ಎಚ್ಚರಿಸುತ್ತದೆ. ಸೀರೆ ಕಳ್ಳಿಯ ವಿವರಣೆ ಕಣ್ಣು ತೆರೆಸುವಂಥಾದ್ದು. ''ಇದೇ ಅಂತರಂಗಶುದ್ಧಿ'' ಕ್ರೈಸ್ತ ದರ್ಶನವಾದರೆ, ''ಪೈಗಂಬರರ ಕೊನೆಯ ದಿನಗಳು'' ಇಸ್ಲಾಂ ದರ್ಶನ. ''ಅಹಿಂಸಕ'' ಬೌದ್ಧದರ್ಶನ. ''ಮಾಮನೆಯಲ್ಲಿ'' ವೀರಶೈವ ಶರಣ ದರ್ಶನ. ''ಹಳೆಯ ಕಥೆಯನ್ನು ಹೊಸಕಾಲಕ್ಕೆ ತಕ್ಕಂತೆ ಹೊಸೆಯಲಾಗಿದೆ. ಕಾವ್ಯದ, ತತ್ವದ,ಹಾಗೂ ಭಾಷೆಯ ಬೆಡಗು ಗಮನಾರ್ಹ. ಅಂದಿನ ಅನುಭವ ಮಂಟಪ, ಇಂದಿಗೆ ಹೊಂದುವಂತೆ ಹರಿಜನ ಗಿರಿಜನ ಉದ್ಧಾರವನ್ನೂ ಒಳಗೊಂಡಿದೆ, ನಮ್ಮ ರಾಷ್ಟ್ರದಲ್ಲಿ ಇಂದು ಪ್ರತಿಕ್ಷೇತ್ರಕ್ಕೂ ಸುಧಾರಣೆಯ ಅಗತ್ಯ ಇದೆ ಪ್ರತಿಯೊಂದು ಅಂಗವೂ (ಮುಖ್ಯವಾಗಿ ಹೆಣ್ಣು) ರೂಪಾಂತರ ಗೊಳ್ಳುವ, ವೇಶ್ಯೆ ಗರತಿಯಾಗುವ - ವಿಧವೆ ಮರುಮದುವೆಯಾಗುವ ಅವಕಾಶ ಬೇಕೆನ್ನುವ ಕ್ರಾಂತಿವಾಣಿ, ಕಾರ್ಯಕಾರಿಣಿಯಾಗಬೇಕು.

'ಬಾಗೇಶ್ರೀ' ಒಂದು ರಾಗ. ಅದೇ ಕಥೆಯ ಹೆಸರು. ಕನ್ನಡದ ವೃತ್ತಿನಾಟಕ ಸಂಸ್ಥೆಗಳ ದುರಂತ - ಭಾವಾವೇಶದಲ್ಲಿ ಅರಿಯದೆ ಕೊಲೆಯನ್ನೇ ಮಾಡಿದ ಸನ್ನಿವೇಶ. ಹೀಗೆ ಅರಿಯದೆ ಕೊಲೆ ಆಗಿ ಹೋದಂತೆ, ರಂಗದಲ್ಲೇ ಮರಣ ಅಸಹಜವೆನಿಸಿದರೂ ಸಾಂಕೇತಿಕವಾಗಿ ತೆಗೆದುಕೊಳ್ಳಬೇಕು, ಈ ಕಥೆಯಲ್ಲಿ ಕನ್ನಡ ರಂಗಭೂಮಿಯ ಚಿತ್ರಣ, ನುಡಿ-ನೆಲ-ನೀರುಗಳಂತೆ ಕಲೆಯ ಮೇಲೂ ಅನ್ಯರ ಆಕ್ರಮಣ, ಮನ ಮುಟ್ಟುತ್ತದೆ.

ಅಂತಸ್ತನ್ನು ಮೀರಿದ ಎಳೆಮಕ್ಕಳ ಒಡನಾಟ, ಉತ್ಪ್ರೇಕ್ಷೆಯೆನಿಸಿದರೂ ಸಮಾಜದ ಅಪ್ರಿಯ ಸತ್ಯವಾಗಿ, ಮಕ್ಕಳ ಮುದ್ದುಮಾತಿನ ''ಅಮ್ಮ ನಾಣೆ ಮನೆ ಓತೀನಿ'' ಈ

ಸಂಕಲನದ ಹನ್ನೆರಡನೆ ಕಥೆ. ಪ್ರತಿಕಥೆಯಲ್ಲೂ ಬರುವ, ಕಣ್ಣಿಗೆ ಕಟ್ಟುವಂತಹ ನಿರೂಪಣೆ, ಕಾವ್ಯಮಯ ವರ್ಣನೆ, ಉದ್ದಕ್ಕೂ ಸಾಲಂಕೃತ ಪದಬಂಧ, ಇಂದಿನ ಸಾ.ಶಿ.ಮ. ರವರ ಸ್ವಾಧ್ಯಾಯ ಸಿದ್ಧಿಯನ್ನು ಹಂತ ಹಂತವಾಗಿ ಸಮರ್ಥಿಸುತ್ತದೆ.

೧೯೬೨ರಲ್ಲಿ ಪ್ರಕಟವಾದ ''ಕನ್ನಡ ಭಾಷಾಚರಿತ್ರೆ'' ಹೆಸರಿನಲ್ಲಿ ಹಿರಿದಾದರೂ, ಗಾತ್ರದಲ್ಲಿ ಕಿರಿದು. ಎಲ್ಲವೂ ಸೂತ್ರರೂಪವಾಗಿ, ''ಅಧ್ಯಯನದ ಹಾದಿಯಲ್ಲಿ ಗ್ರಂಥಮಾಲಿಕೆ''ಯ ಎರಡನೆ ಕುಸುಮ. ಈ ಪುಸ್ತಕದ ಕೊನೆಯಲ್ಲಿ ಐ.ಎ.ಎಸ್. ಮತ್ತು ಕೆ.ಎ.ಎಸ್. ಪ್ರಶ್ನಪತ್ರಿಕೆಗಳಿರುವುದರಿಂದ, ಹಾಗೂ ಶ್ರೀ ಕೆ.ಶಿವರಾಮು ಸಿದ್ಧಪಡಿಸಿದ ಮಾದರಿ ಉತ್ತರಗಳಿರುವುದರಿಂದ, ಪರೀಕ್ಷಾರ್ಥಿಗಳಿಗೆ ಅಧ್ಯಯನಕ್ಕಾಗಿ ಸಿದ್ಧಪಡಿಸಿದ್ದೆಂದು ತಿಳಿಯಬೇಕಾಗುತ್ತದೆ. ಉಳಿದ ಭಾಷಾಭ್ಯಾಸಿಗಳಿಗೆ ಸಂಕ್ಷಿಪ್ತವಾಗಿ, ಆದರೂ ಸುಸ್ಪಷ್ಟವಾಗಿ ಭಾಷಾಶಾಸ್ತ್ರದ ಹಾಗೂ ಕನ್ನಡ ಭಾಷೆಯ ಶಾಸ್ತ್ರೀಯ ಪರಿಜ್ಞಾನವನ್ನು ಒದಗಿಸುತ್ತದೆ. ಭಾಷೆ, ಅದರ ಸ್ವರೂಪ ಮತ್ತು ಸಾಮರ್ಥ್ಯ, ಭಾಷಾವರ್ಗೀಕರಣ, ಮೊದಲ ಭಾಗವಾದರೆ, ದ್ರಾವಿಡ ಭಾಷೆಗಳು ಎರಡನೆಯ ಭಾಗ. ಈ ಪ್ರಕರಣದಲ್ಲಿ ಅನುಷಂಗಿಕವಾಗಿ, ಸಂಸ್ಕೃತದಲ್ಲಿ ಲಿಂಗವಿವಕ್ಷೆ ಕೆಲವೆಡೆ ಶಬ್ದಾನುಸಾರಿಯೆನ್ನಲಾಗಿದೆ. ಕೆಲವೆಡೆ ಎನ್ನುವ ಅಗತ್ಯವಿರಲಿಲ್ಲ. ಸಂಸ್ಕೃತದ ಲಿಂಗ ನಿರ್ಣಯ ಶಬ್ದಾನುಸಾರಿಯೆಂದು ಮರುವಾಕ್ಯದಲ್ಲೇ ಸರಿಯಾಗಿ ಹೇಳಿದ್ದಾರೆ. ಹೆಂಡತಿ ಎಂದ ಅರ್ಥದ ದಾರಾ ಶಬ್ದ ಅಕಾರಾಂತ ಪುಲ್ಲಿಂಗ. ನಿತ್ಯ ಬಹುವಚನ ಎಂಬುದೂ ಒಂದು ವಿಶೇಷ. ಹಸ್ತ ಶಬ್ದ ಪುಲ್ಲಿಂಗವಾಗಲು ಸಕಾರವ್ಯಂಜನವಿರುವುದು ಕಾರಣವಲ್ಲ. ತ ಎಂದು ಅಕಾರಾಂತವಿದ್ದರೂ ಪುಲ್ಲಿಂಗ ರೂಪವಾದದ್ದಲ್ಲ. ಅಕಾರಾಂತವಾದದ್ದು ಪುಲ್ಲಿಂಗ, ತಪ್ಪಿದರೆ ನಪುಂಸಕಲಿಂಗ ಅಥವಾ ಪುನ್ನಪುಂಸಕ ಲಿಂಗ (ಉಭಯಲಿಂಗ). ಹಿಂದಿಯಲ್ಲಿ ಫ್ ಅಂತವಾಗುಳ್ಳ ಶಬ್ದಗಳು ಒಂದೆಡೆಯಲ್ಲಿ ಕರ್ತೃಪದ ಪುಲ್ಲಿಂಗವಿದ್ದರೂ ಕ್ರಿಯಾಪದವು ಸ್ತ್ರೀಲಿಂಗ ಪ್ರತ್ಯಯ ಪಡೆಯುತ್ತದೆ ಎನ್ನುವುದು ವ್ಯಾಕರಣ ರೀತ್ಯಾ ಸರಿಯಲ್ಲ. ಉದಾಹರಣೆಗೆ ಕೊಟ್ಟ ''ರಾಮಾ ಉಸ್ಕೀ ತರಫ್ ಆಯಿ'' ಈ ವಾಕ್ಯ ತಪ್ಪು. ರಾಮನು ಆ ಕಡೆಯಿಂದ ಬಂದನು ಎಂಬ ಅನುವಾದವೂ ಸರಿಯಲ್ಲ. ಸಕರ್ಮಕ ಕ್ರಿಯಾಪದವು ಭೂತಕಾಲದಲ್ಲಿ ಕರ್ಮಪದದ ಲಿಂಗವನ್ನು, ಅದಕ್ಕೆ ಕೋ ಪ್ರತ್ಯಯವಿದ್ದರೆ ನಿತ್ಯ ಪ್ರಥಮ ಪುರುಷ ಪುಲ್ಲಿಂಗ ಏಕವಚನ ರೂಪವನ್ನು (ಭಾವೇಪ್ರಯೋಗದಂತೆ) ಹೊಂದುತ್ತದೆ. ಸಂಬಂಧ ಬೋಧಕ ಅವ್ಯಯವನ್ನು ಅನುಸರಿಸಿ ಹಿಂದೀ ವಾಕ್ಯ ''ರಾಮೆ ಉಸ್ಕೀ ತರಫ್ ಆಯಾ'', (ರಾಮನು ಅವನ/ಳ/ಅವರ ಕಡೆಗೆ ಬಂದನು. (ಉಸ್ಕೀತರಫ್ ಸೇ = ಅವನ/ಳ/ವರ ಕಡೆಯಿಂದ). ರಾಮಾ (ಹೆಣ್ಣಾದರೆ) ಉಸ್ಕೀ ತರಫ್ ಆಯಿ ಎಂಬುದು ಸರಿ. ''ಸಂಸ್ಕೃತದ ಲಿಂಗ ನಿರ್ಣಯ ಗೋಜಲಾದುದರಿಂದ, ಶುದ್ಧರೂಪದಲ್ಲಿ ಆಡುತ್ತೇವೆಂಬ ಧೈರ್ಯ ಕಲಿತವರಿಗೆ ಬರುವುದಿಲ್ಲ'' ಎಂಬುದೂ ಸರಿಯಲ್ಲ. ಸಂಸ್ಕೃತ ಮಾತನಾಡದಿರಲು ಕಾರಣ ಅಭ್ಯಾಸವಿಲ್ಲದ್ದೇ ಹೊರತು, ಭಾಷೆಯ ಪ್ರೌಢಿಮೆ ಅಥವಾ ಗೋಜಲು ಕಾರಣವಲ್ಲ. ವ್ಯಾಕರಣದ ನಿರ್ಬಂಧವೇ ಅದನ್ನು ಮೃತ(?) ವಾಗಿಸಿದ್ದು.

ದ್ರಾವಿಡ ಭಾಷೆಗಳ ಅದರಲ್ಲೂ ಕನ್ನಡದ ವೈಶಿಷ್ಟ್ಯವನ್ನು ಪ್ರಾಮಾಣಿಕವಾಗಿ

ಸಾ.ಶಿ.ಮ. ರವರು ನಿರೂಪಿಸಿದ್ದಾರೆ. ಕನ್ನಡ ಅಥವಾ ದ್ರಾವಿಡದಲ್ಲಿ ಪ್ರತ್ಯೇಕ ವಿಭಕ್ತಿ ಪ್ರತ್ಯಯಗಳಲ್ಲಿ ಎನ್ನುವುದು. ದಿಟವಾದರೂ (ವ್ಯಾಕರಣದ ಮಮಿಂಕೆಯುದದೊಳ್ ಅಪ್ರಸ್ತುತ) ಅನ್ಯಭಾಷೆಗಳ ಪ್ರಭಾವದಿಂದ ವಿಭಕ್ತಿಗಳೂ ಪ್ರತ್ಯಯಗಳೂ ವಾಡಿಕೆಯಲ್ಲವೆ. ಸಂಸ್ಕೃತದಲ್ಲಿ ವಿಭಕ್ತಿ ವಚನಗಳ, ಪುರುಷವಚನಗಳ ರೂಪ ವೈವಿಧ್ಯ ಅದನ್ನು ಕಬ್ಬಿಣದ ಕಡಲೆಯನ್ನಾಗಿಸಿದೆ. ಸುಲಿದ ಬಾಳೆಯ ಹಣ್ಣಿನಂತಿರುವ ಕನ್ನಡದಲ್ಲಿ ಎರಡೇ ಕಾಲಗಳು ಸಮಂಜಸವಾದರೂ, ಈ ಭಾಷೆಗೆ ಹೊಂದದ ಸಂಸ್ಕೃತದ ಸಂಧಿ-ಸಮಾಸ-ವಿಭಕ್ತಿ-ಕಾಲ ಪ್ರಕಾರಗಳನ್ನೇ ಶಾಲೆಗಳಲ್ಲಿ ಯಾಕೆ ಕಡ್ಡಾಯವಾಗಿ ಕಲಿಸಲಾಗುತ್ತಿದೆಯೋ! ಸಂಸ್ಕೃತವನ್ನು ಪ್ರಥಮ ಭಾಷಾ ಸ್ಥಾನದಿಂದ ಸರಿಸಿರುವಾಗ, ಕನ್ನಡ ಹಿಂದಿಗಳಲ್ಲೂ ಸಂಸ್ಕೃತದ ಛಂದೋಽಲಂಕಾರ ವ್ಯಾಕರಣಗಳಿಗೆ ಜೋತು ಬಿದ್ದಿರುವುದು ಪಾರಿಭಾಷಿಕಗಳಿಗಾಗಿ ಸಂಸ್ಕೃತವನ್ನೇ ಆಶ್ರಯಿಸುವುದು ತಪ್ಪಬೇಕು. ಕನ್ನಡಭಾಷಾ ವೈಶಿಷ್ಟ್ಯ, ಅವಸ್ಥಾಭೇದ, ಪ್ರಾಂತಭೇದ ಅಥವಾ ಕನ್ನಡ ಉಪಭಾಷೆಗಳು ಮತ್ತು ಕನ್ನಡ ಒಂದು ಜೀವಂತ ಭಾಷೆಯಾಗಿ - ಈ ಎಲ್ಲಾ ಶೀರ್ಷಿಕೆಗಳು ಒಂದೊಂದೇ ಬೃಹದ್ಗ್ರಂಥವಾಗಬಲ್ಲುವಾಗಿ, ಇಲ್ಲಿನ ಸಂಕ್ಷೇಪ ಇತರರಿಗೆ ಮಾರ್ಗದರ್ಶಿ ಸ್ಫೂರ್ತಿಯಾಗುತ್ತದೆ.

ಆರು ವಿಮರ್ಶಾತ್ಮಕ ಲೇಖನಗಳನ್ನು ಹೊಂದಿದ ''ಅಭಿವ್ಯಕ್ತಿ'' ೧೯೯೩ರಲ್ಲಿ ಪುಸ್ತಕ ರೂಪವಾಗಿ ಪ್ರಕಟವಾದರೂ, ಬೇರೆ ಬೇರೆ ಸಂದರ್ಭಗಳಲ್ಲಿ ಸಾ.ಶಿ.ಮ. ನೀಡಿದ ಉಪನ್ಯಾಸ-ಪ್ರಬಂಧಗಳ ಸಂಕಲನ ಇದು. ಪ್ರತಿಲೇಖನದ ಬಗೆಗೂ ಒಂದೊಂದು ನುಡಿಮುತ್ತನ್ನೇ ಪೋಣಿಸಿ, ಮುನ್ನುಡಿಯ ಮಾಲೆ ಹಾಕಿದವರು ಉಪಕುಲಪತಿ ಡಾ॥ ಎಂ.ಎಂ. ಕಲಬುರ್ಗಿಯವರೆಂದ ಮೇಲೆ ಉಳಿದವರು ಅನುಮೋದಿಸಿದರೆ ಸಾಕು. ''ಅಭಿವ್ಯಕ್ತಿಯಲ್ಲಿ ವ್ಯಕ್ತಿ ಕಾಣಿಸಿಕೊಳ್ಳುತ್ತಾನೆ, ಕಾಣಿಸಿಕೊಳ್ಳಬೇಕು'' ಎಂದು ಅವರು ಹೇಳಿದಂತೆ, ಸಾ.ಶಿ. ಮರುಳಯ್ಯನವರ ಉದಾತ್ತ ಆಚಾರ್ಯತ್ವ, ಹಲವು ತತ್ವಗಳ ಸಮನ್ವಯ. ಸಮೀಕರಣಾಗತಿ ಮೂಲಕ ಸುಸ್ಪಷ್ಟವಾಗಿದೆ.

''ಕವಿ ವಿಮರ್ಶಕನಾಗಿ, ವಿಮರ್ಶಕನು ಕವಿಯಾಗಿ'' ಎಂಬ ಮೊದಲ ಲೇಖನದಲ್ಲಿ ಇಬ್ಬರೂ ಆದ ಸಾ.ಶಿ.ಮ. ಇಬ್ಬರನ್ನೂ ಬೇರೆ ಬೇರೆ ತೂಗಿ ಒಂದು ಗೂಡಿಸಿದ್ದಾರೆ. ''ಆದಿ ಪುರಾಣದೊಳರಿವುದು'' ಆದಿ ಕವಿ ಪಂಪನ ಆದಿಪುರಾಣದ ರಸಘಟ್ಟಗಳ ಸಮೀಕ್ಷೆ. ಜೈನಧರ್ಮದ ಜಿಜ್ಞಾಸೆಯೂ ಅದರಲ್ಲಿ ನಡೆದಿದೆ. ಪಂಪನ ಅಭಿವ್ಯಕ್ತಿಯನ್ನು, ಪ್ರತಿಭೆಯನ್ನು, ಅನನ್ಯಾದೃಶ ಕವಿತಾಸಾಮರ್ಥ್ಯವನ್ನು ಸೋದಾಹರಣವಾಗಿ ವಿವರಿಸಿ ಟಿಪ್ಪಣಿ ಕೊಟ್ಟಿದ್ದಾರೆ. ''ಕಾವ್ಯ ಎನ್ನುವುದು ಎಂದಿಗೂ ಕವಿಯ ಸಿದ್ಧಾಂತ ಅಲ್ಲ, ಅದು ಅವನ ಅನುಭವದ ಅನಾವರಣ''. ಇಂಥಾ ಕಾವ್ಯಗಳ ಅಭ್ಯಾಸ (ಮಂಗನ ಕೈಯ ಮಾಣಿಕ್ಯದಂತೆ) ಈಗ ಉಪೇಕ್ಷಿಸಲ್ಪಟ್ಟಿರುವುದು ಸರ್ವಥಾ ಸಲ್ಲದು.

''ಕನ್ನಡ ಸಾಹಿತ್ಯವನ್ನು ವಿಶ್ವಸಾಹಿತ್ಯದ ಉನ್ನತಿಗೆ ಕೊಂಡೊಯ್ದು ಕೀರ್ತಿ ವಚನಕಾರರಿಗೆ ಸಲ್ಲುತ್ತದೆಂದು'' ವಚನಾಭಿವ್ಯಕ್ತಿಯನ್ನು ಪ್ರಾರಂಭಿಸಿದ ಸಾ.ಶಿ.ಯವರು ಲೇಖನದುದ್ದಕ್ಕೂ ನುಡಿಯ ಗಾರುಡಿಯೊಂದಿಗೆ ಸರಿಯಾದ ಮೌಲ್ಯಮಾಪನ

ನಡೆಸಿದ್ದಾರೆ. ಆಡುಮಾತಿಗೆ ಮಹತ್ವ ಕೊಟ್ಟಿದ್ದ ಶರಣರು ನುಡಿಯ ಗುಡಿಯಲ್ಲಿ ಶಿವನನ್ನು ಕಂಡರು. ಭಾವ-ಚನ, (ಭಾವಾಗೀತಾತ್ಮಕ ವಚನ) ಬೆಡ-ಚನ (ಬೆಡಗಿನ ವಚನ) ಗಳೆಂಬ ಹೊಸಶಬ್ದ ಹೊಸೆದು ಹೊಸ ಪ್ರಭೇದವನ್ನು ಮುಂದಿಟ್ಟ ಸಾ.ಶಿ.ಮ. ರಾಘವಾಂಕ ಮತ್ತು ವಚನಕಾರರ ವಿಚಾರಕ್ರಾಂತಿಯಲ್ಲಿ ಅಂದಿನ ಯಥಾರ್ಥತೆಯನ್ನು ಮನಗಾಣಿಸಿದರೆ'ಮನುಜಮತ ವಿಶ್ವಪಥ''ದ ಮೂಲಕ ಸಾಧಾರವಾಗಿ ನಿರೂಪಿಸಿದ್ದಾರೆ. ಇದಕ್ಕಾಗಿ ವಚನಗಳನ್ನು, ಶಾಸನಗಳನ್ನು, ಕೀರ್ತನೆಗಳನ್ನು, ಪ್ರಾಚೀನಾರ್ವಾಚೀನ ಕಾವ್ಯಗಳನ್ನು ಮಥಿಸಿ ಉದಾಹರಿಸಿದ್ದಾರೆ. ಮನುಜಮತ, ವಿಶ್ವಪಥ, ಸರ್ವೋದಯ, ಸಮನ್ವಯ, ಪೂರ್ಣ ದೃಷ್ಟಿಗಳೆಂಬ ಪಂಚಮಂತ್ರ, ಕುವೆಂಪುರವರ ವಿಶ್ವಮಾನವತ್ವದ ಸಪ್ತ ಸೂತ್ರಗಳು ಈ ದಿಸೆಯಲ್ಲಿ ಮಾರ್ಗದರ್ಶಿಗಳು.

''ಗೀತನಾಟಕಗಳ ಭಾಷೆ'' ಯಲ್ಲಿ ಭರತಮುನಿಯ ಪಾಠ್ಯಗುಣಗಳು ಅಪ್ರಸ್ತುತ. ಗೀತನಾಟಕಗಳು ಭಾರತಕ್ಕೆ ಪಾಶ್ಚಾತ್ಯರಾಷ್ಟ್ರಗಳಿಂದ ಇಂಗ್ಲಿಷ್ ಮೂಲಕ ಆಮದಾದ ಸರಕೆಂದರೂ, ಇವುಗಳ ರೂಪಾಂತರಗಳು, ಶೈಲಿ, ಅಭಿವ್ಯಕ್ತಿ, ಮಾರ್ಗಾಂತರತೆಗಳನ್ನು ತುಲನಾತ್ಮಕವಾಗಿ ವಿಮರ್ಶಿಸಲಾಗಿದೆ.

'ವಚನಾಭಿವ್ಯಕ್ತಿ'ಯ ಹೊರತು, 'ಅಭಿವ್ಯಕ್ತಿ'ಯೆಂಬ ಹೆಸರಿನ ಲೇಖನ ಈ ಸಂಕಲನದಲ್ಲಿ ಇಲ್ಲದಿದ್ದರೂ, ಎಲ್ಲದಕ್ಕೂ ಅದು ಒಪ್ಪುತ್ತದೆ. ಕವಿಯ ಹಾಗೂ ವಿಮರ್ಶಕರ ಅಭಿವ್ಯಕ್ತಿಯನ್ನು ಮೊದಲ ಲೇಖನದಲ್ಲಿ ವಿವೇಚಿಸುತ್ತಾ ''ವಿಮರ್ಶಕರೆಲ್ಲರೂ ಕವಿಗಳಾಗಬೇಕೆಂಬ ನಿಯಮವಿಲ್ಲ. ಆದರೆ ಕವಿ ಮನೋಧರ್ಮವನ್ನರಿಯುವ ಶಕ್ತಿಯನ್ನಂತೂ ಅವರು ಪಡೆದಿರಬೇಕು ಅವರ ವಿಮರ್ಶನಶಕ್ತಿ ಶುಷ್ಕಪಾಂಡಿತ್ಯವಾಗದೆ, ಶಾಸ್ತ್ರಜ್ಞಾನಗಳ ಜೊತೆಯಲ್ಲಿ ಕವಿಮನೋಧರ್ಮದ ಕಡೆಗೂ ಹರಿಯಬೇಕಾಗುತ್ತದೆ'' ಎಂದಿರುವುದು ಕವಿಯೂ ವಿಮರ್ಶಕನೂ ಸಹೃದಯನೂ ಆದ ಸಾ.ಶಿ.ಮ.ರ ನಿಶಿತಮತಿಯ ನಿಶ್ಚಿತ ಧೋರಣೆಯಾಗಿದೆ.

''ಮೊದಲು ಗುರುಮನೆಯಲ್ಲಿ ಬೆಳಕು ಕಂಡ ಭಾರತೀಯ ಸಾಹಿತ್ಯ, ಅನಂತರ ಅರಮನೆಗೆ ಕಾಲಿಟ್ಟಿತು. ಕೂಡಲೆ ಅಲ್ಲಿನ ಎಲ್ಲ ಕೊಳಚೆಯೂ ಅದಕ್ಕೆ ಅಂಟಿಕೊಂಡಿತು. ಬದುಕು ಸಂಕೀರ್ಣವಾದಂತೆ, ಪುಂಡು ರಾಜಕಾರಣಿ ಭ್ರಷ್ಟಾಚಾರಿಯಾದಂತೆ, ಧರ್ಮವೂ ಕಾಲಕ್ರಮೇಣ ಅಪಮೌಲ್ಯಗೊಂಡು ಜಾತಿಯ ಮಟ್ಟಕ್ಕಿಳಿಯಿತು. ತನ್ಮೂಲಕ ನೈತಿಕಪತನಕ್ಕೆ ಕಾರಣವಾಯಿತು.'' 'ಮನುಜಮತ ವಿಶ್ವಪಥ'ದ ಇಂಥ ಮಾತುಗಳು ಸಾ.ಶಿ.ಮ.ರ ವಿಶಿಷ್ಟ ಆಕರ್ಷಣೆ. ತಾನಾಗಿ ಹೊಂದಿಕೊಳ್ಳುವ ಅರ್ಥಗರ್ಭಿತ ಪದಬಂಧ - ಅದೇ ನುಡಿಗಾರುಡಿ ಓದಿಸಿಕೊಂಡು ಹೋಗುತ್ತದೆ. ವಿಚಾರಿಸುವಂತೆ ಮಾಡುತ್ತದೆ. ಮಾರ್ಗದರ್ಶಿಯಾಗುತ್ತದೆ.

ಮೋಡಿಗಾರ

ಸು.ತ. ರಾಮೇಗೌಡ

ಸಾ.ಶಿ. ಮರುಳಯ್ಯನವರು ವಾಕ್ ಚತುರತೆಯಿಂದ, ಎಲ್ಲರನ್ನೂ ಮರುಳು ಮಾಡಬಲ್ಲ ಮೋಡಿಗಾರ. ಮಾತನಾಡಲು ಧ್ವನಿವರ್ಧಕದ ಮುಂದೆ ನಿಂತರೆ, ಒಂದಕ್ಕೊಂದು ವಿಷಯ ಪೋಣಿಸಿಕೊಂಡು ಕಲಾತ್ಮಕವಾಗಿ ಮಾತನಾಡುತ್ತ, ಜನಸಮೂಹವನ್ನು ಮಂತ್ರ ಮುಗ್ಧರನ್ನಾಗಿ ಮಾಡಬಲ್ಲ ಗಾರುಡಿಗ.

೧೯೭೬ರಲ್ಲಿ ನಾನು ಪತ್ರಿಕೋದ್ಯಮದ ಬೆನ್ನು ಹತ್ತಿ ಚನ್ನಪಟ್ಟಣಕ್ಕೆ ಬಂದೆ. ಅಷ್ಟರಲ್ಲಿ ಇಲ್ಲಿನ ಶ್ರೀ ಕುವೆಂಪು ಮಹಾವಿದ್ಯಾಲಯ ಪ್ರಾರಂಭವಾಗಿ ಮೂರು ವರ್ಷಗಳು ಆಗಿದ್ದವು.

೮೦ರ ದಶಕದಲ್ಲಿ ಅವರು ಈ ಮಹಾವಿದ್ಯಾಲಯದ ಪ್ರಾಂಶುಪಾಲರಾಗಿ ಬಂದರು. ಆಗ ನನಗೆ ಹತ್ತಿರದಿಂದ ಅವರು ಪರಿಚಯವಾದರು.

ಮರುಳಯ್ಯನವರ ಪರಿಚಯ ಬೆಳೆಸಿಕೊಂಡಾಗ, 'ನಾವೆಲ್ಲಾ ಕುವೆಂಪು ಅವರ ಶಿಷ್ಯರು. ಕುವೆಂಪುರವರ ಹೆಸರಿನ ಈ ಮಹಾವಿದ್ಯಾಲಯದಲ್ಲಿ ಕೆಲವು ಕಾಲ ಸೇವೆ ಮಾಡಿ, ಆ ಕಾವ್ಯರ್ಷಿಗೆ ಗುರು ಕಾಣಿಕೆ ಸಲ್ಲಿಸುವುದು ನನ್ನ ಉದ್ದೇಶ' ಎಂದು ಹೇಳುತ್ತಿದ್ದರು.

ವಿದ್ವತ್ಪೂರ್ಣ, ಭಾಷಣಕಾರರಾಗಿದ್ದ, ಕಾವ್ಯಗಳ ವಿವಿಧ ಪ್ರಾಕಾರಗಳನ್ನು ಅರೆದು ಕುಡಿದಿದ್ದ, ಅವರನ್ನು ಅನೇಕ ಕಾರ್ಯಕ್ರಮಗಳಿಗೆ ಕರೆದು, ಮಾತನಾಡಿಸುವುದೇ ಆ ಕಾಲಕ್ಕೆ ಗೌರವದ ಕೆಲಸ.

ಭಾಷಾ ಪ್ರೌಢಿಮೆ, ವಿಷಯ ಮಂಡಿಸುವ ರೀತಿ, ವಿಷಯಗಳನ್ನು ಒಂದಕ್ಕೊಂದು ಪೋಣಿಸಿ, ಮಾತನಾಡುವ ಶೈಲಿಗೆ ನಾವೆಲ್ಲಾ ಒಂದಲ್ಲ ಒಂದು ರೀತಿಯಲ್ಲಿ, ಮುಗಿಬಿದ್ದವರು.

ಅವರು ಶಾಲೆಗಳ ಕಾರ್ಯಕ್ರಮವಾಗಲಿ, ಸಾರ್ವಜನಿಕ ಕಾರ್ಯಕ್ರಮ ಗಳಲ್ಲಿಯಾಗಲಿ, ಭಾಷಣಕಾರರಾಗಿ, ಅತಿಥಿಗಳಾಗಿ ಭಾಗವಹಿಸುವಾಗ, ಹೋಗುವುದು, ವರದಿ ಮಾಡುವುದೆಂದರೆ ಖುಷಿ. ಅವರೂ ಅಷ್ಟೇ, ಪತ್ರಿಕೆಯವನು ಎನ್ನುವುದಕ್ಕಿಂತ ಕಿರಿಯ ಸ್ನೇಹಿತನಾಗಿ, ಅಭಿಮಾನದಿಂದ ಗುರುತಿಸಿಕೊಂಡಿದ್ದರು.

ಮರುಳಯ್ಯನವರದ್ದು ವಿಶೇಷ ಗುಣ, ಚಿಕ್ಕವರು, ದೊಡ್ಡವರು ಎಂಬ ತಾರತಮ್ಯವಿಲ್ಲ. ಪ್ರತಿಯೊಬ್ಬರನ್ನು ಪ್ರೀತಿ ವಿಶ್ವಾಸದಿಂದ ಕಾಣುತ್ತಿದ್ದರು. ಸ್ನೇಹಮಯಿ. ಯಾರನ್ನೇ ಆಗಲಿ, ಪ್ರೀತಿ ವಿಶ್ವಾಸದಿಂದ ಕಂಡು, ಎಲ್ಲಾ ವರ್ಗದವರಿಗೂ ಹತ್ತಿರವಾಗುವ ಮನೋಪ್ರವೃತ್ತಿಯವರು.

ಯಾರೇ ಆಗಲಿ ಅವರಲ್ಲಿ ಒಮ್ಮೆ ವಿಶ್ವಾಸ ಮೂಡಿಸಿಬಿಟ್ಟರೆ, ಅವರ ಜೊತೆಯಲ್ಲಿ ಶಾಶ್ವತ ಸ್ನೇಹ ವೃದ್ಧಿಸಿಕೊಳ್ಳುತ್ತಿದ್ದರು.

ಕೆಲವು ಪ್ರಾಂಶುಪಾಲರನ್ನು ನಾನು ನೋಡಿದ್ದೇನೆ. ಅವರಾಯ್ತು, ಅವರ ಕೆಲಸವಾಯ್ತು, ಆಡಳಿತ ವೈಖರಿ ಆಯ್ತು. ಆದರೆ ನಮ್ಮ ಮರುಳಯ್ಯನವರು ಅವೆಲ್ಲವುಗಳಿಗೂ ಅಪವಾದ. ಶಿಕ್ಷಣ ಸಂಸ್ಥೆಯ ಒಳಗೇ ಅಲ್ಲ ಹೊರಗೂ ಸಹ ಸಂಬಂಧ ಕುದುರಿಸಿಕೊಂಡು ತಮ್ಮ ಪರಿಚಯದ ವ್ಯಾಪ್ತಿಯನ್ನು ವೃದ್ಧಿಸಿಕೊಂಡು ಹೋಗುವ ಜಾಯಮಾನದವರು.

ಅವರು ಹಾಗೂ ನಾನು ನಾಗವಾರ ಎಂಬ ಹಳ್ಳಿಗೆ ನಾಟಕ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಲು ಹೋಗಿದ್ದೆವು. ಆ ಹೊತ್ತಿನವರೆಗೂ ಅವರು, ನಾನು ಒಂದೇ ವೇದಿಕೆಯಲ್ಲಿ ಸೇರಿದ್ದಿಲ್ಲ.

ಹಳ್ಳಿಗಳ ನಾಟಕ ಎಂದರೆ ನಿಮಗೆ ಗೊತ್ತಲ್ಲ. ೧೦ಗಂಟೆಯ ಮೇಲೆ ಪ್ರಾರಂಭ. ಒಂದೆರಡು ದೃಶ್ಯ ಪ್ರದರ್ಶನವಾಗುವವರೆಗೂ ಅತಿಥಿಗಳ ಭಾಷಣ, ಮಾಡಿಸುವುದಿಲ್ಲ. ಅಲ್ಲಿಯೂ ಅದೇ ಆಯ್ತು. ಸುಮಾರು ೧೨ ಗಂಟೆ ಸುಮಾರಿಗೆ ನಮ್ಮನ್ನು ವೇದಿಕೆಗೆ ಕರೆದರು.

ಈ ನಾಟಕಗಳಲ್ಲಿ ಭಾಷಣ ಮಾಡುವುದು ಸುಲಭದ ಕೆಲಸವಲ್ಲ. ಎಷ್ಟೋ ಸಂದರ್ಭದಲ್ಲಿ ಶಿವಪೂಜೆಯಲ್ಲಿ ಕರಡಿ ಬಿಟ್ಟು ಗೊಂದಲ ಸೃಷ್ಟಿಸಿದಂತೆ.

ನಾನು ಗಮನಿಸಿದಂತೆ, ಭಾಷಣಕಾರರ ಭಾಷಣಕ್ಕೆ ಅಡ್ಡಿಪಡಿಸಿ ಸಿಳ್ಳೆ ಹೊಡೆಯುವುದು, ಚಪ್ಪಾಳೆ ತಟ್ಟುವುದು ಇವೆಲ್ಲವೂ ನಡೆಯುತ್ತದೆ. ಭಾಷಣಕಾರರೇ ಬೇಸರಗೊಂಡು ಭಾಷಣ ನಿಲ್ಲಿಸಬೇಕು ಅಂತಹ ಪರಿಸ್ಥಿತಿ ಮೂಡುತ್ತದೆ.

ಅದೇ ಕಲ್ಪನೆ, ನನ್ನಲ್ಲೂ ಇತ್ತು ಅವರು, ನೀವು ಮೊದಲು ಮಾತನಾಡಿ ಎಂದು ನನಗೆ ಅವಕಾಶ ನೀಡಿದರು. ನಾನು ಮಾತನಾಡಿದೆ, ಕೆಲವು ಹಳ್ಳಿ ನಾಟಕಗಳಲ್ಲಿ ಸಂಭವಿಸುವ ಘಟನೆಗಳನ್ನು ತಮಾಷೆ ಮಾಡಿದೆ. ಅವರಿಗೆ ಖುಷಿ ತಂದಿತು. ನಾನು ಮಾತು ಮುಗಿಸಿ ಬಂದಾಗ 'ಏನ್ ಗೌಡ್ರೆ, ನೀವು ಇಷ್ಟು ಚೆನ್ನಾಗಿ ಮಾತಾಡ್ತೀರಿ' ಎಂದು ಅಭಿನಂದಿಸಿದರು.

''ನಿಮ್ಮ ಮುಂದೆ ನಾವು ಎಲ್ಲಿ ಸಾರ್, ನೀವು ಹಿಮಾಲಯ, ನಾವೆಲ್ಲ ಸಣ್ಣಪುಟ್ಟ ಗುಡ್ಡಗಳು'' ಎಂದೆ. 'ಹಾಗೆಲ್ಲಾ ಏನಿಲ್ಲಾ ಯಾರ‍್ಯಾರಲ್ಲಿ ಏನೇನು ಪ್ರತಿಭೆ ಇರುತ್ತದೋ' ಎಂದು ಹೇಳಿದರು.

ಅವರಿಗೆ ಮಾತನಾಡಲು ಕರೆದಾಗ, ಹಳ್ಳಿಯ ಜನ ಹೇಗೆ ಸ್ಪಂದಿಸುತ್ತಾರೋ ಎಂಬ ಗುಮಾನಿ ಇತ್ತು.

ಆದರೆ ಅವರು ಮಾತನಾಡಲು ನಿಂತ ಮೇಲೆ ಜನರು ಮಂತ್ರ ಮುಗ್ಧರಾದರು. ನಾಟಕದ ಮಧ್ಯೆ 'ಇಷ್ಟು ಸಾಕು' ಎಂದು ಮಾತು ನಿಲ್ಲಿಸಲು ಪ್ರಯತ್ನ ಮಾಡಿದಾಗ, 'ಇನ್ನೂ ಮಾತಾಡಿ ಸ್ವಾಮಿ' ಎಂದು ಪ್ರೇಕ್ಷಕರ ಕಡೆಯಿಂದ ಕೂಗು ಬರಬೇಕೆ? ಅಷ್ಟರ ಮಟ್ಟಿಗೆ ಅವರು, ಅಲ್ಲಿನ ಪ್ರೇಕ್ಷಕರ ಮನಸ್ಸು ಗೆದ್ದು ಆಕರ್ಷಕವಾಗಿ ಮಾತನಾಡುತ್ತಿದ್ದರು.

ಅವರೇ ಎಚ್ಚರವಾಗಿ, 'ನಾಟಕ ಆಡುತ್ತಿರುವವರು ನಮ್ಮನ್ನು ಬೈಯ್ಯಬಾರದಲ್ಲ' ಎಂದು ಮಾತಿಗೆ ಪೂರ್ಣ ವಿರಾಮ ಹಾಕಿದರು. ಆಗ ಕರತಾಡನದ ಸುರಿಮಳೆ.

ಹೀಗೆ, ಅವರ - ನಮ್ಮ ಮಧ್ಯೆ ಬೆಳೆದ ಸಂಬಂಧ, ಅನೇಕ ಕಾರ್ಯಕ್ರಮಗಳಲ್ಲಿ ಒಟ್ಟಾಗಿ ಬೆರೆಯಲು ಬಿಡುವಿದ್ದಾಗ ಏನಾದರೂ ಒಳ್ಳೆಯದಿದ್ದರೆ ಚಿಂತಿಸುವ ಮಟ್ಟಿಗೆ ಎಳೆದುಕೊಂಡು ಹೋಯ್ತು.

ಶ್ರೀಯುತರು ಈ ಭಾಗದಲ್ಲಿ ಸ್ನೇಹ ಸೇತುವೆಯಾಗಿ ಬೆಳೆದಿದ್ದರು. ಎಲ್ಲರೊಡನೆಯೂ ಬೆರೆತು, ಇದ್ದಷ್ಟು ದಿವಸ ಈ ಭಾಗದ ಜನರ ಹಿರಿಯಣ್ಣನವರಾಗಿ, ಸಾಹಿತ್ಯ ಸಂಸ್ಕೃತಿ, ಶಿಕ್ಷಣ ಹಾಗೂ ಸಾರ್ವಜನಿಕ ಕ್ಷೇತ್ರದ ಕೊಂಡಿಯಾಗಿ ಬೆಳೆದಿದ್ದರು.

ಮರುಳಯ್ಯನವರು ಭಾಗವಹಿಸುವ ಕಾರ್ಯಕ್ರಮ ಎಂದರೆ, ಅದೊಂದು ವಿಶೇಷ ಕಾರ್ಯಕ್ರಮ ಎನ್ನುವ ರೀತಿಯಲ್ಲಿ ರೂಪುಗೊಳ್ಳುತ್ತಿತ್ತು.

ಅವರು ಕುವೆಂಪು ಮಹಾವಿದ್ಯಾಲಯದಿಂದ ನಿರ್ಗಮಿಸುವಾಗ ಬಂದಾಗಿನ ಉತ್ಸಾಹ ಉಳಿದಿರಲಿಲ್ಲ. ಹಲವು ರೀತಿಯ ಮಾನಸಿಕ ತಾಕಲಾಟದಿಂದಲೇ ನಿರ್ಗಮಿಸಿದರು.

ಅಂತಹ ಒಬ್ಬ ಸ್ನೇಹಮಯ ಮೋಡಿಗಾರ, ಎಲ್ಲರನ್ನೂ ಸಮಚಿತ್ತದಿಂದ ಪ್ರೀತಿಸುತ್ತಿದ್ದ ವ್ಯಕ್ತಿ, ಹಲವು ಆದರ್ಶಗಳ ಬೆನ್ನು ಹತ್ತಿ ಸದಾ ಕಾಲ ಅನ್ವೇಷಕರಾಗಿದ್ದ, ಎಲ್ಲರೊಳಗೊಂದಾಗಿದ್ದ ಬೆರೆಯುತ್ತಿದ್ದ ವ್ಯಕ್ತಿ ಇನ್ನೊಬ್ಬರನ್ನು ನಾನು ಕಂಡಿಲ್ಲ.

ಇಂತಹ ಅಪೂರ್ವ, ಮಾತಿನ ಮೋಡಿಗಾರ, ವಿಶ್ವಾಸ ಪಾತ್ರರಾದ ವ್ಯಕ್ತಿಗೆ ಅಭಿನಂದನೆ ಸಲ್ಲಿಸಲು ಮುಂದಾಗಿರುವುದು ಅಪೂರ್ವ. ಇಂತಹ ಮೇರು ಮನುಷ್ಯರಿಗೆ, ಇದೆಲ್ಲಾ ಚಿಕ್ಕದು ಎಂಬುದೇ ಭಾವನೆ. ಅವರು ಏನೆಲ್ಲಾ ಪ್ರಶಸ್ತಿ ಹಾಗೂ ಪುರಸ್ಕಾರ ಪಡೆದಿದ್ದರೂ ಕೂಡ, ಅವರು ಮಾಡಿದ ಸಾಧನೆಯ ಬಗ್ಗೆ, ಬದುಕಿದ ಬದುಕಿನ ಬಗ್ಗೆ ನಾಲ್ಕು ಒಳ್ಳೆಯ ಮಾತು ದಾಖಲಿಸಿ, ನಾಲ್ಕು ಒಳ್ಳೆಯ ಮಾತು ಆಡುವುದು ನೆನಪಿನ ಅಂಗಳದಲ್ಲಿ ಬಹಳ ಕಾಲ ಉಳಿಯುತ್ತದೆ.

ಹಿರಿಯ ಜೀವಿಯಾದ ಮರುಳಯ್ಯನವರಿಗೆ, ಆಯಸ್ಸು, ಆರೋಗ್ಯ ಸಮೃದ್ಧವಾಗಿ ದಕ್ಕಿ ಅವರು ಅನವರತ ಕನ್ನಡದ ಕೆಲಸ ಮಾಡುವಂತೆ ಆಗಲಿ ಎಂಬುದು, ಕಿರಿಯನಾದ ನನ್ನ ಆಶಯ.

ಡಾ. ಸಾ.ಶಿ. ಮರುಳಯ್ಯನವರು

ಜಯಾ ರಾಜಶೇಖರ್

ಶಿವಮೊಗ್ಗಾಕ್ಕೆ ಒಮ್ಮೆ ಹೋಗಿದ್ದಾಗ ನನ್ನ ಮೂರನೆಯ ತಮ್ಮ ಶಿವಕುಮಾರ್ ಅಲ್ಲಿಯ ಕರ್ನಾಟಕ ಸಂಘದಲ್ಲಿ ನಡೆಯಲಿದ್ದ, ತಾನೂ ಅಭಿನಯಿಸಲಿದ್ದ ಒಂದು ರಂಗಕಾರ್ಯಕ್ರಮಕ್ಕೆ ನನ್ನನ್ನೂ ಬಲವಂತಮಾಡಿ ಕರೆದುಕೊಂಡು ಹೋದನು. ಅಂದು ನಡೆದ ಕಾರ್ಯಕ್ರಮ ''ವೀರ ಭಾರತಿ'' - ಪೌರಾಣಿಕ ವಸ್ತುಗಳನ್ನಾಧರಿಸಿ ಬರೆದು ಅಭಿನಯಿಸಿದ ಬಿಡಿರೂಪಕಗಳು. ಅದರಲ್ಲಿ ''ಭೀಮ, ದುರ್ಯೋಧನರ ಗದಾಯುದ್ಧ'' ಎಂಬ ರೂಪಕದಲ್ಲಿ ನನ್ನ ತಮ್ಮ ಭೀಮನ ಪಾತ್ರ ವಹಿಸಿದ್ದನು.

ಕಾರ್ಯಕ್ರಮ ತುಂಬಾ ಚೆನ್ನಾಗಿ ಮೂಡಿಬಂತು. ಮಧ್ಯೆ ಮಧ್ಯೆ ನಿರೂಪಣೆ ನೀಡುತ್ತಿದ್ದವರು ರೂಪಕಗಳನ್ನು ಬರೆದು, ತಮ್ಮ ಶಿಷ್ಯರನ್ನು ತಯಾರು ಮಾಡಿದ್ದ ಇಂದಿನ ಸುಪ್ರಸಿದ್ಧ ಸಾಹಿತಿಗಳಾದ ಸಾ.ಶಿ. ಮರುಳಯ್ಯನವರು. ಆಗ ಇನ್ನೂ ಅವರಿಗೆ ಡಾಕ್ಟರೇಟ್ ಬಂದಿರಲಿಲ್ಲ. ಕಾರ್ಯಕ್ರಮ ಮುಗಿದ ನಂತರ ಶಿವಕುಮಾರ್ ಮರುಳಯ್ಯನವರನ್ನು ನನಗೆ ಪರಿಚಯಿಸಿದನು. ಶಿವಕುಮಾರ್ ಮತ್ತು ಅವನಿಗಿಂತ ಚಿಕ್ಕ ತಮ್ಮ ಅಪ್ಪಾಜಿ ಇಬ್ಬರೂ ಸಹ್ಯಾದ್ರಿ ಕಾಲೇಜಿನಲ್ಲಿ ಲೆಕ್ಚರರ್ ಆಗಿದ್ದ ಶ್ರೀ ಮರುಳಯ್ಯನವರ ಶಿಷ್ಯರು.

ಅಂದು ಅವರನ್ನು ಪರಿಚಯಿಸಿದಾಗ ಮೊದಲು ಅವರ ಹೆಸರಿನಿಂದ ತುಂಬಾ ಆತ್ಮೀಯ ಭಾವಹುಟ್ಟಿತು. ಏಕೆಂದರೆ ನನ್ನ ತಂದೆಯ ಹೆಸರೂ ಮರುಳಯ್ಯ. ಆ ಹೆಸರನ್ನು ಕೇಳಿದರೇ ಒಂದು ರೀತಿಯ ಹಿತ; ನನ್ನ ತಂದೆ ನನಗೆ ತೀರಾ ಪ್ರೀತಿಪಾತ್ರರು. ಅನಂತರ ಎಷ್ಟೋ ವರುಷಗಳು ಅವರನ್ನು ನೋಡಿರಲಿಲ್ಲ. ಇನ್ನೂ ಬೆಳೆಯುತ್ತಿದ್ದ ಅವರ ಹೆಸರು ಈಗಿನಷ್ಟು ಪ್ರಚಾರದಲ್ಲಿ ಇರಲಿಲ್ಲವಾಗಿ ಅವರ ಬಗೆಗೆ ಹೆಚ್ಚಾಗಿ ಕೇಳಿರಲೂ ಇಲ್ಲ.

ಆಮೇಲೆ ಕೆಲವು ವರ್ಷಗಳ ನಂತರ ನಾನೂ ನಮ್ಮವರೂ ನಮ್ಮ ಮನೆಯ ಗೇಟಿನ ಬಳಿ ಮನೆಗೆ ಬಂದಿದ್ದ ಯಾರನ್ನೋ ಬೀಳ್ಕೊಡಲು ಬಂದವರು ಇನ್ನೂ ಅಲ್ಲೇ ನಿಂತಿದ್ದೆವು. ಆಗ ಮರುಳಯ್ಯನವರು ಶಿವಮೊಗ್ಗಾ ಸುಬ್ಬಣ್ಣನೊಂದಿಗೆ ರಸ್ತೆಯ ಪಕ್ಕದಿಂದ ಬಂದವರು ನಮ್ಮನ್ನು ನೋಡಿ ನಿಂತರು. ಆಗ ಸುಬ್ಬಣ್ಣ ಇನ್ನೂ ಚಿಕ್ಕವನು. ಶಿವಮೊಗ್ಗಾದಲ್ಲಿ ನಮ್ಮ ಮನೆಯ ಹತ್ತಿರವೇ ಇದ್ದು ನನ್ನ ತಮ್ಮನ ಸಹಪಾಠಿಯಾಗಿದ್ದವನು. ಅದೇ ಬೀದಿಯಲ್ಲಿ ಇಬ್ಬರು ಮೂವರು ಸುಬ್ಬಣ್ಣ ಇದ್ದರು. ಒಬ್ಬನು ಕರಿಸುಬ್ಬಣ್ಣ, ಇವನು ಬಿಳಿಸುಬ್ಬಣ್ಣ. ಮತ್ತೊಬ್ಬನು ಇನ್ನೆಂಥಾದೋ ವಿಶೇಷಣ ಪಡೆದ ಸುಬ್ಬಣ್ಣ. ಈ ಬಿಳಿ ಸುಬ್ಬಣ್ಣನೇ ಇಂದು ಸುಗಮ ಸಂಗೀತ ಕ್ಷೇತ್ರದಲ್ಲಿ ಹೆಸರು ಮಾಡಿರುವ ಶಿವಮೊಗ್ಗಾ ಸುಬ್ಬಣ್ಣ.

ಆಗ ಮಧ್ಯಾನ್ಹದ ಹೊತ್ತು. ಅವರಿಬ್ಬರನ್ನೂ ಒಳಗೆ ಕರೆದೆವು. ಬಿಂಕ, ಬಿಗುಮಾನವಿಲ್ಲದೆ ಒಳಗೆ ಬಂದರು. ಅಂದು ಇಬ್ಬರೂ ನಮ್ಮಲ್ಲೇ ಊಟಮಾಡಿದರು. ಸುಬ್ಬಣ್ಣ ನಮ್ಮ ಕೋರಿಕೆಯಂತೆ ಹಾಡು ಹಾಡಿದನು. ಮರುಳಯ್ಯನವರು ಕೋಲಾರದಲ್ಲಿ ತಮ್ಮ ಶಿಷ್ಯರನ್ನು ಕರೆದುಕೊಂಡು ಕಾರ್ಯಕ್ರಮಕ್ಕೆ ಹೋಗಿ ಬಂದಿದ್ದರು. ''ಕಾರ್ಯಕ್ರಮ

ಹೇಗಾಯ್ತು'' ಎಂದು ಕೇಳಿದೆ. ಏನೇನೋ ಅವ್ಯವಸ್ಥೆಗಳಾದುದನ್ನು ಹೇಳಿ, ''ಭೀಮ ಬೇರೆ ಮೊದಲ ಹೊಡೆತಕ್ಕೇ ಗದೆ ಮುರಿದುಕೊಂಡು ಕುಳಿತ'' ಎಂದು ವಿಷಾದದಿಂದ ನಕ್ಕರು. ನಾವೂ ನಕ್ಕೆವು. ಅಂದೂ ನನ್ನ ತಮ್ಮನೇ ಭೀಮನಾಗಿದ್ದವನು. ಎಂತಹ ಅನುಭವಿಗಳು ಮಾಡಿಸಿದ ಕಾರ್ಯಕ್ರಮಗಳಲ್ಲೂ ಇಂತಹ ವಿಪರ್ಯಾಸಗಳು ಆಗುವುದು ಸಾಮಾನ್ಯ.

ಅವರಿಬ್ಬರೂ ಅಂದು ನಮ್ಮ ಮನೆಯಲ್ಲಿ ತುಂಬಾ ಹೊತ್ತು ಇದ್ದರು. ನಾನು ರೇಡಿಯೊಕ್ಕಾಗಿ ಬರೆದಿದ್ದ ಕೆಲವು ನಾಟಕಗಳನ್ನು ಮರುಳಯ್ಯನವರು ಇಲ್ಲೇ ಕುಳಿತು ಓದಿದರು; ತುಂಬಾ ಮೆಚ್ಚಿಕೊಂಡರು. ಆ ನಾಟಕಗಳಲ್ಲಿ ಒಂದಾದ ''ಪಾರ್ವತಿ ಪರಿಣಯ''ಕ್ಕೆ ''ರತಿವಿಲಾಪ'' ಎಂದು ಹೆಸರಿಡಬೇಕಿತ್ತೆಂದು ಅವರು ಹೇಳಿದ್ದು ನನಗಿನ್ನೂ ನೆನಪಿದೆ.

ಮುಂದೆ ಕೆಲವು ವರ್ಷಗಳ ನಂತರ ನಾನೂ ನಮ್ಮವರೂ ಸಿಟಿಮಾರ್ಕೆಟ್‌ನಲ್ಲಿ ತರಕಾರಿ ಕೊಳ್ಳುತ್ತಿದ್ದಾಗ ಅಕಸ್ಮಾತ್ತಾಗಿ ಮರುಳಯ್ಯನವರೂ ಅವರ ಶ್ರೀಮತಿಯವರೂ ಸಿಕ್ಕರು. ತಾವು ಇಲ್ಲಿಗೇ ವರ್ಗವಾಗಿ ಬಂದಿರುವುದಾಗಿ ತಿಳಿಸಿದರು. ''ಈಗೇನು ಬರೆಯುತ್ತಿದ್ದೀರಾ, ಬರೆದ ನಾಟಕಗಳನ್ನು ಪುಸ್ತಕ ಮಾಡಿಸಿದಿರಾ'' ಎಂದು ಪ್ರಶ್ನಿಸಿದರು. ನಮ್ಮಂತಹ ಪ್ರಸಿದ್ಧರಲ್ಲದವರ ಬರವಣಿಗೆ, ಪುಸ್ತಕರೂಪದಲ್ಲಿಡಲು ತಕ್ಕಗುಣಮಟ್ಟದಲ್ಲಿದೆಯೇ ಎಂದು ನನ್ನನ್ನು ನಾನೇ ಪ್ರಶ್ನಿಸಿಕೊಂಡು ಸುಮ್ಮನಾದೆ.

ನಾನೊಂದು ರೀತಿಯ ಸೋಮಾರಿ ಎಂದು ನಾಚಿಕೆಬಿಟ್ಟು ಒಪ್ಪಿಕೊಳ್ಳಬೇಕು. ಯಾವುದಾದರೂ ಒತ್ತಡವಿರದಿದ್ದರೆ ಬರೆಯುವುದಿಲ್ಲ. ಮೊದಲೆಲ್ಲ ಆಕಾಶವಾಣಿಯವರು ಇಷ್ಟು ಸಮಯ ಅಂತ ಕೊಡಬೇಕು. ನಾನು ಆ ವೇಳೆಗೆ ನಾಟಕ ಬರೆಯಬೇಕು. ತಲೆತುಂಬಾ ಚಿಂತನಗಳಿದ್ದರೂ ಒತ್ತಡವಿಲ್ಲದೆ ಕಾಗದದ ಮೇಲೆ ಮೂಡಲಾರದು. ಈಗಲೂ ಎಲ್ಲಾದರೂ ಭಾಷಣಕ್ಕೆ ಕರೆದಾಗ, ಲೇಖನಕ್ಕೆ ಒತ್ತಾಯ ಬಂದಾಗ ತಲೆಯಲ್ಲಿರುವ ಒತ್ತಡವನ್ನು ಪೇಪರ್ ಮೇಲೆ ಹಾಕುತ್ತೇನೆ. ಕೆಲವು ಬಾರಿ ಮಾತ್ರ ತಲೆ ತುಂಬಾ ಭಾರವಾಗಿ, ರಾತ್ರಿ ನಿದ್ರೆ ಕೂಡಾ ಇಲ್ಲದೆ, ಒಂದು ರೀತಿಯ ಹಿಂಸೆ ಅನುಭವಿಸಿ, ಇನ್ನು ಬರೆಯದಿದ್ದರೆ ಸಾಧ್ಯವೇ ಇಲ್ಲ ಎನ್ನುವಂತಹ ಸ್ಥಿತಿಗೆ ತಲುಪಿದಾಗ ಬರೆದು ಮೈಮನ ಹಗುರಮಾಡಿಕೊಳ್ಳುವುದುಂಟು. ಅಂತೂ ಸೋಮಾರಿತನವನ್ನು ಒದರಿ ಬರೆದಿದ್ದೇನೆ ಎನ್ನಬಹುದು.

ವಿದ್ಯಾಕಾಂಕ್ಷಿಗಳಾಗಿಯೂ ಕಾಲೇಜಿಗೆ ಹೋಗಲಾರದವರಿಗೆ ಮೈಸೂರು ವಿಶ್ವವಿದ್ಯಾನಿಲಯ ಅಂಚೆ ತೆರಪಿನ ಶಿಕ್ಷಣದ ವ್ಯವಸ್ಥೆ ತಂದು ಅನುಕೂಲ ಮಾಡಿಕೊಟ್ಟಿತು. ಅದಾದ ಮೇಲೆ ಮರುಳಯ್ಯನವರು ಕಂಡಾಗೊಮ್ಮೆ ''ಎಂ.ಎ.ಗೆ ಕುಳಿತುಕೊಳ್ಳಿ'' ಎನ್ನುತ್ತಿದ್ದರು. ''ಅವರೇನೋ ಹೇಳುತ್ತಾರೆ. ಆದರೆ ನಮಗೆಲ್ಲಾ ಎಂ.ಎ. ಮಾಡಲು ಸಾಧ್ಯವೇ? ಆ ಯೋಗ್ಯತೆ ನಮಗೆಲ್ಲಿ ಬರಬೇಕು, ಯಾವಾಗಲೋ ೧೯೫೪ಲರಲ್ಲಿ S.S.LC. ಓದಿ ಪಾಸು ಮಾಡಿದ್ದು. ಅನಂತರ ವಿದ್ಯಾಭ್ಯಾಸದ ಸಂಪರ್ಕವೇ ಇಲ್ಲವಲ್ಲಾ'' ಅನ್ನಿಸುತ್ತಿತ್ತು.

ಅವರ ಒತ್ತಾಯಕ್ಕೆ ಮಣಿದು ೧೯೭೬-೭೭ರಲ್ಲಿ ಎಂದು ತೋರುತ್ತದೆ, ಅಪ್ಲಿಕೇಷನ್ ಫಾರಂ ತರಿಸಿದೆ. ಆದರೆ ಅದರಲ್ಲಿದ್ದ ''ಶಬ್ದಮಣಿದರ್ಪಣ'', ''ಕಾವ್ಯಮೀಮಾಂಸೆ'', ''ಛಂದಸ್ಸು'' - ಮುಂತಾದ ಹೆಸರು ಕೇಳಿದರೇ ಭಯವಾಗುವ ವಿಷಯಗಳನ್ನು ನೋಡಿದ ಕೂಡಲೇ ''ಇದು ನನಗೆ ಸಾಧ್ಯವಿಲ್ಲದ ವಿಚಾರ'' ಎಂದು ಎದೆಗೆಟ್ಟು, ಅಪ್ಲಿಕೇಷನ್ ಫಾರಂ ಹರಿದು ಹಾಕಿ, ನಿಶ್ಚಿಂತೆಯಿಂದ ಕುಳಿತೆ.

ಮರುಳಯ್ಯನವರು ಬಿಡದೆ, ಒತ್ತಾಯ ಪೂರ್ವಕವಾಗಿ ಎಂ.ಎ.ಗೆ ಕೂರಲು ಹೇಳುತ್ತಲೇ ಇದ್ದರು. ''ನಾನು ಈ ವಯಸ್ಸಿನಲ್ಲಿ ಎಂ.ಎ. ಮಾಡಿ ಏನು ಮಾಡುವುದಿದೆ? ಪದವಿ ಪಡೆದು ಪ್ರಯೋಜನವೇನು? ನೌಕರಿಯಲ್ಲಿರುವವರಿಗಾದರೆ ಅನುಕೂಲ ಆಗಬಹುದು'' - ಮುಂತಾಗಿ ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ಅವರು ''ಹಾಗಲ್ಲ ಜಯಕ್ಕಾವ್ರೇ, ನೀವು ಬೇಕಾದಷ್ಟು ತಿಳಿದುಕೊಂಡಿದ್ದೀರಿ. ಅಷ್ಟಾಗಿ ತಿಳಿಯದೇ ಇರುವ ಪದವೀಧರರು ಹೇಳಿದ್ದನ್ನು - ಪದವಿ ಪಡೆದಿಲ್ಲ ಎನ್ನುವ ಒಂದೇ ಕಾರಣದಿಂದ ಒಪ್ಪಿಕೊಳ್ಳುವಂತಾಗುತ್ತೆ. ನಿಮಗಿರುವ ಜ್ಞಾನಕ್ಕೆ ಒಂದು ಮುದ್ರೆ ಹಾಕಿಸಿಕೊಳ್ಳಿ'' -- ಮುಂತಾಗಿ ಹೇಳುತ್ತಲೇ ಇದ್ದರು. ಆದರೆ ಪದವಿ ಇಲ್ಲ ಎಂಬ ಕಾರಣಕ್ಕಲ್ಲ - ಸ್ನಾತಕೋತ್ತರ ಪದವಿ ಪಡೆದೂ, ಮೂರ್ಖರ ವಾದವನ್ನು ಪ್ರತಿಭಟಿಸುವುದು ನನ್ನ ಸ್ವಭಾವಕ್ಕೆ ಇಂದೂ ವಿರುದ್ಧವಾದುದು.

ಅಷ್ಟು ಹೊತ್ತಿಗಾಗಲೇ ನಾನು ಅನೇಕ ರೇಡಿಯೋ ನಾಟಕಗಳು, ರೂಪಕಗಳು - ಮುಂತಾದವನ್ನು ಬರೆದು ಬೆಂಗಳೂರು ಆಕಾಶವಾಣಿಯಿಂದ ಪ್ರಸ್ತುತಪಡಿಸಿದ್ದೆ. ಕತೆ, ಬಿಡಿ ಲೇಖನಗಳನ್ನೂ ಸಾಕಷ್ಟು ಬರೆದಿದ್ದೆ. ಪದವಿಗೂ ಬರವಣಿಗೆಗೂ ಒಂದಕ್ಕೊಂದು ಸಂಬಂಧವೇ ಇಲ್ಲ. S.S.L.C. ಓದಿದ್ದ ನಾನು ಡಿಗ್ರಿಕ್ಲಾಸ್‌ನಲ್ಲಿರುವ ಮಕ್ಕಳಿಗೆ ಕನ್ನಡ ಪಾಠವನ್ನು ಹೇಳಿಕೊಡುತ್ತಿದ್ದೆ. ಸ್ವತಃ ಆಸಕ್ತಿ, ಶ್ರದ್ಧೆ ಇದ್ದು ಪ್ರಯತ್ನ ಮಾಡಿದರೆ ಇವೆಲ್ಲಾ ಸಾಧ್ಯವಾಗದೆ ಇರದು. ಆದರೆ ಇವಕ್ಕೆಲ್ಲಾ ಈಶ್ವರನ ವಿಶೇಷ ಕರುಣೆ ಬೇಕೇಬೇಕು.

ಆದರೆ ಆಗಬೇಕಾದ್ದನ್ನು ತಪ್ಪಿಸಲು ಸಾಧ್ಯವಿಲ್ಲವಲ್ಲ. ಒಮ್ಮೆ ಬಳಗದ ಹೆಣ್ಣುಮಗಳೊಬ್ಬಳು ಆಡಿದ ಮಾತಿನಿಂದ ಒಂದು ರೀತಿಯ ಸಾತ್ವಿಕ ಛಲಉಂಟಾಯಿತು. ಇದಕ್ಕೆ ಪೂರಕವಾಗಿ ಮರುದಿನ ಆಕಾಶವಾಣಿಗೆ ಹೋದವಳಿಗೆ ಮಹಿಳೆಯರ ಕಾರ್ಯಕ್ರಮದ ಮುಖ್ಯಸ್ಥರೂ ನನ್ನ ಬರವಣಿಗೆಯನ್ನು ತುಂಬಾ ಮೆಚ್ಚಿಕೊಂಡು ತುಂಬಾ ಪ್ರೋತ್ಸಾಹ ಕೊಡುತ್ತಿದ್ದ ಶ್ರೀಮತಿ ಕೆ.ಎಸ್. ನಿರ್ಮಲಾ ದೇವಿಯವರು ತಾವು ಎಂ.ಎ. ಕಟ್ಟಬೇಕೆಂದು ತರಿಸಿಕೊಂಡಿದ್ದ ಅರ್ಜಿಫಾರಂ ಅನ್ನು ತಮಗೆ ೩೫ ವರ್ಷವಾಗಿಲ್ಲದ ಕಾರಣ ಕಟ್ಟಲಾಗುವುದಿಲ್ಲವೆಂದು, ನನಗೆ ಕೊಟ್ಟು ''ಖಂಡಿತ ಪರೀಕ್ಷೆಗೆ ಕುಳಿತುಕೊಳ್ಳಿ'' ಎಂದು ಒತ್ತಾಯ ಮಾಡಿದರು.

ಸರಿ, ಪರೀಕ್ಷೆಗೆ ಕಟ್ಟಿದ್ದಾಯ್ತು, ಮರುಳಯ್ಯನವರು ನಮ್ಮ ಮನೆಗೆ ಹತ್ತಿರದಲ್ಲೇ - ಚಾಮರಾಜಪೇಟೆಯಲ್ಲಿದ್ದುದೂ ಒಂದು ಅನುಕೂಲವಾಯ್ತು. ಅವರನ್ನು ಕಂಡು ''ಪರೀಕ್ಷೆಗೆ ಕಟ್ಟಿದ್ದೇನೆ, ಪಾಠಕ್ಕೆ ಬರುವೆ'' ಎಂದೆ. ಆಗ ಅವರು ಮನೆಯಲ್ಲಿ ಎಂ.ಎ.

ವಿದ್ಯಾರ್ಥಿಗಳಿಗೆ ಕ್ಲಾಸ್ ತೆಗೆದುಕೊಳ್ಳುತ್ತಿದ್ದರು. ಪರೀಕ್ಷೆ ಕಟ್ಟಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದರು. ''ಕಾವ್ಯ ಕೇಳಲೇನೂ ಬರಬೇಡಿ, ನೀವೇ ಅದನ್ನು ಬೇರೆಯವರಿಗೆ ಪಾಠ ಮಾಡಬಲ್ಲಿರಿ. ಛಂದಸ್ಸು ಮಾತ್ರ ಕೇಳುವಿರಂತೆ, ಆಗ ತಿಳಿಸುತ್ತೇನೆ'' ಎಂದರು. ಮೊದಲ ಆ ವರ್ಷದಲ್ಲಿ ಛಂದಸ್ಸಿನ ಬಗೆಗೆ ಮೂರು ಲೆಕ್ಚರ್‌ಗಳನ್ನು ಮಾತ್ರ ಕೇಳಿದೆ. ಮಿಕ್ಕ ವಿಷಯಗಳನ್ನು ಮೈಸೂರು ವಿಶ್ವವಿದ್ಯಾಲಯದವರು ಕಳಿಸಿದ್ದ ನೋಟ್ಸು ಮತ್ತು ಪಠ್ಯಪುಸ್ತಕಗಳನ್ನು ಆಧರಿಸಿ ವ್ಯಾಸಂಗ ಮಾಡಿದೆ. ಮೊದಲ ವರ್ಷದ ಪರೀಕ್ಷೆಯಲ್ಲಿ ತೇರ್ಗಡೆಯಾದೆ.

ಎರಡನೆಯ ವರ್ಷ ಶಬ್ದಮಣಿದರ್ಪಣ, ಕಾವ್ಯಮೀಮಾಂಸೆ - ಈ ವಿಷಯಗಳ ಪಾಠಕ್ಕೆಂದು ಅವರ ಮನೆಗೆ ಸುಮಾರು ಎರಡೂವರೆ ತಿಂಗಳ ಕಾಲಹೋದೆ. ನನ್ನ ಅನುಕೂಲವನ್ನನುಸರಿಸಿ ಪಾಠ ಮಾಡಿದರು. ನಮ್ಮ ಎರಡನೆಯ ಮಗ ಜಯಂತ್ ಪ್ರತಿದಿನ ಕಾರಿನಲ್ಲಿ ಅವರ ಮನೆಗೆ ಕರೆದುಕೊಂಡು ಹೋಗಿ ಬಿಟ್ಟು, ರಾತ್ರಿ ಎಂಟು ಗಂಟೆಯ ಹೊತ್ತಿಗೆ ಪುನಃ ಬಂದು ಕರೆತರುತ್ತಿದ್ದ.

ಸಾಹಿತಿಯೂ ಆಗಿರುವ ಒಬ್ಬ ಉಪಾಧ್ಯಾಯರ ಮನೆಗೆ ತಿಂಗಳುಗಟ್ಟಲೆ ಹೆಣ್ಣುಮಕ್ಕಳು ಹೋಗಬೇಕಾದರೆ ಮೊದಲು ಅವರ ಅಂದರೆ ಆ ಉಪಾಧ್ಯಾಯರ ಚರಿತ್ರೆ ಶುದ್ಧವಾಗಿರಬೇಕು. ನಾವಿಷ್ಟು ಜನ ಹೆಣ್ಣು ಮಕ್ಕಳು ಯಾವ ಅಳುಕು, ಅಧೈರ್ಯ, ಸಂಕೋಚವಿಲ್ಲದೆ ಅಣ್ಣನ ಮನೆಗೆ ಹೋದಷ್ಟೆ ಸಹಜವಾಗಿ ಅವರ ಮನೆಗೆ ಪಾಠಕ್ಕೆ ಹೋಗಿರುವುದು, ಹೋಗುತ್ತಿರುವುದು ಅವರ ಶುದ್ಧಚಾರಿತ್ರ್ಯದ ಫಲ. ಯಾಕೆಂದರೆ ಸಾಮಾನ್ಯವಾಗಿ ಸಂಗೀತಗಾರರು, ಸಾಹಿತಿಗಳು ಒಳ್ಳೆಯ ಹೆಸರನ್ನು ಉಳಿಸಿಕೊಂಡಿರುವುದು ಅಪರೂಪ!

ಭಾವುಕ ಮನದ ಮೇಷ್ಟ್ರು ಪಾಠಕ್ಕೆ ಹೋಗುತ್ತಿದ್ದ ಸಮಯದಲ್ಲಿ ಏನಾದರೂ ಮಾತು ಬಂದಾಗ ''ನಮ್ಮಮ್ಮ ಹೆತ್ತದ್ದು ನಮ್ಮಿಬ್ಬರೇ ಗಂಡುಮಕ್ಕಳನ್ನು ಮಾತ್ರ. ಯಾವ ಜನ್ಮದ ಪುಣ್ಯವೋ, ನೀವಿಷ್ಟು ಜನ ಸೋದರಿಯರು ಸಿಕ್ಕಿದಿರಿ. ಗಂಗಾ ಯಮುನೆಯರಂತೆ ನಮ್ಮ ಮನೆಯೊಳಗೆ ಹರಿದು ಬಂದಿರಿ'' ಎನ್ನುತ್ತಾ ಗದ್ಗದಿತರಾಗುತ್ತಿದ್ದರು. ನಮಗೂ ಇಂತಹ ಒಬ್ಬ ಅಣ್ಣ ಸಿಕ್ಕಿದ್ದು ಪುಣ್ಯವೇ ಸರಿ.

ಜಯಂತ್ ನನಗೆ ಇಷ್ಟು ಅನುಕೂಲ ಮಾಡಿಕೊಡುವುದರ ಜೊತೆಗೆ, ಮನೆಯ ಕರ್ತವ್ಯಗಳಲ್ಲಿ ಸಹಜವಾಗಿಯೇ ಆಗುತ್ತಿದ್ದ ಸಣ್ಣ ಪುಟ್ಟ ಲೋಪ, ದೋಷಗಳನ್ನು ಗಂಡ, ಮಕ್ಕಳು ಸಾವರಿಸಿಕೊಂಡು, ಸಹಕರಿಸಿ, ಪ್ರೋತ್ಸಾಹಿಸಿದರು. ಆ ವಯಸ್ಸಿನಲ್ಲಿ ನಾನು ಎಂ.ಎ. ಮಾಡಿದ ಶ್ರೇಯಸ್ಸಿನಲ್ಲಿ ನನ್ನ ಶ್ರಮದ ಫಲ ಶೇಕಡಾ ೫೦ ಆದರೆ ಮಿಕ್ಕ ೯೫ಭಾಗ ನಮ್ಮ ಗುರುಗಳಿಗೂ ನನ್ನ ಗಂಡ, ಮಕ್ಕಳಿಗೂ ಸೇರಬೇಕು. ಇದು ಖಂಡಿತ ಉತ್ಪ್ರೇಕ್ಷೆಯ ಮಾತಲ್ಲ.

ಪರೀಕ್ಷೆಗೆ ಕೂರುವ ಮೊದಲೇ ಮೇಷ್ಟ್ರು ''ಜಯಕ್ಕಾರೇ, ಈ ಎರಡು ವರ್ಷ ಯಾವ ಭಾಷಣ, ಸಂಗೀತ ಕಾರ್ಯಕ್ರಮಗಳಿಗೆ ಒಪ್ಪಿಕೊಳ್ಳಬೇಡಿ. ಇದೊಂದು

ತಪಸ್ಸೆಂದು ತಿಳಿದು ವ್ಯಾಸಂಗಮಾಡಿ. ಏಕೆಂದರೆ ನಿಮ್ಮಂತೆ ದೊಡ್ಡ ಸಂಸಾರವಿರುವ ಗೃಹಿಣಿಯರಿಗೆ ಮನೆ ಕೆಲಸಗಳು ಮುಗಿದ ನಂತರ ಸಿಕ್ಕುವ ಅಲ್ಪ ಸಮಯ ಹಂಚಿಹೋಗಬಾರದು. ಆಸಕ್ತಿಯೂ ಒಂದೇ ಕಡೆ ನೆಲೆಗೊಳ್ಳಬೇಕು'', ಎಂದಿದ್ದರು. ಅವರು ಹೇಳಿದಂತೆಯೇ ಅನಿವಾರ್ಯತೆಯಿಂದ ರೇಡಿಯೋಕ್ಕೆ ಬರೆದ ಎರಡು ನಾಟಕಗಳಲ್ಲದೆ ಮತ್ತೆ ಬೇರೆ ಕಡೆ ಮನಸ್ಸು ತೊಡಗಿಕೊಳ್ಳಲಿಲ್ಲ. ಇದರ ಜೊತೆಗೆ ನಾನು ಪರೀಕ್ಷೆಗೆ ಕುಳಿತಿರುವುದನ್ನು ಯಾರಲ್ಲಿಯೂ ಹೇಳಿಕೊಂಡಿರದಿದ್ದರೂ, ಊರೆಲ್ಲರಿಗೂ ಗೊತ್ತಾಗಿ 'ಯಾವಾಗ ಪರೀಕ್ಷೆ, ಹೇಗೆ ವ್ಯಾಸಂಗ ಮಾಡುತ್ತಿದ್ದೀರಾ' ಎಂದು ಕೇಳುತ್ತಿದ್ದರು. ಪರೀಕ್ಷೆಗೆ ಕುಳಿತಿರುವುದು ಹೆಚ್ಚಲ್ಲ. ಫೇಲಾದರೆ ಎಷ್ಟು ಜನರಿಗೆ ಫೇಲಾದೆ ಎಂದು ಹೇಳುವುದು? ಸುಮ್ಮನಿರಲಾರದೆ ಒಳ್ಳೆ ತೊಂದರೆ ತಂದುಕೊಂಡೆ, ಯಾಕಾದರೂ ಪರೀಕ್ಷೆ ಕಟ್ಟಿದೆನೋ ಎನ್ನಿಸಿಬಿಟ್ಟಿದ್ದೂ ಉಂಟು.

ವೈದ್ಯರ ಮನೆಗೆ ಗುಂಪುಗುಂಪಾಗಿ ಬರುವ ಜನಸಂದಣಿಯ, ಸದಾ ಅತಿಥಿಗಳಿಂದ ತುಂಬಿರುವ, ಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ನೋಡಿಕೊಂಡು, ನಮ್ಮಂತಹ ದೊಡ್ಡ ಸಂಸಾರದ ಮನೆಯ ಗೃಹಿಣಿಯಾಗಿ ವಿಪರೀತ ಕರ್ತವ್ಯಭಾರದಿಂದ ಬಳಲಿದ ಶರೀರದಲ್ಲೇ ಈ ಎಂ.ಎ. ವಿದ್ಯಾಭ್ಯಾಸದ ಹೊರೆಯನ್ನೂ ಮನಸ್ಸಿಗೆ ಬೇಕಾಗಿದ್ದುದರಿಂದ ಹೊತ್ತು, ಹಗುರವಾಗಿಯೇ ತೆಗೆದುಕೊಂಡೆ. ಪಾಸೂ ಆಯ್ತು. ನಮ್ಮ ಗುರುಗಳು ''ಡಾಕ್ಟರೇಟ್ ಮಾಡಿ'' ಎಂದು ಬಹಳವಾಗಿ ಹೇಳಿದರು. ಆದರೆ ನನಗಿರುವ ಕಡಿಮೆ ಸಮಯದಲ್ಲಿ ನಾನು ಮಾಡಬೇಕೆಂದಿರುವ ಕ್ರಿಯಾತ್ಮಕ ಕೆಲಸಗಳು ಡಾಕ್ಟರೇಟ್ ಮಾಡಲು ಹೋದರೆ ನಿಂತುಹೋಗುತ್ತವೆಂದು ಅದಕ್ಕೆ ಪ್ರಯತ್ನಿಸಲಿಲ್ಲ. ನಾನು ಡಾಕ್ಟರೇಟ್ ಮಾಡಲಿಲ್ಲವೆಂದು ಅವರಿಗೆ ನನ್ನ ಮೇಲೆ ಇನ್ನೂ ಸ್ವಲ್ಪ ಕೋಪವಿದೆ!

ರಾಶಿಗ್ರಂಥಗಳನ್ನು ಹಾಕಿಕೊಂಡು ಓದಿ, ಸಂಪಾದಿಸುವ ಜ್ಞಾನಕ್ಕೂ ಕ್ರಮಬದ್ಧ ವಿದ್ಯಾಭ್ಯಾಸದಿಂದ ಬರುವ ಜ್ಞಾನಕ್ಕೂ ಇರುವ ವ್ಯತ್ಯಾಸವನ್ನು ಅನಂತರ ಅರಿತೆ. ನನ್ನಂತೆ ನೂರಾರು ಸಂಖ್ಯೆಯಲ್ಲಿ ಗೃಹಿಣಿಯರು ಎಂ.ಎ. ಪಾಸು ಮಾಡಲು ಪ್ರೇರಣೆ ಇತ್ತು, ಪಾಠ ಹೇಳಿ, ಸಹಾಯ ಮಾಡಿದವರು ನಮ್ಮ ಮೇಷ್ಟ್ರು ಸಾ.ಶಿ. ಮರುಳಯ್ಯನವರು.

ಅವರು ಪಾಠ ಮಾಡುವ ರೀತಿಯೇ ಬೇರೆ. ಒಮ್ಮೆ ಅವರ ಪಾಠವನ್ನು ಮನಸ್ಸಿಟ್ಟು ಕೇಳಿದವರು ನೇರವಾಗಿ ಪರೀಕ್ಷೆಗೆ ಹೋಗಿ ಪ್ರಶ್ನೆಗಳಿಗೆ ಉತ್ತರ ಬರೆಯಬಹುದು. ಪಾಠ ಮಾಡುವುದೇ ಒಂದು ಕಲೆ. ಮಾತನಾಡುವುದು ಇನ್ನೊಂದು ಕಲೆ. ಇವೆರಡೂ ಸತತ ಪರಿಶ್ರಮದಿಂದ ರೂಢಿಸಿಕೊಂಡ ಹಾಗೂ ದೈವದತ್ತವಾಗಿ ಬಂದ ವರಗಳು.

ಅವರು ಪ್ರತಿಯೊಂದು ಸೂತ್ರಕ್ಕೂ ಕಾವ್ಯಗಳಿಂದ, ನಿತ್ಯಜೀವನದ ಘಟನೆಗಳಿಂದ ಉತ್ತಮವಾದ ಅನೇಕ ಉದಾಹರಣೆಗಳನ್ನು ಕೊಡುತ್ತಾರೆ. ಒಂದಲ್ಲದಿದ್ದರೆ ಮತ್ತೊಂದು ಉದಾಹರಣೆ ನಮ್ಮ ಮನಸ್ಸಿಗೆ ತಲುಪಿರುತ್ತದೆ. ಆ ಉದಾಹರಣೆಗಳಲ್ಲಿ ಒಂದೆರಡು ನೆನಪಿಗೆ ಬಂದರೂ ವಿಷಯ ಕೂಡಲೆ ಹೊಳೆಯುತ್ತದೆ. ಉದಾಹರಣೆಗಳ ಸಹಾಯದಿಂದ ಮೂಲವಿಷಯ ಹೇಳಲು ಪ್ರಚೋದನೆ ಸಿಕ್ಕು, ವಿಷಯ ಖಚಿತತೆ ಪಡೆಯುತ್ತದೆ.

ಅವರ ಪಾಠವನ್ನು ಕೇಳಿದ ಎಷ್ಟೋ ಜನ ಕನ್ನಡದಲ್ಲಿ ಬರೆದು I.P.S., I.A.S. ಪದವಿ ಪಡೆದದ್ದು ಎಲ್ಲರಿಗೂ ತಿಳಿದಿರುವ ವಿಚಾರವೇ. ನನ್ನ ತಮ್ಮಂದಿರು ಶಿವಮೊಗ್ಗಾ ಸಹ್ಯಾದ್ರಿ ಕಾಲೇಜಿನಲ್ಲಿ ತಮ್ಮ ಕ್ಲಾಸ್ ಮುಗಿದ ಮೇಲೆ ಇವರು ಪಾಠ ಹೇಳುವ ಮೋಡಿಗೆ ಮನಸೋತು ತಮ್ಮ ಕ್ಲಾಸ್ ತಪ್ಪಿಸಿಕೊಂಡು, ಇವರ ಮುಂದೆ ಪಾಠ ತೆಗೆದುಕೊಳ್ಳುವ ತರಗತಿಗೇ ಹೋಗಿ ಕೂರುತ್ತಿದ್ದರಂತೆ. ಇದೇನೂ ಉತ್ಪ್ರೇಕ್ಷೆಯಲ್ಲ. ಅಂತಹವರ ಪಾಠ ಕೇಳುವ ಪುಣ್ಯ ಲಭಿಸಿದ್ದು ನನಗೂ ಧನ್ಯತಾಭಾವ ಒದಗಿಸಿತು. ಮತ್ತೊಂದು ಸ್ವಾರಸ್ಯದ ಸಂಗತಿಯೆಂದರೆ ಅವರ ಪಾಠಕೇಳಿ ಹೊಗಳುತ್ತಿದ್ದ ನನ್ನ ನಾಲ್ಕನೆಯ ತಮ್ಮ ಅಪ್ಪಾಜಿಗೆ ಮಗಳನ್ನು ಕೊಟ್ಟು ಮದುವೆಯಾಗಿ, ಮೊಮ್ಮಗಳು ಹುಟ್ಟಿದ ನಂತರ ೧೯೮೧ರಲ್ಲಿ ಅದೇ ಮೇಷ್ಟ್ರ ಬಳಿ ಪಾಠ ಹೇಳಿಸಿಕೊಂಡು ಅಜ್ಜಿಯಾದ ಮೇಲೆ ಎಂ.ಎ. ಮಾಡಿದ್ದು!

ಆಗ ಅವರು ಚಾಮರಾಜಪೇಟೆಯಲ್ಲಿ ಒಂದು ಸಣ್ಣಮನೆಯಲ್ಲಿದ್ದರು. ನಮಗೆ ಪಾಠ ಮಾಡುತ್ತಿದ್ದ ಪುಟ್ಟಹಾಲ್‌ನ ಪಕ್ಕವೇ ಅಡುಗೆಮನೆ. ಅಲ್ಲಿ ಒಂದು ಒಗ್ಗರಣೆ ಹಾಕಿದರೂ ನಮಗೆಲ್ಲಾ ಅದರ ವಾಸನೆ ಬರುತ್ತಿತ್ತು. ಅಲ್ಲಿ ಮುಚ್ಚುಮರೆ ಏನೂ ಇರಲಿಲ್ಲ. ಪಾಠ ಹೇಳತೊಡಗಿ ಅರ್ಧಘಂಟೆಯೊಳಗಾಗಿ ಮೇಷ್ಟ್ರು ''ಮಿನ್ನೀ, ಬಾಯೊಣಗುತ್ತಿದೆ'' ಅಂತ ರಾಗ ಎಳೆಯುವರು. ಅವರ ಪತ್ನಿ ವೀಣಾ ''ಗೊತ್ತಾಯ್ತು, ಇನ್ನೇನು ಹಾಲು ಬರುತ್ತದೆ. ಕಾಫಿ ತರ್ತೀನಿ'' ಎನ್ನುವರು. ಅಲ್ಲಿದ್ದ ಎಲ್ಲರಿಗೂ ಕಾಫಿ, ಹಾಲು ಒದಗಿಸುವರು. ಸಮಯ ಮೀರಿದರೆ ಎಲ್ಲರಿಗೂ ತಿಂಡಿಯೂ ಸಿಕ್ಕುತ್ತಿತ್ತು.

ವೀಣಾ ವ್ಯವಹಾರ ಚತುರರಾದ ಸದ್ಗೃಹಿಣಿ. ಮೇಷ್ಟ್ರು ಸ್ವಲ್ಪ ಭೋಳೆ ಸ್ವಭಾವದರು. ಅಲ್ಲಿದ್ದಾಗ ವೀಣಾ ಬಸ್ಸಿನಲ್ಲಿ ತಿರುಗಾಡಿ ವಿಜಯನಗರದಲ್ಲಿದ್ದ ಸೈಟಿನಲ್ಲಿ ತಾವೇ ನಿಂತು ಮನೆ ಕಟ್ಟಿಸಿದರು. ಆದರೆ ಅವರ ಚಾಮರಾಜಪೇಟೆಯ ಮನೆಯನ್ನು ನೋಡಿದಾಗ ನನ್ನ ಮೊದಲ ಮಗ ಜಯರಾಜ್ ಬಿ.ಎ. ಮಾತ್ರ ಓದಿದ, ಹೆಚ್ಚು ಓದಲಿಲ್ಲ. ಅದೊಂದು ಕೊರತೆ ಎಂಬ ಕೊರಗು ಇದ್ದ ನನಗೆ ಭ್ರಮೆ ನಿರಸನವಾದಂತಾಯ್ತು. ಡಾಕ್ಟರೇಟ್ ಪಡೆದ ಹತ್ತು ವರುಷಗಳ ನಂತರವೂ ಇಂತಹ ಮನೆಯಲ್ಲಿರುವ ಪರಿಸ್ಥಿತಿಯಾಗುವಂತಿದ್ದರೆ ಮಗನಿಗೆ ಬರಿಯ ಬಿ.ಎ. ಸಾಕು ಎನ್ನಿಸಿದ್ದು ಮಾತ್ರ ನಿಜ. ದೇವರ ದಯದಿಂದ ಈಗ ಮೇಷ್ಟ್ರಿಗೆ ಕಾರು ಬಂತು. ಒಳ್ಳೆಯ ಮನೆ ಆಯ್ತು. ಅದು ನಮ್ಮಂತಹ ಅವರ ವಿದ್ಯಾರ್ಥಿವೃಂದಕ್ಕೆ ಸಂತೋಷದ ಸಂಗತಿ.

ಸಾಹಿತಿಗಳಿಗೆ ಸಾಮಾನ್ಯವಾಗಿ ಇತರ ಸಾಹಿತಿಗಳ ಮೇಲೆ ಮಾತ್ಸರ್ಯವಿರುತ್ತದೆ. (ಇದು ಸಂಗೀತ ಕ್ಷೇತ್ರದಲ್ಲೂ ಉಂಟು) ಪ್ರಮಾಣದಲ್ಲಿ ಹೆಚ್ಚು ಕಡಿಮೆ ಇರಬಹುದು. ಇದಕ್ಕೆ ಅಪವಾದವೂ ಅಲ್ಲೊಂದು ಇಲ್ಲೊಂದು ಸಿಕ್ಕಬಹುದು. ಆದರೆ ನಮ್ಮ ಮೇಷ್ಟ್ರು ಈ ರೀತಿ ಅಸೂಯೆ ಪಟ್ಟಿದ್ದನ್ನಾಗಲಿ, ಬೇರೆ ಸಾಹಿತಿಗಳ ಬಗೆಗೆ ಕೀಳಾಗಿ ಮಾತನಾಡಿದ್ದನ್ನಾಗಲಿ ಕಾಣೆವು. ಸಾಹಿತ್ಯ ರಚನೆಯಿಂದ ಸಿಕ್ಕಬಹುದಾದ ಸೌಲಭ್ಯವನ್ನೋ, ಪ್ರಶಸ್ತಿಯನ್ನೋ, ಪ್ರಚಾರವನ್ನೋ, ಪಡೆಯಲು ಇತ್ತೀಚೆಗೆ ಲೇಖನಿ ಹಿಡಿದವರೂ ಆತುರಪಡುವುದನ್ನೂ ನಾವೆಲ್ಲ ನೋಡೇ ಇದ್ದೇವೆ. ಮೇಷ್ಟ್ರು ಇಂತಹುದಕ್ಕೆಲ್ಲಾ ಹೊರತು.

ಜೀವನದಲ್ಲಿ ತಾನಾಗಿಯೇ ಬಂದದ್ದನ್ನು ಈಶ್ವರನ ಪ್ರಸಾದವೆಂದು ನಮ್ರತೆಯಿಂದ ಸ್ವೀಕರಿಸಿದ್ದಾರೆ.

ಇದಕ್ಕೆ ಒಂದು ಉದಾಹರಣೆ ಹೇಳಬೇಕೆಂದರೆ ೧೯೮೯ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷಸ್ಥಾನಕ್ಕೆ ಸ್ಪರ್ಧಿಸಿದ್ದರು. ಅವರ ಸಹಪಾಠಿಗಳ ಇಚ್ಛೆಯ ಮೇರೆಗೆ ಅವರನ್ನು ಬೆಂಬಲಿಸಿ ತಾವು ನಾಮಪತ್ರ ಹಿಂದಕ್ಕೆ ತೆಗೆದುಕೊಂಡರು. ಆಗ ಅವರ ಶಿಷ್ಯವೃಂದವೆಲ್ಲಾ ಇವರು ನಾಮಪತ್ರ ಹಿಂತೆಗೆದುಕೊಳ್ಳುವುದಕ್ಕೆ ಒಪ್ಪದೆ ಹೋದಾಗ ''ಮುಂದಿನ ಬಾರಿ ನೀವು ನಿಲ್ಲುವಿರಂತೆ ಅಂದಿದ್ದಾರೆ. ಏನಾಗಿಹೋಯ್ತು ಈಗ. ಈ ಬಾರಿ ಅವರು ಅಧ್ಯಕ್ಷರಾಗಲಿ, ಮುಂದಿನ ಬಾರಿ ನಾನು ನಿಂತರಾಯ್ತು. ಅದಕ್ಕೇಕೆ ನೀವು ಬೇಜಾರು ಮಾಡಿಕೊಳ್ಳಬೇಕು'' ಎಂದು ಶಿಷ್ಯರನ್ನು ಸಮಾಧಾನ ಮಾಡಿ ಕಳುಹಿಸಿದರು.

ಅದರ ಮುಂದಿನಬಾರಿ ನಿಂತಾಗ ಅದು ವಿಚಿತ್ರ ತಿರುವು ಪಡೆದು ರಾಜಕೀಯ ಚುನಾವಣೆಯನ್ನೂ ಮೀರಿಸಿತು. ಆಗ ನಮ್ಮ ಗುರುಗಳು ಸೋತರು. ಅದೂ ಎಂತಹ ಸೋಲು? ಅನೇಕ ವೈಚಿತ್ರಗಳಿಂದ ಕೂಡಿದ ಚುನಾವಣೆಯಲ್ಲಿ ದುಡ್ಡಿದ್ದವರ, ದೊಡ್ಡವರೆನ್ನಿಸಿಕೊಂಡವರ ಯಾರ ಬೆಂಬಲವೂ ಇಲ್ಲದೆ, ಕರ್ನಾಟಕಾದ್ಯಾಂತ ಇರುವ ತಮ್ಮ ಶಿಷ್ಯ ಕೋಟಿಯ ಬೆಂಬಲಮಾತ್ರದಿಂದ ಕೇವಲ ಕೆಲವೇ ಓಟುಗಳಿಂದ ಸೋತರು. ಇದೂ ಒಂದು ರೀತಿ ಸೋಲಿನಲ್ಲಿಯೂ ಗೆಲುವು!

ಆಗ ಅನಿರೀಕ್ಷಿತ ಅಪಜಯದಿಂದ ಅವರ ಮನಸ್ಸಿಗೆ ತುಂಬಾ ನೋವಾಗಿದ್ದರೂ ಉದ್ವಿಗ್ನರಾಗಲಿಲ್ಲ. ಯಾರ ಬಗ್ಗೆಯೂ ಒಂದು ಕೆಟ್ಟ ಮಾತು ಆಡಲಿಲ್ಲ. ನೋವನ್ನು ನುಂಗಿ ನಗುತ್ತಲೇ ಇದ್ದರು; ಇದು ಅವರ ಸಹಜ ಸ್ವಭಾವ. ಅವರ ಶಿಷ್ಯ ವೃಂದಕ್ಕೆ ನೋವಾಗಿದ್ದು ಮಾತ್ರ ನಿಜ. ಇಂತಹ ಸಮಯದಲ್ಲೇ ಮನುಷ್ಯರ ಗುಣ, ಅವರ ನಾಲಿಗೆಯಿಂದ ಬರುವ ನುಡಿಗಳಿಂದ ಗೊತ್ತಾಗುತ್ತದೆ ಎಂಬಪುದೂ ಅಷ್ಟೇ ನಿಜ.

ನನ್ನ ಬರವಣಿಗೆಯ ಬಗೆಗೆ ನಾನು ಅವರ ವಿದ್ಯಾರ್ಥಿನಿ ಆಗುವುದಕ್ಕಿಂತ ಮೊದಲಿನಿಂದಲೂ ಡಾ. ಮರುಳಯ್ಯನವರಿಗೆ ಅಪಾರ ಅಭಿಮಾನ. ನನ್ನ ಸೋಮಾರಿತನ ಅವರಿಗೆ ಗೊತ್ತು. ಆಗಾಗ ಕಂಡಾಗ, ಅಥವಾ ಫೋನ್ ಮೂಲಕ ''ಈಗೇನು ಬರೆಯುತ್ತಿದ್ದೀರಿ'' ಎಂದು ಕೇಳುತ್ತಾ ಎಚ್ಚರಿಸುತ್ತಿರುತ್ತಾರೆ. ಯಾವುದಾದರೂ ಅಭಿನಂದನಾಗ್ರಂಥ - ಮುಂತಾದವುವಕ್ಕೆ ''ಈಗ ಹೊಸ ಲೇಖನ ಯಾವುದಿದೆ?'' ಎಂದು ಕೇಳುತ್ತಾರೆ. ನಾನು ''ಸದ್ಯ ಏನೂ ಬರೆದಿಲ್ಲ ಸಾರ್'' ಎಂದರೆ ''ನೀವು ಸುಮ್ಮನೆ ಇರುವವರಲ್ಲ - ಇರಲೂ ಬಾರದು - ಏನಾದರೂ ಬರೆದೇ ಇರುತ್ತೀರಿ. ನಾಳೆ ಪ್ರತಿಮಾಡಿ ಕಳಿಸಿಬಿಡಿ'' ಎಂದು ಪುನಃ ಮಾತಿಗೆ ಅವಕಾಶವಿಲ್ಲದಂತೆ ಮಾಡಿಬಿಡುತ್ತಾರೆ. ಸಿದ್ಧವಿದ್ದರೆ ಸರಿ. ಇಲ್ಲವಾದರೆ ತಲೆಯಲ್ಲಿರುವ ಯಾವುದಾದರೊಂದು ಚಿಂತನೆಯನ್ನು ಹೊರಕ್ಕೆಳೆದು ಪೇಪರ್ ಮೇಲೆ ಹಾಕಲೇ ಬೇಕಾಗುತ್ತದೆ. ಒಟ್ಟಿನಲ್ಲಿ ಬರಲೇಬೇಕಾದ ಪರಿಸ್ಥಿತಿಯಾಗುತ್ತದೆ.

ನನ್ನ ಎಂ.ಎ. ಮುಗಿದ ಮೇಲೆ ಪುಸ್ತಕ ಮಾಡಿಸಲು ಒತ್ತಾಯಿಸುತ್ತಿದ್ದರು. ಆದರೆ

ಪುಸ್ತಕ ಮಾಡಿಸುವ, ಅದಕ್ಕೆ ನಾಟಕಗಳನ್ನು ಜೋಡಿಸುವ ಕ್ರಮ ಗೊತ್ತಿಲ್ಲದ ನಾನು ನನ್ನ ಅಳಿದುಳಿದಿದ್ದ ನಾಟಕಗಳನ್ನು ರೂಪಕಗಳನ್ನು ಪ್ರತಿಮಾಡಿ ಒಯ್ದು ಅವರ ಮನೆಗೆ ತಲುಪಿಸಿದೆ. ''ಅಳಿದುಳಿದ'' ಎಂದು ಯಾಕೆ ಹೇಳುತ್ತಿದ್ದೇನೆಂದರೆ ಆಕಾಶವಾಣಿಗೆ ಸುಮಾರು ವರ್ಷಗಳು ಮಹಿಳಾಶ್ರೋತೃಸಂಘ, ಮಕ್ಕಳ ಶ್ರೋತೃಸಂಘಗಳನ್ನು ಮಾಡಿ ಎಷ್ಟೋ ನಾಟಕ, ರೂಪಕಗಳನ್ನು ಬರೆದು ಪ್ರಸ್ತುತ ಪಡಿಸಿದ್ದಲ್ಲದೆ, ಬೇರೆ ಸಂಘಗಳಿಗೂ ಬರೆದು ಕೊಟ್ಟಿದ್ದೆ. ಆ ಪ್ರತಿಗಳನ್ನು ಕಾಯ್ದಿಟ್ಟುಕೊಳ್ಳುವ ಎಚ್ಚರ ನನಗಿರಲಿಲ್ಲ. ಅಲ್ಲಿ ನಾಟಕಗಳನ್ನು (ಆಗ Live Programmeಗಳೇ ಇರುತ್ತಿದ್ದುವು) ಮಾಡಿ, ಪೇಪರ್ ಅಲ್ಲೇ ಎಲ್ಲೋ ಹಾಕಿ ಬರುತ್ತಿದ್ದೆ. ಇಂತಹ ಹೊಣೆಗೇಡಿಯಾಗಿದ್ದೆ ನಾನು. ಹೀಗಾಗಿ ಈಗ ಮಿಕ್ಕವುಗಳನ್ನು ಒಂದು ಕ್ರಮದಲ್ಲಿ ಜೋಡಿಸಿಕೊಡುವಂತೆ ನನ್ನ ಗುರುಗಳಿಗೆ ಒಪ್ಪಿಸಿದೆ.

ಅವರು ಅವುಗಳಲ್ಲಿ ಆರಿಸಿ ಐದೈದು ನಾಟಕಗಳ ಎರಡು ಸಂಗ್ರಹ ಮಾಡುವಂತೆ ಜೋಡಿಸಿಕೊಟ್ಟರು. ಮೊಟ್ಟಮೊದಲು ಪ್ರಕಟವಾದ ನನ್ನ ಪುಸ್ತಕ ''ಐದು ಪ್ರಸಾರ ನಾಟಕಗಳು'' ಇದರಲ್ಲಿ ''ಮಾಯಾಕೋಲಾಹಲ'', ''ಪಾರ್ವತಿ ಪರಿಣಯ'', ''ಕೋಳೂರ ಕೊಡಗೂಸು'' - ''ಶಬರ ಶಂಕರ'' ಮತ್ತು ''ರುಕ್ಮಿಣಿ ಸ್ವಯಂವರ'' - ಎಂಬ ನಾಟಕಗಳಿವೆ. ಈ ಪುಸ್ತಕಗಳನ್ನು ಪತ್ರಿಕೆಗಳು ಅತ್ಯುತ್ತಮ ರಚನೆಗಳೆಂದು ವಿಮರ್ಶೆಮಾಡಿದುವು. ಅನೇಕ ಲೇಖಕ, ಲೇಖಕಿಯರು ಅವುಗಳನ್ನು ಮೆಚ್ಚಿ ನನಗೆ ಕಾಗದ ಬರೆದು ಅಭಿನಂದಿಸಿದರು. ಆ ಪುಸ್ತಕಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಮಹಿಳಾದತ್ತಿನಿಧಿಯ ಪ್ರಶಸ್ತಿಯೂ ಲಭಿಸಿತು.

ಹೆಣ್ಣು ಮಕ್ಕಳು ರಚಿಸಿರುವ ಸಾಹಿತ್ಯವನ್ನು ವಿಮರ್ಶಕರು ಉಪೇಕ್ಷಿಸುತ್ತಾರೆಂದು ಲೇಖಕಿಯರು ಮೈಕ್ ಮುಂದೆ ಬೊಬ್ಬೆ ಹಾಕುತ್ತಾರೆ. ಆದರೆ ಸ್ತ್ರೀಯರ ರಚನೆಯನ್ನು ಸ್ತ್ರೀಯರೇ ಹೇಗೆ ಕಾಣುತ್ತಾರೆ ಎಂಬುದನ್ನು ನನ್ನ ಅನುಭವದಿಂದ ಹೇಳುತ್ತೇನೆ.

೧೯೮೦ರಿಂದ ೧೯೮೩ರ ಅವಧಿಯ ಮಹಿಳಾ ಸಾಹಿತ್ಯದ ಬಗೆಗೆ ಜಯನಗರದ ಎನ್.ಎಂ.ಕೆ.ಆರ್.ವಿ. - ಕಾಲೇಜಿನಲ್ಲಿ ಒಂದು ವಿಚಾರ ಸಂಕಿರಣ ನಡೆಯಿತು. ಮಹಿಳೆಯರು ಬರೆದ ನಾಟಕಗಳ ಬಗೆಗೆ ಪ್ರಬಂಧ ಮಂಡಿಸಲಿದ್ದವರು ನನ್ನ ನಾಟಕಗಳ ಪುಸ್ತಕಗಳು ಬೇಕೆಂದು ಬರೆದು ತರಿಸಿಕೊಂಡರು. ಆದರೆ ವಿಚಾರ ಸಂಕಿರಣಕ್ಕೆ ನನಗೆ ಆಹ್ವಾನ ಕೊಡುವ ಸೌಜನ್ಯವನ್ನೂ ತೋರಲಿಲ್ಲ. ಇರಲಿ, ಇದೇನೂ ದೊಡ್ಡ ಮಾತಲ್ಲ.

ಆಕಾಶವಾಣಿಯಲ್ಲಿ ಕೆಲಸ ಮಾಡುತ್ತಿದ್ದ ಮಹಿಳೆಯೊಬ್ಬರು ''ಜಯಾರಾಜಶೇಖರ್ ಅವರು 'ರೇಡಿಯೊ ನಾಟಕಗಳು' ಎಂದು ಪ್ರಕಟಿಸಿರುತ್ತಾರೆ. ಅವು ನಾಟಕಗಳೇ ಅಲ್ಲ'' ಎಂಬ ಮಾತು ಹೇಳಿದರು. ಆ ಮಹಿಳೆ ಕೆಲಸ ಮಾಡುತ್ತಿದ್ದ ಆಕಾಶವಾಣಿಯವರೇ ಅವನ್ನು ''ನಾಟಕ'' ಎಂದು ಪ್ರಸಾರ ಮಾಡಿದರಲ್ಲಾ!

ನಾಟಕಗಳ ಬಗೆಗೆ ಮಾತನಾಡಿದ ಮಹಿಳೆ ''ಐದು ಪ್ರಸಾರ ನಾಟಕಗಳು'' ಭರವಸೆಯನ್ನು ಮೂಡಿಸದ ಕೃತಿ. ಈ ಸಂಗ್ರಹದ ''ಅಲ್ಲಮ ಪ್ರಭು'', ''ಶಬರ ಶಂಕರ'', ''ರುಕ್ಮಿಣಿ ಸ್ವಯಂವರ'', ''ಪಾರ್ವತಿ ಪರಿಣಯ'', ''ಕೋಳೂರು ಕೊಡಗೂಸು'' -

ನಾಟಕಗಳು ಹೆಸರಿನಿಂದಲೇ ನಾಟಕದ ವಸ್ತುವನ್ನು ಸ್ಪಷ್ಟಪಡಿಸುತ್ತವೆ. ಬಾನುಲಿ ನಾಟಕಗಳಾದ ಇವುಗಳನ್ನು ರಂಗಪ್ರಯೋಗಗಳಾಗಿ ಬಳಸುವ ಸೀಮಿತ ಅವಕಾಶಗಳಿವೆ. ದೃಶ್ಯ ಮಾಧ್ಯಮವಾಗುವುದರಲ್ಲಿ ನಾಟಕ ಹೆಣಗಬೇಕಾಗುವುದು. ಜಯಾರವರ ನಾಟಕಗಳನ್ನು ಗಮನಿಸಿದಾಗ ಅವರಲ್ಲಿ ವಸ್ತುಮಿತಿ ಅರಿವಾಗುತ್ತದೆ'' ಎಂದರು.

ವಿಮರ್ಶೆ- ಅದು ಅವರವರ ದೃಷ್ಟಿಕೋನ - ಅದಕ್ಕೆ ನನ್ನ ಅಭ್ಯಂತರ ಏನೇನೂ ಇಲ್ಲ. ಆದರೆ ಇಲ್ಲಿ ಒಂದು ಮಾತು ಸ್ಪಷ್ಟಪಡಿಸಬಯಸುತ್ತೇನೆ. ''ಮಾಯಾ ಕೋಲಾಹಲ'' ಎಂಬ ಹೆಸರಿನ ನಾಟಕ, ಅಲ್ಲಮ ಪ್ರಭುವನ್ನು ಕುರಿತದ್ದೇ ಹೊರತು ನಾಟಕದ ಹೆಸರು ''ಅಲ್ಲಮ ಪ್ರಭು'' ಅಲ್ಲ!

ಈ ವಿಮರ್ಶೆಯನ್ನು ಓದಿ ಹಿರಿಯರೂ ನನ್ನಲ್ಲಿ ಅಭಿಮಾನವಿಟ್ಟಿರುವವರೂ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸುಪರಿಚಿತರೂ ಆದ ಶ್ರೀಮಾನ್ ಜಿ.ವೆಂಕಟಸುಬ್ಬಯ್ಯನವರು ''ನಾಟಕಗಳಿರಲಿ, ನಾಟಕಗಳ ಹೆಸರುಗಳನ್ನೂ ಸರಿಯಾಗಿ ಓದಿರದ ಇವರೆಲ್ಲಾ ಯಾವಾಗ ವಿಮರ್ಶಕರಾದರು? ನಾಟಕ ಗಮನಿಸಿದರೆ ಅವರಲ್ಲಿನ ವಸ್ತುಮಿತಿಯ ಅರಿವಾಗುತ್ತಂತೆ! ಹಾಗಾದರೆ ರಾಮಾಯಣವನ್ನು ಬರೆದ ಶ್ರೀ ಕುವೆಂಪು-ಅವರಿಗೆ ಮಹಾಭಾರತ ಗೊತ್ತಿಲ್ಲ ಎಂದಂತಾಯ್ತು! ದೊ...ಡ್ಡ ವಿಮರ್ಶಕರು ಇವರೆಲ್ಲಾ'' ಎಂದು ನಕ್ಕು ನುಡಿದದ್ದು ನನಗೀಗಲೂ ನೆನಪಿದೆ.

ಅದೇ ''ಐದು ಪ್ರಸಾರ ನಾಟಕಗಳು'' ಪುಸ್ತಕಕ್ಕೆ ನಾಡಿನ ಹಿರಿಯ ಗಮಕಿ, ನಟ, ನಾಟಕಕಾರ, ಶರಣಕವಿ, ಪ್ರವಚನಕಾರರಾದ, ನನ್ನಲ್ಲಿ ಪಿತೃಸಮಾನ ವಾತ್ಸಲ್ಯವಿರಿಸಿದ್ದ ಡಾ. ಜೋಳದರಾಶಿ ದೊಡ್ಡನಗೌಡರು ತಮ್ಮ ನಾಟಕದ ಅನುಭವದ ಹಿನ್ನೆಲೆಯಲ್ಲಿ ಸೊಗಸಾದ ಮುನ್ನುಡಿ ಬರೆದರು.

ಅದೇ ಪುಸ್ತಕಕ್ಕೆ ನಮ್ಮ ಮೇಷ್ಟ್ರು ''ಹಾರಯಿಕೆ'' ಹೀಗೆ ಬರೆದರು -

''ಕವಿ ತನ್ನ ಕಾವ್ಯದ ಪುಟಪುಟದಲ್ಲೂ ಪಂಕ್ತಿ ಪಂಕ್ತಿಯಲ್ಲೂ ತಾನೇ ಕುಳಿತಿರುತ್ತಾನೆ ಎಂಬ ಕಾವ್ಯಮೀಮಾಂಸಕರ ಮಾತಿಗೆ ನಿಂತನಿದರ್ಶನಗಳಾಗಿವೆ ಇಲ್ಲಿನ ನಾಟಕಗಳು. ಇವು ಸೋದರಿ ಜಯಮ್ಮನವರ ಶುದ್ಧ ಸಾತ್ವಿಕ ಮನೋಧರ್ಮಕ್ಕೆ ಹಿಡಿದ ಕನ್ನಡಿಗಳು.

ಕತೆಗಾರ್ತಿಯಾಗಿ, ಕವಯಿತ್ರಿಯಾಗಿ, ನಾಟಕಕಾರ್ತಿಯಾಗಿ, ಗಾಯಕಿಯಾಗಿ ಸಮಾಜ ಸುಧಾರಕಿಯಾಗಿ ಪ್ರಸಿದ್ಧರಾಗಿರುವ ಶ್ರೀಮತಿ ಜಯರಾಜಶೇಖರ್‌ರವರು ಬೆಂಗಳೂರು ಆಕಾಶವಾಣಿಯ ಮೂಲಕ ಸಾಕಷ್ಟು ಪರಿಚಿತರಾಗಿದ್ದಾರೆ. ಬರಹಗಾರ್ತಿಯಾಗಿ ಕನ್ನಡಿಗರಲ್ಲಿ ಭರವಸೆ ಹುಟ್ಟಿಸುತ್ತಿರುವ ಜಯಮ್ಮನವರು ಸಾಹಿತ್ಯ, ಸಂಗೀತಗಳೆರಡರಲ್ಲೂ ಕೃಷಿ ಮಾಡಿದ ಸವ್ಯಸಾಚಿಗಳು, ಇವರು ಈ ಎಲ್ಲ ನಾಟಕಗಳನ್ನು ರೂಪಕ (ಅಪೆರಾ)ಗಳನ್ನಾಗಿಸಿದ್ದಿದ್ದರೆ ನಾನು ಇದಕ್ಕೂ ಹೆಚ್ಚು ಆನಂದ ಪಡುತ್ತಿದ್ದೆ. ಈ ಪ್ರಕಾರದಲ್ಲಿ ಇವರು ಉತ್ತಮ ರಚನೆಗಳನ್ನು ನೀಡಬಲ್ಲರು ಎಂಬ ಭರವಸೆ ಇದೆ. ಸುಸಂಸ್ಕೃತ ಹಾಗೂ ಪ್ರತಿಭಾನ್ವಿತ ಚೇತಸರಾದ ಶ್ರೀಮತಿ ಜಯಾರಾಜಶೇಖರ್‌ರವರು ನನ್ನಾಸೆಯನ್ನು ಹಣ್ಣಾಗಿಸುತ್ತಾರೆಂದು ನಂಬಿದ್ದೇನೆ.

ಹುಟ್ಟು ಕಲಾವಿದೆಯರಾದ ಶ್ರೀಮತಿ ಜಯರಾಜಶೇಖರ್‌ರವರ ಲೇಖನಿ ಶ್ರೀಮಂತವಾಗಲಿ, ಧೀಮಂತವಾಗಲಿ - ಎಂದು ಹಾರ್ದಿಕವಾಗಿ ಹಾರಯಿಸುತ್ತೇನೆ''-

ಈ ಪುಸ್ತಕ ಪ್ರಕಟವಾಗುವ ಮೊದಲೇ ಇದರಲ್ಲಿನ ಕೆಲವು ನಾಟಕಗಳನ್ನು ನಮ್ಮದೇ ಸಂಘದಿಂದ ರಂಗದ ಮೇಲೂ ಮಾಡಿಸಿದ್ದೆವು. ಈ ಸಂಗ್ರಹದಲ್ಲಿರುವ ''ಕೋಳೂರು ಕೊಡಗೂಸು'' - ನಾಟಕವನ್ನು ನನ್ನ ತಂಗಿ ರೇಣುವಿನ ಮಗಳು ರಮ್ಯಾಳಿಂದ ಮಾಡಿಸಲೆಂದೇ ಬರೆದಿದ್ದೆ. ಅವಳಿನ್ನೂ ಓದಲು ಬಾರದ ವಯಸ್ಸಿನಲ್ಲಿ ನೆನಪಿನ ಆಧಾರದ ಮೇಲೆ ಆ ನಾಟಕದಲ್ಲಿ ಪ್ರಧಾನಪಾತ್ರ ಮಾಡಿ ಎಲ್ಲರಿಂದಲೂ ಮೆಚ್ಚುಗೆ ಪಡೆದಿದ್ದಳು.

ಮುಂದೆ ಬೆಂಗಳೂರು ದೂರದರ್ಶನ ಪ್ರಾರಂಭವಾದ ನಂತರ ಬಂದ ಶಿವರಾತ್ರಿ ಸಮಯದಲ್ಲಿ ಅದೇ ''ಕೋಳೂರು ಕೊಡಗೂಸು'' ನಾಟಕ ದೂರದರ್ಶನದಲ್ಲಿ ಪ್ರಸಾರವಾಯ್ತು. ರಮ್ಯಾ ಕೊಡಗೂಸಾಗಿ ಸೊಗಸಾಗಿ ಮುಗ್ಧ ಅಭಿನಯ ನೀಡಿದಳು. ಅವಳ ಅಭಿನಯ ನೋಡಿ, ನಾನು ನಾಟಕ ಬರೆದದ್ದು ಸಾರ್ಥಕವೆನ್ನಿಸಿತು. ಅನೇಕರು ಅಭಿನಂದಿಸಿ ಪತ್ರ ಬರೆದರು. ಡಾ. ಅನುಪಮಾ ಅವರು ''ಮುಗ್ಧ ಅಭಿನಯ ನೀಡಿದ ಆ ಮಗುವಿಗೆ ನನ್ನ ಅಭಿನಂದನೆ ತಿಳಿಸಿ'' ಎಂದು ಫೋನ್ ಮಾಡಿ ತಿಳಿಸಿದರು.

ಮುಂದಿನ ನನ್ನ ಪುಸ್ತಕ ''ಹಬ್ಬದ ಉಡುಗೊರೆ ಮತ್ತು ಇತರ ಪ್ರಸಾರ ನಾಟಕಗಳು'' - ಇದಕ್ಕೆ ನಮ್ಮ ಗುರುಗಳೇ ಮುನ್ನುಡಿ ಬರೆದರು. ಅವರು ಅದರಲ್ಲಿರುವ ನಾಟಕಗಳ ಬಗೆಗೆ ಮಾತ್ರ ಬರೆಯದೆ, ಬಾನುಲಿ ನಾಟಕಗಳ ಮಿತಿ, ಇಂದು ಅವುಗಳಿಗೊದಗಿರವ ಸ್ಥಿತಿಯ ಸಮಗ್ರ ಚಿತ್ರಣವನ್ನು ಕೊಟ್ಟಿರುವ ಅದರ ಪೂರ್ಣಪಾಠ ಹೀಗಿದೆ -

ಮುನ್ನುಡಿ

ಕೇವಲ ಶ್ರವಣ ಮಾಧ್ಯಮವನ್ನೇ ತನ್ನ ಪ್ರಣಾಳಿಕೆಯಾಗುಳ್ಳ ಪ್ರಸಾರ ನಾಟಕಕ್ಕೆ ಅದರದೇ ಆದ ಕೆಲವು ಮಿತಿಗಳೂ ಇವೆ, ವೈಶಿಷ್ಟ್ಯಗಳೂ ಇವೆ. ರೇಡಿಯೋ ಒಂದನ್ನುಳಿದು ಉಳಿದ ಕ್ಷೇತ್ರದಲ್ಲಿ ಅದರ ಕೈಸಾಗುವುದಿಲ್ಲ; ಇದು ಅದರ ಮಿತಿ, ಶ್ರವಣ ಮಾತ್ರದಿಂದಲೇ, ಶ್ರೋತೃಗಳಿಗೆ ಪಂಚೇಂದ್ರಿಯ ಸೌಖ್ಯವನ್ನು ಉದ್ಭಾವಿಕ ನಿರ್ಮಲ ಮೂರ್ತಿ ಎನಿಸಿದ್ದು ಅದರ ವೈಶಿಷ್ಟ್ಯ. ಇದು ದೃಶ್ಯಮಾಧ್ಯಮಗಳಾದ ರಂಗನಾಟಕ, ಅಪೆರಾ, ಟೆಲಿವಿಷನ್, ಪ್ರದರ್ಶನಗಳು ಇವುಗಳಿಂದ ಭಿನ್ನವಾದದ್ದು. ಯಾವುದೇ ರಂಗಸಜ್ಜಿಕೆಯಾಗಲಿ, ಪಾತ್ರಗಳ ಪ್ರತ್ಯಕ್ಷದರ್ಶನ ಅಥವಾ ಅದರ ಆಂಗಿಕ ಅಭಿನಯವಾಗಲಿ ಬೆಳಕು-ಕತ್ತಲೆಗಳ ಜಾಲವಾಗಲಿ ಯಾವುದೂ ಕಣ್ಣೆದುರಿನಲ್ಲಿಲ್ಲ. ಸಕಲಕ್ಕೂ ಕಿವಿಯೊಂದೇ ಪ್ರಾಮಾಣ್ಯ. ಇಂತಹ ಅಮೂರ್ತ ಅಪ್ರತ್ಯಕ್ಷ ಅಥವಾ ಪರೋಕ್ಷ ಕ್ರಿಯಾಶೀಲ ಕಲೆಗೆ ಶಬ್ದದ್ರವ್ಯ ಪೂರ್ಣಸಹಕಾರಿ. ಸಾಂದರ್ಭಿಕವಾಗಿ ಅದರೊಡನೆ ಶಬ್ದಸಂಯೋಜನೆ ಅಥವಾ ನಾದದ ಮೋದ ಬೆರತರೆ ಮಾತ್ರ ಪ್ರಸಾರ ನಾಟಕ ತನ್ನ ಜೀವಂತಿಕೆಯನ್ನು ಉಳಿಸಿಕೊಳ್ಳಬಲ್ಲುದು. ಹೇಳಿಕೇಳಿ ನಾಟಕ ಒಂದು ಸಂಕೀರ್ಣ ಕಲೆ

(Collective Art) ಅದರಲ್ಲೂ ಪ್ರಸಾರನಾಟಕವಂತೂ ವಿಶೇಷವಾಗಿ ಅನನ್ಯ ಪರತಂತ್ರವಾದ ಕಲೆ.

ಇತ್ತೀಚೆಗೆ ಇದರ ಅಸ್ಯಾನೀಕರಣವಾಗುತ್ತಿರುವುದು, ತುಂಬಾ ಶೋಚನೀಯ ಸಂಗತಿ. ಅದಕ್ಕೆ ಕಾರಣ ಇಲ್ಲದೆ ಇಲ್ಲ. ''ಅವಿಷ್ಕಾರಕ್ಕೆ ಅವಶ್ಯಕತೆಯೇ ಮಾತೃಗರ್ಭ'' ಎಂಬ ನಾಣ್ನುಡಿ ಪ್ರಸಾರನಾಟಕ ಸಂದರ್ಭದಲ್ಲೂ ಅಪ್ಪಟ ಸತ್ಯ. ಪ್ರಸಾರ ನಾಟಕದ ಕ್ಷೇತ್ರ ತುಂಬಾ ಸೀಮಿತವಾದುದು. ಅದಕ್ಕೆ ರೇಡಿಯೋ ಒಂದೇ ಸಂವಹನ ಮಾಧ್ಯಮ. ಅದರದೇನೇ ಎಷ್ಟೇ ಸಲಕರಣೆಗಳಿದ್ದರೂ ಹೆಲಿಕಾಪ್ಟರಿನ ಶಕ್ತಿಗೆ ಮಾತ್ರ ಬದ್ಧ, ಏರ್‌ಬಸ್‌ನಂತಹ ವೈನತೇಯ ಸಾಹಸ ಅದಕ್ಕಿಲ್ಲ. ಅದರಿಂದಾಗಿ ತನ್ನ ಮಾಧ್ಯಮ ದುರಾಕ್ರಮಣ ಆದರೆ ಅಥವಾ ಬೇರೊಂದು ಪ್ರದರ್ಶನದ ಪ್ರತ್ಯಾಯೋಜನೆ ನಡೆದರೆ ಇದು ತಾನಾಗಿಯೇ ಶಕ್ತಿಗುಂದಿ, ಕಳೆಗುಂದಿ, ಮೂಲೆ ಸೇರಿಕೊಳ್ಳಬೇಕಾಗುತ್ತದೆ. ಇಂದು ಈ ಪರಿಸ್ಥಿತಿ ಪ್ರಸಾರನಾಟಕಕ್ಕೆ ಬಂದೊದಗಿದೆ ಅನ್ನಿಸುತ್ತದೆ. ಸಿನೆಮಾ ಬಂದು ನಾಟಕವನ್ನು ಕಬಳಿಸಿದಂತೆ, ಟೆಲಿವಿಷನ್ ಬಂದು ರೇಡಿಯೋ ನಾಟಕವನ್ನು ನುಂಗಿ ನೊಣೆಯುತ್ತಿದೆ. ಈ ರಾಹುಗ್ರಸ್ತ ಸ್ಥಿತಿಯಿಂದ ಅದಕ್ಕೆ ಮುಕ್ತಿಕೊಡುವ ಹೊಣೆ ಲೇಖಕರ ಮೇಲಿದೆ. ಈ ಜವಾಬ್ದಾರಿಯನ್ನರಿತು ತಮ್ಮೆಲ್ಲ ಸತ್ತ್ವಶಕ್ತಿಗಳನ್ನು ಅದರ ಪ್ರಗತಿಗಾಗಿ ಮೀಸಲಿರಿಸಿ ದುಡಿಯುತ್ತಿರುವವರು ಕನ್ನಡದ ಹೆಸರಾಂತ ಲೇಖಕಿ ಶ್ರೀಮತಿ ಜಯರಾಜಶೇಖರ್‌ರವರು.

ಎಷ್ಟೇ ಸಂಕೀರ್ಣ ಸ್ವಭಾವದ್ದಿದ್ದರೂ ಆ ನಾಟಕ ಕಲೆಯನ್ನು ಒಗ್ಗಿಸಿಕೊಂಡ ಒಲಿಸಿ ದುಡಿಸಿಕೊಂಡ ಹಿರಿಮೆ ಶ್ರೀಮತಿ ಜಯರಾಜಶೇಖರ್‌ರವರದು. ಕತೆ, ಪ್ರಬಂಧಗಳ ಬರಹಗಾರ್ತಿಯಾಗಿ ತಮ್ಮ ಹೆಸರನ್ನು ನೊಂದಾಯಿಸಿಕೊಂಡ ಈ ಸೋದರಿ ನಾಟಕ ಅಂದರೆ ಪ್ರಸಾರ ನಾಟಕ, ನೃತ್ಯರೂಪಕ, ರಂಗನಾಟಕ - ಮೂರು ವಿಧದ ನಾಟಕ ರಚನೆಯಲ್ಲಿ ತಮ್ಮ ದಾಖಲೆಯನ್ನು ಸ್ಥಾಪಿಸಿದ್ದಾರೆ. ಇದುವರೆಗೆ ಇವರ ಹತ್ತು ಪ್ರಸಾರ ನಾಟಕಗಳು ಬೆಳಕು ಕಂಡಿವೆ. ಇನ್ನೂ ಇಪ್ಪತ್ತು ಬತ್ತಳಿಕೆಯಲ್ಲಿ ಬೆಚ್ಚಗೆ ಮಲಗಿವೆ. ಇವರ ರಚನೆಯಿಂದಾಗಿ ಬೆಂಗಳೂರು ಆಕಾಶವಾಣಿ ತನ್ನ ಜೀವಂತಿಕೆಯನ್ನು ಉಳಿಸಿಕೊಂಡಿತು. ಹಲವು ಮಹಿಳಾಮಂಡಲಗಳು ಚೇತೋಹಾರಿಗಳಾದುವು. ಇವರದೇ ಆದ ನವೀನ ಅವಿಷ್ಕಾರದಿಂದ ಅಭಿವ್ಯಕ್ತಿಯನ್ನು ಸಾಧಿಸಿದ ಶೂನ್ಯಸಂಪಾದನೆಯ ಕಾವ್ಯವಾಚನ ಪದ್ಧತಿಯು ಗಮಕಕಲಾಲೋಕದ ಘನತೆ ಗಾಂಭೀರ್ಯಗಳನ್ನು ಹೆಚ್ಚಿಸಿತು. ಸಹೃದಯ ಸಮುದಾಯವಂತೂ ಅವರ ತೀರ್ಥಸಾಹಿತ್ಯದಲ್ಲಿ ಮಿಂದು ಮಡಿಯಾಯಿತು. ಲೇಖಕಿ ಜಯರಾಜಶೇಖರ್‌ರವರ ವಿಕಾಸಶೀಲವುಳ್ಳ ಪ್ರತಿಭೆಗೆ, ಕಾಣುವ ಕಣ್ಣಿದೆ, ಕಟ್ಟುವ ಕಸುವೂ ಇದೆ. ಅದು ಹಸಿದವರಿಗೆ ಆಹಾರವೂ ಆಗುತ್ತದೆ; ಬಯಸಿದವರಿಗೆ ಬಂಗಾರವೂ ಆಗುತ್ತದೆ. ಅದಕ್ಕೆ ಇಲ್ಲಿನ ನಾಟಕಗಳೇ ನಿದರ್ಶನ.

ಶ್ರೀಮತಿ ಜಯಾರಾಜಶೇಖರ್‌ರವರು ಓರ್ವ ಸವ್ಯಸಾಚಿನಿ; ಇವರಿಗೆ ಸಾಹಿತ್ಯ ಸಂಗೀತಗಳೆರಡರಲ್ಲೂ ಸಾಕಷ್ಟು ಪ್ರಭುತ್ವ ಇದೆ. ಇವರ ಮಾತು ಮೃದು ಆದರೂ ಭಾವದೀಪ್ತ. ಇವರ ಶೈಲಿ ಸರಳ, ಆದರೂ ಪರಿಣಾಮಕಾರಿ. ಇವರಾಯ್ದ ವಸ್ತು

ಇತಿಹಾಸಕ್ಕೆ ಪುರಾಣಕ್ಕೆ ಸಂಬಂಧಿಸಿದ್ದು, ಆದರೂ ಅದರ ವಿನ್ಯಾಸ ವೈಭವಗಳಲ್ಲಿ ಸ್ವೋಪಜ್ಞತೆ ಮೆರೆಯದಿಲ್ಲ. ಇವರ ಪಾತ್ರಗಳಲ್ಲಿ ಶ್ರೀಮಂತಿಕೆ ಧೀಮಂತಿಕೆಗಳಿವೆ. ವೈಶಿಷ್ಟ್ಯಗಳೆಷ್ಟೋ ಅಷ್ಟೇ ಪ್ರಮಾಣದ ವೈಖರಿಯೂ ಇದೆ ಸಂವಿಧಾನ ಶಿಲ್ಪದಲ್ಲಿ. ಇವರದು ಕುಹಕ ಕುಟಿಲತೆಗಳನ್ನು ಕಂಡರಿಯದ ಮುಗ್ಧಮನೋಹರವಾದ ಲೇಖನಿ. ದಣಿವರಿಯದ ಲೇಖಕನಿಗೆ ಜಯವಾಗಲಿ, ಇತರ ಬತ್ತಳಿಕೆ ಅಕ್ಷಯವಾಗಲಿ. ಇವರು ಕೋದು ತಂದ ಈ ಹೂಮಾಲೆ ರಸಿಕ ವೃಂದಕ್ಕೆ ಅಪ್ಯಾಯಮಾನಕಾರಿಯಾಗಲಿ. ಕನ್ನಡಮ್ಮನ ಮಡಿಲು ತುಂಬಿ, ಮುಡಿಯ ಸಿಂಗರಿಸಿದ ಸತ್ಕೀರ್ತಿಗೆ ಚಿರಭಾಗಿಯಾಗಲಿ ಎಂದು ಹಾರ್ದಿಕವಾಗಿ ಹಾರೈಸುವೆ.

★ ★ ★

ಕೆಲವು ಪುಸ್ತಕಗಳನ್ನು ಬಿಟ್ಟರೆ ನನ್ನ ಎಲ್ಲ ಪುಸ್ತಕಗಳನ್ನು ಅಚ್ಚಿನ ಮನೆ ತಲುಪಿಸುವ ಮೊದಲು ನಮ್ಮ ಗುರುಗಳ ಅವಗಾಹನೆಯ ಕೃಪೆಗಾಗಿ ಅವರಿಗೆ ತಲುಪಿಸಿರುತ್ತೇನೆ. ಅವರ ಬಿಡುವಿಲ್ಲದ ಕೆಲಸಗಳ ಮಧ್ಯೆಯೂ ಈ ಶಿಷ್ಯಳ ಮೇಲಿನ ವಾತ್ಸಲ್ಯದಿಂದ, ಸಾಹಿತ್ಯ ಪ್ರೀತಿಯಿಂದ, ಸಮಗ್ರವಾಗಿ ಓದಿ ಸಲಹೆ, ಸೂಚನೆಗಳಿದ್ದರೆ ಕೊಡುತ್ತಾರೆ.

ಅದಕ್ಕೊಂದು ಮಾದರಿ ಅವರು ನನ್ನ ''ಮರಳಿ ಬಂದ ಮಧುರ ಮಾಸ''ದ ಹಸ್ತಪ್ರತಿ ಓದಿ ಹಿಂದಿರುಗಿಸುವಾಗ ಬರೆದ ಕಾಗದ-

ಜಯಕ್ಕನವರಲ್ಲಿ

-ವಿಜ್ಞಾಪನೆಗಳು.

ರಾತ್ರಿ ಮಠದಿಂದ ಬರುವ ವೇಳೆಗೆ ೯-೩೦ ಆಗಿತ್ತು. ಕೈ, ಕಾಲು ತೊಳೆದು ಊಟಮಾಡದೆ ಹಸ್ತಪ್ರತಿ ಓದಲು ಕುಳಿತೆ, ಓದಿದೆ -- ಓದಿದೆ. ಪೂರೈಸಿದಾಗ ರಾತ್ರಿ ೧-೩೦ ಆಗಿತ್ತು. ಸುಂದರವಾದ ಕಾದಂಬರಿಯೊಂದನ್ನು ಓದಿದ ಅನುಭವವಾಯ್ತು. ಸೊಗಸಾದ ಶೈಲಿಯಲ್ಲಿ ತುಂಬಾ ಚೆನ್ನಾಗಿ ಮೂಡಿ ಬಂದಿದೆ. ತಾಯಿಯ ಕರುಳಿನ ಎಳೆ ಪ್ರತಿ ಪುಟ ಪುಟದಲ್ಲೂ ಕಾಣಸಿಗುತ್ತದೆ.

ಕನ್ನಡ ಸಾಹಿತ್ಯಕ್ಕೆ ಉತ್ತಮವಾದ ಪ್ರವಾಸಕಥನದ ಸೇರ್ಪಡೆ, ಓದಿ ತುಂಬಾ ಸಂತೋಷಪಟ್ಟಿದ್ದೇನೆ.

ಅಧ್ಯಾಯಗಳನ್ನು ವಿಂಗಡಿಸಿದ್ದೇನೆ. ನೀವೂ ಒಮ್ಮೆ ನೋಡಿ ಸರಿ ಮಾಡಿಕೊಳ್ಳಿ.

ನಮಸ್ಕಾರ
ಸಾ.ಶಿ.ಮ.

ಇಷ್ಟೊಂದು ಶ್ರಮವಹಿಸಿ ಶಿಷ್ಯಳೊಬ್ಬಳ ಬರವಣಿಗೆಯನ್ನು ಕೂಲಂಕಷವಾಗಿ ಪರಿಶೀಲಿಸುವ ಸಹೃದಯ ಗುರುಗಳು ಎಷ್ಟು ಜನ ಇದ್ದಾರೆ?

ನನ್ನ ತಂದೆಯ ಜೀವನ ಚರಿತ್ರೆಯನ್ನು ಓದಿ, ಫೋನ್ ಮಾಡಿ ತಮ್ಮ ಸಂತೋಷ ವ್ಯಕ್ತ ಪಡಿಸಿದ್ದಲ್ಲದೆ, ಕಾಗದವನ್ನೂ ಬರೆದರು -

ಜಯಕ್ಕನವರಲ್ಲಿ ವಿಜ್ಞಾಪನೆಗಳು.

ದೂರವಾಣಿ ಮೂಲಕ ನಿಮ್ಮೊಡನೆ ಮಾತನಾಡಿದೆ. ಆದರೂ ಒಂದು ಸಾಲು ಬರಿಬೇಕು ಅನ್ನಿಸ್ತು - ಬರಿತಿದೇನೆ.

ನಿಮ್ಮ ರಚನೆಯಲ್ಲಿ ಅಚ್ಚುಕಟ್ಟಿದೆ. ನಿಮ್ಮ ಶೈಲಿಯಲ್ಲಿ ಅವರ್ಣನೀಯ ಸವಿ ಇದೆ. ಅದು ನನಗೆ ತುಂಬಾ ಹಿಡಿಸಿತು. ನಿಮ್ಮ ಎಲ್ಲ ಕೃತಿಗಳಂತೆ ಇದೂ ನನಗೆ ಖುಷಿ ಕೊಟ್ಟಿತು. ಕಾರಣ ಇದರಲ್ಲಿರುವ ಜೀವಂತಿಕೆ ಮತ್ತು ಸಹಜತೆ.

ನಿಮ್ಮ ತಂದೆ ಮತ್ತು ತಾಯಿ- ಇವರ ದಾಂಪತ್ಯ ಜೀವನದ ಬಗೆಗೆ ಇನ್ನೂ ಎರಡು ಮಾತು ಹೇಳಬಹುದಾಗಿತ್ತು ಅನ್ನಿಸುತ್ತೆ. ದಯವಿಟ್ಟು ಬೇಸರ ಮಾಡಿಕೊಳ್ಳಬೇಡಿ. ಇದ್ದಂತೆ ತುಂಬಾ ತುಂಬಾ ಚೆನ್ನಾಗಿದೆ.

ನಮಸ್ಕಾರ
ಸಾ.ಶಿ.ಮ.

೧೯೮೯ರಲ್ಲಿ ಡಾ. ಜೋಳದರಾಶಿ ದೊಡ್ಡನ ಗೌಡರ ಸನ್ಮಾನ ನಡೆಸಬೇಕೆಂದೂ ಅವರ ಅಭಿನಂದನಾ ಗ್ರಂಥ ಹೊರತರಬೇಕೆಂದೂ ಯೋಚಿಸಿದ ಸಮಯದಲ್ಲಿ ಎಲ್ಲ ಕೆಲಸ ಮಾಡುತ್ತೇವೆಂದವರು ಏನೂ ಮಾಡದೆ ನಾನು ಪೇಚಿಗೆ ಬಿದ್ದಿದ್ದೆ. ಆ ಕೆಲಸದಲ್ಲಿ ತೀರಾ ಅನನುಭವಿಯಾಗಿದ್ದ ನನಗೆ ದಿಕ್ಕೇ ತೋರದಂತಾಗಿತ್ತು. ಮೊಟ್ಟ ಮೊದಲು ಮನವಿ ಪತ್ರವನ್ನು ಮಾಡಿಸುವುದಾಗಲೀ, ಜಾಹಿರಾತು ಪುಸ್ತಕ ಪ್ರಿಂಟ್ ಮಾಡಿಸಲು ವಿಷಯ ಹೇಗೆ ಡ್ರಾಫ್ಟ್ ಹಾಕಬೇಕೆಂಬುದಾಗಲೀ ಗೊತ್ತಿರಲಿಲ್ಲ. ಈ ಕೆಲಸ ಮಾಡುತ್ತೇವೆಂದು ಒಪ್ಪಿಕೊಂಡವರನ್ನು ಪದೇ ಪದೇ ಫೋನ್ ಮಾಡಿ ''ಬರಲು ಸಾಧ್ಯವಾಗದಿದ್ದರೆ ದಯವಿಟ್ಟು ಡ್ರಾಫ್ಟ್ ಹಾಕಿಯಾದರೂ ಕೊಡಿ'' ಎಂದು ಬಿನ್ನವಿಸಿಕೊಂಡರೂ ಆ ಪುಣ್ಯಾತ್ಮರು ''ನನಗೆ ಮೈಗೆ ಚೆನ್ನಾಗಿಲ್ಲ, ಪುರುಸೊತ್ತಿಲ್ಲ'' ಮುಂತಾದ ಸಬೂಬುಗಳನ್ನೇ ತಿಂಗಳಾನುಗಟ್ಟಲೆ ಹೇಳುತ್ತಾ ಈ ಕೆಲಸಕ್ಕೆ ಸಹಕರಿಸುವುದಿಲ್ಲವೆಂದು ಪರೋಕ್ಷವಾಗಿ ತಿಳಿಯಪಡಿಸಿದರು.

ನಮ್ಮ ಮೇಷ್ಟ್ರು ಆಗ ಅಮೇರಿಕೆಗೆ ಹೊರಟಿದ್ದರು. ನಾನು ಫೋನ್‌ನಲ್ಲಿ ಈ ವಿಷಯ ತಿಳಿಸಿ, ಮನವಿ ಪತ್ರ ಹಾಗೂ ಜಾಹಿರಾತು ಪತ್ರಗಳ ಡ್ರಾಫ್ಟ್ ಹಾಕಿಕೊಡಬೇಕೆಂದು ಕೇಳಿದೆ. ದೂರದೇಶಕ್ಕೆ ಬೆಳಿಗ್ಗೆ ಹೊರಡಲಿರುವ ಅವರು ನನ್ನ ಮೇಲಿನ ವಿಶ್ವಾಸದಿಂದ ಹಾಗೂ ನಾನು ಪೇಚಿಗೆ ಸಿಕ್ಕಿರುವೆನೆಂಬ ಕನಿಕರದಿಂದ ಅವರೆಡರ ಡ್ರಾಫ್ಟ್ ಹಾಕಿ ಪೋಸ್ಟ್ ಮಾಡಿದರಲ್ಲದೆ, ಅವರಿಗೆ ಜೋಳದರಾಶಿಯವರ ಮೇರು ಕೃತಿ ''ಬಯಲ ಗಳಿಕೆಯ ಬೆಳಗು'' ಕೃತಿಯ ಬಗೆಗೆ ಬರೆದು ಕೊಡಬೇಕೆಂದು ನಾನು ಮೊದಲೇ ಬಿನ್ನವಿಸಿಕೊಂಡಿದ್ದಂತೆ, ಆ ಲೇಖನ ಸಿದ್ಧಪಡಿಸಿ ''ಅಕ್ಷರ ಚೆನ್ನಾಗಿ ಬರೆಯುವ ನನ್ನ

ವಿದ್ಯಾರ್ಥಿಗಳೊಬ್ಬರಿಗೆ ಅದನ್ನು ಪ್ರತಿ ಮಾಡಲು ಕೊಟ್ಟಿದ್ದೇನೆ. ಅದನ್ನು ನಾಳೆ ಅವರು ನಿಮಗೆ ತಲುಪಿಸುತ್ತಾರೆ. ಲೇಖನ ಕೊಡದೆ ಪ್ರಯಾಣ ಮಾಡಿದನೆಂದು ತಿಳಿದು ಬೇಸರಿಸಬೇಡಿ. ನಾನು ಊರಿನಲ್ಲಿ ಇದ್ದಿದ್ದರೆ ನಿಮಗೆ ಈ ಕೆಲಸದಲ್ಲಿ ಸಾಧ್ಯವಾದ ಸಹಾಯ ಮಾಡುತ್ತಿದ್ದೆ. ನನ್ನ ಕೈಲಾದದ್ದನ್ನು ಮಾಡಿದ್ದೇನೆ ಅಷ್ಟೆ'' ಎಂದರು.

ಅವರು ತಿಳಿಸಿದಂತೆ ಮರುದಿನ ಅವರ ವಿದ್ಯಾರ್ಥಿನಿಯೊಬ್ಬರ ಮುಖಾಂತರ ಆ ಲೇಖನವೂ, ಪೋಸ್ಟ್‌ನಲ್ಲಿ ಜಾಹಿರಾತು, ಮನವಿ ಪತ್ರದ ಡ್ರಾಫ್ಟ್ ಸಹ ಬಂತು. ಮುಂದೆಲ್ಲಾ ಕೆಲಸ ಯಾರು ಸಹಕರಿಸದಿದ್ದರೂ ದೈವ ಬೇರೊಬ್ಬರ ಮೂಲಕ ಸಹಾಯ ಹಸ್ತ ನೀಡಿ ಸಹಕರಿಸಿದ್ದರಿಂದ ಸುಸೂತ್ರವಾಗಿ ನಡೆಯಿತು. ಆಗ ನನಗೆ ಅನುಭವ ಇರಲಿಲ್ಲವಾಗಿ ಆ ಕೆಲಸ ಮಾಡಲು ಸಾಧ್ಯವಾ ಎಂದು ಯೋಚಿಸುತ್ತಾ ಎದೆಗುಂದಿದ್ದೆ. ಆದರೆ ಈಗ ಬೇರೆಯಾರೂ ಮಾಡಿರುವ ಸಂಭಾವನಾ ಗ್ರಂಥಕ್ಕೂ ಏನೇನೂ ಕಡಿಮೆಯಿಲ್ಲದ ಗ್ರಂಥ ಸಂಪಾದಿಸಿದ ಸಮಾಧಾನವೂ, ಅಂತಹ ಕೆಲಸವನ್ನು ಮಾಡಬಲ್ಲೆ ಎಂಬ ಆತ್ಮವಿಶ್ವಾಸವೂ ನನಗಿದೆ.

ಆದರೆ ಇದಕ್ಕೆಲ್ಲಾ ನಮ್ಮ ಮೇಷ್ಟ್ರು ಸಾ.ಶಿ.ಮ.ರರಂತಹ ಸಹೃದಯರ ಸಹಕಾರ, ಸಹಾಯ ಹಸ್ತವೇ ಕಾರಣವೆನ್ನುವುದರಲ್ಲಿ ಎರಡು ಮಾತಿಲ್ಲ.

ನನ್ನ ''ಮಹಾದೇವಿಯಕ್ಕಗಳ ಸಂಪಾದನೆ'' ಕ್ಯಾಸೆಟ್ ಕೇಳಿ ತುಂಬಾ ಸಂತೋಷಪಟ್ಟು, ಅಭಿನಂದಿಸಿದ್ದಲ್ಲದೆ, ಅದಕ್ಕೆ ತಮ್ಮ ವಿಮರ್ಶೆಯನ್ನು ಬರೆದರು. ಅದು ೧೯೯೨ರ ಏಪ್ರಿಲ್ ''ಬಸವಪಥ'' ಪತ್ರಿಕೆಯಲ್ಲಿ ಪ್ರಕಟವಾಗಿದೆ. ಶೂನ್ಯಸಂಪಾದನೆಯನ್ನು ಆಳವಾಗಿ ಅಧ್ಯಯನ ಮಾಡಿದವರ ವಿಮರ್ಶೆ ಇದು. ಆದ್ದರಿಂದ ಸಾಮಾನ್ಯವಾಗಿ ಆ ಕ್ಯಾಸೆಟ್‌ನಲ್ಲಿರುವ ಸಂಗೀತಕ್ಕೆ ಮಾರುಹೋಗಿಯೋ ಮಾತಿನ ಮೋಡಿಗೆ ಒಳಗಾಗಿಯೋ ಮೆಚ್ಚುವುದಕ್ಕಿಂತ, ಹೀಗೆ ತತ್ವವನ್ನು ಅಧ್ಯಯನ ಮಾಡಿದವರ ಅಭಿಪ್ರಾಯಗಳಿಗೆ ನಿಜವಾಗಿಯೂ ಬೆಲೆ ಹೆಚ್ಚು. ಅವರ ವಿಮರ್ಶೆಯನ್ನು ಓದಿ ನೋಡಿ-

ಕ್ಯಾಸೆಟ್ ಕೇಳಿಸಿದ ಕಂಠಶ್ರೀ

ಶ್ರೀಮತಿ ಜಿ.ವಿ. ಜಯಾರಾಜಶೇಖರ್ ಅವರು ಹಾಡಿ ಪ್ರಸಿದ್ಧಿಸಿರುವ ''ಮಹಾದೇವಿಯಕ್ಕಗಳ ಸಂಪಾದನೆ'' ಎಂಬ ಮಹತ್ವದ ಧ್ವನಿಸುರುಳಿಯನ್ನು ಕುರಿತ ವಿಷಯ ಪರಿಚಯ.

''ಶೂನ್ಯ'' ಎಂಬ ಶಬ್ದಕ್ಕಿರುವ ಸಾಮಾನ್ಯ ಅರ್ಥ ''ಏನೂ ಇಲ್ಲ'' ಎಂದು. ವಿಶೇಷಾರ್ಥ ''ಸಕಲವನ್ನೂ ಒಳಗೊಂಡದ್ದು'' ಎಂದು, ಶೂನ್ಯ ಅಂದರೆ ಸೊನ್ನೆ ಅಲ್ಲ, ಸೃಷ್ಟಿ; ಏನೂ ಇಲ್ಲ, ಅಲ್ಲ. ಎಲ್ಲದೂ ಆಗಿರುವುದು. ಎಲ್ಲದರಲ್ಲೂ ತಾನಿದ್ದು, ಯಾವುದೂ ತಾನಾಗದಿರುವುದು 'ಶೂನ್ಯ'. ವಿಶ್ವದ ಎಲ್ಲವನ್ನೂ ತಾನೊಳಗೊಂಡಿದ್ದರೂ ಯಾವುದರ ರೂಪದಲ್ಲೂ ತಾನಿರದ, ಸಕಲಕ್ಕತೀತವಾದ ನಿರ್ಲಿಪ್ತ, ನಿರಂಜನ ಸ್ಥಿತಿ ಅದರದು, ಅದೇ ಶೂನ್ಯ; ಅದೇ ಶಿವ, ಅದು ವಿಶ್ವಮಂಗಲ ವಸ್ತುವೂ ಹೌದು, ಅಂತಹ ಮಂಗಲದ ಗಳಿಕೆಯೇ ಶೂನ್ಯ ಸಂಪಾದನೆ.

''ಅಕ್ಕ ಹೆಣ್ಣುಕುಲದ ಹೆಮ್ಮೆ; ಅಂದಿಗಲ್ಲ, ಇಂದಿಗಲ್ಲ, ಎಂದೆಂದಿಗೂ ಅವಳು ಸತ್ಯದ, ನಿತ್ಯದ ನಿಧಿ, ಭಕ್ತಿ ಭಾವುಕಿ, ಶಿವಭಾವ ಸಂಪನ್ನೆ''.

ಈ ಶಬ್ದಸಂದೋಹ ಸ್ಫೋಟಗೊಂಡದ್ದು ವೈ.ಆರ್. ಜಯಶ್ರೀಯವರ ತುಂಬು ಕಂಠದ ಇಂಬಿನಲ್ಲಿ. ಗುಹಾಗಹ್ವರದ ಗರ್ಭದಿಂದ ಹೊರಬೀಳುವ ಗಂಭೀರ ವಾಣಿಯಂತೆ, ನಿಶೆಯ ಬಸಿರಿನಿಂದ ಪುಟಿದೇಳುವ ಉಷೆಯ ಹೊಂಬೊಗರಿನಂತೆ, ಅದು ಅಶರೀರವಾಣಿಯ ಅಣೋರಣೀಯ ಆದೇಶದ ಸಂದೇಶದಂತೆ ಶೂನ್ಯ ಹಾಗೂ ಶೂನ್ಯ ಸಂಪಾದನೆಗಿರುವ ನೈಜ ಹಾಗೂ ವಿಶಿಷ್ಟಾರ್ಥಗಳ ಸ್ಪಷ್ಟ ನಿರೂಪಣೆ ಅದಾಗಿದೆ.

ಅದನ್ನೇ ಹಿಂಬಾಲಿಸುತ್ತದೆ ಪಂಚವಾದ್ಯಗಳ ಇಂಚರದ ನಡುವೆ ವಿಶುದ್ಧ ವಿಖ್ಯಾತ ವಿದುಷಿ ಶ್ರೀಮತಿ ಜಯರಾಜಶೇಖರ್‌ರವರ ಮಧುರ ಮಂಜುಳವಾಣಿ, ಗಮಕಗತಿಯ ರಾಗರತಿ! ತಾಳಮೇಳಗಳ ಪ್ರಬುದ್ಧ ವಿನ್ಯಾಸದಲ್ಲಿ ಅಕ್ಕನ ಚೊಕ್ಕ ನುಡಿ ಶ್ರೋತೃವಿನಕಿವಿಗಹ್ವರದಲ್ಲಿ ಪ್ರತಿನಿಧಿಸುತ್ತದೆ.

ಅನಂತರದ್ದು ಅಕ್ಕಳ ಸಂಪಾದನೆಯ ಪಠ್ಯಭಾಗ. ಉಡುತಡಿಯಲ್ಲಿ ಉಡೆ ಕಳೆದು ಮೈಬತ್ತಲೆ, ಮನಬತ್ತಲೆಯಾಗಿ ಬಂದ ವೀರ ವೀರಾಗಿಣಿ ಮಹಾದೇವಿ ಅನುಭವ ಮಂಟಪದಲ್ಲಿ ಸಮಷ್ಟಿಯಿಂದ ಅಚ್ಛಾದಿತಳಾಗಿ ಎಲ್ಲರ ''ಅಕ್ಕ'' ಆಗುತ್ತಾಳೆ. ಅನುಭವ ಮಂಟಪದ ದ್ವಾರ ತೆರೆದುಕೊಂಡಂತೆ ಜಯಕ್ಕನವರ ಕಂಠಶ್ರೀ, ತೆರೆಯುತ್ತದೆ, ಮತ್ತೆ ಪುಟಿಸುತ್ತದೆ ಸ್ಫಟಿಕದಂತಹ ಅಕ್ಕನ ನುಡಿಗಳನ್ನು, ಓಂಕಾರದ ಝೇಂಕೃತಿಯೋ ಎನ್ನುವಂತೆ ವೇಣುವಾದನದ ಹಿನ್ನಲೆಯಲ್ಲಿ ಅಕ್ಕ ಮತ್ತು ಪ್ರಭುದೇವರ ಸಂವಾದ ಆರಂಭವಾಗುತ್ತದೆ.

ಆದಿ ಅನಾದಿಗಳ ವಿವರಣೆ, ಶಿವ-ಜೀವರುಗಳಿಗಿರುವ ಜೈವಿಕ ಸಂಬಂಧ ಕಾಮ-ಪ್ರೇಮಗಳ ಸರಳ ವ್ಯಾಖ್ಯಾನ, ನರ-ಹರರ ಐಕ್ಯಾನುಸಂಧಾನ ಸ್ವರೂಪ ಕ್ರಿಯಾಜ್ಞಾನ ಮತ್ತು ಭಾವಗಳೆಂಬ ತ್ರಿವಿಧಿಗಳ ತತ್ವಾನುಷ್ಠಾನಬೋಧೆ-ಒಂದೇ ಎರಡೇ ಅನೇಕ ವಿಷಯಗಳು ಚರ್ಚಿತವಾಗಿ, ಸೂಕ್ತ ಸಮಾಧಾನ ಹೊಂದಿ, ತೃಪ್ತಿಯ ಮಡಿಲು ಸೇರುತ್ತವೆ.

ಅಕ್ಕನ ಅಧ್ಯಾತ್ಮದ ನಿಲುವನ್ನು ಕಂಡಂತ ಶೂನ್ಯಪೀಠದ ಕೋಟಿ ಸೂರ್ಯಪ್ರಭೆಯ ಪ್ರಭು ಉದ್ಗರಿಸುತ್ತಾನೆ, ''ಅಂತರಂಗದ ಪ್ರಭೆ ಬಹಿರಂಗವೆಲ್ಲ ತಾನೆಯಾಗಿ ಗುಹೇಶ್ವರಲಿಂಗದಲ್ಲಿ ಸಂದಿಲ್ಲದಿಪ್ಪ ಮಹಾದೇವಿಯಕ್ಕನ ಶ್ರೀಪಾದಕ್ಕೆ ನಮೋನಮೋ ಎಂಬೆನು.''

''ತೊಲಗು ತಾಯೆ'' ಎಂದ ಬಾಯಿಯೆ ''ನಮೋ ನಮೋ'' ಎಂದು ನುಡಿಯುತ್ತದೆ; ಶಿರ ಮಣಿಯುತ್ತದೆ. ಅಣ್ಣ, ಚೆನ್ನಬಸವಣ್ಣ, ಮಾಚಿದೇವ, ಸಿದ್ಧರಾಮ-ಮೊದಲಾದ ಎಲ್ಲ ಶರಣರ ಶಿರಗಳು ಅವಳ ಶ್ರೀಪಾದಗಳಿಗೆ ಮಣಿಯುತ್ತವೆ.

ಅಂತಹ ಅಕ್ಕನ ಆಧ್ಯಾತ್ಮದ ಔನ್ನತ್ಯದ ಶಿಖರಕ್ಕೆ ತಮ್ಮದೇ ಆದ ಕಂಚು ಕಂಠದಲ್ಲಿ ಕೊಂಡೊಯ್ಯುತ್ತಾರೆ ವಿದುಷಿ ಜಯಾರಾಜಶೇಖರ್.

ವಚನ, ವಚನಗಳ ನಡುವಿನ ಪ್ರವಚನ ಶ್ರೀಮತಿ ಜಿ.ವಿ. ರೇಣುಕಾ ಅವರದು. ಅಸ್ಖಲಿತ ವಾಣಿಯಲ್ಲಿ ಅವಿಶ್ರಾಂತವಾಗಿ ಅಕ್ಕ ಜಯಕ್ಕನವರ ಗಾಯನಕ್ಕೊಂದು ಅರ್ಥಪೂರ್ಣ, ಭಾವಪೂರ್ಣ, ಔಚಿತ್ಯಪೂರ್ಣ ಚಾಲನೆ ಕೊಡುತ್ತದೆ ಸೋದರಿ ರೇಣುಕಾರವರ ವಿಸ್ತೃತ ವಿವರಣೆಯ ಪ್ರಬುದ್ಧ ವ್ಯಾಖ್ಯಾನ. ಆದರೆ ''ಸತಿ ಎಂದರೆ ಮುನಿವರು ನಮ್ಮ ಶರಣರು'' ಎಂಬಲ್ಲಿನ ''ಸತಿ''ಗೆ ವಿಶಿಷ್ಟ ವ್ಯಾಖ್ಯಾನ ಬೇಕಿತ್ತು. ಅದೇ ರೀತಿ ಕದಳಿಯತ್ತ ಹೊರಟ ಅಕ್ಕ ಶರಣರೆಲ್ಲರಿಗೂ ತನ್ನ ಅಂತಿಮ ಶರಣು ಸಮರ್ಪಿಸುವಾಗಿನ-

ಹುಟ್ಟಿದೆ ಶ್ರೀ ಗುರುವಿನ ಹಸ್ತದಲ್ಲಿ,
ಬೆಳೆದೆನು ಅಸಂಖ್ಯಾತರ ಕರುಣದೊಳಗೆ,
ಭಾವವೆಂಬ ಹಾಲು, ಸುಜ್ಞಾನವೆಂಬ ತುಪ್ಪ,
ಪರಮಾರ್ಥವೆಂಬ ಸಕ್ಕರೆಯನಿಕ್ಕಿದಿರಿ ನೋಡಾ !
ಇಂತಪ್ಪ ತ್ರಿವಿಧಾಮೃತವ ದಣಿಯಲೆರೆದು ಸಲಹಿದಿರೆನ್ನ,
ವಿವಾಹ ಮಾಡಿದಿರಿ, ಸಯವಪ್ಪ ಗಂಡಂಗೆ ಕೊಟ್ಟಿರಿ
ಕೊಟ್ಟ ಮನೆಗೆ ಕಳುಹಲೆಂದು ಅಸಂಖ್ಯಾತರು ನೆರೆದು ಬಂದಿರಿ,
ಬಸವಣ್ಣ ಮೆಚ್ಚಲೊಗತನವ ಮಾಡುವೆನು,
ಚನ್ನಮಲ್ಲಿಕಾರ್ಜುನನ ಕೈವಿಡಿದು,
ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲ ತಾರೆನು, ಅವಧರಿಸಿ
ನಿಮ್ಮಡಿಗಳೆಲ್ಲರು ಮರಳಿ ಬಿಜಯಂಗೈವುದು ಶರಣು, ಶರಣಾರ್ಥಿ !-

ಎಂಬ ವಚನದ ಕೆಲವು ಪಾದಗಳು ಪುನರುಚ್ಚರಿತವಾಗಿದ್ದಿದ್ದರೆ ಮತ್ತೂ ಮಧುರವಾಗಿರುತ್ತಿತ್ತು. ಕಡೆಯ ಪಕ್ಷ ''ನಿಮ್ಮ ಮಂಡೆಗೆ ಹೂವ ತಹೆನಲ್ಲದೆ ಹುಲ್ಲತಾರೆನು'' ಎಂಬ ನುಡಿ ಪುನರುಕ್ತಗೊಳ್ಳಬೇಕಿತ್ತು! ಮಂದ್ರ, ತಾರಗಳಲ್ಲಿ ಧ್ವನಿಗೊಳ್ಳಬಹುದಿತ್ತು. ಅಂತಾಗದೆ ಅದು ಗಮಕಿಯ ಆತುರದ ಭಾವನೆಗೆ ಬಲಿಯಾಗಿದೆ. ಇಲ್ಲಿ ತುಸು ಚಿಂತನೆಗೆ ತೊಡಗಿಸಿಕೊಂಡಿದ್ದಿದ್ದರೆ ಜಯಕ್ಕನವರ ಪ್ರತಿಭೆಗೆ ಸಾಣೆಕೊಟ್ಟಂತಾಗುತ್ತಿತ್ತು. ವೀಣೆ, ವಯೋಲಿನ್ ಸಹಯೋಗದಲ್ಲಿ ಮತ್ತಷ್ಟು ಮಧು ತುಂಬಬಹುದಿತ್ತು ಎನ್ನಿಸುತ್ತದೆ.

ಏನೇ ಇರಲಿ, ಶ್ರೀಮತಿ ಜಯಾರಾಜಶೇಖರ್ ಅವರು ಶೂನ್ಯ ಸಂಪಾದನೆಯಂತಹ ತತ್ವಾರ್ಥಗಳಿಂದ ಕೂಡಿದ, ಕ್ಲಿಷ್ಟವಾದ ಗ್ರಂಥವನ್ನು ಅತ್ಯಂತ ಶ್ರದ್ಧೆಯಿಂದ ಅಧ್ಯಯನ ಮಾಡಿ, ಮೊಟ್ಟ ಮೊದಲ ಬಾರಿಗೆ ರಂಜನೀಯ ಮಾಧ್ಯಮವಾದ ಧ್ವನಿಸುರುಳಿಗೆ, ಸಮರ್ಥ ರೀತಿಯಲ್ಲಿ ಅಳವಡಿಸಿರುವ ಅವರ ಸಾಹಸ ನಿಜಕ್ಕೂ ಶ್ಲಾಘನೀಯ.

''ಶೂನ್ಯ ಸಂಪಾದನೆ''ಯ ಹೃದಯದಂತಿರುವ ''ಮಹಾದೇವಿಯಕ್ಕಗಳ ಸಂಪಾದನೆ'' ಜಯಕ್ಕನವರ ಮನೋಧರ್ಮಕ್ಕೆ, ಅವರ ಶುದ್ಧ ಸತ್ವಸ್ವರೂಪಿಯಾದ ಪ್ರಾಂಜಲ ಮನಕ್ಕೆ ಹಿಡಿದ ಕನ್ನಡಿ.

ಹೊಳೆವ ಕೆಂಜೆಡೆಗಳ ಮಣಿ ಮಕುಟ
ಒಪ್ಪುವ ಸುಲಿಪಲ್ಲ, ನಗೆ ಮೊಗದ,
ಕಂಗಳ ಕಾಂತಿಯಿಂ, ಈರೇಳುಭವನಮುಂ
ಬೆಳಗುವ ದಿವ್ಯರೂಪ- ನನ್ನು ಅಕ್ಕಕಂಡಂತೆ

ಅದನ್ನು ಹಾಡಿ ತಣಿಸಿದ ಜಯಕ್ಕನವರೂ ಅದೇ ದಿವ್ಯವನ್ನು ದರ್ಶಿಸಿದ ಧ್ಯಾನಯೋಗಿನಿಯಾಗಿದ್ದಾರೆ.

ಅವರಲ್ಲಿ ಸರ್ವಶುಭಗಳೂ ಸಮೀಕೃತವಾಗಲಿ, ಅವರಿಂದಲೇ ಮಿಕ್ಕೆಲ್ಲಾ ಸಂಪಾದನೆಗಳು ಧ್ವನಿಸುರುಳಿಯಲ್ಲಿ ತೆಕ್ಕೆಬಿದ್ದು ಉರುಳಲಿ ಎಂದು ಹಾರ್ದಿಕವಾಗಿ ಹಾರೈಸೋಣ.''

ಡಾ. ಸಾ.ಶಿ.ಮ. ಅವರ ಭಾಷಣಗಳು ಕೇಳಲು ತುಂಬಾ ಚೆಂದ. ವಿಷಯವನ್ನು ಅಧ್ಯಯನ ಮಾಡಿಕೊಂಡು ಬಂದೂ ''ನನ್ನಲ್ಲಿ ಸರಕಿಲ್ಲ'' ಎಂದೇ ಮಾತು ಪ್ರಾರಂಭಿಸುವವರು. ಪದಗಳಿಗಾಗಿ ತಡಕಾಡುವುದಿಲ್ಲ ಈ ಕವಿ. ಅಲಂಕಾರಿಕ ಭಾಷೆ ಅವರ ಅಭಿವ್ಯಕ್ತಿಗೆ ತಾನಾಗಿಯೇ ತೆರೆದುಕೊಳ್ಳುತ್ತದೆ. ಜೋಗದ ಜಲಪಾತದಂತೆ ನಿರರ್ಗಳ ಓಟ. ಎಲ್ಲೂ ತಡೆ ಇಲ್ಲವೇ ಇಲ್ಲ. ಹೇಳಬೇಕಾದ್ದನ್ನು ಸ್ಪಷ್ಟವಾಗಿ, ಸಣ್ಣಪುಟ್ಟ ಕಥೆಗಳ ಮೂಲಕ, ಕಾವ್ಯದ ತುಂಡುಗಳ ಉದಾಹರಣೆಕೊಟ್ಟು, ರಸಮಯವಾಗಿ ನಿರೂಪಿಸುತ್ತಾರೆ. ಆದರೆ ಕೆಲವರ ಭಾಷಣದಂತೆ ರುದ್ರತಾಂಡವವಲ್ಲ, ಶಿವ ಶಿವೆಯರ ಲಾಸ್ಯದಂತೆ ಮಾತಿನ ಓಘ. ಅವರ ಭಾಷಣ ಮುಗಿದರೆ ಹೂ ಮಳೆಹೊಯ್ದು ಬಿಟ್ಟಂತಹ ಅನುಭವ!

ಎಷ್ಟೋ ಸಭೆ, ಸಮಾರಂಭಗಳಲ್ಲಿ ಈ ಗುರು, ಶಿಷ್ಯರಿಬ್ಬರೂ ವೇದಿಕೆಯ ಮೇಲೆ ಒಟ್ಟಿಗೆ ಕಾರ್ಯಕ್ರಮ ಕೊಟ್ಟಿದ್ದುಂಟು. ಕೆಲವು ಬಾರಿ ವೇದಿಕೆಯ ಮೇಲೆ ನಾನಿದ್ದು, ಪ್ರೇಕ್ಷಕರಲ್ಲಿ ಅವರಿದ್ದುದೂ ಒಂದು ವಿಶೇಷ! ಆಗ ಅವರಿಗೆ ಅದೆಷ್ಟು ಸಂತೋಷ. ಮಾತನಾಡಿದ್ದನ್ನು, ಹಾಡಿದ್ದನ್ನು ಮರುದಿನ ಫೋನಿನಲ್ಲಿ ವಿಮರ್ಶಿಸಿ ಹೇಳುವರು.

ಗುಮ್ಮಳಾಪುರಕ್ಕೆ ಅವರ ಪತ್ನಿಯೂ ಸೇರಿದಂತೆ ನಾವೆಲ್ಲಾ ಒಂದು ವ್ಯಾನಿನಲ್ಲಿ ''ಶೂನ್ಯಸಂಪಾದನೆ'' ವಿಚಾರ ಸಂಕಿರಣಕ್ಕಾಗಿ ಪ್ರಯಾಣ ಮಾಡಿದೆವು. ಶಿವಮೊಗ್ಗಾ ಬಸವ ಸಮಿತಿಯವರು ಏರ್ಪಡಿಸಿದ್ದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಲು ಮತ್ತು ೧೯೯೪ರಲ್ಲಿ ಶ್ರೀ ಸೇಡಿಯಾಪು ಕೃಷ್ಣಭಟ್ಟರಿಗೆ ಚಿದಾನಂದ ಪ್ರಶಸ್ತಿ ಬಂದ ಸಂದರ್ಭದಲ್ಲಿ ಅದನ್ನು ಅವರು ಪ್ರಯಾಣ ಮಾಡಲಸಮರ್ಥರಾಗಿದ್ದುದರಿಂದ - ಅವರಿಗೆ ಮಣಿಪಾಲದಲ್ಲೇ ಪ್ರಶಸ್ತಿ ಪ್ರದಾನ ಮಾಡಲು ಒಂದು ವ್ಯಾನಿನಲ್ಲಿ ಹೋದೆವು. ಆಗ ನನ್ನ ಸ್ನೇಹಿತರಾದ ಶ್ರೀಮತಿ ಸರೋಜಾನಾಯ್ಡು ಅವರೂ (ಅಮೆರಿಕದಲ್ಲಿರುವ ಮನೋರೋಗತಜ್ಞ ಡಾ. ನಾಯ್ಡು ಅವರ ಪತ್ನಿ) ಆಗ ಇಲ್ಲಿಗೆ ಬಂದಿದ್ದರು. ಅವರೂ ನಮ್ಮ ಜೊತೆ ಬಂದರು ನಾವು ಸುಮಾರು ೧೧ ಜನ (೭ ಜನ ಹೆಣ್ಣುಮಕ್ಕಳು!) ಅಲ್ಲಿಗೆ

ಹೋಗಿ, ಬರುವಾಗ ಕ್ಷೇತ್ರಗಳನ್ನು ಸಂದರ್ಶಿಸಿಕೊಂಡು ಬಂದದ್ದು ಸದಾ ನೆನಪಿಸಿಕೊಳ್ಳುವಂತಹ ಸವಿನೆನಪು.

ಪ್ರಯಾಣದ ವ್ಯವಸ್ಥೆ, ದಾರಿ ತೋರುವುದು, ಊಟ, ತಿಂಡಿಯ ವ್ಯವಸ್ಥೆ ಇವೆಲ್ಲಾ ಶ್ರೀಮತಿ ಪ್ರೇಮಾಭಟ್ ಅವರ ಪತಿ ಶ್ರೀಯುತ ಭಟ್ ಅವರದು. ಎಲ್ಲರೂ ಸಂಗೀತ, ಸಾಹಿತ್ಯದಲ್ಲಿ ಒಲವುಳ್ಳವರು - ದಾರಿ ಹೇಗೆ, ಊಟ ಎಲ್ಲಿ - ಹೀಗೆ ಯಾವ ಯೋಚನೆಯೂ ಇಲ್ಲದೆ ಸಾಹಿತ್ಯ ಸಲ್ಲಾಪ- ಸಂಗೀತದ ಸಮಾರಾಧನೆ ಒಬ್ಬರಲ್ಲಿ ಒಬ್ಬರಿಗೆ ಅಸಮಾಧಾನವಿಲ್ಲದೆ, ಎಲ್ಲರೂ ಮನೆಯ ದಿನದಿನದ ಜಂಜಡಗಳನ್ನು ಮರೆತು, ಉಲ್ಲಾಸದಿಂದ ಕಾಲ ಹೇಗೆ ಹೋಯಿತೆಂದೇ ಗೊತ್ತಾಗದಂತೆ ಕಾಲಕಳೆದದ್ದು ನನಗಂತೂ ಹೊಸ ಸಂತೋಷಕರ ಅನುಭವ. ಅದಕ್ಕೇ ನಾನು ನಮ್ಮ ಮನೆಯಲ್ಲಿ ''ಎಲ್ಲಾದರೂ ಪ್ರವಾಸ ಹೋಗುವುದಾದರೆ ಹೀಗೆ ಸಾಹಿತಿಗಳ, ಸನ್ಮಿತ್ರರ ಜೊತೆ ಹೋಗುತ್ತೇನೆ, ಮನೆಯವರ ಜೊತೆ ಮನೆಯಲ್ಲಲ್ಲದೆ ಹೊರಗೂ ಎಲ್ಲದಕ್ಕೂ ತಲೆಕೆಡಿಸಿಕೊಳ್ಳಲು ಯಾಕೆ ಬರಲಿ'' ಎಂದು ತಮಾಷೆಯಾಗಿ ಹೇಳುತ್ತಿರುತ್ತೇನೆ.

ಮೇಷ್ಟ್ರು ತಮ್ಮದೇ ದೊಡ್ಡಸ್ತಿಕೆಯಿಲ್ಲದೆ ಎಲ್ಲರೊಳಗೊಂದಾಗಿ ಬೆರೆತು ಹೋಗುತ್ತಾರೆ. ಇರುವ ಸಂತೋಷದ ವಾತಾವರಣವನ್ನು ಕೆಡಿಸದೆ ಸಂತೋಷ ಹೆಚ್ಚಿಸಲು ಪ್ರಯತ್ನಿಸುತ್ತಾರೆ. ಎಲ್ಲರ ಮಾತಿಗೂ ಅವಕಾಶ, ಮನ್ನಣೆ ಕೊಡುತ್ತಾರೆ. ಅವರು ಕೋಪಿಸಿಕೊಂಡಿದ್ದನ್ನು ನಾವು ನೋಡಿಯೇ ಇಲ್ಲ.

ಡಾ. ಸಾ.ಶಿ. ಮರುಳಯ್ಯನವರು ಬಡತನದಿಂದ ಮೇಲೆ ಬಂದು, ಈಗಿನ ನೆಲೆಯನ್ನು ಸಂಪಾದಿಸಿದ್ದಾರೆ. ಆದ್ದರಿಂದ ಜೀವನದ ಏರಿಳಿತಗಳು, ಕಷ್ಟನಷ್ಟಗಳು ಮತ್ತು ಸುಖದುಃಖಗಳ ಬೆಲೆ ಅವರಿಗೆ ಚೆನ್ನಾಗಿ ಗೊತ್ತು. ಸರಳಸ್ವಭಾವದ ಅಥವಾ ಇನ್ನೂ ಹೇಳಬೇಕೆಂದರೆ ಜೀವನದ ಈ ಜಂಜಾಟದಲ್ಲೂ ನುಗ್ಗಾಗದೆ ತಮ್ಮತನವನ್ನು ಉಳಿಸಿಕೊಂಡು ಕೆಲವು ವಿಚಾರಗಳಲ್ಲಿ ಇನ್ನೂ ಮುಗ್ಧತೆಯನ್ನು ಉಳಿಸಿಕೊಂಡಿದ್ದಾರೆ. ಸಜ್ಜನ ವಿಧೇಯರವರು.

ಮನೆಯನ್ನು ಸಮರ್ಥವಾಗಿ ನಡೆಸುವ ಹಾಗೂ ತಾವೇ ಸಂಸಾರ ರಥದ ಭಾರವನ್ನು ಹೆಚ್ಚು ಹೊತ್ತು ಪತಿಗೆ ಅವರ ಅಧ್ಯಯನ, ಅಧ್ಯಾಪನಗಳಿಗೆ ಬಿಡುವು ಮಾಡಿಕೊಟ್ಟಿರುವ, ಅನುಕೂಲರೂ ಅನುರೂಪರೂ ಆದ ಪತ್ನಿ ಶ್ರೀಮತಿ ವೀಣಾ ಇದ್ದಾರೆ. ಮಕ್ಕಳು ಶಿವಪ್ರಸಾದ್, ರವಿಪ್ರಸಾದ್, ರಾಗಿಣಿ ಉತ್ತಮ ವಿದ್ಯಾಭ್ಯಾಸ ಹೊಂದಿ ಸರಿಯಾದ ನೆಲೆಕೊಂಡು ತಂದೆ, ತಾಯಿಗಳಿಗೆ ನೆಮ್ಮದಿಯನ್ನು ಕೊಟ್ಟಿದ್ದಾರೆ.

''ಶೃತಿಸುಖನಿನದೆ'', ''ಶ್ರಾವಣ ಇದು ಶ್ರಾವಣ'', ''ಸುಮಸುಂದರ ತರುಲತೆಗಳ'' - ಮುಂತಾದ ನಾದಮೋದವೇ ಅಗ್ರಸ್ಥಾನದಲ್ಲಿರುವ ಹಲವಾರು ಕವಿತೆಗಳ ಕರ್ತೃ, ಸುಗಮಸಂಗೀತಗಾರರ ಅಚ್ಚುಮೆಚ್ಚಿನ ಕವಿ, ಅಬ್ಬರವಿಲ್ಲದೆ ಎಲೆ ಮರೆಯಕಾಯಿಯಂತೆ ಇರಬಯಸುವ ನಿಗರ್ವಿ.

ಅಚ್ಚುಕಟ್ಟಾದ ಸಂಸಾರ, ಜೀವನಕ್ಕೆ ಅವಶ್ಯಕವಾಗಿರುವ ಎಲ್ಲ ಸೌಲಭ್ಯಗಳು, ಸಾಹಿತಿಯಾಗಿ ಒಳ್ಳೆಯ ಕೀರ್ತಿ, ವಾಗ್ಮಿಯಾಗಿ, ಮೆಚ್ಚುಗೆ - ಈ ಎಲ್ಲವನ್ನೂ ಈಶ್ವರನ ಕರುಣೆಯಿಂದ ಪಡೆದಿರುವ ಶ್ರೀ ಸಾ.ಶಿ. ಮರುಳಯ್ಯನವರು ನೆಮ್ಮದಿಯಿಂದಿದ್ದಾರೆ. ಈಗ ನಮ್ಮಂತಹ ಶಿಷ್ಯರೆಲ್ಲರ ಶುಭ ಹಾರೈಕೆಯಂತೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರೂ ಆಗಿದ್ದಾರೆ.

ಈ ಎಲ್ಲ ಸೌಲಭ್ಯಗಳೊಂದಿಗೆ ನಮ್ಮ ಮೇಷ್ಟ್ರು ಚಿರಕಾಲ ಬಾಳಲಿ - ಅನೇಕ ಜ್ಞಾನದಾಹಿಗಳಿಗೆ ಸುಜಲವನ್ನು ನೀಡಿ ತಣಿಸಲಿ. ಇದು ಅವರ ವಿದ್ಯಾರ್ಥಿಗಳ ಆಸೆ. ಹಲವು ಪ್ರಶಸ್ತಿ, ಪುರಸ್ಕಾರಗಳು ಇತ್ತೀಚೆಗೂ ಕೆಲವು ಪ್ರಶಸ್ತಿಗಳು ಸಂದಿವೆ. ಆದರೆ ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಅಧ್ಯಾಪಕ, ಜನಪ್ರಿಯ ವಾಗ್ಮಿ, ಪ್ರತಿಭಾವಂತ ಕವಿಯಾಗಿರುವ ಈ ಸಹೃದಯ ಸಾಹಿತಿಗೆ ಸಲ್ಲಬೇಕಾದಷ್ಟು ಗೌರವ ಸಂದಿಲ್ಲವೆಂದು ನನ್ನ ಭಾವನೆ. ಮುಂದಾದರೂ ಪ್ರತಿಭೆಗೆ ತಕ್ಕ ಪುರಸ್ಕಾರ ಸಿಕ್ಕುವುದೆಂಬ ಆಸೆ, ಸಿಕ್ಕಲೆಂಬ ಆಶಯ ನಮ್ಮದು.

ಸಾಶಿಮ : ಬದುಕು ಮತ್ತು ವ್ಯಕ್ತಿತ್ವ

ಆರ್. ಬಸವರಾಜು

ಡಾ|| ಸಾಶಿಮರವರು ಜನಿಸಿದ್ದು ಚಿಕ್ಕನಾಯಕನಹಳ್ಳಿಯ ತಾಲ್ಲೂಕಿನ ಸಾಸಲು ಗ್ರಾಮದಲ್ಲಿ. ೨೮-೧-೧೯೩೧ ಇವರ ಜನ್ಮ ದಿನಾಂಕ. ತಂದೆ ಶ್ರೀ ಶಿವರುದ್ರಯ್ಯ, ತಾಯಿ ಶ್ರೀಮತಿ ಸಿದ್ದಮ್ಮ . ಅವರ ಇಬ್ಬರು ಮಕ್ಕಳಲ್ಲಿ ಮರುಳಯ್ಯನವರೇ ಹಿರಿಯರು. ಶಾಂತಮೂರ್ತಿಯವರು ಅವರ ಸಹೋದರ.

ಸಾಸಲು ತುಮಕೂರು ಜಿಲ್ಲೆಯ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ಒಂದು ಸಾಮಾನ್ಯ ಹಳ್ಳಿ. ಐವತ್ತು ಅರವತ್ತು ಮನೆಗಳು. ಎಲ್ಲರೂ ಹೊಲ-ತೋಟಗಳಲ್ಲಿ ದುಡಿಯುವ ರೈತರು. ಕಲ್ಪತರು ಬೀಡೆನಿಸಿದ ತಿಪಟೂರಿಗೂ ಇದು ಹತ್ತಿರದ ಗ್ರಾಮ. ಗ್ರಾಮದ ಸುತ್ತಮುತ್ತ ಹಸಿರು ಗರಿಗಳ ತೋಳ್ಬೀಸಿ ಕರೆಯುವ ತೆಂಗಿನ ತೋಟಗಳು. ಹೊಲಗಳಲ್ಲಿ ಬೆಳೆದು ನಿಂತ ರಾಗಿ, ಜೋಳ ಪೈರು ಪಚ್ಚೆಗಳು. ಈ ಪ್ರಕೃತಿ ಬಾಲಕ ಮರುಳಯ್ಯನ ಚಿತ್ತ ಭಿತ್ತಿಯಲ್ಲಿ ನೆಲೆ ನಿಂತು ಮುಂದೆ ಉತ್ಕೃಷ್ಟ ಪ್ರಕೃತಿ ಸೌಂದರ್ಯದ ಗೀತ ರಚನೆಗೆ ಕಾರಣವಾಗಿರಬಹುದು.

ಐವತ್ತು ವರ್ಷಗಳ ಹಿಂದೆ ಜನಸಂಖ್ಯೆಯ ಪ್ರಮಾಣವೂ ಕಡಿಮೆ. ಓದುವವರ ಸಂಖ್ಯೆ ಮತ್ತೂ ಕಡಿಮೆ. ಹೊಲ ತೋಟಗಳಲ್ಲಿ ಗೆಯ್ಮೆ ಮಾಡುವುದು. ದನಕರುಗಳನ್ನು ಮೇಯಿಸುವುದು - ಇವೇ ಅಂದಿನ ಬಾಲಕರ ಕರ್ತವ್ಯಗಳು. ಆದರೆ ಮರುಳಯ್ಯನವರು ಮೇಲಿನ ವೃತ್ತಿಯಿಂದ ಭಿನ್ನವಾದವರು. ಓದಬೇಕು, ಬರೆಯಬೇಕು, ಮುಂದೆ ದೊಡ್ಡ ವಿದ್ಯಾವಂತನಾಗಿ ಅಧ್ಯಾಪಕ ವೃತ್ತಿ ಹಿಡಿಯಬೇಕು. ಇವು ಅಂದಿನ ಈ ಮುಗ್ಧ ಬಾಲಕನ ಮಹತ್ವಾಕಾಂಕ್ಷೆಗಳು. ಎಲ್ಲ ಅಡೆತಡೆಗಳನ್ನೂ ನಿವಾರಿಸಿಕೊಂಡು ಗುರಿ ಸಾಧಿಸುವ ಛಲ.

ತಂದೆ ಶಿವರುದ್ರಯ್ಯನವರು ಆಗ ಸಾಸಲು ಗ್ರಾಮದ ಕೂಲಿ ಮಠದಲ್ಲಿ ಓಚಯ್ಯ. ಈ ದೃಷ್ಟಿಯಿಂದ ಮರುಳಯ್ಯನವರಿಗೆ ತಂದೆಯೇ ಮೊದಲ ಗುರು. ಅಂದು ಬಾಲಕನ ಮನೋಭೂಮಿಕೆಯಲ್ಲಿ ಬಿದ್ದ ಸಾಹಿತ್ಯದ ಬಿತ್ತು ಕ್ರಮೇಣ ಮೊಳಕೆಯೊಡೆದು ಇಂದು ಸುಮಾರು ಎಪ್ಪತ್ತಕ್ಕೂ ಹೆಚ್ಚಿನ ಕೃತಿಗಳ ಸೃಷ್ಟಿಗೆ ನಾಂದಿಯಾಯಿತು. ಕವನ, ಕಥೆ, ಕಾದಂಬರಿ, ನಾಟಕ, ನೃತ್ಯರೂಪಕ, ಜೀವನ ಚರಿತ್ರೆ, ವ್ಯಕ್ತಿಚಿತ್ರ, ವಿಮರ್ಶೆ, ಸಂಪಾದಿತ ಕೃತಿ, ಕ್ಯಾಸೆಟ್ ಹಾಡು, ಪಿಎಚ್.ಡಿ. ಪ್ರೌಢ ಪ್ರಬಂಧ - ಹೀಗೆ ವಿಸ್ತಾರವಾಗಿ ವೈವಿಧ್ಯಮಯವಾಗಿ ಹಬ್ಬಿ ಹರಡಿದೆ ಸಾಶಿಮ ರವರ ಸಾಹಿತ್ಯ ಸಂಪದ.

ಅವರದು ಸರಸ್ವತೀ ಆರಾಧಕರ ವಂಶ. ಸುಂದರ ಸಾರಸ್ವತ ಪರಿಸರ. ತಂದೆ ಶಿವರುದ್ರಯ್ಯನವರು ತಮ್ಮ ಕೂಲಿಮಠದಲ್ಲಿ 'ಅಮರ ಕೋಶ' ಹೇಳಿಕೊಟ್ಟು ಸ್ವಚ್ಛ

ಉಚ್ಚಾರಣೆ ಕಲಿಸಿದವರೇ ಅವರು. ಸಾಶಿಮರವರ ದೊಡ್ಡಪ್ಪನವರೂ ಮೇಸ್ಟರು. ಸೋದರಮಾವನವರೂ ಅಷ್ಟೇ. ಅಂದಮೇಲೆ ಮೇಸ್ಟರ ಮನೆತನದ ಕುಡಿ ಮೇಸ್ಟರಾಗದೆ ಮತ್ತೇನಾಗಲು ಸಾಧ್ಯ ? ಆದರೆ ಆಗ 'ಮೇಸ್ಟರು, ಸ್ಕೂಲು' ಇರಲಿಲ್ಲ. 'ಕೂಲಿಮಠ'ಗಳಿದ್ದವು. ಅವುಗಳಲ್ಲಿ ಕಲಿಸುವ 'ಓಚಯ್ಯ'ಗಳಿದ್ದರು. ಅಂದಿನ ಕೂಲಿಮಠಗಳು ಸುಜ್ಞಾನದ ಕೇಂದ್ರಗಳು. ಓಚಯ್ಯಗಳು ಹಳಗನ್ನಡ ಸಾಹಿತ್ಯ ಓದಿಕೊಂಡ ವಿದ್ವಾಂಸರು. ಅವರು ಸರ್ಕಾರದ ಸಂಬಳದಾರರಲ್ಲ. ಮಕ್ಕಳಿಗೆ ಓದು, ಬರೆಹ, ಲೆಕ್ಕ ಕಲಿಸಿದ್ದಕ್ಕಾಗಿ ಊರಿನವರು ದವಸ ಧಾನ್ಯವನ್ನೊ ಅಥವಾ ಹಣವನ್ನೊ ಕೊಡುತ್ತಿದ್ದರು. ಆದ್ದರಿಂದ ಓಚಯ್ಯನವರ ಉದರಂಭರಣ ಸಾಗುತ್ತಿತ್ತು. ಕೆಲವರು ಶ್ರೀಮಂತರ ಮನೆಗಳಲ್ಲಿ ಅವರ ಉಂಬಳವೂ ನಡೆಯುತ್ತಿತ್ತು. ಸಾಮಾನ್ಯವಾಗಿ ಗ್ರಾಮದ ದೇವಸ್ಥಾನಗಳು 'ಕೂಲಿಮಠ'ಗಳಾಗಿರುತ್ತಿದ್ದುವು. ಅಲ್ಲಿ ಕಲಿಕೆಯ ಕಾಯಕ ನಡೆಯುತ್ತಿತ್ತು. ಓಚಯ್ಯಗಳಿಗೆ ಅಂದು ದೊರೆಯುತ್ತಿದ್ದ ಸಾರ್ವಜನಿಕ ಮರ್ಯಾದೆ ಇಂದಿನ ಪ್ರೊಫೆಸರುಗಳಿಗೂ ಇಲ್ಲವೆನ್ನಬಹುದು. ಸಾಶಿಮ ಓದು ಬರಹ ಪ್ರಾರಂಭಿಸಿದ್ದು ಅಂಥ ಕೂಲಿ ಮಠದಲ್ಲಿ; ಸ್ವಗ್ರಾಮವಾದ ಸಾಸಲಿನಲ್ಲಿ. ಜನ್ಮವಿತ್ತ ತಂದೆಯ ಸಾನ್ನಿಧ್ಯದಲ್ಲಿ.

ತಂದೆ ಶಿವರುದ್ರಯ್ಯ ಗುಣಸಂಪನ್ನರು. ಧೈರ್ಯಶಾಲಿಗಳು ಮತ್ತು ಉದಾರಿಗಳು. ದಂಪತಿಗಳು ಎಂದಿನಿಂದಲೂ ದೈವಭಕ್ತರು. ಸಾಶಿಮರವರ ಕುಪ್ಪೂರು ಗದ್ದಿಗೆ ಮಠಕ್ಕೆ ನಡೆದುಕೊಂಡ ಪರಮಭಕ್ತರು. ಸಾಶಿಮರವರ ತಾಯಿ ಸಿದ್ದಮ್ಮನವರು ಗೃಹಕೃತ್ಯದಲ್ಲಿ ಶಿಸ್ತು ಮತ್ತು ಅಚ್ಚುಕಟ್ಟುತನ ಕಾಯ್ದುಕೊಂಡವರು. ಗುರುಗಳಲ್ಲಿ ಹಿರಿಯರಲ್ಲಿ ಮತ್ತು ದೇವರಲ್ಲಿ ಭಕ್ತಿಯುಳ್ಳವರು. ಪತಿಯಲ್ಲಿ ಕಾಣದ ಮತ್ತೊಂದು ಶಕ್ತಿ ಅವರಲ್ಲಿತ್ತು. ಅದು ಅವರ ವ್ಯವಹಾರ ಕುಶಲತೆ ಮತ್ತು ಎಂಥ ಸಂದರ್ಭದಲ್ಲೂ ಹೆದರದ ಸ್ವಭಾವ.

ಸಾಶಿಮರವರಿಗೆ ತಂದೆ ತಾಯಿಗಳಿಗಿಂತ ಮಿಗಿಲಾದ ದೇವರಿಲ್ಲ. ರಕ್ಷಾದೇವತೆ ಇರುವುದಾದರೆ ಅದು ಅವರ ಜೀವನ ಸಂಗಾತಿ ವೀಣಾ. 'ತಂದೆಯಿಂದ ವಿದ್ಯೆ ಮತ್ತು ತಾಯಿಯಿಂದ ಸ್ವಾಭಿಮಾನ ಇವು ನಾನು ಪಡೆದ ಬಳುವಳಿ' ಎಂದು ಸಾಶಿಮ ಅವರನ್ನು ಭಕ್ತಿಯಿಂದ ಸ್ಮರಿಸುತ್ತಾರೆ.

ಸಾಶಿಮರವರಿಗೆ ರಾಷ್ಟ್ರಪಿತ ಬಾಪೂಜಿಯವರ ದರ್ಶನ ಲಭಿಸಿದ್ದು ಒಂದು ಆಕಸ್ಮಿಕ. ಇವರ ದೊಡ್ಡಪ್ಪನವರಾದ ಬೆಂಗಳೂರಿನ ಸಿದ್ಧಾಂತಿ ಗುರುಬಸವ ಶಾಸ್ತ್ರೀಗಳವರ ನೇತೃತ್ವದಲ್ಲಿ ಅಖಂಡ ಭಾರತ ಪ್ರವಾಸ ತಂಡವೊಂದು ಹೊರಟಿತ್ತು. ಅದರಲ್ಲಿ ಯಳನಾಡು ಗ್ರಾಮದ ಸಾಹುಕಾರ್ ಶಿವನಂಜ ಶೆಟ್ಟರು ಒಬ್ಬರು. ಅವರು ನಿತ್ಯವೂ ಸ್ವಾಮಿಗಳ ಅಥವಾ ಬಾಲಬ್ರಹ್ಮಚಾರಿ ಜಂಗಮ ಜ್ಯೋತಿಯ ಪಾದೋದಕವಿಲ್ಲದೆ ಪ್ರಸಾದ ಸ್ವೀಕರಿಸುತ್ತಿರಲಿಲ್ಲ. ಆ ಪ್ರವಾಸಕ್ಕೆ ಆಗ ತಾನೆ ಕುಪ್ಪೂರು ಗದ್ದಿಗೆ ಷ॥ ಬ್ರ॥ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳಿಂದ ಶಿವದೀಕ್ಷೆ

ಪಡೆದಿದ್ದ ಎಂಟು ವರ್ಷದ ವಟು ಸಾಶಿಮ ಶೆಟ್ಟರ ನಿತ್ಯದ 'ಕ್ರಿಕಟ್ಟಳೆ'ಯ ಪೂಜಾ ಮೂರ್ತಿಯಾಗಿ ಹೋದರು. ಸಬರಮತಿ ಆಶ್ರಮದಲ್ಲಿ ಪೂಜ್ಯ ಬಾಪೂಜಿಯವರನ್ನು ಬೆಳಗಿನ ಪ್ರಾರ್ಥನಾ ಸಭೆಯಲ್ಲಿ ಸಂದರ್ಶಿಸಿದರು. ಎಲ್ಲರಂತೆ ಬಾಲಕ ಸಾಶಿಮ ಪೂಜ್ಯ ಬಾಪೂರವರಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು.

ಇಂದಿನಂತೆ ಆಗ ಟಿ.ವಿ. ರೇಡಿಯೋಗಳಿರಲಿಲ್ಲ. ಗ್ರಾಮಾಫೋನ್‌ಗಳಲ್ಲಿ ನಾಟಕದ ಹಾಡುಗಳು ಬರುತ್ತಿದ್ದವು. ಅಂದಿಗೆ ಗ್ರಾಮಾಫೋನ್ ಇಟ್ಟುಕೊಂಡವರೇ ಶ್ರೀಮಂತರು. ಎಸ್.ಪಿ. ನೀಲಕಂಠಪ್ಪ ಎಂಬುವವರ ಮನೆಯಲ್ಲಿ ಅಂಥಾದ್ದೊಂದು ಗ್ರಾಮಾಫೋನ್ ಇದ್ದುದನ್ನೂ, ಅದನ್ನು ಕೇಳಿ ತಾವು ಪರಮಾನಂದ ಭರಿತರಾದುದನ್ನೂ ಸಾಶಿಮರವರು ಇಂದಿಗೂ ಅಚ್ಚರಿಯಿಂದ ನೆನಪಿಸಿಕೊಳ್ಳುತ್ತಾರೆ.

ಸ್ವಗ್ರಾಮದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸಿದ ಬಾಲಕ ಮರುಳಯ್ಯ ಮಾಧ್ಯಮಿಕ ಶಾಲಾ ವ್ಯಾಸಂಗಕ್ಕಾಗಿ ಸಮಿಪದ ಶೆಟ್ಟೀಕೆರೆಗೆ ಬಂದರು. ನಿತ್ಯವೂ ಸಾಸಲಿನಿಂದ ಶೆಟ್ಟೀಕೆರೆಗೆ ಬಂದು ಶಾಲಾನಂತರ ಮತ್ತೆ ಸ್ವಗ್ರಾಮಕ್ಕೆ ಹಿಂತಿರುಗುವುದು. ಅವರು ಕೆಲವು ಹುಡುಗರಂತೆ ಹಿರಿಯರ ಬಲವಂತಕ್ಕೆ ಓದಲು ಬಂದವರಲ್ಲ . ಓದಿ ವಿದ್ಯಾವಂತನಾಗಿ ಅಧ್ಯಾಪಕನಾಗಬೇಕೆಂಬ ಮಹತ್ವಾಕಾಂಕ್ಷೆ ಆಗಲೇ ದೃಢವಾಗಿತ್ತು. ಆದ್ದರಿಂದ ಮನೆಯ ಬಡತನವಾಗಲೀ ನಿತ್ಯನಡೆದು ಬರುವ ಶ್ರಮವಾಗಲೀ ಅವರಿಗೆ ಲೆಕ್ಕಕ್ಕೇ ಬರಲಿಲ್ಲ. ಕಷ್ಟಪಟ್ಟು ಓದುತ್ತಿದ್ದ ಆ ಹುಡುಗನನ್ನು ಕಂಡು ಉಪಾಧ್ಯಾಯರಿಗೂ ಪ್ರೀತಿ, ಅಭಿಮಾನ. ಅಲ್ಲಿ ನಡೆದೊಂದು ಪ್ರಸಂಗ ಸಾಶಿಮರವರ ಆತ್ಮಾಭಿಮಾನ ಮತ್ತು ಬಡವರ ಬಗೆಗಿದ್ದ ಅವರ ಅನುಕಂಪೆಗೆ ನಿದರ್ಶನ.

ಬಾಲಕ ಮರುಳಯ್ಯ ಬಡ ಹುಡುಗನೆಂಬುದು ಉಪಾಧ್ಯಾಯರಿಗೆ ಗೊತ್ತಿತ್ತು. ಅವನಿಗೆ ಅಷ್ಟೋ ಇಷ್ಟೋ ಸ್ಕಾಲರ್‌ಶಿಪ್ ಹಣ ಕೊಡಿಸಿದರೆ ಸ್ವಲ್ಪ ಅನುಕೂಲವಾಗುತ್ತದೆಂದು ಭಾವಿಸಿದರು. ಒಳ್ಳೆ ಹುಡುಗ, ಚೆನ್ನಾಗಿ ಓದುವ ವಿದ್ಯಾರ್ಥಿ, ಸ್ಕಾಲರ್‌ಶಿಪ್ ಪಡೆಯಲು ಅರ್ಹ ಎಂದುಕೊಂಡು ಹುಡುಗನನ್ನು ಕರೆದು ಹೇಳಿದರು ಬಿಳಿಗೆರೆ ಶ್ರೀ ಸಿದ್ಧಲಿಂಗಯ್ಯ ಮೇಸ್ಟರು :

'ನೋಡು ಮರುಳಯ್ಯ, ವಿದ್ಯಾರ್ಥಿವೇತನಕ್ಕೆ ಅರ್ಜಿಕೊಡ್ತೇನೆ. ಅದನ್ನು ಭರ್ತಿಮಾಡಿಸಿಕೊಂಡು ಬಾ. ನಿನಗೆ ಹಣ ಬರುತ್ತೆ' ಎಂದರು.

ಹುಡುಗ ಕ್ಷಣಕಾಲ ಯೋಚಿಸಿ, 'ಸಾರ್, ನನಗೆ ಆ ಹಣ ಬೇಡ' ಎಂದ. ಉಪಾಧ್ಯಾಯರಿಗೆ ಆಶ್ಚರ್ಯ. 'ಯಾಕಪ್ಪ ಬೇಡ?' ಮತ್ತೆ ಕೇಳಿದರು.

'ಸಾರ್, ಅನ್ನ ಬಟ್ಟೆಗೆ ಸಾಕಾಗುವಷ್ಟನ್ನ ದೇವರು ನಮಗೆ ಕೊಟ್ಟಿದ್ದಾನೆ. ಅದನ್ನು ಇನ್ಯಾರಾದರೂ ಬಡ ವಿದ್ಯಾರ್ಥಿಗೆ ಕೊಡಿ'.

'ನೀನೂ ಬಡ ವಿದ್ಯಾರ್ಥಿಯೇ ಅಲ್ವೇನಪ್ಪ?'

'ಆದ್ರೆ ನನಗಿಂತಲೂ ಬಡ ಹುಡುಗರಿದ್ದಾರಲ್ಲಾ !'

ಹುಡುಗ ಆಸೆಬುರುಕನಲ್ಲ. ತಾನು ಬಡವನೆಂದು ಹೇಳಿಕೊಳ್ಳಲಾರದ ಆತ್ಮಾಭಿಮಾನ. ಎಲ್ಲಕ್ಕಿಂತ ಹೆಚ್ಚಾಗಿ ತನಗಿಂತ ಹೆಚ್ಚು ಬಡವರಾದವರಿಗೆ ಅದು ದೊರೆಯಲಿ ಎಂಬ ಧಾರಾಳತನ.

ಸಂಜೆ ಮನೆಗೆ ಹೋದಾಗ ಹುಡುಗ ತಾಯಿಗೆ ವಿಚಾರ ತಿಳಿಸಿದ. ಬಡವತನದ ಬವಣೆ ಗೊತ್ತಿದ್ದ ಆಕೆ, 'ನೀನು ಅರ್ಜಿ ನಮೂನೆ ತರಬೇಕಾಗಿತ್ತು' ಎಂದರು. ಮಗ ಸ್ಪಷ್ಟವಾಗಿ ಹೇಳಿದ; 'ಯಾಕಮ್ಮ ಅದಕ್ಕೆ ಆಸೆ ಪಡ್ಬೇಕು? ನಾವೇನು ಬಡವರಲ್ಲ. ನಮಗಿಂತ ಬಡವರಿದ್ದಾರೆ. ಅವರಿಗೆ ಸಿಕ್ಕಲಿ.'

ನಡುಮನೆಯಲ್ಲಿ ಕುಳಿತು ಆ ಮಾತು ಕೇಳಿಸಿಕೊಂಡ ತಂದೆಗೆ ಮಗನ ಬಗೆಗಿನ ಅಭಿಮಾನ ಇಮ್ಮಡಿಯಾಯಿತು.

ಆಗ ಮಾಧ್ಯಮಿಕ ಶಾಲಾ ಪರೀಕ್ಷಾಕೇಂದ್ರ ಶೆಟ್ಟೀಕೆರೆಯಲ್ಲಿ ಇರಲಿಲ್ಲ, ಚಿಕ್ಕನಾಯಕನಹಳ್ಳಿಯಲ್ಲಿತ್ತು. ಪರೀಕ್ಷೆಗೆ ಕಟ್ಟಬೇಕಾದ ಶುಲ್ಕ ಆರು ರೂಪಾಯಿ. ಅದನ್ನು ಹೇಗೋ ಹೊಂದಿಸಿಕೊಂಡು ಪರೀಕ್ಷೆಗೆ ಕುಳಿತು ಹುಡುಗ ತೇರ್ಗಡೆಯಾದ.

ಅಲ್ಲಿಂದ ಮುಂದೆ ಕಲ್ಪತರು ನಾಡು ತಿಪಟೂರಿಗೆ ಹೈಸ್ಕೂಲು ಓದಲು ಪ್ರಯಾಣ. ತಿಪಟೂರಿನ ಜಯದೇವ ಹಾಸ್ಟೆಲಲ್ಲಿ ಊಟ ವಸತಿಗೆ ವ್ಯವಸ್ಥೆ ಮಾಡಿಕೊಳ್ಳಬೇಕಾಗಿತ್ತು. ಹಾಸ್ಟೆಲಿಗೆ ಕೊಡುವಷ್ಟು ಹಣ ತಂದೆ ತಾಯಿಗಳ ಹತ್ತಿರ ಇರಲಿಲ್ಲ. ಹೇಗೆ ಓದಿಸುವುದು ಎಂದು ಅವರು ಚಿಂತೆಗೊಳಗಾದರು. ಹುಡುಗ ಧೈರ್ಯ ಕಳೆದುಕೊಳ್ಳಲಿಲ್ಲ. ಹಾಸ್ಟೆಲಿನ ಮೆಂಬರುಗಳಲ್ಲಿ ಹೋಗಿ ತನ್ನ ಪರಿಸ್ಥಿತಿ ಹೇಳಿಕೊಂಡ.

'ಹಾಸ್ಟೆಲಲ್ಲಿ ಫ್ರಿಸೀಟ್ ಕೊಡಿ' ಎಂದು ಬೇಡಿಕೊಂಡ. 'ಫ್ರಿಸೀಟ್ ಸಾಧ್ಯವಿಲ್ಲ, ತಿಂಗಳಿಗೆ ಐದು ರೂಪಾಯಿ ಕೊಟ್ಟು ಇರೋದಾದ್ರೆ ಇರು, ಇಲ್ಲಾಂದ್ರೆ ಬೇರೆ ವ್ಯವಸ್ಥೆ ಮಾಡ್ಕೊ' ಎಂದು ಉತ್ತರ ಬಂತು.

'ತಿಂಗಳಿಗೆ ಐದು ರೂಪಾಯಿ ! ಅಷ್ಟು ದೊಡ್ಡ ಮೊತ್ತವನ್ನು ಎಲ್ಲಿಂದ ತರ್‍ಲಿ ? ಆಗ ಎರಡನೇ ಮಹಾಯುದ್ಧದ ಪರಿಣಾಮವಾಗಿ ಭೀಕರ ಕ್ಷಾಮ, ರೇಷನ್ ಕಂಟ್ರೋಲ್ ಬೇರೆ ಬಂದಿತ್ತು. ತಾಯಿ ಅಲ್ಲಿ ಕೂಲಿ ನಾಲಿ ಮಾಡ್ತಾ ಇದ್ರು. ತಮ್ಮ ಬೇರೆ ಇದ್ದ. ಸಾಸಲಲ್ಲಿ ಪುಟ್ಟ ಅಂಗಡಿ ನಡೆಸ್ತಾಇದ್ವಿ, ಹಣದ ಮುಗ್ಗಟ್ಟಿನಿಂದ ಅದೂ ನಿಂತ ಹೋಯ್ತು. ತಿಂಗಳಿಗೆ ಐದು ರೂಪಾಯಿ ಕೊಡೋದಕ್ಕೂ ಸಾಧ್ಯ ಇರ್‍ಲಿಲ್ಲ' - ಅಂದಿನ ದುಃಸ್ಥಿತಿಯನ್ನು ಹೇಳಿಕೊಳ್ಳುವಾಗ ಈಗಲೂ ಅವರ ಕಂಠ ಗದ್ಗದವಾಗುತ್ತೆ. ಮುಖ ಮ್ಲಾನವಾಗುತ್ತೆ.

ಹಾಸ್ಟೆಲಲ್ಲಿ ಸೀಟು ಸಿಕ್ಕದಿದ್ದರೇನಾಯ್ತು ? ಹೇಗಾದರೂ ಓದು

ಮುಂದುವರಿಸಲೇಬೇಕೆಂಬ ಛಲ. 'ವಾರಾನ್ನಕ್ಕಾದ್ರೂ ಅನುಕೂಲ ಮಾಡಿಕೊಡಿ' ಎಂದು ತಿಪಟೂರಲ್ಲಿ ಅವರಿವರನ್ನು ಕೇಳಿದರು; ಬೇಡಿಕೊಂಡರು. 'ಅದೆಲ್ಲ ಸಾಧ್ಯವಿಲ್ಲ' ಅಂತಲೂ ಅನ್ನಿಸಿಕೊಂಡರು. 'ವಾರಾನ್ನಕ್ಕೆ ಸಾಧ್ಯವಿಲ್ಲ ಎಂದು ಅಂದು ನಿರ್ದಯರಾಗಿ ವರ್ತಿಸಿದವರೇ ತಾವು ಲೆಕ್ಚರರ್ ಆದಾಗ ಮಗಳನ್ನು ಕೊಡಲು ಮುಂದೆ ಬಂದರು' ಎಂದು ಈಗ ನಗೆ ಸೂಸುತ್ತಾರೆ ಸಾಶಿಮ.

ಅಂತೂ ಕೊನೆಗೆ ವಾರಾನ್ನಕ್ಕೆ ಅನುಕೂಲವಾಯ್ತು. ಸಾಸಲು ನಂಜಯ್ಯನವರು, ಮುರಿಗಪ್ಪನರು, ಚನ್ನಬಸವಣ್ಣನವರು ಮತ್ತು ಬೆಲಗೂರು ಲಿಂಗರಾಜಪ್ಪ ಅನ್ನುವವರು ಕನಿಕರಿಸಿದರು. ವಾರಕ್ಕೆ ಏಳು ದಿನವೂ ಅವರ ಮನೆಗಳಲ್ಲಿ ಊಟ. ಹೈಸ್ಕೂಲು ಫೀಸು ೩ ರೂಪಾಯಿ. ಅಷ್ಟನ್ನು ಕೊಡುವುದಕ್ಕೂ ಸಾಧ್ಯವಿಲ್ಲದಂತಹ ದುಸ್ಥಿತಿ. 'ಬಡವರನ್ನ ಯಾರೂ ಕೇಳೊಲ್ಲ' ಇಂದಿಗೂ ನೊಂದು ನುಡಿಯುತ್ತಾರೆ ಸಾಶಿಮ.

ಭಾರತೀಯ ಸ್ವಾತಂತ್ರ್ಯ ಸಂಗ್ರಾಮ ಆಗ ಒಳ್ಳೆಯ ಹುರುಪಿನಿಂದ ನಡೆಯುತ್ತಿತ್ತು. ಅಧಿಕಾರಿ ವರ್ಗದ ಆನೇಕರು ತಮ್ಮ ನೌಕರಿಗೆ ರಾಜೀನಾಮೆಯಿತ್ತು ಚಳವಳಿಯಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿಗಳು ತಮ್ಮ ವ್ಯಾಸಂಗ ನಿಲ್ಲಿಸಿ ಹೋರಾಟಕ್ಕೆ ಧುಮುಕಿದ್ದರು. ಗಾಂಧೀಜಿ ಎಲ್ಲರಿಗೂ ಅಂತಿಮ ಕರೆಕೊಟ್ಟಿದ್ದರು. 'ಇದು ನಮ್ಮ ಅಂತಿಮ ಹೋರಾಟ. ಮಾಡು ಇಲ್ಲವೆ ಮಡಿ ಎಂಬುದೇ ಈಗಿನ ನಮ್ಮ ಮಂತ್ರ' ಎಂದು ಹೋದೆಡೆಯಲ್ಲೆಲ್ಲಾ ಸ್ಪಷ್ಟಪಡಿಸುತ್ತಿದ್ದರು. ಹೋರಾಟ ಶಾಂತಿಯುತವಾಗಿದ್ದರೂ ಕೆಲವೆಡೆ ಹಿಂಸಾಚಾರಕ್ಕೂ ತಿರುಗಿತ್ತು. ಗ್ರಾಮಗಳಲ್ಲಿ ರೈತರು ಕಂದಾಯ ಕೊಡಲು ನಿರಾಕರಿಸಿದ್ದರು. ರೈಲ್ವೆ ಹಳಿ ತಪ್ಪಿಸುವುದು, ಟೆಲಿಗ್ರಾಫ್ ತಂತಿ ಕತ್ತರಿಸುವುದು, ಹೆಂಡದಂಗಡಿಗಳನ್ನು ನಾಶಗೊಳಿಸುವುದು - ಇಂತೆಲ್ಲ ಪ್ರತಿಭಟನೆಗಳನ್ನು ಮರುಳಯ್ಯನವರು ಕೇಳಿದ್ದರು. ಸ್ವತಃ ನೋಡಿದ್ದರು. ತಾವೂ ಈ ಚಳುವಳಿಯಲ್ಲಿ ಭಾಗವಹಿಸಬೇಕೆಂಬ ಅದಮ್ಯ ಆಸೆ.

ಹೈಸ್ಕೂಲಿನ ಮೊದಲ ಮತ್ತು ಎರಡನೆಯ ವರ್ಷದ ವ್ಯಾಸಂಗ ಹೀಗೆ ಕಷ್ಟದಲ್ಲೇ ಮುಂದುವರೆಯಿತು. ಎಲ್ಲ ಅಧ್ಯಾಪಕರಿಂದಲೂ 'ಬ್ರಿಲಿಯಂಟ್ ಸ್ಟೂಡೆಂಟ್' ಎಂಬ ಪ್ರಶಂಸೆಯೂ ದೊರೆಯಿತು. ಅದು ೧೯೪೭ನೆಯ ವರ್ಷ. ಗಾಂಧೀಜಿ ಮರಣ ಹೊಂದಿದ ದುರ್ದಿನಗಳು. ಹುಡುಗ ಎರಡನೆಯ ವರ್ಷ ಮುಗಿಸಿ ಮೂರನೆಯ ವರ್ಷಕ್ಕೆ ಕಾಲಿಟ್ಟ. ಅದು ಎಸ್.ಎಸ್.ಎಲ್.ಸಿ. ಪರೀಕ್ಷೆಯ ವರ್ಷ. ಈಗಿನ ಎಸ್ಸೆಸ್ಸೆಲ್ಸಿ ಆಗ 'ಮೆಟ್ರಿಕ್ಯುಲೇಷನ್' ಪರೀಕ್ಷೆ.

ಮೆಟ್ರಿಕ್ಯುಲೇಷನ್ ಓದುವಾಗಲೂ ಬಾಲಕನ ಬವಣೆ ತಪ್ಪಲಿಲ್ಲ. ಹಿಂದಿನ ಎರಡು ವರ್ಷಗಳಂತೆ ಆ ಮೂರನೆಯ ವರ್ಷವೂ ವಾರಾನ್ನವೇ ಗತಿಯಾಯಿತು.

ಆ ವರ್ಷ ಬೆಲಗೂರು ಚನ್ನಬಸಪ್ಪ ಅನ್ನುವವರ ಕೊಠಡಿಯಲ್ಲಿ ಇಲ್ಲವೇ

ಸಾಸಲು ಸೋಮಶೇಖರಪ್ಪನವರ ರೂಮಿನಲ್ಲಿ ವ್ಯಾಸಂಗ ಮಾಡಿಕೊಂಡು ಅಲ್ಲಿಯೇ ಮಲಗುತ್ತಿದ್ದ ಹುಡುಗ. ಆ ದಿನಗಳಲ್ಲಿ ಮರುಳಯ್ಯನವರಿಗೆ ತಿಪಟೂರಿನ ಸಿ.ವಿ. ವೆಂಕಟಾಚಲಯ್ಯನವರ ಪರಿಚಯವಾಯ್ತು. ಅವರು ಮಾಧ್ಯಮಿಕ ಶಾಲೆಯಲ್ಲಿ ಉಪಾಧ್ಯಾಯರಾಗಿದ್ದರು. ಪಾಠ ಹೇಳುವುದರಲ್ಲಿ , ಸಾಹಿತ್ಯ ವ್ಯಾಸಂಗದಲ್ಲಿ ಒಳ್ಳೆಯ ಪ್ರತಿಭಾನ್ವಿತ ವ್ಯಕ್ತಿ. ಪತ್ರಿಕೆಗಳಿಗೆ ಆಗಾಗ್ಗೆ ಲೇಖನಗಳನ್ನೂ ಬರೆಯುತ್ತಿದ್ದರು. ಶೇಕ್ಸ್‌ಪಿಯರ್ ಮತ್ತು ಟಿ.ಪಿ. ಕೈಲಾಸಂ ಅವರ ನಾಟಕಗಳನ್ನು ಕಂಠಪಾಠ ಮಾಡಿದ್ದರು. ಶೇಕ್ಸ್‌ಪಿಯರ್ ಟ್ರಾಜಿಡಿಗಳ ಬಗ್ಗೆ ಗಂಟೆಗಟ್ಟಲೆ ಉಪನ್ಯಾಸ ಮಾಡುತ್ತಿದ್ದರು. ಎಲ್ಲರ ಬಾಯಲ್ಲೂ ಆಗ ಸಿ.ವಿ.ವಿ. ಅವರ ಪ್ರಶಂಸೆಯೇ. ಅವರು ಬಾಲಕ ಮರುಳಯ್ಯ ಬರೆದುಕೊಂಡಿದ್ದ ತರಗತಿಯ 'ನೋಟ್ಸ್'ಗಳನ್ನು ನೋಡಿ ಮೆಚ್ಚಿಗೆ ಸೂಚಿಸಿದರು. 'ನಿಮ್ಮಂಥವರು ಮುಂದೆ ಬರಬೇಕು' ಎಂದು ಹುರಿದುಂಬಿಸಿ ಪುಕ್ಕಟೆಯಾಗಿ ಪಾಠ ಹೇಳಿದರು. ಅಂತೂ ಆ ವರ್ಷ ಮರುಳಯ್ಯನವರು ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ತೇರ್ಗಡೆಯಾದರು.

ಹೈಸ್ಕೂಲು ವ್ಯಾಸಂಗದ ದಿನಗಳಲ್ಲಿಯೇ ಕಾಣಿಸಿಕೊಂಡ ಮರುಳಯ್ಯನವರ ಪ್ರತಿಭೆಯ ಮತ್ತೊಂದು ಮುಖವನ್ನು ಇಲ್ಲಿ ಉಲ್ಲೇಖಿಸಬಹುದು. ಅದು ಅವರ ನಟನಾಸಾಮರ್ಥ್ಯಕ್ಕೆ ಸಂಬಂಧಪಟ್ಟದ್ದು. ರಜಾ ದಿನಗಳಲ್ಲಿ ಅವರು ಸ್ವಗ್ರಾಮಕ್ಕೆ ಬಂದಾಗ ವ್ಯರ್ಥವಾಗಿ ಕಾಲ ಕಳೆಯುತ್ತಿರಲಿಲ್ಲ. ಅದು ನಾಟಕಗಳ ಸುಗ್ಗಿಯ ಕಾಲ. ಸಿನಿಮಾಗಳ ಹಾವಳಿ ಈಗಿನಷ್ಟು ವ್ಯಾಪಕವಾಗಿರಲಿಲ್ಲ. ಹಳ್ಳಿಗಳಲ್ಲಿ ಯಕ್ಷಗಾನ 'ಮೇಳ'ಗಳು ವಿಜೃಂಭಿಸುತ್ತಿದ್ದವು. ಪಟ್ಟಣಗಳಲ್ಲಿ ಕಂಪನಿ ನಾಟಕಗಳು ಜನಮನ ಸೂರೆಗೊಂಡಿದ್ದವು. ಅವುಗಳ ಪ್ರಭಾವ ಈ ಬಾಲಕನನ್ನು ಪ್ರಚೋದಿಸದೆ ಇರಲಿಲ್ಲ. ಬಿಡುವಿನ ವೇಳೆಯಲ್ಲಿ ಗ್ರಾಮದವರೊಂದಿಗೆ ಜೊತೆಗೂಡಿ ನಾಟಕಗಳಲ್ಲಿ ಪಾತ್ರವಹಿಸುತ್ತಿದ್ದರು.

ಭಕ್ತಪ್ರಹ್ಲಾದ ನಾಟಕದಲ್ಲಿ ಪ್ರಹ್ಲಾದ, ಎಚ್ಚಮನಾಯಕದಲ್ಲಿ ಬುಡನ್‌ಶಾಸ್ತ್ರಿ ಜಗಜ್ಯೋತಿ ಬಸವೇಶ್ವರದಲ್ಲಿ ಬಸವೇಶ್ವರ, ಉಂಡಾಡಿಗುಂಡ ನಾಟಕದ ಗುಂಡ - ಪಾತ್ರ ಯಾವುದಾದರೇನು ? ಎಲ್ಲರನ್ನೂ ತನ್ಮಯಗೊಳಿಸುವಂತಹ ಸಮರ್ಥ ಅಭಿನಯ. ಪ್ರೇಕ್ಷಕರಿಂದ ಚಪ್ಪಾಳೆಗಳ ಸುರಿಮಳೆ, ಮುಕ್ತಕಂಠದ ಪ್ರಶಂಸೆ. ನೂರಾರು ನಾಟಕಗಳಲ್ಲಿ ಅಭಿನಯಿಸಿದ ಹೆಗ್ಗಳಿಕೆ. ಎಲ್ಲೆಲ್ಲೂ 'ನಾಟಕದ ಮರುಳಯ್ಯ' ನೆಂದೇ ಖ್ಯಾತಿ. ಮರುಳಯ್ಯ ನಾಟಕವಾಡುತ್ತಾನೆಂದೂ ಅಸೂಯಾಪರರ ಕಟಕಿ, ವ್ಯಂಗ್ಯ. ಆದರೆ ನಿಜ ಜೀವನದಲ್ಲಿ ಅವರೆಂದೂ ನಾಟಕವಾಡಿದವರಲ್ಲ. ಸಾಫ್‌ಸೀದಾ ಮನುಷ್ಯ. ವ್ಯಂಗ್ಯದಿಂದ ಅವರು ನೊಂದುಕೊಂಡವರೂ ಅಲ್ಲ; ಖಂಡಿಸಲೂ ಪ್ರಯತ್ನಿಸಿದವರಲ್ಲ. ಸಮಾಜದಲ್ಲಿ ಇಂಥವರು ಇದ್ದೇ ಇರುತ್ತಾರೆ ಎಂದು ಮರೆಯುವ ಸ್ವಭಾವ. ಸಿನಿಮಾ ಅವರಿಗೆ ಅಷ್ಟಾಗಿ ಇಷ್ಟವಿಲ್ಲ. ಹಳ್ಳಿಯವರ ಯಕ್ಷಗಾನ, ಕಂಪನಿ ನಾಟಕಗಳ ಬಗ್ಗೆ ಇಂದಿಗೂ ಹೆಚ್ಚಿನ ಒಲವು. ನಾಟಕಗಳ ಬಗ್ಗೆ ಚಿಕ್ಕಂದಿನಲ್ಲಿಯೇ ಅಂಕುರಿಸಿದ ಈ

ಆಸಕ್ತಿಯ ಫಲವಾಗಿ ಮುಂದೆ ಅವರು ಹಲವಾರು ನಾಟಕಗಳನ್ನು ಬರೆದರು. ನೃತ್ಯ ರೂಪಕಗಳನ್ನು ರಚಿಸಿದರು. ಸಂಸ್ಕೃತದ ಸ್ವಪ್ನವಾಸವದತ್ತ ನಾಟಕವನ್ನು ಕನ್ನಡಕ್ಕೆ ಭಾಷಾಂತರಿಸಿದರು. ಮರೀಬೇಡಿ, ಎರಡು ನಾಟಕಗಳು, ವಿಜಯ ವಾತಾಪಿ, ರೇಣುಕ ಪರಂಜ್ಯೋತಿ, ಅಂಬೆ, ಭಕ್ತಿಭಾವುಕಿ, ಸ್ನೋವೈಟ್ - ಇವೇ ಮೊದಲಾದುವು ಅವರು ರಚಿಸಿದ ನಾಟಕಗಳು, ಇವು ಅನೇಕ ಶಾಲಾ ಕಾಲೇಜುಗಳಲ್ಲಿ ಅಭಿನಯಿಸಲ್ಪಟ್ಟು ಜನಪ್ರಿಯವಾಗಿವೆ. ಇವುಗಳ ಸಂಭಾಷಣೆಯ ಸೊಗಸನ್ನು, ದೃಶ್ಯ ಕಲ್ಪನೆಯ ಔಚಿತ್ಯವನ್ನು ಓದಿಯೇ ಅನುಭವಿಸಬೇಕು. ಇವುಗಳಲ್ಲಿ 'ಭಕ್ತಿಭಾವುಕಿ' ಮಕ್ಕಳಿಗಾಗಿಯೇ ಬರೆದ ಗೀತ ರೂಪಕ. 'ವಿಜಯ ವಾತಾಪಿ' ಗುಬ್ಬಿ ಕಂಪನಿಯವರ ಅಭಿನಯಕ್ಕೆಂದೇ ಬರೆದ ಐತಿಹಾಸಿಕ ನಾಟಕ. ಶ್ರಿಯುತರು ಹೊನ್ನಪ್ಪ ಭಾಗವತರ್ ಮತ್ತು ಮಹದೇವಸ್ವಾಮಿಯವರ ನಾಟಕ ಕಂಪನಿಗಳ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು. ಈಗ ಚಲನಚಿತ್ರದ ಪ್ರಸಿದ್ಧ ನಿರ್ದೇಶಕ ಶ್ರೀ ರೇಣುಕಾಶರ್ಮ ಮತ್ತು ಬೂದಾಳು ಕೃಷ್ಣಮೂರ್ತಿ ಇವರ ಜೊತೆ ಸೇರಿ ಶ್ರೀ ಕೊಲ್ಲೂರು ಮೂಕಾಂಬಿಕಾ ಮತ್ತು ಸೀತಾ-ಆಂಜನೇಯ ಚಿತ್ರಗಳಿಗೆ ಹಾಡುಗಳನ್ನು ಬರೆದಿದ್ದಾರೆ.

ಮತ್ತೆ ಅವರ ವ್ಯಾಸಂಗದ ವಿಚಾರಕ್ಕೆ ಬರೋಣ. ಹಲವಾರು ತೊಂದರೆ ತಾಪತ್ರಯಗಳಲ್ಲಿಯೇ ಅವರು ಎಸ್ಸೆಸ್ಸೆಲ್ಸಿ ಮುಗಿಸಿದರು. ಇದುವರೆಗಿನದೇ ಈ ಪರಿಸ್ಥಿತಿಯಾಯ್ತು. ಮುಂದೆ ಕಾಲೇಜಿಗೆ ಸೇರುವ ಆಪೇಕ್ಷೆ ಬಾಲಕನಿಗೆ. ಆದರೆ ಅದಕ್ಕೆ ಹಣವೆಲ್ಲಿದೆ ? 'ಇಷ್ಟು ಓದಿದ್ದು ಸಾಕು, ಯಾವುದಾದರೂ ಕೆಲಸಕ್ಕೆ ಪ್ರಯತ್ನಿಸು' ಎಂದರು ತಂದೆ, ಆದರೆ ತಾಯಿಗೆ ಅದು ಇಷ್ಟವಿಲ್ಲ, ಮಗ ಮುಂದೆ ಓದಲಿ ಎಂಬ ಆಸೆ. ಅದು ಫಲಿಸುವಂತಿರಲಿಲ್ಲ. ತನ್ನ ಅಪೇಕ್ಷೆಗೆ ವಿರುದ್ಧವಾಗಿ, ಯಾವುದಾದರೊಂದು ನೌಕರಿ ಹಿಡಿಯಬೇಕೆಂದು ಬಾಲಕನಿಗೂ ಅನ್ನಿಸಿತು. ತುಮಕೂರಿನ ಡಿ.ಇ.ಓ. ಅವರನ್ನು ಭೇಟಿಯಾಗಿ ಯಾವುದಾದರೊಂದು ಮಿಡ್ಲ್‌ಸ್ಕೂಲಿನಲ್ಲಿ ನನಗೆ ಮೇಸ್ಟರ್ ಕೆಲಸ ಕೊಡಿ ಎಂದು ಬೇಡಿಕೊಂಡರು. ಅವರು ಯಾವ ಕೆಲಸವೂ ಖಾಲಿ ಇಲ್ಲ ಎಂದರು. ಬಹಳ ಬೇಸರಕೊಂಡ ಹುಡುಗ 'ಚಂದ್ರಲೇಖ' ಸಿನಿಮಾ ನೋಡಿಕೊಂಡು ಹಳ್ಳಿಗೆ ವಾಪಸ್ಸಾದ.

ಮರುಳಯ್ಯನವರ ಸಹಪಾಠಿಗಳು ಕೆಲವರು ಅನುಕೂಲಸ್ಥರ ಮಕ್ಕಳು. ಅವರೆಲ್ಲ 'ಇಂಟರ್ ಮೀಡಿಯೆಟ್' ವ್ಯಾಸಂಗಕ್ಕಾಗಿ ತುಮಕೂರಿಗೆ ಹೊರಟರು. ತನಗೆ ಅವರ ಅದೃಷ್ಟ ಇಲ್ಲವಾಯ್ತು ಎಂದು ಹುಡುಗ ಮುಖ ಚಿಕ್ಕದು ಮಾಡಿಕೊಂಡು ಮನೆಯಲ್ಲೇ ಉಳಿದ. ನನ್ನ ಹಣೆಯಲ್ಲಿ ಬರೆದದ್ದೇ ಇಷ್ಟು ಎಂದುಕೊಂಡ. ಆದರೆ ಕೆಲಸಕ್ಕಾಗಿ ಪ್ರಯತ್ನಿಸುತ್ತಲೇ ಇದ್ದ. ಆಗ ಅವನಿಗೆ ಅನುಕೂಲವಾಗುವಂತಹ ಸಂದರ್ಭವೊಂದು ಕೂಡಿ ಬಂತು.

ಸ್ವಗ್ರಾಮ ಸಾಸಲಿನಲ್ಲಿ ಸಾಹುಕಾರ್ ನೀಲಕಂಠಪ್ಪನವರ ಮನೆಯಲ್ಲಿ ಮದುವೆ. ಬೆಲಗೂರಿನ ಶಂಕರಪ್ಪ ಎನ್ನುವವನ್ನು ಆ ಮದುವೆಗೆ ಬಂದಿದ್ದರು. 'ಶಂಕಪ್ಪನವರನ್ನು

ಕೇಳಿದ್ರೆ ಯಾವ್ದಾದ್ರೂ ಕೆಲ್ಸ ಕೊಡಿಸ್ತಾರೆ' ಅಂತ ಟಪಾಲ್ ಮೇಸ್ತ್ರು ಮರುಳಯ್ಯನವರಿಗೆ ತಿಳಿಸಿದ್ರು. ಈ ಸಂಗತಿಯನ್ನು ಹುಡುಗ ತಂದೆತಾಯಿಗೆ ತಿಳಿಸಿದ. ಆವರು ಶಂಕರಪ್ಪನವರನ್ನು ಕಂಡು ತಮ್ಮ ಹುಡುಗನಿಗೊಂದು ಕೆಲಸ ಕೊಡಿಸುವಂತೆ ಪ್ರಾರ್ಥಿಸಿಕೊಂಡರು. ಶಂಕರಪ್ಪನವರು ಆಗ ಚಿತ್ರದುರ್ಗ ತಾಲ್ಲೂಕ್ ಬೋರ್ಡ್ ವೈಸ್‌ಪ್ರೆಸಿಡೆಂಟ್ ಆಗಿದ್ದರು. ಅವರ ವಾಸ ಚಿತ್ರದುರ್ಗದಲ್ಲಿ. ದೊಡ್ಡ ವ್ಯಕ್ತಿ, ಕೆಲಸ ಕೊಡಿಸುತ್ತಾರೆ ಎಂಬ ನಂಬಿಕೆ ಮರುಳಯ್ಯನವರ ತಂದೆ ತಾಯಿಗಳಿಗೆ.

ಆದರೆ, 'ಹುಡುಗನಿಗೆ ಈಗಲೇ ಕೆಲಸ ಬೇಡ, ಮುಂದೆ ಓದಲಿ' ಎಂದು ಸ್ಪಷ್ಟವಾಗಿ ಹೇಳಿದರು ಶಂಕರಪ್ಪ. 'ನಿಮ್ಮಿಂದ ಆತನನ್ನು ಓದಿಸಲು ಸಾಧ್ಯವಿಲ್ಲ ಅನ್ನೋದೂ ಗೊತ್ತಿದೆ. ಅವನನ್ನು ನನ್ನ ಜೊತೆ ಕಳಿಸಿ. ಮುಂದಿನ ವ್ಯವಸ್ಥೆ ನಾನು ಮಾಡುತ್ತೇನೆ' ಎಂಬ ಭರವಸೆ ನೀಡಿದರು. ಹುಡುಗನ ರೊಟ್ಟಿ ಜಾರಿ ತುಪ್ಪದಲ್ಲಿ ಬಿತ್ತು !

ಹುಡುಗನ ಆಸೆಯ ಹಕ್ಕಿ ಈಗ ಗರಿಗೆದರಿ ಹಾರತೊಡಗಿತ್ತು; ಆನಂದದಿಂದ ಹಾಡತೊಡಗಿತ್ತು. ಬಟ್ಟೆಬರೆ ಹೊಂದಿಸಿಕೊಂಡು ಶಂಕರಪ್ಪನವರೊಂದಿಗೆ ಬಸ್ಸಿನಲ್ಲಿ ಹೊರಟ. ಅವರ ಸಲಹೆಯ ಮೇರೆಗೆ ಚಿತ್ರದುರ್ಗದ ಜಯದೇವ ಹಾಸ್ಟೆಲಿಗೆ ಅರ್ಜಿ ಹಾಕಿದ್ದಾಯ್ತು. ಉಚಿತ ಪ್ರಸಾದಕ್ಕೆ ಅಲ್ಲಿ ಅನುಕೂಲವಾಯ್ತು. ಕಾಲಾವಕಾಶ ಮೀರಿದ್ದರಿಂದ ಕಾಲೇಜಿನಲ್ಲಿ ಹೆಚ್ಚು ಫೀಸ್ ಕೊಡಬೇಕಾಯಿತು. ಶಂಕರಪ್ಪನವರು ಇವರ ಕಾಲೇಜಿನ ಫೀಸ್ ಕೂಡ ಮಾಫಿ ಮಾಡಿಸಿದರು. 'ಈಗಲೇ ಯಾವ ನೌಕರಿಯೂ ಬೇಡ. ಮುಂದೆ ಓದು' ಎಂದು ಹುರಿದುಂಬಿಸಿದರು. 'ದೇವರೇ ಶಂಕರಪ್ಪನವರ ರೂಪದಲ್ಲಿ ಬಂದು ನನ್ನ ಇಂದಿನ ಸ್ಥಿತಿಗೆ ಕಾರಣವಾದ' - ಇಂದಿಗೂ ಹಾಗೆಂದು ಕೃತಜ್ಞತೆಯಿಂದ ಬಿ.ಎಸ್. ಶಂಕರಪ್ಪನವರನ್ನು ಸ್ಮರಿಸುತ್ತಾರೆ ಮರುಳಯ್ಯ.

ಮನೆಯ ಬಡತನದ ಪರಿಸ್ಥಿತಿಯಲ್ಲಿ ಬದಲಾವಣೆ ಏನೂ ಆಗಿರಲಿಲ್ಲ. ಆದರಿಂದ ನೊಂದ ತಂದೆ, 'ಈಗಲಾದರೂ ಯಾವುದಾದರೊಂದು ಕೆಲಸಕ್ಕೆ ಸೇರಿಕೊ' ಎಂದರು. ತಾಯಿ ಅದಕ್ಕೆ ಸುತರಾಂ ಒಪ್ಪಲಿಲ್ಲ. ತಮ್ಮಲ್ಲಿದ್ದ ಕಲಾಬತ್ತು ಸೀರೆಯನ್ನು ಮಾರಿ ಮಗನಿಗೆ ಹಣಕೊಟ್ಟು 'ಮುಂದೆ ಓದು' ಎಂದರು. ಹುಡುಗ ಫೈನಲ್ ಇಯರ್ ಇಂಟರ್ ಮೀಡಿಯೇಟ್ ಓದಲು ಮತ್ತೆ ಚಿತ್ರದುರ್ಗಕ್ಕೆ ಬಂದ. ಆತ ಪ್ರತಿಭಾವಂತ ಹುಡುಗನೆಂಬುದನ್ನು ಆ ವೇಳೆಗೆ ಎಲ್ಲ ಅಧ್ಯಾಪಕರೂ ಗಮನಿಸಿದ್ದರು. ಕಾಲೇಜು ವಾರ್ಷಿಕೋತ್ಸವದ ನಾಟಕದಲ್ಲಿ ವಿದ್ಯಾರ್ಥಿಯ ಅಭಿನಯಸಾಮರ್ಥ್ಯ ಕಂಡು ತಲೆದೂಗಿದರು. ಚರ್ಚಾ ಸ್ಪರ್ಧೆಗಳಲ್ಲಿ ಆತನ ವಾದ ವೈಖರಿ ಕಂಡು ಬೆರಗಾದರು.

'ಇಂಟರ್ ಮೀಡಿಯೇಟ್ ಕಾಲೇಜ್ ಸೇರಿದಂದೇ ಕವನ, ಸಣ್ಣಕಥೆ, ಪ್ರಬಂಧ - ಈ ಬಗೆಯ ಸಾಹಿತ್ಯ ಪ್ರಕಾರಗಳಿಗೆ ಕೈ ಹಾಕಿದೆ. ಅಂದಿನಿಂದ ಇಂದಿನವರೆಗೂ ಬರೆದುಕೊಂಡು ಬರುತ್ತಿದ್ದೇನೆ. ಆ ಪ್ರವೃತ್ತಿ ಇನ್ನೂ ನನ್ನಲ್ಲಿ ಬತ್ತಿಲ್ಲ' ಎಂದು

ಸಾಶಿಮರವರೇ ತಮ್ಮ 'ನನ್ನ ಕವನಗಳು' ಸಂಗ್ರಹದ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಆಗಿನ ಅವರ ಲೇಖನಗಳು ದೇಶಬಂಧು, ಪೌರವಾಣಿ, ಶರಣಸಾಹಿತ್ಯ ಪತ್ರಿಕೆಗಳಲ್ಲಿ ಪ್ರಕಟವಾಗುತ್ತಿದ್ದವು.

ರಜಾದಿನಗಳಲ್ಲಿ ಮರುಳಯ್ಯನವರು ವ್ಯರ್ಥ ಕಾಲಹರಣ ಮಾಡುತ್ತಾ ಮನೆಯಲ್ಲಿ ಕೂರುತ್ತಿರಲಿಲ್ಲ. ಒಮ್ಮೆ ಅವರು ರಜಾಕ್ಕೆಂದು ಊರಿಗೆ ಬಂದಾಗ ಜೋಗ್‌ನಲ್ಲಿ ಟೈಪಿಸ್ಟ್ ಕೆಲಸ ಖಾಲಿ ಇದೆ, ಪ್ರಯತ್ನಿಸಬಹುದು ಎಂದು ಯಾರೋ ಹೇಳಿದರು. ಮರುಳಯ್ಯನವರು ಬಸ್ ಹತ್ತಿ ಜೋಗ್‌ಗೆ ಹೋದರು. ಅಲ್ಲಿ ಕೆಲಸವೂ ಸಿಕ್ಕಿತು. ಮೂರು ತಿಂಗಳು ಕೆಲಸ ಮಾಡಿ ಹಣ ಹೊಂದಿಸಿಕೊಂಡು ಮತ್ತೆ ಸಾಸಲಿಗೆ ಬಂದರು. ಆಗ ಎಲ್ಲೆಲ್ಲಿಯೂ ಮಲೇರಿಯಾ ಕಾಹಿಲೆಯ ಹಾವಳಿ ಬೇರೆ ಪ್ರಾರಂಭವಾಗಿತ್ತು. ಮತ್ತೆ ಚಿತ್ರದುರ್ಗಕ್ಕೆ ಪ್ರಯಾಣ ಬೆಳಸಿದರು. ಕಾಲೇಜ್ ಆಗಲೇ ಪ್ರಾರಂಭವಾಗಿ ಕೆಲವು ದಿನಗಳು ಕಳೆದಿದ್ದವು. ಪ್ರತಿಭಾವಂತ ವಿದ್ಯಾರ್ಥಿಯೆಂಬ ಕಾರಣಕ್ಕಾಗಿ ಅವರಿಗೆ ಹಾಜರಾತಿಯಲ್ಲಿ ರಿಯಾಯ್ತಿ ದೊರೆಯಿತು. ಆದರೂ ಪ್ರಯೋಜನವಾಗಲಿಲ್ಲ. ಮಲೇರಿಯಾ ರೋಗದಿಂದಾಗಿ ಇಂಟರ್ ಮೀಡಿಯೇಟ್ ಪರೀಕ್ಷೆಯಲ್ಲಿ ಅನುತ್ತೀರ್ಣರಾದರು. ಮತ್ತೆ ತುಮಕೂರಿನ ಕಾಲೇಜಿನಲ್ಲಿ ಪರೀಕ್ಷಾ ಸೆಂಟರ್ ತೆಗೆದುಕೊಂಡು ತೇರ್ಗಡೆ ಹೊಂದಿದರು.

ಮುಂದೆ ಡಿಗ್ರಿ ಓದಲು ಮೈಸೂರಿಗೆ ಹೋಗಬೇಕಾಗಿತ್ತು. ಆದರೆ ಅಲ್ಲಿಯವರೆಗೆ ವ್ಯರ್ಥ ಕಾಲಹರಣ ಮಾಡಲು ಮನಸ್ಸು ಒಪ್ಪಲಿಲ್ಲ. ಸಾರ್ಥವಳ್ಳಿ ತೋಟಕ್ಕೆ ಹೋಗಿ ಅಲ್ಲಿ ಕೆಲವು ದಿವಸ ವ್ಯವಸಾಯ ಮಾಡಿಕೊಂಡಿದ್ದರು.

ಅದು ಮುಗಿದ ನಂತರ ಚಿಕ್ಕನಾಯಕನಹಳ್ಳಿಗೆ ಬಂದರು. ಆಗ ಚಿಕ್ಕನಾಯಕನಹಳ್ಳಿಯಲ್ಲಿ ಎಸ್. ನಾಗಯ್ಯ ಎಂಬುವರು ಗಣಿ ಕಂಟ್ರಾಕ್ಟರ್ ಇದ್ದರು. ಮರುಳಯ್ಯನವರು ಅವರನ್ನು ಕಂಡು ಏನಾದರೂ ಕೆಲಸಮಾಡಿ ಎಂದಾಗ ಅವರು ಗಣಿಯ ಕೆಲಸದ ಲೆಕ್ಕಪತ್ರ ಬರೆಯಲು ಇವರನ್ನು ಗುಮಾಸ್ತರಾಗಿ ನೇಮಿಸಿಕೊಂಡರು. ಕೆಲವು ದಿನಗಳವರೆಗೆ ಮರುಳಯ್ಯನವರು ಆ ಕೆಲಸ ನಿರ್ವಹಿಸಿದರು.

ಮುಂದೆ ಚಿತ್ರದುರ್ಗದಿಂದ ಮೈಸೂರಿಗೆ ಪ್ರಯಾಣ. ಅಲ್ಲಿನ ಮಹಾರಾಜ ಕಾಲೇಜಿನಲ್ಲಿ ವ್ಯಾಸಂಗ ಬಿ.ಎ., (ಆನರ್ಸ್) ಪದವಿ ಪ್ರಾಪ್ತಿ (೧೯೫೫).

ಸಾಶಿಮರವರು ಬಿ.ಎ. ಆನರ್ಸ್ ವ್ಯಾಸಂಗಕ್ಕಾಗಿ ಮೈಸೂರಿಗೆ ಬಂದರು. ಅಲ್ಲಿಯೂ ಊಟ ವಸತಿಯ ಬವಣೆ ತಪ್ಪಲಿಲ್ಲ. ಆಗ ಮೈಸೂರಲ್ಲಿ ಶೆಟ್ಟೀಕೆರೆಯ ಶಂಕರಲಿಂಗಪ್ಪನವರು ವಾಸವಾಗಿದ್ದರು. ಅವರು ಶೆಟ್ಟೀಕೆರೆಯ ಪಟೇಲರ ಮನೆತನದವರು. ಅವರು ಮೈಸೂರಲ್ಲಿ ಡಿ. ಸುಬ್ಬಯ್ಯ ರೋಡಿನಲ್ಲಿ ಮನೆ ಮಾಡಿಕೊಂಡಿದ್ದರು. ಸಾಶಿಮರವರು ತಮ್ಮ ತಂದೆಯ ಸಲಹೆಯ ಮೇರೆಗೆ ಅವರನ್ನು ಕಂಡರು.

ಮಲಗೊಂಡಹಳ್ಳಿಯ ವಿದ್ವಾನ್ ಬಸವರಾಜಯ್ಯನವರಿಂದ ಶಂಕರಲಿಂಗಪ್ಪನವರ ಪರಿಚಯ ಆಯಿತು. ಸುತ್ತೂರು ಹಾಸ್ಟೆಲಿನಲ್ಲಿ ಸೀಟು ಕೊಡಿಸುವುದಾಗಿ ಅವರು ಭರವಸೆ ನೀಡಿದರು. ಹಾಸ್ಟೆಲ್ ಪ್ರಾರಂಭವಾಗಲು ಇನ್ನೂ ಕೆಲವು ತಿಂಗಳು ಕಳೆಯಬೇಕಾಗಿತ್ತು. ಅಲ್ಲಿಯವರೆಗೆ ವಾರಾನ್ನಕ್ಕೆ ವ್ಯವಸ್ಥೆ ಮಾಡಿಕೊಡಿ ಎಂದು ಮರುಳಯ್ಯನವರು ಅವರನ್ನು ಕೇಳಿಕೊಂಡರು. ಶಂಕರಲಿಂಗಪ್ಪನವರು ಏಳು ಮನೆಗಳಲ್ಲಿ ವಾರಾನ್ನಕ್ಕೆ ವ್ಯವಸ್ಥೆ ಮಾಡಿದರು. ಬಂಧುಗಳೊಬ್ಬರ ಮನೆಯೂ ಅವುಗಳಲ್ಲೊಂದು. ಆ ಮನೆಯ ತಾಯಿ ಮರುಳಯ್ಯನವರ ಬಗ್ಗೆ ಹೆಚ್ಚಿನ ಪ್ರೀತ್ಯಾದರ ತೋರಿ ಊಟಕ್ಕೆ ನೀಡುತ್ತಿದ್ದುದನ್ನು ಸಾಶಿಮರವರು ಇಂದಿಗೂ ಸ್ಮರಿಸುತ್ತಾರೆ. ಹೀಗಾಗಿ ಎರಡು ತಿಂಗಳ ಕಾಲ ವಾರಾನ್ನದಲ್ಲಿ ಕಳೆದರು. ಅನಂತರ ಸುತ್ತೂರು ಹಾಸ್ಟೆಲಲ್ಲಿ ಅವರಿಗೆ ಸೀಟು ದೊರೆಯಿತು.

ಆಗ ಹಾಸ್ಟೆಲ್ ಬನ್ನಿಮಂಟಪದಲ್ಲಿ ನಡೆಯುತ್ತಿತ್ತು. ಊಟ ವಸತಿಯ ವ್ಯವಸ್ಥೆ ಚೆನ್ನಾಗಿತ್ತು. ದಿನವೂ ತಣ್ಣೀರಿನ ಸ್ನಾನ. ಹಾಸ್ಟೆಲಿಂದ ದೂರದ ಮಹಾರಾಜ ಕಾಲೇಜಿಗೆ ಪ್ರಯಾಣ. ಆಗ ಪ್ರೊ॥ ಜಿ.ಎಸ್. ಸಿದ್ಧಲಿಂಗಯ್ಯ, ಡಾ॥ ಹಾಮಾನಾ, ಕೆ. ನಾಗೇಂದ್ರಪ್ಪ ಸಾಶಿಮರವರ ಸಹಪಾಠಿಗಳು. ಸಾಶಿಮ ಹಾಸ್ಟೆಲಿನ ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯೂ ಆಗಿ ಕಾರ್ಯ ನಿರ್ವಹಿಸಿದರು.

ಸುತ್ತೂರು ಹಾಸ್ಟೆಲ್ ಪ್ರಶಾಂತ ವಾತಾವರಣದಿಂದ ಕೂಡಿ ವ್ಯಾಸಂಗಕ್ಕೆ ಪ್ರಶಸ್ತವಾಗಿತ್ತು. ವಿದ್ಯಾರ್ಥಿ ಸಂಘದ ಕಾರ್ಯದರ್ಶಿಯವರ ಚುನಾವಣೆಯ ಸಂದರ್ಭದಲ್ಲಿ ಅಭಿಮಾನಿ ವಿದ್ಯಾರ್ಥಿಗಳು 'Vote for Marulaiah' ಎಂದು ಗೋಡೆಗಳ ಮೇಲೆಲ್ಲಾ ಬರೆದಿದ್ದರು. ಸ್ವಾಮೀಜಿಯವರೂ ಆ ಬರೆಹವನ್ನು ನೋಡಿದ್ದರು. ಎಸ್. ಸಿದ್ದಪ್ಪ ಎಂಬ ವಿದ್ಯಾರ್ಥಿಯನ್ನು ಸ್ವಾಮೀಜಿ ಕರೆದು, 'ಮರುಳಯ್ಯನನ್ನು ಕರೆದು ಬಾ' ಎಂದು ಹೇಳಿದರು. ಆ ವಿಷಯವನ್ನು ಗಂಗಾಧರನ್ ಮರುಳಯ್ಯನವರಿಗೆ ತಿಳಿಸಿದರು.

'ಸ್ವಾಮೀಜಿ ಕರೆಕಳಿಸಿದ್ದಾರೆ' ಎಂಬ ಮಾತು ಕೇಳಿ ಮರುಳಯ್ಯನವರು ಭಯದಿಂದ ತತ್ತರಿಸಿಹೋದರು. ಗೋಡೆಗಳ ಮೇಲೆಲ್ಲಾ ನನ್ನ ಹೆಸರಿದೆ, ನಾನೇ ಬರೆದಿದ್ದೇನೆ ಎಂದು ಅವರು ತಿಳಿದಿದ್ದಾರೆ. ಈವರೆಗೆ ಹೇಗೋ ಎರಡು ಹೊತ್ತಿನ ಅನ್ನಕ್ಕೆ ಮಾರ್ಗವಾಗಿತ್ತು. ಮುಂದೆ ಅದಕ್ಕೂ ಕಲ್ಲು ಬಿದ್ದರೆ ಗತಿಯೇನು ಎಂದು ಅಂಜುತ್ತಂಜುತ್ತ ಸ್ವಾಮಿಗಳ ಬಳಿಹೋಗಿ ಕೈಮುಗಿದು ನಿಂತರು.

'ಏನಯ್ಯಾ ಗೋಡೆಗಳ ಮೇಲೆಲ್ಲಾ ನಿನ್ನ ಹೆಸರೇ ! ಪ್ರಚಾರ ಬೇಡ ಅನ್ನೊಲ್ಲ. ಆದರೆ ಗೋಡೆ ಎಲ್ಲಾ ಕೆಡಿಸಿದ್ದೀರಲ್ಲಾ' ಎಂದಾಗ ಮರುಳಯ್ಯನವರು ಅಂಜುತ್ತ ನಡೆದದ್ದನ್ನ ಹೇಳಿದರು. 'ಆಯ್ತು ಮುಂದೆ ಹೀಗೆಲ್ಲಾ ಮಾಡಬಾರದು, ಹೋಗು, ಶಿವ ನಿನಗೆ ಒಳ್ಳೆಯದು ಮಾಡಲಿ' ಎಂದು ಆಶೀರ್ವದಿಸಿ ಕಳಿಸಿದಾಗ ಮರುಳಯ್ಯನವರು ಧಾರಾಳವಾಗಿ ಉಸಿರಾಡಿದರು.

ಊಟ ವಸತಿಯ ಸಮಸ್ಯೆಯೇನೋ ಬಗೆಹರಿದಿತ್ತು. ಆದರೆ ಕಾಲೇಜು ಫೀ ಮತ್ತು ಪುಸ್ತಕಗಳಿಗೆ ಹಣದ ಅಗತ್ಯವಿತ್ತು. ಆಗ ಸಾಸಲು ಚೆನ್ನವೀರಪ್ಪನವರು ಒಂದು ತಿಂಗಳಿಗೆ ೧೫ ರೂಪಾಯಿಗಳಂತೆ ಮರುಳಯ್ಯನವರಿಗೆ ಕಳಿಸುತ್ತಿದ್ದರು. ಆದರೆ ಅದಕ್ಕೆ ಒಂದು ನಿಬಂಧನೆ ಹಾಕಿದ್ದರು. ಹುಡುಗ ಕೆಲಸಕ್ಕೆ ಸೇರಿದ ಮೇಲೆ ಅದುವರೆಗೆ ತಾವು ಕಳಿಸಿದ ಹಣ ಎಷ್ಟಾಗಿರುತ್ತೊ ಅಷ್ಟನ್ನೂ ಸಂಬಳದ ಹಣದಿಂದ ತೀರಿಸಬೇಕು. ಆ ಹಣಕ್ಕೆ ಬಡ್ಡಿ ಇಲ್ಲ. ಇದು ಶರತ್ತು. ಈ ಸಂಬಂಧ ಅವರು ಮರುಳಯ್ಯನವರ ತಂದೆಯವರಿಂದ ಒಂದು ಪತ್ರಕ್ಕೆ ಸಹಿ ಕೂಡಾ ಮಾಡಿಸಿಕೊಂಡಿದ್ದರು. ಅದರಂತೆ ಅವರು ಮೂರು ವರ್ಷ ಹಣ ಕಳಿಸಿದರು. ಅದರ ಮೊತ್ತ ೬೮೦ ರೂ. ಕೆಲಸಕ್ಕೆ ಸೇರಿದ ಮೇಲೆ ಸಾಶಿಮ ಆ ಸಾಲದಿಂದ ಋಣಮುಕ್ತರಾದರು.

ಬಿ.ಎ. ಆನರ್ಸ್ ಎರಡನೆಯ ವರ್ಷಕ್ಕೆ ವಾಣಿವಿಲಾಸ ರಸ್ತೆಯ ಮೇನ್ ಹಾಸ್ಟಲಿಗೆ ಬಂದರು ಸಾಶಿಮ. ಅಲ್ಲಿಯೂ ವಿದ್ಯಾರ್ಥಿ ಸಂಘದ ಕಾರ್ಯದರ್ಶಿ ಸ್ಥಾನಕ್ಕೆ ಸ್ಪರ್ಧಿಸಿ ಗೆದ್ದರು. ಸಾಶಿಮ ಕಾರ್ಯದರ್ಶಿಯಾಗಿ; ಗಂಗಾಧರಯ್ಯ ಸಹಕಾರ್ಯದರ್ಶಿಯಾಗಿ ಆಯ್ಕೆಗೊಂಡರು. ಈ ಕಾರ್ಯದಿಂದ ಸ್ವಾಮಿಗಳ ನಿಕಟ ಸಂಪರ್ಕ ಪಡೆಯಲು ಅನುಕೂಲವಾಯಿತು.

ಆ ಸಂದರ್ಭದಲ್ಲಿ ದೇಶದಲ್ಲೆಲ್ಲಾ ಸರಿಯಾಗಿ ಮಳೆ ಬೆಳೆಯಾಗದೆ ದೇಶ ಬವಣೆ ಗೊಂಡಿತ್ತು. ಹಾಸ್ಟಲಿಗೆ ಅಕ್ಕಿ ಬೇಳೆ ದೊರೆಯದೆ ವಿದ್ಯಾರ್ಥಿಗಳು ಉಪವಾಸ ಬೀಳುವ ಗತಿ ಬಂತು. ಜೀವಾತ್ಮನೇ ಪರಮಾತ್ಮ, ಜೀವನೊಲುಮೆಯೇ ದೇವನೊಲುಮೆ ಎಂದು ನಂಬಿದ್ದ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮೀಜಿಯವರು ತಾವು ಧರಿಸುತ್ತಿದ್ದ ಬಂಗಾರದ ಕರಡಿಗೆಯನ್ನೇ ಮಾರಿ ವಿದ್ಯಾರ್ಥಿಗಳ ಊಟಕ್ಕೆ ವ್ಯವಸ್ಥೆ ಮಾಡಿದರು. ಎಲ್ಲಕ್ಕಿಂತ 'ಸಂಸ್ಥೆಮುಖ್ಯ' ಎಂಬ ಅಭಿಪ್ರಾಯ ಅವರದು. ಹಾಸ್ಟಲಲ್ಲಿದ್ದ ಹುಡುಗರ ಸಂಖ್ಯೆ ಕಡಿಮೆಯಲ್ಲ; ಸುಮಾರು ಮೂರು ಸಾವಿರ ವಿದ್ಯಾರ್ಥಿಗಳು. ಪ್ರತಿದಿನದ ಊಟವೂ ಚೆನ್ನಾಗಿರುವುದರ ಬಗ್ಗೆ ಅವರು ನಿಗಾ ವಹಿಸುತ್ತಿದ್ದರು. ಹಬ್ಬಗಳು ಬಂದಾಗ ಮೂರು ಸಾವಿರ ವಿದ್ಯಾರ್ಥಿಗಳಿಗೂ ಪುಷ್ಕಳವಾಗಿ ಹೋಳಿಗೆಯ ಊಟ ಆಗಲೇಬೇಕು. ಅವರೇ ಮುಂದೆ ನಿಂತು ಊಟ ಬಡಿಸುತ್ತಿದ್ದರು. ವಿದ್ಯಾರ್ಥಿಗಳು ಸಂತುಷ್ಟರಾಗಿ ಉಂಡಾಗಲೇ ಅವರಿಗೆ ಸಂತೋಷ.

ಬಿ.ಎ. ಆನರ್ಸ್ ಓದುವಾಗ ಕುವೆಂಪು, ಕ.ವೆಂ. ರಾಘವಾಚಾರ್, ದೊಲನ ದೇಜಗೌ ಇತ್ಯಾದಿ ಪಂಡಿತ ದಿಗ್ಗಜರಿಂದ ಪಾಠ ಕೇಳುವ ಯೋಗ ಸಾಶಿಮರವರಿಗೆ ದೊರೆಯಿತು. ಆ ಬ್ಯಾಚಿನಲ್ಲಿ ಈಗಿನಂತೆ ನೂರಿನ್ನೂರು ವಿದ್ಯಾರ್ಥಿಗಳಿರಲಿಲ್ಲ. ಇದ್ದವರು ಕೇವಲ ಆರೇ ಮಂದಿ ! ಸಾಶಿಮ, ಕೆ. ನಾಗೇಂದ್ರಪ್ಪ, ಹಾಮಾನಾ, ಕೆ.ಎಂ. ಸೀತಾರಾಮಯ್ಯ, ಜಿ.ಎಸ್. ಸಿದ್ಧಲಿಂಗಯ್ಯ ಮತ್ತು ಕೆ.ಎಂ. ಮರಿಯಪ್ಪ ಇಷ್ಟೇ ವಿದ್ಯಾರ್ಥಿಗಳು.

ಆಗ ಎಂ.ಎ. ತರಗತಿಗಳು ಮೈಸೂರಿನಲ್ಲಿ ಮಾತ್ರ ನಡೆಯುತ್ತಿದ್ದವು. ಎಂ.ಎಸ್‌ಸಿ. ಓದುವವರು ಬೆಂಗಳೂರಿಗೆ ಹೋಗಿ ವ್ಯಾಸಂಗ ಮಾಡಬೇಕಾಗಿತ್ತು.

ಬಿ.ಎ. ಆನರ್ಸ್ ಓದುವಾಗಲೇ ಸಾಶಿಮರವರು 'ರೇಣುಕ' ಎಂಬ ಕಾವ್ಯನಾಮದಲ್ಲಿ ಲೇಖನಗಳನ್ನು ಬರೆಯುತ್ತಿದ್ದರು. ಇವು ಆಗ ಬಿ. ಶಿವಮೂರ್ತಿ ಶಾಸ್ತ್ರಿಯವರು ಪ್ರಕಟಿಸುತ್ತಿದ್ದ 'ಶರಣಸಾಹಿತ್ಯ' ಪತ್ರಿಕೆಯಲ್ಲಿ ಶ್ರೀ ವೆಂಕೋಬರಾಯರ 'ಪೌರವಾಣಿ' ಎಂಬ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದವು. ಶ್ರೀ ವೆಂಕೋಬರಾಯರು ಇವರ ಲೇಖನಗಳನ್ನು ತುಂಬಾ ಇಷ್ಟಪಡುತ್ತಿದ್ದರು. ಒಂದು ಸಲ ಅವರಿಂದ ಮೂರು ರೂಪಾಯಿಗಳ ಸಂಭಾವನೆಯೂ ಸಾಶಿಮರವರಿಗೆ ದೊರೆಯಿತು. ಅದು ತಮ್ಮ ಜೀವಮಾನದಲ್ಲಿ ಮೊತ್ತಮೊದಲಿಗೆ ಲೇಖನಕ್ಕಾಗಿ ಪಡೆದ ಸಂಭಾವನೆ! ಆಗಿನ ಮೂರು ಈಗಿನ ಮುನ್ನೂರು ರೂಪಾಯಿಗೂ ಮಿಗಿಲು.

ಕನ್ನಡ ಬಿ.ಎ.ಆನರ್ಸ್ ಮುಗಿದನಂತರ ಯಾವುದಾದರೊಂದು ಸರ್ಕಾರಿ ನೌಕರಿಗೆ ನೇಮಕವಾಗಬಹುದಿತ್ತು. ಆ ಸಂಬಂಧ ಮರುಳಯ್ಯನವರು ತಮ್ಮ ವಿದ್ಯಾಗುರುಗಳಾದ ದೇ. ಜವರೇಗೌಡರ ಸಲಹೆ ಕೇಳಿದರು. 'ಈಗಲೇ ನೌಕರಿ ಬೇಡ. ಮುಂದೆ ಓದುವುದೇ ಸೂಕ್ತ' ಎಂದು ಅವರು ಸಲಹೆ ನೀಡಿದರು.

ಆ ಸಮಯದಲ್ಲಿ ತಂದೆ ಶಿವರುದ್ರಯ್ಯನವರಿಗೆ ಟಿ.ಬಿ. ಕಾಯಿಲೆ. ಟಿ.ಬಿ. ಅಂದರೆ ಆಗ ಗುಣಪಡಿಸಲಾಗದಂತಹ ಮಾರಕರೋಗ ಎಂದೇ ಎಲ್ಲರ ನಂಬಿಕೆ. ಸೂಕ್ತ ಚಿಕಿತ್ಸೆಯಿಂದ ಅವರು ಗುಣಮುಖರಾದರು. ವಿದ್ಯಾರ್ಥಿ ಜೀವನದುದ್ದಕ್ಕೂ ಕಾಡಿದ ಆರ್ಥಿಕ ದುಃಸ್ಥಿತಿಯಿಂದ ಸಾಶಿಮ ಆಗಲೂ ಪಾರಾಗಿರಲಿಲ್ಲ. ಆದ್ದರಿಂದ ಮತ್ತೆ ದೇ.ಜ.ಗೌ. ಅವರನ್ನು ಕಂಡರು. ತಮ್ಮ ಪರಿಸ್ಥಿತಿ ವಿವರಿಸಿದರು. ಕೆಲಸಕ್ಕೆ ಸೇರಲೇಬೇಕಾದ ಅನಿವಾರ್ಯ ಪ್ರಸಂಗ ಒದಗಿದೆ ಎಂದರು.

ಬೇರೆ ದಾರಿಕಾಣದೆ ದೇಜಗೌ, 'ಚಾಮರಾಜ ನಗರದ ಇಂಟರ್ ಮೀಡಿಯೆಟ್ ಕಾಲೇಜಿನಲ್ಲಿ ಉಪನ್ಯಾಸಕರ ಹುದ್ದೆ ಖಾಲಿಯಿದೆ. ಸುತ್ತೂರು ಸ್ವಾಮೀಜಿಯವರನ್ನು ಕೇಳಿ, ಅವರು ಅನುಕೂಲ ಮಾಡಿಕೊಡುತ್ತಾರೆ' ಎಂದರು. ಅವರ ಸಲಹೆಯಂತೆ ಸಾಶಿಮರವರು ಸ್ವಾಮಿಜಿಯವರನ್ನು ಕಂಡು ಕೆಲಸಕ್ಕೆ ಸೇರುವ ತಮ್ಮ ನಿರ್ಧಾರ ತಿಳಿಸಿದರು.

ಪೂಜ್ಯ ಸ್ವಾಮೀಜಿಯವರ ಪತ್ರದೊಂದಿಗೆ ಸಾಶಿಮ ಚಾಮರಾಜ ನಗರಕ್ಕೆ ಬಂದರು. ಅಲ್ಲಿನ ಎಂ.ಎಲ್.ಎ. ಉಡೀಗಾಲದ ಮಾದಪ್ಪ ಅವರನ್ನು ಭೇಟಿಯಾದರು. ಅಂದು ಅವರ ಮನೆಯಲ್ಲೇ ಊಟವಾಯಿತು. ಮಾರನೆಯ ದಿನ ಮಾದಪ್ಪನವರು ಕಾಲೇಜಿನ ಪ್ರಿನ್ಸಿಪಾಲರಿಗೆ ಪತ್ರ ಕೊಟ್ಟರು. ಅಂತೂ ಸಾಶಿಮ ಆ ಕಾಲೇಜಿನಲ್ಲಿ ಅರೆಕಾಲಿಕ ಉಪನ್ಯಾಸಕರಾಗಿ ಸೇರಿಕೊಂಡರು.

ಆ ದಿನಗಳಲ್ಲಿ ಪೂರ್ಣಾವಧಿಯ ಉಪನ್ಯಾಸಕರ ಸಂಬಳ ನೂರು ರೂಪಾಯಿ,

ಆಲೊಯಸ್ಸ್ ೧೮ ರೂ. ಅರೆಕಾಲಿಕ ಉಪನ್ಯಾಸಕರಿಗೆ ೬೦.

ಸಾಶಿಮರವರು ಗುರುವಾರ ಮತ್ತು ಶನಿವಾರ ಕೆಲಸ ಮಾಡಬೇಕಾಗಿತ್ತು. ಮೈಸೂರಿಂದ ಚಾಮರಾಜನಗರಕ್ಕೆ ಓಡಾಟ, ಮೈಸೂರಿನಲ್ಲಿ ಎಂ.ಎ., ತರಗತಿಗೆ ಹೋಗಬೇಕು. ಅತ್ತ ಚಾಮರಾಜ ನಗರದ ಕಾಲೇಜಿಗೂ ಹೋಗಬೇಕು. ಸಾಶಿಮ ಕುವೆಂಪು ಅವರನ್ನು ಕಂಡು ಕಷ್ಟ ಹೇಳಿಕೊಂಡರು. ಅವರು, 'ಶನಿವಾರ ಗುರುವಾರ ಎರಡು ದಿನವೂ ಪಾಠ ತೆಗೆದುಕೊಳ್ಳಿ ಎಂ.ಎ. ವೇಳಾಪಟ್ಟಿಯನ್ನು ನಿಮ್ಮ ಅನುಕೂಲಕ್ಕೆ ತಕ್ಕಂತೆ ವ್ಯವಸ್ಥೆ ಮಾಡೋಣ' ಎಂದರು. ಹೀಗೆ ಭಂಡ ಬಡತನದ ಅಗ್ನಿ ಪರೀಕ್ಷೆಯ ಮಧ್ಯೆಯೇ ಬಿ.ಎ. ಆನರ್ಸ್ ಮತ್ತು ಎಂ.ಎ., ಪರೀಕ್ಷೆಗಳಲ್ಲಿ ತೇರ್ಗಡೆಯಾದರು.

ಎಂ.ಎ., ಮುಗಿದ ನಂತರ 'ವೈವಾವೋಸಿ'ಗೆ ಸಾಶಿಮ ಸಿದ್ಧರಾದರು. ಸಾಶಿಮ ಅವರ ಬಗ್ಗೆ ಚೆನ್ನಾಗಿ ಗೊತ್ತಿದ್ದ ಕುವೆಂಪು ಅವರು ಅವರನ್ನು 'ತುಮಕೂರು ಕಾಲೇಜಿಗೆ ಹೋಗಿ ಲೆಕ್ಚರರ್ ಆಗಿ ರಿಪೋರ್ಟ್ ಮಾಡಿಕೊಳ್ಳಿ' ಎಂದರು.

ಸಾಶಿಮ ತುಮಕೂರಿನ ಕಾಲೇಜಿನಲ್ಲಿ ನೇಮಕಗೊಂಡರು. ಲೈಬ್ರರಿ ರೂಮಿನಲ್ಲಿ ವಾಸ. ಅವರ 'ಸುಮ ಸುಂದರ ತರುಲತೆಗಳ' ಜನಪ್ರಿಯ ಗೀತೆ ರಚನೆಯಾದದ್ದು ಅದೇ ಕಾಲದಲ್ಲಿ, ಮಾವಿನ ತೋಪಿನ ಪ್ರಶಾಂತ ವಾತಾವರಣದಲ್ಲಿ ಮೈಮರೆತು ಕುಳಿತಾಗ ಈ ಕವನ ಕುಸುಮ ಮೂಡಿ ಬಂತು. ಇಂದಿಗೂ ಅದು ಸಹಸ್ರಾರು ಶ್ರೋತೃಗಳ ಹೃದಯಕ್ಕೆ ಮುದ ನೀಡಿ ತಣಿಸುತ್ತಿದೆ. ಅಲ್ಲಿಯ ಕಾಲೇಜಿನಲ್ಲಿರುವಾಗಲೇ ಭಾಷಣ ಕಲೆ ಅವರಿಗೆ ಒಗ್ಗಿ ಹೋಗಿತ್ತು. ಅಲ್ಲಿ ಅವರು ಕೆಲಸ ಮಾಡಿದ್ದು ಕೇವಲ ಒಂದೇ ವರ್ಷ.

ತುಮಕೂರಿನಲ್ಲಿರುವಾಗಲೇ ತಂದೆ ಶಿವರುದ್ರಯ್ಯನವರ ಮರಣ. ಮೊತ್ತ ಮೊದಲ ಸಾರ್ವತ್ರಿಕ ಚುನಾವಣೆಗಳು ಆಗ ಪ್ರಾರಂಭವಾಗಿದ್ದವು. ಸಾಶಿಮರವರನ್ನೂ ಪ್ರಿಸೈಡಿಂಗ್ ಆಫೀಸರ್ ಆಗಿ ನೇಮಕಗೊಳಿಸಿದ್ದರು. ಆದರೆ ಫೆಬ್ರವರಿ ೨೦ ರಂದು ಅವರ ತಂದೆ ಶಿವೈಕ್ಯರಾದುದರಿಂದ ನೇಮಕವನ್ನು ಅನೂರ್ಜಿತಗೊಳಿಸಿದರು.

ತುಮಕೂರಿನ ಒಂದು ವರ್ಷದ ಅಧ್ಯಾಪಕ ವೃತ್ತಿಯನಂತರ ಸಾಶಿಮರವರನ್ನು ದಾವಣಗೆರೆಯ ಕಾಲೇಜಿಗೆ ವರ್ಗ ಮಾಡಲಾಯಿತು. ಅಲ್ಲಿಯ ಕಾಲೇಜಿನಲ್ಲಿ ಕೆಲಸ, ಹಾಸ್ಟೆಲಿನಲ್ಲಿ ಊಟ ವಸತಿ. ನಾಲ್ಕು ವರ್ಷ ಕಾಲ ಸಾಶಿಮ ಅಲ್ಲಿದ್ದರು. 'ಮರೀ ಬೇಡಿ' ನಾಟಕ ಮತ್ತು 'ವಿಭೂತಿ ಪುರುಷರು' ಜೀವನ ಚಿತ್ರಣ ಗ್ರಂಥಗಳು ರಚನೆಯಾದದ್ದು ದಾವಣಗೆರೆಯಲ್ಲಿದ್ದಾಗಲೇ. ಜೀವನ ಸಂಗಾತಿ ಶ್ರೀಮತಿ ವೀಣಾ ಅವರೊಂದಿಗೆ ವಿವಾಹವಾದದ್ದು ಕೂಡಾ ಅವರು ದಾವಣಗೆರೆಯಲ್ಲಿದ್ದಾಗಲೇ. ಪಂಪ ಮಹಾಕವಿಯನ್ನು ಕುರಿತು ಕಾದಂಬರಿ ಬರೆಯಲು ಸಾಶಿಮರವರು ಬನವಾಸಿಗೆ ಹೋದಾಗ ಮದುವೆಯ ಪ್ರಸ್ತಾಪ ಬಂದು ಅವರು ಗೃಹಸ್ಥ ಜೀವನಕ್ಕೆ ಕಾಲಿಟ್ಟರು.

ಸಾಶಿಮರವರು ತುಮಕೂರು ಕಾಲೇಜಿನಲ್ಲಿದ್ದಾಗಲೇ ಒಂದು ವರ್ಷದಲ್ಲಿ

ಅವರಿಗೆ ಏಳೆಂಟು ನೂರು ಹಣ ಬಂತು. ಇದರಿಂದ ಶ್ರೀ ಚನ್ನವೀರಪ್ಪನವರು ವಿದ್ಯಾಭ್ಯಾಸಕ್ಕೆಂದು ನೀಡಿದ್ದ ೬೮೦ ರೂ.ಗಳನ್ನು ತೀರಿಸಲು ಅನುಕೂಲವಾಯಿತು.

'ಕೆಂಗನ ಕಲ್ಲು' ನೀಳ್ಗವನದ ರಚನೆ ಮತ್ತು ೧೯೫೮ರ ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಅದನ್ನು ಓದಿದ್ದು ಸಾಶಿಮರವರ ಸಾಹಿತ್ಯಕ ಜೀವನದಲ್ಲಿ ಒಂದು ಅವಿಸ್ಮರಣೀಯ ಆನಂದದ ಪ್ರಸಂಗ.

ಅಂದಿನ ಸಭೆಗೆ ಎರಡು ಲಕ್ಷ ಜನ ಸೇರಿದ್ದರೆಂದು ಸಾಶಿಮ ಆಶ್ಚರ್ಯ ಸೂಚಿಸುತ್ತಾರೆ. ಆಗ ಕೀರ್ತನ ಕೇಸರಿ ಶ್ರೀ ಬಿ.ಶಿವಮೂರ್ತಿ ಶಾಸ್ತ್ರಿಗಳು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದರು. ವಿ.ಕೃ.ಗೋಕಾಕ್ ಸಮ್ಮೇಳನಾಧ್ಯಕ್ಷರು. ಮೈಸೂರಿನ ಶ್ರೀ ಮನ್ಮಹಾರಾಜರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ಉದ್ಘಾಟಕರು. 'ಪುತಿನ' ಅವರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ. ಸಾಶಿಮರವರು 'ಕೆಂಗನ ಕಲ್ಲು' ಕಾವ್ಯದ ಮೊದಲ ಭಾಗವನ್ನು ಭಾವಪೂರ್ಣವಾಗಿ ಓದಿದಾಗ ಪ್ರೇಕ್ಷಕರಲ್ಲಿ ಆನಂದದ ಹೊಳೆ, ಚಪ್ಪಾಳೆಗಳಸುರಿಮಳೆ ! ಸಾಶಿಮ ಪದ್ಯ ಓದಿ ವೇದಿಕೆಯಿಂದಿಳಿದಾಗ ತ.ಸು. ಶಾಮರಾಯರು ಆನಂದಾತಿರೇಕದಿಂದ ಅವರನ್ನು ಅಪ್ಪಿಕೊಂಡು, 'ಎಂತಹ ಸೊಗಸಾದ ಪದ್ಯ ಬರೆದೆಯಪ್ಪಾ!' ಎಂದು ಪ್ರಶಂಸಿಸಿದರು.

'ಕೆಂಗನ ಕಲ್ಲು' ಪುಸ್ತಕ ರೂಪದಲ್ಲಿ ಪ್ರಕಟವಾದದ್ದು ಸಾಶಿಮರವರು ಶಿವಮೊಗ್ಗೆಯ ಕಾಲೇಜಿಗೆ ಬಂದ ನಂತರ ದಾವಣಗೆರೆಯಿಂದ'. ಆದರೆ ಅಲ್ಲಿನ ಪ್ರಿನ್ಸಿಪಾಲರಿಗೆ ತಮಗೆ ಬೇಕಾದ ಬೇರೊಬ್ಬ ಉಪನ್ಯಾಸಕರನ್ನು ನೇಮಿಸಿಕೊಳ್ಳುವ ಆಸೆ. ಆದ್ದರಿಂದ ಸಾಶಿಮರವರನ್ನು 'ಡ್ಯೂಟಿಗೆ' ತೆಗೆದುಕೊಳ್ಳಲು ಮೊದಲಿಗೆ ತಕರಾರು ಮಾಡಿದರೂ ಕೊನೆಗೆ ನೇಮಿಸಿಕೊಂಡರು.

ಶಿವಮೊಗ್ಗೆಯಲ್ಲಿ ಶ್ರೀ ನ್ಯಾಮತಿ ರುದ್ರಾರಾಧ್ಯರ ಮನೆಯಲ್ಲಿ ಸಾಶಿಮ ಕೆಲವು ದಿನ ಬಾಡಿಗೆಗೆ ಇದ್ದರು. ಅನಂತರ ೫೦ ರೂ.ಗಳಿಗೆ ಬಾಡಿಗೆ ಮನೆ ಗೊತ್ತು ಮಾಡಿಕೊಂಡು ಸಂಸಾರ ಸಾಗಿಸಿದರು. ಎಂಟು ವರ್ಷಗಳ ಕಾಲ ಶಿವಮೊಗ್ಗ ಅವರ ತೌರೂರಾಯಿತು. ಶ್ರೀ ಜಿ.ಎಸ್. ಸಿದ್ಧಲಿಂಗಯ್ಯ, ಕೆ.ಎಂ. ಸೀತಾರಾಮಯ್ಯ, ಕೆ. ನಾಗೇಂದ್ರಪ್ಪ, ಇವರೂ ಕೂಡ ಆಗ ಸಾಶಿಮರವರೊಂದಿಗೆ ಕಾಲೇಜಿನ ಕನ್ನಡ ವಿಭಾಗದಲ್ಲಿ ಉಪನ್ಯಾಸಕರಾಗಿದ್ದರು.

ಸಾಶಿಮರವರು ಹೆಚ್ಚಿನ ಸಾಹಿತ್ಯ ಬರೆದದ್ದು, ಅನೇಕಾನೇಕ ಭಾಷಣ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಜನಪ್ರಿಯತೆ ಗಳಿಸಿದ್ದು ಶಿವಮೊಗ್ಗದಲ್ಲಿ ಇದ್ದಾಗಲೇ. ಕುವೆಂಪು ಅವರ ಷಷ್ಟ್ಯಬ್ದಿಯನ್ನು ಶಿವಮೊಗ್ಗದಲ್ಲಿ ಹಮ್ಮಿಕೊಳ್ಳಲು ಕೂಡಾ ಸಾಶಿಮರವರು ಮುಂದಾಳತ್ವ ವಹಿಸಿದ್ದರು.

ಶಿವಮೊಗ್ಗೆಯಿಂದ ಬೆಂಗಳೂರಿನ ಗೌರ್ನಮೆಂಟ್ ಆರ್ಟ್ಸ್ ಅಂಡ್ ಸೈನ್ಸ್ - (ಗ್ಯಾಸ್ ಕಾಲೇಜ್) ಕಾಲೇಜಿಗೆ ವರ್ಗವಾಯತು. ಆ ಸಮಯದಲ್ಲಿ ಎಂ.ವಿ.

ಸೀತಾರಾಮಯ್ಯನವರು ಗ್ಯಾಸ್ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದರು. ಅಲ್ಲಿ ಕೆಲಸಕ್ಕೆ ಸೇರಿದ ಮೊದಲ ದಿನವೇ ಸಾಶಿಮ ಕ್ಲಾಸ್ ತೆಗೆದುಕೊಳ್ಳಬೇಕಾಯ್ತು. ಎಂ.ವಿ.ಸೀ. ಯವರು ಮರುಳಯ್ಯನವರಿಗೆ ಹೇಳಿದರು. 'ನೋಡಿ ಮರುಳಯ್ಯ, ಅದು ತುಂಬಾ 'ನಟೋರಿಯಸ್ ಕ್ಲಾಸ್'. ಬೇರೆ ಉಪನ್ಯಾಸಕರು ಆ ತರಗತಿಯಲ್ಲಿ ಪಾಠ ಮಾಡಲು ಅಂಜುತ್ತಾರೆ. ನೀವೂ.... '

ಸಾಶಿಮರವರಿಗೆ ಎಲ್ಲವೂ ಅರ್ಥವಾಯ್ತು. 'ಆದರ ಚಿಂತೆ ಬಿಡಿ ಸಾರ್. ನಾನು ನಿಭಾಯಿಸ್ತೇನೆ' ಎಂದು ನೇರವಾಗಿ ತರಗತಿಗೆ ಹೋದರು. ರಸವತ್ತಾಗಿ ಪಾಠ ಹೇಳಿ ವಿದ್ಯಾರ್ಥಿಗಳನ್ನು ಪಾಠದ ವಿಷಯಕ್ಕೆ ಮಗ್ನರನ್ನಾಗಿಸಿದರೆ ಗಲಾಟೆಯ ಪ್ರಶ್ನೆ ಬರದು ಎಂಬುದು ಅವರಿಗೆ ಗೊತ್ತಿತ್ತು. ಅಟೆಂಡೆನ್ಸ್ ತೆಗೆದುಕೊಂಡು ಹತ್ತು ನಿಮಿಷ ಉಪನ್ಯಾಸ ಮಾಡುವುದರೊಳಗಾಗಿ ಇಡೀ ತರಗತಿಯಲ್ಲಿ 'ಪಿನ್‌ಡ್ರಾಪ್ ಸೈಲೆನ್ಸ್ !' ಪುಂಗಿಯನಾದಕ್ಕೆ ಮರುಳಾದ ಸರ್ಪದಂತೆ ವಿದ್ಯಾರ್ಥಿವೃಂದ !

ಆದರೆ ದುರಾದೃಷ್ಟ. 'ಮಗು ರವಿ ಮಹಡಿಯಿಂದ ಬಿದ್ದು ಜ್ಞಾನ ತಪ್ಪಿದೆ, ಬೇಗ ಬರಬೇಕಂತೆ' ಎಂಬ ದುರ್ವಾರ್ತೆ ಸಾಶಿಮರವರ ಮನೆಯಿಂದ. ಈಗೇನು ಮಾಡೋದು ಎಂಬ ಚಿಂತೆಯಲ್ಲಿರುವಾಗಲೇ 'ಮಗುವನ್ನು ಆಸ್ಪತ್ರೆಗೆ ಸಾಗಿಸಲಾಗಿದೆ, ಬೇಗ ಬರುವುದು' ಎಂಬ ಮತ್ತೊಂದು ಕರೆ. ನಟೋರಿಯಸ್ ಕ್ಲಾಸನ್ನು ತಹಬಂದಿಗೆ ತಂದಾಗಿದೆ. ಈಗ ಆಸ್ಪತ್ರೆಗೆ ಹೋಗುವುದು ಬೇಡ ಎಂದುಕೊಂಡ ಸಾಶಿಮ ಒಂದು ಗಂಟೆ ತದೇಕಚಿತ್ತರಾಗಿ ಪಾಠ ಹೇಳಿ ಆನಂತರವೇ ಆಸ್ಪತ್ರೆಗೆ ಹೋದರಂತೆ ! ಇಂತಹ ಸ್ಥಿತಪ್ರಜ್ಞತೆ ಎಲ್ಲರಿಗೂ ಸಾಧ್ಯವಿಲ್ಲ.

ಚನ್ನಪಟ್ಟಣದ ಕಾಲೇಜಿನಲ್ಲಿದ್ದಾಗ ಸಾಶಿಮರವರಿಗೆ ಅನೇಕ ಕಹಿಪ್ರಸಂಗಗಳೊದಗಿದವು. ಆಗ ಆ ಕಾಲೇಜಿಗೆ ಸರ್ಕಾರದ ಧನ ಸಹಾಯ ಇರಲಿಲ. Unaided ಅಲ್ಲಿ ಕೆಲಸ ಮಾಡುತ್ತಿದ್ದ ಉಪನ್ಯಾಸಕರಿಗೆ ಸಂಬಳ ಇರಲಿಲ್ಲ. ಇವರಿಗೆ ಮಾತ್ರ ಸರ್ಕಾರಿ ಸಂಬಳ. ಅವರ ಕಷ್ಟಕ್ಕೆ ಮರುಗಿದ ಸಾಶಿಮ ಕೆಲವರಿಗೆ ನೂರು ನೂರು ರೂಪಾಯಿ ಕೊಟ್ಟು ಅನಂತರ ಹಿಂದಕ್ಕೆ ಪಡೆಯುತ್ತಿದ್ದರು. ಚನ್ನಪಟ್ಟಣ ಕಾಲೇಜಿನಲ್ಲಿ ಸಾಶಿಮ ನಿರ್ವಹಿಸುತ್ತಿದ್ದದ್ದು ಪ್ರಿನ್ಸಿಪಾಲರ ಕಾರ್ಯ. ಮೂರು ವರ್ಷ ಅಲ್ಲಿ ಇರಲೇಬೇಕಾಗಿತ್ತು. ಅಧ್ಯಾಪಕರು ಪ್ರಿನ್ಸಿಪಾಲರಿಂದ ಸಹಾಯ ಪಡೆದಿದ್ದರೂ ಯಾವ ಕಾರಣಕ್ಕೊ ಒಳಗಿಂದೊಳಗೇ ಅವರ ಬಗ್ಗೆ ಕೆಲವರು ದ್ವೇಷ ಭಾವನೆ ತಳೆದರು.

ಒಂದು ದಿನ ಅವರ ಅತೃಪ್ತಿ ಕಾರ್ಯರೂಪ ತಾಳಿತು. ಪ್ರಿನ್ಸಿಪಾಲರು ಒಳಗೆ ತಮ್ಮ ಕಾರ್ಯಾಲಯದಲ್ಲಿರುವಾಗಲೇ ಹೊರಗಡೆ 'ಡೌನ್ ವಿತ್ ಪ್ರಿನ್ಸಿಪಾಲ್' ಘೋಷಣೆ ಕೇಳಿಬಂತು. ಸಾಶಿಮ ಹೊರಗೆ ಬಂದು ನೋಡುತ್ತಾರೆ, ಸುಮಾರು ಇನ್ನೂರು ಮಂದಿ ವಿದ್ಯಾರ್ಥಿಗಳು ರೋಷದಿಂದ ಕೈಎತ್ತಿ 'ಡೌನ್ ವಿತ್' ಅಬ್ಬರಿಸುತ್ತಿದ್ದಾರೆ, ಸಾಶಿಮ ತಾಳ್ಮೆಗೆಡಲಿಲ್ಲ. ಕೂಗಾಟಕ್ಕೆ ಕಾರಣ ಕೇಳಿದರು,

ಯಾರಿಂದಲೂ ಸಮಂಜಸ ಉತ್ತರವಿಲ್ಲ. 'ನಿಮ್ಮ ಸಮಸ್ಯೆಗಳೇನು ಹೇಳಿ, ಬಗೆಹರಿಸೋಣ' ಎಂದರೆ, ಅಂತಹ ಸಮಸ್ಯೆಗಳನ್ನೂ ಹೇಳಲಿಲ್ಲ. ಅದು ಯಾರ ಕೈವಾಡವೆಂಬುದು ಸಾಶಿಮರಿಗೆ ವೇದ್ಯವಾಯಿತು. ಹತ್ತು ನಿಮಿಷ ನಿಂತು ಅವರಿಗೆ ವಿವೇಕದ ಮಾತು ಹೇಳಿದಾಗ ಹುಡುಗರಿಗೆ ತಮ್ಮ ತಪ್ಪಿನ ಅರಿವಾಯಿತು. 'ತಪ್ಪಾಯ್ತು ಸಾರ್' ಎನ್ನುತ್ತಾ ಪ್ರಿನ್ಸಿಪಾಲರ ಕಾಲಿಗೆ ನಮಸ್ಕರಿಸಿದರು. ಅವರ ಬಗ್ಗೆ ಗೋಡೆಗಳ ಮೇಲೆ ಬರೆದುದ್ದನ್ನು ಅಳಿಸಿದರು.

ಸಾಶಿಮರವರು ಹೇಗೋ ಅಲ್ಲಿ ಮೂರು ವರ್ಷ ಕಳೆದರು. ಅನಂತರ ಅಧ್ಯಕ್ಷರೂ ಇತರರೂ 'ಮುಂದೆಯೂ ಇಲ್ಲೇ ಇರಿ' ಎಂದರೂ ಕಹಿಯಿಂದ ಮನಸ್ಸು ಅದಕ್ಕೆ ಒಪ್ಪಲಿಲ್ಲ. ಬೆಂಗಳೂರಿಗೆ ಬಂದರು.

ಬೆಂಗಳೂರಿನಲ್ಲಿ ಆಗ ಕನ್ನಡ ವಿಶ್ವಕೋಶದ ರಚನೆ ಪ್ರಾರಂಭವಾಗಿತ್ತು. ನಿರಂಜನರ ನೇತೃತ್ವದಲ್ಲಿ ಏಳು ಸಂಪುಟಗಳು ಪ್ರಕಟವಾಗಿದ್ದವು. ಸಾಶಿಮರವರು ಎಂಟನೆಯ ವಿಶ್ವಕೋಶದ ಜವಾಬ್ದಾರಿ ಹೊತ್ತರು. ಅದು ಸಮರ್ಪಕವಾಗಿ ಸಿದ್ಧವಾಯ್ತು. ಆದರೆ ಬಿಡುಗಡೆ ಆಗಲೇ ಇಲ್ಲ ! ಸಾಶಿಮರವರು ಮೂರೂವರೆ ವರ್ಷಗಳು ವಿಶ್ವಕೋಶದಲ್ಲಿ ಕೆಲಸ ಮಾಡಿ ಅಲ್ಲಿಂದ ಮಂಗಳೂರಿನ ಕಾಲೇಜಿಗೆ ಪ್ರಿನ್ಸಿಪಾಲರಾಗಿ ಹೋದರು.

ಮಂಗಳೂರಿನಲ್ಲಿ ಮಿತ್ರ ಮಹಾಬಲಶೆಟ್ಟರ ಮನೆಯಲ್ಲಿ ವಾಸ. ಅಲ್ಲಿ ಪ್ರಾಚಾರ್ಯರಾಗಿದ್ದುದು ಕೇವಲ ಒಂದು ವರ್ಷ. ಅಲ್ಲಿಂದ ಮತ್ತೆ ಬೆಂಗಳೂರಿಗೆ ಪ್ರಯಾಣ. ರಾಜಭಾಷಾ ಆಯೋಗದ ಸದಸ್ಯರಾಗಿ ನೇಮಕ. ಆ ಆಯೋಗ ಕೇಂದ್ರ ಸರ್ಕಾರದ 'ಲಾ ಡಿಪಾರ್ಟ್‌ಮೆಂಟ್' ವತಿಯಿಂದ ಕಾರ್ಯ ನಿರ್ವಹಿಸುತ್ತಿತ್ತು. ಅಲ್ಲಿ ಐದು ವರ್ಷಗಳ ಕಾಲ ಸಾಶಿಮ ಕಾರ್ಯ ನಿರ್ವಹಿಸಿದರು.

ಮಂಗಳೂರು ಕಾಲೇಜಿನಲ್ಲಿದ್ದಾಗ ಅವರು ಅನುಭವಿಸಿದ ತೊಂದರೆ ತಾಪತ್ರಯಗಳು ಹಲವಾರು. ಐದು ಕಡೆ ಅವರ ಸಂಸಾರದ ಸದಸ್ಯರು ಹಂಚಿ ಹೋಗಿದ್ದರು. ದೊಡ್ಡಮಗ ಗುಲ್ಬರ್ಗಾದಲ್ಲಿ ಇಂಗ್ಲಿಷ್ ಎಂ.ಎ. ಓದುತ್ತಿದ್ದ. ಚಿಕ್ಕಮಗ ತುಮಕೂರಿನ ಎಂಜಿನಿಯರಿಂಗ್ ಕಾಲೇಜ್ ವಿದ್ಯಾರ್ಥಿ, ಮಗಳು ರಾಗಿಣಿ ಮೈಸೂರಲ್ಲಿ 'ಸ್ಪೀಚ್ ಅಂಡ್ ಹಿಯರಿಂಗ್' ತರಗತಿಯ ವಿದ್ಯಾರ್ಥಿನಿ. ಪತ್ನಿ ಬೆಂಗಳೂರಲ್ಲಿ, ಸಾಶಿಮ ಮಂಗಳೂರಲ್ಲಿ. ಹೀಗೆ ಐದು ಜನ ಐದು ಕಡೆಗಿದ್ದುದರಿಂದ ಹಣದ ಮುಗ್ಗಟ್ಟು. ಮಾನಸಿಕ ವ್ಯಥೆ. ಆದರೂ ಸಾಶಿಮ ಎದೆಗುಂದದೆ ಆ ಕಷ್ಟಗಳನ್ನೆಲ್ಲಾ ನಿಭಾಯಿಸಿ ನಿವೃತ್ತರಾದರು.

೧೯೭೧ರಲ್ಲಿ ಧಾರವಾಡ ಕರ್ನಾಟಕ ವಿಶ್ವ ವಿದ್ಯಾಲಯದಿಂದ 'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ' ಪ್ರೌಢ ಪ್ರಬಂಧಕ್ಕೆ ಪಿಎಚ್.ಡಿ. ಪ್ರಾಪ್ತಿ. ಆ ಪ್ರಬಂಧ ಅಂದು ಕರ್ನಾಟಕ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಪ್ರೊಫೆಸರ್ ಮತ್ತು

ಮುಖ್ಯಸ್ಥರಾಗಿದ್ದ ಡಾ|| ಆರ್.ಸಿ. ಹೀರೇಮಠ ಅವರ ಮಾರ್ಗದರ್ಶನದಲ್ಲಿ ಸಿದ್ಧಗೊಂಡದ್ದು.

ಸಾ.ಶಿ. ಮರುಳಯ್ಯನವರು ಅತ್ಯುತ್ತಮ ಅಧ್ಯಾಪಕರೂ ಸಾಹಿತಿಗಳೂ ಆಗಲು ಅವರಿಗೊದಗಿದ ಗುರು ಪರಂಪರೆ ಸ್ಫೂರ್ತಿ ನೀಡಿತು. ಪ್ರಥಮ ದರ್ಜೆಯ ಪಂಡಿತರೂ ಸಾಹಿತಿಗಳೂ ಆಗಿದ್ದ ರಾಷ್ಟ್ರಕವಿ ಕುವೆಂಪು, ಡಾ|| ಡಿ.ಎಲ್. ನರಸಿಂಹಾಚಾರ್, ಡಾ|| ಎಸ್. ಶ್ರೀಕಂಠಶಾಸ್ತ್ರಿ, ಕ.ವೆಂ. ರಾಘವಾಚಾರ್, ದೇ. ಜವರೇಗೌಡರು, ತ.ಸು. ಶಾಮರಾಯರು, ಎಸ್.ವಿ. ಪರಮೇಶ್ವರಭಟ್ಟರು, ಎಸ್.ವಿ. ರಂಗಣ್ಣ - ಇಂಥ ಸಾಹಿತ್ಯ ದಿಗ್ಗಜರ ಶಿಷ್ಯರಾಗುವ ಪುಣ್ಯ ಮರುಳಯ್ಯನವರಿಗೆ ದೊರೆತದ್ದು ಅವರ ಪುಣ್ಯ ವಿಶೇಷ. ಅವರ ಮಾರ್ಗದರ್ಶನವೇ ಇವರಿಗೆ ದಾರಿದೀಪ. ಅವರ ಆದರ್ಶಗಳೇ ಅವರ ವ್ಯಕ್ತಿತ್ವದ ಆದರ್ಶಗಳು. ಒಳ್ಳೆಯ ಶಿಷ್ಯರು ಹೇಗೆ ಎಲ್ಲರಿಗೂ ಲಭ್ಯವಾಗುವುದಿಲ್ಲವೋ ಹಾಗೆಯೇ ಎಲ್ಲ ಶಿಷ್ಯರಿಗೂ ಶ್ರೇಷ್ಠ ಗುರುಗಳು ಲಭ್ಯವಾಗುವುದಿಲ್ಲ. ಗುರು ದ್ರೋಣರಿಗೆ ಅರ್ಜುನನಂಥ ಶಿಷ್ಯೋತ್ತಮ ದೊರೆತದ್ದು, ಅರ್ಜುನನಂಥ ವಿದ್ಯಾದಾಹಿಗೆ ದ್ರೋಣರಂಥ ಗುರು ದೊರೆತದ್ದು ಅವರವರ ಸುಕೃತವಲ್ಲದೆ ಮತ್ತೇನು ?

ಕಲಾವಿದ, ಸಾಹಿತಿ ಮತ್ತು ಅಧ್ಯಾಪಕ - ಈ ಮೂರು ಅಂಶಗಳು ಸಾಶಿಮರವರ ವ್ಯಕ್ತಿತ್ವವನ್ನು ರೂಪಿಸಿವೆ. ಅವರೊಬ್ಬ ಶ್ರೇಷ್ಠ ಅಧ್ಯಾಪಕರು. ಅವರ ಮನೆತನವೇ ಶಿಕ್ಷಕರ ಮನೆತನ ಎಂಬುದನ್ನು ಈಗಾಗಲೇ ತಿಳಿಸಿದೆ. ಅಲ್ಲದೆ ಅವರು ಬಾಲ್ಯದಿಂದಲೇ ಅಧ್ಯಾಪಕನಾಗಬೇಕೆಂಬ ಕನಸು ಕಂಡವರು. ಮೇಲ್ದರ್ಜೆಯ ಗುರುಗಳ ಪಾಠ ಪ್ರವಚನಗಳಿಂದ ಪ್ರಭಾವಿತರಾದವರು. ವ್ಯಾಸಂಗಪ್ರಿಯರು. ಶ್ರೇಷ್ಠ ಭಾಷಣಕಾರರು. ಈ ಎಲ್ಲ ಕಾರಣಗಳಿಂದ ಸಹಜವಾಗಿಯೇ ಅಧ್ಯಾಪಕ ವೃತ್ತಿಗೆ ಅವರು ಒಲವು ತೋರಿದರು. 'ಉಪಾಧ್ಯಾಯ ವೃತ್ತಿಯೇ ಸರ್ವಶ್ರೇಷ್ಠ. ಅದಕ್ಕೆ ಅರ್ಹನಾಗುವ ಯೋಗ್ಯತೆ ತನಗಿಲ್ಲ' ಎಂದೊಮ್ಮೆ ಸಾಕ್ರಟೀಸ್ ವ್ಯಥೆಪಟ್ಟಿದ್ದನಂತೆ. ಆದರೆ ಅಂಥ ಯೋಗ್ಯತೆ ಸಾಶಿಮರವರಿಗಿತ್ತು. ಅದರ ಪಾವಿತ್ರ್ಯ ರಕ್ಷಿಸಲು ಅವರು ನಿತ್ಯನಿರಂತರ ವ್ಯಾಸಂಗದಲ್ಲಿ ಮಗ್ನರಾದರು. ಕಾಯಕ ನಿಷ್ಠೆಯಲ್ಲೆಂದೂ ಎಡವಿದವರಲ್ಲ. ಹಣ, ಆಸ್ತಿ, ಅಧಿಕಾರ ಅಂತಸ್ತುಗಳಿಗೆ ಆಸೆ ಪಡಲಿಲ್ಲ. ಆದ್ದರಿಂದಲೇ ಅವರು ಹೋದೆಡೆಯಲ್ಲೆಲ್ಲಾ ಶಿಷ್ಯರ ಅಪಾರ ಪ್ರೀತಿ ಗೌರವ ಗಳಿಸಿದರು. ಶಿಷ್ಯರ ಪಾಲಿಗೆ ಅತ್ಯುತ್ತಮ 'ಫ್ರೆಂಡ್, ಫಿಲಾಸಫರ್ ಮತ್ತು ಗೈಡ್' ಎಂಬ ಪ್ರಶಂಸೆಗೆ ಪಾತ್ರರಾದರು. ಬೋಧನೆಯಲ್ಲೇ ಆತ್ಮಸಂತೋಷ ಕಂಡುಕೊಂಡರು.

ಚಾಮರಾಜನಗರದ ಇಂಟರ್ ಮೀಡಿಯೇಟ್ ಕಾಲೇಜಿನಿಂದ ಅಧ್ಯಾಪಕ ವೃತ್ತಿಗೆ ತೊಡಗಿದ ಸಾಶಿಮರವರು (೧೯೫೫) ಮುಂದೆ ತುಮಕೂರಿನ ಪ್ರಥಮ ದರ್ಜೆ ಕಾಲೇಜು, ದಾವಣಗೆರೆ ಧ.ರಾ.ಮ. ಕಾಲೇಜು, ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜು,

ತುಮಕೂರಿನ ಸರ್ಕಾರಿ ಕಾಲೇಜು, ಚನ್ನಪಟ್ಟಣದ ಕುವೆಂಪು ಮಹಾವಿದ್ಯಾಲಯ, ಮಂಗಳೂರಿನ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಉಪನ್ಯಾಸಕರಾಗಿ, ರೀಡರ್ ಆಗಿ, ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸಮರ್ಥ ರೀತಿಯಲ್ಲಿ ನಿಷ್ಠೆಯಿಂದ ಕಾರ್ಯ ನಿರ್ವಹಿಸಿದರು. 'ಅಧ್ಯಾಪಕ ವೃತ್ತಿಯಲ್ಲಿ ಸಿಗುವ ತೃಪ್ತಿ ಬೇರಾವ ವೃತ್ತಿಯಿಂದಲೂ ದೊರೆಯದು' ಎಂಬ ಮಾತನ್ನು ನಿವೃತ್ತಿಯ ನಂತರವೂ ಅವರು ಹೇಳುತ್ತಾರೆ. ಆ ವೃತ್ತಿ ಅವರ ಪಾಲಿಗೆ ಹೊರೆಯಾಗದೆ ಆತ್ಮಸಂತೋಷಕ್ಕೆ ಕಾರಣವಾದದ್ದೇ ಈ ಹೇಳಿಕೆಯ ಹಿಂದಿರುವ ಸತ್ಯ. ಪಾಠ ಹೇಳಲು ಬಾರದೆ ವಿದ್ಯಾರ್ಥಿಗಳ ಕೀಟಲೆ ಅಪಹಾಸ್ಯಗಳಿಗೆ ಪಕ್ಕಾಗುವ ಅಧ್ಯಾಪಕರು ಎಲ್ಲ ಕಾಲಕ್ಕೂ ಉಂಟಲ್ಲವೇ ? ಹಾಗೆ ಅವಮಾನಗೊಳ್ಳುವ ಪ್ರಸಂಗ ಸಾಶಿಮರವರಿಗೆಂದೂ ಬರಲಿಲ್ಲ. ವಿದ್ಯಾರ್ಥಿಗಳು ಮೆಚ್ಚುವಂತೆ ಹೇಳಬಲ್ಲೆ ಎಂಬ ಆತ್ಮವಿಶ್ವಾಸ ಅವರಿಗಿತ್ತು. ಅವಕ್ಕೆ ತಕ್ಕಂತೆ ಹೇಳಬೇಕಾದ ಸರಕು ಸಾಮಗ್ರಿಯ ಅಕ್ಷಯ ಭಂಡಾರವೂ ಅವರಲ್ಲಿತ್ತು. ಆ ಧೈರ್ಯದಿಂದ ನೀರು ಕುಡಿದಷ್ಟೇ ಸಲೀಸಾಗಿ ಅವರು ಉಪನ್ಯಾಸಗಳನ್ನು ನೀಡುತ್ತಿದ್ದರು.

ಅವರ ಆತ್ಮಾಭಿಮಾನವನ್ನು ಕೆಣಕುವಂತಹ ಒಂದು ಪ್ರಸಂಗ ಅವರು ಚನ್ನಪಟ್ಟಣದ ಕುವೆಂಪು ವಿಶ್ವವಿದ್ಯಾಲಯದ ಪ್ರಾಚಾರ್ಯರಾಗಿದ್ದಾಗ ನಡೆಯಿತು. ಅಲ್ಲಿನ ಸಹಾಯಕ ವರ್ಗ ಇಲ್ಲಸಲ್ಲದ ಆರೋಪಗಳಿಗೆ ಅವರನ್ನು ಗುರಿಪಡಿಸಿತು. ಸಜ್ಜನರೂ ಮೃದುಸ್ವಭಾವದವರೂ ಆದ ಪ್ರಾಚಾರ್ಯರು ತಿರುಗಿಬೀಳಲಾರರೆಂದೇ ಅವರು ಭಾವಿಸಿ ಅಪಪ್ರಚಾರಕ್ಕೆ ತೊಡಗಿದರು. ಕೆಲವರು ಸಾರ್ವಜನಿಕರೂ ಸಹಾಯಕ ವರ್ಗದವರಿಗೆ ಕುಮ್ಮಕ್ಕು ನೀಡಿದರು. ಅವರ ಉಪಟಳದಿಂದ ಸಾಶಿಮರವರು ಸಿಡಿದೆದ್ದರು. 'ಮನಸ್ಸಿಗೆ ಬಂದಂತೆ ಮಾತಾಡಲು ನೀವೇನು ಹಣಕೊಟ್ಟು ನನ್ನನ್ನು ಕೊಂಡುಕೊಂಡಿಲ್ಲ. ನಿಮ್ಮ ಕೃಪಾಕಟಾಕ್ಷದಿಂದ ನಾನಿಲ್ಲಿ ಕೆಲಸ ಮಾಡುತ್ತಿಲ್ಲ' ಎಂದು ಮಾರ್ನುಡಿದು, ಬೇಸರಗೊಂಡು ತಮ್ಮ ಮಾತೃಸಂಸ್ಥೆಗೆ ವಾಪಸಾದರು. ಅವರು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದಾಗಲೂ ಕೆಲವರು ಪಿಸುಣರು ಇಲ್ಲಸಲ್ಲದ ಆರೋಪ ಹೊರಿಸಿ ಕರಪತ್ರ ಹಂಚಿ ಸಂತೋಷಪಟ್ಟದ್ದುಂಟು. ಮೋಸಗಾರಿಗೆ ಕುತಂತ್ರಗಳನ್ನರಿಯದ ಮರುಳಯ್ಯನವರು ಇಂಥ ಕೆಲವು ಕಹಿಪ್ರಸಂಗಗಳಿಂದ ನೋವುಂಡರೂ ವ್ಯಕ್ತಿತ್ವದ ಮಾರ್ದವತೆ ಕಳೆದುಕೊಂಡವರಲ್ಲ. ಮಾಗಿದ ಫಲದಲ್ಲಿ ಒಗರು ಹುಳಿ ಇರುವುದುಂಟೆ ? ಜೀವನದ ನೋವು ಅವಮಾನಗಳಿಂದ ಅವರ ವ್ಯಕ್ತಿತ್ವ ಹಿಗ್ಗಿತೇ ಹೊರತು ಕುಗ್ಗಲಿಲ್ಲ.

ಸಾಹಿತ್ಯ ಕೃಷಿ :

ಪದ್ಯಗಳನ್ನು ದೇವರು ಬರೆಯುವುದಿಲ್ಲ. ಅವುಗಳನ್ನು ಮನುಷ್ಯರೇ ಬರೆಯುತ್ತಾರೆ. ಮನುಷ್ಯನಾದ ನಾನೂ ಬರೆಯಬಹುದು ಎಂದು ಬಾಲ್ಯದಲ್ಲೇ ನಂಬಿದ ಮರುಳಯ್ಯನವರು ಮುಂದೆ ತಮ್ಮ ಸೃಜನಶೀಲ ಪ್ರತಿಭೆಯಿಂದ ಸುಮಾರು

೭೬ ವಿವಿಧ ಬಗೆಯ ಕೃತಿಗಳನ್ನು ರಚಿಸಿದರು. ೧೯೫೩ರಲ್ಲಿ ಅವರ 'ಶಿವತಾಂಡವ' ಪ್ರಥಮ ಕವನ ಸಂಕಲನ ಬೆಳಕು ಕಂಡಿತು. ಅನಂತರ ಅವರ ಸಾಹಿತ್ಯ ಭಂಡಾರದಲ್ಲಿ ೧೩ ಕವನ ಸಂಗ್ರಹಗಳು, ೬ ಧ್ವನಿ ಸುರುಳಿಗಳು, ಒಂದು ಕಥಾ ಸಂಕಲನ, ಒಂದು ಜನಪದ ಕಥೆಗಳ ಸಂಗ್ರಹ, ೪ ಕಾದಂಬರಿಗಳು, ೭ ಜೀವನ ಚರಿತ್ರೆ, ೩೮ ನಾಟಕ - ರೂಪಕಗಳು, ೯ ಸಾಹಿತ್ಯ ವಿಮರ್ಶಾ ಕೃತಿಗಳು, ೧೮ ಸಂಪಾದಿತ ಕೃತಿಗಳು, ೨ ಸಂಶೋಧನಾತ್ಮಕ ಪ್ರಬಂಧಗಳ ಸಂಕಲನ, ಒಂದು ಸಾಂಸ್ಕೃತಿಕ ಪ್ರಬಂಧಗಳ ಪುಸ್ತಕ, ತತ್ವ ದರ್ಶನಕ್ಕೆ ಸಂಬಂಧಪಟ್ಟ ೩ ಕೃತಿಗಳು, ಒಂದು ಪ್ರೌಢ ಪ್ರಬಂಧ - ಇವಿಷ್ಟೂ ಸೇರ್ಪಡೆಯಾದವು, ಸಾಹಿತ್ಯದ ಅನೇಕ ಪ್ರಕಾರಗಳಲ್ಲೂ ಅವರು ಕೃತಿ ರಚಿಸಿದ್ದಾರೆ. ಅವರ ಅನೇಕ ಭಾವಗೀತೆಗಳು ಧ್ವನಿ ಸುರುಳಿಗಳಾಗಿವೆ. ದೂರದರ್ಶನ ಮತ್ತು ಬಾನುಲಿಗಳಲ್ಲಿ ಆಗಾಗ್ಗೆ ಅವು ಪ್ರಸಾರಗೊಳ್ಳುತ್ತಲೂ ಇವೆ. 'ಸುಮಸುಂದರ ತರುಲತೆಗಳ ಬೃಂದಾವನ ಲೀಲೆ', 'ಶ್ರುತಿ ಸುಖ ನಿನದ' ಇತ್ಯಾದಿ ಅವರ ಕವನಗಳನ್ನು ಕೇಳಿ ಆನಂದಿಸದವರುಂಟೆ ? ನಾಡಿನ ಹೆಸರಾಂತ ಗಾಯಕರು ಅವುಗಳಿಗೆ ಧ್ವನಿ ಗೂಡಿಸಿದ್ದಾರೆ.

ಅವರ ನಾಟಕಗಳು ನೂರಾರು ಕಡೆಗಳಲ್ಲಿ ಅಭಿನಯಿಸಲ್ಪಟ್ಟಿವೆ. ಬಾನುಲಿಯ 'ಚಿಂತನ' ಕಾರ್ಯಕ್ರಮದಲ್ಲಿ ಈಗಲೂ ಅವರ ವಿಚಾರಧಾರೆ ಪ್ರಕಟಗೊಳ್ಳುತ್ತಿದೆ. ಅವರ 'ಕೆಂಗನ ಕಲ್ಲು' ಸಾಹಿತಿಗಳ, ಸಾಹಿತ್ಯ ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿವೆ. ಆ ಕೃತಿಗೆ ೧೯೬೨ನೇ ಸಾಲಿನ ಸಾಹಿತ್ಯ ವಿಮರ್ಶಕರ ಪ್ರಶಂಸೆಗೆ ಪಾತ್ರವಾಗಿದೆ. 'ಭಾಸನ ಮಕ್ಕಳು' ಎಂಬ ಅವರ ವಿಮರ್ಶಾಗ್ರಂಥವು ೧೯೬೩ನೇ ವರ್ಷದ ದೇವರಾಜ ಬಹದ್ದೂರ್ ಪ್ರಶಸ್ತಿ ಗಳಿಸಿದೆ. ಅವರ ಸಮಗ್ರ ಕವನಗಳು 'ನನ್ನ ಕವನಗಳು' ಶೀರ್ಷಿಕೆಯಲ್ಲಿ ಪುನರ್ ಮುದ್ರಣಗೊಂಡಿವೆ.

ಅವರ ಎಲ್ಲ ಕೃತಿಗಳ ಪರಿಚಯವನ್ನೂ ಈ ಪುಸ್ತಕದ ಮುಂದಿನ ಭಾಗದಲ್ಲಿ ಸಮಾಲೋಚಿಸಿರುವುದರಿಂದ ಕೆಲವೊಂದು ಮುಖ್ಯ ಕೃತಿಗಳನ್ನು ಮಾತ್ರ ಇಲ್ಲಿ ಹೆಸರಿಬಹುದು.

ಶಿವತಾಂಡವನ, ಕೆಂಗನ ಕಲ್ಲು, ವಿಪರ್ಯಾಸ, ಬೃಂದಾವನ ಲೀಲೆ, ರಾಸ ಲೀಲೆ, ಚೈತ್ರ-ಜ್ಯೋತಿ, ಬಾರೋ ಮೈಲಾರಕೆ - ಅವರ ಗಮನಾರ್ಹ ಕವನ ಸಂಕಲನಗಳು. 'ನೆಲದ ಸೊಗಡು' ಅವರ ಏಕೈಕ ಕಥೆಗಳ ಸಂಗ್ರಹ.

ಪುರುಷಸಿಂಹ, ಹೇಮಕೂಟ, ಸಾಮರಸ್ಯದ ಶಿಲ್ಪಿ, ಮಹಾಪ್ರಸಾದಿ ಕಾದಂಬರಿಗಳು.

ವಿಭೂತಿ ಪುರುಷರು, ಭಾರತ ರತ್ನ, ಶಿವಮೂರ್ತಿ ಶಾಸ್ತ್ರೀ, ಆತ್ಮೀಯ, ದೇವುಡು - ಇವು ಜೀವನ ಚಿತ್ರಣವೊಳಗೊಂಡ ಕೃತಿಗಳು.

ಮರೀಚೇಡಿ, ವಿಜಯ ವಾತಾಪಿ, ರೇಣುಕ ಪರಂಜ್ಯೋತಿ, ಅಂಬೆ,

ನಾಟ್ಯಾಂಜಲಿ ಭಕ್ತಿ ಭಾವುಕಿ - ನಾಟಕ ಮತ್ತು ರೂಪಕಗಳು.

ಭಾಸನ ಮಕ್ಕಳು, ಅಭಿವ್ಯಕ್ತಿ, ಮಾಸ್ತಿಯವರ ಕಾವ್ಯಗಳು, ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತರು, ಅವಲೋಕನ, ಅವಸ್ಥಾ, ವಚನ ವೈಭವ - ವಿಮರ್ಶಾ ಗ್ರಂಥಗಳು.

ಸೀತಾವನವಾಸ ಸಂಗ್ರಹ, ಕೆಳದೀ ರಾಜಾಭ್ಯುದಯಮ್, ಶ್ರೀ ಮರುಳಸಿದ್ದೇಶ್ವರ ಪುರಾಣ, ಹರಿಹರನ ಹತ್ತು ರಗಳೆಗಳು, ಶೂನ್ಯ ಸಂಪಾದನೆ ಒಂದು ಅಧ್ಯಯನ, ನೀಲಮ್ಮನ ವಚನಗಳು, ಅರುವಿನಾಗರದಲ್ಲಿ, ನೂತನ ಚೇತನ, ಅಕ್ಕಗಳ ವಚನಗಳು ಇವು ಸಂಪಾದಿತ ಕೃತಿಗಳು.

ಮರುಳಸಿದ್ಧ , ಕೃತಾರ್ಥ, ಸಾಹಿತ್ಯೋಪಾಸಕ, ಕಾವ್ಯಾನಂದ - ಇವು ಅವರ ನೇತೃತ್ವದಲ್ಲಿ ಪ್ರಕಟಗೊಂಡಿರುವ ಸಂಸ್ಮರಣ ಗ್ರಂಥಗಳು. ಕನ್ನಡ ಸಾಹಿತ್ಯ ಪರಿಷತ್ತಿನ ವತಿಯಿಂದ ನಡೆಯುವ ಪರೀಕ್ಷೆಗಳಿಗಾಗಿ ಅವರ ಅಧ್ಯಕ್ಷತೆಯಲ್ಲಿ 'ಕನ್ನಡ ಭಾರತಿ' ಎರಡು ಪುಸ್ತಕಗಳು ಪ್ರಕಟವಾಗಿವೆ. ಅವರ 'ಆಯ್ದ ಕವನಗಳು' ಪುಸ್ತಕ ಕರ್ನಾಟಕ ವಿಶ್ವವಿದ್ಯಾಲಯದ ಪದವಿ ತರಗತಿಗೆ ಪಠ್ಯವಾಗಿತ್ತು.

ಸಾಶಿಮರವರು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲೂ ಗಣನೀಯ ಕೃತಿಗಳನ್ನು ರಚಿಸಿದ್ದಾರಾದರೂ ಮುಖ್ಯವಾಗಿ ಅವರದು ಕವಿ ಹೃದಯ ಎಂಬುದನ್ನು ಮರೆಯುವಂತಿಲ್ಲ. ಅವರ ಕವನಗಳ ವಸ್ತು ವೈವಿಧ್ಯ ವೈಶಿಷ್ಟ್ಯಗಳನ್ನು ಕುರಿತು ಸರ್ವಶ್ರೀ ದ.ರಾ. ಬೇಂದ್ರೆ, ವಿ.ಕೃ. ಗೋಕಾಕ್, ಡಾ॥ ಹಾಮಾನಾ, ಡಾ॥ ಸಿ.ಪಿ.ಕೆ., ಚೆನ್ನವೀರ ಕಣವಿ, ಡಾ॥ ಎಚ್. ತಿಪ್ಪೇರುದ್ರಸ್ವಾಮಿ, ಪಿ.ಎಸ್. ರಾಮಾನುಜಂ, ಹಂಪನಾ, ಕೆ.ಎಸ್. ನಿಸಾರ್ ಅಹಮದ್, ಪುತಿನ, ಡಾ॥ ಎಸ್. ವೃಷಭೇಂದ್ರಸ್ವಾಮಿ ಮೊದಲಾದ ವಿದ್ವಾಂಸರು ಪ್ರಶಂಸೆಯ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಶ್ರೀಯುತರು ಅಧ್ಯಾಪನ, ಸಾಹಿತ್ಯ ಕೃಷಿಯಲ್ಲಿ ಮಾತ್ರವಲ್ಲದೆ ಸಾರ್ವಜನಿಕ ಸೇವೆಯಲ್ಲೂ ಪಾಲ್ಗೊಂಡಿದ್ದಾರೆ. ಸ್ವಗ್ರಾಮ ಸಾಸಲಿನಲ್ಲಿ 'ತರುಣ ಭಾರತಿ ಕಲಾ ಸಂಸ್ಥೆ'ಯ ಉಗಮಕ್ಕೆ ಅವರೇ ಪ್ರೇರಕರು. ಆ ಕಲಾ ಸಂಸ್ಥೆಯ ವತಿಯಿಂದ ಅನೇಕ ನಾಟಕಗಳು ಪ್ರದರ್ಶನಗೊಂಡಿವೆ. ಬೆಂಗಳೂರಿನಲ್ಲಿ ಅವರದೇ ಆದ 'ರಾಗಿಣಿ ಪ್ರತಿಷ್ಠಾನ' ಪ್ರಕಟನ ಸಂಸ್ಥೆಯಿದೆ. ಈ ಪ್ರತಿಷ್ಠಾನದಿಂದ ಗಣ್ಯ ಸಾಹಿತಿಗಳನೇಕರ ಗ್ರಂಥಗಳು ಪ್ರಕಟವಾಗಿವೆ, ಪ್ರಕಟವಾಗುತ್ತಲೂ ಇವೆ.

ಅಧ್ಯಾಪಕ ವೃತ್ತಿಯಿಂದ ನಿವೃತ್ತರಾಗಿದ್ದರೂ ಸಾಹಿತ್ಯ ನಿರ್ಮಿತಿಯ ಪ್ರವೃತ್ತಿಯಿಂದ ಅವರು ನಿವೃತ್ತಿ ಹೊಂದಿಲ್ಲ. ವರ್ಷವರ್ಷವೂ ಅವರು ಹೊಸ ಗ್ರಂಥಗಳನ್ನು ಬರೆದು ಪ್ರಕಟಿಸುತ್ತಲೇ ಇದ್ದಾರೆ. ವ್ಯಾಸಂಗಪ್ರಿಯತೆ ಹಿಂದಿಗಿಂತಲೂ ಅಧಿಕಗೊಂಡಿದೆ. ಬೆಂಗಳೂರು ಮತ್ತಿತರ ಕಡೆಗಳಲ್ಲಿ ನಡೆಯುವ ಸಾಹಿತ್ಯ ಸಂಬಂಧ ಕಾರ್ಯಕ್ರಮಗಳಲ್ಲಿ ಇಂದಿಗೂ ಅತ್ಯುತ್ಸಾಹದಿಂದ ಭಾಗವಹಿಸುತ್ತಿದ್ದಾರೆ. ಸಾಹಿತ್ಯ

ಸಂಬಂಧ ಕಾರ್ಯಕ್ರಮಗಳ ದುಡಿಮೆಯಲ್ಲಿ ಅವರಿಗೆ ಶ್ರಮವೆಂಬುದೇ ಇಲ್ಲ. ಕನ್ನಡದಲ್ಲಿ ಕೆ.ಎ.ಎಸ್ ಮತ್ತು ಐ.ಎ.ಎಸ್. ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಇಂದಿಗೂ ಅತ್ಯುತ್ಸಾಹದಿಂದ ಪಾಠ ಹೇಳುತ್ತಿದ್ದಾರೆ. ಅವರಿಂದ ಪಾಠ ಹೇಳಿಸಿಕೊಂಡ ಅನೇಕರು ಅಧಿಕಾರಿಗಳಾಗಿದ್ದಾರೆ.

ಸಾಶಿಮರವರು ನಾಡಿನ ಅನೇಕ ಸಭೆ, ಸಮಾರಂಭ ಸಮ್ಮೇಳನಗಳಲ್ಲೂ ಭಾಗವಹಿಸಿ ವಿದ್ವತ್ಪೂರ್ಣ ಉಪನ್ಯಾಸ ನೀಡಿದ್ದಾರೆ, ಪ್ರಬಂಧಗಳನ್ನು ಮಂಡಿಸಿದ್ದಾರೆ.

ಶ್ರೀಯುತರು ೧೯೫೮ರಲ್ಲಿ ಜರುಗಿದ ಬಳ್ಳಾರಿಯ ಕನ್ನಡ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದಾರೆ. ಬೆಂಗಳೂರಿನಲ್ಲಿ ಸಮಾವೇಶಗೊಂಡ ಸಾಹಿತ್ಯ ಸಮ್ಮೇಳನದ 'ಅಂತರ ಭಾರತಿ' ಕಾರ್ಯಕ್ರಮದಲ್ಲಿ ಅವರು ಕನ್ನಡ ಭಾರತಿಯ ಪ್ರತಿನಿಧಿಯಾಗಿದ್ದರು (೧೯೭೦). ಶಿವಮೊಗ್ಗೆಯ ಸಾಹಿತ್ಯ ಸಮ್ಮೇಳನದ ಸಾಹಿತ್ಯಗೋಷ್ಠಿಯಲ್ಲಿ ಪ್ರಬಂಧ ಮಂಡಿಸಿದ್ದರು (೧೯೭೬). ೧೯೮೧ರ ಚಿಕ್ಕಮಗಳೂರು ಸಾಹಿತ್ಯ ಸಮ್ಮೇಳನದಲ್ಲಿ ನಾಟಕ ಗೋಷ್ಠಿಯಲ್ಲಿ ಪ್ರಬಂಧ ಮಂಡನೆ, ೧೯೮೦ರಲ್ಲಿ ತಿಪಟೂರಿನಲ್ಲಿ ಜರುಗಿದ ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿಯ ಅಧ್ಯಕ್ಷತೆ, ೧೯೮೭ರಲ್ಲಿ ಗುಲ್ಬರ್ಗದಲ್ಲಿ ನಡೆದ ರಂಗಭೂಮಿ ಕುರಿತ ವಿಚಾರ ಸಂಕಿರಣದ ಅಧ್ಯಕ್ಷತೆ, ತ್ರಿವಿಕ್ರಮ ಸನ್ಮಾನ ಸಮಿತಿ (೧೯೮೮) ಡಾ|| ಎಂ. ಚಿದಾನಂದ ಮೂರ್ತಿ ಸನ್ಮಾನ ಸಮಿತಿಯ ಅಧ್ಯಕ್ಷರಾಗಿ (೧೯೯೧), ತುಮಕೂರು ಜಿಲ್ಲಾ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ (೧೯೯೧), ಬೆಂಗಳೂರಿನ ''ವೀರಶೈವ ಸಮನ್ವಯ'' ಮಾಸಪತ್ರಿಕೆಯ ಸಂಪಾದಕರಾಗಿ, ೧೯೮೯-೯೦ನೆಯ ಸಾಲಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, ೧೯೯೬-೯೮ರವರೆಗೆ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಸಮರ್ಪಕ ರೀತಿಯಲ್ಲಿ ಕಾರ್ಯನಿರ್ವಹಿಸಿದ್ದಾರೆ. ವಿಶ್ವಕೋಶದ ಪ್ರಧಾನ ಸಂಪಾದಕರಾಗಿ, ರಾಜ್ಯ ಭಾಷಾ ಆಯೋಗದ ಸದಸ್ಯರಾಗಿ (೧೯೮೪-೮೯) ಕಾರ್ಯ ನಿರ್ವಹಿಸಿದ್ದಾರೆ. ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲೂ ಕೆಲಕಾಲ ದುಡಿದಿದ್ದಾರೆ. ಮರುಳಸಿದ್ಧ, ಸಾರ್ಥಕ, ಸಾಹಿತ್ಯೋಪಾಸಕ, ಕಾವ್ಯಾನಂದ ಈ ಸಂಸ್ಮರಣ ಗ್ರಂಥಗಳು ಹೊರಬರಲು ಅವರ ನಿಷ್ಠೆಯ ದುಡಿಮೆಯೇ ಕಾರಣ. ಅವರು ಕನಕ ಸಾಹಿತ್ಯ ಸಂಪುಟದ ಸಂಪಾದಕ ಸದಸ್ಯರಾಗಿ ಡಾ. ದೇಜಗೌರವರ ಸಾನ್ನಿಧ್ಯದಲ್ಲಿ ಕೆಲಸ ಮಾಡಿದ್ದಾರೆ.

ಜಗತ್ತಿನ ಎಲ್ಲ ಯಶಸ್ವಿ ಪುರುಷರ ಸಾಧನೆಯ ಹಿಂದೆ ಮಹಿಳೆಯೊಬ್ಬಳಿರುತ್ತಾಳೆ ಎಂಬ ಮಾತಿದೆ. ಸಾಶಿಮರವರು ಕೂಡಾ ಈ ಮಾತಿಗೆ ಹೊರತಾದವರಲ್ಲ. ಅವರ ಎಲ್ಲ ಯಶಸ್ಸಿನ ಹಿಂದೆ ಅವರ ಪತ್ನಿಯ ಸಹಾಯ ಸಹಕಾರಗಳಿವೆ. ಗೃಹಕೃತ್ಯದ ಯಾವ ಜಂಜಾಟವನ್ನೂ ಅವರ ಪತಿಗೆ ಬಿಟ್ಟುಕೊಡದೆ ತಾವೇ ನಿರ್ವಹಿಸಿದ್ದು ಸಾಶಿಮರವರ ಸಾಹಿತ್ಯ ಚಟುವಟಿಕೆಗಳಿಗೆ ಪ್ರೇರಣೆಯಾಗಿದೆ. ''ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು,

ಇಚ್ಛೆಯರಿತು ನಡೆವ ಸತಿ' ಇವು ಎಷ್ಟೋ ಜನರ ಪಾಲಿಗೆ ದುರ್ಲಭ, ಅದು ಸಾಶಿಮರವರ ಪಾಲಿಗೆ ಇದೆಲ್ಲವೂ ಲಭ್ಯ. ಇದಕ್ಕಿಂತ ಬೇರೆ ಸ್ವರ್ಗವುಂಟೆ ?

ಒಂದು ಕಾಲದಲ್ಲಿ ಬಡತನದ ಬವಣೆ ವಾರಾನ್ನಗಳಲ್ಲಿ ವಿದ್ಯಾಭ್ಯಾಸ ಸಾಗಿಸಿದ ಸಾಶಿಮ ಇಂದು ಬೆಂಗಳೂರಿನಲ್ಲಿ ನೆಮ್ಮದಿಯ ಜೀವನ ನಡೆಸಿದ್ದಾರೆ. ಭವ್ಯವಾದ ಸುಂದರವಾದ ಬಂಗಲೆ, ಕಾರು, ನೆಮ್ಮದಿಯ ಬದುಕಿಗೆ ಆಗತ್ಯವಾದಷ್ಟು ಹಣ - ಎಲ್ಲವೂ ಅವರಿಗುಂಟು. ಯಾವ ಕೀಳು ಅಭಿರುಚಿಗೂ ದಾಸರಾಗದ ಅವರ ಸಂಸಾರ ಆದರ್ಶ ಸಂಸಾರ. ಬೆಚ್ಚನೆಯ ಮನೆ, ವೆಚ್ಚಕ್ಕೆ ಹೊನ್ನು, ಇಚ್ಛೆಯನ್ನರಿತು ನಡೆವ ಸತಿ, ಆತ್ಮಾನಂದಕ್ಕೆ ಸಾಹಿತ್ಯ ವ್ಯಾಸಂಗ !

ಎಂ. ಶಿವಪ್ರಸಾದ, ಎಂ. ರಾಗಿಣಿ, ಎಂ. ರವಿಪ್ರಸಾದ - ಮುತ್ತಿನಂತಹ ಮೂವರು ಮಕ್ಕಳು. ತಂದೆತಾಯಿಗಳ ಇಷ್ಟಕ್ಕೆ ಹೊಂದಿಕೊಂಡು ನಡೆಯವ ಸ್ವಭಾವದವರು. ಶಿವಪ್ರಸಾದ ಇಂಗ್ಲಿಷ್ ಎಂ.ಎ., ಮುಗಿಸಿ ಕಾಲೇಜೊಂದರಲ್ಲಿ ಉಪನ್ಯಾಸಕರು. ಎಂ. ರವಿಪ್ರಸಾದ್ ಬಿ.ಇ., ಪದವೀಧರರು. ಅಮೇರಿಕೆಯಲ್ಲಿದ್ದಾರೆ. ಪ್ರೇಮದ ಪುತ್ರಿ ರಾಗಿಣಿ. ಆಕೆ ಪತಿ ಸಂಗಮೇಶ್ವರ್ ಅವರೊಂದಿಗೆ ಈಗ ಅಮೇರಿಕಾದಲ್ಲಿದ್ದಾರೆ. ಸಾಶಿಮರವರ ಮನೆಗೆ 'ರಾಗಿಣಿ' ಎಂದೇ ಹೆಸರು. ಅವರ ಪ್ರಕಾಶನ ಸಂಸ್ಥೆ 'ರಾಗಿಣಿ ಪ್ರತಿಷ್ಠಾನ' !'

ಅನ್ಯೋನ್ಯ ದಾಂಪತ್ಯ, ಮರುಳಯ್ಯನವರ ಪತ್ನಿ ಮರುಳು ಸಿದ್ಧಮ್ಮ ಪತಿಯ ಪ್ರೀತಿಯ ಕರೆಯಲ್ಲಿ ವೀಣಾ-ಮಿನ್ನಿ. ಆ ಸಾಧ್ವಿ ಕುಪ್ಪೂರು ಗದ್ದಿಗೆ ಮಠದ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಆಶ್ರಮದಲ್ಲಿ ಶಕುಂತಲೆಯಾಗಿ ಬೆಳೆದ ಕನ್ಯೆ. ಶಿಸ್ತುಸಂಯಮಗಳಿಂದ ಗೃಹಕೃತ್ಯದ ಹೊರೆಹೊತ್ತ ವ್ಯವಹಾರ ಕುಶಲಿ, ಕುಪ್ಪೂರು ಸ್ವಾಮಿಗಳ ಬಗ್ಗೆ ಇಬ್ಬರಿಗೂ ಅಚ್ಚಳಿಯದ ಭಕ್ತಿಗೌರವ.

ಸಭೆ ಸಮಾರಂಭಗಳಲ್ಲಿ ಸಾಹಿತಿಗಳ ಮಾತು ಕೇಳಲು ಚೆನ್ನ. ಆ ಮಾತಿನಲ್ಲಿ ಸುವ್ಯವಸ್ಥೆ, ಒಪ್ಪಓರಣ ಎಲ್ಲವೂ ಉಂಟು. ಆದರೆ ಸಾಶಿಮರವರ ಮನೆಯ ವಾತಾವರಣ ಆಹ್ಲಾದಕರ. ಎಲ್ಲೆಡೆಯಲ್ಲೂ ಶಿಸ್ತು, ಶುಚಿತ್ವ, ನಡುಮನೆಯ ಪೀಠೋಪಕರಣಗಳ ನಡುವೆ ಆಷ್‌ಟ್ರೇಗಳಿಲ್ಲ. ರೂಂಗಳಲ್ಲಿ ರಂ ಇಲ್ಲ, ಬೀರುಗಳಲ್ಲಿ ಬೀರೂ ಇಲ್ಲ ! ಆಸನಗಳ ಅಕ್ಕಪಕ್ಕದಲ್ಲಿ ಜ್ಞಾನದಾಹ ತಣಿಸಲು ಪುಸ್ತಕ ಸಂಗಾತಿಗಳು. ಹಲವಾರು ದಿನಪತ್ರಿಕೆ ವಾರಪತ್ರಿಕೆಗಳು, ನಿಗದಿತ ವೇಳೆಗೆ ಪ್ರಸಾದ ಸ್ವೀಕರಿಸುವ ವ್ಯವಸ್ಥೆ ಪ್ರತಿದಿನ ಅವರ ಮನೆಗೆ ಬಂದು ಹೋಗುವ ಅಭ್ಯಾಗತರೆಷ್ಟೋ ಮಂದಿ. ಎಲ್ಲರೊಂದಿಗೂ ಮೆಲುಮಾತಿನ ವಿನಯಪೂರ್ವಕ ಸಂಭಾಷಣೆ, ಭಾಷಣಗಳಲ್ಲಿ ಧ್ವನಿ ಏರಿಸುವ ಸಾಶಿಮರವರದು ಇಲ್ಲಿ ಮೆಲ್ಲುಲಿ. ಮನೆಗೆ ಬಂದವರು ಊಟ ಉಪಾಹಾರ ಮುಗಿಸದೆ ಹೋಗುವಂತಿಲ್ಲ. ಜಂಗಮ ಸೇವಾನಿರತರು. ನಿವೃತ್ತರಾಗಿಯೂ ನಿತ್ಯವೂ ಒಂದಲ್ಲ ಒಂದು ಸಾಹಿತ್ಯ ಚಟುವಟಿಕೆಯಲ್ಲಿ ನಿತ್ಯೋತ್ಸಾಹಿ.

'ಸರಳ ಜೀವನ; ಉದಾತ್ತ ಚಿಂತನ' - ಇದು ಸಾಶಿಮ ಅವರ ಜೀವನ ಧರ್ಮ. ಆಡಂಬರ ಅಟ್ಟಹಾಸಗಳಂತೂ ಇಲ್ಲವೇ ಇಲ್ಲ. ಹೊರಗೆ ಹೋಗಬೇಕಾದಾಗ ಒಂದು ಪ್ಯಾಂಟು ಶರ್ಟು - ಅಷ್ಟೇ ಅಲಂಕಾರ. ಮನೆಯೊಳಗೆ ಬಿಳೀ ಅಂಗಿ ಬಿಳಿಯ ಪಂಚೆ. ಕೆಲವೊಮ್ಮೆ ಅಂಗಿಯ ಬದಲು ಬನಿಯನ್ ಆದರೂ ಆದೀತು. ಬೆಳ್ಳಿ ಬಂಗಾರದ ಒಡವೆಗಳಂತಹ ಕ್ಷಣಿಕ ವಸ್ತುಗಳ ಧಾರಣವಾಗಲೀ ವಸ್ತ್ರಾಲಂಕಾರ ಪ್ರಿಯತೆಯಾಗಲೀ ಅವರಿಗಿಲ್ಲ. ನಿರಾಭರಣ ಸೌಂದರ್ಯ ಸಂಪನ್ನರು. ಅದು ಅವರ ಜೀವನ ಶೈಲಿ.

ಮಾಧ್ಯಮಿಕ ಶಾಲೆಯಲ್ಲಿ ಕಷ್ಟಕಾರ್ಪಣ್ಯದ ಜೀವನದ ಮಧ್ಯೆಯೂ ಅವರು ಸ್ಕಾಲರ್‌ಶಿಪ್ ಹಣ ನನಗೆ ಬೇಡ ಎಂದು ನಿರಾಕರಿಸಿ ಬೇರೆ ಯಾರಾದರೂ ಬಡ ವಿದ್ಯಾರ್ಥಿಗೆ ಅವನ್ನು ಕೊಡಲು ಹೇಳಿದ್ದರು. ಅದು ಕೃತಕವಲ್ಲ. ತೊಟ್ಟು ಬಿಟ್ಟ ಹಳೆಯ ಬಟ್ಟೆಗಳನ್ನು ಇಂದೂ ಅವರು ವ್ಯರ್ಥಗೊಳಿಸುವುದಿಲ್ಲ. ನೆಲ ಒರೆಸಲಿಕ್ಕೊ ಪಾತ್ರೆಪರಡಿ ಕೊಳ್ಳುವುದಕ್ಕೋ ಕೊಡುವುದಿಲ್ಲ. ಅವುಗಳನ್ನು ಕೂಡಿಟ್ಟು ಬಡವರ ಮನೆಗಳನ್ನು ಹುಡುಕಿಕೊಂಡು ಹೋಗಿ ಕೊಟ್ಟು ಬರುವ ಮಾನವೀಯ ಸ್ವಭಾವ. ಈ ವಿಚಾರವಾಗಿ ಒಮ್ಮೆ ಪತಿಪತ್ನಿಯಲ್ಲಿ ನಡೆದ ಸಂಭಾಷಣೆ ಸ್ವಾರಸ್ಯಮಯವಾಗಿದೆ.

ಸಾಶಿಮರವರ ಪತ್ನಿ ವೀಣಾರವರು ಹಳೆಯ ಬಟ್ಟೆಗಳಲ್ಲೆಲ್ಲಾ ಕೂಡಿಟ್ಟುಕೊಂಡಿದ್ದರು. 'ಹಳೇಬಟ್ಟೆಗಳಿಗೆ ಸ್ಟೀಲ್‌ಪಾತ್ರೆ ಅಲ್ಯೂಮಿನಿಯಂ ಪಾತ್ರೆ ಕೊಡಲಾಗುತ್ತೆ' ಎಂದು ವ್ಯಾಪಾರಿ ಬೀದಿಯಲ್ಲಿ ಕೂಗುತ್ತ ಬಂದ. ಕೂಡಲೇ ವೀಣಾರವರು ಅವನನ್ನು ಕರೆಯಲು ಮುಂಬಾಗಿಲಿಗೆ ಬಂದಾಗ ಅಲ್ಲಿಯೇ ಇದ್ದ ಸಾಶಿಮರವರು ಅವರನ್ನು ತಡೆದರು.

'ಹಳೇಬಟ್ಟೆಗೆ ಹೊಸ ಪಾತ್ರೆಗಳು ಬರುತ್ತವಲ್ಲಾ, ಏಕೆ ಬೇಡಾಂತೀರ ?' ಅವರ ಮುಗ್ಧ ಪ್ರಶ್ನೆ.

'ನೋಡು ಮಿನ್ನಿ, ಈ ಬಟ್ಟೆಗಳ ತೂಕಕ್ಕೆ ನಲ್ವತ್ತು ಪೈಸೆ ಅಥವಾ ನಾಲ್ಕು ರೂಪಾಯಿ ಬೆಲೆಯ ಪಾತ್ರೆಗಳು ಬರಬಹುದು. ಆದರೆ ಈ ಬಟ್ಟೆಗಳನ್ನು ಬಡವರಿಗೆ ಕೊಟ್ಟರೆ ಅವರು ನಲವತ್ತು ದಿನಗಳ ಮಟ್ಟಿಗಾದರೂ ನಾಲ್ಕು ಜನರ ಮುಂದೆ ಮಾನ ಮುಚ್ಚಿಕೊಳ್ಳುತ್ತಾರೆ. ಆ ಪುಣ್ಯ ನಮ್ಮದಾಗುತ್ತೆ ಅಲ್ವೆ ?' ಎಂದಾಗ ಪತಿಯ ಔದಾರ್ಯದಿಂದ ಪತ್ನಿ ಸಂತೋಷಗೊಂಡರು. ಹಳೆಬಟ್ಟೆಗೆ ಪಾತ್ರೆಕೊಳ್ಳುವ ಅವರ ಕೆಲಸ ಅಂದಿಗೇ ಕೊನೆಯಾಯಿತು.

ಸನ್ಮಾನಗಳು :

''ವಾಗ್ದೇವಿಯ ವರಪುತ್ರ, ಶ್ರೇಷ್ಠ ವಿದ್ವಾಂಸ, ಧರ್ಮದಾರ್ಶನಿಕ, ಮಹಾನ್ ವಾಗ್ಮಿ, ಭಾಗ್ಯವಂತರೆಂದು, ಸಾಮರಸ್ಯದ ಶಿಲ್ಪಿಯೆಂದು'' ಗುರ್ತಿಸಿ ಶೆಟ್ಟೀಕೆರೆಯ ಗ್ರಾಮಸ್ಥರು ದಿನಾಂಕ ೧೭-೧೧-೧೯೮೭ರಲ್ಲಿ ಪಂಚ ಪೀಠಾಧ್ಯಕ್ಷರಾದ ಪಂಚ

ಜಗದ್ಗುರುಗಳ ದಿವ್ಯ ಸನ್ನಿಧಿಯಲ್ಲಿ ಅವರನ್ನು ಸನ್ಮಾನಿಸಿದ್ದಾರೆ.

ಬೆಂಗಳೂರಿನ ಶ್ರೀ ಶಂಕರ ಸೇವಾ ಸಮಿತಿಯ ಟ್ರಸ್ಟ್‌ನವರು, ದಿನಾಂಕ ‘೪-೫-೧೯೭೮ ರಂದು ಪ್ರಕಟವಾದ ಸಾಗರದ ಶ್ರೀ ಮಹಾಬಲೇಶ್ವರಭಟ್ಟರ ‘ಕನ್ನಡ ಕುಲ ದೀಪಕರು’ ಕೃತಿಯಲ್ಲಿ ‘ಡಾ॥ ಸಾ.ಶಿ. ಮರುಳಯ್ಯ’ ಎಂಬ ಲೇಖನವನ್ನು ಭಾವಚಿತ್ರದೊಂದಿಗೆ ಪ್ರಕಟಿಸಿದ್ದಾರೆ. ಈ ಲೇಖನ ನಾಲ್ಕೈದು ಪುಟಗಳಷ್ಟು ಚಿಕ್ಕದಾಗಿದ್ದರೂ ಸಮಗ್ರ ವ್ಯಕ್ತಿತ್ವವನ್ನು ವ್ಯಕ್ತಪಡಿಸುವಲ್ಲಿ ಯಶಸ್ವಿಯಾಗಿದೆ.

ಶ್ರೀ ವೀರಪ್ಪದೇವರು ಅವರು ‘ಅಭಿವ್ಯಕ್ತಿ ಸಾಶಿಮ’ ಎಂಬ ೧೦೦ ಪುಟಗಳ ಪುಸ್ತಕವನ್ನು ಬರೆದು ಮರುಳಯ್ಯನವರಿಗೆ ೫೮ ವರ್ಷಗಳು ತುಂಬಿದ ಸವಿನೆಪಿಗೆ ೨೮-೧-೧೯೮೯ರಲ್ಲಿ ಪ್ರಕಟಿಸಿದ್ದಾರೆ. ಅದರಲ್ಲಿ ಮರುಳಯ್ಯನವರ ಬಾಲ್ಯ, ವಿದ್ಯಾಭ್ಯಾಸ, ವ್ಯಕ್ತಿತ್ವ ಮತ್ತು ಕೆಲವು ಪುಸ್ತಕಗಳ ವಿಮರ್ಶೆಯಿದೆ. ನನಗೆ ತಿಳಿದ ಮಟ್ಟಿಗೆ ಪ್ರಕಟವಾಗಿರುವ ಪುಸ್ತಕಗಳು ಇಷ್ಟೇ. ಉಪೇಂದ್ರ ಎಂಬುವರು ಡಾ॥ ಸಾ.ಶಿ.ಮರುಳಯ್ಯ ಅಭಿಮಾನಿಗಳ ಸಂಘ ಎಂಬ ಸಂಘವೊಂದನ್ನು ಶ್ರೀಯುತರ ಹೆಸರಿನಲ್ಲಿ ಸ್ಥಾಪಿಸಿದ್ದಾರೆ.

‘ಅಭಿವ್ಯಕ್ತಿ ಸಾಶಿಮ’ ಪುಸ್ತಕದ ಪ್ರಾರಂಭದಲ್ಲಿ ಡಾ॥ ಸಿದ್ಧಯ್ಯ ಪುರಾಣಿಕರು ಬರೆದಿರುವ ಅಭಿಪ್ರಾಯ ಗಮನಾರ್ಹವಾಗಿದೆ. :

‘ಸಹೃದಯರನ್ನು ಮರುಳುಗೊಳಿಸುವ ಮರುಳಯ್ಯನವರು ಒಳ್ಳೆಯ ಕವಿ, ವಿಮರ್ಶಕ, ಸಂಶೋಧಕ, ಸಂಪಾದಕ, ವಾಗ್ಮಿ, ಒಳ್ಳೆಯ ಮಿತ್ರ. ಡಾ॥ ಸಾಶಿಮ ಅವರನ್ನು ಕುರಿತಾದ ‘ಅಭಿವ್ಯಕ್ತಿ ಸಾಶಿಮ’ ಎಂಬ ಕೃತಿ ಹೊರಬರುತ್ತಿರುವುದು ಹಿಗ್ಗಿನ ವಿಷಯ. ಕನ್ನಡನಾಡಿನ ಸಾಂಸ್ಕೃತಿಕ ಜೀವನವನ್ನು ಶ್ರೀಮಂತಗೊಳಿಸುತ್ತಿರುವ ಧೀಮಂತ ಕನ್ನಡಿಗರಲ್ಲಿ ಸಾಶಿಮ ಒಬ್ಬರು. ಬಹುಮುಖವಾದ ಸೃಜನ ಪ್ರತಿಭೆಯಿಂದ, ನಡೆ-ನುಡಿಗಳ ಸಾಚಾತನದಿಂದ ಅವರು ವಿದ್ಯಾರ್ಥಿಗಳಿಗೆ, ಸಹೃದಯರಿಗೆ, ಸಂಘ ಸಂಸ್ಥೆಗಳಿಗೆ, ಗೆಳೆಯರ ಬಳಗಕ್ಕೆ, ಬೆಳೆವ ಚೇತನಗಳಿಗೆ ಹುರುಪು-ಹುಮ್ಮಸ್ಸು, ಹಿಗ್ಗನ್ನೂ ದಿಶಾದರ್ಶನವನ್ನೂ, ಉದ್ದಿಪನವನ್ನೂ ನೀಡಿ ಧನ್ಯರಾಗಿದ್ದಾರೆ.

‘ಅವರೊಡನೆ ಕಳೆದ ಹೊತ್ತು ಮುತ್ತಾಗುತ್ತದೆ. ಮಾತು ಜ್ಯೋತಿಯಾಗುತ್ತದೆ. ನಾನೂ ಅವರ ಸ್ನೇಹಸುಖವನ್ನು ಅನುಭವಿಸಿ ಆನಂದತುಂದಿಲನಾಗಿದ್ದೇನೆ.’

ಡಾ॥ ಸಾ.ಶಿ. ಮರುಳಯ್ಯನವರ ವ್ಯಕ್ತಿತ್ವ ಮತ್ತು ಸಾಹಿತ್ಯಸಾಧನೆಯ ಎತ್ತರ ಬಿತ್ತರಗಳನ್ನು ಪರಿಶೀಲಿಸಿದರೆ ನ್ಯಾಯವಾಗಿ ಸಲ್ಲಬೇಕಾದ ಗೌರವ ಪ್ರಶಸ್ತಿಗಳು ಸನ್ಮಾನಗಳು ಅವರಿಗೆ ಇಂದಿಗೂ ಸಂದಿಲ್ಲವೆಂದೇ ಹೇಳಬೇಕಾಗುತ್ತದೆ. ಅವರ ಕೃತಿಗಳು ಅವುಗಳ ಮೌಲ್ಯ ಕೂಡಾ ಎಷ್ಟೋ ಮಂದಿ ಸಾಹಿತ್ಯಾಸಕ್ತರಿಗೆ ಮತ್ತು ವಿಮರ್ಶಕರಿಗೆ ತಿಳಿದಿಲ್ಲ. ಅವರು ಪ್ರಚಾರಪ್ರಿಯರಲ್ಲದಿರುವುದೂ, ಸಾಹಿತ್ಯದ ಯಾವುದಾದರೊಂದು ಬಣಕ್ಕೆ ಬದ್ಧರಾಗಿ ಗುಂಪು ಕಟ್ಟಿಕೊಳ್ಳದಿರುವುದೂ ಇದಕ್ಕೆ ಕಾರಣವಿರಬರಹುದು.

ಅವರ ಬಹಳಷ್ಟು ಪುಸ್ತಕಗಳನ್ನು ಪತ್ರಿಕೆಗಳಲ್ಲಿ ಸ್ವೀಕಾರ ಅಥವಾ ವಿಮರ್ಶೆಗೆ ಕೂಡಾ ಕಳಿಸಿಲ್ಲ. ಅವರ ಕೃತಿಗಳನ್ನು ಕುರಿತು ಸಾಹಿತ್ಯಾಸಕ್ತರು ಗೋಷ್ಠಿಗಳನ್ನು ನಡೆಸಿಲ್ಲ.

ಅನೇಕ ಲೇಖಕರ ಬಗ್ಗೆ ಸಂಭಾವನಾ ಗ್ರಂಥಗಳನ್ನು ತಂದ ಇವರಿಗೆ ಅವರ ಶಿಷ್ಯವೃಂದವಾಗಲೀ ಮಿತ್ರ ಬಳಗವಾಗಲೀ ಸನ್ಮಾನಿಸಿ ಸಂಭಾವನಾ ಗ್ರಂಥ ತರಲಿಲ್ಲ. ಈ ಬಗೆಯ ವ್ಯಥೆ ನನ್ನಂತೆಯೇ ಇನ್ನೂ ಹಲವಾರು ಅಭಿಮಾನಿಗಳನ್ನು ಬಾಧಿಸುತ್ತಿದೆ. ಆದರೆ ಸಾಶಿಮರವರಿಗೆ ಇದೊಂದು ಕೊರೆಯಾಗಿ ಕಾಣುತ್ತಿಲ್ಲ. 'ಹಾಡುವ ಕೋಗಿಲೆಗೆ ಬೇಕೆ ಬಿರುದು ಬಾವಲಿ ?' ಎಂಬುದು ಅವರ ನಿಲುವಿರಬಹುದು.

'ಇಷ್ಟೊಂದು ಸಮೃದ್ಧವಾಗಿ ಮತ್ತು ಸಮರ್ಥವಾಗಿ ಕಾವ್ಯನಿರ್ಮಾಣ ಮಾಡಿರುವ ಶ್ರೀ ಮರುಳಯ್ಯನವರನ್ನು ವಿಮರ್ಶಕರು ಇನ್ನಷ್ಟು ಸಮರ್ಪಕವಾಗಿ ಗುರುತಿಸಿ ಸಾಹಿತ್ಯ ಚರಿತ್ರೆಯಲ್ಲಿ ಅವರಿಗೆ ತಕ್ಕ ಸ್ಥಾನವನ್ನು ದೊರಕಿಸಿಕೊಡಬೇಕಾಗಿದೆ.' ಎಂದರು ಡಾ|| ಸಿಪಿಕೆ. 'ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ ತೀನಂಶ್ರೀ ನಂತರದ ಗೌರವಮಾಲಿಕೆಯಲ್ಲಿ ಬರುವ ಹೆಸರೇ ಮರುಳಯ್ಯನವರದು. ವಿದ್ವತ್ತು, ಪ್ರತಿಭೆ ಮತ್ತು ಮಾನವತೆಗಳ ಸಂಕ್ರಮಣ ಸ್ವರೂಪದ ಡಾ|| ಸಾ.ಶಿ. ಮರುಳಯ್ಯನವರು ಅಪರೂಪದ ವ್ಯಕ್ತಿ. ಇವರ ವ್ಯಕ್ತಿತ್ವವನ್ನು ಗುರ್ತಿಸುವಲ್ಲಿ ಪೂಜ್ಯತೆಯಿದೆ. ಧನ್ಯತೆಯಿಂದ ಗೌರವಿಸುವಲ್ಲಿ ನಾಡಿನ ಹಿರಿಯ ಸಂಸ್ಕೃತಿಯನ್ನೇ ಗೌರವಿಸುತ್ತೇವೆಂಬ ಭವ್ಯಭಾವನೆ ಗರ್ಭೀಕೃತವಾಗಿದೆ' ಎಂದರು ಮಿತ್ರ ಸಿ.ಕೆ. ಪರಶುರಾಮಯ್ಯ.

೧೯೯೯ರಲ್ಲಿ ಕರ್ನಾಟಕ ಸರ್ಕಾರವು ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿದರೆ, ಅದೇ ವರ್ಷ ಕರ್ನಾಟಕ ಸಾಹಿತ್ಯ ಅಕಾಡೆಮಿಯು ಶ್ರೇಷ್ಠ ಸಾಹಿತ್ಯ ಪ್ರಶಸ್ತಿ ಇತ್ತು ಪುರಸ್ಕರಿಸಿದೆ.

ಆ ವ್ಯಕ್ತಿಯನ್ನು ನೀವು ನೋಡಿರಬಹುದು. ಆ ವ್ಯಕ್ತಿಯ ವ್ಯಕ್ತಿತ್ವದ ವೈಶಿಷ್ಟ್ಯಗಳನ್ನೂ ಗುರ್ತಿಸಿರಬಹುದು. ಎಣ್ಣೆಗೆಂಪು ದುಂಡುಮುಖ, ತೀರ ಎತ್ತರವೂ ಅಲ್ಲದ ತೀರಾ ಕುಳ್ಳೂ ಎನ್ನಿಸದ ಈ ವ್ಯಕ್ತಿಗೆ ಹತ್ತು ಹಲವು ವ್ಯಕ್ತಿತ್ವ ವಿಶೇಷಗಳು. ಸದಾಕಾಲವೂ ಮುಖದಲ್ಲಿ ಮಿನುಗುವ ಮುಗುಳ್ನಗೆ. ಚಟುವಟಿಕೆಯ ಚಲನ ವಲನ. ಭಾಷಣಕ್ಕೆ ತೊಡಗಿದರೆ ಕಾಲವನ್ನೇ ಮರೆಸುವ ಮಹಾವಾಚಾಳಿತನ. ಅರುವತ್ತು ದಾಟಿದರೂ ಯೌವನದ ಹುಮ್ಮಸ್ಸು. ಸಭಿಕರನ್ನು ಮಾತಿನ ಮೋಡಿಯಲ್ಲಿ ಮೈ ಮರೆಸುವ ಮಾಂತ್ರಿಕತೆ. ವಾಲ್ಮೀಕಿಯಿಂದ ಹಿಡಿದು ಕುವೆಂಪು, ಕುವೆಂಪುನಂತರದ ಸಾಹಿತ್ಯವನ್ನು ಕೂಡಾ ವಿಮರ್ಶಿಸಬಲ್ಲ ಪಾಂಡಿತ್ಯ. ಜೋಗದ ಜಲಪಾತದಂತೆ ನಿರರ್ಗಳ ವಾಗ್ಧಾರೆ, ಸಂಸ್ಕೃತ, ಅಚ್ಚಗನ್ನಡ ಜಾನಪದ ಶಬ್ದ ಸಮ್ಮಿಳಿತ ಶೈಲಿ. ಸರಳ ಸುಂದರ ಸತ್ವಶಾಲಿ ಶೈಲಿಯಲ್ಲಿ ಎಲ್ಲವನ್ನೂ ತಿಳಿಸುವ ಹಂಬಲ. ಮರುಳಯ್ಯನವರ ಮಾತುಗಾರಿಕೆಗೆ ಮರುಳಾಗದ ಶ್ರೋತೃಗಳುಂಟೆ ?

ಸಜ್ಜನಿಕೆಗೆ ಮತ್ತೊಂದು ಹೆಸರು ಸಾ.ಶಿ. ಮರುಳಯ್ಯ. ಸರಳತೆ ರಸಿಕತೆಗಳನ್ನು

ಮೈಗೂಡಿಸಿಕೊಂಡ ವಿನಯ ಸಂಪನ್ನರು. ನಿಗರ್ವಿಗಳು. ವಿನಯಶೀಲತೆಯೇ ಜೀವನ ಧರ್ಮವೆಂದು ನಂಬಿದವರು. ಆ ನಂಬಿಕೆಯಂತೆಯೇ ನಡೆ ನುಡಿ ರೂಪಿಸಿಕೊಂಡವರು. 'ವಿದ್ಯಾ ದದಾತಿ ವಿನಯಂ' ಎಂಬ ಮಾತಿಗೆ ಅವರೊಂದು ಶ್ರೇಷ್ಠ ನಿದರ್ಶನ.

ಸ್ನೇಹ ಜೀವಿಯಾದ ಅವರಿಗೆ ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಪ್ರೀತಿ ವಿಶ್ವಾಸ. ಸುಸಂಸ್ಕೃತ ಜೀವಿ. ಹಮ್ಮು ಬಿಮ್ಮುಗಳು ಹತ್ತಿರವೂ ಸುಳಿಯದು. ಪರಿಚಿತರನ್ನೂ ಸ್ನೇಹಿತರನ್ನೂ ತಾವಾಗಿಯೇ ಮುಂದಾಗಿ ಮಾತನಾಡಿಸುವ ಸ್ವಭಾವ. 'ಏನ್ರೀ, ಅಗಾ ! ಇದೇನಿಲ್ಲಿ ? ಯಾವಗ್ ಬಂದ್ರಿ ? ಚೆನ್ನಾಗಿದೀರಾ ? ಏನು ಬರೆದ್ರಿ ಇತ್ತೀಚ್ಗೆ ?' ಈ ರೀತಿಯ ಆತ್ಮೀಯ ಸಂಭಾಷಣೆ, ಎಲ್ಲರನ್ನೂ ತಮ್ಮ ಸ್ನೇಹಪರಿಧಿಯೊಳಗೆ ಸೆಳೆದುಕೊಳ್ಳುವ ಬಯಕೆ. ಒಳ್ಳೆಯದು, ಮಹತ್ವವಾದದ್ದು ಎಲ್ಲೇ ಇರಲಿ. ಅದನ್ನು ಮೆಚ್ಚಿ ಪ್ರಶಂಸಿಸುವ ನಿರ್ಮತ್ಸರತ್ವ

ದಾಕ್ಷಿಣ್ಯ ಸ್ವಭಾವದ ಅವರಿಂದ ಸ್ವಾರ್ಥ ಸಾಧಿಸಿಕೊಂಡವರುಂಟು. ಈ ಸ್ವಭಾವದಿಂದಾಗಿ ಹಲವರಿಂದ ಅವರು ತೊಂದರೆಗೊಳಗಾದದ್ದೂ ಉಂಟು. ಇದು ಅವರ ದೌರ್ಬಲ್ಯವೆಂದುಕೊಂಡವರುಂಟು. ಆದರೂ ಅವರು ಮಾರ್ದವತೆ ಕಳೆದುಕೊಂಡವರಲ್ಲ. ಕಠಿಣ ಮನಸ್ಕರಾದವರಲ್ಲ. ಹಿಂದೆಯೂ ಅಷ್ಟೇ; ಏರು ಪೇರಿಲ್ಲದ ಸಮಸ್ಥಿತಿಯ ವ್ಯಕ್ತಿತ್ವ

ಸಾ.ಶಿ.ಮರುಳಯ್ಯನವರ ಬದುಕು - ಬರಹ

ಟಿ. ಮಹಾಬಲೇಶ್ವರ ಭಟ್ಟ

ಕೆಂಪು ಬಣ್ಣ, ದುಂಡುಮುಖ ಎಪ್ಪತ್ತರ ಗಡಿಯಲ್ಲಿ ಕಾಲಿಟ್ಟಿರುವ ಡಾ|| ಸಾ.ಶಿ. ಮರುಳಯ್ಯ ಮಾತನಾಡಲು ನಿಂತರೆ, ಕಾಲವನ್ನೇ ಮರೆಸುವ ಮಹಾವಾಚಾಳಿ. ಇಳಿ ವಯಸ್ಸಿನಲ್ಲೂ ಯವ್ವನದ ಹುಮ್ಮಸ್ಸು ಮಾತಿನಿಂದ ಜನರನ್ನು ಸೆರೆ ಹಿಡಿಯುವ ಮಹಾಕುಶಲತೆ. ವಿದ್ವತ್ ಪ್ರತಿಭೆಗಳ ಸಂಗಮ. ವಾಲ್ಮೀಕಿಯಿಂದ ಹಿಡಿದು, ಕುವೆಂಪು ತನಕ ಸಾಹಿತ್ಯವನ್ನು ವಿಮರ್ಶಿಸುವ ಪಾಂಡಿತ್ಯ, ವಾಗ್ದೇವಿಯ ಒಲುಮೆ, ಎಲ್ಲವನ್ನು ಎಲ್ಲರಿಗೂ ತಿಳಿಯುವಂತೆ ಹೇಳುವುದು ಮರುಳಯ್ಯನವರ ವೈಶಿಷ್ಟ್ಯ.

ಸಾಸಲು ಶಿವರುದ್ರಯ್ಯ ಮರುಳಯ್ಯನವರು ಹುಟ್ಟಿದ್ದು ತುಮಕೂರು ಜಿಲ್ಲೆಯ ಚಿಕ್ಕನಾಯಕನ ಹಳ್ಳಿ ಸಾಸಲು ಗ್ರಾಮದಲ್ಲಿ. ಕನ್ನಡದ ಶ್ರೇಷ್ಠ ಸಾಹಿತಿಗಳಾದ ತೀ. ನಂ. ಶ್ರೀ ಕಂಠಯ್ಯನವರು ಜನ್ಮವೆತ್ತಿದ ಜಿಲ್ಲೆಯಲ್ಲೇ ಮರುಳಯ್ಯನವರ ಜನ್ಮ. ಊರಿಗೆ ಇವರೇ ದೊಡ್ಡನಾಯಕರು.

ತಂದೆ ಶಿವರುದ್ರಯ್ಯ, ತಾಯಿ ಸಿದ್ದಮ್ಮ ಇವರಿಗೆ ಮರುಳಯ್ಯ ಮತ್ತು ಶಾಂತಮೂರ್ತಿ ಇಬ್ಬರು ಮಕ್ಕಳು. ಪ್ರಾರಂಭಿಕ ವಿದ್ಯಾಭ್ಯಾಸ ಸಾಸಲು ಹಳ್ಳಿಯಲ್ಲಿ. ಮರುಳಯ್ಯನವರದು ಶಿಕ್ಷಕರ ವಂಶ. ತಂದೆ ಶಿಕ್ಷಕರು, ಅದೇ ದಾರಿಯಲ್ಲಿ ಮಗನ ವೃತ್ತಿ. ಇದರಿಂದ ಜೀವನದಲ್ಲಿ ತೃಪ್ತಿ. ಇವರು ಕನ್ನಡ ನಾಡಿನಲ್ಲಿ ಸುತ್ತದೇ ಇರುವ ಸ್ಥಳವಿಲ್ಲ. ಹಳ್ಳಿ ಮತ್ತು ನಗರ ಇವರೆಡು ಪರಿಶ್ರಮ ಜೀವನದಲ್ಲಿ ಸಾಗಿದೆ. ಶಿಕ್ಷಣ ವೃತ್ತಿಯಲ್ಲಿ ಚಾಮರಾಜನಗರ, ಮೈಸೂರು, ದಾವಣಗೆರೆಯಲ್ಲಿ ಉಪಾಧ್ಯಾಯರಾಗಿ ಕೆಲಸ. ಎಂಟು ವರ್ಷಗಳ ಕಾಲ ಶಿವಮೊಗ್ಗೆಯ ಸಹ್ಯಾದ್ರಿಯಲ್ಲಿ ಅಧ್ಯಾಪಕ ವೃತ್ತಿ. ನಂತರ ಕನ್ನಡಿಗರ ಕಲ್ಯಾಣ ನಗರ ಬೆಂಗಳೂರಿನ ಸರ್ಕಾರಿ ಕಾಲೇಜಿನಲ್ಲಿ ಕೆಲಸ. ಪುನಃ ಬೆಂಗಳೂರಿನಿಂದ ತುಮಕೂರು ವಿಜ್ಞಾನ ಕಾಲೇಜಿಗೆ ವರ್ಗ. ತುಮಕೂರಿನಿಂದ ಚನ್ನಪಟ್ಟಣದ ಶ್ರೀ ಕುವೆಂಪು ಮಹಾವಿದ್ಯಾಲಯದಲ್ಲಿ ಪ್ರಾಂಶುಪಾಲ ಕೆಲಸ.

ಮರುಳಯ್ಯನವರಿಗೆ ತಂದೆಯೆ ಪ್ರಥಮ ಗುರು. ಮಗನ ಅಭ್ಯುದಯಕ್ಕಾಗಿ ಬಾಳನ್ನೇ ಸವೆಸಿದ ಮಹಾಸದ್ಗುಣಿ. ಮರುಳಯ್ಯನವರಿಗೆ ತಂದೆಗಿಂತ ಪ್ರೀತಿಯ ವಸ್ತು ಬೇರೊಂದಿಲ್ಲ. ಇದ್ದರೆ ಅದು ಅವರ ಧರ್ಮಪತ್ನಿ ವೀಣಾ.

ಪತ್ನಿ ಶ್ರೀಮತಿ ವೀಣಾರವರು ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳವರ ಆಶ್ರಮದಲ್ಲಿ ಶಕುಂತಲೆಯಾಗಿ ಬೆಳೆದ ಕನ್ಯೆ. ಇವರ ಬದುಕು ತುಂಬಿದ ಭಾಗೀರಥಿ. ಮುತ್ತಿನಂತಹ ಮೂರು ಮಕ್ಕಳ ತಾಯಿ. ಒಂದು ಹೆಣ್ಣು ಎರಡು ಗಂಡು, ಬಾಳು ಬಂಗಾರ, ಜೀವನ ನಂದಾದೀಪ. ಮರುಳಯ್ಯನವರು ಬದುಕಿನಲ್ಲಿ ಬಹು ರೀತಿಯ ಕನಸು ಕಂಡವರು. ಅಧ್ಯಾಪಕ ವೃತ್ತಿ ಅವರಿಗೆ ಒಲಿದು ಬಂದ ಕಾಯಕ.

ಉಪಾಧ್ಯಾಯ ವೃತ್ತಿ ಸರ್ವಶ್ರೇಷ್ಠವೆಂದೂ, ಆ ಯೋಗ್ಯತೆ ತನಗಿಲ್ಲವೆಂದೂ, ಒಮ್ಮೆ ಸಾಕ್ರೆಟಿಸ್ ಹೇಳಿದ್ದ. ಆದರೆ ಆ ಭಾಗ್ಯ ಮರುಳಯ್ಯನವರಿಗೆ ಲಭಿಸಿತು. ಈ ಕಾಯಕದಲ್ಲಿ ಸಿಗುವಷ್ಟು ತೃಪ್ತಿ ಬೇರಾವುದರಲ್ಲೂ ಇಲ್ಲವೆಂಬ ನಂಬಿಕೆ. ಅಧ್ಯಾಪಕ ವೃತ್ತಿ ಅತ್ಯಂತ ಪವಿತ್ರ ಕಾರ್ಯ. ಅದರ ಪಾವಿತ್ರ್ಯತೆಗಾಗಿ ಹಗಲಿರುಳು ದುಡಿಮೆ, ವಿದ್ಯಾರ್ಥಿಗಳ ದಂಡು ಮರುಳಯ್ಯನವರ ಸುತ್ತ ಸದಾ. ಗುರುವಿನ ಬಗ್ಗೆ ಇನ್ನಿಲ್ಲದಷ್ಟು ಗೌರವ ಪ್ರೀತಿ. ವಾಗ್ದೇವಿಯ ಒಲುಮೆ. ವಿಶ್ವಾಸ, ಪ್ರೀತಿ ಅಂತಃಕರಣೆ ಇವರಲ್ಲಿ ಸದಾ ಸಂಚಾರ, ಉತ್ತಮ ಮಾನವ.

ಕಾವ್ಯೋಪಾಸನೆ ಇವರಿಗೆ ಚಿಕ್ಕಂದಿನಿಂದಲೂ ಬೆಳೆದು ಬಂದ ಕಸುಬು. ಇವರು ಪ್ರಾಥಮಿಕ ಶಾಲೆಯಲ್ಲಿ ಓದುತ್ತಿದ್ದಾಗ ಹಲವು ಭಾವಗೀತೆಗಳನ್ನು ಓದಿ ಇವುಗಳನ್ನು ಮನುಷ್ಯರು ಬರೆಯುತ್ತಾರೋ? ಅಥವಾ ದೇವತೆಗಳೋ? ಎಂದು ಕೇಳಿದ್ದರಂತೆ. ಅಲ್ಲಿಯೇ ಇದ್ದ ಹಿರಿಯರೊಬ್ಬರು ಮನುಷ್ಯರೇ ಬರೆಯುತ್ತಾರೆ, ಬರೆಯಲು ಸಾಧ್ಯ ಎಂದು ತಿಳಿಸಿದಾಗ ತಾನೇಕೆ ಬರೆಯಬಾರದೆಂಬ ಛಲ ಇದಕ್ಕೆ ಪು.ತಿ.ನ. ರವರ ಬೆಂಬಲ. "ನೀವು ಕೇವಲ ಉತ್ಸಾಹಿಗಳೆಂದು ತಿಳಿದಿದ್ದೆ. ನಿಮ್ಮಲ್ಲಿ ಕವಿತೆಯ ನೆಲೆ ಇದೆ ವೃದ್ಧಿ ಪಡಿಸಿಕೊಳ್ಳಿ" ಎಂದು ಬೆನ್ನು ತಟ್ಟಿದವರು. ಕುವೆಂಪು, ಬೇಂದ್ರೆಯವರ ಆಶೀರ್ವಾದವೂ ಕೂಡಿ ಬಂತು. ೧೯೫೫ರಲ್ಲಿ ಇವರ ಉತ್ತಮ ಕವನ ಸಂಕಲನ, ಶಿವತಾಂಡವ ಹೊರಬಂದಿತು. ಆದಾದ ನಂತರ ಕೆಂಗನಕಲ್ಲು, ಅಗ್ರತಾಂಬೂಲ, ವಿಪರ್ಯಾಸ, ರಾಸಲೀಲೆ, ರೂಪಸಿ, ಮುಂತಾದ ಕವನ ಸಂಕಲನಗಳು ಒಂದರ ಹಿಂದೆ ಇನ್ನೊಂದು ಬೆಳೆಯುತ್ತಾ ಬಂತು. ವಚನ ವೈಭವ, ಪುರುಷಸಿಂಹ, ಹೇಮಕೂಟ ಕಾದಂಬರಿಗಳು, ಸ್ವಪ್ನವಾಸವದತ್ತ, ವಿಜಯ ವಾತಾಪಿ, ಮುಂತಾದ ನಾಟಕಗಳು, ಸಣ್ಣಕತೆಗಳು, ವಿಮರ್ಶೆಗಳು, ಜಾನಪದ ಕಾವ್ಯಗಳು ಒಂದಲ್ಲ ಎರಡಲ್ಲ, ಸುಮಾರು ಎಪ್ಪತ್ತು ಮೌಲ್ಯಾಧಾರಿತ ಕೃತಿಗಳನ್ನು ನೀಡಿ ಕನ್ನಡ ಸಾರಸ್ವತ ಲೋಕಕ್ಕೆ ಉತ್ತಮ ಕೊಡುಗೆಯನ್ನು ನೀಡಿದ ವ್ಯಕ್ತಿ. ವಿನಯ, ಸಜ್ಜನಿಕೆ, ಸೌಜನ್ಯ, ಇವರ ಜೀವನದ ಉದ್ದಕ್ಕೂ ನಡೆದು ಬಂದ ವ್ಯಕ್ತಿತ್ವದ ಮಹತ್ವ. ಸದಾ ನಗು, ಸ್ನೇಹಿತರೊಡನೆ ಕಲೆಯುವುದೇ ಒಂದು ಸಂತಸ ಎಂದು ಭಾವಿಸಿರುವ ಇವರು ಎಂದೂ ಯಾರ ಮನಸ್ಸಿಗೂ ನೋವನ್ನು ತಂದವರಲ್ಲ. 'ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ' ಎಂಬ ಪ್ರಬಂಧಕ್ಕೆ ಡಾಕ್ಟರೇಟ್ ದೊರಕಿತು. ಕೆಂಗನಕಲ್ಲು ಕವನ ಸಂಕಲನಕ್ಕೆ ರಾಜ್ಯ ಸರ್ಕಾರದ ಪ್ರಶಸ್ತಿ. ಭಾಸನ ಮಕ್ಕಳು, ವಿಮರ್ಶಾಕೃತಿಗೆ ದೇವರಾಜ ಬಹದ್ದೂರ್ ಪ್ರಶಸ್ತಿ. ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ರಾಜ್ಯೋತ್ಸವ ಪ್ರಶಸ್ತಿಗಳು ಬಂದಿವೆ.

ಇವರ ಬಾರೋ ಮೈಲಾರಕೆ, ಸ್ನೋವೈಟ್, ಭಾವಸಂಗಮ, ಭಾವದೀಪ್ತಿ, ಮದುವೆ - ಮದುವೆ, ಹಾಗೂ ಗೀತಭಾರತಿ, ಇವುಗಳು ಧ್ವನಿಸುರುಳಿಗಳಾಗಿವೆ. ಇದನ್ನು ಡಾ|| ರಾಜಕುಮಾರ್, ಡಾ. ಎಸ್.ಪಿ. ಬಾಲಸುಬ್ರಹ್ಮಣ್ಯಂ, ವಾಣಿಜಯರಾಂ, ಬಿ.ಆರ್.ಛಾಯ, ಹೆಚ್.ಕೆ. ನಾರಾಯಣ, ಮುಂತಾದವರು ಹಾಡಿದ್ದು ಮರುಳಯ್ಯನವರ ಭಾವಗೀತೆಗಳು ಜನಸಾಮಾನ್ಯರಿಗೂ ತಲುಪಿ, ಸಂತಸ ನೀಡಿದೆ. ಕನ್ನಡ ಸಾಹಿತ್ಯ ಸಮ್ಮೇಳನ, ಕವಿಗೋಷ್ಠಿ, ವಿಚಾರ ಸಂಕಿರಣದಲ್ಲಿ ಭಾಗವಹಿಸಿ ತಮ್ಮ ಪ್ರಬುದ್ಧತೆಯನ್ನು ತೋರಿದ್ದಾರೆ. ಪತ್ರಿಕಾ ಸಂಪಾದಕರಾಗಿ, ಕನ್ನಡ ಸಾಹಿತ್ಯ ಪರಿಷತ್ತಿನ ಗೌರವ ಕಾರ್ಯದರ್ಶಿಯಾಗಿ, ಅನೇಕ

ಸಂಭಾವನಾ ಗ್ರಂಥದ ಸಂಪಾದಕರಾಗಿ, ವಿಶ್ವಕೋಶದ ಪ್ರಧಾನ ಸಂಪಾದಕರಾಗಿ, ರಾಜ್ಯಭಾಷಾ ಅಯೋಗದ ಸದಸ್ಯರಾಗಿ ಸೇವೆ ಸಲ್ಲಿಸಿದ್ದಾರೆ.

ಮರುಳಯ್ಯನವರು ಸಾರ್ವಜನಿಕ ಸಮಾರಂಭದಲ್ಲಿ ಸಾಹಿತ್ಯ ವೇದಿಕೆಯಲ್ಲಿ, ವಿದ್ಯಾಸಂಸ್ಥೆಗಳಲ್ಲಿ, ಶಾಲಾ ಕಾಲೇಜುಗಳಲ್ಲಿ ಚರ್ಚಾಗೋಷ್ಠಿಯಲ್ಲಿ ಭಾಗವಹಿಸಿದ್ದು ಲೆಕ್ಕವಿಲ್ಲದಷ್ಟು. ವಿದೇಶ ಸಂಚಾರ ಹಲವು ಬಾರಿ.

ಮರುಳಯ್ಯನವರು ತಮ್ಮ ಹತ್ತನೇ ವಯಸ್ಸಿನಲ್ಲಿ ಸಾಬರಮತಿ ಆಶ್ರಯದಲ್ಲಿ ಗಾಂಧೀಜಿಯವರನ್ನು ಕಂಡವರು. ಆಗಲೇ ಅವರಲ್ಲಿ ರಾಷ್ಟ್ರೀಯ ಭಾವನೆ ಮೂಡಿತ್ತು. ಅನಂತರ ನಲವತ್ತೆರಡರಲ್ಲಿ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿ 'ಕಟ್ಟುವೆವು ಹೊಸ ನಾಡೊಂದನ್ನು' ಎಂಬ ಕಹಳೆಯನ್ನು ಊದಿದರು, ನಾ ಭಾರತೀಯ ಎಂಬುದೇ ಅವರ ನಿತ್ಯ ಗಾಯತ್ರಿ.

ಡಾ. ಸಾ.ಶಿ. ಮರುಳಯ್ಯನವರು ಮಾತಿಗೆ ನಿಂತರೆ ನಿರರ್ಗಳ. ಹೊತ್ತು ಏರಿದ್ದು, ಸೂರ್ಯ ಮುಳುಗಿದ್ದು ಒಂದೂ ಗೊತ್ತಿಲ್ಲ. ಜನ ಸ್ತಬ್ಧವಾಗಿ ಇವರ ಮಾತಿನ ಕಡೇಗೆ ಗಮನ. ಮಾತಿನಲ್ಲಿ ನಯ, ಗಡುಸು ಎರಡೂ ಉಂಟು. ಶಬ್ದಸಂಪತ್ತಿಗಾಗಲೀ ಮಾತಿನ ಓಘಕ್ಕಾಗಲಿ ಕಡಿಮೆ ಇಲ್ಲ. ಇವರ ಭಾಷಣ ಕೇಳುವುದೆಂದರೆ ಹೋಳಿಗೆ ಊಟ ಉಂಡಷ್ಟು ಸಂತೋಷ. ಪಾಯಸ ಕುಡಿದಷ್ಟು ಆನಂದ.

ಮಣಿವೆನಿದೋ ಮಹಾ ಚೇತನಕೆ

ಬಿ.ಸಿ. ಸ್ವಪ್ರಭಾನಂದ ಶರ್ಮ

ಯಾವ ಅಮೃತ ಘಳಿಗೆಯಲ್ಲಿ ನಾನು ಡಾ॥ ಸಾ.ಶಿ.ಮ. ಅವರ ಸಂಪರ್ಕಕ್ಕೆ ಬಂದೆನೋ ಆ ದಿನದಿಂದ ನನ್ನನ್ನು ಕಾಡುತ್ತಿದ್ದ ಅನಾಥತನ, ಕೀಳರಿಮೆಗಳು ಹೇಳಹೆಸರಿಲ್ಲದೆ ಓಡಿವೆ. ಬಡತನದ ಕಾರಣ ಓದಬೇಕೆಂಬ ಹಂಬಲವನ್ನು ಹತ್ತಿಕ್ಕಿ ಅನ್ನದ ಸಂಪಾದನೆಗಾಗಿ ವೃತ್ತಿಯೊಂದನ್ನು ಅವಲಂಬಿಸಿ ಕನಸಿನಲ್ಲೂ ನೆನೆಸಲಾಗದಿದ್ದ ಸ್ನಾತಕೋತ್ತರ ಪದವಿಯನ್ನು ಮಾಡುವಂತೆ ಮಾಡಿದರು. ಅವರ ಕುಟುಂಬದಲ್ಲಿ ನಾನೂ ಒಬ್ಬನಾಗುವಂತಾಯ್ತು. ನನ್ನೆಲ್ಲ ದುಃಖ ದುಮ್ಮಾನಗಳು ಅವರಿಂದ ಅವರ ಮನೆಯವರಿಂದ ಸೂಕ್ತ ಸಲಹೆ ಸಮಾಧಾನಗಳನ್ನು ಅಮಿತವಾಗಿ ಪಡೆಯುವಂತಾಯಿತು. ಅವರನ್ನು ಕಾಣಬಯಸುವಾಗಲೆಲ್ಲಾ ಹಾರ್ದಿಕ ಸ್ವಾಗತ ಪಡೆದು ಮನದಣಿಯ ಮಾತನಾಡಿ ಉಂಡು-ತಿಂದು ಬಂದಿದ್ದೇನೆ. ಏನನ್ನಾದರೂ ಓದುತ್ತಿರುವ ಬರೆಯುತ್ತಿರುವ ಅವರ ಅಮೂಲ್ಯ ಸಮಯವನ್ನು ಹಾಳು ಮಾಡಿದ ಬಗೆಗೆ ವಿಷಾದ ವ್ಯಕ್ತಪಡಿಸಿದರೆ ಕೈಹಿಡಿದು 'ಹಾಗೆನ್ನಬೇಡಿ ನೀವು ಬರುವುದೇ ನಮಗೆ ಸಮಾಧಾನ. ನೀವು ದಿನವಿಡಿ ಇದ್ದರೂ ನಮಗೆ ಬೇಸರವಿಲ್ಲಾ' ಎನ್ನುವಾಗಲೆಲ್ಲಾ 'ಶರಣರ ಬರವಣಿಗೆ ಪ್ರಾಣ ಜೀವಾಳ' ಎಂದಂದ ವಚನ ನೆನಪಾಗುತ್ತದೆ.

ತಮ್ಮ ಸಂಪರ್ಕಕ್ಕೆ ಬಂದ ಪ್ರತಿಯೊಬ್ಬರ ಬಳಿಯೂ ಅವರಿಗೆ ಅನನ್ಯ ಆಸಕ್ತಿ ಪ್ರೀತಿ ಇರುವುದರಿಂದಲೇ ಮಾಹಿತಿ ಬಯಸಿ ಬರುವವರು, ವಿದ್ಯಾಕಾಂಕ್ಷಿಗಳು, ಕವಿಗಳು, ಲೇಖಕರು ಇತ್ಯಾದಿ ವಿವಿಧ ಕ್ಷೇತ್ರದ ಪ್ರತಿಭಾವಂತರೂ ಉದಯೋನ್ಮುಖರೂ ತಮ್ಮ ಬದುಕಿನ ಆಳ ಹರಿವುಗಳನ್ನು ವಿಸ್ತರಿಸಿಕೊಳ್ಳುತ್ತಿದ್ದಾರೆ. ಬಂದವರಲ್ಲಿರುವ ಗುಣ, ಪ್ರತಿಭೆ, ಕರ್ತೃತ್ವಗಳನ್ನು ಗುರುತಿಸಿ ಮನದುಂಬಿ ಮೆಚ್ಚಿ ಅದರ ವಿಕಾಸಕ್ಕಾಗಿ ಅವರಿಗೆ ಮಾರ್ಗದರ್ಶನ ನೀಡಿ ಅಗತ್ಯವಿರುವ ನೆರವು ನೀಡಿ ಅವರ ಬೆಳವಣಿಗೆಯನ್ನು ಪ್ರೋತ್ಸಾಹಿಸಿರುವುದನ್ನು, ಅವರ ಪ್ರಗತಿಯನ್ನು ಕಂಡು ಆನಂದಿಸುವುದನ್ನೂ ಕಾಣಬಹುದಾಗಿದೆ.

ಬಡತನದಲ್ಲೇ ಆದರೂ ಸರಸ್ವತೀ ಆರಾಧಕರ ವಂಶದಲ್ಲಿ ಬೆಳೆದ ಅವರಿಗೆ ಪ್ರಕೃತಿ ನೀಡಿದ ವರವೆಂದರೆ ಅವರು ಸುತ್ತಣ ಸುಂದರ ಪರಿಸರ. ಕಣ್ಣು ಹಾಯ್ದಲ್ಲೆಲ್ಲಾ ತೆಂಗಿನಮರ. ನೋಡಿದಷ್ಟೂ ಮುನಿಯದ ಹಸಿರು. ಇದರ ಮಧ್ಯೆ ಬೆಳೆದ ಪರಿಣಾಮವಾಗಿ ಅವರ ಚಿತ್ತಭಿತ್ತಿಯಲ್ಲಿ ಅವೇ ನೆಲೆ ನಿಂತು ವಿಪುಲ ಪ್ರಕೃತಿ ಗೀತೆಗಳನ್ನು ನೀಡುವಂತಾಯಿತು. ಎಳೆತನದಲ್ಲಿಯೇ 'ಬಾಪೂ'ರಂತಹ ಮಹಾತ್ಮರನ್ನು ಕಂಡು ಅವರ ಆಶೀರ್ವಾದ ಪಡೆದು ಧನ್ಯರಾಗಿ ಛಲದಂಕಮಲ್ಲರಾಗಿ ಬೇರೆಯ ಓರಗೆಯವರಂತೆ ದನಕಾಯಲೋ, ಕುರಿಮೇಯಿಸಲೋ ಹೋಗದೆ ಹಲವು ಹತ್ತು ಸಂಕಷ್ಟಗಳ ನಡುವೆ ಸಾಸಲು - ಶೆಟ್ಟಿಕೆರೆ - ತಿಪಟೂರು - ಚಿತ್ರದುರ್ಗ - ಮೈಸೂರುಗಳಲ್ಲಿ ಓದಿ ವಿದ್ಯೆಯ ಪರ್ವತವೇ ಆದರು.

ಪ್ರಾರ್ಥಸ್ಮರಣೀಯರಾದ ಸರ್ವಶ್ರೀ ಕುವೆಂಪು, ಡಿಎಲ್ಲೆನ್, ಡಾ. ಶ್ರೀಕಂಠಶಾಸ್ತ್ರಿ ಕ.ವೆಂ. ರಾಘವಾಚಾರ್, ದೇ.ಜ.ಗೌ., ತ.ಸು. ಶಾಮರಾವ್, ಎಸ್.ವಿ. ಪರಮೇಶ್ವರ ಭಟ್ಟ, ಎಸ್.ವಿ. ರಂಗಣ್ಣನವರಂತಹ ಘಟಾನುಘಟಿ ವಿದ್ವಾಂಸರ ಶಿಷ್ಯರಾಗಿ, ಹೆಸರಾಂತ ಅಂಕಣಕಾರರಾಗಿದ್ದ ಸರ್ವಶ್ರೀ ಹಾ.ಮಾ.ನ. ಕೆ.ಎಂ. ಸೀತಾರಾಮಯ್ಯ, ಜಿ.ಎಸ್. ಸಿದ್ದಲಿಂಗಯ್ಯ, ಕೆ.ಎಂ. ಮರಿಯಪ್ಪನವರಂತಹ ಸಹಪಾಠಿಗಳನ್ನು ಪಡೆದಿದ್ದ ಇವರು ಈ ಎಲ್ಲ ಮಹನೀಯರ ಸಾಲಿನಲ್ಲೇ ಅಪಾರ ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ. ವಸ್ತು ವೈವಿಧ್ಯಗಳೊಳಗೊಂಡ ಸಣ್ಣ ಕಥೆಗಳು, ಎರಡು ಕಾದಂಬರಿಗಳು ಹಲವು ಶ್ರೇಷ್ಠ ರೂಪಕಗಳು ಅದರಲ್ಲೂ ನಾಡಿನ ಮೂಲೆಮೂಲೆಗಳಲ್ಲಿ ಪ್ರದರ್ಶನಗೊಂಡು ಪ್ರಚಂಡ ಯಶಸ್ಸು ಗಳಿಸಿದ ಶ್ರೀ ರೇಣುಕ ಪರಂಜೋತಿ ಮತ್ತು ಸ್ನೋವೈಟ್‌ಗಳನ್ನು ರಚಿಸಿದ್ದಾರೆ. ಶ್ರೀದೇವುಡು, ಶ್ರೀ ಶಿವಮೂರ್ತಿಶಾಸ್ತ್ರಿ ಭಾರತ ರತ್ನ, ಕನ್ನಡದ ಮೂವರು ಕಟ್ಟಾಳುಗಳು ಮುಂತಾದವರ ಜೀವನ ಚರಿತ್ರೆಗಳನ್ನು, ವರಕವಿ ದ.ರಾ. ಬೇಂದ್ರೆ, ಕುವೆಂಪು, ಡಿ.ಎಲ್.ಎನ್. ಸಂ.ಶಿ. ಭೂಸನೂರು ಮಠ, ಡಿ.ಎಸ್. ಕರ್ಕಿ, ಸಿದ್ದಯ್ಯ ಪುರಾಣಿಕ, ಆರ್‌ಸಿ. ಹಿರೇಮಠ, ಜಿ. ನಾರಾಯಣ, ಹಂಪನಾ, ದೇಜಗೌ, ಆರ್.ಎಮ್.ಬಿ. ಆರಾಧ್ಯ ಬಿ.ಡಿ. ಜತ್ತಿ, ಹೆಚ್.ಸಿ. ನಾಗೇಗೌಡ, ಡಾ॥ ತಿಪ್ಪೇರುದ್ರಸ್ವಾಮಿ, ಎಮ್.ಜೆ. ಕೋದಂಡರಾಮ ಶೆಟ್ಟಿ, ಗೊ.ರು. ಚ., ಎಸ್.ವಿ. ಶ್ರೀನಿವಾಸರಾವ್, ಬಿ.ಎಸ್. ಚಂದ್ರಕಲಾ, ಎಸ್. ಭೀಮಪ್ಪ, ಕೊರಟಿ ಶ್ರೀನಿವಾಸರಾವ್, ಟಿ.ಎನ್. ಮಹದೇವಯ್ಯ, ಡಾ॥ ರಾಜ್‌ಕುಮಾರ್, ಭಾರತೀ ವಿಷ್ಣುವರ್ಧನ್, ಸಿ.ಎ. ಜಮಖಂಡೀಮಠ, ಡಾ. ಚಿದಾನಂದಮೂರ್ತಿ, ಕೆ. ಶಿವರಾಮು, ನಾಡಿಗೇರ ಕೃಷ್ಣರಾಯ, ಡಾ॥ ಗುಬ್ಬಿ ವೀರಣ್ಣ ಮುಂತಾದ ಅತಿರಥ ಮಹಾರಥರ ಸುಂದರ ವ್ಯಕ್ತಿ ಚಿತ್ರಣಗಳನ್ನೂ ಮೂಡಿಸಿದ್ದಾರೆ. ಕರ್ನಾಟಕದ ಜ್ಞಾನಪೀಠ ವಿಜೇತರ ಬಗೆಗೂ ಒಂದು ಸುಂದರ ಪುಸ್ತಕ ಪ್ರಕಟಿಸಿದ್ದಾರಲ್ಲದೆ ಹಲವು ಸಂಪಾದಿತ ಕೃತಿಗಳೂ, ಸಂಭಾವನಾ ಗ್ರಂಥಗಳೂ ಪ್ರಕಟಗೊಂಡಿವೆ. ವ್ಯಾಸಂಗ ಮಾಡುತ್ತಿದ್ದಾಗ, ವಾರಾನ್ನ ಕೊಡಲು ಹಿಂಜರಿದು ಮುಂದೆ ಇವರು ಯಶಸ್ವೀ ಉಪನ್ಯಾಸಕರಾದಾಗ ಮಗಳನ್ನು ಕೊಡಲು ಮುಂದೆ ಬಂದವರನ್ನೂ ಆದರಿಸಿ ಗೌರವಿಸಿ ಕೊನೆಯವರೆವಿಗೂ ಅವರನ್ನು ಆತ್ಮೀಯ ವರ್ಗದಲ್ಲಿ ಉಳಿಸಿಕೊಂಡ ಸಜ್ಜನಿಕೆ ಮೆರೆದವರು.

ತಾಯಿ ಶ್ರೀಮತಿ ಸಿದ್ದಮ್ಮನವರು ಲಿಂಗೈಕ್ಯರಾಗಿ ಆ ಸಂಬಂಧ ಶಿವಗಣಾರಾಧನೆ ಮಾಡಿದ ಸಂದರ್ಭದಲ್ಲಿ ಬಂಧುಗಳನ್ನೂ, ಸ್ನೇಹಿತರನ್ನೂ, ಅಭಿಮಾನಿಗಳನ್ನೂ ಆಹ್ವಾನಿಸಿದಂತೆ ಆ ಊರ ಎಲ್ಲಾ ಶಾಲೆಯ ಮಕ್ಕಳನ್ನೂ ಆಹ್ವಾನಿಸಿ ಭೋಜನ ನೀಡಿ ಎಲ್ಲರಿಗೂ ತಾಂಬೂಲ ದಕ್ಷಿಣೆಯನ್ನು ಕೊಡಿಸಿದ ನೋಟ ಇನ್ನೂ ನನ್ನ ಕಣ್ಣ ಮುಂದಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷತೆಗೆ ಸ್ಪರ್ಧಿಸಿದ್ದಾಗ ಕೆಲವು ವಿಘ್ನಸಂತೋಷಿಗಳು ಸಲ್ಲದ ಆರೋಪ ಹೊರಿಸಿ ಹೊರಡಿಸಿದ್ದ ಕರಪತ್ರವನ್ನು ಕಂಡಾಗಲೂ ವಿಚಲಿತವಾಗದೆ ಸಮಚಿತ್ತತೆಯನ್ನು ಕಾಪಾಡಿಕೊಂಡು ''ಚುನಾವಣೆಗಳಲ್ಲಿ ಇವೆಲ್ಲಾ ಇರತಕ್ಕವೇ, ಇವನ್ನೆಲ್ಲಾ ಮನಸ್ಸಿಗೆ ಹಚ್ಚಿಕೊಳ್ಳಬೇಡಿ' ಎಂದು ಸಮಾಧಾನ ಹೇಳಿ ಸ್ಥಿತಪ್ರಜ್ಞತೆ ಮೆರೆದವರು.

ಚುನಾವಣೆಯಲ್ಲಿ ಸೋತಾಗ ಕುಗ್ಗದೇ ಮುಂದದೇ ಚುನಾವಣೆಯಲ್ಲಿ ಅತ್ಯಧಿಕ ಮತ ಪಡೆದು ವಿಜಯಿಯಾಗಿ ಬಂದಾಗ ಹಿಗ್ಗದೆ ತಾವು ಹಿಡಿದ ಕೆಲಸವನ್ನು ದೇವರೂ ಮೆಚ್ಚುವಂತೆ, ಎಲ್ಲ ಕಾಲಕ್ಕೂ ನಿಲ್ಲುವಂತೆ ನಡೆಸಿಕೊಂಡವರು. ಆ ಕಾಲದಲ್ಲಿ ಅವರ ಸಮಯ ಪ್ರಜ್ಞೆ, ಶ್ರಮದ ಮನೋಭಾವದ ಪರಿಚಯ ಎಂತಹವರನ್ನೂ ನಿಬ್ಬೆರಗಾಗಿಸಿತ್ತು.

ಇರುವ ಸಂಬಂಧಗಳೇ ಹಳಸಿ ಮರೆಯಾಗುತ್ತಿರುವ ಈ ಕಾಲದಲ್ಲೂ ಮನುಷ್ಯ ಸಂಬಂಧದ ಸೊಗಡಿಗೆ ತುಡಿಯುವ ಹೃದಯ ಅವರದು. ಎಲ್ಲರೂ ಕಷ್ಟಗಳಿಂದ ಪಾರಾಗಲಿ. ಎಲ್ಲರೂ ಶುಭವಾದದ್ದನ್ನೇ ನೋಡುವಂತಾಗಲಿ. ಎಲ್ಲರಿಗೂ ಸದ್ಬುದ್ಧಿ ಬರಲಿ. ಎಲ್ಲರೂ ಎಲ್ಲೆಡೆಗಳಲ್ಲೂ ಆನಂದದಿಂದಿರಲಿ ಎನ್ನುವುದೇ ಅವರ ಪಂಚಾಕ್ಷರಿ ಮಂತ್ರ.

ಶ್ರೀ ಮರುಳಯ್ಯನವರ ಮನೆಯನ್ನೂ ಮನವನ್ನೂ ತುಂಬಿರುವ ಶ್ರೀಮತಿ ವೀಣಾ ಅವರು ಸಾಕ್ಷಾತ್ ಅನ್ನಪೂರ್ಣೇಶ್ವರಿ. ಗೃಹಕೃತ್ಯದ ಪೂರ್ಣ ಜವಾಬ್ದಾರಿಯನ್ನು ಹೊತ್ತು ಅವರು ಪೂರ್ಣ ಆರೋಗ್ಯದಿಂದ ಸರಸ್ವತೀ ಸೇವೆ ಮಾಡಲು ಸಮರ್ಪಣ ಭಾವದಿಂದ ಅಹರ್ನಿಶಿ ದುಡಿಯುತ್ತಾರೆ. ಮನೆಯ ಸಮಸ್ಯೆಗಳನ್ನೇ ಅಲ್ಲದೆ ಬಂದು ಎಲ್ಲರ ಸಮಸ್ಯೆಗಳಿಗೆ ಪರಿಹಾರ ಒದಗಿಸಿ ಕ್ಲೇಶ ಹೊತ್ತು ಬಂದವರು ನಿರಾಳವಾಗಿ ಅವರವರ ಮನೆಗೆ ತೆರಳುವಂತೆ ಮಾಡುತ್ತಾರೆ. ಮೇರು ಮಾನವತೆಯನ್ನು ಮೆರೆವ ಜೀವಿಗಳಿರುವುದು ಸೃಷ್ಟಿಯ ಸುಂದರ ಸತ್ಯಗಳೊಂದೆನ್ನುವಂತೆ ಶ್ರೀಮತಿ ವೀಣಾ ಅವರು ಶ್ರೀ ಮರುಳಯ್ಯನವರ ಬೆಂಗಾವಲಾಗಿದ್ದಾರೆ. ಅವರಿಬ್ಬರ ನಿಸ್ವಾರ್ಥ ಸ್ನೇಹ, ನಿರ್ವಾಜ ಪ್ರೇಮ, ಪ್ರಾಂಜಲ ಮನಸ್ಸು ನಿಷ್ಕಲ್ಮಷ ವಾತ್ಸಲ್ಯಗಳು ನಮ್ಮಂತಹ ಅಸಂಖ್ಯ ಅಭಿಮಾನಿಗಳ ಶ್ರೀರಕ್ಷೆಯಾಗಿವೆ.

ದೂರದ ಅಮೇರಿಕಾದಲ್ಲಿರುವ ಮಗಳು ಸೌ।। ರಾಗಿಣಿ ಸಂಗಮೇಶ್ವರ ತನ್ನಿಬ್ಬರು ಗಂಡು ಮಕ್ಕಳೊಡನೆ ಸುಖಜೀವನ ನಡೆಸುತ್ತಿದ್ದಾರೆ. ಕಿರಿಯ ಮಗ ಚಿ। ರವಿ ಖ್ಯಾತ ಇಂಜಿನಿಯರಾಗಿ ಪತ್ನೀ ಪುತ್ರಿಯೊಡನೆ ಯಶಸ್ವೀ ಬದುಕನ್ನು ನಡೆಸುತ್ತಿದ್ದಾರೆ. ಹಿರಿಯಮಗ ಚಿ।। ಶಿವಪ್ರಸಾದ್ ಇಂಗ್ಲೀಷ್ ಸ್ನಾತಕೋತ್ತರ ಪದವೀಧರರಾಗಿದ್ದಾರೆ. ತಂದೆಯಂತೆಯೇ ಪ್ರತಿಭಾವಂತ, ಜನಾನುರಾಗಿ, ಸ್ನೇಹಪ್ರಿಯ ಯಶಸ್ವೀ ಪ್ರಾಧ್ಯಾಪಕರಾಗಿದ್ದಾರೆ. ಅವರ ಪತ್ನಿ ಸೌ।। ಸುವರ್ಣ ಹೆಸರಿಗೆ ತಕ್ಕಂತೆ ಬಂಗಾರವೇ. ಸ್ನಾತಕೋತ್ತರ ಪದವೀಧರೆಯಾದರೂ ಹಮ್ಮುಬಿಮ್ಮುಗಳಿಲ್ಲದೆ ಮನೆಯ ಹೆಸರಿಗೆ ಹೂವು ತಂದವರು. ಇಬ್ಬರು ಮಕ್ಕಳೊಡನೆ 'ರಾಗಿಣಿ'ಯನ್ನು 'ಶಾಂತಿ ನಿವಾಸ'ವಾಗಿಸಿದ್ದಾರೆ.

ಸಹಸ್ರ ಸಹಸ್ರ ಸಂಖ್ಯೆಯ ಅಭಿಮಾನಿಗಳನ್ನೂ ಪಡೆದಿರುವ ಡಾ।। ಸಾ.ಶಿ.ಮ. ನಿಜವಾಗಿ ಪುಣ್ಯವಂತರು. ಅಂತಹವರನ್ನು ನಮ್ಮ ಮಧ್ಯೆ ಇರಿಸಿಕೊಂಡ ನಾವು ಧನ್ಯರು. ಸಾಸಲಿನಲ್ಲಿ ಜನ್ಮ ತಳೆದು ಇಡೀ ಕರ್ನಾಟಕದಲ್ಲೇ ಖ್ಯಾತಿ ಪಡೆದ ಈ ಹೆಮ್ಮೆಯ ಪುತ್ರ ಕನ್ನಡಿಗನ ಕಲ್ಪವೃಕ್ಷವಾಗಿ ನಿಲ್ಲಲಿ. ಕನ್ನಡಿಗರೆಲ್ಲರ ಕೃಪೆಯ ಕನಕಾಭಿಷೇಕ ಮಾಡಿಸಿಕೊಳ್ಳಲಿ.

ಇಷ್ಟೆಲ್ಲಾ ಸಾಧನೆ ಮಾಡಿದ್ದರೂ ಅವರಿಗೆ ತಾವಿನ್ನೂ ಮಾಡಬೇಕಾದ್ದು ಇನ್ನೂ ಇದೆ ಎಂಬ ಅನಿಸಿಕೆ ಇದೆ. ಬಹಳಷ್ಟು ರೂಪುರೇಖೆಗಳನ್ನವರು ಹಾಕಿಕೊಂಡಿದ್ದಾರೆ. ಅವರ ಎಲ್ಲ ಕನಸೂ ನನಸಾಗುವಂತೆ ತಮ್ಮ ಸುಖೀ ಕುಟುಂಬದ ಜನತೆಗೆ ಚಿರಕಾಲ

ಹರ್ಷೋಲ್ಲಾಸ ಬದುಕನ್ನೂ ಅನುಭವಿಸುವಂತೆ ದಯಾಮಯನಾದ ಭಗವಂತನು ಅವರಿಗೆ ಪೂರ್ಣ ಆರೋಗ್ಯವನ್ನೂ ತುಂಬು ಆಯುಸ್ಸನ್ನೂ ಅಪರಿಮಿತ ಕಾರ್ಯಶಕ್ತಿಯನ್ನೂ ನೀಡಲಿ ಎಂದು ಹೃತ್ಪೂರ್ವಕವಾಗಿ ಪ್ರಾರ್ಥಿಸುತ್ತೇನೆ.

ಸಾಹಿತ್ಯ ಶಿರೋಮಣಿ ಮರುಳಯ್ಯನವರು

ಶಾಂತಾದೇವಿ ಮಾಳವಾಡ

ಡಾ|| ಸಾ.ಶಿ. ಮರುಳಯ್ಯನವರು, ಗದ್ಯ, ಪದ್ಯ ರಚನೆಯಲ್ಲಿ ಸಿದ್ಧ ಹಸ್ತರು. ಆಡು ಮುಟ್ಟದ ಗಿಡವಿಲ್ಲ, ಎನ್ನುವಂತೆ, ಮರುಳಯ್ಯನವರು ರಚಿಸದ ಸಾಹಿತ್ಯ ವಿಧಾನಗಳಿಲ್ಲ. ಅವರು ಕವಿತೆ ಕಥೆ, ಕಾದಂಬರಿ, ನಾಟಕ, ವಿಮರ್ಶೆ, ಭಾಷಾಂತರ, ಜೀವನ ಚರಿತ್ರೆ, ಮಹಾಪ್ರಬಂಧ, ಜಾನಪದ ಕಥೆಗಳನ್ನು ರಚಿಸಿದುದಲ್ಲದೆ ಪ್ರಾಚೀನ ಗ್ರಂಥ ಸಂಪಾದನೆಯನ್ನು ಮಾಡಿದ್ದಾರೆ.

ಪ್ರಾಧ್ಯಾಪಕ ವೃತ್ತಿ, ಸಾಹಿತ್ಯ ರಚನೆ, ಸಾಂಸ್ಕೃತಿಕ ಉನ್ನತಿಯ ಜೊತೆಗೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿಯೂ ಕಾರ್ಯಗೈದಿದ್ದಾರೆ. ಕನ್ನಡದ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ಅವರ ಕವನಗಳಲ್ಲಿ ಸರಸ್ವತಿ, ನಾಟ್ಯಸ್ವರಸ್ವತಿಯಾಗಿ ಹೆಜ್ಜೆ-ಗೆಜ್ಜೆಯ ನಾದದಲ್ಲಿ ಶಬ್ದರಚಿಸಿದಂತೆ, ತಾಳ - ಲಯ ಬದ್ಧವಾಗಿರುತ್ತದೆ. ಅವರ ಭಾವಗೀತಗಳ್ನು ಸಂಗೀತ ಬಲ್ಲವರು ರಾಗ ಸಂಯೋಜನೆಗೈಯ್ದು ಹಾಡಿದಾಗ ಕಿವಿಗೆ ಇಂಪು, ಮನಕ್ಕೆ ತಂಪನ್ನೀಯುತ್ತದೆ.

ಸಾ.ಶಿ. ಎಂದರೆ ಸಾಮರಸ್ಯದ ಶಿಲ್ಪಿಯಾಗಿ ಗದ್ಯ, ಪದ್ಯ ರಚನೆಯಲ್ಲಿ ಸಾಮರಸ್ಯ ತೋರಿದ್ದಾರೆ. ಕವಿ ಎಂದು ಕೀರ್ತಿ ಪಡೆದ ಮರುಳಯ್ಯನವರ ಬದುಕು - ಬರಹ ಒಂದೇ ಬಗೆಯದಾಗಿದೆ. ಆದರ್ಶ ದಾಂಪತ್ಯ ಜೀವನದಲ್ಲಿ ಅವರ ಪತ್ನಿ ಪತಿಯ ಸಾಹಿತ್ಯ ರಚನೆಗೆ ನೆರವನ್ನೀಯುತ್ತಿದ್ದಾರೆ. ದಾಂಪತ್ಯ ಜೀವನದಲ್ಲಿ ಸುಖ ಸಂತೃಪ್ತಿ ಪಡೆದವರಿಂದ ಸತ್ವಯುತ ಸಾಹಿತ್ಯ ರಚನೆ ಸುಲಭವೆನಿಸುತ್ತದೆ. ಅಂತೆಯೇ ಸಾ.ಶಿ. ಮರುಳಯ್ಯನವರ ಸಾಹಿತ್ಯ ಸೃಷ್ಟಿಯಾದುದನ್ನು ಕಾಣಬಹುದು.

ಸಾ.ಶಿ. ಯುವರೆಂದರೆ ಸಾಮರಸ್ಯದ ಶಿಲ್ಪಿ ಎಂಬ ಅರ್ಥ ಹೊರಹೊಮ್ಮುತ್ತದೆ. ಅವರು ರಚಿಸಿದ ಸಾಮರಸ್ಯದ ಶಿಲ್ಪಿ ಗ್ರಂಥ ಭಾಮಿನಿ ಷಟ್ಪದಿಯಲ್ಲಿ ರಚನೆಯಲ್ಲಿ ರಚಿತವಾದ 'ಮರುಳ ಸಿದ್ಧೇಶ್ವರ ಮಹಾಪುರಾಣ'ದ ಗದ್ಯಾನುವಾದವಾಗಿದೆ. ಈ ಕಾರ್ಯ ಸುಲಭವಾದುದಲ್ಲ. ಮೂಲ ಕಾವ್ಯದ ಸೊಬಗನ್ನು ಸರಳ ಸುಂದರ ಶೈಲಿಯಲ್ಲಿ ಕಾದಂಬರಿ ರೂಪದಲ್ಲಿ ರಚಿಸಿದ್ದಾರೆ. ಪೂಜ್ಯ ಮರುಳಸಿದ್ಧರ ಜೀವನ, ಸಾಧನೆ, ಸಿದ್ಧಿ ಸಾಕ್ಷಾತ್ಕಾರವನ್ನು ಜನಸಾಮಾನ್ಯರು ಅರಿತುಕೊಳ್ಳಲು ಅನುಕೂಲ ಮಾಡಿಕೊಟ್ಟಿದ್ದಾರೆ. ಈ ಕಾರ್ಯಕ್ಕೆ ಡಾ|| ಮರುಳಸಿದ್ಧಯ್ಯನವರ ಪತ್ನಿ ಮಕ್ಕಳ ಸಹಾಯ ದೊರೆತದ್ದು ಶ್ಲಾಘನೀಯ. ಪ್ರತಿಯೊಬ್ಬ ಶ್ರೇಷ್ಠ ವ್ಯಕ್ತಿಯ ಶ್ರೇಯಸ್ಸಿಗೆ ಅವರ ಪತ್ನಿಯ ನೆರವು ಸಹಕಾರ ಕಾರಣ ಎನ್ನುವ ಮಾತಿನ ಅರ್ಥವನ್ನು ಸಾ.ಶಿ. ಮರುಳಯ್ಯನವರ ಜೀವನದಿಂದ

ಅರಿಯಬಹುದು.

ಶ್ರೀಶೈಲ ದರ್ಶನ ಪಡೆದು ಸಂತಸವನ್ನು ಅನುಭವಿಸಿದ ನನಗೆ ಈ ಕೃತಿಯನ್ನು ನೋಡಿದಾಗ ಮತ್ತೊಮ್ಮೆ ಶ್ರೀಶೈಲ ನೋಡಿದಂತಾಯಿತು. ಶ್ರೀಶೈಲ ತೃಪ್ತಿಯ ತವರು, ವಾತ್ಸಲ್ಯದ ಮಡಿಲು ಮುಕ್ತಿಯ ನೆಲೆವೀಡು, ಎಂಬ ವರ್ಣನೆ ಮನವನ್ನು ತಣಿಸುತ್ತದೆ. ಶ್ರೀಶೈಲದಲ್ಲಿ ಸಾಧನೆಗೈದು, ಸಿದ್ಧಿಯನ್ನು ಪಡೆದ ಮರುಳ ಸಿದ್ಧರಿಗೆ, ಮಲ್ಲಿಕಾರ್ಜುನ ಹೇಳುತ್ತಾರೆ. 'ನೀನು ನನ್ನಲ್ಲಿ ಐಕ್ಯವಾಗುವ ಸಮಯವನ್ನು ಸನ್ನಿಹಿತವಾಗಿಲ್ಲ.' ಎಂಬುದನ್ನು ಕೇಳಿ, ಎಚ್ಚತ್ತುಕೊಂಡ ಮರುಳ ಸಿದ್ಧರು ವಿಶ್ವಪರ್ಯಟನೆಗೈದರು. ಶಿವಾದ್ವೈತವೇ ವೀರಶೈವ ಎಂಬುದನ್ನು ವಿವರಿಸಿದ್ದಾರೆ. ಕುಂಭಾಭಿಷೇಕ ರುದ್ರಾಭಿಷೇಕಗಳ ಮಹತ್ವ ಇಲ್ಲಿ ಕಥಾರೂಪದಲ್ಲಿದೆ. ಗುರು ಮರುಳಸಿದ್ಧರು ನಂಜನಗೂಡು, ಚಾಮುಂಡಿ ಬೆಟ್ಟದಲ್ಲಿ ಚಾಮುಂಡೇಶ್ವರಿ ಕಂಚಿಯ ಕಾಮಾಕ್ಷಿ, ಮಧುರೆಯ ಮೀನಾಕ್ಷಿ ಕಾಳಹಸ್ತಿ, ಮೊದಲಾದ ತೀರ್ಥಕ್ಷೇತ್ರಗಳಲ್ಲಿ ದೇವತೆಯರನ್ನು ಪೂಜಿಸಿ, ಸಂತೃಪ್ತರಾದರು. ನಂತರ ಅವರ ಮನಸ್ಸು ಹಿಮಾಲಯದತ್ತ ಅವರನ್ನು ಸೆಳೆಯಿತು. ಉತ್ತರದ ತುತ್ತತುದಿಯಲ್ಲಿರುವ ಮುಕ್ತಿ ಶಿವಲಿಂಗವನ್ನು ತನ್ಮಯತೆಯಿಂದ ಪೂಜಿಸಿ ಸಂತೃಪ್ತರಾದರು. ನಂತರ ಗೌರಿಶಂಕರ, ಅನ್ನಪೂರ್ಣ, ಮಾನಸ ಸರೋವರಗಳನ್ನು ಸಂದರ್ಶಿಸಿ, ಗೋಕರ್ಣಕ್ಕೆ ಬಂದರು. ಅಲ್ಲಿಂದ ಶರಣರು ಮೆಟ್ಟಿದ ಪುಣ್ಯಭೂಮಿ ಕಲ್ಯಾಣದಲ್ಲಿ ಕೆಲದಿವಸ ಇದ್ದರು, ಕೂಡಲ ಸಂಗಮದಲ್ಲಿ ಬಸವಣ್ಣನವರ ವಚನ ವೈಭವವನ್ನು ಕಂಡು ಅವುಗಳ ಅಭ್ಯಾಸಗೈದರು.

ಮರುಳ ಸಿದ್ಧರು ಕಲ್ಲು ಮಣ್ಣಿನಲ್ಲಿ ಶಿವನನ್ನು ಕಾಣಲಿಲ್ಲ, ಮಮತೆ ತುಂಬಿದ ಮಾನವನ ಹೃದಯದಲ್ಲಿ ಗುರುತಿಸಿದರು ಎನ್ನುವ ಮಾತು ಹೃದಯಸ್ಪರ್ಶಿಯಾಗಿದೆ, ಮರುಳಸಿದ್ಧರು ಸಾತುಲಗೆಯಲ್ಲಿ ನೆಟ್ಟ ಬಿಲ್ವವೃಕ್ಷ ಇಂದಿಗೂ ಇದೆಯಂತೆ. ಹಿರಿಕಲ್ಲ ಬೆಟ್ಟದ ನಿಸರ್ಗ ಸೌಂದರ್ಯದ ವರ್ಣನೆ ರಮ್ಯವಾಗಿದೆ. ಈ ಬೆಟ್ಟದ ತುದಿಯಲ್ಲಿ ಕುಳಿತು, ಜಪ ತಪ ಧ್ಯಾನದಲ್ಲಿ ಲೀನವಾದ ಮರುಳ ಸಿದ್ಧರ ಮುಂದೆ ಪೆಡಂಭೂತವೊಂದು ಅವರ ತಪಸ್ಸನ್ನು ಕೆಡಿಸಲು ಆರ್ಭಟಗೈಯ್ಯುತ್ತ ಮಾಡಿದ ನೃತ್ಯದ ವರ್ಣನೆ ಹರಿಹರನ ರಗಳೆಯ ಶೈಲಿಯನ್ನು ಹೋಲುತ್ತದೆ. ಆ ಭಯಂಕರ ನೃತ್ಯಕ್ಕೆ ಕಣ್ಣಿತೆರೆಯದೆ, ಏಕಾಗ್ರ ಚಿತ್ತದಿಂದ, ಪೂಜೆಯಲ್ಲಿ ನಿರತರಾದ ಮರುಳ ಸಿದ್ಧರ ಎದುರು ಶಿವಪಾರ್ವತಿಯರು ಬರುತ್ತಾರೆ. ಇಂದಿನಿಂದ ನೀನು ಸಿದ್ಧೇಶ್ವರ ಎಂದು ಹರಸಿ ಹೋಗುತ್ತಾರೆ. ಸಾಸಲು ಬನಶಂಕರಿಯ ಕಥೆ ಇದೆ. ಮರುಳಸಿದ್ಧರು ತಾವು ಪ್ರವಾಸಮಾಡಿದ ಹಲವಾರು ಸ್ಥಳಗಳಲ್ಲಿ ಲಿಂಗಸ್ಥಾಪನೆ ಗೈದಿದ್ದಾರೆ. ಆಲೆಮಹಳ್ಳಿ ಮಲ್ಲೇಗೌಡರು ಭಕ್ತಿ ಭಾವವುಳ್ಳವರು. ತಮ್ಮ ಮನೆಗೆ ಮರಳಸಿದ್ಧರನ್ನು ಆಹ್ವಾನಿಸಿ, ಪೂಜೆ ಪ್ರಸಾದ ಮಾಡಿಸಿದ ಅವರಿಗೆ ಗಂಡುಮಕ್ಕಳಿಲ್ಲದ ಚಿಂತೆಯನ್ನರಿತ ಗುರುಗಳು ಗಂಡು ಮಗುವಾಗುವಂತೆ ಆಶಿರ್ವದಿಸಿದರು, ಗಂಗಾ ನದಿ ನಿಮ್ಮ ಮನೆಯ

ಮುಂದೆ ಬರುತ್ತಾಳೆ ಎಂದರು. 'ಗುರುಗಳು ತೋರಿದ ಸ್ಥಳದಲ್ಲಿ ಅವರ ಪಾದ ಪೂಜೆಯನ್ನು ಗೌಡರು ಪತ್ನಿಯೊಂದಿಗೆ ಮಾಡಿದರು. ಆ ಸ್ಥಳದಲ್ಲಿ ಊರಜನ ಬಾವಿ ತೋಡಿದರು, ಅಲ್ಲಿ ನೀರು ತುಂಬಿ ಹರಿಯಿತು, ನಿಮ್ಮ ಮನೆಯ ಮುಂದೆ ಒಂದು ಆಲದ ಮರ ನೆಡುತ್ತೇನೆ ಎಂದರು, ಅಂತೆ ಮಾಡಿದರು. ಅಂದಿನಿಂದ ಈ ಊರು 'ಸಸಿ ಆಲ' ಎಂದೇ ಖ್ಯಾತವಾಗಲಿ ಎಂದು ಹರಸಿದರು ಅಂದಿನಿಂದ ಆ ಊರು ಸಸಿವಾಲ ಎಂದೇ ಖ್ಯಾತವಾಗಿದೆ.

ಮರುಳಸಿದ್ಧರು ಪಾದವಿಟ್ಟ ಸ್ಥಳವೆಲ್ಲ ಪವಿತ್ರ ಕ್ಷೇತ್ರಗಳಾಗಿವೆ. ಅವರು ಸಂಚರಿಸಿದ ಸ್ಥಳದಲ್ಲಿ ಸಾಮರಸ್ಯ, ಮನೆ ಮನೆಗಳಲ್ಲಿ ಮನ ಮನದಲ್ಲಿ ನೆಲೆಸಿತು. ದೈವಿ ಆದೇಶದಂತೆ ಕುಪ್ಪೂರ ಪಕ್ಕದ ಮಲ್ಲಿಕಾರ್ಜುನ ಬೆಟ್ಟಕ್ಕೆ ಹೋದರು. ಅವರ ದರ್ಶನಕ್ಕೆ ಬಂದ ಕುಪ್ಪೂರ ಚನ್ನವೀರೇಗೌಡನಿಗೆ ಒಂದು ಭಸ್ಮದ ಗಟ್ಟಿಕೊಟ್ಟರು. ಭವ್ಯವಾದ ಕೆರೆಗೆ ಎಷ್ಟು ಸಲ ಒಡ್ಡುಹಾಕಿದರೂ ನಿಲ್ಲಲೊಲ್ಲದು. ತಮ್ಮ ಆಶಿರ್ವಾದ ಬೇಕೆಂದು ಪ್ರಾರ್ಥಿಸಿದ ಗೌಡ, ಅವನಿಗೆ ವಿಭೂತಿ ಗಟ್ಟಿಯನ್ನು ಆಶೀರ್ವದಿಸಿದರು, 'ಒಡ್ಡು ಒಡೆದ ಸ್ಥಳದಲ್ಲಿ ಇದನ್ನು ಸ್ಥಾಪಿಸು ಎಲ್ಲರಿಗೂ ಭಸ್ಮಧರಿಸಿಕೊಳ್ಳಲು ಹೇಳು ಅವರೆಲ್ಲರ ಮನದಲ್ಲಿಯ ದ್ವೇಷ ಅಸೂಯೆ ಹೋದರೆ ಕೆರೆ ಶಾಶ್ವತವಾಗಿರುವದು' ಎಂದು ಆಶೀರ್ವದಿಸಿದರು. ಕೆರೆ ಸ್ಥಿರವಾಯಿತು. ಕುಪ್ಪೂರ ಬೆಟ್ಟದ ಮೇಲೆ ಮರುಳಸಿದ್ಧೇಶ್ವರರು ಹನ್ನೆರಡು ವರ್ಷ ಅಲ್ಲಿಯ ಗವಿಯಲ್ಲಿ ತಪ್ಪಸ್ಸನ್ನಾಚರಿಸಿದರು, ಆಗ ಚೆನ್ನವೀರಗೌಡ ಗವಿಯ ಬಾಗಿಲಿಲ್ಲೆ ಕುಳಿತಿದ್ದ ಪುಜ್ಯರನ್ನು, ಗೌಡನನ್ನು ದೇವರು ಪುಷ್ಪಕವಿಮಾನದಲ್ಲಿ ಕರೆದೊಯ್ದ; ಸಾಮರಸ್ಯದ ಶಿವ ಕಥೆ ಭಕ್ತಿ ಪೂರ್ಣವಾಗಿದೆ. ಸಾ.ಶಿ. ಮರುಳಯ್ಯನವರ ಸಾಮರಸ್ಯ ಶಿಲ್ಪಿ ಗ್ರಂಥವನ್ನೋದಿದವರು ಭಕ್ತಿ ಸಾಗರದಲ್ಲಿ ಮಿಂದ ಅನುಭವ ಪಡೆಯುತ್ತಾರೆ.

ಕನ್ನಡ ನಾಡಿನಲ್ಲಿ ತಮ್ಮ ಆಧ್ಯಾತ್ಮ ಶಕ್ತಿಯ ಪ್ರಭಾವದಿಂದ, ಜನರಲ್ಲಿ ಭಕ್ತಿಬೀಜವನ್ನು ಬಿತ್ತಿದವರು ನಾಗನೂರ ರುದ್ರಾಕ್ಷಿ ಮಠದ ಕರ್ಮಯೋಗಿ, ಮೌನಯೋಗಿ, ಶಿವಯೋಗಿ ಶಿವ ಬಸವ ಮಹಾಸ್ವಾಮಿಜಿಯವರು. ಕಾಯಕ ಮಾಡಿ, ವಿದ್ಯಾರ್ಥಿ ನಿಲಯ ಪ್ರಾರಂಭಿಸಿ ದಾಸೋಹ ನಡೆಸಿದರು. ಸಾವಿರಾರು ಜನ ಬಡ ವಿದ್ಯಾರ್ಥಿಗಳು, ಪೂಜ್ಯರ ಪ್ರಸಾದ ನಿಲಯದ ಪ್ರಸಾದ ಸೇವಿಸಿ, ಉಚ್ಚ ಶಿಕ್ಷಣ ಪಡೆದರು, ಹಿರಿಯ ಅಧಿಕಾರಿಗಳಾದರು - ಪೂಜ್ಯರು ಬೆಳಗಾವಿಯಲ್ಲಿ ಕನ್ನಡವನ್ನುದ್ಧರಿಸಿದ ಪುಣ್ಯಪುರುಷರ ಮಾಲಿಕೆಯಲ್ಲಿ ಆಗ್ರಗಣ್ಯರು, ದೇಶದ ಸ್ವಾತಂತ್ರ್ಯ ಹೋರಾಟದ ಕಾಲಕ್ಕೆ ಭೂಗತ ಸ್ವಾತಂತ್ರ್ಯ ಹೋರಾಟಗಾರರಿಗೆ, ಬ್ರಿಟಿಷರ ದಬ್ಬಾಳಿಕೆಗೆ ಒಳಗಾಗಿ ಗಾಯಗೊಂಡಿವರಿಗೆ ನಾಗನೂರ ಮಠ ಆಶ್ರಯ ಕೇಂದ್ರವಾಗಿತ್ತು. ಪೂಜ್ಯ ಶಿವಬಸವ ಸ್ವಾಮಿಜಿಯವರು ಗಾಯಾಳುಗಳಿಗೆ ಉಪಚಾರ

ಮಾಡುತ್ತಿದ್ದರು. ಅಲ್ಲಿ ಊಟೋಪಚಾರದ ವ್ಯವಸ್ಥೆ ಮಾಡಿದ್ದರು. ತ್ರಿಶೂಲ ಲಿಂಗಪೂಜೆಯಿಂದ ಆಧ್ಯಾತ್ಮ ಶಕ್ತಿಯನ್ನು ಬೆಳೆಸಿಕೊಂಡು ಸಿದ್ಧಪುರುಷರೆನಿಸಿದರು. ವ್ಯಾಯಮ, ಮಿತಾಹಾರದಿಂದ ೧೦೫ನೇ ವಯಸ್ಸಿನವರೆಗೆ ಸಶಕ್ತರಾಗಿ ಬಾಳಿದರು. ಭಾಷಣ ಹಾಗೂ ಪ್ರಚಾರದ ಗೊಡವೆಗೆ ಹೋಗದೆ ಸದಾ ಕಾಯಕ ನಿರತರಾಗಿದ್ದರು. ಅವಶ್ಯಕತೆಗಿಂತ ಹೆಚ್ಚಿಗೆ ಎಂದೂ ಮಾತನಾಡುತ್ತಿರಲಿಲ್ಲ. ನೂರು ಭಾಷಣಗಳಗಿಂತ ಓರ್ವಪರಿಪೂರ್ಣ ವ್ಯಕ್ತಿಯಿಂದ ಸುತ್ತಲಿನ ಸಮಾಜ ಸುಧಾರಿಸುತ್ತದೆ ಎಂದು ಹೇಳಿದ ಸ್ವಾಮಿ ವಿವೇಕಾನಂದರ ನುಡಿಯಂತೆ ಪೂಜ್ಯ ನಾಗನೂರ ಸ್ವಾಮಿಜಿಯವರು ತಮ್ಮ ವ್ಯಕ್ತಿತ್ವದ, ಪ್ರಭಾವದಿಂದ ವೀರಶೈವದ ಸಮಾಜವನ್ನು ಉದ್ಧರಿಸಿದರು, ವೀರಶೈವರ ಬಡತನ ಅಳಿಯಬೇಕಾದರೆ ಶಿಕ್ಷಣ ಸೌಕರ್ಯ ಹೆಚ್ಚಬೇಕು ಎಂಬ ಹೆಬ್ಬಯಕೆಯಿಂದ ಹಲವಾರು ಶಿಕ್ಷಣ ಸಂಸ್ಥೆಗಳನ್ನು ಪ್ರಾರಂಭಿಸಿದರು, ಹೆಣ್ಣಮಕ್ಕಳಿಗಾಗಿ ವಸತಿಗೃಹ ಕಟ್ಟಿಸಿದರು, ಅವರಿಗಾಗಿ ಟ್ರೈನಿಂಗ್ ಕಾಲೇಜು ಪ್ರಾರಂಭಿಸಿದರು.

ಈ ಪೂಜ್ಯ ಅಜ್ಜನವರನ್ನು ಕುರಿತು ಸಾ.ಶಿ. ಮರುಳಯ್ಯನವರು ರಚಿಸಿದ 'ಮಹಾ ಪ್ರಸಾದಿ' ಗ್ರಂಥ ಕೇವಲ ಶಿವಬಸವ ಸ್ವಾಮೀಜಿಯವರ ಜೀವನ ಚಿತ್ತವಾಗಿರದೆ ವೀರಶೈವ ಧರ್ಮವನ್ನು ಕುರಿತ ಸಂಶೋಧನಾ ಗ್ರಂಥವಾಗಿದೆ. ಗುರು-ವಿರಕ್ತರು ಒಂದೇ ಗಿಡದ ಎರಡು ರೆಂಬೆಗಳು ಎಂಬುದನ್ನು ಅರ್ಥವತ್ತಾಗಿ ಚಿತ್ರಿಸಿದ್ದಾರೆ. ೨೦ನೇ ಶತಮಾನದಲ್ಲಿ ವೀರಶೈವ ಸಮಾಜವನ್ನು ಜಾಗತೃಗೊಳಿಸಿ, ಶಿವಯೋಗ ಮಂದಿರವನ್ನು ಸ್ಥಾಪಿಸಿದ ಹಾನಗಲ್ಲ ಕುಮಾರಸ್ವಾಮಿಜಿಯವರ ಜೀವನ ಕಾರ್ಯಗಳನ್ನು ಈ ಗ್ರಂಥವನ್ನೋದಿ ಅರಿಯಬಹುದಾಗಿದೆ. ಗುರು - ವಿರಕ್ತ ಪರಂಪರೆಯನ್ನು ವಿಸ್ತಾರವಾಗಿ ವಿವರಿಸಿದ್ದಾರೆ. ಇದೊಂದು ಸಂಶೋಧನಾ ಗ್ರಂಥವಾದರೂ ಮರುಳಯ್ಯನವರು ಗುರು - ಶಿಷ್ಯರ ಸಂವಾದ ರೂಪದಲ್ಲಿ ಬಾದಾಮಿ, ಐಹೊಳೆ ಪಟ್ಟದಕಲ್ಲಿನ ಪ್ರವಾಸದಿಂದ ಪ್ರಾರಂಭಿಸಿ, ವಿಜಯನಗರ ಸಾಮ್ರಾಜ್ಯದ ಪತನಾನಂತರ ಸ್ವತಂತ್ರವಾಗಿ ರಾಜ್ಯವಾಳಿದ ಕೆಳದಿ, ಸ್ವಾದಿ ಮೊದಲಾದ, ೪ - ೫ ಸಂಸ್ಥಾನಗಳ ಕುರಿತು ಬರೆದಿದ್ದಾರೆ. ಅಭ್ಯಾಸ ಪೂರ್ಣವಾಗಿ ಈ ಗ್ರಂಥ ರಚಿಸಿದ್ದಾರೆ. ಮಹಾ ಪ್ರಸಾದಿ ಶಿವಯೋಗಿ ಶಿವ ಬಸವ ಸ್ವಾಮೀಜಿಯ ಜೀವನ ಕುರಿತ ಗ್ರಂಥದ ಶೈಲಿ ಸರಳ ಸುಂದರವಾಗಿದೆ, ವೀರಶೈವ, ಧರ್ಮ, ಸಂಸ್ಕೃತಿಯ ಕೈಪಿಡಿಯಂತಿದೆ.

''ಸಾಮರಸ್ಯದ ಶಿಲ್ಪಿ'' 'ಮಹಾಪ್ರಸಾದಿ', ಗ್ರಂಥಗಳು ಸಾ.ಶಿ. ಮರುಳಯ್ಯನವರ ಪ್ರತಿಭೆ, ಪಾಂಡಿತ್ಯ ಸಂಶೋಧನೆಗಳನ್ನೊಳಗೊಂಡಿದೆ. ಗುರು - ವಿರಕ್ತರ ಬಗೆಗೆ ಅರಿತುಕೊಳ್ಳಬೇಕೆನ್ನುವವರು. ಓದಲೇ ಬೇಕಾದ ಗ್ರಂಥವಾಗಿದೆ. ಸಾ.ಶಿ. ಸಾಹಿತ್ಯ ಶಿರೋಮಣಿ ಮರುಳಯ್ಯನವರು ಎನ್ನುವಂತಾಗಿದೆ. ಈ ಎರಡು ಗ್ರಂಥಗಳು.

ಸಾ.ಶಿ. ಮರುಳಯ್ಯನವರ ಸಹಸ್ರ ಸೂರ್ಯದರ್ಶನ ಸಮಾರಂಭವನ್ನಾಚರಿಸುವ ಭಾಗ್ಯ ಕನ್ನಡಿಗರದಾಗಲಿ, ಅವರ ಶಿಷ್ಯವಾತ್ಸಲ್ಯ ಮಾದರಿಯದಾಗಿದೆ. ಅದಕ್ಕೆ ಸೌ॥ ಜಯಾ ರಾಜಶೇಖರ ಅವರಂತಹ ಶಿಷ್ಯ ಸಮೂಹ ಸಾಕ್ಷಿಯಾಗಿದೆ. ೭೦ನೇ ವರ್ಷದ ಹುಟ್ಟಿದ ಹಬ್ಬ ವಿಜೃಂಭಣೆಯಿಂದ ನೆರವೇರಲಿ, ಎಂದು ಹಾರೈಸುವೆ.

ನುಡಿ ನಮನ

ಎಸ್. ಶಾರದಾ ಜಗದೀಶ್

ಸಾ - ಸಾಗರದ ಆಳವಿದೆ ಹೃದಯ ವೈಶಾಲತೆಯಲಿ

ಶಿ - ಶಿಖರದೆತ್ತರವಿದೆ ಪ್ರೀತಿ ವಿಶ್ವಾಸದಲಿ

ಮ - ಮಧುರ ಭಾಂದವ್ಯವಿದೆ ನಿಮ್ಮ ಒಡನಾಟದಲಿ.

ಸರಳತೆ, ಸಜ್ಜನಿಕೆ, ಸ್ನೇಹ ಪರತೆಗಳ ಪ್ರತಿರೂಪದಂತಿರುವ ಡಾ|| ಸಾ.ಶಿ.ಮರವರ ಬಗ್ಗೆ ನನ್ನ ತಂದೆ ಸ್ವಪ್ರಭಾನಂದಶರ್ಮರವರು ಬಾಯ್ತುಂಬಿ ಎಷ್ಟು ಹೇಳಿದರೂ ಕಡಿಮೆಯೇನೊ ಎಂಬಂತೆ ಅದರಲ್ಲೂ ಅವರ ಮನೆಗೆ ಭೇಟಿ ಕೊಟ್ಟು ಬಂದ ದಿನದ ಮುಮ್ಮಡಿ ಉತ್ಸಾಹದಿಂದ ಇರುತ್ತಿದ್ದುದರಿಂದ ಸಾಶಿಮರ ಪ್ರಭಾವ ಇವರ ಮೇಲೆ ಬೀರಿದೆ ಎಂದರೆ ನನಗೂ ಅವರನ್ನೊಮ್ಮೆ ನೋಡಬೇಕು, ಮಾತಾಡಬೇಕು ಎಂಬ ತವಕ ಉಂಟಾಗಿತ್ತು.

ಒಮ್ಮೆ ಕಾರ್ಯ ನಿಮಿತ್ತ ಬೆಂಗಳೂರಿಗೆ ಹೋದಾಗ ಆ ಅವಕಾಶವನ್ನು ಅಪ್ಪ ಒದಗಿಸಿ ಕೊಟ್ಟರು. ಉಕ್ಕುತ್ತಿದ್ದ ಆದಮ್ಯ ಉತ್ಸಾಹ ಸಂತೋಷಗಳೊಡನೆ ಗೇಟಿನಿಂದ ಹೆಬ್ಬಾಗಿಲ ಬಳಿ ಬರುವಷ್ಟರಲ್ಲಿ ಮನದ ಮೂಲೆಯಲ್ಲೆಲ್ಲೋ ಒಂದೆಡೆ ಭಯ, ಕಲ್ಪನೆಯ ಎತ್ತರದ ಪೀಠದಲ್ಲಿ ಇರಿಸಿದ್ದ ಸಾಶಿಮರ ಮೂರ್ತಿಯಲ್ಲಿ ಹೇಗೆ ಏನು ಮಾತಾಡಿದರೆ ಬಾಲಿಶವೋ ಎಂಬ ಭಾವನೆಗಳ ತೊಳಲಾಟದಲ್ಲಿಯೇ ಅವರ ಹಾರ್ದಿಕ ಸ್ವಾಗತದ ಕೂಗು ಎಚ್ಚರಗೊಳಿಸಿತ್ತು. ನಗೆಮೊಗದ ಆತ್ಮೀಯತೆಯಿಂದ ಕೂಡಿದ ಕುಶಲೋಪರಿ ಎಲ್ಲರೊಂದಿಗೆ ಸ್ನೇಹ, ಸೌಹಾರ್ದತೆಯಿಂದ ಎರಡು ನಿಮಿಷಗಳಲ್ಲಿ ನಾವೂ ಅವರ ಮನೆಯ ಸದಸ್ಯರೇ ಎಂಬಂತೆ ನಡೆಸಿಕೊಂಡ ರೀತಿ ನನ್ನನ್ನು ಮೂಕವಿಸ್ಮಿತಳನ್ನಾಗಿಸಿತು. ಮಕ್ಕಳೊಡನೆ ಮಗುವಾಗಿ ನಗುವ ಇವರ ಮುಗ್ಧನಗು ಮನಸ್ಸಿನ ನಿಷ್ಕಳಂಕ ಭಾವನೆಗೆ ಸಾಕ್ಷಿ.

ಹೀಗೆ ಪ್ರಾರಂಭವಾದ ನಮ್ಮ ಬಾಂಧವ್ಯ ಇಂದಿಗೂ ಬೆಂಗಳೂರಿಗೆ ಹೋದರೆ ಮಾಮ ಹಾಗೂ ವೀಣಾ ಆಂಟಿ ಇವರನ್ನ ಭೇಟಿಯಾಗದೆ ಬಂದರೆ ಏನ್ನನೋ ಕಳಕೊಂಡ ಅನುಭವ ಆಗುವಷ್ಟು ಬಲವಾಗಿದೆ. ದೇವರು ಒಮ್ಮೊಮ್ಮೆ ನಿರಾಳತೆಯಲ್ಲಿ ಮಾಡಿದ ಜೋಡಿ. ಹಾಲಿಗೆ ಜೇನು ಬೆರತಂಥ ಸಮಾನ ಮನಸ್ಸಿನ, ಸಮಾನ ಭಾವನೆಗಳ, ಸಮಾನ ವಿಚಾರ ಧಾರೆಗಳ ಮೈಗೂಡಿಸಿಕೊಂಡ ಸುಂದರ ಜೋಡಿ ಸಾಶಿಮ ಹಾಗೂ ವೀಣಾ ಆಂಟಿ ಇವರದ್ದು. ಇಂದಿನ ಯಾಂತ್ರಿಕ ಜೀವನದ ಚೌಕಟ್ಟಿನಲ್ಲಿ ನಮ್ಮನಮ್ಮಲ್ಲೇ ನಿರ್ಮಿಸಿಕೊಂಡ ನಾಲ್ಕು ಗೋಡೆಗಳೊಳಗೇ ಬದುಕುತ್ತಿರುವ ನಮಗೆ ಅಮ್ಮನ ಹಾಗೂ ಅಜ್ಜಿಯ ಕಾಲದಲ್ಲಿ ಇರುತ್ತಿದ್ದ ಒಟ್ಟು ಕುಟುಂಬದ ಭಾವೈಕ್ಯತೆಗಳು ಬಂಧು, ಬಾಂಧವರ ಸಂಬಂಧಗಳಲ್ಲಿ ಇದು ಬರೀ ಕಲ್ಪನೆಗಳೇ ಆಗಿರುವ ಇಂದಿನ ಉಸಿರುಗಟ್ಟಿಸುವ

ವಾತಾವರಣದಲ್ಲಿಯೂ ಮನೆಗೆ ಬಂದು ಹೋಗುವ ಹತ್ತಾರು ಅಭಿಮಾನಿಗಳಿರಲಿ, ವಿದ್ಯಾರ್ಥಿಗಳಿರಲಿ, ಸ್ನೇಹಿತರಿರಲಿ, ಎಲ್ಲರಿಗೂ ನಗೆಮೊಗದಿಂದ ದಣಿವಿನ ನೆರಳೂ ಸೋಂಕದಂತೆ ಹಸನ್ಮುಖಿಯಾಗಿ ನಡೆಸಿಕೊಳ್ಳುವ ರೀತಿ ಹೃದಯ ತುಂಬಿ ಮಾಡುವ ನಡವಳಿಕೆ ಎಷ್ಟೆಂದರೆ ಇವರ ಮನೆಯಲ್ಲಿನ ಗಿಣಿರಾಮ ಕೂಡ "ಬನ್ನಿ ಕೂತ್ಕೊಳ್ಳಿ ಕಾಫಿ" ಎನ್ನುವಷ್ಟು ಬೆಳೆದು ಬಂದಿದೆ. ಸಾಶಿಮರ ಹುಟ್ಟೂರಾದ ಸಾಸಲಿನ ಪರಿಸರ ತಂದೆ ಶಿವರುದ್ರಯ್ಯನವರ ಮಾರ್ಗದರ್ಶನದಲ್ಲಿ ಅರಳಿ, ಹಿರಿಯ ಗುರು, ಹಿರಿಯರ ಆಶೀರ್ವಾದಗಳೊಂದಿಗೆ ಸಾಶಿಮರೊಳಗೆ ಹುದುಗಿದ್ದ ಕವಿಜೀವ ಮೆಲ್ಲಮೆಲ್ಲನೆ ಸಾಹಿತ್ಯ ಸಸಿ ಚಿಗುರೊಡೆದು ಕಾವ್ಯ ಕವನ, ಕಥೆ, ಕಾದಂಬರಿ, ನಾಟಕ, ನೃತ್ಯ ರೂಪಕಗಳು, ವ್ಯಕ್ತಿಚಿತ್ರಣಗಳು, ವಿಮರ್ಶೆ, ಸಂಶೋಧನಾತ್ಮಕ ಪ್ರಬಂಧಗಳು ಇನ್ನೂ ಮುಂತಾದ ಗ್ರಂಥಗಳ ಹೂಗಳ ಕಂಪನ್ನು ಕರ್ನಾಟಕದ ತುಂಬಾ ತುಂಬಿಸಿದವರು.

ಎಷ್ಟು ಕಲಿತರೂ ಕಲಿಯುವುದು ಇನ್ನೂ ಇದ್ದೇ ಇರುತ್ತದೆ. ವಿದ್ಯಾರ್ಥಿಗಳಿಗೆ ನಾವು ಕಲಿಸಿದರೂ ವಿದ್ಯಾರ್ಥಿಗಳಿಂದ ನಾವೂ ಕಲಿಯುವುದು ಇರುತ್ತದೆ ಎಂಬ ಇವರ ಮಾತು ಎಲ್ಲ ಅಧ್ಯಾಪಕರೂ ತಿಳಿದುಕೊಳ್ಳುವಂತಹದು. ಇವರ ಗುರುಕುಲದಲ್ಲಿ ತಯಾರಾದ ಎಷ್ಟೋ ಶಿಷ್ಯಂದಿರು ಹೆಸರಾಂತ ಅಧಿಕಾರಿಗಳಾಗಿ ವಿವಿಧೆಡೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಈಗಲೂ ಇವರ ಉಪನ್ಯಾಸಗಳನ್ನು ಸ್ಮರಿಸಿ ಭೇಟಿಯಾಗಿ ಹೋಗುವ ಹಳೆಯ, ಹೊಸ ವಿದ್ಯಾರ್ಥಿಗಳೇ ಸಾಕ್ಷಿ. ಕನ್ನಡ ಎಂದರೇ ಅಲರ್ಜಿ ಎಂದುಕೊಳ್ಳುತ್ತಿರುವ ಇಂದಿನ ವಿದ್ಯಾರ್ಥಿಗಳಿಗೆ ಪುಸ್ತಕದಲ್ಲಿರುವುದನ್ನು ಭಟ್ಟಿ ಇಳಿಸಿ ಹೋಗುವ ಕೆಲವೇ ಕೆಲವು ಅಧ್ಯಾಪಕರಂತೆ ಅಂದರೆ ನನ್ನ ಹೈಸ್ಕೂಲಿನಲ್ಲಿ ಕನ್ನಡಕ್ಕೆ ಒಬ್ಬ ಅಯ್ಯಂಗಾರ್ ಮೇಡಂ ಇದ್ದರು. ಹಳೆಗನ್ನಡದ ಪದ್ಯಗಳನ್ನು ಸ್ವಲ್ಪ ಬಿಡಿಸಿ ಹೇಳಿ ಎಂದು ಸ್ವಲ್ಪ ಧೈರ್ಯವಿದ್ದವರು ಕೇಳಿದರೆ ಅವರಿಗೆ ಅಂದು ಗ್ರಹಚಾರ ವಕ್ಕರಿಸಿದಂತೆಯೇ. ಇಂತಹದರಲ್ಲಿ ಅಪರೂಪದ ಸಾಶಿಮರಂಥ ಮೇಧಾವಿ, ಜ್ಞಾನದಾಸೋಹಿ, ಅಧ್ಯಾಪಕರು ಸಿಕ್ಕಲ್ಲಿ ಅಂತಹ ಶಿಷ್ಯಂದಿರ ಜ್ಞಾನ ಭಂಡಾರ ಬೆಳೆಯುವುದರಲ್ಲಿ ಸಂಶಯವಿಲ್ಲ. ತನ್ನ ತಂಗಿ ಹೈಮಾವತಿ ತನ್ನ ವಿದ್ಯಾಭ್ಯಾಸದ ಎಂಟು ವರುಷಗಳ ತಡೆಯನಂತರ ನನ್ನ Lab-Technitian ಕೆಲಸದ ಒತ್ತಡದ ನಡುವೆ ಸ್ವ-ಇಚ್ಛೆಯಿಂದ ಕನ್ನಡ ಎಂ.ಎ., ತೆಗೆದುಕೊಂಡಿದ್ದಳು. ನಮಗೆ ಇದು ಕಷ್ಟಸಾಧ್ಯ ಎಂಬ ಅನಿಸಿಕೆ. ಆದರೆ ನಮ್ಮೆಲ್ಲ ಅನಿಸಿಕೆ ಸುಳ್ಳಾಗುವಂತೆ ದ್ವಿತೀಯ ದರ್ಜೆಯಲ್ಲಿ ಪಾಸಾಗಿದ್ದಳು. ಅವಳು ಹೇಳುತ್ತಿದ್ದುದು ಸಾಶಿಮರವರಲ್ಲಿ ವಿಶಿಷ್ಟ ಶೈಲಿಯ ವಾಚನ, ನಿರರ್ಗಳವಾಗಿ ಹರಿವ ವಾಗ್ಝರಿ, ವಿದ್ಯಾರ್ಥಿಯ ಮನಸ್ಸಿಗೆ ಪ್ರತಿಯೊಂದು ಘಟನೆಯ ಚಿತ್ರಣ ಬರುವಂತೆ ವಿವರಿಸುವ ಪರಿ, ಛಲದಂಕಮಲ್ಲನಂತೆ ವಿದ್ಯಾರ್ಥಿಯ ಮನಸ್ಸಿನೊಳಗೆ ಇಳಿವ ತನಕ ಹೇಳುವ ಉತ್ಸಾಹ ಕುಗ್ಗುವುದೇ ಇಲ್ಲವಂತೆ. ಹೀಗೆಂದಾಗ ಅಬ್ಬಾ, ನನಗೂ ಆ ಭಾಗ್ಯ ಇದ್ದಿದ್ದರೇ? ಎಂದು ಅನ್ನಿಸದೇ ಇರಲಿಲ್ಲ.

ಹೀಗೆ ಇನ್ನಷ್ಟು ಮತ್ತಷ್ಟು ಅಜ್ಞಾನದ ಕತ್ತಲನ್ನು ಓಡಿಸುವಂತೆ ಹಣತೆಗಳನ್ನು ಹಚ್ಚುವ ನಂದಾದೀಪವಾಗಲಿ ನಮ್ಮ ನೆಚ್ಚಿನ ಒಲುಮೆಯ ಸಾ.ಶಿ.ಮ.

ಭಾಗ ೨

ಸಾಶಿಮ ಕೃತಿಗಳ ಅವಲೋಕನ

ಡಾ|| ಸಾ.ಶಿ.ಮ. ಅವರ ಕಾವ್ಯ ಸೌರಭ

ದೊಡ್ಡರಂಗೇಗೌಡ

ನವ ನೂತನ, ನವ ಚೇತನ
ನವ ಕಾವ್ಯವಿತಾನ
ನವ ಭಾವನ, ಚೋದಿಸೆ ಮನ
ಇದೋ ಮೂಡಿತು ಕವನ!

ನವ ನವೀನ ಭಾವನೆಗಳ ಪ್ರೇರಣೆಯೇ ಕವಿ ಮನದಲ್ಲಿ ಕ್ಷಣಕ್ಷಣ ಅನುರಣವಾಗಿ ಸ್ಪಂದನಗಳ ಆಂತರ್ಯದ ಮೂಸೆಯಲ್ಲಿ ಪುಟವಿಟ್ಟು ತೀವ್ರ ಭಾವ ಬಂಗಾರವಾಗಿ ಅಪರಂಜಿಯಂಥ ಕವಿತೆ ಮಿನುಮಿನುಗುತ್ತಾ ಆಕೃತಿಯನ್ನು ಪಡೆಯುವ ಪರಿಯನ್ನೇ ಕವಿ ಡಾ|| ಸಾ.ಶಿ.ಮ. ತಮ್ಮ ಕವಿತೆಯೊಂದರಲ್ಲಿ ಸೊಗಸಾಗಿ ಅಭಿವ್ಯಕ್ತಿಸಿದ್ದಾರೆ.

ಈ ಕ್ರಿಯೆ - ಪ್ರಕ್ರಿಯೆ ಸಾ.ಶಿ.ಮ. ಅವರ ಬರಹಕ್ಕೂ ಅನ್ವಯಿಸುವಂಥದ್ದೇ ಆಗಿದೆ - ಎಂದು ನನ್ನ ಭಾವನೆ. "ಇದೋ ಮೂಡಿತು ಕವನ" ಎನ್ನುವ ಕವಿತೆಯಲ್ಲಿ ಕವಿ ಕವಿತೆಯ ಹುಟ್ಟಿದ ಗುಟ್ಟನ್ನು ಕುರಿತು ಹೇಳಿದ್ದರೂ... ಅವರ ಬದುಕಿಗೂ ಬರಹಕ್ಕೂ ಇಂಥ ಸಾಲುಗಳು ಅನ್ವಯಿಸುತ್ತವೆ ಎಂದೇ ನನ್ನ ನೈಜ ಅನ್ನಿಸಿಕೆ.

ಮಹಾಕವಿ "ಕುವೆಂಪು" ಅವರ ಶಿಷ್ಯರಾಗಿ ಶ್ರೀ ಸಾ.ಶಿ.ಮ. ಅವರು ಅಂಥ ಹಿರಿಯ ಚೇತನದ ಸಂಸರ್ಗದಿಂದ ಅವರಂತೆ ಭಾಷೆಯನ್ನು ಬಳಸಲು ಇಷ್ಟ ಪಡುವುದು. ಕವಿ ಅವರಿಂದ ಎಷ್ಟು ಪ್ರಭಾವಿತರಾಗಿದ್ದಾರೆ ಎಂಬುದನ್ನು ತಿಳಿಸುತ್ತದೆ. ಕಾವ್ಯವನ್ನು ನಿರಂತರವಾಗಿ ಪ್ರೀತಿಸುವ, ಪೂಜಿಸುವ ಸಾ.ಶಿ.ಮ. ಮನತುಂಬಿ ಹಾಡುತ್ತಾರೆ. ಅದು ಅವರ ಕಾವ್ಯ ರಚನೆಯ ಜಾಯಮಾನ. "ಕವಿ ದುಂಬಿಯ .... ಕಾವ್ಯಾಂಬೆ.... ರಸಯಾನದ ಬೆಡಗು" ಕವಿತೆ. ಅಂಥ ಕಾವ್ಯ ಸರಿತೆಯುಲ್ಲಿ ಮಿಂದು ಬದುಕನ್ನು ಬಂಗಾರವಾಗಿಸಿಕೊಂಡವರು ಕವಿ ಡಾ|| ಸಾ.ಶಿ.ಮ. ಅವರು. ನಮ್ಮೆಲ್ಲ "ನವೋದಯ" ಕವಿಗಳಂತೆ ಸಾ.ಶಿ.ಮ. ಕೂಡ ಅನುಪಮ ಪ್ರಕೃತಿಯನ್ನು ಅನನ್ಯ ಪ್ರೀತಿಯನ್ನು ಅಪೂರ್ವ ಆಧ್ಯಾತ್ಮ ಶಕ್ತಿಯನ್ನು ಅತ್ಯಂತ ಶ್ರದ್ಧೆಯಿಂದ ತಮ್ಮ ಕಾವ್ಯದ ಗದ್ದೆಗೆ ಚೇತನ ಜಲವನ್ನಾಗಿ ಹಾಯಿಸಿಕೊಂಡವರು. ಅಂಥ ಭಾವಸಂಗಮದಿಂದ ದೀಪ್ತವಾಗಿ ರಮ್ಯ ಗೀತೆಗಳನ್ನು ಕನ್ನಡಕ್ಕೆ ಕೊಟ್ಟವರು. ತಮ್ಮ ನಾಲ್ಕು ದಶಕದ ನಲ್ಮೆಯ ಕಾವ್ಯ ಕೃಷಿಯಲ್ಲಿ ಈ ಎಳೆಗಳೇ ಹೆಚ್ಚು. ಸಾ.ಶಿ.ಮ. ಕಾವ್ಯಸಂಪದ ತನ್ನೆಲ್ಲ ಔನ್ನತ್ಯ ಮೆರೆಯುವುದು ಅವರ ಕವಿತೆಗಳಲ್ಲಿ ಈ ಪ್ರಕೃತಿ ಪ್ರೀತಿ, ಆಧ್ಯಾತ್ಮದ ಗಟ್ಟಿ ಕಾಳುಗಳು ಭಾವ ಬಿತ್ತಾಗಿ ಇದ್ದಾಗಲೇ ಅವರಿಂದ ಕಾವ್ಯದ ಅದ್ಭುತ ಬೆಳೆ ಬಂದಿರುವುದು. ಇನ್ನುಳಿದ ಭಾವಗಳು ಈ ಕವಿಯಲ್ಲಿ ಅಷ್ಟು ಢಾಳಾಗಿ ಅರಳಿಲ್ಲ... ಪ್ರೀತಿ, ಪ್ರಕೃತಿ, ಆಧ್ಯಾತ್ಮನನ್ನು ಬಿಟ್ಟರೆ ಮತ್ತೊಂದು ಪ್ರಬಲವಾದ ಇತ್ಯಾತ್ಮಕ ಧಾತು - ನಾಡು ನುಡಿಯ ಅಭಿಮಾನ, ಈ ಕವಿಯ ಜೀವಂತ ಲವಲವಿಕೆ ಇರುವುದೇ ಈ ಪ್ರಭಾವಶಾಲಿ ಅಂಶಗಳಲ್ಲಿ.

ಕೋಗಿಲೆ ಕೊರಲಿಂಚರ ಹೊರ -
ಹೊಮ್ಮಿತು ಮೋದದಲಿ ;
ಚೈತ್ರೋದಯ ಮೈತ್ರೀಮಯ -
ಧಾರಣಿ ನಾದದಲಿ!

ಸಾ.ಶಿ.ಮ. ಅವರಿಗೆ ಪದಲಾಲಿತ್ಯ ಉಸಿರಾಟದಷ್ಟೆ ಸಲೀಸು. ಪ್ರಕೃತಿಪ್ರಿಯ ಕವಿ ನಿಸರ್ಗದ ಸ್ಪಂದನಗಳಿಗೆ ಹೇಗೆ ಭಾವುಕರಾಗಿ ಮೈಮರೆತು ಕವಿತೆ ಹಾಡುತ್ತಾರೆಂದರೆ ಈ ಕವಿ ಕಾಡ ಹಕ್ಕಿಯ ಹಾಗೆ ಸಹಜ ... ನುಡಿ ಸುಂದರ... ಆಗ ಮೂಡುವ ಭಾವವೂ ಮಧುರ ಇಂಚರ. ಝುರಿ ಪ್ರವಹಿಸಿದ ಹಾಗೆ ಪ್ರವಹಿಸುವ ಸಾ.ಶಿ.ಮ. ಭಾಷೆಗೆ ಕನ್ನಡ - ಸಂಸ್ಕೃತದ ಅನ್ಯೋನ್ಯ ಮೈತ್ರಿಯಿದೆ. ಹಾಲು - ಜೇನು ಮಿಲನದ ಸವಿ ಇದೆ.

ಸಾ.ಶಿ.ಮ. ಅವರ ಯಾವುದೇ ಕವಿತೆಯನ್ನು ಸಂಗೀತ ನಿರ್ದೇಶಕ ಸ್ವಲ್ಪವೂ ಶ್ರಮವಿಲ್ಲದೆ ರಾಗ ಸಂಯೋಜನೆಗೆ ಅಳವಡಿಸಬಹುದು. ಅಷ್ಟು ಲಯಬದ್ಧ ಕವಿಯ ಬರವಣಿಗೆ !

ನಾನು ಅವರ "ಔಪಾಸನೆ" ಕವಿತೆಯನ್ನು ಬಹಳವಾಗಿ ಮೆಚ್ಚಿಕೊಂಡವನು. ಅಂತರಂಗದಲ್ಲಿ ಹಾಡಿಕೊಂಡವನು. ಆ ರಚನೆಯ ಹಿಂದಿನ ಕವಿ ಪ್ರತಿಭೆಗೆ ಮನಸಾರೆ ಅಭಿನಂದಿಸಿದವನು. ಇಂಥ ಒಂದು ಭಾವಗೀತೆ ಸಾಕು - ಕವಿಯ ಹೆಸರು ಉಳಿಸಲಿಕ್ಕೆ. ಅಂಥ ಸಾರ್ಥಕ ರಚನೆಯ ಔನ್ನತ್ಯವೇ ಅದರ ಆಂತರ್ಯದಲ್ಲಿದೆ.

ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ
ಸುಪ್ರಭೋಧ ಚಂದ್ರೋದಯ ರಾಗಾರುಣ ಜಾಲೆ
ಗಿರಿ ಸಿರಿ ಬನ ಸಂಚಾರಿಣಿ ತುಂಗಾಜಲ ನೀಲೆ
ದಲ ದಲ ದಲ ಮೆದು ಹಾಸಲಿ ಗಾನ ಸುಪ್ತ ಲೋಲೆ!

ಈ ಪದ್ಯ ಯಾವುದೇ ಸಾಹಿತ್ಯಭಿಮಾನಿಗೆ ಹಿಡಿಸಲು ಮುಖ್ಯ ಕಾರಣ ಇಲ್ಲಿನ ಅಪೂರ್ವ ಪದಲಾಲಿತ್ಯ. ಓದುಗನ ಮನಸ್ಸನ್ನು ಒಮ್ಮೆಗೆ ಸಂಮ್ಮೋಹನಗೊಳಿಸುವ ಸೆರೆಹಿಡಿವ ಸರಳಸುಂದರ ಭಾವಗೀತೆ ಇದು.

★ ಇಲ್ಲಿ ಸಾ.ಶಿ.ಮ. ಪ್ರಕೃತಿ ಪ್ರಿಯತೆ ಇದೆ.
★ ಇಲ್ಲಿ ಸಾ.ಶಿ.ಮ. ಅಭಿರುಚಿಯೇ ಎದ್ದು ಕಾಣುತ್ತದೆ.
★ ಇಲ್ಲಿ ಸಾ.ಶಿ.ಮ. ಭಾವಕೋಶದ ಬೆಡಗು ಇಣುಕುತ್ತದೆ.
★ ಇಲ್ಲಿ ಸಾ.ಶಿ.ಮ. ಪದ ಭಂಡಾರ ಅನಾವರಣಗೊಳ್ಳುತ್ತದೆ.

★ ಎಲ್ಲಕ್ಕಿನ್ನ ಮಿಗಿಲಾಗಿ ಕವಿಯ ಪ್ರತಿಭಾ ವಿಲಾಸವೂ ಸಹೃದಯರಿಗೆ ಪರಿಚಿತವಾಗುತ್ತದೆ. ನವೋದಯ ಕವಿಗಳ ಇತ್ಯಾತ್ಮಕ ಅಂಶಗಳೆಲ್ಲವನ್ನು ಸ್ವೀಕರಿಸಿಕೊಂಡ ಸ್ವೋಪಜ್ಞತೆ ಮೆರೆದಿದ್ದಾರೆ ನಮ್ಮ ನಲ್ಮೆಯ ಕವಿ ಸಾ.ಶಿ.ಮ.

ಕಾಡು, ಕಡಲು, ಮರ ಗಿಡ ಬಳ್ಳಿ, ಹೂವು ಹಣ್ಣು, ನದಿ, ಜಲಪಾತ, ಗಿರಿ-ದರಿ, ಮಾವು-ಮಲ್ಲಿಗೆ ಈ ಎಲ್ಲವೂ ಪ್ರಕೃತಿ ಪ್ರಿಯರಿಗೆ ಸೊಗಸೇ. ಈ ಕವಿಯ ಪ್ರಕೃತಿ ಪ್ರೀತಿಯೆಷ್ಟಿದೆ ಎಂದರೆ ತಮ್ಮ ಎಲ್ಲ ಪದ್ಯಗಳಲ್ಲೂ ಒಂದಲ್ಲ ಒಂದು ನುಡಿಯಲ್ಲಿ ತಮ್ಮ

ನಿಸರ್ಗದಕ್ಕರೆಯನ್ನು ಕವಿತೆಯ ಮುಖ್ಯವಾಹಿನಿಗೆ ಎಳೆದು ತಂದು ಅಂತರ್ಗತಗೊಳಿಸಿ ತಮ್ಮ ಕಾವ್ಯ ಚಿತ್ತಾರದಲ್ಲಿ ಆ ಜೀವಂತ ಚೇತನಾಶ್ರೀಯನ್ನು ಬಣ್ಣಿಸಿ ತೃಪ್ತಿ ಪಡೆಯುತ್ತಾರೆ.

ಈ ಬಗೆಯ ನಿಸರ್ಗವೂ ಆ ಅನುಪಮ ಚೆಲವು ಹೇಗೆ ಹೇಗೆ ಸಾ.ಶಿ.ಮ. ಕಾವ್ಯದಲ್ಲಿ ತರಂಗ ತರಂಗವಾಗಿ ಓದುಗನ ಭಾವುಕ ಮನಕ್ಕೆ ಪುಳಕ ನೀಡುತ್ತದೆ ಎಂದು ನೋಡುವುದೇ ಒಂದು ಅನನ್ಯ ಅಧ್ಯಯನವಾದೀತು!

ಹಸುರಿನ ಪಸೆಯಲಿ ಹೂ ಬಿಸಿಲಾಡಿಸಿ
ಹೊಸ ವರುಷವು ಕಾಲೂರುತಿದೆ.
ತುಂತುರು ಹನಿಗಳ ಮಂತ್ರಾಕ್ಷತೆಯಲ್ಲಿ
ಅಂತರಂಗಗಳ ಕೆಣಕುತಿದೆ.

(ಹೊಸ ವರುಷ)

ನನ್ನ ತಾಯಿಯ ಮಡಿಲ ತುಂಬೆಲ್ಲ ಮಲ್ಲಿಗೆಯು
ಅವಳ ತೋಳ್ ತೊಡೆಗಳಲಿ ಮಾವು - ತುಳಿರು
ತೆಂಗು ಅಡಕೆಯ ಜಾಲ ಅವಳ ಬೈತಲೆ ನವಿರು
ಎಳ್ಳು ಜೀರಿಗೆ ಜೋಳ ಅವಳ ತೇರು

(ಕರುನಾಡ ಬನಶಂಕರಿ)

ಮಳೆಯ ಧಾರೆಯ ತೆರೆಯ ಸರಿಸಲು
ಹಸೆಯ ಹಾಸಿಗೆ ಮೂಡಣ,
ನಿಶೆಯ ನಗಿಸಲು ಜಡೆಯ ಕಟ್ಟಿದೆ
ಚೊಕ್ಕ ಚಿಕ್ಕಿಯ ಕಾವಣ

(ಶ್ರಾವಣ)

ಎನ್ನ ರನ್ನೆ ಎಲವೋ ಕನ್ನೆ
ಏನಿದೇನಿದೇನು ಕಣ್ಣ ಸನ್ನೆ
ಕಂಡರಾರದೇನರೆಂಬೆ?

ಎಂದು ಆತ್ಮೀಯವಾಗಿ ನಮ್ಮ ಮನಸ್ಸಿನಾಳಕ್ಕೆ ಇಳಿವ ನಲ್ಲ ನಲ್ಲೆಯಲಲ್ಲೆಯಲ್ಲಿ ಪ್ರೀತಿ ಪನ್ನೀರ ಪರಿಮಳವಿದೆ. ಈ ಪ್ರೀತಿ ಗೀತ ಒಲವಿನ ಧಾರೆಯೆನ್ನೆ "ಕೆಳದಿ - ಮಡದಿ" ಯಲ್ಲಿ ಓತಪ್ರೋತವಾಗಿ ಹರಿಯಿಸಿದೆ.

ಕನಸ ಕೆಳದಿ ಕಡಲಿನಲ್ಲಿ ಪುಟ್ಟದೊಂದು ದೋಣಿಯಲ್ಲಿ
ನನ್ನನಿರಿಸಿ ಮುತ್ತನಿಕ್ಕಿ ಸಾಗಿಸಿದಳು ಹುಟ್ಟು ಹಾಕಿ
ಅವಳ ಮೇಲೆ ಬಿದ್ದು ನಲಿದೆ, ಬಾಚಿ ತಪ್ಪಿ ಎದೆಗೆ ಬಿಗಿದೆ
ಕೊರಳಿಗೊಲಿದು ತಾಳಿಕಟ್ಟಿ ಮಡದಿಗೊಡೆಯನಾಗಿ ಬಿಟ್ಟೆ
ಅಂದೆ ಮಾನ್ಯನಾದೆನು, ಜಗದೊಳೊಬ್ಬನಾದೆನು!

ಇಲ್ಲೆಲ್ಲಾ ಪ್ರೀತಿಯ ಪವಿತ್ರ ಆವಿಷ್ಕಾರವನ್ನು ಕವಿ ಮನೋಜ್ಞವಾಗಿ ಬಣ್ಣಿಸಿದ್ದಾರೆ, ನಲ್ಮೆಯ ಹಿರಿಮೆಯನ್ನು ಸಾರಿದ್ದಾರೆ.

ಪ್ರೀತಿ, ಪ್ರಕೃತಿಯಷ್ಟೇ ಗಾಢವಾಗಿ ಕವಿಯನ್ನು ಕಾಡಿರುವ ಮುಖ್ಯಭಾವನೆ "ದೇಶಪ್ರೇಮ".

"ದೇಶವೊಂದೇ ಭಾರತ", "ಗಾಂಧೀ ಸ್ಮೃತಿ" "ಗಾಂಧಿ" "ಬೆಳಗುತಿರು ಬೆಳಕೆ" ಇವು ಆ ಬಗೆಯ ರಾಷ್ಟ್ರಾಭಿಮಾನದ ಕವಿತೆಗಳು. ಸಾ.ಶಿ.ಮ. ಅನನ್ಯ ದೇಶಪ್ರೇಮಿ. ಅವರ "ಓ, ಭಾರತೀಯ"ದಲ್ಲೂ ಇಂಥ ದೇಶಪ್ರೇಮ ಉತ್ಕೃಷ್ಟ ಭಾವುದ ಎಳೆಗಳೇ ಹಂದರವಾಗವೆ. ಸುಂದರವಾಗಿ ಮೂಡಿ ಬಂದಿದೆ. ಬಂಧುರವಾಗಿದೆ. ಮಾತು ಮಾತೂ ಮಲ್ಲಿಗೆಯ ಮಂದಾರವೇ. ಡಾ॥ ಸಾ.ಶಿ.ಮ. ಒಳ್ಳೆ ವಾಗ್ಮಿ ಕೂಡ. ಕವಿತೆಗಳಲ್ಲೂ ಈ ಬಗೆಯ ವಾಗ್ಮಿಯೇ ಧಾರೆಯಾಗಿ ಕಂಪಿತ ಇಂಪಿತ ಕನ್ನಡ ಸಂಕಲನ ಸಂಕಲನಗಳನ್ನು ಹರಿದಾಡಿದೆ. ಭಾವುಕ ಸ್ತರ ಇಲ್ಲದೆ ಹೇಗೆ ಭಾವಗೀತೆಗಳಾಗುವುದಿಲ್ಲ. ಸಾ.ಶಿ.ಮ. ಭಾವುಕರು ಭಾವುಕ ಬರವಣಿಗೆಗೆ ಹೆಸರಾದವರು. ಆದ್ದರಿಂದಲೇ ಇವರ ಭಾವಗೀತೆಗಳಿಗೆ ಯಶಸ್ಸಿನ ತೆನೆ!

ಕವಿ ಸಾ.ಶಿ.ಮ. ಅವರ ಬೇರೆ ಬೇರೆ ಕವನ ಸಂಕಲನಗಳನ್ನು ಚೆನ್ನಾಗಿ ಅಭ್ಯಾಸ ಮಾಡಿದ ಸಾಹಿತ್ಯಾಭ್ಯಾಸಿಗೆ ಮನವರಿಕೆಯಾಗುವ ಪ್ರಮುಖ ಅಂಶಗಳನ್ನು ಹೀಗೆ ಪಟ್ಟಿ ಮಾಡಿಬಹುದು.

✯ ಸೌಂದರ್ಯಾಭಿಮುಖಿ ಈ ಕವಿ.

✯ ಇತ್ಯಾತ್ಮಕ ಮೌಲ್ಯಗಳ ಕಡೆಗೆ ತುಡಿಯುತ್ತಾರೆ - ಈ ಕವಿ

✯ ಪ್ರೀತಿಗೆ ಶರಣಾಗಿ ಹೋಗಿದ್ದಾರೆ - ಈ ಕವಿ

✯ ಅಪ್ಪಟ ದೇಶಾಭಿಮಾನಿ - ಈ ಕವಿ

✯ ವಾಗ್ದೇವಿಯ ಶಬ್ದ ಭಂಡಾರವನ್ನೇ ಸೂರೆ ಹೊಡೆಯ ಹೊರಟ ಮಹತ್ವಾಕಾಂಕ್ಷಿ - ಈ ಕವಿ.

✯ ಸಂಗೀತದ ಬಗೆಗೆ ಅಪಾರ ಕಾಳಜಿಯುಳ್ಳವರು - ಈ ಕವಿ.

ಹೀಗೆ ಕವಿ ಸಾ.ಶಿ.ಮ. ಸಕಾರಾತ್ಮಕ ಸದಾಭಿರುಚಿಯ ಸಂಸ್ಕಾರವಂತರು, ಶ್ರದ್ಧಾವಂತರು; ಪರಂಪರೆಯ ಬಗೆಗೆ ಅಪಾರ ಗೌರವವುಳ್ಳವರು. ಉಜ್ಜಲ ರಾಷ್ಟ್ರ ಪ್ರೇಮಿಗಳು, ಸಂಸ್ಕೃತ ಭೂಯಿಷ್ಠವಾಗಿ ಬರೆವ ಹವ್ಯಾಸ ಇದ್ದರೂ ಕನ್ನಡಕ್ಕೆ ತಮ್ಮ ತನುಮನ ಸಂಪೂರ್ಣವಾಗಿ ಅರ್ಪಿಸಿಕೊಂಡವರು ಇಲೆಲ್ಲವೂ ಕವಿಯ ಶ್ರೇಷ್ಠತೆ ಸಾರುವ ಅಂಶಗಳು.

ಈ ಕವಿಯ ಮಹತ್ವದ ಅಂಶಗಳಲ್ಲಿ ಮಾನವೀಯ ಅನುಕಂಪ ಎದ್ದು ಕಾಣುವಂಥದ್ದು. ಉದಾ. ನಾವು "ಅನ್ನದಾತನಿಗೆ" ಕವಿತೆಯನ್ನು ಓದಿ ವಿಶ್ಲೇಷಿಸಬಹುದು.

ಇಡೀ ಜಗತ್ತಿಗೆ ಅನ್ನ ಕೊಡುವ ರೈತ ಇಂದು ಕಣ್ಣೀರಿನಲ್ಲಿ ಕೈ ತೊಳೆಯುವುವನ್ನು ಕಂಡು ಕನಿಕರ ಪಡುವ ಕವಿ ಅವನ ಬವಣೆಗಳನ್ನು ಚಿತ್ರಿಸುವ ವಸ್ತುನಿಷ್ಠ ಕವಿತೆಯನ್ನು ಬರೆದಿದ್ದಾರೆ. ಈ ಕವಿತೆ ಮಣ್ಣಿನ ಮಕ್ಕಳನ್ನು ಕುರಿತು ಬರೆದ ಮಾರ್ಮಿಕ ಬರಹವಾಗಿದೆ. ನೆಲದಾಯಿಯ ಜೊಚ್ಚಲ ಮಕ್ಕಳ ಕಷ್ಟ ಕಾರ್ಪಣ್ಯಗಳು ಎಷ್ಟೊಂದಿವೆ ಎಂದರೆ ಕವಿ ಪದ್ಯದ ಕೊನೆಗೆ ಪ್ರಶ್ನಾರ್ಥಕವಾಗಿ ಉದಾರ ಸೂಚಿಸುತ್ತಾನೆ. "ನಿನ್ನ ಏಳ್ಗೆ ಎಂದೋ

ತಂದೆ? ನೋಡಲಾಪೆನು" ಇಂಥ ಕಡೆ ಕವಿ ಸಾ.ಶಿ.ಮ. ಅವರು ಮಾನವೀಯತೆಯನ್ನೇ ಮೆರೆದಿದ್ದಾರೆ.

ಡಾ॥ ಸಾ.ಶಿ.ಮ. ಎಷ್ಟು ಸಂಸ್ಕೃತಭೂಯಿಷ್ಠವಾಗಿ ಬರೆಯ ಬಲ್ಲರೊ ಅಷ್ಟೇ ಗ್ರಾಮೀಣ ಶೈಲಿಯಲ್ಲೂ ಅನನ್ನವಾಗಿ ಬರೆಯಬಲ್ಲರು. ಎರಡು ಉದಾಹರಣೆಗಳನ್ನು ನಾವು ಆವಲೋಕಿಸಬಹುದು.

ಮನದ ಬಯಕೆ ಧೇನುವೇ
ಮೀಡಿದ ವೀಣಾ ಕ್ವಣಿತವೇ
ಸ್ವರ್ಣಕುಂಚ ವರ್ಣವೇ
ಶಿಲ್ಪ ಕಲ್ಪ ತಲ್ಪವೇ
ಗಗನ ಗಂಗೆ ನವ ತರಂಗೆ
ಶಿವ ಶೃಂಗೋತ್ಸ್ವಾ ಸಿಯೇ!
(ಔಪಾಸನೆ)

ಸಂಸ್ಕೃತ ಭಾಷೆಯ ಬಗೆಗಿನ ಮೋಹದಿಂದ ಉದ್ದೀಪಿತರಾಗಿ ಸಾ.ಶಿ.ಮ. ಬರೆಯುವ ಶೈಲಿ. ಇಲ್ಲೂ ಲಾಲಿತ್ಯವಿದೆ. ತನ್ನದೆ ಆದ ಕಂಪಿದೆ. ಪದ ಪದದ ಅನುಕರಣದಿಂತಿದೆ.

ಬೆಳ್ಳೀಯ ಚಿಕ್ಕೀಯ ಮಳ್ಳಿ ನಾ ಮುಡಿಸೂವೆ
ಇಳ್ಳೆಲ್ಲಾ ವೀಳ್ಯಾ ತಿನಿಸೂವೆ - ಕಂಪಿನ
ಶೆಲ್ಯನು ಹಾಸಿ ಹೊದಿಸೂವೆ!
(ಸಂವಾದ)

ಹೀಗೆ ದೇಸೀ ಬೆಡಗಿನಿಂದ ಪರಿಪ್ಲುತವಾದ ಅಪ್ಪಟ ಜಾನಪದೀಯ ಅನ್ನಿಸುವ ಗ್ರಾಮಗಂಧ ಗಾಳಿಯಿಂದಲೇ ತುಂಬಿತುಳುಕುವ ಗಂಡು - ಹೆಣ್ಣಿನ ಸರಸ ಸಂವಾದದ ಚಿತ್ರಗಳನ್ನು ಸಾ.ಶಿ.ಮ. ಮುಕ್ತವಾಗಿ ಆರ್ದ್ರವಾಗಿ ನೀಡುತ್ತಾರೆ.

ನಮ್ಮೂರ ದಾರೀಲಿ, ಸಂವಾದ - ಕವಿತೆಗಳು ಈ ನೆಲದ ಪದಗಳು. ಅಲ್ಲೆಲ್ಲಾ ಮಣ್ಣಿನ ವಾಸನೆ ಇದೆ. ನಮ್ಮ ನಾಡಿನ ಕಾವ್ಯದ ಕಂಪಿದೆ. ನಮ್ಮ ಸಂಸ್ಕೃತಿಯ ಸೊಂಪಿದೆ. ಅಲ್ಲೆಲ್ಲೂ ನಮ್ಮತನವನ್ನು ಕವಿ ಮರೆಯುವುದಿಲ್ಲ. ಇದು ಕವಿಯ ಸಂಸ್ಕೃತಿ ಪರವಾದ ಸುಸಂಸ್ಕೃತ ನಿಲುವಾಗಿದೆ.

ಯಾವುದೇ ಕವಿ ತಾನು ಬೆಳೆಯುತ್ತಾ ಹೋಗಬೇಕಾದರೆ.... ಪೂರ್ವಸೂರಿಗಳ ಅಧ್ಯಯನ, ಅಭಿಜಾತ ಕವಿಗಳ ಪ್ರೇರಣೆ, ಸಂಸ್ಮರಣೆ, ನಾಡು-ನುಡಿ ಬಗೆಗೆ ಚಿಂತನ ಮಂಥನ ಎಲ್ಲವೂ ಅತ್ಯಂತ ಮುಖ್ಯ.

ಡಾ॥ ಸಾ.ಶಿ.ಮ. ತಮ್ಮ ಕವನ ಸಂಕಲನಗಳನ್ನು ಮರೆಯದೆ ಹಿರಿಯರ ಬಗ್ಗೆ ಗೌರವ ಸಮರ್ಪಣೆ ಮಾಡುವ ಸಂಸ್ಮರಣಾ ಕವಿತೆಗಳನ್ನು ಬರೆಯುತ್ತಲೇ ಬಂದಿದ್ದಾರೆ. ಆ ಹಿರಿಯ ಚೇತನಗಳೇ ಇಂದಿನ ಯುವ ಪೀಳಿಗೆಗೆ ನವ ಜನಾಂಗಕ್ಕೆ ದಾರಿದೀಪಗಳು. ಅಂಥ ಚೈತನ್ಯ ಮಾಲಿಕೆಯಲ್ಲಿ ಸ್ವಾಮಿ ವಿವೇಕಾನಂದರನ್ನು ಕುರಿತು ಅವರು ಬರೆದ

ಕವಿತೆ ನನಗೆ ಬಹಳ ಇಷ್ಟವಾಯಿತು.

ಸ್ವಾಮಿ ವಿವೇಕಾನಂದರ ವಾಣಿ ಅಂದು ಹೇಗೆ ಮೊಳಗಿತ್ತು ಮತ್ತು ಅದು ಭಾರತೀಯರ ನಿದ್ದೆಯನ್ನು ಬಡಿದೆಬ್ಬಿಸಿತ್ತು ಎಂಬುದನ್ನು ಕವಿ ಚೂಪಾದ ಮಾತುಗಳಿಂದ ತಿವಿತಿವಿದು ಓದುಗರನ್ನು ಜಾಗೃತಿಸ್ಥಿತಿಗೆ ಕೊಂಡೊಯ್ಯುತ್ತಾರೆ.

ಇದು ಕೊಟ್ಟ ವರವಲ್ಲ ... ಇಟ್ಟ ಶಾಪವೂ ಅಲ್ಲ
ಇದು ಯೋಧ್ಯವಾಣಿ !
ಹೃದಯ ಗಹ್ವರದಿಂದ ಸಿಡಿದೆದ್ದ ಈ ಅಶನಿಘೋಷಕ್ಕೆ
ಬೆಚ್ಚಿ ಬಿಚ್ಚಿದುವಂದು ಆ - ದ್ಯಾವಾ ಈ ಪೃಥಿವಿ
ನಕ್ಷತ್ರ ದಕ್ಷತೆಯೂ ಕಾಳು - ಬೀಳು

ಏಳು ಭಾರತ ಪುತ್ರ, ಹಾಡು ಮಂಗಳ ಗೀತ
ಯೋಧ್ಯವಾಣಿಯನೊಮ್ಮೆ ನೆನೆದು ನೀ ಹಾಡು
ಉತ್ತಿಷ್ಠತ, ಜಾಗೃತ, ಪ್ರಾಪ್ಯವರಾನ್ನಿಬೋಧತ !

ಈ ಕವಿತೆಯಲ್ಲಿ ನಮ್ಮ ಅಕ್ಕರೆಯ ಹಿರಿಮೆಯ ಭಾರತ ಹೇಗೆ ಹೇಗೆ ಯಾವ ಯಾವ ಶತಮಾನಗಳಲ್ಲಿ ದಾಟಿ ಬಂತೆಂಬುದನ್ನು, ಏನೆಲ್ಲಾ ಆಗಿ ಹೋಯಿತೆನ್ನುವುದನ್ನು ತಮ್ಮ ಪ್ರಖರ ಮಾತುಗಳಿಂದ ಚಿತ್ರಿಸಿದ್ದಾರೆ. ಅವರ ವಿಡಂಬನೆಯ ನುಡಿಗಳು ಕ್ರೂರ ಬಾಣದಂತೆ ತೀಕ್ಷ್ಣವಾಗಿದೆ.

ಸ್ವತಂತ್ರ ಭಾರತ ಹೇಗೆ ಉತ್ಪಾತದತ್ತ ಸಾಗಿದೆ ಎಂಬುದನ್ನು ಕವಿ ಕಟಕಿ ಮಾತಿನ ಸಿಡಿ ಸಿಡಿ ಪಟಾಕಿ ನುಡಿಗಳಿಂದ ಸ್ಫೋಟಿಸುತ್ತಾರೆ-ಓದಿನೋಡಿ,

ಗಾಂಧಾರಿ ಗರ್ಭದಿಂದಬ್ಬರಿಸಿ ಹೊರಬಿದ್ದ
ನೂರಾರು ಪಿಂಡಗಳು ತಾಂಡವವ ನಡೆಸಿ
ತಾಯ ತೋಳುಗಳೆರಡ ತುಂಡರಿಸಿ
ಅವಳ ತೊಡೆಯೇರಿ ನಲಿ ನಲಿದು ನರ್ತಿಸಿದುವಂದು!

ಎಲ್ಲೆಲ್ಲಿ ಏನೆಲ್ಲಾ ಹಾಲಾಹಲ ನಾಡಲ್ಲಿ ಉಕ್ಕಿ ಹರಿಯಿತು ಎಂಬ ಚಿತ್ರ ನಮ್ಮ ಕಣ್ಣು ತೆರೆಸಬೇಕು. ವೈಚಾರಿಕ ಕ್ರಾಂತಿಯಾಗದೆ ದೇಶಕ್ಕೆ ಮುಕ್ತಿಯಿಲ್ಲ! ಕೀರ್ತಿಯ ಆರೋಹಣದತ್ತ ನಾಡ ಗುಡಿ ಮಿಂಚಿ ಮಿನುಗಬೇಕಾದದ್ದು ಅಪಮೌಲ್ಯಗಳ ಕಂದರದತ್ತ ಅವರೋಹಣ ಕಂಡು ಪ್ರಪಾತದಾಳಕ್ಕೆ ತಾಯ ಮಾನ ಮರ್ಯಾದೆ ಉರುಳುರುಳಿ ಬಿದ್ದು ಕೀರ್ತಿ ಪತನವಾಗಿದೆ ಎಂಬುದನ್ನು ಕವಿ ಸಾ.ಶಿ.ಮ. ವ್ಯಂಗ್ಯವಾಗಿ, ಚುರುಕು ಮುಟ್ಟುವ ಹಾಗೆ ಕ್ರೂರವಾಗಿಯೇ ಬರೆದಿದ್ದಾರೆ.

ಎತ್ತ ನೋಡಿದರತ್ತ ಈಡಿಪಸ್ಸಿನ ಬಳಗ!
ಮುತ್ತಿರುವುದೆಲ್ಲೆಲ್ಲೋ ಪ್ರಣಯರಾಗ!
ಮಾರುತಿಯ ಮನೆಯಲ್ಲೇ ರಾಸಲೀಲೆ!
ಎದೆಯ ಬೃಂದಾವನದಿ ಬರಿಯಗೋಳೇ!

ಹೀಗೆ ತಲೆಮಾರಿನಿಂದ ತಲೆಮಾರಿಗೆ ಭಾರತದ ಧವಳ ಕೀರ್ತಿ ಇಳಿಮುಖ ಆದದ್ದನ್ನು

ವಿಷಾದದಿಂದ ದಾಖಲಿಸಿದ್ದಾರೆ. ತನ್ಮೂಲಕ ಎಚ್ಚರಿಕೆಯ ಗಂಟೆಯನ್ನು ಬಾರಿಸಿದ್ದಾರೆ.

ಅಭಿಮನ್ಯು, ಬಸವ, ಅಕ್ಕಮಹಾದೇವಿ, ಕಕ್ಕಯ್ಯ, ಗಾಂಧಿ, ಫ.ಗು. ಹಳಕಟ್ಟಿ,... ಇಂಥ ಚೇತನಗಳು ಹೇಗೆ ಮನುಕುಲಕ್ಕೆ ದಿವ್ಯ ಚೈತನ್ಯ ನೀಡಬಲ್ಲ ಸಾರ್ವಜನಿಕ ಬೆಳಕಾಗಿವೆ ಎಂಬುದನ್ನು ಚಿಂತನಶೀಲ ಕವಿ ಸಾ.ಶಿ.ಮ. ಆರ್ದ್ರವಾಗಿ, ಸಾರ್ಥಕವಾಗಿ ಪ್ರಭಾವಶಾಲಿ ಪದಪುಂಜಗಳಿಂದ ಸ್ವೋಪಜ್ಞ ಶೈಲಿಯಲ್ಲಿ ಬರೆದಿದ್ದಾರೆಂಬುದನ್ನು ಕಾವ್ಯಸಕ್ತರು ಅಧ್ಯಯನ ಮಾಡಿ ತಮ್ಮ ತಮ್ಮ ಅರಿವಿನ ಪರಿಧಿಯನ್ನು ವಿಸ್ತರಿಸಿಕೊಳ್ಳಬಹುದು.

ನಿಸರ್ಗಕ್ಕೆ ಮಣಿಯದ ಕವಿಯಿಲ್ಲ ; ಕುಣಿದು ಹಾಡಿದ ಮನವಿಲ್ಲ ; ಪ್ರಕೃತಿ ಸಾವಿರದ ಕವಿತೆಗಳನ್ನು ತನ್ನ ಸೌಂದರ್ಯದಲ್ಲಿ ಸೃಷ್ಟಿಸಿದೆ, ಸೊಬಗಿನ ಆವಿಷ್ಕಾರವೇ ಆ ಬಗೆಯದು. ಎಲ್ಲಿ ಚೆಲುವು ಕೆನೆಗಟ್ಟಿದೆ, ಅಲ್ಲಿ ಕವಿಯ ಮಾತಿನ ತೆನೆ ವಾಗರ್ಥದ ಫಲ ಕೊಟ್ಟಿದೆ. ಎಲ್ಲ ಚೆಲುವು ಕವಿಯ ಹೃದಯಂತರಾಳದಲ್ಲಿ ಒಲವಿನ ನಿಲುವು ಸೃಷ್ಟಿಸುತ್ತದೆ. ಬನಬನವ ಕಂಡಾಗ ಕವಿಯ ಅಂತರಂಗದಲ್ಲಿ ಹೂ ಹಣ್ಣಿನ ಕಾವ್ಯರಂಗ, ಹಸಿ ಹಸಿರಿನ ಸಂಸರ್ಗ ಕವಿ ಹಾಗೂ ಕವಿತೆಯ ಅನುಪಮ ಕಲಾಸಂಗ.

ತಾಯಿ ಇಳೆಗೆ ಅಪೂರ್ವ ಬೆಡಗು ; ಆ ಸೊಬಗನ್ನು ಕಂಡ ಕವಿಗೆ ಭಾವೋನ್ಮಾದದ ರಾಗ - ರಂಗು ; ಕಾವ್ಯಗುಂಗು ; ತಾನ - ವಿತಾನದ ಸೃಜನ ಪಾಂಗು. ತೇಲುತ್ತದೆ ಕವಿಯ ಮಾನಸ ಲೋಕದಲ್ಲಿ ಪ್ರತಿಭೆಯ ಹಡಗು ! ಅದು ಕಲ್ಪನಾ ರೆಕ್ಕೆ ಬೀಸಿದಷ್ಟು ಮೋಹಕ ಕಾವ್ಯದ ಹಾಯಿ ಹಡಗು. ನಿದರ್ಶನಕ್ಕೆ

ಮಾವು ಬೇವಿಗೂ ಮದುವೆ ಇಂದೆ ಮಂಗಳ ಕಾರ್ಯ
ನವಿಲು ಜಾಗರದಲ್ಲಿ ತೂಗು ಮಂಚ
ಅಲ್ಲಿ ಗಿಳಿಗಳ ಹರಟೆ ಇಲ್ಲಿ ದುಂಬಿಯ ಮಂತ್ರ
ಮತ್ತೆಲ್ಲೋ ಕೋಗಿಲೆಯ ಸ್ವಸ್ತಿ ವಚನ

(ಚೈತ್ರ ಚೈತನ್ಯ)

ಸಾ.ಶಿ.ಮ ಕಾವ್ಯದಲ್ಲಿ ಇಂಥ ರಮ್ಯ ಬಣ್ಣನೆಗಳು ನೂರಾರು. ವಿಶ್ವದ ಕಣ ಕಣದಲ್ಲೂ ಪ್ರಕೃತಿಯ ಉಸಿರಿನ ಏರಿಳಿತ ಕಂಡ ಉಪಾಸಕರು ಅವರು. ತನ್ನ ಭೂಮಿಯನ್ನು ಸಿರಿ ತವರೂರೆಂದು ಕಾಣುವುದರಲ್ಲೇ ಕವಿಯ ಪ್ರಕೃತಿ ಪೂಜೆ ಇದೆ.

ಹಸಿ ಹಸಿರಿನ ಶುಭ ಪರಿಸರದಲ್ಲಿ ಈ ಕವಿಯ ಕಣ್ಣಿಗೆ ನಿಸರ್ಗ ಹೇಗೆ ಕಂಡಿದೆ, ಓದಿ ಸವಿಯಿರಿ.

ಸೊಬಗು ಸೋರಿದೆ ಇಲ್ಲಿ ತೆಂಗು ಗರಿ ಕೊಂಕುಳಲಿ
ಹಸೆ ಬರೆದು ಹಾಡುತಿದೆ ಚೈತ್ರ ಚೈತನ್ಯ

ಎಂಥ ಅದ್ಭುತ ವರ್ಣನೆ ! ಹೀಗೆ ಕವಿ ಸಾ.ಶಿ.ಮ. ಪ್ರೀತಿ, ಪ್ರಕೃತಿ, ಅಧ್ಯಾತ್ಮ, ದೇಶಭಕ್ತಿ, ಹಿರಿಯರ ಬಗೆಗೆ ಗೌರವ ಸಮರ್ಪಣೆ, ಸಂಸ್ಕೃತಿಯ ಬಗೆಗೆ ಅಭಿಮಾನ ಇಂಥ ವಿಷಯಗಳಲ್ಲಿ ಸಾಮಾನ್ಯರಂತೆ ಕಂಡರೂ ಅಸಾಮಾನ್ಯ ಅಭಿವ್ಯಕ್ತಿಯಿಂದ ನಮ್ಮ ವಿಶೇಷ ಪ್ರೀತಿಗೆ ಪಾತ್ರರಾಗುತ್ತಾರೆ.

ಸಾ.ಶಿ.ಮ. ಭಕ್ತಿಗೀತೆಗಳು

- ಡಾ.ಎಸ್.ಸಿ. ಶರ್ಮ

ಡಾ. ಸಾ. ಶಿ. ಮರುಳಯ್ಯ ಸಾಹಿತ್ಯ ಲೋಕದಲ್ಲಿ ಚಿರಪರಿಚಿತ ಹೆಸರು. ಅವರ ಕೆಲವು ಭಕ್ತಿಗೀತೆಗಳು ಹಾಡಿನ ರೂಪದಲ್ಲಿ, ಕ್ಯಾಸೆಟ್‌ನಲ್ಲಿ ಈಗಾಗಲೇ ಮೂಡಿದೆ. ಅವರ ಕವನ ಸಂಕಲನಗಳಾದ 'ಸುರಭಿ' ಹಾಗು 'ಬಾರೋ ಮೈಲಾರಕೆ'ಗಳಿಂದ ಆಯ್ದ ಕೆಲವು ಭಕ್ತಿಗೀತೆಗಳ ವಿಮರ್ಶಾತ್ಮಕ ಪ್ರಬಂಧ ಇಲ್ಲಿದೆ.

ಡಾ. ಸಾ.ಶಿ.ಮನವರ ಭಕ್ತಿಗೀತೆಗಳನ್ನು ಅವಲೋಕಿಸಿದಾಗ ಸ್ಪಷ್ಟವಾಗುವ ಅಂಶವೆಂದರೆ ಅವರ ಕವನಗಳ ಕೇಂದ್ರ, ಪರಮೇಶ್ವರನಾದ ಶಿವ ಹಾಗು ಆವನ ಅನುಯಾಯಿಗಳಾದ ಶಿವ ಶರಣರು. ಒಟ್ಟಾರೆ ಶಿವ ಹಾಗು ಶಿವಶರಣರ ಮೇಲಿನ ತಮ್ಮ ಅಭಿಮಾನ, ಭಕ್ತಿಗಳನ್ನು ತಮ್ಮ ಕವನಗಳ ಮೂಲಕ ಕವಿ ವ್ಯಕ್ತಪಡಿಸಿದ್ದಾರೆ.

ಸುರಭಿಯಲ್ಲಿನ "ಜಯವೀರ ರುದ್ರಮುನಿ ದೇಶಿಕೇಂದ್ರ" ಎಂಬ ಕವನ ರುದ್ರಮುನಿ ದೇಶಿಕೇಂದ್ರರನ್ನು ಕುರಿತದ್ದಾಗಿದೆ. ವೀರಶೈವ ಮತವನ್ನು ಬೆಳಗಿದ, ಶಿವಭಕ್ತ ರುದ್ರಮುನಿ ದೇಶಿಕೇಂದ್ರರನ್ನು ಕವಿ ರಂಭಾಪುರಿಯ ತುಂಬೆ ಹೂ, ಬೆಳುವಲ ನಾಡಿನ ಬಿಲ್ವ, ವೀರ ಸಿಂಹಾಸನದ ಧೀರ ಗಂಭೀರ, ವೀರಭದ್ರ ಧ್ವಜ ಎತ್ತಿಹಿಡಿದವ, ದೇಶ ಸುತ್ತಿದ ಪುಂಡರೀಕ, ಪಚ್ಚ ಕರ್ಪೂರದಂತೆ ಪುನೀತ, ವಾರಣಾಸಿಯ ವಿಶ್ವೇಶ್ವರ ಎಂದೆಲ್ಲ ಹೇಳುತ್ತಾ ತಮ್ಮ ಪ್ರೇಮ, ಭಕ್ತಿಯನ್ನು ವ್ಯಕ್ತಪಡಿಸಿದರೆ, 'ಬನ್ನಿ ಓ ಗೆಳತಿಯರೇ' ಎಂಬ ಪದ್ಯದಲ್ಲಿ ಜಗದ ಗುರುಗಳೂ, ಜಗದಾದಿ ಚೇತನರೂ, ಮಂಗಳ ಸುಧಾಕರರೂ, ಬ್ರಹ್ಮ ತೇಜಸ್ವಿ-ವರ್ಚಸ್ವಿಗಳೂ, ವೀರಶೈವ ಧರ್ಮದ ಪ್ರಚಾರ ಕೈಗೊಂಡ ಆದಿಗುರು ರೇಣುಕಾಚಾರ್ಯರ ದಿವ್ಯ ಮಾನಸಪುತ್ರರಾದ ಈ ಮಹಾಮಹಿಮರನ್ನು ಸ್ಮರಿಸಿದ್ದಾರೆ. ಅಲ್ಲದೆ 'ಕೀರ್ತಿಸುವೆ' ಕವನದಲ್ಲಿಯೂ ಇವರನ್ನು ವೀರಶೈವ ಮತಸ್ಥಾಪಕ, ಮಂಗಳ ಮಹಿಮ, ಜಂಗಮ ಸಾರ್ವಭೌಮೇಂದ್ರ, ಜ್ಞಾನ ನಿಧಿ, ಗಂಗಾಧರ ಎಂದೆಲ್ಲಾ ಕರೆದು ವರ್ಣಿಸಿದ್ದಾರೆ.

"ಮಂಗಳವಾಗಲಿ ಮಹೋನ್ನತರಿಗೆ"ಎಂಬ ಗೀತೆಯನ್ನು ವೀರಶೈವರ ಪಂಚಾಚಾರ್ಯರೆಂದೇ ಹೆಸರಾಗಿರುವ ಆದಿ ಜಗದ್ಗುರು, ವೀರಪೀಠ ಸಂಸ್ಥಾಪಕ ಬಾಳೇಹಳ್ಳಿಯಲ್ಲಿ ನೆಲೆಸಿದ ರೇಣುಕರಿಗೆ, ಉಜ್ಜಯನಿಯ ಸರ್ವಧರ್ಮ ಸಾರಿದ ಮರುಳಾರಾಧ್ಯರಿಗೆ, ಸೂರ್ಯ ಸಿಂಹಾಸನಾಧಿಪತಿ ಶ್ರೀಶೈಲೋನ್ನತ ಪಂಡಿತಾರಾಧ್ಯರಿಗೆ, ವಿಶ್ವೇಶ್ವರನೆನಿಸಿದ ತತ್ಪುರುಷಾತ್ಮಕ ವಾರಣಾಸಿಯಲಿ ನೆಲೆನಿಂತ ವಿಶ್ವಾರಾಧ್ಯರಿಗೆ ಹಾಗೂ ಏಕೋರಾಮರಿಗೆ ಮಂಗಳವಾಗಲಿ ಎಂದು ಕವಿ ಹಾರೈಸುತ್ತಾ ಪಂಚಾಚಾರ್ಯರಿಗೆ ತಮ್ಮ ನಮನವನ್ನು ಈ ಮೂಲಕ ಸಲ್ಲಿಸಿದ್ದಾರೆ.

"ಗುರುವಂದನ"ಎಂಬ ಕವನದಲ್ಲಿ ಜಗದ್ಗುರು ಹಾಗು ಪಂಚಾಚಾರ್ಯರಲ್ಲಿ ಒಬ್ಬರೆನಿಸಿರುವ ರೇಣುಕರ ಪವಾಡ ಸದೃಶ ಘಟನೆಗಳ ವರ್ಣನೆ ಮೂಡಿಬಂದಿದೆ. ಶಕ್ತಿ ವಿರಕ್ತಿ ಪರತರ ತೇಜ ಪಡೆದ, ಭಸ್ಮೋದ್ದೀಪಿತನಾದ ಶತಕೋಟಿ ಪ್ರಭೆಯಲ್ಲಿ ವಿಶ್ವವನ್ನು ಬೆಳಗಿದ ಇವರು ಜಗತ್ತನ್ನು ಉದ್ಧರಿಸಲು ಕೊಲ್ಲಿಪಾಕಿಯ ಶಿವಲಿಂಗದಲ್ಲಿ ಜನಿಸಿ ಶಿವ ಪಂಚಾಕ್ಷರಿ ಮಂತ್ರ ಬಿತ್ತಿದವರೆಂದು, ವೀರಶೈವ ಸಂಸ್ಥಾಪಕರಾಗಿ ವಿಶ್ವಧರ್ಮ ಸಾರಿದವರೂ, ಅಗಸ್ತ್ಯರಿಗೆ ಷಟ್‌ಸ್ಥಲ ತತ್ವ ತಿಳಿಸಿದವರೂ, ಶ್ರೇಷ್ಠ ವೀರಪೀಠವಾದ ಬಾಳೆಹಳ್ಳಿಯಲ್ಲಿ ಜನಿಸಿ ಭುವಿಯಲ್ಲಿ ವೀರಶೈವತತ್ವ ಬೋಧಿಸಿ ಧರ್ಮೋದ್ಧಾರ ಮಾಡಿದವರೆಂದು ಕವಿ ತುಂಬು ಹೃದಯದಿಂದ ಹೊಗಳಿದ್ದಾರೆ."ಜಯ ಜಯ ರೇಣುಕ" ಎಂಬ ಪದ್ಯದಲ್ಲಿ ವಿಶ್ವಾತ್ಮ ರೇಣುಕರಿಗೆ ಎಲ್ಲರೂ ಸೇರಿ ಜಯ ಹೇಳೋಣ ಬನ್ನಿರೆಂದು ಕವಿ ಎಲ್ಲರನ್ನೂ ಕರೆದಿದ್ದಾರೆ.

'ಆರದಿರು ಹಣತೆ' ಎಂಬ ಕವನದಲ್ಲಿ ವೀರಶೈವದ ಬೆಳಕು, ಜ್ಯೋತಿ, ಹಣತೆ ಆರದಿರಲಿ ಎಂಬ ಹಾರೈಕೆ ಇದೆ. ಈಶಾನ, ತತ್ಪುರುಷ, ಸದ್ಯೋಜಾತ, ವಾಮದೇವ, ಅಘೋರ ಎಂಬ ಪಂಚಮುಖಗಳಿಂದ ಜನಿಸಿರುವ ಜ್ಯೋತಿ ಪ್ರಜ್ವಲಿಸಲಿ, ಅಕ್ಕ, ಮುಕ್ತಾಯಿ, ಬಸವ, ಸಕಲೇಶ, ಪ್ರಭುದೇವ, ಸೊನ್ನಲಿಗೆಯ ಸಿದ್ಧರಾಮ, ಚೆನ್ನ ಬಸವಾದಿಗಳು, ಶರಣ-ಶರಣೆಯರ ಕರುಣೆಯ ಒಲವಿನ ತೈಲ ತುಂಬಿರುವ ಹಣತೆಯಲ್ಲಿ ಹಚ್ಚಿರುವ ವೀರಶೈವದ ಬೆಳಕು ಆರದಿರಲಿ ಎಂದು ಕವಿ ಹೃದಯ ತುಂಬಿ ಹರಿಸಿದ್ದಾರೆ. ಈ ಕವನದಲ್ಲಿ ಕವಿಯ ಮನದ ಕಳಕಳಿ ಎದ್ದು ಕಾಣುತ್ತದೆ.

ಮಂಗಲಂ ಗುರುವರ್ಯಾ: ಹಾಗು ಪಾಲಯ ಮಾಂ ಕವನಗಳನ್ನು ಸಂಸ್ಕೃತದಲ್ಲಿ ರಚಿಸುವುದರ ಮೂಲಕ ಸಂಸ್ಕೃತದಲ್ಲಿಯೂ ತಮ್ಮ ಚೈತನ್ಯವನ್ನು ತೋರಿಸಿದ್ದಾರೆ. ಮಂಗಲಂ ಗುರುವರ್ಯಾ: ಕವನ ಗುರುಗಳನ್ನು ಕುರಿತದ್ದಾದರೆ ಎರಡನೆಯದು ರೇಣುಕರನ್ನು ಕುರಿತ ಕವನವಾಗಿದೆ.

ಸುರಭಿ ಕವನ ಸಂಕಲನದ ಮುಂದಿನ ಭಾಗವಾಗಿರುವ 'ಸುತ್ತೂರಸಿರಿ'ಯ ಕೆಲವು ಕವಿತೆಗಳು ಜಗದ್ಗುರು ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳ ಸ್ಮರಣೆಗೆ ಮೀಸಲಾಗಿದೆ. ಈ ಭಾಗದಲ್ಲಿ ಗುರುಗಳ ಹಾಗು ಸುತ್ತೂರಿನ ಸ್ತುತಿಗಳನ್ನು ಕಾಣಬಹುದು. ಇದರಲ್ಲಿನ ಒಂದು ಕವನ ಬೆಳಗು ಬೆಳಗಲಿ ಬಂದು ಕೂಡಿದಂತೆ ಹೆಸರೇ ಸೂಚಿಸುವಂತೆ ಶಿವ ಹಾಗು ಗುರುಗಳ ಸ್ತುತಿ . ಈ ಕವನದಲ್ಲಿ ಕವಿ ಗುರುವನ್ನು ಪರಮೇಶ್ವರ ಶಿವನಿಗೆ ಹೋಲಿಸುತ್ತಾ ಸಾಗಿ ಕಡೆಯಲ್ಲಿ ಇಬ್ಬರ ನಿಲುವೂ ಒಂದೇ ಎಂಬುದನ್ನು ಸಾಬೀತುಪಡಿಸಿದ್ದಾರೆ.

'ಮಡಿಯಾಗಿ ಬಾಳಿದಿರಿ' ಕವನದಲ್ಲಿ ನಿಜವಾದ ಶಿವಭಕ್ತಿ ಹೇಗಿರಬೇಕೆಂದು ವಿವರಿಸುತ್ತಾ ಮನುಷ್ಯ ಕೆಲಸ ಮಾಡಬೇಕು, ದೇವರಲ್ಲಿ ಭಕ್ತಿಯಿರಬೇಕು, ದಾನದಲ್ಲಿ

ದಾಸೋಹಿ ಆಗಬೇಕು, ಹೊಗಳಿಕೆಗೆ ತೆಗಳಿಕೆಗೆ ಹಿಗ್ಗದೆ ಕುಗ್ಗದೆ ಸಮವಾಗಿ ನೋಡಬೇಕು ಇದೇ ಶಿವ ಮಂತ್ರ ಮೇಲು ಕೀಳೆಂಬ ಕಳೆ ಕಿತ್ತು ಮಾನವನಾಗಿ ಬದುಕಿ ಹಾಗು ಮನುಕುಲ ಒಂದಾಗಬೇಕೆಂಬ ಗುರು ರಾಜೇಂದ್ರರ ನುಡಿಗಳನ್ನು ಮತ್ತೊಮ್ಮೆ ನಮಗೆ ನೆನಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

'ನಿನ್ನಲ್ಲಿ ನಾನೊಂದು ಬೆಳಕು ಕಂಡೆ' ಎಂಬಲ್ಲಿ ಗುರು ರಾಜೇಂದ್ರರ ಗುಣಗಳ ಪರಿಚಯ ಇದೆ. ಸಕಲ ಶಿವಶರಣರ ಎಲ್ಲ ಸದ್ಗುಣಗಳು ಸಾಕಾರಗೊಂಡು ರಾಜೇಂದ್ರರ ರೂಪ ಪಡೆದಿದೆ ಎಂದು ಕವಿ ವರ್ಣಿಸಿದ್ದಾರೆ. ಶರಣರ ಸಂದೇಶವನ್ನು ಜನಸಾಮಾನ್ಯರಿಗೆ ವಚನ ವ್ಯಾಖ್ಯಾನದ ಮೂಲಕ ತಿಳಿಸುತ್ತಾ, ದೀನ ದಲಿತರ ಸೇವೆಯನ್ನು ನಿತ್ಯದ ನೇಮವನ್ನಾಗಿಸಿಕೊಂಡಿದ್ದ, ದೀನ ದಲಿತರ ಸೇವೆಯೇ ಜಪ, ತಪ, ಧ್ಯಾನ ಎಂದೇ ಗುರುಗಳು ಭಾವಿಸಿದ್ದರೆಂದು ಕವಿ ತಿಳಿಸುತ್ತಾರೆ. ಶರಣರ ಹೇಳಿಕೆಯಂತೆ ಸಕಲ ಜೀವಾತ್ಮರಿಗೆ ಲೇಸನ್ನು ಬಯಸುವುದೇ ಗುರಿಯಾಗಿರಿಸಿ ಸಕಲ ಜೀವಾತ್ಮಗಳಲ್ಲೂ ಶಿವನನ್ನು ಅರಸಿದ ದುಡಿಮೆಯಲ್ಲೇ ದೇವರನ್ನು ಕಂಡಂಥ ಗುರು ರಾಜೇಂದ್ರರಲ್ಲಿ ತಾವು ದಿವ್ಯ ಬೆಳಕೊಂದನ್ನು ಕಂಡುದಾಗಿ ಕವಿ ಸಾರುತ್ತಾರೆ. 'ಜಯ ಜಯಾ ಶಿವರಾತ್ರಿ ರಾಜೇಂದ್ರನೇ' ಎಂಬ ಕವನದಲ್ಲಿ ಕವಿ ರಾಜೇಂದ್ರರ ನಡೆ ನುಡಿಗಳನ್ನು ವಿವರಿಸುತ್ತಾ ಇವರಿಗೆ ಜಯವಾಗಲೆಂದು ಆಶಿಸಿದ್ದಾರೆ.

'ನೀ ಎಲ್ಲಿ ಹೋದೆ' ಶೋಕಗೀತೆಯಲ್ಲಿ ಸಕಲ ಸದ್ಗುಣ ಗಣಿಯೆನಿಸಿದ್ದ ರಾಜೇಂದ್ರರು ಭೌತಿಕ ದೇಹ ತೊರೆದಾಗ ಕವಿಗೆ ಉಂಟಾದ ಭಾವನೆಗಳು ವ್ಯಕ್ತವಾಗಿವೆ. ಈ ಸಂದರ್ಭದಲ್ಲಿ ಕವಿಗೆ ಸುತ್ತೂರಿನ ಸಮಸ್ತ ಪ್ರಕೃತಿಯೂ ಶೋಕತಪ್ತವಾಗಿರುವಂತೆ ಕಂಡು ಸುತ್ತೂರ ಸುತ್ತ ನಿಂತ ಭತ್ತದ ಗದ್ದೆ ಬಿಕ್ಕಿ ಬಿಕ್ಕಿ ಅಳುವಂತೆ, ಕಪಿಲೆಯ ಕಣ್ಣೀರೇ ನದಿಯಾಗಿ ಹರಿಯುತ್ತಿರುವಂತೆ ಭಾಸವಾಗಿದೆ. ಇದರಲ್ಲಿ ಕವಿಗೆ ರಾಜೇಂದ್ರರ ಅಗಲುವಿಕೆಯಿಂದುಂಟಾದ ನೋವು, ಮನಸ್ಥಿತಿ ಚೆನ್ನಾಗಿ ವ್ಯಕ್ತವಾಗಿದೆ. 'ಮೂಡಿ ಬಾ' ಕವನದಲ್ಲಿ ಕವಿ ಕಣ್ಮರೆಯಾದ ರಾಜೇಂದ್ರ ಗುರುವನ್ನು ಬಾ ಎಂದು ಕರೆಯುತ್ತಿದ್ದಾರೆ. ಗುರುಗಳ ಬಗ್ಗೆ ಕವಿಗೆ ಇದ್ದ ಒಲವು ಇದರಲ್ಲಿ ಸುಂದರವಾಗಿ ಬಿಂಬಿತವಾಗಿದೆ.

"ಸುತ್ತೂರು" ಕವಿತೆಯಲ್ಲಿ ಕವಿ ಸುತ್ತೂರಿನ ಚಿತ್ರಣ ನೀಡುತ್ತಾ ಸಾಗುತ್ತಾರೆ. ಗಿರಿ-ಝುರಿ-ಸಿರಿಗಳ ಊರೆಂದೂ, ತೃಪ್ತಿ ನೀಡುವ ತಂಗುದಾಣವೆಂದೂ, ಅನುಭಾವಿಗಳಾದ ರಾಜೇಂದ್ರ ಗುರುಗಳ ನಾಡೆಂದೂ, ರಾಜೇಂದ್ರರ ನಲುಮೆ ಬೀಡೆಂದು ಕವಿ ಸುತ್ತೂರನ್ನು ವರ್ಣಿಸಿದ್ದಾರೆ. ಇದರಲ್ಲಿ ಸುತ್ತೂರಿನ ಪರಿಸರದ ಕಿರು ಪರಿಚಯದೊಂದಿಗೆ ಆ ಸ್ಥಳದ ಮಹಿಮೆಯನ್ನೂ ವಿವರಿಸಿದ್ದಾರೆ.

"ಬೆಳಗು ಬಾ" ಹಾಗು "ಜಯವಾಗಲಿ ಸುತ್ತೂರ ಸಿರಿಗೆ" ಕವಿತೆಗಳಲ್ಲಿ ಕವಿ ಗುರು ರಾಜೇಂದ್ರರ ಗುಣಗಾನ ಮಾಡುತ್ತಾ ಗುರುಗಳನ್ನು ಸುತ್ತೂರ ಸಿರಿ ಎಂದು ಕರೆಯುತ್ತಾರೆ.

'ಬೆಳಗು ಬಾ' ಕವನದಲ್ಲಿ ಗುರುಗಳನ್ನು ಕುರಿತು ಬೆಳಕಾಗಿ ಬಾ ಎಂದು ಹಾರೈಸಿ ಹಾಡಿರುವುದನ್ನು ಕಾಣಬಹುದು. ಅಷ್ಟಲಕ್ಷ್ಮಿಯರ ಔಪಾಸನೆ, ಸುರಭಿಯ ಮತ್ತೊಂದು ಭಾಗ. ಇದು ಸರಳ ಭಾಷೆಯಲ್ಲಿದ್ದು ಸುಲಭವಾಗಿ ಅರ್ಥವಾಗುವಂತಿದೆ. ಈ ಭಾಗದಲ್ಲಿ ಸಾಂಪ್ರದಾಯಿಕ ಲಕ್ಷ್ಮಿಸ್ತುತಿಯನ್ನು ಕಾಣಬಹುದು."ಧನಲಕ್ಷ್ಮಿ" ಕವನದಲ್ಲಿ ಲಕ್ಷ್ಮಿಯು ದಳದೆರೆದ ಪದ್ಮದಲ್ಲಿ ಪದ್ಮಾಸನದಲ್ಲಿ ಮುಗುಳ್ನಗುತ್ತಾ ತವ ನಿಧಿಯನ್ನು ತೊಡೆಯಮೇಲಿರಿಸಿ ಕುಳಿತು ಅಭಯಹಸ್ತ ತೋರಿ ಹೊನ್ನ ಹೊಳೆ ಹರಿಸುತ್ತಿದ್ದಾಳೆಂದು ಕವಿ ವಿವರಣೆ ನೀಡುತ್ತಾರೆ. "ಧಾನ್ಯಲಕ್ಷ್ಮಿ"ಯಲ್ಲಿ ಸುಗ್ಗಿಯ ಸಮಯದಲ್ಲಿ ಧಾನ್ಯಗಳ ರೂಪದಲ್ಲಿ ದೇವಿಯ ಕರುಣೆಯ ಹೊನಲು ಹರಿಯುತ್ತದೆಯೆಂಬ ಕಲ್ಪನೆ ಕವಿಯದು. "ಗಜಲಕ್ಷ್ಮಿ" ಪದ್ಯದಲ್ಲಿ ಪದ್ಮಪಾಣಿಯಾದ, ತಪೋನಿರತೆಯಾದ ದೇವಿಯ ಅಕ್ಕಪಕ್ಕ ಎರಡು ಆನೆಗಳು ಸೊಂಡಿಲೆತ್ತಿ ನಿಂತಿರುವ ಚಿತ್ರ ಕಂಡುಬರುತ್ತದೆ. ಇದೇ ಪದ್ಯದಲ್ಲಿ ಮುಂದೆ ಸಂಸ್ಕೃತದಲ್ಲಿ ದೇವಿಯ ಸ್ವರೂಪ ವರ್ಣನೆಯಿದೆ. ಈಕೆ ಚತುರ್ಭುಜಳೂ, ಪದ್ಮ ಪೀಠದಲ್ಲಿ ಕುಳಿತಿರುವವಳೂ, ಒಂದು ಕೈಯಲ್ಲಿ ಪದ್ಮವನ್ನು ಹಿಡಿದು ಕೆಂಬಣ್ಣದ ಕಾಂತಿಯನ್ನು ಪಸರಿಸುತ್ತ ವರದ ಹಸ್ತ ತೋರುತ್ತ ಅನುಗ್ರಹ ಮಾಡುವವಳೆಂದು ಕವಿ ಹೇಳುತ್ತಾರೆ.

"ಆದಿಲಕ್ಷ್ಮಿ" ಕವನದಲ್ಲಿ ರಾಗ ನಿರ್ದೇಶನದೊಂದಿಗೆ ದೇವಿಯನ್ನು ಉದಯ ರಾಗ ಹಾಡಿ ಎಬ್ಬಿಸುವ ರೀತಿಯಲ್ಲಿ ಚಿತ್ರಿಸಲಾಗಿದೆ. ಉದಯಕಾಲದಲ್ಲಿ ಹೂವು ಅರಳಿ ನಗುವ ರೀತಿಯಲ್ಲಿ, ತಾಯ ಮಡಿಲಲ್ಲಿ ಮಲಗಿರುವ ಮಗು ಕಣ್ದೆರೆಯುವಂತೆ ತನ್ನ ಚೆಂಚು ಸಂಪುಟವನ್ನು ತೆರೆದು ಬಾಯ್ದೆರೆದು ಕೂಗುವ ಹಕ್ಕಿಯ ಮಾದರಿಯಂತೆ ಏಳು ಲಕ್ಷ್ಮಿ ಎಂದು ಕವಿ ಪ್ರಾರ್ಥಿಸಿದ್ದಾರೆ. "ವೀರ ಲಕ್ಷ್ಮಿ"ಯಲ್ಲಿ ಉತ್ಸಾಹ ಶಕ್ತಿಯಾಗಿ ನಮ್ಮ ಧಮನಿ ಧಮನಿಗಳಲ್ಲಿ ಸ್ಫೂರ್ತಿ ತುಂಬುವ ಚೈತನ್ಯದಾಯಿಯಾಗಿ ವಿಠಲ ಲಕ್ಷ್ಮಿಯನ್ನು ಕವಿ ಕಲ್ಪನೆ ಕಂಡಿದೆ. ಯುದ್ಧ ಸಮಯದಲ್ಲಿ ಬಳಕೆಯಾಗುವ ಶಂಖ, ಖಡ್ಗ, ನಗಾರಿ, ಭೇರಿ ಶಬ್ದಗಳೊಂದಿಗೆ ಜಯವಾಗಲಿ ಎಂಬ ಜಯಘೋಷ ಕೇಳಬೇಕೆಂದು ಕವಿ ಆಶಿಸಿದ್ದಾರೆ. ಕವನ "ವಿಜಯ ಲಕ್ಷ್ಮಿ" ಯಲ್ಲಿ ಒಂದು ಕೈಯಲ್ಲಿ ಖಡ್ಗವನ್ನು ಮತ್ತೊಂದರಲ್ಲಿ ಗುರಾಣಿಯನ್ನು ಹಿಡಿದು ಸಕಲವನ್ನೂ ಪಾಲಿಸುವ ಸರ್ವಮಂಗಳೆಯಾದ, ಸೃಷ್ಟಿ ಸಂರಕ್ಷಕಿಯಾದ ಮಹಾದೇವಿಯ ವರ್ಣನೆ ಬಂದಿದೆ.

"ಐಶ್ವರ್ಯಲಕ್ಷ್ಮಿ" ಕವನ ದಾಸರ ಕೀರ್ತನೆಯ ಧಾಟಿಯಲ್ಲಿ ರಚಿತವಾಗಿದ್ದು ಸರ್ವಾಭರಣಭೂಷಿತಳಾಗಿ ಕಿರುಗೆಜ್ಜೆ ನಾದ ಮಾಡುತ್ತ ಸಜ್ಜಾದ ಹಸೆಮಣೆಗೆ ಬರುವ ಹೆಣ್ಣಿಂತೆ ಬರಬೇಕೆಂದು ಕವಿ ಆಹ್ವಾನಿಸುತ್ತಾರೆ. ಮನೆಯಲ್ಲಿ ಸಾರಣೆ ಕಾರಣೆ ಮಾಡಿ ಪರಮಾನ್ನ ಭಕ್ಷ್ಯ ಅಣಿಮಾಡಿ ಭಕ್ತಿಯಿಂದ ಕೈಮುಗಿದು ನಿಂತವರ ಮನೆಗೆ ಐಶ್ವರ್ಯದ ಹೊಳೆ ಹರಿಸಿ ಬರುವಂತೆ ಪ್ರಾರ್ಥಿಸಿದ್ದಾರೆ. ಕೊನೆಯ ಕವನ "ಸಂತಾನ ಲಕ್ಷ್ಮಿ"ಯಲ್ಲಿ ಕುಣಿದು ನಲಿದಾಡುವ ತುಂಟರನ್ನು ತೊಡೆಯ ಮೇಲಿರಿಸಿ ಆನಂದದ ಅನುರಾಗವನ್ನು ಕರುಣಿಸುವ ಸಂತಾನಲಕ್ಷ್ಮಿಯನ್ನು ಕರೆದಿದ್ದಾರೆ. ಹಿಂದೆ ಮುದ್ದುಕೃಷ್ಣನು

ನಂದಗೋಕುಲದಲ್ಲಿ ಅಂದದಾಟವನ್ನಾಡಿ ಆನಂದ ನೀಡಿದ ರೀತಿಯಲ್ಲಿ, ಅಂತಹ ಕೃಷ್ಣರನ್ನು ಮಡಿಲಲಿರಿಸುವಂತೆ ಬೇಡಿದ್ದಾರೆ. ಹರ-ಗಿರಿಜೆ, ಹರಿ-ಲಕ್ಷ್ಮಿ ಹಾಗು ಇಂದ್ರ-ಇಂದ್ರಾಣಿಯರ ರೀತಿಯ ಒಲವಿನ ಚೆಲುವಿನ ಸಂತಾನವನ್ನು ನೀಡಮ್ಮ ಎಂದು ದೇವಿಯನ್ನು ಬೇಡಿದ್ದಾರೆ.

ಇವೆಲ್ಲದರ ನಂತರ ಬರುವ "ಭರತ ವಾಕ್ಯ"ದಲ್ಲಿ ಎಲ್ಲರೂ ಅಷ್ಟಲಕ್ಷ್ಮಿಯನ್ನು ಭಜಿಸಿ ಎಲ್ಲ ಸಂಕಟಗಳನ್ನು ಮಂಜಿನಂತೆ ಹರಿಸಿಕೊಂಡು ಸಕಲ ಸುಖ ಸಂತಾನ ಸೌಭಾಗ್ಯಗಳನ್ನು ಗಳಿಸಿ ಚಿರಕಾಲ ಬಾಳೋಣವೆಂಬ ಆಸೆ ವ್ಯಕ್ತಪಡಿಸಿ ಸರ್ವರಲ್ಲೂ ತಮಗಿರುವ ಅಭಿಮಾನ ತೋಡಿಕೊಂಡಿದ್ದಾರೆ.

ಸುರಭಿಯ ಮತ್ತೊಂದು ಭಾಗ ಸಜ್ಜಲದ ಚಿಜ್ಯೋತಿ. ಇವು ಶಿವ ಶರಣೆಯರ ಬಗ್ಗೆ ಮಾಹಿತಿ ನೀಡುವ ಕವನಗಳಾಗಿವೆ. "ಇವಳು ಕಾರಣ ಕನ್ಯೆ" ಕವಿತೆ ಶ್ಲೋಕದೊಂದಿಗೆ ಪ್ರಾರಂಭವಾಗಿದೆ. ಇದರಲ್ಲಿ ಮಹದೇವಿಯ ಗುಣಗಳನ್ನು ಅವಳ ಜನನ ಹಾಗು ಬೆಳೆದ, ಬಾಳಿದ ರೀತಿಯನ್ನು ಕವಿ ಉಲ್ಲೇಖಿಸಿದ್ದಾರೆ. "ಸಜ್ಜಲಗುಡ್ಡದ ಶರಣಮ್ಮ" ಕವನದಲ್ಲಿ ಶರಣಮ್ಮನೆಂದೇ ಹೆಸರಾದ ಯಮುನಮ್ಮನ ವಿವರಗಳಿವೆ. "ವಂದನೆ" ಪದ್ಯದಲ್ಲಿ ಶಿವಶರಣೆಯರಿಗೆ ತಮ್ಮ ಭಕ್ತಿಪೂರ್ವಕ ವಂದನೆ ತಿಳಿಸುವ ಚಿತ್ರಣವನ್ನು ಕವಿ ನೀಡಿದ್ದಾರೆ "ಎಲ್ಲೆಲ್ಲು ನಿನ್ನ ಪಾದ" ಎಂಬ ಗೀತೆಯಲ್ಲಿ ಕವಿಯ ಭಕ್ತಿಯ ಮೇರೆಯನ್ನು ಕಾಣಬಹುದಾಗಿದೆ. 'ಎಲ್ಲೆಲ್ಲಿ ನೋಡಿದರೂ' ಎಂಬುದನ್ನು ಹಾಡುತ್ತಾ ಶಿವನನ್ನು ಸರ್ವಾಂತರ್ಯಾಮಿ ಎಂದು ಗುರುತಿಸಿದ್ದಾರೆ.

"ಚೇಳು ಬಂದಿದೆ" ಎಂಬ ಶೀರ್ಷಿಕೆಯ ಗೀತೆಯಲ್ಲಿ ಮನುಜನ ಆಸೆ, ಮೋಹಗಳನ್ನು ವಿಷಕಾರಿ ಪ್ರಾಣಿ ಚೇಳಿಗೆ ಹೋಲಿಸಿ ಚೇಳಿನಂತೆಯೇ ಆಸೆ, ಮೋಹಗಳು ಅಪಾಯಕಾರಿಯೆಂದು ಮಾರ್ಮಿಕವಾಗಿ ಹೇಳಿದ್ದಾರೆ. "ಮೊರೆ" ಕವನದಲ್ಲಿ ಶರಣೆ ಶರಣವ್ವೆಯ ಅಗಲುವಿಕೆಯಿಂದ ಉಂಟಾದ ನೋವನ್ನು ಕವಿ ಭಾವುಕರಾಗಿ ಚಿತ್ರಿಸಿದ್ದಾರೆ. ಬೆಳಕಿನಂತಿದ್ದ ತಾಯಿ ದೂರವಾದ್ದರಿಂದ ಭಕ್ತರು, ಪ್ರಾಣಿ ಸಂಕುಲ ಅನಾಥವಾಗಿ ಅಳುತ್ತಿರುವಂತೆ ಕವಿಗೆ ಭಾಸವಾಗಿ ಅದನ್ನು ಈ ಕವನದಲ್ಲಿ ಅಭಿವ್ಯಕ್ತಪಡಿಸಿದ್ದಾರೆ. ತಾಯೆ ನಿನ್ನ ಅಗಲುವಿಕೆಯಿಂದ ಜಗತ್ತು ತಬ್ಬಲಿಯಾಗಿದೆ ಎಂದು ಕವಿ ನುಡಿಯುತ್ತಾರೆ. "ಮಂಗಲಂ ಜಯ ಮಂಗಲಂ" ನಲ್ಲಿ ದೂರಾದ ಶರಣೆಗೆ, ತಾಯಿಗೆ ಮಂಗಳವಾಗಲಿ, ಜಯವಾಗಲೆಂದು ಕವಿ ಹಾರೈಸಿದ್ದಾರೆ.

ಸುರಭಿಯ ಮುಂದಿನ ಭಾಗ ಪುಷ್ಪಾಂಜಲಿ. ಶಿವ ಶರಣರ ಬಗ್ಗೆ ಹೇಳುವ ಕವನಗುಚ್ಛವಾಗಿದೆ. ಇದರಲ್ಲಿನ "ಶಿವ ಬಸವ ಶಿವಯೋಗಿ" ಕವನದಲ್ಲಿ ನಾಗೂರಿನ ಶರಣ ಬಸವ ಶಿವಯೋಗಿಯ ಪರಿಚಯವನ್ನು ಕವಿ ಮಾಡಿಕೊಟ್ಟರೆ, "ನನ್ನ ಭಕ್ತಿ ನಮನವು" ಪದ್ಯದಲ್ಲಿ ಶಿವಯೋಗಿಯವರನ್ನು ದೀನ ದಲಿತರ ಬಂಧು, ಪರಮ ಪೂಜ್ಯ, ದಾಸೋಹ ಮೂರ್ತಿ ಎಂಬುದಾಗಿ ಹಾಡಿ ಹೊಗಳಿದ್ದಾರೆ. "ನೀನೊಬ್ಬ ದೇವನನ್ನು

ಕಂಡೆ" ಎಂಬಲ್ಲಿ ಶಿವಯೋಗಿಯವರ ಉಪದೇಶಗಳನ್ನು ಸಾರುವತ್ತ ಗಮನ ನೀಡಿದ್ದಾರೆ. ಅವರು ವಿದ್ಯೆಗೆ ನೀಡುತ್ತಿದ್ದ ಮಹತ್ವ, ಅವರಿಗಿದ್ದ ರಾಷ್ಟ್ರ ಭಕ್ತಿ, ರಾಷ್ಟ್ರ ಪ್ರೇಮ, ಕಾರ್ಯಾಸಕ್ತಿಗಳನ್ನು ಕುರಿತ ವಿಚಾರ ಹೇಳಿದ್ದಾರೆ.

" ಎಚ್ಚರ " ಎಂಬ ಗೀತೆಯಲ್ಲಿ ಶಿವಶರಣ ಎಂದರೆ ಹೇಗಿರಬೇಕು ಎಂಬುದನ್ನು ಕವಿ ಬಹು ಸುಂದರವಾಗಿ, ಹಾಗೆಯೇ ನಿಷ್ಠುರವಾಗಿ ವಿವರಿಸಿದ್ದಾರೆ. ಇದಕ್ಕೆ ಸರ್ವಜ್ಞನ ವಚನಗಳ ಸಹಾಯ ಪಡೆದಿದ್ದಾರೆ. ಹಾಗು ಶ್ರೀ ಶಿವಬಸವ ಶಿವಯೋಗಿಗಳು ಇದನ್ನು ಅನುಸರಿಸಿ ಎಲ್ಲರಿಗೂ ಮಾದರಿಯಾಗಿದ್ದರೆಂಬುದನ್ನು ಕವಿ ತಿಳಿಸಿದ್ದಾರೆ. " ದೇವ ಬಂದ ಧರೆಗೆ " ಕವನದಲ್ಲಿ ಕವಿ ಪಂಚಾಚಾರ್ಯರಲ್ಲಿ ಒಬ್ಬರಾಗಿರುವ ಈಶಾನರ ಕುರಿತು ಚರ್ಚಿಸಿದ್ದಾರೆ. ಅವರನ್ನು ಭಕ್ತಿಪೂರ್ವಕವಾಗಿ ಸ್ಮರಿಸಿ ಹಾಡಿರುವುದನ್ನು ಇಲ್ಲಿ ಕಾಣಬಹುದು. "ನಾಗನೂರು" ಇದು ಯೋಗಿವರ್ಯ ಶಿವಬಸವನ ಊರಾದ ನಾಗನೂರಿನ ಕಿರು ಪರಿಚಯ ಮಾಡಿಕೊಡುವ ಕವನವಾಗಿದೆ. ನಾಗನೂರಿನ ಪ್ರಕೃತಿ ವರ್ಣನೆ, ಸ್ಥಳ ವೈಶಿಷ್ಟ್ಯಗಳನ್ನು ಇದರಲ್ಲಿ ಪರಿಚಯಿಸಿದ್ದಾರೆ ಕವಿ ಡಾ. ಸಾ.ಶಿ. ಮರುಳಯ್ಯನವರು.

ಡಾ. ಸಾ.ಶಿ. ಮ.ರವರ ಮತ್ತೊಂದು ಕವನ ಸಂಗ್ರಹ 'ಬಾರೋ ಮೈಲಾರಕೆ'. ಇದರಲ್ಲಿನ ಕವನಗಳು ಈಗಾಗಲೇ ಕ್ಯಾಸೆಟ್ ರೂಪದಿಂದ ಹೊರಬಂದು ಜನರ ಮನ ತಲುಪಿದೆ. ಇದರಲ್ಲಿ ಮೊದಲಿಗೆ ಕವಿ "ಶ್ರೀ ಮೈಲಾರಲಿಂಗ ಸುಪ್ರಭಾತ" ವನ್ನು ರಚಿಸಿದ್ದಾರೆ.

ಮೈಲಾರವೆಂಬ ಪ್ರಕೃತಿ ಸೊಬಗಿನಿಂದ ಕೂಡಿರುವ, ಶಿವನು ಮಾರ್ತಾಂಡ ಭೈರವನಾಗಿ ಇಲ್ಲಿದ್ದ ಎಂಬ ಐತಿಹ್ಯವುಳ್ಳ ಊರಿನ ಸೊಬಗನ್ನು "ಬಾರೋ ಮೈಲಾರಕೆ" "ಮೈಲಾರಕೆ ಬನ್ನಿ" ಎಂಬ ಕವನಗಳಲ್ಲಿ ಬಹು ಸುಂದರವಾಗಿ ಕಟ್ಟುವಂತೆ ವರ್ಣಿಸಿದ್ದಾರೆ.

ಮೈಲಾರ ಮಹಿಮ, ಮಲ್ಲಾರಿಯ ಕುವರ, ಕುರುಬರ ಬಂಗಾರ, ಗೊರವರ ಗುರು, ಮಾರ್ತಾಂಡ ಪ್ರತಿನಿಧಿ, ಮೀನಾಕ್ಷಿಯ ಸುಂದರ ಎಂದೆಲ್ಲಾ ಹೆಸರಿಸುತ್ತಾ ಮೈಲಾರ ಲಿಂಗನಿಗೆ ಜಯವಾಗಲಿ ಎಂದು ಕವಿ "ಜಯವಾಗಲಿ ಜಯ ಚಂದಿರ ಗುರುವರಗೆ" ಎಂಬ ಕವನದಲ್ಲಿ ಹಾಡಿ ಮೈಲಾರ ಲಿಂಗನ ಮೇಲಿನ ತಮ್ಮ ಭಕ್ತಿಭಾವವನ್ನು ತೋಡಿಕೊಂಡಿದ್ದಾರೆ. "ಏಳು ಕೋಟಿ ಮೈಲಾರ ಲಿಂಗ" ಹಾಗು "ಏಳು ಕೋಟೇಳು ಕೋಟಿ " ಕವನಗಳಲ್ಲಿ ಮೈಲಾರ ಲಿಂಗನನ್ನು ಹಲವು ಬಗೆಗಳಲ್ಲಿ ಸುಂದರವಾಗಿ ಕವಿ ವರ್ಣಿಸಿದ್ದಾರೆ.

"ರವಿವಾರ ಬಂತಣ್ಣ ರವಿವಾರ" ಎಂಬ ಗೀತೆಯಲ್ಲಿ ಮೈಲಾರ ಲಿಂಗನ ಮೆಚ್ಚುಗೆಯ ದಿನವಾದ ಭಾನುವಾರದಂದು ಭಕ್ತಾದಿಗಳೆಲ್ಲ ಸೇರಿ ಅವರನ್ನು ಪೂಜಿಸಿ ಪ್ರಾರ್ಥಿಸೋಣ ಎಂದು ಕವಿ ಎಲ್ಲರನ್ನು ಕರೆದಿದ್ದಾರೆ. "ಜಾತ್ರೆಯ ನೋಡು

ಬನ್ನಿರೆ" ಎಂಬಲ್ಲಿ ಮೈಲಾರ ಲಿಂಗನ ಜಾತ್ರೆಯ ಸೊಬಗನ್ನು ರಮ್ಯವಾಗಿ ವಿವರಿಸಿದ್ದಾರೆ. "ಬಾಲ ನಾಯಕ ಬಂದಾನವ್ವಾ" ಎಂಬ ಕವಿತೆಯಲ್ಲಿ ಮೈಲಾರ ಲಿಂಗ ದೇವನ ಬಾಲ್ಯವನ್ನು ತನ್ನದೇ ರೀತಿಯಲ್ಲಿ ಕಲ್ಪಿಸಿಕೊಂಡು ಹಾಡಿ ಅವನ ಬಗೆಗಿನ ತಮ್ಮ ಪ್ರೀತಿ, ಮೆಚ್ಚುಗೆಗಳನ್ನು ಅಭಿವ್ಯಕ್ತಿಗೊಳಿಸಿದ್ದಾರೆ. ಇದರಲ್ಲಿ ಬಾಲಕೃಷ್ಣನ ಲೀಲೆಗಳನ್ನು ತಮ್ಮ ಕಲ್ಪನೆಯ ನೆರವಿಗೆ ತಂದಿದ್ದಾರೆ. "ಮಂಗಲಂ," ಮೈಲಾರ ಲಿಂಗನಿಗೆ ಮಂಗಳ ಕೋರುವ ಗೀತೆಯಾಗಿ ಹೊರಹೊಮ್ಮಿದೆ .

ನೃತ್ಯ ನಾಟಕಗಳು : ಒಂದು ವಿಶ್ಲೇಷಣೆ

ಡಾ॥ ಆರ್. ಸತ್ಯನಾರಾಯಣ

೧. ಉದಯ

ಯಾವುದು ಇಂದ್ರಿಯದ ವಿಷಯ ಸಂವೇದನೆಯನ್ನು ಮಿದುಳು ಗ್ರಹಿಸಿದಾಗ ದೇಹದ ಯಾವುದಾದರೊಂದು ಭಾಗವು ಚಲನಶೀಲವಾಗುತ್ತದೆ ಎಂಬ ಸಂಗತಿಯು ದೇಹವಿಜ್ಞಾನದಿಂದ ಸಿದ್ಧವಾಗಿದೆ. ಹೀಗೆ, ದೈಹಿಕ ಚಲನೆಯು ಚಿತ್ತವೃತ್ತಿಯ ಮೂಲಭೂತ ಅಭಿವ್ಯಕ್ತಿ. ಇವೆರಡಕ್ಕೂ ಇತರೇತರಾಶ್ರಯ ಸಂಬಂಧವಿದೆ. ಆದುದರಿಂದ, ದೈಹಿಕಚಲನೆಯು ಚಿತ್ತವೃತ್ತಿಯನ್ನು ಪ್ರೇರಿಸುತ್ತದೆ. ಚಿತ್ತವೃತ್ತಿಗೂ ದೃಷ್ಟಿ-ಉಸಿರಾಟಗಳಿಗೂ ಇಂತಹದೇ ನಂಟಿದೆ. ಎಂದೇ, ಚಿತ್ತವೃತ್ತಿ ನಿರೋಧವನ್ನು ಈ ಮೂರರ ನಿರೋಧದಿಂದ - ಆಸನ, ಪ್ರಾಣಾಯಾಮ ಮತ್ತು ತ್ರಾಟಕಾದಿ ಷಟ್ಕರ್ಮಗಳ ಮೂಲಕ - ಯೋಗಶಾಸ್ತ್ರವು ವಿಧಿಸುತ್ತದೆ. ಇದಕ್ಕೆ ಪ್ರತಿಯಾಗಿ ಅರ್ಥಸಂವಹನ, ಅರ್ಥನಿರೂಪಣ ಮತ್ತು ಅರ್ಥಗ್ರಹಣಗಳಲ್ಲಿ ದೈಹಿಕ ಚಲನೆಗೆ - ಮುಖ್ಯವಾಗಿ ಕಣ್ಣು, ತುಟಿ, ಕತ್ತು, ಕೈಗಳು, ಕಾಲುಗಳು, ಭಂಗಿಗಳಿಗೆ - ಪ್ರಮುಖವಾದ ಪಾತ್ರವಿದೆ. ಮಾತುಗಳಲ್ಲಿ ಅಡಕವಾಗಿರುವ ಇಂಗಿತ, ಭಾವ, ರಸ ಇತ್ಯಾದಿಗಳ ಅಭಿವ್ಯಕ್ತಿಯು ವಾಚ್ಯಾರ್ಥವನ್ನು ಮೀರಿ ಕಂಠಧ್ವನಿಯಲ್ಲಿ ಕಾಕುವನ್ನೂ ಹುಬ್ಬು, ಕಣ್ಣು, ತುಟಿ, ಕೈ - ಇವುಗಳ ಚಲನೆಯನ್ನೂ ಆಶ್ರಯಿಸುತ್ತದೆ. ನಿತ್ಯಜೀವನದಲ್ಲಿ ಈ ಲೌಕಿಕವ್ಯಾಪಾರವು ವ್ಯಾಪಕವಾಗಿ ಕಂಡುಬರುತ್ತದೆ. ಇದನ್ನೇ ಉಪಬೃಂಹಿಸಿ, ಉತ್ಪ್ರೇಕ್ಷಿಸಿ, ಆಕೃತಿಯಲ್ಲಿ ಸಂಸ್ಕರಿಸಿ ಅಥವಾ ಆದರ್ಶಗೊಳಿಸಿ, ಕಾವ್ಯನಾಟಕಾದಿ ಕಲೆಗಳಲ್ಲಿ ಬಳಸುವ ಮಾತುಗಳಲ್ಲಿ ಹೇಳಲು ಸಾಧ್ಯವಾಗುವ ಮತ್ತು ಸಾಧ್ಯವಾಗದ ಅರ್ಥಗಳನ್ನು ಬಲಪಡಿಸಿ, ಸ್ಪಷ್ಟಗೊಳಿಸಿ, ರಸಪುಷ್ಟಿ ಪ್ರಯೋಜಕವಾಗುವಂತೆ ಮಾಡುವ ವಿಧಾನಕ್ಕೆ ಅಭಿನಯವೆಂದು ಹೆಸರು. ಇಂತಹ ಅಂಗ-ಪ್ರತ್ಯಂಗ-ಉಪಾಂಗಗಳ ವಿಕ್ಷೇಪವು ವಾಗರ್ಥಪುಷ್ಟಿಗೆ ಉಪಕಾರಕವಾಗಿದ್ದರೆ ಅದಕ್ಕೆ ನೃತ್ಯವೆಂದೂ, ಅದನ್ನು ಮೀರಿ ಶುದ್ಧಸೌಂದರ್ಯಾಕೃತಿಯ ಅಭಿವ್ಯಕ್ತಿ, ಸಂವಹನಗಳಿಗೆ ಮಾತ್ರ ಪ್ರಯೋಜಕವಾಗಿದ್ದರೆ ನೃತ್ತವೆಂದೂ ಶಾಸ್ತ್ರೀಯ ಪರಿಭಾಷೆಯಿದೆ.

ದೈಹಿಕ ಚಲನೆಯು ಇನ್ನೂ ಒಂದು ಮಾನಸ ಸ್ತರದಲ್ಲಿ ಕೆಲಸಮಾಡುತ್ತದೆ : ಮಾನಸಿಕ ಹಾಗೂ ದೈಹಿಕ ಬಿಗುಹು (tension) ಮತ್ತು ಒತ್ತಡಗಳ ಬಿಡುಗಡೆಗೆ ಅದು ನೆರವಾಗಿ, ಸ್ವಾಸ್ಥ್ಯವನ್ನು ಉಂಟುಮಾಡುತ್ತದೆ. ಆದುದರಿಂದ ಸ್ವಾಭಿವ್ಯಕ್ತಿಗೂ ಸ್ವಾಂತಾಭಿವ್ಯಕ್ತಿಗೂ ದೈಹಿಕ ಚಲನೆಯು ಮಾಧ್ಯಮವಾಗಿದೆ. ಅಲ್ಲದೆ, ವ್ಯಕ್ತಿಯಲ್ಲಾಗಲಿ ಸಮುದಾಯದಲ್ಲಾಗಲಿ ಮಾತು ಸಾಕಾಗದಷ್ಟು ಅಪ್ರಬುದ್ಧವಾಗಿರುವ ಅವಸ್ಥೆಯಲ್ಲಿ ಅಭಿವ್ಯಕ್ತಿಯ ಅರಕೆಯನ್ನು ದೈಹಿಕಚಲನೆಯೂ ಸಂಜ್ಞೆಗಳೂ ಪೂರೈಸುತ್ತವೆ. ಮಾನವನು

ವೀರರೌದ್ರ ಶೋಕಾದಿ ಲೌಕಿಕ ರಸಗಳ ಆವೇಶಕ್ಕೆ ವಶನಾದಾಗ ದೈಹಿಕ ಚಲನೆಯು ತನಗೆ ತಾನೇ ಸಹಜ ಪ್ರತಿಕ್ರಿಯೆಯಾಗಿ ಹುಟ್ಟುತ್ತದೆ. ಇದನ್ನು ಸೌಂದರ್ಯಪ್ರಜ್ಞೆಯೆಂಬ ಅಲೌಕಿಕ ರಸದಲ್ಲಿ ತೊಡಗಿಸಿ ಕಟ್ಟಳೆ ಮತ್ತು ನಿಯಮಗಳ ಸಂಯಮಕ್ಕೆ ಒಳಪಡಿಸಿದಾಗ ಲೌಕಿಕರಸದ ಆವೇಗವು ಉಪಶಾಂತವಾಗಿ ಆಸ್ವಾದದ ಆಹ್ಲಾದವನ್ನು ಕೊಡುತ್ತದೆ. ಕೇವಲ ಭಾವೋದ್ವೇಗದಲ್ಲಿ ಕುಣಿದಾಡುವಾಗ ನೃತ್ತದ, ಮತ್ತು ವಾಗರ್ಥಸಂವಹನಕ್ಕೆ ಉಪಕಾರಕವಾಗಿ ಕುಣಿದಾಡುವಾಗ ನೃತ್ಯದ, ಪೂರ್ವಾವಸ್ಥೆಗಳು ಉದಯಿಸುತ್ತವೆ. ಇದರಿಂದಾಗಿ, ನೃತ್ಯ-ನೃತ್ತಗಳು ಎಲ್ಲ ಪ್ರಾಚೀನ ಮತಧರ್ಮಗಳಲ್ಲಿಯೂ ಆರಾಧನಾಕ್ರಮಗಳ ಅವಿಭಾಜ್ಯ ಅಂಗಗಳಾದವು. ಅವು ಈಗಲೂ ವಿವಿಧ ಅವಶೇಷಗಳಲ್ಲಿ ಉಳಿದುಕೊಂಡಿವೆ.

೨. ನಾಟ್ಯ - ಅಭಿನಯ

ಕಲೆಯು ಶ್ರವ್ಯ ಮತ್ತು ದೃಶ್ಯವೆಂದು ಎರಡು ವಿಧ. ಮಾತುಗಳನ್ನುಂಟು ಮಾಡುವ ಶಬ್ದಪರಂಪರೆಯನ್ನು ಕೇಳುವುದರಿಂದ ರಸಪ್ರತೀತಿಯಾದರೆ ಅದು ಶ್ರವ್ಯ; ಮಾತುಗಳನ್ನು ಕೇಳುವುದರಿಂದಲೂ ಅವುಗಳಿಂದ ಹುಟ್ಟುವ ರೂಪಗಳನ್ನು ನೋಡುವುದರಿಂದಲೂ ರಸಾಸ್ವಾದನವಾದರೆ ಅದು ದೃಶ್ಯ. ನಾಟಕ ಕಲೆಯು ಶ್ರವ್ಯವೂ ಹೌದು, ದೃಶ್ಯವೂ ಹೌದು. ಅದು ಉಳಿದೆಲ್ಲ ಕಲೆಗಳನ್ನೂ ಒಳಗೊಂಡ ಸಂಪೂರ್ಣ ಪರಿಪೂರ್ಣ ರಂಗ; ನಾಟ್ಯಶಾಸ್ತ್ರವನ್ನು ಮೊಟ್ಟಮೊದಲಿಗೆ ವರ್ಣಿಸಿದ ಭರತಮುನಿಯು ಅದನ್ನು 'ನ ತಜ್ಞಾನಂ ನ ತಚ್ಛಿಲ್ಪಂ ನ ಸಾ ವಿದ್ಯಾ ನ ಸಾ ಕಲಾ ನಾಸೌ ಯೋಗೋ ನ ತತ್ಕರ್ಮ ನಾಟ್ಯೇಽಸ್ಮಿನ್ ಯನ್ನದೃಶ್ಯತೇ' ಎಂದು ಪ್ರಶಂಸಿಸುತ್ತಾನೆ. ಲೋಕದ ಜನರು ಧರ್ಮಸಮ್ಮತವಾದ ಮತ್ತು ವೇದೋಪ್ಯವಸತಿಯನ್ನುಳ್ಳ ಕ್ರೀಡೆಯೊಂದರಿಂದ ಮನೋರಂಜನೆಯನ್ನೂ ಸನ್ಮಾರ್ಗಾಸರಣೆಯನ್ನೂ ಒಮ್ಮೆಗೇ ಸಾಧಿಸಲು ಅನುಕೂಲಿಸುವಂತೆ ಬ್ರಹ್ಮನು ಲೋಕವೃತ್ತಾನುಕರಣವೂ ನಾನಾವಸ್ಥಾಂತರಾತ್ಮಕವೂ ನಾನಾ ಭಾವಾನುಕೀರ್ತನವೂ ಸಕಲಕಲಾಸ್ಪದವೂ ಲೋಕೋಪದೇಶ ಜನನವೂ ಆಗಿರುವಂತೆ ನಾಟ್ಯವೇದವೆಂಬ ಐದನೆಯ ವೇದವನ್ನು ಸೃಷ್ಟಿಸಿದನು. ಅದು ಧರ್ಮ, ಕ್ರೀಡೆ, ಅರ್ಥ, ಶಮ, ಹಾಸ್ಯ, ಯುದ್ಧ, ಕಾಮ, ವಧ - ಎಲ್ಲವನ್ನೂ ಸ್ವಲ್ಪ ಸ್ವಲ್ಪವಾಗಿ ಒಳಗೊಂಡು, ಧರ್ಮಪ್ರವರ್ತರಿಗೆ ಧರ್ಮ, ಕಾಮಾಸಕ್ತರಿಗೆ ಕಾಮ, ದುರ್ವಿನೀತರಿಗೆ ನಿಗ್ರಹ, ವಿನೀತರಿಗೆ ದಮ, ಅಳ್ಳೆದೆಯವರಿಗೆ ದಿಟ್ಟತನ, ಶೂರರಿಗೆ ಉತ್ಸಾಹ, ಪಾಮರರಿಗೆ ತಿಳಿವಳಿಕೆ, ವಿದ್ವಾಂಸರಿಗೆ ಪಾಂಡಿತ್ಯ - ಹೀಗೆ ಬೇರೆ ಬೇರೆಯವರಿಗೆ ಬೇಕುಬೇಕಾದುದನ್ನೆಲ್ಲ ಕೊಡುವ ಕಾಮಧೇನು. ಸಮಾಜದ ಎಲ್ಲ ಸ್ತರಗಳ ಜನರ ಎಲ್ಲ ಮಾತುಗಳನ್ನೂ ಕರ್ಮಗಳನ್ನೂ ಭಾವಗಳನ್ನೂ ಅವಸ್ಥೆಗಳನ್ನೂ ಲೋಕೋಪದೇಶಕ್ಕಾಗಿ ರಂಗದ ಮೇಲೆ ಉದಾಹರಿಸಿ ತೋರಿಸಬೇಕಾಗಿರುವುದರಿಂದ ನಾಟ್ಯಕಲೆಯು ಇವುಗಳನ್ನು ತೋರಿಸಲು ಬೇಕಾಗುವ ಸಾಧನೋಪಕರಣಗಳನ್ನೂ

ತಂತ್ರ ವಿಧಾನಗಳನ್ನೂ ನಿರ್ಮಿಸಿಕೊಂಡಿದೆ. ಹೀಗೆ ತೋರಿಸುವುದಕ್ಕೆ ಅಭಿನಯವೆಂದು ಹೆಸರು. ಹಿಂದಿನ ಕಾಲದಲ್ಲಿ ಯಾವುದೋ ಅವಸ್ಥೆ, ಭಾವ, ಸನ್ನಿವೇಶ ಮತ್ತು ಕ್ರಿಯೆಗಳಲ್ಲಿ (ಚಾರಿತ್ರಕವಾಗಿ, ಪೌರಾಣಿಕವಾಗಿ ಅಥವಾ ಕಾಲ್ಪನಿಕವಾಗಿ) ಇದ್ದ ವ್ಯಕ್ತಿಯ (ಅನುಕಾರ್ಯ) ಆಯಾ ಅವಸ್ಥೆ ಮುಂತಾದವುಗಳನ್ನು ಸಹೃದಯನಿಗೆ ಅಭಿಮುಖವಾಗಿರುವಂತೆ ತಂದು ನಿಲ್ಲಿಸಿ ತೋರಿಸುವುದರಿಂದ ಅದಕ್ಕೆ ಅಭಿನಯವೆಂದು ಹೆಸರಾಯಿತು. ಅದು ಆಂಗಿಕ, ವಾಚಿಕ, ಆಹಾರ್ಯ ಮತ್ತು ಸಾತ್ತ್ವಿಕವೆಂದು ನಾಲ್ಕು ಬಗೆ. ಅನುಕಾರ್ಯನನ್ನು ಜ್ಞಾಪಿಸುವ ಅಥವಾ ಸ್ಫುರಿಸುವ ವೇಷಭೂಷಣಾದಿಗಳು, ಸನ್ನಿವೇಶವನ್ನು ಸ್ಫುರಿಸುವ ನೇಪಥ್ಯ - ಇದಕ್ಕೆ ಆಹಾರ್ಯವೆಂದು ಹೆಸರು. ಅವನು ಆಡಿದ ಮಾತು, ಹಾಡು ಇತ್ಯಾದಿಗಳು ವಾಚಿಕಾಭಿನಯ. ಇದಕ್ಕೆ ಪುಷ್ಟಿ, ಸ್ಪಷ್ಟತೆಗಳನ್ನು ನೀಡಲು ವಾಚ್ಯಾರ್ಥವನ್ನು ಮೀರುವ ಉದ್ದಿಷ್ಟಾರ್ಥಗಳನ್ನು ಅಭಿವ್ಯಕ್ತಗೊಳಿಸಲು ಮಾಡಬೇಕಾಗುವ ಅಂಗ-ಪ್ರತ್ಯಂಗ-ಉಪಾಂಗಗಳ ವಿಕ್ಷೇಪ, ಭಂಗಿ ಇವುಗಳೇ ಆಂಗಿಕಾಭಿನಯ. ಅನುಕಾರ್ಯನು ಆಯಾ ಸನ್ನಿವೇಶದಲ್ಲಿ ಅನುಭವಿಸುವ ಹರ್ಷ. ಸ್ತಂಭ, ಅಶ್ರು, ರೋಮಾಂಚ ಮುಂತಾದ ಭಾವನಾವ್ಯಾಪಾರಗಳ ಅಭಿನಯವು ಸಾತ್ತ್ವಿಕವೆನ್ನಿಸಿಕೊಳ್ಳುತ್ತದೆ. ಇವುಗಳ ಪೈಕಿ ವಾಚಿಕಾಭಿನಯವೇ ಪ್ರಧಾನವೆಂದೂ ಉಳಿದ ಮೂರು ಅದಕ್ಕೆ ಅಧೀನವೆಂದೂ ನಾಟ್ಯಶಾಸ್ತ್ರವು ವಿಧಿಸುತ್ತದೆ.

೩. ರೂಪಕಗಳಲ್ಲಿ ಸಂಗೀತ ನೃತ್ಯಗಳು

ಭರತಮುನಿಯು ನಾಟ್ಯಶಾಸ್ತ್ರವನ್ನು ರಚಿಸಿದ್ದು ತನ್ನ ಕಾಲದಲ್ಲಿ ರೂಢಿಸಿದ್ದ ಹತ್ತು ನಾಟ್ಯಪ್ರಕಾರಗಳನ್ನು ವರ್ಣಿಸಲೆಂದು. ಇವಕ್ಕೆ 'ರೂಪ(ಕ)'ಗಳೆಂದು ಹೆಸರು. 'ಪಾಠ್ಯ'ದ ಎಂದರೆ ಮಾತಿನ, ಅರ್ಥವನ್ನು ಪ್ರತ್ಯಕ್ಷಗೊಳಿಸುವುದರಿಂದ, ಎಂದರೆ ಕಣ್ಣಿನ ಮುಂದೆ ತಂದು ನಿಲ್ಲಿಸುವುದರಿಂದ ಇಂತಹ ಪ್ರಯೋಗಕ್ಕೆ ರೂಪ(ಕ)ವೆಂದು ಸಂಜ್ಞೆಯುಂಟಾಯಿತು. ಭರತಮುನಿಯು 'ನಾಟಿಕಾ' ಎಂಬ ಒಂದು (ಉಪ) ರೂಪಕದಲ್ಲಿ ಮಾತ್ರ ಗೀತವಾದನ ನರ್ತನಗಳನ್ನು ವಿಧಿಸುತ್ತಾನೆ. ಅವನು ಗೀತಿ ಎಂಬ ಏಳು ಬಗೆಯ ಹಾಡುಗಳನ್ನು ನಿರೂಪಿಸಿದ ಮೇಲೆ ಹತ್ತು ಲಾಸ್ಯಾಂಗಗಳನ್ನು ವಿವರಿಸುತ್ತ, ಅವುಗಳಲ್ಲಿ ಪ್ರತಿಯೊಂದರಲ್ಲೂ ಗೀತವಾದನನರ್ತನಗಳ ಪೈಕಿ ಒಂದನ್ನೋ, ಎರಡನ್ನೋ ಎಲ್ಲವನ್ನೋ ಇರಬೇಕೆನ್ನುತ್ತಾನೆ. ಅವನನ್ನು ವ್ಯಾಖ್ಯಾನಿಸುತ್ತ ಅಭಿನವಗುಪ್ತಾಚಾರ್ಯನು ಹೇಯರೂಪಗಳಾದ, ನೃತ್ತರೂಪಗಳಾದ ಅಥವಾ 'ರಾಗಕಾವ್ಯ'ಗಳಾದ ಕೆಲವು ಉಪರೂಪಕಗಳನ್ನು ಬಣ್ಣಿಸುತ್ತಾನೆ. ಕೋಹಲಮುನಿಯು ನೃತ್ತಗಾನಗಳನ್ನುಳ್ಳ ಹತ್ತು 'ಮಾರ್ಗ' ಉಪರೂಪಕಗಳನ್ನು ಭಾಣಿಕ, ಪ್ರೇರಣ, ರಾಮಕ್ರಿಡ, ರಾಗಕಾವ್ಯ, ಹಲ್ಲೀಸ, ರಾಸ ಎಂಬ ಆರು ನೃತ್ತಪ್ರಧಾನವಾದ 'ದೇಶೀ' ಉಪರೂಪಕಗಳನ್ನೂ ಪ್ರಪ್ರಥಮವಾಗಿ ಹೇಳಿದ್ದಾನೆ. ಅಗ್ನಿಪುರಾಣದಲ್ಲಿ (ಭರತಮುನಿಯೂ ಹೇಳಿರುವ ಹತ್ತುರೂಪಗಳನ್ನು ಒಳಗೊಂಡ) ಇಪ್ಪತ್ತೇಳು

ನಾಟಕಪ್ರಕಾರಗಳನ್ನು ಹೇಳಿದೆ. ವಿವಿಧ ಶಾಸ್ತ್ರಕಾರರು ಒಟ್ಟು ನಲವತ್ತೇಳು ಉಪರೂಪಕಗಳನ್ನು ಹೆಸರಿಸಿ ವಿವರಿಸಿದ್ದಾರೆ. ಇವುಗಳಲ್ಲಿ ನೃತ್ತಪ್ರಧಾನವಾದವುಗಳೂ (ನೃತ್ಯವಲ್ಲ) ಇದ್ದವೆಂಬುದನ್ನು ಗಮನಿಸಬೇಕು.

ದೃಶ್ಯಪ್ರಯೋಗಗಳಲ್ಲಿ ಹಾಡು, ವಾದ್ಯ ಮತ್ತು ಕುಣಿತಗಳು ಇರುವುದು ಭಾರತದಲ್ಲಿ ಮಾತ್ರ ಎಂದೇನೂ ಅಲ್ಲ. ಇವು ಪ್ರಾಚೀನ ಗ್ರೀಕ್ ನಾಟಕಗಳಲ್ಲಿಯೂ ಇದ್ದವು; ಚೀಣಾ ಮತ್ತು ಜಪಾನಿನ ರೂಪಕಗಳಲ್ಲಿ ಇಂದಿಗೂ ಉಳಿದುಕೊಂಡಿವೆ. ಪಾಶ್ಚಿಮಾತ್ಯ ದೇಶಗಳಲ್ಲಿಯೂ ವಿಷಾದಾಂತ (tragedy), ಸುಖಾಂತ (comedy), ಪ್ರಹಸನ (farce), ಸುದೈವೀ-ಪವಾಡ (miracle), ಅದ್ಭುತನಿಗೂಢ (mystery), ಮೂಕ (pantomime), ಆರಭಟೀ (mask), ಭಾವುಕಗೇಯ (melodrama), ನೃತ್ಯರೂಪಕ (ballet), ಮತ್ತು ಗೀತರೂಪಕ (opera), ಎಂಬ ದಶರೂಪಕಗಳು ಪ್ರಧಾನವಾಗಿಯೂ, ಬುರ್ಲೆಸ್ಕ್ (burlesque), ಬುರ್ಲೆಟ (burletta), ಎಕ್ಸ್‌ಟ್ರಾವೆಗೆಂಜ್ಸ (extravaganza), ಅಕ್ವಾಟಿಕ್‌ಡ್ರಾಮ (aquaticdrama), ಕಮಡಿಯ ಡೆಲ್ ಆರ್ಟ್ (commedia del art), ಮೈಮ್ (mime), ಮಾನೊಲೋಗ್ (monologue), ಆಪೆರೆಟ್ಟ (operetta), ಪೆಜೆಂಟ್ (pageant), ರೆವ್ಯೂ (revue), ಮಾಸ್ಕರೇಡ್ (masquerade), ಇಂಟರ್ಲೂಡ್ (interlude), ಮಾರಿಯೊನೆಟ್ (marionette), ಮೊರಾಲಿಟಿ ಪ್ಲೇ (morality play), ಇತ್ಯಾದಿ ಹಲವು ಇತರ ಪ್ರಭೇದಗಳು ತಕ್ಕಮಟ್ಟಿಗೂ ಪ್ರಚಾರದಲ್ಲಿವೆ. ಇವುಗಳ ಪೈಕಿ ಬ್ಯಾಲೆಯು ಮಾತುಗಳೇ ಇಲ್ಲದೆ ವಾದ್ಯಸಂಗೀತಮಾತ್ರದ ಹಿನ್ನೆಲೆಯಲ್ಲಿ ನೃತ್ಯವೊಂದೇ ಇರುವ ರೂಪಕಪ್ರಕಾರ. ಆಪೆರ ಎಂಬುದು ಆಹಾರ್ಯಸಮೃದ್ಧವಾದ, ವಾದ್ಯಮೇಳದ ಸಹಯೋಗವಿರುವ ಗೇಯಮಾತ್ರ ಪ್ರಕಾರ. ಮೆಲೊಡ್ರಾಮ ಎಂಬುದು ಪಾತ್ರಸಂಭಾಷಣೆಗಳಿಗೆ ವಾದ್ಯಸಂಗೀತದ ಹಿನ್ನೆಲೆಯಲ್ಲಿ ಅಭಿನಯವಿರುವ ನಾಟಕವಿಧ. ಬುರ್ಲೆಟ ಎಂಬುದು ಗೇಯಪ್ರಹಸನ. ಬ್ಯಾಲೆಯಲ್ಲಿ ನೃತ್ತ ಮತ್ತು ಸಂಗೀತಗಳ ಹಾಗೂ ಆಪೆರದಲ್ಲಿ ಸಂಗೀತದ ಪ್ರಯೋಗವು ಹೇಗಿರುತ್ತದೆಂಬುದರ ಸ್ಥೂಲಪರಿಚಯವನ್ನು ಮಾಡಿಸುವುದು ಈ ಲೇಖನಕ್ಕೆ ಪ್ರಸಕ್ತವಾಗಿದೆ.

೪. ಬ್ಯಾಲೆಯಲ್ಲಿ ನರ್ತನ

ಬ್ಯಾಲೆಯು ಒಂದು ಶಾಸ್ತ್ರೀಯ ನೃತ್ಯಪ್ರಕಾರ, ಅದಕ್ಕೆ ಮೂಕಾಭಿನಯ, ಗೀತ, ವಾದ್ಯ ನೃತ್ತ, ನೃತ್ಯ, ರಂಗಸಜ್ಜಿಕೆ ಮತ್ತು ಚಿತ್ರಕಲೆಗಳು ಅಂಗಗಳು. ಇವುಗಳೆಲ್ಲದರ ವಿಶೇಷ ತಂತ್ರಗಳ ಯಥೋಚಿತ ಸಂಯೋಜನೆಯಿಂದ ಅದು ಏರ್ಪಡುತ್ತದೆ. ವಾಗರ್ಥಗರ್ಭಿತವಾದ, ನಾಟಕೀಯ ಸನ್ನಿವೇಶಗಳನ್ನುಳ್ಳ ಒಂದು ಕಥೆಯನ್ನು ಅದು ಅನೇಕವೇಳೆ ಆಧರಿಸುತ್ತದೆ; ಒಮ್ಮೊಮ್ಮೆ ಅದು ಯಾವುದಾದರೂ ಒಂದು ನಿರ್ದಿಷ್ಟ

ಸನ್ನಿವೇಶದಿಂದ ಸೀಮಿತವಲ್ಲದ, ವೀರಕರುಣಾದಿ ರಸಗಳ ಸಾಮಾನ್ಯಾವಸ್ಥೆಯ ಅಥವಾ ಶುದ್ಧರೂಪದ ಅಭಿನಯರೂಪವಾಗಿಯೂ ಇರುವುದುಂಟು. ಆದರೆ ಅದರ ಯಾವುದೇ ಆವಿಷ್ಕಾರದಲ್ಲಿ ಒಂದೇ ಒಂದು ಮಾತೂ ಇರುವುದಿಲ್ಲ. ಹೀಗೆ ಚತುರ್ವಿಧಾಭಿನಯಗಳ ಪೈಕಿ ವಾಚಿಕಾಭಿನಯರಹಿತವಾಗಿ, ಆಂಗಿಕಾಭಿನಯ-ಮಯವಾಗಿ, ಸಾತ್ತ್ವಿಕಾಭಿನಯಪ್ರಧಾನವಾಗಿ, ಆಹಾರ್ಯಾಭಿನಯ ವಿಪುಲವಾಗಿ ಕಂಗೊಳಿಸುವ ಪ್ರಯೋಗವಿದು. ಕಥಾನಕದಲ್ಲಿರುವ ಪಾತ್ರಗಳನ್ನು ಮಾತ್ರವಲ್ಲದೆ ಪರಿಸರದ ಮೃಗ, ಪಕ್ಷಿ, ಹೂ, ಬಳ್ಳಿ ಮುಂತಾದವುಗಳನ್ನೂ ಬ್ಯಾಲೆಯ ನರ್ತಕನರ್ತಕಿಯರೇ ಅಭಿನಯಿಸುತ್ತಾರೆ. ರಸಭಾವಗಳನ್ನು ದೃಷ್ಟಿ, ತುಟಿ, ಮುಖರಾಗ, ಗತಿವೇಗ, ಭಂಗಿ ಇತ್ಯಾದಿಗಳಿಂದ ಪ್ರತೀತಿಗೊಳಿಸುತ್ತಾರೆ. ಅವರಿಗೆ ದೀರ್ಘಕಾಲೀನವೂ ಬಹುವಾದ ಶ್ರಮಸಹಿಷ್ಣುತೆ, ತಾಳ್ಮೆ, ಪರಿಶ್ರಮಗಳನ್ನು ಅಪೇಕ್ಷಿಸುವಂತಹದೂ ಆದ ವಿಶೇಷ ತರಪೇತನ್ನು ಸಿದ್ಧಗೊಳಿಸಲಾಗುತ್ತದೆ. ನೀಳವಾದ ತೋಳು, ತೊಡೆ, ಕುತ್ತಿಗೆ, ನಾತಿಕೃಶವೂ ನಾತಿಸ್ಥೂಲವೂ ಆದ ಮೈ, ಅಂಗಸೌಷ್ಠವ, ರೇಖಾ-ಜವ-ಸ್ಥಿರತೆ ಮುಂತಾದ ನೃತ್ತಕಲೆಯ ಅಂತಃಪ್ರಾಣಗಳು - ಇವು ಸಹಜವಾಗಿಯೇ ಇದ್ದರೆ ಮಾತ್ರ ಬ್ಯಾಲೆ ಶಿಕ್ಷಣಕ್ಕೆ ಪ್ರವೇಶವು (ಎಂಟರಿಂದ ಹತ್ತುವರ್ಷ ವಯಸ್ಸಿನ ಒಳಗೆ) ದೊರೆತು ಕಡೆಯಪಕ್ಷ ಹನ್ನೆರಡು ವರ್ಷಗಳ ಕಾಲ ಗುರುಕುಲವಾಸದಲ್ಲಿ, ನಿರ್ದಿಷ್ಟವಾದ, ಸೋಪಾನಕ್ರಮದ ಪಠ್ಯವನ್ನುಳ್ಳ ಕಠಿನಶಿಕ್ಷಣವು ನಡೆಯುತ್ತದೆ. ನರ್ತಕಿಗೆ ದೇಹಲಾಘವದಷ್ಟೇ ಪಾದಲಕ್ಷಣವೂ ಮುಖ್ಯ ಹೆಜ್ಜೆಯ ಬಾಗು ಮತ್ತು ಮೂಳೆಗಳ ವಿನ್ಯಾಸವು ಇದರ ಮುಖ್ಯಾಂಶ. ಇವು ಪ್ರಮಾಣಬದ್ಧವಾಗಿದ್ದು ಬಗೆಬಗೆಯ ಪಾದಚಲನೆ, ಎಗರುವುದು, ಹಾರುವುದು, ಜಾರುವುದು ಮುಂತಾದ ಕ್ರಿಯೆಗಳಿಗೆ ಅನುಕೂಲಿಸುವಂತಿರಬೇಕು, ಮೊದಲನೆಯ ಮೂರು ವರ್ಷಗಳಲ್ಲಿ ಶಿಕ್ಷಣಾರ್ಥಿಯು ಎದೆಮಟ್ಟದಲ್ಲಿ ಅಡ್ಡದಂಡವನ್ನು (ಬಾರ್) ಹಿಡಿದು ನಿಲುವು, ನಡೆ, ಹೆಜ್ಜೆಗಳು, ಭಂಗಿಗಳು ಮುಂತಾದವುಗಳನ್ನು ಕಲಿಯುತ್ತಾಳೆ (ಗುರುಕುಲದ ಭರತನಾಟ್ಯ ಶಿಕ್ಷಣದಲ್ಲಿಯೂ ಹೀಗೆಯೇ ಇದೆಯೆಂಬುದನ್ನಿಲ್ಲಿ ನೆನೆಯಬೇಕು). ನಂತರವೇ ಕಾಲಿನ ಹೆಬ್ಬೆರಳ ತುದಿಯ ಮೇಲೆ ನಿಂತು ಸುತ್ತುವುದನ್ನು (ತಿರಿಪ) ಪ್ರಾರಂಭಿಸಲಾಗುತ್ತದೆ.

ಐದು ಬಗೆಯ ಪಾದವಿನ್ಯಾಸಗಳು, ಏಳು ಬಗೆಯ ಶರೀರ ಚಲನವಲನಗಳು, ಹಾರುವುದು, ಎಗರುವುದು, ಪ್ರೇಕ್ಷಕರು ಉಸಿರಾಡುವುದನ್ನೇ ಮರೆತು ಮುಗ್ಧರಾಗಿ ನೋಡುವ ತಿರಿಪಗಳು, ಮೂಳೆಗಳೇ ಇಲ್ಲವೇನೋ ಎನ್ನಿಸುವಂತಹ ಭಂಗಿಗಳು, ಗರಿಗಿಂತ ಹಗುರವೆನ್ನಿಸುವಷ್ಟು ದೇಹಲಾಘವ, ಮಾತಿನ ಹಂಗೇ ಇಲ್ಲದೆ ಅಚೇತನ, ಸಚೇತನಗಳನ್ನು ಸ್ಫುರಿಸುವ ಅಭಿನಯ, ವಾಗರ್ಥವನ್ನು ಮೀರಿದ ರಸಗಳ ಪ್ರತೀತಿ, ದಿಗ್ಭ್ರಮೆಗೊಳಿಸುವ ವೇಗಗಳು, ಹೆಜ್ಜೆಯೇ ಇಲ್ಲವೇನೋ ಎನ್ನುವಂತಹ ಹಂಸಗಮನ, ಗರುಡನಂತೆ ಲಾವಣ್ಯಮಯ ಹಾರಾಟ ಇತ್ಯಾದಿಗಳಿಂದ ಬ್ಯಾಲೆಯು ಅನನ್ಯವಾದ ಶಾಸ್ತ್ರೀಯ ನೃತ್ಯಪ್ರಕಾರವೆನಿಸಿದೆ. ಅದರ ತಂತ್ರಕೌಶಲವು

ಅನುಪಮವಾದುದು; ಮಾನವ ಶರೀರ ರಚನೆಗೆ ಅಸಹಜವಾದುದೆಂದು ಹಲವು ವೇಳೆ ಭಾಸವಾಗುತ್ತದೆ. ಕಣ್ಣು ಹಿಂಬಾಲಿಸಲಾಗದ ವೇಗ, ಗಾಳಿಯಲ್ಲಿ ತೇಲುವುದು, ತೊನೆಯುವುದು, ಒಬ್ಬರನ್ನೊಬ್ಬರು ಅಂಗೈಮೇಲೆ ಲೀಲಾಜಾಲವಾಗಿ ನಿಲ್ಲಿಸಿಕೊಂಡು ಹಾರಾಡುವುದು, ಎರಡೂ ಪಾದಗಳನ್ನು ನೆಲಕ್ಕೆ ಸಮಾನಾಂತರವಾಗಿರುವಂತೆ ಹಾರುವುದು, ಹಿಮ್ಮಡಿಯ ಮೇಲೆ ನಿಂತು ನೇರವಾಗಿ ನೆಲದ ಸಮೀಪಕ್ಕೆ ವಾಲಿಕೊಂಡು ತಿರುಗುವುದು. ಇತ್ಯಾದಿ ಕೌಶಲಗಳು ಅದ್ಭುತ ರಮಣೀಯವಾಗಿರುತ್ತವೆ. ಬ್ಯಾಲೆಯ ನರ್ತಕನರ್ತಕಿಯರು ಲಯ, ಪಾದಚಲನೆ ಮತ್ತು ದೇಹಚಲನೆಗಳ ಮೇಲೆ ಸಾಧಿಸುವ ಅಧಿಕಾರವು ಬೇರೆ ಯಾವ ನೃತ್ತಪ್ರಕಾರಗಳಲ್ಲೂ ಕಂಡುಬರುವುದಿಲ್ಲ. ಭಾರತೀಯ ಸಂಸ್ಕೃತಿಯ ಸ್ವಮರ್ಯಾದೆಯಲ್ಲಿ ಬ್ಯಾಲೆಯನ್ನು ನರ್ತಿಸುವ ಪ್ರಯತ್ನಗಳು ಅಷ್ಟಿಷ್ಟು ನಡೆದಿವೆಯಾದರೂ ಪಾಶ್ಚಿಮಾತ್ಯ ಜಗತ್ತಿನ ವಿಶೇಷವಾಗಿ ರಷ್ಯದೇಶದ-ಬ್ಯಾಲೆಯ ತಂತ್ರೋತ್ಕೃಷ್ಟತೆಯನ್ನು ಸಾಧಿಸಲು ಆಗಿಲ್ಲವೆಂದೇ ಹೇಳಬೇಕು. ಬ್ಯಾಲೆ ಎಂಬುದು ಈಗ ಭಾರತದಲ್ಲಿ ಯಾವುದೇ ಗುಣಮಟ್ಟದ ನೃತ್ಯನಾಟಕಕ್ಕೆ ಪರ್ಯಾಯ ಶಬ್ದ ಎಂಬ ಹೀನಾರ್ಥದಲ್ಲಿ ಬಳಕೆಯಲ್ಲಿದೆ.

೫. ಬ್ಯಾಲೆಯಲ್ಲಿ ಸಂಗೀತ

ಬ್ಯಾಲೆಗೆ ಅಳವಡುವ ಸಂಗೀತವು ಸಾಮಾನ್ಯವಾಗಿ ಶಾಸ್ತ್ರೀಯ ಶೈಲಿಯದೇ ಆಗಿರುತ್ತದೆ. ಇತರ ಸಂಗೀತ ಶೈಲಿಗಳನ್ನೂ - ಉದಾ. ಸುಗಮ, ಜಾನಪದ - ಯಶಸ್ವಿಯಾಗಿ ಬಳಸಬಹುದು. ಯಾವಾಗ ಯಾವ ಶೈಲಿಯದನ್ನು ಪ್ರಯೋಗಿಸಬೇಕೆಂಬುದು ಆಯಾ ಕಥಾಸಂದರ್ಭವನ್ನೂ ನೃತ್ಯಸಂಯೋಜಕ-ಸಂಗೀತ ಸಂಯೋಜಕರ ರುಚಿ, ಆವಶ್ಯಕತೆಗಳನ್ನೂ ಅವಲಂಬಿಸುತ್ತದೆ. ಯಾವುದಾದರೂ ಒಂದೇ ಶೈಲಿಯ ಸಂಗೀತವನ್ನು ಇಡೀ ಬ್ಯಾಲೆಯ ಉದ್ದಕ್ಕೂ ಉಪಯೋಗಿಸಬೇಕೆಂದಿಲ್ಲ. ಇಲ್ಲಿ ಮುಖ್ಯವೆಂದರೆ ಆಯಾ ಸಂಗೀತದ ರಾಗಾಂಶವು ಬ್ಯಾಲೆಯ ಆಯಾ ಭಾವರಸಗಳ, ಮತ್ತು ಲಯತಾಳಗಳು ಪಾದಚಲನೆ, ದೇಹಚಲನೆಗಳು ಒಳಗೊಳ್ಳುವ ಗತಿಯ ಪ್ರತೀತಿ, ಪುಷ್ಟಿಗಳಿಗೆ ಅನುಕೂಲವಾಗಿರಬೇಕು. ಇದೇ ನರ್ತಕ ನರ್ತಕಿಯರ ಏಕೈಕ ಮತ್ತು ಸಂಪೂರ್ಣ ಅವಲಂಬನ. ಇದರಲ್ಲಿ ಏರುಪೇರಾದರೆ ಬ್ಯಾಲೆಯು ಕೆಡುತ್ತದೆ. ಆದುದರಿಂದ ನೃತ್ಯಸಂಯೋಜಕ-ಸಂಗೀತ ಸಂಯೋಜಕರು ಒಟ್ಟುಗೂಡಿ ಪರಸ್ಪರವಾದ ಆವಶ್ಯಕತೆ, ಉದ್ದೇಶ, ಭಾವನೆಗಳನ್ನು ಅರಿತುಕೊಂಡು ಅವಕ್ಕೆ ಸಂವಾದಿಯಾಗಿ ನಿರ್ಮಾಣಕಾರ್ಯದಲ್ಲಿ ತೊಡಗಬೇಕಾಗುತ್ತದೆ. ಅದರಲ್ಲೂ ನೃತ್ಯಸಂಯೋಜಕನದೇ ಪ್ರಧಾನಪಾತ್ರ. ಅವನು ಇಡೀ ಬ್ಯಾಲೆಯನ್ನು ಸಮಗ್ರವಾಗಿ ಪರಿಭಾವಿಸಿಕೊಂಡು ಅದರ ವಿವಿಧ ಅಂಶಗಳಲ್ಲಿರುವ ನೃತ್ತಾಂಶ, ನೃತ್ಯಾಂಶ ಮತ್ತು ರಸಭಾವಗಳನ್ನು ಗುರುತಿಸಿ ಅವುಗಳ ಸಾಕ್ಷಾತ್ಕರಣವನ್ನು ರಂಗದ ವಿಸ್ತಾರ ಮತ್ತು ಸಜ್ಜಿಕೆಗಳ

ಹಿನ್ನೆಲೆಯಲ್ಲಿಯೂ ವಾದ್ಯಮೇಳದಲ್ಲಿರುವ ವಿವಿಧವಾದ್ಯಗಳ ಸಾಧ್ಯತೆಗಳ ಮತ್ತು ಪ್ರಯೋಜನಗಳ ದೃಷ್ಟಿಯಿಂದಲೂ ರಚನೆಯನ್ನು ಕೈಕೊಂಡು ಅವಯವಭೂತವಾದ ವಿವಿಧಾಂಸಗಳಲ್ಲಿ ಏಕತೆ, ಸಮಂಜಸತೆ ಮತ್ತು ನೈರಂತರ್ಯಗಳನ್ನು ಸಾಧಿಸಬೇಕು. ಈ ಕ್ರಮವನ್ನು ಕೆಲವು ಸಂಗೀತ ಸಂಯೋಜಕರು ವಿರೋಧಿಸುತ್ತಾರೆ; ಕಥಾನಕದಲ್ಲಿರುವ ಭಾವರಸಗಳನ್ನೂ ಅವುಗಳಿಗೆ ಅನುರೂಪವಾದ ಪಾದಗತಿ-ಶರೀರಗತಿಗಳನ್ನು ನಿರ್ಣಯಿಸುವುದರಲ್ಲಿ ತಮ್ಮದೇ ಸಿಂಹಪಾಲೆಂದು ಅವರು ವಾದಿಸುತ್ತಾರೆ. ಭಾವರಸಗಳ ಅಭಿವ್ಯಕ್ತಿಗೂ ಈ ಗತಿಗಳ ಪರಿಣಾಮಾಭಿವ್ಯಕ್ತಿಗೂ ಸಂಗೀತದ ಸ್ವರಲಯಗಳು ಹೆಚ್ಚು ಸಂಬಂಧಿಸಿವೆಯೆಂಬುದು ನಿಜ. ಇದು ಏನೇ ಇರಲಿ, ಆಂಗಿಕಾಭಿನಯವು ಬ್ಯಾಲೆಯ ಜೀವಾಳ, ಸಂಗೀತವು ಅದಕ್ಕೆ ಅಧಿಷ್ಠಾನ ಎಂಬುದೂ ನಿಜ.

೬. ಆಪೆರದಲ್ಲಿ ಸಂಗೀತ

ಒಂದು ನಾಟಕದ ನಡುವೆ ಹಾಡೂಕುಣಿತವೂ ಇರುವುದು ಹೊಸತೇನಲ್ಲ; ಇವುಗಳನ್ನುಳ್ಳ ನಾಟಕಗಳು ಎಲ್ಲ ನಾಗರಿಕತೆಗಳಲ್ಲೂ ಪ್ರಾಚೀನ ಕಾಲದಿಂದಲೂ ಇದ್ದೇ ಇವೆ. ನಾಟಕದಲ್ಲಿ ಹಾಡುಗಳ ಪ್ರಯೋಗಕ್ಕೆಂದು ಭರತಮುನಿಯು ನಾಟ್ಯಶಾಸ್ತ್ರದ ಒಂದು ಅಧ್ಯಾಯವನ್ನೇ ಮೀಸಲಿಟ್ಟಿದ್ದಾನೆ. ಅದಕ್ಕೆ ಧ್ರುವಾಧ್ಯಾಯವೆಂದು ಹೆಸರು. ರೂಪಕದಲ್ಲಿ ಆಗಾಗ ನೃತ್ತವನ್ನು ಪ್ರಯೋಗಿಸುವುದರಿಂದ ಶೋಭೆಯೂ ಜನರಂಜನೆಯೂ ಲಭಿಸುತ್ತವೆಂದೂ ಅವನು ಹೇಳಿದ್ದಾನೆ. ಇಪ್ಪತ್ತನೆಯ ಶತಮಾನದ ಪ್ರಥಮಾರ್ಧದವರೆಗೂ ಕನ್ನಡವನ್ನೂ ಒಳಗೊಂಡಂತೆ ಎಲ್ಲ ಭಾರತೀಯ ಭಾಷೆಗಳ ಪೌರಾಣಿಕ ಮತ್ತು ಸಾಮಾಜಿಕ ನಾಟಕಗಳಲ್ಲಿ ಸಂಗೀತನೃತ್ಯಗಳು ಅವಿಭಾಜ್ಯ ಅಂಗಗಳಾಗಿ ಇದ್ದೇ ಇರುತ್ತಿದ್ದವು. ಕನ್ನಡ ನಾಟಕಗಳ ಮಟ್ಟಿಗೆ ಹೇಳುವುದಾದರೆ ಹಾಡುಗಳ ಅತಿಯೇ ಅವುಗಳ ವಿರುದ್ಧದ ಪ್ರತಿಕ್ರಿಯೆಯನ್ನೂ ಮೂಡಿಸಿತು.

ಆಪೆರ ಎಂಬುದು ಈ ರೀತಿಯದಲ್ಲ. ಇಡೀ ಬ್ಯಾಲೆಯು ನೃತ್ಯದಿಂದಲೇ ನಿರ್ವಾಹಗೊಳ್ಳುವಂತೆ ಆಪೆರವು ಹಾಡಿದ ಮಾತಿನಿಂದ ಮತ್ತು ವಾದ್ಯಮೇಳದಿಂದ ಮಾತ್ರವೇ ಜರಗುತ್ತದೆ. ಅದರ ಸಂಭಾಷಣೆಗಳು ಬಹುಮಟ್ಟಿಗೆ ಛಂದೋವೃತ್ತಗಳಲ್ಲಿ, ಛಂದೋಗಂಧಿಯಾದ ಗದ್ಯದಲ್ಲಿ ಅಥವಾ ಅವುಗಳ ಮಿಶ್ರಣದಲ್ಲಿ ಇರುತ್ತವೆ. ಆದರೆ ಮಾತುಗಳಲ್ಲಿ ನಿಬಿಡವಾದ ಕಾವ್ಯಕಲ್ಪನೆಗಳೂ ಅಲಂಕಾರಗಳೂ ಇರುವುದು ದೋಷ. ಏಕೆಂದರೆ ಆಸ್ವಾದಕ್ಕೆ ಮನನ ಮತ್ತು ಚರ್ವಣಗಳು ಅಗತ್ಯ. ಇವುಗಳಿಗೆ ಕಾವ್ಯವಾಚನದಲ್ಲಿ ದೊರೆಯುವ ಕಾಲವಿಸ್ತಾರವು ನಾಟಕಗಳಲ್ಲಿ ಇರುವುದಿಲ್ಲ; ಏಕೆಂದರೆ ನಾಟಕದಲ್ಲಿ ಕ್ರಿಯಾಪ್ರಧಾನವಾದ ಓಟವಿರುತ್ತದೆ. ಈ ಓಟವನ್ನು ಛಂದಸ್ಸೂ ಸಂಗೀತವೂ ನಿರ್ಧರಿಸುತ್ತದೆ. ವಾಚ್ಯಾರ್ಥ, ಧ್ವನಿ ಮತ್ತು ಭಾವರಸಗಳನ್ನು ಸ್ಪಷ್ಟಗೊಳಿಸಲು ಮತ್ತು ಪುಷ್ಟಿಗೊಳಿಸಲು ನಾದಲಯಗಳು ಅತ್ಯಂತ ಸಮರ್ಥವಾದ

ಸಾಧನ. ಆಪೆರದಲ್ಲಿ ಮಾತುಗಳೂ ಅವುಗಳಿಗೆ ಅಳವಡುವ ಸಂಗೀತವೂ ಪರಸ್ಪರವಾಗಿ ಅನುರೂಪವಾಗಿರಬೇಕು. ಪ್ರಯೋಗದ ಯಶಸ್ಸು ಸಂಪೂರ್ಣವಾಗಿ ಇದನ್ನೇ ಅವಲಂಬಿಸುತ್ತದೆ. ಆಹಾರ್ಯ, ಅಭಿನಯಗಳು ಮುಖ್ಯವಾದರೂ ಅವಕ್ಕೆ ಎರಡನೆಯ ಸ್ಥಾನ. ದಕ್ಷಿಣಭಾರತದ ಗೀತನಾಟಕಗಳಿಗೆ ಶಾಸ್ತ್ರೀಯ ಕರ್ನಾಟಕ ಸಂಗೀತವನ್ನು ಅಳವಡಿಸುವುದು ಹರಿದಾಸರು, ಮೇಳತ್ತೂರು ಭಾಗವತರು, ತ್ಯಾಗರಾಜರು, ಅರುಣಾಚಲಕವಿರಾಯರು ಮುಂತಾದ ವಾಗ್ಗೇಯಕಾರರಿಂದ ಪರಂಪರಾನುಗತವಾಗಿ ಬಂದಿದೆ. ಆದರೆ ಅದು ಸಾರ್ವತ್ರಿಕವೂ ಅಲ್ಲ, ನಿಯಮವೂ ಅಲ್ಲ. ಕಥಾನಕಕ್ಕೆ ಅನುರೂಪವಾದ ಲಲಿತಸಂಗೀತ, ಜಾನಪದಸಂಗೀತ ಇತ್ಯಾದಿ ಪ್ರಕಾರಗಳನ್ನೋ ಅವುಗಳ ಯಥೋಚಿತವಾದ ಬೆರಕೆಯನ್ನೋ ಬಳಸಬಹುದು. ಕವಿಯೇ ಸಂಗೀತ ಸಂಯೋಜಕನೂ ಸಂಗೀತಸಂಯೋಜಕನೇ ಕವಿಯೂ ಆಗಿರುವುದು - ಎಷ್ಟೇ ಅಪೇಕ್ಷಣೀಯವಾದರೂ - ವಾಸ್ತವ ಪ್ರಪಂಚದಲ್ಲಿ ದುರ್ಲಭ ಅಥವಾ ಅಸಂಭವ. ಆದುದರಿಂದ ಅವರಿಬ್ಬರ ನಡುವೆ ನಿಕಟವಾದ ಅಂತರಕ್ರಿಯೆ ಮತ್ತು ಪರಸ್ಪರವಾದ ಭಾವನೆಗಳು ಆಪೆರ ರಚನೆಯ ಮೂಲಭೂತ ಆವಶ್ಯಕತೆ. ಮಾತುಗಳ ಆಕರವಾದ ಗೇಯಾಕೃತಿಗಳಿಗೆ ರಾಗತಾಳಲಯಗಳನ್ನು ಅನ್ವಯಿಸುವ ಕೆಲಸವು ಭಾವನಾಪರತೆ, ಅನುಭವ, ಅಶೇಷ ಪರಿಣತಿ ಮತ್ತು ವಿಶೇಷಕೌಶಲಗಳನ್ನು ಅಪೇಕ್ಷಿಸುತ್ತದೆ.

ಪಾಶ್ಚಿಮಾತ್ಯದೇಶಗಳಲ್ಲಿ ಆಪೆರಗಳ ನಿರ್ಮಾಣವು ಹಲವು ಪರಿಣತರ ಸಂಘಟನೆ ಮತ್ತು ಸಹಕಾರಗಳಿಂದ ಹಲವು ಹಂತಗಳಲ್ಲಿ ನಡೆಯುತ್ತದೆ. ಮೊದಲನೆಯದಾಗಿ ಅದರ ನಿರ್ಮಾಪಕನು ಆಪೆರದ ಒಟ್ಟಂದವನ್ನೂ ವಸ್ತು, ರೀತಿ, ನೀತಿ, (policy), ಮೂಲಗಳು, ಆಯಾಮಗಳು ಮುಂತಾದವುಗಳನ್ನು ತೀರ್ಮಾನಿಸುತ್ತಾನೆ. ಇದರ ಆಧಾರದಮೇಲೆ ಸಾಹಿತ್ಯ ಸಂಯೋಜಕನು ಆಪೆರದ ಮಾತುಭಾಗವನ್ನು (lyrics) ರಚಿಸುತ್ತಾನೆ. ಇದಕ್ಕೆ ಲಿಬ್ರೆಟೋ ಎಂದೂ ರಚಿಸುವವನಿಗೆ ಲಿಬ್ರೆಟಿಸ್ಟ್ ಎಂದೂ ಹೆಸರು. ಇದರಿಂದ ಕಥಾನಕದ ನಿರ್ವಹಣೆಯು ಸಂದರ್ಭ-ಸನ್ನಿವೇಶಗಳ ಮತ್ತು ಪಾತ್ರಗಳ ಮೂಲಕ ವಿವರಗೊಂಡು ನಿರ್ದಿಷ್ಟವಾಗುತ್ತದೆ. ಮಾತುಭಾಗಕ್ಕೆ ಸಂಗೀತಸಂಯೋಜಕನು ಧಾತುವನ್ನು ಎಂದರೆ ಹಾಡಿನುಡಿಸಬೇಕಾದ ಭಾಗಗಳನ್ನು ರಚಿಸುತ್ತಾನೆ. ಇದರಿಂದಾಗಿ ಹಾಡುಗಳಲ್ಲಿರುವ ಭಾವರಸಗಳೂ ಕ್ರಿಯೆಗಳ ವ್ಯಾಪ್ತಿಯೂ ವಿವರಗಳೂ ಕರಾರುವಾಕ್ಕಾಗಿ, ಅಭಿನಯದ ಸ್ವರೂಪವು ಖಚಿತವಾಗುತ್ತದೆ. ಕೆಲವೊಮ್ಮೆ ಮಾತುಧಾತುಗಳ ರಚನೆಗಳು ಹಿಂದುಮುಂದಾಗಬಹುದು; ಎಂದರೆ ಸಂಗೀತವು ಮೊದಲು ಸಿದ್ಧವಾಗಿ ಅದಕ್ಕೆ ಮಾತುಗಳನ್ನು ರಚಿಸುವುದೂ ಉಂಟು. ಆದರೆ ಭಾರತೀಯ ಗೇಯರೂಪಕಗಳ ವಿಷಯದಲ್ಲಿ ಹೀಗಾಗುವುದು ಅಪರೂಪ; ಏಕೆಂದರೆ ಅವುಗಳಲ್ಲಿ ಮಾತು ಪ್ರಥಮ ಪ್ರಾಮುಖ್ಯವನ್ನು ಪಡೆದಿರುತ್ತದೆ. ಇದರ ನಂತರ ನಿರ್ದೇಶಕನು ರಂಗದ ವಿವರಗಳು, ಪಾತ್ರಗಳ ವೇಷಭೂಷಣಗಳು ಮತ್ತಿತರ ಪರಿಕರಗಳನ್ನು ನಿರ್ಣಯಿಸುತ್ತಾನೆ.

ವಾದ್ಯಮೇಳದ ನಿರ್ದೇಶಕನ ಅಥವಾ ನಿರ್ವಾಹಕನ ಪಾತ್ರವು ಬಹು ಮುಖ್ಯವಾದುದು. ಏಕೆಂದರೆ ಕಥಾನಕದ ಬೇರೆಬೇರೆ ಸನ್ನಿವೇಶಗಳಲ್ಲಿ ಭಾವದ ಪ್ರಕಟನೆ, ಬಿಗುಹುಗಳ ನಿರ್ಮಾಣ ಮತ್ತು ಪರಿಹಾರ, ಪರಾಕಾಷ್ಠೆ, ಪರಿವರ್ತನ, ತೀವ್ರತೆ ಮುಂತಾದವುಗಳನ್ನು ನಿರ್ವಹಿಸುವುದು ವಾದ್ಯಮೇಳವೇ, ಆಪೆರದಲ್ಲಿ ಅತ್ಯಂತ ಮುಖ್ಯಪಾತ್ರವು ನಾಯಕಿಯದು (prima donna) ಮತ್ತು ನಾಯಕನದು. ಆಪೆರವು ಏಳುವುದೂ ಬೀಳುವುದೂ ಇವರ ಸಂಗೀತದಿಂದಲೇ. ಆಪೆರದ ವಿವಿಧ ಭಾಗಗಳಿಗೆ ಬೇಕಾಗುವ ಶಾರೀರದ ವರ್ಣ, ವ್ಯಾಪ್ತಿ, ಅಲಂಕರಣ, ದ್ವಂದ್ವಗಾಯನ ಸಂಯೋಜನೆ, ಹಿಮ್ಮೇಳದ ಗಾಯಕಗಾಯಕಿಯರ ಸಹಕಾರ ಮುಂತಾದ ಅಂಶಗಳೇ ಆಪೆರ ಸಂಗೀತದ ಮುಖ್ಯದೇಹ. ಸಂಗೀತನಿರ್ದೇಶಕನು ಇದಕ್ಕೆ ಇಡೀ ಆಪೆರದ ಬಗೆಗೆ ಸಮಗ್ರದೃಷ್ಟಿಯನ್ನೂ ಪಾತ್ರಗಳ ಸ್ವಭಾವ ಕ್ರಿಯೆ ಇತ್ಯಾದಿಗಳ ಆಳ ಒಳನೋಟವನ್ನೂ ಪಡೆದಿರುವುದು ಅಗತ್ಯ. ಆಪೆರದಲ್ಲಿ ಸಂದರ್ಭೋಚಿತವಾಗಿ ಅಥವಾ ಜನರಂಜನೆಗಾಗಿ ನೃತ್ತವನ್ನೂ ಸೇರಿಸಿಕೊಳ್ಳುವುದುಂಟು. ಇವೆರಲ್ಲರ ಸಹಕಾರ, ಸಂಘಟನೆ ಮತ್ತು ಏಕಮುಖವಾದ ಕ್ರಿಯಾಶೀಲತೆಗಳಿಂದ ಆಪೆರ ರೂಪುಗೊಳ್ಳುತ್ತದೆ. ಇಷ್ಟಾದರೂ ಮಾತು ಧಾತುಗಳೇ ಅದರ ಅಂತಃಸತ್ತ್ವಗಳು, ಉಳಿದದ್ದೆಲ್ಲ ಉಪಕಾರಕಗಳು. ಎರಡೂ ಒಬ್ಬನೇ ವ್ಯಕ್ತಿಯ ಸಂಪನ್ಮೂಲಗಳಿಂದ ಅಭಿವ್ಯಕ್ತವಾದರೆ ಅದು ಉತ್ತಮ ಪಕ್ಷ ಸರಿ. ಏಕೆಂದರೆ ಎರಡರ ಬಗೆಗೂ ಅವನದೇ ಉದ್ದೇಶ, ಭಾವ, ಅರ್ಥ, ಇಂಗಿತಗಳು ಒಂದೆಡೆಯಲ್ಲೇ ಸಮನ್ವಯಗೊಳ್ಳುವುದು ಸಾಧ್ಯವಾಗುತ್ತದೆ. ಆದರೆ ಒಬ್ಬನಲ್ಲೇ ಸಂಗೀತ ಸಾಹಿತ್ಯಗಳೆರಡರ ಉತ್ಕೃಷ್ಟತೆ-ಪ್ರತಿಭೆಗಳು ಸಮಾನವಾಗಿ ಮೂಡಿಬರುತ್ತವೆಂದು ಹೇಳಲು ಬರುವುದಿಲ್ಲ. ಅವನಿಗೆ ಯಾವುದಾದರಲ್ಲೂ ಒಂದರಲ್ಲಿ ಹೆಚ್ಚು ಒಲವು, ಶಕ್ತಿ, ಸಾಮರ್ಥ್ಯಗಳಿರುವುದೇ ಹೆಚ್ಚು ಸಂಭವ. ಉತ್ಕೃಷ್ಟ ಸಾಹಿತಿಯೂ ಉತ್ಕೃಷ್ಟ ಸಂಗೀತಗಾರನೂ ಒಟ್ಟುಗೂಡಿ ಪರಸ್ಪರ ಸ್ಫುರಣಪೂರಣಗಳಿಂದ ಇದನ್ನು ಸಾಧಿಸುವುದೇ ಉತ್ತಮಪಕ್ಷವಿರಬಹುದು ಎಂದು ಒಮ್ಮೊಮ್ಮೆ ಎನ್ನಿಸುತ್ತದೆ.

ಸಂಗೀತಕ್ಕೆ ಬೇಕಾಗುವ ಕಾಲದ ಅವಧಿಯೇ ಆಪೆರದ ಅವಧಿ.

೭. ಯಕ್ಷಗಾನದಲ್ಲಿ ಸಂಗೀತ

'ಶಾಸ್ತ್ರೀಯ'ವಲ್ಲದ ಅಥವಾ ಅರೆಶಾಸ್ತ್ರೀಯ ಸಂಗೀತನೃತ್ಯಗಳನ್ನು ಆಧರಿಸಿದ ರೂಪಕಗಳಲ್ಲಿ ಹಲವು ಪ್ರಕಾರಗಳು ದಕ್ಷಿಣಭಾರತದಲ್ಲಿ ರೂಢಿಸಿವೆ. ಅವುಗಳ ಪೈಕಿ ಯಕ್ಷಗಾನವು ಸಾರ್ವತ್ರಿಕ ಪ್ರಯೋಗ ಪ್ರಸಿದ್ಧಿಗಳನ್ನು ಪಡೆದಿದೆ. ಪ್ರಾದೇಶಿಕ ಅಥವಾ ಪ್ರಾಸಂಗಿಕ ವ್ಯತ್ಯಾಸಗಳನ್ನು ಬಿಟ್ಟರೆ ಅದಕ್ಕೆ ತಕ್ಕಮಟ್ಟದ ಏಕರೂಪವೂ ಇದೆ. ಆದುದರಿಂದ ಅದರಲ್ಲಿ - ವಿಶೇಷವಾಗಿ ಕರ್ನಾಟಕದ ತೆಂಕುತಿಟ್ಟಿನ ಯಕ್ಷಗಾನದಲ್ಲಿ - ಸಂಗೀತನೃತ್ಯಗಳು ವಹಿಸುವ ಪಾತ್ರವವನ್ನು ಸ್ವಲ್ಪವಾಗಿ ಪರಿಶೀಲಿಸಿದರೆ ಇಲ್ಲಿ ಸಾಕು.

ಬ್ಯಾಲೆಯಲ್ಲಾಗಲಿ ಆಪೆರದಲ್ಲಾಗಲಿ ಸಂಗೀತವೇ ಅಧಿಷ್ಠಾನ ಎನ್ನುವಷ್ಟರ

ಮಟ್ಟಿಗೆ ಮುಖ್ಯವೆಂಬುದನ್ನು ಮೇಲೆ ಉಲ್ಲೇಖಿಸಿದೆ. ಈ ಮಾತು ಯಕ್ಷಗಾನದ ಪದ್ಯಗಳಿಗೆ ವಿಶೇಷವಾಗಿ ಸಲ್ಲುತ್ತದೆ. ಏಕೆಂದರೆ ಯಕ್ಷಗಾನದ ಪದ್ಯವು ರಾಗ-ತಾಳ-ಲಯ, ನೃತ್ತ, ನೃತ್ಯ, ಮಾತು ಮತ್ತು ಛಂದಸ್ಸುಗಳ ಸಂಗಮಸ್ಥಾನ. ಪ್ರತಿಯೊಂದು ಪದ್ಯವೂ ತನ್ನದೇ ಆದ ವಾಗರ್ಥ, ಭಾವ, ರಸ, ಛಂದಸ್ಸು, ಕುಣಿತ ಮತ್ತು ಗೇಯತೆಗಳನ್ನು ಹೊಂದಿರುವುದು ಈ ಕಲೆಯ ವೈಶಿಷ್ಟ್ಯ. ಜಾಗಟೆ, ಮದ್ದಲೆ ಮತ್ತು ಚೆಂಡೆಗಳು ಹಾಡುಗಳಿಗೂ ಕುಣಿತಗಳಿಗೂ ಅಗತ್ಯವಾಗಿ ಬೇಕಾಗುವ ಛಂದಸ್ಸಿನಲ್ಲಿರುವ ಘಾತ, ವಿರಾಮ ಮತ್ತು ವಿನ್ಯಾಸಗಳನ್ನು ಎತ್ತಿತೋರಿಸುತ್ತವೆ. ಸಂಗೀತ, ನೃತ್ಯ ಮತ್ತು ನೃತ್ಯಗಳು ನಿರ್ವಾಹಗೊಳ್ಳುವುದು ಇದರ ಆಧಾರದ ಮೇಲೆಯೇ.

ಯಕ್ಷಗಾನದ ರಾಗ, ತಾಳ, ಲಯ, ಕುಣಿತಗಳನ್ನು ಬೇರೆಡೆ ಸಾಕಷ್ಟು ವಿವೇಚಿಸಿದ್ದೇನೆ; ಈ ಜಿಜ್ಞಾಸೆಯ ವಿವರಗಳು ಇಲ್ಲಿ ಪ್ರಸಕ್ತವಲ್ಲ. ಪ್ರತಿಯೊಂದು ಪದ್ಯಕ್ಕೂ ಹೇಳಲಾಗಿರುವ ರಾಗತಾಳಗಳು ಶಾಸ್ತ್ರೀಯಸಂಗೀತದ ರಾಗತಾಳಗಳಿಂದ ಕೆಲವಂಶಗಳಲ್ಲಿ ಭಿನ್ನವಾಗಿವೆ. ಮೊದಲನೆಯದಾಗಿ, ಯಕ್ಷಗಾನದ ರಾಗಗಳು (ತೆಂಕುತಿಟ್ಟಿನಲ್ಲಿ) ಶಾಸ್ತ್ರೀಯ ಕರ್ನಾಟಕಸಂಗೀತದಿಂದಲೂ (ಬಡಗುತಿಟ್ಟಿನಲ್ಲಿ) ಹಿಂದೂಸ್ಥಾನೀಸಂಗೀತದಿಂದ ಬಂದವುಗಳಾದರೂ ಅವು ಆಯಾ ಶಾಸ್ತ್ರೀಯ ಪ್ರಕಾರಗಳ ಭಾವಭಂಗಿಗಳನ್ನು ತುಂಬಾ ಸೀಮಿತವಾಗಿ ರೂಪಿಸುತ್ತವೆ. ಇದಕ್ಕೆ ಈ ಕಾರಣಗಳನ್ನು ನೀಡಬಹುದು. ಶಾಸ್ತ್ರೀಯ ಸಂಗೀತದಲ್ಲಿ ಶಿಕ್ಷಿತರಲ್ಲದ ಭಾಗವತರು, ಅತಿ ಉಚ್ಚಧ್ವನಿಯಲ್ಲಿ ಆಯಾ ರಾಗದ ಕೆಲವು ಸ್ವರಗಳನ್ನು ಮಾತ್ರ ಹಾಡುವುದು; ಆಯಾ ರಾಗದ ಮುಖ್ಯಭಾವವನ್ನು ವೈಶಿಷ್ಟ್ಯವನ್ನೂ ಸ್ಫುರಿಸುವ ಸ್ವರಸಂಚಾರಗಳನ್ನು ಹಾಡದಿರುವುದು; ಬಹು ದೀರ್ಘಕಾಲ, ಧ್ವನಿವರ್ಧಕಗಳ ನೆರವಿಲ್ಲದೆ, ಬಿಡುವಿಲ್ಲದೆ, ಅಶಿಕ್ಷಿತವಾದ ಶಾರೀರವನ್ನು ದುರುಪಯೋಗಪಡಿಸುವುದು, ಇತ್ಯಾದಿ.

ಯಕ್ಷಗಾನದ ತಾಳಗಳು ಶಾಸ್ತ್ರೀಯ ಕರ್ನಾಟಕಸಂಗೀತದ ತಾಳಗಳನ್ನು ಹೆಸರು ಮತ್ತು ರಚನೆಗಳಲ್ಲಿಯೂ ಹಿಂದೂಸ್ಥಾನೀ ಸಂಗೀತದ ತಾಳಗಳನ್ನು ತ್ವರಿತ, ನಿಧಾನ ಎಂಬ ರೂಪಗಳಲ್ಲಿಯೂ ಠೇಕಾಗಳ ಅಳವಡಿಕೆಯಲ್ಲಿಯೂ ಹೋಲುತ್ತವೆ. ಯಕ್ಷಗಾನ ಪ್ರಯೋಗದಲ್ಲಿ ಅವು ಸಾಮಾನ್ಯವಾಗಿ ಛಾಪುರೂಪದಲ್ಲಿಯೇ ಇವೆ. ಆದಿ-ಏಕ, ಅಷ್ಟ-ಧ್ರುವ-ಮಿಶ್ರಛಾಪುತಾಳಗಳಲ್ಲಿವಿನ್ಯಾಸ ವ್ಯತ್ಯಾಸಗಳು ಉಳಿಯುವುದಿಲ್ಲ. ಏಕೆಂದರೆ, ಅಂಗರಚನೆಯನ್ನು ತೋರಿಸುವ ತಾಳಪ್ರಯುಕ್ತಿಯು ಯಕ್ಷಗಾನದಲ್ಲಿಲ್ಲ. ಸಾಮಾನ್ಯವಾಗಿ ಝಂಪೆಯು ಕುರುಝಂಪೆಯಾಗಿ ಹ್ರಸ್ವಗೊಂಡೂ ಮಠ್ಯವು ರಗಣಮಠ್ಯವಾಗಿ ದೀರ್ಘಗೊಂಡೂ ಪ್ರಯುಕ್ತವಾಗುತ್ತವೆ. ಯಕ್ಷಗಾನದ ತಿತ್ತಿತ್ತೈತಾಳಕ್ಕೆ ಪರಸ್ಪರವಾದುದು ಶಾಸ್ತ್ರೀಯ ಸಂಗೀತದಲ್ಲಿಲ್ಲ. ಶಾಸ್ತ್ರೀಯಸಂಗತದಲ್ಲಿರುವ ಕಾಲಪ್ರಾಣದ ಉತ್ತರೋತ್ತರ ದ್ವಿಗುಣ ಪ್ರಮಾಣವು ಯಕ್ಷಗಾನದಲ್ಲಿಲ್ಲ; ಯಕ್ಷಗಾನದ ತಾಳಾವರ್ತವನ್ನು ಪಾಟಾಕ್ಷರಜತಿಗಳಿಂದ (ಠೇಕ್, ಬೋಲ್, ಸೊಲ್ಲು) ಲಕ್ಷಿಸುವ

ಪದ್ಧತಿಯು ಶಾಸ್ತ್ರೀಯ ಕರ್ನಾಟಕಸಂಗೀತದಲ್ಲಿಲ್ಲ. ಶಾಸ್ತ್ರೀಯಸಂಗೀತದ ಹಾಡುಗಳ ಪ್ರಸ್ತುತಿಯಲ್ಲಿ ಅಡಕವಾಗಿರುವ ಛಂದೋಮಾದರಿಗಳನ್ನು ಮೃದಂಗಾದಿ ತಾಳವಾದ್ಯಗಳು ಯಥಾವತ್ತಾಗಿ ನುಡಿಯಬಹುದು, ನುಡಿಯದೆಯೇ ಇರಬಹುದು, ನುಡಿಯಲೇಬೇಕೆಂಬ ನಿಯಮವಿಲ್ಲ. ಯಕ್ಷಗಾನದಲ್ಲಾದರೆ ಪದ್ಯಗಳಲ್ಲಿ ಬರುವ ಛಂದೋಲಯಗಳನ್ನು ಕರಾರುವಾಕ್ಕಾಗಿ ಹಾಗೆಯೇ ನುಡಿಸಲೇಬೇಕು. ಯಕ್ಷಗಾನದ ತಾಳಾವರ್ತಗಳನ್ನು ತ್ವರಿತ, ದುರಿತ (ದ್ರುತ), ಮಧ್ಯ, ನಿಧಾನ (ವಿಲಂಬಿತ) ಎಂಬ ಮೂರುಬಗೆಯಲ್ಲಿ ಪಡೆದುಕೊಳ್ಳಬಹುದು. ಕರ್ನಾಟಕಸಂಗೀತದ ತಾಳಪದ್ಧತಿಯಲ್ಲಿ ಹೀಗಿಲ್ಲ.

ಕರ್ನಾಟಕ ಸಂಗೀತದಲ್ಲಿ ಧ್ರುವಾದಿ ಸಪ್ತಸೂಳಾದಿತಾಳಗಳು ಅತ್ಯಂತವಾಗಿಯೂ ರಾಸಮುಂತಾದ ದೇಶೀತಾಳಗಳು ವಿರಳವಾಗಿಯೂ ಪ್ರಚಾರದಲ್ಲಿವೆ. ತೆಂಕುತಿಟ್ಟಿನ ಯಕ್ಷಗಾನದಲ್ಲಿ ಆದಿತಾಳ, ಚೌತಾಳ, ನಿಧಾನಝಂಪೆ, ಕುರುಝಂಪೆ, ಅಷ್ಟತಾಳ, ಘಂಟಾರವ ಅಷ್ಟತಾಳ, ರೂಪಕತಾಳ, ಮಠ್ಯತಾಳ, ತಿತ್ತಿತ್ತೈತಾಳ, ತ್ವರಿತತಿವುಡೆ, ಉಡಾಪೆ, ಏಕತಾಳ, ಮಾರವಿ ಏಕತಾಳ, ಭೈರವಿ ಏಕತಾಳ - ಇವು ಹೆಚ್ಚಿನ ರೂಢಿಯಲ್ಲಿವೆ. ಇವುಗಳ ಪೈಕಿ ತಿವ್ರಡೆ, ಅಷ್ಟ, ತ್ವರಿತ ಮಷ್ಟ ಮತ್ತು ತಿತ್ತಿತ್ತೈತಾಳಗಳ ವಾದನಪದ್ಧತಿಗಳಲ್ಲಿ ವ್ಯತ್ಯಾಸವಿದೆ, ಆದರೆ ಸ್ವರೂಪಭೇದವಿಲ್ಲ. ಇವುಗಳ 'ಠೇಕಾ'ವನ್ನು ಜಾಗಟೆ, ಮದ್ದಳೆಗಳು ಬೇರೆಬೇರೆಯಾಗಿ ನುಡಿಯುತ್ತವೆ, ಬಿಡ್ತಿಗೆ, ಮುಕ್ತಾಯಗಳೂ ಆಯಾ ತಾಳಕ್ಕೆ ವಿಶಿಷ್ಟವಾಗಿರುತ್ತವೆ, ಪದ್ಯದ ಬಂಧಕ್ಕೆ ಅನುಗುಣವಾಗಿರುತ್ತವೆ, ಸಮ, ವಿಷಮ ಎಡುಪುಗಳಲ್ಲಿರುತ್ತವೆ. ಛಂದೋವಿನ್ಯಾಸ ವಿಸ್ತಾರದ ಆವಶ್ಯಕತೆಯಿಂದಾಗಿ ಜಾಗಟೆಯ ಎರಡು ಆವರ್ತಗಳನ್ನು ಚತುರಶ್ರದ ಜತಿಗಳನ್ನಾಗಿ ವಿಂಗಡಿಸುವ ಪದ್ಧಿತಿಯೊಂದಿದೆ; ಇದನ್ನು ಎಲ್ಲ ತಾಳಗಳಿಗೂ ಅನ್ವಯಿಸಬಹುದು. ಇಂತಹ ಮಾದರಿಗಳಿಗೆ ಜೋಡುರುಳಿಕೆಗಳೆಂದು ಹೆಸರಿದೆ. ಯಕ್ಷಗಾನತಾಳಗಳಲ್ಲಿ ಇನ್ನೂ ಒಂದು ವೈಶಿಷ್ಟ್ಯವಿದೆ : ಅದಕ್ಕೆ ವಿಶೇಷಣವಾಗಿರುವ ಆಯಾ ರಾಗದ ಲಕ್ಷಣವನ್ನು ಸೂಚಿಸುವುದು ಮಾತ್ರವಲ್ಲದೆ ಆಯಾ ಪದ್ಯದಲ್ಲಿ ಆಯಾತಾಳವು ಪಡೆಯುವ ಲಯ, ಮಾತ್ರಾಗಣ ವಿನ್ಯಾಸ ಮುಂತಾದವುಗಳನ್ನೂ ಸೂಚಿಸುತ್ತದೆ. ಹೀಗಾಗಿ ಒಂದೇ ತಾಳದ ಹೆಸರಿನ ಹಿಂದೆ ಬೇರೆಬೇರೆ ರಾಗಗಳ ಹೆಸರುಗಳು ಇರುವುದೂ ಉಂಟು (ಉದಾ: ಭೈರವಿಏಕತಾಳ, ಮಾರವಿಏಕತಾಳ).

೮. ಯಕ್ಷಗಾನದಲ್ಲಿ ನೃತ್ಯ

ಯಕ್ಷಗಾನವು ಅರ್ಧಶಾಸ್ತ್ರೀಯ ಅಥವಾ ಜಾನಪದಕಲೆ. ಅದು ಕುರಿತಿರುವುದು ಮುಖ್ಯವಾಗಿ ಗ್ರಾಮೀಣರಸಿಕರನ್ನು. ಆದುದರಿಂದ ಅದರಲ್ಲಿ ಬರುವ ನೃತ್ತನೃತ್ಯಗಳು ಆಯಾ ಶಾಸ್ತ್ರೀಯ ಪ್ರಕಾರಗಳಿಂದ ಉದ್ದೇಶ, ತಂತ್ರ, ವಿಧಾನ ಮತ್ತು ಕ್ರಿಯೆಗಳಲ್ಲಿ ಸ್ವಲ್ಪ ಭಿನ್ನವಾದುದು. ಯಕ್ಷಗಾನವು ಮೂಲತಃ ನಾಟಕವಷ್ಟೆ;

ನೃತ್ತ-ನೃತ್ಯಮಯವಾಗಿದ್ದರೂ ಅದು ಬ್ಯಾಲೆಯಲ್ಲ, ಗಾನವಾದನಮಯವಾಗಿದ್ದರೂ ಅದು ಆಪೆರವಲ್ಲ. ಶಾಸ್ತ್ರೀಯ ನೃತ್ತವು ಶುದ್ಧಸೌಂದರ್ಯಾಕೃತಿ ಸಂವಹನಕ್ಕೆ ಅಗತ್ಯವಾದ ಅಂಗಪ್ರತ್ಯಂಗೋಪಾಂಗ ವಿಕ್ಷೇಪಗಳನ್ನು - ಉದಾ, ಶಿರೋಭೇದ, ಅಸಂಯುತ-ಸಂಯುತಹಸ್ತಗಳು, ನಾನಾರ್ಥಹಸ್ತಗಳು, ನೃತ್ತಹಸ್ತಗಳು, ಸ್ಥಾನಕ, ಚಾರೀ, ವರ್ತನೀ - ವಲನ-ಚಾಲಕ-ರೇಚಕಗಳು - ಪಾದಭೇದಗಳು ಇತ್ಯಾದಿಗಳನ್ನು ಏರ್ಪಡಿಸಿಕೊಂಡಿದೆ. ಯಕ್ಷಗಾನದ ಪಾತ್ರಗಳಿಗೂ ಪ್ರೇಕ್ಷಕರಿಗೂ ಇವುಗಳ ಪರಿಚಯವಿಲ್ಲದ್ದರಿಂದ ಅಲ್ಲಿ ನೃತ್ತವು ಸಂದರ್ಭೋಚಿತವಾದ ಸ್ವಾಂತಾಭಿವ್ಯಕ್ತಿಗೆ ಮಾತ್ರ ಸೀಮಿತವಾಗಿದೆ. ಯಕ್ಷಗಾನ ನೃತ್ತದಲ್ಲಿ ದುಷ್ಕರವಾದ ತಂತ್ರಗಳೂ ಸಾಧನೆಗಳೂ ಇಲ್ಲವೆಂದಲ್ಲ; ಆದರೆ ಅವುಗಳನ್ನು ಪಾಂಡಿತ್ಯಪ್ರದರ್ಶನದ ಬದಲು ಪ್ರಸಂಗದ ಒಟ್ಟಂದದೊಡನೆ ಸೌಂದರ್ಯಾತ್ಮಕವಾಗಿ ಸಮಂಜಸಗೊಳಿಸುವುದು ಅವಶ್ಯವೆಂಬ ಅರಿವೂ ಪ್ರಯತ್ನವೂ ಯಕ್ಷಗಾನಕಲಾವಿದರಲ್ಲಿ ಇನ್ನೂ ಬೆಳೆಯಬೇಕಾಗಿವೆ. ಈ ಕಲೆಯಲ್ಲಿ ನೃತ್ತವು ಪಾದ ನಿಕ್ಷೇಪ ಪ್ರಧಾನವಾದುದು; ಹಸ್ತಮುದ್ರೆಗಳ ಪ್ರಯೋಗವು ಬಹು ಗೌಣವಾದುದು. ವೇಷಭೂಷಣಗಳ ಉತ್ಪ್ರೇಕ್ಷೆ, ರಂಗಸ್ಥಳದ ಮಿತಿ, ಇವುಗಳಿಂದಾಗಿ ಉಳಿದ ಶರೀರನಿಕ್ಷೇಪಗಳು ತುಂಬಾ ಕಡಿಮೆ. ನೃತ್ಯಕ್ಕೆ ಬೇಕಾಗುವ ಆಂಗಿಕಾಭಿನಯದ ವಿಷಯದಲ್ಲಿಯೂ ಇದೇ ಮಾತುಗಳು ಸಲ್ಲುತ್ತವೆ. ಇಲ್ಲಿ ಮುಖವರ್ಣವು ಉತ್ಪ್ರೇಕ್ಷಿತ, ಅಪಾರದರ್ಶಕ, ಒಂದು ಮುಖವಾಡದಂತಿರುತ್ತದೆ. ಆದುದರಿಂದ ದೃಷ್ಟಿ, ಮುಖದ ಮಾಂಸಪೇಶಿಗಳು - ಮುಖ್ಯವಾಗಿ ತುಟಿಗಳು - ಇವುಗಳಿಂದ ದೊರೆಯುವ ನೆರವು ಅತ್ಯಲ್ಪ. ವೇಗ, ಭಂಗಿ, ದೈಹಿಕಚಲನೆಯ ಬಾಹ್ಯರೇಖೆಗಳು, ಪಾದಗತಿ ಮೊದಲಾದವುಗಳನ್ನು ಭಾವರಸಗಳ ಪ್ರತೀತಿಗಾಗಿ ಆಶ್ರಯಿಸಬೇಕಾಗುತ್ತದೆ.

ಯಕ್ಷಗಾನದಲ್ಲಿ ನೃತ್ತ-ನೃತ್ಯಗಳಿಗೆ ಸಿಂಹಪಾಲು. ಪೂರ್ವರಂಗದಲ್ಲಿ (ಪ್ರಸಂಗದ ಕಥಾನಕವು ಪ್ರಾರಂಭವಾಗುವವರೆಗೆ) ರಂಗವು ನೃತ್ತದಿಂದಲೇ ತುಂಬಿರುತ್ತದೆ; ಅಲ್ಲಿ ಮಾತುಗಾರಿಕೆಯು ಅತ್ಯಲ್ಪ. ಈ ಪೀಠಿಕಾಂಶದಲ್ಲಿ ಗಣಪತಿಸ್ತುತಿ, ಕೋಡಂಗಿ ವೇಷಗಳು, ಬಾಲಗೋಪಾಲರು, ನಿತ್ಯವೇಷ, ಷಣ್ಮುಖ, ಅರ್ಧನಾರಿ, ಸ್ತ್ರೀವೇಷ, ಹಾಸ್ಯಗಾರ - ಇವೆಲ್ಲ ಸರಣಿಯಲ್ಲಿ ಬರುತ್ತವೆ. ಇಡೀ ಯಕ್ಷಗಾನದ ಮುಖ್ಯ ಹೆಜ್ಜೆಗಳೆಲ್ಲ - ಯುದ್ಧ, ಬೇಟೆ ಮುಂತಾದ ಕೆಲವು ಸಂದರ್ಭಗಳನ್ನು ಬಿಟ್ಟರೆ - ಇದರಲ್ಲಿಯೇ ಇವೆ. ಬಣ್ಣದ ವೇಷಗಳ ಪ್ರವೇಶ ನೃತ್ಯಗಳು ಮಾತ್ರ ಆಯಾ ಸಂದರ್ಭಗಳೆಲ್ಲ ಬರುತ್ತವೆ. ಹೀಗಾಗಿ ಪೂರ್ವರಂಗದ ನೃತ್ತತಂತ್ರಗಳ ಮೇಲೆ ಪ್ರಭುತ್ವವನ್ನು ಸ್ಥಾಪಿಸಿಕೊಂಡರೆ ಪ್ರಸಂಗದ ಇತರ ಸಂದರ್ಭಗಳಿಗೆ ಅವುಗಳನ್ನು ಯಥೋಚಿತವಾಗಿ ಅನ್ವಯಿಸಿ ಶೋಭೆಗೊಳಿಸಬಹುದು. ಪಾತ್ರ, ರಸ, ಸನ್ನಿವೇಶ ಇತ್ಯಾದಿಗಳಿಗೆ ಅನುಸಾರವಾಗಿ ಹೆಜ್ಜೆಯ ಕ್ರಮ, ವೇಗ, ಆಂಗಿಕಾಭಿನಯ ಮೊದಲಾದವುಗಳನ್ನು ಅಳವಡಿಸಬೇಕು. ಯಕ್ಷಗಾನದ ಪಾದಭೇದಗಳು ಹೆಚ್ಚಿನ ಸಂಖ್ಯೆಯವೇನಲ್ಲ. ಒಂದನೆಯ, ಎರಡನೆಯ, ಮೂರನೆಯ ಮತ್ತು ನಾಲ್ಕನೆಯ

ಎಂಬ ನಾಲ್ಕು ಹೆಜ್ಜೆಗಳಕುಣಿತ, ತತ್ತಿತ್ತೈನಡೆ, ತೆರೆಪೊರಪ್ಪಾಟ್, ಧೀಂಗಣ (ಪ್ರವೇಶ), ಅದರಲ್ಲಿ ಭ್ರಮರೀ ಮತ್ತು ಮುಕ್ತಾಯ, ವೀರರಸಪ್ರತೀತಿಗೆ ಅನುಕೂಲವಾದ ಏಕ ತಾಳ, ತ್ವರಿತತಿವುಡೆ, ತ್ವರಿತ ಅಷ್ಟ ಮತ್ತು ತ್ವರಿತ ಝಂಪೆತಾಳಗಳ ಕುಣಿತಗಳು, ರಭಸವಲ್ಲದ ಕುಣಿತಗಳು (ಅಷ್ಟ, ಉಡಾಪೆ, ಏಕ, ತಿತ್ತಿತ್ತೈ ಝಂಪೆ, ಆದಿ, ರೂಪಕತಾಳಗಳಲ್ಲಿ), ಬೇಟೆ, ಯುದ್ಧ, ಒಡ್ಡೋಲಗ, ಜಲಕ್ರಿಡೆ, ಪ್ರಯಾಣ ಇತ್ಯಾದಿ ಕುಣಿತಗಳು ಇರುತ್ತವೆ. ಇವುಗಳಲ್ಲಿ ಪ್ರತಿಯೊಂದಕ್ಕೂ ದಸ್ತೆ, ಅದಕ್ಕೆ ಮಾಡಬೇಕಾದ ಹಸ್ತಪಾದ ಚಲನೆಗಳು, ಬಿಡ್ತಿಗೆಗಳು, ಮುಕ್ತಾಯಗಳು ಇವೆಲ್ಲ ನಿಶ್ಚಿತರೂಪದಲ್ಲಿ ಪರಂಪರಾನುಗತವಾಗಿ ದೊರೆಯುತ್ತವೆ. ಗುರು-ಶಿಷ್ಯರ ನೇರ ಶಿಕ್ಷಣದಿಂದ ಮಾತ್ರ ಈ ಪರಂಪರೆಯು ಉಳಿದು ಬಂದಿದೆ. (ಇವುಗಳನ್ನು ಸ್ಪಷ್ಟವಾಗಿ, ಅಸಂದಿಗ್ಧವಾಗಿ, ಕರಾರುವಾಕ್ಕಾಗಿ ಬರೆದಿಡುವ ಪದ್ಧತಿಯೊಂದನ್ನು ನಿರ್ಮಿಸುವುದು ಯಕ್ಷಗಾನದ ಇಂದಿನ ಆವಶ್ಯಕತೆಗಳಲ್ಲಿ ಒಂದಾಗಿದೆ). ನೃತ್ಯನಾಟಕಗಳಲ್ಲಿ ಯಕ್ಷಗಾನದ ತಂತ್ರಗಳನ್ನು ಪ್ರವೇಶಗೊಳಿಸಲೆಳಸುವ ಸಂಯೋಜಕರು ಅದರ ತಂತ್ರ, ವಿಧಾನ, ಸಂಪ್ರದಾಯ, ಔಚಿತ್ಯಗಳನ್ನು ಚೆನ್ನಾಗಿ ತಿಳಿದುಕೊಂಡಿರಬೇಕು.

೯. ನೃತ್ಯನಾಟಕಗಳ ಸಂಪನ್ಮೂಲಗಳು : ಸಾಹಿತ್ಯ

ನೃತ್ಯನಾಟಕದ ಸಾಹಿತ್ಯವು ವಸ್ತು ಮತ್ತು ಶೈಲಿಗಳಲ್ಲಿ ಅದರ ಸ್ವರೂಪ, ಸ್ವಭಾವ, ವಿಧಾನ ಮತ್ತು ತಂತ್ರಗಳನ್ನು ಅವಲಂಬಿಸಿತ್ತದೆ. ಅದು ಗದ್ಯ, ಪದ್ಯ ಅಥವಾ ಅವುಗಳ ಬೆರಕೆಯಾಗಿ ಇರಬಹುದು. ಇದು ಯಾವುದೇ ಇರಲಿ, ನೃತ್ಯನಾಟಕ ಸಾಹಿತ್ಯದ ಅತ್ಯಂತ ಅಪೇಕ್ಷಣೀಯ ಲಕ್ಷಣವೆಂದರೆ ಅದು ಛಂದೋಗಂಧಿಯಾಗಿರುವುದು. ಒಂದು ವೇಳೆ ಗದ್ಯದಲ್ಲಿಯೇ ರಚಿತವಾಗಿದ್ದರೂ ಅದರ ಪದಶಯ್ಯೆಯಲ್ಲಿ ಸುಶ್ರಾವ್ಯತೆ (euphony), ಬಿಗಿ, ಹ್ರಸ್ವವಾಕ್ಯಗಳು, ಅನುಪ್ರಾಸ, ಪದಗಳು ಅಥವಾ ಸಮಾಸಗಳು ಛಂದೋಮಾದರಿಗಳಲ್ಲಿ ಸ್ವಾಭಾವಿಕವಾಗಿ ಅಡಕಗೊಳ್ಳುವುದು, ಆಯಾಭಾವದ ಅಭಿವ್ಯಕ್ತಿಗೆ ಅನುಕೂಲಿಸುವ ಅಲ್ಪಪ್ರಾಣ-ಮಹಾಪ್ರಾಣ, ಹ್ರಸ್ವ-ದೀರ್ಘ, ಸಂಯುಕ್ತ-ಅಸಂಯುಕ್ತ ಮುಂತಾದ ಅಕ್ಷರಗಳ ಸಂಯೋಜನೆ ಇತ್ಯಾದಿಗಳು ಸಂಗೀತ ಮತ್ತು ನೃತ್ಯಗಳ ಸಂಯೋಜನೆಗೆ ನೆರವು ನೀಡುತ್ತವೆ. ತಾಳಾವರ್ತದ ಅಳತೆಯಲ್ಲಿ ಅಡಕವಾಗುವ ಮಾತುಗಳ ಸಂಗೀತಛಂದಸ್ಸು ಮಾತ್ರಾಗಣ ಮತ್ತು ಅಕ್ಷರಗಣಗಳಿಂದ ನಿರ್ಮಿತವಾದ ವೃತ್ತಛಂದಸ್ಸಿನಿಂದ ಭಿನ್ನವಾದುದು; ಗೀತನೃತ್ಯಗಳಿಗೆ ಬೇಕಾಗುವ ಛಂದಸ್ಸು ಮೊದಲನೆಯದು, ಎರಡನೆಯದರಿಂದ ಅಭಿವ್ಯಕ್ತಿಕುಂಠಿತವಾಗುತ್ತದೆ ಎನ್ನುವುದನ್ನು ಬೇರೆಡೆ ಸಾಕಷ್ಟು ವಿವರವಾಗಿ ವಿವೇಚಿಸಿದ್ದೇನೆ.

ಇನ್ನೊಂದು ಅಪೇಕ್ಷಣೀಯ ವಿಷಯವೆಂದರೆ ನೃತ್ಯನಾಟಕಸಾಹಿತ್ಯದಲ್ಲಿ ಚರ್ವಣದ ಅಗತ್ಯವಿರುವ ಕಾವ್ಯಾಂಶಗಳು ಕಡಿಮೆಯಿರುವುದು; ಏಕೆಂದರೆ ಇಡೀ ನಾಟಕವು ದೃಶ್ಯಮಾನವಾದ ಕ್ರಿಯೆಗಳ ಸರಣಿಯಾಗಿದ್ದು ಚರ್ವಣಮೂಲವಾದ

ಆಸ್ವಾದಕ್ಕೆ ಕಾಲಾವಕಾಶವಿರುವುದಿಲ್ಲ. ಸಾಹಿತ್ಯಸಂಯೋಜಕನ ಪಾಲಿಗೆ ಇದೊಂದು ಕೊರತೆಯೆನ್ನಿಸಿದರೆ, ಕ್ರಿಯೆಯು ಮುನ್ನಡೆಯುತ್ತಿದ್ದ ಹಾಗೆಯೇ ಅದರೊಡನೆಯೇ ವ್ಯತ್ಯಾಸವಾಗುತ್ತ ಮುನ್ನಡೆಯುವ ಸಂಗೀತನೃತ್ಯಗಳು ಆಯಾ ಸನ್ನಿವೇಶಕ್ಕೆ ಉಚಿತವಾಗಿ ತಾತ್ಕಾಲಿಕ ಪುಷ್ಟಿಯನ್ನು ಒದಗಿಸುತ್ತ ಈ ಕೊರತೆಯನ್ನು ನೀಗುತ್ತವೆ; ಎಂದರೆ, ಅವನ್ನು ಹಾಗಿರುವಂತೆ ರಚಿಸಬೇಕು. ಸಾಹಿತ್ಯಾಂಶದಲ್ಲಿ ಛಂದೋಮಾದರಿಗಳು ಎಷ್ಟೆಷ್ಟು ಸಮೃದ್ಧವಾಗಿರುತ್ತವೋ ಸಂಗೀತನೃತ್ಯಗಳು ಅಷ್ಟಷ್ಟು ಪರಿಣಾಮಕಾರಿಯಾಗಿರುವಂತೆ ರಚಿಸಲು ಅನುಕೂಲವಾಗುತ್ತದೆ. ಈ ಮಾತು ಕೃತಿಪ್ರಕಾರವೈವಿಧ್ಯಕ್ಕೂ ಅನ್ವಯಿಸುತ್ತದೆ. ಬೇರೆ ಬೇರೆ ಪ್ರಕಾರಗಳಿರುವ ಹಾಡುಗಳಲ್ಲಿ ಛಂದೋವೈವಿಧ್ಯವೂ ಸೇರಿಕೊಂಡರೆ ರೂಪಕದ ಕರ್ತೃವು ಉದ್ದೇಶಿಸುವ ವಿವಿಧ ರಸಭಾವಭಂಗಿಗಳ ಅಭಿವ್ಯಕ್ತಿಯು ಹೆಚ್ಚುಹೆಚ್ಚು ಸಾಧ್ಯವಾಗುತ್ತದೆ.

ಸಂಗೀತನೃತ್ಯಗಳೂ ಕೆಲವು ಅಂಶಗಳಲ್ಲಿ ಭಾಷೆಗಳೇ. ಅವಕ್ಕೂ ತಮ್ಮ ತಮ್ಮ ವಾಕ್ಯರಚನಾಮರ್ಯಾದೆಗಳಿರುತ್ತವೆ. ಆದುದರಿಂದ ನೃತ್ಯನಾಟಕಕ್ಕಾಗಿ ಬರೆಯುವ ಸಾಹಿತ್ಯವು ಸಂಗೀತರಚನೆಗೂ ನೃತ್ಯಸಂಯೋಜನೆಗೂ ಅಳವಡುವಂತಿರಬೇಕು. ಸಾಹಿತ್ಯಭಾಗದ ವಾಕ್ಯರಚನೆಗೆ ರಾಗಲಯಗಳಿಂದ ಏರ್ಪಡುವ ವಾಕ್ಯರಚನೆಗಳು ಅನುರೂಪವಾಗಿರಬೇಕು, ಎಂದರೆ ಮಾತುಗಳಲ್ಲಿರುವ ನಾಮಪದಗಳು, ಕ್ರಿಯಾಪದಗಳು, ವಿಶೇಷಣಗಳು ಮುಂತಾದವನ್ನು ನೃತ್ಯಕ್ರಿಯೆಗಳ ಸ್ವಾಭಾವಿಕ, ಸೌಂದರ್ಯಾತ್ಮಕ, ಔಚಿತ್ಯಪೂರ್ಣ ಸರಣಿಗೆ ಪರಸ್ಪರವಾಗಿರುವಂತೆ ಏರ್ಪಡಿಸಬೇಕು; ರಾಗಭಾವದ ವ್ಯಾಕರಣಕ್ಕೂ ತಾಳಲಯಗಳ ವೇಗಗಳ ನಿರ್ವಹಣೆಗೂ ಅನುಕೂಲವಾಗಿರುವಂತೆ ಮಾತುಗಳ ಸರಣಿಯನ್ನು ಏರ್ಪಡಿಸಬೇಕು; ಎಂದರೆ ನಾಟಕಕಾರನು ರೂಪಕವೊಂದನ್ನು ರಚಿಸಿ ಸಂಗೀತ-ನೃತ್ಯ ಸಂಯೋಜಕರ ಮಡಿಲಲ್ಲಿ ಹಾಕಿ ತಾನು ವಿರಮಿಸಿ, ತಟಸ್ಥ ಪ್ರೇಕ್ಷಕನಾಗುವುದಲ್ಲ. ಅವರಿಬ್ಬರನ್ನೂ ಜತೆಗಿಟ್ಟುಕೊಂಡು ಅವರವರ ಪ್ರತಿಭೆಯು ಪೂರ್ಣವಾಗಿ ಹೊರಹೊಮ್ಮುವಂತೆಯೂ ಅವರವರ ತಾಂತ್ರಿಕ ಸಮಸ್ಯೆ, ಅಗತ್ಯಗಳನ್ನು ಪೂರೈಸುವಂತೆಯೂ ಸಹಕರಿಸಬೇಕು. ಸಂಗೀತನೃತ್ಯಗಳನ್ನು ದೃಶ್ಯರೂಪಕಗಳಿಗೆ ಯಶಸ್ವಿಯಾಗಿ ಸಂಯೋಜಿಸಿ ಪರಿಣತರಾಗಿರುವವರ ಕಲಾವಿದರನ್ನೇ ಈ ಕೆಲಸಕ್ಕೆ ನಿಯೋಜಿಸಿಕೊಳ್ಳಬೇಕು. ತ್ರಿಕೋನಾತ್ಮಕವಾದ ಇಂತಹ ಸಂಘಟನೆ, ಸಹಕಾರಗಳಿಂದ ನೃತ್ಯನಾಟಕವು ಜನಾನುರಾಗವನ್ನೂ ಸೌಂದರ್ಯಾತ್ಮಕ ಉತ್ಕೃಷ್ಟತೆಯನ್ನೂ ಸಾಧಿಸುವುದರಲ್ಲಿ ಸಂದೇಹವಿಲ್ಲ. ನೃತ್ಯನಾಟಕದ ಸಾಹಿತ್ಯವನ್ನು ಕಾವ್ಯಚಮತ್ಕಾರಗಳನ್ನು ಸಂಪೂರ್ಣವಾಗಿ ವರ್ಜಿಸಿಯೂ ವಾಗರ್ಥವೂ ಆಯಾ ಸಂದರ್ಭದ ಭಾವರಸಗಳನ್ನು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗುವಂತೆ, ಮಾತಿನ ಧ್ವನಿಗಳನ್ನು, ಎಂದರೆ ಇಂಗಿತಗಳನ್ನು, ಕಾಕು, ಗಮಕಗಳಿಂದಲೂ, ದೃಷ್ಟಿ, ಮುದ್ರೆ, ಭಂಗಿ ಇತ್ಯಾದಿಗಳಿಂದಲೂ ಸೂಚಿಸಲು ಅನುವಾಗಿರಬೇಕು. ಅಷ್ಟೇ ಅಲ್ಲದೆ ಯಾವುದಾದರೊಂದು ರಸಸ್ಥಾನದಲ್ಲಿರುವುದನ್ನು

ಸಂಗೀತದಲ್ಲಿ ನೆರವಲು ಮಾಡಿ ಪೋಷಿಸುವುದಕ್ಕೂ ಅದಕ್ಕೆ ಪರಸ್ಪರವಾದ ಸಂಚಾರಿಭಾವಗಳಿಂದ ವಿಸ್ತರಿಸಿ ವ್ಯಾಖ್ಯಾನಿಸುವುದಕ್ಕೂ ತಕ್ಕ ಕೀಲಿ ಮಾತುಗಳನ್ನು ಒಳಗೊಂಡಿದ್ದರೆ ನೃತ್ಯನಾಟಕವು ಪರಿಣಾಮಕಾರಿಯಾಗಿರುತ್ತದೆ.

೧೦. ನೃತ್ಯನಾಟಕದ ಸಂಪನ್ಮೂಲಗಳು : ಸಂಗೀತ

ಸಂಗೀತವು ನೃತ್ಯನಾಟಕಪ್ರಯೋಗದ ಜೀವಾಳ; ಏಕೆಂದರೆ ನೃತ್ಯವೂ ಅದನ್ನೇ ಅವಲಂಬಿಸುತ್ತದೆ. ಸಂಗೀತದ ಸ್ವರೂಪ, ಶೈಲಿಗಳು ಸಾಹಿತ್ಯದ ವಸ್ತು ಮತ್ತು ಶೈಲಿಗಳಿಗೆ ಅನುಗುಣವಾಗಿರಬೇಕು. ಪೌರಾಣಿಕ, ಸಾಮಾಜಿಕ ಅಥವಾ ಇತರ ಗಂಭೀರ ವಸ್ತುಗಳಿಗೆ ಶಾಸ್ತ್ರೀಯ ಸಂಗೀತವನ್ನು ಪೂರ್ತಿಯಾಗಿಯೋ ಆಂಶಿಕವಾಗಿಯೋ ನಿರ್ಮಿಸಬಹುದು. ಪ್ರಹಸನ, ನವ್ಯಪ್ರಯೋಗ ಮುಂತಾದವುಗಳಿಗೆ ಲಘುಶಾಸ್ತ್ರೀಯ ಅಥವಾ ಭಾವಗೀತೆಯ ಶೈಲಿಯ ಸಂಗೀತವನ್ನು ಸಂಯೋಜಿಸಬಹುದು. ಗ್ರಾಮೀಣಕಥಾನಕಗಳಿಗೆ ಜಾನಪದ ಸಂಗೀತವನ್ನು ರಚಿಸಬಹುದು. ಅಥವಾ, ಒಂದೇ ನೃತ್ಯನಾಟಕದ ವಿವಿಧ ಪಾತ್ರಗಳಿಗೆ ಮತ್ತು ವಿವಿಧ ಸಂದರ್ಭಗಳಿಗೆ ಸಮುಚಿತವಾದ ವಿವಿಧ ಶೈಲಿಗಳ ಸಂಗೀತವನ್ನು ಅಳವಡಿಸಬಹುದು. ಯಾವುದೇ ರಾಗಕ್ಕೆ ಈ ಅಥವಾ ರಸವನ್ನು ಸ್ವತಂತ್ರವಾಗಿ ಪ್ರತೀತಗೊಳಿಸುವ ಶಕ್ತಿಯಿಲ್ಲ; ಆದರೆ ಯಾವುದಾದರೊಂದು ಮಾತಿನ ಅಂಶದಲ್ಲಿ ಅಥವಾ ಸನ್ನಿವೇಶದಲ್ಲಿ ಇರುವ ರಸಭಾವಾದಿಗಳಿಗೆ ಪುಷ್ಟಿಯನ್ನಿತ್ತು ಸ್ಪಷ್ಟಗೊಳಿಸುವ ತಂತ್ರಗಳನ್ನು ರಾಗಗಳು ಬೆಳಸಿಕೊಂಡಿವೆ. ಶಾಸ್ತ್ರೀಯ ಪರಿಸರದಲ್ಲದ ಪ್ರಯುಕ್ತವಾದ ಸಂಗೀತಕ್ಕೂ ರಸಭಾವ ಪ್ರತೀತಿಗೆಂದು ಉದ್ದೇಶಿಸಿದ ಗೇಯಪ್ರಯೋಗಕ್ಕೂ ಇರುವ ವ್ಯತ್ಯಾಸಗಳನ್ನು ಸಂಗೀತಸಂಯೋಜಕರು ಗಮನಿಸಬೇಕು.

ಸಂಗೀತದಲ್ಲಿ ಲಲಿತವಾದ ಸ್ವರಸಂಚಾರಗಳನ್ನು ಮೃದುಧ್ವನಿಯಲ್ಲಿ ಹಾಡಿನುಡಿಸುವುದರಿಂದ ಮೃದುಭಾವಗಳನ್ನು, ನಿಧಾನಗತಿಯಲ್ಲಿ ಚೌಕಗಮಕಗಳಿರುವ ಮೃದು ಸ್ವರಸಂಚಾರಗಳಿಂದ ಶಾಂತವಾದ ಮತ್ತು ಆಳವಾದ ಭಾವನೆಗಳನ್ನು, ಓಡುವ (=ಜಾರು) ಸ್ವರಸಂಚಾರಗಳ ತೀವ್ರಗತಿಯಿಂದ ಉತ್ಸಾಹ, ಕುತೂಹಲ ಇತ್ಯಾದಿ ಭಾವನೆಗಳನ್ನೂ ರಭಸವಾದ ಸ್ವರಸಂಚಾರಗಳನ್ನು ದ್ರುತಲಯದಲ್ಲಿ ತಾರಸ್ಥಾಯಿಯಲ್ಲಿ ಹಾಡಿನುಡಿಸುವುದರಿಂದ ಆವೇಗ, ಉದ್ವೇಗ ಮತ್ತು ಉಗ್ರಭಾವನೆಗಳನ್ನು ಪೋಷಿಸಲು ಸಾಧ್ಯವಿದೆ. ಆಯಾ ರಾಗಸಂಚಾರಗಳಲ್ಲಿ ಉಚಿತವಾದ ಗಮಕಗಳನ್ನೂ ಉದ್ರೇಕಿಸಿ ಉಪಯೋಗಿಸುವುದರಿಂದ ಶೋಕವೀರಕರುಣಾದಿ ರಸಗಳ ಛಾಯೆಗಳನ್ನು ತರಬಹುದು; ಭಯ, ಜಿಗುಪ್ಸೆ ಮುಂತಾದವುಗಳನ್ನು ವಿವಾದಿಸ್ವರಗಳ ಕುಶಲಪ್ರಯೋಗದಿಂದ ಸೂಚಿಸಬಹುದು. ಸಾಹಿತ್ಯದ ವಾಕ್ಯಗಳಲ್ಲಿರುವ ಪೂರ್ಣವಿರಾಮವನ್ನು ಸ್ವರಸಂಚಾರಗಳನ್ನು ಆಧಾರಸ್ವರಕ್ಕೆ ತಂದು ಅದನ್ನು ದೀರ್ಘಗೊಳಿಸುವುದರಿಂದಲೂ ಅರ್ಧವಿರಾಮವನ್ನು ಸಂವಾದಿ-ಅನುವಾದಿ

ಸ್ವರಗಳಿಂದಲೂ ಪ್ರಶ್ನೆಗಳನ್ನು ವಿವಾದಿಸ್ವರದಿಂದಲೂ ಇಂಗಿತಗೊಳಿಸಲು ಸಾಧ್ಯವಿದೆ. ಹೀಗೆ ವಾಕ್ಯಾರ್ಥದಲ್ಲಿರುವ ಬಿಗುಹುಗಳನ್ನೂ ಅವುಗಳ ವಿಲಯನವನ್ನು (resolution) ಸ್ವರಸಂಚಾರಗಳ ಪಾರಸ್ಪರ್ಯದಿಂದ ವ್ಯಕ್ತಗೊಳಿಸಲು ಸಂಗೀತದಲ್ಲಿ ಅವಕಾಶವಿದೆ.

ಮನಸ್ಸಿನ ಭಾವನೆಗಳನ್ನು ಪ್ರತಿಬಿಂಬಿಸುವುದರಲ್ಲಿ ಲಯವಾದ್ಯಗಳಿಗೆ ಮುಖ್ಯವಾದ ಪಾತ್ರವಿದೆ. ಸಮಗತಿ ಲಲಿತವಾಗಿ ನುಡಿಯುವ ತಬಲ, ಮೃದಂಗಗಳಿಂದ ಸ್ವಸ್ಥವೃತ್ತಿಯನ್ನೂ ವಿಷಮವಾದ, ಬಿಕ್ಕಟ್ಟಿನ ವಾದನದಿಂದ ಬಿಗುಹುಗಳನ್ನೂ ಸೂಚಿಸಬಹುದು. ವಿವಿಧ ಪ್ರಾಣಿಪಕ್ಷಿಗಳ, ವಾಹನಗಳ, ಗುಡುಗು, ಮಳೆ ಮುಂತಾದ ಪ್ರಾಕೃತಿಕ ಘಟನೆಗಳ ಛಾಯೆಗಳನ್ನು ಚರ್ಮವಾದ್ಯಗಳ ವಾದನದಿಂದ ತೋರಿಸಬಹುದು. ಚೆಂಡೆ, ಭೇರಿ, ನಗಾರಿ, ತಮಟೆಗಳಂತಹ ವಾದ್ಯಗಳ ರಭಸವಾದನವನ್ನು ಕೋಲಾಹಲ, ಭಯ, ರೌದ್ರ ಯುದ್ಧ, ಆಸುರೀ ಮನೋಭಾವ ಇತ್ಯಾದಿಗಳ ಅಭಿವ್ಯಕ್ತಿಯಲ್ಲಿ ಬಳಸಬಹುದು. ವಿಲಂಬಿತ ಲಯದಲ್ಲಿ ವಾದ್ಯಗಳನ್ನೂ ನುಡಿಸುವುದರಿಂದ ರಂಗದಮೇಲೆ ನಡೆಯುವ ಘಟನೆಗಳ ನಿಧಾನಗತಿಯನ್ನೂ ಮಧ್ಯಲಯದಿಂದ ಸಾಮಾನ್ಯ ಗತಿಯನ್ನೂ ದ್ರುತಲಯದಿಂದ ವೇಗ, ಉದ್ವೇಗ, ಉದ್ರೇಕಗಳನ್ನೂ ಸೂಚಿಸಬಹುದು.

ಲಘುಶಾಸ್ತ್ರೀಯ ಅಥವಾ ಸುಗಮ ಸಂಗೀತವನ್ನು ನೃತ್ಯನಾಟಕಗಳಲ್ಲಿ ಉಪಯೋಗಿಸುವುದರಿಂದ ಹೆಚ್ಚಿನ ಪ್ರಯೋಜನವೂ ಪ್ರಯೋಗಸ್ವಾತಂತ್ರ್ಯವೂ ದೊರೆಯುತ್ತವೆ. ಏಕೆಂದರೆ ಅದರ ವ್ಯಾಕರಣವು ಶಾಸ್ತ್ರೀಯ ಸಂಗೀತದ್ದಕ್ಕಿಂತ ಭಿನ್ನವಾದುದು, ಸಡಿಲವಾದುದು, ನಮ್ಯವಾದುದು. ಅದರಲ್ಲಿ ಸ್ವರಸಂಚಾರಗಳನ್ನು ಒಂದೇ ರಾಗಕ್ಕೆ ಮಿತಿಗೊಳಿಸಬೇಕಾಗಿಲ್ಲ, ಹಾಡನ್ನು ತಾಳಾವರ್ತದಿಂದ ಅಳೆಯಬೇಕಾಗಿಲ್ಲ. ಭಾವಪ್ರತಿಪಾದನೆಗೆ ಅನುಕೂಲವಾಗುವಂತೆ ಯಾವ ಸ್ವರಸ್ಥಾನಗಳನ್ನು ಬೇಕಾದರೂ ಉಪಯೋಗಿಸಬಹುದು. ಅವುಗಳಿಗೆ ಅಳವಡುವ ಗಮಕಗಳು ಲಘುವಾಗಿಯೂ ಸ್ವರಕಂಪಕ್ಕಿಂತ ಸ್ವರಪುಷ್ಟಿಗೆ ಒತ್ತುಕೊಡುವಂತಹದೂ ಆಗಿರುತ್ತವೆ. ಹಾಡಿನ ಗತಿಯನ್ನು ಲಯವು ನಿರ್ವಹಿಸುವುದರಿಂದ ಅದರ ವಿಭಾಗಗಳ ದೈರ್ಘ್ಯದಲ್ಲಿ ತಕ್ಕಮಟ್ಟಿನ ಸ್ವಾತಂತ್ರ್ಯವನ್ನು ತೆಗೆದುಕೊಳ್ಳಬಹುದು. ಕಂಠಧ್ವನಿಯನ್ನು ಸಂಚುಗೊಳಿಸಿ, ಗಾತ್ರವನ್ನು ಹೆಚ್ಚಿಸಿ, ಅನೇಕ ಧ್ವನಿಭಾರಗಳನ್ನೂ (Voice inflexions) ಕಾಕುಗಳನ್ನೂ ಉಪಯೋಗಿಸಲು ಇಲ್ಲಿ ಅವಕಾಶವಿರುವುದರಿಂದ ಸಾಹಿತ್ಯಾಂಶದ ಭಾವಗಳಿಗೆ ಅನುಗುಣವಾಗಿ ಸಂಗೀತವನ್ನು ಹೊಂದಿಸಲು ಆಗುತ್ತದೆ.

ಅಂತೆಯೇ ಶಾಸ್ತ್ರೀಯಸಂಗೀತದಲ್ಲಿ ಇಟ್ಟುಕೊಳ್ಳುವ ಪಕ್ಕವಾದ್ಯಗಳ ಮಿತಿಯೂ ಅದೇತನವೂ ಸುಗಮಸಂಗೀತದಲ್ಲಿಲ್ಲ. ಸುಗಮಸಂಗೀತದಲ್ಲಿ ಹಿಮ್ಮೇಳದ ಗಾತ್ರವನ್ನು - ಅತಿಯನ್ನು ವರ್ಜಿಸಿ-ಬೇಕಾದ ಹಾಗೆ ಹೆಚ್ಚಿಸಿಕೊಳ್ಳಬಹುದು. ಅದರಲ್ಲಿ ಆವಶ್ಯಕತೆ, ಔಚಿತ್ಯಗಳಿಗೆ ಅನುಸಾರವಾಗಿ ಶಾಸ್ತ್ರೀಯಸಂಗೀತದ ವಾದ್ಯಗಳನ್ನೂ ಪಾಶ್ಚಿಮಾತ್ಯ

ಸಂಗೀತದ ಆಮದಾದ ಪಿಟೀಲು, ಸ್ಯಾಕ್ಸೋಫೋನ್, ಕ್ಲಾರಿನೆಟ್, ಕೇಸಿಯೋ ಮುಂತಾದ ವಾದ್ಯಗಳನ್ನೂ ಜಾನಪದೀಯ ಅಥವಾ ಅರ್ಧಜಾನಪದೀಯ ವಾದ್ಯಗಳನ್ನೂ ಉಪಯೋಗಿಸಲು ಅವಕಾಶವಿದೆ. ಯಾವ ವಾದ್ಯವನ್ನು ಯಾವಾಗ, ಹೇಗೆ ಬಳಸಬೇಕೆಂಬುದು ಸಂಗೀತಸಂಯೋಜಕನ ಕೌಶಲ ಮತ್ತು ಸಾಮರ್ಥ್ಯಗಳ ಅಳತೆಯಾಗಿದೆ. ಇವುಗಳ ದಟ್ಟತೆಯನ್ನು ಕೋಲಾಹಲ, ವಿಜೃಂಭಣೆ, ಉತ್ಸಾಹ, ವಿಜಯ ಮುಂತಾದ ಸಂದರ್ಭಗಳಲ್ಲಿ ಏರ್ಪಡಿಸಬಹುದು. ಹಿಮ್ಮೇಳದ ಸಂಗೀತವು ನೃತ್ಯನಾಟಕದಲ್ಲಿ ಉಪಯುಕ್ತವಾಗುವುದು ಮುಖ್ಯವಾಗಿ ಅದರ ನಾದವರ್ಣವೈವಿಧ್ಯಕ್ಕಾಗಿ, ಮತ್ತು ನಾಟಕೀಯ ಸನ್ನಿವೇಶಗಳಿಗೆ ಒತ್ತುಕೊಡುವುದಕ್ಕಾಗಿ.

ನೃತ್ಯನಾಟಕಗಳಲ್ಲಿ ಸಂಗೀತಸಂಯೋಜಕನ ಮುಖ್ಯ ಕರ್ತವ್ಯವೆಂದರೆ ಸಾಹಿತ್ಯಾಂಶಗಳಿಗೆ ಅನುರೂಪವಾಗಿರುವ ಛಂದೋಮಾದರಿಗಳನ್ನೂ ಲಯವಿನ್ಯಾಸಗಳನ್ನೂ ಏರ್ಪಡಿಸುವುದು. ಇದು ನೃತ್ಯಕ್ಕೆ ಆಧಾರವಾಗುತ್ತದೆ. ಇದು ಕೃತಕಪ್ರಯತ್ನವೆಂಬಂತೆ ತೋರಬಾರದು. ಏಕೆಂದರೆ ಜಟಿಲವಾದ 'ತೀರ್ಮಾನ'ಗಳನ್ನುಳ್ಳ ನೃತ್ತವು ನೃತ್ಯನಾಟಕದಲ್ಲಿ ಅಪವಾದರೂಪದಲ್ಲಿ ಮಾತ್ರ ಕಾಣಿಸಿಕೊಳ್ಳಬೇಕು.

೧೧. ನೃತ್ಯನಾಟಕದ ಸಂಪನ್ಮೂಲಗಳು : ನೃತ್ಯ

ನಾದಲಯಗಳು ಸಂಗೀತವೆಂಬ ಭಾಷೆಯನ್ನು ಏರ್ಪಡಿಸಿಕೊಂಡಿರುವಂತೆ ಶರೀರದ ಅಂಗಪ್ರತ್ಯಂಗೋಪಾಂಗ ವಿಕ್ಷೇಪಗಳು ನೃತ್ಯವೆಂಬ ಭಾಷೆಯನ್ನು ಏರ್ಪಡಿಸಿಕೊಳ್ಳುತ್ತವೆ. ಇಂತಹ ಶಾರೀರಕ ಚಲನೆಯನ್ನು ಪಶುಪಕ್ಷಿಗಳಿಂದ ಹಿಡಿದು ಮನುಷ್ಯನವರೆಗೆ ಎಲ್ಲ ಪ್ರಾಣಿಗಳೂ ತಮ್ಮ ಅರ್ಥ, ಇಂಗಿತ ಮತ್ತು ಭಾವಗಳನ್ನು ಸ್ವಾಂತಾಭಿವ್ಯಕ್ತಿಗಾಗಿಯೂ, ಅರ್ಥ, ಭಾವಗಳ ಸಂವಹನಕ್ಕಾಗಿಯೂ ಬುದ್ಧಿಪೂರ್ವಕವಾಗಿ ಅಥವಾ ಸಹಜಪ್ರವೃತ್ತಿಯಿಂದ (instinctive) ಬಳಸಿಕೊಳ್ಳುತ್ತವೆ. ಮಾನವನಲ್ಲಿ ಇದು ಭಾಷಾಪೂರ್ವ ಸಂಸ್ಕೃತಿಯ ಒಂದು ಮುಖ್ಯಾವಸ್ಥೆ. ನಾಗರಿಕತೆಯು ಬೆಳೆದ ಹಾಗೆಲ್ಲ ಅದು ಮಾತಿನಿಂದ ಹೇಳಬಹುದಾದುದಕ್ಕೂ ಹೇಳಲಾಗದುದಕ್ಕೂ ಇಂಬುಕೊಡುವ ಸಾಧನವಾಯಿತು. ವಾಗರ್ಥ ಪ್ರತಿಪಾದನೆಗಾಗಿಯೂ ರಸಾಭಿವ್ಯಕ್ತಿಗಾಗಿಯೂ ಬಳಸಿಕೊಂಡಾಗ ನೃತ್ತವೆಂದೂ ಸೌಂದರ್ಯ ಪ್ರತೀತಿಗಾಗಿ ಮಾತ್ರ ಅಂಗಾದಿಗಳ ವಿಕ್ಷೇಪವನ್ನು ಬಳಸಿಕೊಂಡಾಗ ನೃತ್ತವೆಂದೂ ಸಂಜ್ಞೆಗಳನ್ನು ಅದು ಪಡೆದುಕೊಂಡಿತು. ಇದನ್ನು ಹಿಂದೆಯೇ ಪ್ರಸ್ತಾಪಿಸಿದೆ. ಎಲ್ಲ ಮಾನವ ಸಂಸ್ಕೃತಿಗಳಲ್ಲಿಯೂ ಇದು ಮೂಲಭೂತ ಪ್ರವೃತ್ತಿ. ವಿಕಾಸಕ್ರಮದಲ್ಲಿ ಸಾಧಾರಣವಾದ ಒಂದು ಘಟ್ಟ. ಮಾತು ಹೇಳಬೇಕಾಗಿರುವುದನ್ನು ಅದಿಲ್ಲದೆಯೇ ಸಂಗೀತನೃತ್ಯಗಳ ಮೂಲಕ ತೋರಿಸಿದರೆ ಅದು ಬ್ಯಾಲೆ ಎನ್ನಿಸಿಕೊಳ್ಳುತ್ತದೆ.

ನೃತ್ಯರೂಪಕದ ಅಂಗವಿದ್ಯೆಗಳು ಯಾವವು? ಅದನ್ನು ರೂಪಿಸುವ

ಕುಶಲಕರ್ಮಿಗಳು ಯಾರು ? ಅದಕ್ಕೆ ಮಾಡಿಕೊಳ್ಳಬೇಕಾದ ಪೂರ್ವಸಿದ್ಧತೆಗಳೇನು ? ಈ ಮತ್ತಿತರ ಪ್ರಶ್ನೆಗಳಿಗೆ ಸಮರ್ಪಕ ಉತ್ತರಗಳನ್ನು ಸುಮಾರು ಎರಡು ಸಾವಿರ ವರ್ಷಗಳಷ್ಟು ಹಿಂದೆಯೇ ಭರತಮುನಿಯು ತನ್ನ ನಾಟ್ಯಶಾಸ್ತ್ರದಲ್ಲಿ ನೀಡಿದ್ದಾನೆ. ಅವನ ಪ್ರಶ್ನೆಗಳೂ ಉತ್ತರಗಳೂ ದಶರೂಪ(ಕ)ಗಳನ್ನು ಕುರಿತಾಗಿದ್ದರೂ ಅವುಗಳ ಬಹುಭಾಗವು ನೃತ್ಯರೂಪಕಗಳಿಗೂ ಅನ್ವಯಿಸುತ್ತದೆ.

ಭರತಮುನಿಯು ನಾಟ್ಯೋಪಯೋಗಿಗಳಾದ ಭರತ, ವಿದೂಷಕ, ತೌರಿಕ, ನಟ, ಸೂತ್ರಧಾರ, ನಾಟ್ಯಕ(-ಕಾ)ರ, ಮುಕುಟಕಾರಕ, ಆಭರಣಕಾರಕ, ರಂಜಕ, ಚಿತ್ರಕಾರ, ಕಾರೂ, ಶಿಲ್ಪಿ ಮತ್ತು ಕುಶೀಲವರೆಂಬ ಹದಿಮೂರು ಬಗೆಯ ತಜ್ಞರು, ಕುಶಲಕರ್ಮಿಗಳು ಮತ್ತು ಕಲಾವಿದರು ಇವರುಗಳನ್ನೆಲ್ಲ ಭರತವಿಕಲ್ಪರೆಂದು ಹೆಸರಿಸಿ ವರ್ಣಿಸುತ್ತಾನೆ. ರೂಪಕದ ಎಲ್ಲ ಭಾರವನ್ನೂ ಹೊತ್ತು ಅನೇಕ ಪಾತ್ರಗಳನ್ನು ಭಾಂಡೋಪಕರಣ ವಾದ್ಯಗಳಿಂದ ಎತ್ತಿಹಿಡಿಯುವವನು ಭರತ. ತೌರಿಕನು ವಾದ್ಯಮೇಳದ ನಾಯಕ, ನಿರ್ವಾಹಕ. ಲೋಕಜನರ ದೈನಂದಿನ ವರ್ತನೆಯಲ್ಲಿ ರಸ, ಬಾವ, ಸ್ವಭಾವಗಳನ್ನು ಶಾಸ್ತ್ರಾನುಸಾರವಾಗಿ ಬೇರೆಬೇರೆ ಪಾತ್ರಗಳ ಮೂಲಕವಾಗಿ ಆಡಿಸಿತೋರಿಸುವವನು ನಾಟ್ಯಕಾರ. ಬೇರೆ ಬೇರೆ ಪಾತ್ರಗಳಿಗೆ ಉಚಿತವಾದ ಕಿರೀಟ, ಮುಖವಾಡ ಮುಂತಾದವುಗಳನ್ನು ತಯಾರಿಸಿಕೊಡುವವನು ಮುಕುಟಕಾರಕ. ಪಾತ್ರೋಚಿತವಾದ ಆಭರಣಗಳನ್ನು ಸಿದ್ಧಪಡಿಸುವವನು ಆಭರಣಕಾರಕ. ಐದು ತೆರನಾದ ಮಾಲ್ಯಗಳನ್ನು ಮಾಡಿಕೊಡುವವನು ಮಾಲ್ಯಕೃತ್. ತೊಡುವ ಬಟ್ಟೆಗಳನ್ನು ಹೊಲೆದುಕೊಡುವವನು ವೇಷಕಾರ. ಪರದೆ ಮುಂತಾದವುಗಳನ್ನು ಚಿತ್ರಿಸುವವನು ಚಿತ್ರಕಾರ. ಇವನು ರಂಗಸ್ಥಲದಲ್ಲಿ ಪಾತ್ರವಿತರಣ, ಪಾತ್ರಚಲನವಲನವಿನ್ಯಾಸ ಮುಂತಾದವುಗಳನ್ನು ಬ್ಯಾಲೆ ಹಾಗೂ ಆಪೆರಗಳಲ್ಲಿ ಮೊದಲಿನಲ್ಲೆಯೇ ಚಿತ್ರಿಸಿ ಸಿದ್ಧಪಡಿಸುತ್ತಾನೆ. ಬಟ್ಟೆಗೆ ಬಣ್ಣಹಾಕುವವನು ರಂಜಕ, ಅರಗು, ಕಲ್ಲು, ಮರ, ಲೋಹ ಮುಂತಾದವುಗಳಿಂದ ರಂಗೋಪಯೋಗಿ ವಸ್ತುಗಳನ್ನು ತಯಾರಿಸುವವನು ಕಾರೂ. ಇದಲ್ಲದೆ ಬೇರೆ ಬೇರೆ ಬಗೆಯ ಶಿಲ್ಪದ ಕೆಲಸಗಳನ್ನು ಮಾಡುವವನು ಶಿಲ್ಪಿ. ಕುಶೀಲವನು ವಾದ್ಯವಾದನ ತಜ್ಞ. ಒಂದು ನಾಟಕವನ್ನು ಪ್ರಯೋಗಕ್ಕೆ ಸಿದ್ಧಪಡಿಸುವುದು ಎಷ್ಟು ಸಂಕೀರ್ಣವೂ, ಶ್ರಮಕ್ಷಮವೂ ಆಗಿರುವ ಉದ್ಯಮವೆಂಬುದೂ ಎಷ್ಟೆಲ್ಲ ತಜ್ಞರ ಸಂಘಟನೆ ಹಾಗೂ ಸಹಕಾರಗಳನ್ನು ಅವಲಂಬಿಸುತ್ತದೆಂಬುದೂ ಇದರಿಂದ ತಿಳಿಯುತ್ತದೆ.

ನೃತ್ಯನಾಟಕ ನಿರ್ಮಾಣದ ಕೆಲಸವು ವಸ್ತುವಿನ ಆಯ್ಕೆಯಿಂದ ಪ್ರಾರಂಭವಾಗುತ್ತದೆ. ಇದನ್ನು ಇತಿವೃತ್ತವಾಗಿ (plot) ಪರಿವರ್ತಿಸುವುದು ಮುಂದಿನ ಹೆಜ್ಜೆ. ನಂತರ ಪಾತ್ರಗಳು ಯಾವವು, ಯಾವ ಯಾವ ಪಾತ್ರದಿಂದ ರೂಪಕವು ಎಷ್ಟು ಮತ್ತು ಹೇಗೆ ಮುಂದುವರೆಯುತ್ತದೆ ಎಂಬುದನ್ನು ಹಂತದಲ್ಲಿ ನಿರ್ಧರಿಸಲಾಗುತ್ತದೆ. ನಂತರ ಈ ಪಾತ್ರಗಳನ್ನು ಅಭಿನಯಿಸುವ ನಟನಟಿಯರ ಆಯ್ಕೆ, ಇದರಲ್ಲಿ ಅಡಗಿರುವ

ತತ್ತ್ವಗಳನ್ನೂ ನಟನಟಿಯರ ದೇಹಲಕ್ಷಣ, ಸ್ವಭಾವ, ಮನೋವೃತ್ತಿ ಮೊದಲಾದವುಗಳನ್ನೂ ಭರತಮುನಿಯು ವೈಜ್ಞಾನಿಕವಾಗಿ, ಸಮಗ್ರವಾಗಿ, ಯಾವುದೇ ಆಧುನಿಕ ಕ್ಯಾಸ್ಟಿಂಗ್ (casting)ನ ಉದ್ದೇಶ, ಸಾಧನೆ ಮತ್ತು ಸಿದ್ಧಿಗಳನ್ನು ಮುಂಗಂಡು ನಿರೂಪಿಸಿದ್ದಾನೆ. ರೂಪಕಗಳನ್ನಾಗಲಿ ನೃತ್ಯನಾಟಕಗಳನ್ನಾಗಲಿ ರಂಗಪ್ರದರ್ಶನಕ್ಕೆ ಸಿದ್ಧಪಡಿಸಲೆಳಸುವವರಿಗೂ ಇದರ ಶ್ರದ್ಧಾಪೂರ್ಣ ಅಭ್ಯಾಸವು ಅಪೇಕ್ಷಣೀಯ ಮಾತ್ರವಲ್ಲ, ಅನಿವಾರ್ಯವೇ ಹೌದು. ನೃತ್ಯನಾಟಕವಾದರೆ ಅದರಲ್ಲಿ ಪ್ರಯುಕ್ತವಾಗುವ ನೃತ್ತ ಮತ್ತು ನೃತ್ಯಗಳನ್ನು ಮಾಡುವ ನರ್ತಕನರ್ತಕಿಯರನ್ನು ಈ ಹಂತದಲ್ಲಿಯೇ ಆಯ್ಕೆ ಮಾಡಬೇಕು. ಬ್ಯಾಲೆಯಾದರೆ ಆಯ್ಕೆಯ ಕ್ಷೇತ್ರ ಇನ್ನೂ ಕಿರಿದಾಗಿ, ಕೆಲಸವು ಕಠಿನವಾಗುತ್ತದೆ. ಸಾಹಿತ್ಯ ಸಂಭಾಷಣೆಗಳನ್ನು ರಚಿಸುವವರು ಬೇಕಾಗಿಲ್ಲವೆಂದಲ್ಲ, ವಾಸ್ತವವಾಗಿ ಅವರ ಅಗತ್ಯವು ಇನ್ನೂ ಹೆಚ್ಚಾಗುತ್ತದೆ; ಮಾತಿನ ಬಳಕೆಯೇ ಇಲ್ಲದೆ ಅದರ ಅರ್ಥಭಾವಗಳನ್ನು ಪರಿಣಾಮಕಾರಿಯಾಗಿ ಸಂವಹನಗೊಳಿಸಲು ಅವನಿಂದ ಸಂಗೀತನೃತ್ಯಸಂಯೋಜಕರಿಗೆ ಇನ್ನೂ ಹೆಚ್ಚಿನ ಮಾರ್ಗದರ್ಶನ, ಸಲಹೆ, ಸಹಾಯಗಳ ಆವಶ್ಯಕತೆಯು ಇನ್ನೂ ಹೆಚ್ಚಾಗುತ್ತದೆ.

ಪಾತ್ರಗಳು ಪರಿಣಾಮಕಾರಿ ಅಭಿನಯಿಸಬೇಕಾದರೆ ಅವರು ರಂಗದಮೇಲೆ ಇರುವಷ್ಟು ಕಾಲದ ಚಲನವಲನಗಳನ್ನೂ ಅಭಿನಯ ತಂತ್ರಗಳನ್ನೂ ನಿರ್ದೇಶಕನು ಗಮನಿಸಿದರೆ ಸಾಲದು; ಅವರ ಪ್ರವೇಶ, ನಿರ್ಗಮನಗಳ ಶೈಲಿಯೂ ಅಷ್ಟೇ ಮುಖ್ಯ. ಇದಕ್ಕಾಗಿ ಒಂದು ಸಲಹೆಯನ್ನು ನೀಡಬಹುದು : ಗೀತರೂಪಕಗಳ ಪ್ರತಿಯೊಂದು ಮುಖ್ಯಪಾತ್ರದ ಪ್ರವೇಶನಿರ್ಗಮನಗಳನ್ನೂ ಅದಕ್ಕೆ ಉಚಿತವಾದ, ನಿಯತವಾದ ಒಂದು ಸ್ವರಸಂಚಾರದಿಂದ ವಿಶಿಷ್ಟಗೊಳಿಸಬಹುದು; ಅಲ್ಲದೆ ಅದರ ಒಂದೊಂದು ಪ್ರವೇಶನಿರ್ಗಮನದಲ್ಲಿಯೂ ಆಯಾ ಸನ್ನಿವೇಶಕ್ಕೆ ಉಚಿತವಾದ ಭಾವಕ್ಕೆ (mood) ಅನುಗುಣವಾದ ಲಯದಲ್ಲಿ ಈ ಸ್ವರಸಂಚಾರವನ್ನು ಹಿಗ್ಗಿಸುವುದು, ಕುಗ್ಗಿಸುವುದು, ಆವೇಗಗೊಳಿಸುವುದು, ಮಂದಗೊಳಿಸುವುದು, ವಿಲಂಬಗೊಳಿಸುವುದು, ದ್ರುತಗೊಳಿಸುವುದು ಇತ್ಯಾದಿ ತಂತ್ರಗಳಿಂದ ಅಳವಡಿಸಬಹುದು. ಇದು ಆಯಾಪಾತ್ರವನ್ನು ಸೂಚಿಸುವ, ಜ್ಞಾಪಿಸುವ, ಪರಿಚಯಿಸುವ ಧಾತುಖಂಡವಾಗಿ (signature tune) ಪರಿಣಮಿಸಿ ಒಳ್ಳೆಯ ಪರಿಣಾಮವನ್ನು ಉಂಟುಮಾಡುತ್ತದೆ. ನೃತ್ಯರೂಪಕವಾದರೆ ಅಂತಹ ನಿಯತಧಾತುಖಂಡಕ್ಕೆ ನಿಯತವೂ ಉಚಿತವೂ ಆದ ಚಾರಿಗಳನ್ನು ಹೊಂದಿಸಿ ವಿಶಿಷ್ಟಕರಣ (ಅಡವು)ಗಳನ್ನು ಒಂದೊಂದು ಮುಖ್ಯಪಾತ್ರದ ಪ್ರವೇಶನಿರ್ಗಮನಗಳಲ್ಲಿ ಉಪಯೋಗಿಸಬಹುದು. ಅದನ್ನು ಆಯಾ ಪ್ರವೇಶ ನಿರ್ಗಮನಗಳಿಗೆ ಉಚಿತವಾದ ಲಯದಿಂದ ಸೂಕ್ತವಾಗಿ ಬದಲಾಯಿಸಿಕೊಳ್ಳುವುದರಿಂದ ಆಯಾ ಪಾತ್ರದ ಆಗಿನ ಮನಃಸ್ಥಿತಿಯನ್ನು ಸೂಚಿಸಬಹುದು.

ಆಯಾ ಪಾತ್ರಗಳಿಗೆ ಉಚಿತವಾದ, ಎಂದರೆ ಸಹಜವೆಂದು ತೋರುವ,

ಆಹಾರ್ಯವೂ, ಮುಖವರ್ಣವೂ ಪ್ರದರ್ಶನದ ಯಶಸ್ಸಿಗೆ ಮುಖ್ಯವೇ. ಉತ್ಪ್ರೇಕ್ಷಿತ ಶೈಲಿಯ (stylized) ಪ್ರಯೋಗವಾದರೆ ಆಯಾ ಪಾತ್ರಕ್ಕೆ ಸ್ವಭಾವೋಚಿತವಾದ ಒಂದು ಸ್ಥಾಯಿಭಾವವನ್ನು ಸಂಕೇತಿಸುವ ಒಂದು ಬಣ್ಣವನ್ನು ಮುಖವರ್ಣಿಕೆಯಾಗಿ ನಿಯತವಾಗಿ ಬಳಸಬಹುದು, ಅಥವಾ ಅಂತಹ ಮುಖವಾಡವನ್ನು ಉಪಯೋಗಿಸಬಹುದು. ಇಂತಹ ಪ್ರಯೋಗವು ಭರತಮುನಿಯ ಕಾಲದಲ್ಲಿಯೇ ಇದ್ದುದರ ಸೂಚನೆಯು ನಾಟ್ಯಶಾಸ್ತ್ರದಲ್ಲಿ ದೊರೆಯುತ್ತದೆ.

ಪಾತ್ರೋಚಿತವಾದ ಮಾತೂ ಆಂಗಿಕಾಭಿನಯವೂ ಪ್ರದರ್ಶನದ ಇನ್ನೊಂದು ಮುಖ್ಯಾಂಶ. ಸಹೃದಯನಿಗೆ ಪಾತ್ರಗಳ ಬಗೆಗೆ ಸಹಾನುಭೂತಿಯೂ ಇದೇ ಆ ಪಾತ್ರವೆಂಬ ದೃಢವಿಶ್ವಾಸವೂ ಮೂಡಬೇಕಾದರೆ ಇವು ಮತ್ತು ವೇಷಭೂಷಣಗಳೇ ಆಧಾರ. ಪ್ರತಿಯೊಂದು ಪಾತ್ರವೂ ತನಗೆ ಸಹಜವಾದ ಭಾಷೆಯ ಅಥವಾ ಉಪಭಾಷೆಯ ನುಡಿಗಟ್ಟು ಮತ್ತು ಉಚ್ಚಾರಗಳಲ್ಲಿ ಮಾತನಾಡಬೇಕು. ಅಥವಾ ಹಾಡಬೇಕು. ನಾಟಕಸಾಹಿತಿಯು ಇತ್ತ ಗಮನಹರಿಸಬೇಕು. ಇದಕ್ಕೆ ಸಂವಾದಿಯಾದ ಆಂಗಿಕಾಭಿನಯವನ್ನು ಅಳವಡಿಸಬೇಕು. ಮಾತಿಗೆ ತಕ್ಕ ಸಂಗೀತವನ್ನು ರಚಿಸುವುದು ಕಷ್ಟ, ಆದರೆ ಅತ್ಯಾವಶ್ಯಕ. ಶಾಸ್ತ್ರೀಯ, ಸುಗಮ, ಜಾನಪದ ಮುಂತಾದ ಶೈಲಿವೈವಿಧ್ಯಗಳನ್ನು ಪಾತ್ರೋಚಿತವಾಗಿ ಉಪಯೋಗಿಸಬೇಕು. ಸಂಗೀತ ಸಂಯೋಜಕರು ಇಲ್ಲಿ ಒಂದು ಪರಿಣಾಮಕಾರಿಯಾದ ತಂತ್ರವನ್ನು ಅಳವಡಿಸಿಕೊಳ್ಳಲು ಅವಕಾಶವಿದೆ : ಇದೆಂದರೆ ಪಾತ್ರಗಳಲ್ಲಿಯೂ ಉದ್ಭವಿಸುವ ಭಾವರಸಗಳನ್ನು ಗೇಯಾಂಶ-ವಾದನಾಂಶಗಳ ವೇಗ, ಸ್ವರಕಾಕು, ರಾಗಕಾಕು, ದೇಶಕಾಕು ಇತ್ಯಾದಿಗಳಿಂದ ಪೋಷಿಸುವುದು.

ಇನ್ನು, ಅಭಿನಯಶಾಸ್ತ್ರದಲ್ಲಿ ನೃತ್ಯನಾಟಕಗಳಿಗೂ ಬ್ಯಾಲೆಗಳಿಗೂ ದೊರೆಯುವ ಸಂಪನ್ಮೂಲಗಳನ್ನು ಸಂಕ್ಷೇಪವಾಗಿ ಪರಿಶೀಲಿಸಬಹುದು. ಅಭಿನಯವು ಲೋಕಧರ್ಮಿ ಮತ್ತು ನಾಟ್ಯಧರ್ಮಿ ಎಂದು ಎರಡುವಿಧ. ಇವುಗಳಲ್ಲಿ ಪುನಃ ಚಿತ್ರವೃತ್ತ್ಯರ್ಪಿಕಾ ಮತ್ತು ಬಾಹ್ಯವಸ್ತ್ವನುಕಾರಿಣೀ ಎಂಬ ಎರಡೆರಡು ಪ್ರಭೇದಗಳಿವೆ. ಧರ್ಮಿ ಎಂದರೆ 'ಇತಿಕರ್ತವ್ಯತಾ', ಅಭಿನಯದ ಒಂದು ಬಗೆ. ಲೋಕಧರ್ಮದಂತೆಯೇ ವಸ್ತುಗಳನ್ನು, ಎಂದರೆ ಅವು ಲೋಕದಲ್ಲಿ ಇರುವ ಹಾಗೆಯೇ, ಪ್ರತಿನಿಧಿಸುವುದು ಲೋಕಧರ್ಮಿ, ವಾಸ್ತವಿಕ ಪ್ರತಿಪಾದನೆ. ವಸ್ತುಗಳನ್ನು ಬಿಟ್ಟು ಬೇರೆ ಸಂಜ್ಞೆ, ಸಂಕೇತಗಳಿಂದಲೂ ಆರೋಪಿಸಿದ ಅಥವಾ ಕಲ್ಪಿಸಿದ ಅರ್ಥಸಮೀಕರಣಗಳಿಂದಲೂ ಅವುಗಳನ್ನು ಪ್ರತಿಪಾದಿಸುವುದು ನಾಟ್ಯಧರ್ಮಿ. ಲೋಕದಲ್ಲಿರುವ ಬಾಹ್ಯವಸ್ತುಗಳನ್ನು ಅನುಕರಿಸಿ ತೋರಿಸುವುದು ಬಾಹ್ಯವಸ್ತ್ವನುಕಾರಿಣೀ. ಬಾಹ್ಯವಸ್ತುವೊಂದನ್ನು ಪ್ರಕಟವಾಗಿ ಹೇಳದೆ ಅದನ್ನು ಸಹೃದಯನ ಚಿತ್ತವೃತ್ತಿಗೆ ಅರ್ಪಿಸಿ ಅದರ ಅರ್ಥವನ್ನು ಸಂವಹನಗೊಳಿಸಿ ತಿಳಿಯುವಂತೆ ಮಾಡುವುದು ಚಿತ್ತವೃತ್ತ್ಯರ್ಪಿಕಾ. ಲೋಕದಲ್ಲಿರುವ ವಸ್ತುಗಳನ್ನೂ ಘಟನೆಗಳನ್ನೂ ಅವು ಇರುವ ರೀತಿಯಲ್ಲಿಯೇ,

ಸ್ವಲ್ಪವೂ ವ್ಯತ್ಯಾಸವಿಲ್ಲದ ಹಾಗೆ ಅಥವಾ ರೂಪಾಂತರಮಾಡದೆ, ಬಹುಮಂದಿ ನಟನಟಿಯರು ಪೂರ್ವಾಭ್ಯಾಸವಿಲ್ಲದೆಯೇ ಅಂಗಾಂಗಳ ಲಾವಣ್ಯಮಯವಲ್ಲದ ಚಲನವಲನಗಳಿಂದ ಆಶುಪ್ರಯೋಗದಲ್ಲಿ ಪ್ರತಿಪಾದಿಸುತ್ತಾರೆ. ಇದಕ್ಕೆ ಲೋಕಧರ್ಮಿ ಎಂದು ಹೆಸರು. ನಾಟ್ಯಧರ್ಮಿ ಎಂದರೆ ಮಾತುಗಳನ್ನು ಅಸ್ವಾಭಾವಿಕವಾದ ಶೈಲಿಯಲ್ಲಿ ಹೇಳುವುದು, ಅದ್ಭುತವಾದ, ವಿಚಿತ್ರ ವಸ್ತುಗಳನ್ನೂ ಸಾಹಸಮಯವಾದ ಘಟನೆಗಳನ್ನೂ ಸಾಂಕೇತಿಕವಾಗಿ ತೋರಿಸುವುದು, ದೀರ್ಘವಾದ ಸ್ವಗತಭಾಷಣ ಪ್ರಕಾಶ ಭಾಷಣಗಳನ್ನು ಮಾಡುವುದು, ನಾಟ್ಯಲಕ್ಷಣಗಳನ್ನೂ ಲಾವಣ್ಯಮಯವಾದ ಅಂಗಹಾರಗಳನ್ನೂ ಸ್ವರಾಲಂಕಾರಗಳನ್ನೂ ಪ್ರಯೋಗಿಸುವುದು, ತನ್ನ ಸ್ವಭಾವಕ್ಕೆ ಸಹಜವಲ್ಲದ ರೀತಿಯಲ್ಲಿ ವರ್ತಿಸುವುದು, ಲೋಕಪ್ರಸಿದ್ಧವಾದ ವಿಷಯಗಳನ್ನು ಅಭಿನಯಕ್ಕೆ ಅಳವಡಿಸಿಕೊಳ್ಳುವುದು, ಕೇಳದೆಯೇ ಇರುವುದನ್ನು ಕೇಳಿದಂತೆ ನಟಿಸುವುದು, ರಥಗಳು-ವಾಹನಗಳು-ಪರ್ವತಗಳು-ಆಯುಧಗಳು ಇತ್ಯಾದಿಗಳು ನಿಜವಾದವುಗಳೇನೋ ಎಂದು ಭ್ರಮೆ ಹುಟ್ಟಿಸುವ ರೀತಿಯಲ್ಲಿ ತಯಾರಿಸಿ ಉಪಯೋಗಿಸುವುದು ಇತ್ಯಾದಿ ಇತ್ಯಾದಿ. ಭರತಮುನಿಯು ಧರ್ಮಿಗಳನ್ನು ಹೀಗೆ ಉಪದೇಶಿಸಿದ್ದಾನೆ. ಇದನ್ನೆಲ್ಲ ನಮ್ಮ ಕಾಲದೇಶಗಳಿಗೆ ಅನ್ವಯಿಸಿಕೊಂಡು ವಿವರಗಳನ್ನು ಬದಲಾಯಿಸಿಕೊಳ್ಳಬಹುದು ಹಾಗೂ ವಿಸ್ತರಿಸಿಕೊಳ್ಳಬಹುದು.

ವಾಗರ್ಥ ಪ್ರತಿಪಾದನೆ, ಧ್ವನಿಯ ಪುಷ್ಟಿ, ಭಾವರಸಗಳ ಪ್ರತೀತಿ, ಸೌಂದರ್ಯಾಕೃತಿಯದರ್ಶನ - ಈ ಉದ್ದೇಶಗಳಿಗಾಗಿ ಮಾನವ ಶರೀರವನ್ನು ವಿಶ್ಲೇಷಿಸಿ ಸಕಲಸಾಧ್ಯತೆಗಳನ್ನೂ ಪ್ರಯೋಗಕ್ಷಮವನ್ನಾಗಿ ಮಾಡುವಲ್ಲಿ ಭಾರತೀಯ ನಾಟ್ಯವಿಜ್ಞಾನವು ಅನನ್ಯ, ಅದ್ಭುತ ಎಂದು ಉತ್ಪ್ರೇಕ್ಷೆಯಿಲ್ಲದೆ ಹೇಳಬಹುದು. ಅದು ಮಾನವ ದೇಹವನ್ನು ತಲೆ, ಎದೆ, ಕೈಗಳು, ಕಾಲುಗಳು, ಪಕ್ಕಗಳು, ಸೊಂಟ (ಮತ್ತು ಹೆಗಲುಗಳು) ಎಂಬ ಅಂಗಗಳನ್ನಾಗಿಯೂ ಕತ್ತು, ತೋಳುಗಳು, ಬೆನ್ನು, ಹೊಟ್ಟೆ, ತೊಡೆಗಳು, ಮುಂಗಾಲುಗಳು, ಮೊಳಕಾಲುಗಳು, ಭೂಷಣಗಳು (ಮತ್ತು ಮಣಿಕಟ್ಟುಗಳು) ಎಂಬ ಪ್ರತ್ಯಂಗಗಳನ್ನಾಗಿಯೂ ತಲೆಯಲ್ಲಿ ದೃಷ್ಟಿ, ಹುಬ್ಬು, ರೆಪ್ಪೆ, ಕಣ್ಣುಗುಡ್ಡೆ, ರೆಪ್ಪೆ, ಗಲ್ಲ, ಮೂಗು, ಉಸಿರು, ತುಟಿ, ಹಲ್ಲು, ನಾಲಿಗೆ, ಗದ್ದ, ಬಾಯಿ ಎಂಬ ಹನ್ನೆರಡು ಉಪಾಂಗಗಳನ್ನಾಗಿಯೂ, ಕಾಲುಗಳಲ್ಲಿ ಪ್ರಪದ, ಅಂಗಾಲು, ಹರಡು, ಹಿಮ್ಮಡಿ, ಬೆರಳುಗಳು ಎಂಬ ಉಪಾಂಗಗಳನ್ನಾಗಿಯೂ, ಕೈಗಳಲ್ಲಿ ಅಂಗೈ, ಹಿಂಗೈ, ಕೈಬೆರಳುಗಳು ಎಂಬ ಉಪಾಂಗಗಳನ್ನಾಗಿಯೂ ವಿಭಾಗಿಸಿದೆ. ಇವುಗಳಲ್ಲೆಲ್ಲ ಶರೀರದ ಒಂದು ಅಂಗುಲವನ್ನೂ ಬಿಡದೆ - ನಾಟ್ಯ ಮೂಲಕವಾದ ಪ್ರತಿಪಾದನೆಗಳನ್ನು ಚಲನವಲನಗಳನ್ನು ಶಾಸ್ತ್ರವು ವರ್ಣಿಸುತ್ತದೆ. ಇಲ್ಲಿ ಹೇಳಿರುವ ಗತಿ ಮತ್ತು ಸ್ಥಿತಿಗಳನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡವರು ನಾಟ್ಯಸಾಗರದ, ಅಭಿನಯಕಲೆಯ ಆಸೆಯ ದಡವನ್ನು ನಿಜವಾಗಿಯೂ ಮುಟ್ಟಿದವರು. ಇದನ್ನು ಬೇರೆಡೆ ಪ್ರಸ್ತಾಪಿಸಿದ್ದೇನೆ : ಆಸಕ್ತರು ನಾಟ್ಯಶಾಸ್ತ್ರ, ಸಂಗೀತಸುಧಾಕರ, ಸಂಗೀತರತ್ನಾಕರ, ಅಭಿನಯದರ್ಪಣ,

ಭರತಾರ್ಣವ, ನೃತ್ತರತ್ನಾವಳೀ ಮುಂತಾದ ಆಕರಗ್ರಂಥಗಳಿಂದ ತಿಳಿದುಕೊಳ್ಳಬೇಕು. ಈ ವಿವರಗಳ ಪ್ರಸಕ್ತಿಯು ಈ ಲೇಖನಕ್ಕಿಲ್ಲ.

ನೃತ್ಯನಾಟಕವು ಮುಖ್ಯವಾಗಿ ನಾಟ್ಯಧರ್ಮಿಯನ್ನು ಆಧರಿಸುತ್ತದೆ. ಅರ್ಥಭಾವಗಳ ಸಂವಹನಕ್ಕೆ ಲೋಕಸಹಜವಾಗಿರುವ ಚಲನವಲನಭಂಗಿಗಳನ್ನೇ ಉಪಯೋಗಿಸಿದರೂ ಅವುಗಳನ್ನು ಆದರ್ಶಗಳಿಸಿ, ಅಥವಾ ಉತ್ಪ್ರೇಕ್ಷಿತ ಶೈಲಿಗೆ ಒಳಪಡಿಸಿ ಬಳಸಲಾಗುತ್ತದೆ. ಇವುಗಳ ಪೈಕಿ ಮುಖ್ಯವಾಗಿ ಮೂವತ್ತಾರು ಬಗೆಯ ದೃಷ್ಟಿಗಳು ರಸಭಾವಾದಿಗಳ ಅಭಿವ್ಯಕ್ತಿಯಲ್ಲಿಯೂ ಅಸಂಯುತ, ಸಂಯುತ, ನಾನಾರ್ಥ, ನೃತ್ತ ಮುಂತಾದ ಹಸ್ತಗಳು ವಾಗರ್ಥಸಂವಹನದಲ್ಲಿಯೂ ಕ್ರಿಯಾಶೀಲವಾಗುತ್ತವೆ. ಹಸ್ತಗಳಿಗೆ ವಿಧಿಸಿರುವ ವಿನಿಯೋಗಗಳು (ಎಂದರೆ ಇಂತಹ ಸನ್ನಿವೇಶದಲ್ಲಿ ಇಂತಹ ಹಸ್ತವನ್ನು ಪ್ರಯೋಗಿಸಬೇಕೆಂಬ ಅನ್ವಯವು) ವ್ಯಕ್ತಿಯ ಕುಟುಂಬ, ಸಮಾಜ, ಸಂಸ್ಕೃತಿ, ಮತ, ಧರ್ಮ, ಪರಿಸರಗಳೆಲ್ಲದರ ಆಯಾಮಗಳನ್ನೂ ವ್ಯಾಪಿಸಿ, ಕಾಲದೇಶಗಳ ವ್ಯತ್ಯಾಸಕ್ಕೆ ಅನುಗುಣವಾಗಿ ಹೊಂದಿಕೊಳ್ಳಲು ಮತ್ತು ವಿಸ್ತರಿಸಲು ಶಕ್ಯವಾಗಿವೆ.

ಮೇಲೆ ಹೇಳಿರುವ ಅಂಗಪ್ರತ್ಯಂಗೋಪಾಗಗಳ ವಿಕ್ಷೇಪಗಳು ಬಿಡಿಬಿಡಿಯಾದವುಗಳು, ಶಾಸ್ತ್ರನಿರೂಪಣೆಯ ಸೌಕರ್ಯಕ್ಕೆಂದು ವರ್ಗೀಕರಿಸಲಾದವುಗಳು. ಇವುಗಳಲ್ಲಿ ಕೆಲವನ್ನು ಅಥವಾ ಹಲವನ್ನು ವಿವಿಧವಾಗಿ ಸಂಯೋಜಿಸಿ ಒಮ್ಮೆಗೇ ಅಭಿನಯಿಸುವುದರಿಂದ ಪ್ರಯೋಗವು ಮುನ್ನಡೆಯುತ್ತದೆ. ಇವುಗಳ ತಿಳಿವಳಿಕೆಯು ನೃತ್ತ-ನೃತ್ಯಸಂಯೋಜಕನಿಗೂ ನೃತ್ಯನಾಟಕ ಕರ್ತೃವಿಗೂ ಅಗತ್ಯವಾಗಿದೆ. ಇಂತಹ ಸಂಯೋಜನೆಗಳಲ್ಲಿ ಕಲವನ್ನು ಇಲ್ಲಿ ಸ್ಥಾಲೀಪುಲಾಕನ್ಯಾಯದಂತೆ ಪ್ರಸ್ತಾಪಿಸಬಹುದು : ನೃತ್ತಕರಣವೆಂಬುದು ಎಲ್ಲ ನೃತ್ತ, ನೃತ್ಯಗಳ ಮೂಲಘಟಕ, ಭಾಷೆಯಲ್ಲಿ ಪದಕದಂತೆ. ಶಿರಸ್ಸು, ಹಸ್ತ, ಪಾದ ಮುಂತಾದವುಗಳ ಬಿಡಿ ವಿಕ್ಷೇಪಗಳನ್ನು ಅಕ್ಷರಗಳೆಂದಿಟ್ಟುಕೊಂಡರೆ ಅವುಗಳ ಅರ್ಥಪೂರ್ಣ, ಸಮಂಜಸ ಸಂಯೋಜನೆಯಿಂದ ನೃತ್ತಕರಣವಾಗುತ್ತದೆ. ಅನೇಕ ಪದಗಳನ್ನು ಕಾರಕಸಂಬಂಧಗಳ ಮೂಲಕವಾಗಿ ವಿಶಿಷ್ಟಕ್ರಮದಲ್ಲಿ ಜೋಡಿಸಿದರೆ ವಾಕ್ಯವು ಉಂಟಾಗುವಂತೆ ಎರಡರಿಂದ ಒಂಭತ್ತರವರೆಗಿನ ಸಂಖ್ಯೆಯಲ್ಲಿ ವಿವಿಧ ನೃತ್ತಕರಣಗಳು ಸರಣಿಯಲ್ಲಿ ಸೇರಿಕೊಂಡು ಅಂಗಹಾರಗಳನ್ನು ಏರ್ಪಡಿಸುತ್ತವೆ. ಇವುಗಳನ್ನು ಮುಖ್ಯವಾಗಿ ನೃತ್ತದಲ್ಲಿ ಬಳಸಲಾಗುತ್ತದೆ. ಆದರೆ ಭರತಾದಿ ಮುನಿಗಳು ಇವಕ್ಕೆ - ರಸಭಾವಸನ್ನಿವಿಷ್ಟವಾದ ರೂಪಕಸಂದರ್ಭಗಳಲ್ಲಿ ಸಾರಭೂತವಾದ ವಿನಿಯೋಗಗಳನ್ನು ಹೇಳಿದ್ದಾರೆಂಬುದು ಗಮನಾರ್ಹವಾಗಿದೆ. ಒಂದೊಂದು ನೃತ್ತಕರಣಕ್ಕೂ ಅದರದೇ ಆದ ಹಸ್ತ ಭೇದಗಳು, ಪಾದವಿನ್ಯಾಸಗಳು, ಚಾರೀ, ಸ್ಥಾನಕ ಮುಂತಾದವುಗಳನ್ನು ವಿಧಿಸಿದೆ. ಅಲ್ಲದೆ ನೃತ್ತಕರಣವು ಆಯಾ ಸನ್ನಿವೇಶದಲ್ಲಿ ಪ್ರತೀತವಾಗಬೇಕಾದ ರಸದೊಡನೆ ಸಮಂಜಸವಾಗಿರಬೇಕು ಎಂಬ ಶಾಸ್ತ್ರನಿಯಮವೂ

ಇದೆ. ಚಾರೀ ಎಂದರೆ ನಿತಂಬ, ತೊಡೆ, ಮೊಳಕಾಲು ಮತ್ತು ಪಾದಗಳಿಂದ ಏರ್ಪಟ್ಟ ಚಲನೆ. ಎಲ್ಲ ರೂಪಕಗಳಿಗೂ ನೃತ್ಯಕ್ಕೂ ಇವೇ ಆಧಾರ. ಇವುಗಳಿಂದಲೇ ನಾಟಕದ ವಿವಿಧ ಕ್ರಿಯೆಗಳೂ ಸನ್ನಿವೇಶಗಳೂ ಉಂಟಾಗುತ್ತವೆ. ಒಂದೇ ಹೆಜ್ಜೆಯಿಂದ ಮುನ್ನಡೆದರೆ ಚಾರಿಯೆಂದೂ ಎರಡೂ ಪಾದಗಳಿಂದಾದರೆ ಚಾರೀಕರಣವೆಂದೂ ಹೆಸರು. ಆರು ಅಥವಾ ಒಂಭತ್ತು ಚಾರೀಕರಣಗಳನ್ನು ಸಂಯೋಜಿಸುವುದರಿಂದ ಆದ ಸಂಚಾರಕ್ಕೆ ಮಂಡಲವೆಂದು ಹೆಸರು. ಇಂತಹ ಸಂಚಾರವು ಭೂತಲದಲ್ಲಿ ಮಾತ್ರ ಆದರೆ ಅದು ಭೂ (ಅಥವಾ ಭೌಮ್ಯ) ಚಾರೀ, ಎಗರುವುದಿಂದ, ಹಾರುವುದರಿಂದ ಆದರೆ ಅದು ಆಕಾಶ ಚಾರೀ. ಇಂತಹ ಎಂಭತ್ತುನಾಲ್ಕು ಚಾರೀಗಳನ್ನು ಶಾಸ್ತ್ರವು ನಿರೂಪಿಸಿ ಪಶುಪಕ್ಷಿಸರೀಸೃಪಗಳ ಗತಿಗಳು, ಮನಸ್ಸಿನ ಹತ್ತು ಹಲವು ವ್ಯಾಪಾರಗಳು-ಬಿಗುಹುಗಳು ಮುಂತಾದವುಗಳನ್ನು ಸೂಚಿಸಲು ಅನುವಾಗುವ ಸಂಚಾರ ವಿಶೇಷಗಳನ್ನು ನಾಟ್ಯಧರ್ಮಿಯಲ್ಲಿ ನೃತ್ಯ ನಾಟಕಗಳಿಗೆ ಅಳವಡಿಸಿಕೊಳ್ಳಲು ಚಾರೀಗಳಿಂದ ಬಹುವಾದ ಪ್ರಯೋಜನವಿದೆ. ಚಾರೀಗಳಲ್ಲಿ 'ಶಾಸ್ತ್ರೀಯ' ಹಾಗೂ ಪ್ರಾಂತೀಯ ನಡೆಗಳೂ ಸೇರಿವೆಯೆಂಬುದನ್ನು ಗಮನಿಸಬೇಕು. ಇಷ್ಟೇ ಅಲ್ಲದೆ ವಿವಿಧ ಪಶುಪಕ್ಷಿಗಳ ನಡೆಯನ್ನು ಅನುಕರಿಸುವ ಗತಿಗಳನ್ನು ನಾಟ್ಯಶಾಸ್ತ್ರ, ನರ್ತನನಿರ್ಣಯ ಮುಂತಾದ ಗ್ರಂಥಗಳಲ್ಲಿ ನಿರೂಪಿಸಿದೆ. ಬ್ಯಾಲೆಗಳನ್ನೂ ನೃತ್ತಪ್ರಧಾನ ನಾಟಕಗಳನ್ನೂ ಸಂಯೋಜಿಸಿ ಉತ್ಪ್ರೇಕ್ಷಿತ ಶೈಲಿಯ (stylized) ಪ್ರಯೋಗಗಳನ್ನು ನಿರ್ಮಿಸಬಯಸುವವರಿಗೆ ಚಾರೀಗಳು ಎಂದಿಗೂ ಮುಗಿದು ಹೋಗದ ಸ್ಫೂರ್ತಿಭಂಡಾರಗಳಾಗಿವೆ.

ನಾಟ್ಯಶಾಸ್ತ್ರಗ್ರಂಥಗಳಲ್ಲಿ ನೃತ್ತನಾಟಕಗಳಿಗೆ ಅಗತ್ಯವಾದ ಇತರ ತಂತ್ರಗಳನ್ನೂ ವಿವರಿಸಲಾಗಿದೆ. ಭ್ರಮರೀ ಎಂದರೆ ನರ್ತಕನರ್ತಕಿಯರು ಒಂದು ಹೆಜ್ಜೆಯ ಮೇಲೆ ಅಥವಾ ಎರಡು ಹೆಜ್ಜೆಗಳನ್ನು ಜೋಡಿಸಿ ಅಥವಾ ಅಗಲಿಸಿ, ನೆಲದಮೇಲೆ ಅಥವಾ ಎಗರಿ ಗಿರ್ರನೆ ತಿರುಗುವುದು. ಇವುಗಳಿಗೆ ತಿರಿಪಗಳೆಂದೂ ಹೆಸರು. ಉತ್ಪ್ಲುತಿಯೆಂದರೆ ವಿವಿಧ ರೀತಿಗಳಲ್ಲಿ ಎಗರುವುದು. ಇಂತಹ ಮಾರ್ಗ ಮತ್ತು ದೇಶೀ ಉತ್ಪ್ಲುತಿಕರಣಗಳ ವರ್ಣನೆಗಳು ಶಾಸ್ತ್ರದಲ್ಲಿ ದೊರೆಯುತ್ತವೆ. ಯುದ್ಧ, ಶಸ್ತ್ರಾಸ್ತ್ರವಿಮೋಚನ, ಶೌರ್ಯ, ಪರಾಕ್ರಮ, ಉದ್ವೇಗ, ಹಾಸ್ಯ ಮುಂತಾದ ಸನ್ನಿವೇಶಗಳಲ್ಲಿ ಇವುಗಳನ್ನೂ ಚಾರೀಗಳನ್ನೂ ಬಳಸಬಹುದು. ರಂಗಸ್ಥಲದಲ್ಲಿ ಯಾವುದೇ ಕ್ರಿಯೆಯು ಒಂದು ನಿಲುವಿನ ಭಂಗಿಯಿಂದ (ಸ್ಥಾನಕ) ಮೊದಲಾಗುತ್ತದೆ ಅಥವಾ ಮುಗಿಯುತ್ತದೆ. (ಇವೆರಡರ ನಡುವಿನ ನೃತ್ತಕರ್ಮವೇ ಕರಣವೆನ್ನಿಸಿಕೊಳ್ಳುತ್ತದೆ). ಇಂತಹ ಸ್ಥಾನಕವು ಆಯಾ ಪಾತ್ರಗಳ ಮಾನಸಿಕ ಸ್ಥಿತಿಯನ್ನೂ ಸನ್ನಿವೇಶಗಳಲ್ಲಿರುವ ಭಾವನಾವ್ಯಾಪಾರವನ್ನೂ ಪರಿಣಾಮಕಾರಿಯಾಗಿ ಚಿತ್ರಿಸುತ್ತದೆ. ಪೌರಾಣಿಕ ನಾಟಕಗಳಲ್ಲಿ ವಿವಿಧ ದೈವೀ ಹಾಗೂ ಆಸುರೀ ಶಕ್ತಿಗಳನ್ನು ಸಾಂಕೇತಿಕವಾಗಿ ನಿರೂಪಿಸಲು ಇವೂ, ಪಿಂಡೀಬಂಧಗಳೆಂಬ ಅಂಗಾಂಗರಚನೆಗಳೂ ಶ್ರೇಷ್ಠಸಾಧನೆಗಳು.

ಮಾರ್ಗ ಮತ್ತು ದೇಶೀಪ್ರಕಾರಗಳ ಅನೇಕ ಸ್ಥಾನಕಗಳನ್ನು ನಿಂತ, ಕುಳಿತ ಮತ್ತು ಮಲಗಿದ ಭಂಗಿಗಳಲ್ಲಿ ಶಾಸ್ತ್ರವು ವರ್ಣಿಸುತ್ತದೆ. ನಾಟ್ಯಶಾಸ್ತ್ರಗ್ರಂಥಗಳಲ್ಲಿ ಮೈನಮೇಲು ಭಾಗದ ಚಲನೆಯಲ್ಲಿ ವೈವಿಧ್ಯವನ್ನೂ ನೈರಂತರ್ಯವನ್ನೂ, ಸೊಗಸನ್ನು ಕಲ್ಪಿಸುವ ವರ್ತನೀ, ಚಾಲಗಿಕಾ ಮತ್ತು ರೇಚಕಗಳನ್ನು ವಿವರಿಸಿದೆ. ಇವುಗಳಿಂದ ನೃತ್ತಸಂಯೋಜಕನು ವಿಶೇಷ ಪ್ರಯೋಜನವನ್ನು ಪಡೆಯಬಹುದು. ಮೇಲೆ ಹೇಳಿರುವ ನಾಟ್ಯತಂತ್ರಗಳಿಂದಾಗಿ ನೃತ್ಯನಾಟಕವು ಲೋಕಧರ್ಮಿಯಿಂದ, ರಮ್ಯವೂ ಸತ್ತ್ವಯುತವೂ ಆಗಿರುವ ನಾಟ್ಯಧರ್ಮಿಗೆ ಏರಿ ಉದಾತ್ತಗೊಳ್ಳುತ್ತದೆ.

೧೨. ಡಾ॥ ಸಾ.ಶಿ. ಮರುಳಯ್ಯರವರ ನೃತ್ಯರೂಪಕಗಳು

ಡಾ॥ ಮರುಳಯ್ಯನವರು ಸೃಜನಶೀಲರೂ ಪ್ರಗತಿಶೀಲರೂ ಆಗಿರುವ ಸಾಹಿತಿ. ಅವರು ಸಾಹಿತ್ಯದ ಹಲವು ಪ್ರಕಾರಗಳ ನೂತನ ರಚನೆಗಳನ್ನು ಮಾಡಿದ್ದಾರೆ. ಅವರ ಸ್ನೋವೈಟ್, ಪೃಥಾಪವಿತ್ರೆ, ಮನೆಯೊಳಗಣ ಕಿಚ್ಚು, ಅಂಬೆ, ಬಸವಣ್ಣ ಬಂದಾನೋ, ಬನವಾಸಿ, ಬಾದಾಮಿ, ಉಡುಪಿ, ಚೆನ್ನಿಚೆನ್ನಿ ಚೆನ್ನಲೆ, ತಥಾಗತ-ಬುದ್ಧದೇವ ಎಂಬ ಹತ್ತು ನೃತ್ಯ ರೂಪಕಗಳನ್ನು ನಾನು ಓದಿ ಸಂತೋಷಪಟ್ಟಿದ್ದೇನೆ. ಇವುಗಳಲ್ಲಿ ಮೊದಲನೆಯದು ಗ್ರಿಮ್ಸ್ ಸೋದರರ ಅದೇ ಹೆಸರಿನ ಕಾಲ್ಪನಿಕ ಶಿಶು ಕಥಾನಕ, ಫೇರಿ ಟೇಲ್ (fairytale). ಎರಡನೆಯದು ಮಹಾಭಾರತದ ಕುಂತಿಯನ್ನು ಕುರಿತ ಶ್ರೀ ಶಂಕರಪಿಳ್ಳೆಯವರ ರೂಪಕದಿಂದ ಪ್ರೇರಿತವಾದುದು, ನಾಲ್ಕನೆಯದೂ ಮಹಾಭಾರತದ ಅಂಬೆಯನ್ನು ಕುರಿತ ಸ್ವತಂತ್ರರೂಪಕ, ಉಳಿದವುಗಳು ಚಾರಿತ್ರಕ ಕಥಾನಕಗಳನ್ನು ಆಧರಿಸಿದ ರೂಪಕಗಳು. ಎಲ್ಲದರಲ್ಲಿಯೂ ಹಿಂದೂ ಸಂಸ್ಕೃತಿಯಲ್ಲಿ ಅಭಿವ್ಯಕ್ತಿಗೊಂಡ ಸಾಮಾಜಿಕ ನೀತಿ ಅಥವಾ ಆದರ್ಶದ ಸಂದೇಶವಿದೆ, ಕಾವ್ಯೋದಯಕ್ಕೆ ಹೇತುವಾದ ಒಂದು ಸಂಘರ್ಷವಿದೆ. ಇದರ ನಿರೂಪಣೆ, ವಿಶ್ಲೇಷಣೆ ಮತ್ತು ಪರಿಹಾರಕ್ಕಾಗಿ ರೂಪಕಗಳು ಹುಟ್ಟಿಕೊಂಡಿವೆ. ಇವುಗಳಲ್ಲಿ ಕೆಲವಕ್ಕೆ ಈಗಾಗಲೇ ರಂಗಸ್ಥಲದಲ್ಲಿ ಯಶಸ್ವಿ ಪ್ರಯೋಗವು ನಡೆದಿದೆ.

ಮೇಲೆ ಹೇಳಿದ ಹತ್ತು ನಾಟಕಗಳನ್ನೂ ನೃತ್ಯರೂಪಕಗಳೆಂದು ಕರೆಯಲಾಗಿದೆ. ಇವೆಲ್ಲ ವಾಚಿಕಾಭಿನಯ ಪ್ರಧಾನಗಳಾದುದರಿಂದ ಬ್ಯಾಲೆಗಳಂತೂ ಅಲ್ಲ; ಕೇವಲ ಗೀತಗಳಿಂದ ನಿರ್ವಾಹಗೊಳ್ಳುವುದಿಲ್ಲವಾದುದರಿಂದ ಆಪೆರಗಳೂ ಅಲ್ಲ. ಯಾವುದೇ ನಾಟಕವು ನೃತ್ತ-ನೃತ್ಯಮಯವೂ ಅಲ್ಲ. ಸಂಗೀತಮಯವೂ ಅಲ್ಲ. ಅವುಗಳಲ್ಲಿ ಈ ಕಲಾಭಿವ್ಯಕ್ತಿಗಳನ್ನು ಇತಿವೃತ್ತದ ಚಲನೆಗಾಗಿಯಾಗಲಿ ಪಾತ್ರನಿರೂಪಣೆಗಾಗಲಿ ಬಳಸಿಲ್ಲ. ಬದಲು ಅಲ್ಲಲ್ಲಿ ನೃತ್ತವೂ, ನೃತ್ಯವೂ, ಹಾಡುಗಳೂ ಪ್ರಯುಕ್ತವಾಗಿವೆ. ಕೆಲವು ಪಾತ್ರಗಳೂ ವಾಚಿಕಾರ್ಥವನ್ನು ನರ್ತಿಸುವುದುಂಟು, ನರ್ತನಕ್ಕೆಂದೇ ಕೆಲವು ವ್ಯಕ್ತಿಗಳು ರಂಗಸ್ಥಲದ ಮೇಲೆ ಬರುವುದೂ ಉಂಟು. ಅಂತೆಯೇ ಕೆಲವು ಪಾತ್ರಗಳು ಹಾಡುತ್ತವೆ; ಹಾಡಿಗೆಂದೇ ಕೆಲವು ಪಾತ್ರಗಳಿವೆ. ನರ್ತನವನ್ನು ಬಿಡಿಯಾದ ಪಾತ್ರಗಳೂ

(ಅಥವಾ ವ್ಯಕ್ತಿಗಳು) ಸಮೂಹವೂ, ಮಾಡುವಂತೆಯೇ ಒಬ್ಬೊಬ್ಬರೂ ಹಾಡುವುದುಂಟು, ಸಮೂಹಗಾನವೂ ಇದೆ; ಹಾಡಿಗೆಂದೇ ಹಿಮ್ಮೇಳವನ್ನೂ ಪ್ರಾಚೀನ ಗ್ರಿಕ್ ನಾಟಕಗಳಲ್ಲಿರುವಂತೆ - ನಾಟಕಕಾರರು ವಿಧಿಸಿದ್ದಾರೆ.

ರೂಪಕಗಳ ಮೊದಲಿನಿಂದ ಕಡೆಯವರೆಗೆ ವಿಪುಲವಾದ ರಂಗಸಜ್ಜಿಕೆಯ ಮತ್ತಿತರ ವಿವರಗಳನ್ನು ನಾಟಕಕಾರರೇ ನೀಡಿದ್ದಾರೆ. ಬೆಳಕು, ಬಣ್ಣ, ಸಂಗೀತ, (ವಾದ್ಯ, ಗಾಯನ), ನರ್ತನ, ರಂಗಸ್ಥಲದಲ್ಲಿ ಪಾತ್ರವಿನ್ಯಾಸ, ಆಹಾರ್ಯ, ಪ್ರಾರಂಭಿಕ ಚಟುವಟಿಕೆಗಳು ಮುಂತಾದ ವಿವರಗಳನ್ನೆಲ್ಲ ಅವರೇ ನೀಡಿ ರಂಗನಿರ್ದೇಶಕನ ಕೆಲಸವನ್ನು ಹಗುರಮಾಡಿದ್ದಾರೆ ಅಥವಾ ಅವನ ಸ್ವಾತಂತ್ರ್ಯವನ್ನು ಮೊಟಕುಗೊಳಿಸಿದ್ದಾರೆ. ತೆರೆಯ ಬಣ್ಣವನ್ನು ಸಹ ಅವರೇ ನಿರ್ಧರಿಸಿ ಹೇಳುವುದುಂಟು! ಒಮ್ಮೊಮ್ಮೆ ರಂಗನಿರ್ದೇಶಗಳು ವ್ಯವಹಾರಕ್ಷಮವಲ್ಲದಿರುವುದೂ ಉಂಟು. ಉದಾಹರಣೆಗೆ, ನೂರಾರು ವಾದ್ಯವಿಶೇಷಗಳ ಸಂಘಟಿತ ಸಂಗೀತವನ್ನು ಸ್ನೋವೈಟ್ ಅಂತಿಮ ದೃಶ್ಯದಲ್ಲಿ ಇರಬೇಕೆಂಬ ಸೂಚನೆ ನೀಡುತ್ತಾರೆ. ಇನ್ನು ಕೆಲವೆಡೆ ಸಿನಿಮೀಯ ದೃಶ್ಯಪರಿಣಾಮಗಳನ್ನು ಅಪೇಕ್ಷಿಸುತ್ತಾರೆ. ಈ ನಾಟಕದಲ್ಲಿಯೂ ಬೇರೆ ಕೆಲವದರಲ್ಲಿಯೂ ಪಾತ್ರಗಳ ಸಂಖ್ಯೆ ಅತಿಯಾಗಿದೆ. ಇಂತಹ ವಿಷಯಗಳಿಂದಾಗಿ ಪ್ರೇಕ್ಷಕನ ಗಮನವು ನಾಟಕ ಕೇಂದ್ರದಿಂದ ವಿಕರ್ಷಣೆಗೊಳ್ಳುತ್ತದೆ, ಇತಿವೃತ್ತವು ಚೆದರಿಹೋಗುತ್ತದೆ.

ತಮ್ಮ ನಾಟಕಗಳಲ್ಲಿ ಹಿಮ್ಮೇಳದ ಸಂಗೀತವೂ ಹಾಡುಗಳೂ ಯಾವ ಸಂಗೀತಶೈಲಿಯಲ್ಲಿರಬೇಕೆಂಬುದನ್ನು ನಾಟಕಕಾರರು ನಿರ್ದೇಶಿಸಿಲ್ಲವಾದರೂ ಅವಕಾಶವಿರುವ ಗಂಭೀರ ಸನ್ನಿವೇಶಗಳಲ್ಲಿ ಶಾಸ್ತ್ರೀಯ ಕರ್ನಾಟಕ ಸಂಗೀತದ ರಾಗತಾಳಗಳನ್ನೂ (ವಿಶೇಷವಾಗಿ 'ಹಾಡು'ಗಳಿಗೆ) ಉಳಿದೆಡೆಯಲ್ಲಿ ಸುಗಮಸಂಗೀತವನ್ನೂ ಅನ್ವಯಿಸುವುದು ಅವರ ಉದ್ದೇಶವೆಂದು ಊಹಿಸಬಹುದು. ಒಂದೆಡೆಯಲ್ಲಿ (ಬಸವಣ್ಣ ಬಂದಾನೊ ಪು. ೧೭೧) ಒಂದು ಶ್ಲೋಕಕ್ಕೆ ಭೂಪಾಳಿರಾಗವನ್ನು ಹೇಳಿದೆ. ಮಾತುಗಳಲ್ಲಿ ಉದಯದ ಬೆಳಕನ್ನು ಹೇಳಿರುವುದಿರಂದ ಸಾಂಪ್ರದಾಯಿಕ ಉದಯರಾಗಗಳಲ್ಲಿ ಒಂದಾದ ಭೂಪಾಳಿಯನ್ನು ಸೂಚಿಸಿರುವುದು ಉಚಿತವಾಗಿದೆ. (ಇದು ಹಿಂದೂಸ್ಥಾನೀ ಸಂಗೀತದ ಭೂಪಾಳಿಯೋ ಕರ್ನಾಟಕ ಸಂಗೀತದ್ದೋ ಎಂಬುದು ತಿಳಿಯುವಂತಿಲ್ಲ). ಇದನ್ನು ಶ್ಲೋಕವೆಂದು ಕರೆದಿರುವುದರ ಔಚಿತ್ಯವೇನೆಂದು ತಿಳಿಯದು. ಡಾ॥ ಮರುಳಯ್ಯರವರು ತಮ್ಮ ರೂಪಕಗಳಲ್ಲಿ ಹಲವು ಬಗೆಯ ಗೇಯ ಪ್ರಕಾರಗಳನ್ನು ಪ್ರಯೋಗಶೀಲವಾಗಿ ಪ್ರವೇಶಗೊಳಿಸಿದ್ದಾರೆ. ಇವುಗಳ ಪೈಕಿ ಹಾಡು, ಗದ್ಯ, ಭಾವಗೀತೆ, ರಗಳೆ, ಭಾಮಿನಿ (ಷಟ್ಪದಿ?), ಸರಳ (ರಗಳೆ?), ವೀರಗಾಥಾ, ಶ್ಲೋಕ (?), ಲಯಗತಿ (?), ವಚನ, ಸೋಬಾನೆ, ಸಮೂಹಗೀತೆ, ತ್ರಿಪದಿಗಳನ್ನು ಹೆಸರಿಸಬಹುದು. ಹಾಡು ಎಂಬುದು ಕೇವಲ ಚರಣಗಳ ರೂಪದಲ್ಲಿ ಪಲ್ಲವಿ ಚರಣಗಳು, ಪಲ್ಲವಿ-ಅನುಪಲ್ಲವಿ- ಚರಣಗಳು ಎಂಬ

ಕೃತಿಮಾದರಿಗಳಲ್ಲಿ ಬಂದಿದೆ. ಕೃತಿಮಾದರಿಯವುಗಳಿಗೆ ಶಾಸ್ತ್ರೀಯ ಕರ್ನಾಟಕ ಸಂಗೀತದ ರಾಗತಾಳಗಳನ್ನು ಉದ್ದೇಶಿಸಿರಬಹುದು. ಉಳಿದೆಲ್ಲವೂ ತಾಳರಹಿತವಾಗಿ ಲಯಪ್ರಧಾನವಾಗಿರುವಂತಹ ಬಂಧಗಳು, ಸೋಬಾನೆ ಮತ್ತು ತ್ರಿಪದಿಗಳು ಜಾನಪದ ಧಾಟಿಯವು; ಆದುದರಿಂದ ಅವುಗಳ ಧಾತುವು ಹೆಚ್ಚು ಕಡಿಮೆ ಸಮಾನವಾಗಿರುವುದರಿಂದಲೂ ವಾಚನಕ್ರಮದಲ್ಲಿ (recitative) ಮತ್ತು ಸಂವಾದಗೀತಗಳ ರೂಪದಲ್ಲಿ ಹಾಡಲು ಅನುಕೂಲವಿದೆ. ಇದರಿಂದ ಈ ಭಾಗಗಳನ್ನು ನಾಟ್ಯಧರ್ಮಿಯ ಅಭಿನಯದಿಂದಲೂ ತೋರಿಸಬಹುದು. ಈ ರೂಪಕಗಳನ್ನು ರಂಗದ ಮೇಲೆ ಪ್ರಯೋಗಿಸಬಯಸುವದು ಈ ಸಾಧ್ಯತೆಯನ್ನು ಪರಿಶೀಲಿಸಬಹುದು. ಈಗಿರುವ ರೂಪದಲ್ಲಿ ಈ ರೂಪಕಗಳಲ್ಲಿ ಹಾಡು ಇತ್ಯಾದಿ ಸೂಚನೆಯಿಲ್ಲದಿರುವ ಅಂಶಗಳನ್ನು ಮಾತಾಡುವ ಶೈಲಿಯಲ್ಲೇ ಎಂದರೆ ಲೋಕಧರ್ಮಿಯಲ್ಲಿ ಪ್ರಸ್ತುತಪಡಿಸಬೇಕು ಎನ್ನುವ ಇಂಗಿತವಿದೆ. ತಾಳನಿಬದ್ಧ (ತಾಳದ ಸೂಚನೆಯನ್ನು ಹಾಡುಗಳಿಗೆ ಎಲ್ಲೂ ಕೊಟ್ಟಿಲ್ಲ), ಲಯನಿಬದ್ಧ ಎಂಬ ಅಂಶಗಳು, ವಾಚನದ ಅಂಶಗಳು ಮತ್ತು ಸಾಮಾನ್ಯ ಸಂಭಾಷಣೆಯ ಅಂಶಗಳು - ಇವುಗಳಿಂದ ರೂಪಕಗಳ ಪ್ರಸ್ತುತಿಯಲ್ಲಿ ಹೆಚ್ಚಿನ ವೈವಿಧ್ಯವು ದೊರೆತು ಸತ್ತ್ವಶಾಲಿಗಳಾಗುತ್ತವೆ. ಪಾತ್ರಗಳ ಅಲ್ಪಸಂಖ್ಯೆ, ಗೇಯಪ್ರಕಾರ ವೈವಿಧ್ಯ, ರಸಸ್ಥಾನಗಳು ತಾಂತ್ರಿಕ ಸಾಧ್ಯತೆಗಳು- ಇವುಗಳ ದೃಷ್ಟಿಯಿಂದ 'ಪೃಥಾಪವಿತ್ರೆ' ಗಮನವನ್ನು ಸೆಳೆಯುತ್ತದೆ.

ಪರಿಶೀಲನೆಯಲ್ಲಿರುವ ರೂಪಕಗಳನ್ನು ನೃತ್ಯರೂಪಕಗಳೆಂದು ಕರೆಯಲಾಗಿದೆ. ವಾಚಿಕಾಂಶವು ಇವುಗಳಲ್ಲಿ ಪ್ರಧಾನವಾಗಿದ್ದರೂ ಪ್ರತಿಯೊಂದರಲ್ಲಿಯೂ ನೃತ್ಯಮಾಧ್ಯಮವನ್ನು ಹೇರಳವಾಗಿ ಬಳಸಿರುವುದು ಇದಕ್ಕೆ ಕಾರಣ. ಇವುಗಳಲ್ಲಿ ನೃತ್ಯಪರಿಣತರಾದ ನರ್ತಕನರ್ತಕಿಯರೂ ನರ್ತಿಸುತ್ತಾರೆ, ಅಲ್ಲದೆ ರಾಜ, ರಾಣಿ, ಪ್ರಜೆಗಳು, ಮಕ್ಕಳು - ಎಲ್ಲರೂ ನರ್ತಿಸುತ್ತಾರೆ. ಆದುದರಿಂದ ನರ್ತಕ, ನರ್ತಕಿ, ಶಾಂತಲೆ, ಮಾಯ, ಅಲ್ಲಮ, ಶಿವ ಮುಂತಾದವರಿಂದ ಪರಿಣತ ನೃತ್ಯ, ಉಳಿದವರಿಂದ ಆಯಾ ರಸಾನುಭೂತಿಯಿಂದ ಹೊರಹೊಮ್ಮಿದ, ಸ್ವಾಂತಾಭಿವ್ಯಕ್ತಿಯ ಕುಣಿತ ಎಂಬ ಎರಡು ಸ್ತರಗಳಲ್ಲಿ ನೃತ್ಯವನ್ನು ನಿರೀಕ್ಷಿಸಬಹುದು. ಸ್ನೋವೈಟ್‌ನಲ್ಲಿ ಭರತನಾಟ್ಯವನ್ನು ಮಾಡುತ್ತೇವೆಂದು ಕುಳ್ಳರು ಹೇಳುವುದು ಅಸಮಂಜಸವಾಗಿದೆ. ಇನ್ನೊಂದು ರೂಪಕದಲ್ಲಿ (ಬನವಾಸಿ) ನರ್ತಕಿಯರು ಭರತನಾಟ್ಯದ ಭಾವಭಂಗಿಗಳಲ್ಲಿ ನಿಲ್ಲುತ್ತಾರೆ ಎಂದಿದೆ. ಇಲ್ಲಿಯೂ ತಜ್ಞ ನರ್ತನವನ್ನು ನಿರೀಕ್ಷಿಸಬಹುದು. ನರ್ತಕ ನರ್ತಕಿಯರು ನರ್ತನ ಮಾಡುವುದರ ಜತೆಗೆ ಕಥಾನಕ ಸಂಬಂಧಿಯಾದ ಸಂಭಾಷಣಗಳಲ್ಲೂ ಒಮ್ಮೊಮ್ಮೆ ತೊಡಗುತ್ತಾರೆ. ಆಗ ಅವರಿಂದ ಪರಿಣತ ಹಸ್ತಾಭಿನಯ, ಪಾದವಿನ್ಯಾಸ ಇತ್ಯಾದಿಗಳನ್ನು ನಿರೀಕ್ಷಿಸಬಹುದು. (ಶಾಸ್ತ್ರೀಯ) ಭರತನಾಟ್ಯದ ಪ್ರಯೋಗವನ್ನು ನಾಟಕಕಾರರು ಕೆಲವೆಡೆಗಳಲ್ಲಿ ಮಾತ್ರ ಸೂಚಿಸಿದ್ದಾರೆ. ಆದರೆ ಇದನ್ನು ಸಂಬಂಧಿಸಿದ ಹಾಡುಗಳ ಬಂಧವು ಶಾಸ್ತ್ರೀಯ ನೃತ್ಯಪ್ರತಿಪಾದನೆಗೆ ಯಾವಾಗಲೂ ಸುಕರವಾಗಿರುತ್ತದೆ

ಎಂದು ಹೇಳಲು ಬರುವಂತಿಲ್ಲ. ಇತಂಹ ಹಾಡುಗಳು ನೃತ್ಯೋಪಯೋಗಿಯಾಗಿರಬೇಕಾದರೆ ಅವು ಹೇಗಿರಬೇಕೆಂಬುದನ್ನು ಮೇಲೆ ವಿವೇಚಿಸಲಾಗಿದೆ. ಶಾಸ್ತ್ರೀಯ ನೃತ್ಯವನ್ನು ಹೇಳದೆ ಪರಿಣತರಲ್ಲದವರಿಂದ ನರ್ತನವನ್ನು ಹೇಳಿರುವಾಗ ಅದು ಸುಗಮ ಸಂಗೀತಕ್ಕೆ ಮಾಡಿದ ಸುಗಮ ನರ್ತನವೆಂದು ಭಾವಿಸಬಹುದು. 'ಬನವಾಸಿ'ಯಲ್ಲಿ ಮಾಯೆ-ಅಲ್ಲಮರ ನೃತ್ಯಸಂವಾದದಲ್ಲಿ 'ಹಾಡು'ಗಳಲ್ಲದೆ ಎಂದರೆ ವಾಗರ್ಥರಹಿತವಾಗಿ, ನವರಸಗಳನ್ನು ಅಭಿನಯಿಸಬೇಕು, (ಧ್ರುವದಿ) ಸಪ್ತತಳಗಳಿಗೆ ಜತಿಗಳಿಂದಲೇ (ಎಂದರೆ ಮಾತುಗಳಿಲ್ಲದೆ ಪಾಟಾಕ್ಷರಸಮುಚ್ಚಯಗಳಿಗೆ) ನೃತ್ತವನ್ನೆಸಗಬೇಕು ಎಂದಿದೆ. ಇವೆರಡೂ ನರ್ತನ ಪರಿಣತಿಯನ್ನು ಆಪೇಕ್ಷಿಸುವ ಅಪೇಕ್ಷಣೀಯ ಪ್ರಯೋಗಗಳು. ಇನ್ನೊಂದೆಡೆ ಸಂಗೀತ ನೃತ್ಯಗಳ ಪಾರಿಭಾಷಿಕ ಶಬ್ದಗಳನ್ನೊಳಗೊಂಡ ಒಂದು ಹಾಡಿದೆ. ಅನ್ವರ್ಥವಾದ ಅಭಿನಯವನ್ನು ಮಾಡಿದರೆ ಇದೂ ಒಂದು ಯಶಸ್ವಿ ಪ್ರಯೋಗವಾಗುತ್ತದೆ. ಹಲವೆಡೆಗಳಲ್ಲಿ ಗಾಯನವೇ ಇಲ್ಲದೆ 'ಬಿಜೀಮ್ಸ್'ಗೆ (ಹಿನ್ನೆಲೆ ಸಂಗೀತ, ಬ್ಯಾಕ್‌ಗ್ರೌಂಡ್ ಮ್ಯೂಸಿಕ್, BGM) ಮಾತ್ರ ನರ್ತನವನ್ನು ಮಾಡಬೇಕೆಂದೂ ಸೂಚನೆಯಿದೆ. ವೈವಿಧ್ಯಕ್ಕಾಗಿ ಹೀಗೆ ಮಾಡಿದೆಯೆಂದು ಭಾವಿಸಬಹುದು.

ಪರಿಶೀಲನೆಯಲ್ಲಿರುವ ರೂಪಕಗಳಲ್ಲಿ ನರ್ತನವನ್ನು ಬಿಡಿಪಾತ್ರಗಳೂ, ಪಾತ್ರದ್ವಂದ್ವಗಳೂ ಸಮೂಹಗಳೂ ಮಾಡುತ್ತವೆ, ತಾಳ-ಲಯ ನಿಬದ್ಧ 'ಹಾಡು'ಗಳಿಗೂ ಹಾಗಿಲ್ಲದವುಗಳಿಗೂ ಕುಣಿತವನ್ನು ಹೇಳಿದೆ. ಆದುದರಿಂದ ನೃತ್ಯಶೈಲಿಯು ತಜ್ಞತೆಯ ವಿವಿಧ ಸ್ತರಗಳಲ್ಲಿರುತ್ತದೆ. ಕಲಾತ್ಮಕವಾದ ವಾತಾವರಣವನ್ನು ಸೃಷ್ಟಿಸಲೆಂದೂ, ಉತ್ಸಾಹ, ಸಂಭ್ರಮ, ಕೋಲಾಹಲ, ಉದ್ವೇಗ, ಮುಂತಾದವುಗಲ ಅಭಿವ್ಯಕ್ತಿಗೆಂದೂ ನರ್ತನವುಂಟು, ಕಥೆಯನ್ನು ಮುಂದುವರೆಸುವ ಸಂಭಾಷಣೆಗಳಿಗೆ ಅಭಿನಯವೂ ಇದೆ. ಹಲವೆಡೆಗಳಲ್ಲಿ (ನರ್ತನವನ್ನು ಹೇಳದಿದ್ದರೂ) ಸಂಭಾಷಣೆಗಳನ್ನು ಸಂವಾದಗೀತೆಗಳನ್ನಾಗಿ ಮಾಡಿಕೊಂಡು ವಾಚನಕ್ರಮದಲ್ಲಿ (recitative) ಹಾಡಿ ಅದಕ್ಕೆ ನಾಟ್ಯಧರ್ಮೀಯದ ಹಸ್ತಮುದ್ರೆಗಳನ್ನು ಪಾದಚಲನೆಗಳನ್ನೂ ಅಳವಡಿಸಲು ಅವಕಾಶವಿದೆ.

ಒಟ್ಟಿನಲ್ಲಿ, ಈ ನೃತ್ಯರೂಪಕಗಳು ಕನ್ನಡನಾಟಕ ಕ್ಷೇತ್ರದಲ್ಲಿ ಒಂದು ಒಳ್ಳೆಯ ಪ್ರಯೋಗ, ಶಾಸ್ತ್ರೀಯ ಪರಿಸರದ ಹೊರಗೆ ನೃತ್ತ ನೃತ್ಯಗಳನ್ನು ಅಳವಡಿಸುವುದರ ಬಗೆಗೆ ಚಿಂತನೆಯನ್ನು ಪ್ರೇರಿಸಿ, ರಂಗಾನ್ವಯದಲ್ಲಿ ತೊಡಗಿಸುತ್ತವೆ. ನೃತ್ಯನಾಟಕ ನಿರ್ಮಾಣದ ವಿಷಯದಲ್ಲಿ ಮೇಲೆ ಹೇಳಿರುವ ವಿಷಯಗಳನ್ನು ಮೈಗೂಡಿಸಿಕೊಂಡರೆ ಕನ್ನಡ ರಂಗಭೂಮಿಗೆ ಒಂದು ದೀರ್ಘ ಕಾಲದ ಕೊಡುಗೆಯಾಗುವುದರಲ್ಲಿ ಸಂದೇಹವಿಲ್ಲ.

''ಡಾ|| ಸಾ.ಶಿ. ಮರುಳಯ್ಯ ಅವರ ಕೆಲವು ನೃತ್ಯ ರೂಪಕಗಳು''

ಶ್ರೀನಿವಾಸ ಉಡುಪ

ಡಾ|| ಸಾ.ಶಿ. ಮರುಳಯ್ಯ ಅವರು ಸಮರ್ಥ ಕವಿಗಳು, ಹಾಗೂ ಅನುಭಾವದಲ್ಲಿ ಪಳಗಿದ ಬರವಣಿಗೆಯವರು, ಅವರು ಯಾವುದೇ ಬರೆಯಲಿ, ಅದು ಜನಪ್ರಿಯ ಹಾಗೂ ಸರ್ವರಿಗೂ ಬೇಕಾದ ಬರವಣಿಗೆಯಾಗುತ್ತದೆ. ಹಾಗೂ ರಂಗದ ಮೇಲೆ, ಮೇಲಿಂದ ಮೇಲೆ ಪ್ರದರ್ಶನವಾಗಿ ಜನಮೆಚ್ಚುಗೆ ಹಾಗೂ ಮಕ್ಕಳಲ್ಲಿ ನೀತಿಯ ಮೌಲ್ಯ ಹೆಚ್ಚತ್ತದೆ.

ಡಾ|| ಸಾ.ಶಿ. ಮರುಳಯ್ಯನವರು ನಿಜ ಜೀವನದಲ್ಲಿ ಎಷ್ಟು ಸರಳರೋ, ಅವರ ಬರವಣಿಗೆಯೂ ಅಷ್ಟೇ. ಸರಳವಾಗಿ ಓದಬಹುದು, ಕಲಿಯಬಹುದು, ಪ್ರದರ್ಶನ ಮಾಡಬಹುದು, ಹಾಗೂ ಮೌಲ್ಯದ ಅಲೆಗಳು, ಮನುಷ್ಯನ ಕಲ್ಪನೆಗಳ ಹಂದರ, ಪುರಾಣಗಳಿಂದ ಮನುಷ್ಯನ ಬದುಕು ಬೆಳೆಯುವ ತರಂಗಗಳನ್ನು ಅವರ ಈ ನೃತ್ಯರೂಪಕ, ನೃತ್ಯ ಗದ್ಯ-ಪದ್ಯಗಳಲ್ಲಿ ನೋಡಬಹುದು. ಹಾಗೂ ಪ್ರತಿಯೊಂದು ನೃತ್ಯರೂಪಕಕ್ಕೆ ಮೂಲಕಥೆಗೆ ಭಂಗವಾಗದ ರೀತಿಯಲ್ಲಿ ಹೊಸ ಬೆಳಕು ಬೀರಿ ಕಾವ್ಯದಲ್ಲಿ, ಗದ್ಯ ಹಾಗೂ ನಾಟಕದ ಸಂಭಾಷಣೆಗಳಲ್ಲಿ ಇದ್ದು ಮನರಂಜಿಸುತ್ತದೆ. ಬದುಕನ್ನು ಬೆಳಸಲು ಸಹಕಾರಿಯಾಗುತ್ತದೆ.

'ಶ್ರೀ ಪರಂಜ್ಯೋತಿ ನೃತ್ಯರೂಪಕ', ಇದು ಬೆಂಗಳೂರಿನಲ್ಲಿ ಪ್ರದರ್ಶನವಾದಾಗ ಸಹಸ್ರ ಸಹಸ್ರ ಸಂಖ್ಯೆಯ ರಸಿಕರ ಪ್ರಶಂಸೆಗೆ ಪಾತ್ರವಾಯಿತು. ಕಾವ್ಯವಾಗಿ, ನಾಟಕವಾಗಿ, ನೃತ್ಯರೂಪಕವಾದ ಈ ಕೃತಿಗಳು ದೃಶ್ಯಗಳಲ್ಲದೆ ಸಾಹಿತ್ಯ ಸಂಗೀತಗಳ ಸಮನ್ವಯದೊಂದಿಗೆ ನೃತ್ಯವು ಸೇರಿ, ಈ ಕೃತಿ, ಜೀವನದರ್ಶನ ನೀಡುವ ಮಹತ್ವ ಕೃತಿಯೂ ಹೌದು. ಶ್ರೇಷ್ಠ ರೂಪಕಕಾರರಾದ ಸಾ.ಶಿ. ಮರುಳಯ್ಯ ಈ ಕೃತಿಯಿಂದ ಉದಾತ್ತ ನೀತಿಯನ್ನು ನಿರೂಪಿಸಿದ್ದಾರೆ. ಅಸ್ಪೃಶ್ಯತೆಯನ್ನು ತೊಡೆದು ಮಾನವೀಯ ಧರ್ಮ ಒಂದೇ ಎನ್ನುವುದನ್ನು ಪ್ರತಿಪಾದಿಸಲು ರೇಣುಕಾಚಾರ್ಯರು ಶ್ರಮಿಸುತ್ತಾರೆ. ಈ ಕೃತಿಯ ಮುಖ್ಯ ನಾಯಕರಾದ ರೇಣುಕರೇ ಹಿಂಸಾವೃತ್ತಿಯ ಅಗಸ್ತ್ಯನಿಗೆ ಅಹಿಂಸಾ ವ್ರತವನ್ನು ಉಪದೇಶಿಸುತ್ತಾರೆ, ಅವನಲ್ಲಿನ ಪಾಪ ತೊಳೆದು, ಶಿವಲಿಂಗಧಾರಣೆಯನ್ನು ಅವನಿಗೆ ಮಾಡಿಸಿ ಅಷ್ಟಾವರಣ ಷಟ್‌ಸ್ಥಲಗಳ ಬಗ್ಗೆ ತಿಳಿಸಿ ಅವನನ್ನು ಮಹರ್ಷಿಯಾಗುವಂತೆ ಮಾಡುತ್ತಾರೆ. ಭಕ್ತಿಯ ಮಹತ್ವವನ್ನು ಹೊತ್ತು ವೀರಶೈವ ಧರ್ಮದ ತತ್ವಗಳನ್ನೊಳಗೊಂಡು ಈ ನೃತ್ಯರೂಪಕ ಮೂಡಿ ಬಂದಿದೆ. ರೇಣುಕರು ಮನುಕುಲಕ್ಕೆ ಸಲ್ಲಿಸಿದ ನಿರಂತರ ಸೇವೆಯಿಂದಾಗಿ ಶ್ರೇಷ್ಠರೆನಿಸಿಕೊಂಡು, ಅವರು ಸದಾ

ಲೋಕ ಸಂಗ್ರಹ ಕಾರ್ಯದಲ್ಲಿ ನಿರತರಾಗುತ್ತಾರೆ. ರೇಣುಕರು ಕೀಳುಕುಲದ ಅಗಸ್ತ್ಯನನ್ನು ಹತ್ತಿರ ಸೇರಿಸಿ ರೇಣುಕರು ಶಿವಲಿಂಗವನ್ನು ಅನುಗ್ರಹಿಸಿ, ಉತ್ತಮ ವ್ಯಕ್ತಿಯನ್ನಾಗಿ ಮಾಡುತ್ತಾರೆ.

ಹೆದ್ದಾರಿಯಲ್ಲಿ ನಿಂತು, ಪಯಣಿಗರ ತಲೆ ಒಡೆದು, ಸುಲಿದು ತಿನ್ನುತ್ತಿದ್ದ ಪ್ರಚಂಡ ಮಾತಂಗನಂಥ ರಕ್ಕಸ ಹೃದಯದಲ್ಲಿ ಮಾನವತೆಯನ್ನು ಉಂಟುಮಾಡಿ, ಮಾತಂಗ ಮಹಾಮುನಿಯನ್ನಾಗಿ ಮಾಡಿದರು ಶ್ರೀ ರೇಣುಕರು. ಈ ಮಹಾತ್ಮರು ಅಂತ್ಯೋಯದ ಹರಿಕಾರರು, ಅಸ್ಪೃಶ್ಯತೆಗೆ ಇತಿಶ್ರೀ ಹಾಡಿದವರು. ದುರ್ಬಲ ವರ್ಗದಲ್ಲಿ ಆತ್ಮವಿಶ್ವಾಸ ಮೂಡಿಸಿದವರು. ಅವರಿಗೆ ಬದುಕು ಕೊಟ್ಟವರು. ವಿಭೀಷಣನ ಇಚ್ಛೆಯಂತೆ ಸಿಂಹಳದಲ್ಲಿ ಮುಕ್ಕೋಟಿ ಲಿಂಗಗಳನ್ನು ಸ್ಥಾಪಿಸಿದವರು. ಆದ್ದರಿಂದ ಸಾ.ಶಿ. ಮರುಳಯ್ಯನವರ ಈ ಉತ್ತಮ ಕೃತಿಯಲ್ಲಿ ಶ್ರೀ ರೇಣುಕರು ಜಗದಾಚಾರ್ಯರು ಆಗುತ್ತಾರೆ. ಅವರ ಕೃತಿಯಲ್ಲಿನ ಈ ಸಾಲುಗಳು -

''ಕ್ಷಿತಿಯಾಯಿತು ಕ್ಷತಿಯು ಮಾನವನ ಧರ್ಮಕ್ಕೆ
ವಂಚನೆಯ ಮಂಚದಲಿ ಸಂಚು ನಡೆದಿದೆ ಶಿವನೆ
ಅನ್ನ ಹಸಿದಿದೆ ಅಲ್ಲಿ, ನೀರು ಬಾಯಾರಿಹುದು
ದ್ರೋಹ ದುರ್ಗವನುಡಿಯೆ ಮೇಲೇಳು ತಂದೆ'',

ಈ ಮನುಜಕುಲ, ಈ ನೆಲದಲ್ಲಿ ಮೇಲಿನ ವಾತಾವರಣ ಮೂಡಿದಾಗ - ಪರಶಿವನು ಹೇಗಾದ ಎಂಬುದಕ್ಕೆ -

''ಕೋಪಾಗ್ನಿ ಭುಗಿಲ್ ಎಂದು ಹತ್ತಿ ಹೊಗೆಯಾಡಿತು,
ಅವನ ಕಣ್ಣುಗಳಲ್ಲಿ ಕಡಲುಗಳು ಉರುಳಿದವು
ಕೆಂಡದುಂಡೆಗಳು ಹಾರಿ ಹಾರಿ ಬಿದ್ದುವು
ಶಿವ ಅಂದು ಸಾಕ್ಷಾತ್ ರುದ್ರನೇ ಆದ ! ''

ಶಿವ ಮಂಗಳ ಸ್ವರೂಪಿ, ಆದರೆ ಅವನು ಕೋಪಗೊಂಡು ಮನುಜ ಲೋಕದ ದುಸ್ಥಿತಿ ಕಂಡಾಗ ರುದ್ರನಾದ. ಇದು ಸಾ.ಶಿ. ಅವರ ಶ್ರೇಷ್ಠ ಬರಹಕ್ಕೆ ಉದಾಹರಣೆ,

ಶಿವಶಿವೆಯರ ಸಂವಾದದಲ್ಲಿ ಮುಂದುವರಿಯುವ ಈ ಸಾಲುಗಳು -

''ನೀರಿನಲ್ಲಿ ತಂಪಾಗಿ, ಗಾಳಿಯಲಿ ವೇಗವಾಗಿ,
ಸೂರ್ಯನಲ್ಲಿ ತೇಜಸ್ಸಾಗಿ, ಚಂದ್ರನಲಿ ಕಾಂತಿಯಾಗಿ,
ನಕ್ಷತ್ರದಲ್ಲಿ ನಗೆಯಾಗಿ, ಹಕ್ಕಿಯ ಕಂಠದಲ್ಲಿ ಹಾಡಾಗಿ,
ಹೂವಿನಲಿ ಪರಿಮಳವಾಗಿ, ಕಲ್ಲಿನಲ್ಲಿ ಘನೀಭೂತವಾಗಿ''.

ಈ ಸಾಲುಗಳು, ಪ್ರಕೃತಿಯ ವರ್ಣನೆ, ಜಗತ್‌ಸೃಷ್ಟಿ ಅದರ ಹೊಣೆ ಹೊತ್ತ ದೇವತ್ವವನ್ನು ನಿರೂಪಿಸುತ್ತವೆ. ವಸ್ತುನಿಷ್ಠೆ - ಜೀವನ ಶ್ರದ್ಧೆಗೆ ಈ ಸಾಲುಗಳು

ಸಾಕಾಗುತ್ತವೆ. ಇಂತಹದ ರೂಪಿಯಾಗಿ ರೇಣುಕರ ಅವತಾರವಾಗುತ್ತದೆ, ಅದಕ್ಕೆ ಈ ಸಾಲುಗಳು -

"ವಿಶ್ವವಿಖ್ಯಾತ ವೀರಶೈವ ಮಹಾಮತ ಸಂಸ್ಥಾಪಕರು,
ಅವರೇ ಆದಿ ಜಗದ್ಗುರುಗಳು ! ಅವರೇ ... ಅವರೇ.....
ರೇಣುಕ, ದಾರುಕ, ಘಂಟಾಕರ್ಣ, ಧೇನುಕರ್ಣ,
ವಿಶ್ವಕರ್ಣರುಗಳು - ಇವರು ಕ್ರಮವಾಗಿ - "

ಸಾ.ಶಿ. ಮರುಳಯ್ಯನವರು 'ಓಂ'ಗೆ ಈ ಸಾಲುಗಳು ಹೀಗಿವೆ

"ಅ ಕಾರ, ಉ ಕಾರ, ಮ ಕಾರಗಳು ಕೂಡಿ"
"ಓಂ ಕಾರ ರೂಪಿಗಳು ನಾವ್ ಮೂವರು"
"ಓ ಕಾರಂ ಬಿಂದು ಸಂಯುಕ್ತಂ ನಿತ್ಯಂ ಧ್ಯಾನಂತಿ ಯೋಗಿನಃ "
"ಕಾಮದಂ ಮೋಕ್ಷದಂ ಚೈವ ಓಂಕಾರಾಯ ನಮೋ ನಮಃ !"

ಈ ಸಾಲುಗಳಂತೂ ಎಷ್ಟೊಂದು ಕಾವ್ಯಮಯವಾಗಿದೆಯೆಂದರೆ

"ಓ ಪೃಥ್ವಿ, ನೆಲದಾಯಿ
ಮೃದು ವಕ್ಷಸ್ಥಲಪಡೆದ ಇಕ್ಷು ಕನ್ಯೆ
ಮಡಿಲು ತೆರೆ ಪವಡಿಪನು ಜಗದಾದಿ ರೇಣುಕನು"

ಹಾಗೂ, ಬತ್ತಲೆಯ ಬಯಲಿಂಗೆ ಶಕ್ತಿ ಸಂಕ್ರಮಿಸುತ್ತ ಮಾನವನ ಎದೆಯಲಿ ಸೊದೆ ತುಂಬು ಬಾ !"

ವಿದ್ವತ್ತು, ಪ್ರತಿಭೆ ಮತ್ತು ಮಾನವೀಯತೆಗಳು ಈ ಸಾಲುಗಳಿಂದ ಸಾ.ಶಿ. ಮರುಳಯ್ಯನವರ ನೃತ್ಯಪದ್ಯದಲ್ಲಿ ಮಿಂಚಿವೆ.

ನಿಸರ್ಗಮನುಷ್ಯನಿಗೆ ಎಷ್ಟು ಮುಖ್ಯ ಎನ್ನುವುದಕ್ಕೆ ಈ ಸಾಲುಗಳು -

"ಪೃಥ್ವಿ ಆಶ್ರಯ ನೀಡು, ಆಗಸವೆ ರಕ್ಷೆ ಇರು
ವಾಯು ಘೋಷಿಸು, ರುದ್ರ ನೀನು ಶಿವವಾಗು
ಆದಿತ್ಯ ಜ್ಯೋತಿ ಕೊಡು, ಉಷೆ ನೀಡು ಸೌಂದರ್ಯ
ಮಿತ್ರ ಮೈತ್ರಿಯ ತಾರೊ ಪೂಷನನೆ ಪೋಷಿಸೋ !

ಮುಂದೆ ರೇಣುಕ ಅಗಸ್ತ್ಯನಿಗೆ ಹೇಳುವ ಈ ರೂಪಕ ಹೀಗಿದೆ -

"ಓ ಅಗಸ್ತ್ಯನೆ ಯತಿಯೆ, ದ್ರಾವಿಡರ ದೇವತೆಯೇ
ಕುರುಡನಿಗೆ ಕಣ್ಣಾದೆ, ಕಿವುಡನಿಗೆ ಕಿವಿಯಾದೆ,
ದೀನನಿಗೆ ದಯೆಯಾಗಿ, ದಲಿತನಿಗೆ ತಾಯಾಗಿ,
ಕೋಟಿ ಜೀವರುಗಳಿಗೆ ಬದುಕು ಕೊಟ್ಟೆ ನೀನು ಬೆಳಕು ಕೊಟ್ಟೆ !"

ರೇಣುಕ ಮಹಾಪುರುಷ - ದುಷ್ಟ ಹಾಗೂ ಭಯಭೀತನಾದ ಮಾತಂಗನಿಗೆ

ನಿಲ್ಲಲು ಹೇಳಿದಾಗ, ಅವನ ಅಹಂಕಾರ, ದೈತ್ಯತನಕ್ಕೆ ಈ ರೂಪಕ ಉದಾಹರಣೆ -

''ಹೂಂ ಎನಿತು ಸೊಕ್ಕಿದೆ ಇವಗೆ,
ಅಡವಿಯೊಡೆಯನೆ ಆದ ಈ ಮಾತಂಗ ರಾಜನನು
ನಿಲ್ಲೆಂದು ನುಡಿದಷ್ಟು ಧಾರ್ಷ್ಟ್ಯ ! ಅಬ್ಬಬ್ಬಾ !!
ಎಲವೆಲವೊ ಸನ್ಯಾಸಿ, ಬಡಜೋಗಿ, ಬೈರಾಗಿ
ಗೆಡ್ಡೆ ಗೆಣಸನು ತಿನ್ನುವ ನಿನಗಿನಿತು ಸಾಹಸವೆ !

ಮುಂದೆ ಕಾಡುಜನರ ಆಹಾರದ ಬಗ್ಗೆ - ಮಾತಂಗಿ ಗಂಡನಿಗೆ ಹೇಳುವ ಈ ರೂಪಕ ಎಷ್ಟೊಂದು ನೈಜವಾಗಿದೆ ನೋಡೋಣ -

''ಏನ ಗಂಡ್ಸೆ ಕರ್ದೆ.... ? ತಿನ್ನಾಕ ಬೇಕೇನು ?
ಕರುಳು ಕರಿದಿದ್ದಿನಿ, ಬೆರಳು ಬೇಯ್ಸಿದ್ದೀನಿ
ಮೆದುಳು ಬೆಣ್ಣೇ ತೆಗೆದು ಮುದ್ದೆ ಮಾಡಿಟ್ಟಿದ್ದೀನಿ
ತಿನ್ನುವೇ ಬಾ ! ಮೆಲ್ಲೋಣು ಬಾ !''

ಗಂಡನ ಪಾಪದಲ್ಲಿ ತಾನು ಭಾಗಿಯಲ್ಲ; ನನ್ನದು-ನನಗೆ, ಗಂಡನದು - ಗಂಡನಿಗೆ ಎನ್ನುವ ಮಾತಂಗಿ ಹೇಳುವ ಇನ್ನೊಂದು ರೂಪಕ ಇದು.

''ಅಯ್ಯೊ ಹುಚ್ಚು ಗಂಡ್ಸೇ ! ಹುಚ್ಚು ಗಂಡ್ಸೇ !
ನಾನಿರೋದು, ನಾನು ಬದುಕ್ತಿರೋದು ನನಗಾಗಿ
ನಿನಗಾಗ ಅಲ್ಲ, ನಿಮ್ಮಪ್ಪಗಾಗ ಅಲ್ಲ !
ನನಗೆ ಸುಖ ಬೇಕು, ನಾ ಕೇಳಿದೆ, ನೀ ಕೊಟ್ಟೆ !
ಅಷ್ಟು ನನ್ನ ಭಾಗಕ್ಕೆ ಸತ್ಯ !
ಮಿಕ್ಕದ್ದೆಲ್ಲಾ ಸಪ್ಪಟ್ಟೆ ಸುಳ್ಳು ! ''

ಹೀಗೆ ಶ್ರೀ ರೇಣುಕ ಪರಂಜ್ಯೋತಿ ರೂಪಕಗಳು, ನಾಟಕದ ಉದ್ದಕ್ಕೂ ಓದಿಸಿಕೊಂಡು ಹೋಗುತ್ತದೆ, ಹಾಗೂ ಮನದಲ್ಲಿ ಮತ್ತೆ ಮತ್ತೆ ನೆನಪು ಮಾಡುತ್ತದೆ. ಇಡೀ ನಾಟಕ ಮಧುರ ವಚನಗಳಾಗಿವೆ. ಹಾಗೂ ಬದುಕಿನ ಬಗ್ಗೆ ಅದರ ಮೌಲ್ಯದ ಬಗ್ಗೆ - ಬೆಳಕು ಚೆಲ್ಲುತ್ತದೆ.

''ಬರುವಾಗ ಬತ್ತಲೆ, ಹೋದಾಗ ಕತ್ತಲೆ
ನಡುವಿನೀ ಹಗಲಿರುಳ ಚೆಲ್ಲಾಟದೆಡೆಯಲ್ಲಿ
ಬಣ್ಣದೀ ಬದುಕಿಂಗೆ ನೆತ್ತರಿನ ಲೇಪವೇ ''

ಕೊನೆಯದಾಗಿ ಸ್ತ್ರೀ ಪುರುಷರ ಸಂಬಂಧದ ಬಗ್ಗೆ ಶಿವ-ಶಿವೆಯರು, ತಾಂಡವ ನೃತ್ಯ-ರೂಪಕಗಳಲ್ಲಿ - ಈ ಸಾಲುಗಳು, ಇಡೀ ಕೃತಿಯಲ್ಲಿನ ಮುಖ್ಯತ್ವವಾಗುತ್ತದೆ, ಪುರುಷರಿಗೆ ಇರುವಷ್ಟೇ ಧಾರ್ಮಿಕ ಸ್ವಾತಂತ್ರ್ಯ, ಸಾಮಾಜಿಕ ಸಮಾನತೆ, ಸ್ತ್ರೀಯರಿಗೂ ಉಂಟು ಎಂಬುದನ್ನು ವೀರಶೈವ ಧರ್ಮ ಆಚರಣೆಗೆ ತಂದಿತ್ತು ಎಂಬುದೇ ಇದರ

ಉದ್ದೇಶವಾಗಿ ಸಾ.ಶಿ. ಮರುಳಯ್ಯನವರ ಈ ರೂಪಕದಲ್ಲಿ ನಾವು ನೋಡಬಹುದಾಗಿದೆ.

''ಹೆ.... ಜಗನ್ಮಾತೆ
ಅಣು ರೇಣು ತೃಣಕಾಷ್ಠದಲ್ಲೂ
ಸ್ಪಂದಿಸುವ ಶಕ್ತಿ ನೀನು
ನೀನು ಆಧಿಶಕ್ತಿ, ಜಗತ್‌ಶಕ್ತಿ, ಪರಾತ್ಪರ ಶಕ್ತಿ ! ''

ಸಾ.ಶಿ. ಮರುಳಯ್ಯನವರ 'ನಾಟ್ಯಾಂಜಲಿ' ಕೃತಿಯಲ್ಲಿ 'ಸ್ವಪ್ನ ನಾಟಕ', 'ನೆತ್ತಿಯ ಮೆಟ್ಟಿದನು', 'ಬಾಪೂ ದರ್ಶನ', 'ಬಿಡುಗಡೆಯ ಬೆಳಕೆ', 'ಹಾಲಾಹಲಧಾರಿ', 'ನಾಟ್ಯ ಸರಸ್ವತಿ', ಎಂಬ ಆರು ನಾಟಕಗಳಿವೆ.

ಉದಯನ ಮೊದಲನೆ ಹೆಂಡತಿ ವಾಸವದತ್ತೆ - ರಾಜಕೀಯ ಸಮಸ್ಯೆಗೆ ಸಿಕ್ಕಿ, ಗಂಡನಿಂದ ಕಣ್ಮರೆಯಾಗಿ, ಪದ್ಮಾವತಿಯೊಡನೆ ಮದುವೆ ಮಾಡಿಸಿ ಕೊನೆಗೆ ಅವಳು ಅವನ ಮನದನ್ನೆಯಾಗುವ, ಒಳ್ಳೆಯ ಕಥೆಯ ನಾಟಕವಾಗಿದ್ದು ಇದು ರಂಗ ಪ್ರದರ್ಶನದಲ್ಲಿ ಪ್ರೇಕ್ಷಕರ ಮನ-ಕಣ್ ಸೆಳೆಯುತ್ತದೆ. ಸಂಸ್ಕೃತ ನಾಟಕದಂತೆ ಇಲ್ಲೂ ಸೂತ್ರಧಾರನು ಇರುತ್ತಾನೆ. ಭಾಸನ ಬಗ್ಗೆ - ಸಾ. ಶಿ. ಮರುಳಯ್ಯನವರ ಈ ರೂಪಕ ಹೀಗಿದೆ - ಹಾಗೂ, ಒಬ್ಬ ಕವಿ ಮಹಾಕವಿ ಬಗ್ಗೆ -

''ಯಾರವನು ಗೊತ್ತೆ ?
ಅವನೊಂದು ಬೆಳಕು !
ಮಾನವನ ಎದೆಗವಿಯ ಕತ್ತಲನು
ಹರಿಸಿದಾ ಜ್ಯೋತಿ ಆತ !
ಅವನೇ ಮಹಾಕವಿ ಭಾಸ !!
ಸರಸ್ವತಿಯ ಮುಖ ಹಾಸ !!
ಧನ್ಯಾತ್ಮ ಭಾಸ !
ಪುಣ್ಯಜೀವಿ ಭಾಸ !
ಮಹಾಕವಿ ಭಾಸ !

ಸ್ವಾಮಿಭಕ್ತಿ - ಯೌಗಂಧರಾಯಣ, ಮಹಾಪತಿವ್ರತೆ ವಾಸವದತ್ತೆ, ಮಹಾರಾಣಿ ಪದ್ಮಾವತಿ, ಇಲ್ಲಿ ಎಲ್ಲಾ ಪಾತ್ರಗಳು ಕವಿಯ ಗದ್ಯ, ಪದ್ಯದಿಂದ ಜೀವಂತವಾಗಿ ಓಡಾಡುತ್ತವೆ, ಹಾಗೂ ತ್ಯಾಗ ಸೇವೆ ಎರಡೂ ಇಲ್ಲಿ ಮಿಂಚುತ್ತವೆ. ಪದ್ಮಾವತಿಯ ಹತ್ತಿರ ವಾಸವದತ್ತೆಯನ್ನು ಒಪ್ಪಿಸಿ, ಹೋಗುವಾಗ ಯೌಗಂಧನ ನುಡಿ ವಾಸವದತ್ತೆಗೆ ಈ ರೂಪಕ ಇಲ್ಲಿದೆ -

''ಬರಲೆನ್ನ ಸೋದರಿಯೆ....
ನಿನ್ನ ಪತಿ ಕರೆವರೆಗುಗಿವಳೆ ನಿನಗೆಂದಿಗೂ ತಾಯಿ - ಬಂಧು !

ಓಲೈಸು ಮರೆಯದಿರು ಇಂದು ಬಿಸಿಲಿನ ಬೇಗೆ ನಾಳೆ ಕೌಮುದಿ ತಂಪು !
ಮರೆಯದಿರು ನೆಮ್ಮಿ ನಡೆ ಇರುವ ತನಕ !''

ಉದಯ ಸತ್ತ ವಾಸವದತ್ತೆಯನ್ನು ನೆನೆದಾಗ ಈ ರೂಪಕದ ಒಂದು ತುಣುಕು ಹೀಗೆ -

''ಬಾ ದೇವಿ ಭಾಗ್ಯವತಿ
ಬಾರೆನ್ನ ಪುಣ್ಯವತಿ
ಬಾರೆ ವಾಸವದತ್ತೆ ''

ಮತ್ತು

''ಬತ್ತಲೆಯ ಮನಕಿಂದು
ಕತ್ತಲೆಯು ಕವಿದಿಹುದು
ಬೋಳು ವೇದಾಂತವಿದು
ಹರಿಸಲಹುದೇ ?''

ಈ ನಾಟಕದ ಉದ್ದಕ್ಕೂ ಶಾಸ್ತ್ರೀಯ ಸಂಗೀತದ ರಾಗ-ತಾಳ ಎಲ್ಲದರಿಂದ, ಈ ನಾಟಕ ನೋಡಿದಾಗ ದೃಶ್ಯ-ಶ್ರವಣ ಎರಡರಲ್ಲೂ ಸಾ.ಶಿ. ಮರುಳಯ್ಯನವರು ಪ್ರೇಕ್ಷಕರ ಹೊಗಳಿಕೆಗೆ ಪಾತ್ರರಾಗುತ್ತಾರೆ.

ವಾಸವದತ್ತೆ - ಉದಯನ ಬಗ್ಗೆ ಹೇಳುತ್ತಾಳೆ -

''ಹೃದಯೇಶಾ...
ಶುಭದಾಶಾ....
ಬಾಳಿನ ನಲುಮೆಯ ಎಸೆದೀಶ..... !
ಪ್ರೇಮದ ಮಿಡಿತಕೆ ತಂತಿಯು ನಾನು
ರಾಗದ ಝುಣಿತಕೆ ಝೇಂಕಾರ ನೀವು
ಪಾವನ ಗುಣಯುತ ಕರುಣೆಯು ನೀವು
ಜೀವನ ರಾಗದ ತೇಜವು ನೀವು !
ಹೃದಯೇಶಾ..... ''

ಹೀಗೆ ಈ ನಾಟಕದ ಪ್ರತಿಯೊಂದು ರೂಪಕ ಅತ್ಯುತ್ತಮವಾಗಿದೆ.

ಬಲಿ ಚಕ್ರವರ್ತಿ - ದಾನದಿಂದ ಅವನು ದೈತ್ಯನಾದರೂ ದೇವತೆಯಾದ. ಹಾಗೂ ದೀಪಾವಳಿ ಹಬ್ಬದ ಮೂರು ದಿನಗಳ ಬಗ್ಗೆ - ವಿಷ್ಣು - ವಾಮನ ಅವತಾರ ಮಾಡಿ, ಬಲಿಯಿಂದ ಮೂರು ಪಾದ ದಾನ ಬೇಡುವುದು, ರಾಕ್ಷಸರ ಗುರುವಾದ ಶುಕ್ರಾಚಾರ್ಯರು, ಬಲಿಗೆ ಬುದ್ಧಿ ಹೇಳುವುದು, ಬಲಿ ದಾನ ನೀಡಿ, ತಾನು ವಿಷ್ಣು ಪಾದದಿಂದ, ಪಾತಾಳ ಲೋಕಕ್ಕೆ ಹೋಗುವುದು, ಈ ಕತೆಯೇ ನೆತ್ತಿಯ ಮೆಟ್ಟಿದನು, ನಾಟಕ, ಗದ್ಯ-ಪದ್ಯ - ಎರಡರಲ್ಲೂ ಇದೆ. ಸಾ.ಶಿ. ಮರುಳಯ್ಯನವರ ಗದ್ಯ ಶೈಲಿ,

ಪದ್ಯಶೈಲಿ, ಮುದ್ದಣ್ಣನಿಗಿಂತ ಸತ್ವಯುತವಾದದ್ದು. ಮಕ್ಕಳ ನಾಟಕ ಇದು, ವೃಂದಗಾನದ ಈ ಪದ್ಯ ನೋಡಿ -

''ಬನ್ನಿ ಬನ್ನಿ
ಬೆಳಕ ತನ್ನಿ
ಬೆಳಕ ಬಿತ್ತಿ
ಬೆಳಕ ಚೆಲ್ಲಿ
ಬೆಳಕಿನೆಳೆಯ
ಬಳ್ಳಿ ಬೆಳೆದು
ಬೆಳಕನುಂಡು
ಬೆಳಕ ಕುಡಿದು
ಹಾಡಿ ನಲಿಯುವ
ಪಾಡಿ ಬೆಳೆಯುವ ''

ಹಾಗೆಯೇ -

''ದೀಪದ ಬುಡದಲಿ ಕತ್ತಲು ಕವಿದಿದೆ
ತುದಿಯೊಳು ತುಂಬಿದೆ ಧೂಮಶಿಖೆ
ನೆಲೆಗೊಟ್ಟಾಗಿದೆ ಮತಿ ಗೆಟ್ಟಾಗಿದೆ
ಬರಬೇಕಾಗಿದೆ ಸು-ಸ್ಥಿರತೇ
ಅನ್ನವೆ ಹಸಿದಿದೆ ಜಲ ಬಾಯಾರಿದೆ
ಭೂಮಿಯು ಬಯಸಿದೆ ಹಿಡಿಮಣ್ಣು ! ''

ಇದು - ಈ ನಾಟಕಕ್ಕೆ ಕಲಶಪ್ರಾಯವಾದ ಪದ್ಯಗಳು, ಆಗಿನ ಪರಿಸರದ್ದು ಆಗಿದೆ. ಪುರಾಣದ ಬಗ್ಗೆ ಈ ನಾಟಕದಲ್ಲಿ ಗದ್ಯದ ತುಣುಕು ಇದು -

''ತಪ್ಪು ತಪ್ಪು, ನಮ್ಮ ಪ್ರಸಿದ್ಧ ಪುರಾಣಗಳ ಬಗೆಗೆ ನಿನ್ನದು ಶುದ್ಧಾಂಗ ತಪ್ಪು ತಿಳುವಳಿಕೆ. ಕೇಳು, ನಮ್ಮ ಪುರಾಣಗಳು ಮಾನವಾವತಾರದ ಪೂರ್ವ ಪ್ರತಿಮೆಗಳು ಅಲ್ಲಿಯದು, ಭೌತ ಸತ್ಯವಲ್ಲ, ಭಾವಸತ್ಯ, ಅದು ನಿತ್ಯ ಸತ್ಯಕ್ಕೊಡ್ಡಿದ ಮಹಾ ಪ್ರತಿಮೆಗಳು.''

ಕೊನೆಯ ಪಾದಕ್ಕೆ ಜಾಗ ಕೇಳಿದ ವಾಮನನಿಗೆ ಬಲಿ ಹೇಳುವ ಈ ಗದ್ಯದ ಸಾಲುಗಳು ಇವು -

''ಇಲ್ಲಿದೆ, ಇಲ್ಲಿದೆ. ಈ ಬಲಿಚಕ್ರವರ್ತಿಯ ನೆತ್ತಿಯ ಮೇಲಿದೆ. ಇದನ್ನು ಮಹಾನುಭಾವನು ತನ್ನ ಮೂರನೆಯ ಪಾದದ ನೆಲವೆಂದು ಬಗೆದು ಈ ಬಲಿಗೆ ಮುಕ್ತಿಯನ್ನೀಯಲಿ, ದೇವ, ದೇವಾ, ದಯಾಮಯನೆ, ಅಣುರೇಣುತೃಣಕಾಷ್ಠ ಗಳಲ್ಲಡಗಿರುವ, ಓ ವಿಶ್ವ ಚೇತನವೇ, ನನ್ನ ನೆತ್ತಿಯನ್ನು ಮೆಟ್ಟಿ, ತುಳೀ, ತುಳೀ, ಹತ್ತಿ ತುಳಿ, ಮೆಟ್ಟಿತುಳಿ, ನಾನು - ಇಲ್ಲವಾಗಲಿ, ನೀನು ಮಾತ್ರಾ ಉಳಿಯಲಿ''.

ಹೀಗೆ ಈ ನಾಟಕದಲ್ಲಿ - ಆತ್ಮದರ್ಶನ ಮೂಡಿಸಿದ್ದಾರೆ. ಅಹಂ ಅನ್ನು ಹೋಗಲಾಡಿಸಿ, ಬ್ರಹ್ಮತ್ವವನ್ನು ಬಲಿಯ ಮೂಲಕ ನಿರೂಪಿಸಿದ, ಸಾ.ಶಿ. ಮರುಳಯ್ಯ ಧನ್ಯರು.

ಮೂರನೆಯ ನಾಟಕ ಬಾಪೂ ದರ್ಶನ, ಇದು ಮಹಾತ್ಮಾಗಾಂಧಿಯ ಸ್ವಾತಂತ್ರ್ಯ ಹೋರಾಟ, ಹಾಗೂ ಇಡೀ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ - ಆಗಿನ ತ್ಯಾಗಿಗಳು, ಹೋರಾಟಗಾರರ, ನಾಯಕರ ಬಗ್ಗೆ ಬೆಳಕು ಚೆಲ್ಲುವ ನಾಟಕ. ಎಲ್ಲಾ ನಾಯಕರೂ ಇಲ್ಲಿ ಬರುತ್ತಾರೆ. ಮಾತಾಡುತ್ತಾರೆ, ಇರುತ್ತಾರೆ, ಒಟ್ಟಿನಲ್ಲಿ - ಸ್ವಾತಂತ್ರ್ಯ ಹೋರಾಟದ ಬಗ್ಗೆ ಈಗಿನ ಯುವಕರಲ್ಲಿ - ಮಕ್ಕಳಲ್ಲಿ ಅರಿವಿಲ್ಲ. ಈ ನಾಟಕ ಓದುವುದರಿಂದ, ನೋಡುವುದರಿಂದ, ಭಾರತ ಸ್ವಾತಂತ್ರ್ಯದ ಬಗ್ಗೆ ಎಂತಹ ದಾರುಣ ಕಥೆ ಇದೆ - ನಮ್ಮ ಹಿರಿಯರ ತ್ಯಾಗ, ಬಲಿದಾನ ಎಂತಿವೆ ಎನ್ನುವ ಬಗ್ಗೆ - ನಾಡಿನ ಬಗ್ಗೆ ದೊಡ್ಡ ತಿಳಿವು ಇದೆ. ಈ ನಾಟಕ ತುಂಬಾ ಪ್ರದರ್ಶನ - ಆಗಬೇಕು, ಪ್ರತಿ ಶಾಲೆಯಲ್ಲೂ ಗ್ರಾಮಗಳಲ್ಲೂ ಆಗಬೇಕು, ಪಠ್ಯ ಪುಸ್ತಕಗಳಲ್ಲಿ ಇದು ಮೂಡಿ ಬರಬೇಕು. ಮಕ್ಕಳಿಗೂ, ಶಿಕ್ಷಕರಿಗೂ, ಪೋಷಕರಿಗೂ, ಈ ನಾಟಕ ಮನನವಾಗಬೇಕು, ಹಾಗಾದಾಗ ಮಾತ್ರ ನಮ್ಮ ಸ್ವಾತಂತ್ರ್ಯದ ಬಗ್ಗೆ ಅರಿವು ಮೂಡುತ್ತದೆ.

ಭಾರತಾಂಬೆ ಹೇಳುವ ಮಾತು ಇದು -

> ''ಸಮತೆ - ಶಾಂತಿ, ಸತ್ಯ, ಅಹಿಂಸೆಗಳು ನಿತ್ಯ
> ಈ ವಿಶ್ವರಂಗದಲಿ ನಲಿಯುತಿರಲಿ,
> ಆದರಿದೊ ಓ ಕಂದ, ನನ್ನೆದೆಯ ಮಕರಂದ
> ನಿನ್ನ ನೆಚ್ಚಿನ ನಿಜ ಪ್ರಾರ್ಥನೆಯ ಬಿಟ್ಟು ಬಿಡು ''

ಸಕಲ ಬಾಂಧವರೊಡನೆ ಕೂಡಿದಾ ಪ್ರಾರ್ಥನೆಯ ಗಾಂಧೀಜಿಯ ಸಾವಿನ ಹಿನ್ನಲೆ ಈ ರೂಪಕದಿಂದ ಅರಿಯಬಹುದು. ಗಾಂಧೀಜಿ ಆತ್ಮಬಲದಿಂದ ಮಹಾತ್ಮರಾದರು. ಅದಕ್ಕೆ ಇದು - ಈ ಕೆಳಗಿನ ಸಾಲುಗಳು -

> ''ಆತ್ಮಬಲದುನ್ನತಿಯ ಅಗ್ನಿಗೋಪುರ ಶಕ್ತಿ !
> ನರ-ಹರರ ಬೆಸುಗೆಯಾ ಐಕ್ಯಾನುಸಂಧಾನ !
> ಆಂತರಿಕ ದೇವನನು ಎಚ್ಚರಿಸುವಾ ಮಂತ್ರ !
> ತಾಯಿ, ಪ್ರಾರ್ಥನೆಯು ಪರಿಪರಿಯ ಪರಿತಾಪವಲ್ಲ !
> ದೇವನಲಿ ಬಯಸಿದುದ ಮಾಡಿಸುವುದೂ ಅಲ್ಲ ! ''

ಗಾಂಧೀಜಿಯ ಪ್ರಾರ್ಥನೆಯ ಉದ್ದೇಶ ಇದೇ ಆಗಿತ್ತು. ಮಹಾತ್ಮ ಗಾಂಧೀಜಿಯವರೊಬ್ಬರೇ ಅಲ್ಲ - ಪ್ರತಿ ಮಹಾತ್ಮರು, ಹುತಾತ್ಮರೂ, ಏನು, ಏನಾಗಿದ್ದಾರೆ ? ಎಂಬುದಕ್ಕೆ ಮರುಳಯ್ಯನವರ ಈ ಪದ್ಯ ನೋಡಿ -

''ಕೂಡಿದಾ ಸಂಗಮದಿ ಬಸವರೆನಿಬರು ಬರಲಿ
ನೀರ್ಗುಡಿಸದಿಹುದೆ ? ಸೀತೆ ಜಾರಿಣಿಯೆಂದು
ದಟ್ಟ ಕಾನನಕಟ್ಟಿ ಬೆಟ್ಟ ಕಂದರದಲ್ಲಿ ತಳ್ಳದಿಹುದೆ ?
ಶರಣೆ ಮಹಾದೇವಿಯನು ಉಟ್ಟ
ಸೀರೆಯ ಕಿತ್ತು ಬಟ್ಟ ಬಯಲೊಳಗಟ್ಟಿ ನಕ್ಕು ''

ಹಾಗೂ -

''ಸಾಕ್ರಟೀಸನ ತುಟಿಗೆ ವಿಷದ
ಬಟ್ಟಲು ತಂದು ನೀಡದಿಹುದೆ ? ತಂದೆ
ಲಿಂಕನನನ್ನು ನಾಟ್ಯಾದಾರಂಗದಲಿ
ಗುಂಡಿನಾ ಮಳೆಗೆರೆದು ಕೊಲ್ಲದಿಹುದೆ ?
ಮಮತೆ - ಮೋಸವವೆಂದು ಮಹಮ್ಮದನ ಸೆಳೆ ತಂದು
ಮೆಕ್ಕೆಯಿಂ, ಮದೀನದೆಡೆ ದೌಡಾಯ್ಸದೇನಮ್ಮಾ ? ''

ಕೊನೆಗೆ -

''ಹಗಲು ಇದ್ದೆಡೆಯಲ್ಲಿ ಇರುಳು ಸಹಜ
ಹಗಲಾಗ ಬಯಸುವೊಡೆ ಇರುಳಿರಲೇಬೇಕು ''

ಇದು ಸಮರ್ಥನೀಯವಾದ ಬರವಣಿಗೆಗೆ ಈ ನಾಟಕ ಸಾಕ್ಷಿಯಾಗಿದೆ.

'ಬಿಡುಗಡೆಯ ಬೆಳಕೆ', ಈ ನಾಟಕ ಭಾರತ ಸ್ವಾತಂತ್ರ್ಯ ಆಗಸ್ಟ್ ೧೫ ರಂದು ಆಡಿದರೆ ಉಪಯುಕ್ತವಾಗುತ್ತದೆ. ಸಂಗೀತರೂಪದ ಈ ನಾಟಕ ೧೫-೮-೮೩ ರಂದು ಆಕಾಶವಾಣಿಯಲ್ಲಿ ಪ್ರಸಾರವಾಗಿದ್ದು ಈಗ ಈ 'ನಾಟ್ಯಾಂಜಲಿ'ಯಲ್ಲಿ ಇದೆ. ಕಾಲಪುರುಷಹಾಗೂ ಕನ್ನಡದ ಸ್ವಾತಂತ್ರ್ಯ ಹೋರಾಟಗಾರರು, ಸಂಗೊಳ್ಳಿರಾಯಣ್ಣ, ಕಿತ್ತೂರು ಚೆನ್ನಮ್ಮ, ಕುಂಡಲಿನಿ ಭಾರತದ ಕಟ್ಟಬೊಮ್ಮನ್, ಬ್ಯಾನರ್‌ಮನ್, ಝೂನ್ಸಿರಾಣಿ, ನೇತಾಜಿ, ವಿವೇಕಾನಂದ ಹೀಗೆ ಎಲ್ಲಾ ಮುಖ್ಯವಾದವರು ಈ ನಾಟಕದಲ್ಲಿ ಕಾಣಿಸಿಕೊಳ್ಳುತ್ತಾರೆ. ಜೊತೆಗೆ ಇಡೀ ಭಾರತದ ಸ್ವಾತಂತ್ರ್ಯಕ್ಕೆ ಹೋರಾಡಿದ ಎಲ್ಲಾ ನಾಯಕರು ಇಲ್ಲಿ ನೆನಪಿಸಿ-ಕಾಣಿಸಿಕೊಳ್ಳುತ್ತಾರೆ. ಚಿತ್ತರಂಜನ್‌ದಾಸ್, ಗೋಖಲೆ, ಮಾಲವೀಯ, ನೆಹರು, ತಿಲಕ್, ಇತ್ಯಾದಿಗಳು.

ಭಾರತದ ಭಾಗ್ಯೋದಯದ ಶುಭದಿನವು ಇಂದು
ಇಂದಿನರುಣೋದಯ ನಮ್ಮ ಸ್ವಾತಂತ್ರ್ಯೋದಯ

ಹೀಗೆ ನಾಟಕ ಪ್ರಾರಂಭದಲ್ಲಿ - ಈ ಪವಿತ್ರ ದಿನದ ಬಗ್ಗೆ ಈ ಪದ್ಯದ ಸಾಲುಗಳು ಹೃದಯ ಸೆಳೆಯುತ್ತವೆ. ಸ್ವತಂತ್ರ್ಯ ದೇಶದ - ಪ್ರಕೃತಿ ಚಿತ್ರಣಕ್ಕೆ ಈ ಪದ್ಯಗಳನ್ನು ನೋಡಿ -

''ಹರಿವ ನೀರು ಕಣ್ತೆರವ ಹೂವು ಕುಕಿಲಿಡುವೆ ಬನದ ಹಕ್ಕಿ,
ನೆಗೆವ ಜಿಂಕೆ ನರ್ತಿಸುವ ನವಿಲು ಜಾಗರದಿ ಮೈಯಿ ಸೊಕ್ಕಿ
ಬಂಡನುಂಡು ಝೇಂಕಾರದಿಂದ ಓಂಕಾರಗೈವ ದುಂಬಿ
ಸ್ವೇಚ್ಛೆಯಿಂದ ಪಂಚಮವ ಮಿಡಿವ ಕೋಗಿಲೆಯ ಇಂಚರಶ್ರೀ ''

ಈ ನಾಡನ್ನು ಪ್ರೀತಿಸಿದವನ ಬಗ್ಗೆ ಈ ಸಾಲುಗಳು ' -

''ಸ್ವಾಭಿಮಾನ, ದೇಶಾಭಿಮಾನ ಸ್ವಾತಂತ್ರ್ಯ ಬಯಸದವನು
ಸತ್ತಂತೆ ಎಂದೆ ನೈಜತೆಗೆ ಮುನಿದೆ ನಿಲ್ಲಿಸಿದೆ - ಸಮತೆಯನ್ನು
ರಾಯಣ್ಣ ಸೆರೆಯಾದ ಕಿತ್ತೂರ ಚೆನ್ನಮ್ಮನನ್ನು ಸಂಧಿಸಿ - ''

ತಾನು ಮಾಡಬೇಕಾದ್ದು ಏನೆಂದು ಕೇಳುವುದು ಹೀಗೆ -

''ಯಾವ ರೂಪದ ಸೇವೆ, ಯಾವ ಮಟ್ಟದ ತ್ಯಾಗ ನಮ್ಮಿಂದಾಗಬೇಕಾಗಿದೆ? ಅಮ್ಮಾ, ಬಿಚ್ಚುಗತ್ತಿ ಚನ್ನಬಸಪ್ಪ, ಗಜವೀರ ಬಾಲಣ್ಣ, ಗಂಡುಗಲಿ, ಗುರುಸಿದ್ದಪ್ಪ - ಇವರೆಲ್ಲರೂ ಬದುಕಿದ್ದಾರೆ ತಾಯಿ, ಏನಾಗಬೇಕು ಹೇಳಿ''.

ಒಬ್ಬರಿಗಿಂತ ಒಬ್ಬರು ದೇಶದ ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣ ಕೊಡುವ ಇಂತಹ ವ್ಯಕ್ತಿಗಳನ್ನು ಸಾ.ಶಿ. ಮರುಳಯ್ಯ ತಮ್ಮ ಈ ನಾಟಕದಲ್ಲಿ ಮೇಲಿಂದ ಮೇಲೆ ಕಾಣಿಸುತ್ತಾರೆ. ಝಾನ್ಸಿರಾಣಿ ತನ್ನ ಸೈನಿಕರನ್ನು ಹುರಿದುಂಬಿಸುವುದು ಹೀಗೆ -

''ಇದು ನಿಮ್ಮ ಕಟ್ಟಕಡೆಯ ಹೋರಾಟ, ಸೋಲಾಗಲಿ
ಗೆಲುವಾಗಲಿ, ಅದರ ಗೊಡವೆ ಬೇಡ, ನಿಮ್ಮೆಲ್ಲ ಸ್ವಾರ್ಥವನು
ಬದಿಗಿರಿಸಿ, ದೇಶರಕ್ಷಣೆಗಾಗಿ ಹೋರಾಡಿ''

ಮತ್ತು ಭಾರತೀಯರ ಬಗ್ಗೆ ಇದು -

''ವೇದ ಬೇರೆ, ಭಾಷೆ ಬೇರೆ ದೇಶವೊಂದೆ ಭಾರತ
ಒಂದೆ ತಾಯಿ ಮಕ್ಕಳೆಂದು ಘೋಷಿಸೋಣ ಸಂತತ''

ಸಾ.ಶಿ. ಮರುಳಯ್ಯನವರ ಕೆಲವು ಗದ್ಯದ ಸಾಲುಗಳು ಇವು. ತನ್ನ ರಕ್ಷಣೆಯನ್ನು ತಾನು ಮಾಡಿಕೊಳ್ಳದ ಯಾವುದೇ ಜನಾಂಗವು ಸ್ವಾಭಿಮಾನಿಯಾಗಿ ಬಾಳಲಾರದು 'ಗೆಲ್ಲುವ, ಇಲ್ಲವೆ ಸಾಯುವ' ಎಂಬ ದೃಢನಿಶ್ಚಯದಿಂದ ಹೋರಾಡಲು ಒಗ್ಗಟ್ಟಾಗಿ !

''ಸ್ವರಾಜ್ಯವು ನನ್ನ ಜನ್ಮಸಿದ್ಧ ಹಕ್ಕು , ಅದನ್ನು ದೊರಕಿಸಿಯೇ ತೀರುವೆನು.''

ಹೀಗೆಯೇ ಈ ನಾಟಕದ ಉದ್ದ ದೇಶಾಭಿಮಾನ ತುಂಬುವಂತಹ ಬರಹಗಳು, ಸಾ. ಶಿ. ಅವರ ಶ್ರೇಷ್ಠ ಬರಹದ ನಿದರ್ಶನಗಳಾಗಿವೆ.

ದೇವತೆಗಳು, ರಾಕ್ಷಸರು, ಕ್ಷೀರಸಮುದ್ರವನ್ನು ಕಡೆದಾಗ ಅಮೃತದ ಬದಲು ಮೊದಲು ಉದ್ಭವಿಸಿದ ಹಾಲಾಹಲ ವಿಷವನ್ನು ಕುಡಿದ ಶಿವನ ಕತೆಯನ್ನು ಇಲ್ಲಿ ನೃತ್ಯ-ರೂಪಕವಾಗಿ ಸಾ.ಶಿ. ಮರುಳಯ್ಯ ರಚಿಸಿದ್ದಾರೆ.

ಶಿವೆಯ ಭಯಕ್ಕೆ ಶಿವ ಹೇಳುವುದು ಹೀಗೆ -

''ಬೆಚ್ಚದಿರು ಶರ್ವಾಣಿ ನೆಚ್ಚನಿಡು ಕಲ್ಯಾಣಿ
ನಿಚ್ಚ ಸಾಕ್ಷಿಯು ನೀನು ಕಿಚ್ಚೇಕೆ ಫಣಿವೇಣಿ
ಲೋಕ ಸಂಗ್ರಹ ಕಾರ್ಯ ನಮ್ಮಾದ್ಯ ಕರ್ತವ್ಯ
ಜಗದ ಉದ್ದಾರವೇ ಜಗದೀಶ ಹೃದಯ ''

ಪಾರ್ವತಿ ಗಂಡನನ್ನು ಹೊಗಳುವ ಈ ಪದ್ಯ ನೋಡಿ -

''ದುಷ್ಟ ಶಿಕ್ಷಕ, ಶಿಷ್ಟ ರಕ್ಷಕ
ಇಷ್ಟದಾಯಕ ಶ್ರೇಷ್ಠನೇ ''

ಸುಲಭವಾಗಿ, ಮಕ್ಕಳು, ದೊಡ್ಡವರು ರಂಗದ ಮೇಲೆ ಅಭಿನಯಿಸಲು ಯೋಗ್ಯವಾದ ನಾಟಕ ಇದು.

ಶಾಂತಲಾದೇವಿಯ ಮೇಲೆ ರಚಿಸಿದ ಸಾ. ಶಿ. ಮರುಳಯ್ಯನವರ ನೃತ್ಯರೂಪಕ 'ನಾಟ್ಯ ಸರಸ್ವತಿ'. ಶಾಂತಲಾದೇವಿ, ವಿಷ್ಣುವರ್ಧನ, ನಾಟ್ಯಾಚಾರ್ಯ, ಮದನಿಕೆಯರು ಮತ್ತು ಮೇಳ ಈ ನಾಟಕದಲ್ಲಿ ಬರುವ ಪಾತ್ರಗಳು ಹಳೇಬೀಡು, ಬೇಲೂರು ಶಿಲ್ಪಮಯ ದೇವಸ್ಥಾನ ಕಟ್ಟಡಗಳ ಹಿನ್ನೆಲೆ, ಶಾಂತಲೆಯ ನಾಟ್ಯ ಪಾಂಡಿತ್ಯ, ಹೀಗೆ ಎಲ್ಲವೂ ಈ ರೂಪಕದಲ್ಲಿ ಮೂಡಿದೆ. ಇದು ಗದ್ಯದಲ್ಲೂ, ಅಲ್ಲಲ್ಲಿ ಪದ್ಯದಲ್ಲೂ ಇರುವ ನಾಟಕ. ನರ್ತನಗಳ, ರಾಗಗಳ, ಸಂಗೀತದ, ಎಲ್ಲಾ ಮಜಲುಗಳು ಎಳೆಎಳೆಯಾಗಿ ಇಲ್ಲಿ ಕಾಣಿಸಿಕೊಳ್ಳುತ್ತವೆ.

ಇಲ್ಲಿನ ಪದ್ಯದ ಪ್ರಾಸದ ಬಗ್ಗೆ -

''ಗೆಜ್ಜೆ ನುಡಿಯು ಝಲ್ಲನೆ
ಎದೆಯೊಳಿನೋ ಢಲ್ಲನೆ ''

ರಾಜನಾದ ವಿಷ್ಣುವರ್ಧನನ ಮಾತು ಹೀಗಿವೆ -

''ಹಾಗಲ್ಲ ಆಚಾರ್ಯ, ಈ ಕಲಾ ಸಾಮ್ರಾಜ್ಯದಲ್ಲಿ ನೀವು, ಸಾಮ್ರಾಟರು, ನಾನು ಕೇವಲ ಸಾಮಾನ್ಯ ಪ್ರಜೆ, ಅಲ್ಲವೆ ಶಾಂತಿ?''

ಇಡೀ ಕೃತಿಯ ಬಗ್ಗೆ ಇದು -

''ಜಯ ಜಯ ನಾಟ್ಯಾಂಜಲಿ
ಜಯ ಜಯ ಗೀತಾಂಜಲಿ ''

ಇಲ್ಲಿನ ಎಲ್ಲಾ ರೂಪಕಗಳು, ಯಶಸ್ವಿಯಾಗಿವೆ.

'ಭಕ್ತಿ ಭಾವುಕಿ', 'ಧ್ರುವತಾರೆಯಾಗುವೆನು' ಎರಡು ರೂಪಕಗಳನ್ನು ಸಾ.ಶಿ. ಮರುಳಯ್ಯನವರು ಮಕ್ಕಳಿಗಾಗಿ ಬರೆದಿದ್ದಾರೆ.

ಕೊಳೂರು ಕೊಡಗೂಸಿನ ಕತೆಯೇ ಭಕ್ತಿಯ ಭಾವುಕತೆ, ಸತ್ಯ ಹೇಳಿದ ಮಗಳಾದ ಕೋಳೂರು ಕೊಡಗೂಸಿನ ಕತೆ ಇದು.

ನಾಗಯ್ಯ ಶಿವಭಕ್ತ, ಸೋಮಲೆ ಅವನ ಪತ್ನಿ ಚೆನ್ನಲೆ ಅವನ ಮಗಳು. ಇವಳೆ ಕೊಡಗೂಸು, ಇವಳ ತಂದೆ, ಕಲ್ಲಿನಾಥ (ಶಿವಲಿಂಗ) ದೇವರಿಗೆ ನಿತ್ಯ ಪೂಜೆ ಮಾಡಿ - ಹಾಲು ನೈವೇದ್ಯ ಮಾಡುತ್ತಿದ್ದ, ಕಾರಣಾಂತರದಿಂದ ಅವನು ಸತಿಯೊಡನೆ ಊರಿಗೆ ಹೋಗುತ್ತಾನೆ, ಮಗಳಿಗೆ ಕಲ್ಲಿನಾಥನ ಪೂಜೆ ಹಾಲು ನೈವೇದ್ಯ ಮಾಡಲು ಹೇಳುತ್ತಾನೆ. ಅವಳು ಶಿವನನ್ನು ಬೇಡಿ, ನಿಜವಾದ ಭಕ್ತಿಯಿಂದ ಒಲಿಸಿಕೊಂಡು ತಾನು ತಂದ ಹಾಲನ್ನು ಶಿವನಿಗೆ ಕುಡಿಸುತ್ತಾಳೆ. ಭಕ್ತಿಯಿಂದ ಭಗವಂತನನ್ನು ಒಲಿಸಿಕೊಳ್ಳುತ್ತಾಳೆ. ತಂದೆ ಬಂದಾಗ ಈ ವೃತ್ತಾಂತ ನೋಡಿ ಕೋಪಗೊಳ್ಳುತ್ತಾನೆ. ಪರೀಕ್ಷಿಸಿದಾಗ ಸತ್ಯ ತಿಳಿದು ಸಂತೋಷಪಡುತ್ತಾನೆ, ನಿಜವಾಗಿ ಸಾ.ಶಿ. ಮರುಳಯ್ಯ ಈ ನಾಟಕವನ್ನು ಹೃದಯಸ್ಪರ್ಶಿಯಾಗಿ ಬರೆದಿದ್ದಾರೆ. ಹತ್ತು ಪಾತ್ರಗಳು ಈ ನಾಟಕದಲ್ಲಿದ್ದು ಪ್ರಾರಂಭದಲ್ಲಿ ಕೋಳೂರಿನ ಬಗ್ಗೆ -

''ಬನ್ನಿ ಬನ್ನಿ ಕೋಳೂರಿಗೆ ಬನ್ನಿ,
ಭೂಕೈಲಾಸಕೆ ಬನ್ನಿ
ಕಲ್ಲಯ್ಯನಿಗೆ ಶರಣೆನ್ನಿ''

ಕಾರಣ ಕೊಡಗೂಸು, ಈ ಊರೆಲ್ಲ ಶಿವ-ಶಿವೆಯರನ್ನು ಪ್ರತ್ಯೇಕಿಸಿಕೊಂಡದ್ದು ಅದು ಭೂ ಕೈಲಾಸವಾಯಿತು.

ಸಿದ್ದವ್ವ - ಚೆನ್ನ (ಕೊಡಗೂಸಿನ ಬಗ್ಗೆ) ಹೇಳುವುದು ಹೀಗೆ -

''ನೋಡಿದೆಯ ಕಲ್ಲವ್ವ, ಚೆನ್ನವ್ವ, ಎಂತ ಚೆಲುವಿನ
ಹೆಣ್ಣು, ಅಂಥ ಭಕ್ತಿಯ ಕಣ್ಣು
ಪರಶಿವನಿಗೆ ಪ್ರಿಯ ಹೆಣ್ಣು
ಚೆನ್ನಲೆ ನೀನು, ಕೊಡಗೂಸು ಅಲ್ಲೇನೆ''

ಆಗ ಚೆನ್ನಲೆ ಶಿವನ ಸೃಷ್ಟಿಯನ್ನು ವಿವರಿಸುತ್ತಾಳೆ.

''ಹರಿವ ತೊರೆ, ಮೆರೆವ ನದಿ
ಬಿಮ್ಮನಿಹ ಬೆಟ್ಟಗಳು, ತೇಲುತಿಹ ಮೋಡಗಳು
ಮೈ ಹಾಸಿ ಮಲಗಿರುವ ಈ ರಮ್ಯ ವನರಾಜಿ
ಮಿನುಗುತಿರುವ ತಾರೆಗಳು, ಉರಿವ ಆ ಸೂರ್ಯ''

ಹೀಗೆಯೇ ಎಷ್ಟೊಂದು ಅರ್ಥಗರ್ಭಿತ ಈ ಸಾಲುಗಳು-

ಕೊಡಗೂಸು, ಶಿವನಲ್ಲಿ ಮಾತಾಡುವ ಬಗ್ಗೆ -

''ಮಾತಾಡು, ಮಾತಾಡು ಲಿಂಗವೇ ನೀನು
ಮಾತಾಡಲೊಲ್ಲೇಕೆ ಲಿಂಗವೇ''

ಹೀಗೆ ಹಾಲು ಕುಡಿಯುವಂತೆ ಅವಳು ಶಿವನನ್ನು ಕೇಳುವ ಬಗೆ ಹೀಗೆ -

ಕುಡಿ ಕಲ್ಲನಾಥ, ಕುಡಿ ಕಲ್ಲನಾಥ
ಹಾಲ್ಗುಡಿಯೋಪ್ಪರಹರನೇ ಲೋಕೈಕನಾಥ
ದಡದಡನೆ ಅಡಿಯಿರಿಸಿ ಓಡೋಡಿ ಬಾರೋ
ಮೃಡಹರನೆ ಎಡೆ ಬಿಡದೆ ಸವಿದುಣ್ಣು ಬಾರೋ ।

ಶಿವನನ್ನು ಶಿವೆ - ಬೇಡಿ - ಕೊಡುಗೂಸಿಗೆ 'ದರ್ಶನ ಕೊಡು' 'ಹಾಲು ಕುಡಿ', ಎಂದಾಗ ಈ ಗದ್ಯ ನೋಡಿ -

'ಶಾಂಭವಿ ನಾನೇನು ಮಾಡಲಿ ? ಈ ಬಾಲೆಯ ಮುದ್ದು ಮಾತುಗಳು, ಅವಳು ತಂದ ಹಾಲಿಗಿಂತಲೂ ಸವಿಯಾಗಿದೆಯಲ್ಲಾ ? ಹಾಲು ಕುಡಿದು ಬಿಟ್ಟರೆ, ನುಡಿಜೇನಿನ ಸವಿ ಸಿಗದಂತಾಗುತ್ತದೆ !

ಚೆನ್ನಲೆ - ಶಿವನನ್ನು ಹೀಗೆ ಬೇಡುತ್ತಾಳೆ.
'ನನ್ನ ಮೇಲೆ ದಯೆ ಬರಲಿಲ್ಲವೇಕೋ ಸ್ವಾಮಿ ?
ಕಣ್ಣಪ್ಪನಿತ್ತ ಹಸಿಮಾಂಸ ನಿನಗೆ ಸವಿಯಾಯಿತೆ ?
ನಿಂಬಿಯಕ್ಕನು ಒನಕೆ ಪೆಟ್ಟುಕೊಟ್ಟ ಅನ್ನ ಪ್ರಿಯವಾಯಿತೆ ?
ವೈಜಕಬ್ಬೆ, ಗುಡ್ಡಾಂಬೆಯರಿತ್ತ ಉಣಿಸು ಮೆಚ್ಚಾಯಿತೇ ?
ಬಿಜ್ಜ ಮಹಾದೇವಿಯೂಡಿದ ಹಾಲನ್ನು ಶಿಶುವಾಗಿ ಸವಿದೆಯಲ್ಲಾ,

ಹೀಗೆಯೇ ಭಕ್ತರ ಕತೆ ಹೇಳಿ, ಹಾಲು ಕುಡಿಯಲು ಪ್ರಾರ್ಥಿಸುತ್ತಾಳೆ.

ಒಟ್ಟಿನಲ್ಲಿ ನಿಶ್ಚಲ ಭಕ್ತಿಗೆ ಭಗವಂತ ಒಲಿಯುತ್ತಾನೆ ಎಂದು ಸಾ.ಶಿ. ಮರುಳಯ್ಯನವರ ಈ ನಾಟಕ ನಿರೂಪಿಸಿ ಯಶಸ್ವಿಯಾಗುತ್ತದೆ.

ಸುರುಚಿ, ಸುನೀತಿ - ಇಬ್ಬರು ರಾಣಿಯರು, ಉತ್ತಾನಪಾದನಿಗೆ ಉತ್ತಮ, ಧ್ರುವ - ಮಕ್ಕಳು. ಸುರುಚಿ ರಾಜನನ್ನು ಒಲಿಸಿ, ರಾಣಿ ಆಗಿ, ಸುನೀತಿಯನ್ನು ಕೆಳಗೆ ಇಟ್ಟಿರುತ್ತಾಳೆ. ಧ್ರುವನಿಗೆ ತಂದೆಯ ತೊಡೆಯ ಮೇಲೆ ಕುಳಿತುಕೊಳ್ಳಲು ಸ್ಥಾನ ಸಿಗದಾಗ, ಸುರುಚಿಯಿಂದ ತಿರಸ್ಕಾರನಾಗಿ, ತಾಯಿಯ ಅಪ್ಪಣೆ ಪಡೆದು ನಾರದರಿಂದ ನಾರಾಯಣ ಉಪದೇಶ ಹೊಂದಿ ಧ್ರುವ ತಪಸ್ಸು ಮಾಡಿ, ನಾರಾಯಣನನ್ನು ಪ್ರತ್ಯಕ್ಷನಾಗಿಸಿ, ಧ್ರುವತಾರೆಯಾಗುತ್ತಾನೆ. ಈ ಕತೆಯ ಹಿನ್ನೆಲೆಯಲ್ಲಿ ಈ ನಾಟಕ

ಮೂಡಿದೆ. ೫ ಪಾತ್ರಗಳು, ಮೇಳ ಇಲ್ಲಿನ ನಾಟಕದ ಪಾತ್ರಗಳಾಗಿವೆ. ಇದು ಮಕ್ಕಳಿಗಾಗಿ ರಚಿಸಿದ ಸಾ.ಶಿ. ಮರುಳಯ್ಯನವರ ಅತ್ಯುತ್ತಮ ನಾಟಕ, ಮಕ್ಕಳ ಮುಗ್ಧ ಭಕ್ತಿ - ಕೊಡಗೂಸಂತೆ ಧ್ರುವ ಇಲ್ಲಿ ಬರುತ್ತಾನೆ. ಸತ್ಯ ಮತ್ತು ಸೌಂದರ್ಯ ಹಾಗೂ ಮಕ್ಕಳ ಮುಗ್ಧಭಕ್ತಿ - ಪರಮಾತ್ಮ ದರ್ಶನ - ಇವು ಈ ನಾಟಕದಲ್ಲಿ ನೋಡಬಹುದು. ಸುಂದರ ಗೀತೆಗಳಿಂದ ಈ ನಾಟಕ ಯಶಸ್ವಿಯಾಗುತ್ತದೆ.

ಧ್ರುವ ಹೇಳುವ ಈ ಮಾತು ಎಲ್ಲಾ ಮಕ್ಕಳಿಗೆ ಅನ್ವಯಿಸುತ್ತದೆ -

''ತಾಯಿ ದೇವರಿಗಿಂತ ಬೇರೆ ದೇವರೆ ಇಲ್ಲ
ತಾಯಿ ದೂಷಣೆ ನಿನಗೆ ಶುಭವಲ್ಲ ಉತ್ತಮಾ ! ''

ಅದಕ್ಕೆ ಉತ್ತಮ ಉತ್ತರಿಸುವ ಈ ಗೀತೆ ನೋಡಿ -

''ತಾಯಿ ದೂಷಣೆಗೆಲ್ಲಿ ಎಡೆಯಿಲ್ಲವಣ್ಣಯ್ಯ
ಜನ್ಮ ಕೊಟ್ಟಾಕೆಯನು ನಾ ಬೈದುದಿಲ್ಲಲ್ಲ
ಆ ತಾಯೊಳಡಗಿರುವ ಕ್ಷುದ್ರ ವರ್ತನೆಗಾಗಿ
ಕನಲಿದನು ಅಷ್ಟೆ, ಧಿಕ್ಕರಿಸಿ ನುಡಿದೆ ''

ಸುನೀತಿ ಅದಕ್ಕೆ ಹೇಳುವ ಮಾತು ಇದು -

''ಎರಡರರ್ಥವು ಒಂದೆ ! ಭೇದವೇತಕೋ ಕಂದ
ತಾಯ್ತನವಂ ಇಲ್ಲದಿಹ ತಾಯಿಯಿಹಳೆ ?''

ಸುಂದರ ಅರ್ಥಗರ್ಭಿತ ಗೀತೆಗಳಿಂದ, ಉತ್ತಮ, ಧ್ರುವ, ಸುನೀತಿ ಇವರು ಸಂವಾದದಲ್ಲಿ ನಾವು ನೋಡುತ್ತಾ ಹೋಗಬಹುದು.

ಧ್ರುವ ನೊಂದಾಗ -

''ಅಲ್ಲಮ್ಮ ನನ್ನ ತಂದೆಯ ತೊಡೆಯ ತಲ್ಪದಲಿ
ಪವಡಿಸುವ ಭಾಗ್ಯವಿನಿತಿಲ್ಲಾಯ್ತೆ !
ಈ ಬಾಲ್ಯ ಮುಗಿವಷ್ಟರಲ್ಲಿ ನನ್ನ ತಂದೆಯ
ತೊಡೆಯ ಮೇಲೆ ಕೂರುವ ಭಾಗ್ಯ
ನನಗಿದೆಯೆ ತಾಯಿ ?''

ಧ್ರುವನ ಮುಗ್ಧ ಹೃದಯದ ಈ ಮಾತುಗಳು, ಎಂತಹವರನ್ನಾದರೂ ಸೆಳೆಯದೇ ಇರಲಾರದು

ಅವನು ತಪಸ್ಸಿಗೆ ಹೋಗುವಾಗ -

''ಅಂತೆಗೈಯುವೆ ತಾಯಿ - ಇದೆ ನನ್ನ ಪ್ರತಿಜ್ಞೆ !
ತಪ್ಪಿದೊಡೆ ನೀನಿತ್ತ ಹಾಲಿಗೆಲ್ಲಿಯ ಮೌಲ್ಯ !
ಹನಿಯಾಗಿ ಹೋಗುವೆನು ಸಾಗರವ ಸೇರುವೆನು

ಸಾಗರವೇ ನಾನಾಗಿ ಸಿಂಧುವನು ತುಂಬುವೆನು
ಕಿಡಿಯಾಗಿ ಹಾರುವೆನು ಕೋಟಿ ಸೂರ್ಯರ
ತೇಜಪುಂಜದೊಳು ಬೆರೆಯುವನು
ನಾನೆ ತೇಜಸ್ಸಾಗಿ ಧ್ರುವತಾರೆಯಾಗುವೆನು !''

ಧ್ರುವನ ಮನೋನಿಶ್ಚಯ, ಹಾಗೂ ತಾಯಿಯ ಹಾಲಿನ ಮೌಲ್ಯ - ಇವೆರಡರ ಬಗ್ಗೆ ಮೇಲಿನ ಪದ್ಯ ಬೆಳಕು ಚೆಲ್ಲುತ್ತದೆ. ಇದು ಸಾ.ಶಿ. ಮರುಳಯ್ಯನವರ ರಚನೆ ಕೌಶಲ್ಯ - ಭಾರತೀಯ ಸಂಸ್ಕೃತಿಯ ಪ್ರತೀಕವೇ ಅವನ ಕವನದ ಸಾಲುಗಳಾಗಿವೆ.

ಧ್ರುವ ದೇವರನ್ನು ಬೇಡುವ ಬಗೆ -

''ಓಂ ನಮೋ, ನಾರಾಯಣಾಯ !
ಭಗವಂತ ಶ್ರೀಹರಿಯೆ, ಪರಮ ಪುರುಷೋತ್ತಮನೆ,
ಸತ್ಯನಾರಾಯಣನೆ, ನಿತ್ಯ ನಿರ್ಮಲನೇ,
ಅಣುರೇಣು ತೃಣಕಾಷ್ಠದೊಳೆಲ್ಲಾ ನೀನಂತೆ,
ನೀರಿನಲ್ಲಿ, ಗಾಳಿಯಲ್ಲಿ, ಸೂರ್ಯನಲ್ಲಿ, ಚಂದ್ರನಲ್ಲಿ,
ಚುಕ್ಕೆಯಲಿ, ಹಕ್ಕಿಯಲ್ಲಿ ಎಲ್ಲೆಲ್ಲೂ ಇಹೆಯಂತೆ,
ಹೂವಿನ ದಳಗಳಲ್ಲಿ ಸೌಗಂಧ ರೂಪಿನಲಿ ನೀನು''

ಧ್ರುವ ಪರಮಾತ್ಮನನ್ನು ಎಲ್ಲೆಲ್ಲೂ ಕಾಣುವ ಪದ್ಯ ಇದು. ಅನಂತರ ಭಗವಂತ ಅವನಿಗೆ ಹೇಳುವುದು ಹೀಗೆ -

''ಧ್ರುವರಾಯ ನಿನ್ನ ಮುಗ್ಧಪ್ರೇಮ
ಈ ಜಗದ ರಂಗದಲಿ ಆದರ್ಶವಾಗಲಿ
ನೀನೇರಿವೆತ್ತರಕೆ ನಾನೇರಲಾರದಿಹೆ -
ನೀನಾಗು ಎಂದಿಗೂ ಮಿರು ಮಿರುಗುವಾ ತಾರೆ
ಸಪ್ತರ್ಷಿ ಮಂಡಲದ ನೀಹಾರಿಕಾ-ಲೋಕದೇಕೈಕ ಧ್ರುವತಾರೆ''

ಕೊನೆಗೆ ಸಾ.ಶಿ. ಮರುಳಯ್ಯನವರು ಮಕ್ಕಳ ನಾಟಕ, ನೃತ್ಯ ರೂಪಕಗಳು, ದೊಡ್ಡವರಿಗೂ ಅನ್ವಯಿಸುವಂತೆ ರಚಿಸಿದ್ದಾರೆ. ಈ ರೂಪಕಗಳು, ಗದ್ಯ ರೂಪಕಗಳ ರಚನೆ ಹಾಗೂ ನಾಟಕದ ಎಲ್ಲಾ ಪ್ರಕಾರಗಳಲ್ಲೂ ಯಶಸ್ವಿಯಾಗುವಂತೆ, ಈ ಕೃತಿಗಳನ್ನು ಕನ್ನಡ ಸಾರಸ್ವತ ಲೋಕಕ್ಕೆ ಇತ್ತು ಧನ್ಯರಾಗಿದ್ದಾರೆ. ಈ ಎಲ್ಲಾ ಕೃತಿಗಳು, ನಾಡಿನ ಉದ್ದಗಲ ಓದುಗರ, ಪ್ರೇಕ್ಷಕರ, ವಿಮರ್ಶಕರ ಮೆಚ್ಚುಗೆ ಪಡೆದಿದೆ. ಇದೇ ಸಮರ್ಥ ಬರಹಗಾರ ಸಾ.ಶಿ. ಮರುಳಯ್ಯ ಅನ್ನುವುದಕ್ಕೆ ಸಾಕಾಗುತ್ತದೆ.

ಡಾ॥ ಸಾ.ಶಿ. ಮರುಳಯ್ಯ ಅವರ ಎರಡು ನಾಟಕಗಳು

ಡಾ॥ ವಿಜಯಾ ಸುಬ್ಬರಾಜ್

ಸುಪ್ರಸಿದ್ಧ ಕವಿಗಳೂ ಕನ್ನಡ ಪ್ರಾಧ್ಯಾಪಕರೂ ಆಗಿ ಕನ್ನಡ ಸಾಹಿತ್ಯ ಲೋಕಕ್ಕೆ ಪರಿಚಿತರಿರುವ ಡಾ॥ ಸಾ.ಶಿ. ಮರುಳಯ್ಯ ಅವರು ನಾಟಕಗಳನ್ನೂ ಬರೆದಿರುವುದು ಅತ್ಯಂತ ಕುತೂಹಲಕಾರಿ ಸಂಗತಿಯಾಗಿದೆ. ಸುಮಾರು ನಾಲ್ಕು ದಶಕಗಳಷ್ಟು ಹಿಂದೆಯೇ ಅವರು ನಾಟಕ ರಚನೆಗೆ ತೊಡಗಿದ್ದರೆಂಬುದು ಅವರ 'ಮರೀಬೇಡಿ' ಎಂಬ ಪ್ರಹಸನ ಮತ್ತು 'ವಿಜಯ ವಾತಾಪಿ' ಎಂಬ ಗಂಭೀರ ನಾಟಕಗಳಿಂದ. ತಿಳಿಯುತ್ತದೆ. ಅರವತ್ತು ಎಪ್ಪತ್ತರ ದಶಕದಲ್ಲಿ ಕನ್ನಡ ರಂಗಭೂಮಿ ಕ್ರಿಯಾಶೀಲವಾಗತೊಡಗಿತ್ತು. ಅಂತಹ ಸಂದರ್ಭದಲ್ಲಿ ಬಹುಶಃ ಮರುಳಯ್ಯನವರು ನಾಟಕ ರಚನೆಗೆ ಪ್ರೇರಣೆ ಪಡೆದಿರಬಹುದೆನಿಸುತ್ತದೆ. ಬರೆದಿರುವುದು ಎರಡೇ ನಾಟಕಗಳಾದರೂ ನಾಟಕಗಳ ಆಶಯಕ್ಕೆ ಬದ್ಧವಾಗಿ ಯಶಸ್ವೀ ನಾಟಕಗಳಾಗಿವೆ. ಮತ್ತು ರಂಗದ ಮೇಲೆ ಪ್ರಯೋಗವಾಗಿವೆ.

೧೯೬೧ರ ಸುಮಾರಿಗೆ ಬರೆದ 'ಮರೀಬೇಡಿ' ನಾಟಕ ಮರಗುಳಿಯಾದ ಪ್ರಾಣಿಶಾಸ್ತ್ರ ಪ್ರೊಫೆಸರನೊಬ್ಬನ ಸುತ್ತ ಹೆಣೆದ ಕಥೆಯಾಗಿದೆ. ವಾಸ್ತವವಾಗಿ ಕತೆಯ ಅಂಶವೇ ಇಲ್ಲ. ಮರಗುಳಿತನದ ವಿವಿಧ ಮುಖಗಳನ್ನು ಪರಿಚಯಿಸುವುದರ ಜೊತೆಗೆ ಮರಗುಳಿತನ ದಾರಿಮಾಡಬಹುದಾದ ಮುಜುಗರ. ಪರಿಸ್ಥಿತಿ, ದುರಂತಗಳನ್ನು ನಾಟಕದ ಬೆಳವಣಿಗೆ ಸೂಚಿಸುತ್ತದೆ. ಇಲ್ಲಿನ ಸನ್ನಿವೇಶ, ಸಂದರ್ಭಗಳು ಪ್ರೊಫೆಸರನ ಮರಗುಳಿತನದ ಪರಿಣಾಮವಾಗಿ ಹುಟ್ಟಿಕೊಳ್ಳುವಂತಹವು. ಇವುಗಳನ್ನು ಸಂದರ್ಭ, ಸನ್ನಿವೇಶಗಳೆನ್ನುವುದಕ್ಕಿಂತ ಅವಾಂತರಗಳೆನ್ನುವುದೇ ಸೂಕ್ತವೆನಿಸುತ್ತದೆ. ಈ ಅವಾಂತರಗಳು ಪ್ರೇಕ್ಷಕರನ್ನು ನಗೆಗಡಲಿನಲ್ಲಿ ಮುಳುಗಿಸುತ್ತವೆ ಎನ್ನುವುದು ನಿಜವಾದರೂ ಕೆಲವು ಗಂಭೀರ ಪರಿಣಾಮಗಳಿಗೆ ದಾರಿ ಮಾಡಿ ದುರಂತವಾಗಿಸುವ ಅಪಾಯಗಳೂ ಇರುತ್ತವೆನ್ನುವುದಕ್ಕೆ ಔಷಧಿಗೆ ಬದಲಾಗಿ ಮಗುವಿಗೆ ಇಂಕನ್ನು ಕುಡಿಸಿ ಸಾವಿನಂಚಿಗೆ ಕೊಂಡೊಯ್ದದ್ದೇ ಸಾಕ್ಷಿ.

ಮೂರು ದೃಶ್ಯಗಳಲ್ಲಿ ಬೆಳೆಯುವ ಈ ನಾಟಕದ ಯಶಸ್ಸು ನಿಂತಿರುವುದು ಕೇವಲ ಸಂಭಾಷಣೆಗಳ ಮೇಲೆ! ಚುರುಕಾದ, ಲವಲವಿಕೆಯ ಮಾತುಗಳು ಹೆಜ್ಜೆ ಹೆಜ್ಜೆಗೂ ಪ್ರೊಫೆಸರನ ಮರೆಗುಳಿತನದ ತೀವ್ರತೆಯನ್ನೂ ಸ್ವರೂಪವನ್ನು ಬಿಚ್ಚಿಡುತ್ತಾ ಹೋಗುತ್ತವೆ. ಮರೆಗುಳಿತನದ ಹಲವು ಮುಖಗಳು ತೆರೆದುಕೊಳ್ಳುತ್ತಾ ಹೋದಂತೆ ಹಾಸ್ಯದ ಪರಿಸರ ನಿರ್ಮಾಣವಾಗುತ್ತದೆ. ತಾನೇನು, ಎಲ್ಲಿದ್ದೇನೆ, ತನ್ನೆದುರು ಇರುವವರು ಯಾರು, ತಾನೇನು ಮಾಡುತ್ತಿದ್ದೇನೆ, ತಾನೇನು ಕುಡಿಯುತ್ತಿದ್ದೇನೆ ಎನ್ನುವುದನ್ನೂ ಮರೆತುಹೋಗುವ ಪ್ರಚಂಡ ಮರೆವಿನ ಮಾಸ್ಟರ್ ರಾಜಣ್ಣ. ಇಂತಹ

ಮರಗುಳಿಯನ್ನು ಮದುವೆಯಾದ ಮಡದಿಯರ ಪಾಡು ಊಹಾತೀತವಾದದ್ದು. ಮರಗುಳಿತನದ ಕೊರತೆಯೊಂದನ್ನು ಬಿಟ್ಟರೆ ಎಲ್ಲ ವಿಧದಿಂದಲೂ ಸಮರ್ಥ. ಪ್ರಪಂಚದ ಆಗುಹೋಗುಗಳ ಬಗ್ಗೆ ಬದುಕಿನ ಸ್ಥಿತಿಗತಿಗಳ ಬಗ್ಗೆ ಪ್ರೀತಿ, ಪ್ರೇಮ, ದಾಂಪತ್ಯ ಮಕ್ಕಳ ಬಗ್ಗೆ ಸ್ಪಂದಿಸಬಲ್ಲ. ಮಾನವೀಯವಾಗಿ ವರ್ತಿಸಬಲ್ಲ. ತನ್ನ ಮರುಗುಳಿತನದ ಬಗ್ಗೆ ಸಿಟ್ಟಾಗುವ, ದೂರುವ, ತಲೆಚಚ್ಚಿಕೊಳ್ಳುವ ಹೆಂಡತಿಯ ಬಗ್ಗೆ ಅಸಮಾಧಾನವಿಲ್ಲ. ಜೀವನದಲ್ಲಿ ಗಂಡಹೆಂಡಿರ ನಡುವಿನ ವಿರಸ, ವಾಗ್ವಾದ, ಆರೋಪ, ಪ್ರತ್ಯಾರೋಪಗಳೆಲ್ಲವೂ ಕಿಡಿಗಳಾಗಿ ಬೆಂಕಿಯಾಗಿ ಸುಡದೆ ಮರಗುಳಿತನದ ಪರಿಣಾಮವಾಗಿ ತಣ್ಣಗೆ ಆರಿ ಹೋಗುತ್ತದೆ. ಕಿತ್ತುಕೊಂಡು ಹೋಗಬಹುದಾದ ಸಂಬಂಧಗಳೂ ರಾಜಣ್ಣನ ಆರೋಗ್ಯಪೂರ್ಣವಾದ ಹಗುರಾದ ಮನಃಸ್ಥಿತಿಯಿಂದ ಗಟ್ಟಿಯಾಗಿ ಉಳಿಯುತ್ತವೆ.

ಸಾಮಾಜಿಕ ವಸ್ತುವನ್ನೊಳಗೊಂಡ ಈ ಪ್ರಹಸನದಲ್ಲಿ ಹಾಸ್ಯವೇ ಬಂಡವಾಳ. ಬೇಸರ ಬರಿಸದ ಲವಲವಿಕೆಯ ಮಾತುಗಳು ಮತ್ತು ಅದರಲ್ಲಿನ ಹಾಸ್ಯ ಗಂಭೀರ ವಿಷಯ - ವಿಚಾರಗಳನ್ನು ಕಹಿ ಔಷಧಿಯಂತೆ ನೀಡದೆ ಸಿಹಿಗುಳಿಗೆಗಳಾಗಿ ನೀಡಿದೆ. ಗಂಡ-ಹೆಂಡಿರ ನಡುವೆ ವಿರಸದಂತೆ ಕಂಡರೂ ಅದು ಸರಸದ ಮತ್ತೊಂದು ರೂಪವೇ ಆಗಿದೆ. ಹೆಂಡತಿ ದೂರುತ್ತಲೇ ಆಕ್ಷೇಪಿಸುತ್ತಲೇ ಅವಳೆದೆಯ ಪ್ರೀತಿಯನ್ನು ಧಾರೆಯರೆಯುತ್ತಾಳೆ. ಗಂಡ ಹೆಂಡಿರು ಪರಸ್ಪರ ಟೀಕಿಸುತ್ತಲೇ, ಲೇವಡಿ ಮಾಡುತ್ತಲೇ ಪ್ರೀತಿಯ ಎಳೆಗಳಿಂದ ಬಂಧಿತರಾಗಿ ಅನ್ಯೋನ್ಯ ದಾಂಪತ್ಯವನ್ನು ಬಾಳುತ್ತಾರೆ. ಗಂಡನ ವ್ಯಕ್ತಿತ್ವದ ಬಗೆಗಿನ ವಿಶ್ವಾಸ, ಅಚಲ ನಂಬಿಕೆ, ಗಂಡನ ನಡವಳಿಕೆಯನ್ನು ಶಂಕಿಸದಂತೆ ಕಾಪಾಡುತ್ತದೆ.

ರಾಜಣ್ಣನ ಮರುಗುಳಿತನಕ್ಕೆ ನಾಟಕದಲ್ಲಿ ಹೆಜ್ಜೆ ಹೆಜ್ಜೆಗೂ ನೂರೆಂಟು ನಿದರ್ಶನಗಳು. ಹೆಂಡತಿಯೊಡನೆ ಮಾತಾಡುವುದು ಮರೆತು ಭಾಷಣ ಮಾಡುತ್ತಾನೆ. ಕೆಲಸದಾಕೆಯನ್ನು ಹೆಂಡತಿಯೆಂದು ಅಪ್ಪಿಕೊಳ್ಳುತ್ತಾನೆ. ಕಾಫಿ ಲೋಟವೆಂದು, ಕಪ್ಪೆಗಳನ್ನು ತಂದಿರಿಸಿದ್ದನ್ನೇ ಬಾಯಿಗೆತ್ತಿಕೊಳ್ಳುತ್ತಾನೆ. ಕೇಳುವ ಪ್ರಶ್ನೆಗಳಿಗೆ ಅಸಂಬದ್ಧವಾಗಿ ಉತ್ತರಿಸುತ್ತಾನೆ. ಇಂಥಾದ್ದೆಲ್ಲ ಮಾಡುವ ಗಂಡನ ಬಗ್ಗೆ ಬೇಸರಪಟ್ಟ ಹೆಂಡತಿ ''ನಿಮ್ಮ ಬುದ್ಧಿವಂತಿಕೆ ಹೀಗೇಂತ ಗೊತ್ತಿದ್ದಿದ್ದರೆ, ನಮ್ಮಪ್ಪ ದೇವರಾಣೆಗೂ ನನ್ನನ್ನು ಕೊಡ್ತಿರಲಿಲ್ಲ ನಿಮಗೆ'' ಎಂದು ಸಿಟ್ಟಿನಿಂದ ಹೇಳಿದ ಮಾತಿಗೆ ''ಅಲ್ವೇ ಹುಚ್ಚಿ, ನಿಮ್ಮಪ್ಪನ ದಡ್ಡತನ ಹಾಗಿರಲಿ, ನಮ್ಮಪ್ಪನ ಬುದ್ಧಿವಂತಿಕೆ ಎನು ಗೊತ್ತಾ? ತನ್ನದೂ ಅನ್ನೋ ಒಂದು ವಸ್ತು ಇರಲಿ. ಇಲ್ಲದೆ ಇದ್ದರೆ ನನ್ನ ಮಗ ಅರಬ್ಬೀ ಸಮುದ್ರ ದಾಟಿ ಆಫ್ರಿಕಾದ ಕಡೆಗೆ ಹೊರಟು ಬಿಟ್ಟಾನು ಅಂತ ಹೇಳಿ ನನಗೆ ನೆನಪು ಮಾಡಿಕೊಡೋದಕ್ಕಾಗಿ ನಿನ್ನಂಥಾ ಮೇಧಾವಿ ಮಹಿಳೆಯನ್ನು ಮದುವೆ ಮಾಡಿದ ನೋಡು' ಎಂದು ರಾಜಣ್ಣ ಉತ್ತರಿಸಿದಾಗ ಘರ್ಷಣೆಗೆ, ಚರ್ಚೆಗೆ ಆಸ್ಪದವೇ ಇಲ್ಲದಂತೆ ಗಂಡ ಹೆಂಡಿರ ನಡುವಿನ ವಾತಾವರಣ ತಿಳಿಯಾಗಿ ಬಿಡುತ್ತದೆ. ಮರೆಗುಳಿ

ಪ್ರೊಫೆಸರನಿಗೆ 'ಮರೆವು' ಮನುಷ್ಯನಿಗೆ ಬದುಕನ್ನು ಸಹನೀಯವಾಗಿಸಲು ಬೇಕೇ ಬೇಕೆನ್ನುವ ಸರಳ ತತ್ವದಂತೆ ಕಾಣಿಸುತ್ತದೆ. ಮರೆವಿಲ್ಲದಿದ್ದರೆ ಈ ಬಾಳಿನ ಬೇಗುದಿಯಲ್ಲಿ ಮಾಡಿದ ಪಾಪ ಪುಣ್ಯ, ಅನುಭವಿಸಿದ ಅನ್ಯಾಯ, ದ್ರೋಹಗಳೆಲ್ಲ ಎದೆ ಒಳಗೇ ಉಳಿದು ಮತ್ತೆ ಮತ್ತೆ ನೆನಪಿಗೆ ಬಂದು ರಕ್ತದಒತ್ತಡ ಹೆಚ್ಚಿ ಸಾಯುತ್ತಾನೆ' ಎನ್ನುವ ಮಾತು ಲಘು ಲಹರಿಯದಾಗಿ ಅನಿಸಿದರೂ ಗಂಭೀರ ಸತ್ಯವಿರುವುದು ಸ್ಪಷ್ಟವಾಗುತ್ತದೆ.

ಇಂತಹ ಮರೆಗುಳಿಯಲ್ಲೂ ಸೌಂದರ್ಯ ಪ್ರಜ್ಞೆ, ಸರಸ ಮನೋಭಾವ, ರಸಿಕತೆಗಳು ಆತನ ಮನಸ್ಸಿನ ಆರ್ದ್ರತೆಗೆ ನಿದರ್ಶನವಾಗಿದೆ. ಕಾಫಿ ಬೇಕೆಂದಾಗ ಹೆಂಡತಿಯನ್ನು ಕವಿಯಂತೆ ಮಾತನಾಡಿಸಬಲ್ಲ. ''ಹಾಲಿನ ಸವಿ, ಸಕ್ಕರೆ ಸಿಹಿ, ಪೌಡರ್ ಪರಿಮಳ, ಕೆನ್ನೆಯ ಮಾಧುರ್ಯ'' ಎಂದು ಛೇಡಿಸಿದಾಗ, ಸಿಟ್ಟಾದ ಮಡದಿಗೆ ಮಾತನ್ನು ತಿರುಚಿ ಮನರಂಜಿಸುವ ಜಾಣ್ತನವಿದೆ. ಕೆನ್ನೆಯ ಮಾಧುರ್ಯ, ಪೌಡರ್ ಪರಿಮಳ ಎಂಬುದನ್ನು ಕೆನೆಯ ಮಾಧುರ್ಯ, ಕಾಫಿ ಪೌಡರ್ ಪರಿಮಳ ಎಂದು ಉಚಾಯಿಸುತ್ತಾನೆ.

ಇಷ್ಟಕ್ಕೇ ನಿಲ್ಲದ ರಾಜಣ್ಣ, ಪ್ರಾಣಿಶಾಸ್ತ್ರ ಪ್ರೊಫೆಸರ್ ಆಡುವ ಮಾತುಗಳ ಜಾಣ್ಮೆಗೆ ಸರಿಸಾಟಿಯಿಲ್ಲ. - 'ಎಮ್ಮೆ ಹೆರೋದುಂಟಾ? ''ಮಳೆ ಬರ್ತಾ ಇದ್ರೆ ಕೊಡೆ ಹಿಡ್ಕೊಂಡು ನೀರು ಹಾಕೋ ಜ್ಞಾನ ಇಲ್ವಾ?'' - ಎಂದು ಕೇಳುವ ಪ್ರಶ್ನೆಗಳು ಬೃಹಸ್ಪತಿಯ ಮೊಮ್ಮಗನ ಅಪರಾವತಾರವೆಂಬ ಭಾವನೆಗೆ ದಾರಿಮಾಡುತ್ತವೆ.

ಇಡೀ ನಾಟಕದಲ್ಲಿ ಇದೇ ರೀತಿಯ ಮಾತುಗಳು ಸನ್ನಿವೇಶಗಳು ! ಆದರೆ ಮರಗುಳಿತನದ ಪರಿಣಾಮಗಳು ಎಷ್ಟು ಭಯಂಕರವಾಗ ಬಲ್ಲುದೆಂಬುದು ಮಗುವಿನ ಹುಟ್ಟು ಹಬ್ಬದ ಸಂಭ್ರಮದಲ್ಲಿದ್ದ ತಾಯಿಯ ಹೃದಯಕ್ಕೆ ಆಘಾತವಾಗುವಂತೆ ಅನಾರೋಗ್ಯದಿಂದ ಇದ್ದ ಮಗುವಿಗೆ ಔಷಧಿ ಕುಡಿಸಲು ಹೇಳಿದಾಗ ಯಾವುದೋ ಧ್ಯಾನದಲ್ಲಿದ್ದ ರಾಜಣ್ಣ ಬರೆಯಲು ಇಟ್ಟುಕೊಂಡಿದ್ದ ಇಂಕನ್ನೇ ಕುಡಿಸಿ ಬಿಡುತ್ತಾನೆ. ಆದರೆ ಅದೃಷ್ಟವಶಾತ್ ಅದೇ ಸಮಯಕ್ಕೆ ಮನೆಗೆ ಬಂದ ತಮ್ಮ ವಿದ್ಯಾರ್ಥಿ ಡಾ॥ ಚಂದ್ರಶೇಖರನಿಂದ ಮಗು ಬದುಕಿ ಉಳಿದು ಕತೆ ಸುಖಾಂತವಾಗುತ್ತದೆ. ಆದರೆ ಈ ನಾಟಕದಲ್ಲಿ ನಾಟಕಕಾರರು ಕ್ಲೈಮಾಕ್ಸ್ ರೀತಿಯಲ್ಲಿ ಒಂದು ತಿರುವನ್ನು ಕಲ್ಪಿಸುತ್ತಾರೆ. ಅಳಿಯನೇ ಮರೆವಿನ ಮೊಟ್ಟೆಯಾದರೆ, ಇಂತಹ ಅಳಿಯನ ಮಾವ ಇವನಿಗಿಂತಲೂ ದೊಡ್ಡಮರೆಗುಳಿಯನ್ನಾಗಿ ಕಾಣಿಸಿದ್ದಾರೆ. ಅಳಿಯನ ಮನೆಗೇ ಬಂದುದನ್ನು ಮರೆತು, ಅಳಿಯನನ್ನೇ ಗುರುತಿಸಲಾರದೆ, ತನ್ನ ಮನೆಗೆ ಯಾರೋ ಪರಕೀಯ ಬಂದಿದ್ದಾನೆಂದು ಬೈದು ಅಟ್ಟುವುದು ನಾಟಕಕ್ಕೆ ಕೊಟ್ಟ ತಿರುವಿನ ಉತ್ಕರ್ಷವೂ; ವ್ಯಂಗ್ಯವೂ ಆಗಿ, ನಾಟಕದ ಅರ್ಥಪೂರ್ಣತೆ, ಪರಿಣಾಮಗಳು ಹೆಚ್ಚಿವೆ.

ಸಾ.ಶಿ. ಮರುಳಯ್ಯನವರ ಈ ನಾಟಕ ರಂಗದ ಮೇಲೆ ಅತ್ಯಂತ

ಪರಿಣಾಮಕಾರಿಯಾಗಬಲ್ಲುದು ಎಂಬುದರಲ್ಲಿ ಸಂಶಯವಿಲ್ಲ. ನಾಟಕತತ್ವ ಸಿದ್ಧಾಂತಗಳ ಗೊಡವೆ ಇಲ್ಲದೆ, ಮಾತಿನ ಜಾಣ್ಮೆ, ಚುರುಕು ಸಂಭಾಷಣೆಗಳಿಂದಲೂ ನಾಟಕ ಯಶಸ್ವಿಯಾಗಬಲ್ಲುದೆಂಬುದಕ್ಕೆ ಈ ನಾಟಕ ಸಾಕ್ಷಿಯಾಗಿದೆ. ಒಂದು ಕಾಲಕ್ಕೆ ಇಂತಹ ಪ್ರಹಸನಗಳು ಶಾಲಾ ಕಾಲೇಜುಗಳ ವಾರ್ಷಿಕೋತ್ಸವಗಳಲ್ಲಿ ಅತ್ಯಂತ ಜನಪ್ರಿಯವಾಗಿದ್ದವು.

ಸಾ.ಶಿ. ಅವರ ಮತ್ತೊಂದು ನಾಟಕ ''ವಿಜಯ ವಾತಾಪಿ''. ೧೯೬೬ರಲ್ಲಿ ಪ್ರಕಟವಾಗಿ ರಂಗ ಪ್ರಯೋಗವನ್ನೂ ಕಂಡಿದೆ. ಮೂರು ಅಂಕಗಳು, ೧೭ ದೃಶ್ಯಗಳನ್ನು ಒಳಗೊಂಡ ಈ ನಾಟಕ ರಾಜಕೀಯ, ಸಾಮಾಜಿಕ, ಧಾರ್ಮಿಕ ಅಂಶಗಳನ್ನುಳ್ಳ ಗಂಭೀರ ನಾಟಕವಾಗಿದೆ. ವಸ್ತು ಸಂಕೀರ್ಣತೆ, ಸಂವಿಧಾನಗಳ ದೃಷ್ಟಿಯಿಂದ ಇದೊಂದು ಉತ್ತಮ ನಾಟಕವಾಗಿದೆ. ಈ ನಾಟಕದ ಮುಖ್ಯ ಕಥಾನಕ ರಾಜಕೀಯ. ಪಲ್ಲವರಿಂದ ಪರಾಭವಗೊಂಡ ವಾತಾಪಿಯ ಚಾಲುಕ್ಯರು ಮತ್ತೆ ರಾಜಕೀಯ ಷಡ್ಯೆಂತ್ರದಿಂದ ಪಲ್ಲವರನ್ನು ಸೋಲಿಸಿ ವಾತಾಪಿಯನ್ನು ಮರಳಿ ಗೆದ್ದುಕೊಳ್ಳುವುದೇ ಮುಖ್ಯವಸ್ತುವಾದರೂ ಇದರ ಸಮಾಂತರದಲ್ಲಿ ಭಕ್ತ ಸಿರಿಯಾಳನ ಕತೆ ಉಪಕತೆಯಾಗಿ ಇದರೊಂದಿಗೆ ಹೆಣೆದುಕೊಂಡಿದೆ. ಮುಖ್ಯ ಕಥಾನಕದಷ್ಟೇ ಸಿರಿಯಾಳನ ಕತೆಯೂ ಇಲ್ಲಿ ಪ್ರಮುಖವಾಗಿದೆ. ಎರಡೂ ಭಿನ್ನ ಕಥಾನಕಗಳಾಗಿ ಸಮಾಂತರದಲ್ಲಿ ಇವೆಯಾದರೂ ರಾಜಕೀಯ ಸ್ಥಿತ್ಯಂತರಗಳೊಂದಿಗೆ ಯಾವುದೇ ಬಗೆಯ ಆಂತರಿಕ ಸಂಬಂಧವಿಲ್ಲ. ಇಪ್ಪತ್ತೈದು ಮೂವತ್ತು ಪಾತ್ರಗಳನ್ನು ಒಳಗೊಂಡ ಈ ನಾಟಕದ ಮೂರು ಅಂಕಗಳಲ್ಲಿ ರಾಜಕೀಯ ಸ್ಥಿತ್ಯಂತರಗಳನ್ನು ನಾಟಕೀಯ ಪರಿಣಾಮದೊಂದಿಗೆ ದಾಖಲಿಸಿದ್ದಾರೆ. ನಾಟಕದ ನಿರೀಕ್ಷೆಗಳಿಗನುಗುಣವಾಗಿ ಕಥಾನಕದ ಬೆಳವಣಿಗೆಯಿದೆ. ರಾಜಕೀಯ ನಾಟಕವೇ ಆದರೂ ಅದರ ಹಿನ್ನೆಲೆಯಲ್ಲಿಯೇ ಸಾಮಾಜಿಕ, ಧಾರ್ಮಿಕ ಅಂಶಗಳನ್ನು ಚರ್ಚಿಸಲಾಗಿದೆ. ಅಧಿಕಾರಶಾಹಿ, ರಾಜಸತ್ತೆಗಳು ವ್ಯಕ್ತಿಯ ಮೇಲೆ ನಡೆಸುವ ದೌರ್ಜನ್ಯ ದಬ್ಬಾಳಿಕೆಗಳು ಒಂದು ಹಂತದಲ್ಲಿ ಆ ವ್ಯಕ್ತಿಯ ತೇಜೋವಧೆಯೊಂದಿಗೆ ಅಸ್ತಿತ್ವವನ್ನೇ ಅಳಿಸಿಹಾಕುವ ಪ್ರಯತ್ನ ಮಾಡುತ್ತವೆ. ರಾಜನಿಷ್ಠೆ, ದೇಶಪ್ರೇಮಗಳು ವ್ಯಕ್ತಿತ್ವವಿಲ್ಲದ ರಾಜವಂಶೀಯರ ದೃಷ್ಟಿಯಲ್ಲಿ ಮೌಲ್ಯರಹಿತವಾಗಿ ಗೋಚರಿಸುತ್ತವೆ.

ಪಲ್ಲವರ ನರಸಿಂಹವರ್ಮ, ಸಿರಿಯಾಳದಂಡಾಧೀಶರನ್ನು ಮೌಲ್ಯಗಳ ಪ್ರತೀಕವಾಗಿ, ರಾಜನಿಷ್ಠೆ, ಮತ್ತು ಅನುಭಾವಗಳ ಸಾಕಾರವಾಗಿ ಕಂಡು ಗೌರವಿಸಿದರೆ ಆತನ ಮಗ ಐಷಾರಾಮಗಳಲ್ಲಿ ಮೈ ಮರೆತು ಉದ್ದಟತನ, ಕ್ರೌರ್ಯ, ದಬ್ಬಾಳಿಕೆಗಳೇ ರಾಜ್ಯಾಧಿಕಾರ ನಡೆಸಲು ಸಮರ್ಥ ಸಾಧನಗಳೆಂದು ಭಾವಿಸುತ್ತಾನೆ.

ಚಾಲುಕ್ಯರ ಸೋಲು ಪಲ್ಲವರ ವಿಜಯಘೋಷಗಳೊಂದಿಗೆ ಪ್ರಾರಂಭವಾಗುವ ನಾಟಕ ರಾಜಕೀಯ ಸನ್ನಿವೇಶದ ಸ್ಪಷ್ಟ ಕಲ್ಪನೆ ಮೂಡಿಸುತ್ತದೆ. ಸಿರಿಯಾಳ ದಂಡಾಧೀಶನ ಮಾನವೀಯ ಗುಣಗಳು, ಶೌರ್ಯ ಪರಾಕ್ರಮಗಳು,

ಮಹೇಂದ್ರವರ್ಮನ ಕ್ರೌರ್ಯ, ಅಟ್ಟಹಾಸ, ಉದ್ಧಟತನಗಳು ಹಾಗೆಯೇ ಪರಾಜಿತ ಚಾಲುಕ್ಯ ಸಾಮ್ರಾಜ್ಯದ ಪ್ರಜೆಗಳಲ್ಲಿನ ದೇಶಭಕ್ತಿ , ರಾಜಭಕ್ತಿ, ಆತ್ಮಾಭಿಮಾನ, ಶೌರ್ಯ, ಪರಾಕ್ರಮಗಳು ವೀರನಾಯಕನ ಮಗ ಶಿವನಾಯಕನ ಮೂಲಕ ಬಿಚ್ಚಿಕೊಳ್ಳುತ್ತವೆ. ಶತ್ರುಗಳಾದವರನ್ನು ಮುಕ್ತ ಮನಸ್ಸಿನಿಂದ ಅವರ ಶೌರ್ಯ ಸಾಹಸ, ದೇಶಭಕ್ತಿಗಳಿಗಾಗಿ ಮೆಚ್ಚಿಕೊಳ್ಳುವ ದಂಡಾಧೀಶ ಸಿರಿಯಾಳ ಮಹೇಂದ್ರವರ್ಮನಂತಹವನ ಅರಸೊತ್ತಿಗೆಯಲ್ಲಿ ಇರುವುದು ಸಾಧ್ಯವೇ ಆಗುವುದಿಲ್ಲ ಎನ್ನುವ ಅನುಮಾನ ನರಸಿಂಹವರ್ಮರು ರಾಜಕೀಯ ಸಂನ್ಯಾಸ ತೆಗೆದುಕೊಂಡು ಮಹೇಂದ್ರವರ್ಮನಿಗೆ ಕಿರೀಟಧಾರಣ ಮಾಡಿಸುವ ಸಂದರ್ಭದಲ್ಲಿ ಸ್ಪಷ್ಟವಾಗುತ್ತದೆ. ಅದರಲ್ಲಿಯೂ ಶತ್ರುಪಕ್ಷಕ್ಕೆ ಸೇರಿದ ಶಿವನಾಯಕನ ರಕ್ಷಣೆಗೆ ನಿಂತು ಮಹೇಂದ್ರವರ್ಮನ ಆಕ್ರಮಣ, ದೌರ್ಜನ್ಯಗಳನ್ನು ಪ್ರತಿಭಟಿಸಿದ ಕ್ಷಣದಿಂದ ಮಹೇಂದ್ರವರ್ಮ ಸಿರಿಯಾಳರ ಸಂಬಂಧದಲ್ಲಿ ದೊಡ್ಡ ಬಿರುಕು ಏರ್ಪಡುತ್ತದೆ. ''ಶತ್ರುವಿಗೆ ಸಹಾಯಕನಾಗುವುದೇ?'' - ಎಂಬ ಮಹೇಂದ್ರವರ್ಮನ ಆಕ್ಷೇಪಕ್ಕೆ ''ಶತ್ರುವಿಗೆ ಸಹಾಯವಲ್ಲ ಇದು, ವೀರಪುತ್ರನ ವೀರಾಲಾಪವನ್ನು ನೋಡಿ, ಕೇಳಿ ನಲಿಯುವ ಸೌಭಾಗ್ಯ !'' ಎನ್ನುವ ಸಿರಿಯಾಳನ ಮಾತುಗಳು ಆತನ ಗುಣಗ್ರಾಹಿತ್ವ ಗುಣಕ್ಕೆ ಹಿಡಿದ ಕನ್ನಡಿಯಾಗಿದೆ. ಶೌರ್ಯ, ಸಾಹಸ, ಪರಾಕ್ರಮ, ರಾಜನಿಷ್ಠೆ, ದೇಶಭಕ್ತಿಗಳ ಸಾಕಾರಮೂರ್ತಿಯಾಗಿದ್ದ ಸಿರಿಯಾಳನೂ ರಾಜಕೀಯ ಸಂನ್ಯಾಸವನ್ನೂ ಮತ್ತು ತನ್ನುಳಿದ ದಿನಗಳನ್ನು ಶಿವನ, ಶಿವಶರಣರ ಸೇವಾಕಾರ್ಯಕ್ಕಾಗಿ ವಿನಿಯೋಗಿಸಲು ತೀರ್ಮಾನಿಸಿರುವುದನ್ನು ಘೋಷಿಸಿದಾಗ ಇಡೀ ರಾಜಸಭೆಯೇ ದಿಗ್ಭ್ರಾಂತವಾಗುತ್ತದೆ. ಸಿರಿಯಾಳನಂತಹ ಮಹಾವ್ಯಕ್ತಿಯ ಮೇಲ್ವಿಚಾರಣೆಯಲ್ಲಿ ಮಾರ್ಗದರ್ಶನದಲ್ಲಿ ಮಗನ ರಾಜ್ಯಾಡಳಿತ ಸುಗಮವಾಗಿ ನಡೆಯುತ್ತದೆಂದು ಭಾವಿಸಿದ ನರಸಿಂಹವರ್ಮರಿಗೆ ಸಿರಿಯಾಳರ ಘೋಷಣೆ ಆಘಾತಕಾರಿಯಾಗುತ್ತದೆ. ಆದರೆ ದೇವರ ಕರೆಯ ಮುಂದೆ ರಾಜಾಧಿಕಾರ, ರಾಜಭೋಗಗಳು ಸಿರಿಯಾಳನಂತಹವರ ದೃಷ್ಟಿಯಲ್ಲಿ ತುಚ್ಛವೆನಿಸಿ ತನ್ನ ನಿರ್ಧಾರಕ್ಕೇ ನಿಂತುಕೊಳ್ಳುತ್ತಾನೆ.

ಮೊದಲ ಅಂಕದ ೫ನೇ ದೃಶ್ಯದಿಂದ ಸಿರಿಯಾಳದಂಡಾಧೀಶರ ಧಾರ್ಮಿಕ ಮುಖ ಪರಿಚಯವಾಗುತ್ತದೆ. ಶರಣನ ಭಕ್ತಿ ನಿಷ್ಠೆಗಳು, ಕ್ರಮೇಣ ಬಿಚ್ಚಿಕೊಳ್ಳುತ್ತಾ ಹೋಗುತ್ತದೆ. ಸಿರಿಯಾಳನ ಮನೆ ಭಕ್ತಿ ಸಾಧನೆಯ ಕೇಂದ್ರದಂತೆ, ಜಂಗಮ ದಾಸೋಹದ ಮಹಾಮನೆಯಂತೆ ಕಾಣುತ್ತದೆ. ಸಿರಿಯಾಳನ ಭಕ್ತಿ, ಶರಣಜೀವನ ಮತ್ತು ಚಾಲುಕ್ಯರ ರಾಜಕೀಯ ಪಿತೂರಿಗಳು ದೃಶ್ಯಾಂತರಗಳಲ್ಲಿ ಕಾಣಿಸಿಕೊಳ್ಳುತ್ತವೆ. ಒಬ್ಬರಿಗೊಬ್ಬರಿಗೆ ಗೊತ್ತಿಲ್ಲದಂತೆಯೇ ಚಾಲುಕ್ಯರ ಕಡೆಯ ರಾಜನಿಷ್ಠ ಸೇವಕರು, ರಾಜಭಕ್ತಿಯುಳ್ಳವರೂ ಆದ ಶಿವನಾಯಕ, ಜಂಗಮ, ದಾಸಯ್ಯ, ಕಲ್ಯಾಣಿ (ಚಾಲುಕ್ಯರ ರಾಜನರ್ತಕಿ) ಎಲ್ಲರೂ ಗುಟ್ಟಾಗಿ, ಒಟ್ಟಾಗಿ ಸೇರಿ ಚಾಲುಕ್ಯ ಸಾಮ್ರಾಜ್ಯವನ್ನು ಮರಳಿ ಪಡೆಯುವ ಹುನ್ನಾರ ನಡೆಸುತ್ತಾರೆ. ಜಂಗಮ, ದಾಸಯ್ಯ ಪಾತ್ರಗಳ ಸೃಷ್ಟಿ ನೇರವಾಗಿ

ರಾಜಕೀಯ ಸ್ಥಿತ್ಯಂತರಗಳಿಗೆ ಅನಿವಾರ್ಯವೆನಿಸದಿದ್ದರೂ ಸಮಕಾಲೀನ ವಿಚಾರಗಳ ಮಂಡನೆಗೆ ಸಮರ್ಥ ತಂತ್ರವಾಗಿದೆ. ಜಾತಿ, ಸಮಾಜ, ದೇಶ, ದೇಶಭಕ್ತಿ ಇತ್ಯಾದಿ ವಿಚಾರಗಳು ಗಂಭೀರ ಸನ್ನಿವೇಶದ ಮೂಲಕ ಹೊರಹೊಮ್ಮದೆ ಜಂಗಮ, ದಾಸಯ್ಯರ ಪರಸ್ಪರ ನಿಂದೆ, ಕೀಟಲೆ, ಲೇವಡಿ, ಆರೋಪ, ಪ್ರತ್ಯಾಪರೋಪಗಳ ಸಂದರ್ಭದಲ್ಲಿ ಆಕಸ್ಮಿಕಗಳಂತೆ ಹೊರ ಚೆಲ್ಲಿದರೂ ವಾಸ್ತವ ಸತ್ಯಗಳಾಗಿ ಕಾಣಿಸಿಕೊಳ್ಳುತ್ತವೆ. ತಮ್ಮ ತಮ್ಮ ಧರ್ಮ, ವೃತ್ತಿಗಳೇ ಹೆಚ್ಚೆಂದು ಕಚ್ಚಾಡುತ್ತಿದ್ದ ಜಂಗಮ ದಾಸಯ್ಯರು ಏಕಾಂಬರನ ಸಿಟ್ಟಿಗೆ ಗುರಿಯಾಗುತ್ತಾರೆ. ಚಾಲುಕ್ಯ ಸಾಮ್ರಾಜ್ಯ ಶತ್ರುಪಾಲಾಗಿದ್ದರೂ ಅದರ ಚಿಂತೆಯೇ ಇಲ್ಲದಂತೆ ಪರಸ್ಪರ ಗುದ್ದಾಡುವುದನ್ನು ಖಂಡಿಸಿ ''ನಿಮ್ಮಂಥವರನ್ನೇ ನಂಬಿಕೊಂಡು ರಾಷ್ಟ್ರಕಟ್ಟಿದರಲ್ಲಯ್ಯಾ ಆ ಚಾಳುಕ್ಯರು...... ಆಪುಣ್ಯಾತ್ಮ ಪುಲಿಕೇಶಿ ದೊರೆ ಇನ್ನು ಹ್ಯಾಗೆ ಜೀವನ ಮಾಡಿದನೋ ಹ್ಯಾಗೆ ರಾಜ್ಯ ನಡೆಸಿದನೋ ಆ ಮುಕ್ಕೂಟೇಶ್ವರನಿಗೇ ಗೊತ್ತು !'' - ಎಂದು ನಿಟ್ಟುಸಿರು ಬಿಡುವುದೇ ಅಲ್ಲದೆ, ಜಾತಿ, ಧರ್ಮ ಸಂಬಂಧಿ ಕಲಹಗಳಿಂದಲೇ ರಾಷ್ಟ್ರಗಳು ಹಾಳಾಗುವ ಕಟುಸತ್ಯವನ್ನೂ ಅವರನ್ನು ಉದ್ದೇಶಿಸಿ ಹೇಳಿದ ''ಅಯ್ಯಾ ಇಡೀ ಕರ್ಣಾಟಕ ಹಾಳಾದದ್ದು ನಿಮ್ಮಿಬ್ಬರಿಂದ.... ಒಬ್ಬ ಜಂಗಮಯ್ಯ, ಒಬ್ಬ ದಾಸಯ್ಯ. ಇವರಿಬ್ಬರನ್ನೂ ಸುಟ್ಟು ಹಾಕಿದರೇ ಕನ್ನಡದೇಶ ಉಳಿಯೋದು...... ಶಿವ ಹೆಚ್ಚು ಅಂತ ಒಬ್ಬ. ವಿಷ್ಣು ಹೆಚ್ಚು ಅಂತ ಒಬ್ಬ. ಹೀಗಾಗಿ ಕನ್ನಡಿ ಹಂಗಿರೋ ಕರ್ಣಾಟಕಾನ ಹಾಳು ಮಾಡಿದಿರಿ.... ಕನ್ನಡನಾಡಿನ ಕರ್ಮಾ....'' ಎಂಬ ಮಾತುಗಳಲ್ಲಿ ಸೂಕ್ಷ್ಮ ವ್ಯಂಗ್ಯವಾಗಿ ಕಾಣಿಸಿದ್ದಾರೆ. ಒಂದು ರಾಷ್ಟ್ರದ ಅಳಿವು ಉಳಿವು ಸಾಧ್ಯವಾಗುವುದು ಈ ಜಾತಿವಾದದ ಮೇಲೆ. ಏಕಾಂಬರ ಪಲ್ಲವರ ಮಹೇಂದ್ರವರ್ಮನ ಆಪ್ತ ಸೇವಕನಾದರೂ ರಾಷ್ಟ್ರ, ರಾಷ್ಟ್ರೀಯತೆಗಳ ಬಗೆಗೆ ಎಚ್ಚರವುಳ್ಳವನು. ಅನುಭವದ ಮೂಲಕ ಅವನು ಗ್ರಹಿಸಿದ ಸತ್ಯವೆಂದರೆ, ಜಾತಿವಾದ ಮತ್ತು ಸ್ತ್ರೀಮೋಹಗಳು ಅಳಿದಲ್ಲದೆ ಯಾವುದೇ ದೇಶದ ಉದ್ಧಾರ ಆಗಲಾರದು - ಎಂದು.

ಏಕಾಂಬರನ ನಿರೀಕ್ಷೆಯ ಈ ಮೌಲ್ಯಗಳು ಶಿವನಾಯಕ, ರಾಜನರ್ತಕಿಯಾದ ಕಲ್ಯಾಣಿಯಲ್ಲಿದೆ. ಅದಕ್ಕೆಂದೇ ಶಿವನಾಯಕ ಬ್ರಹ್ಮಗಿರಿಯ ಗುಹೆಯಲ್ಲಿ ಅಡಗಿದ್ದು ಸಿರಿಯಾಳನ ಮನೆಯ ದಾಸೋಹದಿಂದ ಜೀವಧಾರಣೆ ಮಾಡುತ್ತ, ಕಲ್ಯಾಣಿ ಪಲ್ಲವರ ರಾಜನರ್ತಕಿಯಂತೆ ಕಾಣಿಸಿಕೊಂಡರೂ ನಿಷ್ಠೆಯನ್ನು ಚಾಲುಕ್ಯ ಸಾಮ್ರಾಜ್ಯಕ್ಕೆ ಮುಡಿಪಿರಿಸುತ್ತ, ಕಡೆಗೆ ಜಂಗಮ, ದಾಸಯ್ಯರೂ ಈ ಇಬ್ಬರ ಪ್ರಭಾವಕ್ಕೆ ಒಳಗಾಗಿ, ಅವರೊಟ್ಟಿಗೆ ಸೇರಿ, ರಾಜಕೀಯ ಪಿತೂರಿ ನಡೆಸಿ, ಮಹೇಂದ್ರವರ್ಮನ ಆಪ್ತ ಸ್ನೇಹಗಳಿಸಿ ಅವಕಾಶಕ್ಕಾಗಿ ಹಾದಿಕಾಯುತ್ತಾರೆ.

ಕಳೆದು ಹೋದ ಚಾಲುಕ್ಯ ಸಾಮ್ರಾಜ್ಯದ ವೈಭವವನ್ನು ಮರಳಿ ಪಡೆಯುವುದಕ್ಕಾಗಿ ತಮ್ಮ ತನು ಮನ ಧನವನ್ನು ಸಂಪೂರ್ಣವಾಗಿ ಮುಡಿಪಿಡುತ್ತಾರೆ.

ಮಹೇಂದ್ರವರ್ಮನ ವಿಲಾಸಪ್ರಿಯತೆ, ಪರಸ್ತ್ರೀಮೋಹಗಳೇ ಅವನನ್ನು ಬಲಿತೆಗೆದುಕೊಳ್ಳುತ್ತವೆ.

ಇದು ಒಂದು ನಿಟ್ಟಿನ ಕತೆಯಾದರೆ ಸಿರಿಯಾಳನ ಭಕ್ತಿ ಪರೀಕ್ಷೆ ನಾಟಕದ ಕೇಂದ್ರ ವಸ್ತುವಿಗೆ ಸಂಬಂಧಪಟ್ಟಿಲ್ಲ. ಸಿರಿಯಾಳನ ಭಕ್ತಿನಿಷ್ಠೆ, ವ್ರತನಿಷ್ಠೆಗಳನ್ನು ಶಿವನು ಸಿರಿಯಾಳನ ಮಗನಾದ ಚೀಲಾಳನ ಮಾಂಸದಡಿಗೆಯನ್ನೇ ಬೇಡಿದರೂ ಸಿರಿಯಾಳ ಶಿವನ ಪರೀಕ್ಷೆಯನ್ನು ಗೆಲ್ಲುತ್ತಾನೆ. ಶಿವ ಮತ್ತು ನಾರದರ ಪಿತೂರಿ, ಸಿರಿಯಾಳ ಮತ್ತು ಆತನ ಮಡದಿ ಚಂದಲೆ ಶಿವನ ಬೇಡಿಕೆಗಳಿಂದಾಗಿ ಎದುರಿಸುವ ಸಂದಿಗ್ಧಗಳು, ಮಗನನ್ನೇ ಉಣಬಡಿಸಬೇಕಾಗಿ ಬಂದ ಸಂದರ್ಭದಲ್ಲಿ ತಲ್ಲಣಿಸುವ, ಚಡಪಡಿಸುವ ಮಾತೃಹೃದಯ... ಇಷ್ಟೆಲ್ಲಾ ಆದರೂ ಕೊಟ್ಟ ಮಾತಿಗೆ, ಇಟ್ಟ ನಿಷ್ಠೆಗೆ ಧೀರರಾಗಿ ನಿಂತು ಅಗ್ನಿ ಪರೀಕ್ಷೆಯನ್ನು ಹಾದು ಬರುವ ಸನ್ನಿವೇಶಗಳು ಸಮರ್ಪಕವೆನಿಸಿದರೂ ನಾಟಕದ ಮುಖ್ಯ ಆಶಯದೊಂದಿಗೆ ಸಾವಯವ ಸಂಬಂಧವನ್ನು ಹೊಂದಿಲ್ಲ. ವಾತಾಪಿ ಮತ್ತೆ ವಿಜಯಗಳಿಸುವುದೇ ಇಡೀ ನಾಟಕದ ಪ್ರಮುಖ ಆಶಯವಾಗಿದೆ. ರಾಜಕೀಯ ಸ್ಥಿತ್ಯಂತರಗಳನ್ನು ಸಮರ್ಪಕ ಸಂವಿಧಾನದ ಮೂಲಕ ದಾಖಲಿಸುವಲ್ಲಿ ಈ ನಾಟಕ ಅತ್ಯಂತ ಯಶಸ್ವಿಯಾಗಿದೆ. ಅನುಭಾವ ರಾಜಭಕ್ತಿಗಳನ್ನು ಎತ್ತಿಹಿಡಿಯುವ ಉದ್ದೇಶದ ಹಿನ್ನೆಲೆ ಈ ನಾಟಕಕ್ಕೆ ಇದೆಯೆಂಬುದು ಸ್ಪಷ್ಟವಾಗಿದೆ.

ಭಾಸನ ಮೂರು ನಾಟಕಗಳ ಕನ್ನಡ ರೂಪಾಂತರ

ಪ್ರೊ. ಕೆ.ಟಿ. ಪಾಂಡುರಂಗಿ

ಸಂಸ್ಕೃತ ಕನ್ನಡ ಸಾಹಿತ್ಯಗಳು ಸರಸ್ವತಿಯ ಅವಳಿ ಮಕ್ಕಳಂತೆ ಪರಸ್ಪರ ಪ್ರೇಮದಿಂದ ಬೆಳೆದುಕೊಂಡು ಬಂದಿವೆ. ದುರ್ಗಸಿಂಹನ ಕನ್ನಡ ಪಂಚತಂತ್ರದಿಂದ ಆರಂಭಿಸಿ ಸಾ.ಶಿ. ಮರುಳಯ್ಯನವರ ಭಾಸನ ಮೂರು ನಾಟಕಗಳ ಕನ್ನಡ ರೂಪಾಂತರಗಳವರೆಗೆ ಅನೇಕ ಸಂಸ್ಕೃತ ಕೃತಿಗಳು ಕನ್ನಡದಲ್ಲಿ ಅನುವಾದವಾಗಿ ಬಂದಿವೆ. ಶ್ರೀಬಸವಪ್ಪಶಾಸ್ತ್ರಿಗಳ ಅಭಿಜ್ಞಾನ ಶಾಕುಂತಲದ ಅನುವಾದ ಹಳಗನ್ನಡ ಶೈಲಿಯಲ್ಲಿ ಮೂಡಿಬಂದಿದೆ. ಶ್ರೀ ಚನ್ನಬಸಪ್ಪ ಕವಲಿಯವರು ಅನೇಕ ಸಂಸ್ಕೃತ ನಾಟಕಗಳ ಸರಳವಾದ ಸಾರವನ್ನು ಕನ್ನಡದಲ್ಲಿ ಒದಗಿಸಿದ್ದಾರೆ. ಶ್ರೀ ಜಿ.ಎಚ್. ಶ್ರೀಧರ ಅವರು ತಮ್ಮ ಕನ್ನಡ ಸಂಸ್ಕೃತ ಬಾಂಧವ್ಯ ಎಂಬ ಪುಸ್ತಕದಲ್ಲಿ ಸರಸ್ವತಿಯ ಅವಳಿ ಮಕ್ಕಳ ಈ ಬಾಂಧವ್ಯವನ್ನು ವಿವರವಾಗಿ ನಿರೂಪಿಸಿದ್ದಾರೆ.

ಈ ಪರಂಪರೆಯಲ್ಲಿ ಡಾ. ಸಾ.ಶಿ. ಮರುಳಯ್ಯನವರು ಕನ್ನಡಕ್ಕೆ ರೂಪಾಂತರಿಸಿದ ಭಾಸನ ಮೂರು ನಾಟಕಗಳು ವಿಶಿಷ್ಟವಾದ ಸ್ಥಾನವನ್ನು ಪಡೆದಿವೆ. ಇವುಗಳಲ್ಲಿ 'ಸ್ವಪ್ನನಾಟಕ' ಮತ್ತು 'ಪಂಚರಾತ್ರ' ಇವೆರಡು ಭಾಸನ ಈ ಹೆಸರಿನ ನಾಟಕಗಳ ಸರಳಾನುವಾದಗಳು. ಮೂರನೆಯದಾದ 'ಪರಾಭವ' ಎಂಬ ನಾಟಕವು ಭಾಸನ ಪ್ರತಿಮಾ ನಾಟಕದಲ್ಲಿಯ ಕೈಕೇಯಿಯ ವ್ಯಕ್ತಿತ್ವವನ್ನು ಉದಾತ್ತೀಕರಿಸಿದ ಹಿನ್ನೆಲೆಯ ಘಟನೆಯನ್ನು ವಿಸ್ತರಿಸಿದ ಸ್ವತಂತ್ರ ನಾಟಕ. ಇದೊಂದು ಆ ನಾಟಕದ ಗರ್ಭಾಂಕ ಎಂದು ಕರೆಯಬಹುದು. ಇದು ಉತ್ತರ ರಾಮಚರಿತ್ರದಲ್ಲಿ ಸೀತೆಯು ಪರಿತ್ಯಕ್ತಳಾದ ಮೇಲೆ ತಾಯಿಯಾದ ಪೃಥ್ವಿಯ ಮಡಿಲಲ್ಲಿದ್ದು ಮುಂದೆ ವಾಲ್ಮೀಕಿಯು ಏರ್ಪಡಿಸಿದ ನಾಟಕದಲ್ಲಿ ಗಂಗೆಯ ಮಡಿಲಿನಿಂದ ಮೇಲೇರಿ ಬಂದ ಗರ್ಭಾಂಕದಂತೆ ಪ್ರತಿಮಾ ನಾಟಕದಲ್ಲಿಯೇ ಗರ್ಭಾಂಕವಾಗಿಯೇ ಸೇರಿಸಬಹುದಾದಂಥ ಅಪೂರ್ವ ಕೃತಿಯಾಗಿದೆ.

ಸ್ವಪ್ನನಾಟಕ ಮತ್ತು ಪಂಚರಾತ್ರಗಳು ಕೇವಲ ಅನುವಾದಗಳಾದ್ದರಿಂದ ಲೇಖಕರಿಗೆ ತಮ್ಮ ಅನಿಸಿಕೆಗಳನ್ನು ಅದರಲ್ಲಿ ಸೇರಿಸಲು ಹೆಚ್ಚು ಅವಕಾಶವಿಲ್ಲ. ಆದರೆ ಅನುವಾದದ ಶೈಲಿ ಮತ್ತು ಆಯ್ದ ಪದವಾಕ್ಯಗಳಿಂದ ಮೂಲ ಕವಿಯ ಹೃದಯವನ್ನು ಹೆಚ್ಚು ಬಿಚ್ಚಿಡಬಹುದು. ಮೂಲಕವಿ ಹೃದಯ ಮತ್ತು ಅನುವಾದಕ ಕವಿಹೃದಯಗಳ ಸಂವಾದವನ್ನು ಪ್ರಕಟಗೊಳಿಸಬಹುದು. ಕವಿಯ ಹೃದಯದಲ್ಲಿ ಕುಳಿತೇ ಅವನ ನಾಲಿಗೆಯಿಂದಲೇ ಅನುವಾದಕನು ಮಾತನಾಡುತ್ತಾನೆ ಎಂಬ ಅನುಭವವನ್ನು ಉಂಟುಮಾಡಬಹುದು. ಇಂಥ ಅಧ್ಯಾರೋಪವನ್ನು ಡಾ. ಮರುಳಯ್ಯನವರು ಚೆನ್ನಾಗಿ ಅಳವಡಿಸಿಕೊಂಡಿದ್ದಾರೆ. ಮೂಲಕವಿಯ ಭಾವನೆ ಆಶಯಗಳು ಸಮರ್ಥವಾಗಿ ಮೂಡಿಬಂದಿಲ್ಲ ಎಂಬ ಭಾವನೆ ಎಲ್ಲಿಯೂ ಉಂಟಾಗುವುದಿಲ್ಲ. ಮೂಲನಾಟಕವನ್ನು ಓದುವುದರಿಂದ ಉಂಟಾಗುವ ಹೃದಯದ ಪ್ರಸನ್ನತೆಯೇ ಉಂಟಾಗುವುದು. ಸುಲಭವಾದ ಮತ್ತು ನೇರವಾದ ಕನ್ನಡ ಅನುವಾದವು ಮೂಲ ಸಂಸ್ಕೃತವನ್ನು ಓದಿದವರಿಗೂ ಪ್ರಸನ್ನತೆಯನ್ನು ಉಂಟುಮಾಡುವುದು. ಪದ್ಯಗಳ ಶೈಲಿಯೂ ಲಲಿತವಾಗಿರುವುದು.

'ಪರಾಭಾವ' ಎಂಬ ನಾಟಕದ ಹೆಸರು ಎರಡು ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. ಶ್ರೀರಾಮನ ಪಟ್ಟಾಭಿಷೇಕದ ವಾರ್ತೆಯನ್ನು ತಂದ ಮಂಥರೆಯು ಭರತನನ್ನು ಪಟ್ಟಕ್ಕೆ ಕೂಡಿಸು ಮತ್ತು ಶ್ರೀರಾಮನನ್ನು ವನಕ್ಕೆ ಅಟ್ಟು ಎಂಬ ಎರಡು ವಚನಗಳನ್ನು ಕೇಳಿಕೊ ಎಂದು ಎಷ್ಟು ಹೇಳಿದರೂ ಕೈಕೇಯಿಯು ಒಪ್ಪುವುದಿಲ್ಲ. ಆದರೆ ವಸಿಷ್ಠ ಮತ್ತು ಸುಮಂತ್ರರು ಬಂದು ದಶರಥನಿಗೆ ಬಂದ ಶಾಪದ ವಿಷಯವನ್ನು ತಿಳಿಸಿ ಶ್ರೀರಾಮನ ಪ್ರಾಣರಕ್ಷಣೆಗಾಗಿ ಕೈಕೇಯಿಯು ಅವನನ್ನು ವನಕ್ಕೆ ಕಳಿಸುವ ವಚನವನ್ನು ಕೇಳಬೇಕು ಎಂದು ಸೂಚಿಸಿದಾಗ ಇಂಥ ವಚನವನ್ನು ಬೇಡುವುದಿಲ್ಲ ಎಂಬ ತನ್ನ ದೃಢನಿರ್ಧಾರವನ್ನು ಬಿಡುವ ಸೋಲನ್ನು ಒಪ್ಪಿಕೊಳ್ಳಬೇಕಾಗುವುದು. ಇದೇ ಅವಳ ಪರಾಭವ ಅಂದರೆ ಸೋಲು, ತನ್ನ ಮನಸ್ಸಿಗೆ ವಿರುದ್ಧವಾದುದನ್ನು ಮಾಡುವಂಥ ಪರಾಭವ. ಲೋಕದ ದೃಷ್ಟಿಯಲ್ಲಿ ಕೆಟ್ಟವಳಾಗಿ ರಾಮನ ಪ್ರಾಣವನ್ನು ರಕ್ಷಿಸಲು ಅವಳು ಒಪ್ಪಿಕೊಂಡ ಪರಾಭವ ಅವಳ ನೈತಿಕ ವಿಜಯವೇ ಆಗಿದೆ.

ಇಂಥ ಸನ್ನಿವೇಶ ಮತ್ತು ಇಂಥ ಮನಃಪರಿವರ್ತನೆ ಪರಾಶಕ್ತಿಯ ಅವಿಷ್ಕಾರವೇ ಆಗಿದೆ ಎಂಬ ಅರ್ಥದಲ್ಲಿಯೂ ಇದು ಪರಾಭವವಾಗಿದೆ. ಈ ನಾಟಕದ ಆರಂಭ ಈ ಪರಾಶಕ್ತಿಯ ಎದುರಿಗೇ, ಅವಳ ಸ್ತೋತ್ರದಿಂದಲೇ ಆರಂಭವಾಗಿದೆ. ಅವಳು ಕೊಟ್ಟ ಶಕ್ತಿಯಿಂದಲೇ ಕೈಕೇಯಿಯು ಲೋಕದೃಷ್ಟಿಯಿಂದ ಕೆಟ್ಟವಳಾಗಿ ರಾಮನ ಪ್ರಾಣ ಉಳಿಸುವ ಈ ಉದಾತ್ತಕಾರ್ಯವನ್ನು ಮಾಡಲು ಸಮರ್ಥಳಾಗಿದ್ದಾಳೆ.

ಭಾಸನ ಪ್ರತಿಮಾ ನಾಟಕದಲ್ಲಿ ಸೂಚಿತವಾದ ಈ ಸನ್ನಿವೇಶವನ್ನು ಶ್ರೀ ಮರುಳಯ್ಯನವರು ಒಂದು ಗರ್ಭಾಂಕ ರೂಪಕವನ್ನಾಗಿ ಪರಿವರ್ತಿಸಿದ್ದು ಅವರ ನಾಟಕರಚನೆಯ ಪ್ರತಿಭೆಯನ್ನು ವ್ಯಕ್ತ ಪಡಿಸುವುದಲ್ಲದೆ ಕೈಕೇಯಿಯ ವ್ಯಕ್ತಿತ್ವದ ಉದಾತ್ತತೆಯನ್ನು ಬಿಚ್ಚಿ ತೋರಿಸುವ ಅವರ ಪ್ರಾಮಾಣಿಕ ಪ್ರಯತ್ನವಾಗಿದೆ. ಪ್ರಾಚೀನ ಕಾವ್ಯನಾಟಕಗಳ ಪಾತ್ರಗಳಲ್ಲಿ ದೋಷಗಳನ್ನೇ ಕಂಡುಹಿಡಿಯುವ ಮತ್ತು ಇಲ್ಲದ ದೋಷಗಳನ್ನು ಸೃಷ್ಟಿಸುವ ವಿಮರ್ಶಕರಿಗೆ ಅವುಗಳನ್ನು ಸರಿಯಾಗಿ ಪರಿಶೀಲಿಸಲು ಈ ಕೃತಿಯು ಮಾರ್ಗದರ್ಶಕವಾಗಿದೆ.

ನಾಟಕದ ತಂತ್ರದ ದೃಷ್ಟಿಯಿಂದಲೂ ಈ ನಾಟಕ ವೈಶಿಷ್ಟ್ಯಪೂರ್ಣವಾಗಿದೆ. ಕೈಕೇಯಿಗೆ ದಶರಥನು ಕೊಟ್ಟ ವಚನದ ಘಟನೆ ಮತ್ತೆ ದಶರಥನಿಗೆ ಶಾಪ ಬಂದ ಘಟನೆಗಳನ್ನು ಪ್ರತ್ಯಕ್ಷದೃಶ್ಯವಾಗಿ ನಿರೂಪಿಸಿದ್ದು ಒಂದು ಕುಶಲ ನಾಟಕತಂತ್ರವಾಗಿದೆ. ಇದೊಂದು ಹಿನ್ನೋಟದ ದೃಶ್ಯ ಎಂದು ಅವರೇ ಹೇಳಿದ್ದಾರೆ.

ಸ್ವಪ್ನನಾಟಕಕ್ಕೆ ಬರೆದ ವಿಸ್ತಾರವಾದ ಮುನ್ನುಡಿಯಲ್ಲಿ ಭಾಸನ ವಿಷಯವನ್ನು ವಿವರವಾಗಿ ತಿಳಿಸಿದ್ದಾರೆ. ಇಂಥ ಸಹೃದಯ ಕೃತಿಯ ವಿಶ್ಲೇಷಣೆಯನ್ನು ನಾನು ಇನ್ನೂ ವಿವರವಾಗಿ ಮಾಡಬೇಕಾಗಿತ್ತು. ಆದರೆ ವೃದ್ಧಾಪ್ಯದಿಂದ ಸಂಕ್ಷಿಪ್ತವಾಗಿ ಮಾಡಿದ್ದೇನೆ. ಪರಾಶಕ್ತಿಯು ಇವರಿಗೆ ದೀರ್ಘಾಯುಷ್ಯ ಮತ್ತು ದೀರ್ಘಕಾರ್ಯಶಕ್ತಿಯನ್ನು ಒದಗಿಸಲಿ ಎಂದು ಪ್ರಾರ್ಥಿಸುತ್ತೇನೆ.

ಕತೆಗಾರ

ನಾ. ಡಿಸೋಜ

ಸಾ.ಶಿ. ಮರುಳಯ್ಯನವರನ್ನು ಕತೆಗಾರರು, ಕಾದಂಬರಿಕಾರರು ಎಂದು ಗುರುತಿಸುವುದು ಕಷ್ಟದ ಕೆಲಸ. ಏಕೆಂದರೆ ಇತ್ತೀಚಿನ ದಿನಗಳಲ್ಲಿ ಅವರು ಈ ಕ್ಷೇತ್ರದಲ್ಲಿ ಮಾಡಿರುವ ಕೃಷಿ ಕಡಿಮೆ. ಹೀಗಾಗಿ ಸಾ.ಶಿ.ಮ.ರು ಕವಿ ಸಂಶೋಧಕರೆಂದು, ಒಳ್ಳೆಯ ಭಾಷಣಕಾರರೆಂದು ಕರೆಯುವುದು ಹೆಚ್ಚು. ಮಾತು ನಿಜವೂ ಹೌದು. ಆದರೆ ಸಾ.ಶಿ.ಮರುಳಯ್ಯನವರು ಸಮರ್ಥ ಕಾದಂಬರಿಕಾರರೂ ಹೌದು, ಒಳ್ಳೆಯ ಕತೆಗಾರರೂ ಹೌದು ಎಂಬ ಅಂಶವನ್ನು ಇದೀಗ ನನ್ನ ಮುಂದಿರುವ ಅವರ ಎರಡು ಕಾದಂಬರಿಗಳು ಹಾಗೂ ಒಂದು ಕಥಾ ಸಂಕಲನ *ಸ್ಪಷ್ಟಪಡಿಸುತ್ತವೆ.

ಸಾಮಾನ್ಯವಾಗಿ ಓರ್ವ ಕವಿ ಅಥವಾ ಓರ್ವ ಸಂಶೋಧಕ, ಕತೆ ಕಾದಂಬರಿಗಳ ರಚನೆಯ ವಿಷಯಕ್ಕೆ ಬಂದಾಗ ಹಿನ್ನಡೆಯನ್ನು ಕಾಣುವುದುಂಟು. ಕಾದಂಬರಿಗಳ, ಕತೆಗಳ ರಚನೆಗೆ ಬೇರೆಯೇ ಆದ ಮಾನಸಿಕ ಸಿದ್ಧತೆ, ಪೂರ್ವ ತಯಾರಿ ಬೇಕಾಗಿರುವುದರಿಂದ ಕೆಲವರು ಒಂದೊಂದು ಕ್ಷೇತ್ರವನ್ನೇ ಆರಿಸಿಕೊಂಡು ಅಲ್ಲಿಯೇ ಕೆಲಸಮಾಡುವುದು ರೂಢಿ. ಕಾರಂತ, ಕುವೆಂಪು, ಟಾಗೂರರಂತಹ ಕೆಲವೇ ಪ್ರತಿಭಾವಂತರು ಎಲ್ಲ ಕ್ಷೇತ್ರಗಳಲ್ಲೂ ಸೈ ಎನಿಸಿಕೊಂಡಿರುವುದು ನಮಗೆ ಗೊತ್ತಿದೆ. ಸಾ.ಶಿ. ಮರುಳಯ್ಯನವರು ಕೂಡ ನಾಟಕ, ಕಾವ್ಯ, ಜೀವನ ಚರಿತ್ರೆ, ಸಂಶೋಧನೆ, ಕತೆ ಕಾದಂಬರಿಗಳ ರಚನೆ ಮಾಡಿ ತಮ್ಮ ಸಾಮರ್ಥ್ಯವನ್ನು ತೋರಿಸಿ ಕೊಟ್ಟಿದ್ದಾರೆ.

ಸಾ.ಶಿ.ಮ. ಅವರ 'ಹೇಮಕೂಟ' 'ಪುರುಷಸಿಂಹ' ಕಾದಂಬರಿಗಳು, 'ನೆಲದ ಸೊಗಡು' ಎಂಬ ಕಥಾಸಂಕಲನ ಇದೀಗ ನನ್ನ ಮುಂದಿರುವ ಮೂರು ಕೃತಿಗಳು.

ಹೇಮಕೂಟ ಹಾಗೂ ಪುರುಷ ಸಿಂಹ ಎರಡೂ ಐತಿಹಾಸಿಕ ಕೃತಿಗಳಾದರೂ ಹೇಮಕೂಟದಲ್ಲಿ ಕೆಲ ಪೌರಾಣಿಕ ಅಂಶಗಳೂ ಸೇರ್ಪಡೆಯಾಗಿವೆ.

'ನೆಲದಸೊಗಡು' ವೈವಿಧ್ಯಮಯವಾದ ವಸ್ತುವಿಚಾರಗಳಿಂದ ಕೂಡಿದ ಕತೆಗಳ ಸಂಕಲನ.

ಸುಮಾರು ನಲವತ್ತು ವರುಷಗಳ ಹಿಂದೆ ಪ್ರಕಟವಾದ ಈ ಮೂರು ಕೃತಿಗಳು ಇಂದಿಗೂ ಪರಿಶೀಲನೆಗೆ ಅರ್ಹವಾಗಿದೆ.

---

*ಹೇಮಕೂಟ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು (೧೯೬೬)
ಪುರುಷ ಸಿಂಹ : ತ.ವೆಂ. ಸ್ಮಾರಕ ಗ್ರಂಥಮಾಲೆ, ಮೈಸೂರು (೧೯೬೬)
ನೆಲದಸೊಗಡು : ಜಯಶ್ರೀ ಪ್ರಕಾಶನ, ಬೆಂಗಳೂರು

ಹೇಮಕೂಟ

ಕನ್ನಡದ ದಾಸಸಾಹಿತ್ಯಕ್ಕೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟವರು, ದಾಸಕೂಟ ಎನ್ನುವಂತಹ ಒಂದು ಪದ್ಧತಿ ಪರಂಪರೆಯನ್ನು ಕನ್ನಡದಲ್ಲಿ ಬೆಳೆಸಿದರು, 'ದಾಸರೆಂದರೆ ದಾಸರಯ್ಯ ಪುರಂದರ ದಾಸರು' ಎಂಬುದಾಗಿ ಹೊಗಳಿಕೆಗೆ ಪಾತ್ರರಾದವರು ಪುರಂದರ ದಾಸರು. ಸಾವಿರಕ್ಕೂ ಹೆಚ್ಚು ಕೀರ್ತನೆಗಳನ್ನು ರಚಿಸಿ ಹಾಡಿ, ಸಾಹಿತ್ಯ ಹಾಗೂ ಸಂಗೀತ ಎರಡನ್ನೂ ಶ್ರೀಮಂತಗೊಳಿಸಿದವರು ಇವರು. ಪೂರ್ವಾಶ್ರಮದಲ್ಲಿ ಧನಿಕರು, ಜಿಪುಣಾಗ್ರೇಸರು, ಬೇರೆಲ್ಲ ಹುಲು ಮನುಜರ ಹಾಗೆ ಹಲವಾರು ದೌರ್ಬಲ್ಯಗಳನ್ನು ಇರಿಸಿಕೊಂಡವರಾಗಿದ್ದ ಶ್ರೀನಿವಾಸ ನಾಯಕರು ತಟ್ಟನೆ ಪುರಂದರ ದಾಸರಾಗಿ ಬಿಡುತ್ತಾರೆ. ಎಲ್ಲ ಮೋಹಗಳನ್ನೂ ಮೀರಿ ಶ್ರೀಮಂತಿಕೆಯನ್ನು ಕಾಲಿನಿಂದ ಒದ್ದು ತಾಳ ತಂಬೂರಿ ಹಿಡಿದು ವ್ಯಾಸರಾಯರಿಂದ ದೀಕ್ಷೆ ಪಡೆದು ಪುಣ್ಯಕ್ಷೇತ್ರಗಳಿಗೆ ಭೇಟಿಕೊಡುತ್ತ, ಜನರ ಡಂಭಾಚಾರ, ಸುಳ್ಳು ಭಕ್ತಿ, ಪೊಳ್ಳು ಮನೋಭಾವ, ಹಲವು ಹುಳುಕುಗಳನ್ನು ಪದಗಳ ಮೂಲಕ ಬಯಲಿಗೆಳೆಯುತ್ತ, ಪುರಂದರ ವಿಠಲನನ್ನು ಸ್ಮರಿಸುತ್ತಾ ಹೊರಟುಬಿಡುತ್ತಾರೆ.

ಪುರಂದರ ದಾಸರ ಸುತ್ತ ಹಲವು ದಂತಕತೆಗಳಿವೆ, ಪವಾಡಗಳಿವೆ. ಐತಿಹಾಸಿಕ ಘಟನೆಗಳು ಅಲ್ಲಲ್ಲಿ ಮೇಳೈಸಿಕೊಂಡಿದ್ದರೂ ಅವರ ಸಮಗ್ರ ಬದುಕನ್ನು ಒಂದೆಡೆ ಕೊರೆದು ನಿಲ್ಲಿಸಲು ಬೇಕಾಗುವಂತಹ ಸಾಮಗ್ರಿ ಇಲ್ಲ. ಅವರ ಪರ ಕೀರ್ತನೆಗಳು ಒಂದು ವಸ್ತು ವಿಚಾರವನ್ನು ಬಿಂಬಿಸುತ್ತವಾದರೂ ಈ ವಿಚಾರಗಳು ಪದಗಳ ರೂಪ ಪಡೆದು ಬರಲು ಕಾರಣವೇನು ಎಂಬುದು ಎಲ್ಲಿಯೂ ಸ್ಪಷ್ಟವಾಗುವುದಿಲ್ಲ. ಕೀರ್ತನೆಗಳು ಪುರಂದರ ದಾಸರ ಮನೋಭಾವದ ಪ್ರತೀಕವಾಗಿದ್ದರೂ ಬಿಡಿಬಿಡಿಯಾದ ಪ್ರಕರಣಗಳು ಇಲ್ಲಿ ಕಾಣಿಸಿಕೊಳ್ಳುವುದಿಲ್ಲ.

ಇಂತಹ ಹಲವು ತೊಡಕುಗಳ ನಡುವೆಯೂ ಮರುಳಯ್ಯನವರು ''ಹೇಮಕೂಟ'' ಕಾದಂಬರಿಯ ಮೂಲಕ ಪುರಂದರದಾಸರ ವ್ಯಕ್ತಿತ್ವವನ್ನು ಓದುಗರ ಮುಂದೆ ಇರಿಸುವ ಯತ್ನ ಮಾಡಿದ್ದಾರೆ.

ಅದೇಕೋ ವಚನಕಾರರ ಬದುಕನ್ನು ತೆಗೆದುಕೊಂಡು ಬರೆದ ಕಾದಂಬರಿಗಳ ಸಂಖ್ಯೆ ನಮ್ಮಲ್ಲಿ ಅಧಿಕವಾಗಿ ಇರುವಂತೆ ದಾಸಸಾಹಿತ್ಯವನ್ನು ರಚಿಸಿದ ಕೀರ್ತನಕಾರರ ಬಗ್ಗೆ ಬರೆದವರು ಕಡಿಮೆ. ಕೀರ್ತನಕಾರರು ಬೇರೆಬೇರೆ ಪ್ರಾಂತ್ಯಗಳ ಜನರನ್ನು ಸಂಗೀತದ ಮೂಲಕ, ಭಕ್ತಿಯ ಮೂಲಕ ಒಂದಾಗಿ ಬೆಸೆದವರು. ಇವರ ಬಗ್ಗೆ ಸವಿಸ್ತಾರವಾದ ಕೃತಿಗಳ ರಚನೆಯ ಅವಶ್ಯಕತೆ ಇದ್ದೂ ಈ ಕೆಲಸ ಆಗಲಿಲ್ಲ. ಆದರೆ ಮರುಳಯ್ಯನವರು ೧೯೬೨ರ ಸುಮಾರಿಗೇನೆ ಈ ಕೆಲಸ ಮಾಡಿದ್ದಾರೆ.

ಪವಾಡಗಳಲ್ಲಿ ತಮಗೆ ನಂಬಿಕೆ ಇಲ್ಲವೆಂದು ಲೇಖಕರು ಮುನ್ನುಡಿಯಲ್ಲಿ ಹೇಳಿ, ಪುರಂದರದಾಸರ ಸುತ್ತ ಹಮ್ಮಿಕೊಂಡಿರುವ ಅವಾಸ್ತವಿಕತೆಗಳಿಗೆ ತಾವು ವೈಜ್ಞಾನಿಕ ನೆಲಗಟ್ಟನ್ನು ತಂದುಕ್ಕೊಟ್ಟಿರುವುದಾಗಿ ಹೇಳಿದರೂ ಕಾದಂಬರಿ ಈ ಪವಾಡಗಳಿಂದ

ದೂರವಾಗಿಲ್ಲದಿರುವುದು ಒಂದು ಮುಖ್ಯ ಅಂಶವೆ. ವರದಪ್ಪ ನಾಯಕನ ಹೆಂಡತಿ ಲಕ್ಷ್ಮಿಯ ಗರ್ಭದಲ್ಲಿ ಸಾಕ್ಷಾತ್ ನಾರದನೇ ಶ್ರೀನಿವಾಸ ನಾಯಕನಾಗಿ ಹುಟ್ಟಿಬರುವ ಮನೆಯೊಂದಿಗೆ ಆರಂಭವಾಗುವ ಕಾದಂಬರಿ ಮುನ್ನುಡಿಯ ಮಾತಿಗೆ ಹೊರತಾಗಿದೆ. ಮುಂದೂ ಕೂಡ ಕೆಲ ಪವಾಡದಂತಹಾ ದೃಶ್ಯಗಳು ನಡೆಯುತ್ತವೆ.

ಮುಂದೆ ಶ್ರೀನಿವಾಸ ಬೆಳೆಯುತ್ತಾನೆ. ತಂದೆಯನಂತರ ಮನೆಯ ಆಡಳಿತ ಇವನ ವಶಕ್ಕೆ ಬರುತ್ತದೆ. ಲೋಭಿಯಾಗಿ ಒಂದಿಷ್ಟೂ ಕನಿಕರವಿಲ್ಲದ ಶ್ರೀಮಂತನಾಗಿ ಈತ ಬದುಕುತ್ತಾನೆ. ಕೃಷ್ಣದೇವರಾಯನನ್ನು ನೋಡಲು ಹಂಪಿಗೆ ಹೋದಾಗ ಅಲ್ಲಿ ಸುಂದರಿ ಸರಸ್ವತಿಯ ಭೇಟಿ ಅವನಿಗೆ ಆಗಿ ಅವಳ ರೂಪಕ್ಕೆ ಮನಸೋತ ಶ್ರೀನಿವಾಸ ಅವಳನ್ನು ಮದುವೆಯಾಗುತ್ತಾನೆ.

ಹೆಂಡತಿ ಸರಸ್ವತಿಯ ಗುಣ ಬೇರೆ, ಶ್ರೀನಿವಾಸನಾಯಕನ ಸ್ವಭಾವ ಬೇರೆ. ಅವಳು ಅಯ್ಯೋ ಪಾಪ ಎಂದು ಇತರರಿಗಾಗಿ ಮರಗುವವಳು. ಈತ ಹಣವೇ ಸರ್ವಸ್ವ ಎಂದು ನಂಬಿರುವ. ಅವರ ದಾಂಪತ್ಯ ಜೀವನ ಈ ಬವಣೆಯಲ್ಲಿಯೇ ಸಾಗುತ್ತದೆ. ಈ ನಡುವೆ ಈ ಘರ್ಷಣೆ, ವಿಪರೀತಕ್ಕೆ ಹೋಗುವ ಒಂದು ಘಟನೆ ನಡೆಯುತ್ತದೆ. ವಿಜಯನಗರದ ನಾರಾಯಣದಾಸ ಎಂಬ ಬ್ರಾಹ್ಮಣ ಬಂದು ಮೂಗುತಿಯನ್ನು ಹಿಡಿದು ಶ್ರೀನಿವಾಸನಲ್ಲಿಗೆ ಬರುತ್ತಾನೆ. ಇದಕ್ಕೆ ಬೆಲೆ ಕಟ್ಟಿ ತೆಗೆದುಕೊಂಡು ಹಣಕೊಡು ಎಂದು ಹೇಳುತ್ತಾನೆ. ನಾಯಕ ಅದನ್ನು ಕೈಗೆತ್ತಿಕೊಂಡು ನೋಡಿದಾಗ ಅದು ತನ್ನ ಹೆಂಡತಿಯ ಮೂಗುತಿ ಎಂಬುದು ನಾಯಕನಿಗೆ ಅರಿವಾಗುತ್ತದೆ.

ಇದೇ ಒಂದು ನೆವವಾಗಿ ಶ್ರೀನಿವಾಸನಾಯಕನ ಹೆಂಡತಿ ಸರಸ್ವತಿ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ಈ ಘಟನೆಯ ನಂತರ ಶ್ರೀನಿವಾಸನಾಯಕ ಈವರೆಗೆ ತಾನು ಸಾಗಿಬಂದ ದಾರಿಯ ಪುನರಾವಲೋಕನ ಮಾಡಿದವನ ಹಾಗೆ ಪಶ್ಚಾತ್ತಾಪ ಪಡುತ್ತಾನೆ. ಶ್ರೀನಿವಾಸ ಪುರಂದರದಾಸರಾಗಿ ಪರಿವರ್ತನೆ ಹೊಂದುತ್ತಾನೆ.

ನಂತರದ ಚಿತ್ರಣ ಪುರಂದರದಾಸರದ್ದು. ಕೀರ್ತನೆಗಳ ರಚನೆ, ಹಾಡುಗಾರಿಕೆ, ಸುತ್ತಾಟ. ಜನರ ಡಂಭಾಚಾರ, ಮೌಢ್ಯಗಳನ್ನು ಬಯಲಿಗೆ ಎಳೆಯುವ ಮಂತ್ರ. ಪುರಂದರ ವಿಠಲನನ್ನು ಕಾಣುವ ಪ್ರಯತ್ನ. ಶ್ರೀನಿವಾಸ ನಾಯಕನಾಗಿದ್ದಾಗ ಅವರು ನಡೆಸಿದ ಬದುಕಿಗೂ ನಂತರದ ಬದುಕಿಗೂ ನಡುವಣ ವ್ಯತ್ಯಾಸ, ಉಡುಪಿ, ನೆಲ್ಲೂರು, ತಿರುಪತಿಗಳಲ್ಲಿ ದಾಸರ ಪದಗಳ ರಚನೆ, ವ್ಯಾಸರಾಯರು ದಾಸರನ್ನು ಪರಿಪರಿ ರೀತಿಯಲ್ಲಿ ಪರೀಕ್ಷಿಸುವುದು, ಉಳಿದ ದಾಸರಿಗಿಂತ ಪುರಂದರದಾಸರು ಶ್ರೇಷ್ಠರು ಎಂಬ ತೀರ್ಮಾನ. ಕನಕ ಹಾಗೂ ಪುರಂದರರ ಮಿಲನ. ಸಹ ಚಿಂತನೆ. ತುಂಗಭದ್ರೆಯ ದಡದ ಮೇಲೆ ಪುರಂದರ ಮಂಟಪದ ರಚನೆ. ಅಲ್ಲಿಯೇ ಪುರಂದರದಾಸರು -

'ಬದುಕಿದೆನು ಬದುಕಿದೆನು ಭವವೆನಗೆ ಹಿಂಗಿತು
ಪದುಮನಾಭನ ಪಾದದೊಲುಮೆ ಎನಗಾಯಿತು'

ಎಂದು ಹೇಳುತ್ತ ಪುರಂದರ ವಿಠಲನಲ್ಲಿಗೆ ತೆರಳುತ್ತಾರೆ.

೧೧೪ ಪುಟಗಳ ಈ ಕಿರುಕಾದಂಬರಿ ಮರುಳಯ್ಯನವರ ಸರಸ ಸುಂದರ ಶೈಲಿಯಿಂದಾಗಿ ಓದಿಸಿಕೊಂಡು ಹೋಗುತ್ತದೆ. ಶ್ರೀನಿವಾಸನಾಯಕ ಸರಸ್ವತಿಯವರ ಭೇಟಿ, ಅವಳ ಮರಣಾನಂತರ ಶ್ರೀನಿವಾಸ ಅವಳ ಚಿತ್ರವನ್ನು ಇರಿಸಿಕೊಂಡು ಗೋಳಾಡುವುದು ಇತ್ಯಾದಿ ಚಿತ್ರಣಗಳು ಕೊಂಚ ಸಿನಿಮೀಯ ಅನಿಸಿದರೂ ರೋಚಕವಾಗಿವೆ.

ಮೂಗುತಿಯನ್ನು ಮಾರಲು ಬಂದ ನಾರಾಯಣದಾಸನಿಗೂ ಶ್ರೀನಿವಾಸ ನಾಯಕನಿಗೂ ಮಾತು ನಡೆದು ಶ್ರೀನಿವಾಸನಾಯಕ

''ಭಿಕ್ಷೆ ಕೊಡೋಕೆ ಬಂದಿದ್ದಿಯೇನೊ?''

ಎಂದು ತುಂಬಾ ಅಹಂಕಾರದಿಂದ ಕೇಳುತ್ತಾನೆ. ಆಗ ಬ್ರಾಹ್ಮಣ ನಾರಾಯಣ ದಾಸ-

''ಒಂದು ವೇಳೆ ಅಂಥಾಸ್ಥಿತಿ ನಿಮಗೆ ಬಂದಾಗ ಬನ್ನಿ ಸ್ವಾಮಿ. ಸಂತೋಷವಾಗಿ ನನ್ನ ಕೈಲಿ ಆದ್ದುದ್ದನ್ನು ಕೊಟ್ಟು ಕಳುಹಿಸುತ್ತೇನೆ....'

ಅನ್ನುತ್ತಾನೆ. ಮುಂದೊಂದು ದಿನ ಪುರಂದರದಾಸರು ಎಲ್ಲವನ್ನೂ ತ್ಯಜಿಸಿ ದೀನಾವಸ್ಥೆಯಲ್ಲಿರುವಾಗ ಇದೇ ನಾರಾಯಣದಾಸ ಅವರನ್ನು ಸತ್ಕರಿಸುತ್ತಾನೆ.

ಇಂತಹ ಹಲವು ಸಂದರ್ಭಗಳು ಕೂಡ ಈ ಕೃತಿಯಲ್ಲಿವೆ.

ಕನಕದಾಸರ ವೃತ್ತಾಂತ ಕೊನೆಯಲ್ಲಿ ಬಂದು ಕಿರಿದಾಗಿ ಮುಗಿಯುತ್ತದೆ.

ಸುಮಾರು ಐನೂರು ವರ್ಷಗಳ ಹಿಂದಿನ ರಾಜಕೀಯ ಪರಿಸರ, ಅಂದಿನ ಜನಜೀವನ, ವಿಜಯನಗರದ ವೈಭವ, ಉಡುಪಿ, ಬೇಲೂರು, ತಿರುಪತಿ ಇತ್ಯಾದಿಗಳ ಸ್ಥಿತಿಗತಿಗಳ ಬಗ್ಗೆ ಇನ್ನೂ ವಿವರವಾಗಿ ಖಚಿತವಾಗಿ ಲೇಖಕರು ಬರೆಯಬೇಕಿತ್ತು ಅನಿಸುತ್ತದೆ.

ಶ್ರೀನಿವಾಸನಾಯಕ ವ್ಯಾವಹಾರಿಕ ಬದುಕನ್ನು ಸಾಗಿಸುತ್ತಿರುವಾಗ ಮಹಾಲೋಭಿಯಾಗಿ, ಕ್ರೂರಿಯಾಗಿ ಇದ್ದವನು ನಂತರದ ತನ್ನ ಬದುಕಿನಲ್ಲಿ ಮಹತ್ತರ ತಿರುವನ್ನು ಕಾಣುತ್ತಾನೆ. ಭಾಷೆಯ ದೃಷ್ಟಿಯಲ್ಲಿ ಶ್ರೀಮಂತನಾದ. ಭಾವಪೂರಿತವಾದ ಕೀರ್ತನೆಗಳನ್ನು ರಚಿಸುತ್ತಾನೆ. ದಕ್ಷಿಣಾದಿ ಸಂಗೀತಕ್ಕೆ ಭದ್ರವಾದ ತಳಹದಿಯನ್ನು ಹಾಕುತ್ತಾನೆ. ಪ್ರತಿಭೆಯನ್ನು ಕೊಂಡಾಡುತ್ತಾನೆ. (ತ್ಯಾಗರಾಜರ 'ಪ್ರಹ್ಲಾದ ಭಕ್ತವಿಜಯ' ಎಂಬ ನಾಟಕದಲ್ಲಿ ಈ ಉಲ್ಲೇಖ ಬರುತ್ತದೆ.) ಇಂತಹ ಪ್ರತಿಭೆ ಶ್ರೀನಿವಾಸ ನಾಯಕನಿಗೆ ಹೇಗೆ ಬಂತು? ಇದನ್ನು ದೊರಕಿಸಿಕೊಂಡು ಆತ ಪುರಂದರದಾಸ ಹೇಗೆ ಆದ ಎಂಬ ಬಗ್ಗೆ ಕಾದಂಬರಿಯಲ್ಲಿ ವಿವರಗಳಿಲ್ಲ.

ದಾಸರ ಕೀರ್ತನೆಗಳನ್ನೇ ಆಧಾರವಾಗಿ ಇರಿಸಿಕೊಂಡು ಕೂಡಲಿಪುರವನ್ನು, ಕೃಷ್ಣನ ಉಡುಪಿಯನ್ನು ವರ್ಣಿಸಿರುವ ರೀತಿ ಸೊಗಸಾಗಿದೆ. ಆದರೆ ಕೆಲ ಕೀರ್ತನೆಗಳು ಹುಟ್ಟಲು

ಕಾರಣವಾದ ಹಿನ್ನೆಲೆ ತುಂಬಾ ಹಗುರವಾಗಿದೆ. ಆ ಹಿನ್ನೆಲೆಗಿಂತಲೂ ಕೀರ್ತನೆಯೇ ಪ್ರಭಾವ ಪೂರ್ಣವಾಗಿದೆ.

'ಹೇಮಕೂಟ' ಅರವತ್ತರ ದಶಕದಲ್ಲಿಯೇ ಕನ್ನಡಿಗರನ್ನು ರಂಜಿಸಿದ ಕೃತಿ. ಕಾದಂಬರಿಯಲ್ಲಿ ಒಂದು ಕಡೆ ವ್ಯಾಸರಾಯರು ಕನ್ನಡ ಧ್ವಜ ಹೇಮಕೂಟಾದ್ರಿಯ ಮೇಲೆ ಫಡಫಡಿಸುತ್ತಿರುವುದನ್ನು ತೋರಿಸಿ, ಪುರಂದರ ದಾಸರನ್ನು ಕನ್ನಡದ ಹೇಮಕೂಟ ಎಂದು ಕರೆಯುತ್ತಾರೆ. ಈ ಮಾತನ್ನು ಕೇಳಿಸಿಕೊಂಡ ಕನಕದಾಸರು 'ಕನ್ನಡದ ಹೇಮಕೂಟ' ಎಂದು ಹಾಡಿ ಕುಣಿಯುತ್ತಾನೆ.

ಪುರಂದರದಾಸರ ಬದುಕನ್ನು ಕಾದಂಬರಿ ರೂಪದಲ್ಲಿ ಕನ್ನಡಿಗರ ಮುಂದೆ ಇರಿಸಿರುವ ಯತ್ನ ಮಾಡಿದ ಮರುಳಯ್ಯನವರು ಅಭಿನಂದನಾರ್ಹರು. ಈ ಕೃತಿಯಲ್ಲಿ ಕೆಲ ಲೋಪಗಳಿರಬಹುದು. ಆದರೆ ಅವರ ಪ್ರಯತ್ನ ಮಾತ್ರ ಕಿರಿದಲ್ಲ.

ಪುರುಷಸಿಂಹ

ಅರವತ್ತರ ದಶಕದಲ್ಲಿ ಅಂದರೆ ಸಾ.ಶಿ. ಮರುಳಯ್ಯನವರು ಶಿವಮೊಗ್ಗೆಯಲ್ಲಿರ ಬೇಕಾದರೇನೆ ಪ್ರಕಟವಾದ ಅವರ ಮತ್ತೂ ಒಂದು ಕೃತಿ 'ಪುರುಷಸಿಂಹ'. ಈ ಕೃತಿ ಮೊದಲು 'ಸುಬೋಧ' ಮಾಸ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿ ನಂತರ ಪುಸ್ತಕ ರೂಪದಲ್ಲಿ ಬಂದುದನ್ನು ಕೂಡ ಗಮನಿಸಬೇಕು.

ಕನ್ನಡ ಕಾದಂಬರಿ ಪ್ರಕಾಶನಕ್ಕೆ ಹೆಚ್ಚಿನ ಚಾಲನೆ ದೊರೆತದ್ದು ಐತಿಹಾಸಿಕ ಕಾದಂಬರಿಗಳಿಂದ ಎಂದುದು ಈಗಾಗಲೇ ನಾವೆಲ್ಲ ಒಪ್ಪಿಕೊಂಡಿರುವ ಮಾತು. ಗಳಗನಾಥರು, ವೆಂಕಟಾಚಾರ್ಯರು ಮೊದಲು ಬಂಗಾಳಿಯಿಂದ ಮರಾಠಿಯಿಂದ ಕಾದಂಬರಿಗಳನ್ನು ಕನ್ನಡಕ್ಕೆ ಅನುವಾದಿಸಿದರೆ ನಂತರ ಸ್ವತಂತ್ರವಾಗಿ ಕನ್ನಡದಲ್ಲಿ ಬರೆಯ ತೊಡಗಿದರು. ಮಾಧವ ಕರುಣಾವಿಲಾಸ, ಕನ್ನಡಿಗರ ಕರ್ಮಕಥೆ, ಅಲ್ಲದೆ ರಜಪೂತರ ಇತಿಹಾಸ ಕುರಿತ ಹಲವು ಕೃತಿಗಳನ್ನು ಗಳಗನಾಥರು ರಚಿಸಿದರು. ವೆಂಕಟಾಚಾರ್ಯರು ಆನಂದಮಠ, ದೇವಿ ಚೌಧರಾಣಿ ಮುಂತಾದ ಕೃತಿಗಳ ಅನುವಾದವನ್ನು ಕನ್ನಡಿಗರಿಗೆ ನೀಡಿದರು.

ಈ ಕೃತಿಗಳಿಂದಾದ ಒಂದು ಪ್ರಯೋಜನವೆಂದರೆ ಇತಿಹಾಸ ಗರ್ಭದಲ್ಲಿ ಸೇರಿಹೋದ ದೇಶಾಭಿಮಾನದ ಕತೆಗಳು ಹೊರಬಂದದ್ದು. ಅದು ಮರಾಠರ ರಜಪೂತರ, ಕನ್ನಡಿಗನ ಕತೆಯಾಗಿದ್ದರೂ ಅದರಲ್ಲಿ ಶೌರ್ಯ, ಸಾಹಸ, ಅಚಲವಾದ ಮಾತೃಪ್ರೇಮ, ದೇಶಭಕ್ತಿ, ವೈರಿಯನ್ನು ಎದುರಿಸಿ ನಿಲ್ಲುವ ಕ್ಷಾತ್ರಶಕ್ತಿ ಎದ್ದು ಕಾಣುತ್ತಿತ್ತು. ಹೀಗೆಯೇ ಈ ವಿಷಯವನ್ನು ಬಿಂಬಿಸಲು ಅನುವಾಗುವಂತಹ ಒಂದು ಶೈಲಿಯನ್ನು ಕೂಡ ಕನ್ನಡದ ಲೇಖಕರು ಬಳಕೆಗೆ ತಂದು ರೂಢಿಸಿಕೊಂಡರು. ಮೈನವಿರೇಳಿಸುವ ಘಟನೆಗಳು, ರೋಮಾಂಚನಗೊಳಿಸುವ ನುಡಿಗಟ್ಟುಗಳು, ಮನದಾಳದಲ್ಲಿಯ ದೇಶಪ್ರೇಮವನ್ನು ಪ್ರಜ್ವಲಿಸುವ ಶೈಲಿ ಈ ಕೃತಿಗಳ ವೈಶಿಷ್ಟ್ಯವಾಯಿತು. ಮರುಳಯ್ಯನವರು ತಮ್ಮ ಎರಡನೇ ಕಾದಂಬರಿಯಲ್ಲಿ ಈ ಎಲ್ಲ ಪ್ರಯೋಗಗಳನ್ನು ಮಾಡಿರುವುದನ್ನು ನಾವು ಗಮನಿಸಬಹುದು.

ಮೇವಾಡದ ಮಹಾಮಂಡಲಾಧೀಶ್ವರ ರಾಣಾ ಪ್ರತಾಪಸಿಂಹ ಮಹಾಶೂರ. ಆದರೆ ದುರಂತವೆಂದರೆ ದೆಹಲಿಯ ದೊರೆ ಈತನ ಹತ್ತಿರದ ಬಂಧುಗಳನ್ನು ತನ್ನಕಡೆ ಮಾಡಿಕೊಂಡು ಅವರಿಗೆ ಅಧಿಕಾರ, ಹೆಣ್ಣುಗಳ ಅಮಲು ಹತ್ತಿಸಿ ಅವರನ್ನೇ ಪ್ರತಾಪಸಿಂಹನ ವಿರುದ್ಧ ಎತ್ತಿಕಟ್ಟುವ ಸನ್ನಾಹ ಮಾಡುತ್ತಿದ್ದಾನೆ. ವೀರನಾದ ಪ್ರತಾಪಸಿಂಹ ದೆಹಲಿಯ ದೊರೆಯ ಕುತಂತ್ರದಿಂದಾಗಿ ಜರ್ಜರಿತನಾಗಿದ್ದಾನೆ. ಕಾದಂಬರಿಯು ಈ ಪ್ರಸ್ತಾವನೆಯೊಡನೆ ಆರಂಭವಾಗುತ್ತದೆ.

ಈಗಾಗಲೇ ಅಕ್ಬರನ ಅಡಿಯಾಳಾಗಿ ಪರಿವರ್ತನೆ ಹೊಂದಿರುವ ಮಾನಸಿಂಹ ರಾಣಾ ಪ್ರತಾಪನಲ್ಲಿಗೆ ಸಂಬಂಧದ ಹಳೆಯ ಎಳೆಯನ್ನು ಹಿಡಿದುಕೊಂಡು ಬರುತ್ತಾನೆ. ಹೀಗೆ ಬಂದು ಪ್ರತಾಪನನ್ನು ಸೋಲಿಸಬೇಕು ಅನ್ನುವ ಅವನ ಯತ್ನ ಫಲಕಾರಿಯಾಗುವುದರ ಬದಲು ಅವನೇ ಅವಮಾನಿತನಾಗಿ ಹೋಗುತ್ತಾನೆ. ಹಿಂದೆಯೇ ದೆಹಲಿಯ ಸೇನೆ ಪ್ರತಾಪನ ಮೇಲೆ ದಂಡೆತ್ತಿ ಬರುತ್ತದೆ.

ಈ ಯುದ್ಧದಲ್ಲಿ ಪ್ರತಾಪ ಸಂಪೂರ್ಣ ಸೋತು ಇನ್ನೇನು ಮೊಘಲರ ವಶವಾದ ಅನ್ನುವಾಗ ಅವರೆಗೆ ಮೊಘಲರ ಜೊತೆ ಇದ್ದ ರಾಣಾಪ್ರತಾಪನ ಸಹೋದರ ಶಕ್ತಿಸಿಂಹ ಅಣ್ಣನನ್ನು ಕಾಪಾಡುತ್ತಾನೆ. ಮಾತ್ರವಲ್ಲ ಮೊಘಲರ ಪಾಳೆಯವನ್ನು ಬಿಟ್ಟು ಬಂದು ಪ್ರತಾಪನ ಬೆಂಬಲಕ್ಕೆ ನಿಲ್ಲುತ್ತಾನೆ.

ರಾಣಾಪ್ರತಾಪಸಿಂಹ ಇಷ್ಟುಹೊತ್ತಿಗೆ ತನ್ನ ಸೇನಾಬಲವನ್ನು ಕಳೆದುಕೊಂಡಿರುತ್ತಾನೆ. ಮೊಘಲರ ಜೊತೆ ಯುದ್ಧ ಮಾಡುವಂತಹ ಶಕ್ತಿ ಅವನಲ್ಲಿ ಇರುವುದಿಲ್ಲ. ಆತ ಹತಾಶನಾಗಿರುವಾಗ 'ಶಬರಶಂಕರ ವಿಲಾಸ' ಜಾನಪದ ನೃತ್ಯವನ್ನು ಅಭಿನಯಿಸುವ ಭಿಲ್ಲರ ಜನಾಂಗದ ಪರಿಚಯ ಅವನಿಗೆ ಆಗುತ್ತದೆ. ಈ ಗುಡ್ಡಗಾಡು ಜನ ಹಾಡುವ ನೃತ್ಯಗಳನ್ನಲ್ಲದೆ ಯುದ್ಧ ಆಯುಧಗಳ ಬಳಕೆಯಲ್ಲೂ ಪಳಗಿದವರಾಗಿರುತ್ತಾರೆ.

ಪ್ರತಾಪಸಿಂಹ ಈ ಭಿಲ್ಲರರ ಸ್ನೇಹವಿಶ್ವಾಸವನ್ನು ಬೆಳೆಸಿಕೊಳ್ಳುತ್ತಿರಲು ಈಕಡೆ ಇವನ ತಮ್ಮ ಶಕ್ತಿಸಿಂಹ ಭಿಲ್ಲರ ಹೆಣ್ಣು ಬಿಜಲಿಯನ್ನು ಪ್ರೀತಿಸಿ ಮದುವೆಯಾಗುತ್ತಾನೆ. ಅಂತು ಭಿಲ್ಲರ ಸೇನೆಯನ್ನು ಸಿದ್ಧ ಪಡಿಸಿಕೊಂಡ ರಾಣಾಪ್ರತಾಪ ಕೊನೆಗೊಂದು ಬಾರಿಗೆ ದೆಹಲಿಯ ಬಾದಷಹನಿಗೆ ಒಂದು ಓಲೆಯನ್ನು ಬರೆದು -

''ನಿಮ್ಮ ಶೌರ್ಯ ಸಾಹಸಗಳಿಗೆ ಮನಸೋತ ನಾನು ಈ ಶರಣಾಗತಿ ಓಲೆಯನ್ನು ಕಳುಹಿಸಿದ್ದೇನೆ. ಸ್ವೀಕರಿಸಿ''

ಎಂದು ಕೇಳಿಕೊಳ್ಳುತ್ತಾನೆ.

ಈ ಪತ್ರ ದೆಹಲಿಯ ದೊರೆಯ ಬಳಿ ಇದ್ದ ರಜಪೂತರ ಮನಸ್ಸನ್ನು ಅಲ್ಲೋಲಕಲ್ಲೋಲಗೊಳಿಸುತ್ತದೆ. ರಜಪೂತರ ಪಾಲಿಗೆ ಆರದ ದೀಪದಂತಿದ್ದ ರಾಣಾಪ್ರತಾಪನು ಹೀಗಾದನೆ ಎಂದವರು ತಳಮಳಿಸುತ್ತಾರೆ.

ಈ ಕಡೆ ಭಿಲ್ಲರ ಸೇನೆಯೊಡನೆ ಹೊರಟ ಪ್ರತಾಪ ಸುಮಾರು ಮೂವತ್ತೆಂಟು

ಕೋಟೆಗಳನ್ನು ತನ್ನದನ್ನಾಗಿ ಮಾಡಿಕೊಳ್ಳುತ್ತಾನೆ. ಸೋತ ಅವನ ಮೇವಾಡ ಕೂಡ ಅವನದಾಗುತ್ತದೆ. ಶಕ್ತಿಸಿಂಹನ ಹೆಂಡತಿ ಭಿಲ್ಲರ ಬಿಜಲಿಯ ಅಂತ್ಯವಾಗುತ್ತದೆ.

''ಈ ನನ್ನ ತಾಯ್ನೆಲ ಎಂದಿಗೂ ಮೊಘಲರ ವಶವಾಗದಂತೆ ನೋಡಿಕೊಳ್ಳಿ'' ಎಂದು ಹೇಳುತ್ತ ರಾಣಾಪ್ರತಾಸಿಂಹ ಸಾಯುತ್ತಾನೆ.

ಲೇಖಕರು ಕಾದಂಬರಿಯಲ್ಲಿ ಐತಿಹಾಸಿಕ ವಸ್ತುವಿನ ಜೊತೆಗೇನೆ ವಿರಹ, ಪ್ರಣಯ, ಶೃಂಗಾರ, ಯುದ್ಧ, ರಾಜಕೀಯಗಳ ಕುರಿತು ಅಲ್ಲಲ್ಲಿ ಪ್ರಸ್ತಾಪ ಮಾಡುತ್ತಾರೆ. ದೆಹಲಿಯ ದೊರೆಯ ಒಡ್ಡೋಲಗ, ಅದರ ವೈಭವ, ಅಲ್ಲಿಯ ಗಾಯಕರು, ಪಂಡಿತರ ಕುರಿತು ಹಲವು ಪುಟಗಳಲ್ಲಿ ಬಣ್ಣಿಸುತ್ತಾರೆ. ಭಿಲ್ಲರ ಜನಾಂಗದವರ ಮಾತು, ನಡೆ, ಆಚಾರ, ಅವರ ಭಾಷೆ ಸಂಸ್ಕೃತಿ, ಮದುವೆ ಪದ್ಧತಿಗಳ ಬಗ್ಗೆ ಸ್ವಾರಸ್ಯಕರವಾದ ಮಾಹಿತಿ ನೀಡಿದ್ದಾರೆ. ರಜಪೂತರ ವೀರಶೌರ್ಯರ ಜೀವನ, ರಾಣಾನ ಹೆಂಡತಿ ಮಕ್ಕಳ ಕತೆ ಇಲ್ಲಿ ಹಾಸುಹೊಕ್ಕಾಗಿ ಬಂದಿದೆ.

'ಪುರುಷಸಿಂಹ' ರಾಣಾಪ್ರತಾಪನ ಕತೆ. ನಡುವೆ ಶಕ್ತಿಸಿಂಹ ಬಿಜಲಿಯರ ಕತೆಯಾಗಿ ದಾರಿತಪ್ಪಿ ಬಿಡುತ್ತದೆ. ಅವರ ಪ್ರಣಯ, ಭೇಟಿ, ಮಾತುಗಳಿಂದ ಎಲ್ಲೋ ಒಂದು ಕಡೆ ರಾಣಾಪ್ರತಾಪ ಮಸುಕಾಗಿ ಬಿಡುತ್ತಾನೆ. ಆದರೆ ತಟ್ಟನೆ ಎಚ್ಚೆತ್ತ ಲೇಖಕರು ರಾಣಾನಿಗೆ ನ್ಯಾಯ ಒದಗಿಸಿಕೊಡುತ್ತಾರೆ.

ಅಂತ್ಯದಲ್ಲಿ ಶಕ್ತಿಸಿಂಹ ಮತ್ತು ಮೊಘಲರ ದೊರೆ ಸಲೀಮನನ್ನು ಕಂಡು ಮಾತನಾಡಿದ ಪ್ರಸ್ತಾಪ ಬರುತ್ತದೆ. ಅವರ ಸ್ನೇಹಕ್ಕೆ ಮಾತ್ರ ಚ್ಯುತಿ ಬರುವುದಿಲ್ಲ. ಶಕ್ತಿ ಸಿಂಹ ಮುದಿಯಾಗಿ ತೀರ್ಥಕ್ಷೇತ್ರಗಳಿಗೆ ಹೋದನೆಂಬ ಉಲ್ಲೇಖ ಕೂಡ ಅಂತ್ಯದಲ್ಲಿ ಬರುತ್ತದೆ.

ಚರಿತ್ರೆಯ ಪುಟಗಳಲ್ಲಿ ನಾವು ಕೇಳಿದ ರಾಣಾಪ್ರತಾಪನ ಕತೆ ಇಲ್ಲಿ ವಿವರವಾಗಿ ಬಂದಿದೆ. ಅಂದಿನ ಜನ ಜೀವನ ಆಚಾರ ವಿಚಾರಗಳನ್ನು ಚಿತ್ರಿಸುವಲ್ಲಿ ಲೇಖಕರು ಯಶಸ್ವಿಯಾಗಿದ್ದಾರೆ. ಪುಸ್ತಕ ಓದಿ ಬದಿಗಿರಿಸಿದಾಗಲೂ ಮಾವಾಡರ ಸುತ್ತಲ ಆ ಕಾಡು, ಕುದುರೆಗಳ ಖುರಪುಟದ ದನಿ, ಯುದ್ಧ ಕೋಲಾಹಲ ಮನಸ್ಸಿನಲ್ಲಿ ಉಳಿದಿರುತ್ತದೆ. ಹಾಗೆಯೇ ರಾಣಾ, ಶಕ್ತಿ, ಬಿಜಲಿಯರ ವ್ಯಕ್ತಿತ್ವ.

ನೆಲದ ಸೊಗಡು

ತಮ್ಮ ಪ್ರೌಢಶಾಲಾ ದಿನಗಳಿಂದ ಪ್ರಾಧ್ಯಾಪಕರಾಗುವವರೆಗೆ ಮರುಳಯ್ಯನವರು ಬರೆದ ಹನ್ನೆರಡು ಕತೆಗಳ ಸಂಕಲನ ಇದು. ಇವುಗಳಲ್ಲಿ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿ ಎಂದು ಕೂಡಾ ಲೇಖಕರು ಹೇಳಿಕೊಂಡಿದ್ದಾರೆ.

ಸಾಮಾನ್ಯವಾಗಿ ನೆಲದಸೊಗಡು ಅಂದಕೂಡಲೇ ನಮಗೆ ನೆನಪಾಗುವುದು ನಮ್ಮ ನೆಲ, ನಮ್ಮ ದೇಶ, ನಮ್ಮ ಸಂಸ್ಕೃತಿ. ಆದರೆ ಈ ಸಂಕಲನದಲ್ಲಿ ನಮ್ಮ ನೆಲದ ಆಚೆಗೂ ಲೇಖಕರು ಕೈಚಾಚಿದ್ದಾರೆ. ಇಲ್ಲಿ ಹೊರಗಿನಿಂದ ಬಂದ ಅಲೆಕ್ಸಾಂಡರನ ಕತೆ ಇದೆ,

ಸಾಕ್ರಟೀಸ, ಏಸುಕ್ರಿಸ್ತ, ಮಹಮ್ಮದರ ಕತೆಗಳಿವೆ. ಇಲ್ಲಿಯವರೇ ಆದ ಬಸವಣ್ಣನ ಕತೆ ಇದೆ. ಅಂಗುಲಿಮಾಲನ ಕತೆ ಇದೆ. ಇವುಗಳ ಜೊತೆಗೆ ನಮ್ಮ ಮಣ್ಣಿನ ವಾಸನೆ ಬೀರುವ ಕತೆಗಳೂ ಇವೆ.

ಇಂದು ಕತೆ ಅಂದರೇನೆ ಅದು ಮೊದಲ ಓದಿಗೆ ಬಿಚ್ಚಿಕೊಳ್ಳಬಾರದು ಅನ್ನುವಂತಹ ಕಲ್ಪನೆ ಇದೆ. ಕತೆ ಸಾಕಷ್ಟು ಒಡಚಾಗಿರಬೇಕು. ಏನನ್ನೂ ತೆರೆದು ಹೇಳಬಾರದು. ಒಬ್ಬೊಬ್ಬರಿಗೆ ಒಂದೊಂದು ಅರ್ಥಕೊಡಬೇಕು. ಪ್ರತಿ ಓದಿಗೂ ಬೇರೆಯಾಗಿಯೇ ಕಾಣಬೇಕು.... ಹೀಗೆಲ್ಲ ಕತೆಗಳ ಸುತ್ತ ಏನೇನೋ ಸಿದ್ಧಾಂತಗಳನ್ನು ನಾವು ಕಟ್ಟಿಕೊಂಟಿದ್ದೇವೆ. ಇವು ನಿಜವಾಗಿರಲೂಬಹುದು. ಆದರೆ ಸರಳವಾದ ನೇರವಾದ ಒಂದು ಕತೆ ಕೂಡ ಈ ಮೇಲಿನ ಸಿದ್ಧಾಂತಕ್ಕೆ ಒಳಗಾದ ಕತೆಗಳ ಹಾಗೆಯೇ ಓದುಗನನ್ನು ತಟ್ಟುತ್ತದೆ ಮುಟ್ಟುತ್ತದೆ ಅನ್ನುವುದಕ್ಕೆ ಮಾಸ್ತಿಯವರ ಕತೆಗಳು ಯಾವಾಗಲೂ ಉದಾಹರಣೆಗಳಾಗಿ ನಿಲ್ಲುತ್ತವೆ.

ಸಾ.ಶಿ.ಮ.ರು ಮಾಸ್ತಿಯವರ ದಾರಿ ಹಿಡಿದಿದ್ದಾರೆ. ತುಂಬಾ ನುರಿತ ವೈಣಿಕನೋರ್ವ ವೀಣೆಯ ಮೇಲೆ ಬೆರಳನ್ನು ಆಡಿಸುತ್ತ, ಸ್ವರಸ್ಥಳಗಳನ್ನು ಒತ್ತುತ್ತ ವೀಣೆ ಹೊರಡಿಸುವ ನಾದವನ್ನು ಅಲ್ಲಿ ಹಿಡಿದು, ಇಲ್ಲಿ ಬಿಟ್ಟು ಮತ್ತೊಂದು ಕಡೆ ತಿದ್ದಿ ತೀಡಿ ದಿವ್ಯವಾದ ರಾಗವನ್ನು ನುಡಿಸುವಂತೆ ಸಾ.ಶಿ.ಯವರು ಕತೆ ಹೇಳುತ್ತ ಹೋಗುತ್ತಾರೆ.

ಅಲೆಕ್ಸಾಂಡರ ಈ ದೇಶಕ್ಕೆ ಬರುತ್ತಾನೆ. ಹಲವಾರು ಪ್ರದೇಶಗಳನ್ನು ಗೆಲ್ಲುತ್ತಾನೆ. ಆದರೆ ಅವನ ವಿಜಯೋತ್ಸವದ ಬಲೂನು ಈ ದೇಶದಲ್ಲಿಯೇ ಒಡೆದು ಹೋಗುತ್ತದೆ. ಇಲ್ಲಿಯ ಋಷಿಮುನಿಗಳ ಮಾತು ಕೇಳಿ ಆತ ರೋಮಾಂಚನಗೊಳ್ಳುತ್ತಾನೆ. ಅಲೆಕ್ಸಾಂಡರ ಪುರೂರವರ ವ್ಯಕ್ತಿತ್ವಗಳನ್ನು ತುಂಬಾ ಸುಂದರವಾಗಿ ಕಡೆದು ನಿಲ್ಲಿಸಿದ್ದಾರೆ ಕತೆಗಾರರು.

ಅಂತೆಯೇ ಸಾಕ್ರಟೀಸನ ವ್ಯಕ್ತಿತ್ವ, ಅವನನ್ನು ವಿಚಾರಣೆಗೆ ಒಳಪಡಿಸಿ ಮರಣದಂಡನೆಗೆ ಗುರಿಮಾಡಲಾಗುತ್ತದೆ. ಅವನು ಮಾಡಿದ ತಪ್ಪುಗಳನ್ನು ಹುಡುಕಿ ದೊಡ್ಡ ತೀರ್ಪು ಬರೆಯಲಾಗುತ್ತದೆ. ಸಾಕ್ರಟೀಸ ಏನೂ ತಪ್ಪು ಮಾಡಿಲ್ಲ ಎಂಬುದು ಎಲ್ಲರಿಗೂ ಗೊತ್ತಿದೆ. ಅದರೂ ಅವನನ್ನು ಮರಣದಂಡನೆಗೆ ಒಳಪಡಿಸುತ್ತಾರೆ. ಕೈಯಲ್ಲಿರಿಸಿಕೊಂಡ ಮಂಜುಗಡ್ಡೆಯ ಹಾಗೆ ಈ ಕತೆ ತಣ್ಣನೆ ಕೊರೆಯುತ್ತದೆ.

ಕೊನೆಯಲ್ಲಿ ಸಾಕ್ರಟೀಸ ಹೇಳುತ್ತಾನೆ -

''ಓ ನನ್ನ ಪ್ರಿಯ ಬಂಧುಗಳೇ, ಇನ್ನು ನಾವು ನಮ್ಮ ನಮ್ಮ ದಾರಿಗಳಲ್ಲಿ ಹೋಗೋಣ. ಸಾವಿನೆಡೆಗೆ ನಾನು.... ಬದುಕಿನೆಡೆಗೆ ನೀವು....''

ಎಂದು ಆತ ಹೇಳಿದಾಗ ಕತೆಗಾರ -

''ಅವನು ಸತ್ತು ಬದುಕಿದ: ಇವರು ಬದುಕಿ ಸತ್ತರು'' ಎಂಬ ಮಾತಿನೊಡನೆ ಕತೆ ಮುಗಿಸುತ್ತಾರೆ.

ಇವೇ ಮಾತುಗಳನ್ನು ಕ್ರಿಸ್ತ, ಪೈಗಂಬರ, ಬಸವಣ್ಣ, ಅಂಗುಲಿಮಾಲರ ಕತೆಗಳ ಬಗ್ಗೆಯೂ ಹೇಳಬಹುದಾಗಿದೆ.

'ಪೈಗಂಬರರ ಕೊನೆಯ ದಿನಗಳು' ಅಪಾರ್ಥಕ್ಕೆ ಎಡೆಮಾಡಿಕೊಟ್ಟಿರುವ ಹಲವು ಮುಸ್ಲಿಂ ನಂಬಿಕೆಗಳ ಮೇಲೆ ಬೆಳಕು ಚೆಲ್ಲುತ್ತ ಪೈಗಂಬರರ ಹಿರಿಮೆಯನ್ನು ಬಿಂಬಿಸುತ್ತದೆ.

ಈ ಸಂಕಲನಕ್ಕೆ ಹೆಸರು ತಂದುಕೊಟ್ಟಿರುವ ಕತೆ ವೈರಿಗಳ ಕೈಗೆ ಸಿಲುಕಿ ಇನ್ನೇನು ಮರಣ ದಂಡನೆಯನ್ನು ಎದುರಿಸಲಿರುವ ಓರ್ವ ವೀರ ಯೋಧನ ಕತೆ. ಅವನ ವಧೆಗೆ ಒಂದೆಡೆಯಲ್ಲಿ ಸಿದ್ಧತೆಯಾಗುತ್ತಿದೆ. ಇವನೂ ತನ್ನ ಮರಣವನ್ನು ಎದುರಿಸಲು ಸಿದ್ಧನಾಗುತ್ತಿದ್ದಾನೆ. ಈ ನಡುವೆ ಇವನ ಸಮಗ್ರ ಬದುಕು ಇವನ ಮನಸ್ಸಿನಲ್ಲಿ ಹಾದು ಹೋಗುತ್ತದೆ. ತನಗಿಂತ ಮೊದಲು ಮರಣವನ್ನಪ್ಪಿದ ತನ್ನ ಸಂಗಾತಿ, ತನ್ನ ಊರು, ಅಲ್ಲಿಯ ತೆಂಗು, ಸೂರ್ಯೋದಯ, ತನ್ನ ಮನೆ, ಇವೆಲ್ಲ ಎಷ್ಟೊಂದು ಸುಂದರವಾಗಿತ್ತು ಎಂದು ಓದುಗ ಕೂಡ ವ್ಯೆಮರೆತಾಗ, ಗುಂಡು ಹಾರುತ್ತದೆ. · ಯೋಧ ಮರುಳುಗಾಡಿನಲ್ಲಿ ಮರಣವನ್ನಪ್ಪಿರುತ್ತಾನೆ.

'ಆವಾವ ಪರಿಯಲ್ಲಿ ಕಾಡಿತ್ತು ಮಾಯೆ' ಗಂಡುಹೆಣ್ಣಿನ ಸಹಜ ಆಕರ್ಷಣೆ ಅಂತ್ಯದಲ್ಲಿ ಬೇರೊಂದು ತಿರುವು ಕಂಡು ಗಂಡಿನ ಸುಸಂಸ್ಕೃತ ವ್ಯಕ್ತಿತ್ವವನ್ನು ಮರೆಸಿದರೆ, 'ಗ್ರಾಮಗಾಂಧಿ' ಉತ್ತಮನೋರ್ವನ ಸಾವಿಗೆ ಕಾರಣವಾಗುವ ದುರಂತವನ್ನು ತಿಳಿಸಿಕೊಡುತ್ತದೆ. 'ಬಾಗೇಶ್ರೀ', 'ಅಮ್ಮ......ಓತೀನಿ' ಕತೆಗಳು ಕೂಡ ಚೆನ್ನಾಗಿವೆ.

ಮರುಳಯ್ಯನವರು ಕತೆಗಳನ್ನು ಜಾಣ್ಮೆಯಿಂದ, ಕಲಾತ್ಮಕತೆಯಿಂದ ಹೆಣೆಯುತ್ತಾರೆ. ಕಾವ್ಯಮಯವಾದ ಅವರ ಭಾಷೆ ಇಲ್ಲಿಯ ಕತೆಗಳಿಗೆ ಪೂರಕವಾಗಿದೆ. ಒಂದೇ ವಾಕ್ಯದಲ್ಲಿ ಇಡೀ ಕತೆಯ ದಿಕ್ಕನ್ನು ತೋರಿಸಿಬಿಡುತ್ತಾರೆ.

'ಗ್ರಾಮಗಾಂಧಿ' ಕತೆಯ ಈರನ ಗುಣ ಪ್ರಭಾವದ ಬಗ್ಗೆ ಬರೆಯುತ್ತ ''.... ಈರ ಹುಟ್ಟಿ, ಹುಟ್ಟಿದ ಊರಿನಲ್ಲಿ ಕೇಡು ಹುಟ್ಟಿತು'' ಅನ್ನುತ್ತಾರೆ. ''ನೆಲದ ಸೊಗಡು''ಕತೆಯಲ್ಲಿ ಮರುಭೂಮಿಯನ್ನು ಬಣ್ಣಿಸುತ್ತ, ಅದು ಮರಳುಗಾಡಲ್ಲ ಸುಡುಗಾಡಿದ್ದಿರಬೇಕು. ಶಬ್ದ ಸತ್ತಿತ್ತು. ಅಲ್ಲಿ, ಪಾಪ, ಅದರ ಗದ್ದಲವೇ ಇಲ್ಲ' ಎಂದು ಮರುಭೂಮಿಯ ಭೀಕರ ಏಕಾಂತತೆಯನ್ನು ಬಣ್ಣಿಸುತ್ತಾರೆ.

ಕ್ರಾಂತಿ, ಬಂಡಾಯ ಇತ್ಯಾದಿ ಶಬ್ದ ಬಳಸದೇನೆ ಹೃದಯಕ್ಕೆ ಲಗ್ಗೆ ಇಡುವ ಕೆಲಸವನ್ನು ಕತೆಗಳ ಮೂಲಕ ಮರುಳಯ್ಯ ಮಾಡಿದ್ದಾರೆ. ಒಂದು ಕಾಲದಲ್ಲಿ ಒಳ್ಳೆಯ ಕತೆಗಾರರೆಂದು ಪ್ರಖ್ಯಾತರಾದ ಇವರು ಈಗ ಏಕೆ ಕತೆಗಳನ್ನು ಬರೆಯುತ್ತಿಲ್ಲ ಅನ್ನುವುದೇ ನನ್ನ ತಕರಾರು.

ಸಾ.ಶಿ.ಮ. ಅವರ ಮೂರು ಕೃತಿಗಳು

ಡಾ. ಪಿ.ವಿ. ನಾರಾಯಣ

ನನಗೆ ಸಮೀಕ್ಷಿಸಲು ಬಂದಿರುವ ಮೂರು ಕೃತಿಗಳೆಂದರೆ 'ವಿಭೂತಿ ಪುರುಷರು', 'ಅಪರೂಪದವರು' ಮತ್ತು 'ಭಾರತೀಯ ಜ್ಞಾನಪೀಠ ವಿಜೇತ ಕನ್ನಡಿಗರು' ಎಂಬವು. ''ಮನುಕುಲಕ್ಕೆ ಬೆಳಕು ಕೊಟ್ಟ ಜ್ಯೋತಿಗಳು... ನಿತ್ಯ ನಂದಾದೀವಿಗೆಗಳು. ಆ ದೀವಿಗೆಗಳನ್ನು'' ಪರಿಚಯ ಮಾಡಿಕೊಡುವ ಕಥಾನಕಗಳನ್ನೊಳಗೊಂಡವು ಮೊದಲೆರಡು ಕೃತಿಗಳು. 'ವಿಭೂತಿ ಪುರುಷರು' ಐದು ಮಂದಿಯನ್ನು ಕಥನರೂಪದಲ್ಲಿ ಪರಿಚಯಿಸಿದರೆ, 'ಅಪರೂಪದವರು' ಮೂವರ ವ್ಯಕ್ತಿ ಕಥಾನಕಗಳನ್ನು ಹೊಂದಿದೆ. ಎಂದರೆ ಈ ಎರಡು ಕೃತಿಗಳಲ್ಲಿ ಒಟ್ಟಾರೆ ಎಂಟು ಶ್ರೇಷ್ಠ ಚೇತನಗಳನ್ನು ಪರಿಚಯಿಸಿಕೊಡಲಾಗಿದೆ. ಇವರಲ್ಲಿ ಕೆಲವರು ಕನ್ನಡ ನಾಡಿನವರಾದರೆ, ಕೆಲವರು ಭಾರತಕ್ಕೆ ಸೇರಿದವರು; ಮತ್ತೆ ಕೆಲವರು ವಿಶ್ವಚೇತನರು. ಮೂರನೆಯ ಕೃತಿ ಹೆಸರೇ ಸೂಚಿಸುವಂತೆ, ಜ್ಞಾನಪೀಠ ಪ್ರಶಸ್ತಿ ಪಡೆದ ಮೂವರು ಕನ್ನಡಿಗ ಸಾಹಿತಿಗಳನ್ನು ಪರಿಚಯಿಸುತ್ತದೆ. ಈ ಪುಸ್ತಕವು ೧೯೮೦ರಲ್ಲಿ ಪ್ರಕಟವಾದ್ದರಿಂದ, ಆ ಹೊತ್ತಿಗೆ ಕನ್ನಡಕ್ಕೆ ಆ ಪ್ರಶಸ್ತಿಯನ್ನು ತಂದುಕೊಟ್ಟ ಕುವೆಂಪು, ಕಾರಂತ ಹಾಗೂ ಮಾಸ್ತಿ - ಇವರ ಸಾಹಿತ್ಯದ ಸಾಧನೆಯನ್ನು ಕುರಿತು ಮುಖ್ಯವಾಗಿ ಹೇಳುತ್ತದೆ.

'ವಿಭೂತಿ ಪುರುಷರು' ಬುದ್ಧ, ಸಾಕ್ರಟೀಸ್, ಯೇಸು, ಬಸವ ಮತ್ತು ಗಾಂಧಿಯವರನ್ನು ಕುರಿತಿದೆ. ಗೌತಮನು ಬುದ್ಧನಾಗಿ ವಿಕಾಸವಾದ ಚಿತ್ರಣವು ಮೊದಲನೆಯ ಕಥನದ ವಸ್ತು. ತನ್ನ ದಾಯಾದಿ ದೇವದತ್ತನೊಡನೆ, ಗೌತಮನು ಬೇಟೆಗೊಳಗಾದ ಹಂಸವೊಂದರ ಪ್ರಾಣದ ಬಗ್ಗೆ, ಒಳಗಾದ ವಿವಾದ; ತಂಗಿ ವಾಸಂತಿಯ ಸಾವಿನ ಹಾಗೂ ತನ್ನ ಮಗ ರಾಹುಲನ ಜನನ ಇವುಗಳ ಹಿನ್ನೆಲೆಯಲ್ಲಿ ಗೌತಮನ ಮನಸ್ಸಿನಲ್ಲಿ ಸಾವು-ಹುಟ್ಟುಗಳ ಬಗ್ಗೆ ಜಿಜ್ಞಾಸೆ; ಸತ್ಯಸಾಕ್ಷಾತ್ಕಾರಕ್ಕಾಗಿ ಕಾಡಿಗೆ ಹೋಗಲು ನಿರ್ಧಾರ; ಹೊರಡುವವರೆಗೆ ತನ್ನದೇ ಮನಸ್ಸಿನ ಎರಡು ಭಾಗಗಳಾದ ಗೌತಮ-ಸಿದ್ಧಾರ್ಥರ ನಡುವೆ ನಡೆಯುವ ತುಮುಲ; ಚೆನ್ನನ ಕೋರಿಕೆಯನ್ನು ಮೀರಿ ಕಾಡಿನಲ್ಲಿರಲು ಗೌತಮನ ನಿರ್ಣಯ; ಆಹಾರ ತ್ಯಜಿಸಿ ಶಕ್ತಿಹೀನನಾಗಿದ್ದ ಗೌತಮನಿಗೆ ಸುಜಾತಳು ನೀಡಿದ ಆಹಾರದಿಂದ ಚೈತನ್ಯವುಂಟಾಗಿ ದೇಹದ ಪ್ರಾಮುಖ್ಯದ ಅರಿವುಂಟಾದದ್ದು; ಬುದ್ಧನಾಗಿ ಕಪಿಲವಸ್ತುವಿಗೆ ಮರಳಿ ಯಶೋಧರೆಗೆ ಪ್ರವ್ರಜ್ಯೆ ನೀಡಿದ್ದು; ಗೌತಮನಿಂದ ಅಪಮಾನಿತನಾಗಿದ್ದ ದೇವದತ್ತ ಈ ಮಧ್ಯೆ ಮಗಧರಾಜನಾದ ಬಿಂಬಸಾರನ ಮಗ ಅಜಾತಶತ್ರುವಿನ ವೇಶ್ಯೆ ಅಂಬಾಪಾಲಿಗೆ ನಾಟ್ಯ ಕಲಿಸಿ ರಾಜನ ಅಭಿಮಾನ ಗಳಿಸಿ ಅವನ ಮನಸ್ಸು ಬುದ್ಧವಿರೋಧಿಯಾಗುವಂತೆ ಪ್ರಚೋದಿಸಿದ್ದು; ಆದರೆ ರಾಜ್ಯಕ್ಕಾಗಿ ತಂದೆಯನ್ನು ಸೆರೆಯಲ್ಲಿರಿಸಿದ್ದ ಅಜಾತಶತ್ರು ಮನಃಪರಿವರ್ತನೆ ಹೊಂದಿ ತಂದೆಯನ್ನು ಬಿಡುಗಡೆ ಮಾಡಿ ಬುದ್ಧನ ಶಿಷ್ಯನಾದದ್ದು; ದೇವದತ್ತನ ಪ್ರಚೋದನೆಯಿಂದ ಚುಂದನೆಂಬುವನು ಬುದ್ಧನಿಗೆ ಸೂಕರ ಮದ್ದವವೆಂಬ ಮದ್ದು ಹಾಕಿದ್ದು; ಈ

ಕಾರಣದಿಂದಾಗಿಯೇ ಆದ ಬುದ್ಧನ ಪರಿನಿರ್ವಾಣ - ಇವುಗಳನ್ನು ಆಧರಿಸಿ ಈ ಕಥಾನಕದಲ್ಲಿ ಬುದ್ಧಚರಿತೆಯು ಅರಳಿದೆ.

ಮೂಲವಸ್ತುವನ್ನು ಹೆಚ್ಚು ಬದಲಾವಣೆಗೊಳಿಸದೆ ಬುದ್ಧನ ಕತೆಯನ್ನು ಲೇಖಕರು ಪುನರ್‌ನಿರೂಪಣೆ ಮಾಡುತ್ತಾರೆ. ಚಿಕ್ಕಚಿಕ್ಕ ಅಧ್ಯಾಯಗಳಲ್ಲಿ ಪ್ರಸಂಗಗಳು ತೆರೆದುಕೊಳ್ಳುತ್ತವೆ. ಅಂಗುಲೀಮಾಲನನ್ನು ಎದುರಿಸಿ ತನ್ನ ವ್ಯಕ್ತಿತ್ವದ ವರ್ಚಸ್ಸಿನಿಂದ ಅವನನ್ನು ಬದಲುಗೊಳಿಸುವ ಪ್ರಸಂಗದಿಂದ ಕಥಾನಕವು ಪ್ರಾರಂಭವಾಗಿ flash back ತಂತ್ರದಲ್ಲಿ ಮುಂದುವರೆಯುತ್ತದೆ. ಕೆಲವು ಕಡೆಗಳಲ್ಲಿ ಪ್ರಸಂಗಗಳು ವಿಸ್ತಾರಗೊಂಡಿವೆ. ಭಾವುಕ ಶೈಲಿಯಿಂದ ಸಾಗುವ ನಿರೂಪಣೆಯು ಸಾಮಾನ್ಯ ಓದುಗನನ್ನು ಆಕರ್ಷಿಸುತ್ತದೆ. ''ಶಾಂತಿ ಮಂತ್ರವ ಪಠಿಸಿ...'ನಾ ನಿಂತೆ' ಸರ್ವರೆದೆ ಮಂದಿರದಿ; ದಂಡಪಿಳಿಸದ ನೀನು ನೆಲೆಯ ಕಾಣೆಯೊ ತಮ್ಮ'' ಎಂಬಂತಹ ಮಾತುಗಳು ಓದುಗನನ್ನು ಸೆಳೆಯುತ್ತವೆ. ಸಾಶಿಮ ಅವರು ಹಲವೆಡೆ ಹೀಗೆ ಮಾತನಾಡಿ ಹೃದಯ ಗೆಲ್ಲುತ್ತಾರೆ.

ಸಾಕ್ರಟೀಸನ ಬಗೆಗಿನ ಕಥನವು ಸಾಶಿಮ ಅವರಿಗೆ ಅಪರೂಪವೆನಿಸುವ ನಿರುದ್ವಿಗ್ನ ನಿರೂಪಣೆಯಿಂದ ಕೂಡಿದೆ. ಇಲ್ಲಿಯೂ ಈಗಾಗಲೇ ತಿಳಿದ ವಿಷಯಗಳನ್ನು ತಮ್ಮ ರೀತಿಯಲ್ಲಿ ಕಥನವನ್ನಾಗಿಸುವ ಬಗೆಯನ್ನೇ ಅನುಸರಿಸಲಾಗಿದೆ. ಒಂದೆರಡು ಸಣ್ಣ ಬದಲಾವಣೆಗಳೂ ಇವೆ. ಉದಾಹರಣೆಗೆ, ಸಾಕ್ರಟೀಸನ ಹೆಂಡತಿ ಜಾಂತಪೆ ಗಯ್ಯಾಳಿ ಹೆಂಗಸೆಂಬ ಕಲ್ಪನೆಯನ್ನು ಬದಲಾಯಿಸಿ ಅವಳನ್ನು ಅನುಕೂಲಪತ್ನಿಯೆಂದು ಚಿತ್ರಿಸಿರುವುದು. ಸಾಕ್ರಟೀಸನ ಜೀವನ ವಿವರ ನಮಗೆ ತಿಳಿದಿರುವುದು ಜನಜನಿತ ಐತಿಹ್ಯಗಳಿಂದ; ಅವನ ತರ್ಕರೀತಿಯ ಗೊತ್ತಾಗುವುದು ಪ್ಲೇಟೋ ಬರೆದ ಸಂಭಾಷಣೆಗಳಿಂದ. ಅವನ ಬಗ್ಗೆ ಇರುವ ಐತಿಹ್ಯಗಳಲ್ಲಿ ಮುಖ್ಯವಾದುದು ಅವನು ಸೂಫಿಸ್ಟ್, ಅವನಿಗೂ ಅರಿಸ್ಟೋಫೆನೀಸನಿಗೂ ಭಿನ್ನಾಭಿಪ್ರಾಯವಿತ್ತು ಎಂಬುದು. ಅದನ್ನು ಲೇಖಕರು ವಿಸ್ತಾರವಾಗಿ ಇಲ್ಲಿ ನಿರೂಪಿಸುತ್ತಾರೆ. ಅರಿಸ್ಟೋಫೇನೀಸ್‌ನ 'ಮೋಡಗಳು' ನಾಟಕದಲ್ಲಿ ಸಾಕ್ರಟೀಸನನ್ನು ಕುಟಿಲತನ, ಬೌದ್ಧಿಕಭ್ರಷ್ಟತೆಯ ವ್ಯಕ್ತಿಯೆಂದು ಚಿತ್ರಿಸಲಾಗಿದೆ. ಅದರಿಂದಲೇ ಮುಂದೆ ಅವನ ಮೇಲೆ ಯುವಕರನ್ನು ತನ್ನ ವಿಚಿತ್ರ ವಾದದಿಂದ ಭ್ರಷ್ಟಗೊಳಿಸುವವನೆಂದು ಆರೋಪ ಹೊರಿಸಲು ಕಾರಣವಾಯಿತು ಎಂದು ಕೆಲವರು ಹೇಳಿದರೂ, ಅರಿಸ್ಟೋಫೆನೀಸ್ ಅವನನ್ನು ತನ್ನ ನಾಟಕದ ಪಾತ್ರವಾಗಿ ಆರಿಸಿಕೊಳ್ಳಲು ಕಾರಣ ಅವನ ಜನಪ್ರಿಯತೆಯೇ ಹೊರತು ಭಿನ್ನಾಭಿಪ್ರಾಯವಲ್ಲ ಎಂದೂ, ಆ ನಾಟಕವನ್ನು ಸಾಕ್ರಟೀಸ್ ನೋಡಿ ಅದರ ವೈನೋದಿಕತೆಗೆ ಮಾರು ಹೋಗಿದ್ದನೆಂದೂ ವಾದಿಸುವವರಿದ್ದಾರೆ. ಪ್ಲೇಟೋನ 'ಸಿಂಪೋಸಿಯುಮ್'ನಲ್ಲಿ ಅವರಿಬ್ಬರೂ ಗೆಳೆಯರೆಂದು ಚಿತ್ರಿತವಾಗಿದೆ. ಸಾಶಿಮ ಮೊದಲ ವಾದವನ್ನು ತಮ್ಮ ನಿರೂಪಣೆಯನ್ನು ನಾಟಕೀಯಗೊಳಿಸಲು ಬಳಸಿಕೊಳ್ಳುತ್ತಾರೆ. ಸಾಕ್ರಟೀಸನ ಶಿಷ್ಯ ಕ್ರೀಟೋ ಅವನನ್ನು ಸೆರೆಯಿಂದ ಗುಪ್ತವಾಗಿ ಬಿಡುಗಡೆಗೊಳಿಸಲು ಯತ್ನಿಸಿದಾಗ ಸಾಕ್ರಟೀಸ್ ಅದನ್ನು ನಿರಾಕರಿಸುತ್ತಾನೆಂದು ಚಿತ್ರಿಸಿರುವುದು, ಅವನ ವ್ಯಕ್ತಿತ್ವಕ್ಕೆ ಶೋಭೆ ನೀಡಲು ಸಹಕಾರಿಯಾಗುತ್ತದೆ. ಇದು ಅವನ ಮಾನಸಿಕ ಸ್ಥೈರ್ಯಕ್ಕೆ ಸಂಕೇತವೂ ಆಗಿದೆ.

ಅವನ ದುರಂತ ಎಲ್ಲ ಕಾಲದಲ್ಲಿಯಂತೆ ಆ ಕಾಲದಲ್ಲೂ ಸಂಪ್ರದಾಯವನ್ನು ವಿರೋಧಿಸುವವರನ್ನು ಸಮಾಜ ಹೇಗೆ ಕ್ರೂರವಾಗಿ ನಡೆಸಿಕೊಂಡಿತು ಎಂಬುದಕ್ಕೆ ಸಾಕ್ಷಿಯಾಗುತ್ತದೆ; ಇಂಥವು ನಿಲ್ಲಬೇಕಾದರೆ ಮನುಷ್ಯ ಉದಾತ್ತನಾಗಬೇಕಾದ ಆವಶ್ಯಕತೆಯನ್ನು ಎತ್ತಿಹಿಡಿಯುತ್ತದೆ. ಏನಾದರಾಗಲೀ, ಸಾಕ್ರಟೀಸನ ಬಗೆಗಿನ ಆತ್ಮೀಯ ಚಿತ್ರಣ ಇಲ್ಲಿದೆ.

ಯೇಸುಕ್ರಿಸ್ತನದೂ ಇಂತಹ ಘೋರ ದುರಂತವೇ. ಈತನ ಕಥಾನಕವು ಜನಗಣತಿ ಕಾರಣದಿಂದ ತಮ್ಮ ತಮ್ಮ ಊರಿಗೆ ಮರಳುವವರ ಪ್ರಯಾಣ ಚಿತ್ರಣದಿಂದ ಆರಂಭಗೊಳ್ಳುತ್ತದೆ. ಅಲ್ಲಿಯೇ ಸಾಮಾನ್ಯ ಜನರ ಬದುಕಿನ ದುಃಖಸುಖಗಳ ಪರಿಚಯವಾಗುತ್ತದೆ. ಹಾಗೆಯೇ ಎಲ್ಲ ಕಾಲದಲ್ಲಿಯಂತೆ ಆ ಕಾಲದ ರೋಮನ್ ಸೈನಿಕರ ಕ್ರೂರಕೃತ್ಯಗಳ ದೃಶ್ಯವಿದೆ. ಇವೆಲ್ಲ ಇಲ್ಲಿ ಹೃದ್ಯವಾಗಿ ಮೂಡಿಬಂದಿದೆ. ಸಾಶಿಮ, ಯಥಾಪ್ರಕಾರ ಜನಜನಿತ ಘಟನೆಗಳ ಹಂದರದ ಮೇಲೆ ತಮ್ಮ ಕಥೆಯನ್ನು ಹರಿಯಬಿಡುತ್ತಾರೆ. ಯೇಸುವಿನ ತಾಯಿ ಮೇರಿ ಗರ್ಭಿಣಿಯಾಗಿರುವಾಗ ಕಾಣುವ ಕನಸು (ಗೇಬ್ರಿಯಲ್ ಅವಳ ಬಸಿರಲ್ಲಿರುವುದು ದಿವ್ಯಪುರುಷನೊಬ್ಬನ ಜೀವ ಎನ್ನುವುದು) ಎಲ್ಲ ಮತಧರ್ಮಗಳ ಪುರಾಣಕ್ಕೆ ಅನುಗುಣವಾಗಿಯೇ ಇದೆ. ಗೆಲಿಲೀ ರಾಷ್ಟ್ರದ ಉಪನಾಯಕ ಹೆರೋದ್ ತಾನೇ ಸೀಸರನ ಉತ್ತರಾಧಿಕಾರಿಯೆಂದು ತಿಳಿದು ಅದಕ್ಕೆ ಅಡ್ಡಿ ಬರಬಹುದಾದ ಎಳೆಯರನ್ನೆಲ್ಲ ಬಲಿತೆಗೆದುಕೊಳ್ಳುವುದು ಕಂಸನ ಪ್ರಕರಣವನ್ನು ನೆನಪಿಸುತ್ತದೆ. Sermon on the Mount ಪ್ರಕರಣದಲ್ಲಿ ಯೇಸುವಿನ ಪ್ರಸಿದ್ಧ ಬೋಧನೆಯೆಲ್ಲ ವಿವರವಾಗಿ ಮೂಡಿಬಂದಿದೆ. ಕಥನದಲ್ಲಿ ಇದು ಹೆಚ್ಚಾಯಿತು ಎನಿಸಿದರೂ ಲೇಖಕರು ಅದನ್ನು ತರಬೇಕೆಂದು ಛಲಹೊತ್ತಿದ್ದರಿಂದ ಸಮಗ್ರವಾಗಿ ಬಂದಿದೆ. ''ತಿರೆಯರಸಿ ಮುಗಿಲೆರೆಯನಿಗೆ ಒಲವೆರೆದ ಸಮಯ'' ಎಂಬಂತಹ ಆಕರ್ಷಕ ಮಾತುಗಳನ್ನು ಸಾಶಿಮ ಬರೆಯಬಲ್ಲರು. ಹಾಗೆಯೇ ''ಬುವಿ ಬಾನ ತುಂಬುವ....'' ಎಂದು ಮೊದಲಾಗುವ ಹಾಡು ಚೆನ್ನಾಗಿದೆ. ಮಗ್ದಲದ ಮರಿಯಳ ಕತೆ ಕರುಣಾಜನಕವೂ ಬೋಧಪ್ರದವೂ ಆಗಿದೆ. ಆದರೆ ಸಿಲುಬೆಗೇರಿಸಲ್ಪಟ್ಟ ಯೇಸು ಕಣ್ಣನ್ನು ನಸು ಮುಚ್ಚಿದಾಗ ತಾಯಿ ಮೇರಿ ಆಡುವ ಮಾತುಗಳು ಅತಿ ದೀರ್ಘವೆನಿಸಿ ಸಂದರ್ಭದ ಮೊನಚನ್ನು ಕಡಿಮೆಗೊಳಿಸುತ್ತದೆನ್ನಿಸುತ್ತದೆ. ಒಟ್ಟಾರೆಯಾಗಿ ಸಾಶಿಮ ಅವರದು ಹೆಚ್ಚು ಮಾತಾಳಿಯಾದ ಶೈಲಿ ಎಂಬ ಅಭಿಪ್ರಾಯ ಮೂಡುವುದು ಸಹಜ.

ಬಸವಣ್ಣನ ಬಗೆಗಿನ ಕಥನವು ಆತನು ಕಾರ್ಯರಂಗಕ್ಕೆ ಬರುವ ಕಾಲದಲ್ಲಿದ್ದ ಸಮಾಜವನ್ನು ಪಾಳುಬಿದ್ದ ಮನೆಗೆ ಹೋಲಿಸಿ ಮಾಡುವ ಸಹಜ ವರ್ಣನೆಯಿಂದ ಪ್ರಾರಂಭವಾಗುತ್ತದೆ. ಇದು ಬಸವಣ್ಣನದೇ ''ಮನೆಯೊಳಗೆ ಮನೆಯೊಡೆಯನಿದ್ದಾನೋ ಇಲ್ಲವೋ'' ಎಂಬ ವಚನವನ್ನು ನೆನಪಿಸುತ್ತದೆ. ವಿವಿಧ ಪುರಾಣಗಳಲ್ಲಿ ಚಿತ್ರಿತವಾದ ಬಸವ ಗಾಥೆಯನ್ನು ಆಧರಿಸಿಯೇ ಇಲ್ಲಿನ ಕಥನವೂ ಮುಂದುವರೆಯುತ್ತದೆ. ಕೊಂಡೆಯ ಮಂಚಣ್ಣನನ್ನು ಇಲ್ಲಿ ಬಸವನ ವಿರುದ್ಧದ ಖಳನಾಯಕನೆಂಬಂತೆ ಬಣ್ಣಿಸಲಾಗಿದೆ. ಪ್ರತಿ ಹಂತದಲ್ಲೂ ಬಸವಣ್ಣನ ಬಗ್ಗೆ ಈರ್ಷೆಯಿಂದ ಪ್ರತಿಕ್ರಿಯಿಸುವ ಮಂಚಣ್ಣ ಮಹಾ

ಮಹಾತ್ವಾಕಾಂಕ್ಷಿ. ಅವನು ಈ ಕಾರಣದಿಂದ ಜಗದೇವ-ಮಲ್ಲಿಬೊಮ್ಮರೆಂಬುವರನ್ನು ಬಿಜ್ಜಳನ ಕೊಲೆಗೆ ಸಜ್ಜುಗೊಳಿಸುತ್ತಾನೆ. ಅವರು ಕೊಲೆ ಮಾಡುತ್ತಾರೆ, ಆದರೆ ಇವನ ಕುತಂತ್ರದಿಂದ ರೊಚ್ಚಿಗೆದ್ದು ಇವನನ್ನೂ ಕೊಲ್ಲುತ್ತಾರೆ, ತಾವೂ ಇರಿದುಕೊಳ್ಳುತ್ತಾರೆ. ತನ್ನ ಸುಧಾರಕ ಕಾರ್ಯವು ವಿಫಲಗೊಂಡು ಬೇಸತ್ತ ಬಸವಣ್ಣನ ಅಂತ್ಯವು ಮನಮುಟ್ಟುವಂತಿದೆ. ಆತ ಕೃಷ್ಣ-ಮಲಪ್ರಭೆಯರ ಸಂಗಮದ ಪ್ರವಾಹದೊಳಗೆ ಪ್ರವೇಶಿಸಿಬಿಡುತ್ತಾನೆ. ಸಾಂಪ್ರದಾಯಿಕ ರೂಪಕಗಳಿಂದ ಇಡಿಕಿರಿದ, ಧಾರೆ ಧಾರೆಯಾದ ಮಾತುಗಳಿಂದ ಕೂಡಿದ, ಶೈಲಿಯಲ್ಲಿ ಸಾಶಿಮ ಕತೆ ಹೇಳುತ್ತಾರೆ. ಬಸವಣ್ಣನನ್ನು ಬಿಜ್ಜಳನ ಮಹಾಮಂತ್ರಿಯೆಂಬಂತೆ ಇಲ್ಲಿ ಕಲ್ಪಿಸಿಕೊಳ್ಳಲಾಗಿದೆ. ಅನುಭವ ಮಂಟಪವು ಒಂದು ವಾಸ್ತವ ಸಂಸ್ಥೆಯೆಂಬಂತೆ, ಶೂನ್ಯ ಸಿಂಹಾಸನ ಒಂದು ಪೀಠವೆಂಬಂತೆ ಮತ್ತು ಅಲ್ಲಮ ಅದರ ಮೇಲೆ ಕೂತಂತೆಯೂ ವರ್ಣಿಸಲಾಗಿದೆ. ಲೇಖಕರ ಭಾಷಣದಂತೆಯೇ ಇಲ್ಲಿನ ಕಥನವೂ ಓತಪ್ರೋತ ಮಾತುಗಾರಿಕೆಯದು.

''ವಿಭೂತಿ ಪುರುಷರು'' ಕೃತಿಯ ಕೊನೆಯ ಕಥನಲೇಖನವು ಗಾಂಧಿಯನ್ನು ಕುರಿತದ್ದು. 'ಹರಿಜನ' ಪತ್ರಿಕೆಯ ಲೇಖನಗಳು, ಕೆಲವು ಲೇಖಕರು ಗಾಂಧೀಜಿಯ ಬಗ್ಗೆ ಬರೆದ ಬರಹಗಳು ಇವುಗಳಿಂದ ಉದ್ಧೃತಗೊಳಿಸುತ್ತ ಸಾಗುವ ಇಲ್ಲಿನ ಕಥನಕ್ರಮವು ಇದರಿಂದಾಗಿ ಅಧಿಕಾರಯುತ ಮಾಹಿತಿಯಂತೆ ಕಾಣುತ್ತದೆ. ಗಾಂಧೀಜಿಯ ಬಾಲ್ಯದ ಪ್ರಸಂಗಗಳು ಅವರ ಆತ್ಮಚರಿತ್ರೆಯಲ್ಲಿಯೇ ಕಾಣುವ ಕೆಲವು ಪ್ರಸಂಗಗಳಿಂದ ಕೂಡಿ ಚಿತ್ರಿತವಾಗಿದೆ. ಅವರು ದಕ್ಷಿಣ ಆಫ್ರಿಕಾದಲ್ಲಿ ಎದುರಿಸಿದ ಅವಮಾನದ ಪ್ರಸಂಗಗಳು ಕಸ್ತೂರ ಬಾ ಅವರೊಡನೆ ಹೊಂದಿದ್ದ ಸಂಬಂಧದ ಸ್ವರೂಪ ಇವೆಲ್ಲವೂ ಬೇರೆಡೆಯೂ ಕಾಣುವಂಥವೇ. ಸಾಮಾನ್ಯವಾಗಿ ಗಾಂಧಿಜಿಯ ಬಗ್ಗೆ ತಿಳಿದಿರುವ ಪ್ರಸಂಗಗಳನ್ನು ಕಾಲಾನುಕ್ರಮದಲ್ಲಿ ತಮ್ಮ ಸ್ವಂತ ಮಾತುಗಳಲ್ಲಿ ನಿರೂಪಿಸಿ, ಗಾಂಧಿ ಹುತಾತ್ಮರಾಗುವವರೆಗಿನ ಜೀವನಚಿತ್ರವು ಇಲ್ಲಿ ಬಿತ್ತರಗೊಂಡಿದೆ.

'ಅಪರೂಪದವರು' ಇಂಥವೇ ಮತ್ತೆ ಮೂರು ಕಥನಗಳನ್ನು ಒಳಗೊಂಡಿವೆ. 'ವಜೀರ್-ಎ-ಅಜಮ್' ಬೀದರ್ ಬಾದಶಹ ಅಲ್ಲಾವುದ್ದೀನನ ಮಹಾಪ್ರಧಾನಿ ಮಹಮೂದ್ ಗಾವಾನ್‌ರ ದುರಂತ ಕತೆಯನ್ನು ನಲವತ್ತು ಪುಟಗಳಲ್ಲಿ ಕಟ್ಟಿಕೊಡುತ್ತದೆ. ಗಾವಾನ್ ಪರ್ಷಿಯಾದಿಂದ ಬಂದು ತನ್ನ ವಿದ್ವತ್ತು-ಸೌಜನ್ಯಗಳಿಂದ ಬಾದಶಹನ ಪ್ರೀತಿ-ಅಭಿಮಾನಗಳನ್ನು ಗಳಿಸಿ ಮಂತ್ರಿಯಾದ. ನಾನಾ ಬಗೆಯ ಸುಧಾರಣೆ ಕ್ರಮಗಳಿಂದ ದೇಶವನ್ನು ಪ್ರಗತಿಯತ್ತ ಒಯ್ದ. ಅವನ ನಂತರವೂ ಮುಂದುವರೆದು ಸುಲ್ತಾನತ್ತನ್ನು ತನ್ನ ಪ್ರೌಢಿಮೆ-ಚಾಕಚಕ್ಯತೆಗಳಿಂದ ಬೆಳೆಸಿ ಕೀರ್ತಿಯ ಕಳಶ ತೊಡಿಸಿ, ಬಾದಶಹನ ಮರಣಾನಂತರ ರಾಜಮಾತೆಯ ಉಸ್ತುವಾರಿ ಆಡಳಿತದಲ್ಲಿಯೂ, ಮಗ ಮೂರನೆಯ ಮಹಮೂದ್ ರಾಜನಾದಮೇಲೆ ಅವನ ಕೈ ಕೆಳಗೂ ಮಂತ್ರಿಯಾಗಿದ್ದ. ಆಮೇಲೆ ಸ್ವದೇಶಿ-ಪರದೇಶಿ ಎಂಬ ಸ್ಪರ್ಧೆ ಉಂಟಾಗಿ ಗಾವಾನನನ್ನು ಬಗ್ಗು ಬಡಿಯಲು ಕೆಲವರು ಸಂಚು ಮಾಡುತ್ತಾರೆ. ಗಾವಾನನ ಪ್ರತಿಸ್ಪರ್ಧಿಗಳು ಪಿತೂರಿ ಮಾಡಿ, ಸುಳ್ಳು ಪತ್ರವೊಂದನ್ನು ಸೃಷ್ಟಿಸಿ ಗಾವಾನನ ಮೇಲೆ ರಾಜದ್ರೋಹದ ಅಪಾದನೆ ಬರುವಂತೆ

ಮಾಡಿ ಅವನಿಗೆ ಮರಣದಂಡನೆ ವಿಧಿಸುವಂತೆ ಮಾಡುವಲ್ಲಿ ಯಶಸ್ವಿಗಳಾಗುತ್ತಾರೆ. ಆದರೆ ರಾಜಮಾತೆಗೆ ಗಾವಾನನ ವಿರುದ್ಧ ಸಂಚುಕೋರರು ಮಾಡಿದ ಮಸಲತ್ತು ತಿಳಿಯುತ್ತದೆ, ಆದರೆ ಆ ಹೊತ್ತಿಗೆ ಆಗಬಾರದ್ದು ಆಗಿಹೋಗಿರುತ್ತದೆ.

ಇತಿಹಾಸದ ಘಟನೆಗಳನ್ನು ಆಧರಿಸಿ ಈ ಕಥನವು ಸಾಗುತ್ತದೆ ಎಂಬುದಕ್ಕೆ ಲೇಖಕರು ನೀಡುವ ತೇದಿಗಳು ಸಾಕ್ಷಿ. ಮಧ್ಯೆ ಮಧ್ಯೆ ವೈಯಕ್ತಿಕವೆಂಬಂತಹ ಘಟನೆಗಳೂ, ಸಂಭಾಷಣೆಗಳೂ ಇವೆ. ಕತೆಯ ಪ್ರಾರಂಭದಲ್ಲಿ ಧರ್ಮಜಿಜ್ಞಾಸೆಯ ಸಂದರ್ಭದಲ್ಲಿ ಮಾತಾಳಿಯಾದ ಧರ್ಮವಿವೇಚನೆ ನಡೆಯುತ್ತದೆ. ಗಾವಾನ್ ಬ್ರಹ್ಮಚಾರಿ, ಶುದ್ಧ ಹಸ್ತ, ಮಹಾಮಂತ್ರಿಯಾದರೂ ಅವನದು ಒಂದು ಸಣ್ಣ ಕುಟೀರದಲ್ಲಿ ವಾಸ. ತಾನೇ ಒಗೆದು ಒಣಹಾಕಿದ ಒಂದು ಜೊತೆ ಬಟ್ಟೆ, ಉಟ್ಟ ಒಂದು ಜೊತೆ - ಇಷ್ಟೇ ಅವನ ಆಸ್ತಿ. ಮಲಗಲು ಚಾಪೆ, ಇಷ್ಟು ಸರಳಜೀವನ ನಡೆಸುತ್ತಿದ್ದ ಅವನಿಗೆ ಸದಾ ದೇಶದ ಅಭ್ಯುದಯದ ಚಿಂತೆ. ರಾಜ್ಯರಕ್ಷಣೆ - ಪ್ರಜಾರಕ್ಷಣೆಯ ಕಾಯಕ. ಇಂಥ ನಿಸ್ಪೃಹನಾದವನಿಗೆ ದೊರೆತದ್ದು ರಾಜದ್ರೋಹದ ಅಪಾದನೆ, ಮರಣ ದಂಡನೆ - ಈ ವ್ಯಂಗ್ಯವನ್ನು ಕತೆ ಅಚ್ಚುಕಟ್ಟಾಗಿ ಕಟ್ಟಿಕೊಡುತ್ತದೆ. ಆಗಾಗ ಗಾವಾನನ ಮಾತಿನ ಮೂಲಕ ರಂಜಾನ್ ಅಂತಹ ಮುಸ್ಲಿಮ್ ಹಬ್ಬಗಳ ಸಾಂಕೇತಿಕತೆ, ಅವುಗಳ ಆಚರಣೆಗಳ ರೀತಿ ಇವುಗಳನ್ನು ವಿವರಿಸಲು ಲೇಖಕರು ಹಾತೊರೆಯುತ್ತಾರೆ.

'ನಾಟ್ಯಮಯೂರಿ' ಹೊಯ್ಸಳ ದೊರೆ ವಿಷ್ಣುವರ್ಧನನ ಪಟ್ಟಮಹಿಷಿ ಶಾಂತಲೆಯ ತ್ಯಾಗದ ಗಾಥೆ. ಸಂಭಾಷಣೆಗಳ ಮೂಲಕ ಇತಿಹಾಸದ ಅನೇಕ ಘಟನೆಗಳನ್ನು ನಿರೂಪಿಸುತ್ತ, ವಿಷ್ಣು-ಶಾಂತಲೆಯರ ವೈಯಕ್ತಿಕ ಜೀವನವನ್ನು ವಿಸ್ತರಿಸುವ ತಂತ್ರ ಇಲ್ಲಿಯದು. ಸಹಜವಾಗಿಯೇ ಇದು ಕೆ.ವಿ. ಅಯ್ಯರ್ ಅವರ 'ಶಾಂತಲಾ' ಕಾದಂಬರಿಯನ್ನು ನೆನಪಿಸುತ್ತದೆ. ಇಲ್ಲಿ ಶಾಂತಲೆ-ವಿಷ್ಣುವರ್ಧನರದು ಮೊದಲ ನೋಟದ ಪ್ರಣಯ. ಲಕ್ಷ್ಮಿ ಒಬ್ಬ ಅನಾಥ ಕೂಸಾಗಿದ್ದು ರಾಮಾನುಜರ ಅಪೇಕ್ಷೆಯಂತೆ ಅವಳನ್ನು ಮಾರಸಿಂಗಮಯ್ಯ ಸಾಕಿಕೊಂಡು ತನ್ನ ಮಗಳಂತೆಯೇ ನೋಡಿಕೊಂಡಿರುತ್ತಾನೆ. ಸಂಸ್ಕೃತ ನಾಟಕಗಳಲ್ಲಿಯಂತೆ ಇಲ್ಲಿ ವಿಷ್ಣುವಿನ ಆಪ್ತ ಒಬ್ಬ ವಿದೂಷಕ. ಲಕ್ಷ್ಮಿಗಿಂತ ಇಲ್ಲಿ ಶಾಂತಲೆಗೆ ತುಂಬ ಪ್ರಾಧಾನ್ಯ ಸಿಕ್ಕಿದೆ. ಲಕ್ಷ್ಮಿ ಏನಿದ್ದರೂ ಇತರ ಕೆಲವು ರಾಣಿಯರಂತೆ, ಅಷ್ಟೆ. ಶಾಂತಲೆ ಪಟ್ಟಮಹಿಷಿ ಮಾತ್ರವಲ್ಲ, ದೊರೆಯ ಪ್ರೇಮದ ರಾಣಿ ಹೇಗೋ ಹಾಗೆ ಜನರ ಕಣ್ಮಣಿ. ಉದಯಾದಿತ್ಯ ಯುವರಾಜ; ಶಾಂತಲೆಗೆ ಒಂದು ಗಂಡು ಮಗು ಹುಟ್ಟಿದರೂ ಅದು ಬಹು ಬೇಗ ತೀರಿಕೊಳ್ಳುತ್ತದೆ. ಅನಂತರ ಅವಳಲ್ಲಿ ಮಕ್ಕಳಾಗುವುದಿಲ್ಲ. ಅವಳ ಪಟ್ಟಮಹಿಷಿ ಪದವನ್ನು ಬೇರಾರಿಗೂ ವರ್ಗಾಯಿಸಲಾರದ್ದರಿಂದ ಇಲ್ಲೂ ಶಾಂತಲೆ ರಾಜ್ಯದ ಉತ್ತರಾಧಿಕಾರಿತ್ವವನ್ನು ಸುಗಮಗೊಳಿಸಲು ಆತ್ಮ ಬಲಿದಾನದ ದಾರಿ ಹುಡುಕುತ್ತಾಳೆ. ಆದರೆ ಇಲ್ಲಿ ಅವಳು ಅನುಸರಿಸುವ ಮಾರ್ಗ ಸಲ್ಲೇಖನ. ಪ್ರಾಯಶಃ ಒಪ್ಪಿತ ಇತಿಹಾಸಕ್ಕೆ ಹೆಚ್ಚು ಹತ್ತಿರವಾಗುವ ಅಂಶ. ಇಲ್ಲಿ ಅಯ್ಯರ್ ಅವರ ಅತಿ ಭಾವುಕತೆಯಾಗಲೀ ಸುಧೀರ್ಘ ಕನಸುಗಳ ಮಾಲೆಯಾಗಲೀ ವಿಪರೀತ ಬಲಿದಾನವಾಗಲೀ ವಿವರವಾಗಿ ಚಿತ್ರಿತವಾಗದಿದ್ದರೂ, ಇಲ್ಲಿನ ರಾಜ-ರಾಣಿಯರೂ

ಉದಾತ್ತರೇ. ವಿಷ್ಣುವರ್ಧನ-ಶಾಂತಲೆಯರು ಬೇಲೂರಿನಲ್ಲಿ ತಾವು ಕಟ್ಟಬೇಕೆಂದಿರುವ ದೇವಾಲಯಗಳಲ್ಲಿನ ಮೂರ್ತಿ ಶಿಲ್ಪಗಳನ್ನು ಕೆತ್ತಲು (ಭಂಜಿಕೆಗಳಲ್ಲಿ ಕೆತ್ತಬೇಕಾದ ನಾಟ್ಯದ ವಿವಿಧ ಭಂಗಿಗಳು ಶಾಂತಲೆಯವೇ; ಅಲ್ಲದೆ ಅವಳೇ ಆ ಶಿಲ್ಪಗಳ ವಿನ್ಯಾಸವನ್ನು ನಿರ್ಣಯಿಸುವವಳು) ಜಕ್ಕಣಾಚಾರಿಯನ್ನು ಒಪ್ಪಿಸಲು ಅವನ ಅರಿವಿಗೆ ಬಾರದಂತೆ ದೀರ್ಘಕಾಲ ಅವರಿಬ್ಬರೂ ಸೇವೆಸಲ್ಲಿಸುವಷ್ಟು ವಿನಮ್ರರು ಮತ್ತು ಕಲಾಪ್ರೇಮಿಗಳು ಅವರು. ಅರವತ್ತು ಪುಟಗಳಷ್ಟು ನೀಳವಾಗಿ ಈ ಕಥಾನಕ ಹರಿದಿದ್ದರೂ ವಿಷ್ಣುವರ್ಧನ ಹಾಗೂ ಶಾಂತಲೆಯರನ್ನು ಹೊರತುಪಡಿಸಿದರೆ ಉಳಿದ ಪಾತ್ರಗಳನ್ನು ಸ್ಫುಟವಾಗಿ ಚಿತ್ರಿಸಲು ಸಾಧ್ಯವಾಗಿಲ್ಲ. ಮಿಕ್ಕ ಕಡೆಯಂತೆ ಇಲ್ಲಿಯೂ ಕತೆಯ ಮುಖ್ಯಪಾತ್ರಗಳನ್ನು ಅಪ್ಪಟ ಅಪರಂಜಿಯಂತೆ, ಎಲ್ಲ ಸಣ್ಣತನಗಳಿಂದ ದೂರವೆಂಬಂತೆ, ಅತ್ಮತುಮುಲದಿಂದ ಹೊರತಾದವರಂತೆ ಚಿತ್ರಿಸಲಾಗಿದೆ.

'ಕನ್ನಡಿ ಹೇಳಿದ ಕತೆ' ಕತೆಯ ತಂತ್ರಕ್ಕೆ ಅನ್ವಯಿಸುವ ಮಾತು. ನೇತಾಜಿ ಸುಭಾಷ್ ಚಂದ್ರ ಬೋಸರ ಮಗಳು ಅನಿತಾ ತಂದೆಯ ಮರಣದ ದೀರ್ಘಕಾಲದನಂತರ ಭಾರತಕ್ಕೆ ಬಂದ ಗಳಿಗೆಯಿಂದ ಕಥಾನಕ ಪ್ರಾರಂಭವಾಗುತ್ತದೆ. ಅವಳು ಕನ್ನಡಿಯ ಮುಂದೆ ನಿಂತುಕೊಂಡಾಗ ಆ ಕನ್ನಡಿಯೇ ಆಕೆಗೆ ನೇತಾಜಿಯ ಕತೆ ಹೇಳಿದಂತೆ ಇಲ್ಲಿನ ನಿರೂಪಣೆಯಿದೆ. ಇಲ್ಲಿಯೂ ತೇದಿಗಳ ಸಮೇತ ವಿವರಗಳಿವೆ. ನೇತಾಜಿಯು ಕಟಕ್‌ನಲ್ಲಿ ಕಳೆದ ಬಾಲ್ಯ ಜೀವನದಿಂದ ಹಿಡಿದು ಅವರ ಮರಣದವರೆಗೆ ಮಾತ್ರವಲ್ಲ ಅನಂತರ ಸ್ವಲ್ಪಕಾಲದವರೆಗೂ ಇಲ್ಲಿನ ಘಟನಾವಿಸ್ತಾರವಿದೆ. ನೇತಾಜಿ ಅವರ ವಿದ್ಯಾಭ್ಯಾಸ, ತಂದೆಯ ಅಪೇಕ್ಷೆಯಂತೆ ಇಂಗ್ಲೆಂಡಿಗೆ ಹೋಗಿ ಐಸಿಎಸ್ ಪಾಸುಮಾಡಿದ್ದು, ಜಲಿಯನ್ ವಾಲಾಬಾಗ್ ಹತ್ಯಾಕಾಂಡದಿಂದ ರೋಸಿದ ಅವರು ಮುಂದೆ ತಮ್ಮ ಹೆಸರನ್ನು ಐಸಿಎಸ್ ಪಟ್ಟಿಯಿಂದ ತೆಗೆಸಿ ಹಾಕಿಸಿದ್ದು, ಬಾಪೂಜಿಯೊಡನೆ ಭೇಟಿ, ಅವರೊಡನೆ ಭಿನ್ನಾಭಿಪ್ರಾಯ. ಮುಂದೆ ತಮ್ಮದೇ 'ಸ್ವರಾಜ್ ಪಕ್ಷ' ಸ್ಥಾಪಿಸಿದ್ದು, ಯೂರೋಪ್‌ಗೆ ಪ್ರಯಾಣ, ಜರ್ಮನ್ ಮಹಿಳೆ ಎಮಿಲಿ ಶೆಂಕ್ಲ್ ಅವರನ್ನು ಮದುವೆಯಾದದ್ದು, ತಾವೇ ಕಾಂಗ್ರೆಸ್ ಅಧ್ಯಕ್ಷರಾಗಿ ಆಯ್ಕೆಯಾದರೂ ಅದಕ್ಕೆ ರಾಜಿನಾಮೆ ನೀಡಿದ್ದು, ಬ್ರಿಟಿಷ್ ಸರ್ಕಾರಕ್ಕೆ ಚಳ್ಳೆಹಣ್ಣು ತಿನ್ನಿಸಿ ವಿದೇಶಕ್ಕೆ ಹಾರಿದ್ದು, ಕೆಲ ವಿದೇಶಗಳ ಸಹಕಾರದಿಂದ ಬ್ರಿಟಿಷರನ್ನು ಭಾರತದಿಂದ ಹೊಡೆದೋಡಿಸಲು ಸಶಸ್ತ್ರ ಹೋರಾಟ ಪ್ರಾರಂಭಿಸಿದುದು, ಐ.ಎನ್.ಎ. ಗೆ ಬೆಂಬಲ ನೀಡಿದ್ದ ಜಪಾನ್ ಎರಡನೇ ಯುದ್ಧದಲ್ಲಿ ಸೋತದ್ದು. ವಿಮಾನದ ಅಪಘಾತದಲ್ಲಿ ನೇತಾಜಿ ಸತ್ತ ಸುದ್ದಿ ಹರಡಿದುದು - ಇವೆಲ್ಲ ಘಟನೆಗಳು ಈ ಕಥಾನಕದಲ್ಲಿ ಸೇರಿವೆ. ಮಾಹಿತಿಯುಕ್ತ ನಿರೂಪಣೆ, ಆದರೆ ಕೊನೆಯ ವಾಕ್ಯಗಳು ''ಇಂತಹ ಮಹಾನುಭಾವನಿಗೆ ಭಾರತ ಕೊಟ್ಟಿದ್ದೇನು? ಅವಹೇಳನ, ತಿರಸ್ಕಾರ ಮತ್ತೆ ತಾತ್ಸಾರ! ಅಯ್ಯೋ ದೇಶವೇ!!!'' ಆದರೆ ಭಾರತ ನೇತಾಜಿಯನ್ನು ಅವಹೇಳನ ತಿರಸ್ಕಾರಗಳಿಗೆ ಗುರಿ ಮಾಡಿತೇ? ಅವರ ಸಶಸ್ತ್ರ ಹೋರಾಟಕ್ಕೆ ಹೆಚ್ಚು ಬೆಂಬಲ ಸಿಕ್ಕಲಿಲ್ಲವೆಂಬುದು ನಿಜವಾದರೂ, ಯಾರಾದರೂ ನೇತಾಜಿಯವರ ದೇಶಪ್ರೇಮವನ್ನು ಅಲ್ಲಗಳೆದರೇ? ಅತಿ ಭಾವುಕವಾದರೆ ತಮ್ಮ ಕಥಾನಾಯಕರ ಪರವಾದ ಅತಿ ಅಭಿಮಾನ ಕೆಲವೇಳೆ ಅತಿರೇಕದ ಮಾತುಗಳನ್ನು ಆಡಿಸುವುದೇನೋ!

ಒಟ್ಟಾರೆ ಸಾಶಿಮ ಅವರು ಈ ಎಲ್ಲ ಕಥಾನಕಗಳಲ್ಲಿ ಐತಿಹಾಸಿಕ ವ್ಯಕ್ತಿಗಳ ಜೀವಿತವನ್ನೇ ತಮ್ಮ ವಸ್ತುವನ್ನಾಗಿ ಮಾಡಿಕೊಂಡಿದ್ದಾರೆ; ಕೆಲವರು ಅನತಿ ಪ್ರಾಚೀನರು, ಮತ್ತೆ ಕೆಲವರು ದೀರ್ಘ ಪ್ರಾಚೀನರು. ಎಲ್ಲರ ಬಗೆಗೂ ಲೇಖಕರಿಗೆ ಅತೀವ ಗೌರವ. ಅವರಾರೂ ಸಾಮಾನ್ಯ ಮನುಷ್ಯರಲ್ಲವೆಂಬ ಶ್ರದ್ಧೆ. ಅವರ ಬಾಳಿನ ವಿವರಗಳನ್ನು ಸಾಧ್ಯವಾದಷ್ಟೂ ಕಲೆ ಹಾಕಿ ಅಧಿಕೃತವೆಂಬಂತಹ ರೀತಿಯಲ್ಲಿ ನಿರೂಪಿಸುವ ವಿಧಾನ ಇವೆಲ್ಲದರಲ್ಲಿ. ಪ್ರಧಾನ ಪಾತ್ರಗಳ ಬಗ್ಗೆ ಅಪರಿಮಿತ ಅಭಿಮಾನ, ಭಾವುಕ ಶೈಲಿ, ನಿರರ್ಗಳ ಮಾತುಗಾರಿಕೆ - ಇವು ಈ ಎಲ್ಲ ಬರಹಗಳ ಪ್ರಧಾನ ಗುಣಗಳು. ತುಂಬ ಯಶಸ್ವಿ ಎಂದು ಕರೆಯಲಾಗದಿದ್ದರೂ ಸೃಜನಶೀಲ ಎಂದು ಹೇಳಲಾಗದಿದ್ದರೂ, ಸಾಮಾನ್ಯ ಓದುಗರ ಮನವನ್ನು ತಟ್ಟುವಲ್ಲಿ ಈ ಕತೆಗಳು ಗೆಲ್ಲುತ್ತವೆ.

ಇಲ್ಲಿ ಪರಿಶೀಲನೆಗೆ ಒಳಗಾಗಿರುವ ಮೂರನೆಯ ಕೃತಿಯೆಂದರೆ 'ಭಾರತೀಯ ಜ್ಞಾನಪೀಠ ಪ್ರಶಸ್ತಿ ವಿಜೇತ ಕನ್ನಡಿಗರು' ಎಂಬುದು. ಇದು ೧೯೮೦ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಪ್ರಕಟಣೆಯಾಗಿ ಬಂದಿದೆ. ಆ ಹೊತ್ತಿಗೆ ಕನ್ನಡಕ್ಕೆ ಮೂರು ಜ್ಞಾನಪೀಠ ಪ್ರಶಸ್ತಿಗಳು ಮಾತ್ರ ಬಂದಿದ್ದವು. ಹಾಗಾಗಿ ಇದು ವಿಸ್ತರಣೆಗೆ ಒಳಗಾಗಬೇಕಾದ ಪುಸ್ತಕವಾಗಿದೆ. ಪುಸ್ತಕದ ಯೋಜನೆ ತುಂಬ ಅಚ್ಚುಕಟ್ಟಾಗಿದೆ: ಮೊದಲಲ್ಲಿ ಈ ಪ್ರಶಸ್ತಿಯು ಒಳಗೊಳ್ಳುವ ವಾಗ್ದೇವಿಯ ಕಂಚಿನ ಪ್ರತಿಮೆಯ ವಿವರಣೆಯಿದೆ. ಭೋಜನ ಸರಸ್ವತೀ ಮಂದಿರದಲ್ಲಿದ್ದ ಪ್ರತಿಮೆಯ ಕಂಚಿನ ಪ್ರತಿಕೃತಿಗಳನ್ನು ಪ್ರಶಸ್ತಿ ವಿಜೇತರಿಗೆ ನೀಡಲಾಗುತ್ತದೆಯಾದ್ದರಿಂದ ಈ ವಿವರಣೆ ಸಮಂಜಸವಾಗಿಯೇ ಇದೆ. ಅದರ ಚಿತ್ರವೂ ಇಲ್ಲಿದೆ. ಅನಂತರ ಅವರೆಗೆ ವಿವಿಧ ಭಾಷೆಗಳಲ್ಲಿ ಈ ಪ್ರಶಸ್ತಿ ಪಡೆದ ಸಾಹಿತಿಗಳ ಭಾವಚಿತ್ರಗಳಿವೆ. ಆ ಮುಂದೆ ಪುಸ್ತಕದ ಬರಹವಿದೆ. ಪುಟ್ಟ ಪೀಠಿಕೆಯಾದ ನಂತರ ಭಾರತೀಯ ಜ್ಞಾನಪೀಠದ ಉಗಮ ಮತ್ತು ವಿಕಾಸಗಳನ್ನು ವಿವರಿಸಲಾಗಿದೆ. ೧೯೪೪ರಲ್ಲಿ ನಡೆದ ಪ್ರಾಚ್ಯವಿದ್ಯಾ ಸಮ್ಮೇಳನದಲ್ಲಿ ಇನ್ನೂ ಅನೇಕ ಪ್ರಾಚೀನ ಕೃತಿಗಳು ಬೆಳಕು ಕಾಣದಿರುವ ವಿಷಯವನ್ನು ಕೆಲವರು ಪ್ರಸ್ತಾಪಿಸಿದರು. ಅಂಥ ಕೃತಿಗಳ ಪ್ರಕಟಣೆಗೆಂದು ಭಾರತೀಯ ಜ್ಞಾನಪೀಠ ಸ್ಥಾಪಿತವಾಗಿ ಮುಂದೆ ಅದರ ಭಾಗವಾಗಿ 'ಮೂರ್ತಿದೇವಿ ಗ್ರಂಥಮಾಲಾ' ಆರಂಭಗೊಂಡದ್ದು, ಭಾರತದ ವಿವಿಧ ಭಾಷೆಗಳ ಹಲವಾರು ಪ್ರಾಚೀನ ಕೃತಿಗಳು ಬೆಳಕು ಕಂಡದ್ದು. ಆ ಮುಂದೆ ಅಖಿಲ ಭಾರತ ಮಟ್ಟದಲ್ಲಿ ಸಾಹಿತ್ಯ ಪ್ರಶಸ್ತಿಯನ್ನು ಆರಂಭಿಸಿದ್ದು - ಈ ವಿವರಗಳಿವೆ. ಮುಂದಿನ ಅಧ್ಯಾಯದಲ್ಲಿ ಈ ಪ್ರಶಸ್ತಿಯನ್ನು ನೀಡಲು ಮಾಡಿರುವ ವಿಮರ್ಶನ ಮತ್ತು ಆಯ್ಕೆಯ ಸ್ವರೂಪವನ್ನು ವಿವರಿಸಲಾಗಿದೆ. ಆ ಮುಂದಿನ ಅಧ್ಯಾಯದಲ್ಲಿ ಅವರೆಗೆ ವಿವಿಧ ಭಾಷೆಗಳಲ್ಲಿ ಪ್ರಶಸ್ತಿ ಪಡೆದವರ ಕಿರು ಪರಿಚಯ ಮತ್ತು ಪ್ರಶಸ್ತಿಗೆ ಪಾತ್ರವಾದ ಕೃತಿಗಳ ವೈಶಿಷ್ಟ್ಯವನ್ನು ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

ಪುಸ್ತಕದ ಮೂರನೆಯ ಅಧ್ಯಾಯವೇ ಬಹು ಮುಖ್ಯವಾದದು. ಇದರಲ್ಲಿ ಅವರೆಗೆ ಈ ಪ್ರಶಸ್ತಿಯ ಗೌರವಕ್ಕೆ ಪಾತ್ರರಾದ ಕುವೆಂಪು, ಬೇಂದ್ರೆ ಮತ್ತು ಶಿವರಾಮ ಕಾರಂತರ ಜೀವನದ ಬಗ್ಗೆ, ಅವರ ಸಾಹಿತ್ಯ ಸೇವೆಯ ಬಗ್ಗೆ ಮತ್ತು ಅವರಿಗೆ ಪ್ರಶಸ್ತಿ ತಂದಿತ್ತ 'ಶ್ರೀರಾಮಯಣ ದರ್ಶನಂ', 'ನಾಕುತಂತಿ' ಮತ್ತು 'ಮೂಕಜ್ಜಿಯ ಕನಸುಗಳು' ಇವುಗಳ

ಬಗ್ಗೆ ಸವಿವರವಾಗಿ ವಿವೇಚಿಸಲಾಗಿದೆ. ಇತರ ಭಾಷೆಗಳಲ್ಲಿ ಪ್ರಶಸ್ತಿ ಪಡೆದವರ ಬಗ್ಗೆ ಮತ್ತು ಕೃತಿಗಳ ಬಗ್ಗೆ ಸಹಜವಾಗಿಯೇ ಲೇಖಕರು ಮೂಲ ಕೃತಿಗಳನ್ನು ನೋಡಲು ಸಾಧ್ಯವಾಗದುದರಿಂದ ಅನ್ಯ ಮೂಲಗಳಿಂದ ವಿಷಯ ಸಂಗ್ರಹ ಮಾಡಲು ತುಂಬ ಶ್ರಮ ಪಟಿಸಿರುವುದು ಸ್ಪಷ್ಟ. ಕನ್ನಡದ ವಿಜೇತರ ಬಗ್ಗೆ ಲೇಖಕರಿಗೆ ನೇರವಾದ ತಿಳಿವಳಿಕೆಯಿರುವುದರಿಂದ ಲೇಖಕರ ವಿವೇಚನೆಯಲ್ಲಿ ಅಧಿಕೃತತೆಯನ್ನು ಕಾಣಬಹುದು; ಅದಕ್ಕಾಗಿಯೂ ಲೇಖಕರು ಶ್ರಮವಹಿಸಿದ್ದಾರೆ.

ಕುವೆಂಪು ಎಂದರೆ ಲೇಖಕರಿಗೆ ಇನ್ನಿಲ್ಲದ ಪ್ರೀತಿ ಗೌರವಗಳು. ಅದಕ್ಕೆ ಕಾರಣ ಅವರು ಸಾಶಿಮ ಅವರ ಗುರುಗಳಾಗಿದ್ದುದು; ಮತ್ತು ಕುವೆಂಪು ಅವರನ್ನು ತಮ್ಮ ಆದರ್ಶ ವ್ಯಕ್ತಿ (role model) ಎಂದು ಭಾವಿಸಿರುವುದು. ''ಅಂದಿನ ಕಿಶೋರ ಚಂದ್ರ ವಾಣಿಯ ಹಾಡು ಇಂದು ಕನ್ನಡ ಗೀರ್ವಾಣಿಯ ಶ್ರೀಮಂತವಾಣಿಯಾಗಿದ್ದಾಳೆ'' ಎನ್ನುವಂತೆ ವಿಕಾಸಗೊಂಡ ಕುವೆಂಪು ಕಾವ್ಯದ ಬಗೆಯನ್ನು ಇಲ್ಲಿ ವಿವರಿಸಲಾಗಿದೆ. ಕುವೆಂಪು ಅವರ ಜೀವನದ ಮುಖ್ಯ ಘಟ್ಟಗಳು - ಅವರ ಮಲೆನಾಡಿನ ಬಾಲ್ಯ ಜೀವನ, ಪ್ರೌಢ ವಿದ್ಯಾಭ್ಯಾಸ, ಪ್ರಾಧ್ಯಾಪಕರಾಗಿ ಶಿಷ್ಯರಿಗೆ ನೀಡಿದ ಸ್ಫೂರ್ತಿ, ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಆಗಿ ಕನ್ನಡಕ್ಕೆ ನೀಡಿದ ಉತ್ತೇಜನ, ಮಾನಸ ಗಂಗೋತ್ರಿಯ ನಿರ್ಮಾಣಕ್ಕೆ ಅವರು ಕೊಟ್ಟ ಚಾಲನೆ, ಶ್ರೀರಾಮಾಯಣ ದರ್ಶನಂ ಬರೆಯುವುದರ ಮೂಲಕ ಮಹಾಕವಿಯಾಗಿ ರೂಪುಗೊಂಡದ್ದು - ಇವನ್ನೆಲ್ಲ ಸಾಕಷ್ಟು ದೀರ್ಘವಾಗಿ ಪ್ರಸ್ತಾಪಿಸುತ್ತಾರೆ. ಕುವೆಂಪು ಅವರನ್ನು 'ವಸಂತ ಕೋಗಿಲೆ' ಎಂದು ಕರೆಯುವ ಲೇಖಕರು ಅವರ ಪ್ರಕೃತಿ ಪ್ರೇಮವನ್ನು ಮನಸಾ ಮೆಚ್ಚುತ್ತಾರೆ. ಖಚಿತವಾದ ನಿಲುವುಗಳನ್ನು ಪಡೆದ ಕುವೆಂಪು ಕನ್ನಡ-ಭಾರತ-ವಿಶ್ವ ಇವುಗಳ ಬಗ್ಗೆ ತಮ್ಮದೇ ಆದ ಅಭಿಪ್ರಾಯಗಳನ್ನು ಪಡೆದವರು. ಇಷ್ಟು ಹೇಳಿ ಲೇಖಕರು ೧೯೬೭ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಪಡೆದ 'ಶ್ರೀ ರಾಮಾಯಣ ದರ್ಶನಂ' ಕಾವ್ಯದ ಬಗ್ಗೆ ಪ್ರಸ್ತಾಪಿಸುತ್ತಾರೆ. ಆ ಕಾವ್ಯದಲ್ಲಿ ಪೌರ್ವಾತ್ಯ-ಪಾಶ್ಚಾತ್ಯ ಸಾಹಿತ್ಯ-ಸಂಸ್ಕೃತಿಗಳ ಸಾರವೇ ಅಡಕವಾಗಿದೆಯೆಂದು ಹೇಳುವ ಲೇಖಕರು, ಆ ಕಾವ್ಯದ ವೈಶಿಷ್ಟ್ಯಗಳನ್ನು ವಿವರಿಸುತ್ತಾರೆ. ಅದು ವಿಶ್ವಶಾಂತಿಯ ದಿವ್ಯ ಸಂದೇಶವನ್ನು ಸಾರುವಂಥದು; ಅರವಿಂದರ ಪೂರ್ಣಯೋಗದ ಪ್ರಾಂಜಲ ತೀರ್ಥದಿಂದ ಪವಿತ್ರವಾಗಿ ಮಿಲ್ಟನನ ಮಹಾಕಾವ್ಯದ ದಿವ್ಯತೆ-ಭವ್ಯತೆಗಳನ್ನು ಮೈಗೂಡಿಸಿಕೊಂಡಿರುವುದು; ಅದರಲ್ಲಿ ''ಲೀಲಾವತಾರಿಯಾದ ಭಗವಂತನು ರಾಮನಾಗಿ ಜನ್ಮ ತಳೆದು ಸೀತೆ ಎಂಬ ಚೈತ್ಯಸಂಪ್ರಜ್ಞೆಯನ್ನು ಕಳೆದುಕೊಂಡು ರಾವಣ ಎಂಬ ಅವಿದ್ಯೆಯನ್ನು ನಾಶಪಡಿಸಿ ಪುನಃ ಆ ಪ್ರಜ್ಞೆಯನ್ನು ಪಡೆದನೆಂಬ ದರ್ಶನ ಇಲ್ಲಿ ಬಿತ್ತರಗೊಂಡಿದೆ'' ಎಂಬ ಅಂಶ-ಇವನ್ನೆಲ್ಲ ವಿವೇಚಿಸಲಾಗಿದೆ.

ಮುಂದೆ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಬಗೆಗಿನ ವಿವರಗಳು. ವೇದ ಪಾಠಕ ಎಂಬ ಮಾತುಸವಕಳಿಯಾಗಿ ಬೇಂದ್ರೆ ಎಂದಾಯಿತು; ಅದನ್ನೇ ತಮ್ಮ ವಂಶನಾಮವಾಗಿ ಪಡೆದ ಕನ್ನಡದ ವರಕವಿಯ ಎಳೆತನ, ತಾಯಿ ಅಜ್ಜಿಯರ ಪ್ರಭಾವದಿಂದ ಅವರ ವ್ಯಕ್ತಿತ್ವ ರೂಪು ತಳೆದದ್ದು, ಚಿಕ್ಕಂದಿನಲ್ಲೇ ಸ್ವಾಭಿಮಾನವನ್ನು

ಬೇಂದ್ರೆ ಬೆಳೆಸಿಕೊಂಡದ್ದು, ವಿದ್ಯಾಭ್ಯಾಸ ಮುಗಿಸಿ ಧಾರವಾಡದ ವಿಕ್ಟೋರಿಯಾ ಹೈಸ್ಕೂಲಿನಲ್ಲಿ ವೃತ್ತಿ ಆರಂಭಿಸಿದ್ದು, ಅವರ ವಿವಾಹ, ವಿವಿಧೆಡೆಗಳಲ್ಲಿ ಮಾಡಿದ ನೌಕರಿಯ ವಿವರಗಳು, ಅವರ ಕಾವ್ಯವಾಚನದ ಮಾಂತ್ರಿಕತೆ, 'ಗೆಳೆಯರ ಬಳಗ' - ಇವುಗಳ ಸಂಕ್ಷಿಪ್ತ ವಿವರಣೆಯಿದೆ ಇಲ್ಲಿ. ಮುಂದೆ ಬೇಂದ್ರೆಯವರ ಸಾಹಿತ್ಯ ಕೃಷಿಯ ವೈಪುಲ್ಯ ಮತ್ತು ವೈಶಿಷ್ಟ್ಯಗಳ ಕಿರು ಪರಿಚಯವಾದ ಮೇಲೆ, ಲೇಖಕರು ಅವರಿಗೆ ೧೯೭೩ರಲ್ಲಿ ಜ್ಞಾನಪೀಠ ಪ್ರಶಸ್ತಿ ತಂದಿತ್ತ 'ನಾಕುತಂತಿ' ಸಂಗ್ರಹದಲ್ಲಿನ ಕವನಗಳ ಬಗ್ಗೆ ಕೊಂಚ ದೀರ್ಘವೆನ್ನಬಹುದಾದ ವಿಶ್ಲೇಷಣೆ ಮಾಡುತ್ತಾರೆ. ಕವಿಯ ಬಳಿಗೇ ಹೋಗಿ ಅವರಿಂದಲೇ ಕೆಲವು ವಿವರಣೆಗಳನ್ನು ಪಡೆದು ಲೇಖಕರು ನಾಕುತಂತಿಯ ಕವನಗಳ ಬಗ್ಗೆ ಬರೆಯುವುದರಿಂದ ಕವಿಯ ಆಶಯವೂ ಇಲ್ಲಿ ಸ್ಫುಟಗೊಳ್ಳುತ್ತದೆ. ಅನುಭವವನ್ನು 'ನು' ಎಂದು ಕರೆದು ಅದು ಆನು ತಾನು ನೀನು ನಾನು - ಎಂಬ ಚತುರಶ್ರವಾಗಿ ಬೆಳೆಯುವ ಪರಿಯನ್ನು ನಾಕುತಂತಿ ಕವನವು ಒಳಗೊಳ್ಳುವುದಂತೆ. ಅನುಭವದ ಈ ನಾಲ್ಕು ನೆಲೆಯೇ ನಾಕುತಂತಿ. 'ಮೂಲದಲ್ಲಿ ಒಂದಾಗಿದ್ದ ಪರತತ್ವ ನಾಲ್ಕು ಪ್ರಣಾಳಿಕೆಯಲ್ಲಿ ಪ್ರವಹಿಸಿ, ನಾಕುತಂತಿಯಾಗಿ ನುಡಿದು ತಾನೇ ಸೃಷ್ಟಿಗೆ ತಂದೆಯಾಗಿ, ತಾಯಿಯಾಗಿ, ಸರ್ವ ಋತುಗಳಲ್ಲಿ ಋತುವಾಗಿ, ನೇತಿಯಾಗಿ ಇತಿಯಾಗಿ, ಪ್ರೀತಿಯಾಗಿ, ಪ್ರಣವವಾಗಿ, ಅಣುರೇಣು ತೃಣಕಾಷ್ಠದಲ್ಲೂ ಅದೇ ಅದಾಗಿ, ಕವಿ ಮನೋರಂಗದಲ್ಲಿ ಅನುಭೂತಿಯಾಗಿ ಅನುಭವವಾಗಿ ಮೈತಾಳುವ'' ಪರಿಯನ್ನು ಈ ಕವನ ವಿಶ್ಲೇಷಿಸುತ್ತದೆ ಎಂಬ ವಿವರಣೆ ಇಲ್ಲಿದೆ. ಬೇಂದ್ರೆ ಅವರ ಕವನಗಳಲ್ಲಿ ಕಾಣುವ ತಾತ್ವಿಕತೆಯ ಜೊತೆಗೆ, ಅಲ್ಲಿನ ಸಾಮಾಜಿಕ ಪ್ರಜ್ಞೆ, ಪ್ರಕೃತಿಪ್ರೇಮ, ಬೇಂದ್ರೆಯವರು ಸಂಖ್ಯೆಗಳ ಬಗ್ಗೆ ಬೆಳೆಸಿಕೊಂಡಿದ್ದ ವ್ಯಾಮೋಹ - ಮುಂತಾದವುಗಳ ಬಗೆಗೂ ಈ ಲೇಖನವು ವಿವರಗಳನ್ನು ನೀಡುತ್ತದೆ.

ಕನ್ನಡಕ್ಕೆ ಮೂರನೆಯ ಬಾರಿ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟವರು ಕೋಟ ಶಿವರಾಮ ಕಾರಂತರು. ಕುವೆಂಪು-ಬೇಂದ್ರೆಯವರ ವ್ಯಕ್ತಿತ್ವ ಮತ್ತು ಸಾಹಿತ್ಯಗಳಿಗಿಂತ ತೀರ ಭಿನ್ನವಾಗಿ ಬಾಳಿ ಬರೆದವರು ಕಾರಂತರು. ಅವರ 'ಮೂಕಜ್ಜಿಯ ಕನಸುಗಳು' ಎಂಬ ಕಾದಂಬರಿಗೆ ೧೯೭೭ರಲ್ಲಿ ಭಾರತೀಯ ಜ್ಞಾನಪೀಠ ಪ್ರಶಸ್ತಿ ಲಭ್ಯವಾಯಿತು. ಕಾರಂತರ ವ್ಯಕ್ತಿತ್ವದ ವಿಶಿಷ್ಟಾಂಶಗಳನ್ನು ಗುರುತಿಸಿ, ಲೇಖಕರು ಅವರ ಜೀವನ ವಿವರಗಳನ್ನು ನೀಡುತ್ತಾರೆ. ಅವರು ಕ್ರಾಂತಿ ಮನೋಭಾವದವರಾಗಿ, ಖಂಡಿತವಾದಿಯಾಗಿ, ಶಿಕ್ಷಣ ಕ್ಷೇತ್ರದಲ್ಲಿ ಮೂಲಭೂತ ಸುಧಾರಣೆಗಳನ್ನು ತರಬಯಸಿದ ಕ್ರಿಯಾಶೀಲರಾಗಿ, ಯಕ್ಷಗಾನದ ಪರಿಷ್ಕಾರಕರಾಗಿ, ಸೃಜನಶೀಲ ಲೇಖಕರಾಗಿ ಕಾಣಿಸಿಕೊಳ್ಳುವ ಪರಿ ಚಿತ್ರಿತವಾಗಿದೆ. ಕೊನೆಗೆ ಪ್ರಶಸ್ತಿಗೆ ಪಾತ್ರವಾದ ಕಾದಂಬರಿಯ ಬಗೆಗೆ ವಿಶ್ಲೇಷಣೆಯಿದೆ. ಮೂಕಜ್ಜಿ ಮತ್ತು ಸುಬ್ರಾಯ ಎಂಬ ಪಾತ್ರಗಳ ಮೂಲಕ ಕಾದಂಬರಿಕಾರರು ಮಾನವ ಸಂಸ್ಕೃತಿಯ ಸ್ಮೃತಿಪರಂಪರೆಯನ್ನು ಇಲ್ಲಿ ಅನಾವರಣಗೊಳಿಸುವ ಪರಿ ವಿಶೇಷವಾದುದು. ಸೃಷ್ಟಿ ಬದುಕು ಪ್ರಕೃತಿ ದೇವರು ಧರ್ಮ ಇತ್ಯಾದಿ ಮಾನವ ಸಂಸ್ಕೃತಿಯ ಎಲ್ಲ ಅಂಶಗಳ ಬಗ್ಗೆ ಖಚಿತ ನಿಲುವನ್ನು ಹೊಂದಿ ಜೀವನವನ್ನು ವಿಶ್ಲೇಷಿಸುವ ಮೂಕಜ್ಜಿ ಒಂದು ಬಗೆಯಲ್ಲಿ ಕಾರಂತರ ಮನೋಧರ್ಮದ ಪ್ರತೀಕವೇ ಆಗಿದ್ದಾಳೆಂಬುದನ್ನಿಲ್ಲಿ ಗುರುತಿಸಲಾಗಿದೆ.

ಕನ್ನಡಿಗರಾದ ಈ ಹೆಮ್ಮೆಯ ಲೇಖಕರುಗಳ ಬಗ್ಗೆ ಸಾಶಿಮ ಪ್ರೀತಿಯಿಂದ ಇವರುಗಳ ಜೀವನ, ಸಾಧನೆ, ಸಾಹಿತ್ಯದ ಹಿರಿಮೆ ಮುಂತಾದವನ್ನು ಕ್ರಮಬದ್ಧ ರೀತಿಯಲ್ಲಿ ನಿರೂಪಿಸುತ್ತಾರೆ. ಈ ಮೂವರ ಕೃತಿಗಳ ಸಮಗ್ರ ಪಟ್ಟಿಯನ್ನು ಆಯಾ ಲೇಖಕರ ಬಗೆಗಿನ ಬರಹದಲ್ಲಿ ಕೊಡಲಾಗಿದೆ.

ಒಟ್ಟಾರೆ, ಈ ಮೂರು ಗ್ರಂಥಗಳನ್ನು ಅವಲೋಕಿಸಿದಾಗ ಸಾಶಿಮ ಅವರು ಮಾಹಿತಿ ಸಂಗ್ರಹಕ್ಕೆ, ಕೃತಿಗಳ ಅಧ್ಯಯನಕ್ಕೆ, ಅವುಗಳ ಬಗ್ಗೆ ಬಂದ ಬರಹಗಳನ್ನು ಓದಿ ವಿವೇಚಿಸಲು ನಡೆಸಿರುವ ಸಿದ್ಧತೆಗೆ ಪಟ್ಟಿರುವ ಶ್ರಮ ಗೋಚರಿಸುತ್ತದೆ. ಲೇಖಕರು ಕೃತಿಗಳನ್ನು ಪರಿಚಯಿಸುವಾಗ ಅನುಸರಿಸುವ ಮಾರ್ಗವು ಮೌಲ್ಯಮಾಪನದ್ದಾಗಿರದೆ ಗುಣಗ್ರಹಣಕ್ಕೆ ಮಾನ್ಯತೆಯಿತ್ತಿರುವುದು ಸಮಂಜಸವಾಗಿದೆ. ಈ ಎಲ್ಲ ಮಹನೀಯರ ಕೃತಿಗಳ ಬಗ್ಗೆ ಈಗಾಗಲೇ ವಿಪುಲವಾಗಿ ಬರಹಗಳು ಬಂದಿವೆ. ಇವರಿಗೆ ಜ್ಞಾನಪೀಠ ಪ್ರಶಸ್ತಿ ಸಂದಾಯವಾಗಿರುವುದರಿಂದ ಕನ್ನಡಿಗರ ಹೆಮ್ಮೆ ಮೇಲೇರಿದೆ. ಹಾಗಾಗಿ ಈ ಲೇಖಕರ ಕೃತಿ ಮೌಲ್ಯಮಾಪನಕ್ಕಿಂತ ಈ ಪುಸ್ತಕದಲ್ಲಿ ಅವರ ಸಮಗ್ರ ದರ್ಶನ ಮಾಡಿಸುವ ಪ್ರಯತ್ನ ಯಥಾರ್ಥವಾಗಿದೆ.

ಅಪರೂಪದವರು

ಶಶಿಕಲಾ ವೀರಯ್ಯ ಸ್ವಾಮಿ

'ಅಪರೂಪದವರು' ಇದು ಡಾ. ಸಾ.ಶಿ.ಮರುಳಯ್ಯನವರ ಒಂದು ರಚನೆಯ ಹೆಸರು. ಅದನ್ನು ಓದಿಯಾದ ಮೇಲೆ ಸಾ.ಶಿ.ಮ. ಅವರು ಬದುಕು-ಬರಹಗಳನ್ನು ಅವಲೋಕಿಸಿದ ಮೇಲೆ, 'ಅಪರೂಪದವರು' ಸಾಲಿಗೆ ಇವರು ಒಬ್ಬ ಅಪೂರ್ವ ಅಪರೂಪದವರೇ ಅನಿಸುವದು ಸುಳ್ಳಲ್ಲ.

ಅವರ ಜೀವನಯಾತ್ರೆಯನ್ನು ಓದಿದ ಯಾರೂ ಈ ಮಾತನ್ನು ಖಂಡಿತ ಅಲ್ಲಗಳೆಯಲಾರರು. ಸಾ.ಶಿ.ಮ. ಅವರು ಸಾಹಿತ್ಯದಿಂದ ಎಷ್ಟು ದೊಡ್ಡ ಹೆಸರು ಮಾಡಿರುವರೋ ಅದಕ್ಕಿಂತ ದೊಡ್ಡದು ಅವರ ಸರಳ-ಸಜ್ಜನಿಕೆ, ವಿನೀತ-ಮಾನವತೆಗಳು. ಬರೆದಂತೆ ಬದುಕುವ, ಬದುಕಿದಂತೆ ಬರೆವ ಕೆಲವೇ ಕೆಲವು ವಿರಳರಲ್ಲಿ ಒಬ್ಬರು. ಸದಾ ಹಸನ್ಮುಖಿ, ಚಿರಂತನ ಚೈತನ್ಯಶೀಲ. ಅವರ ಇರುವಿಕೆಯಲ್ಲಿ ಒಂದು ಪರಿಶುಭ್ರವಾದ ಜೀವನಪ್ರೇಮವನ್ನು ನಾವು ಗುರುತಿಸಬಹುದು. ಮೊದಲ ಪರಿಚಯದಲ್ಲೇ ಆತ್ಮೀಯರಾಗಿ ಬಿಡುವ ಅವರ ಪ್ರೇಮದ ಸ್ವಭಾವ ಅವರ ಇಡೀ ವ್ಯಕ್ತಿತ್ವವನ್ನು ಒಂದು ಅನನ್ಯವಾದ ಚೌಕಟ್ಟಿನಲ್ಲಿಡುವಂತೆ ಮಾಡುತ್ತದೆ.

ಸಾಸಲು ಗ್ರಾಮದ ಕೂಸು ಹಂಪಿಯ ಸಾಸಿವೆ ಗಣಪನಷ್ಟು ಎತ್ತರದಲ್ಲಿ ಬೆಳೆದು ಬಂದದ್ದೇ ಒಂದು ಸಾಹಸಗಾಥೆ. ಬಡತನದಲ್ಲಿ ವಿದ್ಯಾಭ್ಯಾಸ, ಆದರೂ ನಲುಗದ ಸ್ವಾಭಿಮಾನ; ತನಗಿಂತ ಬಡವರಿಗೆ ಸ್ಕಾಲರ್‌ಶಿಪ್ ಸಿಗಲೆಂಬ ಅಂತಃಕರಣೆ. ಆತ್ಮಗೌರವಕ್ಕೆ ಪೆಟ್ಟು ಬಿದ್ದಾಗ ರಾಜಿ ಮಾಡಿಕೊಳ್ಳದೇ ಸಿಡಿಯುವ ಸಿಡಿಲು.

ಶ್ರೀ ಆರ್. ಬಸವರಾಜ್ ಅವರು 'ಸಾಶಿಮ ಬದುಕು ಬರಹ' ಕೃತಿಯಲ್ಲಿ ಇಡೀ ವ್ಯಕ್ತಿತ್ವ ಚೈತನ್ಯಗಳನ್ನು ಮನಮುಟ್ಟುವಂತೆ ಅಕ್ಷರ ಶಿಲ್ಪದಲ್ಲಿ ಕಡೆದಿಟ್ಟಿದ್ದಾರೆ. ಅದೊಂದು ಪುಸ್ತಕ ಸಾಕು, ಸಾಶಿಮ ಅವರನ್ನು ಕುರಿತಾದ, ಮುಂಚೆಯೇ ಇರುವ ಗೌರವ ಭಾವ ಮೇರುವಾಗುವುದಕ್ಕೆ. ಕನ್ನಡ ಸಾಹಿತ್ಯವನ್ನು ಪ್ರೀತಿಸುವ ಎಲ್ಲರೂ ಅದನ್ನು ಓದಲೇ ಬೇಕಾದಂಥ ಮಹತ್ವದ ಪರಿಚಯ ಕೃತಿ.

೧೯೯೯ರ ವರೆಗೆ ಸಾಶಿಮ ಅವರು ೭೫ ಕೃತಿಗಳನ್ನು ರಚಿಸಿ ಕನ್ನಡ ಸಾಹಿತ್ಯಕ್ಕೆ ಸಮೃದ್ಧಿಯನ್ನೂ ಸತ್ವವನ್ನೂ ತುಂಬಿದ್ದಾರೆ. ಇವುಗಳಲ್ಲಿ ೧೩ ಕವನ ಸಂಕಲನಗಳು ೬ ಧ್ವನಿಸುರಳಿಗಳು ೬ ಕಥಾಸಂಕಲನಗಳನ್ನು, ೭ ಜೀವನ ಚಿತ್ರಣಗಳು, ೫ ನಾಟಕ / ಪ್ರಹಸನ / ನೃತ್ಯರೂಪಕಗಳು, ೮ ವಿಮರ್ಶಾಕೃತಿಗಳು, ೨೬ ಸಂಪಾದಿತ ಕೃತಿಗಳು, ೭ ಭಾಷಾಂತರ, ೭ ಸಂಶೋಧನಾ ಕೃತಿಗಳು, ೫ ತತ್ವದರ್ಶನಗಳು, ಹೀಗೆಯೇ ಸಾಗುತ್ತದೆ ಅವರ ಸಾಹಿತ್ಯ ಸೃಷ್ಟಿ. ನಂತರದ ಈ ೫-೬ ವರ್ಷಗಳಲ್ಲಿ ಇನ್ನೂ ಮೌಲಿಕ ರಚನೆಗಳನ್ನು ಅವರು ರಾಗಿಣಿ ಪ್ರತಿಷ್ಠಾನದಿಂದ ಪ್ರಕಟಿಸಿದ್ದಾರೆ. ಅನಾರೋಗ್ಯದ ನಡುವೆಯೂ ಸಾಹಿತ್ಯದ ಚಟುವಟಿಕೆಗಳು ಅಂದರೆ ಪುಟಿದೇಳುತ್ತಾರೆ. ಇಂಥ ಅಪರೂಪದ ಚೇತನದ

ಸಮಕಾಲೀನರಾಗಿ ನಾವೂ ಬದುಕಿದ್ದೇವೆ. ಅವರ ಆತ್ಮೀಯ ಬಳಗದಲ್ಲಿದ್ದೆವೆಂಬುದೆ ಒಂದು ಧನ್ಯತೆ ಎಂದು ತಿಳಿದುಕೊಂಡ ಅನೇಕರಲ್ಲಿ ನಾನೂ ಒಬ್ಬಳು.

ಡಾ. ಸಾ.ಶಿ.ಮ. ಅವರ ಮೂರು ಕೃತಿಗಳನ್ನು ಕುರಿತು ನಾನಿಲ್ಲಿ ಪರಿಚಯ ಮಾಡಿಕೊಡಬೇಕಿದೆ. ೧) ಭಾರತರತ್ನ ೨) ದೇವುಡು ೩) ಅಪರೂಪದವರು.

೧) **ಭಾರತ ರತ್ನ** : ಪಂ. ಜವಾಹರಲಾಲ ನೆಹರೂ ಜೀವನಗಾಥೆಯೇ ಇದರ ವಸ್ತು. ಅವರ ಪೂರ್ವಜರಿಂದ ಹಿಡಿದು, ಅಂತಿಮ ಕ್ಷಣದವರೆಗೂ ತುಂಬ ಪ್ರೌಢಭಾಷೆಯಲ್ಲಿ ಹೃದಯ ಸ್ಪರ್ಶಿ ಭಾಷೆಯಲ್ಲಿ ನಿರೂಪಿಸುತ್ತಾರೆ. ಅವರಿಗೆ ತಂಗಿ ಹುಟ್ಟಿದಾಗ ಡಾಕ್ಟರರು "ನೋಡು ನಿನ್ನ ಆಸ್ತಿಯಲ್ಲಿ ಪಾಲು ಕೇಳುವ ತಂಗಿ ಜನಿಸಿದ್ದಾಳೆ" ಎಂದಾಗ ನೆಹರೂಜಿ ತುಂಬ ನೊಂದುಕೊಂಡರಂತೆ ಛೇ ನಾನು ಅಷ್ಟೊಂದು ಸಣ್ಣ ಮನಸ್ಸಿನವನೇ? ಎಂದು. ತಾಯಿಯ ಮಮತೆ ತಂದೆಯ ಶಿಸ್ತು ಸಂಯಮಗಳ ಸಂಗಮದಲ್ಲಿ ಬೆಳೆದ ನೆಹರು ಅವರ ವ್ಯಕ್ತಿತ್ವ ವೈಶಿಷ್ಟ ಪೂರ್ಣವಾಗಿತ್ತು. ತಂದೆಗೆ ಮಗ ಬ್ರಿಟಿಷ್‌ರಂತೆ ಆಧುನಿಕನಾಗಲಿ ಎಂಬಾಶೆ; ಆದರೆ ಮಗನಿಗದು ಇಷ್ಟವಿಲ್ಲ. ಈ ಸಂದರ್ಭದಲ್ಲಿ ತಮ್ಮ ಮೇಲೆ ಪ್ರಭಾವ ಬೀರಿದ ಆದರ್ಶ ಗುರು ಎಫ್.ಟಿ.ಬ್ರುಕ್ಸ್ ರವರನ್ನು ಕುರಿತು ನೆಹರೂಜಿ ಸ್ಮರಿಸಿಕೊಳ್ಳುತ್ತಾರೆ. ನೆಹರೂಜಿಯವರ ವಿದ್ಯಾಭ್ಯಾಸವೆಲ್ಲ ತಂದೆಯ ಬಯಕೆಯಂತೆ ದೇಶದಿಂದ ಹೊರಗೆ ಆಯಿತು. ನಾರ್ವೆಗೆ ಗಳೆಯನೊಂದಿಗೆ ವಿಹಾರಕ್ಕೆ ಹೋದಾಗ, ಹಿಮನದಿಯಲ್ಲಿ ಸ್ನಾನಕ್ಕೆ ಇಳಿದು ಕೊಚ್ಚಿಕೊಂಡು ಹೋಗಿ ಬದುಕುಳಿದದ್ದೇ ಒಂದು ರೋಚಕ ಘಟನೆ. ಬ್ಯಾರಿಸ್ಟರ್ ಆಗಿ ಭಾರತಕ್ಕೆ ಬಂದಾಗ ೧೯೧೨ನೇ ವರ್ಷ ನಡೆಯುತ್ತಿತ್ತು, ಆಗ ದೇಶದ ರಾಜಕೀಯರಂಗ ತುಂಬಾ ನಿರುತ್ಸಾಹದಿಂದ ತುಂಬಿತ್ತು. ನಾಯಕರೆಲ್ಲ ಅಲ್ಲಿ ಇಲ್ಲಿ ಚದುರಿದ್ದರು. ಆಗ ದೇಶಕ್ಕಾಗಿ ಹೋರಾಡಬಲ್ಲ ಒಂದೇ ಒಂದು ಸಂಸ್ಥೆ ಎಂದರೆ ಕಾಂಗ್ರೆಸ್ ಆಗಿತ್ತು. ೨೭ನೆಯ ಕಾಂಗ್ರೆಸ್ ಅಧಿವೇಶನದಲ್ಲಿ ಗೋಪಾಲಕೃಷ್ಣ ಗೋಖಲೆಯವರ ಭಾಷಣದಿಂದ ಪ್ರಭಾವಿತರಾದ ನೆಹರೂಜಿ ಕಾಂಗ್ರೆಸ್ಸಿಗೇ ಸೇರಿ ಅದನ್ನು ಬಲಪಡಿಸುವಲ್ಲಿ ನಿರತರಾದರು. ೧೯೧೫ ರಲ್ಲಿ ಮಾತಾಡಲು ಭಯಪಡುವ ನೆಹರೂಜಿ ಮೊದಲನೇ ಸಾರ್ವಜನಿಕ ಭಾಷಣದಲ್ಲೇ ಚಪ್ಪಾಳೆ ಗಿಟ್ಟಿಸಿದರು. ತಮ್ಮ ಬದುಕನ್ನು ಸ್ವಾತಂತ್ರ್ಯಕ್ಕಾಗಿ ಮುಡಿಪಿಡಲು ಸಂಕಲ್ಪ ಮಾಡಿದರು. ಅಂದು ಶುರುವಾದ ಹೋರಾಟ ಅವರ ಅಂತಿಮ ಕ್ಷಣದವರೆಗೆ ಮುಂದುವರಿಯಿತು. ೧೯೧೬ರಲ್ಲಿ ಕಮಲಾರೊಂದಿಗೆ ಮದುವೆಯಾದ ಮೇಲೆ ಹೆಚ್ಚು ಕಾಲ ಅವರಿಗೆ ಸಾಂಸಾರಿಕ ಸುಖ ಸಿಗಲಿಲ್ಲ. ಯಾವಾಗಲೂ ಸ್ವಾತಂತ್ರ್ಯ ಹೋರಾಟ, ಜೇಲು, ತಿರುಗಾಟ. ಹೀಗಾಗಿ ಪತಿಯ ಸಾನಿಧ್ಯ ಸಿಗದ ಕಮಲಾ ಅವರ ಆರೋಗ್ಯ ಯಾವಾಗಲೂ ಸ್ಥಿರವಾಗಿರುತ್ತಿರಲಿಲ್ಲ. ಜಲಿಯನ್‌ವಾಲಾಬಾಗ್‌ನ ಹತ್ಯಾಕಾಂಡದಿಂದ ನಾಯಕರು ಕೆರಳಿದರು.

೩೫ನೇ ಕಾಂಗ್ರೆಸಿನ ಅಧಿವೇಶನಕ್ಕೆ ಪಂ. ಮೋತಿಲಾಲರು ಅಧ್ಯಕ್ಷರಾಗಿದ್ದರು. ೧೯೨೦ರ ವಿಶೇಷಾಧಿವೇಶನದಲ್ಲಿ ಎಲ್ಲರೂ ಖಾದಿಧಾರಿಗಳಾಗಿ ನೆಲದ ಮೇಲೆ ಕುಳಿತು ಸಭೆ ನಡೆಸಿದರು. ಅಸಹಕಾರ ಚಳುವಳಿಯಲ್ಲಿ ತಂದೆ - ಮಕ್ಕಳಿಬ್ಬರೂ ವಕೀಲಿಗೆ ತಿಲಾಂಜಲಿ ನೀಡಿ, ಚಳುವಳಿಗೆ ಸೇರಿ ಸ್ವಯಂ ಸೇವಕರಾದರು. ಅನೇಕ ಸಲ ತಂದೆ -

ಮಕ್ಕಳಿಗೆ ಜೈಲಾಯಿತು. ನೆಹರೂ ಅವರ ಜೀವನ ಚರಿತ್ರೆಯನ್ನು ಓದುವುದೆಂದರೆ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಕತೆಯನ್ನೇ ಓದಿದಂತೆ. ನೆಹರೂ ಅವರು ಸಂಸಾರದಲ್ಲಿ ಒಬ್ಬೊಬ್ಬರನ್ನೇ ಕಳೆದುಕೊಂಡರು. ಆ ದುಃಖವನ್ನು ಬದಿಗಿರಿಸಿ ಅಹರ್ನಿಶಿ ಬಡಿದಾಡಿ, ಹೆಚ್ಚುಕಾಲ ಅನಾರೋಗ್ಯ, ಜೈಲುವಾಸಗಳಿಂದ ಬಳಲಿದರೂ, ಛಲದಂಕ ಮಲ್ಲನಂತೆ ಬಾಪೂಜಿಯವರ ಸಾನ್ನಿಧ್ಯದಿಂದ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟ ದೇಶದ ಮೊದಲ ಪ್ರಧಾನಿಗಳಾಗಿ ಭಾರತ ರತ್ನವಾಗಿ ಪ್ರಸಿದ್ಧರಾದರು.

೨. **ದೇವುಡು** : ಕಾಲೇಜು ವಿದ್ಯಾರ್ಥಿಯಾಗಿದ್ದಾಗ, ದೇವುಡು ಅವರ ಪ್ರಭಾವ ಹೇಗಾಯಿತು ಎಂಬುದನ್ನು ಸ್ವಾರಸ್ಯಕರವಾಗಿ ಹೇಳುತ್ತಾರೆ, ಸಾ.ಶಿಮ. ದೇವುಡು ಶಬ್ಧಕ್ಕೆ ಅಪಹಾಸ್ಯ ಮಾಡಿ ನಕ್ಕರೂ ಅವರ ಜ್ಞಾನಪ್ರದ ಬೋಧಪ್ರದ ಭಾಷಣ ಕೇಳಿ ಅವರ ಆರಾಧಕರಾದವರು.

ಓಂ ಭದ್ರಂ ಕರ್ಣೇಭಿಃ ಶ್ರುಣುಯಾಮ ದೇವಾಃ।
ಭದ್ರಂ ಪಶ್ಯೇಮಾಕ್ಷ ಭಿರ್ಯಜತ್ರಾಃ
ಸ್ಥಿರೈರಂಗೈ ಸ್ತುಷ್ಟುವಾಂ ಸಸ್ತನೋಭಿಃ
ವ್ಯಶೇಮ ದೇವಹಿತಂ ಯದಾಯುಃ
ಓಂ ಶಾಂತಿಃ ಶಾಂತಿಃ ಶಾಂತಿಃ

ಅಂದರೆ - ಎಲೈ ದೇವಾಂಶರೇ ಕಿವಿಯಿಂದ ಶುಭವಾದದ್ದನ್ನು ಕೇಳೋಣ, ಕಣ್ಣುಗಳಿಂದ ಶುಭವಾದದ್ದನ್ನು ನೋಡೋಣ, ಸ್ಥಿರ ಅಂಗಾಂಗಗಳುಳ್ಳ ದೇಹವುಳ್ಳವರಾಗಿ ಹೊಗಳೋಣ. ಆಯಸ್ಸು ಇರುವವರೆಗೂ ದೇವಹಿತವನ್ನು ಸಾಧಿಸೋಣ.

ಈ ಮಂತ್ರದ ಮಾತುಗಳು ತಮ್ಮ ಮೇಲೆ ಮಾಡಿದ ಪ್ರಭಾವದಿಂದ ಬದುಕನ್ನೇ ರೂಪಿಸಿತು ಎನ್ನುತ್ತಾರೆ ಸಾ.ಶಿ.ಮ. ದೇವುಡು ಅವರದು ಬಹು ಮುಖ ಪ್ರತಿಭೆ. ನಟ - ನಾಟಕಕಾರ - ಸಾಹಿತಿ - ಪತ್ರಿಕೋದ್ಯಮಿ, ಶಿಕ್ಷಣ ತಜ್ಞ ಹೀಗೆ ನಾನಾ ಹರಹುಗಳಲ್ಲಿ ಅವರ ವ್ಯಕ್ತಿತ್ವ ಹರಡಿಕೊಂಡಿದೆ. ಸನ್ ೧೮೯೬ ರಲ್ಲಿ ಮೈಸೂರಲ್ಲಿ ಜನಿಸಿದ ದೇವುಡು ಅವರದು ಅರಮನೆಯ ರಾಜಪುರೋಹಿತರ ಮನೆತನ. ಆದರೂ ಸರಳ ಜೀವಿ. ತಮ್ಮ ಜೀವಿತದಲ್ಲಿ ಅವರು ೫೦ ಮೌಲಿಕ ಕೃತಿಗಳನ್ನು ನೀಡಿದ್ದಾರೆ.

ಮಹಾಬ್ರಾಹ್ಮಣ, ಮಹಾಕ್ಷತ್ರಿಯ - ಮಹಾದರ್ಶನ ಮೇರು ಕೃತಿಗಳು. ಬೆಂಗಳೂರು ಶಂಕರ ಮಠದಲ್ಲಿದ್ದ ಮಹಾಮಹೋಪಾಧ್ಯಾಯ, ವೈದ್ಯನಾಥಶಾಸ್ತ್ರಿ ಅವರಲ್ಲಿ ಮೀಮಾಂಸಾ ವ್ಯಾಸಂಗ ಮಾಡಿ 'ಮೀಮಾಂಸಾದರ್ಪಣ' ಎಂಬ ಗ್ರಂಥವನ್ನು ಕನ್ನಡಕ್ಕೆ ಕೊಟ್ಟರು. ಯೋಗವಾಸಿಷ್ಠದ ೨೪ ಸಂಪುಟಗಳನ್ನು ಅರಮನೆಯ ಪ್ರಕಾಶನಕ್ಕಾಗಿ ಬರೆದುಕೊಟ್ಟರು. 'ಥೋರೋ' ಎಂಬವನ 'ವಾಲ್ಡನ್' ಎಂಬ ಇಂಗ್ಲಿಷ್ ಗ್ರಂಥವನ್ನು ಕನ್ನಡಿಸಿದರು. ದೇವುಡು ನಿಧನರಾದದ್ದು ೨೪-೧೦-೧೯೬೨ ರಂದು. ಅವರ ಮಹಾಕ್ಷತ್ರಿಯ ಕಾದಂಬರಿಗೆ ಅದೇ ವರ್ಷ ಮರಣೋತ್ತರ ಕೇಂದ್ರ ಸಾಹಿತ್ಯ ಅಕಾಡೆಮಿ ಬಹುಮಾನ ಸಿಕ್ಕಿತು. ಮಹಾದರ್ಶನ ಅವರ ಮರಣಾನಂತರ ಪ್ರಕಟವಾಯಿತು. ಅವರು

ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿ ಕೈಯಾಡಿಸಿದ್ದಾರೆ. ಕತೆ -ಕಾದಂಬರಿ - ನಾಟಕ - ವಿಮರ್ಶೆ - ಸಾಂಪಾದಿತ - ಅನುವಾದಿತ - ವ್ಯಕ್ತಿ ಚಿತ್ರ - ಜಾನಪದ ಹೀಗೆ ಯಾವ ಕ್ಷೇತ್ರವನ್ನು ಅವರು ಬಿಟ್ಟವರಲ್ಲ. 'ಯವನ ಪುರಾಣ' 'ಸೋಲೋ ಗೆಲುವೋ' ಎರಡು ಕಥಾ ಸಂಕಲನಗಳು.

ಮಹಾಬ್ರಾಹ್ಮಣ : ವಿಶ್ವಾಮಿತ್ರನ ಚರಿತ್ರೆ ಗಾಯತ್ರಿಮಂತ್ರ ಜನಕನಾದ ವಿಶ್ವಾಮಿತ್ರನು ಜನಕನ ಆಸ್ಥಾನದಲ್ಲಿ ಮಹರ್ಷಿ ಪಟ್ಟ ಪಡೆದ ರೋಚಕ ಕತೆ.

ಮಹಾಕ್ಷತ್ರಿಯ : ನಹುಷ ಮಹಾರಾಜನ ಕತೆ, ಪೂರ್ವಾರ್ಧದಲ್ಲಿ ಇಂದ್ರವೃತ್ತಾಸುರರ ಪ್ರಸ್ತಾಪ ಹೆಚ್ಚಾಗಿದ್ದರೆ, ಉತ್ತಾರಾರ್ಧದಲ್ಲಿ ನಹುಷನ ಕತೆ ಇದೆ. ನಹುಷ ಇಂದ್ರಪದವಿ ಪಡೆದಾಗ, ಶಚಿದೇವಿಯನ್ನು ಸ್ವೀಕರಿಸುವ ಪ್ರಸಂಗ ಬರುತ್ತದೆ. ಆಗ ನಹುಷ ಈಗಾಗಲೇ ನನಗೊಬ್ಬಳು ಅರಸಿ ಇದ್ದಾಳೆ 'ಬೇಡ' ಎಂದು ನಿರಾಕರಿಸುತ್ತಾನೆ. ಇಲ್ಲಿ ದೇವುಡು ಅವನು ನಹುಷ ಪಾತ್ರವನ್ನು ಉದಾತ್ತೀಕರಿಸಿದ್ದಾರೆ.

ಮಹಾದರ್ಶನ : ಇದು ಮಹರ್ಷಿ ಯಾಜ್ಞವಲ್ಕ್ಯನ ಮಹತ್ಸಾಧನೆ, ಸಿದ್ಧಿಗಳ ಕಥೆ, ವೇದಗಳನ್ನು ಸಮಂಜಸವಾಗಿ ವರ್ಗೀಕರಣ ಮಾಡಿದವನು. ಇವನಿಂದ ಶುಕ್ಲಯಜುರ್ವೇದ ಅಥವಾ ವಾಜಸನೇಯ ಸಂಹಿತಾ, ಶತಪಥ ಬ್ರಾಹ್ಮಣ. ಈಶಾವಾಸ್ಯ ಅಥವಾ ಸಂಹಿತೋಪನಿಷಿತ್ತು ಎಂಬ ವಿದ್ವತ್ ಗ್ರಂಥಗಳು ರಚಿತವಾದವು. ಇವನು ೧ ವೇದ ೧ ಬ್ರಾಹ್ಮಣ, ೧ ಉಪನಿಷತ್ತುಗಳನ್ನು ಸೃಷ್ಟಿಸಿದನೆಂದು ಹೇಳುತ್ತಾರೆ. ಬ್ರಹ್ಮವಾದದಲ್ಲಿ ವಿದಗ್ಧನನ್ನು ಗೆದ್ದು ಸರ್ವಜ್ಞಾಭಿಷೇಕ ಮಾಡಿಸಿಕೊಂಡವನು. ತನ್ನ ಕೊನೆಯ ಗಳಿಗೆಯಲ್ಲಿ ಇಬ್ಬರು ಪತ್ನಿಯರಿಗೆ ಏನು ಬೇಕೆಂದು ಕೇಳಿದಾಗ ಮೈತ್ರೇಯಿ ಸನ್ಯಾಸ ಕೇಳುತ್ತಾಳೆ. ಇಂಥ ಒಂದು ಸಂದರ್ಭದಲ್ಲಿ ಮೈತ್ರೇಯಿ ಹೆಣ್ಣಿನ ಪಾರತಂತ್ರ್ಯದ ಬಗ್ಗೆ ಮಾತನಾಡುತ್ತಾಳೆ. ಆದರೆ ಸಾ.ಶಿ.ಮ. ಅವರು ಇದನ್ನು ಚೆನ್ನಾಗಿ ವಿಶ್ಲೇಷಿಸಿದ್ದಾರೆ. "ವೇದಕಾಲದಲ್ಲಿ ಸ್ತ್ರೀ ಸ್ವಾತಂತ್ರ್ಯಕ್ಕೆ ಗೌರವವಿತ್ತು. ಬಹುಶಃ ಸಮಕಾಲೀನ ಪ್ರಭಾವದಿಂದಾಗಿ ದೇವುಡು ಹೀಗೆ ಬರೆದಿರಬಹುದು" ಎನ್ನುತ್ತಾರೆ. ದೇವುಡು ಅವರ 'ಮಯೂರ' ಈ ಶತಮಾನದ ಪೂವಾರ್ಧದಲ್ಲಿ ಬಂದ ಮಹತ್ವಪೂರ್ಣ ಐತಿಹಾಸಿಕ ಕಾದಂಬರಿಗಳಲ್ಲಿ ಒಂದು ಎನ್ನುತ್ತಾರೆ. ಅವರ 'ಕಳ್ಳರ ಕೂಟ' ಸಾಮಾಜಿಕ ಕಾದಂಬರಿಯು ೧೯೨೬ರಲ್ಲಿ ಪ್ರಕಟವಾಗಿ ೧೯೪೦ ಹೊತ್ತಿಗೆ ೩ನೇ ಮುದ್ರಣ ಕಂಡಿತು. Folklore ಗೆ ಜಾನಪದವೆಂದು ಕರೆವವರು ದೇವುಡು. ಆದರೆ ಜಾನಪದಕ್ಕೆ ಸಂಬಂಧಿದ ವಾಖ್ಯಾನವೆಂದು ಭ್ರಮಿಸಿ ಒಂದೆಡೆಗೆ ಸಂಸ್ಕೃತಿಯ ಬಗ್ಗೆ ವ್ಯಾಖ್ಯಾನ ನೀಡಿದ್ದಾರೆ ಎಂಬುದನ್ನು ಸಾ.ಶಿ.ಮ. ಸೂಚಿಸುತ್ತಾರೆ. ಸುಮಾರು ೪೦ ವೇದೋಕ್ತ ಪದಗಳನ್ನು ಅರ್ಥ ಸಮೇತ ಸಂಗ್ರಹಿಸಿದ್ದಾರೆ. ೩೧ ಲೋಕೋಕ್ತಿಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ. "ದೇವುಡು" ಪೌರಾಣಿಕ ಕಾದಂಬರಿಗಳೆಂಬ ಹೊಸ ಪ್ರಕಾರವನ್ನು ಹಾಗೂ ಕನ್ನಡಕ್ಕೆ ವೇದಗಳನ್ನು ಮೊದಲು ನೀಡಿದವರು ಅವರು. ಕನ್ನಡದ ಕೆಲವೇ ವಿದ್ವಾಂಸರಲ್ಲಿ ಮೊದಲ ಸಾಲಿನಲ್ಲಿ ನಿಲ್ಲಬಲ್ಲವರು.

೨. **ಅಪರೂಪದವರು** : ಈ ಪುಸ್ತಕದಲ್ಲಿ ಕರ್ನಾಟಕದ ಮೂವರು ವಿಭೂತಿ ಪುರುಷರ ಪರಿಚಯ ಮಾಡಿಕೊಟ್ಟಿದ್ದಾರೆ. ೧. ಮಹಮ್ಮೂದ್ ಗವಾನ ೨. ನಾಟ್ಯರಾಣಿ ಶಾಂತಲೆ (ನಾಟ್ಯಮಯೂರಿ) ೩. ಕನ್ನಡಿ ಹೇಳಿದ ಕತೆ (ನೇತಾಜಿ ಸುಭಾಸ್ ಚಂದ್ರ ಬೋಸರ ಕತೆ)

೧. **ಮಹಮ್ಮೂದ್ ಗವಾನ್** : ಬೀದರದಲ್ಲಿ ಅತ್ಯಂತ ಪ್ರಸಿದ್ಧ ಪ್ರೇಕ್ಷಣೀಯ ಸ್ಥಳದಲ್ಲಿ ಮಹಮ್ಮದ ಗವಾನ್ ಯುನಿವರ್ಸಿಟಿಯೂ ಒಂದು. ಈ ಬಗ್ಗೆ ಹೆಚ್ಚಿನ ಕನ್ನಡಿಗರಿಗೆ ಗೊತ್ತಿಲ್ಲ. ಆ ಕೊರತೆಯನ್ನು ನೀಗಲು, ಮಹಾನುಭಾವ ಮಹಮ್ಮದ ಗವಾನನ ಚರಿತ್ರೆಯನ್ನು ಸಾ.ಶಿ.ಮ. ಅವರು, ಚಾರಿತ್ರಿಕ ಆಧಾರಗಳೊಂದಿಗೆ ಸೊಗಸಾಗಿ ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಪಶ್ಚಿಮ ದೇಶದಿಂದ ಆಗಮಿಸಿದ ಬ್ರಹ್ಮಚಾರಿ ಗವಾನನು, ಬೀದರವನ್ನು ಆಳುತ್ತಿದ್ದ ಅಲ್ಲಾವುದ್ದಿನ್ ಬಾದಶಹನ ಒಂದು ವಿದ್ವತ್ ಗೊಷ್ಠಿಯಲ್ಲಿ ತತ್ವಜ್ಞಾನದ ವಿಷಯದಲ್ಲಿ ಚರ್ಚಿಸಿ ದೊರೆಯ ಗಮನವನ್ನು ಸೆಳೆದನು. ಬಾದಶಹ ಅವನನ್ನು ತನ್ನಲ್ಲಿ, ರಾಜ್ಯದ ಸೂಕ್ತ ಸಲಹೆಗಾರನಾಗಿ ನೆಲೆನಿಲ್ಲಬೇಕೆಂದು ಕೇಳಿಕೊಳ್ಳುತ್ತಾನೆ. ರಾಜ್ಯದ ಸರ್ವಾಂಗೀಣ ಉನ್ನತಿಗೆ ಗವಾನರೂ ಕಾರಣೀಭೂತರಾಗುತ್ತಾರೆ. ನಿಷ್ಠಾವಂತ ಭಗವದ್ಭಕ್ತ ಕೂಡ, ಮಹಮ್ಮದ ಗವಾನರು ಎಂಥ ವಿದ್ಯಾಪ್ರೇಮಿ ಅಂದರೆ ರಾಜ್ಯದಿಂದ ಒಂದು ಚಿಕ್ಕಾಸನ್ನು ಪಡೆಯದೇ ತನ್ನ ಸಂಪಾದನೆಯಲ್ಲಿ ಒಂದು ಬೃಹತ್ ಕಟ್ಟಡದ ಮದ್ರಸಾ ಕಟ್ಟಿಸಿದ್ದಾರೆ. ಭಾರತದಲ್ಲೇ ಇದು ಅಪರೂಪವಾದ ವಿಶ್ವವಿದ್ಯಾಲಯವಾಗಿತ್ತು. ಗುರು-ಶಿಷ್ಯರಿಗೆ ವಸತಿಯ ಏರ್ಪಾಡು ಅಲ್ಲಿತ್ತು. ಆದರೆ ಅವರ ಜನಪ್ರಿಯತೆಯಿಂದ ಕರುಬಿದ ಆಸ್ಥಾನದ ಕೆಲವರು ಕುತಂತ್ರದಿಂದ ಅವರ ಕೊಲೆ ಮಾಡಿಸುತ್ತಾರೆ. ಮರಣಾನಂತರವೂ ಗವಾನರ ಚೇತನ ರಾಜ್ಯವನ್ನು ಕಾಯುತ್ತಿತ್ತು ಎಂಬುದರ ಐತಿಹ್ಯವನ್ನು ಕೂಡ ಸಾ.ಶಿ.ಮ. ಇಲ್ಲಿ ನಮೂದಿಸುತ್ತಾರೆ. ಕನ್ನಡದ ಚಾರಿತ್ರಿಕ ಮಹಾನುಭಾವರಲ್ಲಿ ಗವಾನರ ಪರಿಚಯ ಬಹಳ ಅಪರೂಪದ್ದು.

೨. **ನಾಟ್ಯ ಮಯೂರಿ** : ಹೊಯ್ಸಳ ಅರಸ ವಿಷ್ಣುವರ್ಧನನ ಪತ್ನಿ ನಾಟ್ಯರಾಣಿ ಎಂದೇ ಪ್ರಸಿದ್ಧಳಾದ ಶಾಂತಲೆಯ ಕಥೆ ಇದು. ವಿಷ್ಣುವರ್ಧನನ ಮಡದಿಯಾಗಿ, ರಾಜ್ಯದ ಭದ್ರತೆಗಾಗಿ ಸವತಿಯರನ್ನು ಸೌಹಾರ್ದದಿಂದ ಸ್ವಾಗತಿಸಿದವಳು, ರಾಜ್ಯಾಡಳಿತದಲ್ಲಿ ದೊರೆಗೆ ಸಲಹೆ ನೀಡಿದವಳು. ಸಂಗೀತ - ನೃತ್ಯಗಳಲ್ಲಿ ಸ್ವಂತ, ಪರಿಣಿತಿ ಹೊಂದಿದ್ದು ಅವುಗಳ ಅಭಿವೃದ್ಧಿಗಾಗಿ ಶ್ರಮಿಸಿದವಳು.

ಐತಿಹಾಸಿಕ ವಿವರಗಳನ್ನು - ವಾತಾವರಣವನ್ನು ಚಿತ್ರಿಸುವುದು ಕಷ್ಟ. ಆದರೆ ಸಾ.ಶಿ.ಮ. ಅವರ ಶ್ರಮ ಇಲ್ಲಿ ಎದ್ದು ಕಾಣುತ್ತದೆ. ಯಾವ ಸಣ್ಣ ವಿವರವನ್ನು ಅವರು ಬಿಟ್ಟುಕೊಟ್ಟಿಲ್ಲ. ಶಾಂತಲೆಯ ವ್ಯಕ್ತಿತ್ವವನ್ನು ಹೃದಯ ಸ್ಪರ್ಶಿಯಾಗಿ ಚಿತ್ರಿಸಿದ್ದಾರೆ. ಅವಳು ರಾಜನೀತಿ - ಯುದ್ಧಕೌಶಲಗಳಲ್ಲಿ ಪೌರುಷ ಮೆರೆದರೆ ಸಂಗೀತ ನೃತ್ಯಗಳಲ್ಲಿ ಲಾಲಿತ್ಯವನ್ನು ಮೆರೆಯುತ್ತಾಳೆ. ತನ್ನ ಗುರು ಜಕಣಾಚಾರಿಯಿಂದ ಹಳೆಬೀಡು - ಬೇಲೂರುಗಳಲ್ಲಿ ತನ್ನ ನೃತ್ಯದ ನಾನಾ ಭಂಗಿಗಳ ಶಿಲ್ಪಗಳನ್ನು ನೆಲೆಗೊಳಿಸಿ, ಶಿಲ್ಪಕ್ಷೇತ್ರಕ್ಕೆ ಅಸಾಧಾರಣ ಕಾಣಿಕೆಯನ್ನು ನೀಡಿದ್ದಾಳೆ. ಅದರಿಂದಾಗಿ ಅವಳಿಗೆ ವಿಶ್ವಪ್ರಸಿದ್ಧಿ ಬಂದಿದ್ದು. ಆದರೆ ತನ್ನ ಮಗು ತೀರಿಕೊಂಡ

ಮೇಲೆ, ಉತ್ತರಾಧಿಕಾರಿಯಾಗಲು ಪಟ್ಟ ಮಹಿಷಿಯ ಮಕ್ಕಳೇ ಬೇಕು ಎನ್ನುವ ಕಾರಣಕ್ಕೆ ಸಲ್ಲೇಖನ ವ್ರತದಿಂದ ಕೀರ್ತಿಶೇಷಳಾಗುತ್ತಾಳೆ. ಇಡೀ ಸ್ತ್ರೀಲೋಕ ಹೆಮ್ಮೆ ಪಡುವಂಥ ಹೃದ್ಯಕತೆ ಶಾಂತಲೆಯದು. ಅದನ್ನು ಮನಮುಟ್ಟುವಂತೆ ಕಡೆದಿದ್ದಾರೆ ಸಾ.ಶಿ.ಮ. ಅವರು.

೨. ಕನ್ನಡಿ ಹೇಳಿದ ಕತೆ : ಇದು ನೇತಾಜಿ ಸುಭಾಸ್‌ಚಂದ್ರ ಬೋಸ್ ಅವರ ಕತೆ. ಇದನ್ನು ನಿರೂಪಿಸುವಾಗ ನವೀನ ತಂತ್ರವೊಂದನ್ನು ಬಳಸಿದ್ದಾರೆ ಸಾ.ಶಿ.ಮ. ಅವರು. ಜರ್ಮನ್ ಪತ್ನಿಯಿಂದ ಜನಿಸಿದ ನೇತಾಜಿ ಮಗಳು ಅನಿತಾ ಬೋಸ್, ೧೯೬೦ ರಲ್ಲಿ ಭಾರತಕ್ಕೆ ಭೇಟಿ ನೀಡಿದಾಗ ಕಲಕತ್ತೆಯ ತನ್ನ ತಂದೆಯ ಮನೆಯಲ್ಲಿ ತಂಗುತ್ತಾಳೆ. ಅಂದು ರಾತ್ರಿ ಮಲಗಿದಾಗ ಆ ಕೊಠಡಿಯ ಕನ್ನಡಿ ಅವಳಿಗೆ ತಂದೆಯ ಕತೆಯನ್ನು ಹೇಳುತ್ತದೆ. ಅವರಿಗೆ ಇಷ್ಟವಿಲ್ಲವಿದ್ದರೂ ಇಂಗ್ಲಿಷ್ ಮಿಶನರಿ ಶಾಲೆಯಲ್ಲಿ ಅಭ್ಯಾಸವಾಗುತ್ತದೆ. ಸೋದರಿ ನಿವೇದಿತಾರ ಪರಿಚಯ ಅವರಲ್ಲಿ ಆಧ್ಯಾತ್ಮದ ಅರಿವನ್ನು ಬಿತ್ತುತ್ತದೆ. ರಾವೆನ್‌ಷಾ ಕೊಲಿಜಿಯೇಟ್ ಎಂಬ ಭಾರತೀಯ ಪರಿಸರವುಳ್ಳ ಶಾಲೆಗೆ ಸೇರಿದಾಗ ಅಲ್ಲೊಮ್ಮೆ ಆಧ್ಯಾತ್ಮಸಾಹಿತ್ಯದ ಪರಿಚಯ, ಕಲಕತ್ತೆಯ ಕಾಲೇಜಿನಲ್ಲಿ ಅರವಿಂದರ ಪ್ರಭಾವ. ದೇಶದ ದಾಸ್ಯದಿಂದಾಗಿ ದಾರುಣತೆ, ಬಡತನ ಮೌಢ್ಯಗಳು ಬೀಡುಬಿಟ್ಟಿರುವ ಅರಿವಾಗಿ ಕ್ರಾಂತಿಕಾರರಾಗಿ ಸೈನ್ಯ ಕಟ್ಟುತ್ತಾರೆ. ಎಷ್ಟೋ ಸಲ ಹಿಂಸೆ - ಅಹಿಂಸೆಯ ವಿಷಯಗಳಲ್ಲಿ ಮಹಾತ್ಮಗಾಂಧೀಜಿಗೆ ಅವರಿಗೆ ವಾದ - ವಿವಾದಗಳಾಗಿರುತ್ತವೆ. ಮನೆ - ಮಾರುತೊರೆದು ಸ್ವಾತಂತ್ರ್ಯ ಹೋರಾಟದಲ್ಲಿ ಧುಮಕುತ್ತಾರೆ. ಪ್ರಾಣಸ್ನೇಹಿತರನ್ನು ಕಳೆದುಕೊಳ್ಳುತ್ತಾರೆ. ನೀವು ರಕ್ತ ಕೊಡಿ ನಾನು ಸ್ವಾತಂತ್ರ್ಯ ಕೊಡುತ್ತೇನೆ ಎಂದು ಸೈನಿಕರನ್ನು ಸದಾ ಹುರಿದುಂಬಿಸುತ್ತಾರೆ. ಆದರೆ ಜಪಾನ್ ಸಂಪೂರ್ಣ ಶರಣಾಗತವಾದ ಮೇಲೆ ಹಟಬಿಡದೆ ೧೯೪೫ ಆಗಸ್ಟ್ ೧೫ ರಂದು ಸಹಚರ ಹಬೀಬ್ ಉರ್ ರಹಮಾನ ಜೊತೆ ಬಾಂಬರ್ ಯುದ್ಧ ವಿಮಾನದಲ್ಲಿ ಟೋಕಿಯೋಗೆ ಹೊರಟಾಗ ವಿಮಾನ ಸ್ಫೋಟಗೊಂಡು ಚೂರಾಯಿತೆಂದು, ಅವರ ಸಹಚರ ಮಾತ್ರ ಬದುಕಿದರೆಂದು ಸುದ್ದಿ ಬಂದು ಭಾರತ ತತ್ತರಿಸಿತು. ಅವರ ಚಿತಾಭಸ್ಮಾ ಕೂಡ ಭಾರತಕ್ಕೆ ಬರಲಿಲ್ಲ. ಇಂಥ ಮಹಾವೀರನಿಗೆ ನಮ್ಮ ದೇಶ ತೋರಿದ್ದು ಎಂತಹ ಅವಹೇಳನ?

ಸಾಶಿಮ - ಅಪರೂಪದವರು

ಶಾಲಿನಿ ಪ್ರಭು

ಬಹಮನೀ ಸಾಮ್ರಾಜ್ಯದ ಮುಸಲ್ಮಾನ ಅರಸೊತ್ತಿಗೆಯ ಕತೆ - ವಜೀರ್ ಏ. ಆಜಮ್. ಮಹಮೂದ ಗಾವಾನನ ಕತೆ ಇದು. ಮುಸಲ್ಮಾನ ಇತಿಹಾಸದುದ್ದಕ್ಕೂ ರಾಜ್ಯಕ್ಕಾಗಿ, ಪಟ್ಟಕ್ಕಾಗಿ ಮನುಷ್ಯ ಸಂಬಂಧಗಳೆಲ್ಲ ಗೌಣವಾದ ಕತೆಗಳೇ. ಅಧಿಕಾರದ ಮುಂದೆ ಜನಹಿತ, ರಾಜ್ಯಹಿತ, ಎಲ್ಲವೂ ತೃಣಸಮಾನವಾಗಿ ರಕ್ತಪಾತವಾದ ಘಟನೆಗಳೇ ಭೂತಕಾಲದುದ್ದಕ್ಕೂ. ಮಗನಿಂದ ತಂದೆಯ ಕೊಲೆ, ಪಿತೂರಿ, ಅಧಿಕಾರದ ಸ್ವಾರ್ಥದ ಮುಂದೆ ರಕ್ತಸಂಬಂಧ ಇಲ್ಲವಾದ ಪಾತ್ರಗಳೇ.

ಮಹಮೂದ ಗಾವಾನ ಮಾನವೀಯ ಮೌಲ್ಯಗಳ ಗಣಿ. ಮೂಲತಃ ಪರ್ಶಿಯಾ ದೇಶದ ವ್ಯಾಪಾರಿ. ೧೪೧೧ರಲ್ಲಿ ಜನಿಸಿದಾತ. ಬಹಮನೀ ವಂಶದ ಹತ್ತನೆಯ ಸುಲ್ತಾನ ಅಲ್ಲಾಉದ್ದೀನನ ಆಡಳಿತ ಕಾಲದಲ್ಲಿ ಧರ್ಮ ಭೂಯಿಷ್ಠ ರಾಷ್ಟ್ರವಾದ ಭಾರತಕ್ಕೆ ಬಂದು ಇಲ್ಲೇ ತಳಊರಿದ್ದ - ೧೪೫೦ ರಲ್ಲಿ ರಾಜಮಾತೆ ಮುಖಮೂಲಳ ಆಪ್ತನೂ ಆದ. ಗಾವಾನ 'ವಜೀರ್-ಏ-ಆಜಮ್ ಆದ ಕಾಲದಲ್ಲೇ ಬಿದರೆ ಉಚ್ಛ್ರಾಯ ಸ್ಥಿತಿಯಲ್ಲಿತ್ತು. ಗಾವಾನನ ದೂರದರ್ಶಿತ್ವ, ಧರ್ಮಭೀರುತ್ವ, ಆಧ್ಯಾತ್ಮದ ನಿಲುವು ಇವೆಲ್ಲ ಬಿದರೆಯನ್ನು ಅಭಿವೃದ್ಧಿಯ ತುತ್ತತುದಿಗೆ ಒಯ್ದಿತ್ತು. ಮದ್ರಸಾ, ಮಸೀದಿ, ವಿದ್ಯಾಕೇಂದ್ರ ಎಲ್ಲವೂ ಬಿದರೆಯಲ್ಲಿ ಸ್ಥಾಪಿತವಾದವು. ಬಿದರೆ ಒಂದು ಸುಪ್ರಸಿದ್ಧ ಶಿಕ್ಷಣಕ್ಷೇತ್ರವೂ ಆಯಿತು. 'ತಿಂದ ಅನ್ನ ರಕ್ತವಾಗುವಂತೆ ಓದಿದ ಓದು ಜ್ಞಾನವಾಗಬೇಕು' - ಎನ್ನುವಂತಹ ಜ್ಞಾನ ಪಿಪಾಸು ಗಾವಾನ. 'ತನ್ನೊಳಗಣ ಕಿಚ್ಚು ತನ್ನ ಸುಟ್ಟಲ್ಲದೆ ಪರರ ಸುಡದು' ಎನ್ನುವಂತೆ ತನ್ನವರಿಂದಲೇ ಮೋಸಕ್ಕೊಳಗಾದ ಧರ್ಮಭೀರು ಗಾವಾನ. ತನ್ನದಲ್ಲದ ತಪ್ಪಿಗೆ ಜೀವ ಕೊಡಬೇಕಾಗಿ ಬಂದಿತು ಮಾತ್ರವಲ್ಲ ಕೃತಕ ಕೂಟಕ್ಕೆ ಬಲಿಯಾಗ ಬೇಕಾಯಿತು. ಆಳುವ ರಾಜನ ಅಧಿಕಾರ ಬಲದೆದುರು ರಾಜದ್ರೋಹಿಯ ಪಟ್ಟ ಹೊತ್ತು ಮರಣ ದಂಡನೆಗೆ ಗುರಿಯಾಗಬೇಕಾಯಿತು. ನಂಬಿದವರನ್ನು ಕೊಲ್ಲುವ ಮುಸಲ್ಮಾನ ಇತಿಹಾಸದ ಮಗದೊಂದು ಪುನರಾವರ್ತನೆಯಾಯಿತು. 'ಮಹಾತ್ಮರಿಗಿದು ಮನೆಯಲ್ಲ' ಎಂದು ರಾಜಮಾತ್ಗೆ ದುಃಖಿಸುವಂತಾಯಿತು.

''ಜಗತ್ತು ಎಲ್ಲಿಯವರೆಗೆ ಮಾನವತೆಯ ಮಹಾಪಾಠವನ್ನು ಕಲಿಯುವುದಿಲ್ಲವೋ, ಎಂದಿನವರೆಗೆ ಮನುಷ್ಯ ಮನುಷ್ಯನಾಗಿರುವುದಿಲ್ಲವೋ ಅಲ್ಲಿನವರೆಗೆ ಇಂತಹ ದುರಂತಗಳು ನಡೆಯುತ್ತಲೇ ಇರುತ್ತವೆ''. ಇದು ಕೇವಲ ಹಾಳೆಯ ಮೇಲಿನ ಬರಹವಲ್ಲ ಇತಿಹಾಸವೂ ಕೂಡಾ.

ಮಾನವ ಸಂಬಂಧಗಳ ತಂತುಗಳನ್ನು ನವಿರಾಗಿ ಚಿತ್ರಿಸುವ ಕಲೆ 'ಸಾಶಿಮ'ರಿಗೆ ಒಗ್ಗಿಹೋಗಿದೆ. ಶತಶತಮಾನಗಳ ಹಳೆಯ ಇತಿಹಾಸ ಅವರ ಲೇಖನಿಯ ಮೂಲಕ ನಮ್ಮನ್ನು ಘಟನೆಗಳು ನಡೆದ ಸ್ಥಳಕ್ಕೆ ಕೊಂಡೊಯ್ಯುತ್ತವೆ. ನಾವು ನೀವು ಅಲ್ಲೇ ಇದ್ದೇವೇನೋ ಎನ್ನುವ ಭಾವನೆಗೆ ಪುಷ್ಟಿ ನೀಡುತ್ತವೆ. ಶಬ್ದಗಳ ಬಂಧುರತೆ, ಲಾಲಿತ್ಯ,

ಘಟನೆಗಳ ಸುರುಳಿ ಬಿಚ್ಚುವಿಕೆ, ಒಂದಕ್ಕೊಂದು ಜೋಡಣೆ ಇವು ಸಾಶಿಮರ ಬರಹಗಳ ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತವೆ.

ಭಾರತೀಯ ಸಾಹಿತ್ಯದಲ್ಲಿ 'ಶಾಂತಲೆ' ಒಂದು ಔಚಿತ್ಯಪೂರ್ಣ ಕೃತಿ. ಹತ್ತು ಶತಮಾನಗಳ ಹಿಂದಿನ ಕತೆಯಾದರೂ ಅದು ಇಂದಿಗೂ ತನ್ನ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿದಿರುವ ಅದ್ಭುತ ಮಾದರಿಯಾಗಿದೆ. ಅದು ಕತೆಯಾಗಿ ಅಲ್ಲ ಘಟನೆಯಾಗಿ ಅಲ್ಲ, ಭಾರತೀಯ ಸಂಸ್ಕೃತಿಗೆ, ಜಾನಪದದ ಬದುಕಿಗೆ ಕನ್ನಡಿ ಹಿಡಿದಂತೆ ಚಿತ್ರಿತವಾಗಿದೆ.

'ಸಾಶಿಮ'ರ 'ಅಪರೂಪದವರು' ಹೆಸರೇ ಸೂಚಿಸುವಂತೆ ಭಾರತೀಯ ಸಾಹಿತ್ಯದಲ್ಲಿ ಅಪರೂಪವೆನಿಸುವ ಹಲವು ಕಲಾಕೌಸ್ತುಭಗಳ ಒಂದು ಚಿತ್ರಣ. ಅದೊಂದು ಗತನೆನಪು. ಇತಿಹಾಸವಾದರೂ ಸಾಹಿತ್ಯದ ಪುಟಪುಟಗಳಲ್ಲಿ ಅಮರತ್ವವನ್ನು ಮೆರೆದ ಅದ್ಭುತ ಕಥಾನಕ 'ಶಾಂತಲೆ' ಸಾಶಿಮರ ಲೇಖನಿಯಲ್ಲಿ 'ನಾಟ್ಯಮಯೂರಿ'ಯಾಗಿ ಮೂಡಿಬಂದಿದೆ. 'ಶಾಂತಲೆ' ಎಲ್ಲರೂ ತಿಳಿದಿದ್ದ ಕತೆಯೇ. ಅದು 'ಸಾಶಿಮ'ರ ಅದ್ಭುತ ಲೇಖನಿಯಿಂದ ಜಲಪಾತದಂತೆ ಹರಿದು ಒಂದೇ ಉಸಿರಿಗೆ ಓದಿಸಿಕೊಂಡು ಹೋಗುತ್ತದೆ.

ಶಾಂತಲೆಯ ನರ್ತನದೊಂದಿಗೆ ಕಥಾನಕ ಪ್ರಾರಂಭಗೊಳ್ಳುತ್ತದೆ. ದಣಾಯಕ ಮಾರಸಿಂಗಮಯ್ಯನ ಏಕಮಾತ್ರ ಸುಪುತ್ರಿ ಶಾಂತಲೆ ಸಕಲ ಕಲಾವಲ್ಲಭೆ. ಆರುವತ್ತು ನಾಲ್ಕು ವಿದ್ಯೆಗಳಲ್ಲಿಯೂ ಪಾರಂಗತಳು. ಸಂಸ್ಕೃತಿ, ಸಜ್ಜನಿಕೆಗಳ ಆಗರ. ನೊಳಂಬವಾಡಿಯವರನ್ನು ಯುದ್ಧದಲ್ಲಿ ಸೋಲಿಸಿ ವಿಜಯೋತ್ಸವವಾಗಿ ವಿಷ್ಣುವರ್ಧನ ದೋರಸಮುದ್ರಕ್ಕೆ ಹಿಂತಿರುಗುತ್ತಾನೆ. ಯುವರಾಜ, ಶಾಂತಲೆಯನ್ನು ಭೇಟಿಯಾದದ್ದು ಈ ವಸಂತನರ್ತನದ ಸಂದರ್ಭದಲ್ಲಿ. ಮೊದಲ ನೋಟದಲ್ಲೇ ಇಬ್ಬರಲ್ಲೂ ಪ್ರಣಯಾಂಕುರ. ಮಗನ ಸುಖದಲ್ಲೇ ಒಳಿತನ್ನು ಕಾಣುವ ರಾಜಮಾತೆ ಇವರಿಬ್ಬರ ವಿವಾಹಕ್ಕೆ ಬದ್ಧಳಾಗುತ್ತಾಳೆ.

ಶಾಂತಲೆ ನೃತ್ಯಗಾರ್ತಿ ಮಾತ್ರವಲ್ಲ ಶಿಲ್ಪಕಲಾ ಸ್ಪರ್ಶ್ಯವನ್ನೂ ಪಡೆದವಳು. ಅದನ್ನು ಗುರುತಿಸಿದ ಯುವರಾಜ ವಿಷ್ಣುವರ್ಧನ ವೇಲಾಪುರಿಯಲ್ಲಿ ನಿರ್ಮಿಸಬೇಕೆಂದಿರುವ ವಿಜಯನಾರಾಯಣ ದೇಗುಲದ ದ್ವಾರದಲ್ಲಿ ನಿರ್ಮಿಸಬೇಕೆಂದಿರುವ ಶಿಲಾಬಾಲಿಕೆಯ ನರ್ತನದ ನಕಲುಗಳನ್ನು ಕಳುಹಿಸಿಕೊಡುತ್ತಾನೆ. ಮಾತ್ರವಲ್ಲ ಆಕೆಯ ಅಭಿಪ್ರಾಯವನ್ನೂ ಕೇಳುತ್ತಾನೆ. ಪರೋಕ್ಷವಾಗಿ, ನಕ್ಷತ್ರಾಕಾರದ ಅಡಿಪಾಯವುಳ್ಳ ದೇವಾಲಯದ ಪ್ರತಿಯೊಂದು ಮೂಲೆಯಲ್ಲೂ ಒಂದೊಂದು ಕಲಾಶಿಲ್ಪವನ್ನು ಮೇಲು ಚಾವಣಿಗೆ ಆಧಾರವಾಗಿ ನಿಲ್ಲಿಸಿದರೆ ಕಟ್ಟಡಕ್ಕೂ ಆಧಾರ. ದೇಗುಲಕ್ಕೂ ಅಲಂಕಾರವಾಗುವುದು— ಶಾಂತಲೆಯ ಅಭಿಮತವಿದು. ಶಾಂತಲೆಯ ಕಲಾಪ್ರೌಢಿಮೆಗೆ ಇದೊಂದು ಉದಾಹರಣೆ ಮಾತ್ರ.

'ಯತ್ರ ನಾರ್ಯಸ್ತು ಪೂಜ್ಯತೇ ರಮಂತೇ ತತ್ರ ದೇವತಾ'... 'ಸಾಶಿಮ'ರ ಕೃತಿಗಳಲ್ಲಿ ಸ್ತ್ರೀ ಎಂದೂ ಮಾತೆ. ಆಕೆಗೆ ಎಂದೆಂದಿಗೂ ಉಚ್ಚಸ್ಥಾನ. ಶಾಂತಲೆಯೂ ಇದಕ್ಕೆ ಹೊರತಲ್ಲ. ಅವರು ಆರಿಸುವ ವಸ್ತುವೂ ಅಂತಹುದು. ಅಲ್ಲಿ ಕ್ಷುದ್ರಗುಣಗಳಾದ ದ್ವೇಷ,

ಹೊಟ್ಟೆಕಿಚ್ಚುಗಳಿಗೆ ಆಸ್ಪದವಿಲ್ಲ. ಸ್ತ್ರೀಯರು ದೇವತಾಮಾನವರೇ. ''ಸಾಮ್ರಾಜ್ಯ ಲಕ್ಷ್ಮಿಯೇ ಸ್ತ್ರೀರೂಪು ಧರಿಸಿ ನಿನ್ನ ಕೈ ಹಿಡಿಯಲು ಮುಂದೆ ಬಂದಿರುವಾಗ ಜಯಲಕ್ಷ್ಮಿಯೂ ನಿನ್ನ ದಾಸಿಯಾಗಲಾರಳೇ?...'' ರಾಜಮಾತೆ, ವಿಷ್ಣುವರ್ಧನನ ಹೆತ್ತತಾಯಿ ಸೊಸೆ ಶಾಂತಲೆಯನ್ನು ಮೆಚ್ಚಿ ನುಡಿಯುವ ಮಾತುಗಳಿವು. ಇದಕ್ಕುತ್ತರವಾಗಿ ಶಾಂತಲೆಯ ಬಾಯಿಯಿಂದ ಬಂದ ಮಾತುಗಳು ಸುವರ್ಣಾಕ್ಷರಗಳಲ್ಲಿ ಬರೆಯುವಂತಹವು — ''ನಿಮ್ಮ ತಲೆಗೆ ಹೂವ ತರುವೆನಲ್ಲದೆ ಹುಲ್ಲ ತಾರೆ....'' ಶಾಂತಲೆಯ ಪಾತ್ರದ ಗಟ್ಟಿತನ ಅಡಗಿರುವುದೇ ಈ ಮಾತುಗಳಲ್ಲಿ. ಅಂದಿನ ಸಾಮಾಜಿಕ ಧರ್ಮ ರಾಜಧರ್ಮ - ಬಹುಪತ್ನಿತ್ವಕ್ಕೆ ಮಾನ್ಯತೆ ನೀಡಿತ್ತು. ರಾಷ್ಟ್ರದ ಪ್ರಗತಿಯ ಪ್ರಶ್ನೆ ಬಂದಾಗ ತ್ಯಾಗ, ಬಲಿದಾನ ಅವಶ್ಯಕ ಎನ್ನುವ ಸಾಮಾಜಿಕ ಕಳಕಳಿಗೆ ಶಾಂತಲೆ ಬದ್ಧಳಾಗಿದ್ದಳು. ಇದ್ದೊಬ್ಬ ಮಗನನ್ನೂ ಕಳಕೊಂಡ ಶಾಂತಲೆ ತನ್ನ ಪತಿಯ ಬಹುಪತ್ನಿತ್ವವನ್ನು ಸಮರ್ಥಿಸುತ್ತಾಳೆ - ''ಓಂ ಪೂರ್ಣ ಮದಂ ಪೂರ್ಣ ಮಿದಂ....'' ಎಂದು ಪೂರ್ಣತ್ವದಲ್ಲಿ ಲೀನವಾಗುತ್ತಾಳೆ. ರಾಷ್ಟ್ರದ ಹಿತದ ಪ್ರಶ್ನೆ ಎದುರಾದಾಗ ಸಾಂಸಾರಿಕ ಜೀವನ ಅಡ್ಡಿಯಾಗದಂತೆ ಮನೆಗೆದ್ದು ಮಾರುಗೆಲ್ಲಲು ಪಣತೊಡುತ್ತಾಳೆ. ಸಾಮ್ರಾಜ್ಯದ ಹಲವು ರಾಜಕೀಯ ಯೋಜನೆಗಳಲ್ಲಿ ಶಾಂತಲೆಯ ಅಭಿಪ್ರಾಯವೂ ಅಂಗಿತವಾಗುತ್ತದೆ. ಯುವರಾಣಿ ಶಾಂತಲೆ ಪಟ್ಟದರಸಿಯಾಗುವ ಮೊದಲೇ ಮಹಾರಾಣಿ ಹಾಗೂ ವಿಷ್ಣುವರ್ಧನನ ಹೃದಯ ಗೆದ್ದಿರುತ್ತಾಳೆ.

ವೇಲಾಪುರಿಯ ದೇಗುಲ ನಿರ್ಮಾಣ ಕಾರ್ಯದಲ್ಲಿ ಶಾಂತಲೆ ವಹಿಸಿದ ಪಾತ್ರ ಇತಿಹಾಸ ಪ್ರಸಿದ್ಧ. ಅಮರ ಶಿಲ್ಪಿ ಜಕ್ಕಣ್ಣನೊಂದಿಗೆ ಯಾವುದೋ ಸಂದರ್ಭದಲ್ಲಿ ಅಶಾಂತಿಯನ್ನು ಹುಟ್ಟುಹಾಕಿದ್ದ ಯುವರಾಜ ವಿಷ್ಣುವರ್ಧನ ಯುವರಾಜನನ್ನು ಶಿಲ್ಪಿಯನ್ನೂ, ಒಂದು ಗೂಡಿಸಿ ದೇವಾಲಯವನ್ನು ನಿರ್ಮಿಸುವ ಕೈಂಕರ್ಯದಲ್ಲಿ ಶಾಂತಲೆಯೂ ಚಾಣಕ್ಯತೆ ಮೆಚ್ಚುವಂತದ್ದೇ. ಆರು ದಶಕಗಳ ಕಾಲ ಚಾಲುಕ್ಯರ ದಾಸ್ಯತನದಲ್ಲಿ ನೊಂದ ಹೊಯ್ಸಳ ಸಾಮ್ರಾಜ್ಯ ಸ್ವತಂತ್ರವಾಗಬೇಕಿತ್ತು. ಯುದ್ಧದ ಖರ್ಚುವೆಚ್ಚಗಳು, ಆಹಾರ, ಯುದ್ಧದ ಯಶಸ್ಸಿಗೆ ಬಳಸಲು ಶಾಂತಳೆ ನೀಡಿದ ಅಂತಪುರದ ಹೊನ್ನು, ಅದರ ಸಮರ್ಥನೆ ಎಂತಹವರನ್ನು ದಂಗು ಬಡಿಸುವಂತಿದೆ- ''ಸಂಪತ್ತು ನಮ್ಮ ನಮ್ಮ ವಿಪತ್ತುಗಳಲ್ಲಿ ನೆರವಾಗಬೇಕು. ಹೊನ್ನು ಒಡವೆ ಸುಭೀಕ್ಷ ಕಾಲದಲ್ಲಿ ಶೃಂಗಾರದ ವಸ್ತುಗಳು, ಯುದ್ಧದ ವೇಳೆಯಲ್ಲಿ ರಾಷ್ಟ್ರರಕ್ಷಣೆಯ ಆಯುಧಗಳು. ತಾನು ಆತ್ಮಸಂತೋಷದಿಂದ ಒಪ್ಪಿಸುತ್ತಿರುವ ಅಂತಃಪುರದ ಹೊನ್ನು ಯುದ್ಧದ ಯಶಸ್ಸಿಗೆ ಕಾರಣವಾಗಲಿ'' ಎಂತಹ ಸಾಮ್ರಾಟರೂ ತಲೆತಗ್ಗಿಸಿ ಆಕೆಯ ಪಾದಧೂಳಿಯನ್ನು ಸ್ಪರ್ಶಿಸುವಂತಿದೆ ಈ ಮಾತುಗಳಲ್ಲಿನ ಶಕ್ತಿ.

'ರಾಮಾಯಣ'ದಲ್ಲಿ ಸೀತೆಗೆ ಬಂದ ಹಾಗೆಯೇ ಶಾಂತಲೆಗೂ ಅಗ್ನಿಪರೀಕ್ಷೆಯ ಕಾಲ ಒದಗಿತ್ತು. ಸಾಮ್ರಾಜ್ಯದ ಉಳಿವಿಗಾಗಿ ಶಾಂತಲೆ ತ್ಯಾಗಮಾಡಲೇಬೇಕಿತ್ತು. ಇದ್ದೊಬ್ಬ ಮಗನನ್ನು ಕಳೆಕೊಂಡಿದ್ದಳು ಶಾಂತಲೆ. ಸಾಮ್ರಾಜ್ಯಕ್ಕೊಬ್ಬ ವಾರಸುದಾರ ಬೇಕಿತ್ತು. ಶಾಂತಲೆ ಪಟ್ಟಮಹಿಷಿಯಾಗಿ ಬದುಕಿ ಇರುವವರೆಗೂ ಉತ್ತರಾಧಿಕಾರಿಯಾಗಿ ಬರಲು ಯಾರಿಗೂ ಸಾಧ್ಯವಿರಲಿಲ್ಲ. ತ್ಯಾಗಕ್ಕೆ ಅಂದು ಬೆಲೆ ಇತ್ತು. ತಪಸ್ಸನ್ನಾಚರಿಸಿ, ಸಲ್ಲೇಖನ

ವ್ರತವನ್ನು ಕೈಗೊಂಡು ಶಾಂತಲೆ ಇನ್ನಿಲ್ಲವಾಗುತ್ತಾಳೆ - ಅಮರಳಾಗುತ್ತಾಳೆ. ಇಪ್ಪತ್ತೈದು ವರುಷಗಳ ಸುಂದರ ದಾಂಪತ್ಯಕ್ಕೆ ಇತಿಶ್ರೀ ಹಾಡುತ್ತಾಳೆ.

ಸ್ತ್ರೀ ಪ್ರಮುಖ ಪಾತ್ರಗಳು 'ಮಾತೆ'ಯರನ್ನಾಗಿ ಸಾಶಿಮರು ತಮ್ಮ ಕೃತಿಗಳಲ್ಲಿ ಗೌರವಿಸುತ್ತಾರೆ. ಅವು ಪುಣ್ಯ ಮೂರ್ತಿಗಳಾಗಿ ಚಿತ್ರಿತವಾಗುತ್ತವೆ. ಎದ್ದುನಿಂತು ಗೌರವಿಸುವಂತೆ ಮಾಡುವಲ್ಲಿ ಸಾಶಿಮರು ಎತ್ತಿದ ಕೈ.

'ಕನ್ನಡಿ ಹೇಳಿದ ಕತೆ' - ಹುಟ್ಟು ಸಾವಿಲ್ಲದ ಕನ್ನಡಿಯ ಮುಖಾಂತರ ಭಾರತದ ಸ್ವಾತಂತ್ರ್ಯ ಸಂಗ್ರಾಮದ ಘಟನೆಗಳ ಸುರುಳಿ ಬಿಚ್ಚುವಿಕೆಯೇ ಇದು. ಸುಭಾಷ್‌ಚಂದ್ರ ಬೋಸರ ರಾಷ್ಟ್ರ ಪ್ರೇಮ, ದೇಶದ ಸ್ವಾತಂತ್ರ್ಯಕ್ಕಾಗಿ ಸ್ವಂತ ಬದುಕನ್ನು ಬಲಿದಾನಗೈದ ಅವರ ನಿಸ್ವಾರ್ಥತೆ. ಇವನ್ನೆಲ್ಲ ಹೃದಯಂಗಮವಾಗಿ ಸಾಶಿಮ ಬಣ್ಣಿಸಿದ್ದಾರೆ. ಓದುತ್ತಾ ಹೋದಂತೆ ರಕ್ತ ಹೆಪ್ಪುಗಟ್ಟುವಂತಹ ಘಟನೆಗಳನ್ನು ಕಣ್ಣ ಮುಂದೆಯೇ ತರುವಂತೆ ಚಿತ್ರಿಸುವ ಮಹಾನ್ ಯೋಗ್ಯತೆ ಸಾಶಿಮರಿಗೆ ಕರತಲಾಮಲಕ. ಜಲಿಯನ್‌ವಾಲಾಬಾಗ್, ಬೋಸರು ವೇಷ ಪಲ್ಲಟಿಸಿ ಪರದೇಶಗಳ ಗಡಿದಾಟುವುದು ಇವೇ ಮೊದಲಾದ ಘಟನೆಗಳು ಬರಿಯ ಘಟನೆಗಳಾಗಿ ಉಳಿಯದೆ ಇತಿಹಾಸದಲ್ಲಿ ನಾವೂ ಸೇರಿ ಒಬ್ಬರಾಗಿ ಬಿಡುತ್ತೇವೆ. ಐತಿಹಾಸಿಕ ಘಟನೆಗಳಿಗೇ ಪ್ರತ್ಯಕ್ಷ ಸಾಕ್ಷಿಯಾಗಿ ನಮ್ಮ ಮುಂದಿಡುವ ರೀತಿ ಅತ್ಯಪೂರ್ವವಾದದ್ದು.

ಸಾಹಿತ್ಯದಲ್ಲಾಗಲೀ, ಇತಿಹಾಸದಲ್ಲಾಗಲೀ ಮನುಕುಲಕ್ಕೆ ಬೆಳಕು ಕೊಟ್ಟ ಜ್ಯೋತಿಗಳನ್ನು, ಹಿರಿಯ ಚೇತನಗಳನ್ನು ಪಂಡೋರಾಸ್ ಬಾಕ್ಸ್‌ನಿಂದ ಹೊರತೆಗೆದು ಅವುಗಳಿಗೆ ಜೀವ ನೀಡಿ ನಮ್ಮ ಮುಂದೆ ಇಟ್ಟಿದ್ದಾರೆ ಸಾಶಿಮ. ಅವರಿಗೆ ಶುಭವಾಗಲಿ ಎನ್ನುವುದು ನಮ್ಮ ಹಾರೈಕೆ.

ಡಾ|| ಸಾ.ಶಿ. ಮರುಳಯ್ಯನವರ
"ಬದುಕು ಕ್ರೀಡಾರಂಗ"

ಎನ್ಕೆ

ಮೌಲಿಕವಾದ ಖಚಿತ ಚಿಂತನಗಳುಳ್ಳ ಈ ತಾತ್ವಿಕ ವಿಚಾರಸಂಕಲನ ಕನ್ನಡ ಸಾಹಿತ್ಯಕ್ಕೊಂದು ವಿಶೇಷ ಕೊಡುಗೆ.

'ಜೀವನವೆಂದರೇನು?' ಎಂಬ ಪ್ರಶ್ನೆಗೆ ಉತ್ತರ ಸಿಗುವುದು ಕಷ್ಟ ಎಂಬ ಲೇಖಕರ ಆವಿಷ್ಕರಣದ ಮಾತು ನಿಜವಾಗಿಯೂ ಜ್ಞಾನದ ಬೇರನ್ನೇ ಹುಡುಕಿಕೊಂಡು ಹೊರಟಿದೆ. 'ಬಾನೆಂಬರು ಕೆಲವರು, ಬಯಲೆಂಬರು ಕೆಲರು' ಎಂದು ಕವಿ ವಿನಾಯಕರು ತಮ್ಮ ಒಂದು ಕವನದಲ್ಲಿ ಜೀವನ ಜಿಜ್ಞಾಸೆ ಮಾಡಿರುವಂತೆ ಈ ಸೃಷ್ಟಿ ಆರಂಭವಾದಾಗಿನಿಂದ ನಮ್ಮ ವೇದ ದ್ರಷ್ಟಾರರಿಂದ ಮೊದಲ್ಗೊಂಡು ಕವಿ ಕುವೆಂಪು, ಕವಿ ಬೇಂದ್ರೆ ಅವರವರೆಗೆ ಅವರ ನಂತರವೂ ಜಿಜ್ಞಾಸುಗಳು ಚಿಂತನಚಕ್ರದಲ್ಲಿ ಚಲಿಸುತ್ತಲೇ ಇದ್ದಾರೆ.

ಡಾ. ಸಾ.ಶಿ. ಮರುಳಯ್ಯನವರು ಈ ಜೀವನದ ಬೇರು-ಚಿಗುರುಗಳನ್ನು ಸಮೂಲ ಚಿಂತನೆ ಬಿಟ್ಟು (ಏಕೆಂದರೆ ಬದುಕೊಂದು ಸುಳಿದಾಡುವ ನೆಳಲು ಎಂಬ ಶೇಕ್ಸ್‌ಪಿಯರನ ಹೇಳಿಕೆ, ಅಲ್ಲದೆ 'ಜೀವನವೆಂಬುದು ಮೂರ್ಖನೊರೆದೊಂದು ಕಟ್ಟು ಕಥೆ' ಎಂಬ ಜಾರ್ಜ್ ಮೆರಿಡಿತ್‌ನಿಂದ ಮಂಕುತಿಮ್ಮನ 'ಬದುಕು ಜಟಕಾ ಬಂಡಿ' ಎಂಬ ದಿನನಿತ್ಯದ ಪ್ರತಿಮೆ ನೀಡಿರುವುದೆಲ್ಲ ಅಪ್ರಸ್ತುತವಾಗಿ) 'ಬದುಕು ಕ್ರೀಡಾರಂಗ' ಎಂಬ ಹೊಸ ವಿಚಾರದ ಹೊಸ ಪ್ರತೀಕವನ್ನು ಕಲ್ಪಿಸಿರುವುದು ಪ್ರಶಂಸನೀಯ. ಒಬ್ಬ ಇಂಗ್ಲಿಷ್ ಕವಿಯ

'Life is a game of cricket laws
An honest humble game !

ಎಂಬ ಮಾತುಗಳು ಜ್ಞಾಪಕಕ್ಕೆ ಬರುತ್ತವೆ.

'ಬದುಕು ಕ್ರಿಡಾರಂಗ'ದ ದಾರ್ಶನಿಕ ವಿಚಾರಗಳು ಒಂದು ಅನುಭವ, ಅನುಭಾವಗಳ ಗದ್ಯ ಕಾವ್ಯದಂತಿವೆ. ಇಲ್ಲಿ ಒಟ್ಟು ೪೪ ಚಿಂತನೆಗಳಿದ್ದು ಒಂದೊಂದು ಚಿಂತನವೂ ನಮ್ಮ ದೈನಂದಿನ ಜೀವನದ ಕಷ್ಟಕಾರ್ಪಣ್ಯ, ನೋವು ನಷ್ಟಗಳಿಗೆ ಸಾಂತ್ವನ, ಶಾಂತಿ ಪಾಠಗಳಂತಿವೆ; ಮಾರ್ಗದರ್ಶಕ ದೀಪಗಂಬಗಳಂತಿವೆ. ಪರವಸ್ತುವಿನಿಂದ ದೈನಂದಿನ ಊಟದ ಉಪ್ಪು ಎಷ್ಟೊಂದು ಅಗತ್ಯ, ಪರವಸ್ತುವಿನಂತೆ, ಉಪ್ಪನ್ನು ಜೀವನಾಧಾರವೆಂದು ಬಗೆದಿದ್ದಾರೆ. ನೀರಲ್ಲಿ ಕರಗಿದ ಉಪ್ಪನ್ನು ಕಂಡು ಹಿಡಿಯುವುದು ಕಷ್ಟವಾಗಿರುವಂತೆ ತನ್ನ ಸೃಷ್ಟಿಯಲ್ಲಿಯೆ ತಾನು ಅಡಗಿರುವ ಪರಮಾತ್ಮನನ್ನು ಕಂಡುಹಿಡಿಯುವುದೂ ಅಷ್ಟೇ ಕಷ್ಟ.

'ಪ್ರಶಸ್ತಿ' ಎಂಬ ಚಿಂತನದ ಹಿಂದೆ ಇರುವ ಲಾಬಿಯಿಂದ ವಿಚಾರ ಎಷ್ಟು ಹೀನವೃತ್ತಿ ಎಂಬುದನ್ನು ವ್ಯಂಗ್ಯ ನಿದರ್ಶನದೊಂದಿಗೆ ನಿರೂಪಿಸಿರುವುದು ನಮ್ಮ ದೈನಂದಿನ ಬದುಕಿನ ರೀತಿಯಾಗಿ ಬಿಟ್ಟುದನ್ನು ಅದು ಎಷ್ಟೊಂದು ಮಾರ್ಮಿಕವಾಗಿ ಚಿತ್ರಿಸಿದೆ!

ಡಾ. ಮರುಳಯ್ಯನವರ ಅನುಭವ ಕ್ಷಿತಿಜ ವ್ಯಾಪಕವಾದದ್ದು. ಟೈಗ್ರಸ್-ಯುಫ್ರೆಟಿಸ್ ನದಿಯ ಬಯಲಿನ ಕಥೆ ಅಸ್ಸೀರಿಯಾ ಬ್ಯಾಬಿಲೋನಿಯಾಗಳನ್ನೂ ವ್ಯಾಪಿಸಿ 'ನೆಲವೆ ತಳವಾರನಾದರೆ ಕಳ್ಳನಾದವನು ಬಚ್ಚಿಟ್ಟುಕೊಳ್ಳುವುದಾದರೂ ಎಲ್ಲಿ?' ಎಂದು ಉದ್ಗಾರದಿಂದ ಮುಕ್ತಾಯಗೊಳ್ಳುವ ಚಿಂತನ ಈ ವ್ಯಾಪಕತೆಗಳೊಂದು ಉದಾಹರಣೆ. ಅದೇ ರೀತಿ ಪ್ರವಾಸಿ ಮಹಮ್ಮದ್ ಪೈಗಂಬರರ ಧರ್ಮೋಪದೇಶ ಎಷ್ಟು ವಿಶಾಲ ಮನೋಭಾವದಿಂದ ಕೂಡಿದೆ ಎಂಬುದನ್ನು ವಿವರಿಸುತ್ತದೆ.

ಆತ್ಮಪ್ರಜ್ಞೆಯಲ್ಲಿ ಬರುವ ಕನ್ನಡಿಯಲ್ಲಿ ತನ್ನದೇ ಪ್ರತಿಬಿಂಬ ಕಂಡರೂ ಅದನ್ನು ಗುರುತಿಸದ ಅಮಾಯಕ ಪ್ರಜ್ಞೆ ಬಹು ಮೋಜಿನದೆನಿಸುತ್ತದೆ. 'ಗೃಹಿಣೀಗೃಹಮುಚ್ಯತೇ' ಎಂಬ ಸಂಸ್ಕೃತದ ಸುಭಾಷಿತಕ್ಕೆ 'ಗರತಿಯಿಂದ ಗೌಡ' ಎಂಬ ಜಾನಪದ ಎಷ್ಟೊಂದು ಸಮರ್ಪಕ ಗಾದೆಯಾಗಿದೆ ಎಂದು ವಿವರಿಸುವುದು ಸುಂದರವಾಗಿದೆ. 'ತಾಯಿ ಮತ್ತು ಗುರು' 'ನಗುರೋರಧಿಕಂ' ಎಂದರೆ ದೇವರಿಗೆ ಸಮಾನನೆಂಬ ಗೌರವಭಾವವನ್ನು ಬೆಳೆಸಿದರೆ, 'ಬಿದಿರು' ತೊಟ್ಟಿಲಿನಿಂದ ಚಟ್ಟ ತಯಾರಿಸುವವರೆಗೆ ಎಷ್ಟೊಂದು ಮಾನವ ಪ್ರಯೋಜನಕಾರಿಯಾಗಿದೆ ಎಂಬ ಅಂಶ ಸ್ತುತ್ಯವೆನಿಸುತ್ತದೆ.

'ಬೆಟ್ಟದ ಬಿದಿರೇ ನೀನು ಅಟ್ಟಕ್ಕೆ ಏಣಿಯಾದೆ
ಕಾಲು ಮುರಿದವರಿಗೆ ಊರುಗೋಲಾದೆ'

ಎಂದು ಮೊದಲಾಗುವ ಪಠ್ಯ ಬಹು ಸಮಂಜಸವಾಗಿದೆ. 'ನಾವೆಲ್ಲಾ ಆತ್ಮಪ್ರತ್ಯಯವಿಲ್ಲದ' ಮೂಢ ಮನುಜರು. 'ರಾಷ್ಟ್ರಕ್ಕೂ ಒಂದು ಮನಸ್ಸಿದೆ. ಅದು ಸಮಷ್ಟಿಚೇತನ' ಎಂಬ ಚೇತನ ತೂಕದ್ದು.

ಮರಗಳಿಂದ ಮನುಷ್ಯ ಕೀಳೆ? ಹೌದು ಎಂದೇ ಹೇಳಬೇಕಾಗುತ್ತದೆ. ಮರದ ಪರೋಪಕಾರ ಬುದ್ಧಿ ಅದಕ್ಕೆ ಅಮರತ್ವವನ್ನು ತಂದರೆ ಮನುಷ್ಯನ ಕೀಳ್ಮೆ ಆತನನ್ನು ಮರಕ್ಕಿಂತ ಕೀಳಾಗಿಸಿದೆ. ಯೌವನ, ಧನ ಸಂಪತ್ತು, ಪ್ರಭುತ್ವ (ಅಧಿಕಾರ), ಅವಿವೇಕ ಈ ನಾಲ್ಕರಲ್ಲಿ ಒಂದು ದುರ್ಗುಣವೂ ಸಾಕು ಮನುಷ್ಯನನ್ನು ಕೆಳಗೊತ್ತಲಿಕ್ಕೆ, ಇನ್ನು ನಾಲ್ಕು ದುರ್ಗಣಗಳು ಒಬ್ಬ ವ್ಯಕ್ತಿಯಲ್ಲೇ ಸೇರಿಕೊಂಡು ಬಿಟ್ಟರೆ ಆತ ಎಷ್ಟು ಕೆಳಗಿಳಿಯಬಲ್ಲ! ಊಹಿಸುವುದು ಕಷ್ಟ.

ದಾನ ಮಾಡಲು ತನ್ನಲ್ಲಿ ಏನೂ ಇಲ್ಲ ಎಂದು ಗೊಣಗುವವನಿಗೆ - ನಿನ್ನ ರಕ್ತ ದಾನ ಮಾಡು, ನಿನ್ನ ಕಿಡ್ನಿ ದಾನ ಮಾಡು, ನಿನ್ನ ನೇತ್ರ ದಾನ ಮಾಡು, ನಿನ್ನ ಒಂದೊಂದು ಅವಯವವೂ ಇನ್ನೊಬ್ಬರಿಗೆ ಪ್ರಯೋಜನವಾಗುತ್ತಿದ್ದರೆ ದಾನಮಾಡಿ ಮಾನವ ಶ್ರೇಷ್ಠ ದಾನಿ ಎನಿಸು ಎಂದು ಹೇಳುವಲ್ಲಿ ದಾನ ಬುದ್ಧಿಯೊಂದಿದ್ದರೆ ದಾನಕ್ಕೆ ವಸ್ತು ಇದ್ದೇ ಇದೆ ಎಂಬ ವಿಚಾರದಾನ ಮಾಡಿದ ಲೇಖಕರು ವಂದ್ಯರು. ಅವರ ಲೇಖನಿಯೇ ಒಂದು ದಾನ ಚಿಂತಾಮಣಿ. ಮನುಷ್ಯ ಸತ್ತು ಬದುಕಬೇಕು ಎಂದು ಲೇಖಕರು ಆಸೆಯ ಮೌಲ್ಯವನ್ನು ಕೊಟ್ಟು ಅದರ ಪ್ರಯೋಜನವನ್ನು ಪ್ರಶಂಸಿಸಿದ್ದಾರೆ. ಲೇಖಕರ ವಿಶಾಲವಾದ ಓದು ವೇದದಂತೆ ಅವರ ನೆರವಿಗೆ ಬಂದಿದೆ.

ಪ್ರಚಾರವೆಂಬುದು ಇಂದಿನ ಯುಗಧರ್ಮವಾಗಿಬಿಟ್ಟಿದೆ. ಹಿಂದಿನ ಆಚಾರನಿಷ್ಠೆ ಹೋಗಿ ವಿಚಾರ ಪ್ರತಿಷ್ಠೆಯ ಯುಗ ಬಂತು. ಅದೂ ಹೋಗಿ ಈಗ ಪ್ರಚಾರದ ಯುಗ ಬಂದಿದೆ. ಸಮುದಾಯ ಮಾಧ್ಯಮಗಳೆಲ್ಲಾ ಪ್ರಚಾರಕ್ಕಾಗಿಯೆ ಬಳಸಲ್ಪಡುತ್ತಿರುವುದು ಇಂದಿನ ಯುಗಧರ್ಮದ ವ್ಯಂಗ್ಯ. ಲೇಖಕರು ಮನಸ್ಸಿಗೆ ಹಚ್ಚಿಕೊಂಡು ಈ ಚಿಂತನ ವಿವೇಚನೆಮಾಡಿದ್ದಾರೆ. ಯುವಶಕ್ತಿಗೆ ವೀರ ಅಭಿಮನ್ಯುವಿನ ಉದಾಹರಣೆ ಉಚಿತವಾಗಿದೆ. ನಮಗೆ ಸ್ವಾತಂತ್ರ್ಯ ಬಂದೂ ಗುಲಾಮಗಿರಿ ತಪ್ಪಲಿಲ್ಲ ಎಂಬ ಮಾತು ವಿರೋಧಾಭಾಸವಲ್ಲ, ವಸ್ತುಸ್ಥಿತಿ ಎಂಬುದಕ್ಕೆ ಈ ಚಿಂತನವೆ ಒಂದು ಜೀವಂತ ಉದಾಹರಣೆ.

ಕಾಲದ ಬಗ್ಗೆ ಲೇಖಕರ ಚಿಂತನೆ ವಿಧವಿಧವಾಗಿದೆ. ಒಟ್ಟೇನು ಮಾನವನನ್ನೆ ನುಂಗಿನೊಣೆಯುವ ಕಾಲ ಕೆಟ್ಟು ಹೋಯ್ತು ಎಂಬ ಮಾತು ಮಾತ್ರ ನಿಜವಾಗಿ ಉಳಿಯಿತು. ಬಹಳ ಸತ್ಯವಾದ ಮಾತು. 'ಸರ್ವೇ ಭದ್ರಾಣಿ ಪಶ್ಯಂತಿ' ಬದಲು 'ಸರ್ವೇ ಭದ್ರಾಣಿ ಪಶ್ಯಂತು' ಎಂದಿದ್ದರೆ ಹೆಚ್ಚು ಸಮರ್ಪಕವೆನಿಸುತ್ತಿತ್ತು. ವೇದವಾಣಿ ಹೇಳುವುದೂ ಇದೇ ಹಾರೈಕೆಯ ಮಾತನ್ನೇ. ಗಾಂಧೀಜಿ ವಿಚಾರಗಳು ಒಂದು ಕಿರಿಬೆರಳಿನಷ್ಟು ಪೆನ್ಸಿಲ್‌ನಿಂದ ಮೊದಲಾಗಿ ವಿಶ್ವಸೃಷ್ಟಿಯಲ್ಲಿ ಯಾವುದೂ ಕನಿಷ್ಠವಲ್ಲ, ತುಚ್ಛವಲ್ಲ ಎಂಬ ಮಾತು ಶಾಶ್ವತ ಮೌಲ್ಯದ್ದು.

'ದೇಹವೆ ದೇಗುಲ' ವೆಂಬ ಉಕ್ತಿ ಬಸವಣ್ಣನವರ ವಚನದಿಂದ ಮೊದಲಾಗಿ 'ದೇಹವಿದು ನೀನಿರುವ ಗುಡಿ ಎಂದು ತಿಳಿದು! ಗುಡಿಸುವೆ ನುಡಿನದಿನವು ದೇವ ದೇವ' ಎಂಬ ಕುವೆಂಪುವಾಣಿಯಿಂದ ಮುಕ್ತಾಯಗೊಳ್ಳುತ್ತದೆ. ಈ ದೇಹವೆಂಬ ದೇಗುಲದಲ್ಲಿ ದೇವಸಾನ್ನಿಧ್ಯವಿರಬೇಕಾದರೆ keep the temple clean ಎಂಬ ಶ್ರೀ ಅರವಿಂದರ ಉಕ್ತಿಯಂತೆ ಅಂತರಂಗ ಶುದ್ಧಿಯನ್ನು ಕಾಪಾಡಿಕೊಂಡಿರುವುದು ನಮ್ಮ ಆದ್ಯ ಕರ್ತವ್ಯ.

ಮನೆಯ ಮಹತಿಯನ್ನು ಎತ್ತಿ ಹೇಳುವಲ್ಲಿ 'ದೇಹಕ್ಕೆ ಐಹಿಕ ಸುಖಬೇಕು; ಆತ್ಮಕ್ಕೆ ಪಾರಮಾರ್ಥಿಕ ತೃಪ್ತಿಬೇಕು'. ಈ ಎರಡನ್ನೂ ನಾವು ಮನೆಯಲ್ಲೇ ಹೇಗೆ ಪಡೆದುಕೊಳ್ಳಬಹುದೆಂಬುದನ್ನು ಸುಂದರವಾಗಿ ವಿವೇಚಿಸುವ ಮಹಾಮನೆಯ ಕಲ್ಪನೆಯನ್ನು ಕೊನೆಗೆ ಸೂಚಿಸಿರುವುದು ಮಹತ್ವದ್ದಾಗಿದೆ.

'ಕಡ ಹುಟ್ಟಿ ಬಡವ ಕೆಟ್ಟ' ಎಂಬ ಚಿಂತನೆಗೆ ಎಷ್ಟೊಂದು ವ್ಯಾವಹಾರಿಕವಾಗಿದೆ! ಸಾಲಮಾಡಿ ಸಾಹುಕಾರ ಅನಿಸಿಕೊಳ್ಳುವುದಕ್ಕಿಂತ ಬಡವನಾಗಿ ಸಜ್ಜನನೆನಿಸಿಕೊಳ್ಳುವುದು ಮೇಲು ಎಂಬ ನುಡಿ ಯಾವ ಕಾಲಕ್ಕೂ ಮೌಲಿಕ. ಸಾಲವು ಯಾವುದೆ ಬೇನೆ ಬೇಸರಿಕೆಗಳಿಗಿಂತಲೂ ಅನಿಷ್ಟಕರ. ಆದ್ದರಿಂದ ಕಡುಬಡವನಾಗಿರು, ಕಡ ಮಾತ್ರ ಬೇಡಬೇಡ ಎನ್ನುವುದು ಸೂಕ್ತ, ಸೂಜ್ಞ.

ಸಂಸ್ಕೃತಿ, ಭೂತದಯೆ, ಭಕ್ತಿ, ದೇವತ್ವ ಎಂಬ ಮೌಲ್ಯಗಳ ಮಹತಿಯನ್ನು ಎತ್ತಿ ತೋರಿಸುವ ಚಿಂತನಗಳು ಸುಗ್ರಾಹ್ಯ. 'ಮಣ್ಣಿನ ವಾಸನೆ'ಗಿಂತ 'ಮಣ್ಣಿನ ಮೋಹ' ಕೆಟ್ಟದ್ದು ಎಂಬ ವಿಚಾರ ಹೆಚ್ಚು ವಿಚಾರಾರ್ಹ. ಅವತಾರ ಕಾರ್ಯಗಳಲ್ಲಿ ಕೃಷ್ಣನ ಅವತಾರ

ಕಾರ್ಯ ಗೀತೆಯ ಗುಟ್ಟನ್ನೇ ಸಾರುತ್ತದೆ. 'ಬಾನ್ನೆಲದ ಹರಕೆಗಳು ಅಡಿಮುಡಿಯ ಕಾಯುತಿರಲಿ'

ಹೀಗೆ ಇಲ್ಲಿಯ ಎಲ್ಲ ಚಿಂತನಗಳೂ ಸಾಹಿತ್ಯಗುಣದಿಂದಾಗಿ, ಕಾವ್ಯಗುಣದಿಂದಾಗಿ, ನೀತಿ ಮೌಲ್ಯದಿಂದಾಗಿ ಉತ್ತಮ, ಸುಂದರ ಭಾಷೆಯಲ್ಲಿ ನಿರೂಪಿತವಾಗಿ ಕನ್ನಡ ಸಾಹಿತ್ಯದ ವೈವಿಧ್ಯಕ್ಕೊಂದು ಆಯಾಮವನ್ನೇ ನೀಡುವಂತಾಗಿದೆ.

ಮರುಳಯ್ಯನವರು ಕಂಡ ಮಹನೀಯರು

ಡಿ. ನಾಗೇಂದ್ರಪ್ಪ

ಅಧ್ಯಾತ್ಮ ಮತ್ತು ಜೀವನೋತ್ಸಹಗಳೆರಡನ್ನು ಮೇಳವಿಸಿಕೊಂಡ ಬದುಕಿನಲ್ಲಿ ನಡೆದು, ನಡೆದದ್ದನ್ನು ಕಾವ್ಯದಲ್ಲಿ ನುಡಿದು ತನ್ಮೂಲಕ ತಾವೂ ಧನ್ಯರಾಗಿ, ಸಹೃದಯರನ್ನು ಧನ್ಯರಾಗಿಸಿ, ವಿನಯ ನಮ್ರತೆಗಳ ಸಾಕಾರಮೂರ್ತಿಯಾಗಿ, ಪಾಂಡಿತ್ಯವಿದ್ದರೂ ಸುಸಂಸ್ಕೃತರಾಗಿ, ಪ್ರತಿಭೆ ಇದ್ದರೂ ಹೃದಯವಂತರಾಗಿ, ಅಪರೂಪದ ಕೋಪದಲ್ಲಿ ವ್ಯಂಗ್ಯ ತುಂಬಿ ತುಂಬು ಬಾಳನ್ನು ಸಾಗಿಸುತ್ತಿರುವವರು ಶ್ರೀ ಸಾ.ಶಿ. ಮರುಳಯ್ಯನವರು.

ಶ್ರೀ ಸಾ.ಶಿ. ಮರುಳಯ್ಯನವರು ನನ್ನ ಗುರುಗಳು. ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿ ನಾನು ಪ್ರಥಮ ಬಿ.ಎಸ್.ಸಿ., ವಿದ್ಯಾರ್ಥಿ. ಕನ್ನಡ ತರಗತಿಗೆ ಶ್ರೀ ಸಾ.ಶಿ.ಮ. ಅವರು ಬಂದರು. ಅವರ ಬೋಧನೆಯ ವೈಖರಿಗೆ ಅವರ ವಾಗ್ಝರಿಯ ಮೋಡಿಗೆ ವಶವಾದ ನಾನು, ನನಗರಿವಿಲ್ಲದೆ ವಿಜ್ಞಾನದಿಂದ ಕನ್ನಡ ಮೇಜರ್ ತರಗತಿಗೆ ವರ್ಗವಾದೆ. ತತ್ಪರಿಣಾಮವಾಗಿ ಇಂದು ಕನ್ನಡ ಉಪನ್ಯಾಸಕ. ವಿದ್ಯಾರ್ಥಿ ದೆಸೆಯಲ್ಲಿ ನಮ್ಮನ್ನು ಭಾವ ಪರವಶರನ್ನಾಗಿಸಿದ ಅವರ ಕವನ "ಸುಮಸುಂದರ ತರುಲತೆಗಳ ಬೃಂದಾವನ ಲೀಲೆ" ಎಷ್ಟು ಬಾರಿ ಕೇಳಿದರೂ ಬಾರಿ ಬಾರಿಗೂ ಕೇಳಬೇಕೆನ್ನುವ ಕಾತರ. ಅದರಲ್ಲಿನ ಗೇಯತೆ, ಶಬ್ದಗಳ ಜಾಲ, ಪ್ರಾಸಗಳ ಕಂಪು, ಕೇಳುಗರನ್ನು ಯಕ್ಷಿಣಿ ಲೋಕಕ್ಕೆ ಕರೆದೊಯ್ಯುವ ಶಕ್ತಿ ಅದರಲ್ಲಿದೆ. ಈ ಹಾಡಿನಿಂದ ಮರುಳಯ್ಯನವರೊ ಮರುಳಯ್ಯನವರಿಂದ ಹಾಡೊ ಗೊತ್ತಿಲ್ಲ. ಒಟ್ಟಲ್ಲಿ ಒಬ್ಬರೊಬ್ಬರಿಂದ ಕೃತಕೃತ್ಯರಾದರು.

ಶ್ರೀಯುತ ಸಾ.ಶಿ. ಮರುಳಯ್ಯನವರು ಶ್ರೇಷ್ಠ ಕವಿಗಳಾಗಿ, ಕಾದಂಬರಿಕಾರರಾಗಿ, ನಾಟಕರರಾಗಿ, ಉತ್ತಮ ವಿಮರ್ಶಕರಾಗಿ, ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಕೃಷಿಗೈದು ಕನ್ನಡ ಸಾರಸ್ವತ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ಕೊಟ್ಟವರು. ಪೂರ್ವಾತ್ಯ ಪಾಶ್ಚಿಮಾತ್ಯ ಸಂಸ್ಕೃತಿಗಳೆರಡನ್ನು ಮೈಗೂಡಿಸಿಕೊಂಡು ಪ್ರಾಚೀನ, ಆಧುನಿಕ, ಸಾಹಿತ್ಯ ಪರಂಪರೆಗಳನ್ನು ಸಮಾನವಾಗಿ ಪ್ರೀತಿಸುವ ಅಪರೂಪದ ವ್ಯಕ್ತಿ.

ಪ್ರಸ್ತುತ 'ಆತ್ಮೀಯ' ಹೆಸರೇ ಸೂಚಿಸುವಂತೆ ಶ್ರೀ ಸಾ.ಶಿ.ಮ. ಅವರು ಕನ್ನಡ ಸಾಹಿತ್ಯ ಲೋಕದ ಸುಪ್ರಸಿದ್ಧ ವಿದ್ವಾಂಸರನ್ನು, ಸಮಾಜ ಸೇವಾ ಧುರೀಣರನ್ನು ಕಲಾವಿದರನ್ನು ಆತ್ಮೀಯವಾಗಿ ಮಾಡಿಕೊಟ್ಟ ಪರಿಚಯ. ಇಲ್ಲಿನ ಎಲ್ಲ ಮಹನೀಯರು ಮರುಳಯ್ಯನವರಿಗೆ ಪೂಜ್ಯ ಸ್ಥಾನದಲ್ಲಿದ್ದು ಮಾರ್ಗದರ್ಶನ ಮಾಡಿದವರು. ಹೀಗಾಗಿ ಆತ್ಮೀಯವು ಎಲ್ಲಿಯೂ ನೀರಸವಾಗದೆ ವಾಸ್ತವ ಸೊಗಡಿನಿಂದ ಓದುಗರಿಗೆ ಆತ್ಮೀಯವಾಗುತ್ತದೆ. ಅವರು ಕಟ್ಟಿಕೊಡುವ ವ್ಯಕ್ತಿಚಿತ್ರಣಗಳಲ್ಲಿ ಲೇಖಕರ ಅಂತರಂಗ ದರ್ಶನವಾಗುತ್ತದೆ. ಇಲ್ಲಿ ಬರುವ ವ್ಯಕ್ತಿಗಳ ಭವ್ಯದರ್ಶನದ ಜೊತೆ ಲೇಖಕರ ಸಾಹಿತ್ಯ ಪರಿಶ್ರಮದ ಎತ್ತರ ಬಿತ್ತರಗಳು ಬಿಚ್ಚಿಕೊಳ್ಳುತ್ತಾ ಹೋಗುತ್ತವೆ. ಹೀಗಾಗಿ ಇಲ್ಲಿನ ಚಿತ್ರಣಗಳು ಓದುಗರ ಮನಃ ಪಟಲದ ಮೇಲೆ ಅಚ್ಚೊತ್ತಿ ಸಾಗುತ್ತಿರುವ ಅನುಭವವಾಗುತ್ತದೆ.

'ಆತ್ಮೀಯ' ಪ್ರಥಮ ಲೇಖನ 'ಮಲೆನಾಡಿನ ಕೋಗಿಲೆಯೇ ! ಬಯಲು ನಾಡ ಮಲ್ಲಿಗೆಯೇ' ಶಿವಮೊಗ್ಗೆಯಲ್ಲಿ ರಾಷ್ಟ್ರಕವಿ ಕುವೆಂಪು ಅವರ ಷಷ್ಟ್ಯಬ್ದಿ ಸಮಾರಂಭ. ಅಂದಿನ ಸಮಾರಂಭದ ಮುಖ್ಯ ಅತಿಥಿ ದ.ರಾ.ಬೇಂದ್ರೆ. ಸಮಾರಂಭದ ಸ್ವಾಗತ ಭಾಷಣ ಡಾ॥ ಸಾ.ಶಿ. ಮರುಳಯ್ಯರವರಿಂದ. ಕವಿದ್ವಯರಿಂದ ಸ್ಫೂರ್ತಿಗೊಂಡು ಅವರ ಕಾವ್ಯ ಕುಸುಮಗಳನ್ನು ಆಯ್ದು ಒಂದು ಹೊಸ ಹೂಮಾಲೆಯನ್ನು ಮರುಳಯ್ಯನವರು ಕಟ್ಟಿದ್ದಾರೆ. ಹೂ ಮಾಲೆಯ ಸೌಂದರ್ಯಕ್ಕೆ ಹೂಗಳೆಷ್ಟು ಕಾರಣವೋ ಕಟ್ಟುವವನ ಜಾಣ್ಮೆಯೂ ಕೂಡ ಅಷ್ಟೇ ಮುಖ್ಯ. ಸಾ.ಶಿ.ಮ. ಅವರು ಕನ್ನಡದ ಮೇರು ಸದೃಶ್ಯ ಕವಿಗಳಿಬ್ಬರನ್ನು ಸೂರ್ಯನಿಗೆ ಹೋಲಿಸಿ ಕವಿಗಳಿಬ್ಬರ ಸಮಾನತೆಯನ್ನು ಪ್ರಕಟಿಸಿದ್ದಾರೆ. ಬೇಂದ್ರೆಯವರ ಬಗ್ಗೆ ವ್ಯಕ್ತ ಪಡಿಸಿದ ಸಾ.ಶಿ.ಮ. ಅವರ ಅಭಿಪ್ರಾಯ ಬೇಂದ್ರೆಯವರ ಸಂಪೂರ್ಣ ವ್ಯಕ್ತಿತ್ವವನ್ನು ಸಾದರಪಡಿಸುತ್ತದೆ. "ಮೂಡಲ ಮನೆಯ ಮುತ್ತಿನ ನೀರಿನ ಎರಕದ ಹೊಯ್ದ .... ಆ ಅದು ತುಂಬಿ ಈ ಇದೂ ತುಂಬಿ ಯಾವುದೂ ತುಂಬಿ ಬರೆದೆ ತುಂಬಿ ಕಳೆದರೂ ತುಂಬಿ ಉಳಿದರೂ ತುಂಬಿ ತುಂಬಿ ಬರದೆ .... ಎಂದು ದುಂಬಿ ತುಂಬಲಲ್ಲಿ ಓಂಕಾರದ ಝೇಂಕಾರ ಮಾಡತ್ತಾ ಬಂತು. ಹರನ ಜಡೆಯಿಂದ ಋಷಿಯ ತೊಡೆಯಿಂದ ಉರುಳಿ ಬಂತು ..... ಮಲ್ಲಿಗೆಯಂತೆ ಘಮಘಮಾಡಸ್ತಾ ಅನ್ನಾವತಾರವಾಗಿ ಕನ್ನಡದ ಕಂದಮ್ಮ ಕಟ್ಟಿರುವ ತೊಟ್ಟಿಲ ತೂಗುತ್ತಾ ಜೋಗುಳ ಹಾಡುತ್ತಾ ವಿಶ್ವಮಾತೆ, ಭೂಮಿತಾಯಿ, ಭರತಮಾತೆ, ಕನ್ನಡ ತಾಯಿ, ಹಡೆದವ್ವ ಅಂಬಿಕೆ ಐದೆಯರ ಸುಪುತ್ರನಾದ ಶ್ರೀಮದ್ವಿಭೂತಿ."

ಸಾ.ಶಿ.ಮ. ಅವರು ಕುವೆಂಪು ಬೇಂದ್ರೆಯವರಿಂದ ಕಾವ್ಯಭ್ಯಾಸದ ಬೋಧನೆಯನ್ನು ಪಡೆದುದನ್ನು ಸ್ಮರಿಸುತ್ತ ನಾಟಕ ರತ್ನ ಗುಬ್ಬಿವೀರಣ್ಣನವರಿಗೆ ಬೇಂದ್ರೆಯವರು, ಬೇಂದ್ರೆಯವರಿಗೆ ವೀರಣ್ಣನವರು ಪರಸ್ಪರ ಹಾರ ಹಾಕಿ ಗೌರವಿಸಿಕೊಂಡ ಚಿತ್ರಣ ನೀಡಿದ್ದಾರೆ.

ಡಾ॥ ಡಿ. ಎಲ್. ನರಸಿಂಹಚಾರ್ಯರ ಬಗ್ಗೆ ಅವರ ಶಿಷ್ಯ ಸಾ.ಶಿ. ಮರುಳಯ್ಯನವರು ಅರ್ಪಿಸಿದ ಗುರುಕಾಣಿಕೆ 'ನಮ್ಮ ಮೇಷ್ಟ್ರು' ಲೇಖನ. ತಮ್ಮ ಗುರುಗಳನ್ನು ವಾಸ್ತವ ಭಾವುಕತೆಯಲ್ಲಿ ಮರುಳಯ್ಯನವರು ಚಿತ್ರಿಸಿರುವ ರೀತಿ ಹೀಗೆ. "ದೊ.ಲ.ನ. ನಮ್ಮ ಮೇಷ್ಟ್ರು. ಮೇಷ್ಟ್ರಗಿಂತ ದೊಡ್ಡ ಪದವಿ ಅವರಿಗೆ ಸಿಗಲಿಲ್ಲ. ಹಂಬಲವೂ ಇರಲಿಲ್ಲ. ಈ ಕರ್ಮಯೋಗಿ ಬೇಡಿದುದೇನು ಇಲ್ಲ. ಮಾಡಿದುದು ಮಾತ್ರ ಬೆಟ್ಟದಷ್ಟು. ಮೈಸೂರು ದಸರಾದಲ್ಲಿ ಚಾಮುಂಡೇಶ್ವರಿ ಅಂಬಾರಿಯನ್ನು ದ್ರೋಣ ಹೊತ್ತರೆ ಈ ದೊಲನ ಕನ್ನಡ ಪೃಥ್ವಿಯನ್ನು ಹೊತ್ತ ದಿಗ್ಗಜಗಳಲ್ಲಿ ಒಬ್ಬರು". ದೊಲನ ಅವರ ಸಮಗ್ರ ಸಾಹಿತ್ಯ ಸೇವೆಗೆ ಮರುಳಯ್ಯನವರು ಅರ್ಪಿಸಿದ ಮೆಚ್ಚಿಗೆಯ ಕಾಣಿಕೆ ಇದು. ದೊಲನ ಅವರ ಹುಟ್ಟು, ಬಾಲ್ಯ, ವಿದ್ಯಾಭ್ಯಾಸ, ಸಲ್ಲಿಸಿದ ಸೇವೆ ಮುಂತಾದ ವಿವರಗಳನ್ನು ಲೇಖಕರು ನೀಡುತ್ತಾರೆ. ಅವರ ಪ್ರಕಾಂಡ ಪಾಂಡಿತ್ಯವು ಸೃಷ್ಟಿ ಶಕ್ತಿ, ಸಹೃದಯ ಶಕ್ತಿ ಮತ್ತು ವಿಮರ್ಶನ ಶಕ್ತಿಗಳಲ್ಲಿ ಮುಪ್ಪುರಿಗೊಂಡದ್ದನ್ನು ಸಂಗ್ರಹಿಸಿದ್ದಾರೆ. ದೊಲನ ಅವರ ಸಂಶೋಧನೆಯ ಆಳವನ್ನು, ಛಂದಸ್ಸಿನಲ್ಲಿ ಅವರಿಗಿರುವ ವಿದ್ವತ್ತನ್ನು ಉದಾಹರಿಸುತ್ತಾರೆ. ಖ್ಯಾತ ವೈಯಾಕರಣಿ ಕಾವ್ಯ

ಮೀಮಾಂಸಕ, ವಿಮರ್ಶಕ ಸಂಸ್ಕೃತಿಯ ಸಂವರ್ಧಕ ಮತ್ತು ಕಾವ್ಯ ಸಂಪಾದಕರು, ಆಗಿದ್ದ ದೊಲನ ಅವರ ವಿವಿಧ ಮುಖಗಳನ್ನು ಸಾ.ಶಿ.ಮ. ಕೊಡುತ್ತಾರೆ.

'ಭವ್ಯ ಮಾನವ ಶಿಲ್ಪಿ' ಪ್ರೊ॥ ಸಂ.ಶಿ. ಭೂಸನೂರ ಮಠ ಅವರ ಅಭಿನಂದನ ಗ್ರಂಥಕ್ಕೆ ಬರೆದ ಸುದೀರ್ಘ ಲೇಖನ. ಈ ಲೇಖನದಲ್ಲಿ ಗ್ರಂಥ ಸಂಪಾದನೆಯಲ್ಲಿ ಭೂಸನೂರರಿಗೆ ಇರುವ ಅಪಾರ ಪಾಂಡಿತ್ಯವನ್ನು, ಶಾಸ್ತ್ರೋಕ್ತ ಕಾರ್ಯ ವೈಖರಿಯನ್ನು ಸಾ.ಶಿ.ಮ. ವಿವರಿಸುತ್ತಾರೆ. ಅವರೊಬ್ಬ ಸಮರ್ಥ ಗ್ರಂಥ ಸಂಪಾದಕರೆಂಬುದಕ್ಕೆ, ಗೂಳೂರು ಸಿದ್ಧ ವೀರಣ್ಣೊಡೆಯನ ಶೂನ್ಯ ಸಂಪಾದನೆ ಸಾಕ್ಷಿಯಾಗಿದೆ. ಭೂಸನೂರರಲ್ಲಿ ಹುದುಗಿದ್ದ ಶಾಸ್ತ್ರೀಯ ಚೌಕಟ್ಟು ಮತ್ತು ತೌಲನಿಕ ಅಧ್ಯಯನದ ಮಹತ್ವವನ್ನು ಲೇಖಕರು ಬಹುವಾಗಿ ಮೆಚ್ಚಿಕೊಳ್ಳುತ್ತ ಅವರ ಅಧ್ಯಯನದ ವಿವಿಧ ಮುಖಗಳನ್ನು ಗುರುತಿಸಿದ್ದಾರೆ. ಭೂಸನೂರರ ಒಟ್ಟು ಹದಿಮೂರು ಸಂಪಾದಿತ ಕೃತಿಗಳ ಬಗ್ಗೆ ಸುದೀರ್ಘವಾಗಿ ವಿಮರ್ಶೆ ಮಾಡಿ, ಅಂತಿಮದಲ್ಲಿ ಭೂಸನೂರರ 'ಭವ್ಯ ಮಾನವ' ನಿಸ್ಸಂದೇಹವಾಗಿ ಒಂದು ಸೃಜನಾತ್ಮಕ ಕಾವ್ಯ ಎಂಬ ಹೇಳಿಕೆಗೆ ವಿವರಣೆ ನೀಡಿದ್ದಾರೆ.

'ಛಂದೋ ವಿಕಾಸದ ಕಾವ್ಯವಿಲಾಸಿ' ಡಿ.ಎಸ್. ಕರ್ಕಿಯವರನ್ನು ಕುರಿತು ಸಾ.ಶಿ.ಮ. ಅವರು ಬರೆದ ಲೇಖನ

ಕರಿಕೆ ಬೆಳಯದ ನೆಲ ಇಲ್ಲ
ಕರ್ಕಿ ಕಾಣದ ಜನ ಇಲ್ಲ.

ಎನ್ನುವ ಹೇಳಿಕೆಯಲ್ಲಿ ಉತ್ಪ್ರೇಕ್ಷೆ ಇಲ್ಲ. ನವೋದಯ ಕಾಲದಲ್ಲಿನ ರಮ್ಯ ರಚನೆಯನ್ನು ಅದರ ಆದರ್ಶವನ್ನು ಮೈಗೂಡಿಸಿಕೊಂಡ ಮೇಲ್ಮಟ್ಟದ ಕವಿ. ಕನ್ನಡದ ದೀಪವನ್ನು ಕರ್ಕಿಯವರು ಬೆಳಗಿಸಿದರು. ಸಾ.ಶಿ.ಮ. ಅವರು ಕರ್ಕಿಯವರ ನಕ್ಷತ್ರಗಾನ, ಭಾವತೀರ್ಥ, ಗೀತಗೌರವ, ನಮನ, ಕರಿಕೆ ಕಣಗಿಲ, ಸಂಕಲಗಳಲ್ಲಿನ ಕವನಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಿದ್ದಾರೆ. ಮೇಲಾಗಿ ಕರ್ಕಿಯವರು ಎಷ್ಟು ಸಮರ್ಥ ಕವಿಗಳೆ, ಅಷ್ಟೇ ಸಮರ್ಥ ಶಾಸ್ತ್ರಕಾರರು ಆಗಿದ್ದರೆಂಬದಕ್ಕೆ ಅವರ 'ಛಂದೋ ವಿಕಾಸ' ಕೃತಿ ಸಾಕ್ಷಿ. ಸಾ.ಶಿ.ಮ. ಅವರ ಅಭಿಪ್ರಾಯದಂತೆ ಕರ್ಕಿಯವರಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸ್ಥಾನವನ್ನು ಗಳಿಸಿಕೊಟ್ಟ ಗಣ್ಯಕೃತಿ ಖಂಡಿತವಾಗಿ ಛಂದೋ ವಿಕಾಸ.

ಕಾವ್ಯಾನಂದ ಕಾವ್ಯನಾಮದ ಡಾ॥ ಸಿದ್ಧಯ್ಯ ಪುರಾಣಿಕರಿಗೆ ೧೯೮೦ ರಲ್ಲಿ ಕಲ್ಕತ್ತೆಯ ಭಾರತೀಯ ಭಾಷಾ ಪರಿಷತ್ತಿನ ಬಿಲ್ವಾರ ಪ್ರಶಸ್ತಿ ಲಭ್ಯವಾಯಿತು. ಪ್ರಶಸ್ತಿ ಪ್ರದಾನವಾದಾಗ ಸಾ.ಶಿ. ಮರುಳಯ್ಯನವರು ಪುರಾಣಿಕರಿಗೆ ಅರ್ಪಿಸಿದ ಗೌರವ ಕಾಣಿಕೆಯೆ 'ಕಾವ್ಯಾನಂದ' ಲೇಖನ. ಡಾ॥ ಪುರಾಣಿಕರು ಸರ್ಕಾರದ ವಿವಿಧ ಸರ್ಕಾರಿ ಹುದ್ದೆಗಳಲ್ಲಿದ್ದವರು. ಅವರ ಸರ್ಕಾರಿ ಸೇವೆಯ ವ್ಯಾಪ್ತಿ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಯಿಂದ ಲೇಬರ್ ಕಮಿಷನರವರೆಗೂ ಹಬ್ಬಿದೆ. ಇಷ್ಟೆಲ್ಲಾ ಹುದ್ದೆಗಳು ಪುರಾಣಿಕರನ್ನು ಹುಡುಕಿಕೊಂಡು ಬಂದರೂ ಮನುಷ್ಯರಾಗಿಯೇ ಉಳಿದರು ಎಂಬ ಸಾ.ಶಿ.ಮ. ಅವರ ಹೇಳಿಕೆ ಪುರಾಣಿಕರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಬಾಲ್ಯದಿಂದಲೇ ಕಾವ್ಯದೇವಿ

ಇವರ ಕೈ ಹಿಡಿದಿದ್ದಳು. ಇದರ ಫಲವಾಗಿ ಜಲಪಾತ, ಕರುಣಾಶ್ರಾವಣ, ತುಷಾರ ಹಾರ ಕವನ ಸಂಕಲನಗಳು ಪ್ರಕಟಗೊಂಡವು. ಅನೇಕ ಜೀವನ ಚರಿತ್ರೆಗಳನ್ನು ಸಂಪಾದನೆಗಳನ್ನು ಮಕ್ಕಳ ಪುಸ್ತಕಗಳನ್ನು ಸಾ.ಶಿ.ಮ. ಅವರು ಸ್ಮರಿಸುತ್ತಾ ಅವುಗಳ ಮಹತ್ವವನ್ನು ಕುರಿತು ಬರೆದಿದ್ದಾರೆ. ಕಾವ್ಯಾನಂದರ ಮೇರುಕೃತಿ ಎಂದರೆ ವಚನೋದ್ಯಾನ. ಇದು ಸಾ.ಶಿ.ಮ. ಅವರ ಅಭಿಪ್ರಾಯದಂತೆ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಿದ್ದ ಗಟ್ಟಿಕಾಳು. ಈ ಕೃತಿಯಲ್ಲಿ ನಿರೂಪಿತವಾಗಿರುವ ಕ್ಷುದ್ರ ರಾಜಕೀಯ, ಭ್ರಷ್ಟಾಚಾರ, ನಿತ್ಯಜೀವನದ ಸತ್ಯ ಚಿತ್ರಣಗಳನ್ನು ನೀಡುವ ಅನೇಕ ವಚನಗಳನ್ನು ಸಾ.ಶಿ. ಮರುಳಯ್ಯನವರು ಸೋದಾಹರಣವಾಗಿ ವಿವರಿಸುತ್ತಾರೆ. ಅಂತ್ಯದಲ್ಲಿ ಪುರಾಣಿಕರಿಗೆ ನಾಡಿನ ಒಳಗೆ ಮತ್ತು ಹೊರಗೆ ಸಂದ ಪ್ರಶಸ್ತಿಗಳ ಪಟ್ಟಿಯನ್ನು ನೀಡಿದ್ದಾರೆ.

೧೯೮೮ ರಲ್ಲಿ ಬೆಂಗಳೂರಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಜರುಗಿತು. ಅದರ ಅಧ್ಯಕ್ಷರಾಗಿದ್ದವರು ಡಾ॥ ಆರ್.ಸಿ. ಹಿರೇಮಠ. ಆರ್.ಸಿ. ಅವರ ಬಗ್ಗೆ ಸಮಾರಂಭದ ವಿಶೇಷ ಸಂಚಿಕೆಗಾಗಿ, ಸಾ.ಶಿ.ಮರುಳಯ್ಯನವರು 'ಸಾಹಿತ್ಯ ತಪಸ್ವಿ' ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಸಾ.ಶಿ.ಮ. ಅವರು ಆರ್. ಸಿ. ಹಿರೇಮಠ ಅವರ ಬಾಲ್ಯದ ದಾರುಣ ದಿನಗಳ ವಿವಿಧ ಮುಖಗಳನ್ನು ನೀಡುತ್ತಾರೆ. ಅಂತಹ ದಾರುಣ ಪ್ರಸಂಗಗಳನ್ನು ಮೆಟ್ಟಿನಿಂತು ಮುನ್ನಡೆಯನ್ನು ಸಾಧಿಸಿರುವ ಬಗ್ಗ ಮೆಚ್ಚಿಗೆ ಸೂಚಿಸುತ್ತಾರೆ. ಆರ್. ಸಿ. ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ವೃತ್ತಿಯಿಂದ ಕುಲಪತಿಗಳವರೆಗಿನ ಸಾಧನೆಗಳನ್ನು ಪರಿಚಯಸಿದ್ದಾರೆ. ಹಿರೇಮಠರವರು ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಸ್ಥಾಪಿಸಿದ ಭಾಷಾಂತರ ಡಿಪ್ಲೊಮಾ, ವೀರಶೈವ, ಜೈನ ಮತ್ತು ವೈದಿಕ ತೌಲನಿಕ ಧರ್ಮ ಡಿಪ್ಲೊಮ ತೆರೆದದ್ದು ಮುಂದೆ ಅವರ ರಚನಾತ್ಮಕ ಸಾಧನೆಗಳು ಹೇಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಯೋಗ್ಯತೆಯನ್ನು ಹೆಚ್ಚಿಸಿತು; ಡಿ.ಸಿ. ಪಾವಟೆಯವರ ಕನಸು ಆರ್. ಸಿ. ಹಿರೇಮಠರ ಮುಖಾಂತರ ಹೇಗೆ ನೆನಸಾಯಿತು ಎಂಬ ಬಗ್ಗೆ ಸಾ.ಶಿ.ಮ. ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಆರ್.ಸಿ. ಅವರ ಬಹುದೊಡ್ಡ ಕಾರ್ಯವೆಂದರೆ 'ವಚನ ವಾಙ್ಮಯ' ಯೋಜನೆ. ಅವರು ವಚನ ಸಾಹಿತ್ಯದ ಸಂಪಾದನೆ, ಕೃತಿಗಳ ಪ್ರಕಟಣೆ ಮಾಡಿ ವಚನ ವಾಙ್ಮಯಕ್ಕೆ ಕೊಟ್ಟ ಕೊಡುಗೆ ಮಹತ್ವದ್ದಾಗಿದೆ ಎನ್ನುವ ಅಭಿಪ್ರಾಯಕ್ಕೆ ಸಾ.ಶಿ.ಮ. ಬರುತ್ತಾರೆ.

ದೇಶಹಳ್ಳಿ ಜಿ. ನಾರಾಯಣರಿಗೂ ಸಾ.ಶಿ.ಮ. ರವರಿಗೂ ಸುಮಾರು ಮೂರು ದಶಕಗಳ ಸುದೀರ್ಘ ಒಡನಾಟವಿದೆ. ಅದರ ಸತ್ಫಲವೇ 'ರತ್ನತ್ರಯ ಸಾಧಕ' ಎನ್ನುವ ಲೇಖನ. ನಾರಾಯಣರದು ಸರಳ ಸುಸಂಸ್ಕೃತ, ಅಪ್ಪಟ ದೇಸಿ ಬದುಕು. ಸಾ.ಶಿ. ಮರುಳಯ್ಯನವರು ನಾರಾಯಣರನ್ನು ಪರಿಚಯಿಸುವುದು ವಿಶಿಷ್ಟ ಸಂದರ್ಭದೊಂದಿಗೆ. ೧೯೪೨ ರಲ್ಲಿ ಗಾಂಧೀಜಿ ಕ್ವಿಟ್ ಇಂಡಿಯಾ ಚಳುವಳಿಗೆ ಕರೆಕೊಟ್ಟಿದ್ದು, ಅದರಲ್ಲಿ ಭಾಗವಹಿಸಿ ಬಾಲಕ ನಾರಾಯಣರು ಬೊಂಬಾಯಿಂದ ಬೆಂಗಳೂರಿಗೆ ಹಿಂತಿರುಗಬೇಕಾಗಿತ್ತು. ಜೇಬಲ್ಲಿ ಹಣವಿರಲಿಲ್ಲ. ಓಡುವ ರೈಲಿನ ಕಂಬಿಯನ್ನು ಹಿಡಿದು ಪ್ರಯಾಣಿಸುತ್ತಿದ್ದರು. ಒಳಗಿದ್ದವರು ಮಿಲಿಟರಿಯವರು, ಬಾಲಕರನ್ನು ಒಳಗೆ

ಬಿಟ್ಟುಕೊಂಡು, ಆತನ ಮೇಲೆ ಕೇಳುವ ಪ್ರಶ್ನೆಗಳನ್ನು ಮಿಲಿಟರಿಯರು ಕೇಳಿದರು. ಅವರ ಎಲ್ಲ ಪ್ರಶ್ನೆಗಳನ್ನು ಬಾಲಕನ ದಿಟ್ಟ ಉತ್ತರ .... ಹೀಗೆ ಮುಂದುವರೆಯುತ್ತದೆ. ಸಾ.ಶಿ.ಮ. ಅವರ ಲೇಖನಿ. ನಾರಾಯಣರಲ್ಲಿನ ನಾಡು ನುಡಿಯ ಸಹಜ ಕಾಳಜಿ ಇಂದಿನದಲ್ಲ. ಅದು ಹುಟ್ಟುವಾಗಲೇ ಅವರ ಜೊತೆ ಹುಟ್ಟಿದ್ದು ಎನ್ನುವುದು ಸಾ.ಶಿ.ಮ. ಅವರ ಅಭಿಪ್ರಾಯ. ಲೇಖಕರು ನಾರಾಯಣರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅವರೊಡನೆ ಬೆರತು ಕೆಲಸ ಮಾಡುವ ಸಂದರ್ಭದಲ್ಲಿ ಅವರಲ್ಲಿರುವ ಸಮಯ ಪಾಲನೆ ತತ್ವನಿಷ್ಠೆ ಮಾನವತೆಗಳನ್ನು ಗುರುತಿಸಿದ್ದಾರೆ. ಅವರಲ್ಲಿ ಈ ಮೂರೂ ಗುಣಗಳು ಮೇಳವಿಸಿರುವುದು ಸಾ.ಶಿ.ಮ. ಮೆಚ್ಚಿ ಅವರನ್ನು 'ರತ್ನತ್ರಯ ಸಾಧಕ ' ಎಂದು ಕೊಂಡಾಡಿದ್ದಾರೆ.

'ಮಾನವತಾದಿ' ಎಂಬ ಲೇಖನವನ್ನು ಸಾ.ಶಿ. ಮರುಳಯ್ಯನವರು ಆತ್ಮೀಯ ಗೆಳೆಯ ಹಂಪ ನಾಗರಾಜಯ್ಯನವರನ್ನು ಕುರಿತು ಬರೆದಿದ್ದು, ದಾವಣಗೆರೆ ಕಾಲೇಜಿನಲ್ಲಿ ಒಟ್ಟಿಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾಗ ನಡೆದ ಒಂದು ಘಟನೆಯನ್ನು ಮರುಳಯ್ಯನವರು ಜ್ಞಾಪಿಸಿಕೊಂಡಿದ್ದಾರೆ. ಹಂಪನಾ ಮರುಳಯ್ಯನವರಿಗಿಂತ ಜ್ಯೂನಿಯರ್. ಹಂಪನಾ ಆತ್ಮೀಯನಾಗಿ ಹತ್ತಿರವಾಗಲು ಸಾ.ಶಿ.ಮ. ಅವರ ಸೀನಿಯರ್ ದೊಡ್ಡಸ್ತಿಕೆ ಗೋಡೆ ಅಡ್ಡ ಬರುತ್ತಿತ್ತಂತೆ. ಇದನ್ನು ಹಂಪನಾ ಅವರು ತಮ್ಮ ಸರಳ ಸಜ್ಜನಿಕೆಗಳಿಂದ ಹೇಗೆ ಕೆಡವಿದರು ಎಂಬುದನ್ನು ಬಿಚ್ಚು ಮನಸ್ಸಿನಿಂದ ನೆನೆಯುತ್ತಾರೆ. ಇದು ಸಾ.ಶಿ.ಮ. ಅವರ ಪ್ರಾಂಜಲ ಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ. ತಮ್ಮ 'ಕೆಂಗನ ಕಲ್ಲು' ಕವನ ಸಂಕಲನಕ್ಕೆ ಸರ್ಕಾರದಿಂದ ಬಹುಮಾನ ಬಂದಾಗ ಶಿವಮೊಗ್ಗೆಯ ಅವರ ಆತ್ಮೀಯ ಬಳಗ ಸನ್ಮಾನಿಸಿದ ಗೌರವದ ಹಿಂದಿನ ರೂವಾರಿ ಹಂಪನಾ. 'ಬೃಂದಾವನ ಲೀಲೆ' ಮೊಟ್ಟ ಮೊದಲ ಬಾರಿಗೆ ರಾಗ ಸಂಯೋಜನೆಯಿಂದ ಮೈದುಂಬಿಕೊಂಡು ವಿಜೃಂಭಿಸುವುದು, ಹಂಪನಾ ಅವರಿಂದಲೇ, ಸಾ.ಶಿ.ಮ. ಅವರು ಜೀವನದಲ್ಲಿ ಮೊತ್ತಮೊದಲ ಬಾರಿ ಪೂರ್ಣ ಕುಂಭ ಸ್ವಾಗತ, ಪ್ರಥಮ ಬಾರಿ ಪಡೆದ ಸನ್ಮಾನದ ಶಾಲು. ಹೀಗೆ ಹಲವು ಹತ್ತು ಮೊದಲಿಗೆ ಹಂಪನಾ ಹೇಗೆ ಕಾರಣಕರ್ತರಾದರೆನ್ನುವುದನ್ನು ಅಶ್ರು ತುಂಬಿದ ಗದ್ಗದ ಕಂಠದಿಂದ ನನೆಯುತ್ತಾರೆ.

'ಕುವೆಂಪು ಕಾವ್ಯದ ವ್ಯಾಖ್ಯಾನಕಾರ ಪ್ರೊ॥ ದೇ.ಜ.ಗೌ. ಅವರನ್ನು ಕುರಿತದ್ದು, ಈ ಲೇಖನದಲ್ಲಿ ದೇ.ಜ.ಗೌ. ಅವರ ವ್ಯಕ್ತಿ ಚಿತ್ರಣ ನೀಡುವುದಕ್ಕೆ ಮೊದಲು ಸಾ.ಶಿ.ಮ. ಅವರು ಮೀಮಾಂಸೆ, ವಿಮರ್ಶೆ, ಭಾಷ್ಯ ಮುಂತಾದುವುಗಳ ಔಚಿತ್ಯದ ಸುದೀರ್ಘ ವಿವರಣೆ ಕೊಟ್ಟಿದ್ದಾರೆ. ದೇ.ಜ.ಗೌ. ಅವರು ಕುವೆಂಪು ಅವರ ರಾಮಾಯಣದರ್ಶನಂ ಮಹಾಕಾವ್ಯದ ಬಗ್ಗೆ ವಿಶೇಷವಾಗಿ, ನಾಟಕ ಕತೆ ಕಾದಂಬರಿಗಳನ್ನು ಕುರಿತು ಪೋಷಕವಾಗಿ, ಅವರ ಜೀವನ, ಕಾವ್ಯ ಜೀವನಗಳನ್ನು ಕುರಿತು ಪ್ರಾಸಂಗಿಕವಾಗಿ ಹೇಗೆ ವ್ಯಾಖ್ಯಾನ ನೀಡಿದ್ದಾರೆ ಎಂಬುದನ್ನು ಸಾ.ಶಿ.ಮ. ಅವರು ವ್ಯಾಖ್ಯಾನಕ್ಕೆ ವಿಶ್ಲೇಷಣೆ ನಡೆಸಿದ್ದಾರೆ. ಇದು ಕುವೆಂಪು ಸಾಹಿತ್ಯ ಕುರಿತು ದೇ.ಜ.ಗೌ. ಅವರು ನಡೆಸಿದ ರಸಕ್ರಿಯೆಯ ರಸಯಾನಕ್ಕೆ ತಕ್ಕ ಹೇಳಿಕೆಯಾಗಿದೆ. ದೇಜಗೌ ಅವರ ಕುವೆಂಪು ಸಾಹಿತ್ಯ ಕೇಂದ್ರಿತ ಅಧ್ಯಯನಗಳ

ಬಗ್ಗೆ ಮರುಳಯ್ಯನವರ ಮೆಚ್ಚಿಗೆ ನುಡಿಗಳು ಹೀಗಿವೆ. "ಹೂ ಹೂಗಳ ಬಂಡುಂಡು ತುಪ್ಪದ ಕೊಡ ಕಟ್ಟುವ ದುಂಬಿಯಂತೆ ಹತ್ತಾರು ರಸಘಟ್ಟಗಳ, ಸುಂದರ ಸನ್ನಿವೇಶಗಳ ಬಂಧುರನಿಂದ ಪಾತ್ರಗಳ ಪರಿಚಯ ....." ಇಲ್ಲಿ ಬರುವ ಶಬರಿ, ಮಂಥರೆ, ಊರ್ಮಿಳೆ... ಇತ್ಯಾದಿ ಪಾತ್ರಗಳು ಹೇಗೆ ವಿವೇಚನಾ ಪರವಾಗಿದೆ ಎಂಬುದನ್ನು ಸಾಶಿಮ ಗುರುತಿಸುತ್ತಾ ಹೋಗುತ್ತಾರೆ. ದೇಜಗೌ ಅವರ ಸಾಧನಗಳ ಚಿತ್ರಣ ಮರುಳಯ್ಯನವರ ಕುಂಚದಿಂದ ಮೂಡಿದ್ದು ಹೀಗೆ. "ಬಿ.ಎಂ.ಶ್ರೀ ಅವರು ಕನ್ನಡಿಗರ ಮನದ ಮೈಲಿಗೆಯನ್ನು ನೀಗಲು ತುಂಬಾ ಶ್ರಮಿಸಿದರು. ಧೂಳು ಕೊಡವಿದರು. ದೇಜಗೌ ಅವರು ಕನ್ನಡಿಗನ ಜುಟ್ಟು ಹಿಡಿದು ನೆತ್ತಿಯನ್ನೆ ಒದರಿದರು, ಸುಪ್ತ ಚೇತನಗಳನ್ನು ಬಡಿದೆಬ್ಬಿಸಿದರು. ಹೊಸ ಹುರುಪು ತುಂಬಿದರು." ದೇಜಗೌ ಅವರು ಮೈಸೂರು ವಿಶ್ವವಿದ್ಯಾಲಯ ವೃಕ್ಷಕ್ಕೆ ಹೊಸ ಚಿಗುರನ್ನು ನೀಡಿದ್ದಲ್ಲದೆ, ಅದರ ಹಳೆಯ ಬೇರು ಆಳದಲ್ಲಿ ಹುದುಗಲು ಶ್ರಮಿಸಿದ ಎಲ್ಲ ವಿವರಗಳನ್ನು ಸಾಶಿಮ ಕೊಟ್ಟಿದ್ದಾರೆ.

ಎಲೆಮರೆಯ ಕಾಯಿಯಂತೆ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಆರ್.ಎಂ.ಬಿ. ಆರಾಧ್ಯರನ್ನು ಕುರಿತದ್ದು "ಆತ್ಮಶ್ರೀಗೆ ಪದ್ಮಶ್ರೀ" ಲೇಖನ. ಆರಾಧ್ಯರು ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ ಮಹತ್ವಕೊಟ್ಟಿದ್ದಾರೆ. ವ್ಯಕ್ತಿ ಬೆಳೆದರೆ ಸಮಾಜ" ಸಮಾಜ ಬೆಳೆದರೆ ದೇಶ, ರಾಷ್ಟ್ರಪ್ರಗತಿ ಸಾಧ್ಯ ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟು ನುಡಿದಂತೆ ನಡೆದು, ಅನ್ಯರಿಗೆ ದಾರಿ ದೀಪವಾದರು. ಮರುಳಯ್ಯನವರು ಇಂತಹ ಮುತ್ಸದ್ದಿಯ ವಿವಿಧ ಮುಖಗಳನ್ನು ಮೆಚ್ಚಿ ಕೊಂಡಾಡಿದ್ದಾರೆ.

"ಪಟ್ಟು ಬಿಡದ ಪಟ್ಟೆ ವಿಭೂತಿ" ಬಿ.ಡಿ. ಜತ್ತಿಯವರನ್ನು ಕುರಿತು ಬರೆದಿದ್ದು. ಈ ಲೇಖನದಲ್ಲಿ ರಾಜಕೀಯಕ್ಕೆ ಆಧ್ಯಾತ್ಮ ಬೆರಸುವುದರ ಔಚಿತ್ಯವನ್ನು ಲೇಖಕರು ಜತ್ತಿಯವರ ಜೊತೆ ಸಂಭಾಷಿಸಿ ಶ್ರುತ ಪಡಿಸಿದ್ದಾರೆ.

"ದೊಡ್ಡ ಮನೆ ದೊಡ್ಡ ಗೌಡರು" ಪ್ರಸಿದ್ಧ ಸಾಹಿತಿ ಎಚ್.ಎಲ್. ನಾಗೇಗೌಡರ ನೆನಪಿನ ಸಂಚಿಕೆ 'ನಾಗಸಂಪಿಗೆ'ಗಾಗಿ ಬರೆದ ಲೇಖನ. ಒಂದು ಕೈಯಲ್ಲಿ ಆಡಳಿತ ಸೂತ್ರವನ್ನು, ಮತ್ತೊಂದರಲ್ಲಿ ಲೇಖನಿಯನ್ನು ಹಿಡಿದು ಸಾರ್ಥಕ ಕೃತಿ ಕಾಣಿಕೆ ನೀಡುತ್ತಾ ಬಹುದೂರ ಸಾಗಿದ ಸವ್ಯಸಾಚಿ ಶ್ರೀ ಗೌಡರು. ಅವರು ಕಥೆಗಾರರಾಗಿ, ಜಾನಪದ ಜ್ಯೋತಿಯಾಗಿ, ಪ್ರವಾಸ ಸಾಹಿತ್ಯಕಾರರಾಗಿ ಸಾಹಿತ್ಯದ ವಿವಿಧ ಮೂಲೆಗಳಲ್ಲಿಯೂ ಸಾಧನೆಗೈದ ಮಾಹಿತಿ ಈ ಲೇಖನದಲ್ಲಿದೆ. ಗೌಡರ ಸಮಗ್ರ ಸಾಹಿತ್ಯ ಪರಿಚಯವನ್ನು ಕನ್ನಡಿಯಲ್ಲಿ ಆನೆಯ ಬಿಂಬವನ್ನು ಕಂಡ ಹಾಗೆ ಕಂಡರಿಸಿದ್ದಾರೆ. "ಅವರ ಸಾಧನೆಯ ಫಲವಾಗಿ ಪ್ರವಾಸಿ ಕಂಡ ಇಂಡಿಯಾ ಕಂಡರಿಸಲ್ಪಟ್ಟಿತು. ಬೆಟ್ಟದಿಂದ ಬಟ್ಟಲಿಗೆ ಭಟ್ಟಿ ಇಳಿಯಿತು. ದೊಡ್ಡಮನೆ ಗ್ರಾಮಿಣ ಬದುಕನ್ನು ಹೊತ್ತು ಮೆರೆದ ಮಾದರಿಯ ಮಂದಿರವಾಯಿತು; ಸೋಬಾನೆ ಚಿಕ್ಕಮ್ಮ ಕನ್ನಡ ಕುಲಕೋಟಿಗೆ ಅಕ್ಕರೆಯ ಚಿಕ್ಕಮ್ಮನೆ ಆದಳು. ಹಾಡಿನ ಹೆಳವರು ಬದುಕಿನ ಭಾಗಿರಥೀಯಲ್ಲಿ ತೇಲುವ ತೆಮರು ಪಡೆದರು, ಸರೋಜಿನಿ ನಾಯ್ಡು ಮತ್ತೊಮ್ಮೆ ಭಾರತದ ಕೋಗಿಲೆಯಾಗಿ ಹಾಡಿ ಹರಿಸಿದಳು." ಇದು ಮರುಳಯ್ಯನವರ ಬರವಣಿಗೆಯ ಮಾದರಿ.

ಡಾ॥ ತಿಪ್ಪೇರುದ್ರ ಸ್ವಾಮಿಯವರ ಅಭಿನಂದನ ಗ್ರಂಥಕ್ಕಾಗಿ ಬರೆದ ಲೇಖನವೇ 'ಶರಣ ಸಾಹಿತಿ'. ಗುರು, ದೈವ, ಧರ್ಮ ಈ ಮೂರರಿಂದ ತಮ್ಮಾತ್ಮನನ್ನು ಬೆಳಗಿಸಿಕೊಂಡ ಶ್ರೀ ಸ್ವಾಮಿಯವರು, ಡಾಕ್ಟರು, ಪ್ರೊಫೆಸರು, ಪ್ರಶಸ್ತಿ ವಿಜೇತ ಪ್ರಸಿದ್ಧರು ಏನು ಆಗಿರಲಿಲ್ಲ. ಆದರೆ ಒಳ್ಳೆಯ ಮೇಷ್ಟರಾಗಿದ್ದರು," ಶ್ರೀ ಸ್ವಾಮಿಯವರ ವ್ಯಕ್ತಿ ಚಿತ್ರಣಕ್ಕೆ ಸಾಶಿಮ ಅವರ ಈ ಮೇಲಿನ ವಾಕ್ಯವೊಂದೆ ಸಾಕು. ಅವರ ಸಂಪೂರ್ಣ ಸ್ವಾರ್ಥರಹಿತ ಬದುಕಿಗೆ. ಈ ಮುಂದಿನ ಸಾಶಿಮ ಅವರ ನುಡಿ ಅರ್ಥಗರ್ಭತೆಗೆ ಸಾಕ್ಷಿ ನೀಡಿದೆ. ಶ್ರೀ ಸ್ವಾಮಿಯವರದು ಹೊಗೆ ಇಲ್ಲದ ನಗೆ, ಮರುಳಯ್ಯನವರು ಸ್ವಾಮಿಯವರ ಜೊತೆ ನಡೆದ ಒಡನಾಟದ ನೆನಪುಗಳನ್ನು ಮೆಲಕು ಹಾಕುತ್ತಲೇ ಅವರೊಡನೆ ತಾವು ಕಳೆದ ಸಾಹಿತ್ಯಾರಾಧನೆಯ ದಿನಗಳನ್ನು ಸ್ಮರಿಸುತ್ತಾರೆ.

'ಕಾಫಿಯಲ್ಲೂ ಕನ್ನಡ ಬೆರಸಿದರು' ಶ್ರೀ ಎಂ.ಜೆ. ಕೋದಂಡರಾಮಶೆಟ್ಟಿ ಅವರ ಬಗ್ಗೆ ಬರೆದ ಲೇಖನ. ಸಾಹಿತ್ಯ ಬದುಕುವುದು ಸಾಹಿತ್ಯ ಪ್ರೇಮಿಗಳಿಂದ. ಶ್ರೀ ಶೆಟ್ಟರು ಅಪಾರ ಸಾಹಿತ್ಯ ಪ್ರೇಮಿಗಳಾಗಿದ್ದರೆಂಬುದಕ್ಕೆ ಚಿಕ್ಕ ಮಗಳೂರಿನ ಉತ್ಸಾಹಿ ತರುಣರ ಸಾಹಿತ್ಯ ಸಮಾರಂಭವೊಂದು ಆರ್ಥಿಕ ಮುಗ್ಗಟ್ಟಿನಿಂದ ನಿಂತಾಗ ಶೆಟ್ಟರು ಆ ತರುಣರಿಗೆ ಸ್ಥಳದಲ್ಲಿಯೇ ೧೦೦೦ ರೂ.ಗಳನ್ನು ನೀಡಿ ನಿಂತ ಸಮಾರಂಭಕ್ಕೆ ಚಾಲನೆ ಕೊಟ್ಟಿದ್ದೆ ಸಾಕ್ಷಿ. ಶ್ರೀ ಶೆಟ್ಟರು ಹಲವು ಹತ್ತು ಪ್ರೀತಿ ಪ್ರಶಂಸೆಗಳ ಸಾಕಾರ ಮೂರ್ತಿ. ಶೆಟ್ಟರ ವಿವಿಧ ಸೇವೆಗೆ ನೂರು ಕೈಗಳು, ಸಾವಿರ ತೋಳುಗಳು ಎಂದು ಸಾಶಿಮ ಕೊಂಡಾಡಿದ್ದಾರೆ.

'ಯಾರಿವನು' ಗೊ.ರು. ಚನ್ನಬಸಪ್ಪನವರನ್ನು ಕುರಿತದ್ದು. ಪ್ರಸ್ತುತ ಲೇಖನದಲ್ಲಿ ಶ್ರೀ ಗೋ.ರು.ಚ. ಅವರ ಭೌತಿಕ ಮತ್ತು ಅಂತರಂಗದ ವ್ಯಕ್ತಿಚಿತ್ರಣ ಚಿಕ್ಕ ಹರವಿನಲ್ಲಿ ಚೊಕ್ಕವಾಗಿ ಮೂಡಿಸಿದ್ದಾರೆ. 'ಆತ್ಮೀಯ' ಕಾದಂಬರಿಕಾರರಾದ ಎಸ್.ವಿ. ಶ್ರೀನಿವಾಸರಾಯರ ಬಗ್ಗೆ ಬರೆದದ್ದು. ಸಾಹಿತ್ಯ ಪರಿಷತ್ತಿನಲ್ಲಿ ಲೇಖಕರು ಮತ್ತು ಶ್ರೀನಿವಾಸರಾಯರು ಒಟ್ಟಿಗೆ ಕೆಲಸ ಮಾಡುತ್ತಿದ್ದಾಗ ಶ್ರೀನಿವಾಸರಾಯರು ತೋರಿದ ಅಪಾರ ಪ್ರೇಮದಿಂದಾಗಿ ಇಬ್ಬರ ಸಖ್ಯ ಬೆಳದಿರುವುದನ್ನು ನೆನಪಿಸಿ ಕೊಂಡಿದ್ದಾರೆ.

ಸಂಗೀತ ವಿದುಷಿ ಬಿ.ಎಸ್. ಚಂದ್ರಕಲಾ ಅವರ ಪರಿಚಯ 'ಸಂಗೀತ ರತ್ನ'. ಬಾಳಿನಲ್ಲಿ ಉಂಡ ಕಹಿಯನ್ನು ಲೆಕ್ಕಿಸದೆ ಸಾಹಿತ್ಯ ಸಂಗೀತಗಳೆರಡಲ್ಲೂ ಪ್ರಸಿದ್ಧಿ ಪಡೆದು, ನೂತನ ರಾಗಗಳ ಸೃಷ್ಟಿಕರ್ತೆಯಾದ ಚಂದ್ರಕಲಾ ಅವರ ವ್ಯಕ್ತಿ ಚಿತ್ರಣ ಸುಂದರವಾಗಿ ಮೂಡಿ ಬಂದಿದೆ. 'ನೆನೆಯ ಬಲ್ಲೆ ಮರೆಯಲಾರೆ' ಬಳ್ಳಿಗಾವೆಯ ಮಾರ್ಗದರ್ಶಿ, ಸಾಹಿತಿ ಸಂಶೋಧಕ, ಅಪ್ಪಟ ಗಾಂಧಿವಾದಿ ಶ್ರೀ ಎಸ್. ಭೀಮಪ್ಪ ಮಾಸ್ತರನ್ನು ಕುರಿತು ಬರೆದ ಲೇಖನ. ಲೇಖಕರಿಗೆ ಮಾಸ್ತರರೊಡನೆ ಒಡಹುಟ್ಟಿದ ಅಣ್ಣನಷ್ಟೇ ಸಖ್ಯ. ಸ್ವ ಅಧ್ಯಯನದಿಂದ ಪಾಂಡಿತ್ಯ ಗಳಿಸಿ ಅನೇಕ ಸಂಶೋಧಕರಿಗೆ ಆಕರ ಗ್ರಂಥವಾಗಿ, ಶಿಲೆ, ಶಾಸನ, ಐತಿಹ್ಯಗಳ ಬಗ್ಗೆ ಅಧಿಕಾರಯುತವಾದ ತಮ್ಮದೇ ಆದ ಶೈಲಿಯಲ್ಲಿ ಮಾತನಾಡುವ ಅವರ ಸಾಮರ್ಥ್ಯವನ್ನು ಸಾಶಿಮ ಅವರು ಮುಕ್ತ ಕಂಠದಿಂದ ಪ್ರಶಂಸಿದ್ದಾರೆ.

'ತಿಪಟೂರು ತಿಂಗಳ ಮಾಮ' ಅಕಸ್ಮಾತ್ ಬಸ್ಸಿನಲ್ಲಿ ಪರಿಚಯವಾದ ಸ್ನೇಹ

ಆತ್ಮೀಯಕ್ಕೆ ತಿರುಗಿ, ಆತಿಥ್ಯ ಪಡೆದ ಪ್ರಭಾವದಿಂದಾಗಿ ಹುಟ್ಟಿದ ಲೇಖನ. ಚಿಕ್ಕನಾಯಕನಹಳ್ಳಿ ಅಮಲ್ದಾರರಾಗಿ ಬಿಡುವಿನ ವೇಳೆಯಲ್ಲಿ ಸಾಹಿತ್ಯ ಸೃಷ್ಟಿಯನ್ನು ಮಾಡಿದ ಶ್ರೀ ಟಿ.ಎಸ್. ಮಹಾದೇವಯ್ಯನವರನ್ನು ಪ್ರೀತಿಯಿಂದ ನೆನೆದಿದ್ದಾರೆ.

'ಮಲೆನಾಡಿನಲ್ಲಿ ಮರ್ಯಾದೆ' ೧೯೭೧ ರಲ್ಲಿ ಶಿವಮೊಗ್ಗ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತಿನವರು ಹೊರತಂದ ಅವಲೋಕನಕ್ಕಾಗಿ ಸಿದ್ಧಪಡಿಸಿದ ಲೇಖನ. ಶ್ರೀ ಮರುಳಯ್ಯನವರು ಸುಮಾರು ೯ ವರ್ಷ ಶಿವಮೊಗ್ಗದಲ್ಲಿದ್ದಾಗ ಸಹಜ ಸ್ನೇಹ ಜೀವಿಯಾದ ಸಾಶಿಮ ಸುತ್ತ ಮುತ್ತಲಿನ ಅನೇಕ ಪ್ರದೇಶಗಳ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು. ತಮ್ಮ ಸಂಶೋಧನೆಗಾಗಿ ಮಲೆನಾಡಿನ ತಾಲ್ಲೂಕುಗಳಿಂದ ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿ ನೆಲದಲ್ಲಿ ಹೆಜ್ಜೆ ಮೂಡಿಸಿದರು. ಆ ಸಂದರ್ಭದಲ್ಲಿ ಅವರನ್ನು ಆತ್ಮೀಯವಾಗಿ ಕಂಡು, ಆತಿಥ್ಯ ನೀಡಿ, ತಮ್ಮಿಂದಾದ ಸಹಾಯ ಮಾಡಿ, ಉತ್ತೇಜನ ನೀಡಿದ ಮಲೆನಾಡಿನವರ ಆತಿಥ್ಯವನ್ನು ಮರುಳಯ್ಯನವರು ಎಂದಿಗೂ ಮರೆಯಲಾರರು. ಇಲ್ಲಿ ಅವರು ಪಡೆದ ಆತಿಥ್ಯ ಸ್ವಂತ ಮಾವನ ಮನೆಯಲ್ಲಿ ಸಿಕ್ಕಿಲ್ಲವಂತೆ.

೧೯೮೫ ರಲ್ಲಿ ಮರುಳಯ್ಯನವರು ಮದ್ರಾಸಿನಲ್ಲಿ ಕನ್ನಡದ ವರನಟ ಡಾ॥ ರಾಜ್‌ಕುಮಾರ್‌ವರನ್ನು ಸಾಹಿತ್ಯ ಕಾರ್ಯಕ್ಕಾಗಿ ಭೇಟಿಯಾಗಿದ್ದರು. ಅವರ ಬಾರೊ ಮೈಲಾರಕೆ, ಕ್ಯಾಸೆಟ್ ಹಾಡಿದವರು ಡಾ॥ ರಾಜ್. ಇದರ ಸಿದ್ಧತೆಗೆ ಮಾತನಾಡಿದ ವಿವರಗಳನ್ನು ಲೇಖಕರು ವಿವರಿಸಿ, ರಾಜ್‌ಕುಮಾರ್ ಹೃದಯ ಶ್ರೀಮಂತಿಕೆ ಕಲಾ ಸಾರ್ವಭೌಮತ್ವಗಳನ್ನು ಸ್ವತಃ ಅನುಭವಿಸಿ ವಿಸ್ತರಿಸಿದ್ದಾರೆ. 'ಇದು ಜಾತಿ ಕುದುರೆ'ಯಲ್ಲಿ ನಟ ವಿಷ್ಣುವರ್ಧನ್ ಜೊತೆ ಡಾ॥ ವಿಜಯ ನಡೆಸಿದ ಸಂದರ್ಶನದ ವಿವರಗಳನ್ನು ಸಂಗ್ರಹಿಸಿದ್ದಾರೆ. ಸಂದರ್ಶನದ ಜೊತೆಗೆ ಅವರ ಪತ್ನಿ ಭಾರತಿಯವರ ಸೇರಿಕೊಂಡರು. ಅವರ ಜೊತೆ ಸಂಭಾಷಿಸಿದ್ದೇ 'ಅಭಿನೇತ್ರಿ' ಲೇಖನ.

'ಎಲೆ ಮರೆಯ ಹೂ' ಸೌಜನ್ಯಶೀಲ ಐ.ಎ.ಎಸ್. ಅಧಿಕಾರಿ ಶ್ರೀ ಸಿ.ವಿ. ಜಮಖಂಡಿಮಠ ಅವರನ್ನು ಕುರಿತದ್ದು. ಶ್ರೀ ಮಠರವರ ಜೀವನದ ಪ್ರಮುಖ ಭಾಗಗಳನ್ನು ಗುರುತಿಸುತ್ತಾ ಅವರಲ್ಲಿರುವ ಸರಳ ಸಜ್ಜನಿಕೆಯ ವ್ಯಕ್ತಿತ್ವಕ್ಕೆ ಲೇಖಕರು ಮಾರುಹೋಗಿದ್ದಾರೆ. 'ಡಾ॥ ಮೂರ್ತಿ ನಾನು ಕಂಡಂತೆ' ಡಾ॥ ಎಂ. ಚಿದಾನಂದ ಮೂರ್ತಿಯವರ ಅಭಿನಂದನ ಗ್ರಂಥ 'ಸಂಶೋಧನೆ'ಗಾಗಿ ಸಿದ್ಧಪಡಿಸಿದ ಲೇಖನ. ಸಂಶೋಧನಾ ಪ್ರಪಂಚಕ್ಕೆ ಸವಾಲು ಎಸೆಯುವ ಮೂರ್ತಿ ಅವರ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿ ಅವರ ಅಪಾರ ಪಾಂಡಿತ್ಯ ಆಳ ಪರಿಶ್ರಮಗಳ ಹೆಮ್ಮೆಯ ಕಾಣಿಕೆ. ಬಹುಮಟ್ಟಿಗೆ, ಕನ್ನಡ ಸಾಹಿತ್ಯ ಲೋಕದಲ್ಲಿ ಬಂದ ಸಂಶೋಧನಾ ಕೃತಿಗಳೆಲ್ಲ ಹೆಚ್ಚು ತೂಕ ವಿದ್ವತ್ ಪೂರ್ಣ ಸಂಶೋಧನೆ ಎಂದರೆ, ಮೂರ್ತಿಯವರದೆ, ಡಾ॥ ಮೂರ್ತಿ ಅವರು ಖಂಡಿತವಾಗಿಯೂ ಪ್ರಾಮಾಣಿಕ ವ್ಯಕ್ತಿ, ನಿಷ್ಠುರತೆಗೆ ಹೆಸರಾದವರು, ದಾಕ್ಷಿಣ್ಯಪರರಲ್ಲ, ಶಕ್ತಿ ಕೇಂದ್ರದ ಕೇಂದ್ರವ್ಯಕ್ತಿಯಾಗಿ ಅವರಡಿಯಲ್ಲಿ ಮೂರ್ತಿ ನಡೆಸಿದ ಚಳುವಳಿ ಕನ್ನಡ ಪರ ಕನ್ನಡಿಗರ ಅಸ್ತಿತ್ವಕ್ಕೆ ಭದ್ರ ಬುನಾದಿಯಾಯಿತು. ಕನ್ನಡಿಗರ ಮನವನ್ನು ಗೆದ್ದು ಕನ್ನಡದ ನೆಲದ ಮಾನವನ್ನು ಉಳಿಸಿದರು. ಕನ್ನಡಕ್ಕೆ ನೂರ್ಕಾಲ ಉಳಿಯುವ ಕೃತಿಗಳನ್ನು ನೀಡಿ ಕನ್ನಡಿಗರ ಹೃದಯ

ಸಿಂಹಾಸನವಲ್ಲಿ ಶಾಶ್ವತ ಸ್ಥಾನ ಪಡೆದ ಅವರ ಬಹುಮುಖ ಸಾಧನೆಗಳನ್ನು ಮರುಳಯ್ಯನವರು ಕೊಂಡಾಡಿದ್ದಾರೆ. ಕಾಯಕಯೋಗಿ ಕನ್ನಡದಲ್ಲಿ ಐ.ಎ.ಎಸ್. ಪಾಸು ಮಾಡಿದ ಶ್ರೀ ಕೆ. ಶಿವರಾಮ್ ಅವರ ಕನ್ನಡ ಪ್ರೇಮವನ್ನು ಮರುಳಯ್ಯನವರು ಓದುಗರೊಡನೆ ಹಂಚಿಕೊಂಡ ಅನುಭವ. ಹಾಸ್ಯ ಸಾಹಿತಿ ನಾಡಿಗೇರ ಕೃಷ್ಣರಾಯರನ್ನು ಕುರಿತು ಬರೆದ ಲೇಖನವೇ 'ನಗೆ ರಾಜ್ಯದ ನಾಡಿಗೇರ'. ಇದರಲ್ಲಿ ಲೇಖಕರು ನಾಡಿಗೇರರ ನಗೆ ಸಾಮ್ರಾಜ್ಯದ ಅನೇಕ ಹಾಸ್ಯ ಪ್ರಸಂಗಗಳನ್ನು ಉಲ್ಲೇಖಿಸಿದ್ದಾರೆ. 'ವೀರಣ್ಣ ಅಲ್ಲ ಧೀರಣ್ಣ' ಗುಬ್ಬಿ ವೀರಣ್ಣನವರ ಶತಾಬ್ಧಿ ಸಮಾರಂಭದಲ್ಲಿ ಮರುಳಯ್ಯನವರು ಮಾಡಿದ ಭಾಷಣದ ಸಾರಾಂಶ.

ಹೀಗೆ ಒಟ್ಟು ೨೯ ಮಹನೀಯರ ವ್ಯಕ್ತಿತ್ವ ಮತ್ತು ಅವರ ಸಾಧನೆಗಳು ಓದುಗರಿಗೆ ನೀಡಿದ ಈ ಕೃತಿ ಎಲ್ಲಿಯೂ ಬೇಸರವಾಗದಂತೆ ಓದಿಸಿಕೊಂಡು ಹೋಗುತ್ತದೆ. ಲೇಖಕರು ಮಹನೀಯರ ವ್ಯಕ್ತಿಚಿತ್ರಣವನ್ನು ಕಟ್ಟಿಕೊಡುವಾಗ ನೀಡಿದ ತಲೆಬರಹದ ಚೌಕಟ್ಟುಗಳೇ ಒಂದು ಕಾವ್ಯದಂತಿದೆ. ಈ ವ್ಯಕ್ತಿ ಚಿತ್ರಣಗಳಲ್ಲಿ ಇತಿಹಾಸ ಹಾಸುಹೊಕ್ಕಾಗಿ ಮೂಡಿಬಂದಿದೆ. ಲೇಖಕರ ತಮ್ಮ ಅತ್ಯುತ್ತಮ ಗದ್ಯ ಶೈಲಿ ಓದುಗರ ಮನಸ್ಸನ್ನು ಸೆರೆಹಿಡಿಯುವುದರಲ್ಲಿ ಹದಿನಾರಾಣೆ ಯಶಸ್ಸು ಪಡೆದಿದೆ. ಇಲ್ಲಿನ ಒಂದೊಂದು ವ್ಯಕಿಚಿತ್ರಣವು ಸಣ್ಣ ಕಥೆಗಳಾಗಿ ಓದುಗರ ಮನದಾಳಕ್ಕೆ ಇಳಿಯುತ್ತವೆ. ಒಟ್ಟಿನಲ್ಲಿ 'ಆತ್ಮೀಯವು' ಓದುಗರ ಆತ್ಮವನ್ನು ತಟ್ಟುತ್ತದೆ.

ಡಾ|| ಸಾ.ಶಿ. ಮರುಳಯ್ಯನವರ ಎರಡು ಗದ್ಯ ಗ್ರಂಥಗಳು

ಪ್ರೊ. ಡಿ. ಲಿಂಗಯ್ಯ

ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ವರ್ಣರಂಜಿತ ವಾಗ್ಮಿಗಳೂ ಆದ ಡಾ|| ಸಾಸಲು ಶಿವರುದ್ರಯ್ಯ ಮರುಳಯ್ಯನವರು ತಮ್ಮ ದೀರ್ಘಕಾಲದ ದುಡಿಮೆಯಿಂದ ನಾಡಿನ ಮನೆಮಾತಾಗಿದ್ದಾರೆ. ಉನ್ನತ ಶಿಕ್ಷಣ ಪಡೆದಿರುವ ಶ್ರೀಯುತರು ಕನ್ನಡ ಪ್ರಾಧ್ಯಾಪಕರಾಗಿ, ವಿವಿಧ ಸಾಂಸ್ಕೃತಿಕ ಸಂಸ್ಥೆಗಳ ಪದಾಧಿಕಾರಿಯಾಗಿ ಹೆಸರಾಗಿದ್ದಾರೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆದು, ಪ್ರಕಟಿಸಿ, ಕನ್ನಡ ಸಾಹಿತ್ಯ ಸಮೃದ್ಧವಾಗಲು ಕಾರಣರಾಗಿದ್ದಾರೆ. ಅವರ ಬರವಣಿಗೆಯಲ್ಲಿ ಕಾವ್ಯ, ನಾಟಕ, ವಿಮರ್ಶೆ, ವ್ಯಕ್ತಿ ಚಿತ್ರ, ಸಂಶೋಧನೆ, ಸಂಪಾದನೆ ಮೊದಲಾದ ಸಾಹಿತ್ಯ ಸಂಕುಲವಿದೆ. ಸುಸಂಸ್ಕೃತ ಚಿಂತನೆ, ಸುಲಲಿತ ಶಬ್ದ ಸಂಯೋಜನೆ, ಸುಪುಷ್ಟ ಭಾಷಾಶೈಲಿ, ಸಹೃದಯ ಸಂವಾದ, ಸರಾಗ ಪಡೆನುಡಿ, ಪರಿಕಲ್ಪನೆ ಮೊದಲಾದ ಸಾಹಿತ್ಯ ಪರಿಕರಗಳು ಅವರ ಬರವಣಿಗೆಯಲ್ಲಿ ಹಿತಮಿತವಾಗಿ ಜೋಡಣೆಯಾಗಿ ಆಕರ್ಷಕ ಸಾಹಿತ್ಯಕ ಪರಿಸರವನ್ನು ಸೃಷ್ಟಿ ಮಾಡಿ ಓದುಗರ ಮನಸ್ಸನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ವಾಕ್ ಜಾಲದಲ್ಲಾಗಲೀ ಸಾಹಿತ್ಯ ಸಂಮೋಹಕತೆಯಲ್ಲಾಗಲೀ ಡಾ|| ಮರುಳಯ್ಯನವರು ನಿರರ್ಗಳವಾಗಿ ವ್ಯವಹರಿಸುತ್ತಾರೆ. ಮಾತಿನ ಮೋಡಿಯಲ್ಲಿ ಗುಡ್ಡವನ್ನು ಬೆಟ್ಟಮಾಡಬಲ್ಲರು. ಎಳೆಯನ್ನು ಹಗ್ಗಮಾಡಬಲ್ಲರು. ದುರ್ಬಲ ಸಾಧನದಲ್ಲಿ ಸುದೀರ್ಘವಾಗಿ ನಡೆಯಬಲ್ಲರು. ವಿಷಯ ಅಲ್ಪವಾಗಿದ್ದರೂ ಅದನ್ನೇ ಕಲ್ಪ ಮಾಡಬಲ್ಲರು. ಅದು ಅವರ ಹೆಚ್ಚುಗಾರಿಕೆ. ಅದರಿಂದ ಅವರು ಗೆಲ್ಲುವುದೂ ಉಂಟು, ಸೋಲುವುದೂ ಉಂಟು. ಆದರೆ ಎಲ್ಲೂ ಸಂಸ್ಕೃತಿಯ ಹೆದ್ದಾರಿ ಮರೆತು ಅಡ್ಡ ಹಾದಿಗೆ ತಿರುಗುವುದಿಲ್ಲ.

ಡಾ|| ಮರುಳಯ್ಯನವರ ವಿಪುಲವಾದ ಗದ್ಯ ಬರಹಗಳಲ್ಲಿ ಅವರ ವ್ಯಕ್ತಿಚಿತ್ರ ಹಾಗೂ ಸಾಹಿತ್ಯ ಸಮೀಕ್ಷೆಯ ಗ್ರಂಥಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಇವುಗಳಲ್ಲಿ ಶ್ರೀಯುತರ ಸಾಹಿತ್ಯ ಅಧ್ಯಯನದ ಹರಹು, ಆಳ, ಚಿಂತನ ವಿಧಾನ, ಆಕರ್ಷಕ ಅಭಿವ್ಯಕ್ತಿ, ದಟ್ಟ ಲೋಕಾನುಭವ, ಗುಣೌಚಿತ್ಯ, ನಾಡುನುಡಿ ಸಂಸ್ಕೃತಿಯ ಕಳಕಳಿ, ಸಾರ್ಥಕ ಬದುಕಿನ ಸದಾಶಯ, ಸಮಕಾಲೀನ ಹಿರಿಯ ಕಿರಿಯರ ಒಡನಾಟ, ಪರಂಪರೆಯ ಸ್ವೀಕಾರ, ಪರಸ್ಪರ ಸಂತೋಷಿಸುವ ಸಂದರ್ಭ ಸೃಷ್ಟಿ, ಶುಭಭವಿಷ್ಯದ ದೃಷ್ಟಿ, ಕಿರಿಯದರಲ್ಲೂ ಹಿರಿಯದನ್ನು ಗುರುತಿಸುವ ವಿಶಾಲ ವಿವೇಚನೆ ಮೊದಲಾದ ಸದ್ವಿವೇಕ ಅಂಶಗಳು ಎದ್ದು ಕಾಣುತ್ತವೆ. ಡಾ|| ಮರುಳಯ್ಯನವರ ಎರಡು ಗದ್ಯ ಗ್ರಂಥಗಳ ಸಮೀಕ್ಷೆ ಈ ಲೇಖನದ ಉದ್ದೇಶ.

ಆತ್ಮೀಯ

ಡಾ|| ಸಾ.ಶಿ. ಮರುಳಯ್ಯನವರ 'ಆತ್ಮೀಯ' ಎಂಬ ಗ್ರಂಥದಲ್ಲಿ ಇಪ್ಪತ್ತೊಂಬತ್ತು ವ್ಯಕ್ತಿಚಿತ್ರಗಳಿವೆ. ಸ್ಥೂಲಾರ್ಥದಲ್ಲಿ ವ್ಯಕ್ತಿಚಿತ್ರಗಳೆಂದರೂ ಬಹಳಷ್ಟು ಲೇಖನಗಳಲ್ಲಿ ವಿಮರ್ಶಾಂಶಗಳು ಮೇಳೈಸಿವೆ. ಆ ವಿಮರ್ಶೆಗಳೂ ಕಾವ್ಯ ಮೀಮಾಂಸೆಯ ಗುಂಪಿಗೆ ಸೇರುವಂಥವು. ತಮ್ಮ ಬರಹಗಳ ಬಗೆಗೆ ಲೇಖಕರು ಹೀಗೆ ಮುನ್ನುಡಿದಿದ್ದಾರೆ: "ನೋಡುವುದಕ್ಕೂ ಕಾಣುವುದಕ್ಕೂ ಅರ್ಥದಲ್ಲಿ ವ್ಯತ್ಯಾಸ ಇದೆ. ನೋಡುವುದು ಎಂದರೆ ಸುಮ್ಮನೆ ಬಹಿರಂಗದ ಕಣ್ ತೆರೆದು ನೋಡುವುದು. ಕಾಣುವುದು ಹಾಗಲ್ಲ. ಅದು ಅಂತರಂಗದ ದರ್ಶನ. ಒಳಗಿನೊಳಗನ್ನು ಗುರುತಿಸುವುದು. ನಾನಿಲ್ಲಿ ವ್ಯಕ್ತಿಗಳನ್ನು ಕಂಡಿದ್ದೇನೆ, ನೋಡಿಲ್ಲ. ಎಲ್ಲರೂ ಒಂದರ್ಥದಲ್ಲಿ ನನಗೆ ಗುರುಗಳು, ಮಾರ್ಗದರ್ಶಕರು" ಲೇಖಕರು, ನೋಡು ಮತ್ತು ಕಾಣು ಶಬ್ದಗಳಿಗೆ ವಿಭಿನ್ನಾರ್ಥ ತುಂಬಿ, ಆ ಪರಿಕಲ್ಪನೆಯಲ್ಲೇ ವಿಶಿಷ್ಟ ಧ್ವನಿ ಹೊರಡಿಸಲು ಪ್ರಯತ್ನಿಸಿದ್ದಾರೆ. ಇಂಥ ಶಬ್ದ ಚಮತ್ಕಾರ, ಶಬ್ದ ಗಾರುಡಿಗತನ ಲೇಖಕರಿಗೆ ಬಹಳ ಇಷ್ಟ. ಇದಕ್ಕೆ ಬಹುಶಃ ವರಕವಿ ದ.ರಾ. ಬೇಂದ್ರೆಯವರ ಪ್ರಭಾವವಿರಬಹುದು. ಡಾ|| ಮರುಳಯ್ಯನವರ ವ್ಯಕ್ತಿ ಚಿತ್ರಗಳು ಡಾ|| ಡಿ.ವಿ. ಗುಂಡಪ್ಪನವರ ವ್ಯಕ್ತಿಚಿತ್ರಗಳನ್ನು ಹೆಚ್ಚಾಗಿ ಹೋಲುತ್ತದೆ.

ಪ್ರಸ್ತುತ 'ಆತ್ಮೀಯ' ಗ್ರಂಥದ ವ್ಯಕ್ತಿ ಚಿತ್ರಗಳಲ್ಲಿ ಸಾಹಿತಿಗಳು, ಸಾಹಿತ್ಯೇತರರು ಸೇರಿದ್ದಾರೆ. ಎಲ್ಲಾ ಲೇಖನಗಳಲ್ಲೂ ನೇರವಾದ ಆತ್ಮೀಯವಾದ ಲೇಖಕರ ಪ್ರವೇಶವಿದೆ. ಈ ಲೇಖನಗಳ ಸಂದರ್ಭದಲ್ಲಿ ಲೇಖಕರೂ ಪಾತ್ರಧಾರಿಗಳಾಗಿರುವುದರಿಂದ, ಇವುಗಳಲ್ಲಿ ಮೃದು ಮಧುರವಾದ ಆತ್ಮೀಯ ಸ್ಪರ್ಶ ಪ್ರಧಾನವಾಗಿದೆ. ಎಲ್ಲಾ ಲೇಖನಗಳಲ್ಲೂ ಗುಣಗಾನ ಪ್ರವೃತ್ತಿ ಹೆಚ್ಚು. 'ಯಾರಲ್ಲೇ ಆಗಲಿ ಗುಣವನ್ನು ಗ್ರಹಿಸಿ ಮೆಚ್ಚುವುದು ನನಗೆ ಗೊತ್ತು' ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ಇದು ಡಾ|| ಮರುಳಯ್ಯನವರ ರೀತಿ. ಸಾಮಾನ್ಯವಾಗಿ ಲೇಖನಗಳಲ್ಲಿ ನಿರ್ದಿಷ್ಟ ವ್ಯಕ್ತಿಯ ಜೀವನ ಚರಿತ್ರೆಗೆ ಸಂಬಂಧಿಸಿದ ಕೆಲವು ಮಾಹಿತಿಗಳಿರುತ್ತವೆ. ಸಾಹಿತಿಗಳಾದರೆ ಅವರ ಸಾಹಿತ್ಯಕೃಷಿಯ ವಿವರಣಾತ್ಮಕ ಮೀಮಾಂಸೆ ಇರುತ್ತದೆ. ಸಾಹಿತ್ಯೇತರರಾದರೆ ಅವರ ಬದುಕಿನ ಸಾಧನೆಯ ಪರಿಚಯವಿರುತ್ತದೆ. ಡಾ|| ಮರುಳಯ್ಯನವರಿಗೆ ಮೀಸಲಾದ ವಿಶಿಷ್ಟ ಶೈಲಿ, ನಾಟಕೀಯ ಸಂಭಾಷಣೆ, ಕಥನಾತ್ಮಕ ಪ್ರವೇಶಗಳಿಂದ ಲೇಖನಗಳು ಸುಲಲಿತವಾಗಿ ಓದಿಸಿಕೊಳ್ಳುತ್ತವೆ.

1991ರಲ್ಲಿ ಪ್ರಕಟವಾದ 'ಆತ್ಮೀಯ' ಶೀರ್ಷಿಕೆಯ ಪುಸ್ತಕದಲ್ಲಿ ಇದೇ ಹೆಸರಿನ ಒಂದು ಲೇಖನವೂ ಇದೆ. ಎಲ್ಲ ಲೇಖನಗಳಲ್ಲೂ ಲೇಖಕರ ಆತ್ಮೀಯ ನೋಟವಿದೆ. ಹಾಗಾಗಿ ಈ ಗ್ರಂಥ ಶೀರ್ಷಿಕೆ ಅನ್ವರ್ಥವಾಗಿದೆ ಎಂದೇ ಹೇಳಬಹುದು. ಡಾ|| ಮರುಳಯ್ಯನವರು, ಲೇಖನಗಳಲ್ಲಿ ವ್ಯಕ್ತಿಯ ಹೆಸರನ್ನು ಶೀರ್ಷಿಕೆಗೆ ಬಳಸದೆ. ಆಯಾ ವ್ಯಕ್ತಿಗಳಿಗೆ ಹೊಂದಿಕೊಳ್ಳುವ, ಆಯಾ ಸಂದರ್ಭಗಳಿಗೆ ಸ್ಪಂದಿಸುವ ಆಕರ್ಷಕ ಶೀಷಿಕೆಗಳನ್ನು ಉಪಯೋಗಿಸಿದ್ದಾರೆ. ನಿರ್ದಿಷ್ಟ ಸಭೆ ಸಮಾರಂಭಗಳಿಗೆ, ಅಭಿನಂದನ ಗ್ರಂಥಗಳಿಗೆ, ಸಂಸ್ಮರಣ ಸಂಚಿಕೆಗಳಿಗೆ ಬರೆದ ಲೇಖನಗಳಾದುದರಿಂದ ಪ್ರಶಂಸಾಗುಣ ಮಿಗಿಲಾಗಿದೆ.

ಡಾ|| ಮರುಳಯ್ಯನವರು ಉತ್ತಮ ಸಾಹಿತಿಗಳಾಗಿರುವಂತೆ ಉತ್ತಮ ವಾಗ್ಮಿಗಳೂ ಆಗಿದ್ದಾರೆ. ಎಲ್ಲಾ ಲೇಖನಗಳಲ್ಲೂ ಅವರ ವಾಗ್ವಿಲಾಸ ಮೆರೆದಿದೆ. ಡಾ|| ಮರುಳಯ್ಯನವರು ಪ್ರಧಾನವಾಗಿ ಕವಿ. ಅವರ ಗದ್ಯ ಬರಹಗಳಲ್ಲೂ ಕಾವ್ಯಮಯತೆ ಧಾರಾಳವಾಗಿ ಕಾಣುತ್ತದೆ. ಪ್ರಾಸಬದ್ಧವಾದ, ಸೂತ್ರಪ್ರಾಯವಾದ, ಸೂಕ್ತಿಮಯವಾದ ಶಬ್ದ ಸಂಚಲನದ ಸಾಲುಗಳು ಹೇರಳವಾಗಿ ದೊರೆಯುತ್ತದೆ. ಅವರ ಉಪನ್ಯಾಸಗಳಲ್ಲಿ ಕಂಡುಬರುವಂತೆಯೇ ಅವರ ಗದ್ಯ ಬರಹಗಳಲ್ಲೂ ಶಬ್ದಗಾರುಡಿಗತನ ಮಿಂಚುತ್ತದೆ. ಡಾ|| ಮರುಳಯ್ಯನವರ ಗದ್ಯ ಶೈಲಿಯನ್ನು ಪುಳಕಗೊಳಿಸುವ ಪುಷ್ಪಶೈಲಿಯೆಂದು ಕರೆಯಬಹುದು.

'ಆತ್ಮೀಯ' ಹೊತ್ತಿಗೆಯಲ್ಲಿ ಕುವೆಂಪು, ಬೇಂದ್ರೆ, ಡಿ.ಎಲ್. ನರಸಿಂಹಾಚಾರ್, ಸಂ.ಶಿ. ಭೂಸನೂರಮಠ, ಡಿ.ಎಸ್. ಕರ್ಕಿ, ಸಿದ್ಧಯ್ಯ ಪುರಾಣಿಕ, ಆರ್.ಸಿ. ಹಿರೇಮಠ, ಜಿ. ನಾರಾಯಣ, ಹಂಪ ನಾಗರಾಜಯ್ಯ, ದೇ. ಜವರೇಗೌಡ, ಬಿ.ಡಿ. ಜತ್ತಿ, ಎಚ್.ಎಲ್. ನಾಗೇಗೌಡ, ಎಚ್. ತಿಪ್ಪೇರುದ್ರಸ್ವಾಮಿ. ಎಂ.ಜೆ. ಕೋದಂಡರಾಮ ಶೆಟ್ಟಿ, ಗೊ.ರು. ಚನ್ನಬಸಪ್ಪ, ಬಿ.ಎನ್. ಚಂದ್ರಕಲಾ, ಎಸ್. ಭೀಮಪ್ಪ ಮಾಸ್ತರ್, ಟಿ.ಎನ್. ಮಹದೇವಯ್ಯ, ಕೊರಟಿ ಶ್ರೀನಿವಾಸರಾವ್, ವರನಟ ರಾಜಕುಮಾರ್, ವಿಷ್ಣುವರ್ಧನ್, ಎಂ. ಚಿದಾನಂದ ಮೂರ್ತಿ, ನಾಡಿಗೇರ ಕೃಷ್ಣರಾವ್, ಗುಬ್ಬಿವೀರಣ್ಣ ಮುಂತಾದವರ ವ್ಯಕ್ತಿ ಪರಿಚಯಗಳಿವೆ. ಇವುಗಳಲ್ಲಿ ಕೆಲವು ವ್ಯಕ್ತಿ ಚಿತ್ರದ ಚೌಕಟ್ಟಿಗೆ ಒಳಪಟ್ಟು ಚಿಕ್ಕದಾಗಿ ಚೊಕ್ಕದಾಗಿ ಅರಳಿವೆ. (ಉದಾ. ಯಾರಿವನು? ಸಂಗೀತರತ್ನ, ನೆನೆಯ ಬಲ್ಲೆ ಮರೆಯಲಾರೆ), ಕೆಲವು ಎಲ್ಲೆಮೀರಿ ವಿವರವಾಗಿ ಬೆಳೆದು ಭಾರವಾಗಿದೆ. (ಉದಾ. ನಮ್ಮ ಮೇಷ್ಟು, ಭವ್ಯಮಾನವ ಶಿಲ್ಪಿ, ಛಂದೋವಿಕಾಸದ ಕಾವ್ಯ ವಿಲಾಸಿ.) ಒಂದೆರಡು ವಿಮರ್ಶಾ ಲೇಖನದಂತೆ ಭಾಸವಾಗುತ್ತದೆ. (ಉದಾ. ಕಾವ್ಯಾನಂದ, ದೊಡ್ಡಮನೆ ದೊಡ್ಡಗೌಡರು) ಜೊತೆಗೆ ಸಂದರ್ಶನ ಲೇಖನಗಳೂ ಇವೆ. (ಉದಾ. ಆತ್ಮಶ್ರೀಗೆ ಪದ್ಮಶ್ರೀ, ಪಟ್ಟುಬಿಡದ ಪಟ್ಟೆ ವಿಭೂತಿ, ಚಿತ್ರಲೋಕದ ಚೈತ್ರ, ಮುತ್ತೆತ್ತಿದ ಮುತ್ತುರಾಜ, ಇದು ಜಾತಿ ಕುದುರೆ, ಅಭಿನೇತ್ರಿ). ಈ ಬರಹಗಳಲ್ಲಿ ಸಾಹಿತಿಗಳು, ಕಲಾವಿದರು, ಸಮಾಜ ಸೇವಕರು, ರಾಜಕಾರಿಣಿಗಳು, ಸರಕಾರಿ ಅಧಿಕಾರಿಗಳು ಸೇರಿದ್ದಾರೆ. ಅಸಾಮಾನ್ಯ ವ್ಯಕ್ತಿಗಳಂತೆ ಸಾಮಾನ್ಯ ವ್ಯಕ್ತಿಗಳ ಬಗೆಗೂ ಏಕನಿಷ್ಠೆಯಿಂದ, ಸಮಾನ ಪ್ರೀತಿಯಿಂದ ಬರೆಯುವುದು, ಸಾಹಿತ್ಯ ಸಾಂಸ್ಕೃತಿಕ ವಿಷಯಗಳಿಗೆ ಒತ್ತು ಕೊಡುವುದು, ಮಾನವೀಯ ಗುಣವನ್ನು ಧಾರಾಳವಾಗಿ ವೈಭವೀಕರಿಸುವುದು ಡಾ|| ಮರುಳಯ್ಯನವರ ಬರವಣಿಗೆಯ ವೈಶಿಷ್ಟ್ಯವಾಗಿದೆ.

ಆತ್ಮೀಯದ ಕೆಲವು ತುಣುಕುಗಳನ್ನು ಪರಿಶೀಲಿಸಿದರೆ, ಲೇಖಕರ ಧಾಟಿಯ ಗುಟ್ಟು ವೇದ್ಯವಾಗುತ್ತದೆ. ತಮ್ಮ ಅಲಂಕಾರಿಕ ಭಾಷೆಯಲ್ಲಿ ಡಾ|| ಮರುಳುಯ್ಯನವರು ಬೇಂದ್ರೆ ಮತ್ತು ಕುವೆಂಪು ಅವರನ್ನು ಹೀಗೆ ವರ್ಣಿಸುತ್ತಾರೆ. "ವಿಶ್ವಮಾತೆ, ಭೂಮಿತಾಯಿ, ಭರತಮಾತೆ, ಕನ್ನಡದ ತಾಯಿ ಮತ್ತು ಹಡೆದವ್ವ ಅಂಬಿಕೆ ಈ ಐವರು ಐದೆಯರ ಸುಪುತ್ರನಾಗಿ ಬಂದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಎಂಬ ಅಭಿಧಾನದ ಭೂತಿ

ಅಂಬಿಕಾತನಯ ದತ್ತನೆಂದು ತಾನಾದ ಶ್ರೀಮದ್ವಿಭೂತಿ" (ಪುಟ ೩) "ವಿಭೂತಿ ಇದ್ದೆಡೆಗೆಲ್ಲಾ ಮಣಿದು, ಬೆಳಕು ಬಂದೆಡೆಗೆಲ್ಲಾ ತನ್ನ ಎದೆಯ ಕವಾಟ ತೆರೆದು ತಾನೊಂದು ತೇಜಪುಂಜವಾಗಿ ಬೆಳಗಿದ ಮಹಾಚೇತನ ! ಅದು ಕುಪ್ಪಳಿ ವೆಂಕಟಾರ್ಯಂಗೆ ಮೇಣ್ ಸೀತಮ್ಮನೆಂಬಭಿದಾನದ ಮಾತೃದೇವತೆಗೆ ಮಗನಾಗಿ ಹುಟ್ಟಿದ ಶ್ರೀ ಶಿವಾನಂದ ಕರಕಮಲ ಸಂಜಾತ ಶಿಶು ಭವತಾರಿಣಿಯ ಭವ್ಯ ಸ್ವರೂಪಿಯಾದ ಹೇಮಾ ಎಂಬ ದೇವತೆಯ ಪ್ರೇಮಾರಾಧಕ ಶ್ರೀ ಕುವೆಂಪು!."(ಪುಟ. ೩-೪)

ಕರ್ನಾಟಕದ ಪ್ರಾತಃಸ್ಮರಣೀಯ ಪಂಡಿತರಾದ ಡಿ. ಎಲ್. ನರಸಿಂಹಾಚಾರ್ಯರ ವ್ಯಕ್ತಿತ್ವವನ್ನು ಹೀಗೆ ಕಂಡರಿಸಿದೆ. "ಇವರು ಪಾಂಡಿತ್ಯದ ಮೇರು ವಿಮರ್ಶೆಯ ಹೆದ್ದೊರೆ. ನಿರುಕ್ತ ನಿಪುಣರು, ಶಾಸ್ತ್ರ ಸಂಹಿತೆಯಲ್ಲಿ ಸೀಮಾ ಪುರುಷರು(ಪುಟ - ೮) "ನಮ್ಮ ಮೇಷ್ಟ್ರರದು ಗರಿವಡೆದ ಗಾಂಭೀರ್ಯ" ಸಿರಿತುಂಬಿದ ಮುಖಭಾವ, ಹಿರಿತನದ ವರ್ಚಸ್ಸು, ಬ್ರಹ್ಮರ್ಷಿಯ ತೇಜಸ್ಸು, ಒಂದು ಮಾತಿನಲ್ಲಿ ಹೇಳುವುದಾದರೆ ಹರಿದು ಬರುತ್ತಿರುವ ಅಲಂಕೃತವಾದ ದೇವರ ತೇರು ಅವರು. ಅವರ ಸಂಶೋಧನೆ ಒಂದು ಕಾವ್ಯ. ಅವರ ವಿಮರ್ಶೆ ಒಂದು ಭಾವಗೀತೆ. ಅವರ ಮಾತಿನಲ್ಲಿ ತೂಕವಿದೆ. ಬನಿ ಇದೆ. ಬ್ಯಾಲೆನ್ಸ್ ಇದೆ. ಪಾಂಡಿತ್ಯಕ್ಕೆ ಒಬ್ಬರೇ ಡಿ. ಎಲ್. ಎನ್. ಎನ್ನುವಷ್ಟರ ಮಟ್ಟಿಗೆ ಪ್ರಭಾವ ಬೀರಿರುವ ವ್ಯಕ್ತಿ ಅವರು". (ಪುಟ - ೧೬)

ಕನ್ನಡದ ವಿಚಾರವಂತ ವಿಮರ್ಶಕ, ವಿಶಿಷ್ಟ ಕವಿಯೂ ಆದ ಸಂ.ಶಿ.ಭೂಸನೂರಮಠರ ಸಾಧನೆಯ ಬಗೆಗೆ ಡಾ|| ಮರುಳಯ್ಯನವರ ಪ್ರತಿಕ್ರಿಯೆ ಹೀಗಿದೆ. "ಅವರು ಭಾವುಕ ಕವಿಯಾಗಿದ್ದಾರೆ. ಚಿಕಿತ್ಸಾ ಚತುರ ವಿಮರ್ಶಕರಿದ್ದಾರೆ. ಪ್ರತಿಭೆ ವ್ಯುತ್ಪತ್ತಿಗಳೆರಡನ್ನೂ ಸಮಪ್ರಮಾಣದಲ್ಲಿ ದುಡಿಸಿಕೊಂಡು, ಅವುಗಳ ಮೂಲಕ ಸಂಶೋಧನೆಗೆ ಜೀವ ತುಂಬುವ ದಕ್ಷತೆಯೂ ಅವರಲ್ಲಿದೆ. ಅವರು ತುಂಬ ಅನುಭಾವಿಗಳು. ಅನುಭಾವವೇ ಅವರ ಮಹಾಕಾವ್ಯದ ಜೀವರಸ. (ಪುಟ-೪೯) "ಸಂ.ಶಿ. ಭೂಸನೂರಮಠರ 'ಭವ್ಯಮಾನವ' ಅನುಭಾವದ ಮೇರು. ಅಕ್ಕನ ಆಧ್ಯಾತ್ಮ ಜೀವನಕ್ಕೆ ಆಧುನಿಕತೆಯನ್ನು ಜೋಡಿಸಿ ಒಂದು ಬೃಹತ್ ಕಾವ್ಯವನ್ನಾಗಿಸಿದ್ದಾರೆ."(ಪುಟ - ೫೩) "ಈ ಕಾವ್ಯದ ಭವ್ಯ ಮಾನವ ಕಲ್ಪನೆಯೇ ಅದ್ಭುತವಾದುದು. ಕವಿಕೊಟ್ಟ ಭವ್ಯ ಮಾನವನ ಅರ್ಥ ಭವಿಷ್ಯ ಮಾನವ ಎಂದು." (ಪುಟ - ೫೫)

ವಿದ್ವಾಂಸ ಕವಿ ಡಿ. ಎಸ್. ಕರ್ಕಿಯವರ ಬಗೆಗೆ "ಕರ್ಕಿಯವರ ಕಾವ್ಯ ಶೈಲಿ ತುಂಬಿದ ತೊರೆ ಇದ್ದ ಹಾಗೆ. ಎಲ್ಲೂ ಏರಿಳಿತವಿಲ್ಲದ ಅಂದರೆ ಸಮತಟ್ಟಿನಲ್ಲಿ ಸಾಗುವ ಪ್ರಶಾಂತ ಪ್ರವಾಹದಂತೆ." ಸಿದ್ಧಯ್ಯ ಪುರಾಣಿಕರ ಬಗೆಗೆ(ಪುಟ ೭೫) "ಇವರು ಆಡಿ ಸೋಲಲಿಲ್ಲ , ಮಾಡಿ ಗೆದ್ದರು. ನಡೆನುಡಿಯಲ್ಲಿ ಮಡಿಯಾಗಿ ಬಾಳಿದರು. ಶುದ್ಧ ಹಸ್ತ, ತೆರೆದ ಹೃದಯ, ಪ್ರಾಂಜಲ ಮನಸ್ಸು - ಒಟ್ಟಿನಲ್ಲಿ ಶುಚಿ ಜೀವನ ನಡೆಸಿದ ಓರ್ವ ಕರ್ಮಯೋಗಿ, ಕಲಾತಪಸ್ವಿ".(ಪುಟ ೮೮) "ವಚನೋದ್ಯಾನ ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಿದ್ದ ಗಟ್ಟಿ ಕಾಳು, ಕನ್ನಡಕ್ಕೆ ಕೀರ್ತಿತಂದ ಕಾವ್ಯಾನಂದರ ಆಚಾರ್ಯಕೃತಿ"

(ಪುಟ ೯೦) ಶಿಕ್ಷಣವೇತ್ತ, ಭಾಷಾಶಾಸ್ತ್ರಜ್ಞ ಆರ್.ಸಿ. ಹಿರೇಮಠರ ಗುಣಗಾನ ಹೀಗೆ ನಡೆದಿದೆ - "ಕನ್ನಡ ಭಾಷಾ ವಿಜ್ಞಾನದ ಹರಿಕಾರ, ಪ್ರಾಚ್ಯ ಸಂಶೋಧನೆಯ ನೇತಾರ, ವಚನ ಸಂಪಾದನೆಯ ಪ್ರಸ್ಥಾನಕಾರ ಎಂದೇ ಹೆಸರಾಗಿದ್ದಾರೆ. ವಚನ ಸಾಹಿತ್ಯದ ವೈಜ್ಞಾನಿಕ ಅಧ್ಯಯನದಲ್ಲಿ ಡಾ॥ ಆರ್.ಸಿ. ಯವರದು ಗಣನೀಯ ಪಾತ್ರ".(ಪುಟ ೯೮)

ರಾಜಕೀಯ ಮುತ್ಸದ್ದಿ ಬಿ.ಡಿ. ಜತ್ತಿಯವರನ್ನು ಡಾ॥ ಮರುಳಯ್ಯನವರು ಕಂಡಿರುವುದು ಹೀಗೆ: "ನಿರಾಡಂಬರದ ಸರಳ ಜೀವಿ ಶ್ರೀ ಜತ್ತಿಯವರ ಬಗೆಗೆ ಎಷ್ಟು ಹೇಳಿದರೂ ಕಡಿಮೆಯೆ. ಅವರ ವಿನಯ, ವಿವೇಚನೆ, ವಿಚಾರಪರತೆ, ದೈವಭಕ್ತಿ, ರಾಷ್ಟ್ರಪ್ರೇಮ, ಸ್ವಜನ ವಾತ್ಸಲ್ಯ, ನುಡಿಯ ಅಭಿಮಾನ - ಇವು ಅಮೇಯ, ಅನ್ಯಾದೃಶ".(ಪುಟ ೧೩೮) ಕನ್ನಡದ ವಿಶಿಷ್ಟ ಸಾಹಿತಿ ಎಚ್.ಎಲ್. ನಾಗೇಗೌಡರ ಪರಿಚಯ ಈ ರೀತಿಯಿದೆ: "ನಾಗೇಗೌಡರು ಸವ್ಯಸಾಚಿಗಳು. ದಕ್ಷ ಆಡಳಿತಗಾರಗಾಗಿ ಸರಕಾರಕ್ಕೆ ತಮ್ಮಿಂದ ಸಲ್ಲಬೇಕಾದ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದರು. ಪ್ರತಿಭಾವಂತ ಲೇಖಕರಾಗಿ ಕನ್ನಡ ಸಾಹಿತ್ಯಕ್ಕೆ ಅಮೌಲ್ಯ ಸೇವೆ ಸಲ್ಲಿಸಿದರು. ಅವರು ತಮ್ಮ ಕಾರ್ಯಲಯದ ಒಣಪೈರುಗಳ ಗದ್ದೆಮಡಿಗಳಲ್ಲಿ ಹಸುರೊಸರುವ ರಸಕೃತಿಗಳನ್ನು ಬೆಳೆದರು."(ಪುಟ ೧೩೯) ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜನಪ್ರಿಯರಾಗಿರುವ ಗೊ.ರು. ಚನ್ನಬಸಪ್ಪನವರು ಹೀಗೆ ವರ್ಣಿತವಾಗಿದ್ದಾರೆ:" ಈತನ ಮೈಯ ಮೇಲ್ಭಾಗದಲ್ಲಿ ಹಾಲು ಬಿಳಿಯ ಅಂಗಿ, ಕೆಳಗೆ ಕೊಕ್ಕರೆ ಪುಕ್ಕದ ಲುಂಗಿ, ಮೈ ಕಪ್ಪು, ಮನ ಬಿಳುಪು, ಕಾಲು ನೀಳ, ಕೈ ಕಾಲು ಬೋಳ.... ಮೂಗಿನಿಂದ ಮುಡಿಯವರೆಗಿನ ಬೈತಲೆಯ ಸಮಭಾಜಕ ವೃತ್ತ. ದೇಹ ತುಸು ಬಾಗಿ ಬಿಗಿದ ಬಿಲ್ಲು, ತಲೆ ತುಂಬ ಮಕಮಲ್ಲು.... ರಂಗದ ಮೇಲೆ ನಿಂತಾಗ ಎಷ್ಟು ಲಕ್ಷ ಜನರಿದ್ದರೂ ಅವರನ್ನು ಎದುರಿಸಿ ಸವಾಲು ಹಾಕಬಲ್ಲ. ಅಂತಹ ಎದೆಗಾರಿಕೆ ಈ ಬಡಕಲು ಶರೀರಿಯದು." (ಪುಟ ೧೫೫)

ಅಧ್ಯಾಪಕ, ಲಾವಣಿಗಾಯಕ, ಮಲೆನಾಡು ಪ್ರೇಮಿ ಭೀಮಪ್ಪ ಮಾಸ್ತರರು ಹೀಗಿದ್ದರಂತೆ "ಭೀಮಪ್ಪನವರು ಅಪ್ಪಟ ಗಾಂಧಿವಾದಿಗಳು, ಖಾದಿಯನ್ನು ಹೊದೆದು, ಖಾದಿಯನ್ನೆ ಹಾಸಿ ಖಾದಿಯನ್ನೇ ಉಟ್ಟು, ಉಂಡವರು... ಶುದ್ಧ, ಸಾತ್ವಿಕ, ಸರಳ, ಸುಂದರ, ರಸಿಕ ಹಾಗೂ ತುಂಬು ಜೀವನ ನಮ್ಮ ಭೀಮಪ್ಪನವರದು. ಆಕೃತಿ ಹೇಗೆ ದೊಡ್ಡದೋ ಅವರ ಅಂತಃಕರಣವೂ ಅಷ್ಟೇ ದೊಡ್ಡದು." (ಪುಟ ೧೯೭) ಸರಕಾರದ ಅಧಿಕಾರಿಯೋಬ್ಬರ ಸೇವಾಸೌಶೀಲ್ಯವನ್ನು ಲೇಖಕರು ಹೀಗೆ ಮೆಚ್ಚಿದ್ದಾರೆ." ಸಿ.ಎ. ಜಮಖಂಡಿಮಠ ಎಂಬುದು ಸಾರ್ವಜನಿಕ ಸೇವೆಗಿರುವ ಬೇರೊಂದು ಹೆಸರು. ಸೇವೆಯೇ ಅವರು, ಅವರೇ ಸೇವೆ. ಅವರಿಗೆ ಸೇವೆಯೇ ಪೂಜೆ, ಸಜ್ಜನಿಕೆಯೇ ಮಂತ್ರ, ಜಪ, ತಪ ಎಲ್ಲ. ಆದರೆ ಎಲೆ ಮರೆಯ ಹೂವು!" (ಪುಟ ೨೨೪)

ಡಾ॥ ಮರುಳಯ್ಯನವರ 'ಆತ್ಮೀಯ' ದಲ್ಲಿ ಮನನೀಯವಾದ, ಸಾರವತ್ತಾದ ಸಾಲುಗಳು ಸಿಗುತ್ತವೆ. ಕೆಲವು ಉದಾಹರಣೆಗಳನ್ನು ಗಮನಿಸಬಹುದು. "ಉನ್ನತ ವಿಮರ್ಶೆಯೇ ಗ್ರಂಥ ಸಂಪಾದನೆಯ ಅಂತಿಮ ಘಟ್ಟ" (ಪುಟ ४೭) "ಶೂನ್ಯ ಸಂಪಾದನೆಯದು ಅಧ್ಯಾತ್ಮ ಸಾಹಿತ್ಯ (ಭೂಸನೂರ ಮಠ) ಪರಾಮರ್ಶೆಯದು ದರ್ಶನ

ವಿಮರ್ಶೆ" (ಪುಟ ೫೦) "ಮಹಾಕಾವ್ಯವೆನ್ನುವುದು ಕವಿಯ ಕಥನರೂಪೀ ಕಲಾಕೃತಿ" (ಪುಟ ೫೧) "ಭಾವಗೀತೆ ಅನುಭವ ಜನ್ಯ, ಭಕ್ತಿಗೀತೆ ಅನುಭಾವಜನ್ಯ" (ಪುಟ ೭೩). "ಜೀವನ ಎಂಬುದು ಅನೇಕ ಆಕಸ್ಮಿಕಗಳ ಆಗರ" (ಪುಟ ೧೦೭) "ಮೀಮಾಂಸೆ ಅಪ್ಪಟ ಹಾಗು ಪೂರಾ ಭಾರತೀಯ ಸಿದ್ಧವಸ್ತು, ಭಾರತೀಯ ಕಲಾಕ್ಷೇತ್ರದಲ್ಲಿ ತಯಾರಾದದ್ದು, ವಿಮರ್ಶೆ ಪಾಶ್ಚಾತ್ಯ ರಾಷ್ಟ್ರದಿಂದ ಆಮದಾದದ್ದು" (ಪುಟ ೧೧೭) ಇಂಗ್ಲೀಷಿನ "ಮೌಢ್ಯದ ಮಹಾವೃಕ್ಷಕ್ಕೆ ಮೊದಲು ಕೊಡಲಿಪೆಟ್ಟು ಹಾಕಿದವರು ಆಚಾರ್ಯ ಬಿ.ಎಂ.ಶ್ರೀ. ಅದರ ಕಟ್ಟಿಗೆಗಳನ್ನು ಕುಂಡದಲ್ಲಿ ಹಾಕಿ ಹೋಮಮಾಡಿದ ಅಧ್ವರ್ಯ ಆಚಾರ್ಯ ದೇಜಗೌ" (ಪುಟ ೧೨೪).

'ಆತ್ಮೀಯ' ಗ್ರಂಥದ ಲೇಖನಗಳು ಆಯಾ ವ್ಯಕ್ತಿಯ ಬದುಕು ಸಾಧನೆಯನ್ನು ತಲಸ್ಪರ್ಶಿಯಾಗಿ ತಿಳಿದುಕೊಳ್ಳುವವರಿಗೆ, ಜೀವನ ಚರಿತ್ರಕಾರರಿಗೆ, ಸಾಹಿತ್ಯ ಅಭ್ಯಾಸಿಗಳಿಗೆ, ಸಾಹಿತ್ಯ ಸಂಬಂಧದ ಪೂರಕ ಸಾಮಗ್ರಿ ಬಯಸುವವರಿಗೆ, ಐತಿಹಾಸಿಕ ಅಂಶಗಳ ಆಸಕ್ತರಿಗೆ ಕುತೂಹಲ ಹುಟ್ಟಿಸುತ್ತದೆ. ಇವು ನಿರ್ದಿಷ್ಟ ಸಮಯ ಸಂದರ್ಭದ ಸಕಾಲಿಕ ಸೃಷ್ಟಿಯಾದರೂ ಸಾರ್ವಜನಿಕ ಚಿಂತನೆಯ ಬೆಳಕಿಂಡಿಯಾಗಿದೆ.

ಅವಸ್ಥಾ

ಡಾ॥ ಸಾ.ಶಿ. ಮರುಳಯ್ಯನವರು ೧೯೯೧ರಲ್ಲಿ ಪ್ರಕಟಿಸಿರುವ 'ಅವಸ್ಥಾ' ಗ್ರಂಥದಲ್ಲಿ ಇಪ್ಪತ್ತೈದು ಸಾಹಿತ್ಯಾತ್ಮಕ ಪ್ರಬಂಧಗಳಿವೆ. ಇವುಗಳಲ್ಲಿ ಪ್ರಾಚೀನ ಹಾಗೂ ಅರ್ವಾಚೀನ ಕವಿ ಕೃತಿಗಳ ಸಮೀಕ್ಷೆ ಇದೆ. ಪ್ರಬಂಧಗಳೆಂದು ಕರೆದಿದ್ದರೂ ವಿಮರ್ಶೆಯ ಆಸುಪಾಸಿನಲ್ಲಿ ವಿಶ್ಲೇಷಣೆ ನಡೆದಿದೆ. ಒಂದೆಡೆ ಸೇರ್ಪಡೆಯಾಗಿದೆ. ಒಂದೆರಡನ್ನು ಬಿಟ್ಟರೆ ಉಳಿದಂತೆ ಇವುಗಳ ರಚನೆಯ ಸಂದರ್ಭದ ಪ್ರಸ್ತಾಪವಿಲ್ಲ. ಬಹಳಷ್ಟು ಲೇಖನಗಳು ಸಭೆ ಸಮಾರಂಭ, ವಿಚಾರ ಸಂಕಿರಣಗಳ ಹಿನ್ನೆಲೆಯಲ್ಲಿ ರಚನೆಯಾಗಿರುವುದರಿಂದ ಪ್ರೇಕ್ಷಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಂತೆ ಹೊಳೆಯುತ್ತದೆ. ಒಂದೆರಡು ಲೇಖನಗಳು ಸಾಹಿತ್ಯದ ಓದುಗರನ್ನು ಗಮನದಲ್ಲಿಟ್ಟುಕೊಂಡು ಬರಹಕ್ಕಿಳಿಸಿದಂತೆ ಗಂಭೀರವಾಗಿದೆ. ಎಲ್ಲಾ ಲೇಖನಗಳನ್ನೂ ಸೃಜನಶೀಲ ಮನಸ್ಸು ಕೆಲಸ ಮಾಡಿರುವುದು ಗೋಚರಿಸುತ್ತದೆ. ಸಾಹಿತ್ಯವನ್ನು ವಿಶೇಷವಾಗಿ ಅಭ್ಯಾಸಮಾಡಿ, ವಿವಿಧ ಆಕರಗಳ ಸಮರ್ಥನೆಯಿಂದ ಸಾದರಪಡಿಸುವ ಡಾ॥ ಮರುಳಯ್ಯನವರ ಸಾಹಿತ್ಯಕ ಪ್ರಬಂಧಗಳಲ್ಲಿ ಸುಸಂಸ್ಕೃತ ವಿಮರ್ಶನ ವಿವೇಕ ಥಾಳಾಗಿರುವುದು ನಿಚ್ಚಳವಾಗಿ ಕಾಣುತ್ತದೆ. ಈ ಲೇಖನಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಸಾಕಷ್ಟು ಶ್ರಮವಿರುವುದು ಎದ್ದು ಕಾಣುತ್ತದೆ. ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷಾ ಸಾಹಿತ್ಯದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಇಲ್ಲಿನ ಲೇಖನಗಳಲ್ಲಿ ವಿಮರ್ಶೆಯ ವಿಹಂಗಮ ನೋಟ ಲಭ್ಯವಾಗುತ್ತದೆ. ಭಾರತೀಯ ಕಾವ್ಯಮಿಮಾಂಸೆ, ಪಾಶ್ಚಾತ್ಯ ವಿಮರ್ಶೆ ಎರಡೂ ವಿಧಾನಗಳನ್ನು ಮೈಗೂಡಿಸಿಕೊಂಡಿರುವ ಈ ಬರಹಗಳಲ್ಲಿ ವಿಮರ್ಶಾಧರ್ಮದ ಸೂಕ್ತಮಾರ್ಗ ದರ್ಶನವಾಗುತ್ತೆದೆ.

ಡಾ॥ ಮರುಳಯ್ಯವರು ಕಾವ್ಯ, ಕಾವ್ಯ ಪ್ರವೇಶ, ಕವಿ, ಕವಿಯ ಪರಿಕಲ್ಪನೆ, ಕಾವ್ಯ ನಿರ್ಮಾಣದ ಆಗುಹೋಗು, ಗುಣದೋಷಗಳನ್ನು ವಿಭಿನ್ನ ರೀತಿಯಲ್ಲಿ, ವರ್ಣರಂಜಿತ ನೆಲೆಯಲ್ಲಿ, ಪರಿಭಾವಿಸುವುದರಿಂದ ಇವರ ವಿಮರ್ಶಾ ಪ್ರತಿಕ್ರಿಯೆಗಳು ಆಪ್ಯಾಯಮಾನವಾಗಿರುತ್ತವೆ. ಈ ಲೇಖಕರು ಸ್ವತಃ ಕವಿಯೂ ಆಗಿರುವುದರಿಂದ ಕವಿಯ, ಕಾವ್ಯದ ಅಂತರಂಗವನ್ನು ರಸಸ್ಥಾನದಲ್ಲಿ ಕಂಡರಿಸುವುದರಲ್ಲಿ ಯಶಸ್ವಿಯಾಗುತ್ತಾರೆ. ಪದ್ಯಕೃತಿ, ಗದ್ಯಕೃತಿಗಳೆರಡರಲ್ಲೂ ಸಮಾನವಾದ ರಸಸ್ಯಂದಿ ಭಾವನೆಗಳ ಮಿಡಿತಕ್ಕೆ ಲೇಖಕರು ಆಸ್ಥೆವಹಿಸುವುದು ಮೆಚ್ಚಿಕೆಗೆ ಅರ್ಹವಾಗಿದೆ. ಪ್ರಾಚೀನ ಕೃತಿಗಳಂತೆ ಅರ್ವಾಚೀನ ಕೃತಿಗಳ ಬಗೆಗೂ ನಿರರ್ಗಳವಾಗಿ ತಮ್ಮ ಅಧ್ಯಯನಶೀಲ ವಿಮರ್ಶಾವಿಧಾನವನ್ನು ಬಳಸಬಲ್ಲರು.

ಡಾ॥ ಮರುಳಯ್ಯನವರ ವಿವೇಚನೆಗಳಲ್ಲಿ ಕೆಲವು ಸಾಮಾನ್ಯ ಅಂಶಗಳು ಕಂಡುಬರುತ್ತದೆ. ನಿರ್ದಿಷ್ಟ ಕೃತಿ, ಕರ್ತೃವಿನ ಬಗೆಗೆ ಸಾಕಷ್ಟು ಮಾಹಿತಿ ನೀಡುತ್ತಾರೆ. ಸಾಧ್ಯವಾದೆಡೆ ಕೃತಿಯ ಸಾರಾಂಶ ಒದಗಿಸುತ್ತಾರೆ. ಉತ್ತಮ ಅಂಶಗಳನ್ನು ಹೆಕ್ಕಿ ಸಾರವತ್ತಾಗಿ ವ್ಯಾಖ್ಯಾನಿಸುತ್ತಾರೆ. ಸೂತ್ರಪ್ರಾಯವಾಗಿ ಒಟ್ಟು ಕೃತಿಯ ಮೌಲ್ಯವನ್ನು ನಿರ್ಣಯಿಸುತ್ತಾರೆ. ಜೊತೆಗೆ ದೋಷಗಳನ್ನು ಸೋದಾಹರಣವಾಗಿ ಬೊಟ್ಟುಮಾಡಿ ತೋರಿಸುತ್ತಾರೆ. ಪ್ರಬಂಧವನ್ನು ಆಕರ್ಷಕವಾಗಿ ಮುಕ್ತಾಯ ಮಾಡುತ್ತಾರೆ.

ಡಾ॥ ಮರುಳಯ್ಯನವರ 'ಆತ್ಮೀಯ' ವ್ಯಕ್ತಿಚಿತ್ರಗಳಿಗೆ ಹೋಲಿಸಿದರೆ, 'ಅವಸ್ಥಾ' ಲೇಖನಗಳಲ್ಲಿ ಅನಗತ್ಯ ಶಬ್ದಾಡಂಬರ, ಅತಿಯಾದ ಗುಣಗಾನ ಪ್ರವೃತ್ತಿ ಕಂಡುಬರುವುದಿಲ್ಲ. ಒಂದೆರಡನ್ನು ಬಿಟ್ಟರೆ ಅತಿದೀರ್ಘದೋಷವೂ ಇಲ್ಲ. ವಿಮರ್ಶಾ ಬರಹಗಳಾದುದರಿಂದ ಅಭಿವ್ಯಕ್ತಿ ಸರಳವಾಗಿರಬೇಕು. ತಿಳಿಯಾಗಿರಬೇಕು. ಸಂವಹನಕ್ಕೆ ಸಹನೀಯವಾಗಿರಬೇಕು ಎಂದು ಭಾವಿಸಿದಂತೆ ಭಾಸವಾಗುತ್ತದೆ. ಇಲ್ಲಿ ಗದ್ಯ ಗ್ರಂಥಗಳಿಗಿಂತ ಪದ್ಯ ಕೃತಿಗಳ ವಿಮರ್ಶೆಗಳೇ ಹೆಚ್ಚಾಗಿದೆ. ಇವುಗಳನ್ನು ಸಾಹಿತ್ಯಕ ಪ್ರಬಂಧಗಳೆಂದು ಹೆಸರಿಸಿದ್ದರೂ ಒಟ್ಟಾರೆ ಪರಿಚಯಾತ್ಮಕ ವಿಮರ್ಶಾ ಲೇಖನಗಳೆಂದೇ ಕರೆಯಬಹುದು. ಕನಕದಾಸರ ಬಗೆಗೆ, ಕೆಳದಿಯ ಅರಸರ ಬಗೆಗೆ, ವಚನಕಾರರ ಬಗೆಗೆ, ಕುವೆಂಪು ಬಗೆಗೆ, ಒಂದಕ್ಕಿಂತ ಹೆಚ್ಚು ಲೇಖನಗಳಿವೆ. ಈ ವಿಷಯಗಳಲ್ಲಿ ಲೇಖಕರಿಗೂ ಅತಿಶಯವಾದ ಆಸಕ್ತಿ ಇರುವುದು ತಿಳಿಯುತ್ತದೆ. ಲೇಖನಗಳ ನೇರವಾದ ಶೀರ್ಷಿಕೆಗಳೇ ಲೇಖನದ ವಸ್ತುವನ್ನು, ಲೇಖಕರ ದೃಷ್ಟಿಯನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

'ಅವಸ್ಥಾ' ಗ್ರಂಥದಲ್ಲಿ ಕಂಡುಬರುವ ಲೇಖಕರ ಪರಿಯನ್ನು ಸ್ಥೂಲವಾಗಿ ಪರಿಶೀಲಿಸೋಣ. "ಕನಕದಾಸರ ಸಮಗ್ರ ಜೀವನ ಚರಿತ್ರೆ" ಎಂಬ ದೀರ್ಘ ಲೇಖನದಲ್ಲಿ ಸಂಶೋಧನೆಯ ಅಂಶಗಳು ಹೇರಳವಾಗಿವೆ. ಕನಕದಾಸರ ಕಾವ್ಯಗಳ ಆಂತರಿಕ ಪ್ರಮಾಣಗಳಿಂದ ಅವರ ಜೀವನ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸಿದೆ. ಕನಕದಾಸರ ಕಾಲ, ಬದುಕಿನ ವಿವರ, ಅವರ ವಿಶಿಷ್ಟ ವ್ಯಕ್ತಿತ್ವದ ಹೊಳಹುಗಳು ಸರಳವಾಗಿ ಅಭಿವ್ಯಕ್ತಗೊಂಡಿದೆ. ಈ ನಿಟ್ಟಿನಲ್ಲಿ ಲೇಖಕರ ಒಳನೋಟಗಳು ಮನನೀಯವಾಗಿದೆ.

ಈ ನಿಟ್ಟಿನಲ್ಲಿ ಲೇಖಕರು ಹೀಗೆ ನುಡಿದಿದ್ದಾರೆ. "ಕನಕದಾಸರು ಋಷಿಕವಿ, ಸಂತಕವಿ, ಮಹಾಕವಿ, ಖ್ಯಾತ ಕೀರ್ತನಕಾರರೂ ಹೌದು." (ಪುಟ ೧೯) "ವ್ಯಾಸರಾಯರ ದೃಷ್ಟಿಯಲ್ಲಿ ಪುರಂದರದಾಸ ಕನ್ನಡದ ಹೇಮಕೂಟ, ಕನಕದಾಸ ಆ ಹೇಮಕೂಟದ ನೆತ್ತಿಯ ಮೇಲೆ ಹಾರಾಡುವ ಕನ್ನಡದ ಬಾವುಟ!" (ಪುಟ ೫) "ಕನಕ ಸಾಹಿತ್ಯ, ಒಂದು ವಿವೇಚನೆ" ಎಂಬ ಇನ್ನೊಂದು ಲೇಖನದಲ್ಲಿ ಕನಕದಾಸರ ಕಾವ್ಯಗಳ ಅಂತರ್ಯಕ್ಕೆ ಲಗ್ಗೆಯಿಡುವ ಪ್ರಯತ್ನ ನಡೆದಿದೆ. ಈ ಲೇಖನದ ಆರಂಭವೇ ವಿನೂತನವಾಗಿದೆ. "ರಾಮಧ್ಯಾನ ಚರಿತ್ರೆ' ಯಲ್ಲಿ ಸಂಸ್ಕೃತ ಮತ್ತು ಕನ್ನಡಗಳ ನಡುವಣ ಭಾಷೆಯ ವಿವಾದವಿದೆಯೆಂದು ಕಲ್ಪಿಸುವುದು, ಕನಕದಾಸರ ಕೃತಿಯ ಬಗೆಗೆ ರೂಢಿ ಅಭಿಪ್ರಾಯಗಳನ್ನು ನಯವಾಗಿ ನಿರಾಕರಿಸುವುದು, ಕಾವ್ಯ ರಚನೆಯ ಸಂದರ್ಭಗಳನ್ನು ಸಕಾರಣವಾಗಿ ಊಹಿಸುವುದು ಆಕರ್ಷಕವಾಗಿದೆ. ಲೇಖಕರ ಹೃದ್ಯವಾದ ಒಂದೆರಡು ಸಾಲುಗಳನ್ನು ನೋಡಿ. "ಹೆಸರೇ ಸೂಚಿಸಿವಂತೆ ಹರಿಭಕ್ತಿಸಾರ ಹರಿನಾಮ ಸಂಕೀರ್ತನೆಯ ತುಲಸಿಹಾರ, ವಿಷ್ಣು ಪಾರಮ್ಯದ ಪುಣ್ಯಕೃತಿ, ಭಕ್ತಿಯೇ ಭಾಗೀರಥಿಯಾಗಿ ಕನ್ನಡಕ್ಕೊದಗಿ ಬಂದ ತೀರ್ಥ ಸಾಹಿತ್ಯ." (ಪುಟ ೨೭) "ಕನಕದಾಸರಲ್ಲಿ ಸ್ವೀಕರಣವೆಷ್ಟು ಮುಖ್ಯವೋ ಮಾರ್ಪಾಟು ಅಷ್ಟೇ ಮುಖ್ಯವೆನಿಸಿದೆ." (ಪುಟ ೩೧) "ಕನಕದಾಸರು ತಮ್ಮ ಮೋಹನ ತರಂಗಿಣಿಯಲ್ಲಿ ವಹಿಸಿದಷ್ಟು ಸ್ವಾತಂತ್ರ್ಯವನ್ನು ನಳಚರಿತ್ರೆಯಲ್ಲಿ ವಹಿಸಿಲ್ಲ ಎದು ಹೇಳಬಹುದು." (ಪುಟ ೩೨) "ಕನಕದಾಸರ ಕಾವ್ಯಶೈಲಿಯಲ್ಲಿ ಪ್ರಸಾದ ಗುಣವಿದೆ. ಅದು ಎಲ್ಲೆಡೆಯಲ್ಲೂ ಅಕ್ಲಿಷ್ಟ, ಆದರೆ ಪ್ರಭಾವಶಾಲಿ" (ಪುಟ ೩೨).

ಕನ್ನಡದ ಪ್ರಸಿದ್ಧ ಚಾರಿತ್ಯಕ ಕಾದಂಬರಿಕಾರರಾದ ಸಿ.ಕೆ. ನಾಗರಾಜರಾಯರ "ಪಟ್ಟಮಹಾದೇವಿ ಶಾನ್ತಲ ದೇವಿ" ಮಹಾ ಕಾದಂಬರಿಯನ್ನು ಕುರಿತು ಲೇಖಕರು ಅಡಕವಾಗಿ, ಅರ್ಥಪೂರ್ಣವಾಗಿ ಪ್ರತಿಕ್ರಿಯಿಸಿದ್ದಾರೆ. "ಪಟ್ಟಮಹಾದೇವಿ ಶಾನ್ತಲದೇವಿ ಪರಿಪಕ್ವ ಚೇತನದ ಅಮೃತ ಫಲ. ಇದು ಕಲಾಪೂರ್ಣ ಕಾದಂಬರಿಯೂ ಹೌದು, ಇತಿಹಾಸವೂ ಹೌದು, ಭಾರತೀಯ ಸಂಸ್ಕೃತಿಯ ಕೈಪಿಡಿಯೂ ಹೌದು, ಸನಾತನ ಸಂಸ್ಕೃತಿಯ ಕೇಂದ್ರವೂ ಹೌದು. ಇಂತಹ ಅಮರ ಕಲಾಕಾಣಿಕೆಯನ್ನಿತ್ತ ಸಿ.ಕೆ. ನಾಗರಾಜರಾಯರು ಅಭಿನಂದನೀಯರು" (ಪುಟ ೩೯) 'ಬಿಂದಲಿ, ಬೆಡಗು' ಲೇಖನದಲ್ಲಿ ಕಮಲಾ ಹಂಪನಾ ಅವರ 'ಬಿಂದಲಿ' ವಚನ ಸಂಗ್ರಹದ ಬಗೆಗೆ ವಿಮರ್ಶಿಸಿ ಗುಣದೋಷಗಳನ್ನು ಪ್ರಸ್ತಾಪಿಸಿದ್ದಾರೆ. "ವಚನ ಪರಂಪರೆಯಲ್ಲಿ ಬೆಳೆದಿದ್ದರೂ ಇಲ್ಲಿನ ಭಾವಗೀತಾತ್ಮಕ ರಚನೆಯಲ್ಲಿ ಅದ್ಯತನ ಬದುಕಿನ ಅರ್ಥಪೂರ್ಣ ವಿಶ್ಲೇಷಣೆ ಇದೆ. ಸಮಕಾಲೀನ ಜೀವನವನ್ನು ಕುರಿತ ಕವಯಿತ್ರಿಯ ಸೂಕ್ಷ್ಮ ಸಂವೇದನೆ ಇದೆ. ಇಲ್ಲಿ ಬಂಡಾಯದ ತೊಂಡು, ಕನ್ನಡಾಭಿಮಾನದ ಗಂಡು, ಹೃದಯ ಹೀನ ಸಮಾಜ ಖಂಡನೆಯ ಮೊಂಡು, ಮೊನಚು ಎಲ್ಲ ಇವೆ" (ಪುಟ ೪೧). 'ಸಮ್ಯಕ್ತ್ವ ಕೌಮುದಿ, ಒಂದು ವಿವೇಚನೆ' ಎಂಬ ಲೇಖನ ಪಂಡಿತ ಶಾಂತರಾಜ ಶಾಸ್ತ್ರಿಗಳು ಬರೆದಿರುವ ಗದ್ಯ ಗ್ರಂಥದ ಪರಿಚಯ ಮಾಡಿಕೊಡುತ್ತದೆ. "ನಿತ್ಯಸತ್ಯ ಪ್ರತಿಪಾದಕ ವಾಕ್ಯಗಳ ತಾತ್ವಿಕ ಬೋಧನೆಯ ಗಣಿಯಾಗಿದೆ ಕನ್ನಡ ಸಮ್ಯಕ್ತ್ವ ಕೌಮುದಿ" (ಪುಟ ೫೦) "ಕನ್ನಡ ಕಥನ ಕವನ, ಸ್ಥಿತಿಗತಿ", ಲೇಖನದಲ್ಲಿ

ಆ ಸಾಹಿತ್ಯದ ವಿವೇಚನೆಯಿದೆ. "ಕೆಲವರು ವಿಶ್ವಕರ್ಮ ವಚನಾಕಾರರು" ಎಂಬುದು ಸಾಧಾರಣ ಪ್ರಬಂಧವಾಗಿದೆ. ಇದರಲ್ಲಿ ವಿಶೇಷವಾದುದು ಏನೂ ಇಲ್ಲ.

"ಕೆಳದಿ ರಾಜ್ಯಾಭ್ಯುದಯಯಮ್, ಐತಿಹಾಸಿಕ ವಿವೇಚನೆ" ಎಂಬ ಲೇಖನ ಒಂದು ಅಪೂರ್ಣ ಚಾರಿತ್ರಿಕ ಕಾವ್ಯವನ್ನು ಕುರಿತದ್ದಾಗಿದೆ. ಇದರ ಕರ್ತೃ ಗಂಗಾಂಬಿಕೆ ಎಂಬ ಹೆಸರು ಸುಳ್ಳು ಸೃಷ್ಟಿಯೆಂದು ಸಾಬೀತು ಪಡಿಸಿದೆ. 'ಕೆಳದಿಯ ಅರಸರು' ಎಂಬ ಮತ್ತೊಂದು ಲೇಖನದಲ್ಲಿ ಸಿಂಹಾವಲೋಕನ ಕ್ರಮದಲ್ಲಿ ಚಾರಿತ್ರಿಕ ಘಟನೆಗಳನ್ನು ದಾಖಲಿಸಿದೆ. ಕೆಳದಿ ಸಾಮ್ರಾಜ್ಯದ ಗುಣಗಾನವೂ ಇದೆ. "ಕೆಳದಿಯನ್ನಾಳಿದವರು ಧರ್ಮ ಪ್ರಭುಗಳು, ಪ್ರಜಾಪೀಡನೆಯಲ್ಲೇ ನಿರತರಾದ ಪುಂಡುಪಾಳೆಯಗಾರರಲ್ಲ, ಅವರದು ವಿಶ್ವವಿಶಾಲ ಭಾವನೆ" (ಪುಟ ೧೪೯)

'ಕನ್ನಡ ಸಾಹಿತ್ಯದ ಒಲವು ನಿಲವುಗಳು' ಲೇಖನದಲ್ಲಿ ಅಧುನಿಕ ಕನ್ನಡ ಸಾಹಿತ್ಯದ ಸಮೀಕ್ಷೆಯನ್ನು ಮಾಡಿ, ಲೋಪದೋಷಗಳನ್ನು ಸೂಚಿಸಿದೆ. ಕೆಲವು ಪ್ರಮುಖ ಸಾಹಿತಿಗಳ ಪಟ್ಟಿಯನ್ನು ನೀಡಿರುವ ಈ ಲೇಖನಗಳಲ್ಲಿ ಲೇಖಕರ ಪ್ರತಿಕ್ರಿಯೆಗಳು ಪರಿಶೀಲನಾರ್ಹವಾಗಿದೆ. "ಅಡಿಗರು ಹಾಕಿದ ಅಡಿಗಲ್ಲು ನವ್ಯ ಪಂಥದ ಭವ್ಯ ಭವನ ಸುಭದ್ರವಾಗಿ ನಿಲ್ಲಲು ಸಹಕಾರಿಯಾಯಿತು" (ಪುಟ ೭೧) "ಕೈಲಾಸಂ ಅನಂತರ ಕನ್ನಡ ರಂಗಭೂಮಿಯನ್ನು ರೂಪಿಸಿಕೊಟ್ಟ ಕೀರ್ತಿ ಪರ್ವತವಾಣಿಯವರದು" (ಪುಟ ೭೨) "ಕಳೆದ ಎರಡು ವರ್ಷಗಳ ಸಾಹಿತ್ಯ ಕಾವ್ಯ" ಎಂಬ ಲೇಖನ ೧೯೭೪-೭೬ರ ಅವಧಿಯ ಕಾವ್ಯಗಳನ್ನು ಕುರಿತ ಸಮೀಕ್ಷೆಯಾಗಿದೆ. ಮುಖ್ಯ ಗ್ರಂಥಗಳನ್ನೊಳಗೊಂಡ ವಿವರವಾದ ಗ್ರಂಥ ಪಟ್ಟಿಯನ್ನು ಲೇಖಕರು ಒದಗಿಸಿದ್ದಾರೆ. "ಕನ್ನಡದಲ್ಲಿ ಸಣ್ಣಕತೆ ಮತ್ತು ಅದರ ಭವಿಷ್ಯ" ಲೇಖನದಲ್ಲಿ ಹರಿತವಾದ ವಿಮರ್ಶೆಯೂ ಕಟುವಾದ ಟೀಕೆಯೂ ಇದೆ. ಉತ್ತಮಾಂಶದ ಹೊಗಳಿಕೆಯೂ ಇದೆ. ಕೆಲವು ಸಣ್ಣ ಕಥೆಗಾರರ ನೈಪುಣ್ಯದ ಚಿತ್ರಣವೂ ಉಂಟು. "ಮಾತಿನ ನಯ, ನವುರು, ಜಾಣ್ಮೆ, ಕುಸುರಿಗೆಲಸದ ಕಲಾ ಕೈವಾಡಕ್ಕೆ ಸಣ್ಣಕತೆಯಷ್ಟು ಬೇರಾವ ಪ್ರಕಾರವೂ ಅವರಿಗೆ (ಮಾಸ್ತಿಯವರಿಗೆ) ಒಲಿಯಲಿಲ್ಲ"(ಪುಟ ೧೭೧) "ಅನಂದರ ಹಾಲ್ದಿಂಗಳಂತಹ ನಗೆ, ಸವಿದಷ್ಟೂ ಸಿಹಿ ಕೊಡುವ ಪ್ರಣಯ ಚಿತ್ರಗಳು ಕನ್ನಡದಲ್ಲಿ ಅನಂದರ ಅನಂತರ ಮತ್ತೆ ಬರಲೇ ಇಲ್ಲ ಎನ್ನಬಹುದು." (ಪುಟ ೧೭೧) "ಪ್ರಗತಿಶೀಲರ ಸೋಲಿನಿಂದ ಕೆಟ್ಟ ಪರಿಣಾಮವಾಯಿತು ಸಣ್ಣಕತೆಗೆ" (ಪುಟ ೧೭೨)

"ಷಡಕ್ಷರ ದೇವನ ಕೃತಿಗಳಲ್ಲಿ ಗುಣದೋಷಗಳು" ಪ್ರಬಂಧ ಸುದೀರ್ಘವಾಗಿದೆ. ಇದು ಪ್ರಾಯೋಗಿಕ ವಿಮರ್ಶೆಯ ಗುಂಪಿಗೆ ಸೇರುವಂಥ ಲೇಖನ. ಪ್ರಾರಂಭದಲ್ಲಿ ಪ್ರಾಚೀನ ಲಾಕ್ಷಣಿಕರ ಹೇಳಿಕೆಗಳ ಪ್ರಸ್ತಾಪ ಅತಿಯಾಗಿದೆ. ಇದು ಅನಗತ್ಯವಾಗಿತ್ತು. ಷಡಕ್ಷರ ದೇವನ ಮೂರು ಕಾವ್ಯಗಳ ಕಥಾಸಾರವಿದೆ. ಕೆಲವು ರಸಮಯ ಪದ್ಯಗಳಿಗೆ ವ್ಯಾಖ್ಯಾನ ನೀಡಿದೆ. ರಸಾಭಾಸದ ಸನ್ನಿವೇಶಗಳನ್ನು ಸೋದಾಹರಣವಾಗಿ ಟೀಕಿಸಿದೆ. "ಷಡಕ್ಷರಿ ಲೆಕ್ಕಾಚಾರದ ಕವಿ. ಲಾಕ್ಷಣಿಕರು ಹಾಕಿಕೊಟ್ಟ ನಿಯಮ ನಿಬಂಧನೆಯ ಚೌಕಟ್ಟನ್ನು ಕಿಂಚಿತ್ತೂ ಮೀರದ ನಿಷ್ಠಾವಂತ ರಚಕ... ಶಾಸ್ತ್ರದ ಶೃಂಖಲೆಯನ್ನು ಕಡಿದೊಗೆದು ಪ್ರಾತಿಭ

ಮೀಮಾಂಸಕ, ವಿಮರ್ಶಕ ಸಂಸ್ಕೃತಿಯ ಸಂವರ್ಧಕ ಮತ್ತು ಕಾವ್ಯ ಸಂಪಾದಕರು, ಆಗಿದ್ದ ದೊಲನ ಅವರ ವಿವಿಧ ಮುಖಗಳನ್ನು ಸಾ.ಶಿ.ಮ. ಕೊಡುತ್ತಾರೆ.

'ಭವ್ಯ ಮಾನವ ಶಿಲ್ಪಿ' ಪ್ರೊ॥ ಸಂ.ಶಿ. ಭೂಸನೂರ ಮಠ ಅವರ ಅಭಿನಂದನ ಗ್ರಂಥಕ್ಕೆ ಬರೆದ ಸುದೀರ್ಘ ಲೇಖನ. ಈ ಲೇಖನದಲ್ಲಿ ಗ್ರಂಥ ಸಂಪಾದನೆಯಲ್ಲಿ ಭೂಸನೂರರಿಗೆ ಇರುವ ಅಪಾರ ಪಾಂಡಿತ್ಯವನ್ನು, ಶಾಸ್ತ್ರೋಕ್ತ ಕಾರ್ಯ ವೈಖರಿಯನ್ನು ಸಾ.ಶಿ.ಮ. ವಿವರಿಸುತ್ತಾರೆ. ಅವರೊಬ್ಬ ಸಮರ್ಥ ಗ್ರಂಥ ಸಂಪಾದಕರೆಂಬುದಕ್ಕೆ, ಗೂಳೂರು ಸಿದ್ಧವೀರಣ್ಣೊಡೆಯನ ಶೂನ್ಯ ಸಂಪಾದನೆ ಸಾಕ್ಷಿಯಾಗಿದೆ. ಭೂಸನೂರರಲ್ಲಿ ಹುದುಗಿದ್ದ ಶಾಸ್ತ್ರೀಯ ಚೌಕಟ್ಟು ಮತ್ತು ತೌಲನಿಕ ಅಧ್ಯಯನದ ಮಹತ್ವವನ್ನು ಲೇಖಕರು ಬಹುವಾಗಿ ಮೆಚ್ಚಿಕೊಳ್ಳುತ್ತ ಅವರ ಅಧ್ಯಯನದ ವಿವಿಧ ಮುಖಗಳನ್ನು ಗುರುತಿಸಿದ್ದಾರೆ. ಭೂಸನೂರರ ಒಟ್ಟು ಹದಿಮೂರು ಸಂಪಾದಿತ ಕೃತಿಗಳ ಬಗ್ಗೆ ಸುದೀರ್ಘವಾಗಿ ವಿಮರ್ಶೆ ಮಾಡಿ, ಅಂತಿಮದಲ್ಲಿ ಭೂಸನೂರರ 'ಭವ್ಯ ಮಾನವ' ನಿಸ್ಸಂದೇಹವಾಗಿ ಒಂದು ಸೃಜನಾತ್ಮಕ ಕಾವ್ಯ ಎಂಬ ಹೇಳಿಕೆಗೆ ವಿವರಣೆ ನೀಡಿದ್ದಾರೆ.

'ಛಂದೋ ವಿಕಾಸದ ಕಾವ್ಯವಿಲಾಸಿ' ಡಿ.ಎಸ್. ಕರ್ಕಿಯವರನ್ನು ಕುರಿತು ಸಾ.ಶಿ.ಮ. ಅವರು ಬರೆದ ಲೇಖನ

ಕರಿಕೆ ಬೆಳಯದ ನೆಲ ಇಲ್ಲ
ಕರ್ಕಿ ಕಾಣದ ಜನ ಇಲ್ಲ.

ಎನ್ನುವ ಹೇಳಿಕೆಯಲ್ಲಿ ಉತ್ಪ್ರೇಕ್ಷೆ ಇಲ್ಲ. ನವೋದಯ ಕಾಲದಲ್ಲಿನ ರಮ್ಯ ರಚನೆಯನ್ನು ಅದರ ಆದರ್ಶವನ್ನು ಮೈಗೂಡಿಸಿಕೊಂಡ ಮೇಲ್ಮಟ್ಟದ ಕವಿ. ಕನ್ನಡದ ದೀಪವನ್ನು ಕರ್ಕಿಯವರು ಬೆಳಗಿಸಿದರು. ಸಾ.ಶಿ.ಮ. ಅವರು ಕರ್ಕಿಯವರ ನಕ್ಷತ್ರಗಾನ, ಭಾವತೀರ್ಥ, ಗೀತಗೌರವ, ನಮನ, ಕರಿಕೆ ಕಣಗಿಲ, ಸಂಕಲಗಳಲ್ಲಿನ ಕವನಗಳನ್ನು ಸೂಕ್ಷ್ಮವಾಗಿ ವಿಮರ್ಶಿಸಿದ್ದಾರೆ. ಮೇಲಾಗಿ ಕರ್ಕಿಯವರು ಎಷ್ಟು ಸಮರ್ಥ ಕವಿಗಳೆ, ಅಷ್ಟೇ ಸಮರ್ಥ ಶಾಸ್ತ್ರಕಾರರು ಆಗಿದ್ದರೆಂಬದಕ್ಕೆ ಅವರ 'ಛಂದೋ ವಿಕಾಸ' ಕೃತಿ ಸಾಕ್ಷಿ. ಸಾ.ಶಿ.ಮ. ಅವರ ಅಭಿಪ್ರಾಯದಂತೆ ಕರ್ಕಿಯವರಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸ್ಥಾನವನ್ನು ಗಳಿಸಿಕೊಟ್ಟ ಗಣ್ಯಕೃತಿ ಖಂಡಿತವಾಗಿ ಛಂದೋ ವಿಕಾಸ.

ಕಾವ್ಯಾನಂದ ಕಾವ್ಯನಾಮದ ಡಾ॥ ಸಿದ್ಧಯ್ಯ ಪುರಾಣಿಕರಿಗೆ ೧೯೮೦ ರಲ್ಲಿ ಕಲ್ಕತ್ತೆಯ ಭಾರತೀಯ ಭಾಷಾ ಪರಿಷತ್ತಿನ ಬಿಲ್ವಾರ ಪ್ರಶಸ್ತಿ ಲಭ್ಯವಾಯಿತು. ಪ್ರಶಸ್ತಿ ಪ್ರದಾನವಾದಾಗ ಸಾ.ಶಿ. ಮರುಳಯ್ಯನವರು ಪುರಾಣಿಕರಿಗೆ ಅರ್ಪಿಸಿದ ಗೌರವ ಕಾಣಿಕೆಯೆ 'ಕಾವ್ಯಾನಂದ' ಲೇಖನ. ಡಾ॥ ಪುರಾಣಿಕರು ಸರ್ಕಾರದ ವಿವಿಧ ಸರ್ಕಾರಿ ಹುದ್ದೆಗಳಲ್ಲಿದ್ದವರು. ಅವರ ಸರ್ಕಾರಿ ಸೇವೆಯ ವ್ಯಾಪ್ತಿ ಅಸಿಸ್ಟೆಂಟ್ ಕಲೆಕ್ಟರ್ ಹುದ್ದೆಯಿಂದ ಲೇಬರ್ ಕಮಿಷನರವರೆಗೂ ಹಬ್ಬಿದೆ. ಇಷ್ಟೆಲ್ಲಾ ಹುದ್ದೆಗಳು ಪುರಾಣಿಕರನ್ನು ಹುಡುಕಿಕೊಂಡು ಬಂದರೂ ಮನುಷ್ಯರಾಗಿಯೇ ಉಳಿದರು ಎಂಬ ಸಾ.ಶಿ.ಮ. ಅವರ ಹೇಳಿಕೆ ಪುರಾಣಿಕರ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿಯಾಗಿದೆ. ಬಾಲ್ಯದಿಂದಲೇ ಕಾವ್ಯದೇವಿ

ಇವರ ಕೈ ಹಿಡಿದಿದ್ದಳು. ಇದರ ಫಲವಾಗಿ ಜಲಪಾತ, ಕರುಣಾಶ್ರಾವಣ, ತುಷಾರ ಹಾರ ಕವನ ಸಂಕಲನಗಳು ಪ್ರಕಟಗೊಂಡವು. ಅನೇಕ ಜೀವನ ಚರಿತ್ರೆಗಳನ್ನು ಸಂಪಾದನೆಗಳನ್ನು ಮಕ್ಕಳ ಪುಸ್ತಕಗಳನ್ನು ಸಾ.ಶಿ.ಮ. ಅವರು ಸ್ಮರಿಸುತ್ತಾ ಅವುಗಳ ಮಹತ್ವವನ್ನು ಕುರಿತು ಬರೆದಿದ್ದಾರೆ. ಕಾವ್ಯಾನಂದರ ಮೇರುಕೃತಿ ಎಂದರೆ ವಚನೋದ್ಯಾನ. ಇದು ಸಾ.ಶಿ.ಮ. ಅವರ ಅಭಿಪ್ರಾಯದಂತೆ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಿದ್ದ ಗಟ್ಟಿಕಾಳು. ಈ ಕೃತಿಯಲ್ಲಿ ನಿರೂಪಿತವಾಗಿರುವ ಕ್ಷುದ್ರ ರಾಜಕೀಯ, ಭ್ರಷ್ಟಾಚಾರ, ನಿತ್ಯಜೀವನದ ಸತ್ಯ ಚಿತ್ರಣಗಳನ್ನು ನೀಡುವ ಅನೇಕ ವಚನಗಳನ್ನು ಸಾ.ಶಿ. ಮರುಳಯ್ಯನವರು ಸೋದಾಹರಣವಾಗಿ ವಿವರಿಸುತ್ತಾರೆ. ಅಂತ್ಯದಲ್ಲಿ ಪುರಾಣಿಕರಿಗೆ ನಾಡಿನ ಒಳಗೆ ಮತ್ತು ಹೊರಗೆ ಸಂದ ಪ್ರಶಸ್ತಿಗಳ ಪಟ್ಟಿಯನ್ನು ನೀಡಿದ್ದಾರೆ.

೧೯೮೮ ರಲ್ಲಿ ಬೆಂಗಳೂರಲ್ಲಿ ಅಖಿಲ ಭಾರತ ಶರಣ ಸಾಹಿತ್ಯ ಸಮ್ಮೇಳನ ಜರುಗಿತು. ಅದರ ಅಧ್ಯಕ್ಷರಾಗಿದ್ದವರು ಡಾ|| ಆರ್.ಸಿ. ಹೀರೆಮಠ. ಆರ್.ಸಿ. ಅವರ ಬಗ್ಗೆ ಸಮಾರಂಭದ ವಿಶೇಷ ಸಂಚಿಕೆಗಾಗಿ, ಸಾ.ಶಿ.ಮರುಳಯ್ಯನವರು 'ಸಾಹಿತ್ಯ ತಪಸ್ವಿ' ಲೇಖನವನ್ನು ಬರೆದಿದ್ದಾರೆ. ಇದರಲ್ಲಿ ಸಾ.ಶಿ.ಮ. ಅವರು ಆರ್. ಸಿ. ಹಿರೇಮಠ ಅವರ ಬಾಲ್ಯದ ದಾರುಣ ದಿನಗಳ ವಿವಿಧ ಮುಖಗಳನ್ನು ನೀಡುತ್ತಾರೆ. ಅಂತಹ ದಾರುಣ ಪ್ರಸಂಗಗಳನ್ನು ಮೆಟ್ಟಿನಿಂತು ಮುನ್ನೆಡೆಯನ್ನು ಸಾಧಿಸಿರುವ ಬಗ್ಗೆ ಮೆಚ್ಚಿಗೆ ಸೂಚಿಸುತ್ತಾರೆ. ಆರ್. ಸಿ. ಅವರು ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಅಧ್ಯಾಪಕ ವೃತ್ತಿಯಿಂದ ಕುಲಪತಿಗಳವರೆಗಿನ ಸಾಧನೆಗಳನ್ನು ಪರಿಚಯಸಿದ್ದಾರೆ. ಹಿರೇಮಠರವರು ಕರ್ನಾಟಕ ವಿಶ್ವ ವಿದ್ಯಾನಿಲಯದಲ್ಲಿ ಸ್ಥಾಪಿಸಿದ ಭಾಷಾಂತರ ಡಿಪ್ಲೊಮಾ, ವೀರಶೈವ, ಜೈನ ಮತ್ತು ವೈದಿಕ ತೌಲನಿಕ ಧರ್ಮ ಡಿಪ್ಲೊಮ ತೆರೆದದ್ದು ಮುಂದೆ ಅವರ ರಚನಾತ್ಮಕ ಸಾಧನೆಗಳು ಹೇಗೆ ಕರ್ನಾಟಕ ವಿಶ್ವವಿದ್ಯಾನಿಲಯದ ಯೋಗ್ಯತೆಯನ್ನು ಹೆಚ್ಚಿಸಿತು; ಡಿ.ಸಿ. ಪಾವಟೆಯವರ ಕನಸು ಆರ್. ಸಿ. ಹಿರೇಮಠರ ಮುಖಾಂತರ ಹೇಗೆ ನೆನಸಾಯಿತು ಎಂಬ ಬಗ್ಗೆ ಸಾ.ಶಿ.ಮ. ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಆರ್.ಸಿ. ಅವರ ಬಹುದೊಡ್ಡ ಕಾರ್ಯವೆಂದರೆ 'ವಚನ ವಾಙ್ಮಯ' ಯೋಜನೆ. ಅವರು ವಚನ ಸಾಹಿತ್ಯದ ಸಂಪಾದನೆ, ಕೃತಿಗಳ ಪ್ರಕಟಣೆ ಮಾಡಿ ವಚನ ವಾಙ್ಮಯಕ್ಕೆ ಕೊಟ್ಟ ಕೊಡುಗೆ ಮಹತ್ವದ್ದಾಗಿದೆ ಎನ್ನುವ ಅಭಿಪ್ರಾಯಕ್ಕೆ ಸಾ.ಶಿ.ಮ. ಬರುತ್ತಾರೆ.

ದೇಶಹಳ್ಳಿ ಜಿ. ನಾರಾಯಣರಿಗೂ ಸಾ.ಶಿ.ಮ. ರವರಿಗೂ ಸುಮಾರು ಮೂರು ದಶಕಗಳ ಸುದೀರ್ಘ ಒಡನಾಟವಿದೆ. ಅದರ ಸತ್ಫಲವೇ 'ರತ್ನತ್ರಯ ಸಾಧಕ' ಎನ್ನುವ ಲೇಖನ. ನಾರಾಯಣರದು ಸರಳ ಸುಸಂಸ್ಕೃತ, ಅಪ್ಪಟ ದೇಸಿ ಬದುಕು. ಸಾ.ಶಿ. ಮರುಳಯ್ಯನವರು ನಾರಾಯಣರನ್ನು ಪರಿಚಯಿಸುವುದು ವಿಶಿಷ್ಟ ಸಂದರ್ಭದೊಂದಿಗೆ. ೧೯೪೨ ರಲ್ಲಿ ಗಾಂಧೀಜಿ ಕ್ವಿಟ್ ಇಂಡಿಯಾ ಚಳುವಳಿಗೆ ಕರೆಕೊಟ್ಟಿದ್ದು, ಅದರಲ್ಲಿ ಭಾಗವಹಿಸಿ ಬಾಲಕ ನಾರಾಯಣರು ಬೊಂಬಾಯಿಂದ ಬೆಂಗಳೂರಿಗೆ ಹಿಂತಿರುಗಬೇಕಾಗಿತ್ತು. ಜೇಬಲ್ಲಿ ಹಣವಿರಲಿಲ್ಲ. ಓಡುವ ರೈಲಿನ ಕಂಬಿಯನ್ನು ಹಿಡಿದು ಪ್ರಯಾಣಿಸುತ್ತಿದ್ದರು. ಒಳಗಿದ್ದವರು ಮಿಲಿಟರಿಯವರು, ಬಾಲಕರನ್ನು ಒಳಗ

ಬಿಟ್ಟುಕೊಂಡು, ಆತನ ಮೇಲೆ ಕೇಳುವ ಪ್ರಶ್ನೆಗಳನ್ನು ಮಿಲಿಟರಿಯರು ಕೇಳಿದರು. ಅವರ ಎಲ್ಲ ಪ್ರಶ್ನೆಗಳನ್ನು ಬಾಲಕನ ದಿಟ್ಟ ಉತ್ತರ .... ಹೀಗೆ ಮುಂದುವರೆಯುತ್ತದೆ. ಸಾ.ಶಿ.ಮ. ಅವರ ಲೇಖನಿ. ನಾರಾಯಣರಲ್ಲಿನ ನಾಡು ನುಡಿಯ ಸಹಜ ಕಾಳಜಿ ಇಂದಿನದಲ್ಲ. ಅದು ಹುಟ್ಟುವಾಗಲೇ ಅವರ ಜೊತೆ ಹುಟ್ಟಿದ್ದು ಎನ್ನುವುದು ಸಾ.ಶಿ.ಮ. ಅವರ ಅಭಿಪ್ರಾಯ. ಲೇಖಕರು ನಾರಾಯಣರು ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಅವರೊಡನೆ ಬೆರತು ಕೆಲಸ ಮಾಡುವ ಸಂದರ್ಭದಲ್ಲಿ ಅವರಲ್ಲಿರುವ ಸಮಯ ಪಾಲನೆ ತತ್ವನಿಷ್ಠೆ ಮಾನವತೆಗಳನ್ನು ಗುರುತಿಸಿದ್ದಾರೆ. ಅವರಲ್ಲಿ ಈ ಮೂರೂ ಗುಣಗಳು ಮೇಳವಿಸಿರುವುದು ಸಾ.ಶಿ.ಮ. ಮೆಚ್ಚಿ ಅವರನ್ನು 'ರತ್ನತ್ರಯ ಸಾಧಕ ' ಎಂದು ಕೊಂಡಾಡಿದ್ದಾರೆ.

'ಮಾನವತಾದಿ' ಎಂಬ ಲೇಖನವನ್ನು ಸಾ.ಶಿ. ಮರುಳಯ್ಯನವರು ಆತ್ಮೀಯ ಗೆಳೆಯ ಹಂಪ ನಾಗರಾಜಯ್ಯನವರನ್ನು ಕುರಿತು ಬರೆದಿದ್ದು, ದಾವಣಗೆರೆ ಕಾಲೇಜಿನಲ್ಲಿ ಒಟ್ಟಿಗೆ ಉಪನ್ಯಾಸಕರಾಗಿ ಸೇವೆ ಸಲ್ಲಿಸುತ್ತಿದ್ದಾಗ ನಡೆದ ಒಂದು ಘಟನೆಯನ್ನು ಮರುಳಯ್ಯನವರು ಜ್ಞಾಪಿಸಿಕೊಂಡಿದ್ದಾರೆ. ಹಂಪನಾ ಮರುಳಯ್ಯನವರಿಗಿಂತ ಜ್ಯೂನಿಯರ್. ಹಂಪನಾ ಆತ್ಮೀಯನಾಗಿ ಹತ್ತಿರವಾಗಲು ಸಾ.ಶಿ.ಮ. ಅವರ ಸೀನಿಯರ್ ದೊಡ್ಡಸ್ತಿಕೆ ಗೋಡೆ ಅಡ್ಡ ಬರುತ್ತಿತ್ತಂತೆ. ಇದನ್ನು ಹಂಪನಾ ಅವರು ತಮ್ಮ ಸರಳ ಸಜ್ಜನಿಕೆಗಳಿಂದ ಹೇಗೆ ಕೆಡವಿದರು ಎಂಬುದನ್ನು ಬಿಚ್ಚು ಮನಸ್ಸಿನಿಂದ ನೆನೆಯುತ್ತಾರೆ. ಇದು ಸಾ.ಶಿ.ಮ. ಅವರ ಪ್ರಾಂಜಲ ಮನಸ್ಸಿಗೆ ಹಿಡಿದ ಕನ್ನಡಿಯಾಗಿದೆ. ತಮ್ಮ 'ಕೆಂಗನ ಕಲ್ಲು' ಕವನ ಸಂಕಲನಕ್ಕೆ ಸರ್ಕಾರದಿಂದ ಬಹುಮಾನ ಬಂದಾಗ ಶಿವಮೊಗ್ಗೆಯ ಅವರ ಆತ್ಮೀಯ ಬಳಗ ಸನ್ಮಾನಿಸಿದ ಗೌರವದ ಹಿಂದಿನ ರೂವಾರಿ ಹಂಪನಾ. 'ಬೃಂದಾವನ ಲೀಲೆ' ಮೊಟ್ಟ ಮೊದಲ ಬಾರಿಗೆ ರಾಗ ಸಂಯೋಜನೆಯಿಂದ ಮೈದುಂಬಿಕೊಂಡು ವಿಜೃಂಭಿಸುವುದು, ಹಂಪನಾ ಅವರಿಂದಲೇ, ಸಾ.ಶಿ.ಮ. ಅವರು ಜೀವನದಲ್ಲಿ ಮೊತ್ತಮೊದಲ ಬಾರಿ ಪೂರ್ಣ ಕುಂಭ ಸ್ವಾಗತ, ಪ್ರಥಮ ಬಾರಿ ಪಡೆದ ಸನ್ಮಾನದ ಶಾಲು. ಹೀಗೆ ಹಲವು ಹತ್ತು ಮೊದಲಿಗೆ ಹಂಪನಾ ಹೇಗೆ ಕಾರಣಕರ್ತರಾದರೆನ್ನುವುದನ್ನು ಅಶ್ರು ತುಂಬಿದ ಗದ್ಗದ ಕಂಠದಿಂದ ನನೆಯುತ್ತಾರೆ.

'ಕುವೆಂಪು ಕಾವ್ಯದ ವ್ಯಾಖ್ಯಾನಕಾರ ಪ್ರೊ॥ ದೇ.ಜ.ಗೌ. ಅವರನ್ನು ಕುರಿತದ್ದು, ಈ ಲೇಖನದಲ್ಲಿ ದೇ.ಜ.ಗೌ. ಅವರ ವ್ಯಕ್ತಿ ಚಿತ್ರಣ ನೀಡುವುದಕ್ಕೆ ಮೊದಲು ಸಾ.ಶಿ.ಮ. ಅವರು ಮೀಮಾಂಸೆ, ವಿಮರ್ಶೆ, ಭಾಷ್ಯ ಮುಂತಾದುವುಗಳ ಔಚಿತ್ಯದ ಸುದೀರ್ಘ ವಿವರಣೆ ಕೊಟ್ಟಿದ್ದಾರೆ. ದೇ.ಜ.ಗೌ. ಅವರು ಕುವೆಂಪು ಅವರ ರಾಮಾಯಣದರ್ಶನಂ ಮಹಾಕಾವ್ಯದ ಬಗ್ಗೆ ವಿಶೇಷವಾಗಿ, ನಾಟಕ ಕತೆ ಕಾದಂಬರಿಗಳನ್ನು ಕುರಿತು ಪೋಷಕವಾಗಿ, ಅವರ ಜೀವನ, ಕಾವ್ಯ ಜೀವನಗಳನ್ನು ಕುರಿತು ಪ್ರಾಸಂಗಿಕವಾಗಿ ಹೇಗೆ ವ್ಯಾಖ್ಯಾನ ನೀಡಿದ್ದಾರೆ ಎಂಬುದನ್ನು ಸಾ.ಶಿ.ಮ. ಅವರು ವ್ಯಾಖ್ಯಾನಕ್ಕೆ ವಿಶ್ಲೇಷಣೆ ನಡೆಸಿದ್ದಾರೆ. ಇದು ಕುವೆಂಪು ಸಾಹಿತ್ಯ ಕುರಿತು ದೇ.ಜ.ಗೌ. ಅವರು ನಡೆಸಿದ ರಸಕ್ರಿಯೆಯ ರಸಯಾನಕ್ಕೆ ತಕ್ಕ ಹೇಳಿಕೆಯಾಗಿದೆ. ದೇಜಗೌ ಅವರ ಕುವೆಂಪು ಸಾಹಿತ್ಯ ಕೇಂದ್ರಿತ ಅಧ್ಯಯನಗಳ

ಬಗ್ಗೆ ಮರುಳಯ್ಯನವರ ಮೆಚ್ಚಿಗೆ ನುಡಿಗಳು ಹೀಗಿವೆ. "ಹೂ ಹೂಗಳ ಬಂಡುಂಡು ತುಪ್ಪದ ಕೊಡ ಕಟ್ಟುವ ದುಂಬಿಯಂತೆ ಹತ್ತಾರು ರಸಘಟ್ಟಗಳ, ಸುಂದರ ಸನ್ನಿವೇಶಗಳ ಬಂಧುರನಿಂದ ಪಾತ್ರಗಳ ಪರಿಚಯ ....." ಇಲ್ಲಿ ಬರುವ ಶಬರಿ, ಮಂಥರೆ, ಊರ್ಮಿಳೆ... ಇತ್ಯಾದಿ ಪಾತ್ರಗಳು ಹೇಗೆ ವಿವೇಚನಾ ಪರವಾಗಿದೆ ಎಂಬುದನ್ನು ಸಾಶಿಮ ಗುರುತಿಸುತ್ತಾ ಹೋಗುತ್ತಾರೆ. ದೇಜಗೌ ಅವರ ಸಾಧನಗಳ ಚಿತ್ರಣ ಮರುಳಯ್ಯನವರ ಕುಂಚದಿಂದ ಮೂಡಿದ್ದು ಹೀಗೆ. "ಬಿ.ಎಂ.ಶ್ರೀ ಅವರು ಕನ್ನಡಿಗರ ಮನದ ಮೈಲಿಗೆಯನ್ನು ನೀಗಲು ತುಂಬಾ ಶ್ರಮಿಸಿದರು. ಧೂಳು ಕೊಡವಿದರು. ದೇಜಗೌ ಅವರು ಕನ್ನಡಿಗನ ಜುಟ್ಟು ಹಿಡಿದು ನೆತ್ತಿಯನ್ನೆ ಒದರಿದರು, ಸುಪ್ತ ಚೇತನಗಳನ್ನು ಬಡಿದೆಬ್ಬಿಸಿದರು. ಹೊಸ ಹುರುಪು ತುಂಬಿದರು." ದೇಜಗೌ ಅವರು ಮೈಸೂರು ವಿಶ್ವವಿದ್ಯಾಲಯ ವೃಕ್ಷಕ್ಕೆ ಹೊಸ ಚಿಗುರನ್ನು ನೀಡಿದ್ದಲ್ಲದೆ, ಅದರ ಹಳೆಯ ಬೇರು ಆಳದಲ್ಲಿ ಹುದುಗಲು ಶ್ರಮಿಸಿದ ಎಲ್ಲ ವಿವರಗಳನ್ನು ಸಾಶಿಮ ಕೊಟ್ಟಿದ್ದಾರೆ.

ಎಲೆಮರೆಯ ಕಾಯಿಯಂತೆ ಸಮಾಜ ಸೇವೆಯಲ್ಲಿ ತಮ್ಮನ್ನು ತೊಡಗಿಸಿಕೊಂಡ ಆರ್.ಎಂ.ಬಿ. ಆರಾಧ್ಯರನ್ನು ಕುರಿತದ್ದು "ಆತ್ಮಶ್ರೀಗೆ ಪದ್ಮಶ್ರೀ" ಲೇಖನ. ಆರಾಧ್ಯರು ವ್ಯಕ್ತಿಗಿಂತ ವ್ಯಕ್ತಿತ್ವಕ್ಕೆ ಮಹತ್ವಕೊಟ್ಟಿದ್ದಾರೆ. ವ್ಯಕ್ತಿ ಬೆಳೆದರೆ ಸಮಾಜ" ಸಮಾಜ ಬೆಳೆದರೆ ದೇಶ, ರಾಷ್ಟ್ರಪ್ರಗತಿ ಸಾಧ್ಯ ಎನ್ನುವ ತತ್ವದಲ್ಲಿ ನಂಬಿಕೆ ಇಟ್ಟು ನುಡಿದಂತೆ ನಡೆದು, ಅನ್ಯರಿಗೆ ದಾರಿ ದೀಪವಾದರು. ಮರುಳಯ್ಯನವರು ಇಂತಹ ಮುತ್ಸದ್ದಿಯ ವಿವಿಧ ಮುಖಗಳನ್ನು ಮೆಚ್ಚಿ ಕೊಂಡಾಡಿದ್ದಾರೆ.

"ಪಟ್ಟು ಬಿಡದ ಪಟ್ಟೆ ವಿಭೂತಿ" ಬಿ.ಡಿ. ಜತ್ತಿಯವರನ್ನು ಕುರಿತು ಬರೆದಿದ್ದು. ಈ ಲೇಖನದಲ್ಲಿ ರಾಜಕೀಯಕ್ಕೆ ಆಧ್ಯಾತ್ಮ ಬೆರಸುವುದರ ಔಚಿತ್ಯವನ್ನು ಲೇಖಕರು ಜತ್ತಿಯವರ ಜೊತೆ ಸಂಭಾಷಿಸಿ ಶ್ರುತ ಪಡಿಸಿದ್ದಾರೆ.

"ದೊಡ್ಡ ಮನೆ ದೊಡ್ಡ ಗೌಡರು" ಪ್ರಸಿದ್ಧ ಸಾಹಿತಿ ಎಚ್.ಎಲ್. ನಾಗೇಗೌಡರ ನೆನಪಿನ ಸಂಚಿಕೆ 'ನಾಗಸಂಪಿಗೆ'ಗಾಗಿ ಬರೆದ ಲೇಖನ. ಒಂದು ಕೈಯಲ್ಲಿ ಆಡಳಿತ ಸೂತ್ರವನ್ನು, ಮತ್ತೊಂದರಲ್ಲಿ ಲೇಖನಿಯನ್ನು ಹಿಡಿದು ಸಾರ್ಥಕ ಕೃತಿ ಕಾಣಿಕೆ ನೀಡುತ್ತಾ ಬಹುದೂರ ಸಾಗಿದ ಸವ್ಯಾಸಾಚಿ ಶ್ರೀ ಗೌಡರು. ಅವರು ಕಥೆಗಾರರಾಗಿ, ಜಾನಪದ ಜ್ಯೋತಿಯಾಗಿ, ಪ್ರವಾಸ ಸಾಹಿತ್ಯಕಾರರಾಗಿ ಸಾಹಿತ್ಯದ ವಿವಿಧ ಮೂಲೆಗಳಲ್ಲಿಯೂ ಸಾಧನೆಗೈದ ಮಾಹಿತಿ ಈ ಲೇಖನದಲ್ಲಿದೆ. ಗೌಡರ ಸಮಗ್ರ ಸಾಹಿತ್ಯ ಪರಿಚಯವನ್ನು ಕನ್ನಡಿಯಲ್ಲಿ ಆನೆಯ ಬಿಂಬವನ್ನು ಕಂಡ ಹಾಗೆ ಕಂಡರಿಸಿದ್ದಾರೆ. "ಅವರ ಸಾಧನೆಯ ಫಲವಾಗಿ ಪ್ರವಾಸಿ ಕಂಡ ಇಂಡಿಯಾ ಕಂಡರಿಸಲ್ಪಟ್ಟಿತು. ಬೆಟ್ಟದಿಂದ ಬಟ್ಟಲಿಗೆ ಭಟ್ಟಿ ಇಳಿಯಿತು. ದೊಡ್ಡಮನೆ ಗ್ರಾಮೀಣ ಬದುಕನ್ನು ಹೊತ್ತು ಮೆರೆವ ಮಾದರಿಯ ಮಂದಿರವಾಯಿತು; ಸೋಬಾನೆ ಚಿಕ್ಕಮ್ಮ ಕನ್ನಡ ಕುಲಕೋಟಿಗೆ ಅಕ್ಕರೆಯ ಚಿಕ್ಕಮ್ಮನೆ ಆದಳು. ಹಾಡಿನ ಹೆಳವರು ಬದುಕಿನ ಭಾಗಿರಥಿಯಲ್ಲಿ ತೇಲುವ ತೆಮರು ಪಡೆದರು, ಸರೋಜಿನಿ ನಾಯ್ಡು ಮತ್ತೊಮ್ಮೆ ಭಾರತದ ಕೋಗಿಲೆಯಾಗಿ ಹಾಡಿ ಹರಿಸಿದಳು." ಇದು ಮರುಳಯ್ಯನವರ ಬರವಣಿಗೆಯ ಮಾದರಿ.

ಡಾ।। ತಿಪ್ಪೇರುದ್ರ ಸ್ವಾಮಿಯವರ ಅಭಿನಂದನ ಗ್ರಂಥಕ್ಕಾಗಿ ಬರೆದ ಲೇಖನವೇ 'ಶರಣ ಸಾಹಿತಿ'. ಗುರು, ದೈವ, ಧರ್ಮ ಈ ಮೂರದಿಂದ ತಮ್ಮಾತ್ಮನನ್ನು ಬೆಳಗಿಸಿಕೊಂಡ ಶ್ರೀ ಸ್ವಾಮಿಯವರು, ಡಾಕ್ಟರು, ಪ್ರೊಫೆಸರು, ಪ್ರಶಸ್ತಿ ವಿಜೇತ ಪ್ರಸಿದ್ಧರು ಏನು ಆಗಿರಲಿಲ್ಲ. ಆದರೆ ಒಳ್ಳೆಯ ಮೇಷ್ಟರಾಗಿದ್ದರು," ಶ್ರೀ ಸ್ವಾಮಿಯವರ ವ್ಯಕ್ತಿ ಚಿತ್ರಣಕ್ಕೆ ಸಾಶಿಮ ಅವರ ಈ ಮೇಲಿನ ವಾಕ್ಯವೊಂದೆ ಸಾಕು. ಅವರ ಸಂಪೂರ್ಣ ಸ್ವಾರ್ಥರಹಿತ ಬದುಕಿಗೆ. ಈ ಮುಂದಿನ ಸಾಶಿಮ ಅವರ ನುಡಿ ಅರ್ಥಗರ್ಭತೆಗೆ ಸಾಕ್ಷಿ ನೀಡಿದೆ. ಶ್ರೀ ಸ್ವಾಮಿಯವರದು ಹೊಗೆ ಇಲ್ಲದ ನಗೆ, ಮರುಳಯ್ಯನವರು ಸ್ವಾಮಿಯವರ ಜೊತೆ ನಡೆದ ಒಡನಾಟದ ನೆನಪುಗಳನ್ನು ಮೆಲಕು ಹಾಕುತ್ತಲೇ ಅವರೊಡನೆ ತಾವು ಕಳೆದ ಸಾಹಿತ್ಯಾರಾಧನೆಯ ದಿನಗಳನ್ನು ಸ್ಮರಿಸುತ್ತಾರೆ.

'ಕಾಫಿಯಲ್ಲೂ ಕನ್ನಡ ಬೆರಸಿದರು' ಶ್ರೀ ಎಂ.ಜೆ. ಕೋದಂಡರಾಮಶೆಟ್ಟಿ ಅವರ ಬಗ್ಗೆ ಬರೆದ ಲೇಖನ. ಸಾಹಿತ್ಯ ಬದುಕುವುದು ಸಾಹಿತ್ಯ ಪ್ರೇಮಿಗಳಿಂದ. ಶ್ರೀ ಶೆಟ್ಟರು ಅಪಾರ ಸಾಹಿತ್ಯ ಪ್ರೇಮಿಗಳಾಗಿದ್ದರೆಂಬುದಕ್ಕೆ ಚಿಕ್ಕ ಮಗಳೂರಿನ ಉತ್ಸಾಹಿ ತರುಣರ ಸಾಹಿತ್ಯ ಸಮಾರಂಭವೊಂದು ಆರ್ಥಿಕ ಮುಗ್ಗಟ್ಟಿನಿಂದ ನಿಂತಾಗ ಶೆಟ್ಟರು ಆ ತರುಣರಿಗೆ ಸ್ಥಳದಲ್ಲಿಯೇ ೧೦೦೦ ರೂ.ಗಳನ್ನು ನೀಡಿ ನಿಂತ ಸಮಾರಂಭಕ್ಕೆ ಚಾಲನೆ ಕೊಟ್ಟಿದ್ದೆ ಸಾಕ್ಷಿ. ಶ್ರೀ ಶೆಟ್ಟರು ಹಲವು ಹತ್ತು ಪ್ರೀತಿ ಪ್ರಶಂಸೆಗಳ ಸಾಕಾರ ಮೂರ್ತಿ. ಶೆಟ್ಟರ ವಿವಿಧ ಸೇವೆಗೆ ನೂರು ಕೈಗಳು, ಸಾವಿರ ತೋಳುಗಳು ಎಂದು ಸಾಶಿಮ ಕೊಂಡಾಡಿದ್ದಾರೆ.

'ಯಾರಿವನು' ಗೊ.ರು. ಚನ್ನಬಸಪ್ಪನವರನ್ನು ಕುರಿತದ್ದು. ಪ್ರಸ್ತುತ ಲೇಖನದಲ್ಲಿ ಶ್ರೀ ಗೋ.ರು.ಚ. ಅವರ ಭೌತಿಕ ಮತ್ತು ಅಂತರಂಗದ ವ್ಯಕ್ತಿಚಿತ್ರಣ ಚಿಕ್ಕ ಹರವಿನಲ್ಲಿ ಚೊಕ್ಕವಾಗಿ ಮೂಡಿಸಿದ್ದಾರೆ. 'ಆತ್ಮೀಯ' ಕಾದಂಬರಿಕಾರರಾದ ಎಸ್.ವಿ. ಶ್ರೀನಿವಾಸರಾಯರ ಬಗ್ಗೆ ಬರೆದದ್ದು. ಸಾಹಿತ್ಯ ಪರಿಷತ್ತಿನಲ್ಲಿ ಲೇಖಕರು ಮತ್ತು ಶ್ರೀನಿವಾಸರಾಯರು ಒಟ್ಟಿಗೆ ಕೆಲಸ ಮಾಡುತ್ತಿದ್ದಾಗ ಶ್ರೀನಿವಾಸರಾಯರು ತೋರಿದ ಅಪಾರ ಪ್ರೇಮದಿಂದಾಗಿ ಇಬ್ಬರ ಸಖ್ಯ ಬೆಳದಿರುವುದನ್ನು ನೆನಪಿಸಿ ಕೊಂಡಿದ್ದಾರೆ.

ಸಂಗೀತ ವಿದುಷಿ ಬಿ.ಎಸ್. ಚಂದ್ರಕಲಾ ಅವರ ಪರಿಚಯ 'ಸಂಗೀತ ರತ್ನ'. ಬಾಳಿನಲ್ಲಿ ಉಂಡ ಕಹಿಯನ್ನು ಲೆಕ್ಕಿಸದೆ ಸಾಹಿತ್ಯ ಸಂಗೀತಗಳೆರಡಲ್ಲೂ ಪ್ರಸಿದ್ಧಿ ಪಡೆದು, ನೂತನ ರಾಗಗಳ ಸೃಷ್ಟಿಕರ್ತೆಯಾದ ಚಂದ್ರಕಲಾ ಅವರ ವ್ಯಕ್ತಿ ಚಿತ್ರಣ ಸುಂದರವಾಗಿ ಮೂಡಿ ಬಂದಿದೆ. 'ನೆನೆಯ ಬಲ್ಲೆ ಮರೆಯಲಾರೆ' ಬಳ್ಳಿಗಾವೆಯ ಮಾರ್ಗದರ್ಶಿ, ಸಾಹಿತಿ ಸಂಶೋಧಕ, ಅಪ್ಪಟ ಗಾಂಧಿವಾದಿ ಶ್ರೀ ಎಸ್. ಭೀಮಪ್ಪ ಮಾಸ್ತರನ್ನು ಕುರಿತು ಬರೆದ ಲೇಖನ. ಲೇಖಕರಿಗೆ ಮಾಸ್ತರರೊಡನೆ ಒಡಹುಟ್ಟಿದ ಅಣ್ಣನಷ್ಟೇ ಸಖ್ಯ. ಸ್ವ ಅಧ್ಯಯನದಿಂದ ಪಾಂಡಿತ್ಯ ಗಳಿಸಿ ಅನೇಕ ಸಂಶೋಧಕರಿಗೆ ಆಕರ ಗ್ರಂಥವಾಗಿ, ಶಿಲೆ, ಶಾಸನ, ಐತಿಹ್ಯಗಳ ಬಗ್ಗೆ ಅಧಿಕಾರಯುತವಾದ ತಮ್ಮದೇ ಆದ ಶೈಲಿಯಲ್ಲಿ ಮಾತನಾಡುವ ಅವರ ಸಾಮರ್ಥ್ಯವನ್ನು ಸಾಶಿಮ ಅವರು ಮುಕ್ತ ಕಂಠದಿಂದ ಪ್ರಶಂಸಿದ್ದಾರೆ.

'ತಿಪಟೂರು ತಿಂಗಳ ಮಾಮ' ಅಕಸ್ಮಾತ್ ಬಸ್ಸಿನಲ್ಲಿ ಪರಿಚಯವಾದ ಸ್ನೇಹ

ಆತ್ಮೀಯಕ್ಕೆ ತಿರುಗಿ, ಆತಿಥ್ಯ ಪಡೆದ ಪ್ರಭಾವದಿಂದಾಗಿ ಹುಟ್ಟಿದ ಲೇಖನ. ಚಿಕ್ಕನಾಯಕನಹಳ್ಳಿ ಅಮಲ್ದಾರರಾಗಿ ಬಿಡುವಿನ ವೇಳೆಯಲ್ಲಿ ಸಾಹಿತ್ಯ ಸೃಷ್ಟಿಯನ್ನು ಮಾಡಿದ ಶ್ರೀ ಟಿ.ಎಸ್. ಮಹಾದೇವಯ್ಯನವರನ್ನು ಪ್ರೀತಿಯಿಂದ ನೆನೆದಿದ್ದಾರೆ.

'ಮಲೆನಾಡಿನಲ್ಲಿ ಮರ್ಯಾದೆ' ೧೯೭೧ ರಲ್ಲಿ ಶಿವಮೊಗ್ಗ ಜಿಲ್ಲೆ ಕನ್ನಡ ಸಾಹಿತ್ಯ ಪರಿಷತ್ತಿನವರು ಹೊರತಂದ ಅವಲೋಕನಕ್ಕಾಗಿ ಸಿದ್ಧಪಡಿಸಿದ ಲೇಖನ. ಶ್ರೀ ಮರುಳಯ್ಯನವರು ಸುಮಾರು ೯ ವರ್ಷ ಶಿವಮೊಗ್ಗದಲ್ಲಿದ್ದಾಗ ಸಹಜ ಸ್ನೇಹ ಜೀವಿಯಾದ ಸಾಹಿಮ ಸುತ್ತ ಮುತ್ತಲಿನ ಅನೇಕ ಪ್ರದೇಶಗಳ ಜೊತೆ ನಿಕಟ ಸಂಪರ್ಕ ಇಟ್ಟುಕೊಂಡಿದ್ದರು. ತಮ್ಮ ಸಂಶೋಧನೆಗಾಗಿ ಮಲೆನಾಡಿನ ತಾಲ್ಲೂಕುಗಳಿಂದ ಸೊರಬ, ಸಾಗರ, ಹೊಸನಗರ, ತೀರ್ಥಹಳ್ಳಿ ನೆಲದಲ್ಲಿ ಹೆಜ್ಜೆ ಮೂಡಿಸಿದರು. ಆ ಸಂದರ್ಭದಲ್ಲಿ ಅವರನ್ನು ಆತ್ಮೀಯವಾಗಿ ಕಂಡು, ಆತಿಥ್ಯ ನೀಡಿ, ತಮ್ಮಿಂದಾದ ಸಹಾಯ ಮಾಡಿ, ಉತ್ತೇಜನ ನೀಡಿದ ಮಲೆನಾಡಿನವರ ಆತಿಥ್ಯವನ್ನು ಮರುಳಯ್ಯನವರು ಎಂದಿಗೂ ಮರೆಯಲಾರರು. ಇಲ್ಲಿ ಅವರು ಪಡೆದ ಆತಿಥ್ಯ ಸ್ವಂತ ಮಾವನ ಮನೆಯಲ್ಲಿ ಸಿಕ್ಕಿಲ್ಲವಂತೆ.

೧೯೮೫ ರಲ್ಲಿ ಮರುಳಯ್ಯನವರು ಮದ್ರಾಸಿನಲ್ಲಿ ಕನ್ನಡದ ವರನಟ ಡಾ|| ರಾಜ್‌ಕುಮಾರ್‌ರವರನ್ನು ಸಾಹಿತ್ಯ ಕಾರ್ಯಕ್ಕಾಗಿ ಭೇಟಿಯಾಗಿದ್ದರು. ಅವರ ಬಾರೊ ಮೈಲಾರಕೆ, ಕ್ಯಾಸೆಟ್ ಹಾಡಿದವರು ಡಾ|| ರಾಜ್. ಇದರ ಸಿದ್ಧತೆಗೆ ಮಾತನಾಡಿದ ವಿವರಗಳನ್ನು ಲೇಖಕರು ವಿವರಿಸಿ, ರಾಜ್‌ಕುಮಾರ್ ಹೃದಯ ಶ್ರೀಮಂತಿಕೆ ಕಲಾ ಸಾರ್ವಭೌಮತ್ವಗಳನ್ನು ಸ್ವತಃ ಅನುಭವಿಸಿ ವಿಸ್ತರಿಸಿದ್ದಾರೆ. 'ಇದು ಜಾತಿ ಕುದುರೆ'ಯಲ್ಲಿ ನಟ ವಿಷ್ಣುವರ್ಧನ್ ಜೊತೆ ಡಾ|| ವಿಜಯ ನಡೆಸಿದ ಸಂದರ್ಶನದ ವಿವರಗಳನ್ನು ಸಂಗ್ರಹಿಸಿದ್ದಾರೆ. ಸಂದರ್ಶನದ ಜೊತೆಗೆ ಅವರ ಪತ್ನಿ ಭಾರತಿಯವರ ಸೇರಿಕೊಂಡರು. ಅವರ ಜೊತೆ ಸಂಭಾಷಿಸಿದ್ದೇ 'ಅಭಿನೇತ್ರಿ' ಲೇಖನ.

'ಎಲೆ ಮರೆಯ ಹೂ' ಸೌಜನ್ಯಶೀಲ ಐ.ಎ.ಎಸ್. ಅಧಿಕಾರಿ ಶ್ರೀ ಸಿ.ವಿ. ಜಮಖಂಡಿಮಠ ಅವರನ್ನು ಕುರಿತದ್ದು. ಶ್ರೀ ಮಠರವರ ಜೀವನದ ಪ್ರಮುಖ ಭಾಗಗಳನ್ನು ಗುರುತಿಸುತ್ತಾ ಅವರಲ್ಲಿರುವ ಸರಳ ಸಜ್ಜನಿಕೆಯ ವ್ಯಕ್ತಿತ್ವಕ್ಕೆ ಲೇಖಕರು ಮಾರುಹೋಗಿದ್ದಾರೆ. 'ಡಾ|| ಮೂರ್ತಿ ನಾನು ಕಂಡಂತೆ' ಡಾ|| ಎಂ. ಚಿದಾನಂದ ಮೂರ್ತಿಯವರ ಅಭಿನಂದನ ಗ್ರಂಥ 'ಸಂಶೋಧನೆ'ಗಾಗಿ ಸಿದ್ಧಪಡಿಸಿದ ಲೇಖನ. ಸಂಶೋಧನಾ ಪ್ರಪಂಚಕ್ಕೆ ಸವಾಲು ಎಸೆಯುವ ಮೂರ್ತಿ ಅವರ, 'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ' ಕೃತಿ ಅವರ ಅಪಾರ ಪಾಂಡಿತ್ಯ ಆಳ ಪರಿಶ್ರಮಗಳ ಹೆಮ್ಮೆಯ ಕಾಣಿಕೆ. ಬಹುಮಟ್ಟಿಗೆ, ಕನ್ನಡ ಸಾಹಿತ್ಯ ಲೋಕದಲ್ಲಿ ಬಂದ ಸಂಶೋಧನಾ ಕೃತಿಗಳೆಲ್ಲ ಹೆಚ್ಚು ತೂಕ ವಿದ್ವತ್ ಪೂರ್ಣ ಸಂಶೋಧನೆ ಎಂದರೆ, ಮೂರ್ತಿಯವರದೆ, ಡಾ|| ಮೂರ್ತಿ ಅವರು ಖಂಡಿತವಾಗಿಯೂ ಪ್ರಾಮಾಣಿಕ ವ್ಯಕ್ತಿ, ನಿಷ್ಠುರತೆಗೆ ಹೆಸರಾದರು, ದಾಕ್ಷಿಣ್ಯಪರರಲ್ಲ, ಶಕ್ತಿ ಕೇಂದ್ರದ ಕೇಂದ್ರವ್ಯಕ್ತಿಯಾಗಿ ಅವರಡಿಯಲ್ಲಿ ಮೂರ್ತಿ ನಡೆಸಿದ ಚಳುವಳಿ ಕನ್ನಡ ಪರ ಕನ್ನಡಿಗರ ಅಸ್ತಿತ್ವಕ್ಕೆ ಭವ್ಯ ಬುನಾದಿಯಾಯಿತು. ಕನ್ನಡಿಗರ ಮನವನ್ನು ಗೆದ್ದು ಕನ್ನಡದ ನೆಲದ ಮಾನವನ್ನು ಉಳಿಸಿದರು. ಕನ್ನಡಕ್ಕೆ ಸಾರ್ವಕಾಲ ಉಳಿಯುವ ಕೃತಿಗಳನ್ನು ನೀಡಿ ಕನ್ನಡಿಗರ ಹೃದಯ

ಸಿಂಹಾಸನದಲ್ಲಿ ಶಾಶ್ವತ ಸ್ಥಾನ ಪಡೆದ ಅವರ ಬಹುಮುಖ ಸಾಧನೆಗಳನ್ನು ಮರುಳಯ್ಯನವರು ಕೊಂಡಾಡಿದ್ದಾರೆ. ಕಾಯಕಯೋಗಿ ಕನ್ನಡದಲ್ಲಿ ಐ.ಎ.ಎಸ್. ಪಾಸು ಮಾಡಿದ ಶ್ರೀ ಕೆ. ಶಿವರಾಮ್ ಅವರ ಕನ್ನಡ ಪ್ರೇಮವನ್ನು ಮರುಳಯ್ಯನವರು ಓದುಗರೊಡನೆ ಹಂಚಿಕೊಂಡ ಅನುಭವ. ಹಾಸ್ಯ ಸಾಹಿತಿ ನಾಡಿಗೇರ ಕೃಷ್ಣರಾಯರನ್ನು ಕುರಿತು ಬರೆದ ಲೇಖನವೇ 'ನಗೆ ರಾಜ್ಯದ ನಾಡಿಗೇರ'. ಇದರಲ್ಲಿ ಲೇಖಕರು ನಾಡಿಗೇರರ ನಗೆ ಸಾಮ್ರಾಜ್ಯದ ಅನೇಕ ಹಾಸ್ಯ ಪ್ರಸಂಗಗಳನ್ನು ಉಲ್ಲೇಖಿಸಿದ್ದಾರೆ. 'ವೀರಣ್ಣ ಅಲ್ಲ ಧೀರಣ್ಣ' ಗುಬ್ಬಿ ವೀರಣ್ಣನವರ ಶತಾಬ್ಧಿ ಸಮಾರಂಭದಲ್ಲಿ ಮರುಳಯ್ಯನವರು ಮಾಡಿದ ಭಾಷಣದ ಸಾರಾಂಶ.

ಹೀಗೆ ಒಟ್ಟು ೨೯ ಮಹನೀಯರ ವ್ಯಕ್ತಿತ್ವ ಮತ್ತು ಅವರ ಸಾಧನೆಗಳು ಓದುಗರಿಗೆ ನೀಡಿದ ಈ ಕೃತಿ ಎಲ್ಲಿಯೂ ಬೇಸರವಾಗದಂತೆ ಓದಿಸಿಕೊಂಡು ಹೋಗುತ್ತದೆ. ಲೇಖಕರು ಮಹನೀಯರ ವ್ಯಕ್ತಿಚಿತ್ರಣವನ್ನು ಕಟ್ಟಿಕೊಡುವಾಗ ನೀಡಿದ ತಲೆಬರಹದ ಚೌಕಟ್ಟುಗಳೇ ಒಂದು ಕಾವ್ಯದಂತಿದೆ. ಈ ವ್ಯಕ್ತಿ ಚಿತ್ರಣಗಳಲ್ಲಿ ಇತಿಹಾಸ ಹಾಸುಹೊಕ್ಕಾಗಿ ಮೂಡಿಬಂದಿದೆ. ಲೇಖಕರ ತಮ್ಮ ಅತ್ಯುತ್ತಮ ಗದ್ಯ ಶೈಲಿ ಓದುಗರ ಮನಸ್ಸನ್ನು ಸೆರೆಹಿಡಿಯುವುದರಲ್ಲಿ ಹದಿನಾರಾಣೆ ಯಶಸ್ಸು ಪಡೆದಿದೆ. ಇಲ್ಲಿನ ಒಂದೊಂದು ವ್ಯಕಿಚಿತ್ರಣವು ಸಣ್ಣ ಕಥೆಗಳಾಗಿ ಓದುಗರ ಮನದಾಳಕ್ಕೆ ಇಳಿಯುತ್ತವೆ. ಒಟ್ಟಿನಲ್ಲಿ 'ಆತ್ಮೀಯವು' ಓದುಗರ ಆತ್ಮವನ್ನು ತಟ್ಟುತ್ತದೆ.

ಡಾ॥ ಸಾ.ಶಿ. ಮರುಳಯ್ಯನವರ ಎರಡು ಗದ್ಯ ಗ್ರಂಥಗಳು

ಪ್ರೊ. ಡಿ. ಲಿಂಗಯ್ಯ

ಕರ್ನಾಟಕದ ಸುಪ್ರಸಿದ್ಧ ಸಾಹಿತಿಗಳೂ ವರ್ಣರಂಜಿತ ವಾಗ್ಮಿಗಳೂ ಆದ ಡಾ॥ ಸಾಸಲು ಶಿವರುದ್ರಯ್ಯ ಮರುಳಯ್ಯನವರು ತಮ್ಮ ದೀರ್ಘಕಾಲದ ದುಡಿಮೆಯಿಂದ ನಾಡಿನ ಮನೆಮಾತಾಗಿದ್ದಾರೆ. ಉನ್ನತ ಶಿಕ್ಷಣ ಪಡೆದಿರುವ ಶ್ರೀಯುತರು ಕನ್ನಡ ಪ್ರಾಧ್ಯಾಪಕರಾಗಿ, ವಿವಿಧ ಸಾಂಸ್ಕೃತಿಕ ಸಂಸ್ಥೆಗಳ ಪದಾಧಿಕಾರಿಯಾಗಿ ಹೆಸರಾಗಿದ್ದಾರೆ. ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರೆದು, ಪ್ರಕಟಿಸಿ, ಕನ್ನಡ ಸಾಹಿತ್ಯ ಸಮೃದ್ಧವಾಗಲು ಕಾರಣರಾಗಿದ್ದಾರೆ. ಅವರ ಬರವಣಿಗೆಯಲ್ಲಿ ಕಾವ್ಯ, ನಾಟಕ, ವಿಮರ್ಶೆ, ವ್ಯಕ್ತಿ ಚಿತ್ರ, ಸಂಶೋಧನೆ, ಸಂಪಾದನೆ ಮೊದಲಾದ ಸಾಹಿತ್ಯ ಸಂಕುಲವಿದೆ. ಸುಸಂಸ್ಕೃತ ಚಿಂತನೆ, ಸುಲಲಿತ ಶಬ್ದ ಸಂಯೋಜನೆ, ಸುಪುಷ್ಟ ಭಾಷಾಶೈಲಿ, ಸಹೃದಯ ಸಂವಾದ, ಸರಾಗ ಪಡೆನುಡಿ, ಪರಿಕಲ್ಪನೆ ಮೊದಲಾದ ಸಾಹಿತ್ಯ ಪರಿಕರಗಳು ಅವರ ಬರವಣಿಗೆಯಲ್ಲಿ ಹಿತಮಿತವಾಗಿ ಜೋಡಣೆಯಾಗಿ ಆಕರ್ಷಕ ಸಾಹಿತ್ಯಕ ಪರಿಸರವನ್ನು ಸೃಷ್ಟಿ ಮಾಡಿ ಓದುಗರ ಮನಸ್ಸನ್ನು ಸೂಜಿಗಲ್ಲಿನಂತೆ ಸೆಳೆಯುತ್ತವೆ. ವಾಕ್ ಜಾಲದಲ್ಲಾಗಲೀ ಸಾಹಿತ್ಯ ಸಂಮೋಹಕತೆಯಲ್ಲಾಗಲೀ ಡಾ॥ ಮರುಳಯ್ಯನವರು ನಿರರ್ಗಳವಾಗಿ ವ್ಯವಹರಿಸುತ್ತಾರೆ. ಮಾತಿನ ಮೋಡಿಯಲ್ಲಿ ಗುಡ್ಡವನ್ನು ಬೆಟ್ಟಮಾಡಬಲ್ಲರು. ಎಳೆಯನ್ನು ಹಗ್ಗಮಾಡಬಲ್ಲರು. ದುರ್ಬಲ ಸಾಧನದಲ್ಲಿ ಸುದೀರ್ಘವಾಗಿ ನಡೆಯಬಲ್ಲರು. ವಿಷಯ ಅಲ್ಪವಾಗಿದ್ದರೂ ಅದನ್ನೇ ಕಲ್ಪ ಮಾಡಬಲ್ಲರು. ಅದು ಅವರ ಹೆಚ್ಚುಗಾರಿಕೆ. ಅದರಿಂದ ಅವರು ಗೆಲ್ಲುವುದೂ ಉಂಟು, ಸೋಲುವುದೂ ಉಂಟು. ಆದರೆ ಎಲ್ಲೂ ಸಂಸ್ಕೃತಿಯ ಹೆದ್ದಾರಿ ಮರೆತು ಅಡ್ಡ ಹಾದಿಗೆ ತಿರುಗುವುದಿಲ್ಲ.

ಡಾ॥ ಮರುಳಯ್ಯನವರ ವಿಪುಲವಾದ ಗದ್ಯ ಬರಹಗಳಲ್ಲಿ ಅವರ ವ್ಯಕ್ತಿಚಿತ್ರ ಹಾಗೂ ಸಾಹಿತ್ಯ ಸಮೀಕ್ಷೆಯ ಗ್ರಂಥಗಳು ವಿಶೇಷವಾಗಿ ಗಮನ ಸೆಳೆಯುತ್ತವೆ. ಇವುಗಳಲ್ಲಿ ಶ್ರೀಯುತರ ಸಾಹಿತ್ಯ ಅಧ್ಯಯನದ ಹರಹು, ಆಳ, ಚಿಂತನ ವಿಧಾನ, ಆಕರ್ಷಕ ಅಭಿವ್ಯಕ್ತಿ, ದಟ್ಟ ಲೋಕಾನುಭವ, ಗುಣೌಚಿತ್ಯ, ನಾಡುನುಡಿ ಸಂಸ್ಕೃತಿಯ ಕಳಕಳಿ, ಸಾರ್ಥಕ ಬದುಕಿನ ಸದಾಶಯ, ಸಮಕಾಲೀನ ಹಿರಿಯ ಕಿರಿಯರ ಒಡನಾಟ, ಪರಂಪರೆಯ ಸ್ವೀಕಾರ, ಪರಸ್ಪರ ಸಂತೋಷಿಸುವ ಸಂದರ್ಭ ಸೃಷ್ಟಿ, ಶುಭಭವಿಷ್ಯದ ದೃಷ್ಟಿ, ಕಿರಿಯದರಲ್ಲೂ ಹಿರಿಯದನ್ನು ಗುರುತಿಸುವ ವಿಶಾಲ ವಿವೇಚನೆ ಮೊದಲಾದ ಸದ್ವಿವೇಕ ಅಂಶಗಳು ಎದ್ದು ಕಾಣುತ್ತವೆ. ಡಾ॥ ಮರುಳಯ್ಯನವರ ಎರಡು ಗದ್ಯ ಗ್ರಂಥಗಳ ಸಮೀಕ್ಷೆ ಈ ಲೇಖನದ ಉದ್ದೇಶ.

ಆತ್ಮೀಯ

ಡಾ॥ ಸಾ.ಶಿ. ಮರುಳಯ್ಯನವರ 'ಆತ್ಮೀಯ' ಎಂಬ ಗ್ರಂಥದಲ್ಲಿ ಇಪ್ಪತ್ತೊಂಬತ್ತು ವ್ಯಕ್ತಿಚಿತ್ರಗಳಿವೆ. ಸ್ಥೂಲಾರ್ಥದಲ್ಲಿ ವ್ಯಕ್ತಿಚಿತ್ರಗಳೆಂದರೂ ಬಹಳಷ್ಟು ಲೇಖನಗಳಲ್ಲಿ ವಿಮರ್ಶಾಂಶಗಳು ಮೇಳೈಸಿವೆ. ಆ ವಿಮರ್ಶೆಗಳೂ ಕಾವ್ಯ ಮೀಮಾಂಸೆಯ ಗುಂಪಿಗೆ ಸೇರುವಂಥವು. ತಮ್ಮ ಬರಹಗಳ ಬಗೆಗೆ ಲೇಖಕರು ಹೀಗೆ ಮುನ್ನುಡಿದಿದ್ದಾರೆ: "ನೋಡುವುದಕ್ಕೂ ಕಾಣುವುದಕ್ಕೂ ಅರ್ಥದಲ್ಲಿ ವ್ಯತ್ಯಾಸ ಇದೆ. ನೋಡುವುದು ಎಂದರೆ ಸುಮ್ಮನೆ ಬಹಿರಂಗದ ಕಣ್ ತೆರೆದು ನೋಡುವುದು. ಕಾಣುವುದು ಹಾಗಲ್ಲ. ಅದು ಅಂತರಂಗದ ದರ್ಶನ. ಒಳಗಿನೊಳಗನ್ನು ಗುರುತಿಸುವುದು. ನಾನಿಲ್ಲಿ ವ್ಯಕ್ತಿಗಳನ್ನು ಕಂಡಿದ್ದೇನೆ, ನೋಡಿಲ್ಲ. ಎಲ್ಲರೂ ಒಂದರ್ಥದಲ್ಲಿ ನನಗೆ ಗುರುಗಳು, ಮಾರ್ಗದರ್ಶಕರು" ಲೇಖಕರು, ನೋಡು ಮತ್ತು ಕಾಣು ಶಬ್ದಗಳಿಗೆ ವಿಭಿನ್ನಾರ್ಥ ತುಂಬಿ, ಆ ಪರಿಕಲ್ಪನೆಯಲ್ಲೇ ವಿಶಿಷ್ಟ ಧ್ವನಿ ಹೊರಡಿಸಲು ಪ್ರಯತ್ನಿಸಿದ್ದಾರೆ. ಇಂಥ ಶಬ್ದ ಚಮತ್ಕಾರ, ಶಬ್ದ ಗಾರುಡಿಗತನ ಲೇಖಕರಿಗೆ ಬಹಳ ಇಷ್ಟ. ಇದಕ್ಕೆ ಬಹುಶಃ ವರಕವಿ ದ.ರಾ. ಬೇಂದ್ರೆಯವರ ಪ್ರಭಾವವಿರಬಹುದು. ಡಾ॥ ಮರುಳಯ್ಯನವರ ವ್ಯಕ್ತಿ ಚಿತ್ರಗಳು ಡಾ॥ ಡಿ.ವಿ. ಗುಂಡಪ್ಪನವರ ವ್ಯಕ್ತಿಚಿತ್ರಗಳನ್ನು ಹೆಚ್ಚಾಗಿ ಹೋಲುತ್ತದೆ.

ಪ್ರಸ್ತುತ 'ಆತ್ಮೀಯ' ಗ್ರಂಥದ ವ್ಯಕ್ತಿ ಚಿತ್ರಗಳಲ್ಲಿ ಸಾಹಿತಿಗಳು, ಸಾಹಿತ್ಯೇತರರು ಸೇರಿದ್ದಾರೆ. ಎಲ್ಲಾ ಲೇಖನಗಳಲ್ಲೂ ನೇರವಾದ ಆತ್ಮೀಯವಾದ ಲೇಖಕರ ಪ್ರವೇಶವಿದೆ. ಈ ಲೇಖನಗಳ ಸಂದರ್ಭದಲ್ಲಿ ಲೇಖಕರೂ ಪಾತ್ರಧಾರಿಗಳಾಗಿರುವುದರಿಂದ, ಇವುಗಳಲ್ಲಿ ಮೃದು ಮಧುರವಾದ ಆತ್ಮೀಯ ಸ್ಪರ್ಶ ಪ್ರಧಾನವಾಗಿದೆ. ಎಲ್ಲಾ ಲೇಖನಗಳಲ್ಲೂ ಗುಣಗಾನ ಪ್ರವೃತ್ತಿ ಹೆಚ್ಚು. 'ಯಾರಲ್ಲೇ ಆಗಲಿ ಗುಣವನ್ನು ಗ್ರಹಿಸಿ ಮೆಚ್ಚುವುದು ನನಗೆ ಗೊತ್ತು' ಎಂದು ಲೇಖಕರೇ ಹೇಳಿಕೊಂಡಿದ್ದಾರೆ. ಇದು ಡಾ॥ ಮರುಳಯ್ಯನವರ ರೀತಿ. ಸಾಮಾನ್ಯವಾಗಿ ಲೇಖನಗಳಲ್ಲಿ ನಿರ್ದಿಷ್ಟ ವ್ಯಕ್ತಿಯ ಜೀವನ ಚರಿತ್ರೆಗೆ ಸಂಬಂಧಿಸಿದ ಕೆಲವು ಮಾಹಿತಿಗಳಿರುತ್ತವೆ. ಸಾಹಿತಿಗಳಾದರೆ ಅವರ ಸಾಹಿತ್ಯಕೃಷಿಯ ವಿವರಣಾತ್ಮಕ ಮೀಮಾಂಸೆ ಇರುತ್ತದೆ. ಸಾಹಿತ್ಯೇತರರಾದರೆ ಅವರ ಬದುಕಿನ ಸಾಧನೆಯ ಪರಿಚಯವಿರುತ್ತದೆ. ಡಾ॥ ಮರುಳಯ್ಯನವರಿಗೆ ಮೀಸಲಾದ ವಿಶಿಷ್ಟ ಶೈಲಿ, ನಾಟಕೀಯ ಸಂಭಾಷಣೆ, ಕಥನಾತ್ಮಕ ಪ್ರವೇಶಗಳಿಂದ ಲೇಖನಗಳು ಸುಲಲಿತವಾಗಿ ಓದಿಸಿಕೊಳ್ಳುತ್ತವೆ.

1991ರಲ್ಲಿ ಪ್ರಕಟವಾದ 'ಆತ್ಮೀಯ' ಶೀರ್ಷಿಕೆಯ ಪುಸ್ತಕದಲ್ಲಿ ಇದೇ ಹೆಸರಿನ ಒಂದು ಲೇಖನವೂ ಇದೆ. ಎಲ್ಲ ಲೇಖನಗಳಲ್ಲೂ ಲೇಖಕರ ಆತ್ಮೀಯ ನೋಟವಿದೆ. ಹಾಗಾಗಿ ಈ ಗ್ರಂಥ ಶೀರ್ಷಿಕೆ ಅನ್ವರ್ಥವಾಗಿದೆ ಎಂದೇ ಹೇಳಬಹುದು. ಡಾ॥ ಮರುಳಯ್ಯನವರು, ಲೇಖನಗಳಲ್ಲಿ ವ್ಯಕ್ತಿಯ ಹೆಸರನ್ನು ಶೀರ್ಷಿಕೆಗೆ ಬಳಸದೆ. ಆಯಾ ವ್ಯಕ್ತಿಗಳಿಗೆ ಹೊಂದಿಕೊಳ್ಳುವ, ಆಯಾ ಸಂದರ್ಭಗಳಿಗೆ ಸ್ಪಂದಿಸುವ ಆಕರ್ಷಕ ಶೀಷಿಕೆಗಳನ್ನು ಉಪಯೋಗಿಸಿದ್ದಾರೆ. ನಿರ್ದಿಷ್ಟ ಸಭೆ ಸಮಾರಂಭಗಳಿಗೆ, ಅಭಿನಂದನ ಗ್ರಂಥಗಳಿಗೆ, ಸಂಸ್ಮರಣ ಸಂಚಿಕೆಗಳಿಗೆ ಬರೆದ ಲೇಖನಗಳಾದುದರಿಂದ ಪ್ರಶಂಸಾಗುಣ ಮಿಗಿಲಾಗಿದೆ.

ಡಾ|| ಮರುಳಯ್ಯನವರು ಉತ್ತಮ ಸಾಹಿತಿಗಳಾಗಿರುವಂತೆ ಉತ್ತಮ ವಾಗ್ಮಿಗಳೂ ಆಗಿದ್ದಾರೆ. ಎಲ್ಲಾ ಲೇಖನಗಳಲ್ಲೂ ಅವರ ವಾಗ್ವಿಲಾಸ ಮೆರೆದಿದೆ. ಡಾ|| ಮರುಳಯ್ಯನವರು ಪ್ರಧಾನವಾಗಿ ಕವಿ. ಅವರ ಗದ್ಯ ಬರಹಗಳಲ್ಲೂ ಕಾವ್ಯಮಯತೆ ಧಾರಾಳವಾಗಿ ಕಾಣುತ್ತದೆ. ಪ್ರಾಸಬದ್ಧವಾದ, ಸೂತ್ರಪ್ರಾಯವಾದ, ಸೂಕ್ತಿಮಯವಾದ ಶಬ್ದ ಸಂಚಲನದ ಸಾಲುಗಳು ಹೇರಳವಾಗಿ ದೊರೆಯುತ್ತದೆ. ಅವರ ಉಪನ್ಯಾಸಗಳಲ್ಲಿ ಕಂಡುಬರುವಂತೆಯೇ ಅವರ ಗದ್ಯ ಬರಹಗಳಲ್ಲೂ ಶಬ್ದಗಾರುಡಿಗತನ ಮಿಂಚುತ್ತದೆ. ಡಾ|| ಮರುಳಯ್ಯನವರ ಗದ್ಯ ಶೈಲಿಯನ್ನು ಪುಳಕಗೊಳಿಸುವ ಪುಷ್ಪಶೈಲಿಯೆಂದು ಕರೆಯಬಹುದು.

'ಆತ್ಮೀಯ' ಹೊತ್ತಿಗೆಯಲ್ಲಿ ಕುವೆಂಪು, ಬೇಂದ್ರೆ, ಡಿ.ಎಲ್. ನರಸಿಂಹಾಚಾರ್, ಸಂ.ಶಿ. ಭೂಸನೂರಮಠ, ಡಿ.ಎಸ್. ಕರ್ಕಿ, ಸಿದ್ಧಯ್ಯ ಪುರಾಣಿಕ, ಆರ್.ಸಿ. ಹಿರೇಮಠ, ಜಿ. ನಾರಾಯಣ, ಹಂಪ ನಾಗರಾಜಯ್ಯ, ದೇ. ಜವರೇಗೌಡ, ಬಿ.ಡಿ. ಜತ್ತಿ, ಎಚ್.ಎಲ್. ನಾಗೇಗೌಡ, ಎಚ್. ತಿಪ್ಪೇರುದ್ರಸ್ವಾಮಿ. ಎಂ.ಜೆ. ಕೋದಂಡರಾಮ ಶೆಟ್ಟಿ, ಗೊ.ರು. ಚನ್ನಬಸಪ್ಪ, ಬಿ.ಎನ್. ಚಂದ್ರಕಲಾ, ಎಸ್. ಭೀಮಪ್ಪ ಮಾಸ್ತರ್, ಟಿ.ಎನ್. ಮಹದೇವಯ್ಯ, ಕೊರಟಿ ಶ್ರೀನಿವಾಸರಾವ್, ವರನಟ ರಾಜಕುಮಾರ್, ವಿಷ್ಣುವರ್ಧನ್, ಎಂ. ಚಿದಾನಂದ ಮೂರ್ತಿ, ನಾಡಿಗೇರ ಕೃಷ್ಣರಾವ್, ಗುಬ್ಬಿವೀರಣ್ಣ ಮುಂತಾದವರ ವ್ಯಕ್ತಿ ಪರಿಚಯಗಳಿವೆ. ಇವುಗಳಲ್ಲಿ ಕೆಲವು ವ್ಯಕ್ತಿ ಚಿತ್ರದ ಚೌಕಟ್ಟಿಗೆ ಒಳಪಟ್ಟು ಚಿಕ್ಕದಾಗಿ ಚೊಕ್ಕದಾಗಿ ಅರಳಿವೆ. (ಉದಾ. ಯಾರಿವನು? ಸಂಗೀತರತ್ನ, ನೆನೆಯ ಬಲ್ಲೆ ಮರೆಯಲಾರೆ), ಕೆಲವು ಎಲ್ಲೆಮೀರಿ ವಿವರವಾಗಿ ಬೆಳೆದು ಭಾರವಾಗಿದೆ. (ಉದಾ. ನಮ್ಮ ಮೇಷ್ಟ್ರು, ಭವ್ಯಮಾನವ ಶಿಲ್ಪಿ, ಛಂದೋವಿಕಾಸದ ಕಾವ್ಯ ವಿಲಾಸಿ.) ಒಂದೆರಡು ವಿಮರ್ಶಾ ಲೇಖನದಂತೆ ಭಾಸವಾಗುತ್ತದೆ. (ಉದಾ. ಕಾವ್ಯಾನಂದ, ದೊಡ್ಡಮನೆ ದೊಡ್ಡಗೌಡರು) ಜೊತೆಗೆ ಸಂದರ್ಶನ ಲೇಖನಗಳೂ ಇವೆ. (ಉದಾ. ಆತ್ಮಶ್ರೀಗೆ ಪದ್ಮಶ್ರೀ, ಪಟ್ಟುಬಿಡದ ಪಟ್ಟೆ ವಿಭೂತಿ, ಚಿತ್ರಲೋಕದ ಚೈತ್ರ, ಮುತ್ತೆತ್ತಿದ ಮುತ್ತುರಾಜ, ಇದು ಜಾತಿ ಕುದುರೆ, ಅಭಿನೇತ್ರಿ). ಈ ಬರಹಗಳಲ್ಲಿ ಸಾಹಿತಿಗಳು, ಕಲಾವಿದರು, ಸಮಾಜ ಸೇವಕರು, ರಾಜಕಾರಿಣಿಗಳು, ಸರಕಾರಿ ಅಧಿಕಾರಿಗಳು ಸೇರಿದ್ದಾರೆ. ಅಸಾಮಾನ್ಯ ವ್ಯಕ್ತಿಗಳಂತೆ ಸಾಮಾನ್ಯ ವ್ಯಕ್ತಿಗಳ ಬಗೆಗೂ ಏಕನಿಷ್ಠೆಯಿಂದ, ಸಮಾನ ಪ್ರೀತಿಯಿಂದ ಬರೆಯುವುದು, ಸಾಹಿತ್ಯ ಸಾಂಸ್ಕೃತಿಕ ವಿಷಯಗಳಿಗೆ ಒತ್ತು ಕೊಡುವುದು, ಮಾನವೀಯ ಗುಣವನ್ನು ಧಾರಾಳವಾಗಿ ವೈಭವೀಕರಿಸುವುದು ಡಾ|| ಮರುಳಯ್ಯನವರ ಬರವಣಿಗೆಯ ವೈಶಿಷ್ಟ್ಯವಾಗಿದೆ.

ಆತ್ಮೀಯದ ಕೆಲವು ತುಣುಕುಗಳನ್ನು ಪರಿಶೀಲಿಸಿದರೆ, ಲೇಖಕರ ಧಾಟಿಯ ಗುಟ್ಟು ವೇದ್ಯವಾಗುತ್ತದೆ. ತಮ್ಮ ಅಲಂಕಾರಿಕ ಭಾಷೆಯಲ್ಲಿ ಡಾ|| ಮರುಳುಯ್ಯನವರು ಬೇಂದ್ರೆ ಮತ್ತು ಕುವೆಂಪು ಅವರನ್ನು ಹೀಗೆ ವರ್ಣಿಸುತ್ತಾರೆ. "ವಿಶ್ವಮಾತೆ, ಭೂಮಿತಾಯಿ, ಭರತಮಾತೆ, ಕನ್ನಡದ ತಾಯಿ ಮತ್ತು ಹಡೆದವ್ವ ಅಂಬಿಕೆ ಈ ಐವರು ಐದೆಯರ ಸುಪುತ್ರನಾಗಿ ಬಂದ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಎಂಬ ಅಭಿಧಾನದ ಭೂತಿ

ಅಂಬಿಕಾತನಯ ದತ್ತನೆಂದು ತಾನಾದ ಶ್ರೀಮದ್ವಿಭೂತಿ" (ಪುಟ ೩) "ವಿಭೂತಿ ಇದ್ದೆಡೆಗೆಲ್ಲಾ ಮಣಿದು, ಬೆಳಕು ಬಂದೆಡೆಗೆಲ್ಲಾ ತನ್ನ ಎದೆಯ ಕವಾಟ ತೆರೆದು ತಾನೊಂದು ತೇಜಪುಂಜವಾಗಿ ಬೆಳಗಿದ ಮಹಾಚೇತನ ! ಅದು ಕುಪ್ಪಳಿ ವೆಂಕಟಾರ್ಯಂಗೆ ಮೇಣ್ ಸೀತಮ್ಮನೆಂಬಭಿದಾನದ ಮಾತೃದೇವತೆಗೆ ಮಗನಾಗಿ ಹುಟ್ಟಿದ ಶ್ರೀ ಶಿವಾನಂದ ಕರಕಮಲ ಸಂಜಾತ ಶಿಶು ಭವತಾರಿಣಿಯ ಭವ್ಯ ಸ್ವರೂಪಿಯಾದ ಹೇಮಾ ಎಂಬ ದೇವತೆಯ ಪ್ರೇಮಾರಾಧಕ ಶ್ರೀ ಕುವೆಂಪು!."(ಪುಟ.೩-೪)

ಕರ್ನಾಟಕದ ಪ್ರಾತಃಸ್ಮರಣೀಯ ಪಂಡಿತರಾದ ಡಿ. ಎಲ್. ನರಸಿಂಹಾಚಾರ್ಯರ ವ್ಯಕ್ತಿತ್ವವನ್ನು ಹೀಗೆ ಕಂಡರಿಸಿದೆ. "ಇವರು ಪಾಂಡಿತ್ಯದ ಮೇರು ವಿಮರ್ಶೆಯ ಹೆದ್ದೊರೆ. ನಿರುಕ್ತ ನಿಪುಣರು, ಶಾಸ್ತ್ರ ಸಂಹಿತೆಯಲ್ಲಿ ಸೀಮಾ ಪುರುಷರು(ಪುಟ - ೮) "ನಮ್ಮ ಮೇಷ್ಟ್ರರದು ಗರಿವಡೆದ ಗಾಂಭೀರ್ಯ" ಸಿರಿತುಂಬಿದ ಮುಖಭಾವ, ಹಿರಿತನದ ವರ್ಚಸ್ಸು, ಬ್ರಹ್ಮರ್ಷಿಯ ತೇಜಸ್ಸು, ಒಂದು ಮಾತಿನಲ್ಲಿ ಹೇಳುವುದಾದರೆ ಹರಿದು ಬರುತ್ತಿರುವ ಅಲಂಕೃತವಾದ ದೇವರ ತೇರು ಅವರು. ಅವರ ಸಂಶೋಧನೆ ಒಂದು ಕಾವ್ಯ. ಅವರ ವಿಮರ್ಶೆ ಒಂದು ಭಾವಗೀತೆ. ಅವರ ಮಾತಿನಲ್ಲಿ ತೂಕವಿದೆ. ಬನಿ ಇದೆ. ಬ್ಯಾಲೆನ್ಸ್ ಇದೆ. ಪಾಂಡಿತ್ಯಕ್ಕೆ ಒಬ್ಬರೇ ಡಿ. ಎಲ್. ಎನ್. ಎನ್ನುವಷ್ಟರ ಮಟ್ಟಿಗೆ ಪ್ರಭಾವ ಬೀರಿರುವ ವ್ಯಕ್ತಿ ಅವರು". (ಪುಟ - ೧೬)

ಕನ್ನಡದ ವಿಚಾರವಂತ ವಿಮರ್ಶಕ, ವಿಶಿಷ್ಟ ಕವಿಯೂ ಆದ ಸಂ.ಶಿ.ಭೂಸನೂರಮಠರ ಸಾಧನೆಯ ಬಗೆಗೆ ಡಾ॥ ಮರುಳಯ್ಯನವರ ಪ್ರತಿಕ್ರಿಯೆ ಹೀಗಿದೆ. "ಅವರು ಭಾವುಕ ಕವಿಯಾಗಿದ್ದಾರೆ. ಚಿಕಿತ್ಸಾ ಚತುರ ವಿಮರ್ಶಕರಿದ್ದಾರೆ. ಪ್ರತಿಭೆ ವ್ಯುತ್ಪತ್ತಿಗಳೆರಡನ್ನೂ ಸಮಪ್ರಮಾಣದಲ್ಲಿ ದುಡಿಸಿಕೊಂಡು, ಅವುಗಳ ಮೂಲಕ ಸಂಶೋಧನೆಗೆ ಜೀವ ತುಂಬುವ ದಕ್ಷತೆಯೂ ಅವರಲ್ಲಿದೆ. ಅವರು ತುಂಬ ಅನುಭಾವಿಗಳು. ಅನುಭಾವವೇ ಅವರ ಮಹಾಕಾವ್ಯದ ಜೀವರಸ. (ಪುಟ-೪೯) "ಸಂ.ಶಿ. ಭೂಸನೂರಮಠರ 'ಭವ್ಯಮಾನವ' ಅನುಭಾವದ ಮೇರು. ಅಕ್ಕನ ಆಧ್ಯಾತ್ಮ ಜೀವನಕ್ಕೆ ಆಧುನಿಕತೆಯನ್ನು ಜೋಡಿಸಿ ಒಂದು ಬೃಹತ್ ಕಾವ್ಯವನ್ನಾಗಿಸಿದ್ದಾರೆ."(ಪುಟ - ೫೩) "ಈ ಕಾವ್ಯದ ಭವ್ಯ ಮಾನವ ಕಲ್ಪನೆಯೇ ಅದ್ಭುತವಾದುದು. ಕವಿಕೊಟ್ಟ ಭವ್ಯ ಮಾನವನ ಅರ್ಥ ಭವಿಷ್ಯ ಮಾನವ ಎಂದು." (ಪುಟ - ೫೫)

ವಿದ್ವಾಂಸ ಕವಿ ಡಿ. ಎಸ್. ಕರ್ಕಿಯವರ ಬಗೆಗೆ "ಕರ್ಕಿಯವರ ಕಾವ್ಯ ಶೈಲಿ ತುಂಬಿದ ತೊರೆ ಇದ್ದ ಹಾಗೆ. ಎಲ್ಲೂ ಏರಿಳಿತವಿಲ್ಲದ ಅಂದರೆ ಸಮತಟ್ಟಿನಲ್ಲಿ ಸಾಗುವ ಪ್ರಶಾಂತ ಪ್ರವಾಹದಂತೆ." ಸಿದ್ಧಯ್ಯ ಪುರಾಣಿಕರ ಬಗೆಗೆ(ಪುಟ ೭೫) "ಇವರು ಆಡಿ ಸೋಲಲಿಲ್ಲ , ಮಾಡಿ ಗೆದ್ದರು. ನಡೆನುಡಿಯಲ್ಲಿ ಮಡಿಯಾಗಿ ಬಾಳಿದರು. ಶುದ್ಧ ಹಸ್ತ, ತೆರೆದ ಹೃದಯ, ಪ್ರಾಂಜಲ ಮನಸ್ಸು - ಒಟ್ಟಿನಲ್ಲಿ ಶುಚಿ ಜೀವನ ನಡೆಸಿದ ಓರ್ವ ಕರ್ಮಯೋಗಿ, ಕಲಾತಪಸ್ವಿ".(ಪುಟ ೮೮) "ವಚನೋದ್ಯಾನ ಆಧುನಿಕ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಬಿದ್ದ ಗಟ್ಟಿ ಕಾಳು, ಕನ್ನಡಕ್ಕೆ ಕೀರ್ತಿತಂದ ಕಾವ್ಯಾನಂದರ ಆಚಾರ್ಯಕೃತಿ"

(ಪುಟ ೯೦) ಶಿಕ್ಷಣವೇತ್ತ, ಭಾಷಾಶಾಸ್ತ್ರಜ್ಞ ಆರ್.ಸಿ. ಹಿರೇಮಠರ ಗುಣಗಾನ ಹೀಗೆ ನಡೆದಿದೆ - "ಕನ್ನಡ ಭಾಷಾ ವಿಜ್ಞಾನದ ಹರಿಕಾರ, ಪ್ರಾಚ್ಯ ಸಂಶೋಧನೆಯ ನೇತಾರ, ವಚನ ಸಂಪಾದನೆಯ ಪ್ರಸ್ಥಾನಕಾರ ಎಂದೇ ಹೆಸರಾಗಿದ್ದಾರೆ. ವಚನ ಸಾಹಿತ್ಯದ ವೈಜ್ಞಾನಿಕ ಅಧ್ಯಯನದಲ್ಲಿ ಡಾ॥ ಆರ್.ಸಿ. ಯವರದು ಗಣನೀಯ ಪಾತ್ರ".(ಪುಟ ೯೮)

ರಾಜಕೀಯ ಮುತ್ಸದ್ದಿ ಬಿ.ಡಿ. ಜತ್ತಿಯವರನ್ನು ಡಾ॥ ಮರುಳಯ್ಯನವರು ಕಂಡಿರುವುದು ಹೀಗೆ: "ನಿರಾಡಂಬರದ ಸರಳ ಜೀವಿ ಶ್ರೀ ಜತ್ತಿಯವರ ಬಗೆಗೆ ಎಷ್ಟು ಹೇಳಿದರೂ ಕಡಿಮೆಯೆ. ಅವರ ವಿನಯ, ವಿವೇಚನೆ, ವಿಚಾರಪರತೆ, ದೈವಭಕ್ತಿ, ರಾಷ್ಟ್ರಪ್ರೇಮ, ಸ್ವಜನ ವಾತ್ಸಲ್ಯ, ನುಡಿಯ ಅಭಿಮಾನ - ಇವು ಅಮೇಯ, ಅನ್ಯಾದೃಶ".(ಪುಟ ೧೩೮) ಕನ್ನಡದ ವಿಶಿಷ್ಟ ಸಾಹಿತಿ ಎಚ್.ಎಲ್. ನಾಗೇಗೌಡರ ಪರಿಚಯ ಈ ರೀತಿಯಿದೆ: "ನಾಗೇಗೌಡರು ಸವ್ಯಸಾಚಿಗಳು. ದಕ್ಷ ಆಡಳಿತಗಾರರಾಗಿ ಸರಕಾರಕ್ಕೆ ತಮ್ಮಿಂದ ಸಲ್ಲಬೇಕಾದ ಕರ್ತವ್ಯವನ್ನು ನಿಷ್ಠೆಯಿಂದ ನಿರ್ವಹಿಸಿದರು. ಪ್ರತಿಭಾವಂತ ಲೇಖಕರಾಗಿ ಕನ್ನಡ ಸಾಹಿತ್ಯಕ್ಕೆ ಅಮೌಲ್ಯ ಸೇವೆ ಸಲ್ಲಿಸಿದರು. ಅವರು ತಮ್ಮ ಕಾರ್ಯಾಲಯದ ಒಣಪೈರುಗಳ ಗದ್ದೆಮಡಿಗಳಲ್ಲಿ ಹಸುರೊಸರುವ ರಸಕೃತಿಗಳನ್ನು ಬೆಳೆದರು."(ಪುಟ ೧೩೯) ಕನ್ನಡ ಸಾಹಿತ್ಯ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ಜನಪ್ರಿಯರಾಗಿರುವ ಗೊ.ರು. ಚನ್ನಬಸಪ್ಪನವರು ಹೀಗೆ ವರ್ಣಿತವಾಗಿದ್ದಾರೆ:" ಈತನ ಮೈಯ ಮೇಲ್ಭಾಗದಲ್ಲಿ ಹಾಲು ಬಿಳಿಯ ಅಂಗಿ, ಕೆಳಗೆ ಕೊಕ್ಕರೆ ಪುಕ್ಕದ ಲುಂಗಿ, ಮೈ ಕಪ್ಪು, ಮನ ಬಿಳುಪು, ಕಾಲು ನೀಳ, ಕೈ ಕಾಲು ಬೋಳ.... ಮೂಗಿನಿಂದ ಮುಡಿಯವರೆಗಿನ ಬೈತಲೆಯ ಸಮಭಾಜಕ ವೃತ್ತ. ದೇಹ ತುಸು ಬಾಗಿ ಬಿಗಿದ ಬಿಲ್ಲು, ತಲೆ ತುಂಬ ಮಕಮಲ್ಲು.... ರಂಗದ ಮೇಲೆ ನಿಂತಾಗ ಎಷ್ಟು ಲಕ್ಷ ಜನರಿದ್ದರೂ ಅವರನ್ನು ಎದುರಿಸಿ ಸವಾಲು ಹಾಕಬಲ್ಲ. ಅಂತಹ ಎದೆಗಾರಿಕೆ ಈ ಬಡಕಲು ಶರೀರಿಯದು." (ಪುಟ ೧೫೫)

ಅಧ್ಯಾಪಕ, ಲಾವಣಿಗಾಯಕ, ಮಲೆನಾಡು ಪ್ರೇಮಿ ಭೀಮಪ್ಪ ಮಾಸ್ತರರು ಹೀಗಿದ್ದರಂತೆ "ಭೀಮಪ್ಪನವರು ಅಪ್ಪಟ ಗಾಂಧಿವಾದಿಗಳು, ಖಾದಿಯನ್ನು ಹೊದೆದು, ಖಾದಿಯನ್ನೆ ಹಾಸಿ ಖಾದಿಯನ್ನೇ ಉಟ್ಟು, ಉಂಡವರು... ಶುದ್ಧ, ಸಾತ್ವಿಕ, ಸರಳ, ಸುಂದರ, ರಸಿಕ ಹಾಗೂ ತುಂಬು ಜೀವನ ನಮ್ಮ ಭೀಮಪ್ಪನವರದು. ಆಕೃತಿ ಹೇಗೆ ದೊಡ್ಡದೋ ಅವರ ಅಂತಃಕರಣವೂ ಅಷ್ಟೇ ದೊಡ್ಡದು." (ಪುಟ ೧೬೭) ಸರಕಾರದ ಅಧಿಕಾರಿಯೋಬ್ಬರ ಸೇವಾಸೌಶೀಲ್ಯವನ್ನು ಲೇಖಕರು ಹೀಗೆ ಮೆಚ್ಚಿದ್ದಾರೆ." ಸಿ.ಎ. ಜಮಖಂಡಿಮಠ ಎಂಬುದು ಸಾರ್ವಜನಿಕ ಸೇವೆಗಿರುವ ಬೇರೊಂದು ಹೆಸರು. ಸೇವೆಯೇ ಅವರು, ಅವರೇ ಸೇವೆ. ಅವರಿಗೆ ಸೇವೆಯೇ ಪೂಜೆ, ಸಜ್ಜನಿಕೆಯೇ ಮಂತ್ರ, ಜಪ, ತಪ ಎಲ್ಲ. ಆದರೆ ಎಲೆ ಮರೆಯ ಹೂವು!" (ಪುಟ ೨೨೪)

ಡಾ॥ ಮರುಳಯ್ಯನವರ 'ಆತ್ಮೀಯ' ದಲ್ಲಿ ಮನನೀಯವಾದ, ಸಾರವತ್ತಾದ ಸಾಲುಗಳು ಸಿಗುತ್ತವೆ. ಕೆಲವು ಉದಾಹರಣೆಗಳನ್ನು ಗಮನಿಸಬಹುದು. "ಉನ್ನತ ವಿಮರ್ಶೆಯೇ ಗ್ರಂಥ ಸಂಪಾದನೆಯ ಅಂತಿಮ ಘಟ್ಟ" (ಪುಟ ೪೭) "ಶೂನ್ಯ ಸಂಪಾದನೆಯದು ಅಧ್ಯಾತ್ಮ ಸಾಹಿತ್ಯ (ಭೂಸನೂರ ಮಠ) ಪರಾಮರ್ಶೆಯದು ದರ್ಶನ

ವಿಮರ್ಶೆ" (ಪುಟ ೫೦) "ಮಹಾಕಾವ್ಯವೆನ್ನುವುದು ಕವಿಯ ಕಥನರೂಪೀ ಕಲಾಕೃತಿ" (ಪುಟ ೫೧) "ಭಾವಗೀತೆ ಅನುಭವ ಜನ್ಯ, ಭಕ್ತಿಗೀತೆ ಅನುಭಾವಜನ್ಯ" (ಪುಟ ೭೩). "ಜೀವನ ಎಂಬುದು ಅನೇಕ ಆಕಸ್ಮಿಕಗಳ ಆಗರ" (ಪುಟ ೧೦೭) "ಮೀಮಾಂಸೆ ಅಪ್ಪಟ ಹಾಗು ಪೂರಾ ಭಾರತೀಯ ಸಿದ್ಧವಸ್ತು, ಭಾರತೀಯ ಕಲಾಕ್ಷೇತ್ರದಲ್ಲಿ ತಯಾರಾದದ್ದು, ವಿಮರ್ಶೆ ಪಾಶ್ಚಾತ್ಯ ರಾಷ್ಟ್ರದಿಂದ ಆಮದಾದದ್ದು" (ಪುಟ ೧೧೭) ಇಂಗ್ಲೀಷಿನ "ಮೌಢ್ಯದ ಮಹಾವೃಕ್ಷಕ್ಕೆ ಮೊದಲು ಕೊಡಲಿಪೆಟ್ಟು ಹಾಕಿದವರು ಆಚಾರ್ಯ ಬಿ.ಎಂ.ಶ್ರೀ. ಅದರ ಕಟ್ಟಿಗೆಗಳನ್ನು ಕುಂಡದಲ್ಲಿ ಹಾಕಿ ಹೋಮಮಾಡಿದ ಅಧ್ವರ್ಯ ಆಚಾರ್ಯ ದೇಜಗೌ" (ಪುಟ ೧೨೪).

'ಆತ್ಮೀಯ' ಗ್ರಂಥದ ಲೇಖನಗಳು ಆಯಾ ವ್ಯಕ್ತಿಯ ಬದುಕು ಸಾಧನೆಯನ್ನು ತಲಸ್ಪರ್ಶಿಯಾಗಿ ತಿಳಿದುಕೊಳ್ಳುವವರಿಗೆ, ಜೀವನ ಚರಿತ್ರಕಾರರಿಗೆ, ಸಾಹಿತ್ಯ ಅಭ್ಯಾಸಿಗಳಿಗೆ, ಸಾಹಿತ್ಯ ಸಂಬಂಧದ ಪೂರಕ ಸಾಮಗ್ರಿ ಬಯಸುವವರಿಗೆ, ಐತಿಹಾಸಿಕ ಅಂಶಗಳ ಆಸಕ್ತರಿಗೆ ಕುತೂಹಲ ಹುಟ್ಟಿಸುತ್ತದೆ. ಇವು ನಿರ್ದಿಷ್ಟ ಸಮಯ ಸಂದರ್ಭದ ಸಕಾಲಿಕ ಸೃಷ್ಟಿಯಾದರೂ ಸಾರ್ವಜನಿಕ ಚಿಂತನೆಯ ಬೆಳಕಿಂಡಿಯಾಗಿದೆ.

ಅವಸ್ಥಾ

ಡಾ॥ ಸಾ.ಶಿ. ಮರುಳಯ್ಯನವರು ೧೯೯೧ರಲ್ಲಿ ಪ್ರಕಟಿಸಿರುವ 'ಅವಸ್ಥಾ' ಗ್ರಂಥದಲ್ಲಿ ಇಪ್ಪತ್ತೈದು ಸಾಹಿತ್ಯಾತ್ಮಕ ಪ್ರಬಂಧಗಳಿವೆ. ಇವುಗಳಲ್ಲಿ ಪ್ರಾಚೀನ ಹಾಗೂ ಅರ್ವಾಚೀನ ಕವಿ ಕೃತಿಗಳ ಸಮೀಕ್ಷೆ ಇದೆ. ಪ್ರಬಂಧಗಳೆಂದು ಕರೆದಿದ್ದರೂ ವಿಮರ್ಶೆಯ ಆಸುಪಾಸಿನಲ್ಲಿ ವಿಶ್ಲೇಷಣೆ ನಡೆದಿದೆ. ಒಂದೆಡೆ ಸೇರ್ಪಡೆಯಾಗಿದೆ. ಒಂದೆರಡನ್ನು ಬಿಟ್ಟರೆ ಉಳಿದಂತೆ ಇವುಗಳ ರಚನೆಯ ಸಂದರ್ಭದ ಪ್ರಸ್ತಾಪವಿಲ್ಲ. ಬಹಳಷ್ಟು ಲೇಖನಗಳು ಸಭೆ ಸಮಾರಂಭ, ವಿಚಾರ ಸಂಕಿರಣಗಳ ಹಿನ್ನೆಲೆಯಲ್ಲಿ ರಚನೆಯಾಗಿರುವುದರಿಂದ ಪ್ರೇಕ್ಷಕರನ್ನು ದೃಷ್ಟಿಯಲ್ಲಿಟ್ಟುಕೊಂಡು ಬರೆದಂತೆ ಹೊಳೆಯುತ್ತದೆ. ಒಂದೆರಡು ಲೇಖನಗಳು ಸಾಹಿತ್ಯದ ಓದುಗರನ್ನು ಗಮನದಲ್ಲಿಟ್ಟುಕೊಂಡು ಬರಹಕ್ಕಿಳಿಸಿದಂತೆ ಗಂಭೀರವಾಗಿದೆ. ಎಲ್ಲಾ ಲೇಖನಗಳನ್ನೂ ಸೃಜನಶೀಲ ಮನಸ್ಸು ಕೆಲಸ ಮಾಡಿರುವುದು ಗೋಚರಿಸುತ್ತದೆ. ಸಾಹಿತ್ಯವನ್ನು ವಿಶೇಷವಾಗಿ ಅಭ್ಯಾಸಮಾಡಿ, ವಿವಿಧ ಆಕರಗಳ ಸಮರ್ಥನೆಯಿಂದ ಸಾದರಪಡಿಸುವ ಡಾ॥ ಮರುಳಯ್ಯನವರ ಸಾಹಿತ್ಯಕ ಪ್ರಬಂಧಗಳಲ್ಲಿ ಸುಸಂಸ್ಕೃತ ವಿಮರ್ಶನ ವಿವೇಕ ಥಾಳಾಗಿರುವುದು ನಿಚ್ಚಳವಾಗಿ ಕಾಣುತ್ತದೆ. ಈ ಲೇಖನಗಳ ಅಭಿವ್ಯಕ್ತಿಯ ಹಿನ್ನೆಲೆಯಲ್ಲಿ ಸಾಕಷ್ಟು ಶ್ರಮವಿರುವುದು ಎದ್ದು ಕಾಣುತ್ತದೆ. ಕನ್ನಡ, ಸಂಸ್ಕೃತ, ಇಂಗ್ಲಿಷ್ ಭಾಷಾ ಸಾಹಿತ್ಯದ ಹಿನ್ನೆಲೆಯಲ್ಲಿ ರೂಪುಗೊಂಡಿರುವ ಇಲ್ಲಿನ ಲೇಖನಗಳಲ್ಲಿ ವಿಮರ್ಶೆಯ ವಿಹಂಗಮ ನೋಟ ಲಭ್ಯವಾಗುತ್ತದೆ. ಭಾರತೀಯ ಕಾವ್ಯಮಿಮಾಂಸೆ, ಪಾಶ್ಚಾತ್ಯ ವಿಮರ್ಶೆ ಎರಡೂ ವಿಧಾನಗಳನ್ನು ಮೈಗೂಡಿಸಿಕೊಂಡಿರುವ ಈ ಬರಹಗಳಲ್ಲಿ ವಿಮರ್ಶಾಧರ್ಮದ ಸೂಕ್ತಮಾರ್ಗ ದರ್ಶನವಾಗುತ್ತೆದೆ.

ಡಾ|| ಮರುಳಯ್ಯನವರು ಕಾವ್ಯ, ಕಾವ್ಯ ಪ್ರವೇಶ, ಕವಿ, ಕವಿಯ ಪರಿಕಲ್ಪನೆ, ಕಾವ್ಯ ನಿರ್ಮಾಣದ ಆಗುಹೋಗು, ಗುಣದೋಷಗಳನ್ನು ವಿಭಿನ್ನ ರೀತಿಯಲ್ಲಿ, ವರ್ಣರಂಜಿತ ನೆಲೆಯಲ್ಲಿ, ಪರಿಭಾವಿಸುವುದರಿಂದ ಇವರ ವಿಮರ್ಶಾ ಪ್ರತಿಕ್ರಿಯೆಗಳು ಆಪ್ಯಾಯಮಾನವಾಗಿರುತ್ತವೆ. ಈ ಲೇಖಕರು ಸ್ವತಃ ಕವಿಯೂ ಆಗಿರುವುದರಿಂದ ಕವಿಯ, ಕಾವ್ಯದ ಅಂತರಂಗವನ್ನು ರಸಸ್ಥಾನದಲ್ಲಿ ಕಂಡರಿಸುವುದರಲ್ಲಿ ಯಶಸ್ವಿಯಾಗುತ್ತಾರೆ. ಪದ್ಯಕೃತಿ, ಗದ್ಯಕೃತಿಗಳೆರಡರಲ್ಲೂ ಸಮಾನವಾದ ರಸಸ್ಯಂದಿ ಭಾವನೆಗಳ ಮಿಡಿತಕ್ಕೆ ಲೇಖಕರು ಆಸ್ಥೆವಹಿಸುವುದು ಮೆಚ್ಚಿಕೆಗೆ ಅರ್ಹವಾಗಿದೆ. ಪ್ರಾಚೀನ ಕೃತಿಗಳಂತೆ ಅರ್ವಾಚೀನ ಕೃತಿಗಳ ಬಗೆಗೂ ನಿರರ್ಗಳವಾಗಿ ತಮ್ಮ ಅಧ್ಯಯನಶೀಲ ವಿಮರ್ಶಾವಿಧಾನವನ್ನು ಬಳಸಬಲ್ಲರು.

ಡಾ|| ಮರುಳಯ್ಯನವರ ವಿವೇಚನೆಗಳಲ್ಲಿ ಕೆಲವು ಸಾಮಾನ್ಯ ಅಂಶಗಳು ಕಂಡುಬರುತ್ತದೆ. ನಿರ್ದಿಷ್ಟ ಕೃತಿ, ಕರ್ತೃವಿನ ಬಗೆಗೆ ಸಾಕಷ್ಟು ಮಾಹಿತಿ ನೀಡುತ್ತಾರೆ. ಸಾಧ್ಯವಾದೆಡೆ ಕೃತಿಯ ಸಾರಾಂಶ ಒದಗಿಸುತ್ತಾರೆ. ಉತ್ತಮ ಅಂಶಗಳನ್ನು ಹೆಕ್ಕಿ ಸಾರವತ್ತಾಗಿ ವ್ಯಾಖ್ಯಾನಿಸುತ್ತಾರೆ. ಸೂತ್ರಪ್ರಾಯವಾಗಿ ಒಟ್ಟು ಕೃತಿಯ ಮೌಲ್ಯವನ್ನು ನಿರ್ಣಯಿಸುತ್ತಾರೆ. ಜೊತೆಗೆ ದೋಷಗಳನ್ನು ಸೋದಾಹರಣವಾಗಿ ಬೊಟ್ಟುಮಾಡಿ ತೋರಿಸುತ್ತಾರೆ. ಪ್ರಬಂಧವನ್ನು ಆಕರ್ಷಕವಾಗಿ ಮುಕ್ತಾಯ ಮಾಡುತ್ತಾರೆ.

ಡಾ|| ಮರುಳಯ್ಯನವರ 'ಆತ್ಮೀಯ' ವ್ಯಕ್ತಿಚಿತ್ರಗಳಿಗೆ ಹೋಲಿಸಿದರೆ, 'ಅವಸ್ಥಾ' ಲೇಖನಗಳಲ್ಲಿ ಅನಗತ್ಯ ಶಬ್ದಾಡಂಬರ, ಅತಿಯಾದ ಗುಣಗಾನ ಪ್ರವೃತ್ತಿ ಕಂಡುಬರುವುದಿಲ್ಲ. ಒಂದೆರಡನ್ನು ಬಿಟ್ಟರೆ ಅತಿದೀರ್ಘದೋಷವೂ ಇಲ್ಲ. ವಿಮರ್ಶಾ ಬರಹಗಳಾದುದರಿಂದ ಅಭಿವ್ಯಕ್ತಿ ಸರಳವಾಗಿರಬೇಕು. ತಿಳಿಯಾಗಿರಬೇಕು. ಸಂವಹನಕ್ಕೆ ಸಹನೀಯವಾಗಿರಬೇಕು ಎಂದು ಭಾವಿಸಿದಂತೆ ಭಾಸವಾಗುತ್ತದೆ. ಇಲ್ಲಿ ಗದ್ಯ ಗ್ರಂಥಗಳಿಗಿಂತ ಪದ್ಯ ಕೃತಿಗಳ ವಿಮರ್ಶೆಗಳೇ ಹೆಚ್ಚಾಗಿದೆ. ಇವುಗಳನ್ನು ಸಾಹಿತ್ಯಕ ಪ್ರಬಂಧಗಳೆಂದು ಹೆಸರಿಸಿದ್ದರೂ ಒಟ್ಟಾರೆ ಪರಿಚಯಾತ್ಮಕ ವಿಮರ್ಶಾ ಲೇಖನಗಳೆಂದೇ ಕರೆಯಬಹುದು. ಕನಕದಾಸರ ಬಗೆಗೆ, ಕೆಳದಿಯ ಅರಸರ ಬಗೆಗೆ, ವಚನಕಾರರ ಬಗೆಗೆ, ಕುವೆಂಪು ಬಗೆಗೆ, ಒಂದಕ್ಕಿಂತ ಹೆಚ್ಚು ಲೇಖನಗಳಿವೆ. ಈ ವಿಷಯಗಳಲ್ಲಿ ಲೇಖಕರಿಗೂ ಅತಿಶಯವಾದ ಆಸಕ್ತಿ ಇರುವುದು ತಿಳಿಯುತ್ತದೆ. ಲೇಖನಗಳ ನೇರವಾದ ಶೀರ್ಷಿಕೆಗಳೇ ಲೇಖನದ ವಸ್ತುವನ್ನು, ಲೇಖಕರ ದೃಷ್ಟಿಯನ್ನು ಸ್ಪಷ್ಟವಾಗಿ ನಿರೂಪಿಸುತ್ತದೆ.

'ಅವಸ್ಥಾ' ಗ್ರಂಥದಲ್ಲಿ ಕಂಡುಬರುವ ಲೇಖಕರ ಪರಿಯನ್ನು ಸ್ಥೂಲವಾಗಿ ಪರಿಶೀಲಿಸೋಣ. "ಕನಕದಾಸರ ಸಮಗ್ರ ಜೀವನ ಚರಿತ್ರೆ" ಎಂಬ ದೀರ್ಘ ಲೇಖನದಲ್ಲಿ ಸಂಶೋಧನೆಯ ಅಂಶಗಳು ಹೇರಳವಾಗಿದೆ. ಕನಕದಾಸರ ಕಾವ್ಯಗಳ ಅಂತರಿಕ ಪ್ರಮಾಣಗಳಿಂದ ಅವರ ಜೀವನ ಚರಿತ್ರೆಯನ್ನು ಕಟ್ಟಲು ಪ್ರಯತ್ನಿಸಿದೆ. ಕನಕದಾಸರ ಕಾಲ, ಬದುಕಿನ ವಿವರ, ಅವರ ವಿಶಿಷ್ಟ ವ್ಯಕ್ತಿತ್ವದ ಹೊಳಹುಗಳು ಸರಳವಾಗಿ ಅಭಿವ್ಯಕ್ತಗೊಂಡಿದೆ. ಈ ನಿಟ್ಟಿನಲ್ಲಿ ಲೇಖಕರ ಒಳನೋಟಗಳು ಮನನೀಯವಾಗಿದೆ.

ಈ ನಿಟ್ಟಿನಲ್ಲಿ ಲೇಖಕರು ಹೀಗೆ ನುಡಿದಿದ್ದಾರೆ. "ಕನಕದಾಸರು ಋಷಿಕವಿ, ಸಂತಕವಿ, ಮಹಾಕವಿ, ಖ್ಯಾತ ಕೀರ್ತನಕಾರರೂ ಹೌದು." (ಪುಟ ೧೯) "ವ್ಯಾಸರಾಯರ ದೃಷ್ಟಿಯಲ್ಲಿ ಪುರಂದರದಾಸ ಕನ್ನಡದ ಹೇಮಕೂಟ, ಕನಕದಾಸ ಆ ಹೇಮಕೂಟದ ನೆತ್ತಿಯ ಮೇಲೆ ಹಾರಾಡುವ ಕನ್ನಡದ ಬಾವುಟ!" (ಪುಟ ೫) "ಕನಕ ಸಾಹಿತ್ಯ, ಒಂದು ವಿವೇಚನೆ" ಎಂಬ ಇನ್ನೊಂದು ಲೇಖನದಲ್ಲಿ ಕನಕದಾಸರ ಕಾವ್ಯಗಳ ಅಂತರ್ಯಕ್ಕೆ ಲಗ್ಗೆಯಿಡುವ ಪ್ರಯತ್ನ ನಡೆದಿದೆ. ಈ ಲೇಖನದ ಆರಂಭವೇ ವಿನೂತನವಾಗಿದೆ. "ರಾಮಧ್ಯಾನ ಚರಿತ್ರೆ' ಯಲ್ಲಿ ಸಂಸ್ಕೃತ ಮತ್ತು ಕನ್ನಡಗಳ ನಡುವಣ ಭಾಷೆಯ ವಿವಾದವಿದೆಯೆಂದು ಕಲ್ಪಿಸುವುದು, ಕನಕದಾಸರ ಕೃತಿಯ ಬಗೆಗೆ ರೂಢಿ ಅಭಿಪ್ರಾಯಗಳನ್ನು ನಯವಾಗಿ ನಿರಾಕರಿಸುವುದು, ಕಾವ್ಯ ರಚನೆಯ ಸಂದರ್ಭಗಳನ್ನು ಸಕಾರಣವಾಗಿ ಉಹಿಸುವುದು ಆಕರ್ಷಕವಾಗಿದೆ. ಲೇಖಕರ ಹೃದ್ಯವಾದ ಒಂದೆರಡು ಸಾಲುಗಳನ್ನು ನೋಡಿ. "ಹೆಸರೇ ಸೂಚಿಸಿವಂತೆ ಹರಿಭಕ್ತಿಸಾರ ಹರಿನಾಮ ಸಂಕೀರ್ತನೆಯ ತುಲಸಿಹಾರ, ವಿಷ್ಣು ಪಾರಮ್ಯದ ಪುಣ್ಯಕೃತಿ, ಭಕ್ತಿಯೇ ಭಾಗೀರಥಿಯಾಗಿ ಕನ್ನಡಕ್ಕೊದಗಿ ಬಂದ ತೀರ್ಥ ಸಾಹಿತ್ಯ." (ಪುಟ ೨೮) "ಕನಕದಾಸರಲ್ಲಿ ಸ್ವೀಕರಣವೆಷ್ಟು ಮುಖ್ಯವೋ ಮಾರ್ಪಾಟು ಅಷ್ಟೇ ಮುಖ್ಯವೆನಿಸಿದೆ." (ಪುಟ ೩೧) "ಕನಕದಾಸರು ತಮ್ಮ ಮೋಹನ ತರಂಗಿಣಿಯಲ್ಲಿ ವಹಿಸಿದಷ್ಟು ಸ್ವಾತಂತ್ರ್ಯವನ್ನು ನಳಚರಿತ್ರೆಯಲ್ಲಿ ವಹಿಸಿಲ್ಲ ಎದು ಹೇಳಬಹುದು." (ಪುಟ ೩೨) "ಕನಕದಾಸರ ಕಾವ್ಯಶೈಲಿಯಲ್ಲಿ ಪ್ರಸಾದ ಗುಣವಿದೆ. ಅದು ಎಲ್ಲೆಡೆಯಲ್ಲೂ ಅಕ್ಲಿಷ್ಟ, ಆದರೆ ಪ್ರಭಾವಶಾಲಿ" (ಪುಟ ೩೨).

ಕನ್ನಡದ ಪ್ರಸಿದ್ಧ ಚಾರಿತ್ಯಕ ಕಾದಂಬರಿಕಾರರಾದ ಸಿ.ಕೆ. ನಾಗರಾಜರಾಯರ "ಪಟ್ಟಮಹಾದೇವಿ ಶಾನ್ತಲ ದೇವಿ" ಮಹಾ ಕಾದಂಬರಿಯನ್ನು ಕುರಿತು ಲೇಖಕರು ಅಡಕವಾಗಿ, ಅರ್ಥಪೂರ್ಣವಾಗಿ ಪ್ರತಿಕ್ರಿಯಿಸಿದ್ದಾರೆ. "ಪಟ್ಟಮಹಾದೇವಿ ಶಾನ್ತಲದೇವಿ ಪರಿಪಕ್ವ ಚೇತನದ ಅಮೃತ ಫಲ. ಇದು ಕಲಾಪೂರ್ಣ ಕಾದಂಬರಿಯೂ ಹೌದು, ಇತಿಹಾಸವೂ ಹೌದು, ಭಾರತೀಯ ಸಂಸ್ಕೃತಿಯ ಕೈಪಿಡಿಯೂ ಹೌದು, ಸನಾತನ ಸಂಸ್ಕೃತಿಯ ಕೇಂದ್ರವೂ ಹೌದು. ಇಂತಹ ಅಮರ ಕಲಾಕಾಣಿಕೆಯನ್ನಿತ್ತ ಸಿ.ಕೆ. ನಾಗರಾಜರಾಯರು ಅಭಿನಂದನೀಯರು" (ಪುಟ ೩೯) 'ಬಿಂದಲಿ, ಬೆಡಗು' ಲೇಖನದಲ್ಲಿ ಕಮಲಾ ಹಂಪನಾ ಅವರ 'ಬಿಂದಲಿ' ವಚನ ಸಂಗ್ರಹದ ಬಗೆಗೆ ವಿಮರ್ಶಿಸಿ ಗುಣದೋಷಗಳನ್ನು ಪ್ರಸ್ತಾಪಿಸಿದ್ದಾರೆ. "ವಚನ ಪರಂಪರೆಯಲ್ಲಿ ಬೆಳೆದಿದ್ದರೂ ಇಲ್ಲಿನ ಭಾವಗೀತಾತ್ಮಕ ರಚನೆಯಲ್ಲಿ ಅದ್ಯತನ ಬದುಕಿನ ಅರ್ಥಪೂರ್ಣ ವಿಶ್ಲೇಷಣೆ ಇದೆ. ಸಮಕಾಲೀನ ಜೀವನವನ್ನು ಕುರಿತ ಕವಯಿತ್ರಿಯ ಸೂಕ್ಷ್ಮ ಸಂವೇದನೆ ಇದೆ. ಇಲ್ಲಿ ಬಂಡಾಯದ ತೊಂಡು, ಕನ್ನಡಾಭಿಮಾನದ ಗಂಡು, ಹೃದಯ ಹೀನ ಸಮಾಜ ಖಂಡನೆಯ ಮೊಂಡು, ಮೊನಚು ಎಲ್ಲ ಇವೆ" (ಪುಟ ೪೧). 'ಸಮ್ಯಕ್ತ್ವ ಕೌಮುದಿ, ಒಂದು ವಿವೇಚನೆ' ಎಂಬ ಲೇಖನ ಪಂಡಿತ ಶಾಂತರಾಜ ಶಾಸ್ತ್ರಿಗಳು ಬರೆದಿರುವ ಗದ್ಯ ಗ್ರಂಥದ ಪರಿಚಯ ಮಾಡಿಕೊಡುತ್ತದೆ. "ನಿತ್ಯಸತ್ಯ ಪ್ರತಿಪಾದಕ ವಾಕ್ಯಗಳ ತಾತ್ವಿಕ ಬೋಧನೆಯ ಗಣಿಯಾಗಿದೆ ಕನ್ನಡ ಸಮ್ಯಕ್ತ್ವ ಕೌಮುದಿ" (ಪುಟ ೫೦) "ಕನ್ನಡ ಕಥನ ಕವನ, ಸ್ಥಿತಿಗತಿ", ಲೇಖನದಲ್ಲಿ

ಆ ಸಾಹಿತ್ಯದ ವಿವೇಚನೆಯಿದೆ. "ಕೆಲವರು ವಿಶ್ವಕರ್ಮ ವಚನಾಕಾರರು" ಎಂಬುದು ಸಾಧಾರಣ ಪ್ರಬಂಧವಾಗಿದೆ. ಇದರಲ್ಲಿ ವಿಶೇಷವಾದುದು ಏನೂ ಇಲ್ಲ.

"ಕೆಳದಿ ರಾಜ್ಯಾಭ್ಯುದಯಯಮ್, ಐತಿಹಾಸಿಕ ವಿವೇಚನೆ" ಎಂಬ ಲೇಖನ ಒಂದು ಅಪೂರ್ಣ ಚಾರಿತ್ರಿಕ ಕಾವ್ಯವನ್ನು ಕುರಿತದ್ದಾಗಿದೆ. ಇದರ ಕರ್ತೃ ಗಂಗಾಂಬಿಕೆ ಎಂಬ ಹೆಸರು ಸುಳ್ಳು ಸೃಷ್ಟಿಯೆಂದು ಸಾಬೀತು ಪಡಿಸಿದೆ. 'ಕೆಳದಿಯ ಅರಸರು' ಎಂಬ ಮತ್ತೊಂದು ಲೇಖನದಲ್ಲಿ ಸಿಂಹಾವಲೋಕನ ಕ್ರಮದಲ್ಲಿ ಚಾರಿತ್ರಿಕ ಘಟನೆಗಳನ್ನು ದಾಖಲಿಸಿದೆ. ಕೆಳದಿ ಸಾಮ್ರಾಜ್ಯದ ಗುಣಗಾನವೂ ಇದೆ. "ಕೆಳದಿಯನ್ನಾಳಿದವರು ಧರ್ಮ ಪ್ರಭುಗಳು, ಪ್ರಜಾಪೀಡನೆಯಲ್ಲೇ ನಿರತರಾದ ಪುಂಡುಪಾಳೆಯಗಾರರಲ್ಲ, ಅವರದು ವಿಶ್ವವಿಶಾಲ ಭಾವನೆ" (ಪುಟ ೧೮೯)

'ಕನ್ನಡ ಸಾಹಿತ್ಯದ ಒಲವು ನಿಲವುಗಳು' ಲೇಖನದಲ್ಲಿ ಅಧುನಿಕ ಕನ್ನಡ ಸಾಹಿತ್ಯದ ಸಮೀಕ್ಷೆಯನ್ನು ಮಾಡಿ, ಲೋಪದೋಷಗಳನ್ನು ಸೂಚಿಸಿದೆ. ಕೆಲವು ಪ್ರಮುಖ ಸಾಹಿತಿಗಳ ಪಟ್ಟಿಯನ್ನು ನೀಡಿರುವ ಈ ಲೇಖನಗಳಲ್ಲಿ ಲೇಖಕರ ಪ್ರತಿಕ್ರಿಯೆಗಳು ಪರಿಶೀಲನಾರ್ಹವಾಗಿದೆ. "ಅಡಿಗರು ಹಾಕಿದ ಅಡಿಗಲ್ಲು ನವ್ಯ ಪಂಥದ ಭವ್ಯ ಭವನ ಸುಭದ್ರವಾಗಿ ನಿಲ್ಲಲು ಸಹಕಾರಿಯಾಯಿತು" (ಪುಟ ೭೧) "ಕೈಲಾಸಂ ಅನಂತರ ಕನ್ನಡ ರಂಗಭೂಮಿಯನ್ನು ರೂಪಿಸಿಕೊಟ್ಟ ಕೀರ್ತಿ ಪರ್ವತವಾಣಿಯವರದು" (ಪುಟ ೭೨) "ಕಳೆದ ಎರಡು ವರ್ಷಗಳ ಸಾಹಿತ್ಯ ಕಾವ್ಯ" ಎಂಬ ಲೇಖನ ೧೯೭೪-೭೬ರ ಅವಧಿಯ ಕಾವ್ಯಗಳನ್ನು ಕುರಿತ ಸಮೀಕ್ಷೆಯಾಗಿದೆ. ಮುಖ್ಯ ಗ್ರಂಥಗಳನ್ನೊಳಗೊಂಡ ವಿವರವಾದ ಗ್ರಂಥ ಪಟ್ಟಿಯನ್ನು ಲೇಖಕರು ಒದಗಿಸಿದ್ದಾರೆ. "ಕನ್ನಡದಲ್ಲಿ ಸಣ್ಣಕತೆ ಮತ್ತು ಅದರ ಭವಿಷ್ಯ" ಲೇಖನದಲ್ಲಿ ಹರಿತವಾದ ವಿಮರ್ಶೆಯೂ ಕಟುವಾದ ಟೀಕೆಯೂ ಇದೆ. ಉತ್ತಮಾಂಶದ ಹೊಗಳಿಕೆಯೂ ಇದೆ. ಕೆಲವು ಸಣ್ಣ ಕಥೆಗಾರರ ನೈಪುಣ್ಯದ ಚಿತ್ರಣವೂ ಉಂಟು. "ಮಾತಿನ ನಯ, ನವುರು, ಜಾಣ್ಮೆ, ಕುಸುರಿಗೆಲಸದ ಕಲಾ ಕೈವಾಡಕ್ಕೆ ಸಣ್ಣಕತೆಯಷ್ಟು ಬೇರಾವ ಪ್ರಕಾರವೂ ಅವರಿಗೆ (ಮಾಸ್ತಿಯವರಿಗೆ) ಒಲಿಯಲಿಲ್ಲ"(ಪುಟ ೧೭೧) "ಅನಂದರ ಹಾಲ್ದಿಂಗಳಂತಹ ನಗೆ, ಸವಿದಷ್ಟೂ ಸಿಹಿ ಕೊಡುವ ಪ್ರಣಯ ಚಿತ್ರಗಳು ಕನ್ನಡದಲ್ಲಿ ಅನಂದರ ಅನಂತರ ಮತ್ತೆ ಬರಲೇ ಇಲ್ಲ ಎನ್ನಬಹುದು." (ಪುಟ ೧೭೧) "ಪ್ರಗತಿಶೀಲರ ಸೋಲಿನಿಂದ ಕೆಟ್ಟ ಪರಿಣಾಮವಾಯಿತು ಸಣ್ಣಕತೆಗೆ" (ಪುಟ ೧೭೨)

"ಷಡಕ್ಷರ ದೇವನ ಕೃತಿಗಳಲ್ಲಿ ಗುಣದೋಷಗಳು" ಪ್ರಬಂಧ ಸುದೀರ್ಘವಾಗಿದೆ. ಇದು ಪ್ರಾಯೋಗಿಕ ವಿಮರ್ಶೆಯ ಗುಂಪಿಗೆ ಸೇರುವಂಥ ಲೇಖನ. ಪ್ರಾರಂಭದಲ್ಲಿ ಪ್ರಾಚೀನ ಲಾಕ್ಷಣಿಕರ ಹೇಳಿಕೆಗಳ ಪ್ರಸ್ತಾಪ ಅತಿಯಾಗಿದೆ. ಇದು ಅನಗತ್ಯವಾಗಿತ್ತು. ಷಡಕ್ಷರ ದೇವನ ಮೂರು ಕಾವ್ಯಗಳ ಕಥಾಸಾರವಿದೆ. ಕೆಲವು ರಸಮಯ ಪದ್ಯಗಳಿಗೆ ವ್ಯಾಖ್ಯಾನ ನೀಡಿದೆ. ರಸಾಭಾಸದ ಸನ್ನಿವೇಶಗಳನ್ನು ಸೋದಾಹರಣವಾಗಿ ಟೀಕಿಸಿದೆ. "ಷಡಕ್ಷರಿ ಲೆಕ್ಕಾಚಾರದ ಕವಿ. ಲಾಕ್ಷಣಿಕರು ಹಾಕಿಕೊಟ್ಟ ನಿಯಮ ನಿಬಂಧನೆಯ ಚೌಕಟ್ಟನ್ನು ಕಿಂಚಿತ್ತೂ ಮೀರದ ನಿಷ್ಠಾವಂತ ರಚಕ... ಶಾಸ್ತ್ರದ ಶೃಂಖಲೆಯನ್ನು ಕಡಿದೊಗೆದು ಪ್ರಾತಿಭ

ವಲಯದಲ್ಲಿ ಸದಾ ನಿಮಿರಿ ನಿಲ್ಲುವ ಸಾಮರ್ಥ್ಯ ಇವನಿಗಿದ್ದಂತೆ ತೋರುವುದಿಲ್ಲ" (ಪುಟ ೯೦) "ಷಡಕ್ಷರ ದೇವನ ಕಾವ್ಯಗಳಲ್ಲಿ ಔಚಿತ್ಯವಿದ್ದಷ್ಟೇ ಪ್ರಮಾಣದಲ್ಲಿ ಅನೌಚಿತ್ಯವೂ ಬೆರೆತಿದೆ". (ಪುಟ ೯೨) ಆದರೂ ಕವಿಯ ಬಗೆಗೆ ಮೆಚ್ಚುಗೆ ಧಾರಾಳವಾಗಿ ಹರಿದಿದೆ. "ಷಡಕ್ಷರಿ ವಿಶ್ವಕವಿ, ಪ್ರೌಢ ಕನ್ನಡ ಸೀಮಾ ಪುರುಷ" (ಪುಟ ೧೦೭) ಈ ಪ್ರಶಂಸೆ ಹೆಚ್ಚಾಯಿತು ಅನ್ನಿಸುತ್ತದೆ.

ಕುವೆಂಪು ರಾಮಾಯಣದ ಸಾಲನ್ನು ಶೀರ್ಷಿಕೆಯಾಗುಳ್ಳ 'ಕೃತಿ ನನ್ನ ದರ್ಶನಂ' ಉತ್ತಮ ದರ್ಜೆಯ ರಸವಿಮರ್ಶಾ ಲೇಖನವಾಗಿದೆ. ತೌಲನಿಕ ವಿಮರ್ಶೆಯ ಹಿನ್ನೆಲೆಯಲ್ಲಿ ಇದನ್ನು ಪರಿಭಾವಿಸಬಹುದು. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯ ಭಾಗಗಳನ್ನು ಉನ್ನತ ಪರಿಕಲ್ಪನೆಯಲ್ಲಿ ವಿಮರ್ಶಿಸಿ, ಗಮನಾರ್ಹವಾದ ಒಳನೋಟಗಳನ್ನು ನೀಡಿದೆ. ಲೇಖನದ ಪ್ರಾರಂಭದಲ್ಲಿ ಮೂಲ ಮಹಾ ಕಾವ್ಯ ಸಾಹಿತ್ಯಕ ಮಹಾಕಾವ್ಯಗಳ ವಿವೇಚನೆಯಿದೆ. ಈ ಲೇಖನದ ನಿರೂಪಣೆ ನಿರುಕ್ತಿಗಳು ಸಾಹಿತ್ಯದ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿವೆ. ಕಾವ್ಯದಲ್ಲಿ "ಕಥೆ ಭಿತ್ತಿಯಾದರೆ, ವಸ್ತು ಅದರ ಮೇಲೆ ಹಬ್ಬಿದ ಬಳ್ಳಿ" (ಪುಟ ೧೦೮) "ಸಾಹಿತ್ಯಕ ಮಹಾಕಾವ್ಯ ಮೂಲ ಮಹಾಕಾವ್ಯಕ್ಕೆ ಋಣಿ. ಮೂಲ ಮಹಾಕಾವ್ಯ ತನ್ನ ಕಾಲದಲ್ಲಿ ಪ್ರಾಚುರ್ಯದಲ್ಲಿದ್ದ ಜಾನಪದಕ್ಕೆ ಋಣಿ. ಏಕೆಂದರೆ ಶಿಷ್ಟ ಸಾಹಿತ್ಯ ಸೃಷ್ಟಿಗೆ ಜಾನಪದವೇ ಮಾತೃಗರ್ಭ." (ಪುಟ ೧೦೮). "ಪ್ರಾಚೀನ ಕವಿಯ ಪುರಾಕೃತ ಮಹಾಕಾವ್ಯವೇ ಅರ್ವಾಚೀನ ಕಾವ್ಯಗಳ ಮೂಲ ಮಾತೃಕೆ" (ಪುಟ ೧೦೯) "ಶ್ರೀ ರಾಮಾಯಣ ದರ್ಶನಂ ಕಾವ್ಯದ ರಾವಣನು ಉದಾತ್ತ ಜೀವನದ ಮಹೋನ್ನತ ಕಲಾಕೃತಿಯನ್ನು ನಿರ್ಮಿಸಿದ ಮಹತ್‌ಶಿಲ್ಪಿಯಾಗಿದ್ದಾನೆ." (ಪುಟ ೧೧೨). ದಶಾನನನ ಸ್ವಪ್ನ ಸಿದ್ಧಿ, ಸೀತೆಯ ಅಗ್ನಿಪ್ರವೇಶ ಸಂದರ್ಭಗಳಲ್ಲಿ "ವಾಲ್ಮೀಕಿ ಕಾಣದ್ದನ್ನು ಕುವೆಂಪು ಕಂಡಿದ್ದಾರೆ." (ಪುಟ ೧೧೫) "ಶ್ರೀ ಕುವೆಂಪು ಒಲವು ನಿಲವು, ಭಾವ ಗೀತೆಗಳಲ್ಲಿ" ಎಂಬುದು ಸಾಮಾನ್ಯ ಮಟ್ಟದಲ್ಲೇ ಸಾಗುವ ಸಾಮಾನ್ಯ ಲೇಖನ. ಕುವೆಂಪುರವರ ಪ್ರಕೃತಿ ಪ್ರೇಮ, ಸಾಮಾಜಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಸಮೀಕ್ಷಿಸಿದೆ. "ಕನ್ನಡದ ಕಿಂಕಿಣಿ' ಕುವೆಂಪುರವರ ಒಂದೆರಡು ವಚನಗಳ ವಿಶ್ಲೇಷಣೆಯಾಗಿದೆ. ಪೂರ್ಣಪ್ರಮಾಣದ ಲೇಖನದಲ್ಲಿ ಪ್ರಾರಂಭದಲ್ಲಿ ಭಾವಗೀತೆಯ ಹೊಗಳಿಕೆಯಿದೆ. "ಕಿಂಕಿಣಿ ಕವಿಯ ಅಧ್ಯಾತ್ಮ ಅನುಭವಕ್ಕೆ ನೀಡಿದ ಅಭಿವ್ಯಕ್ತಿ! ಇವುಗಳಲ್ಲಿ ಭಾವಾಂಶಕ್ಕಿಂತ ಚಿಂತನಾಂಶದ ಪಾತ್ರ ಪ್ರಧಾನವಾಗಿರುವುದು ಕಂಡುಬರುತ್ತದೆ." (ಪುಟ ೧೮೩)

"ಮೇದಾರ ಕೇತಯ್ಯನ ವಚನಗಳಲ್ಲಿ ಕಾವ್ಯಾಂಶ" ಎಂಬುದು ಸಾಧಾರಣ ಲೇಖನ. "ಬಣಕಾರರ ವಚನಗಳಲ್ಲಿ ಪಡೆನುಡಿಗಳು" ಲೇಖನದಲ್ಲಿ ಮಹದೇವ ಬಣಕಾರರ ವಚನ ರಚನೆಯ ಹೂರಣ ಬಳಸಿರುವ ಪಡೆನುಡಿಗಳು ಅರ್ಥವಂತಿಕೆಯನ್ನು ಸೋದಾಹರಣವಾಗಿ ಪರಿಚಯಸಿದೆ. "ಮಹದೇವ ಬಣಕಾರರು ಆಧುನಿಕ ವಚನಕಾರರಲ್ಲಿ ಅಗ್ರಮಾನ್ಯರು. ಕಸುವು ತುಂಬಿದ ಕಸಿಯಾದ ವಚನಗಳನ್ನು ಅವರು ನೀಡಿ ಕನ್ನಡದ ಶ್ರೀಮಂತಿಕೆಗೆ ಕಾರಣರಾಗಿದ್ದಾರೆ. ತನ್ಮೂಲಕ ತಮ್ಮ ಬದುಕನ್ನು ಸಾರ್ಥಕಪಡಿಸಿಕೊಂಡಿದ್ದಾರೆ." (ಪುಟ ೧೪೧) "ವಚನ ಸಾಹಿತ್ಯದಲ್ಲಿ ಅದ್ವೈತ" ಶುದ್ಧ ತಾತ್ವಿಕ ವಿವೇಚನೆಯಾಗಿದೆ.

ಸಂಪ್ರದಾಯ ಶರಣರಿಗೆ ಕೆಲವು ಮಾಹಿತಿಗಳು ಲಭ್ಯವಾಗುತ್ತದೆ. "ಕೆಲವರು ಕಿರು ವಚನಕಾರ್ತಿಯರು : ಒಂದು ಸಮೀಕ್ಷೆ" ಎಂಬ ದೀರ್ಘ ಲೇಖನದಲ್ಲಿ ಸ್ತ್ರೀ ಪಕ್ಷಪಾತಿ ಧೋರಣೆಗಳಿದ್ದು ಸಾಮಾನ್ಯ ವಚನಕಾರ್ತಿಯರ ರಚನೆಗಳ ಉತ್ತಮ ಅಂಶಗಳನ್ನು ಪರಿಚಯಿಸಲು ಪ್ರಯತ್ನಿಸಿದೆ.

ಸುಬೋಧ ರಾಮರಾಯರು ಬರೆದು ಪ್ರಕಟಿಸಿದ ನೂರಾರು ಕಿರು ಜೀವನ ಚರಿತ್ರೆಗಳ ಮಾಹಿತಿಯನ್ನು "ಸುಬೋಧ ಸೌರಭ ಜೀವನ ಚರಿತ್ರೆಗಳು" ಲೇಖನ ದೊರಕಿಸುತ್ತದೆ. "ತ.ರಾ.ಸು. ರವರ ಎರಡು ಕಾದಂಬರಿಗಳು" ಲೇಖನದಲ್ಲಿ "ಜೀತದ ಜೀವ" ಮತ್ತು "ಅಗ್ನಿ ರಥ - ಮುಕ್ತಿ ಪಥ" ಕಾದಂಬರಿಗಳ ಪರಿಚಯವಿದೆ. ಕಥಾಸಾರಾಂಶ ಕೊಡುವುದೇ ಲೇಖನದ ಮುಖ್ಯಾಂಶವಾಗಿದೆ. "ಚಾರ್ವಾಕರು" ಎಂಬುದು ಉತ್ತಮ ವೈಚಾರಿಕ ಲೇಖನಗಳಲ್ಲಿ ಒಂದು. ತಾತ್ವಿಕ ವಿಷಯದ ಜಿಜ್ಞಾಸೆಯ ಜೊತೆಗೆ ಚಾರ್ವಾಕ ಮತದ ಪ್ರಶಂಸೆಯನ್ನು ವಿವಿಧ ಮೂಲಗಳಿಂದ ಸಾದರ ಪಡಿಸಿದೆ. ಅಡಕವಾದ ಈ ಲೇಖನದ ಮುಕ್ತಾಯ ಹೀಗಿದೆ- "ಚಾರ್ವಾಕದರ್ಶನದಲ್ಲಿ ಪುರುಷ ಪ್ರಯತ್ನಕ್ಕೆ ಮಹತ್ವದ ಸ್ಥಾನವಿದೆ. ಪುರುಷಪ್ರಯತ್ನದಿಂದ ಸಾಧಿಸಲಾಗದ ಮಾನವ ಕಲ್ಯಾಣ ಯಾವುದೂ ಇಲ್ಲ. ಈ ದೃಷ್ಟಿಯಿಂದ ಇಂದಿನ ವೈಜ್ಞಾನಿಕ ಜಗತ್ತಿನಲ್ಲಿ ಚಾರ್ವಾಕರು ಪ್ರತಿಪಾದಿಸಿದ ಲೋಕಾಯತ ಮತವು ಪ್ರಭಾವಶಾಲಿಯಾಗಿದ್ದಾದರೆ ಆಶ್ಚರ್ಯವಿಲ್ಲ." (ಪುಟ ೧೬೯) "ವೇದ ಋಷಿ ದರ್ಶನ" ಲೇಖನದಲ್ಲಿ ಆಗ್ನಿದ್ರಷ್ಟಾರ ವೇದಋಷಿಯ ಮಹತ್ವದ ಪ್ರತಿಪಾದನೆಯಿದೆ. ಈ ಲೇಖನದಲ್ಲಿ ಲೇಖಕರ ಕೆಲವು ಅನುಭವ ನುಡಿಗಳು ಅಭಿಮಾನ ಪೂರ್ವಕವಾಗಿ ಅಭಿವ್ಯಕ್ತ ಗೊಂಡಿದೆ. "ವೇದಮುನಿಗಳು ಹೆಚ್ಚಾಗಿ ಜ್ಞಾನಾಕಾಂಕ್ಷಿಗಳೇ ಹೊರತು ಲೌಕಿಕಾಪೇಕ್ಷಿಗಳಾಗಿರಲಿಲ್ಲ. ಬದುಕು ಅವರಿಗೆ ಸಮಸ್ಯೆಯಾಗಿರಲಿಲ್ಲ. (ಪುಟ ೧೭೭) "ಪ್ರಪಂಚದ ಎಲ್ಲಾ ರಾಷ್ಟ್ರಗಳು ಅಜ್ಞಾನದ ಅಂಧಕಾರದಲ್ಲಿ ಕಣ್ಣು ಕಾಣದೆ ಕುಳಿತಿದ್ದಾಗ ಬಹುಶಃ ಪ್ರಥಮತಃ ಎಚ್ಚೆತ್ತ ಭಾರತ ಜ್ಞಾನಜ್ಯೋತಿಯನ್ನು ಆಹ್ವಾನಿಸಿರಬಹುದು." (ಪುಟ ೧೮೦) "ಸೂರ್ಯನಿಗೂ ಬೆಳಕು ಹಾಗೂ ಶಾಖಗಳಿಗೂ ಇರುವ ಸಂಬಂಧವೇ ವೇದಗಳಿಗೂ ಮತ್ತು ಇತರ ಸಾಹಿತ್ಯ ಶಾಖೆಗಳಿಗೂ ಇದೆ." (ಪುಟ ೧೮೧)

"ಕಾನೂನು, ಭಾಷೆ ಮತ್ತು ನಾವು" ಲೇಖನದಲ್ಲಿ ಕಾನೂನು ಜ್ಞಾನದ ಅಗತ್ಯಕ್ಕೆ ಒತ್ತು ಕೊಟ್ಟಿದೆ. "ಶಿಸ್ತು ಸಂಯಮಗಳ ವ್ಯವಸ್ಥಿತ ಜೀವನವನ್ನು ಸಾಗಿಸಬೇಕಾದರೆ ಪ್ರತಿಯೊಬ್ಬ ರಾಷ್ಟ್ರಕನೂ ಕಾನೂನು ಬಲ್ಲವನಾಗಿರಬೇಕು". (ಪುಟ ೧೭೬) ಎಂಬುದು ಲೇಖಕರ ಅಭಿಮತವಾಗಿದೆ. 'ಪ್ರವಾಸ ಸಾಹಿತ್ಯ' ಎಂಬ ಲೇಖನ ಕುತೂಹಲದಿಂದ ಪ್ರಾರಂಭವಾಗಿ, ಪ್ರವಾಸ ಸಾಹಿತ್ಯ ನಡೆದು ಬಂದ ದಾರಿಯನ್ನು ದಾಖಲಿಸುತ್ತದೆ. ಪ್ರಾಚೀನ ಕಾಲದಿಂದಲೂ ಭಾರತೀಯ ಸಾಹಿತ್ಯದಲ್ಲಿ ಪ್ರವಾಸ ದಾಖಲಾತಿ ಕಾಣುವುದು ಹೊಸ ಅನುಭವ ನೀಡುತ್ತದೆ. "ನಮ್ಮಲ್ಲಿ ಅಂದರೆ ಭಾರತೀಯರಲ್ಲಿ ಈ ಪ್ರವಾಸ ಪಾಶ್ಚಾತ್ಯರ ಪ್ರವಾಸದಂತಹ ಬಹಿರಂಗ ಪ್ರದರ್ಶನದ ಪ್ರಗತಿ ಸೂಚಕವಲ್ಲ. ಅಂತರಂಗದ ವಿಕಾಸದ್ಯೋತಕ, ಆತ್ಮ ಪರಮಾತ್ಮನೆಡೆಗೆ ಹೊರಟ ಅನಂತಯಾತ್ರೆ". (ಪುಟ ೧೯೨)

'ಅವಸ್ಥಾ' ಗ್ರಂಥದಲ್ಲಿ ಮತ್ತೆ ಮತ್ತೆ ಮೆಲುಕು ಹಾಕ ಬಹುದಾದ ಮುತ್ತಿನಂತಹ ಮನನೀಯವಾದ ಅನುಭವೋಕ್ತಿಗಳು ದೊರೆಯುತ್ತವೆ. ಇವು ಸಾಹಿತ್ಯದ ಅಭ್ಯಾಸಿಗಳಿಗೂ ಸಾಮಾನ್ಯ ಓದುಗರಿಗೂ ಲೋಕಜ್ಞಾನಪ್ರಿಯರಿಗೂ ಉಪಯುಕ್ತವಾಗುತ್ತದೆ. ಕೆಲವು ಉದಾಹರಣೆಗಳನ್ನು ಗಮನಿಸಬಹುದು. "ಮೋಹನ ತರಂಗಿಣಿ ಒಂದು ಮಹಾಕಾವ್ಯ. ಶೃಂಗಾರ ಮತ್ತು ಸೌಂದರ್ಯಗಳು ಅದರ ಮೂಲ ದ್ರವ್ಯ" (ಪುಟ ೧೨) "ವ್ಯಕ್ತಿಗೆ ಒಂದು ಮುಖವಾದರೆ, ವ್ಯಕ್ತಿತ್ವಕ್ಕೆ ನಾನಾ ಮುಖಗಳು" (ಪುಟ ೨೨) ಕನಕದಾಸ "ತನ್ನ ಮನೋವಲಯದಲ್ಲಿ ಪುಟಿದೆದ್ದ ಭಕ್ತಿಯ ಕಾರಂಜಿಗೆ ರಾಮಧಾನ್ಯ ಚರಿತ್ರೆ ಎಂಬ ಒಂದು ಪ್ರಣಾಳಿಯನ್ನು ನಿರ್ಮಿಸಿದ್ದಾನೆ ಎಂದು ಹೇಳಬಹುದು. (ಪುಟ ೫೫) "ಹರಿಶ್ಚಂದ್ರ ಸತ್ಯಕ್ಕೆ ಸಂಕೇತವಾದರೆ, ನಳ ಆದರ್ಶ ಪ್ರೇಮದ ಪ್ರತೀಕವಾಗಿದ್ದಾನೆ." (ಪುಟ ೨೮). "ಪಟ್ಟ ಮಹಾದೇವಿಯ ಕಾದಂಬರಿಕಾರರಿಗೆ ಶಾಂತಲೆ ಭಾರತೀಯ ಸಂಸ್ಕೃತಿಯ ಸಾಕಾರ ರೂಪಿಣಿಯಾಗಿ ದರ್ಶನವಿತ್ತಿದ್ದಾಳೆ." (ಪುಟ ೩೬) ವಚನಕಾರರು "ಬಳಸಿದ್ದು ಭಾಷ್ಯದ ಭಾಷೆಯಲ್ಲ, ಭಾವದ ಭಾಷೆ" (ಪುಟ ೪೦) "ಈರುಳ್ಳಿಯ ಸಿಪ್ಪೆಗಳನ್ನು ಒಂದಾದ ಮೇಲೊಂದರಂತೆ ಬಿಚ್ಚುತ್ತಾ ಹೋದರೆ ಕಡೆಯಲ್ಲಿ ಏನೂ ಉಳಿಯುವುದಿಲ್ಲ" (ಪುಟ ೪೯) "ಅನರ್ಹ ಅರ್ಹಂತನಾಗುವ, ಜೀವ-ಜಿನನಾಗುವ ಆತ್ಮದ ಅದ್ಭುತ ಅಮೋಘ ವಿಕಾಸ ಸ್ವರೂಪವುಳ್ಳದ್ದು ಜೈನಧರ್ಮ" (ಪುಟ ೫೨) "ಇಂಗ್ಲಿಷ್ ಕಾವ್ಯ ಕಣ್ತೆರೆದದ್ದೇ ಕಥನ ಕವನದ ಮೂಲಕ" (ಪುಟ ೫೨) "ಬದುಕು ಸಂಕೀರ್ಣವಾದಂತೆಲ್ಲಾ ಸಮಯಕ್ಕೆ ತುಂಬಾ ಮಹತ್ವ ದೊರೆಯುತ್ತದೆ." (ಪುಟ ೫೩)," ಮಹಾಕಾವ್ಯಗಳನ್ನು ನಿತ್ಯ ಪಾರಾಯಣಕ್ಕೆ ಮತ್ತು ನೋಂಪಿಗಳಿಗೆ ಮೀಸಲಿಟ್ಟು, ಲಹರಿ ಬಂದಾಗ ಓದಿ ಆನಂದಿಸಲು ಕಥನ ಕವನ ಬಳಕೆಯಾಯಿತು" (ಪುಟ ೫೩) " ನವ್ಯವು ರಮ್ಯ ಕವಿಗಳಂತಹ ಕನಸುಣಿಗಳ ಕೈಕೂಸಾಗಲಿಲ್ಲ. ವಿವೇಚನಾಪರರ ನೇಹಿಗನಾಯಿತು. ವೈಚಾರಿಕತೆಯನ್ನೇ ತನ್ನ ಮೂಲಧಾತುವಾಗಿಸಿಕೊಂಡಿತು." (ಪುಟ ೫೩) "ನವ್ಯ ಕಾವ್ಯ ಶಿಲ್ಪಿಗಳು ಪ್ರತಿಮಾಗೃಹ ನಿರ್ಮಾಪಕರು, ದಿವ್ಯದೇಗುಲಗಳ ರೂವಾರಿಗಳಲ್ಲ" (ಪುಟ ೫೪) "ವೇಷ ಬೇರೆಯಾದರೂ ದೇಶವೊಂದೆ, ಭಾಷೆ ಬೇರೆಯಾದರೂ ಭಾವನೆ ಒಂದೆ" (ಪುಟ ೭೦). "ಕನ್ನಡ ರಂಗಕ್ಕೆ ರಂಗು ಬಳಿದವರು ಶ್ರೀರಂಗರು" (ಪುಟ ೭೨) "ಈರ್ಷೆಯಿಂದ ವಿಷ, ಪ್ರಶಂಸೆಯಿಂದ ಅಮೃತ ಹುಟ್ಟುವುದು ಸಹಜ" (ಪುಟ ೭೫) "ಭಾರತೀಯ ಸಾಹಿತ್ಯದಲ್ಲಿ ಮೀಮಾಂಸೆ ಬೆಳೆದಷ್ಟು ಪ್ರಮಾಣದಲ್ಲಿ ವಿಮರ್ಶೆ ಬೆಳೆಯಲಿಲ್ಲ." (ಪುಟ ೭೭) "ಭಾರತೀಯವಾದ ಪ್ರಾಚೀನ ಸಾಹಿತ್ಯ ಹುಟ್ಟಿದ್ದು ಗುರುಮನೆಯಲ್ಲಿ" (ಪುಟ ೭೭). "ಭಾರತೀಯ ಸಾಹಿತ್ಯದ ವಸ್ತು ದೈವ ಇಲ್ಲವೇ ಧರ್ಮ" (ಪುಟ ೯೦) "ದೌರ್ಬಲ್ಯವಿಲ್ಲದ ವ್ಯಕ್ತಿ ಇಲ್ಲ. ದೋಷವಿಲ್ಲದ ವಸ್ತುವಿಲ್ಲ. (ಪುಟ ೯೦) ಕಾವ್ಯ ವಿಮರ್ಶೆಗೆ ಇಂಥದೇ ಎಂಬ ನಿಖರವಾದ ಒರೆಗಲ್ಲು ಇಲ್ಲ" (ಪುಟ ೧೦೭) "ಮೇದಾರ ಕೇತಯ್ಯನ ವಚನಗಳಲ್ಲಿ ಕಾವ್ಯಾಂಶಕ್ಕಿಂತ ಅಧ್ಯಾತ್ಮಿಕಾಂಶವೇ ಹೆಚ್ಚು." (ಪುಟ ೧೧೭) "ಭಾವಗೀತಗಳಲ್ಲಿ ವಸ್ತು ಎಂದರೆ ಕವಿಯ ಅಂತರಂಗದ ಭಾವ ಸಂಪತ್ತು" (ಪುಟ ೧೨೨), "ಅಭಿವ್ಯಕ್ತಿ ಸಿದ್ಧಿಗೆ ಭಾಷೆಯಂತಹ ಸಮರ್ಥ ಸಾಧನ ಬೇರೊಂದಿಲ್ಲ" (ಪುಟ ೧೩೪) 'ಮಾತು ಸೋತೆಡೆಯಲ್ಲಿ ಮೌನ ಗೆಲ್ಲುತ್ತದೆ. ಧ್ವನಿ ಬದುಕುತ್ತದೆ." (ಪುಟ ೧೩೪)

"ಸಾಹಿತ್ಯ ಸದಾ ಹರಿಯುತ್ತಿರುವ ಅಮಲವಾಹಿನಿ. ಹರಿಯುವ ನೀರು ತೀರ್ಥ, ನಿಂತ ನೀರು ಕೊಚ್ಚೆ (ಪುಟ ೧೫೨) "ಅದ್ವೈತದ ಆಲಕ್ಕೆ ಬಿಳಿಲುಗಳು ಹಲವು" (ಪುಟ ೧೫೮) "ಬದುಕಿನಲ್ಲಿ ಬೇಕಾಬಿಟ್ಟಿ ಎಂದು ಭಾವಿಸಿರುವ ಒಂದು ವಸ್ತು ಎಂದರೆ ಕಾನೂನು" (ಪುಟ ೧೭೪). "ನಾವು ಇಂಗ್ಲಿಷಿನಿಂದ ಬಾಹ್ಯ ರೂಪಗಳನ್ನು ಪಡೆದೆವೇ ಹೊರತು ಅದರ ಅಂತಸ್ಥವಾದ ಆತ್ಮವನ್ನಲ್ಲ" (ಪುಟ ೧೮೩) "ಶತ ಶತಮಾನಗಳಿಂದಲೂ ಶೋಷಣೆಗೆ ಒಳಗಾದ ವ್ಯಕ್ತಿಗಳು ಇಬ್ಬರು, ಒಬ್ಬ ಶೂದ್ರ, ಮತ್ತೊಬ್ಬಳು ಸ್ತ್ರೀ" (ಪುಟ ೨೦೧) "ಭಾವ, ಭಾಷೆ, ಬಂಧ (ಛಂದಸ್ಸು) ಈ ಮೂರೂ ಸೇರಿ ಆದದ್ದು ಕಾವ್ಯ" (ಪುಟ ೨೧೭).

ಈ ಗ್ರಂಥಕ್ಕೆ 'ಅವಸ್ಥಾ' ಎಂದು ನಾಮಕರಣ ಮಾಡಿರುವುದಕ್ಕೆ ವಿಶೇಷವಾದ ಅರ್ಥವಿದ್ದಂತೆ ಕಾಣುವುದಿಲ್ಲ. ಸ್ಥಿತಿ ಅಥವಾ ಸನ್ನಿವೇಶ ಎಂಬ ಸಾಮಾನ್ಯ ಅರ್ಥವೆ ಉದ್ದೇಶವಾಗಿರುವಂತಿದೆ. ಸಾಹಿತ್ಯದ ವಿವಿಧ ಮಜಲುಗಳ ಪ್ರಸ್ತಾಪದ ಹಿನ್ನೆಲೆಯಲ್ಲೂ ಇದೇ ಅರ್ಥಗಳನ್ನು ಅನ್ವಯಿಸಿಕೊಳ್ಳಬಹುದು. ವೈಚಾರಿಕ ಪ್ರಬಂಧಗಳಿಗೆ ಸೇರಿಸಬಹುದಾದ ಒಂದೆರಡು ಲೇಖನಗಳನ್ನು ಬಿಟ್ಟರೆ 'ಅವಸ್ಥಾ' ಗ್ರಂಥದಲ್ಲಿ ರಸವಿಮರ್ಶೆ, ಪ್ರಾಯೋಗಿಕ ವಿಮರ್ಶೆ, ತೌಲನಿಕ ವಿಮರ್ಶೆಗಳಿಗೆ ಉದಾಹರಣೆಗಳಾಗುವ ಸಾಹಿತ್ಯಕ ಪ್ರಬಂಧಗಳೇ ಹೆಚ್ಚಾಗಿವೆ. ಇವು ಸೃಜನಶೀಲ ಕವಿಯಾದ ಡಾ॥ ಮರುಳಯ್ಯನವರ ಸೃಜನಶೀಲ ವಿಮರ್ಶಾ ವಿಧಾನಕ್ಕೂ ಸಾಕ್ಷಿಯಾಗುವುದು ಗಮನಾರ್ಹವಾಗಿದೆ. ಒಟ್ಟಿನಲ್ಲಿ ಹಲವು ರೀತಿಯ ಸಾಹಿತ್ಯಕ ಅನುಭವಗಳನ್ನು ನೀಡುವ 'ಆತ್ಮೀಯ' ಹಾಗೂ 'ಅವಸ್ಥಾ' ಗದ್ಯ ಗ್ರಂಥಗಳು ಓದುಗರಿಗೆ ನಿರಾಶೆ ಹುಟ್ಟಿಸುವುದಿಲ್ಲವೆಂದು ಧಾರಾಳವಾಗಿ ಹೇಳಬಹುದು.

‘ಕೇಳು ಅನಿತಾ’ - ನೇತಾಜಿ ಬಗೆಗಿನ ಹೃದಯಂಗಮ ಕೃತಿ

ಬಾಬೂ ಕೃಷ್ಣಮೂರ್ತಿ

ಭಾರತದ ಸ್ವಾತಂತ್ರ್ಯ ಸಂಗ್ರಾಮ ಪರ್ವದಲ್ಲಿ ನೇತಾಜಿ ಸುಭಾಷ್‌ಚಂದ್ರ ಬೋಸ್‌ರದೊಂದು ರೋಮಾಂಚಕ ಪಾತ್ರ. ಆತ ೧೮೫೭ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮಕ್ಕೂ ಮೊದಲಿನಿಂದ ಹರಿದು ಬಂದ ಕ್ರಾಂತಿಯ ಹಾದಿಯ ಪಥಿಕ ಶತ್ರುಗಳ ಎದುರು ಶಾಂತಿ ಮಂತ್ರ ಪಠಣ ಸಲ್ಲದು. ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಅವರಿಗೆ ಅರಿವಾಗುವ ಭಾಷೆಯಲ್ಲಿ ಉತ್ತರಿಸಬೇಕು ಎಂಬ ಸಿದ್ಧಾಂತವನ್ನು ಅನುಸರಿಸಿ ಅದರಂತೆ ಕಾರ್ಯರಂಗಕ್ಕಿಳಿದು ಮಹಾಮಹಾ ಸಾಹಸ ಕಾರ್ಯಗಳನ್ನು ಕೈಗೊಂಡವರು. ಅದಕ್ಕಾಗಿ ಅವರು ತೆತ್ತ ಬೆಲೆ ಅಪಾರ. ತನ್ನ ಸ್ವಂತ ಸುಖಾಪೇಕ್ಷೆಗಳಿಗೆ, ಐಷಾರಾಮದ ಜೀವನಕ್ಕೆ ತಿಲಾಂಜಲಿಯನ್ನಿತ್ತು ನಾಡಬಿಡುಗಡೆಗಾಗಿ ಎಲ್ಲ ತ್ಯಾಗ, ಪರಿಶ್ರಮಗಳಿಗೂ ತನ್ನನ್ನು ತಾನೇ ಒಡ್ಡಿಕೊಂಡವರು. ಅಂದಿನ ಸ್ವಾತಂತ್ರ್ಯ ಹೋರಾಟದ ಮುಂಚೂಣಿಯಲ್ಲಿದ್ದ ಅಗ್ರಗಣ್ಯ ನಾಯಕ, ಭೀಷ್ಮ ಪಿತಾಮಹರಂತಿದ್ದ ಮಹಾತ್ಮಾಗಾಂಧೀಜಿಯವರನ್ನೇ ಎದುರು ಹಾಕಿಕೊಂಡವರು. ಗಾಂಧೀಜಿ 'Means justify the end' ಅಂದರೆ 'No, End justifies the means' ಎಂದು ಹೇಳಿ ದಾರಿ ಯಾವುದಾದರೂ ಸರಿಯೇ ಶತ್ರುಗಳ ಮೂಲೋಚ್ಚಾಟನೆವಾಗಬೇಕು ಎಂಬ ನಿಲುವಿಗೆ ಬದ್ಧನಾಗಿ ಅದರಂತೆ ಕಾರ್ಯನಿರತರಾದವರು.

ಡಾ॥ ಸಾ.ಶಿ. ಮರುಳಯ್ಯನವರು ಇಂತಹ ಧೀರೋದಾತ್ತ ವ್ಯಕ್ತಿತ್ವವನ್ನು ಆಯ್ದುಕೊಂಡು ಬರೆದಿರುವ ಜೀವನ ಚರಿತ್ರೆಯೇ ‘ಕೇಳು ಅನಿತಾ’ ೧೮೫ ಪುಟಗಳಲ್ಲಿ ಸಂಗ್ರಹವಾಗಿ ಅವರ ಇಡೀ ಜೀವನವನ್ನು ತಿಳಿ ಹೇಳುವ ಈ ಪುಸ್ತಕಕ್ಕೆ ‘ಕೇಳು ಅನಿತಾ’ ಎಂದು ಸ್ವಲ್ಪ ಭಿನ್ನ ಬಗೆಯ ಹೆಸರಿಟ್ಟಿರುವುದು ಒಂದು ವಿಶೇಷ. ಇಲ್ಲಿ ಅನಿತಾ ಯಾವುದೋ ಒಂದು ಹುಡುಗಿಯಲ್ಲ, ಸ್ವತಃ ಸುಭಾಷ್‌ಚಂದ್ರ ಬೋಸ್‌ರ ಮಗಳು. ಅವರು ವಿಯೆನ್ನಾದಲ್ಲಿದ್ದಾಗ ಎಮಿಲಿ ಶೆಂಕ್ಲ್ ಎಂಬಾಕೆಯನ್ನು ವಿವಾಹವಾಗಿ ತನ್ಮೂಲಕ ಪಡೆದ ಮಗಳು. ಪುಟಾಣಿ ಮಗುವಾಗಿದ್ದಾಗ ತಂದೆಯನ್ನು ಕಂಡಿದ್ದ ಅನಿತಾ ಶೆಂಕ್ಲ್ ಬೋಸ್ ತನ್ನ ತಂದೆಯ ತಾಯಿನಾಡನ್ನು ನೋಡಲು ೧೯೬೦ರ ಡಿಸೆಂಬರ್‌ನಲ್ಲಿ ಭಾರತಕ್ಕೆ ಬಂದ ಸಂದರ್ಭದಿಂದ ಈ ಪುಸ್ತಕದ ಆರಂಭ. ಕಥಾ ನಿರೂಪಣೆ ಲೇಖಕರು ಅಳವಡಿಸಿಕೊಂಡಿರುವ ತಂತ್ರ ವಿಶಿಷ್ಟವಾದದ್ದು.

ಅನಿತಾ ಕಲ್ಕತ್ತೆಗೆ ಬಂದಾಗ ಅವಳಿಗೆ ಭವ್ಯ ಸ್ವಾಗತ ಸಿಗುವುದು. ಅವಳು ತನ್ನ ತಂದೆಯ ನೇತಾಜಿ ಭವನದಲ್ಲಿಯೇ ತಂಗ ಬಯಸುವಳು. ಅದರಂತೆ ವ್ಯವಸ್ಥೆಯಾಗುವುದು ಆ ಭವನದಲ್ಲಿ ತಂದೆಯ ಕೋಣೆಯಲ್ಲಿ ಅವರ ಹಾಸಿಗೆಯ ಮೇಲೆ ಮಲಗಿದ್ದಾಗ ಅವಳಿಗೆ ಅವರ ನೆನಪುಗಳು ಮುತ್ತುವುದು ಸಹಜವೇ. ಆ ಸಂದರ್ಭವನ್ನು ಉಪಯೋಗಿಸಿಕೊಂಡ ಲೇಖಕರು ಒಂದು ಕನ್ನಡಿ ಅವಳಿಗೆ ಅವಳ ತಂದೆಯ

ಪೂರ್ವೋತ್ತರಗಳನ್ನು ಹೇಳುತ್ತಾ ಹೋಗುವಂತೆ ನಿರೂಪಣೆ ಮಾಡಿದ್ದಾರೆ. ಮಧ್ಯೆ ಮಧ್ಯೆ ಅನಿತಾಳಿಂದಲೂ ಪ್ರಶ್ನೆಗಳುಂಟು. ಹೀಗಾಗಿ ಇದಕ್ಕೆ 'ಕೇಳು ಅನಿತಾ' ಎಂಬ ಹೆಸರು. ನೇತಾಜಿ ಸುಭಾಷ್‌ಚಂದ್ರ ಬೋಸ್‌ರಂತಹ ರಣಧೀರ ಸ್ವಾತಂತ್ರ್ಯ ಯೋಧನ ಬಗ್ಗೆ ಪುಸ್ತಕ ಬರೆಯಲು ಆಯ್ಕೆ ಮಾಡಿಕೊಂಡಿದ್ದೇಕೆ? ಅದಕ್ಕೆ ಉತ್ತರ 'ನನ್ನ ಮಾತು'ವಿನಲ್ಲಿ ಹೀಗೆ ಅವರೇ ನೀಡಿದ್ದಾರೆ. ''ನಾನು ಎಳೆಂಟು ವರ್ಷ ಬಾಲಕನಾಗಿದ್ದಾಗ ಗಾಂಧೀಜಿಯವರನ್ನು ಸಬರಮತಿ ಆಶ್ರಮದಲ್ಲಿ ನೋಡಿದ್ದೆ. ನಮ್ಮ ದೊಡ್ಡಪ್ಪನವರ ಕೃಪೆಯಿಂದ; ಜವಹರಲಾಲ್ ನೆಹರೂರವರ ಭಾಷಣ ಕೇಳಿದ್ದೆ; ಮಿತ್ರರ ನೆರವಿನಿಂದ ಮೈಸೂರಿನಲ್ಲಿ; 'ಸ್ವತಂತ್ರ ಭಾರತದ ಪ್ರಥಮ ಪ್ರಧಾನಿಯಾದ ತರುಣದಲ್ಲೇ ನೆಹರೂ ಮೈಸೂರಿಗೆ ಬಂದಿದ್ದರು. ಅರಮನೆಯ ಮುಂಭಾಗ ಟೌನ್‌ಹಾಲ್ ಮಹಡಿಯ ಮೇಲೆ ನಿಂತು ಭಾಷಣ ಮಾಡಿದ್ದರು. ಬೇಲೂರಿನ ಶ್ರೀ ಚೆನ್ನಕೇಶವ ದೇವಾಲಯದ ಪ್ರಾಂಗಣದಲ್ಲಿ ನೆಹರೂಜಿಯವರಿಗೆ ಗುಲಾಬಿ ಹೂವೊಂದನ್ನು ಕೊಟ್ಟು ಕೈಮುಗಿದಿದ್ದೆ. ನಮ್ಮ ಸೋದರಮಾವನವರ ಪ್ರೇರಣೆಯಿಂದ. (ಆಗ ನಮ್ಮ ಮಾವನವರು ಬೇಲೂರಿನಲ್ಲಿ ಶಾಲಾ ಶಿಕ್ಷಕರಾಗಿದ್ದರು). ಅಂದಿನಿಂದಲೂ ಆ ಮಹಾಪುರುಷರ ಬಗೆಗೆ ತಿಳಿದುಕೊಳ್ಳುವ ಕುತೂಹಲ. ಆ ಕುತೂಹಲ ಕೃತಿರೂಪದಲ್ಲಿ ಹೊರ ಬಂದಿದ್ದು ಸುಮಾರು ನಲವತ್ತು ವರ್ಷಗಳ ಹಿಂದೆ. ನನ್ನ ಪ್ರಾಯದ ದಿನಗಳಲ್ಲಿ 'ವಿಭೂತಿ ಪುರುಷರು' ಎಂಬ ಶೀರ್ಷಿಕೆಯಡಿಯಲ್ಲೆ ಗಾಂಧೀಜಿಯವರನ್ನು ಕುರಿತು ಬರೆದೆ. ಅದನ್ನು ದಿ. ಕೊರಟಿ ಶ್ರೀನಿವಾಸರಾಯರು ಪ್ರಕಟಿಸಿದರು. ನೆಹರೂ ಕುರಿತ 'ಭಾರತ ರತ್ನ' ಬರೆದೆ. ಅದನ್ನು ತಿಪಟೂರಿನ ಸುದರ್ಶನ ಪ್ರಕಾಶನದ ಶ್ರೀ ತಾ.ರಾ. ನಾಗರಾಜ್ ಪ್ರಕಟಿಸಿದರು. ಇದೀಗ ನಾಲ್ಕು ವರ್ಷಗಳ ಹಿಂದೆ 'ಅಪರೂಪದವರು' ಪುಸ್ತಕದಲ್ಲಿ ನೇತಾಜಿ ಕುರಿತ 'ಕನ್ನಡಿ ಹೇಳಿದ ಕಥೆ' ಎಂಬ ಕಿರುಚಿತ್ರಣ ಸೇರಿಸಿದೆ...ಅದನ್ನೇ ಈಗ ನೇತಾಜಿಯವರ ಸಾಹಸ, ಸಾಧನೆಗಳ ಕುರಿತ ವಿಸ್ತೃತ ರಚನೆ ಕೊಡುತ್ತಿದ್ದೇನೆ...''

ಗಾಂಧಿ, ನೆಹರೂ, ನೇತಾಜಿ ಸ್ವಾತಂತ್ರ್ಯ ಸಾಧನೆಯ ಹೊಸತಿನಲ್ಲಿ ಎಲ್ಲರ ಮನೆಗಳ ಗೋಡೆಗಳನ್ನು ಅಲಂಕರಿಸಿದ್ದ ತ್ರಿಮೂರ್ತಿಗಳು, ಗಾಂಧಿ, ನೆಹರೂ ಬಗ್ಗೆ ಬರೆದಿದ್ದ ಲೇಖಕರಿಗೆ ನೇತಾಜಿಯವರ ಬಗ್ಗೆಯೂ ಬರೆಯಬೇಕೆನಿಸಿದ್ದು ಸಹಜವೇ.

ಹಾಗೆ ನೋಡಿದರೆ ಭಾರತ ದೇಶದ ಚರಿತ್ರೆಯಲ್ಲಿ ನೇತಾಜಿಯವರಿಗೆ ನಿಜವಾಗಲೂ ಸಲ್ಲಬೇಕಾದ ಸ್ಥಾನ ಸಂದಿಲ್ಲ. ರಾಜಕೀಯ ಸ್ವಾರ್ಥಿಗಳ ಪೈಪೋಟಿಯಲ್ಲಿ, ಸಿದ್ಧಾಂತಗಳ ಸೆಣಸಾಟದಲ್ಲಿ ಅವರನ್ನು ಮೂಲೆಗುಂಪು ಮಾಡುವ ಪ್ರಯತ್ನ ನಡೆಯಿತು.

ಗಾಂಧೀಜಿಯವರಿಗೂ ನೇತಾಜಿಯವರಿಗೂ ಮೊದಲ ಭೇಟಿಯಿಂದಲೇ ಭಿನ್ನಾಭಿಪ್ರಾಯಗಳು ಆರಂಭವಾದವು. ಇಂಗ್ಲೇಂಡಿನಿಂದ ಭಾರತಕ್ಕೆ ಹಿಂದಿರುಗಿದ್ದ ನೇತಾಜಿ ಮೊದಲು ಕಂಡಿದ್ದು ಗಾಂಧೀಜಿಯವರನ್ನೇ, ಮುಂಬಯಿಯಲ್ಲಿ. ಆದರೆ ನವನವೋತ್ಸಾಹದಿಂದ ಪುಟಿಯುತ್ತಿದ್ದ, ಹೋರಾಟದ ಹೊಸಹೊಸ ಯೋಜನೆಗಳನ್ನು ಹೆಣೆದುಕೊಂಡು ಬಂದಿದ್ದ ಸುಭಾಷ್‌ಗೆ ಗಾಂಧೀಜಿಯವರ ಅಂದಿನ ಕಾರ್ಯ ಪ್ರಣಾಲಿಕೆ ಅಷ್ಟೊಂದು ಸಮಂಜಸವೆನಿಸಲಿಲ್ಲ. ಅದರಿಂದಲೇ ಗಾಂಧೀಜಿಯವರೇ ಅವರನ್ನು ದೇಶಬಂಧು

ಚಿತ್ತರಂಜನದಾಸರ ಬಳಿಗೆ ಹೋಗುವಂತೆ ಸೂಚಿಸಿದರು. ಆನಂತರವೂ ಅವರು ಎಂದೂ ಒಂದಾಗಲಿಕ್ಕೆ ಸಾಧ್ಯವೇ ಆಗಲಿಲ್ಲ. ಗುರಿ ಒಂದೇ ಆಗಿದ್ದರೂ ಅವರ ದಾರಿಗಳು ಬೇರೆ ಬೇರೆ ಎಂಬುದು ಇಬ್ಬರಿಗೂ ಸ್ಪಷ್ಟವಿತ್ತು.

ಗಾಂಧೀಜಿ ಹಾಗೂ ಸುಭಾಷರ ವಿರುದ್ಧ ದಿಕ್ಕಿನ ಚಿಂತನೆಗಳು ಬಹಿರಂಗವಾಗಿ ಸ್ಫೋಟಗೊಂಡಿದ್ದು ೧೯೩೯ರ ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯ ಸಂದರ್ಭದಲ್ಲಿ. ಸುಭಾಷರು ಸ್ಪರ್ಧಿಸಿದರು. ಅವರಿಗೆ ಜಯಪ್ರಕಾಶ್ ನಾರಾಯಣ್, ರಾಮಮನೋಹರ ಲೋಹಿಯಾ, ಅಶೋಕ ಮೆಹ್ತಾ, ಆಚಾರ್ಯ ನರೇಂದ್ರ ದೇವರ ಬೆಂಬಲವಿತ್ತು. ಗಾಂಧೀಜಿ ತಮ್ಮ ಅಭ್ಯರ್ಥಿಯಾಗಿ ಪಟ್ಟಾಭಿ ಸೀತಾರಾಮಯ್ಯನವರನ್ನು ಕಣಕ್ಕಿಳಿಸಿದರು. ಚುನಾವಣೆ ನಡೆಯಿತು. ಸುಭಾಷ್ ಗೆದ್ದರು. ಅವರಿಗೆ ೧೫೮೦ ಮತಗಳು, ಪಟ್ಟಾಭಿ ಸೀತಾರಾಮಯ್ಯ ಸೋತರು. ಅವರಿಗೆ ೧೩೭೫ ಮತಗಳು. ಗಾಂಧೀಜಿಯವರಿಗೆ ಈ ಫಲಿತಾಂಶ ವಜ್ರಾಘಾತವೆನಿಸಿತು. ಪಟ್ಟಾಭಿರಾಮರ ಸೋಲು ತಮ್ಮ ಸ್ವಂತ ಸೋಲೆಂದು ಹೇಳಿಯೂ ಬಿಟ್ಟರು. ಸುಭಾಷರು ಗೆದ್ದರೂ ಅವರೇನೂ ಕಾಂಗ್ರೆಸ್ಸನ್ನು ತಮ್ಮ ರೀತಿಯಲ್ಲಿ ಮುಂದುವರಿಸಲು ಸಾಧ್ಯವಿರಲಿಲ್ಲ. ಗಾಂಧೀಜಿಯವರ ಅಸಂತುಷ್ಟಿಯಿಂದ ಪ್ರೇರೇಪಿತರಾದ ಎ.ಐ.ಸಿ.ಸಿ. ಸದಸ್ಯರೆಲ್ಲ ರಾಜಿನಾಮೆ ಸಲ್ಲಿಸಿದರು. ಸದಸ್ಯರಾಗಿ ಉಳಿದವರು ಅವರ ಅಣ್ಣ ಶರತ್‌ಚಂದ್ರ ಬೋಸರೊಬ್ಬರೇ! ಸುಭಾಷರು ಗಾಂಧೀಜಿಯವರೊಡನೆ ವಾರ್ಧಾದಲ್ಲಿ ನಡೆಸಿದ ಮಾತುಕತೆಯೂ ಫಲಕಾರಿಯಾಗದೆ ಇತೋ ಭ್ರಷ್ಟಃ ತತೋ ಭ್ರಷ್ಟ ಸ್ಥಿತಿ ತಲುಪಿದಾಗ ಫಾರ್ವರ್ಡ್ ಬ್ಲಾಕ್ ಸ್ಥಾಪಿಸಿದರು. ಹೀಗೆಯೇ ಮುಂದೇನೆಂದು ಪರದಾಡುತ್ತಿದ್ದಾಗ ಅವರು ಭಾರತದಿಂದ ಹೊರ ಹೋಗಿ ಅಲ್ಲಿಂದ ಬ್ರಿಟಿಷರ ವಿರುದ್ಧ ರಣಕಹಳೆ ಮೊಳಗಿಸುವ ಮಹಾನ್ ನಿರ್ಧಾರ ತಳೆದರು. ಅದಕ್ಕೆ ಪ್ರೇರಣೆ? ಇಲ್ಲಿಯವರೆಗೂ ಅಷ್ಟು ಪ್ರಚಲಿತವಲ್ಲದ ಒಂದು ಪಾರ್ಶ್ವವನ್ನೂ ಇಲ್ಲಿ ಲೇಖಕರು ತೋರಿಸುತ್ತಾರೆ. ಬ್ರಿಟಿಷ್ ಸ್ಮಾರಕಗಳನ್ನು ನಾಶಮಾಡುವ ಚಳುವಳಿಯಲ್ಲಿ ಕಲ್ಕತ್ತೆಯ ಪೊಲೀಸರು ಸುಭಾಷ್‌ರನ್ನು ಬಂಧಿಸಿದರು. ''... ಸೆರೆಯಲ್ಲಿದ್ದ ಸುಭಾಷ್‌ರಿಗೆ ದಿಕ್ಕು ತೋಚದಾಯಿತು. ತಲೆಯ ಮೇಲೆ ಕೈಹೊತ್ತು ಕುಳಿತರು. ಆದರೆ ಅಂತಹ ವಿಷಮ ಸನ್ನಿವೇಶದಲ್ಲಿ ಸ್ವಾತಂತ್ರ್ಯವೀರ ವಿನಾಯಕ ದಾಮೋದರ ಸಾವರ್ಕರ್‌ರವರ ಸಮಯೋಚಿತ ನೈತಿಕ ಬೆಂಬಲ ದೊರಕಿತು. ವೀರ ಸಾವರ್ಕರ್ ರಾಷ್ಟ್ರ ಪ್ರೇಮಿ. ಅವರು ಸುಭಾಷರಿಗೆ ಸೂಕ್ತ ರೀತಿಯಲ್ಲಿ ಸಲಹೆ ನೀಡಿದರು; 'ಬೋಸ್‌ಜಿ, ಇಂಗ್ಲೆಂಡ್ ಮಹಾಯುದ್ಧದ ಆತಂಕವನ್ನು ಎದುರಿಸುತ್ತಾ ಕುಸಿದಿರುವಾಗ ನಿಮ್ಮಂಥ ಮೇಧಾವಿ ನಾಯಕರು ಹಳೆಯ ಬ್ರಿಟಿಷ್‌ಸ್ಮಾರಕಗಳನ್ನು ಕೆಡುವಂಥ ಸಣ್ಣ ಕೆಲಸಕ್ಕೆ ಕೈಹಾಕಿ ಜೈಲು ಸೇರಬಾರದು. ಸತ್ತವರ ಪ್ರತಿಮೆಗಳ ನಾಶಕ್ಕಿಂತ ಬದುಕಿರುವ ಉನ್ಮತ್ತ ಕತ್ತೆಗಳನ್ನು ಸದೆ ಬಡಿಯುವುದು ಹೆಚ್ಚು ಸೂಕ್ತ. ಮೊದಲು ಕಂಟಕಪ್ರಾಯರಾದ ಬ್ರಿಟಿಷರನ್ನು ಕೊಚ್ಚಿಹಾಕಿ; ಅದು ಬಿಟ್ಟು ಸಣ್ಣಪುಟ್ಟ ಚಳುವಳಿ ಮಾಡಿಕೊಂಡು ಅಗ್ರನಾಯಕರಾದ ನೀವು ಸೆರೆಮನೆಗಳಲ್ಲಿ ಕುಳಿತರೆ ಏನು ಪ್ರಯೋಜನ? ಬ್ರಿಟಿಷ್ ಸರ್ಕಾರ ಇಂದು ಬಯಸುತ್ತಿರುವುದು ಅದನ್ನೇ ಅಲ್ಲವೇ? ಸೆರೆಮನೆಯಲ್ಲಿ ಇರಬೇಕಾದವರು ಬ್ರಿಟಿಷರೇ ಹೊರತು ಭಾರತೀಯರಲ್ಲ. ದಯವಿಟ್ಟು ನನ್ನ ಮಾತು ಆಲಿಸಿ. ಸಶಸ್ತ್ರ ಬಂಡಾಯ

ಅಸಾಧ್ಯವಲ್ಲ. ತರುಣರು ಹೆಚ್ಚು ಸಂಖ್ಯೆಯಲ್ಲಿ ಸೇನೆಗೆ ಸೇರಬೇಕು. ಬ್ರಿಟಿಷರ ವಿರುದ್ಧ ಹೋರಾಡಬೇಕು, ಹೊಡೆದೋಡಿಸಬೇಕು. ಇಂದಿನ ಮಹಾಯುದ್ಧದಿಂದ ಬ್ರಿಟಿಷರ ಗಮನ ಅನ್ಯತ್ರ ಹರಡಿದೆ. ಇದು ಸುಸಮಯ. ಜರ್ಮನಿ ಮತ್ತು ಜಪಾನ್ ದೇಶಗಳು ನಿಮ್ಮ ಬೆಂಬಲಕ್ಕಿವೆ. ಮುನ್ನುಗ್ಗಿ. ಜರ್ಮನಿ ಮತ್ತು ಇಟಲಿಯ ವಶದಲ್ಲಿರುವ ಯುದ್ಧ ಕೈದಿಗಳನ್ನು ಬಂಧನದಿಂದ ಮೊದಲು ಬಿಡಿಸಿಕೊಳ್ಳಿ. ಎರಡೂ ಸರ್ಕಾರಗಳು ನಿಮ್ಮ ಮಾತನ್ನು ತೆಗೆದುಹಾಕುವುದಿಲ್ಲ. ಆ ಕೈದಿಗಳು ನಿಮಗೆ ಆತ್ಮೀಯ ಬಂಧುಗಳಾಗುತ್ತಾರೆ. ಅವರಲ್ಲಿ ರಾಷ್ಟ್ರೀಯ ಭಾವನೆ ಮೂಡುವಂತೆ ಮಾಡಿ.... ಜಪಾನ್ ಬ್ರಿಟನ್ ವಿರುದ್ಧ ಯುದ್ಧ ಘೋಷಿಸಿದ ಕೂಡಲೇ ನೀವು ಬರ್ಮಾ ಗಡಿಯಿಂದಲೇ ಅಥವಾ ಬಂಗಾಳ ಕೊಲ್ಲಿಯ ಕಡೆಯಿಂದಲೇ ಭಾರತದ ಮೇಲೆ ಆಕ್ರಮಣ ನಡೆಸಿ, ಸ್ವಾತಂತ್ರ್ಯವನ್ನು ಘೋಷಿಸಿ... ನೀವು ನಮ್ಮ ಆಶಾಜ್ಯೋತಿ! ದಯವಿಟ್ಟು ಮುಂದಡಿ ಇಡಿ''. ಸಾವರ್ಕರ್‌ರವರ ಈ ಕಿವಿಮಾತು ಸುಭಾಷ್‌ರ ಮಸ್ತಿಕದಲ್ಲಿ ಕೆಲಸ ಮಾಡುತ್ತಿತ್ತು. ಅವರ ತಲೆಯಲ್ಲಿ ಸೀಮೋಲ್ಲಂಘನ ಮಾಡಿ ಭಾರತದ ವಿಮೋಚನೆಗೆ ಹೊರಗಿನಿಂದ ಪ್ರಯತ್ನಿಸುವುದೆಂಬ ವಿಚಾರದ ಮೊಳಕೆಯೊಡೆಯಲಾರಂಭಿಸಿತು. ಅದರ ಫಲ ಸ್ವರೂಪವೇ ಗೃಹಬಂಧನದಿಂದ ೧೯೪೧ರ ಜನವರಿ ೧೬ರ ರಾತ್ರಿ ಪಲಾಯನ! ಕಲ್ಕತ್ತೆಯ ತುಂಬಾ ಕಾಳಿ ಪೂಜೆಯ ವಿಜೃಂಭಣೆ ಆವರಿಸಿಕೊಂಡಿದ್ದ ಆ ರಾತ್ರಿ ಎಲ್ಗಿನ್ ರಸ್ತೆಯ ತಮ್ಮ ಮನೆಯಿಂದ ಹೊರಬಂದು ಅಸನ್‌ಸಾಲ್ ತಲಪಿ ಅಲ್ಲಿಂದ ಪೇಶಾವರ್‌ಗೆ ರೈಲಿನಲ್ಲಿ ಪ್ರಯಾಣ ಬೆಳೆಸಿ ಬರ್ಲಿನ್ ತಲಪಿದ ಅವರ ಸಾಹಸ ಯಾತ್ರೆಯನ್ನು ಲೇಖಕರು ಆಸಕ್ತಪೂರ್ಣವಾಗಿ ಬಣ್ಣಿಸುವುದರಲ್ಲಿ ಬಹಳ ಯಶಸ್ವಿಯಾಗಿದ್ದಾರೆ.

ಆನಂತರ ವಿದೇಶಿ ನೆಲದಲ್ಲಿ ಸುಭಾಷರ ಕಾರ್ಯಚಟುವಟಿಕೆಗಳನ್ನು ವಿವರಿಸುತ್ತಾ ಹಿಟ್ಲರ್, ಮುಸೋಲಿನಿ ಮುಂತಾದವರೊಂದಿಗೆ ಭೇಟಿ, ಯುದ್ಧ ಕೈದಿಗಳನ್ನು ಸಂಘಟಿಸಿ ಅವರಲ್ಲಿ ಸ್ಫೂರ್ತಿ ಉಕ್ಕೇರಿಸಿದ್ದೇ ಮುಂತಾದ ವಿವರಗಳು ಅವರ ಅಹರ್ನಿಶಿ ದುಡಿತದ ಬಗ್ಗೆ ಬೆಳಕು ಬೀರುತ್ತದೆ. ಅವರು ಜಪಾನಿಗೆ ಹೋಗಿ ಅಲ್ಲಿ ಇಂಡಿಯನ್ ಇಂಡಿಪೆಂಡೆನ್ಸ್ ಲೀಗ್ ಸ್ಥಾಪಿಸಿದ್ದು ರಾಸ್‌ಬಿಹಾರಿ ಬೋಸರನ್ನು ಭೇಟಿಯಾಗಿ ಮುಂದಿನ ಭಾರಿ ಪ್ರಯತ್ನಗಳಿಗೆ ರೂಪರೇಷೆ ತಯಾರಿಸಿ ಆಜಾದ್ ಹಿಂದ್ ಫೌಜ್‌ನ ಸೇನಾಪತಿತ್ವ ವಹಿಸಿಕೊಂಡು, ದ್ವಿತೀಯ ಮಹಾಯುದ್ಧದ ವೇಳೆಯಲ್ಲಿ ಕೈದಿಗಳಾಗಿದ್ದ ಭಾರತೀಯ ಸೈನಿಕರ ಹೃದಯದಲ್ಲಿ ತಮ್ಮ ಸಿಂಹವಾಣಿಯಿಂದ ದೇಶಭಕ್ತಿಯನ್ನು ಪ್ರೇರೇಪಿಸಿ, ಅವರನ್ನು ತ್ಯಾಗ ಪರಿಶ್ರಮಗಳಿಗೆ ಸಜ್ಜುಗೊಳಿಸಿ ಪ್ರತ್ಯಕ್ಷ ರಣರಂಗದಲ್ಲಿ ನೇತೃತ್ವ ವಹಿಸಿದ ನೇತಾಜಿಯವರ ವ್ಯಕ್ತಿತ್ವವನ್ನು ಪರಿಣಾಮಕಾರಿಯಾಗಿ ಸಾದರಪಡಿಸಿದ್ದಾರೆ. ಹೋರಾಟದ ನಡುವೆಯೇ ೧೯೪೫ರ ಆಗಸ್ಟ್ ೧೮ರಂದು ಟಾಯ್‌ವೆ ವಿಮಾನ ನಿಲ್ದಾಣದಲ್ಲಿ ಆದ ವಿಮಾನಾಪಘಾತದಲ್ಲಿ ನೇತಾಜಿ ಇಹಲೋಕ ತ್ಯಜಿಸುವ ವಿವರಗಳೊಂದಿಗೆ 'ಕೇಳು ಅನಿತಾ' ಮುಕ್ತಾಯಗೊಳ್ಳುತ್ತದೆ.

ಸುಭಾಷ್‌ಚಂದ್ರ ಬೋಸ್‌ರ ಬಗ್ಗೆ ಕನ್ನಡದಲ್ಲಿ ಪುಸ್ತಕಗಳು ಹೇರಳವಾಗಿಲ್ಲ. ಅವರ ಬಗ್ಗೆ, ಅವರ ಭಾಷಣಗಳ ಬಗ್ಗೆ ಎಷ್ಟು ಪುಸ್ತಕಗಳು ಹೊರಬರಬೇಕಾಗಿತ್ತೋ ಅಷ್ಟೂ

ಬಂದಿಲ್ಲ. ಅಲ್ಲೊಂದು ಇಲ್ಲೊಂದು ಚಿಕ್ಕ ಪುಸ್ತಕ ದೊರೆಯುತ್ತದೆ. ನೇತಾಜಿ ಶತಮಾನೋತ್ಸವದ ಸಂದರ್ಭದಲ್ಲಿ ಪ್ರಕಟವಾದ ಶ್ರೀ ಎಸ್.ಆರ್. ರಾಮಸ್ವಾಮಿಯವರ 'ಕೋಲ್ಮಿಂಚು' ಒಂದು ಉತ್ತಮ ಪುಸ್ತಕವೆನ್ನಬಹುದು.

ನೇತಾಜಿ ಜನ್ಮಶತಾಬ್ದಿಯ ವರ್ಷದಲ್ಲಿ ಒಂದು ಸಮಿತಿ ರಚನೆಯಾಯಿತು. ಅದು ಸಮಾರಂಭಗಳನ್ನು ಏರ್ಪಡಿಸುವುದರಲ್ಲಿ, ಸೊವೆನೀರ್‌ಗಳನ್ನು ಹೊರ ತರುವುದರಲ್ಲಿ, ನೇತಾಜಿ ಭವನಕ್ಕೆ ಶಂಕುಸ್ಥಾಪನೆ ಮಾಡುವುದರಲ್ಲಿ ಹೆಚ್ಚಿನ ಆಸ್ಥೆವಹಿಸಿತು. ನೇತಾಜಿಯವರ ಸಮಗ್ರ ಕೃತಿಗಳನ್ನು ಪ್ರಕಟಿಸಿದ್ದರೆ ಯುವ ಜನಾಂಗಕ್ಕೆ ಎಂತಹ ಕೊಡುಗೆ ಕೊಟ್ಟಂತಾಗುತ್ತಿತ್ತು. ಆದರೆ ಆ ಕೆಲಸಕ್ಕೆ ಸಮಿತಿ ಕೈ ಹಾಕಲಿಲ್ಲ. ಆ ದಿನಗಳಲ್ಲೋ ಸಾರ್ವಜನಿಕ ಸಮಾರಂಭದಲ್ಲಿ ಅಂದಿನ ಮುಖ್ಯಮಂತ್ರಿ ಹೆಚ್.ಡಿ. ದೇವೇಗೌಡರು ತಮ್ಮ ಸರ್ಕಾರ ನೇತಾಜಿಯವರ ಸಮಗ್ರ ಕೃತಿಗಳನ್ನು ಶತಾಬ್ದಿಯ ವರ್ಷವೇ ಹೊರ ತರುವುದಾಗಿ ಉದ್ಘೋಷಿಸಿದರು. ಅದೂ ಒಂದು ರಾಜಕೀಯ ವರಸೆಯಾಗಿಯೇ ಉಳಿದುಹೋಯಿತು. ಆಗಲೇ ಹೊರಬರಬೇಕಾಗಿದ್ದ 'ಕೇಳು ಅನಿತಾ' ಕೂಡ ನಾಲ್ಕು ವರ್ಷ ಕಾಯಬೇಕಾಯಿತು. ಇದು ಇಂದಿನ ನಮ್ಮ ನಾಯಕ ಮಣಿಗಳು ಹಿಂದಿನ ರಾಷ್ಟ್ರ ನಾಯಕರ ಬಗ್ಗೆ ಇರಿಸಿಕೊಂಡಿರುವ ದೃಷ್ಟಿಕೋನಕ್ಕೊಂದು ಉದಾಹರಣೆ.

ಒಟ್ಟಿನಲ್ಲಿ ಚಿಕ್ಕದಾದರೂ ಸಾಕಷ್ಟು ವಿವರಗಳನ್ನು ನೀಡುವ 'ಕೇಳು ಅನಿತಾ' ಡಾ॥ ಸಾ.ಶಿ. ಮರುಳಯ್ಯನವರು ಕನ್ನಡದಲ್ಲಿನ ನೇತಾಜಿ ಸಾಹಿತ್ಯಕ್ಕೆ ನೀಡಿರುವ ಒಂದು ಸುಂದರ ಕೊಡುಗೆ. ಒಮ್ಮೆ ಕುಳಿತು, ಸುಲಭವಾಗಿ ಓದಿ, ಆ ಮಹಾಪುರುಷನ ಚಿತ್ರವನ್ನು ಕಣ್ಣಮುಂದೆ ತಂದುಕೊಳ್ಳಲು ಸಹಾಯಕವಾಗಿರುವ ಒಂದು ಸ್ಫೂರ್ತಿದಾಯಕ ಕೃತಿ.

ಸಾಶಿಮರ ಚತುರ್ಮುಖಗಳು

ಟಿ.ಆರ್. ಮಹಾದೇವಯ್ಯ

ಇರುವ ಒಂದು ಮುಖದಲ್ಲೇ ಸರಿಯಾಗಿ ಕಾಣಿಸಿಕೊಳ್ಳಲಾಗದ, ಪರಿಣಾಮ ಬೀರದ ಜನರೇ ತುಂಬಿರುವ ಸಮಾಜದಲ್ಲಿ ಕೆಲವು ಅಪರೂಪದವರು ತಮ್ಮ ಸತ್ವಪೂರ್ಣವಾದ ವ್ಯಕ್ತಿತ್ವದಿಂದ ಹಲವು ಮುಖಗಳಲ್ಲಿ ಕಾಣಿಸಿಕೊಂಡು ಬೆರಗುಮೂಡಿಸುತ್ತಾರೆ; ಹಲವು ಕ್ಷೇತ್ರಗಳಲ್ಲಿ ದುಡಿದು ಸಮಾಜಕ್ಕೆ ನಾಡಿಗೆ ಶ್ಲಾಘ್ಯ ಸೇವೆ ಸಲ್ಲಿಸುತ್ತಾರೆ. ಮಾನವಶಕ್ತಿ ಕ್ರಿಯಾಶೀಲವಾದರೆ ಎಷ್ಟೊಂದು ಬಗೆಯಲ್ಲಿ ವ್ಯಕ್ತವಾಗಬಲ್ಲುದು; ಸಮಾಜಮುಖಿಯಾಗಿ ಸೇವೆಸಲ್ಲಿಸಬಲ್ಲುದು ಎಂಬುದಕ್ಕೆ ಅವರು ದೃಷ್ಟಾಂತವಾಗಿ ನಿಲ್ಲುತ್ತಾರೆ.

ಸಾಶಿಮ, ಇಂಥ ವಿರಳರ ವರ್ಗಕ್ಕೆ ಸೇರಿದ ಅಪೂರ್ವ ವ್ಯಕ್ತಿತ್ವವುಳ್ಳವರು. ಹಳ್ಳಿಯಲ್ಲಿ ಹುಟ್ಟಿ ನಗರದಲ್ಲಿ ಓದಿ ಸ್ನಾತಕೋತ್ತರ ಪದವಿ ಪಡೆದುದಷ್ಟೇ ಅಲ್ಲ, ನಿರ್ದಿಷ್ಟ ವಿಷಯ ಕುರಿತು ವಿಶೇಷ ಅಧ್ಯಯನ ನಡೆಸಿ, ಸಂಶೋಧನ ಮಹಾಪ್ರಬಂಧವನ್ನು ಮಂಡಿಸಿ ಡಾಕ್ಟರೇಟ್ ಪದವಿ ಪಡೆದರು. ಸಾಮಾನ್ಯವಾಗಿ ಯುವಕರು, ನೌಕರಿ ದೊರಕಿ ಸಂಪಾದನೆ ಬರತೊಡಗಿದರೆ ನಿಂತ ನೀರಾಗಿ ಬಿಡುತ್ತಾರೆ. ಸಾಶಿಮ ಅಂಥ ಅಲ್ಪತೃಪ್ತರಲ್ಲ. ಅವರದು ಸದಾ ಹರಿವ ಚೇತನ; ಬೆಳೆಯುವ ವ್ಯಕ್ತಿತ್ವ. ವಿವಿಧ ಹುದ್ದೆಗಳಲ್ಲಿ ಸೇವೆಗೈಯುತ್ತಾ ತಮ್ಮ ಜ್ಞಾನಾನುಭಾವಗಳ ಕ್ಷಿತಿಜವನ್ನು ವಿಸ್ತರಿಸಿಕೊಂಡರು. ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕ, ಪ್ರಾಂಶುಪಾಲ, ವಿಷಯ ವಿಶ್ವಕೋಶದ ಸಂಪಾದಕ, ರಾಜ್ಯಭಾಷಾ ಆಯೋಗದ ಸದಸ್ಯ, ಕೊನೆಯಲ್ಲಿ ಸಮಸ್ತ ಕನ್ನಡಿಗರ ಪ್ರಾತಿನಿಧಿಕ ಸಂಸ್ಥೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ, ಇತ್ಯಾದಿ.

ಕನ್ನಡ ಪ್ರಾಧ್ಯಾಪಕ : ಅವರು ಶ್ರೇಷ್ಠ ಕನ್ನಡ ಬೋಧಕರು. ಅವರಿಗೆ ಅಧ್ಯಾಪಕ ವೃತ್ತಿ ಪ್ರಿಯವಾದದ್ದು. ಅವರ ಪಾಲಿಗೆ ಬೋಧನೆಯೆಂದರೆ ಸರಸ್ವತಿಯ ಆರಾಧನೆ, ತರಗತಿಯ ಪಾಠವಿರಲಿ, ಕನ್ನಡ ಎಂ.ಎ., ಕೆ.ಎ.ಎಸ್., ಐ.ಎ.ಎಸ್. ವಿದ್ಯಾರ್ಥಿಗಳಿಗೆ ವಿಶೇಷ ಪಾಠವಿರಲಿ, ಸಾರ್ವಜನಿಕ ಸಮಾರಂಭಗಳ ಉಪನ್ಯಾಸವಿರಲಿ ಮರುಳಯ್ಯನವರ ಮಾತಿನ ಮೋಡಿ ಕೇಳುಗರನ್ನು ಮರುಳುಗೊಳಿಸುವಂಥದ್ದು! ಕಾವ್ಯಮೀಮಾಂಸೆಯನ್ನು ಅವರ ಬಾಯಲ್ಲಿ ಕೇಳಬೇಕು! ಎಂಬ ಉದ್ಗಾರವನ್ನು ಅವರ ವಿದ್ಯಾರ್ಥಿಗಳ ಬಾಯಿಂದ ಕೇಳಿದ್ದೇನೆ.

ಕವಿ, ಸಾಹಿತಿ : ಸಾಶಿಮ, ಕವಿ, ಸಾಹಿತಿ, ವಿದ್ವಾಂಸ. ಅವರು ಸಾಹಿತ್ಯದ ಬಹುತೇಕ ಎಲ್ಲ ಪ್ರಕಾರಗಳಲ್ಲೂ ಕೃಷಿಗೈದಿದ್ದಾರೆ. ಕಥೆ, ಕಾದಂಬರಿ, ನಾಟಕ, ಪ್ರಬಂಧ ಇತ್ಯಾದಿ. ಸಾಶಿಮ ಮಾತುಗಾರಿಕೆ ಮತ್ತು ಬರವಣಿಗೆ ಎರಡರಲ್ಲೂ ನಿಸ್ಸೀಮರು. ಅವರ ಅನೇಕ ಗೀತೆಗಳು ಆಕಾಶವಾಣಿ, ದೂರದರ್ಶನಗಳಲ್ಲಿ ಪ್ರಸಾರಗೊಂಡಿವೆ. ರಾಗಿಣಿ ಪ್ರಕಾಶನ ಸಂಸ್ಥೆಯನ್ನು ತೆರೆದು ತಮ್ಮ ಕೃತಿಗಳಲ್ಲದೆ ಅನೇಕ ಉದಯೋನ್ಮುಖ ಕವಿಗಳ

ಕೃತಿಗಳನ್ನು ಪ್ರಕಟಿಸಿದ್ದಾರೆ. ಅವರ ಕೃತಿಗಳಿಗೆ ಹಲವಾರು ಪ್ರಶಸ್ತಿಗಳು ದೊರಕಿವೆ.

ಆಡಳಿತಗಾರ: ಆಡಳಿತ ವಿಚಕ್ಷಣತೆಯನ್ನು ಬಯಸುವ ಕೆಲವು ಹುದ್ದೆಗಳು ಅವರನ್ನು ಕೈಮಾಡಿ ಕರೆದವು. ಕಾಲೇಜಿನ ಆಡಳಿತ ನೋಡಿಕೊಳ್ಳುವ ಪ್ರಾಂಶುಪಾಲ ಹುದ್ದೆಯಲ್ಲಿ ಅವರು ಕೆಲಸ ಮಾಡಿದರು. ಸಂಸ್ಥೆಯ ಘನತೆ-ಗೌರವಗಳಿಗೆ ತಕ್ಕ ಶಿಸ್ತನ್ನು ಪಾಲಿಸುವ ಯುವ ಜನತೆಯಲ್ಲಿ ಕಲಿಕೆಯ ಶ್ರದ್ಧೆಯನ್ನು ಉದ್ದೀಪಿಸುವ, ಪ್ರತಿಭೆಗಳನ್ನು ಗುರುತಿಸಿ ನೀರೆರೆದು ಪೋಷಿಸುವ ಹೊಣೆಯನ್ನು ಅವರು ನಿರ್ವಹಿಸಿದರು. ಆನಂತರ ಅವರು ವಿದ್ಯಾ ಇಲಾಖೆಯಲ್ಲಿ ವಿಷಯ ವಿಶ್ವಕೋಶ ತಯಾರಿಕೆಯಲ್ಲಿ ಅಧಿಕಾರಿಯಾಗಿ ನಾಡಿನ ಅನೇಕ ವಿದ್ವಾಂಸರಿಂದ ವಿವಿಧ ವಿಷಯಗಳ ಬಗ್ಗೆ ಲೇಖನಗಳನ್ನು ಬರೆಸಿ, ಅವನ್ನು ಸಂಪಾದಿಸಿ, ಆ ಬೃಹತ್ ಸಂಪುಟ ಹೊರಬರಲು ಕಾರಣರಾದರು. ಇದೊಂದು ಅತ್ಯಂತ ಮಹತ್ವದ ಕಾರ್ಯ. ವೃತ್ತಿಯಿಂದ ನಿವೃತ್ತರಾದರೂ ಅವರು ತಮ್ಮ ನಾಡು-ನುಡಿ ಸೇವೆಗೆ ತಮ್ಮನ್ನು ಸಮರ್ಪಿಸಿಕೊಂಡರು. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗಾದಿ ಇವರಿಗೆ ಕಾದಿತ್ತು. ಕನ್ನಡಿಗರು ನೆನಪಿಟ್ಟುಕೊಳ್ಳುವ ರೀತಿಯ ಸೇವೆ ಆ ಸಂಸ್ಥೆಗೆ ಸಂದಾಯವಾಯಿತು. ಒಂದು ಕಡೆ ಸರ್ಕಾರ, ಇನ್ನೊಂದು ಕಡೆ ಸಾಹಿತಿ-ಕಲಾವಿದರು, ಮತ್ತೊಂದು ಕಡೆ ಸಾರ್ವಜನಿಕರು - ಇವರ ಬೆಂಬಲ ಸಹಕಾರದಿಂದ ಅನೇಕ ಅರ್ಥಪೂರ್ಣ ಯೋಜನೆಗಳನ್ನು ಹಮ್ಮಿಕೊಂಡು ಪರಿಷತ್ತನ್ನು ಬೆಳೆಸಿದರು.

ಮಾನವೀಯತೆ : ಸಾಶಿಮ ಆಕಾಶಕ್ಕೆ ತಲೆ ಎತ್ತಿ ಬೀಗುವ ತೆಂಗಲ್ಲ, ವಿನಯದಿಂದ ಭೂಮಿತಾಯಿಗೆ ನಮಿಸುವ ಬಾಳೆ! ತಮ್ಮ ಸರಸ ಸಜ್ಜನಿಕೆಯಿಂದ ಅವರು ಎಲ್ಲರವರಾದರು. ಗ್ರಾಮೀಣ ಜೀವನದ ಹಿನ್ನೆಲೆ, ಬಡತನದ ಬವಣೆಗಳು ಸಹಜವಾಗಿಯೇ ಅವರಲ್ಲಿ ಮಾನವೀಯತೆ ಬತ್ತದಂತಿರಿಸಿದವೆಂದು ಕಾಣುತ್ತದೆ. ಬಡಬಗ್ಗರು, ದೀನದಲಿತರನ್ನು ಕಂಡರೆ ಅನುಕಂಪ, ಹೆಣ್ಣುಮಕ್ಕಳನ್ನು ಕಂಡರೆ ಅಂತಃಕರಣ, ಹಿರಿಯರನ್ನು ಕಂಡರೆ ಪೂಜ್ಯಭಾವ ಅವರ ಹುಟ್ಟುಗುಣಗಳಾಗಿದ್ದವು. ಇದರಿಂದಾಗಿ ಸಾಹಿತಿಗಳ ಸಮುದಾಯದಲ್ಲಿ ವಿಶಿಷ್ಟವಾಗಿ ಕಾಣುವ ವ್ಯಕ್ತಿತ್ವ ಅವರದಾಯಿತು. ಅವರ ಮಮತೆಯ, ಸ್ಫೂರ್ತಿದಾಯಕ ಕಣ್ಣರಿಕೆಯಲ್ಲಿ ಅನೇಕ ಹೃದಯ ಕುಸುಮಗಳು ಅರಳಿವೆ; ಯುವ ಪ್ರತಿಭೆಗಳು ಬೆಳಕು ಕಂಡಿವೆಯೆಂಬುದು ಹೆಮ್ಮೆಯ ವಿಷಯ.

ಇಂಥ ಬಹುಮುಖ ಪ್ರತಿಭೆಯ ಹಿರಿಯ ಚೇತನವನ್ನು ಅಭಿನಂದಿಸುವುದು ದೇವರ ಪೂಜೆಯಷ್ಟೇ ಪವಿತ್ರ ಕಾರ್ಯವಲ್ಲವೇ? ಚತುರ್ಮುಖದ ಸಾಶಿಮ ನೂರ್ಕಾಲ ಬಾಳಲಿ.

ಡಾ. ಸಾ.ಶಿ. ಮರುಳಯ್ಯನವರು ಹಾಗೂ ಮಾಸ್ತಿ ಕಾವ್ಯ

- ಡಾ.ಡಿ. ಮಂಗಳಾ ಪ್ರಿಯದರ್ಶಿನಿ

'ಮಾಸ್ತಿಯವರ ಕಾವ್ಯ-ಒಂದು ಸಮೀಕ್ಷೆ' ಹಾಗೂ 'ಮಾಸ್ತಿಯವರ ಕಾವ್ಯಗಳು' -ಎರಡೂ ಕೃತಿಗಳು ಹೆಚ್ಚು ಕಡಿಮೆ ಒಂದೇ ವಸ್ತುವನ್ನು ಕುರಿತು ನಡೆಸಿದ ಅಧ್ಯಯನಗಳಾಗಿದ್ದು, 'ಕನ್ನಡ ಮತ್ತು ಸಂಸ್ಕೃತಿ ಇಲಾಖೆ' ಹಾಗೂ 'ಬೆಂಗಳೂರು ವಿಶ್ವವಿದ್ಯಾಲಯ' ಗಳಿಂದ ಪ್ರಕಟಗೊಂಡಿವೆ. ಮಾಸ್ತಿಯವರ ಇಡೀ ಕಾವ್ಯವನ್ನು ಕುರಿತ ಅಧ್ಯಯನಗಳು ಇವಾಗಿವೆ .ವಿವಿಧ ಕಾವ್ಯ ಪ್ರಕಾರಗಳಾದ ಗೇಯಗೀತೆ, ಕಥನ ಕವನಗಳು, ದೃಷ್ಟಾಂತ ಗೀತೆಗಳು, ಖಂಡಕಾವ್ಯ, ಮಹಾಕಾವ್ಯ, ದೃಷ್ಯಕಾವ್ಯ - ಹೀಗೆ ಅಧ್ಯಯನ ಸಾಗುತ್ತದೆ. ಅದರೊಂದಿಗೆ ಮುಖ್ಯವಾಗಿ ಮಾಸ್ತಿಯವರ ಶೈಲಿ, ಅವರ ಛಂದಸ್ಸನ್ನು ಕುರಿತಾದ ಅಧ್ಯಯನವೂ ಇದೆ.

ಮಾಸ್ತಿಯವರ ಬಗೆಗೆ ಪೂಜ್ಯ ಭಾವನೆಯನ್ನಿಟ್ಟುಕೊಂಡೇ ಇಲ್ಲಿನ ವಿವಿಧ ಅಧ್ಯಯನಗಳು ಕಾಣಿಸಿಕೊಳ್ಳುತ್ತವೆ. ಮಾಸ್ತಿಯವರ 'ಭಾವಗೀತೆ'ಯ ಬಗೆಗಿನ ಅವಲೋಕನದಲ್ಲಿ ಮೊದಲಿಗೆ 'ಭಾವಗೀತೆ'ಯ ಇತಿಹಾಸ, ಅದರ ಹುಟ್ಟನ್ನು ವಿವರಿಸುತ್ತ, ಮಾಸ್ತಿಯವರನ್ನು 'ರಮ್ಯ' ಕವಿ ಎಂದೇ ಕರೆಯುತ್ತಾರೆ. ನವೋದಯ ಕಾಲವನ್ನು, ಕವಿಗಳನ್ನು ಚರ್ಚಿಸುವಾಗಲೂ 'ರಮ್ಯೋದಯದ ಹರಿಕಾರರು', ಎಂದೇ ಕರೆಯುತ್ತಾರೆ. ಇದಕ್ಕೆ ಕಾರಣ, ರಮ್ಯಕವಿಯ ಸಾಮಾನ್ಯ ಲಕ್ಷಣಗಳು. ರಮ್ಯ ಕವಿ ಕನಸುಣಿ, ಪ್ರಕೃತಿ ಪ್ರೇಮಿ, ಪ್ರಣಯ ಪಟು, ರಸಿಕ ಚಕ್ರಿ, ರಾಷ್ಟ್ರ ಭಕ್ತ. ಅವನದು ಬಹುಮುಖ ಪ್ರತಿಭೆ, ಅವನು ಬಹು ಬಗೆಯ ಭಾವುಕ. ಬದುಕನ್ನು ಬೆದಕುತ್ತಾನೆ, ಪರಿಸರಕ್ಕೆ ಸ್ಪಂದಿಸುತ್ತಾನೆ, ಎಂಬುದೇ ಆಗಿದೆ. ಸಾ.ಶಿ. ಮರುಳಯ್ಯನವರಿಗೆ ಮಾಸ್ತಿಯನ್ನು 'ನವೋದಯ ಕವಿ' ಎಂದು ಕರೆಯುವುದಕ್ಕಿಮತ 'ರಮ್ಯ ಕವಿ' ಎಂದು ಕರೆಯುವುದರಲ್ಲೇ ಹೆಚ್ಚು ಒಲವು.

ಮಾಸ್ತಿಯವರ ಭಾವಗೀತೆಗಳ ಸಂಕಲನಗಳಾದ 'ಚೆಲವು', 'ಮಲಾರ, 'ಸಂಕ್ರಾಂತಿ'ಗಳ ದೀರ್ಘ ಅಧ್ಯಯನ ಇಲ್ಲಿ ನಡೆಯುತ್ತದೆ. ಅವುಗಳಲ್ಲಿ ಭಾವಕವನ (Lyric) ಸಾನೆಟ್, ಪ್ರಗಾಥ, ಶೋಕಗೀತೆಗಳು ಹಾಗೂ ಮುಕ್ತಕಗಳು ಎಂಬ ಒಳವಿಭಜನೆಯನ್ನು ಮಾಡಿಕೊಂಡು ವಿವರಣೆಗೆ ತೊಡಗುತ್ತಾರೆ.

ಇಲ್ಲಿ 'ಚೆಲುವು', 'ತಾವರೆ', 'ಅರುಣ' ಸಂಕಲನಗಳಲ್ಲಿ ಕಂಡುಬರುವ ಪ್ರಕೃತಿ ಕವನಗಳ ಪರಿಶೀಲನೆ ಮಾಡುತ್ತಾರೆ. ಮರುಳಯ್ಯನವರು 'ಮಾಸ್ತಿಯವರ ಪ್ರಕೃತಿ

ಕನ್ನಡಿಯಾಗುತ್ತದೆ'; ಎಂಬ ನಂಬಿಕೆಯಿಂದಲೇ ಕಾವ್ಯಾವಲೋಕನಕ್ಕೆ ತೊಡಗುತ್ತಾರೆ. ನಿಸರ್ಗ ಹಾಗೂ ಹೆಣ್ಣಿನೊಂದಿಗೆ ಅಭೇದವನ್ನು ಕಲ್ಪಿಸುವ 'ಚೆಲುವ ದೇವಿ'ಯನ್ನು ಮಾಸ್ತಿಯವರ 'ಅತ್ಯುತ್ತಮ ಭಾವಗೀತ' ಎಂದು ಒಪ್ಪಿಕೊಳ್ಳುತ್ತಾರೆ. ಜೊತೆಗೆ ಸೃಷ್ಟಿಯ ಚೆಲುವು, ಹೆಣ್ಣಿನ ಒಲವು - ಎರಡನ್ನು ಬೆಸೆದಿರುವ ಬಗೆಯನ್ನು ಹೊಸದೃಷ್ಟಿ, ಹೊಸ ಸೃಷ್ಟಿ ಎಂದು ಅರ್ಥೈಸಿಕೊಳ್ಳುತ್ತಾರೆ. ಇಂಥ ಕಲ್ಪನೆಗಳು ಪಂಪ, ಕುಮಾರವ್ಯಾಸರಲ್ಲಿ ಹೇರಳವಾಗಿ ಕಾಣಿಸಿಕೊಂಡರೂ ಶ್ರೀಯುತರಿಗೆ ಇಲ್ಲಿ ಮಾಸ್ತಿಯವರು ನಿರ್ವಹಿಸಿರುವ ರೀತಿ ತೀರಾ ಹೊಸದು ಎನ್ನಿಸುತ್ತದೆ. ಮರುಳಯ್ಯನವರು ಮಾಸ್ತಿಯವರ ಮೇಲೆ ಪ್ರಭಾವ ಬೀರಿರುವ ಕವಿ, ಕವನಗಳ ತಲನಿಕ ಅಧ್ಯಯನವನ್ನೂ ಕೈಗೊಳ್ಳುತ್ತಾರೆ. ಮಾಸ್ತಿಯವರ 'ತೆಂಗಾಳಿ' 'ode to the west wind' ನ ನೆನಪು ಮಾಡಿದರೆ, 'ಚೆಲುವು ದೇವಿ' ಕವನದಲ್ಲಿ ಕೀಟ್ಸ್ ಕವಿಯ 'a thing of beauty is joy for ever'ಎಂಬ ಸಂದೇಶವನ್ನು ಗುರುತಿಸುತ್ತಾರೆ.

ಮಾಸ್ತಿಯವರ ಭಾವಗೀತೆಗಳಲ್ಲಿ ಮುಖ್ಯವಾಗಿ ಪ್ರಕೃತಿ, ಮಾನವತೆ, ತಾತ್ವಿಕತೆ, ತಾದಾತ್ಮ್ಯತೆ, ಪ್ರೇಮ, ಸೌಂದರ್ಯಗಳು ವಸ್ತುವಾಗಿರುವುದನ್ನು ಗುರುತಿಸುತ್ತಾರೆ.

'ದಳದೆರೆದ ಹೂವಿನೆದೆ ಬಟ್ಟಲಿನ ಬಂಗಾರದ ಪೀಠ. ಅಲೆವ ಎಲರಿಗೆ ಶಿರಭಾಗದ ಸ್ವಾಭಿಮಾನ ಅದರದು. ದಳಗಳು ಅಲುಗಿದರೂ ಅದು ಅಲುಗದೆ ಇರುವ ವೇದಿಕೆ, ಇಂತಹ ಪೂವಿನ ಹೊಂಬಟ್ಟಲು ಸೂರ್ಯನ ಬೂಟ! ಹಸಿರು ಹಾಸಿನ ಮೇಲೆ ಸೂರ್ಯ ನೆಯ್ದ ಬುಟ್ಟಾ' - ಕವಿಯ ಕಾವ್ಯವನ್ನು ವಿವರಿಸುವಾಗ ಸಾ.ಶಿ. ಮ.ರ ಭಾಷೆ ಅತ್ಯಂತ ಭಾವನಾತ್ಮಕ ನೆಲೆ ಮುಟ್ಟುತ್ತದೆ. ಗದ್ಯವೇ ಪದ್ಯದ ಲಯ ಪಡೆಯುತ್ತದೆ. ಸಾಮಾನ್ಯವಾಗಿ ಎಲ್ಲ ನವೋದಯ - ಕವಿಗಳೂ ಪ್ರಕೃತಿಯಲ್ಲಿ 'ಪರಮ'ನ ಸಾಕ್ಷಾತ್ಕಾರ ಮಾಡಿಕೊಳ್ಳುತ್ತಾರೆ. ಅದನ್ನು ಮರುಳಯ್ಯನವರು ಮಾಸ್ತಿಯವರ 'ಉದ್ಯಾನದಲ್ಲಿ' ಎಂಬ ಕವಿತೆಯಲ್ಲೂ ಗುರುತಿಸಿ, 'ಅರಳುವ ಹೂ ಸೃಷ್ಟಿಯ ಒಳಗನ್ನು ತೆರೆದು ತೋರುತ್ತದೆ. ನಿಸರ್ಗದ ಹೂ ಬೇರಲ್ಲ, ತನ್ನಾತ್ಮ ಬೇರಲ್ಲ. ಇವೆರಡಕ್ಕೂ ಒಬ್ಬನಿದ್ದಾನೆ ಒಡೆಯ! ಎಲ್ಲವೂ ಅವನಿಗಾಗಿ, ಅವನ ಲೀಲೆಗಾಗಿ'; ಎನ್ನುತ್ತಾರೆ.

ನವೋದಯ ಕವಿಗಳ ಮತ್ತೊಂದು ಪ್ರೀತಿಯ ಕಾವ್ಯವಸ್ತು, 'ಪ್ರೇಮ'. ಅದು ಕೆ.ಎಸ್.ನ, ಕುವೆಂಪು, ಬೇಂದ್ರೆ, ಪು.ತಿ.ನ - - ಮುಂತಾದ ಕವಿಗಳಲ್ಲಿ ಅತ್ಯುತ್ತಮ ಮಟ್ಟದಲ್ಲಿ ಕಾಣಿಸಿಕೊಳ್ಳುತ್ತದೆ. ಕೇವಲ ಗಂಡು - ಹೆಣ್ಣುಗಳ ನೆಲೆಮೀರಿ, ಪ್ರಕೃತಿ - ಮನುಷ್ಯ, ಮನುಷ್ಯ ಸಂಬಂಧದ ಮೂಲಚೂಲಗಳಲ್ಲಿ ಅದು ಕಾಣಿಸಿಕೊಳ್ಳುತ್ತದೆ. ತಂದೆ - ಮಗ, ತಾಯಿ - ಮಗು, ದೇವ - ಭಕ್ತಿ, ಪ್ರಕೃತಿ - ಪುರುಷ, ಅಕ್ಕ - ತಂಗಿ, ಅಣ್ಣ - ತಮ್ಮ ಹೀಗೆ ಅನೇಕ ಮಗ್ಗುಲುಗಳಲ್ಲಿ ಈ ಪ್ರೇಮವ್ಯಾಖ್ಯಾನ ನಡೆಯುತ್ತದೆ. ಆದರೆ ಅವರ ಸಮಕಾಲೀನರೇ ಆದ ಮಾಸ್ತಿಯವರಲ್ಲಿ 'ಪ್ರೇಮಗೀತೆ'ಗಳ ಅಭಾವವಿರುವುದನ್ನು ಪ್ರೊ. ಮರುಳಯ್ಯನವರು ಗುರುತಿಸುತ್ತಾರೆ. ಮುಂದುವರಿಸುತ್ತಾ

ಅವರೇ, ಪತಿ-ಪತ್ನಿಯವರ ಪ್ರಣಯ ಅಥವ ಕೌಟುಂಬಿಕವಾದ ಪ್ರೀತಿ ಗೀತೆಗಳು ಇಲ್ಲವೇ ಇಲ್ಲ ಎನ್ನುತ್ತಾರೆ. ಇದಕ್ಕೆ ಅವರು ಕಂಡುಕೊಳ್ಳುವ ಕಾರಣವೆಂದರೆ, 'ಭಕ್ತಿಗೀತೆಗಳ ಬಾಹುಳ್ಯ ಹಾಗೂ ಕಥನ ಕವನಗಳ ಪ್ರಾಚುರ್ಯ', ಎನ್ನುತ್ತಾ ತುಂಬ ಪ್ರಯತ್ನ ಪಟ್ಟರೆ ಪ್ರಾತಿನಿಧಿಕ ವೆನಿಸುವ ಒಂದೆರಡನ್ನು ಹೆಕ್ಕಿ ನೋಡಬಹುದು, ಎನ್ನುತ್ತಾರೆ. ಈ ಹಂತದಲ್ಲಿ ಅವರು ಒಂದೆರಡು ಶುದ್ಧ ಸುಂದರ ಪ್ರಣಯ ಗೀತೆಗಳ ವಿಶ್ಲೇಷಣೆ ಮಾಡುತ್ತಾರೆ. ಕಾಮ ಕರಗಿ ಪ್ರೇಮವಾಗುವ 'ನಾಲ್ವತ್ತರ ಸಲಗು' ಕವನವನ್ನು ಗುರುತಿಸಿ 'ಹೆಣ್ಣು, ಗಂಡಿನ ಭೋಗ್ಯವಸ್ತು ಮಾತ್ರವೇ ಅಲ್ಲ; ಅದು ಅವನ ಉದ್ಧಾರಕ್ಕಾಗಿ ಬಂದ ದೇವತೆ. ಜೀವನದ ಶಿಷ್ಟಶಿಕ್ಷಣವಿತ್ತ ತಾಯಿ, ಗುರು, ಮಾರ್ಗದರ್ಶಿ', ಅವಳು ತ್ಯಾಗದ ಪ್ರತಿಮೆ, ಸೇವೆಯ ಸಂಕೇತ ; ಸಹನೆಗಿರುವ ಬೇರೊಂದು ಹೆಸರು. ಕರ್ಪೂರದಂತೆ ಉರಿದು ಬೆಳಗಿದವಳು; ಶ್ರೀಗಂಧದಂತೆ ತೇದು ಗಂಧವಾದವಳು; ಪುರುಷನ ಬದುಕನ್ನು ರೂಪಿಸುವ ಮಹಾಶಿಲ್ಪಿ. ಪರಮಹಂಸರ ಪರಿಭಾಷೆಯಲ್ಲಿ ಅವಳು ಭವತಾರಿಣಿಯ ಭವ್ಯ ಸ್ವರೂಪಿನಿ. . . . . . ಹೀಗೆ ಮಾಸ್ತಿಯವರ ಕವನಗಳಲ್ಲಿನ ಹೆಣ್ಣಿನ ಹಿರಿಮೆಯನ್ನು ಕುರಿತು ಚಿಂತಿಸುವಾಗ ಮರುಳಯ್ಯನವರು ಹೆಣ್ಣಿನ ವ್ಯಾಖ್ಯಾನವನ್ನು ಮಾಡುವ ಮಾದರಿ, ಇದು. ಸ್ವತ: ಹೆಂಗರುಳಿನ ಸಾ. ಶಿ. ಮರುಳಯ್ಯನವರಿಗೆ ಮಾಸ್ತಿಯವರಂತೆ ಹೆಣ್ಣಿನ ಬಗೆಗೆ ತುಂಬು ಗೌರವವುಂಟು.

ಹಾಗೇ ಮಾಸ್ತಿಯವರ 'ಅನುಭಾವಗೀತೆಗಳು', ರಾಷ್ಟ್ರಪ್ರೇಮ, ಕನ್ನಡಾಭಿಮಾನವನ್ನು ಕುರಿತಾದ ಕವನಗಳ ವಿಶ್ಲೇಷಣೆಯೂ ಇದೆ. ಮಾಸ್ತಿಯವರ 'ಕೊಂಬು' ಕವನ ಅವನ ತುಂಬುನಾಡಪ್ರೇಮಕ್ಕೆ ಉತ್ತಮ ಉದಾಹರಣೆಯಾಗಿರುವುದನ್ನು ಗುರುತಿಸುತ್ತಾರೆ. ಆ ಕವನದ ಸ್ವಾರಸ್ಯವನ್ನು ಅದರ ಪೂರ್ವಾರ್ಧವೆಲ್ಲ ಕನ್ನಡ ನಾಡಿನ ಹೆಸರುಗಳ, ಹೂವಿನ ಮಾಲೆ ಎನ್ನುತ್ತಾ, ಕನ್ನಡಿಗರ ಸಂಸ್ಕೃತಿ, ರಸಿಕತೆ, ಅವರ ಮನೋಧರ್ಮ-ಇವೆಲ್ಲವುಗಳ ಜ್ವಲಂತ ಸಾಕ್ಷಿ, ಅವರಿಟ್ಟಿರುವ ಊರಿನ ಹೆಸರುಗಳು. ಅರಳು ಮಲ್ಲಿಗೆ, ಮಲ್ಲಿಗೆ ವಾಳು, ಮಲ್ಲಿಗೇನ ಹಳ್ಳಿ, ಸಿರಸಿ, ಕಡುಮಲ್ಲಿಗೆ, ಕಿರಿಜಾಜಿಯೂರು, ಅಮೃತೂರು-ಹೀಗೆ ಆ ಹೆಸರುಗಳ ಆಯ್ಕೆಯಲ್ಲಿಯೇ ಒಂದು ಮಾಧುರ್ಯವಿರುವುದನ್ನು ಗುರುತಿಸುತ್ತಾರೆ.

ಮಾಸ್ತಿಯವರ 'ಹಾಳೂರು' ಕವನದಲ್ಲಿ 'ಗೋಲ್ಡ್ ಸ್ಮಿತ್' ಕವಿಯ 'the deserted village' ನ ಛಾಯೆ ಕಿಂಚಿತ್ತೂ ಇಲ್ಲ, ಎಂದು ಹೇಳುತ್ತಾ 'ಮಾಸ್ತಿ ಗೋಲ್ಡ್ ಸ್ಮಿತ್' ನ ಕವನವನ್ನು ಓದಲೆ ಇಲ್ಲ. ಓದಿದ್ದರೂ, ಅಲ್ಲಿಂದ ಏನನ್ನೂ ಎರವಲಾಗಿ ಇಲ್ಲಿಗೆ ತಂದಂತಿಲ್ಲ. ಈ ಇಬ್ಬರೂ ಕವಿಗಳಿಗೆ ಪ್ರಚೋದನೆ ಒಂದೇ ಆಗಿದ್ದರೂ, ಪ್ರವೃತ್ತಿಯಲ್ಲಿ ಭಿನ್ನತೆ ಇದೆ. ಅವನದು ಗತವೈಭವದ ಸಂಸ್ಕೃತಿ, ಇವರದು ಅದ್ಯತನದ ಭಗ್ನತೆಯ ಬಿತ್ತರಿಕೆ. ಇಬ್ಬರ ಪಥವೂ ಬೇರೆ, ಪದ್ಯ ಪಾತಾಳಿಯೂ ಬೇರೆ, ಎಂಬ ಸ್ಪಷ್ಟ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಸಾ. ಶಿ. ಮರುಳಯ್ಯನವರಿಗೆ ಮಾಸ್ತಿಯವರ ಹುಟ್ಟು ಸೃಜನಶೀಲತೆಯ ಬಗೆಗೆ ತುಂಬು ಗೌರವವಿದೆ. ಮಾಸ್ತಿಯವರಿಗೆ ಪ್ರಭಾವ

ಬೀರಿರಬಹುದಾದ ಕೆಲವು ವಲಯಗಳಲ್ಲಿ ಮೂಲ ಕೃತಿ, ಕವಿಗಳ ತೌಲನಿಕ ಅಧ್ಯಯನ ನಡೆಸಿ ಆ ಮೂಲಕ ಮಾಸ್ತಿಯವರದು ಮೂಲ ಪ್ರತಿಭೆ, ಎಂದು ಸ್ಪಷ್ಟೀಕರಿಸುತ್ತಾರೆ.

ಡಾ. ಮರುಳಯ್ಯನವರು ಮಾಸ್ತಿಯವರ 'ಸಾನೆಟ್' ಕುರಿತು ಬರೆಯುವಾಗ ಮೊದಲಿಗೆ ಸಾನೆಟ್‌ನ ತತ್ವ ಸಿದ್ಧಾಂತಗಳ ಬಗೆಗೆ ತುಂಬ ಅಚ್ಚುಕಟ್ಟಾದ ವಿವರಣೆ ನೀಡುತ್ತಾರೆ. 'ಸಾನೆಟ್' ಅಷ್ಟಪದಿಯೆ ? 'ಚತುರ್ದಶ' ಪದಿಯೆ ? ಅದನ್ನು 'ಸಾನೆಟ್' ಎಂದೇ ಕರೆಯಬೇಕೆ ? ಇತ್ಯಾದಿಗಳ ಬಗೆಗೆ ದೀರ್ಘವಾಗಿ ಚರ್ಚಿಸುತ್ತಾರೆ. ಸಾನೆಟ್ ಬಗ್ಗೆ ಸಾ.ಶಿ. ಮರುಳಯ್ಯ ನೀಡುವ ವಿವರಣೆಗಳನ್ನು ಪ್ರತ್ಯೇಕವಾಗಿ ತೆಗೆದಿಟ್ಟರೆ, ಅದೇ ಒಂದು ಅಪೂರ್ವ ಪ್ರಬಂಧವಾಗುವಷ್ಟು ಪ್ರಬುದ್ಧವಾಗಿದೆ.

ಮಾಸ್ತಿಯವರ 'ಮಲಾರ' ಒಂದು ಸಾನೆಟ್‌ಗಳ ಗುಚ್ಛ. ಆದರೆ ಮಾಸ್ತಿಯವರು ಅದನ್ನು 'ಅಷ್ಟಷಟ್ಪದಿ' ಎಂದು ಕರೆದು ಸುಮಾರು ಎಂಭತ್ತೊಂಭತ್ತು ಸಾನೆಟ್‌ಗಳನ್ನು ಬರೆದಿದ್ದಾರೆ. ಮಲಾರದಲ್ಲಿ ಬರುವ ಎಲ್ಲ ಸಾನೆಟ್‌ಗಳಲ್ಲೂ ಒಂದೇ ಕ್ರಮವಿದೆ. ಇಲ್ಲಿ ಎಂಟು ಹಾಗೂ ಆರು ಸಾಲುಗಳ ವಿಭಜನೆಯಿದ್ದು, ಮೊದಲ ಎಂಟು ಸಾಲುಗಳಲ್ಲಿ ಅಭಿಪ್ರಾಯ ಮಂಡನೆ, ಉಳಿದ ಆರರಲ್ಲಿ ಅದರ ಸಮರ್ಥನೆ ಅಥವಾ ಅನುಮೋದನೆ ಇರುತ್ತದೆ. ಮಾಸ್ತಿಯವರ 'ಕಾಳಿದಾಸನಿಗೆ' ಕವನದಲ್ಲಿ ಸಾ.ಶಿ. ಮರುಳಯ್ಯ ಸಾನೆಟ್‌ನ ಎಲ್ಲ ಲಕ್ಷಣಗಳನ್ನೂ ಗುರುತಿಸುತ್ತಾ, ಅದು 'ಸಾನೆಟ್' ಕಾವ್ಯಪ್ರಕಾರದ ಅತ್ಯುತ್ತಮ ಲಕ್ಷ್ಯ-ಲಕ್ಷಣ ಪದ್ಯವಾಗಿದೆ, ಎನ್ನುತ್ತಾರೆ. ಇನ್ನೂ ಮುಂದುವರೆದು ಅವರು ಮಾಸ್ತಿಯವರ ಸಾನೆಟ್‌ಗಳು ಫ್ಲಾರೆನ್ಸಿನ ಪ್ರಸಿದ್ಧ ಕವಿ ಪೆಟ್ರಾರ್ಕನ ಸಾನೆಟ್ ಮಾದರಿಯ ರಚನೆಗಳಾಗಿವೆ, ಎಂದು ಗುರುತಿಸುತ್ತ ಮಾಸ್ತಿಯವರ ಸಾನೆಟ್ಟುಗಳಲ್ಲಿ ಉದ್ಬೋಧಗೊಂಡ ಭಾವ ಹದಿನಾಲ್ಕನೇ ಸಾಲು ಮುಟ್ಟುವಲ್ಲಿ ವಿಶ್ರಾಂತಿ ಪಡೆಯದೆ, ಇದೇ ಭಾವ ಮುಂಬರುವ ಸಾನೆಟ್ಟುಗಳಲ್ಲೂ ಹರಿಯುತ್ತವೆ, ಎನ್ನುತ್ತಾರೆ. ಮಾಸ್ತಿಯವರ ಸಾನೆಟ್ಟುಗಳು ಈ ದೃಷ್ಟಿಯಿಂದ 'ಸರಣಿ ಸಾನೆಟ್ಟು'ಗಳು ಎಂಬುದು ಅವರ ಅಭಿಪ್ರಾಯ.

ಮಾಸ್ತಿಯವರು ಸಾನೆಟ್ಟುಗಳಿಗೆ ಸಾಮಾನ್ಯವಾಗಿ ಮಹಾನ್ ವ್ಯಕ್ತಿಗಳನ್ನು ವಸ್ತುವಾಗಿ ಆಯ್ಕೆ ಮಾಡಿಕೊಳ್ಳುತ್ತಾರೆ. ವಾಲ್ಮೀಕಿ, ಷೇಕ್ಸ್‌ಪಿಯರ್, ಕಾಳಿದಾಸ, ವಿಶ್ವೇಶ್ವರಯ್ಯ, ಸಿ.ವಿ. ರಾಮನ್, ಬೇಂದ್ರೆ, ಶ್ರೀ, ಕಾರಂತ, ಐನ್‌ಸ್ಟೀನ್, ಬಸವಣ್ಣ-ಹೀಗೆ ಜಾಗತಿಕ ನೆಲೆಯಲ್ಲಿ ಹೆಸರು ಮಾಡಿದ ಮಹಾನ್ ಚೇತನಗಳು ಇವರು. ತಮ್ಮ ಸಾನೆಟ್‌ಗಳ ಮೂಲಕ ಮಾಸ್ತಿಯವರು ಕಾವ್ಯತತ್ವಗಳನ್ನು, ಕಾವ್ಯಮೀಮಾಂಸಾ ಸೂತ್ರಗಳನ್ನೂ ನೀಡಿರುವುದನ್ನು ಈ ಶಬ್ದಶಿಲ್ಪಗಳಲ್ಲಿ ಡಾ. ಸಾ.ಶಿ. ಮರುಳಯ್ಯನವರು ತುಂಬ ಚೆನ್ನಾಗಿಯೇ ಗುರುತಿಸಿದ್ದಾರೆ.

ಮಾಸ್ತಿಯವರ ಪ್ರಗಾಥಗಳ ಅವಲೋಕನಕ್ಕೆ ಮೊದಲು ಸುದೀರ್ಘವಾಗಿಯೇ ಸಾ.ಶಿ. ಮ.ರು ಪ್ರಗಾಥಗಳ ಇತಿಹಾಸವನ್ನು ಗುರುತಿಸುತ್ತಾರೆ. 'ಪ್ರಗಾಥ' ಎಂಬುದು ಸಂಸ್ಕೃತ ವೈದಿಕ ಛಂದಸ್ಸಿನ ಒಂದು ರೂಪ. ಆದರೆ ಕನ್ನಡ ಪ್ರಗಾಥ ವೈದಿಕ ಛಂದಸ್ಸಿನ ಪ್ರಧಾನ

ಪ್ರಕಾರವಲ್ಲ. ಇದು ಇಂಗ್ಲೀಷ್ ಮೂಲಕ ಬಂದ ಗ್ರೀಕ್ ಮೊದಲಿನದು. ಹೆಸರು ಮಾತ್ರ ಸಂಸ್ಕೃತದ್ದು. ಆದರೂ ಗ್ರೀಕ್‌ನ ಓಡ್ ಎಂಬುದರ ಸಮಾನಾರ್ಥಕ ಪದವಾಗಿದ್ದರೂ, ಕನ್ನಡದ ಪ್ರಗಾಥ ಅರ್ಥಪೂರ್ಣ ಶೀರ್ಷಿಕೆಯಾಗಿದೆ, ಎನ್ನುತ್ತಾರೆ. ಕನ್ನಡದ ಪ್ರಗಾಥಗಳಿಗೂ ವೈದಿಕ ಹಾಗೂ ಗ್ರೀಕ್ ಪ್ರಗಾಥಗಳಿಗೂ ಇರುವ ಸಂಬಂಧ, ವ್ಯತ್ಯಾಸಗಳನ್ನು ತುಂಬ ಸೂಕ್ಷ್ಮವಾಗಿ ವಿವರಿಸುವ ಪ್ರಯತ್ನ ಇದಾಗಿದೆ. ಪಿಂಡಾರಸ್, ರೋಮಿನ ಹೊರೇಸ್, ಇಂಗ್ಲೀಷನ್ ಅಬ್ರಹಂ, ಥಾಮಸ್ ಗ್ರೇ, ಷೆಲ್ಲಿ, ವರ್ಡ್ಸ್‌ವರ್ತ್, ಕೀಟ್ಸ್, ಕೋಲರಿಜ್-ಮುಂತಾದ ರೊಮ್ಯಾಂಟಿಕ್ ಕವಿಗಳು ಜನಪ್ರಿಯಗೊಳಿಸಿದ ಈ ಸಾಹಿತ್ಯ ಪ್ರಕಾರವನ್ನು ಮೊದಲ 'ಪ್ರಗಾಥ' ಎಂದು ನಾಮಕರಣ ಮಾಡಿ, ಈ ಕಾವ್ಯಶಿಶುವನ್ನು ಆಡಿಸಿದವರು ಶ್ರೀ ಯವರಾದರೆ, 'ಮಾಸ್ತಿ' ಯವರು ಅದನ್ನೆತ್ತಿ ಬೆಳೆಸಿಕೊಂಡರು, ಎಂಬುದನ್ನು ಸರಿಯಾಗಿಯೇ ಗುರುತಿಸುತ್ತಾರೆ.

ಮಾಸ್ತಿಯವರ 'ಅರುಣ' ಇಂಥ ರುಚಿಕಟ್ಟಾದ ಮೇಳಗೀತೆ ಹಾಗೂ ಅನಿಯತ ಪ್ರಗಾಥವಾಗಿದೆ, ಎಂಬುದು ಮರುಳಯ್ಯನವರ ಅನಿಸಿಕೆ. ಹಾಗೇ ಅವರ 'ತಾವರೆ' ಇಂಗ್ಲಿಷ್ ರೊಮ್ಯಾಂಟಿಕ್ ಮಾದರಿಯ ಪ್ರಗಾಥ. ಮಾಸ್ತಿಯವರ ಪ್ರಗಾಥ. ರಚನೆಗಳನ್ನು ಇಲ್ಲಿ ಸುದೀರ್ಘವಾಗಿ ಅಭ್ಯಸಿಸುತ್ತಾರೆ.

ಭಾವಗೀತೆ, ಪ್ರಗಾಥ, ಸಾನೆಟ್‌ಗಳಲ್ಲಿ ಸಾಕಷ್ಟು ಉತ್ತಮ ಕವನಗಳನ್ನು ರಚಿಸಿರುವ ಮಾಸ್ತಿಯವರು 'ಮುರಿದು ಬಿದ್ದ ವೀರಕಲ್ಲು' ದಂತಹ ಅತ್ಯುತ್ತಮ ಶೋಕಗೀತೆಯನ್ನು ರಚಿಸುತ್ತಾರೆ. ಮಾಸ್ತಿಯವರೇ ಅನೇಕ ಕವನಗಳನ್ನು 'ಎಲಿಜಿ' ಅಥವಾ 'ಶೋಕಗೀತೆ' ಎಂದು ಕರೆದರೂ, ಸಾ.ಶಿ. ಮರುಳಯ್ಯರು ಮಾತ್ರ 'ಚೆಲುವು' ಸಂಕಲನದ 'ಮುರಿದು ಬಿದ್ದ ವೀರ ಕಲ್ಲು' ಒಂದೇ ಶೋಕಗೀತೆಯ ಮಾದರಿ, ಎನ್ನುತಾರೆ.

ಯಥಾಪ್ರಕಾರದಂತೆ ಇಲ್ಲೂ ಎಲಿಜಿ ಅಥವಾ ಶೋಕಗೀತೆಯ ಇತಿಹಾಸ ಗುರುತಿಸುವ ಪ್ರಯತ್ನ ನಡೆಯುತ್ತದೆ. 'ಎಲಿಜಿಯ ಜನ್ಮ ಕುಂಡಲಿ, ಜಾತಕ-ಇತ್ಯಾದಿಗಳನ್ನು ನೋಡೋಣ'-ಎಂಬ ಮಾತುಗಳ ಮೂಲಕ ಎಲಿಜಿಯ ಇತಿಹಾಸಕ್ಕೆ ಕೈಯ್ಯಿಡುತ್ತಾರೆ. 'ಮುಕ್ತಕ'ಗಳ ವಿವರಣೆಯೂ ಇದೇ ಮಾದರಿಯಲ್ಲಿ ಸಾಗುತ್ತದೆ. ಕನ್ನಡದಲ್ಲಿ ಇತ್ತೀಚೆಗೆ ಅತ್ಯಂತ ಜನಪ್ರಿಯವಾದ ಹನಿಗವನ, ಮರಿಗವನ, ಕ್ಯಾಪ್ಸೂಲ್‌ಕಾವ್ಯ, ಗುಳಿಗೆ-ಕಾವ್ಯ-ಎಂದೆಲ್ಲ ಕರೆಯಲ್ಪಡುವ ಇದರ ಮೂಲ ಬಂಡವಾಳ ವ್ಯಂಗ್ಯ, ವಿಡಂಬನೆ, ವಿನೋದ, ವಿಪರ್ಯಾಸ, ಕಟಕಿ. ಸಾ.ಶಿ. ಮರುಳಯ್ಯ ಮಾಸ್ತಿಯವರ ಅರುಣ ಸಂಕಲನದಲ್ಲಿ ಇಂಥ ಅನೇಕ ಮುಕ್ತಕಗಳನ್ನು ಗುರುತಿಸುತ್ತಾರೆ.

ಮಾಸ್ತಿಯವರು ಕನ್ನಡ ಸರ್ವೋದಯ ಕವಿಗಳಲ್ಲಿ, ಉತ್ತಮ ಭಾವಗೀತೆಕಾರರಲ್ಲಿ ಒಬ್ಬರಾಗಿದ್ದು, ಅವರು 'ಸಾನೆಟ್', 'ಪ್ರಗಾಥ, 'ಶೋಕಗೀತೆ', 'ಮುಕ್ತಕ'ಗಳೆಲ್ಲವನ್ನೂ ಬರೆದಿದ್ದಾರೆ, ಎಂದು ಡಾ. ಸಾ.ಶಿ. ಮರುಳಯ್ಯನವರು ಗುರುತಿಸುತ್ತಾರೆ.

ಕಥನಕವನಗಳು ಕನ್ನಡಕ್ಕೆ ತೀರಾ ಹೊಸದೆನಿಸಿದ ಕಾವ್ಯ ಪ್ರಕಾರವೇನಲ್ಲ. ಹರಿಹರನ ರಗಳೆಗಳು ಒಂದು ರೀತಿಯಲ್ಲಿ ಕಥನ ಕಾವ್ಯ ಮಾದರಿಗಳೇ ಆಗಿವೆ. 13ನೇ ಶತಮಾನದಷ್ಟು ಹಿಂದೆಯೇ ಇಂಥ ಕಾವ್ಯ ಪ್ರಕಾರ ನಮ್ಮಲ್ಲಿತ್ತು. 14ನೇ ಶತಮಾನದ ಛಾಸರ್ ಇಂಗ್ಲೀಷ್‌ನಲ್ಲಿ ತನ್ನ 'ಕ್ಯಾಂಟರ್‌ಬರಿ ಟೇಲ್ಸ್' ಮೂಲಕ ಇಂಥ ಕಥನತಂತ್ರವನ್ನು ಮೊದಲ ಬಾರಿಗೆ ಇಂಗ್ಲೀಷ್ ಸಾಹಿತ್ಯದಲ್ಲಿ ಕಂಡುಕೊಂಡಿದ್ದ. ಇಂಗ್ಲೀಷ್‌ನ ರೊಮ್ಯಾಂಟಿಕ್ ಕವಿಗಳು ಮರೆಯಾಗಿ ಹೋಗಿದ್ದ ಈ ಕಾವ್ಯ ಪ್ರಕಾರವನ್ನು ತಾವು ಕೈಗೆತ್ತಿಕೊಂಡು ಅನೇಕ ಕಥನಕವನವನ್ನು ರಚಿಸಿದರು. ಕನ್ನಡದಲ್ಲಿ ಶ್ರೀ, ಪಂಜೆ, ಕುವೆಂಪು, ಮಾಸ್ತಿ-ಮೊದಲಾದ ಕವಿಗಳು ಇದರಲ್ಲಿ ಅದ್ಭುತ ಸಾಧನೆಗಳನ್ನು ಸಾಧಿಸಿದರು.

ನವೋದಯದಲ್ಲಿ ಈ ಸಾಹಿತ್ಯ ಪ್ರಕಾರವನ್ನು ಬಳಸಿಕೊಂಡ ಎಲ್ಲ ಕವಿಗಳಿಗಿಂತ ಹುಟ್ಟುಕತೆಗಾರರಾದ ಮಾಸ್ತಿಯವರು ಅತ್ಯುತ್ತಮ ಫಲಪಡೆದರು. ಸಾ.ಶಿ. ಮರುಳಯ್ಯ ಮಾಸ್ತಿಯವರ ವೈವಿಧ್ಯಮಯ ಕಥನಕವನಗಳನ್ನು ವಿಮರ್ಶಿಸುತ್ತಾರೆ. ಅದರಲ್ಲೂ ಸ್ಥಳನಾಮಗಳನ್ನು ಹೇಳುವ ಕಥನ ಕವನಗಳಾದ, 'ಮದಲಿಂಗನ ಕಣಿವೆ', 'ನೀಲಗಾರಮಾದ' , 'ಮಾಂಬಿ', 'ಕರಿ', 'ಗೌಡರಮಲ್ಲಿ', 'ರಾಮನವಮಿ', 'ಮೂಕನ ಮಕ್ಕಳು', 'ನವರಾತ್ರಿ'-ಮುಂತಾದ ಕಥನಕವನಗಳಿಗೆ ವೈವಿಧ್ಯಮಯ ವಸ್ತುವನ್ನು ಆಯ್ಕೆ ಮಾಡಿಕೊಂಡಿರುವುದನ್ನು ಮೆಚ್ಚಿಕೊಳ್ಳುತ್ತಾರೆ. 'ನವರಾತ್ರಿ'ಯ ಕಥೆಗಳಲ್ಲಿ ಛಾಸರನ ಕ್ಯಾಂಟರ್‌ಬರೀ ಟೇಲ್ಸ್‌ನ ದಟ್ಟ ಛಾಯೆಯಿರುವುದನ್ನು ಗುರುತಿಸುತ್ತಾರೆ. ಅದೇ ಕಥನ ತಂತ್ರವನ್ನು ಮಾಸ್ತಿಯವರು ನಮ್ಮ ಸಾಂಸ್ಕೃತಿಕ ಸಂದರ್ಭಕ್ಕೆ ಬದಲು ಮಾಡಿಕೊಳ್ಳುವ ಸ್ವಾರಸ್ಯವನ್ನು ವಿವರಿಸುತ್ತಾರೆ. ನವರಾತ್ರಿಯಲ್ಲಿ ಕಥೆ ಹೇಳಲು ಸೇರಿರುವವರು ಮಾಸ್ತಿಯವರ ಸಮಕಾಲೀನ ಕವಿ, ವಿಮರ್ಶಕ ಸ್ನೇಹಿತರು ಹಾಗೂ ಕನ್ನಡದ ಕವಿದಿಗ್ಗಜರು. ಇಲ್ಲಿ ಸ್ವತ: ಮಾಸ್ತಿಯವರೇ ಎಲ್ಲ ಕತೆಗಳನ್ನು ಹೇಳುತ್ತಿದ್ದರೂ, ಇದು ಆಯಾ ಕವಿಗಳೇ ಹೇಳುತ್ತಿದ್ದಾರೆಂಬ ಭ್ರಮೆ ಹುಟ್ಟಿಸುತ್ತದೆ. ಕತೆ ಹೇಳುವವರ ಬದುಕಿನ ಧೋರಣೆ, ಸಾಹಿತ್ಯ ಸಾಧನೆ, ಗುಣಗಳನ್ನು ಅನುಸರಿಸಿ ವಸ್ತವನ್ನು ಆಯ್ದುಕೊಳ್ಳುವ ಜಾಣ್ಮೆ ಮಾಸ್ತಿಯವರದು. ಬಿ.ಎಮ್.ಶ್ರೀ. ಆಂಗ್ಲ ಕತೆ ಹೇಳುತ್ತಾರೆ, ಕುವೆಂಪು ಪ್ರಮದ್ವರೆ ಕಥೆ ಹೇಳಿದರೆ, ಮಂಗೇಶರಾಯರ ಬಾಯಲ್ಲಿ 'ಬೇಂದೂರ ಗಣಪತಿ ವೈದ್ಯರ' ಕತೆ 'ಸೋಜಿಗದ ಹೊಳಲ'ನ್ನು ಹೇಳಿಸುತ್ತಾರೆ. ಗ್ರೀಕ್ ಸಾಹಿತ್ಯದ ಅಧ್ಯಯನದಲ್ಲೇ ತಮ್ಮ ಬಾಳು ಸವೆಸಿದ ಕ.ವೆಂ. ರಾಘವಾಚಾರ್ಯರು ಹೇಳುವ ಹೋಮರನ ಒಡಿಸ್ಸಿಯಲ್ಲಿ ಬರುವ ಕತೆ, 'ಅಪರಂಜಿ ಆರಿಗ'. ಹೀಗೆ ಅನೇಕ ಕಾವ್ಯತಂತ್ರಗಳನ್ನು ಬಳಸಿಕೊಂಡು ಕತೆಗಳನ್ನು ಹೇಳುವ ಕಲೆ ಮಾಸ್ತಿಯವರದು, ಹೇಳುವ ಕತೆಯನ್ನು ಕೇಳುವ ಸಹೃದಯನಿಗೆ ಇದು ಸತ್ಯಸಂಗತಿ, ನಡೆದ ಘಟನೆ ಎಂಬ ದಟ್ಟ ಕಲ್ಪನೆಯನ್ನು ಕಟ್ಟಿಕೊಡುತ್ತಾರೆ. ಮಾಸ್ತಿಯವರ ಕಥಾಜಗತ್ತು ಅತ್ಯಪೂರ್ವವಾದುದು, ಎಂಬುದು ಸಾ.ಶಿ.ಮರುಳಯ್ಯ ಕಾಣ್ಕೆ.

ಮಾಸ್ತಿಯವರ ದೃಶ್ಯರೂಪಕಗಳು ಅಥವಾ 'ಗೀತನಾಟಕ' ಗಳನ್ನು ಸಾ.ಶಿ. ಮರು 'ದೃಷ್ಟಾಂತ ಗೀತೆ' ಎಂದು ಕರೆಯುತ್ತಾರೆ. ಈ 'ದೃಷ್ಟಾಂತ ಗೀತೆ' ಗಳಲ್ಲಿ ಮಾಸ್ತಿಯವರು

ಜಾಗತಿಕ ಕಥಾಕೋಶವನ್ನು ಆಯ್ಕೆಮಾಡಿಕೊಳ್ಳುತ್ತಾರೆ. ಅದು ಬುದ್ಧನ ಬದುಕಾಗಬಹುದು, ಡ್ಯೂಕ್-ಸ್ಯಾಂಡಿ, ನಾಗೋಜಿದೀಕ್ಷಿತ, ವಾಲ್ಟೇರ್, ಆಚಾರ್ಯ-ಗಾಣಿಗರೇ ಆಗಬಹುದು ಅಥವಾ 'ಸಂತಮೀರಾ'-ಯಾರಾದರೂ ಆಗಬಹುದು. ಸಾಮಾನ್ಯ ಮನುಷ್ಯನ ಬದುಕಿಗೊಂದು ಪ್ರೇರಣೆ ನೀಡುವ ವಸ್ತು ಅದಾಗಿದ್ದು, ಬದುಕಿನ ಮಾನವೀಯ ಗುಣಗಳನ್ನು ಮೆಚ್ಚಿಕೊಡಲೆಂದು ನಿರೀಕ್ಷಿಸುತ್ತಾರೆ.

ಡಾ. ಸಾ.ಶಿ. ಮರುಳಯ್ಯನವರು ಮಾಸ್ತಿಯವರ 'ಖಂಡ ಕಾವ್ಯ'ದ ಅಧ್ಯಯನ ಮಾಡುತ್ತಾರೆ. ಸಾ.ಶಿ. ಮರುಳಯ್ಯನವರ ಯಥಾ ಪ್ರಕಾರದ ಅಧ್ಯಯನದ ಮಾದರಿಯಂತೇ ಇಲ್ಲೂ 'ಖಂಡಕಾವ್ಯ' ವನ್ನು ಕುರಿತಾದ ಸುದೀರ್ಘ ವಿವರಣೆಯಿದೆ. ಈ ಸಾಹಿತ್ಯ ಪ್ರಕಾರದ ಹುಟ್ಟು, ಅದರ ಚಾರಿತ್ರಿಕ ಬೆಳವಣಿಗೆಗಳನ್ನು ಸಾಧಾರವಾಗಿ ನಿರೂಪಿಸುತ್ತಾರೆ. ಹಿಂದಿ ಸಾಹಿತ್ಯದಲ್ಲಿರುವ ವಿಶಿಷ್ಟ ಪ್ರಕಾರವಾದ 'ಏಕಾರ್ಥ ಕಾವ್ಯ' ಹಾಗೂ 'ಖಂಡಕಾವ್ಯ', ಮಹಾ ಕಾವ್ಯಗಳ ನಡುವಿನ ವ್ಯತ್ಯಾಸ, ಇಂಗ್ಲೀಷ್ ಭಾಷೆಯ 'Fragment', ಹಾಗೂ ಕನ್ನಡದಲ್ಲಿ ಅದರ ಮಾದರಿಯ ಕವನಗಳು, ಇಂಗ್ಲೀಷ್ ಸಾಹಿತ್ಯದ ಕೋಲ್‌ರಿಜ್ ಕವಿಯ 'ಖುಬ್ಲಾಖಾನ್'-ಹಾಗೂ ಭಾರತೀಯ ಖಂಡಕಾವ್ಯದ ಪರಿಕಲ್ಪನೆ-ಇವುಗಳ ಸಂಬಂಧ-ವ್ಯತ್ಯಾಸಗಳ ತಾತ್ವಿಕ ಚರ್ಚೆ ಮಾಡುತ್ತಾರೆ. ಅದರಲ್ಲೂ ಕನ್ನಡದ ಕೆಲವು ಖಂಡಕಾವ್ಯಗಳಾದ ಶ್ರೀಯವರ 'ಗೋಲ್ಗಥಾ ಮತ್ತು ವೈಶಾಖಿ'-'ಮಹಾ ಖಂಡಕಾವ್ಯ' ವಿಭಾಗಕ್ಕೆ ಸೇರಿದರೆ, ಕಡಂಗೋಡ್ಲು ಶಂಕರ ಭಟ್ಟರ 'ಮಾದ್ರಿಯ ಚಿತೆ' ಹಾಗೂ ಕುವೆಂಪುರವರ 'ಚಿತ್ರಾಂಗದ' ಖಂಡಕಾವ್ಯಗಳು ಪ್ರಕಟನಾತ್ಮಕ ಕಾವ್ಯ.(Naretive verse) ವಿಭಾಗಕ್ಕೆ ಸೇರಬಹುದು ಎನ್ನುತ್ತಾರೆ. ಮಾಸ್ತಿಯವರ 'ಅಭಿಮನ್ಯು' ಮತ್ತು 'ಇಂದುಮತಿ' ಗಳನ್ನು Epic Fragments ಜಾತಿಗೆ ಸೇರಿಸುತ್ತಾರೆ. ಇವೆಲ್ಲವನ್ನು ಕನ್ನಡದ ವಿಮರ್ಶಕರು ಒಟ್ಟಾರೆಯಾಗಿ 'ಖಂಡಕಾವ್ಯ' ಎಂಬ ಅಂಕಿತದಡಿಯಲ್ಲಿ ಗುರುತಿಸುವುದನ್ನು ಪುನರ್ ಅಧ್ಯಯನಕ್ಕೊಳಪಡಿಸಿ, ಸೂಕ್ಷ್ಮ ವ್ಯತ್ಯಾಸಗಳನ್ನು ಮಾಡುತ್ತಾರೆ. ಸಾ.ಶಿ. ಮರುಳಯ್ಯನವರ ವಿಮರ್ಶೆಯ ಮಾದರಿ, ಇದು. ಒಂದು ರೀತಿಯ 'ಪಾಂಡಿತ್ಯ ವಿಮರ್ಶೆ' ಇದು.

'ಮಾಹಾಕಾವ್ಯ' ಎಂಬ ಶೀರ್ಷಿಕೆಯಡಿಯಲ್ಲಿ ಸಾ.ಶಿ. ಮರುಳಯ್ಯ ಮಾಸ್ತಿಯವರ 'ಶ್ರೀರಾಮ ಪಟ್ಟಾಭಿಷೇಕ' ದ ಬಗೆಗೆ ಬರೆಯುತ್ತಾರೆ. ಮಾಸ್ತಿಯವರ 'ಶ್ರೀರಾಮ ಪಟ್ಟಾಭಿಷೇಕ' ವನ್ನು ಕುರಿತ ಸುದೀರ್ಘವಾದ ಅಧ್ಯಯನವಿದು, ಎಂದು ಒಪ್ಪಿಕೊಳ್ಳಲೇ ಬೇಕು. 'ರಾಮಾಯಣ' ವನ್ನು ಕುರಿತು ಅನೇಕರು ಬರೆದಿದ್ದರೂ, ತಮ್ಮ ಬರವಣಿಗೆಗೆ ಮಾಸ್ತಿಯವರು 'ರಾಮಾಯಣ' ದ ವಸ್ತುವನ್ನು ಪುನಃ ಸ್ವೀಕರಿಸುತ್ತಾರೆ. ಮಾಸ್ತಿಯವರು ಪ್ರಕ್ಷಿಪ್ತವಿಲ್ಲದ ಶುದ್ಧರಾಮಾಯಣವನ್ನು ಮೂಲವಾಗಿಟ್ಟುಕೊಂಡು, ಪವಾಡ ಇತ್ಯಾದಿಗಳನ್ನುಳಿದ ದೃಢವಾಸ್ತವತಾ ಮಾರ್ಗವನ್ನು ಅನುಸರಿಸಿ ಕನ್ನಡದಲ್ಲಿ ರಾಮಾಯಣದ ಕೊನೆಯ ಭಾಗವನ್ನು ಪುನರ್ ರಚಿಸುವ ಕೆಲಸ ಮಾಡುತ್ತಾರೆ. ಅದರಲ್ಲೂ ಸುಮಂತ, ಭರತ-ಮೊದಲಾದ ಪಾತ್ರಗಳಿಗೆ ಮಾಸ್ತಿಯವರು ನೀಡಿರುವ ತಿರುವುಗಳನ್ನು ಇವರು

ಮೆಚ್ಚಿಕೊಳ್ಳುತ್ತ, ಕೊನೆಯಲ್ಲಿ 'ಶ್ರೀರಾಮ ಪಟ್ಟಾಭಿಷೇಕ' ಒಂದು ಮಹಾ ಕಾವ್ಯವೇ ? ಎಂದು ಪ್ರಶ್ನಿಸಿ, ಕವಿಯೇ ಇದನ್ನು ಮಹಾಕಾವ್ಯ ಎಂದು ಭಾವಿಸಿದಂತಿಲ್ಲ; ಆದ್ದರಿಂದ ಬೇರೆಯವರು ಬಂದು ಹೇಳುವ ಅಗತ್ಯವಿಲ್ಲ, ಎಂದೇ ಹೇಳಿ, 'ಶ್ರೀರಾಮ ಪಟ್ಟಾಭಿಷೇಕ' ಮಹಾಕಾವ್ಯದ ವಸ್ತುವನ್ನುಳ್ಳ ಒಂದು ಉತ್ತಮ ಕಾವ್ಯ, ಎಂದು ಧಾರಾಳವಾಗಿ ಹೇಳಬಹುದು, ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ.

ಮಾಸ್ತಿಯವರ ದೃಶ್ಯಕಾವ್ಯಗಳ ಕುರಿತು ಸುದೀರ್ಘ ಚರ್ಚೆಯೂ ಇಲ್ಲಿ ನಡೆಯುತ್ತದೆ. ಸಾ.ಶಿ. ಮರುಳಯ್ಯ ಇಲ್ಲಿಯೂ ದೃಶ್ಯ ಕಾವ್ಯಗಳ ಬಗೆಗೆ ಒಂದು ಪೀಠಿಕೆಯನ್ನು ನೀಡುತ್ತಾರೆ. ಅವರ 'ಶಾನ್ತಾ', 'ಸಾವಿತ್ರಿ', 'ಮಾಸತಿ', 'ಕಾಕನಕೋಟೆ', 'ಯಶೋಧರಾ'-ಮುಂತಾದ ನಾಟಕಗಳ ಬಗೆಗೆ ಬರೆಯುತ್ತ, 'ಕಾಕನ ಕೋಟೆ' ಕನ್ನಡ ರಂಗಭೂಮಿಯ ಮೇಲೆ ಬಿದ್ದ ಗಟ್ಟಿ ಕಾಳಾದರೆ, 'ಯಶೋಧರಾ' ಮಾಸ್ತಿಯವರ ನಾಟಕಗಳಲ್ಲಿ ನಾಯಕರತ್ನ, ಕನ್ನಡ ಸಾಹಿತ್ಯವಾರ್ಧಿಯ ಕೃತಿರತ್ನವೂ ಹೌದು, ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತಾರೆ. ಗದ್ಯದ ನಡುನಡುವೆ ಹೇರಳವಾಗಿ ಬರುವ ಗೀತೆಗಳು, ದೃಶ್ಯಕಾವ್ಯದ ಕಾಂತಿಯನ್ನು ಹೆಚ್ಚಿಸಿವೆ. ಅದರ ನಾಟಕಗಳ ಸಂವಾದಗಳು ಪ್ರಸನ್ನ ಮಧುರವಾಗಿವೆ, ಎಂದು ಮೆಚ್ಚಿಕೊಳ್ಳುತ್ತಾರೆ.

ಮಾಸ್ತಿಯವರ ಶೈಲಿಯ ಬಗೆಗೆ ಮೌಲಿಕ ಅಭಿಪ್ರಾಯವನ್ನು ತಿಳಿಸುವ ಸಾ.ಶಿ. ಮರುಳಯ್ಯರ 'ಮಾಸ್ತಿಯವರದು ಸುಭಗ, ಸುಂದರ, ಸುಕೋಮಲ ಶೈಲಿಯಾಗಿದೆ. ಅದು ನಾವಿನ್ಯತೆಯನ್ನು ಹೂಡಿದ ನಾಟಕೀಯ, ಮೋಹಕ ಶೈಲಿ', ಎನ್ನುತ್ತಾರೆ.

ಮಾಸ್ತಿಯವರ ಕಾವ್ಯ ಒಂದು ಸಮೀಕ್ಷೆ-ಕೃತಿಯ ಅತ್ಯಂತ ಮೌಲಿಕ ಭಾಗವೆಂದರೆ ಅವರ ಛಂದಸ್ಸಿನ ಅಧ್ಯಯನ. ಬಹುಶ: ಮಾಸ್ತಿಯವರ ಛಂದಸ್ಸಿನ ಬಗೆಗೆ ಇಷ್ಟು ಆಳವಾದ, ಸೂಕ್ಷ್ಮವಾದ ವಿವರಗಳು ಕನ್ನಡ ವಿಮರ್ಶೆಯಲ್ಲಿ ಎಲ್ಲಿಯೂ ಬಂದಂತೆ ತೋರುವುದಿಲ್ಲ. ಮಾಸ್ತಿಯವರ 'ಬ್ಲ್ಯಾಂಕ್‌ವರ್ಸ್', 'ಸರಳರಗಳೆ'ಯ ನೆಪಮಾಡಿಕೊಂಡು ಕನ್ನಡ ಸಾಹಿತ್ಯದಲ್ಲಿ ಕಾಣಿಸಿಕೊಳ್ಳುವ 'ಸರಳರಗಳೆ'ಯ ಇತಿಹಾಸವನ್ನು ಪೂರ್ಣವಾಗಿ ತಲಸ್ಪರ್ಶಿಯಾಗಿ ವಿವರಿಸುತ್ತಾರೆ. ಸುದೀರ್ಘವಾಗಿ ಮಾಸ್ತಿಯವರು ತಮ್ಮ ಕಾವ್ಯ ನಾಟಕಗಳಲ್ಲಿ ಬಳಸಿಕೊಂಡಿರುವ ಸರಳರಗಳೆಗಳನ್ನು ಒಂದೆಡೆ ಕಲೆ ಹಾಕಿ ಅವುಗಳ ವಿವರಣೆ ಮಾಡುವುದು ತುಂಬ ಕುತೂಹಲಕಾರಿಯಾದುದು. ಕೊನೆಗೆ ಅವರು ಮಾಸ್ತಿಯವರ ಸರಳರಗಳೆಯನ್ನು ಕುರಿತು, 'ಮಾಸ್ತಿಯವರ ಸರಳರಗಳೆ ಅಧ್ಯಯನದಿಂದಾದದ್ದಲ್ಲ, ಸಹಜ ಸ್ಫೂರ್ತಿಯಿಂದ ಆವಿರ್ಭವಿಸಿದ್ದು,' ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಮಾಸ್ತಿಯವರ ಕಾವ್ಯದಲ್ಲಿ ಬಳಕೆಯಾಗಿರುವ ಛಂದಸ್ಸು ಒಡಮೂಡಿ ಬರುವುದೇ ಪ್ರತಿಭೆಯ ಗರ್ಭದಿಂದಾದುದರಿಂದ ಅದು ಕಾವ್ಯ ಶರೀರದೊಳಗೆ ಅಭಿನ್ನವಾಗಿ ಕಾಣಿಸಿಕೊಳ್ಳುತ್ತದೆ.

ಡಾ. ಸಾ.ಶಿ. ಮರುಳಯ್ಯನವರು ಮಾಸ್ತಿಯವರ ಕಾವ್ಯಗಳನ್ನು ಕುರಿತು ನಡೆಸುವ

ಸಮೀಕ್ಷೆ ಕನ್ನಡದಲ್ಲಿ ಮಾಸ್ತಿಯವರ ಕಾವ್ಯದ ಬಗೆಗೆ ಬಂದಿರುವ ಅತ್ಯಂತ ಉತ್ತಮ ಅಧ್ಯಯನಗಳಲ್ಲಿ ಒಂದಾಗಿದೆ. ಮಾಸ್ತಿಯವರ ಮನೋಧರ್ಮಕ್ಕೆ ಸಮಾನ ಮನೋಧರ್ಮ ಡಾ. ಸಾ.ಶಿ. ಮರುಳಯ್ಯನವರ ದಾದುದರಿಂದ ಅವರಿಗೆ ಉಳಿದ ಎಲ್ಲ ನವೋದಯ ಕವಿಗಳಿಗಿಂತ ಮಾಸ್ತಿಯವರು ಹೆಚ್ಚು ಪ್ರಿಯರಾಗುತ್ತಾರೆ. ಡಾ. ಸಾ.ಶಿ. ಮರುಳಯ್ಯನವರು ಗುಣಗ್ರಾಹಿಗಳು, ಮೃದು ಹೃದಯಿಗಳು, ಸಹೃದಯಿಗಳು, ಸ್ನೇಹ ಪ್ರಿಯರು, ಎಲ್ಲಕ್ಕಿಂತ ಹೆಚ್ಚಾಗಿ ಭಾವುಕರು. ಅವರ ಮನಸ್ಸು ನವೋದಯ ಯುಗದ ರಮ್ಯ ಮನಸ್ಸು. ಹೀಗಾಗಿಯೇ ಮಾಸ್ತಿಯವರು ಆಯ್ಕೆ ಮಾಡಿಕೊಳ್ಳುವ ಕಾವ್ಯ ವಸ್ತು ಸ್ವತ: ಇವರ ಪ್ರೀತಿಯ ಆಯ್ಕೆಯೂ ಆಗುತ್ತದೆ. ಆದ್ದರಿಂದಲೇ ಸಾ.ಶಿ. ಮರುಳಯ್ಯನವರು ಮಾಸ್ತಿಯವರ ಕಾವ್ಯದಲ್ಲಿ ಕರಗಿ ಹೋಗುತ್ತಾರೆ. ಮಾಸ್ತಿಯವರಲ್ಲಿ ಇವರಿಗೆ ಯಾವ ದೋಷವೂ ಕಾಣಿಸುವುದಿಲ್ಲ. ಮಾಸ್ತಿಯವರ ಬಗೆಗೆ ತುಂಬು ಗೌರವ ಹಾಗೂ ಪೂಜ್ಯ ಭಾವವನ್ನು ಹೊತ್ತೇ ಮಾಸ್ತಿಕಾವ್ಯಕ್ಕೆ ಪ್ರವೇಶ ದೊರಕಿಸಿಕೊಳ್ಳುವುದರಿಂದ ಮಾಸ್ತಿಯವರ ಎಲ್ಲ ಸಾಹಿತ್ಯವೂ ಅಮೋಘವಾಗಿಯೇ ಕಾಣುತ್ತದೆ.

ಡಾ. ಸಾ.ಶಿ. ಮರುಳಯ್ಯನವರು ತಮ್ಮ ಅಧ್ಯಯನಕ್ಕೊಂದು ಮಾದರಿಯನ್ನು ಸೃಷ್ಟಿಸಿಕೊಳ್ಳುತ್ತಾರೆ. ಅದು ಭಾವಗೀತೆಯಾಗಬಹುದು, ಮಹಾಕಾವ್ಯ, ದೃಶ್ಯಕಾವ್ಯ, ಖಂಡಕಾವ್ಯ, ಯಾವುದೇ ಆಗಬಹುದು; ಆ ಎಲ್ಲ ಕಾವ್ಯ ಪ್ರಕಾರಗಳಿಗೂ ಒಂದು ಸುದೀರ್ಘವಾದ, ಪೀಠಿಕೆ, ಹಿನ್ನಲೆ, ಚರಿತ್ರೆಗಳನ್ನು ನೀಡುತ್ತಾರೆ. ಮಾಸ್ತಿಯವರ ಕಾವ್ಯಕ್ಕೆ ಪ್ರವೇಶವನ್ನು ಒದಗಿಸಲು ಇದು ಪೂರಕವಾಗಿ ದುಡಿಯುತ್ತಿದ್ದರೂ, ಅವಶ್ಯಕತೆ ಬಿದ್ದರೆ ಪ್ರತ್ಯೇಕ ಟಿಪ್ಪಣಿಗಳೇ ಆಗುವಷ್ಟು ಸತ್ವ ಪೂರ್ಣವಾಗುತ್ತದೆ. ಉದಾ. ಮಾಸ್ತಿಯವರ ಸಾನೆಟ್ ಅಥವಾ ಪ್ರಗಾಥದ ಬಗ್ಗೆ ಮಾತನಾಡುತ್ತಿದ್ದರೂ, ಅವರು ಸಾನೆಟ್, ಪ್ರಗಾಥ, ಶೋಕಗೀತೆ-ಮುಂತಾದ ಛಂದಸ್ಸುಗಳಿಗೆ ಕೊಡುವ ವಿವರಣೆ ತುಂಬ ಅಮೂಲ್ಯವಾಗುತ್ತದೆ, ಉಪಯುಕ್ತವಾಗುತ್ತದೆ. ಮಾಸ್ತಿಯವರ ಛಂದಸ್ಸಿನ ಬಗೆಗೆ ಮಾತನಾಡುವಾಗ ಡಾ. ಸಾ.ಶಿ ಮರುಳಯ್ಯನವರು 'ಸರಳರಗಳೆ' ಯ ಬಗೆಗೆ ಕೊಡುವ ವಿವರಗಳು ಅತ್ಯಂತ ಮೌಲಿಕವಾದುದು. ಬಹುಶ: ಕನ್ನಡದಲ್ಲಿ 'ಸರಳರಗಳೆ' ಯ ಬಗೆಗೆ ಬಂದಿರಬಹುದಾದ ಅತ್ಯಂತ ಅಪೂರ್ವವಾದ ಚರ್ಚೆಗಳಲ್ಲಿ ಇದೊಂದಾಗಿರಬಹುದು, ಎನ್ನಿಸುತ್ತದೆ.

ಡಾ. ಸಾ.ಶಿ. ಮರುಳಯ್ಯನವರ ವಿಮರ್ಶೆ ಸಾಮಾಜಿಕ ನೆಲೆಯಲ್ಲಿ ನಿಲ್ಲುವುದಕ್ಕಿಂತ ಹೆಚ್ಚು ವರ್ಣನಾತ್ಮಕ ನೆಲೆಯಲ್ಲಿ ನಿಲ್ಲುತ್ತದೆ. ಕವಿತೆಯ, ನಾಟಕಗಳ ಸಾಲು ಸಾಲುಗಳನ್ನಿಟ್ಟುಕೊಂಡು ಸವಿವರವಾಗಿ ವಿವರಿಸುತ್ತಾ ಹೋಗುವ ಧಾಟಿಯಿದು. ಇಲ್ಲಿ ಕಟುತ್ವ, ಕಾಠಿಣ್ಯಕ್ಕೆ ಅವಕಾಶವೇ ಇಲ್ಲ. ಅತ್ಯಂತ ಸಹೃದಯಿಯಾದ ಓದುಗ, ವಿಮರ್ಶಕ, ತನ್ನ ಪರಮ ಪ್ರೀತಿಯ ಕವಿಯ ಸಾಧನೆಗಳನ್ನು, ವರಸೆಗಳನ್ನು, ಪಟ್ಟುಗಳನ್ನು ಮೆಚ್ಚುತ್ತ, ಬೆನ್ನು ಚಪ್ಪರಿಸುತ್ತ, ಶಭಾಸ್ ಎನ್ನುತ್ತ ಮೈಮರೆಯುವ ಧಾಟಿ, ಈ ವಿಮರ್ಶೆಯ ಹಿನ್ನೆಲೆಯಲ್ಲಿದೆ. ಮರುಳಯ್ಯನವರ ವಿಮರ್ಶೆ ಓದಿದರೆ ಮೂಲ ಓದುವ ಅಗತ್ಯವೇ

ಇಲ್ಲದಷ್ಟು ವಿವರಗಳು ಈ ಕೃತಿಯ ಓದಿನಲ್ಲಿ ದೊರಕುತ್ತವೆ. ಹೀಗಾಗಿ ಇಲ್ಲಿನ ಲೇಖನಗಳಿಗೆ ವಿಮರ್ಶೆ, ವಿವರಣೆ, ಸಮೀಕ್ಷೆಯನ್ನು ಮೀರಿದ ಪರಿಚಯಾತ್ಮಕ ನೆಲೆ ಒದಗಿಬರುತ್ತದೆ. ಮಾಸ್ತಿಯವರ ಎಲ್ಲ ಕಾವ್ಯಗಳನ್ನೂ ಅತ್ಯಂತ ಆಸಕ್ತಿಯಿಂದ ಓದಿ, ಎಲ್ಲವನ್ನು ಮೆಚ್ಚಿ ಅದರ ಬಗೆಗೆ ಕೈಕೊಂಡ ತಳಸ್ಪರ್ಶಿ ಸಮೀಕ್ಷೆಗಳು, ಈ ಎರಡು ಕೃತಿಗಳು.

ಮೊನ್ನೆ, 'ಈ ಶತಮಾನದ ಕನ್ನಡದ ಹತ್ತು ಕವಿಗಳನ್ನು ಹೆಸರಿಸಿ', ಎಂದು 'ಮಲ್ಲಿಗೆ' ಮಾಸ ಪತ್ರಿಕೆ ತನ್ನ ಓದುಗರಿಗೆ ಪ್ರಶ್ನೆ ಹಾಕಿದಾಗ, ನೂರಾರು ಪತ್ರಗಳು ಹತ್ತು ಕವಿಗಳ ಪಟ್ಟಿ ನೀಡಿದ್ದವಂತೆ. ಆದರೆ ವಿಷಾದ ಎಂದರೆ, ಯಾವ ಪಟ್ಟಿಯಲ್ಲೂ ಮಾಸ್ತಿಯವರ ಹೆಸರೇ ಇರಲಿಲ್ಲವಂತೆ ! ಇಪ್ಪತ್ತೊಂದನೆಯ ಹೊಸ ಆರಂಭದಲ್ಲಿದ್ದಾಗಲೇ ಈ ಮಹಾನ್ ಕವಿ ಕನ್ನಡಿಗರಿಗೆ ಮರೆತು ಹೋದನೆ ? ಎಂಬ ಆತಂಕ, ನೋವು ಉಂಟಾಗದೆ ಇರುವುದಿಲ್ಲ. ಇಂತಹ ಓದುಗ ಸಮುದಾಯ ನಮ್ಮ ಮುಂದಿರುವಾಗ ಹೊಸ ಶತಮಾನಕ್ಕೆ ಮಾಸ್ತಿಯಂತಹ ಮನೋಜ್ಞ ಕವಿಯನ್ನು ಮರೆಯದೆ ನೆನೆಪಿಸಿಕೊಳ್ಳುವುದಕ್ಕೆ ಇಂತಹ ಕೃತಿಗಳು ತುಂಬ ಅವಶ್ಯಕವಾದವು. ಇಂಥ ಕವಿಯ ಬಗೆಗೆ ಸವಿಸ್ತಾರವಾದ ಹೊತ್ತಗೆಗಳನ್ನು ಸಿದ್ಧಪಡಿಸಿರುವ ಡಾ. ಸಾ.ಶಿ. ಮರುಳಯ್ಯನವರ ನಿಲುವನ್ನು ತುಂಬು ಗೌರವದಿಂದ ಅಭಿನಂದಿಸಬೇಕು.

ತಮ್ಮ ಎಪ್ಪತ್ತರ ಹೊಸ್ತಿಲಲ್ಲಿ ನಿಂತಿರುವ ಈ ಮಾನವೀಯ ಮೂರ್ತಿಗೆ ಬದುಕಿನ ಎಲ್ಲ ಸದವಕಾಶಗಳು ಹುಡುಕಿ ಬಂದಿವೆ. ಬದುಕನ್ನು ತುಂಬು ಪ್ರೀತಿಯಿಂದ ಆರಾಧಿಸುವ ಡಾ. ಸಾ.ಶಿ. ಮರುಳಯ್ಯನವರಿಗೆ ಎಲ್ಲ ಸನ್ಮಾನಗಳು ಲಭ್ಯವಾಗಲಿ, ಎಂದು ಈ ಸಂದರ್ಭದಲ್ಲಿ ಅತ್ಯಂತ ಪೂಜ್ಯಭಾವದಿಂದ ಹಾರೈಸುತ್ತೇನೆ.

ಸಾಶಿಮ ಅವರ ಸ್ಪಂದನ ಪ್ರತಿಸ್ಪಂದನ ಅವಲೋಕನ - ಒಂದು ಕ್ಷ ಕಿರಣ

ಡಾ. ಎ.ಎಸ್. ವೇಣುಗೋಪಾಲ ರಾವ್

ಅಂತರಂಗದಲ್ಲಿ ಅತ್ಯಂತ ಸ್ನೇಹಮಯಿ, ಬಾಚಿ ತಬ್ಬುವ ಅಕ್ಕರೆ, ಬೆಳೆಯುವ ಸಸಿಗಳಿಗೆ ಸದಾ ನೀರೆರೆಯುವ ಉತ್ಸಾಹ, ತಮ್ಮ ಬಗೆಗೆ ಅತಿಯಾದ ಸಂಕೋಚ, ಬೇರೊಬ್ಬರನ್ನು ನಲ್ಮೆಯ - ಪ್ರಶಂಸೆಯ - ಮಾರ್ಗದರ್ಶನದ - ಗೌರವದ ಯಥೋಚಿತ ಮಾತುಗಳಿಂದ ಪುರಸ್ಕರಿಸುವ ಸಜ್ಜನಿಕೆ, ಇಂತಹ ಸಹಜ ಸಂಸ್ಕೃತಿಯ ಸಜ್ಜನ ಸಾ.ಶಿ.ಮ. ಯಾರಿಗೆ ಪ್ರಿಯರಲ್ಲ! ಅವರ ಬರಹಗಳಲ್ಲಿ ಕಾಣುವುದು ಇಂಥದೇ ಸಜ್ಜನಿಕೆಯ ಸಿಹಿ. ಅದು ಕಾವ್ಯವಿರಲಿ ಪ್ರಬಂಧವಿರಲಿ ಕಡೆಗೆ ಗ್ರಂಥ ವಿಮರ್ಶೆಯೇ ಇರಲಿ ; ಮಲ್ಲಿಗೆಯ ಬಳ್ಳಿಗೆ ಬಿಸಿನೀರು ಎರಚುವ ನಿಷ್ಠುರತೆಯಿಂದ ಅವರು ಹರಿದಾರಿ ದೂರ.

ನನ್ನ ಒಪ್ಪಿಡಿಯಲ್ಲಿ ಅಡಗಿರುವ ಮೂರು ಕೃತಿಗಳಲ್ಲಿಯೂ ಸಾಶಿಮ ಅವರ ವ್ಯಕ್ತಿತ್ವವು ಪ್ರತಿಫಲಿಸುತ್ತಿದೆ. ಸ್ಪಂದನ - ಪ್ರತಿಸ್ಪಂದನ ಮತ್ತು ಅವಲೋಕನ ಇವೇ ಆ ಮೂರು ಕೃತಿಗಳು. ಹಲವಾರು ಹಿರಿಯರ ಕೃತಿಗಳಿಗೆ ಎಳೆಯರ ಕೃತಿಗಳಿಗೆ ಅವರು ಕಟ್ಟಿದ ಮುನ್ನುಡಿಯ - ವಿಮರ್ಶೆಯ ತೋರಣ ಅಲಂಕರಣಗಳನ್ನು ತ್ರಿವೇಣಿ ಶಿವಕುಮಾರ್. ಬಿ.ಎಸ್. ಚಂದ್ರಕಲಾ, ನಾಗರತ್ನ ಶಾಂತಮಲ್ಲಪ್ಪ ಡಾ।। ಶಾಲಿನಿ ಪ್ರಭು - ಇವರು ಸಂಕಲಿಸಿ ಕನ್ನಡ ವಾಚಕರಿಗೆ ಆರೋಗ್ಯಕರವಾದ, ಹಿತ - ಮಿತದ ಔತಣ ನೀಡಿದ್ದಾರೆ. ಮೊದಲ ಅಭಿನಂದನೆ ಈ ಸಾಹಿತ್ಯ ರಸಿಕರಿಗೆ ಸಹೃದಯ ಶ್ರೀಮಂತೆಯರಿಗೆ.

ಈ ಮೂರೂ ಕೃತಿಗಳ ಸಮಾನ ಧರ್ಮಗಳನ್ನು ಇಲ್ಲಿ ಪಟ್ಟಿ ಮಾಡುತ್ತಿದ್ದೇನೆ. ಕೃತಿ ಒಂಭತ್ತು ವರ್ಷದ ಎಳೆಯನದೇ ಇರಲಿ, ಶ್ರೀ ಕುವೆಂಪು ಅವರಂತಹ ಸಾಹಿತ್ಯ ದಿಗ್ಗಜರದೇ ಇರಲಿ ಸಮಾನ ಪ್ರೀತಿಯಿಂದ ಸಾಶಿಮ ಕೃತಿ ವಿಶ್ಲೇಷಣ ಮಾಡುತ್ತಾರೆ. ಅದರಲ್ಲಿ ಅವಜ್ಞೆ ಇಲ್ಲ. ಇದರಲ್ಲಿ ಅತಿರೇಕದ ಭಕ್ತಿ ಇಲ್ಲ. ಕೇವಲ ಔಪಚಾರಿಕವಾದ ಓದುಗೆಯಲ್ಲ, ಕೃತಿಯ ಅಂತರಂಗವನ್ನೇ ಪ್ರವೇಶಿಸುತ್ತಾರೆ. ಅಭಿನವ ಗುಪ್ತರ ಮಾತಿನಲ್ಲಿ ಹೇಳುವುದಾದರೆ "ನಿರ್ಮಲೀ ಭೂತೇ ಮನೋಮುಕರೇ" ಅವರ ಮನದ ಕನ್ನಡಿಗೆ ಗುಂಪುಗಾರಿಕೆಯ, ಸಿದ್ಧಸೂತ್ರಗಳ, ಟೀಕೆಯ ಸಿದ್ಧಮಂತ್ರಗಳ, ಸಿನಿಕತನದ, ಸೋಂಕೂ ತಗಲುವುದಿಲ್ಲ, ಗುಣಗ್ರಹಣ ಸಾಶಿಮರ ಪ್ರಥಮ ಗುಣ. ಚಿಕ್ಕ ಚೊಕ್ಕ ಮುದ್ದುಗಾರಿಕೆಯ ಮಾತುಗಳಲ್ಲಿ ಮೊದಲು ಕೃತಿಯನ್ನು ನೇರವೆರಿಸುತ್ತಾರೆ. ಲಲ್ಲೈಸುತ್ತಾರೆ. ಅಂಥಲ್ಲಿ ಒಂದೆರಡು ವಾತ್ಸಲ್ಯದ ಅತಿಶಯ ಇಣಿಕೆ ಹಾಕುವುದು ಉಂಟು. ನೀನು ಬಂಗಾರ, ಚಿನ್ನ, ರನ್ನ ಎಂದು ಎತ್ತಿ ಆಡುವ ಮಾತೃವಾತ್ಸಲ್ಯ ಅದು. ಅತಿ ಸಂಕೋಚದ "ಕಂಪನ"ದ ಚಳಿ ಬಿಡಿಸಿ ಬೆಚ್ಚನೆ ಶಾಲು ಹೊದಿಸುವಾಗ ಅವರು "ಕವಿ ಸದಾನಂದ ಹೊಳಿಕಟ್ಟಿಯವರು ಕನ್ನಡದ ರಾಬರ್ಟ್ ಬರ್ನ್ಸ್" ಎಂದು ಸಹಜವೊ ಎಂಬಂತೆ ನುಡಿದು ಬಿಡುತ್ತಾರೆ. (ಪು. ೩ ಸ್ಪಂದನ) "ಕನ್ನಡದ ಜನ ಜಾನಪದದಲ್ಲಿ ಹುಟ್ಟಿ, ಕ್ಲಾಸಿಕ್‌ನಲ್ಲಿ ಬೆಳೆದು

ರೋಮ್ಯಂಟಿಕ್‌ನಲ್ಲಿ ರೋಮಾನ್ಸ್ ನಡೆಸಿ, ನವ್ಯದಲ್ಲಿ ನಡೆದಾಡಿ, ನವೋನವ್ಯಕ್ಕೆ ಕಾಲಿಸಿದ್ದರೂ ಇನ್ನು ನವೋದಯದಲ್ಲೇ ಇದ್ದಾರೆ" ಎಂದು ಕನ್ನಡ ಸಾಹಿತ್ಯದ ಅಧ್ಯಾಯಗಳನ್ನೆ ರೇಖಿಸಿ ಬಿಡುತ್ತಾರೆ. ನವ್ಯದ ಕೆಸರಿಗೆ ಕಾಲಿರಿಸಿಲ್ಲ ಎಂದು ತಮ್ಮ ಒಲವಿನ ಗಟ್ಟನೆಲ ಯಾವುದು ಎಂದು ಸೂಚಿಸಿ ಬಿಡುತ್ತಾರೆ. ನವೋದಯದ ನಾದದ ಮೋದ, ಭಾವದ ಕಾವು, ನವ್ಯದ ಪ್ರತಿಮೆ ಸಂಕೇತ. (ನವ್ಯದ ಬೌದ್ಧಿಕ ತರ್ಕ (ನವೋದಯ) ಮಾನಸಿಕ ಉಲ್ಲಾಸ, ಬೆತ್ತಲೆ ಬರಹದ (ನವ್ಯ) ರೂಪಕ್ಕಿಂತ ಅದರ (ನವೋದಯ) ತಲೆತುಂಬ ಸೆರಗು ಹಾಕಿಕೊಂಡ ಗರತಿಯ ಗಾಂಭೀರ್ಯ .... ಹೀಗೆಲ್ಲ ಚುಟುಕು ರೂಪಕಗಳಲ್ಲಿ ಆಯಾ ಸಾಹಿತ್ಯ ಪಂಥಗಳಿಗೆ ಸಾಲಂಕೃತ ಮಂಗಳಾರತಿ ಎತ್ತಿ ಬಿಡುತ್ತಾರೆ.

ಅಣ್ಣಾ ಮೊದಲಿಯಾರರ ಕಾವ್ಯನಾಮ 'ರವಿಚಂದ್ರ'. ಈ ದ್ವಂದ್ವ ಸಮಾಜದ ಒಗಟನ್ನು ವಿರೋಧಾಭಾಸದ ಗಂಟನ್ನು ಸಾಶಿಮ ಎಷ್ಟು ಹೃದಯಾಂಗಮವಾಗಿ ನೋಡನೋಡುತ್ತಾ ಬಿಡಿಸಿ ಬಿಡುತ್ತಾರೆ. "ರವಿ ಸ್ವಪ್ರಕಾಶಿತ ತೇಜೋಮೂರ್ತಿ. ಚಂದ್ರ ಷೋಡಶ ಕಲಾಧರ, ಇವರಿಬ್ಬರೂ ಒಂದೆಡೆ ಕೂಡುವುದು ಅಪರೂಪ, ಆದರೆ ಅಸಂಭಾವ್ಯವೇನೂ ಅಲ್ಲ. ತಿಂಗಳಿಗೊಮ್ಮೆ ಪೌರ್ಣಿಮೆಯ ಅರುಣೋದಯದ ಅಮೃತ ಮುಹೂರ್ತದಲ್ಲಿ ಇಬ್ಬರೂ ಏಕತ್ರ ದರ್ಶಿಸಬಹುದು. ... ಇದರಲ್ಲಿ ವಿಜ್ಞಾನದ ರವಿಯೂ ಇದ್ದಾನೆ, ಪ್ರಜ್ಞಾನ ಚಂದ್ರನೂ ಇದ್ದಾನೆ. ಇವರಿಬ್ಬರೂ ಮೇಳೈಸಿದ ರೂಪವೇ ರವಿಚಂದ್ರ!" (ಅದೇ ಪು. ೬)

ಯಾವುದೇ ಕೃತಿಯ ಒಳಿತು - ಸಡಿಲತೆಗಳನ್ನು ಗುರುತಿಸುವಾಗ ಅಲ್ಪಾಕ್ಷರದ ಅಸಂದಿಗ್ಧದ ಸ್ವಂತಸೂತ್ರಗಳನ್ನು ಸಾಶಿಮ ಕೋದು ಬಿಡುತ್ತಾರೆ. ನೋಡಿ "ಕವಿಭಾಷೆಗೆ ವಶನಾಗಬಹುದು ಆದರೆ ಭಾವಕ್ಕೆ ದಾಸನಾಗಲೇ ಬೇಕು." (ಪು ೯) "ಆಚಾರ ಹಣ್ಣಿನ ಸಿಪ್ಪೆ, ವಿಚಾರ ಒಳ ತಿರುಳು... ಆಚಾರ ವಿಚಾರ ಪೋಷಕ ವಿಚಾರ ಆಚಾರಕ್ಕೆ ಪೂರಕ" (ಪು. ೧೧) "ಪ್ರತಿಭೆಗೆ ಪಕ್ಷಪಾತ ಬುದ್ಧಿಯಲ್ಲ". (ಪು. ೧೩) "ಕಡಲುರಿಯನ್ನು ಅಡಗಿಸಬಹುದು, ಕಾಡ ಉರಿಯನ್ನು ಆರಿಸಬಹುದು. ಆದರೆ ಒಡಲುರಿಯನ್ನು ಅಷ್ಟು ಸುಲಭದಲ್ಲಿ ಶಮನಗೊಳಿಸ ಬರುವುದಿಲ್ಲ" (ಪುಟ ೧೬)

ಇಂತಹ ನುಡಿಮುತ್ತುಗಳನ್ನು ಕಣ್ಣು ಹಾಯಿಸಿದಲೆಲ್ಲ ಕಾಣಬಹುದು.

ಸಾಶಿಮ ಅವರ ಭಾಷೆ ಸಿಂಗಾರಕ್ಕೆ ಹೆಚ್ಚು ಒಲಿಯುವಂತೆ ತೋರುತ್ತದೆ. ಕವಿ ಹೃದಯಕ್ಕೆ ಅದು ಸಹಜವೇ ನೋಡಿ. "ಕನ್ನಡ ಸಾಹಿತ್ಯ ಸರಸ್ವತಿಯ ಮಡಿಲು ತುಂಬಿದ ಮುಡಿಯ ಸಿಂಗರಿಸಿದ ಮುತ್ತೈದೆಯರು ಬಹಳ ಮಂದಿ" (ಪುಟ ೨೧) "ಈ ಶಬ್ದ ಸಂದೋಹ ಸ್ಫೋಟಗೊಂಡದ್ದು ಜಯಶ್ರೀಯವರ ತುಂಬುಕಂಠದ ಇಂಬಿನಲ್ಲಿ, ಗುಹಾಗಹ್ವರದ ಗರ್ಭದಿಂದ ಹೊರಬೀಳುವ ಗಂಭೀರ ವಾಣಿಯಂತೆ ನಿಶೆಯ ಬಸಿರಿಂದ ಪುಟಿದೇಳುವ ಉಷೆಯ ಹೊಂಬೊರಿನಂತೆ ...." (ಪು ೨೯) "ಅನುಭವ ಮಂಟಪದ ದ್ವಾರ ತೆರೆದುಕೊಂಡಂತೆ ಜಯಶ್ರೀ ಅವರ ಕಂಠಶ್ರೀ ತೆರೆಯುತ್ತದೆ ಮತ್ತೆ ಪುಟಿಯುತ್ತದೆ. ಓಂಕಾರದ ಝೇಂಕೃತಿಯೇ ಎಂಬಂತೆ ವೇಣುವಾದನದ ಹಿನ್ನೇಲೆಯಲ್ಲಿ....." (ಪು. ೩೦)

ಹೀಗೇ ಜಲಪಾತದಂತೆ ಭೋರ್ಗರೆವ ಮಾತಿನ ಘೋಷ, ಅಲ್ಲಲ್ಲಿ ಕೃತಿಯ ಕೊರತೆಯನ್ನು ಆಕಸ್ಮಾತ್ ಎಂಬಂತೆ ಗುರುತಿಸುವಾಗ ಸಣ್ಣ ತೊರೆಯಂತೆ ನಾಚಿ ಬಿಡುತ್ತದೆ. ಯಾರ ಮನಕ್ಕೆ ಎಲ್ಲಿ ನೋವಾದಿತೋ ಎಂಬ ಸಹೃದಯನ ಸೂಕ್ಷ್ಮತೆಯಲ್ಲಿ ಮಿಂಚಿ ಮರೆಯಾಗಿ ಬಿಡುತ್ತದೆ. ಗಮನಿಬಸಹುದು.

"ಅದೇ ರೂಪದ ಕುಟುಂಬದ ಕಲ್ಯಾಣ ಜೀತ ಪದ್ಧತಿ, ಹಸಿರುಕ್ರಾಂತಿ ಇತ್ಯಾದಿ ಗಂಜಲದ ಗೂಡುಗಳೂ ಕೋಳಿ ಗೂಡುಗಳೂ ಇವೆ. ಹಗುರವಾದ ಹಾಡು ಲಾವಣಿಗಳಾಗಿವೆ. ... ಇವುಗಳಲ್ಲದೇ ಇದ್ದಿದ್ದರೆ ಸಂಕಲನಕ್ಕೆ ಹೆಚ್ಚು ತೂಕ ಬರುತ್ತಿತ್ತು ಅನ್ನಿಸುತ್ತೆ" (ಪು. ೫)

"ಕಾಗುಣಿತ ದೋಷಗಳು ವಿಪುಲವಾಗಿದ್ದರೂ .... ಭಾಷೆಯ ಮೇಲೆ ಹಿಡಿತ ಇದೆ." (ಪು. ೭)

"ಸತಿಗೆ ವಿಶಿಷ್ಟ ವ್ಯಾಖ್ಯಾನ ಬೇಕಿತ್ತು.... ನುಡಿ ಪುನರುಕ್ತಗೊಳ್ಳಬೇಕಿತ್ತು... ಮಂದ್ರ ತಾರಕಗಳಲ್ಲಿ ಧ್ವನಿಗೊಳ್ಳಬಹುದಿತ್ತು... ಮತ್ತಷ್ಟು ತುಂಬಬಹುದಿತ್ತು. ಎನ್ನಿಸುತ್ತದೆ." (ಪು ೩೧)

ಈ ಮುನ್ನುಡಿಗಳ (ಹೊನ್ನುಡಿಗಳ?) ನೆಪದಲ್ಲಿ ಹಲವಾರು ವಿಮರ್ಶೆಗಳು ಸ್ವಯಂ ಸ್ವೋಪಜ್ಞ ಪ್ರಬಂಧಗಳೇ ಆಗಿರುವುದು ಸಾಶಿಮ ಅವರ ಸೃಜನ ಶೀಲತೆಗೆ ಸಾಕ್ಷಿಯಾಗಿವೆ. ಸ್ಪಂದನ ಸಂಕಲನದ ಕಂಪನ, ಕೃಷ್ಣವೇಣಿ ರಾಜಕೀಯ ಮಹಿಳೆ, ಪ್ರತಿಸ್ಪಂದನದ ಬಿದರಿಕಲೆ, ವಚನಶೋಧ, ಕೆಲವು ಲಲಿತ ಪ್ರಬಂಧಗಳನ್ನು ಮಾದರಿಗಾಗಿ ನೋಡಬಹುದು. ಇವು ಸಾಶಿಮ ಅವರ ಬಹುಶ್ರುತತೆಯನ್ನು ಎತ್ತಿ ತೋರುವಂತಿವೆ. ಅಭ್ಯಾಸಿಗಳಿಗೆ ಉಪಯುಕ್ತ ಮಾಹಿತಿಗಳೂ ಆಗಿವೆ. ಪುಸ್ತಕ ವಿಮರ್ಶೆ ಮುನ್ನುಡಿಗಳ ಈ ಆನುಷಂಗಿಕ ಫಲಗಳನ್ನು ವಾಚಕರು ಕುತೂಹಲದಿಂದಲೇ ಸ್ವೀಕರಿಸಬಲ್ಲರು. ಈ ದೃಷ್ಟಿಯಿಂದ 'ಸ್ಪಂದನ'ದ ಬರಹಗಳು ಸಹಜವಾಗಿಯೇ ಸುದೀರ್ಘವಾಗಿವೆ. 'ಪ್ರತಿ ಸ್ಪಂದನ'ದ ಲೇಖನಗಳು ಕೊಂಚ ಚುಟುಕಾಯಿತೇನೋ ಎನಿಸುತ್ತದೆ. ಈ ಎರಡು ಸಂಕಲನಗಳಲ್ಲಿ 'ಸ್ಪಂದನ'ದಲ್ಲಿ ಹೆಚ್ಚು ಅಚ್ಚುಕಟ್ಟು ಕಾಣುತ್ತದೆ. 'ಪ್ರತಿಲೇಖನ'ದ ಅಡಿ ಟಿಪ್ಪಣಿಯಲ್ಲಿ ಕೃತಿಕಾರ ಕೃತಿ ದಿನಾಂಕಗಳನ್ನು ಸೂಚಿಸಿರುವುದು ಉತ್ತಮ ಸಂಪಾದಕರ ಶ್ರದ್ಧೆಗೆ ಸೂಚಕ ; 'ಪ್ರತಿಸ್ಪಂದನ'ದಲ್ಲಿ ಈ ಮುಖ್ಯ ಅಂಶದ ಕೊರತೆ ಕಾಣುತ್ತದೆ. ಉದಾಹರಣೆ 'ಸಂಜೀವಿನಿ' (ಪು - ೨೪) ಕೃತಿಯ ಲೇಖಕರು ಯಾರು ಎಂಬುದೇ ತಿಳಿಯುವುದಿಲ್ಲ. ವಿಮರ್ಶೆಯನ್ನು ಪುರಾ ಓದಿದನಂತರವೂ ಹಾಗೆಯೇ. "ಕಥಾ ಶ್ರವಣ ಮಾಡ್ಯೆ" ಲೇಖಕರು ಯಾರು ಎಂಬಬುದು ಥಕ್ಕನೇ ತಿಳಿಯುವುದಿಲ್ಲ (ಪು ೫೯) ಊಹಿಸ ಬೇಕಷ್ಟೆ!

ಹೇಗಾದರಿರಲಿ ಈ ಎರಡೂ ಸಂಕಲನಗಳು ಸಾಶಿಮ ಅವರ ಭಾಷೆಯ ನವಿರು - ಬನಿ, ಗುಣಗ್ರಾಹಿತ್ವದ ಔದಾರ್ಯಗಳನ್ನು ಎತ್ತಿ ತೋರುತ್ತದೆ. ಆ ದೃಷ್ಟಿಯಿಂದ ಸಂಪಾದಕರು ನಿಜಕ್ಕೂ ಅಭಿನಂದನಾರ್ಹರು. "ಮೊಳಕೆ" ಎಂಬ ಸಾರ್ಥಕ ಶೀರ್ಷಿಕೆಯನ್ನು ಹೊತ್ತ ೩ನೇ ತರಗತಿಯ ಎಳೆಯ ವಿದ್ಯಾರ್ಥಿಯನ್ನು ಕೃತಿಯನ್ನು ತುಂಬು ಹೃದಯದಿಂದ ಸ್ವಾಗತಿಸಿ

ಆಶೀರ್ವದಿಸಿ ಬೆನ್ನತಟ್ಟುವ ಹಿರಿಯ ಚೇತನ ಇಂದಿನ ವಿಕೃತ ವಿಮರ್ಶೆಯ ಲೋಕದಲ್ಲಿ ನಿಜಕ್ಕೂ ಅಪೂರ್ವ. ಆದಷ್ಟು ಅರ್ಥವಂತಿಕೆಯನ್ನು ಸಾಶಿಮ ತಮ್ಮ ಮುನ್ನುಡಿಯಲ್ಲಿ ತುಂಬಿದ್ದಾರೆ. ಈ ಕೃತಿಯಲ್ಲಿ "ಭಾವದಲ್ಲಿ ಕಾವು ದಟ್ಟವಾಗಿಲ್ಲ, ಆಗಲೇ ಪರಿಸರಕ್ಕೆ ಸ್ಪಂದಿಸುವ ಆಸಕ್ತಿ ಬೆಳೆಸಿಕೊಂಡಿದ್ದಾನೆ. ತೊದಲು ನುಡಿಯ ಈ ಹಸುಳೆ ಬದುಕನ್ನು ಬೆದಕಿ ನೋಡುವ, ಅದರ ವಿವಿಧ ವಿನ್ಯಾಸಗಳಿಗೆ ವಿಶೇಷ ಆರ್ಥ ಕಲ್ಪಿಸಿ ಓದುಗರನ್ನು ಮಂತ್ರ ಮುಗ್ಧರನ್ನಾಗಿಸುವ ಚಾತುರ್ಯ ಪಡೆದಿದ್ದಾನೆ..." ಇತ್ಯಾದಿ. ತಮ್ಮ ಆಶೀರ್ವಚನ ಬರಿಯ ಪ್ರಶಂಸೆಯ ಸುರಿಮಳೆಯಾಗದಂತೆ ಕವಿಯ ಮಾತುಗಳಿಂದಲೇ ಸಮರ್ಥನೆ ಒದಗಿಸಿದ್ದಾರೆ. ಕೃತಿಯಲ್ಲಿನ ಎಳೆಯನ ಎದೆಗಾರಿಕೆ, ಪ್ರಶ್ನೆ, ವ್ಯಂಗ್ಯ ಧ್ವನಿ, ಎದೆಯ ಮಿಡಿತಗಳನ್ನು ಮಮತೆಯಿಂದ ಎತ್ತಿ ಜೋಗುಳವಾಡುವ ಸಾಶಿಮ ಅವರ ಸಹೃದಯ ಸ್ಪಂದನ ನಿಜಕ್ಕೂ ವಾಚಕನ ಹೃದಯವನ್ನು ಆರ್ದ್ರಗೊಳಿಸುತ್ತದೆ. ಅವರು ಆದರ್ಶ ವಿಮರ್ಶಕರು ಹೇಗೋ ಉದಾತ್ತ ಹೃದಯದ ಸದ್ಗುರುವೂ ಹೌದು.

ಈ ಸಂದರ್ಭದಲ್ಲಿ 'ಪ್ರತಿಸ್ಪಂದನ'ದಲ್ಲಿನ ಸಾಶಿಮ ಅವರ "ಮುನ್ನುಡಿಗಳ ಮುನ್ನುಡಿ" ಯನ್ನು ವಿಶೇಷವಾಗಿ ಗಮನಿಸಬೇಕು. ತಮ್ಮ ಹೃದಯವನ್ನೇ ಅಲ್ಲಿ ಅವರು ತೆರೆದಿಟ್ಟದ್ದಾರೆ. ಅವರ ಮೋಹಕ ಗದ್ಯಶೈಲಿಗೆ ಈ ಲೇಖನವೇ ಸಾಕ್ಷಿ. ಆ ಮಾತು ಹಾಗಿರಲಿ. ಈ ಮಾತು ಕೇಳಿ : "ಮುನ್ನಡಿ ಕಾವ್ಯೋದ್ಯಾನದ ಮಹಾದ್ವಾರ.... ಮುನ್ನಡಿಯದು ಇಂತಹ ಕೈಂಕರ್ಯ. ಹುಚ್ಚು ಹೊಗಳಿಕೆಯಲ್ಲ. ಹೀನ ತೆಗಳಿಕೆಯೂ ಅಲ್ಲ. ಕೃತಿಯ ಆರೋಗ್ಯವನ್ನು ರಕ್ಷಿಸುವುದು... ಅದೊಂದು ಆತ್ಮೀಯ ಅವಲೋಕನವಾದುದರಿಂದ ಕೃತಿ ವಿಮರ್ಶೆಗಿಂತ ಕೃತಿಯ ಬಗೆಗೆ ಓದುಗನಲ್ಲಿ ಆಸಕ್ತಿ ಮೂಡುವಂತೆ ಮಾಡುವುದು ಮುಖ್ಯ..." ಇತ್ಯಾದಿ ಮಾತುಗಳು ಸಾಶಿಮ ಅವರ ಆರೋಗ್ಯಕರ ಮನಸ್ಸು ಹೇಗೆ ವರ್ತಿಸುತ್ತದೆ, ಸಾಹಿತ್ಯ ಲಾಲನೆಯ ಕೈಂಕರ್ಯವನ್ನು ಶ್ರದ್ಧೆ - ಪ್ರೀತಿಗಳಿಂದ ಕೈಗೊಂಡಿದೆ ಎಂಬುದಕ್ಕೆ ಸಾಕ್ಷಿಯಾಗಿವೆ. ಸುಮಾರು ಮುನ್ನೂರು ಪುಸ್ತಕಗಳಿಗೆ ಅವರು ಬರೆದ ಮುನ್ನುಡಿಗಳ ಈ ಮೂರು ಸಂಪುಟಗಳ ವಾಚಕರಿಗೆ ಹೇಗೋ ಮುನ್ನುಡಿಕಾರರಿಗೂ ಉತ್ತಮ ಆದರ್ಶವನ್ನೂ ಮಾದರಿಗಳನ್ನು ಒದಗಿಸಿವೆ. ಇವುಗಳ ರಚನೆಯಲ್ಲಿನ ಶ್ರಮವೂ ಗಮನಾರ್ಹ. ಸಾಶಿಮ ಬರೆಯುತ್ತಾರೆ. " ಒಂದು ಕೃತಿಯ ಪ್ರಾಯೋಗಿಕ ವಿಮರ್ಶೆ ಎಷ್ಟು ಮುಖ್ಯವೋ ಒಂದು ಒಳ್ಳೆಯ ಮುನ್ನಡಿ ರಚನೆಯೂ ಅಷ್ಟೇ ಮುಖ್ಯ. ಒಂದು ಭಾವಗೀತವನ್ನೋ ಒಂದು ಸಣ್ಣಕತೆಯನ್ನೋ ಬರೆಯುವಷ್ಟು ಕಾಲ ಮತ್ತು ಶ್ರಮ ತೆಗೆದುಕೊಳ್ಳುತ್ತೇನೆ ಒಂದು ಮುನ್ನುಡಿ ಬರೆಯಲು" ಎಂಬಲ್ಲಿ ಅವರ ಪ್ರಾಮಾಣಿಕತೆಯನ್ನು ಗಮನಿಸಬೇಕು. "ಮುನ್ನುಡಿ ಎಂಬುದು ಅಧ್ಯಯನ ಯೋಗ್ಯವಾದ ಸೃಜನಾತ್ಮಕ ಕಲೆ" ಎಂಬ ಅವರ ತೀರ್ಮಾನ ಸತ್ಯಸ್ಯ ಸತ್ಯ. ಇಲ್ಲಿ ಅಧ್ಯಯನ ಎಂದರೆ ಉದ್ದಿಷ್ಟ ಕೃತಿಯ ಅಧ್ಯಯನ ಮಾತ್ರವಲ್ಲ. ಮುನ್ನುಡಿಕಾರನ ಅಂತರಂಗದ ಅಧ್ಯಯನವೂ ಹೌದು. ಅವನು ಕಟುಕನೇ ಕಮ್ಮಾರನೇ, ತೋಟಗಾರನೇ, ಸ್ವಯಂ ಶಿಲ್ಪಿಯೇ ಎಂಬುದನ್ನು ಮುನ್ನುಡಿ ಕನ್ನಡಿಯಾಗಿ ತೋರುತ್ತದೆ.

ಸ್ಪಂದನ, ಪ್ರತಿಸ್ಪಂದನಗಳಲ್ಲಿ ಮುನ್ನುಡಿಗಳ ಮಂಗಳಾಕ್ಷತೆಗಳಿದ್ದರೆ

'ಅವಲೋಕನ'ದಲ್ಲಿ ಪುಸ್ತಕ ವಿಮರ್ಶೆಗಳ ಸಂಗ್ರಹವಿದೆ. ವಿಮರ್ಶಿತ ಗ್ರಂಥಗಳ ಕೃತಿಕಾರ, ಪ್ರಕಾಶಕ, ಬೆಲೆ, ಪುಟ ಸಂಖ್ಯೆ ಮುಂತಾದ ಎಲ್ಲ ವಿವರಗಳೂ ಅಡಿ ಟಿಪ್ಪಣಿಯಲ್ಲಿರುವುದು ಅತ್ಯಂತ ಉಪಯುಕ್ತವಾಗಿದೆ. ಸಂಪಾದಕರ ಕರ್ತವ್ಯ ಸಮಗ್ರತೆಯಿಂದ ಸಮೃದ್ಧವಾಗಿದೆ. ಕವಿವರ್ಯ ಕುವೆಂಪು ಅವರಂಥ ಮೇರುಪರ್ವತಗಳು ಇಲ್ಲಿರುವಂತೆಯೇ ಕಿರಿಯ ಲೇಖಕರ ಕೃತಿಗಳಿಗೂ ಎಡೆದೊರೆತಿದೆ. ಕಾವ್ಯ, ಪ್ರಬಂಧ, ನಾಟಕ, ಸಂಪಾದಿತಕೃತಿಗಳು ಹೀಗೆ ಸಾಹಿತ್ಯದ ಎಲ್ಲ ಪ್ರಕಾರಗಳಿಗೂ ಇಲ್ಲಿ ಇಂಬು ದೊರೆತು ವೈವಿಧ್ಯ ಲವಲವಿಕೆಗಳ ಅವಲೋಕನ ಇಲ್ಲಿದೆ. ಮುಖ್ಯವಾಗಿ ವಿಮರ್ಶಕರ ಸಮತೋಲನದ ಸಹೃದಯತೆ ಎಲ್ಲ ಬರಹದಲ್ಲೂ ಅಂತರ್ಜಲವಾಗಿ ಹರಿಯುತ್ತದೆ. ಸಾಶಿಮ ಅವರ ಸೂತ್ರಬದ್ಧ ನುಡಿ ಚಿತ್ತಾರ ಈ ಸಂಗ್ರಹದಲ್ಲೂ ಸೂರೆಯಾಗಿದೆ. ಉದಾಹರಣೆಗೆ. "ಕಾವ್ಯ ಬೆಳೆದಂತೆಲ್ಲ ಕವಿಯೂ ಬೆಳೆಯುತ್ತಾ ಹೋಗುತ್ತಾನೆ" (ಪು ೧) ಅದು ಅಖಂಡ ಇದು ಖಂಡ ಇದು ಖಂಡ, ಅದು ಹೆಜ್ಜೇನು ಇದು ಚಿಟ್ಟ ಜೇನು, ಅದು ಗೊಮ್ಮಟ. ಇದು ಶಿಲಾಬಾಲಿಕೆ. ಅದು ಆಲ, ಇದು ಅಶ್ವತ್ಥ (ಪು. ೯) ಭೇಷ್ ಭೇಷ್! ಚಪ್ಪರಿಸುವ ಕಲ್ಲು ಸಕ್ಕರೆ ಇದು.

ಹಾಗೆಂದು ಕೃತಿಯ ಕೊರತೆಗಳನ್ನು ಸೂಚಿಸುವುದರಲ್ಲಿ ಕಾರ್ಪಣ್ಯವೇನಿಲ್ಲ. ಸ್ಪಂದನ - ಪ್ರತಿಸ್ಪಂದನಗಳಿಗಿಂತ ಹರಿತವಾಗಿಯೇ ಇದೆ. ಸಹಜವೇ, ಅಲ್ಲಿ ಮುನ್ನಡಿಯ ಲಾಲನೆ ಇಲ್ಲಿ ಕಿವಿ ಚುಚ್ಚುವ, ಮೂಗು ಚುಚ್ಚುವ ಅಕ್ಕಸಾಲಿಗನ ಚುಚ್ಚು. ಮುಂದಿನ ಮೆಚ್ಚುಗೆಯ ಅಲಂಕರಣಕ್ಕಾಗಿಯೇ. ಶ್ರೀನಿವಾಸ ಹಾವನೂರರ ಮಹಾ ಪ್ರಬಂಧದ ಅವಲೋಕನವನ್ನೇ ನೋಡಿ. (ಪು ೬-೮) "ಪೂರ್ವಾರ್ಧ ಯಕ್ಷಗಾನ ಕವಿಗಳು ಎಂಬ ಭಾಗ ಯಾವ ಸಾಹಿತ್ಯಾಭ್ಯಾಸಿಗೂ ಅತೃಪ್ತಿ ತರುವಂತಹುದು. ಏಕೆಂದರೆ ಅದು ಸಾಕಷ್ಟು ಪುಷ್ಟಿ ಪಡೆದಿಲ್ಲ. ಈ ದಿಸೆಯಲ್ಲಿ ಕುಕ್ಕಿಲ ಕೃಷ್ಣ ಭಟ್ಟರ ಲೇಖನಗಳನ್ನು ಗಣಿಸಬೇಕಿತ್ತು. ಇನ್ನೊಂದು ವಿವಾದಾಸ್ಪದವಾದ ಅಂಶ ಕಾದಂಬರಿಗೆ ಸಂಬಂಧಿಸಿದುದು... ಅವನ ಕೃತಿಯನ್ನಾದರೂ ಹೆಸರಿಸಬಹುದಾಗಿತ್ತು... ಅದನ್ನು ಹುಡುಕಿ ಸಂಶೋಧಿಸಿದ್ದರೆ ಮಹಾ ಪ್ರಬಂಧಕ್ಕೆ ಮತ್ತೂ ಆಯಾಮ ದೊರೆತು ಸಮಗ್ರ ಕೃತಿ ಎನಿಸುತ್ತಿತ್ತು" ಮತ್ತೂ ನೋಡಿ. "....ಇದರ ಶೈಲಿ ಅದೊಂದು ವಿಚಿತ್ರ, ಅದರ ಸುಧಾರಣೆಯ ಅಗತ್ಯ ಇದೆ." ಹೀಗೆಲ್ಲ ನೇರವಾಗಿ ನುಡಿಯುವಾಗಲೂ ಸಾಶಿಮ ಅವರ ಲೇಖನಿಯ ರಸಿಕತೆ ಮೊಂಡಾಗುವುದೇ ಇಲ್ಲ. ಈ ಅವಲೋಕನದಲ್ಲೇ ಮಿಂಚುವ ಮಾತುಗಳು ಲವಲವಿಕೆಯನ್ನು ಗಮನಿಸಿ "ತೆಲುಗಿನಲ್ಲಿ ಸುರವರಂ ಪ್ರತಾಪರೆಡ್ಡಿ ಮತ್ತು ರಾಳಪಳ್ಳಿ ಅನಂತ ಕೃಷ್ಣಶರ್ಮರು ಯಕ್ಷಗಾನ ಕಲೆಯ ಬಗ್ಗೆ ಕಚ್ಚಾಡಿದಂತೆ ಕನ್ನಡದ ಡಾ॥ ಶಿವರಾಮ ಕಾರಂತರೂ ಶ್ರೀ ಕುಕ್ಕಿಲ ಕೃಷ್ಣಭಟ್ಟರು ಕುಸ್ತಿ ಮಾಡಿದ್ದಾರೆ. ವಿಚಿತ್ರವೆಂದರೆ ಇನ್ನೂ ಯಾರೂ ಗೆದ್ದು ಇಲ್ಲ, ಸೋತೂ ಇಲ್ಲ, ಹೀಗಿರುವುದರಿಂದ ಹಾವನೂರರೂ ಚಣ ಕಾಲ "ರೆಫ್ರಿ" ಆಗಿದ್ದರೆ ಚೆನ್ನಾಗಿರುತ್ತಿತ್ತು. ಇತ್ಯಾದಿ. ಕೆಲವೊಮ್ಮೆ ಸಾಶಿಮ ಹೇಗೆ ಚುಚ್ಚಿ ಬಿಡುತ್ತಾರೆ ಹಿಂದೆ ಮುಂದೆ ನೋಡದೆ! ನೋಡಿ : "ಇದು ಪುತಿನ ಅವರಿಗೆ ಕೀರ್ತಿತರುವ ಕೃತಿಯೂ ಅಲ್ಲ, ಕಾವ್ಯಮಯವಾದ ಹೆಸರಿನ ಒಳಗಿರುವುದು ರುಚಿ ಇಲ್ಲದ ಹೂರಣ... ಈ ರೀತಿಯ ಧಾರ್ಮಿಕ ಪ್ರಜ್ಞೆ ಹೆಚ್ಚಾದರೆ ಕಾವ್ಯ ನಾಟಕ ಅಥವಾ ಯಾವುದೇ ಕಲಾ ಪ್ರಕಾರದ ಗತಿ ಏನಾಗುತ್ತದೆ ನಮಗೆ ಗೊತ್ತಿದೆ. ಅದೇ ಗತಿ ಇದಕ್ಕೂ ಆಗಿದೆ ಎಂದು ಮತ್ತೆ ಬೇರೆ ಹೇಳಬೇಕಾಗಿಲ್ಲ."

(ಪು ೧೩) ಎಲಾ! ಸಾಶಿಮ ಹೀಗೂ ಬರೆಯುತ್ತಾರೆ ಎಂದು ಬೆರಳು ಕಚ್ಚುವಂತಾಗಿದೆ. ಆದರೆ ಆ ಛಾತಿ ಅವರದು - ಅವರದ್ದೇ! ಆದರೆ ಒಳಿತನ್ನು ಹೆಕ್ಕಿ ಹೆಕ್ಕಿ ತೆಗೆಯುವುದರಲ್ಲಿಯೇ ಅವರು ಹೆಚ್ಚು ನಿಸ್ಸೀಮರು. ಗಮನಿಸಬಹುದು. ಪ್ರಾಚೀನ ಅದ್ಯತನಗಳನ್ನು ರೂಢಿಸಿಕೊಂಡಿರುವ ಭಟ್ಟರು (ಎಸ್. ವಿ. ಪರಮೇಶ್ವರ ಭಟ್ಟರು) ಆಗಾಮಿಯನ್ನು ಸೂಚಿಸಬಲ್ಲ ವ್ಯಕ್ತಿಗಳಾಗಿದ್ದಾರೆ (ಪುಟ ೧೩), ಶ್ರೀನಿವಾಸ ಕುಲಕರ್ಣಿ ನಿಜಕ್ಕೂ ಕನ್ನಡಿಗರಿಗೆ ಭರವಸೆ ನೀಡುವ ಕವಿ (ಪು ೧೫) ಇದರಲ್ಲಿಯೇ ಪಾಳಪ್ಪಾಡಿಯವರ ಸಿದ್ಧಿ ಇದೆ, ಅವರ ಅನುವಾದದ ಯಶಸ್ಸಿನ ಹೆಚ್ಚುಗಾರಿಕೆ ಎಂದರೆ ಪ್ರಾಸ ಪ್ರಯೋಗದ ಪರಿಣತಿ. (ಪು. ೧೪) ಕರ್ನಾಟಕ ಸಂಸ್ಕೃತಿಯ ಸಂಶೋಧನೆ ಶ್ರೀ ಕಪಟರಾಳರ ನಿಷ್ಕಪಟ, ನಿಶ್ಚಲ, ನಿರ್ಮಲ, ನಿಷ್ಪಕ್ಷಪಾತ ಸಂಶೋಧನೆಗೆ ನಿಂತ ಸಾಕ್ಷಿಯಾಗಿದೆ. (ಪು. ೧೬) ಇವು ಸಾಶಿಮ ಅವರ ನಿರ್ದುಷ್ಟ ತೀರ್ಮಾನಗಳ ಕೆಲವು ಉದಾಹರಣೆಗಳು ಮಾತ್ರ.

ಮುಖ್ಯವಾಗಿ ಹೇಳಬೇಕಾದ ಮಾತು ಇದು. ಮುನ್ನುಡಿಯ ಆತ್ಮೀಯ ಸ್ಪಂದನ ಪ್ರತಿಸ್ಪಂದನಗಳಲ್ಲಿ ದೊರಕುವಂತೆಯೇ ಖಚಿತತೆ. ಸಮರ್ಥನೆ, ತೀರ್ಮಾನಗಳ ಕಟುವಲ್ಲದ ಸತ್ಯನಿಷ್ಠೆ ಈ ಅವಲೋಕನದಲ್ಲಿದೆ. ಈ ಎರಡು ಸಾಹಿತ್ಯ ಪ್ರಕಾರಗಳ ಸೂಕ್ಷ್ಮ ವ್ಯತ್ಯಾಸದ ನೆಲೆ ಬೆಲೆಗಳನ್ನು ಸಾಶಿಮ ಗುರುತಿಸಿಕೊಂಡಿರುವುದು ಅವರ ಔಚಿತ್ಯ ಪ್ರಜ್ಞೆಗೆ ಸಾಕ್ಷಿ. ಅದಕ್ಕೆ ತಕ್ಕಂತೆಯೇ ಅವರ ಭಾಷೆಯ ಮಿಂಚು - ಸಂಚು, ಮಿಣಕು - ಕೆಣಕು, ಮೆಚ್ಚು - ಚುಚ್ಚು. ಇಷ್ಟೆಲ್ಲ ಹೇಳಿದ ಮೇಲೂ ಎದ್ದು ನಿಲ್ಲುವ ಅಂಶವೆಂದರೆ ಸಾಶಿಮ ಸಾಹಿತ್ಯ ಲಾಲನೆಯ ಮಾತೃವಾತ್ಸಲ್ಯಕ್ಕೆ ಹೆಚ್ಚು ಮಣೆದಿದ್ದಾರೆ ಅವರು ಪ್ರೇರಕರು, ಪೋಷಕರು, ಮೊಳಕೆ ಚಿವುಟುವ ಗರ್ಭಪಾತಕರಲ್ಲ, ವಿಗ್ರಹ ಭಂಜಕರಂತೂ ಖಂಡಿತ ಅಲ್ಲ. ಅಂಥವರ ಸಂಖ್ಯೆ ಈ ಮಿತ ಸಂತಾನದ ಯುಗದಲ್ಲಿ ತೀರಾ ತೀರಾ ಕ್ಷೀಣಿಸುತ್ತಿದೆ. ಎಂಬುದೇ ಈ ಲೇಖಕನ ವಿಷಾದ!

ಟಿಪ್ಪಣಿ

೧. ಇದು ಸಾಶಿಮ ಅವರ ವಿಮರ್ಶೆಗಳ ವಿಮರ್ಶೆಯಲ್ಲ. ಒಂದು ವಿಹಂಗಮ ನೋಟ ಮಾತ್ರ. ಲೇಖನ ಸಂದರ್ಭ ಹಾಗೂ ಪುಟಗಳ ಮಿತಿಗೆ ಸೀಮಿತವಾದದ್ದು.

೨. ಇಲ್ಲಿ ಪರಿಶೀಲಿಸಲಾದ ಕೃತಿಗಳು ಮೂರು.

ಸ್ಪಂದನ : ರಚನೆ ಡಾ॥ ಸಾ.ಶಿ.ಮರುಳಯ್ಯ (ಸಂ) ಡಾ॥ ಶಾಲಿನಿ ಪ್ರಭು ಪ್ರಕಾಶನ ರಾಗಿಣಿ ಶಿಕ್ಷಣ ಪ್ರತಿಷ್ಠಾನ, ಬೆಂಗಳೂರು - ೪೦. ಪುಟಗಳು 4 + 152 (ಬೆಲೆ - 24.00)

ಪ್ರತಿ ಸ್ಪಂದನ : ರಚನೆ ಡಾ॥ ಸಾ.ಶಿ.ಮರುಳಯ್ಯ (ಸಂ) ತ್ರಿವೇಣಿ ಶಿವಕುಮಾರ್ (ಪ್ರ) ಪ್ರಭುದೀಪ್ ಪ್ರಕಾಶನ, ಬೆಂಗಳೂರು - ೪೦. ಪ್ರ. 6 + 132 ಬೆಲೆ: 30-00

ಅವಲೋಕನ ರಚನೆ : ಡಾ॥ ಸಾ.ಶಿ. ಮರುಳಯ್ಯ
(ವಿಮರ್ಶೆಗಳ ಸಂಕಲನ) ಸಂಕಲನ : ಶ್ರೀಮತಿಯರಾದ ಬಿ. ಎಸ್. ಚಂದ್ರಕಲಾ ಮತ್ತು ನಾಗರತ್ನ ಶಾಂತಮಲ್ಲಪ್ಪ.
ಪ್ರಕಾಶನ ಡಾ. ಸಾ.ಶಿ. ಮರುಳಯ್ಯ ಅಭಿನಂದನ ಸಮಿತಿ, ಬೆಂಗಳೂರು.
ಪುಟಗಳು 6 + 154 ಬೆಲೆ: 30-00

ಶ್ರೀ ಸಾಶಿಮ ಅವರ 'ಪರಿಕಲ್ಪನೆಗಳು' ಬಗೆಗೆ ಒಂದು ಪರಿಕಲ್ಪನೆ

ಪ್ರೊ|| ಕೆ.ಎಸ್. ನಾರಾಯಣಾಚಾರ್ಯ

ಪ್ರಾಸ್ತಾವಿಕ :

'ಯಾವುದಕ್ಕೂ ಒಂದು ಒಳ್ಳೆಯ ಗಳಿಗೆ ಕೂಡಿ ಬರಬೇಕು' ಎಂಬ ಹಿರಿಯರ ಮಾತನ್ನು ನಂಬಿದವರಲ್ಲಿ ನಾನೂ ಒಬ್ಬ. ನನ್ನ ಜೀವನದ ಎಲ್ಲ ಮುಖ್ಯತಿರುವು, ಘಟನಾವಳಿಗಳೆಲ್ಲ ಇದಕ್ಕೆ ಸಾಕ್ಷಿ. ನನ್ನ ಮಟ್ಟಿಗೆ ಇಷ್ಟು ಪ್ರಮಾಣ ನನಗೆ ಸಾಕು.

ಕನ್ನಡ ಸಾಹಿತ್ಯದ ಅನೇಕ ಅಂಶಗಳಲ್ಲಿ ನಾನು ಚಿಕ್ಕಂದಿನಿಂದ ಆಸಕ್ತನಾಗಿದ್ದರೂ, ಕ್ರಮಬದ್ಧ, ಪೂರ್ಣ ಅಧ್ಯಯನದಲ್ಲಿ ತೊಡಗಿದವನಲ್ಲ. ಇದರ ಕಾರಣಗಳು ಇಲ್ಲಿ ಬೇಡ. ಅದರಲ್ಲೂ ಸಮಕಾಲೀನ ಲೇಖಕರಲ್ಲಿ, ಕವಿ, ಕಾದಂಬರಿಕಾರರಲ್ಲಿ ಹಲವರಲ್ಲಿ ನನ್ನ ಒಲವು, ಮೆಚ್ಚುಗೆ ಇದ್ದರೂ, ನಾನೂ ಯಾರ ಬಗೆಗೂ ಬರೆಯಲೂ ಇಲ್ಲ; ಸಂದರ್ಭವೂ ಹಾಗೆ ಕೂಡಿ ಬರಲಿಲ್ಲ; ಈ ಅಜ್ಞಾತವಾಸದಿಂದ ನನ್ನನ್ನು ಹೊರತೆಗೆದ ಮೊದಲಿಗರು ಮಿತ್ರರಾದ ಮಾನ್ಯ ಡಾ|| ವಾಮನ ಬೇಂದ್ರೆ ಅವರು. ಪೂಜ್ಯರಾದ ಡಾ ದ.ರಾ. ಬೇಂದ್ರೆ ಅವರ ಜನ್ಮಶತಾಬ್ದಿಯಂದು 'ಶ್ರೀಮಾತಾ' (ಧಾರವಾಡ) ದಲ್ಲಿ ಆಹ್ವಾನಿತ ಅಪಾರ ಜನಸ್ತೋಮದ ಮುಂದೆ ''ಬೇಂದ್ರೆ ಕಾವ್ಯದಲ್ಲಿ ಆಧ್ಯಾತ್ಮದ ನೆಲೆ ಮತ್ತು ಆರ್ಷ ದೃಷ್ಟಿ'' ಎಂಬ ವಿಷಯದಲ್ಲಿ ನನ್ನಿಂದ ಸುದೀರ್ಘ ಭಾಷಣ ಮಾಡಿಸಿದ್ದಲ್ಲದೆ, ಅದನ್ನು ಪುಸ್ತಕ ರೂಪದಲ್ಲೂ ಪ್ರಕಟಿಸಿದರು!

ಈಗ ಎರಡನೆಯ ಮೆಟ್ಟಲಲ್ಲಿ ನಿಂತಿದ್ದೇನೆ. ಶ್ರೀಮತಿ ಜಯ ರಾಜಶೇಖರ್ ಅವರ ಸಜ್ಜನಿಕೆಯ, ಸದಿಚ್ಛೆಯ ಮೈತ್ರಿಯ ಫಲವಾಗಿ, ಅವರ ಮಾರ್ಗದರ್ಶಕರೂ ಗುರುಗಳೂ ಆಗಿರುವ ಶ್ರೀ 'ಸಾಶಿಮ' ಅವರ ಈ ಕೃತಿಯನ್ನು ಕುರಿತು ನಾಲ್ಕು ಮಾತುಗಳನ್ನು ಬರೆಯುವ ಅವಕಾಶ ನನಗೆ ದೊರೆತಿದ್ದು ಈ ಇಬ್ಬರು ಮಹನೀಯರಿಗೂ ನಾನು ಕೃತಜ್ಞನಾಗಿದ್ದೇನೆ.

ಒಳ್ಳೆಯ ವ್ಯಕ್ತಿಗಳ ಬಗೆಗೆ, ಕೃತಿಗಳ ಬಗೆಗೆ ಬರೆಯಲು ಭಾಗ್ಯ ಬೇಕು. ಸಾಹಿತ್ಯ ವಿಮರ್ಶೆ ಎಂಬುದು ಉದ್ದಿಮೆಯಾಗಿ, ಸಹೃದಯತೆಯ ಮಾನದಂಡವನ್ನು ತಿರಸ್ಕರಿಸಿ, ಪಶ್ಚಿಮದವರ ಪ್ರಭಾವದಿಂದ ರಾಷ್ಟ್ರೀಯ ಸಾಂಸ್ಕೃತಿಕ ಸಂದರ್ಭದ ಹಿನ್ನೆಲೆಯನ್ನು ಕಳೆದುಕೊಂಡು, ತಬ್ಬಲಿಪ್ರಜ್ಞೆಯಿಂದ ತ್ರಿಶಂಕುವಾಗಿ ಅಲೆಯಲು ಆರಂಭಿಸಿದ ದಿನಗಳಿಂದ ನಾನು 'ವಿಮರ್ಶೆ'ಯ ಬಗೆಗೆ ಜಿಗುಪ್ಸಿತನಾಗಿ, ಆಂಗ್ಲಭಾಷಾ ಸಾಹಿತ್ಯ ಪ್ರಾಧ್ಯಾಪಕನಾಗಿದ್ದೂ, ಈ ಮಾತನ್ನು ಈಗ ಬರೆಯುತ್ತಿದ್ದೇನೆಂದರೆ ನಿಮಗೆ ಅಚ್ಚರಿಯಾದರೂ ಸಮಾಧಾನವಾದೀತು ಎಂದು ನಂಬುತ್ತೇನೆ. ನಿಮಗೆ ಬೇಡದ,

ರಾಷ್ಟ್ರದ ಪುರುಷಾರ್ಥ ಪ್ರಜ್ಞೆಗೆ ಉಪಕಾರಕವಾಗದ ಕೃತಿ, ಕಾವ್ಯ ಕವಿಗಳ ಬಗೆಗೆ ಬರೆಯುವುದಕ್ಕಿಂತ, ಸುಮ್ಮನಿರುವುದೇ ವಾಸಿ ! ಅದು ಭಾರತೀಯ ರೀತಿ. ರಾಷ್ಟ್ರಕ್ಕೆ, ಜನತೆಗೆ, ಉಪಯುಕ್ತವಾಗದದ್ದು ಗಟ್ಟಿಯಾಗಿ ನಿಂತೇ ನಿಲ್ಲುತ್ತದೆ - ಯಾವ ಪರಂಪರೆಯ ಸಾಹಿತ್ಯವೇ ಆಗಿರಲಿ ! ಅಂಥವರ ಬಗೆ ಅದು 'ನಿಂತ' ಕಾರಣ ಕಂಡುಕೊಂಡು ಆನಂದಿಸುವ, ವಿವರಣೆ ಪಡೆದುಕೊಳ್ಳುವ ಮುದದಾಯಕ ಕೃಷಿಯೇ 'ವಿಮರ್ಶೆ' - ಈ ಮಾತು ಇನ್ನೂ ಬೇಕಾದರೆ ! ಆದುದರಿಂದ ಮನನೋಯಿಸುವ, ಕುರುಡು ನ್ಯಾಯಾಧೀಶ ಮನೋವೃತ್ತಿಯಿಂದ ಬರೆಯುವ ಬಗೆಗೆ ನನಗೆ ಒಲವಿಲ್ಲ. ಹಾಗೆ ನಾನು ಬರೆದೂ ಇಲ್ಲ. ಆದುದರಿಂದ ಪ್ರಕೃತ ಲೇಖನವನ್ನು ಯಾರೂ 'ವಿಮರ್ಶೆ' ಎಂಬ ದೃಷ್ಟಿಯಲ್ಲಿ ನೋಡುವುದು ಬೇಡ. ಇದೊಂದು ಸಹೃದಯ ಸ್ಪಂದನ ಮಾತ್ರ. 'ಸಾಶಿಮ' ಅವರ ಕೃತಿಯನ್ನು , ವ್ಯಕ್ತಿತ್ವದ ಹಲವು ಅಂಶಗಳನ್ನು ಅರಿಯಲು ಇದು ಸ್ವಲ್ಪವೇ ಸಹಾಯಕವಾದರೂ ಈ ಬರವಣಿಗೆ ಸಾರ್ಥಕ.

'ಸಾಶಿಮ' ಅವರನ್ನು ನಾನು ಹತ್ತಿರದಿಂದ ಕಂಡವನಲ್ಲ. ನನ್ನ ಬಗೆಗೂ ಅವರು ತಿಳಿದಿರಲಾರರು. ಆದರೂ ಶ್ರೀಮತಿ ಜಯಾ ರಾಜಶೇಖರ್ ಅವರ ಸಾಂಸ್ಕೃತಿಕ ರಾಯಭಾರದಿಂದಾಗಿ ಈ ಅಕ್ಕರ ಪರಿಚಯ ಸಾಧ್ಯವಾಗಿದೆ. ಅದು ಸಾರ್ಥಕವೂ ಆಗಲಿ ಎಂದು ಆಶಿಸುತ್ತೇನೆ.

'ಪರಿಕಲ್ಪನೆಗಳು' - ಪಕ್ಷಿನೋಟ

ಈ ಸಂಕಲನದಲ್ಲಿ ಹದಿನಾರು ಉತ್ತಮ ಲೇಖನಗಳಿವೆ. ಮಹಾಕಾವ್ಯಗಳು, ಸಂಗೀತ, ನೃತ್ಯ, ವ್ಯಾಕರಣ, ವಾದ್ಯಗಳು, ಶಾಸನ, ಚಳುವಳಿಗಳು, ಸಾಮಾಜಿಕ ಚಿಂತನೆ, ಹೀಗೆ ಒಂದು ಅಪೂರ್ವ ವಿಶ್ವದರ್ಶನವನ್ನೇ ಇಲ್ಲಿ ಯಾರೂ ಕಾಣಬಹುದು. ಹೀಗೆಯೇ ಒಂದು ನಿರ್ದಿಷ್ಟರೂಪದ ಇಡಿಯ ಕೃತಿಗಾಗಿ ಈ ಲೇಖನಗಳು ಸಿದ್ಧಗೊಂಡಂತೆ ಕಾಣುವುದಿಲ್ಲ. ಲೇಖನಗಳು ಬೇರೆ ಬೇರೆ ಕಾಲ, ಕಾರಣಗಳಿಗಾಗಿ ಸಿದ್ಧಪಟ್ಟು ಪ್ರಕಟವಾಗಿ, ಈಗ ಈ ಆಕಾರಪಡೆದಿರುವುದನ್ನೇ ಈ ಗುಚ್ಛದ ಶೀರ್ಷಿಕೆ - 'ಪರಿಕಲ್ಪನೆ' ತೋರಿಸುತ್ತದೆ. ಇದು ಸಮಂಜಸವಾದ ಶೀರ್ಷಿಕೆ. ಒಂದೊಂದು ಲೇಖನವೂ ಆ ಆ ಕ್ಷೇತ್ರದಲ್ಲಿನ ಓದುಗರ ನಿರೀಕ್ಷೆ ಅಥವಾ ಕಲ್ಪನೆಯನ್ನು ಹಿಗ್ಗಿಸುವ ದಾರಿಯಲ್ಲಿದ್ದು , ಆ ಮುಖಗಳ ಅಂತರದಲ್ಲೂ ಸೂತ್ರವನ್ನು 'ಪರಿ' ಹಿಡಿದಿಟ್ಟು ಸೂಚಿಸುತ್ತಿದೆ. ರಕ್ಷಾಪತ್ರದ ಮೇಲಿನ ಚಿತ್ರಾಕ್ಷರದ ಶೀರ್ಷಿಕೆ ನನಗೆ ಮೊದಲ ನೋಟಕ್ಕೆ ''ಸರಿಕಲ್ಪನೆಗಳು'' ಎಂದು ಒಮ್ಮೆ, ''ಸಂಕಲ್ಪನೆಗಳು'' ಎಂದು ಇನ್ನೊಮ್ಮೆ ಕಾಣಿಸಿತು ! ಇದರಲ್ಲೂ ನನಗೆ ವಿಸಂಗತಿ ಕಾಣಲಿಲ್ಲ.

'ಗಿಲ್ಗಮಿಶ್', 'ಭಾಸೋಹಾಸಃ', 'ಗಾಥಾಸಪ್ತಶತಿ', 'ವಡ್ಡಾರಾಧನೆ', ಹಾಗೂ 'ಶುಕಸಪ್ತತಿ' ಎಂಬ ಐದು ಲೇಖನಗಳು ಮಹಾಕಾವ್ಯ ನಾಟಕಗಳ ಪರಿಚಯಾತ್ಮಕ, ತೂಕ ಅಳೆಯುವ ಯತ್ನದ ಲೇಖನಗಳು. 'ಸುಗಮ ಸಂಗೀತದಲ್ಲಿ ಸಾಹಿತ್ಯದ ಸ್ಥಾನ'

ಮತ್ತು 'ಗೀತನಾಟಕ ಮತ್ತು ನೃತ್ಯ ರೂಪಕಗಳಲ್ಲಿ ಭಾಷೆ' ಎಂಬೆರಡು ಸ್ವತಂತ್ರ ಚಿಂತನೆಯ, ಲಹರಿಯ, ವೈಚಾರಿಕ ಲೇಖನಗಳು. 'ಶೂನ್ಯ ಸಂಪಾದನೆಯ ರಚನಾ ಕಲ್ಪನೆ' ಎಂಬುದು ಅದೇ ಹೆಸರಿನ ಮಹಾಕೃತಿಯ ಕಾವ್ಯಶರೀರ, ಆಕಾರ, ಚೌಕಟ್ಟನ್ನು ಪರಾಮರ್ಶೆ ಮಾಡಿ, ಮನದ ಹದಕ್ಕೆ ಅದನ್ನು ಹಿಡಿದುಕೊಡುವ ಯತ್ನದ ಒಂದು ಸ್ತುತ್ಯಲೇಖನ. 'ಹಲ್ಮಿಡಿ ಶಾಸನ' ಕುರಿತದ್ದು ಒಂದು ಚಿಂತನೆಯಫಲ; ''ಕನ್ನಡ ಕವಿಗಳ ಮೇಲೆ ಕಾಳಿದಾಸನ ಪ್ರಭಾವ'' ಒಂದು ವಿದ್ವತ್ಪೂರ್ಣ ಅಧ್ಯಯನದ ಫಲ. ಲೇಖಕರ ಆಳ ವೈದುಷ್ಯ, ಉಭಯ ಭಾಷಾಪ್ರಭುತ್ವ, ವಿಶ್ಲೇಷಣೆ ವಿಚಾರಗಳ ಸಮರ್ಥ ಹರವಿನ ಪರಿಚಯ ಇಲ್ಲಿ ಯಾರಿಗೂ ಆಗುತ್ತದೆ. 'ಬಸವಣ್ಣನವರು ಹಾಗೂ ಸಾಮಾಜಿಕ ಸಾಮರಸ್ಯ' ಎಂಬ ಲೇಖನದಲ್ಲಿ ಬಸವಣ್ಣನವರ ಕೃತಿಗಳನ್ನು ಅರಿಯಲು ಬೇಕಾದ ಮುಖ್ಯ ಸೂತ್ರವೊಂದರ ಸಮರ್ಥಮಂಡನೆಯಿದೆ. ಇದು ನನಗೆ ತುಂಬ ಮೆಚ್ಚುಗೆಯಾದ ಲೇಖನ. ಏಕೆಂದರೆ ನನ್ನ ವಿಚಾರದ ದಿಕ್ಕೂ ಇತ್ತಲೇ ಇರುತ್ತ ಒಂದು ಸಮರ್ಥನೆಯನ್ನು ಕಂಡುಕೊಂಡಿದ್ದೇನೆ. 'ಸಾಹಿತ್ಯಿಕ ಚಳುವಳಿಗಳು - ಕನ್ನಡ ಸಾಹಿತ್ಯವನ್ನು ಅನುಲಕ್ಷಿಸಿ' ಎಂಬ ಲೇಖನದಲ್ಲಿ ಹಿತೋಕ್ತಿಗಳಿವೆ; ಹಿತ ಅರ್ಥೈಕೆಗಳಿವೆ. ಸಮಗ್ರ ಕನ್ನಡ ಸಾಹಿತ್ಯವನ್ನೆಲ್ಲ ಒಂದು ಚಳುವಳಿಯ ಮಜಲುಗಳನ್ನಾಗಿ ಕಾಣುವ ಹೊಸದೃಷ್ಟಿ ಇಲ್ಲಿದೆ. 'ಗಾಥಾಸಪ್ತಶತಿ' ಮತ್ತು 'ಶುಕಸಪ್ತತಿ' ಎಂಬ ಎರಡು ಲೇಖನಗಳಲ್ಲಿ ಮಾಹಿತಿ ಸಂಗ್ರಹಣೆಯ, ಪರಾಮರ್ಶೆಯ ಕಾಯಕ ಚೆನ್ನಾಗಿ ನಡೆದು, ಗ್ರಂಥಗಳ ಒಂದು ಸಮರ್ಪಕ ಚಿತ್ರ ಓದುಗನಿಗೆ ದೊರೆಯುತ್ತದೆ. 'ವ್ಯಾಕರಣ ವೇದಿಕೆ' ಎಂಬುದು, ಒಂದು ಐತಿಹಾಸಿಕಾತ್ಮಕ ವಿವೇಚನೆ. ವ್ಯಾಕರಣದ ಬಳಕೆ, ಅಗತ್ಯತೆ, ಪರಿ, ಆವಿಷ್ಕಾರ ಪ್ರಕಾರಗಳ ಕುರಿತ ಚಿಂತನೆ ಇಲ್ಲಿದೆ. 'ಕವಿ ವಿಮರ್ಶಕರಾಗಿ, ವಿಮರ್ಶಕನು ಕವಿಯಾಗಿ' ಎಂಬುದು, ಸೃಜನಶೀಲತೆ ಮತ್ತು ವಿಮರ್ಶೆಗಳ ಪರಸ್ಪರ ಪೂರಕತೆಯ ಹಿನ್ನೆಲೆಯಲ್ಲಿ ಎದ್ದು ಕಾಣುವ, ಕಾಣಬೇಕಾದ, ಹಿತಮಿತ ಕ್ಷೇತ್ರಸ್ವಾಯತ್ತತೆಯ ಪರಿಮಿತಿ, ಅದನ್ನು ಕುರಿತ ಇತರ ಲೇಖಕರ ಪಾರಂಪರಿಕ ಚರ್ಚೆಯನ್ನು ಒಳಗೊಂಡಿದೆ.

ಹೀಗೆ ಈ 'ಪರಿಕಲ್ಪನೆಯ' ಅಪರಿಮಿತ ಪರಿಮಿತಿಯ ಅಪ್ಸರಬಾಹುಗಳ ನಡುವೆ ಓದುಗನಿಗೆ ಸಾಹಿತ್ಯ, ಸಂಗೀತ, ಭಾಷೆಗಳ ಕುರಿತ ಒಂದು ಮಧುರಾಲಿಂಗನವೇ ಏರ್ಪಡುತ್ತದೆ.

ಗಿಲ್ಗಮಿಶ್

ಇದೊಂದು ಅಧ್ಯಯನ ಪೂರ್ಣ, ಸ್ವಯಂಭೂ ಪ್ರಬಂಧ. ಒಂದು ವಿಚಾರ ಸಂಕಿರಣಕ್ಕಾಗಿಯೇ ಬರೆದು ಪ್ರಚುರವಾದದ್ದು. ಕ್ರಿ.ಪೂ. ೧೮ನೆಯ ಶತಮಾನದ ಒಬ್ಬ ಇದೇ ಹೆಸರಿನ ವೀರನ ಕುರಿತು ಕಾಲಪುರುಷ ಬರೆಸಿದ ಜಾನಪದ ಮಹಾಕಾವ್ಯ. ಈ ಸಂದರ್ಭದ ಕಾವ್ಯರಚನೆಯ ಮಜಲುಗಳನ್ನು, ಖಂಡಖಂಡಗಳ ಆವಿಷ್ಕಾರದ

ಸಾಧ್ಯತೆಯನ್ನೂ, ಉತ್ಖನನಗಳ ಫಲವನ್ನೂ, ಕಾವ್ಯಕಥೆಯ ಪರಿಚಯವನ್ನೂ, ಅನೇಕ ಅವತರಣಿಕೆಗಳ ಸುಂದರ ಕನ್ನಡಾನುವಾದವನ್ನೂ, ಅನೇಕ ಅಡಿಟಿಪ್ಪಣಿಗಳ ರೂಪದ ಹೆಚ್ಚಿನ ವಿವರಗಳನ್ನೂ ಸಾಮಾನ್ಯನೂ ವಿದ್ವಜ್ಜನರೂ ಅರಿಯುವಂತೆ, ಆಸ್ವಾದಿಸುವಂತೆ ಲೇಖಕರು ಇಲ್ಲಿ ವಿವರಿಸಿದ್ದಾರೆ. ಇವರ ಜಾನಪದ ಸಾಹಿತ್ಯದ ಆಳದ ಬಲವನ್ನೂ, ಕೃಷಿಯ ಫಲವನ್ನೂ ಇಲ್ಲಿ ಕಾಣಬಹುದು. ತಾಂತ್ರಿಕವಾಗಿ ಇಲ್ಲಿನ ಜಾನಪದ ಕವಿಗಳು ಬಳಸಿಕೊಂಡಿರುವ ಅನೇಕ ತಾಂತ್ರಿಕ ಸಾಮಗ್ರಿ, ಅಂಶಗಳ ಪರಾಮರ್ಶೆಯೂ ನಡೆದಿದೆ. ಉದಾಹರಣೆಗೆ ಕನಸುಗಳು, ದೇವತೆಗಳು, ಪ್ರಳಯಕಲ್ಪನೆಗಳು. ಪ್ರಸಂಗಾತ್ ಇಲ್ಲಿ ದ್ರಾವಿಡ ಸಂಸ್ಕೃತಿಯನ್ನು ಗುರುತಿಸುವ ಯತ್ನವೂ ನಡೆದಿದೆ. 'ಭಾರತೀಯತ್ವ'ದ ಚೌಕಟ್ಟಿನಲ್ಲಿ, ನೆಲೆಗಟ್ಟಿನಲ್ಲಿ 'ದ್ರಾವಿಡ'ದ ಅದಿರನ್ನು ಸೇರಿಸುವ ದಿಕ್ಕಿನ ಯತ್ನ ಸ್ತುತ್ಯವಾದುದೇ ! (ಪು. ೨೫) 'ಆರ್ಯ-ದ್ರಾವಿಡ' ವಾದ ಇಂದು ವಿಷಮ ವಿಕೋಪದ ನೆರಳಲ್ಲಿ ರಾಷ್ಟ್ರವನ್ನೇ ಕೆಣಕುತ್ತ ಅಣಕುತ್ತ ಜನಾಂಗೀಯ ದ್ವೇಷ, ಪ್ರಾದೇಶಿಕತಾವಾದ, ಪ್ರತ್ಯೇಕತಾವಾದಗಳಿಗೆ ಎಡೆಮಾಡಿಕೊಡುತ್ತಿರುವ ಇಂದಿನ ಪ್ರಸಂಗದಲ್ಲಿ, ಈ ವಾದಮೂಲವು ಭಾರತೀಯರ ಸಮಗ್ರತೆ, ಸಾಂಸ್ಕೃತಿಕ ಏಕತೆಯನ್ನು ಮುರಿಯಲು ಪರಕೀಯರು ಹುಟ್ಟುಹಾಕಿದ ತಂತ್ರವೆಂಬುದನ್ನು ವಿವೇಕಿಗಳು ಈಗೀಗ ಮನಗಾಣುತ್ತಿದ್ದಾರೆ. ''ದ ವಾಯ್ಸ್ ಆಫ್ ಇಂಡಿಯಾ'' (ನವದೆಹಲಿ) ಯ ಅನೇಕ ಪ್ರಸಿದ್ಧ ಇತಿಹಾಸಕಾರರು ಗ್ರಂಥಕರ್ತರು ''ಆರ್ಯರು ಹೊರಗಿಂದ ಬಂದವರು'' ಎಂಬ ವಾದವನ್ನು ಸಮರ್ಥವಾಗಿ ನಿರಾಕರಿಸಿ ಪ್ರಮಾಣೀಕರಿಸಿದ್ದಾರೆ. 'ದ್ರಾವಿಡ'-'ಆರ್ಯ' ಶಬ್ದಗಳು ಜನಾಂಗವಾಚಕಗಳಲ್ಲ; ಸಾಂಸ್ಕೃತಿಕ ಪ್ರಭೇದವಾಚಕಗಳು. ಅಂದಿನ ಭರತವರ್ಗವು (Greater India) ಎನ್ನಬಹುದಾದ್ದ) ಈಗ 'ಸ್ಥಾನ' ಶಬ್ದವು ಅಂಟಿಕೊಂಡು ಇನ್ನೂ ಹಳೆಯ ಚರಿತ್ರೆಯ ಕುರುಹನ್ನು ತೋರಿಸುತ್ತ ಕಝುಕ್‌ಸ್ಥಾನ, ಉಝ್ಬೆಕೀಸ್ಥಾನ್, ಆಫಘನೀಸ್ಥಾನ್, ಪಾಲೀಸ್ಥಾನ (Palestine) ಮುಂತಾದ (ಇಂದಿನ ಭಾರತದ ಹೊರಗಿನ) ಅನೇಕ ವಿಶಾಲ ಪ್ರಾಂತಗಳಲ್ಲಿ ಹರಡಿ ನಿಂತಿರುವುದನ್ನು ಕಂಡಾಗ ಆಗಿನ ಭಾರತಕ್ಕೆ 'ಒಳಗು-ಹೊರಗು' ಎಂಬುದನ್ನು ಇಂದಿನ ಭೂಪಟದಿಂದ ಗ್ರಹಿಸಿ 'ಆರ್ಯರೂ', 'ದ್ರಾವಿಡರೂ' ಎಲ್ಲರೂ 'ಹೊರಗಿಂದ' ಬಂದರೆಂಬುದನ್ನು ನಿರೂಪಿಸಹೊರಡುವುದು ಹಾಸ್ಯಾಸ್ಪದ ! ಈ ವಿಷಯದಲ್ಲಿ ಈ ಕೆಳಗಿನ ಗ್ರಂಥಗಳನ್ನಾದರೂ ವಿವೇಕಿಗಳು ಓದಬೇಕು.

(1) The Vedic Harappans, by Bhagavan Sigh, (PP 493 + xxiv. Demi 1/4) First published 1995, Aditya Prakasana, N. Delhi. Rs. 850/- with 52 illustration.

(2) ಇದೇ ಲೇಖಕರ Arya Dravida Bhashaon Ki Mulabhuta Ekata (1973, book in Philosoph)

(3) Vedic Aryans and the origins of Civilization - a literary and scientific perspective, II edn., by Navarathna S. Rajaram and David Frawky, with Foreword by Klans K. Klostezmaier, (Pub. Voice. of India, New Delhi, 1997, PP 328+ xxi, Demy 1/8) Price : Rs. 150/-

(4) Indigenous Indians - Agastya to Ambedkar, by Koenraad Elst, (PP 483+ viii, demy 1/8, Price : Rs. 150/-, Pub. Voice of India)

(5) Ancient India in a new light. by K.D. Sethna, (Aditya Prakasan, New Delhi, PP 645+ viii, demy 1/8, Price Rs. 500/- 1997).

ಕನ್ನಡ ವಿದ್ವಾಂಸರ ಗಮನ ಇನ್ನಾದರೂ ಇತ್ತ ಹರಿಯಬೇಕು ! ಐವತ್ತರವತ್ತು ವರ್ಷಗಳ ಹಿಂದಿನ ಕಾಲಸ್ಫೋಟಿತ ವಾದಗಳನ್ನೂ, ಕಾಲವಶವಾದ ಗ್ರಂಥಗಳನ್ನೂ ಇನ್ನೂ ಉಪಯೋಗಿಸುವುದು ವಿಚಾರಕ್ಕೆ ಹಾನಿಕರ. 'ಆರ್ಯ-ದ್ರಾವಿಡ' ವಾದ ಮೂಲದ ಭಾಷಾ ವಿಜ್ಞಾನಶಾಸ್ತ್ರವೂ ಪುನಃ ಪರಿಶೀಲನಾರ್ಹವಾಗಿದೆ. ವಿದ್ವತ್ ಪ್ರಪಂಚವು ಇತ್ತ ಮೌನ ವಹಿಸಿರುವುದು ಸಾಂಸ್ಕೃತಿಕ ಸ್ವಾಸ್ಥ್ಯಕ್ಕೆ ಆರೋಗ್ಯಕರ ಲಕ್ಷಣವಲ್ಲ.

ಭಾಸೋಹಾಸಃ

ಈ ಲೇಖನದಲ್ಲಿ ಭಾಸಕವಿಚಕ್ರದ ಎಲ್ಲ ನಾಟಕಗಳ ಸುಂದರ ಪರಿಚಯ, ಪ್ರವೇಶಗಳು ದೊರೆಯುತ್ತವೆ. ಭಾಸನ ಸ್ವತಂತ್ರಪ್ರತಿಭೆ ತನ್ನತನವನ್ನು ಮೆರೆದ ಜಾಡನ್ನು ಹಿಡಿದು, ಮೆಚ್ಚಿ ಲೇಖಕರು ಅಭಿನಂದಿಸಿದ್ದಾರೆ, ಇಲ್ಲಿ ಭಾಸನ ಮೂಲಗ್ರಂಥಗಳ ಪರಿಚಯವೇ ಇಲ್ಲದವರೂ ಓದಿ, ಆಸ್ವಾದಿಸಿ, ಆಮೇಲೆ ಅವನನ್ನು ಓದಲು ಸುಲಭವಾಗುವಂತೆ, ಇದನ್ನು 'ಪ್ರವೇಶಿಕಾ' ರೂಪದಲ್ಲಿ ಬರೆದಿರುವುದು ಒಂದು ವೈಶಿಷ್ಟ್ಯ ಎನ್ನಬಹುದು.

ಕನ್ನಡ ಕವಿಗಳ ಮೇಲೆ ಕಾಲಿದಾಸನ ಪ್ರಭಾವ

ವಿಸ್ತರಿಸಿದ್ದರೆ ನಿಬಂಧವಾಗಬಹುದಾಗಿದ್ದ ಉತ್ತಮ ಲೇಖನ ಇದು. ಪ್ರಮಾಣಗಳನ್ನು ಯಥೇಷ್ಟವಾಗಿ ಉದಾಹರಿಸುತ್ತ ಇದನ್ನೊಂದು ಮನೋಜ್ಞ ಪ್ರಬಂಧವನ್ನಾಗಿ ಬರೆದು ಉಪಕರಿಸಿದ್ದಾರೆ 'ಸಾಶಿಮ' ಅವರು. ಅಪೂರ್ವವಾದ ಅನೇಕ ಹೊಸ ಅಂಶಗಳನ್ನೊಳಗೊಂಡ ಈ ಪ್ರಬಂಧವು ಸಂಸ್ಕೃತ ಕನ್ನಡ ಭಾಷೆ, ಸಾಹಿತ್ಯಗಳ ಮಧುರ ಸಂಬಂಧಕ್ಕೂ ಕೈಗನ್ನಡಿಯಾಗಿದೆ.

ಶೂನ್ಯ ಸಂಪಾದನೆಯ ರಚನಾಕಲ್ಪನೆ

ಒಂದು ಉತ್‌ಕೃತಿಯ ರಚನಾಸ್ವರೂಪದ ಸ್ಪಷ್ಟ ಪರಿಕಲ್ಪನೆಯು ಅದರ ಅಂತಃಸತ್ವ, ನಿರೂಪಿತ ವಿಷಯದ ಗ್ರಹಿಕೆಗೆ, ಉಪಕಾರವಾಗುವ ವಿಷಯ. ಉತ್ತಮ ಸಾಹಿತ್ಯವು ತನ್ನದೇ ಶಬ್ದ ದೇಹವನ್ನು ತಾನೇ ಸಾವಯವ ಕ್ರಿಯೆಯಿಂದ ಎಂಬಂತೆ ಪಡೆದುಕೊಳ್ಳುತ್ತದೆ. ಆದುದರಿಂದ ಶೂನ್ಯಸಂಪಾದನೆಯು ಚಂಪುವೇ, 'ಪ್ರಸಂಗ'ವೇ, ಬೇರೊಂದೇ ಎಂಬ ಚರ್ಚೆ ಅಪ್ರಸ್ತುತವಲ್ಲ. 'ಸಾಶಿಮ' ಅವರು ಇಲ್ಲಿ ಇತರ ಅನೇಕ ಗ್ರಹಿಕೆಗಳನ್ನು ತಳ್ಳಿ 'ಸಂವಾದ ಸಾಹಿತ್ಯ' ಎಂದು ಸಿದ್ಧಮಾಡಲು ಯತ್ನಿಸಿದ್ದಾರೆ. ಆದರೂ ಕೃತಿಯ ಸ್ವರೂಪದಲ್ಲಿ ಇನ್ನೂ ಪರಿಷ್ಕಾರಗಳಾಗಬೇಕೆಂಬ ಹೊಸ ಸಲಹೆಯನ್ನು ಮುಂದಿಟ್ಟು ತಮ್ಮ ಮುಕ್ತಮನಸ್ಸನ್ನು ತೆರೆದಿಟ್ಟಿರುವುದು ಸಂತೋಷ ತರುತ್ತದೆ. ''ಪ್ರಭುವಿನ ಪ್ರಶ್ನೆಗೆ ಉತ್ತರ ರೂಪವಾಗಿ ಬರುವ ಹಲವು ವಚನಗಳಲ್ಲಿ ಔಚಿತ್ಯವಿಲ್ಲ; ಅವು ಅಸಂಬದ್ಧವೂ ಆಗಿವೆ. ಅಂಥವುಗಳನ್ನು ತೆಗೆದು ಹಾಕಿ ಸೂಕ್ತ ಹಾಗೂ ಸುಸಂಬದ್ಧ ವಚನಗಳನ್ನು ಅಳವಡಿಸಬೇಕಾಗಿದೆ'' ಎಂಬ ಪರಾಮರ್ಶೆಯ ಮಾತನ್ನು ವೀರಶೈವ ಪರಂಪರೆ, ಮತ್ತು ಸಾಂಪ್ರದಾಯಿಕ ಶ್ರದ್ಧೆಯ ವಿಮರ್ಶಕರು ಎಷ್ಟರಮಟ್ಟಿಗೆ ಒಪ್ಪಿಕೊಳ್ಳುತ್ತಾರೋ ನೋಡಬೇಕಾಗಿದೆ ! ಒಂದು ಸಮಾಜದ 'ಧರ್ಮಗ್ರಂಥ' ಎಂಬ ಮಟ್ಟಕ್ಕೆ ಪೂಜ್ಯಸ್ಥಾನದಲ್ಲಿರುವ ಯಾವುದೇ ಗ್ರಂಥದ ಬಗೆಗೆ ಪೂರ್ವಾಗ್ರಹಪೀಡೆ, ಮತ್ತು ಅಂಧಶ್ರದ್ಧೆಗೊಳಗಾದ ಯಾವುದೇ ವರ್ಗ ಇಂಥ ಸಲಹೆಗೊಪ್ಪುವುದು ಅಸಂಭವ ! ಆದರೆ ಕಲಾತ್ಮಕತೆಯ, ಸಾಹಿತ್ಯದ ಪೂರ್ಣತೆಯ ದೃಷ್ಟಿಯಿಂದ 'ಸಾಶಿಮ' ನೀಡಿರುವ ನಮ್ರ ಸಲಹೆಯಲ್ಲಿ ಅಸಹಜವೇನೂ ಇಲ್ಲ. ಆದರೂ ಇದು ಸರಳ ವಿಚಾರವಲ್ಲ. 'ಸೂಕ್ತ'' ವಚನಗಳಾವುವು ? 'ಸುಸಂಬದ್ಧ' ಯಾವುವು ? ಅಳವಡಿಸಬೇಕಾದುದು ಯಾರು ? 'ಔಚಿತ್ಯತೆ'ಯನ್ನು ನಿರ್ಣಯಿಸುವವರಾರು ? - ಇವು ಬಿಡಿಸಲು ಅಡಚಣೆ ತರುವ ಎಷ್ಟೋ ಅಂಶಗಳಿವೆ. ಇಡೀ ಸಮಾಜದ ಕಣ್ಣು ಒಂದಾಗಿ ಕಂಡು ಬಗೆಹರಿಸಬೇಕಾದ ಸಮಸ್ಯೆ ಇದು.

ಇಲ್ಲಿ 'ಶೂನ್ಯ' ಶಬ್ದ, ಅದರ ಅರ್ಥಕಲ್ಪನೆಯ ಕುರಿತು ಒಂದು ಮಾತು ಹೇಳಬೇಕಾಗಿದೆ. ಇದು 'ಸಾಶಿಮ' ಅವರಿಗೂ, ಹಾಗೆ ಶೂನ್ಯಸಂಪಾದನೆಯ ಕುರಿತ ಯಾವುದೇ ಇತರ ಲೇಖಕರ, ಚಿಂತಕರ, ವಿಮರ್ಶಕರ ಬಗೆಗೂ ಅನ್ವಯವಾಗತಕ್ಕದ್ದಿದೆ. ಅನೇಕ ವಿವೇಚಕರಂತೆ 'ಸಾಶಿಮ' ಅವರೂ ಹೀಗೆ ಬರೆದಿದ್ದಾರೆ.

''ಅವನ (ಶಿವಗಣಪ್ರಸಾದಿ ಮಹಾದೇವಯ್ಯನ) ಮುಖ್ಯಗುರಿ ಶಿವಾದ್ವೈತ ದರ್ಶನ ಪ್ರತಿಪಾದನೆ. ಅಂದರೆ ಜೀವ ಶಿವನಾಗುವ ವಿಧಾನ. ವೀರಶೈವನ ಪ್ರಕಾರ ಜೀವಾತ್ಮವು ಸಕಲ ಸದ್ಗುಣಗಳನ್ನು ಮೈಗೂಡಿಸಿಕೊಂಡು ವಿಕಾಸಹೊಂದುವುದು. ಕಡೆಯಲ್ಲಿ ಎಲ್ಲದರಿಂದ ಮುಕ್ತನಾಗಿ ಶೂನ್ಯ ಅಥವಾ ಶಿವ ಆಗುವುದು. 'ಶಿವ' ಎಂಬುದು ಷಟ್‌ಸ್ಥಲದಾಚೆಯ ಅನುಕ್ತ, ಆದರೆ ಅನುಭವೈಕವೇದ್ಯ ಚೈತನ್ಯ ಅಥವಾ

ಅಸಾಧಾರಣ ಶಕ್ತ ಸಂಕೇತ. ಆ ಸ್ತರದಲ್ಲಿ -

ಆನೆಂಬುದಿಲ್ಲ ನೀನೆಂಬುದಿಲ್ಲ,
ಸ್ವಯಂ ಎಂಬುದಿಲ್ಲ, ಪರವೆಂಬುದಿಲ್ಲ,
ಅರಿವೆಂಬುದಿಲ್ಲ, ಮರವೆಂಬುದಿಲ್ಲ,
ಒಳಗೆಂಬುದಿಲ್ಲ, ಹೊರಗೆಂಬುದಿಲ್ಲ,
ಕೂಡಲ ಸಂಗಯ್ಯನೆಂಬ ಶಬ್ದ ಮುನ್ನಿಲ್ಲ.

ಅದು ಭೇದದೊಳಗಣ ಅಭೇದ, ಶಬ್ದದೊಳಗಣ ನಿಶ್ಶಬ್ದ, ನಾದರೂಪ ಕ್ರೀಕಳಾಪ ವಿರಾಮ ಸ್ಥಿತಿ. ಅದು ಅಂಗ ಮತ್ತು ಲಿಂಗ ಎರಡೂ ಒಡ ಬೆರೆತು ಆದ ಮೂರನೆಯ ಸಾಮರಸ್ಯ ಸ್ವರೂಪ. ಅಲ್ಲಿ ಜೀವನೂ ಇಲ್ಲ, ದೇವನೂ ಇಲ್ಲ, 'ಶಿವ' ಮಾತ್ರ. ಆ 'ಶೂನ್ಯತ್ವ' ಅಥವಾ 'ಶಿವ'ದ ಗಳಿಕೆಯೇ ಶೂನ್ಯ ಸಂಪಾದನೆ.'' (ಪುಟ ೮೯).

ಈ ಮುಂದಿನ ನನ್ನ ಮಾತುಗಳನ್ನು ನಾನು ವೀರಶೈವದ ಅಥವಾ ವಚನಶಾಸ್ತ್ರದ ಹಿತಚಿಂತಕನಾಗಿ ಬರೆಯುತ್ತಿದ್ದೇನೆಂದು ಮಾತ್ರ ಯಾರೂ ಸ್ವೀಕರಿಸಬೇಕೆಂಬುದು ನನ್ನ ಕೋರಿಕೆ. ಅನೇಕ ಮಾರ್ಗಗಳಿಂದ ನನ್ನನ್ನು ಕಾಡುತ್ತಿರುವ ಒಂದು ಸಮಸ್ಯೆ ಇಲ್ಲಿನ 'ಶೂನ್ಯ' ಕಲ್ಪನೆಯನ್ನು ಕುರಿತದ್ದು. ಬಿಡಿ ವಚನಕಾರರ ಸಾಹಿತ್ಯದಲ್ಲಿ ನಾನು 'ಶೂನ್ಯ' ಶಬ್ದವನ್ನು ಗಮನಿಸಿದಂತಿಲ್ಲ. 'ಸಂಪಾದನೆ'ಯ ಕೃತಿಕಾರ ಇದನ್ನು ಎಲ್ಲಿಂದ ಗ್ರಹಿಸಿದ ? ಅಲ್ಲಮ್ಮನ ವಚನಗಳಲ್ಲಿ ವೇದದ 'ನಾಸದೀಯ'ವನ್ನು ಹೋಲುವ (ನಾಸದಾನೀತ್, ನೋ ಸದಾನೇತ್ !...) ಅರ್ಥಗುಂಫದ ಅನೇಕ ವಚನಗಳು ಇವೆಯೆಂಬುದು ನಿರ್ವಿವಾದ. ಇತರರಲ್ಲೂ ಇದರ ಛಾಯೆಗಳುಂಟು. ಸೃಷ್ಟಿಯೆಂಬ ವ್ಯಾಪಾರದ ಕಲ್ಪನೆ, 'ತತ್ಪೂರ್ವದ' (ಆ ಬಗೆಯ 'ಪೂರ್ವ' ಎಂಬುದು ಇದ್ದರೆ, ಅದು ಕಲ್ಪನೆಯೊಳಗೆ ಅಡಗಿ ಬರಲು ಶಕ್ಯವಿದ್ದರೆ) ಸ್ಥಿತಿ, ಆಗ ಜಗತ್ತು, ಜೀವ, ಜಡಗಳು, ಈಶ್ವರತತ್ತ್ವಗಳು ಹೀಗಿದ್ದುವೆಂಬ ಬಗೆಗೆ ನಾಲ್ಕೂ ವೇದಗಳಲ್ಲಿ ಬರುವ ಈ 'ನಾಸದೀಯ', ವೇದಾಂತ ಚರ್ಚೆಯಲ್ಲಿ ಜಗತ್ಕಾರಣತ್ವ, ಕಾರ್ಯತ್ವ, ಅವುಗಳಲ್ಲಿ ಅನನ್ಯತ್ವ, ಆದುದರಿಂದ 'ಜೀವ-ಜಡ-ಈಶ'ಗಳ ಸಮಗ್ರ ಕಲ್ಪನೆಯಲ್ಲಿ ಭೇದವೋ, ಅಭೇದವೋ, ಭೇದಾಭೇದವೋ, ಎಂಬ ಮುಖ್ಯ ದಾರ್ಶನಿಕ ಗ್ರಹಿಕೆಗೆ ಆಧಾರಭೂತವಾಗಿದೆ. ಇಲ್ಲಿನ 'ಸತ್', 'ಅಸತ್' ಗ್ರಹಿಕೆ, ಅರ್ಥೈಕೆಗಳಲ್ಲೇ ಅದ್ವೈತ, ದ್ವೈತ, ವಿಶಿಷ್ಟಾದ್ವೈತಾದಿ ಭೇದಗಳೂ ಉದಿಸಿ ಬಂದಿವೆ. ಈಗ ವಚನ ಸಾಹಿತ್ಯ ಭಂಡಾರಕ್ಕೂ, ವೀರಶೈವ ದರ್ಶನಕ್ಕೂ, 'ಶೂನ್ಯ ಸಂಪಾದನೆ' ಗ್ರಂಥ ಕೀಲಿಕೈ ಎಂಬುದನ್ನು ಒಪ್ಪಿದರೆ, ಇನ್ನು ವೈದಿಕದರ್ಶನದೊಡನಿರುವ ಇದರ ಸಂಬಂಧವನ್ನು ಅಲ್ಲಗಳೆಯಲಾಗದೆ, ವೇದಾಂತದ ಚರ್ಚೆಯೆಲ್ಲ ಇಲ್ಲೂ ಪ್ರಸ್ತುತವಾಗುತ್ತದೆ ! ಇದು ಒಳ್ಳೆಯದೇ !! ವೇದಾಂತದೊಡನೆ ಸಂಬಂಧ ಬೇಡ ಎಂದರೆ, ಆಗ ಬೌದ್ಧದರ್ಶನದ 'ಶೂನ್ಯ'ಕ್ಕೂ ವಚನಸಾಹಿತ್ಯದ 'ಶೂನ್ಯ'ಕ್ಕೂ ಸಂಬಂಧ ಹುಡುಕಬೇಕಾಗುತ್ತದೆ ! ಗಣಿತದಲ್ಲಿ 'ಶೂನ್ಯ' ಕಲ್ಪನೆಯೂ ಇದೆ, 'ಪೂರ್ಣ'ದ ಮಗ್ಗುಲಿಗೇ ! ತುಂಬ

ಸಂಕೀರ್ಣ ವಿಷಯ ಇದು. ಬೌದ್ಧರ 'ಶೂನ್ಯ'ವೂ, ಅದ್ವೈತಿಗಳ 'ನಿರ್ಗಣಬ್ರಹ್ಮವೂ' ಒಂದೇ ರೀತಿಯದಾಗಿದ್ದು ಅದು 'ನಿಷ್ಕಲ' 'ನಿರಂಜನ' 'ನಿರಾಕಾರ' ಗ್ರಹಿಕೆಯ ರೂಪದ್ದಾಗಿದ್ದು , ವೇದಾಂತದಲ್ಲಿ ಇಂದಿಗೂ ಪರಿಹಾರಗಾಣದ ಅನೇಕ ಪ್ರಶ್ನೆಗಳನ್ನು ಸೃಷ್ಟಿಸಿಟ್ಟು, ಜೀವನ ವಿಮುಖತೆಯ, ಅತ್ಯಂತ ನಿವೃತ್ತಿಮಾರ್ಗದ ದಾರಿಯಲ್ಲಿರುತ್ತ, ನಿರಾಸೆ, ದುಃಖ, ಕತ್ತಲೆಗಳನ್ನು ಪರಮಾರ್ಥದಲ್ಲಿ ಎತ್ತಿಹಿಡಿದಿದ್ದು ಇತಿಹಾಸಕಾರರೂ ಚಿಂತಕರೂ ಇದನ್ನು ವಿವರಿಸಿದ್ದಾರೆ. ಬೌದ್ಧರ 'ಶೂನ್ಯ', ಜೀವ ಭ್ರಾಂತಿಯ ಜನ್ಮಜನ್ಮಾಂತರ. ಭವಸಂತಾನವು ನಿಂತು, ''ಜೀವವೂ ಇಲ್ಲ, ಜೀವನವೂ ಇಲ್ಲ'', ''ಮೃಕ್ಷಣಿಕ'' ''ಅನತ್ತಾ'' (ಪಾಲಿ) ''ಅನಾತ್ಮ'' - ''ಆತ್ಮವೆಂಬುದೇ ಇಲ್ಲ'' ಎಂಬ ಪರಮಾರ್ಥಸತ್ಯದ ಜ್ಞಾನೋದಯವಾಗುವುದೇ ಈ 'ಶೂನ್ಯ' ವೆಂಬುದು ಎಂದು ಬೌದ್ಧ ಗ್ರಂಥಗಳ ವಿವರಣೆ. ಇರುವುದೆಲ್ಲ ''ನಾಮರೂಪದ ಹರವು'' - ''ಹೆಸರು ಆಕಾರ ಕಿತ್ತರೆ ಜಗತ್ತೇ ಇಲ್ಲ; ಇದೆಲ್ಲ ಶೂನ್ಯ'' ಎಂಬುದು ವಿವರಣೆ. ಬುದ್ಧ ಕಂಡು ಕೊಂಡ ನಾಲ್ಕು ''ಆರ್ಯಸತ್ವ''ಗಳಲ್ಲಿ - ಆತ್ಮವಿಲ್ಲ ಎಂಬುದು ಒಂದು; ಎಲ್ಲ ದುಃಖಮಯ ಎಂಬುದು, ಆತ್ಮವಿದೆ ಎಂಬ ಗ್ರಹಿಕೆಯ ಮೂಲದ್ದು, ಇನ್ನೊಂದು. ಈ ''ಆನಾತ್ಮ''ವನ್ನೇ ಅದ್ವೈತವು ''ನಿರ್ಗುಣಬ್ರಹ್ಮ'' ಎಂದು ಹೆಸರಿಸಿ, ಬೌದ್ಧರ ಶೂನ್ಯದೊಡನೆ ಸಮಾಕರಿಸಿದೆ ! ಅದ್ವೈತದಲ್ಲಿ ಭಾವಾತ್ಮಕ ಮಂಡನೆ, ಬೌದ್ಧದಲ್ಲಿ ಅಭಾವಾತ್ಮಕ ಮಂಡನೆ'. ಇಷ್ಟೇ ವ್ಯತ್ಯಾಸ.

Nothing IS

ಎಂಬ ವಾಕ್ಯವನ್ನು ಅರ್ಥೈಸುವಾಗ 'Nothing' ಎಂಬುದನ್ನು ನಿರಾಕಾರ ನಿರ್ಗುಣವಸ್ತುವನ್ನಾಗಿ ಗ್ರಹಿಸಿ, ಅಂಥ ವಸ್ತುವು 'ಇದೆ' ಎಂದು ಹೇಳುವ ರೀತಿಯ ಮಂಡನೆ. ಅದ್ವೈತದ್ದು ! ಅದೇ 'Nothing' ಅನ್ನು ನಿರ್ವಸ್ತುವನ್ನಾಗಿ, ಇಲ್ಲದ ಒಂದನ್ನಾಗಿ ಗ್ರಹಿಸಿ, ಅಂಥದು, 'ಇಲ್ಲ' ಎಂಬ ರೀತಿ ಬೌದ್ಧರದ್ದು !

"It is difficult to distinguish between pure being and pure non-being" ಎಂಬ ಡಾ|| ಎಸ್.ಎನ್. ದಾಸಗುಪ್ತ ಅವರ ಮಾತು ಇಲ್ಲಿ ಚಿಂತನೀಯ.

ಈಗ ವಚನಕಾರರ 'ಶೂನ್ಯ' ಇಲ್ಲಿ ಎಲ್ಲಿ ಸಲ್ಲುತ್ತದೆ ? - ಎಂಬುದು ನನಗೆ ತಿಳಿಯದ ಕಗ್ಗಂಟು - ಎಂದರೆ ನನ್ನನ್ನು ತಪ್ಪಾಗಿ ತಿಳಿಯಬಾರದು.

'ಸಾಶಿಮ' ಅವರು ಕೊಟ್ಟಿರುವ ವಿವರಣೆ ಅದ್ವೈತದತ್ತ ವಾಲುತ್ತದೆ ! 'ಶಿವಾದ್ವೈತ' ಎಂದು ಬರೆದೇ ಇದ್ದಾರೆ ! ಬೇರೆ ಕೆಲವರು 'ಶಕ್ತಿ ವಿಶಿಷ್ಟಾದ್ವೈತ' ಎಂದು ಕರೆಯುವ ವ್ಯವಹಾರದ ಸ್ಥಾನಮಾನಗಳೇನು ? ಅಲ್ಲಿ 'ಶಿವ', ಇಲ್ಲಿ 'ಶಕ್ತಿ' ಗೌಣವೇ? ಅದ್ವೈತವು 'ವಿಶಿಷ್ಟವೋ' 'ನಿರ್ವಿಶಿಷ್ಟವೋ' ?

ಇದು ಶುಷ್ಕ ಚರ್ಚೆಯಲ್ಲ ! ವಚನಕಾರರ ಮೂಲ ಪ್ರಚೋದನೆಗೆ, ಕಳಕಳಿಗೆ, ಈ ಸಾಹಿತ್ಯ ಚಳುವಳಿಯ ಬೇರಿಗೇ ಸರಿಯಾದ ಅರ್ಥಹಚ್ಚುವ ಪ್ರಶ್ನೆ ಇಲ್ಲಡಗಿದೆ.

'ನಾನೂ', 'ನೀನೂ', 'ಜೀವ', 'ಶಿವ' ಏನೂ ಇಲ್ಲದ ಅವಸ್ಥೆಯೇ 'ಪರಮಾರ್ಥ'ವಾದರೆ, ಉಳಿದುದೆಲ್ಲ ಮಾಯೆ, ಮಿಥ್ಯೆ, ಹಗ್ಗದಲ್ಲಿ ಕಂಡ ಹಾವಿನಂತೆ ಭ್ರಮೆಯ ನಿರೂಪಣೆ ಅನಿವಾರ್ಯ ! ಜೀವ, ಲೋಕ, ಜೀವನ-ಭ್ರಮೆಯನ್ನು ಕುರಿತು ಇಷ್ಟೊಂದು ವಚನಕಾರರೂ, ಸಾವಿರಾರು ವಚನಗಳೂ, ಜೀವನ ನಿರರ್ಥಕತೆಯನ್ನು ಸಾರುತ್ತ, ನಿರಾಶಾವಾದವನ್ನು ಹರಡಲು ಒಗ್ಗೂಡಿ ಶ್ರಮಿಸಿದರೆಂಬ ನಿರ್ಣಯವನ್ನು ವಿವೇಕಿಗಳು ಒಪ್ಪುವುದು ಕಷ್ಟ. ಇದು ಸರಿ ಎನಿಸಿದರೆ 'ಶೂನ್ಯ'ಕ್ಕೆ ಬೇರೆಯೇ ಅರ್ಥಹುಡುಕಬೇಕಾಗುತ್ತದೆ. - ಅಥವಾ ಕೈಬಿಟ್ಟು ನಾಸದೀಯ ಛಾಯೆಯ ಸಕಲ ವಚನಗಳಿಗೆ ಒಪ್ಪುವ ಬೇರೆ ಜಾಡಿನ ಅರ್ಥಾನ್ವೇಷಣೆ ಮಾಡಬೇಕಾಗುತ್ತದೆ.

'ಸಾಶಿಮ' ಅವರೇ ಬರೆದ ''**ಮೂರನೆಯ ಸಾಮರಸ್ಯ ಸ್ವರೂಪ**'' ಎಂಬ ವಿವರಣೆ (ಪು.೮೯) ಒಂದು ಒಳ್ಳೆಯ ಶುಭಾರಂಭ ಎನ್ನಬಹುದು ! (ಒತ್ತು ನನ್ನದು) ''ಸಾಮರಸ್ಯ'' ಗ್ರಹಿಕೆಯಲ್ಲಿ ಸಮರಸಕ್ಕೆ ಒಳಪಟ್ಟ ಯಾವುದೇ ವಸ್ತುವಿನಾಶವಿಲ್ಲ; ಆವಿಷ್ಕಾರವಿದೆ; ಸಮುದ್ರ ಸೇರಿದ ನದಿಯಂತೆ, ಸೂರ್ಯನ ಸುತ್ತಣ ಪ್ರಭೆಯಂತೆ, ದೇವ...... ಜೀವನ ಪೂರ್ಣತ್ವದ ಆವಿಷ್ಕಾರವಿದ್ದು, ಜೀವನಾಶವಿಲ್ಲದ, ಸಾಂಗತ್ಯದ ಸಾಯುಜ್ಯದ ಅನುಭವವನ್ನೇ ''ಕೂಡಲ ಸಂಗಮ'' ಅಂಕಿತ ಸಂಕೇತಿಸುತ್ತದೆ. ''ಕೂಡಲುಬೇಕು'' ''ನಡೆಯಲೂಬೇಕು'' ಎಂಬುದು ಈ ಎರಡೂ ಪದಗಳ ಒಟ್ಟು ಅರ್ಥ. ಕೂಡಿದರೆ ಸಾಲದು. (Static Union is of no use) ''ಸಂಗಮ'' - (ಗಮ್-ಗಛ್ ಧಾತುವಿಗೆ 'ನಡೆ' ಎಂದರ್ಥದಲ್ಲಿ) ''ಚೆನ್ನಾಗಿ ನಡೆ'' ಆಗಬೇಕು. (Dynamic movement together). ಅಂದರೆ Union - Dynamism - Movement ಎಂಬ ಮೂರು ಹೆಜ್ಜೆಗಳಲ್ಲಿ ಐಕ್ಯಸ್ಥಲದ ವಚನಗಳನ್ನು ಗುರುತಿಸಿ ಅರ್ಥೈಸಿ, 'ಶೂನ್ಯ' ಶಬ್ದಕ್ಕೆ 'ದುಃಖ ಶೂನ್ಯತಾ'', 'ಸಂಸಾರ ಶೂನ್ಯತಾ', 'ಅಪರಿಪೂರ್ಣ ಶೂನ್ಯತಾ' ಎಂಬೀ ಬಗೆಯ, ವಚನ ಸಂಗತ ಅರ್ಥಹೇಳಬೇಕಾಗುತ್ತದೆ (ಈ ಬಗ್ಗೆ ನಾನು ಮುಂಬರುವ) ನನ್ನ ವಚನ ಸಾಹಿತ್ಯ ಕುರಿತ ಐದು ಆಂಗ್ಲ ಪ್ರವಚನ ಲೇಖನಗಳಲ್ಲಿ ಹೆಚ್ಚು ಹೇಳುವುದಿದೆಯಾಗಿ ಇಲ್ಲಿ ಬರೀ ವಿಚಾರ ಮಂಡನೆಗೆ ತೃಪ್ತಿಪಟ್ಟುಕೊಳ್ಳಬೇಕಾಗಿದೆ).

ವೀರಶೈವರ ಬಗೆಗೆ ಈ ವಿಚಾರದಲ್ಲಿ ಬರೆಯುವವರು ಅನುಭಾವದ ರಸದಾಳದಲ್ಲಿ ನಿಂತು ಸ್ವಯಂಪೂರ್ಣ, ಸ್ವಾನುಭವದಿಂದ, ಪ್ರಾಮಾಣಿಕವಾಗಿ, ವೈಚಾರಿಕ ಆಧಾರದ ಮೇಲೆ ಬರೆಯಲು ತೊಡಗಿದಾಗ ಮಾತ್ರ ಈ ಗೊಂದಲಗಳು ನಿವಾರಣೆಯಾಗುತ್ತವೆ. ಎಂ.ಆರ್. ಶ್ರೀ, ಆ.ನ.ಕೃ, ಅಥವಾ ಶ್ರೀ ನಂದೀಮಠ ಮತ್ತು ಇನ್ನಿತರರ, ಗಣ್ಯರ, ಮಾರ್ಗಹಿಡಿದರೆ, ಬರೆದರೆ, ಈಗಿರುವ ಅದ್ವೈತವಾಲಿಕೆಯ ಸ್ಥಿತಿಯಲ್ಲಿ ಬರೆದರೆ, ವೈಚಾರಿಕ ಅಸಂಗತಿ-ವಿಸಂಗತಿಗಳು, ಗೊಂದಲಗಳು ಉಳಿಯುತ್ತವೆ.

ಬಸವಣ್ಣನವರೂ ಹಾಗೂ ಸಾಮಾಜಿಕ ಸಾಮರಸ್ಯ

ಈ ಗೊಂದಲ ಪರಿಹಾರ್ಯವೆಂಬುದಕ್ಕೆ ಸಾಶಿಮ ಅವರ ಈ ಲೇಖನವೇ ಸಾಕ್ಷಿ. ಬಸವಣ್ಣನವರು ಸಮಾಜವನ್ನೂ, ವ್ಯಕ್ತಿಯನ್ನೂ, ಭ್ರಾಂತಿ ಎಂದು ಗಣಿಸಿದವರಲ್ಲ. ವ್ಯಕ್ತಿಯ ಚಾರಿತ್ರ್ಯಶುದ್ಧಿ, ನಡೆನುಡಿ ವಿಚಾರಗಳಲ್ಲಿ ಆವಿಷ್ಕಾರಗಳಿಗೇ ಒತ್ತುಕೊಟ್ಟು ಇಹ-ಪರಗಳ ಸಾಮರಸ್ಯವನ್ನು ಇಲ್ಲೇ ತೋರಿಸಿ, ವೇದಾಂತ ದರ್ಶನಕ್ಕೆ ಸ್ಪಷ್ಟ ಸಾಕ್ಷಾಕಾರ, ನೈಜ ತಳಹದಿಯನ್ನು, ದೇಶಭಾಷೆಯಲ್ಲೇ ಮೊದಲಿಗೆ ತೋರಿದ ಮಹಾನುಭಾವರು. ಬಸವಣ್ಣ ಪರವನ್ನೋ, ದೇವರನ್ನೋ, ಭಕ್ತಿಯನ್ನೋ, ವೇದಸದೃಶ್ಯವ್ಯಕ್ತಿಗಳ ನಿರ್ಮಾಣ ಕಾರ್ಯವನ್ನೋ ತೆಗಳಲಿಲ್ಲ. ಅವೆಲ್ಲವನ್ನೂ ಇಲ್ಲಿನ ಚೌಕಟ್ಟಿನಲ್ಲೇ ಸಾಧ್ಯಮಾಡಲು ತೋರಿದ ಮಹಾವ್ಯಕ್ತಿ. ಆತ್ಯಂತಿಕ ಸತ್ಯತೆಯ, ಪರಮಾರ್ಥತೆಯ ಗ್ರಹಿಕೆಯಿಲ್ಲದ ಒಬ್ಬ ಇಂಥ ವಚನಗಳನ್ನು ಇಷ್ಟೊಂದು ಸಂಖ್ಯೆಯಲ್ಲಿ ಬರೆದನೆಂಬುದು ನಂಬಲು ಆಗದ ಮಾತು.

ಬಸವೇಶ್ವರನನ್ನು ಬುದ್ಧನಿಗೂ, ಲೆನಿನ್ನಿಗೂ, ಹೋಲಿಸಿ ಬರೆದವರು ಇಲ್ಲಿ ತೂಕತಪ್ಪಿ ಬರೆದಂತೆ ಅನಿಸುತ್ತದೆ ! ಬುದ್ಧತತ್ತ್ವದ ಪರಮಾರ್ಥ ಬೇರೆ ! ಕಮ್ಯೂನಿಸ್ಟರು ಅದನ್ನು ನೇರವಾಗಿ ಅಲ್ಲಗಳೆದರು. ಬಸವಣ್ಣನವರು ಬರೀ ಸಾಮಾಜಿಕ ಕ್ರಾಂತಿಯ ಹರಿಕಾರರೆಂಬ ಪೊಳ್ಳುವಾದವನ್ನು ನೇರವಾಗಿ ತರಾಟೆಗೆ ತೆಗೆದುಕೊಳ್ಳದೆಯೇ ಸಾಶಿಮ ಅವರು ಸೌಜನ್ಯಪೂರ್ಣವಾಗಿ, ಈ ವಾದವನ್ನು ಅನಾದರಿಸಿ, ಬಸವಣ್ಣನ ನೈಜಕ್ರಾಂತಿ, ವ್ಯಕ್ತಿ ವಿಕಾಸವನ್ನು ಕುರಿತದ್ದು ಎಂದು ಮಂಡಿಸಿರುವಲ್ಲಿ, ನನ್ನ ವಿವರಣೆಗೆಲ್ಲ ಒತ್ತು ಸಿಗುವಂತಾಗಿದೆ ! ಬಸವಣ್ಣನನ್ನು ಗಾಂಧಿಯೊಡನೆ ವಿಸ್ಸಂಶಯವಾಗಿ ಹೋಲಿಸಬಹುದು. ಯಾವುದು 'fashion' ಆದರೆ ಅದರೊಡನೆ ವಚನಕಾರರ ವಿಚಾರ, ಸಿದ್ಧಾಂತ, ಒಲವು, ಗಳನ್ನು ತಳಕು ಹಾಕಿ, ಈ ಧಾರೆಯನ್ನು 'ಅದ್ವೈತ', Communism, Socialism, 'ದಲಿತವಾದ', - ಮುಂತಾಗಿ ಅರ್ಥೈಸಲು ಹೊರಡುವವರಿಂದ ವಚನಸಾಹಿತ್ಯಕ್ಕೆ ಅಪಾರಹಾನಿಯಾಗಿದೆ.

ಇಂಥ ಅನೇಕ ಸೂಕ್ಷ್ಮ ವಿಚಾರಗಳನ್ನೂ 'ಸಾಹಿತ್ಯಿಕ ಚಳುವಳಿಗಳು' ಲೇಖನದಲ್ಲೂ ತಂದು ನವಿರಾಗಿ ಮಂಡಿಸಿದ್ದಾರೆ.

ಉಪಸಂಹಾರ

'ಸಾಶಿಮ' ಅವರ ಅಂತರ್ಮನನದ ಹದಿನಾರು ಮುಖಗಳನ್ನು ಈ ಗ್ರಂಥ ಪರಿಚಯಿಸುತ್ತದೆ. ಏನನ್ನೂ ತಿಳಿಯಾಗಿ ಚಿಂತಿಸಿ, ತಿಳಿಯಾಗಿ ಬರೆಯುವ ಅವರ ಯತ್ನ ತುಂಬ ವಿಶಿಷ್ಟವೆನ್ನಬೇಕು. ವ್ಯಾಕರಣ, ಶಾಸನ ಕುರಿತ ಪ್ರಬಂಧಗಳಿಗೂ ಇದು ಅನ್ವಯ.

ಸಾಶಿಮ ಅವರ ಕೃಷಿ ಇನ್ನಷ್ಟು ಸಫಲವಾಗಿ ಸಾಗಲಿ ಎಂದು ಹಾರೈಸಿ ನನ್ನ ಮಾತು ಮುಗಿಸುತ್ತೇನೆ.

ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ

ಸೂರ್ಯನಾಥ ಕಾಮತ್

'ಸಿಸ್ತು' ನೆಲೆಗೊಳಿಸಿದ ಶಿವಪ್ಪನಾಯಕ, ಛತ್ರಪತಿ ರಾಜಾರಾಮನಿಗೆ ಆಸರೆ ನೀಡಿ ಔರಂಗಜೇಬನನ್ನು ಉದ್ದರಿಸಿದ ಧೀರ ರಾಣಿ ಚನ್ನಮ್ಮಾಜಿ ಇಂಥ ಸಾಹಸಿಗಳಿಂದ ಮಾತ್ರವೇ ಗುರುತಿಸಲ್ಪಡುತ್ತಿದ್ದ ಕೆಳದಿ ನಾಯಕರ ಇತಿಹಾಸವನ್ನು ಅದರ ಸಾಂಸ್ಕೃತಿಕ ಮುಖ್ಯವಾಗಿ ಸಾಹಿತ್ಯಿಕ ಸಾಧನೆಗಾಗಿ ಖಚಿತವಾಗಿ ಪತ್ತೆಹಚ್ಚಿ ಕೆಳದಿ ರಾಜ್ಯದ ಸರ್ವತೋಮುಖ ಕೊಡುಗೆಗಳನ್ನು ಗುರುತಿಸಲು ನೆರವಾದುದು ಗೆಳೆಯ ಡಾ॥ ಸಾ.ಶಿ. ಮರುಳಯ್ಯನವರ 'ಕೆಳದಿ ಅರಸರು ಮತ್ತು ಕನ್ನಡ ಸಾಹಿತ್ಯ' ಸಂಶೋಧನಾ ಗ್ರಂಥ. ಇದನ್ನು ಡಾಕ್ಟರೇಟ್ ಪದವಿ ಪಡೆಯಲೆಂದೇ ಅವರು ಬರೆದುದಲ್ಲ; ಒಂದು ರೀತಿಯ ಶ್ರದ್ಧೆ, ಸಮರ್ಪಣೆಗಳ ಭಾವದಿಂದ ಮಾಡಿದ ಕಾಯಕ ಇದು.

ಈ ಸಂಶೋಧನೆ ಅವರು ಕೈಕೊಂಡದ್ದು ಒಂದು ಸಂದಿಗ್ಧಕಾಲದಲ್ಲಿಯೇ. ಶರಾವತಿ ಯೋಜನೆಯಲ್ಲಿ ಹತ್ತಾರು ಹಳ್ಳಿಗಳು ಸಾವಿರಾರು ಮನೆಗಳೂ ಮುಳುಗಡೆಯಾಗುವ ಕಾಲದಲ್ಲಿ ಮುಳಗಡೆಯಾಗುವ ಮನೆಗಳವರು ಕನಿಷ್ಠಲಕ್ಷ್ಯ ಕೊಡುವುದು ಪುಸ್ತಕ, ತಾಳೆಗರಿಹೊತ್ತಗೆಗಳಿಗೆ. ಒಂದು ಒನಕೆ, ಸೌಟು, ಸಟ್ಟುಗ ಉಳಿಸಿಕೊಂಡು ಗುಳೆಹೋಗುವುದೇ ಅವರಿಗೆ ಸಾಕಾಗಿರುವಾಗ ಗ್ರಂಥರಾಶಿಗಳದೇನು? ಆ ಕಾಲದಲ್ಲಿ ಡಾ॥ ಮರುಳಯ್ಯನವರು ಮುಳುಗಡೆ ಪ್ರದೇಶಗಳಲ್ಲಿ ಓಡಾಡಿ ಸಂಗ್ರಹಿಸಿದ ಓಲೆಗರಿ ಗ್ರಂಥಗಳಲ್ಲಿ ಹಲವು ಕೆಳದಿ ನಾಯಕರ ಕಾಲದವು ಆಗಿದ್ದುದರಿಂದ ಕಾಲಗರ್ಭದಿಂದ ಅವನ್ನು ರಕ್ಷಿಸಿದ ಶ್ರೇಯಸ್ಸು ಅವರದು.

ಪ್ರಸ್ತುತ ಕೃತಿಯಲ್ಲಿ ಕೆಳದಿಯ ರಾಜಕೀಯ ಇತಿಹಾಸವನ್ನು ಆಗ ಅವರಿಗೆ ಉಪಲಬ್ಧವಾಗಿದ್ದಂತೆ ನೀಡಿದ್ದಾರೆ. ಅಲ್ಲದೆ ಕೆಳದಿ ನಾಯಕರ ಕಾಲದ ಸಂಸ್ಕೃತ ಕವಿಗಳ ಪರಿಚಯ ಕೂಡ ಮಾಡಿಸಿದ್ದಾರೆ. ಕಾಶಿಯ ಖ್ಯಾತ ವಿದ್ವಾಂಸ ಭಟ್ಟೋಜಿ ದೀಕ್ಷಿತನೂ ಅವನ ಕೆಲವು ಸಂಬಂಧಿಗಳೂ ವೆಂಕಟಪ್ಪ ನಾಯಕನ ಆಸ್ಥಾನದಲ್ಲಿ ಇದ್ದವರು. ಪಾಣಿನಿಯ 'ಅಷ್ಟಾಧ್ಯಾಯಿ'ಯ ಬಗ್ಗೆ 'ಶಬ್ದಕೌಸ್ತುಭ' ಎಂಬ ಕೃತಿಯನ್ನೂ ಆದಿಶಂಕರರ ವಿಚಾರಗಳನ್ನು ಪ್ರತಿಪಾದಿಸುವ 'ತತ್ತ್ವಕೌಸ್ತುಭ'ವನ್ನೂ ಇನ್ನೂ ಅನೇಕ ಕೃತಿಗಳನ್ನೂ ಬರೆದ ಈ ವಿದ್ವಾಂಸ

> ''ಕೆಳದಿ ವೆಂಕಟೇಂದ್ರೋಸೌ
> ಅಘೋರೇಶ ಪರಾಯಣಃ
> ಅಚೀಕರದಿ ಮಂಗ್ರನ್ಥ
> ತತ್ತ್ವಕೌಸ್ತುಭ ಸಂಜ್ಞತವಾ''

ಎಂದು ಗ್ರಂಥದಲ್ಲಿ ವೆಂಕಟಪ್ಪನನ್ನು ಉಲ್ಲೇಖಿಸಿದ್ದಾನೆ. ಭಟ್ಟೋಜಿ ದೀಕ್ಷಿತ

ಮತ್ತು ಅವನ ಸಂಬಂಧಿಗಳು ಕೆಳದಿ ಆಸ್ಥಾನದಲ್ಲಿ ಇದ್ದ ವಿಚಾರವನ್ನು ಪುಣೆಯ ಖ್ಯಾತ ವಿದ್ವಾಂಸ ಡಾ॥ ಪಿ.ಕೆ. ಗೋಡೆಯವರು ೧೯೪೫ರಲ್ಲೇ ಒಂದು ಇಂಗ್ಲಿಷ್ ಲೇಖನ ಬರೆದಿದ್ದಾರೆ. ಇದು ಕೆಳದಿ ಆಸ್ಥಾನವು ಅಖಿಲ ಭಾರತ ಖ್ಯಾತಿಯ ವಿದ್ವಾಂಸರನ್ನು ಆಕರ್ಷಿಸುವ ಸಾಮರ್ಥ್ಯ ಹೊಂದಿದುಕ್ಕೆ ಸಾಕ್ಷಿ.

ಪ್ರಸಕ್ತ ಗ್ರಂಥದಲ್ಲಿ ಮರಿ ತೋಂಟದಾರ್ಯ, ವಿರಕ್ತ ತೋಂಟದಾರ್ಯ, (ಇವರಿಬ್ಬರು ಬೇರೆ ಬೇರೆ ವ್ಯಕ್ತಿಗಳೆಂಬ ಬಗ್ಗೆ ಸುದೀರ್ಘ ಚಿಕಿತ್ಸಕ ಚರ್ಚೆ ಇಲ್ಲಿದೆ), ಯಕ್ಷಗಾನ ಕವಿಗಳೂ ಆಗಿದ್ದ ವೆಂಕ ಮತ್ತು ಸುಬ್ಬ, ಚೆನ್ನವೀರ, ಮಾದೇಶ್ವರ, ಗಂಗಾದೇವಿ (ಈಕೆಯನ್ನು ಕವಯಿತ್ರಿಯೆಂದು ಗುರುತಿಸಿದವರು ಡಾ॥ ಮರುಳಯ್ಯನವರೇ) ಕಿರಿಯ ವೆಂಕಟಪ್ಪ ನಾಯಕ, ರಾಮಚಂದ್ರಕವಿ, ರಾಮಚಂದ್ರ ಕವಿಶಿಷ್ಯ (ಈತ ಕೆಳದಿಯ ಆಶ್ರಿತನಲ್ಲ), ಮೊದಿಯ ರುದ್ರ, ವರಾಹ, ತಿಮ್ಮಪ್ಪ, ಪರಮದೇವ (ಈತನ 'ತುರಂಗ ಭಾರತ' ಇತ್ತೀಚೆಗೆ ಪ್ರಕಟವಾಗಿದೆ), ಮೈಲಾರ ಬಸವಲಿಂಗ, ಚೆನ್ನವೀರ ಮಾದೇಶ್ವರ, ಹಿರಿಯ ಬಸವಪ್ಪ ನಾಯಕ, ಶರಜಾ ನಾಗಪ್ಪಯ್ಯ, ಯಕ್ಷಗಾನ ಕವಿ ಭಟಕಳದ ಅಪ್ಪಯ್ಯ, ನಿರ್ವಾಣಾರ್ಯ ಖ್ಯಾತ ಇತಿಹಾಸಕಾರ ಲಿಂಗಣ್ಣ ಕವಿ, ಆತನ ಪುತ್ರ ವೆಂಕಕವಿ, ಕೆಳದಿ ಸುಬ್ಬ, ಹೀಗೆ ಹಲವಾರು ಲೇಖಕರ ಕಾಲನಿರ್ಣಯ, ಅವರ ಕೃತಿಗಳ ಪರಿಚಯ, ಮೌಲ್ಯಮಾಪನ ಇವನ್ನೆಲ್ಲ ಪ್ರಸಕ್ತ ಕೃತಿಯಲ್ಲಿ ಮಾಡಲಾಗಿದೆ.

ಕೆಳದಿಯ ರಾಜರೇ ಗಣ್ಯವಿದ್ವಾಂಸರೂ ಲೇಖಕರು ಆಗಿದ್ದರು. ಇದರಲ್ಲಿ ಆಗಲೇ ಕಂಡಂತೆ ಹಿರಿಯ ಬಸವಪ್ಪ, 'ಸೂಕ್ತಿ ಸುಧಾಕರ' (ಇನ್ನೂ ಉಪಲಬ್ಧವಿಲ್ಲ) ರಚಿಸಿದ್ದ. ಕನ್ನಡ ಕವಿಯಾದ ಈತ ಘನವಿದ್ವಾಂಸ. 'ಶಿವತತ್ತ್ವ ರತ್ನಾಕರ' ಈತ ಸಂಸ್ಕೃತದಲ್ಲಿ ಬರೆದ ವಿಶ್ವಕೋಶ. ಇದು ಅವನ ಹೆಸರನ್ನು ಅಮರಗೊಳಿಸಿದೆ. ಇದಲ್ಲದೆ ಕಿರಿಯ ಬಸವಪ್ಪನಾಯಕ (೧೭೪೦-೧೭೫೫), ವಿದ್ವಜ್ಜನ ಬಂಧು. 'ಕೆಳದೀ ಸಾಹಿತ್ಯದ ಸುಗ್ಗಿಯ ಕಾಲ' ಎಂದು ಅವನ ಆಡಳಿತವನ್ನು ಲೇಖಕರು ಬಣ್ಣಿಸಿದ್ದಾರೆ.

ಕೆಳದಿಯ ಅರಸರು ವೀರಶೈವರು. ಹಲವಾರು ಮಠಗಳನ್ನು ಸ್ಥಾಪಿಸಿ ಅನ್ನದಾಸೋಹ, ದೈವಭಕ್ತಿ ಬೆಳಗಿಸಿದವರು. ಜೊತೆಗೆ ದ್ವೈತ, ಅದ್ವೈತ, ಜೈನ, ಇಸ್ಲಾಂ, ಕ್ರೈಸ್ತ ಧರ್ಮಗಳಿಗೂ ಬೆಂಬಲವಿತ್ತವರು. ವೆಂಕಟಪ್ಪನ ಅರಮನೆಯಲ್ಲಿ ನಾಟಕ ಶಾಲೆಯಿತ್ತು. ಯಕ್ಷಗಾನ ಕೃತಿಗಳನ್ನು ರಚಿಸುವುದರ ಜೊತೆ ಅವುಗಳ ಪ್ರಯೋಗಕ್ಕೂ ಪ್ರೋತ್ಸಾಹವಿತ್ತಿದ್ದರು. ವೀರಶೈವ ತತ್ತ್ವವಿಚಾರದ ಗ್ರಂಥಗಳನ್ನು (ಉದಾ: ಚೆನ್ನವೀರ ಮಾಹೇಶ್ವರರ 'ವೀರಮಾಹೇಶ್ವರ ತಂತ್ರ' ಚರಮೂರ್ತಿ ಬಸವಲಿಂಗದೇವರ 'ವೀರ ಮಾಹೇಶ್ವರಾಚಾರ ಸುಧಾವಾರ್ಧಿಟೀಕು', ನಿರ್ವಾಣ ಮಂತ್ರಿಯ 'ಶಿವಪೂಜಾವಿಧಿ') ರಚಿಸಿದ ಕವಿಗಳಲ್ಲದೆ ದ್ವೈತಮತ ಪ್ರತಿಪಾದನೆಯ ಕೆಳದಿ ವೆಂಕಣ್ಣ ಕವಿಯ ಕೀರ್ತನೆಗಳು, ಹಾಗೂ ಅತನದೇ 'ನರಹರಿ ವಿಜಯ' ಕಾವ್ಯಗ್ರಂಥ ಕೃತಿಗಳು

ಇವುಗಳನ್ನೆಲ್ಲ ಸಮ್ಯಕ್ ದೃಷ್ಟಿಯಿಂದ ಪರಿಚಯ, ಮೌಲ್ಯಮಾಪನ ಮಾಡಿದ್ದಾರೆ. ಕೆಲವು ಕವಿಗಳ ಗುರುತಿಸುವಿಕೆ, ಕಾಲ ನಿರ್ಣಯಗಳ ಬಗ್ಗೆ ವಿದ್ವತ್ಪೂರ್ಣ ಚರ್ಚೆ ಮಾಡಿ ತಮ್ಮದೇ ಖಚಿತ ನಿರ್ಣಯಕ್ಕೆ ಬಂದಿದ್ದಾರೆ. ಕಾವ್ಯ ಕೃತಿಗಳ ಸೌಂದರ್ಯವನ್ನು ಪರಿಚಯಿಸಿದ್ದಾರೆ.

ತಿರುಮಲ ಭಟ್ಟನ ಅಪೂರ್ವ ಕನ್ನಡಾನುವಾದವಾಗಿರುವ 'ಶಿವಗೀತೆ' ವೆಂಕಕವಿಯ 'ನರಹರಿವಿಜಯ', ಇವೆಲ್ಲವುಗಳ ವಿಸ್ತೃತ ಪರಿಚಯ ಉಲ್ಲೇಖನೀಯವಾದ ಸಂಗತಿಗಳು. ಕೆಳದಿ ಲಿಂಗಣ್ಣನ ಕೃತಿಗಳು ಶಿವಪ್ರಧಾನವಾದರೆ ಅವನ ಮಗ ವೆಂಕಕವಿಯ ಬರಹಗಳಲ್ಲಿ ನರಹರಿ ಭಕ್ತಿಯ ಪ್ರವಾಹವಿದೆ. ಶರಜಾ ನಾಗಮಂತ್ರಿಯ ಪ್ರಸಿದ್ಧ, ಸನ್ಮಾರ್ಗಪ್ರವರ್ತಕ 'ಶುಕಸಪ್ತತಿ' ಯನ್ನೂ ಅವರು ಇಲ್ಲಿ ವಿವರವಾಗಿ ಪರಿಚಯಸಿದ್ದಾರೆ. ಇದು ಅನುವಾದ ಕೃತಿ. ಅಂದು ಅವರು ಪರಿಚಯಿಸಿದ ಹಲವು ಕೃತಿಗಳು ಈಗ ಪ್ರಕಟವಾಗಿವೆ. ಆಗ ಅವೆಲ್ಲ ಹಸ್ತಪ್ರತಿಯ ರೂಪದಲ್ಲಿ ಇದ್ದವು. ಉದಾ: ಪರಮ ಕವಿಯ ಭಾರತ ಇಲ್ಲವೆ ಕೆಳದಿ ವೆಂಕಣ್ಣನ ಕೀರ್ತನೆಗಳು.

ರಾಜಮನೆತನಗಳೆಲ್ಲ ಸಾಮಾನ್ಯವಾಗಿ ಮಾಡುತ್ತ ಬಂದಂತೆ ಕೆಳದಿ ರಾಜರು ಸಾಹಿತ್ಯ ವಿಕಾಸಕ್ಕೆ ಬೇಕಾದ ವಾತಾವರಣ ಸೃಷ್ಟಿಸಿ, ಸ್ವತಃ ಕೃತಿರಚನೆ ಮಾಡಿ ಮತ್ತು ಕವಿಗಳಿಗೆ ಪ್ರೋತ್ಸಾಹ ನೀಡಿದ ಖಚಿತ ಚಿತ್ರ ಇಲ್ಲಿದೆ. ಇಲ್ಲಿ ಮಾಡಿದ ಆಗಿನ ಕೃತಿಗಳ ಮೌಲ್ಯಮಾಪನ ಕೂಡ ವಿದ್ವತ್ಪೂರ್ಣ, ಚಿಕಿತ್ಸಕ ಹಾಗೂ ನಿಷ್ಪಕ್ಷಪಾತದ್ದಾಗಿದೆ. ಕರ್ನಾಟಕದ ಇತಿಹಾಸಗ್ರಂಥಗಳ ರಾಶಿಗೂ ಈ ಕೃತಿ ಒಂದು ಗಣ್ಯ ಕೊಡುಗೆ.

ಸಾಶಿಮ ವ್ಯಾಖ್ಯಾನ ಗ್ರಂಥಗಳು

ಪ್ರೊ|| ಅ.ರಾ. ಮಿತ್ರ

ಡಾ|| ಸಾ.ಶಿ. ಮರುಳಯ್ಯನವರ ನಾಲ್ಕು ವ್ಯಾಖ್ಯಾನ ಗ್ರಂಥಗಳನ್ನು ಇಲ್ಲಿ ಪರಿಚಯಕ್ಕೆ ಎತ್ತಿಕೊಳ್ಳಲಾಗಿದೆ. ಅವೆಂದರೆ ಅವಸ್ಥಾ, ಭಾಸನ ಮಕ್ಕಳು, ವಚನ ವೈಭವ ಮತ್ತು ಅಭಿವ್ಯಕ್ತಿ. ಸೃಜನಶೀಲ ಕವಿಯೊಬ್ಬ ಕಾವ್ಯದ ಪರಿಶೀಲನೆ ಮತ್ತು ಅನುಶೀಲನೆಗಳ ರಂಗದಲ್ಲೂ ಎಂಥ ಒಳ್ಳೆಯ ಕೃಷಿ ಮಾಡಬಲ್ಲರು ಎಂಬುದಕ್ಕೆ ಈ ನಾಲ್ಕು ಗ್ರಂಥಗಳ ಲೇಖನಗಳು ಸಾಕ್ಷಿಯಾಗಿವೆ. ಮುಖ್ಯತಃ ಡಾ|| ಸಾ.ಶಿ. ಕವಿ ಹೃದಯವುಳ್ಳವರು, ಇತಿಹಾಸ ಸಂಶೋಧನೆಯಲ್ಲಿ ಆಸಕ್ತಿಯುಳ್ಳವರು. ಗ್ರಾಮೀಣ ಪರಿಸರದಿಂದ ಬಂದವರಾದುದರಿಂದ ಜಾನಪದ ಸತ್ತ್ವಗಳನ್ನು ಕಾವ್ಯಗಳಲ್ಲಿ ಗುರುತಿಸಬಲ್ಲ ಸಾಮರ್ಥ್ಯವುಳ್ಳವರು. ಕನ್ನಡ ಭಾಷೆಯ ಎಲ್ಲ ಅವಸ್ಥಾಂತರಗಳನ್ನು ಗುರುತಿಸುವ ಭಾಷಾವಿಜ್ಞಾನದ ಪರಿಚಯವುಳ್ಳವರು. ಕನ್ನಡ ಪದ್ಯ-ಗದ್ಯಗಳು ಬೆಳೆದುಬಂದ ಬಗೆಯನ್ನು ಅರ್ಥಯಿಸಬಲ್ಲ ಶೋಧಕರು. ಸಂಸ್ಕೃತ ಇಂಗ್ಲಿಷ್ ಭಾಷೆಗಳ ಶ್ರೇಷ್ಠ ಚಿಂತನೆಗಳನ್ನು ನೇರವಾಗಿ ಆಪ್ತವಾಗಿಸಿಕೊಂಡವರು. ಪ್ರಾಚೀನ ಕವಿತೆಗಳನ್ನು, ಆಧುನಿಕ ಕವಿತೆಗಳನ್ನು ಸ್ಮರಣಕೋಶದಲ್ಲಿ ಇರಿಸಿಕೊಂಡಿರುವವರು. ಜಿ.ಪಿ. ರಾಜರತ್ನಂ ಅವರ ಗಂಡುಗೊಡಲಿ ನಾಟಕವನ್ನು ಆಮೂಲಾಗ್ರವಾಗಿ ನೆನಪಿನಿಂದಲೇ ಉದ್ಧರಿಸಬಲ್ಲವರು. ಆದುದರಿಂದ ಇವರ ಬರವಣಿಯಲ್ಲಿ ವೈವಿಧ್ಯ ವಿಸ್ತಾರ ಎರಡೂ ಇವೆ.

'ಭಾಸನ ಮಕ್ಕಳು' ಎಂಬ ಹೊತ್ತಗೆಯ 'ಭಾಸನ ಮಕ್ಕಳು' ಮತ್ತು 'ಮೃಚ್ಛಕಟಿಕದಲ್ಲಿ ಹಾಸ್ಯ ಸನ್ನಿವೇಶಗಳು' ಇವೆರಡೂ ವಿವರಣನಿಷ್ಠವಾದ ಕಾವ್ಯ ನಾಟಕ ಪರಿಚಯದ ಬರಹಗಳು. ಕವಿಗಳ ಅಂತರಂಗವನ್ನು ಕೆದಕುವ ಪ್ರಯತ್ನದ ಫಲಗಳು. ಮರುಳಯ್ಯನವರೇ ಒಂದು ಲೇಖನವದಲ್ಲಿ :

''ಜೀವನದಲ್ಲಿ ನಾನಾ ರೀತಿಯಲ್ಲಿ ನಾಗಾಲೋಟದಲ್ಲಿ ವ್ಯಕ್ತವಾಗುವ ಮಾನವನ ಮನಸ್ಸು ಕವಿ ಕೃತಿಯಲ್ಲಿ ಸ್ಫುಟವಾಗಿ, ಸಂಯಮಶೀಲದೊಂದಿಗೆ ಪರಿಪೂರ್ಣ ಸ್ಥಿತಿಯಲ್ಲಿ ಪ್ರಕಟವಾಗುತ್ತದೆ. ಅಂತೆಯೇ ಒಂದು ಕಲಾಕೃತಿ ಮನಸ್ಸಿನ ವಿಶೇಷ ವ್ಯಾಪಾರಗಳ ಪ್ರತಿನಿಧಿ. ಆದ್ದರಿಂದ ಅಲ್ಲಿ ಬೇರೆಲ್ಲಿಯೂ ಸಿಗದ ಅನೇಕ ರಹಸ್ಯಾಂಶಗಳು ದೊರೆಯುತ್ತವೆ. ಆದರೆ ಕಲೆಗೂ ಅತೀತವಾಗಿ ಅನಾಖ್ಯೇಯವಾಗಿರುವ ಅನುಭವಗಳೂ ಉಂಟು. ಅಂಥವುಗಳನ್ನು ಸಹ ಕಲೆ ವಾಚ್ಯವಾಗಲ್ಲದಿದ್ದರೂ ಸೂಚ್ಯವಾಗಿ ತಿಳಿಸುತ್ತದೆ. ಏಕೆಂದರೆ ಕಲೆ ಚಿತ್ರಿಸುವುದು ಮೇಲಕ್ಕೇರುವ ಮನುಷ್ಯನ ದಾರಿ ಹೆಜ್ಜೆಗಳನ್ನು ಮಾತ್ರವಲ್ಲ, ಕೆಳಗಿಳಿಯುವ ದೈವೀ ಶಕ್ತಿಗಳನ್ನೂ ಅದು ಗುರುತಿಸಬಲ್ಲುದು. ಈ ಕಲ್ಪನಾ ಶಕ್ತಿ ಐಹಿಕವಾದುದನ್ನೆಲ್ಲ ತಾನು

ಹೇಗೆ ಒಂದು ರೀತಿಯಲ್ಲಿ ಗ್ರಹಿಸಬಲ್ಲುದೋ, ಊಹಿಸಬಲ್ಲುದೋ ಅಂತೆಯೇ ಅತೀತವಾದುದನ್ನು ತನ್ನ ವಿಶೇಷ ಅವಸ್ಥೆಯಲ್ಲಿ ಗ್ರಹಿಸಬಲ್ಲುದು, ಸ್ಪರ್ಶಿಸಬಲ್ಲುದು''.

ಕಲಾಕೃತಿಗಳ ಬಗೆಗೆ ಮರುಳಯ್ಯನವರು ಕೊಟ್ಟಿರುವ ಒಳನೋಟದಿಂದ ಅವರ ಕಾವ್ಯಮೀಮಾಂಸೆಯ ಚಿಂತನೆಯ ನೆಲೆಗಳನ್ನು ಗುರುತಿಸಬಹುದಾಗಿದೆ. ಭಾಸನ ಕೃತಿಗಳಲ್ಲಿ ಅವರು ಮುಖ್ಯವಾಗಿ ಗುರುತಿಸುವುದು ಅಭಿಮನ್ಯು, ಘಟೋತ್ಕಚ ಮತ್ತು ದುರ್ಯೋಧನನ ಪುಟ್ಟ ಮಗ ದುರ್ಜಯರ ಪಾತ್ರಗಳನ್ನು (ದುರ್ಯೋಧನನ ಮಕ್ಕಳೆಲ್ಲ ಯುದ್ಧದಲ್ಲಿ ಮಡಿದಿದ್ದರೆಂದು ಮಹಾಭಾರತದಲ್ಲಿ ಹೇಳಿರುವುದರಿಂದ ದುರ್ಜಯನನ್ನು ಮೊಮ್ಮಗ ಎಂಬಂತೆ ಚಿತ್ರಿಸಿದ್ದರೆ ಚೆನ್ನಾಗಿತ್ತು. ಆದರೆ ನಾಟಕಕಾರ ಭಾಸನ ದೃಷ್ಟಿ ಬೇರೆಯೇ ಇರುವಂತಿದೆ).

ಪಾಂಡವರು ಅರಣ್ಯದಲ್ಲಿದ್ದಾರೆ ಎಂಬ ಸುದ್ದಿ ತಿಳಿದ ಹಿಡಿಂಬೆ ತನ್ನ ಗಂಡ ಭೀಮನನ್ನು ಕರೆಸಿಕೊಳ್ಳಲು ಒಂದು ನಾಟಕ ಹೂಡುತ್ತಾಳೆ. ಅವಳ ಎಣಿಕೆಯಂತೆ ಘಟೋತ್ಕಚ ಭೀಮನನ್ನು ಕರೆತರುತ್ತಾನೆ. ಘಟೋತ್ಕಚನ ಮಾತೃಪ್ರೇಮ, ಭೀಮನ ಪರಹಿತಪಾಲನಾಶಕ್ತಿ ಮತ್ತು ಉತ್ಕಟ ಹಾಸ್ಯಪ್ರಜ್ಞೆ ಇವೆಲ್ಲ ವ್ಯಕ್ತವಾಗುವ ಕಥಾಭಾಗ ಇದು. ಭಾಸನ ಪಂಚರಾತ್ರದಲ್ಲಿ ಬರುವ ಅಭಿಮನ್ಯುವಿನೊಂದಿಗೂ ಭೀಮ ವಿನೋದಶೀಲನಾಗಿ ವರ್ತಿಸಿರುವುದು ಹೊಸಸಂಗತಿ. ವಾಸ್ತವವಾಗಿ ಈ ಪಂಚರಾತ್ರ ಮೂಲಭಾರತಕ್ಕಿಂತ ತುಂಬ ವಿಭಿನ್ನ. ಇಲ್ಲಿ ಕೌರವ ಒಂದು ಯಜ್ಞ ಮಾಡಿ ಯಜ್ಞಾಂತದಲ್ಲಿ ದ್ರೋಣರಿಗೆ ಗುರುದಕ್ಷಿಣೆ ಕೊಡಲು ಹೋದಾಗ ದ್ರೋಣರು ಪಾಂಡವರಿಗೆ ಅರ್ಧರಾಜ್ಯ ಕೊಟ್ಟುಬಿಡು ಎಂದು ಕೇಳುತ್ತಾರೆ. ಆ ಪ್ರಾರ್ಥನೆಗೆ ಒಪ್ಪಿದ ಕೌರವ ಪಂಚರಾತ್ರಗಳೊಳಗೆ ಪಾಂಡವರ ಸುದ್ದಿ ತಂದರೆ ಕೊಡುವುದಾಗಿ ಹೇಳಿ ತನ್ನ ಮಾತನ್ನು ಉಳಿಸಿಕೊಳ್ಳುತ್ತಾನೆ. ದ್ರೋಣರು ಕೀಚಕವಧೆಯಿಂದ ಭೀಮನು ವಿರಾಟನಗರದಲ್ಲಿರುವುದನ್ನು ಊಹಿಸಿ ಅರ್ಜುನನ ಬಾಣಗಳನ್ನು ಸಾಕ್ಷ್ಯವಾಗಿ ನೀಡುತ್ತಾನೆ. ಅಷ್ಟರಲ್ಲಿ ಯುದ್ಧರಂಗದಲ್ಲಿ ಕೌರವನ ಕಡೆಯ ಅಭಿಮನ್ಯುವನ್ನು ಭೀಮನು ಬಂಧಿಸಿ ಕರೆದುಕೊಂಡು ಹೋದ ಸುದ್ದಿಬರುತ್ತದೆ. ಭೀಮಾರ್ಜುನರು ಅಭಿಮನ್ಯುವನ್ನು ವಿನೋದದ ಸುಳಿಗೆ ಸಿಕ್ಕಿಸುವ ರೀತಿ ಆ ಸಮಯದ ಸುಂದರ ಸಂಭಾಷಣೆ ಎಲ್ಲವನ್ನೂ ಮರುಳಯ್ಯನವರು ಸೂಕ್ತವಾಗಿ ವಿವರಿಸುತ್ತಾರೆ. ಮೂರನೆಯ ಊರುಭಂಗದಲ್ಲಿ ಬರುವ ದುರ್ಜಯನೆಂಬ ದುರ್ಯೋಧನನ ಎಳೆಯಮಗ ಯುದ್ಧರಂಗದಲ್ಲಿ ತೊಡೆಮುರಿದು ಬಿದ್ದ ದುರ್ಯೋಧನನ ತೊಡೆಯ ಮೇಲೆ ಕೂರಬಯಸುವ ಪ್ರಸಂಗ ತುಂಬ ರುದ್ರಸ್ವರೂಪದ್ದು. ತಂದೆ-ಮಕ್ಕಳ ನಡುವಣ ಸಂಭಾಷಣೆಯನ್ನು ಯಾವ ಬಗೆಯ ಧ್ವನಿಯ ಸುಳಿಗೆ ಭಾಸ ಸಿಕ್ಕಿಸಿದ್ದಾನೆ ಎಂಬುದನ್ನು ಲೇಖಕರು ನವಿರಾಗಿ ಚಿತ್ರಿಸಿದ್ದಾರೆ.

ಮೃಚ್ಛಕಟಿಕದಲ್ಲಿ ಶಕಾರ, ಮೈತ್ರೇಯಿ ಇವರಿಬ್ಬರ ಹಾಸ್ಯವರ್ತನೆಗಳನ್ನು

ಸುದೀರ್ಘವಾಗಿ ಲೇಖಕರು ವಿವರಿಸಿ ಪ್ರಾಚೀನ ಸಂಸ್ಕೃತಸಾಹಿತ್ಯದ ಹಾಸ್ಯದ ಮಾದರಿಯನ್ನು ನಮಗೆ ಪರಿಚಯಿಸಿದ್ದಾರೆ.

ಈ ಸಂಗ್ರಹದ ಉಳಿದ ಲೇಖನಗಳು ಹಾಗೂ ಉಳಿದ ಮೂರು ಗ್ರಂಥಗಳು ಕಾವ್ಯಪರಿಚಯ ವ್ಯಾಖ್ಯಾನ ಕಾವ್ಯ ಮೀಮಾಂಸೆಗಳಿಗೆ ಮೀಸಲಾದ ಲೇಖನಗಳಿಂದ ಕೂಡಿವೆ. ಆದುದರಿಂದ ಆವುಗಳನ್ನೆಲ್ಲ ಒಟ್ಟಿಗೆ ಪರಿಶೀಲಿಸಬಹುದು. ಇವಲ್ಲದೆ ಐತಿಹಾಸಿಕ, ಸಂಕೀರ್ಣ ಎಂದು ಗುರುತಿಸಬಹುದಾದ ಲೇಖನಗಳೂ ಇಲ್ಲಿವೆ. ಅವುಗಳನ್ನು ಮೊದಲು ಸಮಾಲೋಚಿಸಿ ಆನಂತರ ಕಾವ್ಯಪರಿಚಯ-ಮೀಮಾಂಸೆ-ವ್ಯಾಖ್ಯಾನಗಳ ಜಗತ್ತಿಗೆ ಪ್ರವೇಶಿಸಬಹುದು.

ಕೆಳದಿಯ "ರಾಜಾಭ್ಯುದಯಮ್ ಐತಿಹಾಸಿಕ ವಿವೇಚನೆ", ಲೇಖಕರ ಐತಿಹಾಸಿಕ ಶೋಧನಾ ವಲಯಕ್ಕೆ ಸೇರುವ ಲೇಖನ. 'ರಾಜಾಭ್ಯುದಯಮ್' ಎಂಬ ಅಪೂರ್ಣಗ್ರಂಥವನ್ನು ಕುರಿತ ವಿವೇಚನೆ ಇಲ್ಲಿದೆ. ಇದರ ಕರ್ತೃವಿನ ಬಗೆಗೆ ಮರುಳಯ್ಯನವರು ಪ್ರಾಮಾಣಿಕ ಸಂದೇಹ ವ್ಯಕ್ತಪಡಿಸಿ, ಛಂದಸ್ಸು , ಕಾಗದ ಪ್ರತಿಯ ರೂಪ, ಗ್ರಂಥ ಕರ್ತೆ ಎಂದು ಹೇಳಿರುವ 'ಗಂಗಮ್ಮನ ಅಸ್ತಿತ್ವ ಇವುಗಳನ್ನೆಲ್ಲ ಕೂಲಂಕಷವಾಗಿ ಚರ್ಚಿಸಿದ್ದಾರೆ.

'ಚಾರ್ವಾಕರು' ಒಂದು ವಿಶಿಷ್ಟ ಸಂಕೀರ್ಣ ಲೇಖನ. ಚಾರ್ವಾಕ ಅಥವಾ ಲೋಕಾಯತ ಸಿದ್ಧಾಂತದ ಮೂಲಭೂತ ಅಂಶಗಳನ್ನು ಈ ಪುಟ್ಟ ಲೇಖನದಲ್ಲಿ ಚಿತ್ರಿಸಿದ್ದಾರೆ. ಪುರುಷಪ್ರಯತ್ನಕ್ಕೆ ಮಹತ್ತ್ವ ಕೊಡುವ ಪಾಪ-ಪುಣ್ಯ, ಬ್ರಹ್ಮ, ಕರ್ಮ, ಜನ್ಮಾಂತರ, ಇವುಗಳ ಅಸ್ತಿತ್ವವನ್ನು ಪ್ರಶ್ನಿಸುವ ಚಾರ್ವಾಕರು ವೇದಗಳಿಗೆ ಪ್ರಾಮಾಣ್ಯ ಕೊಡದೆ ಬೇರೊಂದು ಹಾದಿಯನ್ನು ತುಳಿದಿದ್ದಾರೆ. ಮರುಳಯ್ಯನವರು ಚಾರ್ವಾಕ ಮತವನ್ನು ಸಂಗ್ರಹಿಸಿಕೊಟ್ಟಿದ್ದಾರೆ.

"ಚಾರ್ವಾಕರ ಪ್ರಕಾರ ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳು ಮಾತ್ರ ಸತ್ಯ. ಮನುಷ್ಯನ ಸುಖದುಃಖಗಳಿಗೆ ಪಾಪಪುಣ್ಯಗಳು ಕಾರಣವಲ್ಲ. ಏಕೆಂದರೆ ಇವು ಅದೃಷ್ಟವಾದುವು. ಹಾಗಾದರೆ ಸುಖದುಃಖಗಳಿಗೆ ಕಾರಣವೇನು? ಜಗತ್ತಿನಲ್ಲಿ ಪ್ರತಿಯೊಂದು ವಸ್ತುವಿನಲ್ಲೂ ಒಂದೊಂದು ಬಗೆಯ ಗುಣಸ್ವಭಾವಗಳಿವೆ. ಪಂಚಭೂತಗಳಿಂದ ನಿರ್ಮಿತವಾದ ಈ ಪಾರ್ಥಿವ ದೇಹಕ್ಕೆ ಸುಖದುಃಖಗಳಿಗೆ ಕಾರಣವಾಗುವ ಗುಣ ಸ್ವಭಾವಜನ್ಯವಾಗಿ ಬಂದಿದೆ. ಬೆಂಕಿಗೆ ಸುಡುವ ಗುಣ ಹೇಗೆ ಸಹಜವೋ ಹಾಗೆ ದೇಹದ ಗುಣ ಸ್ವಭಾವದಿಂದ ಜನನ ಮರಣ ಸುಖದುಃಖಗಳು - ಎಂದು ಚಾರ್ವಾಕರು ನಂಬುತ್ತಾರೆ. ಪ್ರತ್ಯಕ್ಷ ಗೋಚರಗಳಾದ ಪೃಥ್ವೀ ಜಲ ತೇಜಸ್ಸು ವಾಯು ಎಂಬ ನಾಲ್ಕು ತತ್ತ್ವಗಳು ಅಥವಾ ವಸ್ತುಗಳು ಪರಿಣಾಮಗೊಂಡು ಶರೀರ ಮೊದಲಾದ ವಸ್ತುಗಳಿಂದ ಕೂಡಿದ ಪ್ರಪಂಚವು ಹುಟ್ಟಿದೆ. ಈ ನಾಲ್ಕು ಭೂತಗಳ ಸಂಯೋಗದಿಂದ ಬುದ್ಧಿಜ್ಞಾನ ಎಂಬ ಚೈತನ್ಯ ಹೊರಬಿದ್ದಿದೆ. ಇದನ್ನು ಅವರು

ಭೌತಶಕ್ತಿ ಎಂದು ಕರೆಯುತ್ತಾರೆ...... ಈ ದೇಹ ಆರೋಗ್ಯವಾಗಿದ್ದರೆ ಸುಖ; ಮುಪ್ಪಡರಿಸಿ ನಾಶವಾದರೆ ದುಃಖ...... ಶರೀರದ ಆಯುರಾರೋಗ್ಯಗಳನ್ನು ಗಳಿಸುವುದೇ ಜೀವನದ ಅಂತಿಮ ಗುರಿ.....''

ಚಾರ್ವಾಕರನನ್ನು ಪರಿಚಯ ಮಾಡಿಕೊಡುವಂತೆಯೇ 'ವೇದಋಷಿದರ್ಶನ' ದಲ್ಲಿ ನಮ್ಮ ತಪೋಧನರಾದ ಋಷಿಗಳ ಸಾಧನೆಯನ್ನು ಸೊಗಸಾದ ನಿದರ್ಶನಗಳಿಂದ ಪ್ರತಿಪಾದಿಸಿದ್ದಾರೆ.

'ಹಾಗೆಯೇ ಕಾನೂನು, ಭಾಷೆ ಮತ್ತು ನಾವು' ಎಂಬ ಸಂಕೀರ್ಣ ಪ್ರಬಂಧವು ಸಾಮಾನ್ಯ ಕನ್ನಡ ಜನತೆ ಕೂಡ ಕಾನೂನಿನ ತಿಳುವಳಿಕೆ ಹೊಂದುವುದು ಅತ್ಯಗತ್ಯ ಎಂದೂ ಕರ್ನಾಟಕದಲ್ಲಿ ನ್ಯಾಯಾಂಗದ ಭಾಷೆ ಕನ್ನಡವಾಗಿರಬೇಕೆಂದೂ ಸ್ಪಷ್ಟವಾಗಿ ಪ್ರತಿಪಾದಿಸಿದೆ.

'ಕನ್ನಡಸಾಹಿತ್ಯದ ಒಲವು ನಿಲುವುಗಳು', '೧೯೭೬-೭೭ರ ಸಾಹಿತ್ಯ ಸಮೀಕ್ಷೆ' 'ಕನ್ನಡದಲ್ಲಿ ಸಣ್ಣಕತೆ ಮತ್ತು ಅದರ ಭವಿಷ್ಯ', ಮೊದಲಾದ ಲೇಖನಗಳು ಒಂದು ಬಗೆಯ ಇತಿಹಾಸ ಕಥನಗಳು ಎನ್ನಬಹುದಾದವು. 'ಸುಬೋಧ ರಾಮರಾಯರ ಜೀವನ ಚರಿತ್ರೆಗಳು' ಎಂಬ ಲೇಖನ ಕೂಡ ಇದೇ ಸಾಲಿಗೆ ಸೇರುತ್ತದೆ. ಸಾಮಾನ್ಯವಾಗಿ ಇಂಥಲೇಖನಗಳು ಸುದೀರ್ಘ ದಾಖಲೆಗಳನ್ನು ಒದಗಿಸುವ ಪಟ್ಟಿಗಳಾಗುತ್ತವೆ ನಿಜ. ಆದರೆ ಅಲ್ಲಲ್ಲಿ ಅಡಿಗರ ಆರೋಹಣ, ಚನ್ನವೀರ ಕಣವಿಯವರ, ಕೆ.ಎಸ್.ನ, ಎನ್.ಎಸ್. ಲಕ್ಷ್ಮೀನಾರಾಯಣಭಟ್ಟರ ನಿನ್ನೆಗೆ ನನ್ನ ಮಾತು, ಜಯಸುದರ್ಶನ, ಸಿದ್ಧಲಿಂಗಯ್ಯ, ಚಂಪಾ (ಗಾಂಧಿಸ್ಮರಣೆ) ಸೋಮಶೇಖರ ಇಮ್ರಾಪೂರ, ಪಂಡಿತಾರಾಧ್ಯ, ಜಯಂತಕಾಯ್ಕಿಣಿ, ಮೊದಲಾದವರ ಕೃತಿಗಳ ಪರಿಚಯವೂ ಇವೆ. ಸಣ್ಣಕತೆಯ ಎಲ್ಲ ಮಜಲುಗಳನ್ನು ಗುರುತಿಸಿರುವುದೇ ಅಲ್ಲದೆ ಪ್ರಗತಿಶೀಲರ ಸಾಧನೆಯ ಬಗೆಗೆ ಹೇಳುವಾಗ ಅ.ನ.ಕೃ., ಕಟ್ಟೀಮನಿ, ಕೋಚೆ, ನಿರಂಜನ ಮೊದಲಾದವರನ್ನೆಲ್ಲ ಹೆಸರಿಸಿ ಕೊನೆಗೆ ''ಈ ಪ್ರಚಂಡ ಯಜ್ಞಕ್ಕೆ ವೆಚ್ಚ ಹೆಚ್ಚಾಯಿತೇ ಹೊರತು ಫಲಮಾತ್ರ ಅಷ್ಟೆ'' ಎಂಬ ಒಕ್ಕಣೆಯನ್ನೂ ಸೇರಿಸಿದ್ದಾರೆ !

ಕೃತಿ ಕೃತಿಕರ್ತೃವನ್ನು ಕುರಿತ ಮರುಳಯ್ಯನವರ ಚಿಂತನೆಗಳಲ್ಲಿ ಸಿಂಹಪಾಲು ಕುವೆಂಪು ಅವರನ್ನು ಕುರಿತ ಲೇಖನಗಳಿಗೆ ಲಭಿಸಿದೆ. ಶ್ರೀ ರಾಮಾಯಣ ದರ್ಶನಂ ಮಹಾಕಾವ್ಯದ ಬಗೆಗಿನ 'ಕೃತಿ ನನ್ನ ದರ್ಶನಂ' ''ಶ್ರೀ ಕುವೆಂಪು ಒಲವು ನಿಲುವುಗಳು'', ''ಕಿಂಕಿಣಿ'', ''ಮನುಜಮತ ವಿಶ್ವಪಥ'', ''ತನ್ನ ಕಾವ್ಯಕೆ ತಾಂ ಮಹಾಕವಿ ಮಣಿಯುವಂತೆ''. ಈ ಲೇಖನಗುಚ್ಛಗಳು ಸಹಜವಾಗಿ ನಮ್ಮ ನವೋದಯಕಾವ್ಯ ಪರಂಪರೆಯ ಜೀವಸತ್ತ್ವ ಎನ್ನಬಹುದಾದ ಕುವೆಂಪು ಅವರ ವಿಚಾರ ಧಾರೆಯನ್ನು ಅಚ್ಚುಕಟ್ಟಾಗಿ ಪರಿಚಯ ಮಾಡಿಕೊಡುತ್ತವೆ. 'ಕಿಂಕಿಣಿ' ಯಂಥ ಗದ್ಯ-ಪದ್ಯಗಳ ನಡುವಣ-ಗೆರೆಯನ್ನು ಅಳಿಸಿಹಾಕಿ ಹೊಸ ಭಾಷೆಯನ್ನು ಸೃಷ್ಟಿಸಿರುವ ಕೃತಿಯನ್ನು

ಮರುಳಯ್ಯನವರು 'ಆಧುನಿಕ ಕನ್ನಡದ ಉಪನಿಷತ್ತು' ಎಂದು ವಿಶ್ಲೇಷಿಸಿದ್ದಾರೆ. ಕುವೆಂಪು ಅವರ ಶೈಲಿಯನ್ನು ಖಲೀಲ್ ಗಿಬ್ರಾನ್, ಠಾಕೂರರು, ಶಿವಶರಣರು - ಇವರ ಪ್ರವಾದಿಯ ತೋಟ, ಗೀತಾಂಜಲಿ, ತೋಟಗಾರ ಮೊದಲಾದ ಕೃತಿಗಳೊಂದಿಗೆ ಸಮೀಕರಿಸಿರುವ ರೀತಿಯೂ ಅನನ್ಯವಾಗಿದೆ. ''ನಮ್ಮ 'ಕಿಂಕಿಣಿ' ಒಂದು ಮಾತಿಗೆ ನೂರು ಅರ್ಥ ಹೇಳಿ, ನೂರು ಭಾವಗಳು ಮಿಡಿಯುವಂತೆ ಮಾಡುತ್ತಾಳೆ. ವಸ್ತು, ಅಲಂಕಾರ, ಧ್ವನಿರಸಗಳಿಗಿಂತ ಈಕೆ 'ದರ್ಶನಧ್ವನಿ'ಯ ಕಾಂತಿಯುತವಾದ ತಂತಿಯನ್ನು ಮೀಟಿ.... ಧ್ಯಾನಧೇನುವೆನಿಸಿದ್ದಾಳೆ. ಲೋಕನೀತಿಯನ್ನು ಲೋಕೋತ್ತರ ರೀತಿಯನ್ನೂ ಜೊತೆ ಜೊತೆಯಲ್ಲೇ ತಿಳಿಸಿ ಅನಂತ ವಿಹಾರಕ್ಕೆ ಓದುಗನ ಆತ್ಮವನ್ನು ಅನುಗೊಳಿಸುತ್ತಾಳೆ ಈ ಸರಸ ಕಿಂಕಿಣಿ''.

ಎಂದು ಭಾವುಕವಾದ ಭಾಷೆಯಲ್ಲಿ ಪರಿಚಯಿಸುತ್ತಾರೆ.

ಮುಖ್ಯವಾಗಿ ಭಾವಗೀತೆಗಳನ್ನು ಆಯ್ದುಕೊಂಡು ಶ್ರೀಕುವೆಂಪು ಅವರ ಪ್ರಕೃತಿಗೀತೆಗಳಲ್ಲಿ ಪ್ರೇಮಗೀತೆಗಳಲ್ಲಿ, ಪರಿಸರ ಗೀತೆಗಳಲ್ಲಿ, ನಾಡಗೀತೆಗಳಲ್ಲಿ ಅವರ ಒಲವು ನಿಲವುಗಳನ್ನು ಪರಿಶೀಲಿಸುವ ಪ್ರಯತ್ನವನ್ನು ಡಾ॥ ಸಾ.ಶಿ. ಮರುಳಯ್ಯನವರು ಯಶಸ್ವಿಯಾಗಿ ಮಾಡಿದ್ದಾರೆ.

ಕುವೆಂಪು ಅವರ ಪ್ರಕೃತಿಗೀತೆಗಳನ್ನು ವಿಪುಲವಾಗಿ ಉದ್ಧರಿಸುವ ಲೇಖಕರು ''ಕುವೆಂಪು ಪ್ರಕೃತಿಯನ್ನು ಕೇವಲ ಒಂದು ಭೌಗೋಳಿಕ ವಸ್ತುವೆಂದು ಭಾವಿಸದೆ ಅದರಲ್ಲಿ ಭಗವಂತನ ಆವಿರ್ಭೂತಿಯನ್ನು ಕಂಡ ದಾರ್ಶನಿಕ ಕವಿ. ತನ್ನ ಚಿನ್ಮಯಿ ಚೈತನ್ಯಕ್ಕೆ ಸಹ್ಯಾದ್ರಿಯ ಅಂಗ ಶರೀರವೆಂದು ಭಾವಿಸಿ ಶಿವ ಮತ್ತು ಪ್ರಕೃತಿ ಶಿವರಲ್ಲಿ ಅಭೇದ ಕಲ್ಪಿಸಿ ಅನುಭಾವವೇದ್ಯವಾದ ಲಿಂಗ-ಅಂಗ ಸಾಮರಸ್ಯವನ್ನು ಸಾಧಿಸಿ ತೋರಿಸಿದ ಐಕ್ಯಸ್ಥಲದ ಅನುಭಾವಿ ಕವಿ'' ಎಂದು ಪ್ರಶಂಸಿಸಿದ್ದಾರೆ. ಕುವೆಂಪು ಅವರ ಪ್ರೇಮಗೀತೆಗಳನ್ನು ಪರಿಚಯಿಸುತ್ತ ಅವರ ಕವನಗಳಲ್ಲಿ ಆಧ್ಯಾತ್ಮಿಕ ಕಲ್ಪನೆಗಳಿವೆಯೆಂದೂ ಅವರ ಪ್ರೀತಿ ಪ್ರೇಮ ಪ್ರಣಯಗಳೆಲ್ಲವೂ ಪ್ರಣವದಲ್ಲಿ ವಿಶ್ರಮಿಸುತ್ತವೆ ಎಂದೂ ಹೇಳಿದ್ದಾರೆ. ಸಮಾಜಗೀತೆಗಳಲ್ಲಿ ಕುವೆಂಪು ಅವರ ಸಂಪ್ರದಾಯ ವಿಮುಖತೆ, ಆತ್ಮಾಭಿಮಾನ, ನಿರ್ಭೀತ ವ್ಯಕ್ತಿತ್ವಗಳನ್ನು ತೋರಿಸಿಕೊಡುತ್ತಾರೆ.

ಮರುಳಯ್ಯನವರ 'ವಚನ ವೈಭವ' ಎಂಬ ಕಿರುಹೊತ್ತಗೆ ಕನ್ನಡ ಸಾಹಿತ್ಯ ಮಾರ್ಗದ ಜೀವಸ್ವರ ಎನ್ನಬಹುದಾದ ವಚನ ಸಾಹಿತ್ಯದ ಭಾವಸೌಂದರ್ಯಕ್ಕೆ ಮಾರುಹೋದ ಮರಳಯ್ಯನವರ ಆನಂದೋದ್ಗಾರ ಎನ್ನಬಹುದು. ಶಿಷ್ಟಸಾಹಿತ್ಯಕ್ಕೂ ಶಿಷ್ಟಭಾಷೆಗೂ ಸೆಡ್ಡುಹೊಡೆದು ನಿಂತ ವಚನಗಳ ಭಾವ-ಭಾಷೆ-ಛಂದಸ್ಸು-ವಸ್ತು-ಕಾಳಜಿ ಇವುಗಳನ್ನೆಲ್ಲ ವಿಪುಲವಾದ ವಚನಾಧಾರದಿಂದ ಮನಗಾಣಿಸಿದ್ದಾರೆ. ಸಂಪ್ರದಾಯಬದ್ಧವಾದ ಪ್ರಾಚೀನ ರಚನೆಯ ವಿರುದ್ಧ ಸಿಡಿದೆದ್ದ ವಚನಕಾರರ

ವಚನಗಳಲ್ಲಿ ಮರುಳಯ್ಯನವರು ಗೇಯತೆ, ಸಂಕ್ಷಿಪ್ತತೆ, ಭಾವೋದ್ದೀಪತೆ, ಸ್ವಾಂತತೆ ಮೊದಲಾದ ಆಧುನಿಕ ಭಾವಗೀತೆಯ ಲಕ್ಷಣಗಳನ್ನು ಕಾಣಿಸಿಕೊಟ್ಟಿರುವುದು ವಿಶಿಷ್ಟ ಸಂಗತಿಯಾಗಿದೆ. ವಿವಿಧ ವರ್ತನೆಯ ಮಾದರಿಗಳನ್ನು ಒಂದು ನೂರೈವತ್ತಕ್ಕಿಂತ ಹೆಚ್ಚಿನ ಸಂಖ್ಯೆಯಲ್ಲಿ ಒದಗಿಸಿ ಸಮರ್ಥವಾಗಿ ವ್ಯಾಖ್ಯಾನಿಸಿ ವಿವಿಧ ತಲೆಬರಹಗಳಲ್ಲಿ ಅವುಗಳನ್ನು ಅನ್ವಯಿಸಿರುವುದು ಅಭ್ಯಾಸಯೋಗ್ಯ ಸಂಗತಿಯಾಗಿದೆ. ಇವರು ಪ್ರಾಸಂಗಿಕವಾಗಿ ಆಯ್ದುಕೊಟ್ಟಿರುವ ವಚನಗಳಷ್ಟನ್ನೇ ಹೆಕ್ಕಿತೆಗೆದು ಒಂದು ಸಂಕೀರ್ಣ ಸಂಗ್ರಹವಾಗಿ ಪ್ರಕಟಿಸಿದರೆ ಅದೇ ಒಂದು ಸುಂದರ ವಚನಗುಚ್ಛವಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ ಈ ಪುಟ್ಟ ಹೊತ್ತಗೆಯಲ್ಲಿ ವಚನಗಳ ಛಂದೋಚಿಂತನದಿಂದ ಹಿಡಿದು ವಚನಗಳ ಅವತಾರಕ್ಕೆ ಕಾರಣವಾದ ಸಾಮಾಜಿಕ ಸ್ಥಿತಿಗತಿ, ಜಾತಿ, ಮತ, ವರ್ಗ, ಭಕ್ತಿ, ಕಾಯಕ, ಬೆಡಗು ನಡವಳಿಕೆ ಮೊದಲಾದುವುಗಳವರೆಗೂ ತಮ್ಮ ಚಿಂತನೆಯನ್ನು ಹರಿಯಬಿಟ್ಟಿದ್ದಾರೆ. ಒಡೇರಯ್ಯಗಳನ್ನು ಕುರಿತ ವಿವೇಚನೆಯೇ ಮೊದಲಾದ ಜಾನಪದೀಯ ಅಂಶಗಳೂ ಈ ಬರಹಗಳಲ್ಲಿ ಬೆರತಿರುವುದರಿಂದ ಇವಕ್ಕೆ ಒಂದು ಬಗೆಯ 'ವಿವಿಧಶಿಸ್ತು'ಗಳ ಮೇಳವಣಿಯೂ ಆಗಿದೆ. ಅಲ್ಲದೆ ವಚನಗಳನ್ನು ಅನ್ವಯ ವ್ಯಾಖ್ಯಾನಕ್ಕೆ ಗುರಿಮಾಡಿ ಅವುಗಳ ಆಶಯವನ್ನೂ ಅವು ರೂಪುಗೊಂಡಿರುವ ಕಲಾತ್ಮಕ ಪರಿಯನ್ನೂ ಲೇಖಕರು ಚರ್ಚಿಸಿದ್ದಾರೆ. 'ವಚನ ವೈಭವ'ವೇ ಅಲ್ಲದೆ 'ಅಭಿವ್ಯಕ್ತಿ' 'ಅವಸ್ಥಾ', 'ಭಾಸನ ಮಕ್ಕಳು' ಈ ಮೂರು ಗ್ರಂಥಗಳಲ್ಲೂ ವಚನ ಸಾಹಿತ್ಯವನ್ನು ಕುರಿತ 'ಇಲ್ಲಿ ಸಲ್ಲುವರು.... ' ಕೆಲವರು ವಿಶ್ವಕರ್ಮ ವಚನಕಾರರು, ಮೇದಾರ ಕೇತಯ್ಯನ ವಚನಗಳಲ್ಲಿ ಕಾವ್ಯಾಂಶ, ವಚನಸಾಹಿತ್ಯದಲ್ಲಿ ಅದ್ವೈತ, ಕೆಲವರು ಕಿರು ವಚನಕಾರ್ತಿಯರು, ವಚನಾಭಿವ್ಯಕ್ತಿ - ಎಂಬ ಆರು ಲೇಖನಗಳನ್ನು ಬರೆದಿದ್ದಾರೆ. ಈಚೆಗೆ 'ನೂತನ' ವಾರಪತ್ರಿಕೆಯಲ್ಲೂ ಈ ಬಗೆಯ ಅನ್ವಯ ವ್ಯಾಖ್ಯಾನದ ಸಂಪ್ರದಾಯವನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಆಧುನಿಕ ದೃಷ್ಟಿಯ 'ಭಾವಗೀತೆ'ಗಳ ರಚನಾಶಿಲ್ಪದ ಹಿನ್ನೆಲೆಯಲ್ಲಿಯೂ ಕೆಲವು ವಚನಗಳನ್ನು ವ್ಯಾಖ್ಯಾನಿಸಬಹುದೆಂಬ ಅಂಶವನ್ನು ವಿಪುಲ ನಿದರ್ಶನಗಳಿಂದ ಸ್ಪಷ್ಟಪಡಿಸಿರುವುದು 'ವಚನಾಭಿವ್ಯಕ್ತಿ' ಲೇಖನದ ವಿಶಿಷ್ಟ ಅಂಶವಾಗಿದೆ. ಈ ಎಲ್ಲ ಲೇಖನಗಳನ್ನು ಕೂಡಿಸಿ ಅದರಲ್ಲಿ ಪುನರುಕ್ತವಾಗಿರುವ ಅಂಶಗಳನ್ನು ಪರಿಷ್ಕರಿಸಿ 'ವಚನಲೋಕ' ಎಂಬ ಹೊತ್ತಗೆಯನ್ನು ತಂದರೆ ಮರುಳಯ್ಯನವರ ವಚನ ಚಿಂತನದ ಒಟ್ಟು ನೋಟವನ್ನು ಗ್ರಹಿಸಲು ಸಾಧ್ಯವಾಗುತ್ತದೆ.

ಕನ್ನಡ ಸಾಹಿತ್ಯದ ವೈವಿಧ್ಯಮಯ ಘಟ್ಟಗಳನ್ನು ಪರಿಚಯ ಮಾಡುಕೊಡುವ ಪ್ರಯತ್ನಗಳನ್ನು ಮರುಳಯ್ಯನವರು ಮಾಡಿದ್ದಾರೆ. ಅವುಗಳಲ್ಲಿ ಕನಕದಾಸರ ಸಮಗ್ರ ಜೀವನಚರಿತ್ರೆ ಎಂಬ ಲೇಖನ ಪ್ರಸ್ತಾಪಿಸಬೇಕಾದ ಲೇಖನವಾಗಿದೆ. ಕನಕದಾಸರ ಜನ್ಮ, ಸ್ಥಳ, ಜಾತಿಗಳ ವಿಷಯದಲ್ಲಿ ತುಂಬ ದೀರ್ಘ ಸಂಶೋಧನೆ ಮತ್ತು ಅಭಿಪ್ರಾಯ ಕ್ರೋಢೀಕರಣ ಇಲ್ಲಿ ನಡೆದಿದೆ. ಅವನ ಜೀವನ ಚರಿತ್ರೆ ಕೃತಿಚರಿತ್ರೆಗಳ

ಪಾರ್ಶ್ವನೋಟವನ್ನೂ ಈ ಲೇಖನದಲ್ಲಿ ಕಾಣಬಹುದಾಗಿದೆ. 'ಕನಕ ಸಾಹಿತ್ಯ ಒಂದು ವಿವೇಚನೆ' ಎಂಬ ಸುದೀರ್ಘ ಲೇಖನ ಕನಕದಾಸರ ಸಮಗ್ರ ಕೃತಿಗಳ ಬಗೆಗೆ ಸರಳ ಪರಿಚಯ ಮಾಡಿಕೊಡುತ್ತ ಹೋಗುತ್ತದೆ. 'ರಾಮಧಾನ್ಯ ಚರಿತೆ'ದ ವಿಚಾರದಲ್ಲಿ ಭತ್ತ ಮತ್ತು ರಾಗಿಯ ನಡುವೆ ನಡೆದ ವಿವಾದದ ಪ್ರಸಂಗವಿದೆಯಷ್ಟೆ. ಇದನ್ನು ಮತೀಯ ಸಂಘರ್ಷ, ದಲಿತ ಧೋರಣೆ, ಪ್ರತಿಭಟನೆ, ಬಂಡಾಯಮತೀಯ ವಿಡಂಬನೆ, ಸ್ಪೃಶ್ಯ-ಅಸ್ಪೃಶ್ಯರ ನಡುವಣ ಹೋರಾಟ -ಇಷ್ಟು ರೀತಿಯಲ್ಲಿ ಕನ್ನಡ ವಿಮರ್ಶಕರು ವ್ಯಾಖ್ಯಾನಿಸಿರುವುದನ್ನು ಗುರುತಿಸುವ ಮರುಳಯ್ಯನವರು ಇದನ್ನು 'ಕನ್ನಡ-ಸಂಸ್ಕೃತಗಳ ನಡುವಣ ಭಾಷೆಯ ವಿವಾದ' ಎಂದು ಗುರುತಿಸಿ ಕೆಲವು ಪೋಷಕ ನಿದರ್ಶನವನ್ನು ಒದಗಿಸಿದ್ದಾರೆ. ವ್ಯಾಸಕೂಟ - ದಾಸಕೂಟಗಳ ನಡುವೆ ನಡೆದಿರಬಹುದಾದ ವಾಗ್ವಾದ ಎಂದು ವ್ಯಾಖ್ಯಾನಿಸಿದ್ದಾರೆ.

'ಆದಿಪುರಾಣದೊಳರಿವುದು' ಎಂಬ ಲೇಖನದಲ್ಲಿ ಪಂಪನ ಅಲೌಕಿಕ ಕಾವ್ಯವಾದ ಆದಿಪುರಾಣವನ್ನು ಚರ್ಚೆಗೆ ಎತ್ತಿಕೊಂಡು ಅದರಲ್ಲಿ ಧರ್ಮಬೋಧೆ ಕಲಾಸೌಂದರ್ಯಗಳು ಹೇಗೆ ಮೇಳವಿಸಿವೆ ಎಂಬುದನ್ನು ಆದಿದೇವನ ಜನ್ಮ ಭವಾವಳಿ, ವೃಷಭ ತೀರ್ಥಂಕರನ ಪಂಚ ಕಲ್ಯಾಣಗಳು, ಮತ್ತು ಭರತ-ಬಾಹುಬಲಿ ಪ್ರಸಂಗಗಳನ್ನು ವಿಶ್ಲೇಷಿಸಿದ್ದಾರೆ.

'ರಾಘವಾಂಕ ಮತ್ತು ವಚನಕಾರರ ವಿಚಾರ ಕ್ರಾಂತಿ' ಒಂದು ಪರಿಚಯಾತ್ಮಕ ತೌಲನಿಕ ಅಧ್ಯಯನ. ಹರಿಶ್ಚಂದ್ರ ಕಾವ್ಯವನ್ನು ವಿಸ್ತಾರವಾದ ಚರ್ಚೆಗೆ ಒಳಪಡಿಸಿರುವ ಲೇಖಕರು ಸಿದ್ಧರಾಮ ಚಾರಿತ್ರ, ಸೋಮನಾಥ ಚರಿತೆಗಳ ರಚನೆಯಲ್ಲಿ ರಾಘವಾಂಕನು ಹೇಗೆ ವಚನಕಾರರ ಚಿಂತನೆ, ಆಶಯಗಳನ್ನು ಸ್ವೀಕರಿಸಿದ್ದಾನೆಂಬ ಅಂಶವನ್ನು ವಿಷದಪಡಿಸುವ ಧೋರಣೆಯಿದೆ. ಷಡಕ್ಷರಕವಿಯ ಕೃತಿಗಳಲ್ಲಿ ಗುಣ-ದೋಷ ಎರಡನ್ನೂ ಗುರುತಿಸುವ ಕಾರ್ಯವನ್ನು ಲೇಖಕರು ಮಾಡಿರುವುದು ಶ್ಲಾಘನೀಯವಾಗಿದೆ. ಈ ಗುಣ-ದೋಷ ಎರಡೂ ಕಾವ್ಯಮೀಮಾಂಸೆಯಲ್ಲಿ ಬರುವ ಕಾವ್ಯಗುಣ ಕಾವ್ಯದೋಷಗಳಿಗೆ ಸಂಬಂಧಪಟ್ಟವುಗಳೆಂಬುದನ್ನು ಮರೆಯಬಾರದು. ಶುದ್ಧ ಕಾವ್ಯಮೀಮಾಂಸೆಯ ದೃಷ್ಟಿಯಿಂದ ಕಾವ್ಯ ಗುಣ-ದೋಷಗಳನ್ನು ಸುಮಾರು ಹತ್ತು ಪುಟಗಳಲ್ಲಿ ಸಂಸ್ಕೃತ ಆಲಂಕಾರಿಕರ ವಿಪುಲ ಉದಾಹರಣೆಗಳಿಂದ ಲೇಖಕರು ವಿವರಿಸುತ್ತಾರೆ. ಆದರೆ ಇದು ಸ್ವತಂತ್ರವಾಗಿ ನಿಂತು, ಮುಂದೆ ಷಡಕ್ಷರದೇವನ ಕೃತಿಗಳ ಪರಿಚಯಕ್ಕೆ ಆರಂಭವಾಗಿ ಕಥೆಯನ್ನು ನಿರೂಪಿಸಲು ಹೋಗಿ ತಾಳತಪ್ಪುತ್ತದೆ. ಅನಂತರ ಕಾವ್ಯ ಗುಣ-ಕಾವ್ಯದೋಷಗಳ ಪರಿಭಾಷೆಯನ್ನು ಲೇಖಕರು ಬಿಟ್ಟುಕೊಟ್ಟು ನಿಜವಾದ ಗುಣದೋಷಗಳ ಚರ್ಚೆಯನ್ನು ಎತ್ತಿಕೊಂಡಿದ್ದಾರೆ.

ಮರುಳಯ್ಯನವರು 'ಮಾಸ್ತಿಯವರ ರುದ್ರನಾಟಕಗಳ ಸಮೀಕ್ಷೆ' 'ಪ್ರವಾಸ ಸಾಹಿತ್ಯ ಸಮೀಕ್ಷೆ, ಕನ್ನಡ ಕಥನಕವನಗಳ ಸ್ಥಿತಿಗತಿಗಳ ಸಮೀಕ್ಷೆ ಮೊದಲಾದ ಕೃತಿಚಿಂತನ

ಲೇಖನಗಳನ್ನು ಬರೆದಿದ್ದಾರೆ. ಬೇಂದ್ರೆಯವರ ಕಾವ್ಯದಲ್ಲಿ ದೈವೋಪಾಸನೆಯ ನಿರೂಪಣೆ ಸಾಗಿ ಬಂದಿರುವ ರೀತಿಯನ್ನು ವಿಶ್ಲೇಷಿಸಿದ್ದಾರೆ. ಸಣ್ಣಕಥೆಗಳ ಇತಿಹಾಸವನ್ನು ಸೂಕ್ಷ್ಮವಾಗಿ ಅವಲೋಕಿಸಿದ್ದಾರೆ. ಅಂದರೆ ಕೃತಿ ಪರಿಚಯ ವಿಭಾಗದಲ್ಲಿ ಮರುಳಯ್ಯನವರ ಎಟುಕು ಎಷ್ಟು ದೊಡ್ಡದು' ಎಷ್ಟು ವೈವಿಧ್ಯಮಯವಾದದ್ದು, ಭಿನ್ನಾಸಕ್ತಿಗಳನ್ನು ಒಗ್ಗೂಡಿಸಿ ಕೊಂಡದ್ದು ಎಂಬ ಅಂಶ ಸ್ಪಷ್ಟವಾಗುತ್ತದೆ.

ಮರುಳಯ್ಯನವರ ಕಾವ್ಯಮೀಮಾಂಸೆಯ ಚಿಂತನೆಗಳು ಹಲವಾರು ಲೇಖನಗಳಲ್ಲಿ ಹರಡಿಕೊಂಡಿವೆ. ಅಲ್ಲದೆ ಇತರ ಲೇಖನಗಳ ಚರ್ಚೆಯ ನಡುವೆಯೂ ಸುಳಿದಿವೆ. ಕಾವ್ಯಮೀಮಾಂಸೆಯಲ್ಲಿ ಚಿಂತನೆಯಲ್ಲಿ ಮರುಳಯ್ಯನವರು ಶುದ್ಧ ಸಂಸ್ಕೃತ ಸಂಪ್ರದಾಯವನ್ನೇ ಅನುಸರಿಸದೆ ಪಾಶ್ಚಾತ್ಯ ಕಾವ್ಯಮೀಮಾಂಸೆಯ ಲಕ್ಷಣಗಳಿಂದಲೂ ಪ್ರಭಾವಿತರಾಗಿದ್ದಾರೆಂಬುದು ಅವರ ಯಾವ ಲೇಖನ ನೋಡಿದರೂ ಸ್ಪಷ್ಟವಾಗುತ್ತದೆ 'ಗೀತನಾಟಕಗಳ ಭಾಷೆ' 'ಕವಿ ಮತ್ತು ಮನೋವಿಜ್ಞಾನಿ' ಎಂಬ ಲೇಖನಗಳು ಈ ಪಾಶ್ಚಾತ್ಯ ಲಕ್ಷಣಗಳಿಂದ ಪ್ರಭಾವಿತಗೊಂಡ ಬರಹಗಳಾಗಿವೆ. ''ಕವಿ ವಿಮರ್ಶಕರಾಗಿ - ವಿಮರ್ಶಕನು ಕವಿಯಾಗಿ'' ಎಂಬ ಲೇಖನವು ಪೂರ್ವ-ಪಶ್ಚಿಮಗಳೆರಡರ ಸಂಗಮವಾದ ಕಾವ್ಯ ಮೀಮಾಂಸೆಯನ್ನು ಪರಿಚಯಿಸುವ ಸುಂದರ ಲೇಖ. ಕಾವ್ಯವನ್ನು ವಿಮರ್ಶಿಸುವ ಅಧಿಕಾರ ಕವಿಗಿರಲೇಕೋ ? ವಿಮರ್ಶಕನಿಗೆ ಇರಲೇಕೋ?'' ಎಂಬ ಒಂದು ಮೀಮಾಂಸೆಯ ಚರ್ಚೆಯನ್ನು ಎತ್ತಿಕೊಂಡು ಲೇಖಕರು ಈ ಬಗೆಗೆ ಎರಡೂ ಪಂಥಗಳ ಅಭಿಪ್ರಾಯಗಳನ್ನು ಅದ್ಭುತವಾಗಿ ಸಂಗ್ರಹಿಸಿಕೊಟ್ಟಿದ್ದಾರೆ. ಸ್ಕಾಟ್ ಜೇಮ್ಸ್, ಐ.ಎ. ರಿಚರ್ಡ್ಸ್, ಹಡ್ಸನ್, ವರ್ಡ್ಸ್‌ವರ್ತ್, ಡೆ. ಡೊನಾಲ್ಡ್ ಆಡಮ್ಸ್, ಅಬರ್‌ಕ್ರಾಂಬಿ, ಮೊದಲಾದ ಪಾಶ್ಚಾತ್ಯ ಮೀಮಾಂಸಕರುಗಳು ಈ ವಿಚಾರದಲ್ಲಿ ಎತ್ತಿರುವ ಭಿನ್ನಧ್ವನಿಗಳನ್ನು ಗುರುತಿಸಿದ್ದಾರೆ. ಹಾಗೆಯೇ ಆನಂದವರ್ಧನ, ಆಂಡಯ್ಯ, ಸ್ವಪ್ರಭಾನಂದ, ನಳಿನೀಕಾಂತಗುಪ್ತ ಮೊದಲಾದ ಆರ್ಷೇಯರ ಅಭಿಪ್ರಾಯಗಳನ್ನು ಸಂಗ್ರಹಿಸಿಕೊಟ್ಟಿದ್ದಾರೆ.

ಇವಲ್ಲದೆ ಬಿಂದಲಿ, ನಾಟ್ಯರಾಣಿ ಶಾನ್ತಲಾ 'ಸಮ್ಯಕ್ತ್ವ ಕೌಮುದಿ' ತರಾಸು ಅವರ ಎರಡು ಕಾದಂಬರಿಗಳು ಮೊದಲಾದ ಕವಿಕೃತಿ ಪರಿಚಯದ ಲೇಖನಗಳೂ ಹಲವಾರಿವೆ.

ಈ ಎಲ್ಲ ಬರಹಗಳು ಡಾ॥ ಸಾ.ಶಿ. ಮರುಳಯ್ಯನವರ ಸಹೃದಯತೆ, ವಾಚನಾಸಕ್ತಿ, ಸಲೀಲ ಶೈಲಿಗಳ ಪರಿಚಯ ಮಾಡಿಕೊಡುವುದರಲ್ಲಿ ಯಶಸ್ವಿಯಾಗಿವೆ.

ಡಾ|| ಸಾ.ಶಿ. ಮರುಳಯ್ಯನವರ ಸಂಪಾದನಾ ಸೊಂಪಿನ ಕಾವ್ಯ ಕೃತಿ ಸಂಪದ

ಪ್ರೊ|| ಎಂ.ಜಿ. ನಾಗರಾಜ್

ಡಾ|| ಸಾ.ಶಿ. ಮರುಳಯ್ಯನವರು ನಮ್ಮ ನಾಡಿನ ಹೆಮ್ಮೆಯ ಸಾಹಿತಿ, ಕವಿ, ವಾಗ್ಮಿ. ಅವರ ಮಾತು, ತುಂಬಿದ ಭಾವಗಂಗೆ. ನಲಿಯುತ್ತ, ನಲವಿತ್ತು ಧುಮ್ಮಿಕ್ಕುವ ಅಬ್ಬಿಯಂತೆ ಚೇತೋಹಾರಿ. ಈ ಸೌಷ್ಠವ ಗುಣವನ್ನೆ ತಮ್ಮ ಬರಹದಲ್ಲೂ ಅಚ್ಚೊತ್ತಿದ್ದಾರೆ. ನಾಟಕ, ಕಾವ್ಯ, ಕಾದಂಬರಿ, ಪ್ರಬಂಧ, ಸಂಶೋಧನೆ, ಸಂಪಾದನೆ, ಜೀವನ ಚರಿತ್ರೆ, ಅನುವಾದ, ವಿಮರ್ಶೆ, ಕಥನ ಯುವುದೇ ಪ್ರಕಾರದಲ್ಲೂ ಈ ಗುಣವನ್ನೆ ತೋರಿದ್ದಾರೆ. ಅವರದು ಪ್ರಸಾದಶೈಲಿ, ಪ್ರಸನ್ನ ಭಾವ, ಲಾಲಿತ್ಯದ ನೆಲೆ. ಈ ಗುಣಗಳ ನಿಕಷದಲ್ಲಿ ಅವರ ಸಂಪಾದಿತ ಕೃತಿಗಳ ಪೈಕಿ ಹತ್ತು ಕೃತಿಗಳ ಕುರಿತು ಇಲ್ಲಿ ಬರೆಯಲಾಗಿದೆ. ಅವರ ಸಂಪಾದನೆಯಲ್ಲಿ, ವಿದ್ವತ್ತು, ವಿವೇಚನೆ, ತೌಲನಿಕ ಚಿಂತನೆ, ಆಳ ಹಾಗೂ ಸಂಪಾದನ ಸೂತ್ರಗಳು, ಖಚಿತತೆ ಎದ್ದು ಕಾಣುತ್ತವೆ. ಶ್ರೀ ಮರುಳು ಸಿದ್ದೇಶ್ವರ ಮಹಾಪುರಾಣ (೧೯೬೨), ಹರಿಹರನ ಹತ್ತು ರಗಳೆಗಳು (೧೯೭೨), ಜಯದೇವಿ ತಾಯಿಯವರ ಅರುವಿನಾಗರದಲ್ಲಿ (೧೯೯೦), ಶ್ರೀ ಸಿದ್ಧಲಿಂಗೇಶ್ವರ ಶತಕಂ (೧೯೯೦), ತೋಂಟದಾರ್ಯ ವಚನ ವ್ಯಾಖ್ಯೆ (೧೯೯೦), ಕನಕಸಾಹಿತ್ಯ ದರ್ಶನ ಸಂಪುಟ-೨ (೧೯೯೧) ಅಕ್ಕನ ವಚನಗಳು (೧೯೯೨), ನೀಲಮ್ಮನ ವಚನಗಳು (೧೯೯೩), ಸಿದ್ಧರಾಮಯ್ಯ ದೇವರ ವಚನಗಳು (೧೯೯೮), ಕಥಾ ಶ್ರಾವಣ ಮಾಡ್ಸೈ (೧೯೯೮) - ಈ ಕೃತಿಗಳನ್ನು ಸದ್ಯ ವಿವೇಚನೆಗೆ ಗಮನಿಸಲಾಗಿದೆ.

ಡಾ|| ಸಾ.ಶಿ. ಮರುಳಯ್ಯನವರ ಸಂಪಾದನ ಪರಿಶ್ರಮ, ಪ್ರತಿಭೆ ಕೃತಿಯಿಂದ ಕೃತಿಗೆ ಸೌಷ್ಠವಗೊಳ್ಳುತ್ತ ಸಾಗಿಬಂದಿದೆ. ಅವರ ಪ್ರಸ್ತಾವನೆಗಳೂ, ಸಂಪಾದಿತ ಕೃತಿಯ ಹೂರಣದ (ಸವಿದುತ್ತು) ಸವಿಯ ತುತ್ತುಗಳಾಗಿವೆ. ಸೋದಾಹರಿಸುವಲ್ಲಿ ಸೋದಾಹರಿಸಿ, ವಿಮರ್ಶಿಸುವಲ್ಲಿ ವಿಮರ್ಶಿಸಿ, ತೋಲನ ಮಾಡುವಲ್ಲಿ ತೋಲನಿಸಿ, ಶೋಭಿಸುವಲ್ಲಿ ಶೋಭಿಸಿ ಪ್ರಸ್ತಾವನೆಗಳನ್ನು ಕೃತಿಯ ಸುಂದರ ಗೋಪುರ ಶಿಲ್ಪವಾಗಿಸಿದ್ದಾರೆ. ಪ್ರಸ್ತಾವನೆಯಿಂದ ಪ್ರಸ್ತಾವನೆಗೆ ತಮ್ಮ ಸ್ವಂತಿಕೆಯ ಪಲ್ಲವವನ್ನು ತೋರಿದ್ದಾರೆ. ಪ್ರಸ್ತಾವನೆಗೆ ಅವರು ಬಳಸಿಕೊಂಡಿರುವ ಅನ್ಯಸೋದ್ಧೃತಗಳೂ, ಕೃತಿಯ ಮೌಲ್ಯಮಾಪನಕ್ಕೆ ಸನ್ನೆಗೋಲುಗಳಾಗಿವೆ. ಕಾವ್ಯದ ಸೋನೆ, ಗದ್ಯದ ಬನಿ, ವಿಮರ್ಶೆಯ ದನಿ, ಪರಾಮರ್ಶೆಯ ಬಿತ್ತರ ಅವರ ಪ್ರಸ್ತಾವನೆಯ ಅಂತರಂಗದಲ್ಲಿ, ಬಹಿರಂಗದಲ್ಲಿ ತುಂಬಿ ತುಳುಕುತ್ತವೆ. ಬಹುತೇಕ ಶರಣ-ಶರಣೆಯರ ಕೃತಿ ಸಂದೋಹದ ಸಂಪಾದನೆ ಈ ಹತ್ತು ಕೃತಿಗಳ ಪೈಕಿ ಇದ್ದರೂ, ಕನಕ ಸಾಹಿತ್ಯ ದರ್ಶನವನ್ನು ಮಾಡಿಕೊಂಡಂತೆ ಸ್ವ ನಿರಂಜನ ನೋಟದ ನಿಲುವಿನಲ್ಲಿ ಉಳಿದ ಕೃತಿಗಳನ್ನು ದರ್ಶನಗೈದಿದ್ದಾರೆ. ಅದನ್ನು ಸಮಷ್ಟಿ ಸಮ್ಮುಖ ವಿದೂರತ್ವವೆನ್ನಿ, ಜಗದೊಳಗಣ ನಿರಂಜನ ನೋಟವೆನ್ನಿ, ಅದರೊಡನೆ ಸಮಷ್ಟಿ ತನ್ಮಯ ಕೌಶಲ್ಯ

ಅರ್ಥಾತ್ ಜಗದೊಳಗಣ ಕೂಡಲ ಬಾಳನ್ನೂ ಅನುಭವಿಸಿ ಬರೆದ ಮಾತುಗಳು ಅವರ ಆ ಬರಹದಲ್ಲಿವೆ. ಅದೊಂದು ರೀತಿ ಸಮುದಾಯ ಸೌಖ್ಯವನ್ನು ಅನುಭವಿಸುವ ವ್ಯಕ್ತಿಸುಖ, ವ್ಯಷ್ಟಿ ಸುಖ್ಯವನ್ನು ಅನುಭವಿಸುವ ಸಮುದಾಯ ಸುಖ. ಅಂದರೆ ಸಮುದಾಯ ಸುಖ ವ್ಯಕ್ತಿಯಾಗಿ, ವ್ಯಕಿ ಸಖನಾಗಿ ಸಮುದಾಯ ಅನುಭವಿಸುವ ವ್ಯಷ್ಟಿ-ಸಮಷ್ಟಿಗಳ ವಿನಿಮಯ ಸೌಖ್ಯ, ಹೀಗೆ ಓದುಗ ಸಮುದಾಯಕ್ಕೆ ಸೌಖ್ಯ ನೀಡುವ ಸಡಗರವನ್ನು ಸಮುದಾಯ ಸಖನಾಗಿ ಡಾ|| ಸಾ.ಶಿ.ಮ. ನೀಡಿದರೆ, ವ್ಯಕ್ತಿಸಖನಾಗಿ ಓದುಗ ಸಮುದಾಯ ಡಾ|| ಸಾ.ಶಿ.ಮ. ಅವರಿಗೆ ಸಮುದಾಯ ಸೌಖ್ಯ ನೀಡುವುದೇ ಅವರ ಸಂಪಾದಿತ ಕೃತಿಗಳ ಓದು, ಸಮದರ್ಶಿ, ವಿಮರ್ಶೆ ಹಾಗೂ ಅಭಿನಂದನೆ. ಹೇಳಿ ಕೇಳಿ ಮರುಳಯ್ಯನವರದು ಕವಿ ಹೃದಯ; ಲೇಖನಿ, ಕಾವ್ಯದ ಸೊಬಗಿನ ಸೋನೆಯ ಸತತ ಹನಿ. ಹೀಗಾಗಿ ಅವರ ಪ್ರಸ್ತಾವನೆಯ ಅನೇಕ ಸಾಲುಗಳು ಕವಿಭಾಷೆಯ ಮೈಸಿರಿಯನ್ನು ತುಂಬಿಕೊಂಡು ಪ್ರಾಸದ ಮೋಹಕ್ಕೆ ಅಲ್ಲಲ್ಲಿ ಪಕ್ಕಾದರೂ, ಆ ಭಾಷೆಯ ಪುಳಕದ ಹೊನಲಿಗೂ ಕಾರಣವಾಗಿವೆ ಎಂಬುದನ್ನು ಮರೆಯುವಂತಿಲ್ಲ. ೧೯೬೭ ರಿಂದ ೧೯೯೮ರ ವರೆಗೆ ಕೃತಿ ಸಂಪಾದನೆಯ ಹಾದಿಯಲ್ಲಿ ಅವರು ನಡೆದು ಬಂದ ದಾರಿಯ ಮುನ್ನೋಟವಿದು.

ಶ್ರೀ ಸಿದ್ಧಬಸವ ಶಿವಯೋಗಿ ವಿರಚಿತ ಶ್ರೀ ಮರುಳಸಿದ್ದೇಶ್ವರ ಮಹಾಪುರಾಣಂ (೧೯೬೭)

ಚಿಕ್ಕನಾಯ್ಕನಹಳ್ಳಿ ತಾಲ್ಲೂಕು ಸಾಲ್ಕಟ್ಟೆ ಮುದ್ದೇನಹಳ್ಳಿಯ ಶಿಶು, ಹಾಲ್ಕುರಿಕೆ ಮಠದ ಗುರುವಾಗಿದ್ದ ಶ್ರೀ ಮ.ನಿ.ಪ್ರ. ಸಿದ್ಧಬಸವ ಶಿವಯೋಗಿಗಳು ಭಾಮಿನೀ ಷಟ್ಪದಿಯಲ್ಲಿ ರಚಿಸಿದ ಸುಂದರ ಸರಳ ಕೃತಿ ಇದು. ಡಾ|| ಸಾ.ಶಿ. ಮರುಳಯ್ಯನವರಿಗೆ ಕಾಂತಾಸಮ್ಮತಿಯ ಪ್ರದೇಶ, ಭಾಮಿನೀ ಪ್ರೀತಿಯ ಪ್ರದೇಶ, ಈ ಪರಿಸರ. ಅಂತಾಗಿ ಅಷ್ಟೇ ಪ್ರೀತಿಯಿಂದ ಮಾರ್ದವದಿಂದ ಈ ಕೃತಿಯನ್ನು ಸಂಪಾದಿಸಿಕೊಟ್ಟಿದ್ದಾರೆ. ಈ ಗುರುಕವಿಯ ರಚನಾ ಲಾಲಿತ್ಯವನ್ನು ಮೈದುಂಬಿ ತೋರಿದ್ದಾರೆ. ಕವಿಯ ಇತಿವೃತ್ತ ಕೃತಿ ಸಾರಸ್ವತ ಹಾಗೂ ಗುರು ಕವಿಯಾದ ಕಾರಣ ಮಹಿಮಾ ಮುಖಗಳನ್ನು ನೀಡಿದ್ದಾರೆ. ಜೊತೆಗೆ ಕೃತಿ ಸಂಪಾದಿಸಿ, ವಿಮರ್ಶೆಯನ್ನು ಸೌಷ್ಠವಶೀಲತೆಯಿಂದ ಮಾಡಿದ್ದಾರೆ. ಅದೊಂದು ಚಿತ್ತದ ಚಿಂತನೆಯ ಮೊತ್ತದ ಚಲುನುಡಿಯೂ ಹೌದು, ವಿವೇಚನೆ-ವಿಶ್ಲೇಷಣೆಗಳ ಸಂಕ್ಷಿಪ್ತವೆಸಿದರೂ, ಶಾಸ್ತ್ರೀಯ ಸುವರ್ಣ ಚೌಕಟ್ಟು ಹೌದು.

೧೯ ಸಂಧಿಗಳೊಡನೆ ಪೀಠಿಕಾಸಂಧಿ ಸೇರಿ ಒಟ್ಟು ೨೦ ಸಂಧಿಗಳ ಶ್ರೀ ಮರುಳಸಿದ್ದೇಶ್ವರ ಮಹಾಪುರಾಣವು ಭಾಮಿನೀ ಷಟ್ಪದಿಯಲ್ಲಿ ಬರೆದ ಸರಳ ಸುಂದರ ಕಾವ್ಯವೆನಿಸುತ್ತದೆ. ಆರಂಭಕ್ಕೆ ಗಿರಿಜೆಯ ಹೆಸರನ್ನೇ ನಿಮಿತ್ತ ಮಾಡಿಕೊಂಡು ಪದ್ಯ ರಚಿಸಿರುವುದು ಮಾತೃಪರವಾದ ನಿಲುವಿನ ಕವಿ ಶ್ರೀ ಸಿದ್ಧಬಸವ ಶಿವಯೋಗಿ ಎನಿಸುತ್ತದೆ. ಈ ಕಾವ್ಯದ ಶೈಲಿ ಪ್ರತಿ ಸಂಧಿಯಲ್ಲೂ ಪಲ್ಲವಿಸುತ್ತ ಮನಸ್ಸನ್ನು ಮುದಗೊಳಿಸುತ್ತದೆ. ಜಂಬೂದ್ವೀಪದ ವರ್ಣನೆ, ಅದರೊಳಗಿನ ಕನ್ನಡನಾಡಿನ ನಿಸರ್ಗದ ಚೆಲವು, ಹೊಳೆ, ಕೆರೆ, ಹೂ ಬನ, ತೆಂಗು, ಬಾಳೆ, ಹಲಸು, ದಾಳಿಂಬೆ,

ಯಾವುದೆಲ್ಲದರ ವಿಪುಲ ಸಂಪತ್ತು ಹಾಗೂ ನಿಸರ್ಗ ಸಂಪನ್ಮೂಲ, ಕವಿಗಿಷ್ಟವಾದ ಪ್ರಾಕೃತಿಕ ಫಲ ಕನಸಿನ ಪರಿಸರ ಇಲ್ಲಿ ಮೈದುಂಬಿ ವರ್ಣಿತವಾಗಿದೆ. ಗುರು ಹಾಗೂ ಗುರುಭಕ್ತಿ ವರ್ಣನೆ, ಪೂಜಾಚಾರ, ಗುರು-ಲಿಂಗ-ಜಂಗಮ ವ್ಯಕ್ತಿತ್ವ, ವೀರಮಾಹೇಶ್ವರ ದೀಕ್ಷೆಯ ಮೂಲಕ ಶ್ರೀಗುರು ಮರುಳಸಿದ್ದೇಶ್ವರನ ಚರಿತೆ ಹೇಳುವ ಕವಿಯ ಮನೋ ಮುದ ಕಂಡು ಹರುಷ ಅರಸಿ ಬರುತ್ತದೆ. ವೀರಶೈವ ''ತತ್ವಗಳ'', ಸರಳ ಅರ್ಥೈಸುವಿಕೆ ಪದ್ಯಗಳಲ್ಲಿ ಮೂಡಿ ಬಂದಿರುವ ಬಗೆ ಆಕರ್ಷಕವೆನಿಸುತ್ತದೆ. ಸಂಧಿ ೬ ರಲ್ಲಿ ಬರುವ ಅಬ್ಬರದ ಮಳೆಯ ವರ್ಣನೆ ಹಾಗೂ ಗುರುವಿನುತ್ಸವಕಾಲಕ್ಕೆ ಅದರ ನಿಲುಗಡೆಯ ಬಗೆ, ಹೈದರ್‌ಖಾನ್ ದೊರೆಗೆ ಒದಗಿದ ಗುರುಕೃಪೆ, ಚಿಕ್ಕನಾಯ್ಕನಹಳ್ಳಿಯ ಸಮಚಿತ್ತ ಜನಬದುಕು ಇವುಗಳ ಚಿತ್ರ ಕಾವ್ಯದಲ್ಲಿ ಸೊಗಸಾಗಿ ಮೂಡಿಬಂದಿದೆ. ಸಂಧಿ ೭ರ ಮೊದಲ ಪದ್ಯದಲ್ಲಿ ಶಿವ ಹಾಗೂ ಶಿವಸತಿಯರ ವರ್ಣನೆ ''ಕೆಂಬೊಗರ ಜಡೆವನೆಯೊಳಂಬುನೀತಂ ಬನಿಯನೊಡಗೊಂಡು.... ಫಣಿ ಮರೆಮಾಡಿ ದಿವಾಂಬು ಸೀರೆಯ ಚುಂಬಿಸುವ ಜಲಧರನೆ ನೆಲಹೊನ್ನಂ । ಸಂಧಿ ೧೨ರಲ್ಲಿಯ ೪೦-೪೧ ನೇ ಪದ್ಯಗಳ ಚೆಂದುಟಿಯ ಚೆನ್ನೆಯರು....... ಸತಿಯ ಪೂಜೆಯ ನೊಂದೆಭಾವದಿ ಮಾಡಿ...' ಸುಂದರಿಯದಾನಂದದಲಿ ತಂದ ವಿಮಲೋದಕ...' ಇತ್ಯಾದಿ ಸಾಲುಗಳು ಮೋಹಕವೆನಿಸುತ್ತವೆ. ಕವಿಯು ಆಧ್ಯಾತ್ಮದ ಅಂಗಳದಲ್ಲಿ ಶೃಂಗಾರದ ದೈವಿಕತೆಯನ್ನು ಚೆಲುವಾಗಿ ನಿದರ್ಶಿಸಿರುವುದು ಕಾಣುತ್ತದೆ. ವೀರಶೈವದ ಷಟ್‌ಸ್ಥಲ, ಲಿಂಗಾಚಾರ, ಇಷ್ಟಲಿಂಗ ಪೂಜೆಯ ವಿವರ, ಕೃತಿ ರಚನೆಯ ಕಾಲ ಶಾ. ಶಕ ೧೮೪೬. ಗುರುಪಟ್ಟಾಧಿಕಾರದ ವಿಷಯ, ಸಾಸಲು ಗ್ರಾಮದ ಪ್ರಸ್ತಾಪ, ಇತ್ಯಾದಿಗಳು ಕೃತಿಯ ಚಾರಿತ್ರಿಕ ಮಾಹಿತಿಯನ್ನು ನುಡಿಯುವಂತಿವೆ. ಇಂಥ ಸರಳ ಹಾಗೂ ಚೆಲುವಿನ ಕೃತಿಯನ್ನು ಸಂಪಾದಿಸಿರುವ ಡಾ|| ಸಾಶಿಮ ಅವರು ಶ್ರೀ ಮರುಳಸಿದ್ದೇಶ್ವರ ಸ್ವಾಮಿಯ ಭಜನಮಾಲಾ, ಆರ್.ಎಸ್. ಮಹದೇವಶಾಸ್ತ್ರಿ ವಿರಚಿತ ಕುಪ್ಪೂರು ಗದ್ದುಗೆಯ ಗುರು ಮರುಳೇಶ್ವರ ಚರಿತೆಯ ಲಾವಣಿಯನ್ನು ಖಡೀಜಾಲ್-ವುತ್ತಾರ್ - ಶ್ಲೋಕ ವಿಭಾಗಗಳೊಡನೆ ಕೃತಿಯ ಕೊನೆಗೆ ನೀಡಿರುವುದು ಕೃತಿಯ ಮಾಹಿತಿ ಹಾಗೂ ವ್ಯಾಪಕತೆಯ ನಿದರ್ಶನವಾಗಿದೆ.

ಈ ಕಾವ್ಯ ಕೃತಿಗೆ ಸಂಪಾದಕ ಶ್ರೀ ಮರುಳಯ್ಯನವರು ಬರೆದ ಮುನ್ನುಡಿಯಲ್ಲಿ ಶ್ರೀ ಕುಪ್ಪೂರ ಗದ್ದುಗೆ ಮಠದ ನೆಲೆ, ಪರಿಸರ ಮಠಾಧಿಪತಿಗಳ ವ್ಯಕ್ತಿತ್ವ ಹಾಗೂ ಮಠಮಹಿಹದ ಕುರಿತು ಸಮುಚಿತವಾಗಿ, ಕಾವ್ಯದ ಹಿನ್ನೆಲೆಗೆ ಪೂರಕವಾಗಿ ತಿಳಿಸಿದ್ದಾರೆ. ಸದ್ಯದ ಕೃತಿಯ ಕವಿಯ ಚರಿತ್ರೆ, ಕೃತಿಸಾರಸ್ವತ ಶ್ರೀ ಮರಳುಸಿದ್ದೇಶ್ವರ ಮಹಾಪುರಾಣದ ಗುರುವಿನ ಮಹಿಮೆ, ಪವಾಡದ ಸಂಕೇತಗಳು ಹಾಗೂ ಆ ಕೃತಿಯ ಸಂಕ್ಷಿಪ್ತ ವಿಮರ್ಶೆಯನ್ನೂ, ಕವಿಯ ರಚನಾ ಪ್ರತಿಭೆ ಕುರಿತು ತೌಲನಿಕವಾಗಿ ಹೇಳಿದ್ದಾರೆ. ಕವಿಯ ಮೇಲೆ ಆಗಿರುವ ಹರಿಹರ, ರಾಘವಾಂಕ, ಷಡಕ್ಷರಿ ಹಾಗೂ ಚಾಮರಸನ ಪ್ರಭಾವವನ್ನು ದಕ್ಷವಾಗಿ ಗುರುತಿಸಿದ್ದಾರೆ. ಶ್ರೀಗುರು ಮರುಳಸಿದ್ದೇಶ್ವರರ ಕಾಲಮಾನವನ್ನು ಸಾಧಾರವಾಗಿ ಊಹಿಸಿರುವುದು ಗಮನಾರ್ಹ. ಆದರೂ ಎಚ್ಚರದ ಸಂದೇಹವನ್ನೂ ಮುಂದಿಟ್ಟಿದ್ದಾರೆ. ಮುನ್ನುಡಿಯ ಕೆಲಭಾಗಗಳು ಕಾವ್ಯ ಭಾಷೆಯ

ಸಡಗರದಲ್ಲಿ ಓದುವಂತಾಗಿದೆಯೆ ? ಎಂಬ ಅನುಮಾನ ಬಂದರೂ ಮುಂದೆ ಸಂಪಾದಕರ ಎಚ್ಚರಕ್ಕೆ ಲೇಖನಿ ವಿಧೇಯವಾಗುವುದೂ ಕಾಣುತ್ತದೆ.

ಹರಿಹರನ ಹತ್ತು ರಗಳೆಗಳು (೧೯೭೨)

ಈ ಕೃತಿಯನ್ನು ಸಂಪಾದಿಸುವಲ್ಲಿ ಹರಿಹರ ಕವಿಯ ಸ್ಥೂಲ ಜೀವನ ಚರಿತ್ರೆಯ ಜೊತೆಗೆ ಅವನ ಕೃತಿಗಳ ಕುರಿತು ಸಂಕ್ಷಿಪ್ತವಾದರೂ ಅಚ್ಚುಕಟ್ಟಿನ ಪರಿಚಯವನ್ನು ಮುನ್ನುಡಿಯಲ್ಲಿ ಮಾಡಿಕೊಟ್ಟಿದ್ದಾರೆ. ಇಲ್ಲಿ ಶ್ರೀ ಸಾ.ಶಿ.ಮ. ಅವರ ಸಂಶೋಧಕ ಮನಸ್ಸು, ಕಾವ್ಯದ ಲೆಕ್ಕಣಿಕೆ ತಮ್ಮತನ ತೋರಿವೆ. ಹರಿಹರನ ಕಾಲವಿಚಾರವನ್ನು ತಾರ್ಕಿಕವಾಗಿ ಮಂಡಿಸಿದ್ದಾರೆ. ಮುನ್ನುಡಿಯಲ್ಲಿ ಈ ರಗಳೆಗಳನ್ನು ಕುರಿತು ಅವುಗಳ ಮುಖ್ಯ ಲಕ್ಷಣ, ವರ್ಗೀಕರಣ, ವಸ್ತು ಹಾಗೂ ಅಗತ್ಯವಿರುವಷ್ಟು ವ್ಯಾಖ್ಯಾನ, ಸೋದ್ಧೃತಗಳೊಡನೆ, ಕಾವ್ಯ ಗಂಧದಲ್ಲಿ ಮಿಂದು ಮಂಡಿಸಿದ್ದಾರೆ. ತಮ್ಮ ಸಂಪಾದನೆಗೆ ಆರಿಸಿಕೊಂಡಿರುವ ಮಾದಾರ ಚನ್ನಯ್ಯನ ರಗಳೆ, ಕುಂಬಾರ ಗುಂಡಯ್ಯನ ರಗಳೆ, ಮಲುಹಣನ ರಗಳೆ, ಹಲಾಯುಧಯ್ಯನ ರಗಳೆ, ಓಹಿಲಯ್ಯನ ರಗಳೆ, ಭೋಗಣ್ಣನ ರಗಳೆ, ಉದ್ಭಟಯ್ಯನ ರಗಳೆ, ಮಲಯರಾಜ ದೇವರ ರಗಳೆ, ಬಾಣನ ರಗಳೆ ಹಾಗೂ ಪ್ರಾರ್ಥನೆಯ ರಗಳೆಗಳಲ್ಲಿ, ಪುರಾತನರ ರಗಳೆ ನೂತನ ಪುರಾತನರ ರಗಳೆ ಸ್ತೋತ್ರ ರಗಳೆಗಳನ್ನು ಆರಿಸಿಕೊಂಡು ಕಾವ್ಯ, ಶೃಂಗಾರ, ಭಕ್ತಿಯ ಮೂಲಧ್ವನಿಗಳನ್ನು ಸೆರೆಹಿಡಿದು ಓದುಗರಿಗೆ ಒಪ್ಪಿಸುವ ಅವರ ಸಂಪಾದನ ಧರ್ಮ, ಸಾಹಿತ್ಯಕ ಚೆಲುವನ್ನು ಮೈಗೂಡಿಸಿಕೊಂಡು, ಶಾಸ್ತ್ರದ ಚೌಕಟ್ಟುಗಳನ್ನು ನಿರ್ಮಿಸಿಕೊಂಡು ಒಂದು ರೀತಿ ಸಮನ್ವಯವನ್ನು ಸಾಧಿಸಿದ್ದಾರೆ. ಓದುಗರಿಗೆ ಆಪ್ಯಾಯವೆನಿಸುವಂತೆ ಮಾಡಿದ್ದಾರೆ. ಪ್ರತಿರಗಳೆಗಳಲ್ಲಿ ಶಬ್ದಗಳಿಗಿರುವ ಪಾಠಾಂತರಗಳನ್ನು ಸಮುಚಿತವಾಗಿ ನೀಡಿದ್ದಾರೆ. ಶಬ್ದಗಳಷ್ಟೇ ಅಲ್ಲ, ಇಡೀ ಸಾಲಿನ ಪಾಠಾಂತರವನ್ನು ನೀಡಿ, ಅರ್ಥ ಪುಷ್ಟಿಗೆ ಸೊಬಗಾಗುವಂತೆ ಮಾಡಿದ್ದಾರೆ.

ಪಾಠಾಂತರಗಳು ಇದ್ದಾಗ, ಯಾವ ಪಾಠ ಸೂಕ್ತ ಎಂದು ನಿರ್ಧರಿಸುವಲ್ಲಿ ಸಂಪಾದಕನ ನಿಶಿತಮತಿ ಕೆಲಸ ಮಾಡಬೇಕಾಗುತ್ತದೆ. ಉದಾಹರಣೆಗಾಗಿ ಚನ್ನಯ್ಯನ ರಗಳೆಯಲ್ಲಿ 'ಬೆಳೆಯಿಲ್ಲದಿಳೆಯಿಲ್ಲ 'ಬನವಿಲ್ಲದೂರಿಲ್ಲ' ಎನ್ನುವಾಗ (ಪು. ೧೨) 'ದಿಳೆ'ಯ ಸ್ಥಾನದಲ್ಲಿ 'ದೆಡೆ', 'ಬ' ಸ್ಥಾನದಲ್ಲಿ 'ಜ' ಎಂಬ ಪಾಠಾಂತರ ವಿದ್ದರೂ, ಸೂಕ್ತವಾಗಿ ಕಾಣುವುದು ಶ್ರೀ ಸಾ.ಶಿ.ಮ. ಅವರು ಸಂಪಾದಿಸಿರುವ ಸಾಲೇ ಆಗಿದೆ. ಅವರು ಸಹಜ ಕವಿ. ಅಂತಾಗಿ ಬೆಳೆ, ಇಳೆ ಎಂಬುದು ಸೂಕ್ತವಾಗಿ ಸಹಜವಾಗಿ ಹೊಳೆಯಬೇಕಾದ ಪಾಠವೇ ವಿನಾ 'ದೆಡೆ' ಅಲ್ಲ. ಅದಕ್ಕನುಗುಣವಾಗಿ 'ಬನ' ಇರಲೇಬೇಕು. ಹೀಗೆಯೇ ಎನ್ನ 'ಸುಧೆ'ಯಿದನಿದನ, ಚನ್ನನೆಂದನುತೆ, ಎಂಬಲ್ಲಿ 'ಗತಿ' ಎಂಬ ಪಾಠಾಂತರದ ಬದಲು ನೀಡಿರುವುದು, 'ಎನ್ನ' ನಿಧಿಯಿದ ನಿದನೆ ಚನ್ನನೆಂದೆನುತ ಎಂಬಲ್ಲಿ 'ಮತಿ' ಎಂಬ ಪಾಠಾಂತರದ ಬದಲು ಪರಿಗಣಿಸಿರುವುದು ಸಂಪಾದಕರ ತರ್ಕ ಹಾಗೂ ಕಾವ್ಯಪ್ರಜ್ಞೆಯ ದ್ಯೋತಕವೆನಿಸುತ್ತದೆ. ಚನ್ನಯ್ಯನ ರಗಳೆಯಲ್ಲಿ ಮರ್ತ್ಯದ ದನಿ ಕೈಲಾಸದ ನೃತ್ಯಂ ಸತ್ಯದ ದನಿ 'ಶಿವಲೋಕದ ನೃತ್ಯಂ

(ಕೈಲಾಸದ ಎಂಬ ಪಾಠವಿದ್ದರೂ', 'ಶಿವಲೋಕ' ವೆಂಬ ಶಬ್ದವನ್ನು ಸಂಪಾದನೆಗೆ ಪರಿಗಣಿಸಿರುವುದು ಗಮನಾರ್ಹವಾಗಿದೆ), ಮಲುಹಣದ ರಗಳೆಯಲ್ಲಿ, ವಿರಹಮಂ ತೆಗೆದು ಹರನ ಮೇಲಿಕ್ಕಿದಂ' ಹಲಾಯುಧಯ್ಯನ ರಗಳೆಯಲ್ಲಿ 'ತನ್ನ ಕೈಯರ್ಚನೆ ಶಿವಂಗೆ ಸವಿಯಾಗಿರಲು', ಓಹಿಲಯ್ಯನ ರಗಳೆಯಲ್ಲಿ 'ನಿಜಭಕ್ತನೆಂತೆಂತಾದನಂತಾಗಿ' ಭೋಗಣ್ಣನ ರಗಳೆಯಲ್ಲಿ 'ಶಿವಭಕ್ತರೊಳಗೆ ಜಾತಿಯ ವಿಚಾರಿಸುವುದಿಲ್ಲ', ಉದ್ಭಟಯ್ಯನ ರಗಳೆಯಲ್ಲಿ 'ಹರಣಂ ಶಿವಲಿಂಗನೆ ತಾನಾಗಿರೆ', ಮಲಯರಾಜ ದೇವರ ರಗಳೆಯಲ್ಲಿ 'ಸಕಲ ಜೀವರಾಶಿಗೆಲ್ಲ ಗಣ್ಯಪೂಜೆ ಪುಣ್ಯಪೂಜೆ', ಇಂಥ ಸಾಲುಗಳತ್ತ ನಮ್ಮ ಗಮನ ಸಾಗಿ ಹರುಷ ಒದಗುತ್ತದೆ. ಹರಿಹರನ ಶಬ್ದಲಾಸ್ಯ, ಲಲಿತ ಬಂಧುರ ಪದ ಲಾಲಿತ್ಯ, ಲಯದ ಸೊಬಗು ಕಾವ್ಯದ ಬನಿ ಎದ್ದು ಕಾಣುವಂತಹ ರಗಳೆಗಳನ್ನು ಅವನಲ್ಲಿ ಆರಿಸಿಕೊಂಡು ಹರಿಹರನ ದರ್ಶನವನ್ನು ಸಂಪಾದಕರು ಮಾಡಿಸಿರುವುದು ಸ್ತುತ್ಯಾರ್ಹ.

ತೋಂಟದಾರ್ಯ ವಚನ ವ್ಯಾಖ್ಯೆ (೧೯೯೦)

ಎಡೆಯೂರು ಶ್ರೀ ಸಿದ್ದಲಿಂಗ ಶಿವಯೋಗಿಗಳ ೭೦೧ ವಚನಗಳಿಗೆ ವ್ಯಾಖ್ಯಾನವನ್ನು ವಿಸ್ತಾರವಾಗಿ ಮಾಡಿ ಪದರ ಪದರಗಳನ್ನು ಬಿಡಿಸಿರುವ ಹಸ್ತಪ್ರತಿ ಕೃತಿಯನ್ನು ಡಾ॥ ಸಾ.ಶಿ.ಮ. ಅವರು ಸಂಪಾದಿಸಿ ಕೊಟ್ಟಿದ್ದಾರೆ. ವ್ಯಾಖ್ಯಾನಕಾರನ ಹೆಸರು ಎಲ್ಲಿಯೂ ಸಿಗದಾಗಿದ್ದರೂ ಅವನ ವ್ಯಾಖ್ಯಾನಕೃತಿಯ ಮಹತ್ವವನ್ನು ಸಂಪಾದಕರು ತಮ್ಮ ಮುನ್ನುಡಿಯಲ್ಲಿ ಪ್ರಸ್ತಾಪಿಸಿದ್ದಾರೆ. ಕೃತಿಯ ಆರಂಭಕ್ಕೆ ಶ್ರೀ ಸಿದ್ದಲಿಂಗೇಶ್ವರರ ಸಂಬಂಧದ ಶಾಸನವೊಂದನ್ನು ದಾಖಲಿಸಿರುವುದು ಸೂಕ್ತವಾಗಿದೆ.

ಶ್ರೀ ಸಿದ್ದಲಿಂಗ ಯತಿಗಳ ವಚನಗಳಲ್ಲಿ ನಿರ್ಗುಣ ಮೂರ್ತಿ, ಸಗುಣ ಮೂರ್ತಿ ಸ್ತೋತ್ರಗಳ ವಚನಗಳಿವೆ. ಗುರು ವಚನದಲ್ಲಿ ಅನಾದಿ ಸಂಸಿದ್ಧವಾದ ವೀರಶೈವಾಚಾರ ಸಂಪತ್ತು ಅಷ್ಟಾವರಣವನೆ ಲಿಂಗವ ಮಾಡಿಕೊಂಡು ಪಂಚಾಚಾರವ ಪ್ರಾಣವ ಮಾಡಿಕೊಂಡು ಏಕಲಿಂಗ ನಿಷ್ಠಾವ್ರತವಾಗಿ ಆಚರಿಸುವಂಥ ಪರಮ ವೀರಶೇವಾಚಾರದ ಸಂಪತ್ತು ಎಂಬ ವ್ಯಾಖ್ಯಾನವಿದೆ. ನಿರ್ವಾಣ, ಶುದ್ಧ, ವಿಶೇಷವೆಂದು ವೀರಶೈವ ಮೂರು ತೆರನಾಗಿರ್ಪುದು ಆ ಮೂರು ತೆರ ತಾನೇ ಆರು ತೆರನಾಗಿ ತೋರಿತ್ತು ಅದೆಂತೆಂದೆಡೆಃ ಭಕ್ತ ಮಹೇಶ್ವರ ಪ್ರಗಾದಿ ಪ್ರಾಣಲಿಂಗಿ ಶರಣೈಕ್ಯರಿಂದ। ಇಂತೀ ಆರು ಪ್ರಕಾರದಲ್ಲಿ ವರ್ತಿಸುತ್ತಿಹುದು ವೀರಶೈವ ಮಹಾಲಿಂಗ ಗುರು ಶಿವ ಸಿದ್ದೇಶ್ವರ ಪ್ರಭುವೆ ॥ ಈ ವಚನದ ಕುರಿತು ಸ್ಪಷ್ಟ ಹಾಗೂ ನಿಖರ ವ್ಯಾಖ್ಯಾನವನ್ನು 'ನಿರ್ವಾಣ ಹಾಗೂ ವಿಶೇಷ' ಎಂಬ ಭಾಗಕ್ಕೆ ವ್ಯಾಖ್ಯಾನಕಾರ ನೀಡಿದ್ದಾನೆ. ಆದರೆ 'ಶುದ್ಧ' ವೂ ವೀರಶೈವದ ಒಂದು ಬಗೆ ಎಂದು ವಚನದಲ್ಲಿಯೆ ಸ್ಪಷ್ಟವಿರುವಾಗ, 'ಶುದ್ಧಶೈವ - ವೀರಣ್ಣ ಬಸವಣ್ಣ ಮೊದಲಾದ ಸ್ಥಾವರ ಲಿಂಗದ ಭಜನೆಯ ಮಾಡಲ್ಪಟ್ಟಂಥವರುಗಳೆ ಶುದ್ಧಶೈವ ಎಂದಿರುವ ವ್ಯಾಖ್ಯಾನದಲ್ಲಿ ಸಾಮಂಜಸ್ಯ ಕಾಣುವುದಿಲ್ಲ. ಶುದ್ಧಶೈವ ಎಂಬ ಬದಲು 'ಶುದ್ಧ ವೀರಶೈವ' ಎಂಬ ಶಬ್ದವಿರಬೇಕಾಗಿತ್ತು. ಎನಿಸುತ್ತದೆ. ಪಾಠಾಂತರದ ಅಥವಾ ಪ್ರತಿಕಾರನ ದೋಷವಿದ್ದರೆ

ಹೇಳಲುಬಾರದು. ಸರ್ವ ಶೂನ್ಯ ನಿರಾಲಂಬ ಸ್ಥಲ, ಶೂನ್ಯಲಿಂಗಸ್ಥಲ, ನಿಕಟ ಲಿಂಗಸ್ಥಲ ಹೀಗೆ ಸ್ಥಲಗಳನ್ನು ನಿರ್ದೇಶಿಸಿ ನಂತರ ಆಯಾಸ್ಥಲದ ವಚನಗಳನ್ನು ಸರಳವಾಗಿ ನಿರೂಪಿಸಿ ತಾತ್ತ್ವಿಕ ಬಂಧವನ್ನು ತೋರಿಸುವುದು ವ್ಯಾಖ್ಯಾನಕ್ಕೆ ಗಾಂಭೀರ್ಯ ತಂದಿದೆ. ಹೀಗೆ ವಿವಿಧ ಸ್ಥಲಗಳ ವ್ಯಾಖ್ಯಾನ ನೀಡುವಲ್ಲಿ, ಹರಿವ ನೀರ ಮಧ್ಯದಲ್ಲಿ ಉರಿವ ಜ್ಯೋತಿಯ ಬೆಳಗ ನೋಡಿ ಕಂಡೆನಯ್ಯ ಎಂಬ ಬೆಡಗಿನ ಸಾಲುಗಳಲ್ಲಿ ಕಾವ್ಯ ಭಾವದ ತಾತ್ವಿಕ ಸೌಂದರ್ಯವೂ ಕಾಣಬರುತ್ತವೆ. ಸುರ ಚಾಪದಂತೆ ತೋರಿ ಅಡಗುವ ಅನಿತ್ಯ ತನುವ ನಿತ್ಯವೆಂದು - ಇಂಥ ವಚನದ ಸಾಲುಗಳು ಪ್ರಾಚೀನ ಕಾವ್ಯೋಪಮೆಯ ಪ್ರಭಾವದಂತೆ ಕಾಣುತ್ತವೆ. (ಶ್ರವಣಬೆಳಗೊಳದ ಕ್ರಿ.ಶ. ೨ನೇ ಶತಮಾನದ ಪ್ರಸಿದ್ಧ ಜೈನ ಶಾಸನದ 'ಸುರಚಾಪಂಬೋಲೆ' ಯೂ ಇಲ್ಲಿ ತಕ್ಷಣ ನೆನಪಿಗೆ ಬಂದರೆ ಅಸಹಜವೆನಿಸದು) 'ಕಾಲನ ಸುಟ್ಟು ಭಸ್ಮವ ಧರಿಸಿದೆನಯ್ಯಾ ಬಸವಣ್ಣ ನಿಮ್ಮಿಂದ ಕಾಮ್ಯನ ಸುಟ್ಟು ಭಸ್ಮವ ಧರಿಸಿದೆನಯ್ಯಾ ಬಸವಣ್ಣ ನಿಮ್ಮಿಂದ' ಎಂಬಲ್ಲಿ ಭಸ್ಮದ ಮಹತಿಯ ಕಾಲಾತೀತತೆಯನ್ನು ಮಂಡಿಸಿರುವ ಬಗೆ ಮನದುಂಬುತ್ತದೆ. 'ಲಿಂಗವಿದ್ದ ಹಸ್ತವೆ ಲಿಂಗಕ್ಕೆ ಪೀಠಕಾಣಿರೋ', 'ಪ್ರಸಾದ ಸದ್ಭಾವದಲ್ಲಿ ಎಂಜಲೆಂಬ ಸಂಶಯ ಸುಳಿಯಲಾಗದು', 'ಗಂಡಂಗೆ ನಾಚಿದ ಹೆಂಡತಿ ಮಕ್ಕಳ ಹ್ಯಾಂಗೆ ಹಡೆವಳಯ್ಯಾ', 'ಕತ್ತಲೆಯನೊಳಗೊಂಡ ಬೆಳಗಿನಂತೆ', 'ಲಿಂಗವನೊಳಕೊಂಡ ನಿರಂಗಸಂಗಿಗೆ ಅಂಗಗುಣವುಂಟೆ' 'ಲಿಂಗಕ್ಕೂ ಪ್ರಾಣಕ್ಕೂ ಭೇದವಿಲ್ಲವೆಂದರಿದು, 'ಗೇಣುದ್ದ ಒಡಲೊಳಗೆ ಬೆಟ್ಟದುದ್ದ ಮಾತು ಹುಟ್ಟಿತು ನೋಡಾ.... ವಾಚಾಳತತ್ವದಿಂದ ಉದರವ ಹೊರುವವರೆಲ್ಲ ಗುರುವೆ ?' 'ಹೊರಗೆ ವೇಷದ ಸೊಂಪು ಒಳಗೆ ರೋಷದ ಮೊಟ್ಟೆಯಯ್ಯಾ'', 'ಒಳಗೆ ನೋಡಿದರೆ ಒಳಗೆ ಬಯಲು ಹೊರಗೆ ನೋಡಿದರೆ ಹೊರಗೆ ಬಯಲು ನೋಡಾ' - ಹೀಗೆ ತಾತ್ವಿಕದ ಮುಕ್ತ ಸೌಂದರ್ಯದ ಹೊನಲಿನಂತೆ, ಬೆಡಗಿನ ಅಂತಸ್ಸತ್ವದ ವೈಖರಿಯಂತೆ ವಚನದ ಸಾಲುಗಳು ಹೆಪ್ಪುಗಟ್ಟಿ ಧರ್ಮೋ-ಸಾಂಸ್ಕೃತಿಕ ಅಚ್ಚುಕಟ್ಟನ್ನು ತೋರಿವೆ. ಸಾಮಾಜಿಕ ನೆರೆಗಳನ್ನು ಸ್ಪರ್ಶಿಸಿವೆ. ಸರ್ವಶೂನ್ಯ ನಿರಾಲಂಬ ಸ್ಥಲದಿಂದ ಷಟ್‌ಸ್ಥಲಗಳ ವಿವರಗಳನ್ನು ಅಡಕಗೊಂಡು ನಿರವಯಸ್ಥಲದ ವರೆಗೆ ೨೩ ಸ್ಥಲಗಳನ್ನೂ ೭೦೧ ವಚನಗಳಲ್ಲಿ ಹರಿಸಿರುವ ಓತಪ್ರೋತ, ಕಾವ್ಯದ ಭಾಷೆ. ಆಧ್ಯಾತ್ಮದ 'ಸಿರಿ ತುಂಬಿಕೊಂಡು ಬಂದಿರುವಂತೆ ವ್ಯಾಖ್ಯಾನದ ವೈವಿಧ್ಯವೂ' ಕಳೆಗೊಂಡಿದೆ. ಡಾ|| ಸಾಶಿಮ ಅವರು, ವಚನಗಳನ್ನು ಅಚ್ಚುಗೊಳಿಸುವಲ್ಲಿ, ವ್ಯಾಖ್ಯಾನವನ್ನು ಅಚ್ಚುಗೊಳಿಸುವಲ್ಲಿ ತೋರಿರುವ ಪರಿಶ್ರಮ, ವಚನಗಳ ಮುಖ್ಯ ಸಾಲುಗಳನ್ನು ಒತ್ತಕ್ಷರವಾಗಿ ಮುದ್ರಿಸಿರುವ ಬಗೆ, ವಚನಗಳ ಆಕಾರಾದಿ ಸಂಖ್ಯೆ ಹಾಗೂ ಪುಟಗಳನ್ನು ನೀಡಿರುವುದು ಸಮರ್ಪಕವೆನಿಸುತ್ತದೆ. ರಕ್ಷಾಪುಟ ಅರ್ಥವತ್ತಾಗಿದೆ.

ಶ್ರೀ ಸಿದ್ಧಲಿಂಗೇಶ್ವರ ಶತಕಂ (೧೯೯೦)

ಶ್ರೀ ಸಾ.ಶಿ. ಮರುಳಯ್ಯ ಅವರು ಶ್ರೀಮತಿ ನಾಗರತ್ನ ಶಾಂತಮಲ್ಲಪ್ಪನವರೊಡಗೂಡಿ ಸಂಪಾದಿಸಿರುವ 'ಮಾಗಡಿ ವೀರಪ್ಪಶಾಸ್ತ್ರಿ ವಿರಚಿತ

ಎಡೆಯೂರು ಶ್ರೀ ಸಿದ್ದಲಿಂಗೇಶ್ವರ ಶತಕಂ' ಎಂಬ ಕೃತಿ ಇದು. ಷಟ್ಪದಿಯ ಸಾಲುಗಳಲ್ಲಿ ಶ್ರೀಗುರುವಿನ ಸ್ತುತಿ ಓತಪ್ರೋತವಾಗಿ ಶತಕದವರೆಗೆ ಕವಿ ಹರಿಸಿರುವುದನ್ನು ಅಚ್ಚುಕಟ್ಟಾಗಿ ಸಂಪಾದಿಸಲಾಗಿದೆ. ಕವಿ ಗುರುಭಕ್ತನಷ್ಟೇ ಅಲ್ಲ ಶಿವಭಕ್ತನೂ ಹೌದು. ಗುರುಸಿದ್ದಲಿಂಗೇಶ್ವರರನ್ನು ಸ್ತುತಿಸುತ್ತ, ಜಯಕೋರುತ್ತ, ಮಹಿಮೆಗಳನ್ನು ಕವಿ ವರ್ಣಿಸಿದ್ದಾನೆ. ಬೋಳ ಬಸವೇಶ್ವರ ಮುಂತಾದ ಶಿಷ್ಯರೊಡನೆ ಅರುಣಾಚಲಕ್ಕೆ ಹೋಗಿ ಅರುಣಾಚಲೇಶ್ವರನ ಹಾರವನ್ನು ಕೊರಳಿನಲ್ಲಿ ಧರಿಸಿ ಪರಶಿವನ ಇಪ್ಪತ್ತೈದು ಲೀಲೆಗಳನ್ನು ಲಿಂಗೇಶ್ವರರು ತೋರಿದರೆಂದು ಕವಿ ವೈಭವೀಕರಿಸಿ ಹೇಳಿದ್ದಾನೆ. ಆದರೆ ಭಕ್ತಿಯ ಆಳ, ಆಗಲಗಳನ್ನು ತನ್ನ ಶತಕದಲ್ಲಿ ಅರ್ಥಪೂರ್ಣವಾಗಿ ಮಂಡಿಸಿದ್ದಾನೆ. ೫೫ನೇ ಪದ್ಯದಲ್ಲಿ ಭಕ್ತಿ ಎಂಬುದು ಚಿತ್ತ ಮುಕುರವನು ಬೆಳಗುವುದು ಶಿವತೋಷಣಂಗೆಯ್ವುದು, ಭಕ್ತಿಯೆಂಬುದಸಾಧ್ಯ ಸಾಧ್ಯವೆಂದೆನಿಸುವುದು, ಎಂಬ ಸಾಲುಗಳೆ ಈ ಶತಕದ ಕವಿಯ ಕಾವ್ಯ ಮನೋಧರ್ಮದ ವೇದಿಕೆಯಲ್ಲಿ ನೆಟ್ಟಿರುವ ಭಕ್ತಿಯ ಸಸಿಯ ಸ್ವರೂಪವನ್ನು ತಳಿಸುವಂತಿದೆ. ಶ್ರೀ ಸಿದ್ದಲಿಂಗಶ್ವರರನ್ನು ಸುತಿಸುವ ನೆಪದಲ್ಲಿ, ಅವರ ಪವಾಡಗಳನ್ನು ಸಾಧನೆ, ಸಿದ್ಧಿಗಳನ್ನು ನೀಡುತ್ತ ಆ ಕಾಲದ ಮಹಿಮರ ಜೀವನ ಪಾವನ ಚರಿತ್ರೆಯನ್ನೂ ನಮ್ಮ ಮುಂದಿಟ್ಟಿದ್ದಾನೆ ಎನಿಸುತ್ತದೆ. ಈ ಮಹಿಮೆಗಳ ಕತೆ ಕೇವಲ ರಂಜನೆಯ ಸರಕಾಗದೆ, ಶಿವಭಕ್ತಿಯ ನೆಲೆಗಳ ಸಂಕೇತವಾಗಿ ಬರುತ್ತವೆ. ವೀರಶೈವದ ಅಷ್ಟಾವರಣ, ತ್ರಿವಿಧದಾಸೋಹ, ಷಟ್‌ಸ್ಥಲದ ವಿಕಾಸವಂತಿಕೆ, ಪಂಚಾಚಾರದ ಶುದ್ಧ ನಡೆಗಳ ಪರಿಕಲ್ಪನೆಯನ್ನು ಈ ಶತಕ ಸರಳ ಸುಂದರ ಭಾವದ ಸಾಲುಗಳ ಮೂಲಕ ಪರಿಚಯಿಸುತ್ತದೆ.

ಶ್ರೀ ಸಾ.ಶಿ.ಮ. ಅವರ ಕಾವ್ಯ ಹೃದಯ, ಭಕ್ತಿಯ ಈ ಸೆಲೆಯನ್ನು ಸೆರೆಹಿಡಿದ ಬಗೆ ೧೦೧ ಷಟ್ಪದ ಪದ್ಯಗಳಿಗೆ ನೀಡಿರುವ ವ್ಯಾಖ್ಯಾನ - ಅರ್ಥದಲ್ಲಿ ವಿದಿತಗೊಂಡಿದೆ. ೯೩ನೇ ಪದ್ಯದಲ್ಲಿ ಬರುವ 'ಶೂನ್ಯ', 'ಷಟ್‌ಸ್ಥಲ' ಶಬ್ದಗಳನ್ನು ಹಾಗೆಯೇ ಹೇಳಿಬಿಡದೆ ಅವುಗಳ ಅರ್ಥವನ್ನು ಸರಳವಾಗಿ ಬಿಡಿಸಿ ಹೇಳಿ, ಏಕೋತ್ತರ ಶತಸ್ಥಲದ ಪಟ್ಟಿ ನೀಡಿರುವುದು ಸಂಪಾದನ ಕೆಲಸವನ್ನು ಆಳವಾಗಿ ಅಚ್ಚುಕಟ್ಟಾಗಿ ಮಾಡಿರುವುದಕ್ಕೆ ಸಾಕ್ಷಿ ಎನಿಸುತ್ತದೆ. ಶತಕವೇ ಸರಳಶೈಲಿ, ಆ ಪ್ರಭಾವಕ್ಕೆ ಸಿಲುಕಿ ಸಂಪಾದಕರೂ ಸರಳತೆಯ ಬೆಡಗನ್ನೂ ಅರ್ಥವಿವರಣೆಗಳಲ್ಲಿ ತಂದಿರುವುದು ಓದುಗನಿಗೆ ಚಿತ್ತ ಅರಳಿಸುವ ಅರಸಂಚೆ ಬಂದಂತೆ ಕಾಣುತ್ತದೆ.

ಪದ್ಯಗಳ ಅಕಾರಾದಿ ಸೂಚಿ ನೀಡಿ, ಪರಾಮರ್ಶಕರಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಅದು ದಿಢೀರ್ ಸೂಚಿ ಆಗದೆ, ಅರ್ಥಪೂರ್ಣ ಅಚ್ಚುಗಟ್ಟಿನ ಸೂಚಿ ಆಗಿದೆ. 'ಯಾರೋ ಕೊಟ್ಟ ಹಸ್ತಪ್ರತಿ ಆಕಸ್ಮಿಕವಾದರೂ', ಒಪ್ಪವಾಗಿ ಸಂಪಾದಿಸಿ ಒಪ್ಪಿಸಿರುವ' ಸಂಪಾದಕದ್ವಯರ ಪರಿಶ್ರಮ ಗಮನಾರ್ಹ. ಶ್ರೀ ಸಿದ್ದಲಿಂಗೇಶ್ವರರ ಲೀಲಾ ವಿಲಾಸ, ಕೇವಲ ಜೀವನ ಚರಿತ್ರೆಯಾಗದೆ, ಭಾವದ ಸುಮಗಳನ್ನು ಅರಳಿಸಿ ಭಕ್ತಿಯ ಕಂಪನ್ನು, ಜ್ಞಾನದ ಬೆಳಗನ್ನು, ವೈರಾಗ್ಯದ ನೆಮ್ಮದಿಯನ್ನು ತಂದು ಕೊಡುವ ಪ್ರತಿಮಾ ತರಂಗವೆನಿಸುತ್ತದೆ.

ಜಯದೇವಿತಾಯಿಯವರ ಅರುವಿನಾಗರದಲ್ಲಿ (೧೯೬೦)

ಶ್ರೀಶೈಲನಿಡುಮಾಮಿಡಿ ಪೀಠದ ಜಗದ್ಗುರು ಡಾ॥ ಶ್ರೀ ಜಚನಿ ಮಹಾ ಸನ್ನಿಧಿಯವರು ಪೀಠಾಧಿಕಾರವನ್ನು ಶ್ರೀ ವೀರಭದ್ರ ಚನ್ನಮಲ್ಲಸ್ವಾಮಿಯವರಿಗೆ ವಹಿಸಿಕೊಡುವ ಶುಭ ಸಂದರ್ಭದಲ್ಲಿ ಶ್ರೀಶೈಲದ ಸಾರಂಗಧರೇಶ್ವರ ಮಠದ ಜ॥ ಪರಮಶಿವರಾಜ ದೇಶಿಕೇಂದ್ರ ಮಹಾಸ್ವಾಮಿಗಳು ಪ್ರಕಟಿಸಿದ ಡಾ॥ ಸಾ.ಶಿ.ಮ. ಸಂಪಾದಿತ ಜಯದೇವಿ ತಾಯಿ ಲಿಗಾಡೆ ಅವರ ಸುಂದರ ಗಂಭೀರ ಕೃತಿ ಇದು.

ಡಾ॥ ಸಾ.ಶಿ.ಮರುಳಯ್ಯ ಅವರು ೮೬ ಪುಟಗಳ ಸುದೀರ್ಘ, ವಿಶ್ಲೇಷಣಾತ್ಮಕ ಅರ್ಥಪೂರ್ಣ ಸುಂದರ ಪ್ರಸ್ತಾವನೆ ಬರೆದಿದ್ದಾರೆ. ಬಹುಶಃ ಅವರ ಸಂಪಾದಿತ ಕೃತಿಗಳಲ್ಲಿ ಬರೆದಿರುವ ಪ್ರಸ್ತಾವನೆಗಳ ಪೈಕಿ ವಿದ್ವತ್‌ಪೂರ್ಣ, ಒಳನೋಟಗಳ ಪ್ರಸ್ತಾವನೆ ಇದಾಗಿದೆ ಎನಿಸುತ್ತದೆ. ಅವರ ಕಾವ್ಯ ಮೀಮಾಂಸಾ ವೈದುಷ್ಯ, ವೀರಶೈವ ಪಾರಿಭಾಷಿಕ ಶಬ್ದಗಳ ವಿವರಣೆ, ವಚನಗಳ ವ್ಯಾಖ್ಯಾನ, ಶಕ್ತಿವಿಶಿಷ್ಟಾದ್ವೈತ ಪರಿಕಲ್ಪನೆಗಳ ಅರ್ಥೈಸುವಿಕೆ, ಕಾವ್ಯ ಶಬ್ದಗಳ ಸಲಿಲತೆ ಇವೆಲ್ಲ ಅವರ ಪ್ರತಿಭಾ ಪಟಲಗಳ ಒಂದೊಂದು ಸುವರ್ಣರೇಖೆಗಳ ಕಾಂತಿಯಾಗಿ ಬಂದಿವೆ. ಇದು ಸಡಗರಿಸಿ ಹೇಳುವ ಮಾತಲ್ಲ. ನೈಜ ಸಂಗತಿಗಳ ನಿಷ್ಠದರ್ಶನ, ನಿರಂಜನ ನೋಟದ ನಿಲುವಿನಲ್ಲಿ ಆಡಬಹುದಾದ, ಬರೆಯಬಹುದಾದ ಮಾತು. ಶ್ರೀಮತಿ ಜಯದೇವಿತಾಯಿಯವರ ಆಧ್ಯಾತ್ಮ ದರ್ಶನದ ಸರಳ ತ್ರಿಪದಿಗಳ ಸತ್ವವು ಇಂಥ ಹೊಳಪಿಗೆ ಕಾರಣವಾಗಿದೆ, ಎನ್ನಬೇಕು.

ಪ್ರಸ್ತಾವನೆಯಲ್ಲಿ ವೀರಶೈವದ 'ಶೂನ್ಯ'ವನ್ನು, ಸಕಲವನ್ನೂ ಗರ್ಭೀಕರಿಸಿಕೊಂಡ ಸ್ಥಲ ಅಥವಾ ಶಿವ ಎಂದಿರುವ ಮರುಳಯ್ಯ ಅವರು ಎಲಿಯಟ್‌ನ ವ್ಯಕ್ತಿತ್ವ ನಿರಸನ ಸ್ಥಿತಿಗೆ ಹೋಲಿಸುತ್ತ ವೃಷ್ಟಿಸಕಲದಲ್ಲಿ ಬೆರೆಯುವುದು ಎಂದಿದ್ದಾರೆ. ವ್ಯಕ್ತಿತ್ವದ ಅಸ್ತಿತ್ವವೂ ಇರುತ್ತದೆ ಎಂಬ ಭಾವ ಅಲ್ಲಿದೆ. ಕಾವ್ಯ ಹಾಗೂ ಆಧ್ಯಾತ್ಮದ ಸಂದರ್ಭಗಳಿಗೆ ಅದರ ವ್ಯಾಖ್ಯಾನವನ್ನೊಡ್ಡಿದ್ದಾರೆ. ಸ್ಥೂಲ ಗ್ರಹಿಕೆಯಲ್ಲಿ ಲಿಂಗ ಬೇರೆ ಅಂಗ ಬೇರೆ ಎಂದರೂ ಸೂಕ್ಷ್ಮ ಗ್ರಹಿಕೆಗೆ ಅವು ಒಂದೇ ಆಗಿರುತ್ತವೆ. ಲಿಂಗವೇ ಶಿವ, ಅಂಗವೇ ಜೀವ. ಇವೆರಡರ ಸಂಯೋಜನೆಗೆ ಶಕ್ತಿ ಕಾರಣ. ಅಂತೇ ಜೀವ, ಶಿವ-ಶಕ್ತಿಯ ಅವಿಭಾಜ್ಯ ಅಂಶಗಳು. ಇಂಥ ಜೀವ, ದೇವ (ಶಿವ)ರ ಏಕಾನುಸಂಧಾನವೇ ಶಿವಾದ್ವೈತ, ಶಕ್ತಿ ವಿಶಿಷ್ಟಾದ್ವೈತ ಎಂಬ ಹೆಸರುಗಳಲ್ಲಿ ಕರೆಸಿಕೊಳ್ಳುತ್ತದೆ. ಅಂದರೆ ವೀರಶೈವದ ಸೈದ್ಧಾಂತಿಕ ನಾಮಗಳು ಅವು. ಸಾಮಾಜಿಕ ಆಯಾಮ ಪಡೆದಿದೆ. ಜಗತ್ತು, ಬ್ರಹ್ಮನಂತೆಯೆ ಅರ್ಥಾತ್, ಜೀವ, ಶಿವರು ಸತ್ಯರೆಂದು ವೀರಶೈವದ ಸಾಮಾಜಿಕ ಅರ್ಥವಾಗಿದೆ. ಅಧ್ಯಾತ್ಮಕ್ಕೆ ಸಾಮಾಜಿಕ ಅನ್ವಯವನ್ನು ತೋರಿಸುದ್ದು ವೀರಶೈವ ಎಂದರ್ಥ. ಅದಾಗಿ Social relevance ಅದಕ್ಕೆ ಉಂಟು. ಜೀವ ದೇವನಾಗುವ, ನರ ಹರನಾಗುವ, ಆತ್ಮ ವಿಕಾಸದ ಮಜಲುಗಳನ್ನು ಅದು ವಿಕಸನ ದರ್ಶನವಾಗಿ ತೋರಿದೆ. ಏಕದೇವೋಪಾಸನೆಯ ಪರಿಪಕ್ವ ಫಲ ಇದು. ಮರ್ತ್ಯವನ್ನು ಮರೆಯದ, ತೊರೆಯದ, ಇಹವನ್ನು ಮಹವನ್ನಾಗಿ ಮಾಡಿಕೊಳ್ಳುವ

ಸಿದ್ಧಾಂತ ವೀರಶೈವದ್ದು. ಮಾನವೀಯ ಮೌಲ್ಯಕ್ಕೆ ಮಣೆ ಹಾಕುವ ಕಾರ್ಯನಿಷ್ಠೆಯದು ಎಂದೆಲ್ಲ ಸಂಪಾದಕರ ವಿಶ್ಲೇಷಣೆ ಹರಿದಿದೆ.

ಇದು ಜಗದೊಳಗಣ ಕೂಡಲಬಾಳು, ಜಗದೊಳಗಣ ನಿರಂಜನ ನೋಟ ಸಾಧಿಸುವ ಸಮಾಜೋ ಅಧ್ಯಾತ್ಮಿಕ ಕಲೆ, ಕಳೆ. ವೀರಶೈವ ಮೀಮಾಂಸೆ ಹೀಗೆ ನಮ್ಮ ಬದುಕಿನ ಸಂಗತಿಗಳು ಹಾಗೂ ಆಚಾರ ವಿಚಾರಗಳ ಶುದ್ಧತೆಗೂ ಗಮನವನ್ನು ಥಾಳವಾಗಿಸುತ್ತದೆ.

ಇಂಥ ಧರ್ಮ-ತನ್ನಂತೆ ಪರವನ್ನು ಕಂಡುಕೊಳ್ಳುವ ದರ್ಶನ, ತಾಯಿ ಜಯದೇವಿ ಲಿಗಾಡೆಯವರಲ್ಲಿ ಹೂತು ಹೂವಾಗಿ ಫಲಿತು ಪಕ್ವವಾದ ಬಗೆಯನ್ನು ಅವರ ವಚನ ವೃಂದಾವನದಲ್ಲಿ, ವಚನ ಶಿವೋದ್ಯಾನದಲ್ಲಿ ಸಂಪಾದಕರು ಕಂಡು ಸಹೃದಯರಿಗೆ ಸೊಂಪಾಗಿ ನೀಡಿದ್ದಾರೆ.

'ಬೆಳಕು ಹರಿದಾಗ... ಕುಳಕೋಟಿ ಜೀವ ಎಚ್ಚೆತ್ತು ನೆನದಾವ ಅಳವಿಲ್ಲದ ದೇವದೇವನ' ಎಂಬಲ್ಲಿ ಬೆಳಕಿನ ದನಿಗೆ ಹರುಷದಿಂದ ಎಚ್ಚೆತ್ತ ಜೀವ ಸೀಮಾತೀತ ದೇವನೀಡಿದ ಸೌಭಾಗ್ಯವನ್ನು ನೆನೆಯುತ್ತದೆ, 'ನಂಬಿದ ಕಣ್ಣುಗಳು ಉಕ್ಕೇರಿ ಸುರಿವವು ಕಂಬನಿ ಒರೆಸಲು ಬಾರಯ್ಯ' - ಶಿವನ ನಂಬಿ ಕರೆದು ಕಂಡು ಸುರಿಸಿದ ಆನಂದ ಬಾಷ್ಪ ನೇವರಿಸಲು ಶಿವನ ಹಸ್ತವೆ ಬೇಕು. ಕಾರಣ ಅದು ಮಂಗಳಕರ. ಮಂಗಳದ ಹನಿಯನ್ನು ಮಂಗಳ ಹಸ್ತವೇ ನೇವರಿಸಬೇಕು. 'ಮಾವಿನ ಮರ ತುಂಬ ಹೂವ ಹರಡಿದದ್ಯಾರ । - ಜಗತ್ತಿನ ಚೈತನ್ಯ ಶಕ್ತಿ ಅರಳಿದ ಬಗೆ ಕಂಡು ಅಚ್ಚರಿಗೊಳ್ಳುವ ಮನಸು ಸುರಿಸಿದ ಉಲ್ಲಾಸದ ಉಕ್ತಿ ಇದು. 'ಮಹಾಲಿಂಗ ಮಲಗಿದ ಮಹಾಕಾಶದಿ ಅಹಹಾ ತೊಟ್ಟಿಲ ತೂಗುವುದು - ಕಂಡೆನಾ ಇಹಪರದ ಆಚೆಯ ||' - ಎಂಬಲ್ಲಿ ಚಿದಾನಂದ ಪರಾಕಾಶದ ಪಾರಮ್ಯ ಔನ್ನತ್ಯ ಕಂಡುದಲ್ಲದೆ ಶುದ್ಧ ಶೂನ್ಯದ ಒಳಗು ಹೊರಗನ್ನು ದರ್ಶನಗೈದ ಮಹಾ ತಾಯಿಯ ಕಣ್ಣು, ಜಗತ್ತಿನ ಕಣ್ಣಾಗಿದೆ, 'ದೇವನ ನೆನೆವಾಗ ಯಾವುದೂ ಉಳಿಯದೆ.... ಅವಿರಳ ದಿವ್ಯ ಚಿಲ್ಲಿಂಗ ಕಂಡೀತು' - ಭಕ್ತಿ ಬಲಿದು ವಿಕಸನ ಸ್ಥಲಗಳೇರಿ ಶಿವಸಾನ್ನಿಧ್ಯಗೊಂಡಾಗ ನಿಜಸುಖ. ಆ ಲಿಂಗದರ್ಶನ ಮನಸ್ಸಿನ ಬೆಳಕು. 'ಆತ್ಮದ ಶಾಂತಿ, 'ಹುಟ್ಟಿದ ಕುಲವಿಲ್ಲ ಬಟ್ಟೆಗೆ ಬೆಲೆ ಇಲ್ಲ.... ಶಿವನಲ್ಲಿ ಬಿಟ್ಟಿ ಇಡಬೇಕು ನಿಶ್ಚಯ' - ಹುಟ್ಟಿಗೆ ಅಂಟುವ ಯಾವುದೇ ಸೂತಕವಿಲ್ಲ. ನಿಶ್ಚಲ ಶುದ್ಧ ಬಯಲ ಆವಿಷ್ಕಾರ ಅರ್ಥ. ಹುಟ್ಟದ ಜೀವ ನಡೆಸಬೇಕಾದ ಕಾಯಕ ಶುದ್ಧ ನಡೆಮುಡಿಯದು. ಕಾಯ ಶುದ್ಧವಾಗಿರುವಲ್ಲಿ ಕಾಯಕವು ಶುದ್ಧವಲ್ಲವೆ ! ಆಗ ಶಿವನತ್ತ ನೋಟ ಕಾಯಕ ತಾನಾಗಿ ಸೊಂಪಿನಿಂದ ತುಂಬಿಕೊಳ್ಳುತ್ತದೆ. 'ಏನು ಹಾಸಲಿ ತಾಯಿ ಮನವಲ್ಲಭ ಬಂದಾನ' - ಶಿವ ಬಂದಾಗ ಎನು, ಹೇಗೆ ಉಪಚಾರ ಎಂಬುದೊಂದೂ ನೆನಪಿಗೆ ಬರದಷ್ಟು ಭಕ್ತಿಯ ಮಜ್ಜನ. ಕೊನೆಗೆ ಶಿವನೇ ಎಚ್ಚರಗೊಳಿಸಿದಾಗ ಕಾಯಕದ ಬಗೆ ಶಿವಗೊಲುಮೆಯಾಗುತ್ತದೆ. ಶಿವ ಹಾಗೂ ಜೀವ ಮುಖಾಮುಖಿ ಬೆಳಗಿನೊಳಗಾಗಿ ವಿಹರಿಸುತ್ತಾರೆ. ದಾಸೋಹದ ಸರ್ವಾರ್ಪಣೆ ಶಿವಗಿಟ್ಟ ಕೈಂಕರ್ಯವಾಗುತ್ತದೆ. 'ತೆರೆಗಳು ಬಂದಂತೆ ಬರುವುದು ಸಂಕಟ!

ಧೀರತನದಿಂದ ಹಡಗವ ನಡೆಸುತ್ತ ಸ್ಮರಿಸು ಸಿದ್ದರಾಮನ ನಾಮವ' - ತಾಯಿಯವರ ಆರಾಧ್ಯದೈವ ಪರೀಕ್ಷೆ ಇಟ್ಟಾಗ ನೇರವಾಗಿ ನೆಲೆಗೊಳ್ಳುವ ಸ್ಥೈರ್ಯ ಭಾವ, ಸಿದ್ಧರಾಮನ ಕರುಣೆಯ 'ಕೂಸು, ಮನವು ನಿರ್ಮಲಗೊಂಡಾಗ ಭಾವದ ಘನತೆ ಹೇಳಲು ಅಳವಲ್ಲ.'; ಅಂತರಂಗದ ಶುಭ್ರತೆ, ಶುದ್ಧತೆ ಪಲ್ಲವಿಸಿದಾಗ, ಭಾವದ ಶ್ರೀಘನದ ಬೆಳಕು ಭಕ್ತನ ಮೈಯನ್ನಷ್ಟೆ ಅಲ್ಲ, ಬದುಕನ್ನೇ ಆವರಿಸುತ್ತದೆ. ಇದು ಶಿವಪ್ರಣವದ ಬಗೆಯಾಗಿ ಸರ್ವಾಂಗ ಲಿಂಗವಾಗುವ ಹದುಳ, ಸೊಡರ ಬೆಳಕಿನಲಿ ಎಡವುದೂ ಯಾಕಿನ್ನು, ಕಡುಕತ್ತಲೆ ಕಳೆದು ಬೆಳಕಾಯ್ತು - ತಾಯವ್ವ ಜಡತನಬಿಟ್ಟು ಬಯಲಾಯ್ತು' - ಬೆಳಕೇ ಮನೆಯ ಬಾಗಿಲಿಗೆ ಬಂದಾಗ ಎಚ್ಚರ ಬೇಡವೇ ! ಒಳಗಿನ ಕತ್ತಲೆಯೆಲ್ಲ ಕಳೆದಿರುವಾಗ ಬೆಳಗಿನೊಡನೆ ಬಯಲಾಗುವುದು ಜೀವಕ್ಕೆ ಇರಬೇಕಾದ ಚೈತನ್ಯ ಪಲ್ಲವ, 'ತಾಯತನದ ತಂಪು ಹಾಯಾಗಿ ಬೀಸುವುದು' - ಜಯದೇವಿ ತಾಯಿಯವರು, ತಾಯಾಗಿ ತಾವು ಕಂದಮ್ಮಗಳಿಗೆ ನೀಡಿದ ತಂಪು, ಅನುಭವಿಸಿದ ತಂಪು, ಜಗತ್ತಿನ ದೇವನಾದ ಶಿವನ ಕರುಣಾಮಯ ತಣ್ಪು ಒದಗಿದಾಗ ತೋಲನಿಸಿಕೊಂಡಿರುವ ರೀತಿ ಅದ್ಭುತ; 'ಹಸಿದಿದೆ ಎನ್ನ ಹೊಟ್ಟೆ ತುಸು ನೀಡಿದರೆ ಸಾಕು । ಪ್ರಸಾದ ಬಟ್ಟಲ ತುಂಬುವದು - ಸರ್ವಾಂಗ ಪಸರಿಸುವುದು ಸಿದ್ಧಪ್ರಸಾದ ॥' ಹಸಿದ ಹೊಟ್ಟೆ ಎಂದರೆ ಅಖಂಡ ನೈವೇದ್ಯ ತುಂಬುವ ಪಾತ್ರೆಯಲ್ಲ. ಶಿವನ ಪ್ರಸಾದ ತುಸುವಾದರೂ ಆ ಪ್ರಸಾದ ಭಾವ ತೃಪ್ತಿ ತರುವ ಸಂಕೇತವಾಗುತ್ತದೆ. ಸಂಪಾದಕರು ಇದನ್ನು ಬಹಳ ಸೂಕ್ತವಾಗಿ ನಮ್ಮ ಉದರವು ಪ್ರಸಾದದ ಬಟ್ಟಲು' ಎಂದು ಕಾವ್ಯದ ಹದವಿಟ್ಟು ಹೇಳಿದ್ದಾರೆ; ಅಷ್ಟಾವರಣದ ಅಂಗವಿಟ್ಟು ಆರೈಕೆ ಮಾಡಿದ್ದಾರೆ. ಇಂಥ ತೃಪ್ತಿಯೆ ಭಕ್ತನ ಅಂಗವನ್ನೆಲ್ಲ ತುಂಬುತ್ತದೆ. ಇದು ತಾಯಿಯವರ ಅನುಭಾವ.

'ಎದೆಯ ಬಟ್ಟಲದೊಳು ಸದಯ ಸದ್ಗುಣದ ಸುಧೆ ತುಂಬಿ ತಂತಾನೆ ತುಳುಕಿತ್ತು - ನೋಡವ್ವ' ಎಂದಿರುವ ತಾಯಿಯವರ ಮಾತಿನಲ್ಲಿ ಗುರುಕೃಪೆಯ ಚಿಲುಮೆ ಉಕ್ಕಿದೆ ಎಂಬ ಆನಂದವಿದೆ. ಅಂತೇ ಗುರುವಿನ ಕರುಣೆಯ ಅರುಣೋದಯವಾಗಲು ಕರಣೇಂದ್ರಿಯಗಳು ಶುಚಿಯಾದುವು.' ಎಂದು ಕತ್ತಲೆಯ ಕೊಳಕನ್ನು ತವಿಸುವ ಗುರು ನೇಸರರನ್ನು ಕಂಡುಕೊಳ್ಳುವ ಹವಣಿಕೆ. 'ಅಂತರಂಗದ ಪ್ರಭೆ ಹಂತ ಮೀರಿ ಹೊರಚೆಲ್ಲಿ ಸಂತತ ತಾನೆ ಬೀರುವುದು. ಒಳಹೊರಗು ಶಾಂತಮಲ್ಲನ ತೇಜ ಓಜವಹುದು', ಎಂಬ ತಾಯಿಯವರ ಭಾವಯೋಗ, ಶಿವಯೋಗಿಯ ಒಳಬೆಳಗಿನ ಪ್ರಭಾವಳಿಯಲ್ಲಿ ಮಿಂದು ಈ ಸಾಲುಗಳನ್ನು ಚಿಮ್ಮಿಸಿವೆ.

'ದೇವನ ನೆನೆದಾ- ಯಾವುದು ಭಯವಿಲ್ಲ, ಸಾವುನೋವುಗಳ ತೊಡಕಿಲ್ಲ - ಸಂಸಾರ ಬೇವು ಬೆಲ್ಲಾಗಿ ಪರಿಣಮಿಸಿ' - ಎಂದಿರುವಲ್ಲಿ ದೇವಸನ್ನಿಹಿತವೆಲ್ಲ ಬದುಕಿನ ಮಗ್ಗುಲುಗಳನ್ನು ಮಾರ್ದವವಾಗಿಸುತ್ತದೆ. ಸ್ಥೈರ್ಯದ ಸೆಲೆಯನ್ನು ತುಂಬಿಕೊಡುತ್ತದೆ. ನಿರಂಜನ ನಿರ್ಲಿಪ್ತ ನೆಮ್ಮದಿಯನ್ನು ನೆಲೆಯಾಗಿಸುತ್ತದೆ. ಶಿವನ ದಿಟ್ಟಿ ಜೀವದ ಶರೀರವನ್ನೆಲ್ಲ ಪ್ರಭೆಗೂಡಿಸುತ್ತದೆ ಎಂಬ ಅನುಭಾವದ ಹರಕೆ ಇದೆ.

ಇದಕ್ಕಾಗಿ ಸಂಪಾದಕರು 'ಶಿವನ ನಿಲುವು ಕಣ್ಣಿನ ಮರೆಯಲ್ಲಿ ಅಡಗಿದ ಪ್ರಭೆಯಂತೆ' ಎಂದ ತಾಯಿಯವರ ಅನುಭಾವದ ಸಿರಿಯತ್ತ ನಮ್ಮ ಗಮನ ಸೆಳೆದು ಸಾರ್ಥಕವೆನಿಸಿದ್ದಾರೆ. ಸಂಪಾದಕರ ಪ್ರಸ್ತಾವನೆಯನ್ನು ಓದುವಾಗ ಇಂತೆಲ್ಲ ಭಾವನೆಗಳ ಪೂರ ಮುನ್ನುಗ್ಗುತ್ತದೆ. ತಾಯಿಯ ಸೈದ್ಧಾಂತಿಕ, ಕಾವ್ಯಾತ್ಮಕ ಆರೈಕೆಗಳನ್ನು, ಬಸವಣ್ಣ, ಅಲ್ಲಮ, ಅಕ್ಕ, ಚನ್ನಬಸವಣ್ಣ, ಮೋಳಿಗೆ ಮಾರಯ್ಯ, ಸರ್ವಜ್ಞ, ಅಂಬಿಗರ ಚೌಡಯ್ಯ ಅವರ ವಚನಗಳು ಹಾಗೂ ಜಾನಪದ ಗೀತೆಗಳನ್ನು, ತಾಯಿಯವರ ಅನುಭಾವದ ಸಾಲುಗಳಿಗೆ ಬೆಂಬಲ ಭಾವದ ಹಿನ್ನೆಲೆಯನ್ನು ಸಮುಚಿತವಾಗಿ ವಿಶ್ಲೇಷಿಸಿ, ಆಳವಾದ ಚಿಂತನೆ, ವ್ಯಾಖ್ಯಾನಗಳನ್ನು ದೃಢವಾಗಿ ನೀಡಿದ್ದಾರೆ. ಸಂಪಾದಕರ ಭಾಷೆ, ಭಾವ, ತಾಯಿಯವರ ಅರುವಿನಾಗರದಲ್ಲಿ ಮಿಂದು ಅದೇ ಅನುಭಾವದ ಹಾಗೂ ಕಾವ್ಯದ ಸೋನೆಯನ್ನು ತುಂಬಿ ಹರಿಸಿದೆ. ಈ ಪ್ರಸ್ತಾವನೆಯನ್ನು ಓದುವುದೇ ಒಂದು ಚೆನ್ನ, ಅನುಭವ ಎನ್ನುವುದೇ ಒಂದು ಜೊನ್ನ. ಅಷ್ಟು ಭಾವ ಬಂಧುರ, ಕಾವ್ಯ ಸಂಗಮ, ಪದಶೈಲಿಯ ಲಾಸ್ಯ. ಇಷ್ಟೆಲ್ಲ ಹೇಳಿದರೂ ಸಂಪಾದಕರು ಕಾವ್ಯಪರ ಭಾಷೆಗಳಿಗೆ ಹೆಚ್ಚು ಒತ್ತು ನೀಡಿದ್ದಾರೆ ಎಂಬ ಅನುಮಾನ ನುಸುಳುವುದೇನೋ ಅಸದಳವಲ್ಲ, ಅದೂ ಅರ್ಥವಾಗಿ ಕೃತಿಯ ಮಹತ್ತನ್ನು ಎತ್ತಿ ಹಿಡಿದಿದೆ ಎಂಬುದೂ ದಿಟ.

ಸಂಪಾದಕರು ಪ್ರಸ್ತಾವನೆಯಲ್ಲಿ ತಾಯಿಯವರ ಕವಿಹೃದಯವನ್ನೂ, ದ್ರಷ್ಟಾರೆಯ ಸೃಷ್ಟಿಯನ್ನು, ಸರಳ ಸುಂದರ ನುಡಿಗಳ ಮೂಲಕ ಸಮರ್ಥ ಅಭಿವ್ಯಕ್ತಿಯನ್ನು, ಬಳಸಿರುವ ತ್ರಿಪದಿಯಲ್ಲಿ ತಂದಿರುವ ಅನುಭಾವದ ಅಭೀಪ್ಸೆ, ಅಕ್ಕರೆಯನ್ನು, ಷಟ್‌ಸ್ಥಲದ ಸರಳ ನಿರೂಪಣೆಯನ್ನು ಗುರುತಿಸಿರುವ, ಅರ್ಥೈಸಿರುವ ಬಗೆ ಮನಮುಟ್ಟುತ್ತದೆ.

ತಾಯಿಯವರು 'ಶ್ರದ್ಧಾ' ಶೀರ್ಷಿಕೆಯಲ್ಲಿ 'ತುಂಬಿಯ ಹೂಗಳು । ತುಂಬಿದ ಹೃದಯದಿ ಸಾಂಬನಿಗರ್ಪಿಸಿ ಸಂತಸದಿ - ನಲಿಯುವ ಕಂಬನಿಯ ಮಜ್ಜನ ಎರೆದೆ', ಎಂದು ಸರಳ ಪೂಜೆಯ ಅಸಾಮಾನ್ಯತೆಯನ್ನು ಕಾಮ ಶರೀರದಲ್ಲಿ ತೋರಿ, ಭಕ್ತಳ ಶ್ರದ್ಧೆಯ ಸೊಂಪಿನ ಹಿರಿಮೆಗೈದಿದ್ದಾರೆ; 'ನಿಷ್ಠಾ' ಶೀರ್ಷಿಕೆಯಲ್ಲಿ 'ಇಷ್ಟದೇವತೆಯಲ್ಲ । ನಿಷ್ಠೆ ಇದ್ದಮೇಲೆ ದುಷ್ಟ ದುರುಜನಕೆ ಅಂಜುವರೆ - ಏ ಮರುಳೆ ಕಷ್ಟಕಾರ್ಪಣ್ಯಕ್ಕೆ ಒಳಗಾದಿ', ಎನ್ನುವ ಅದರ ಮಾತು ಅಕ್ಕನ ಸ್ಥೈರ್ಯ, ದೃಢತೆಯನ್ನು ತೋರುತ್ತದೆ. ಇಷ್ಟದೇವತೆಯಲ್ಲಿ ಮಾಹೇಶ್ವರ ಸಂಬಂಧವನ್ನು ತೋರುತ್ತದೆ. 'ಅವಧಾನ'ವೆಂಬ ತಲೆಬರೆಹದಲ್ಲಿ 'ಪ್ರಸಾದಿಯಾದವರು ! ಪ್ರಸನ್ನತೆ ಸಾಧಿಸಿ ದಾಸೋಹ ಮೂರುತಿ ಆಗುವರು - ಜೀವನವು ಪ್ರಸಾದವೆಂದು ಭಾವಿಸಿ', ಎಂದಿರುವ ತಾಯಿಯವರು ಪ್ರಸಾದಿ ಸ್ಥಲದ ಇಡೀ ಭೋಗ ಪವಿತ್ರ ಗುಣವನ್ನು ನಿದರ್ಶಿಸಿದ್ದಾರೆ. ಪ್ರಸನ್ನತೆಯಿಂದ ದಾಸೋಹವ ಮಾಡಿದರೆ ಬದುಕೇ ಪರರಿಗೊಡ್ಡುವ ಉಪಕಾರವಾಗುತ್ತದೆ. ಸಕಲಜೀವಿಗಳಿಗೆ ಲೇಸಿನ ಹಸನು ತರುತ್ತದೆ ಎಂಬ ಸೊಗಸಿನ ಭಾವವನ್ನು ದರ್ಶನವಾಗಿ ನೀಡಿದ್ದಾರೆ. ಭಕ್ತಿಯ ಬೌದ್ಧಿಕ ವಲಯವನ್ನು ಸೂಚಿಸಿದ್ದಾರೆ; 'ಅನುಭಾವ' ಎಂಬ ತಲೆ ಬರಹದಡಿಯ ತ್ರಿಪದಿ, 'ಅಂತರಂಗದ ಪ್ರಭೆ । ಹಂತ ಮೀರಿತ್ತಾಗ ಸಂತತದಿ

ಒಳಹೊರಗೆ ಬಿರಿದೆ - ನಾನಾಗ ಸಂತಸದಿ ಸ್ವಯಲಿಂಗ ಕಂಡೆನ' ಎಂಬಲ್ಲಿ ಮನಸ್ಸಿನ ಒಳಗೆ ಹೊರಗೆ ಬೆಳಕಿನ ಅನುರಣನ ಅಂತರಂಗದ ಮಹಾ ಬೆಳಗಿನ ಫಲವಾಗಿ ಬೆಳೆದಿದೆ. ಅಂಥ ಶುಭೋದಯದಲ್ಲಿ ಪ್ರಾಣಲಿಂಗದ ದರ್ಶನವಾಯಿತು. ಪ್ರಾಣದೊಡನೆ ಲಿಂಗ ಮುಹೂರ್ತವಾಗಿತ್ತು. ಉಸಿರಿನಲ್ಲಿ ಲಿಂಗದ ಬೆಳಕಿನ ಗಾಳಿ ಪ್ರಾಣವನ್ನು ಸಂತೃಪ್ತಿಗೊಳಿಸಿತ್ತು. ಆಗಲೇ ದಿವ್ಯ ಬೆಳಕಿನ, ಭವ್ಯಕಾಂತಿಯ ಭೋಗ ಜೀವಿಗೆ ಒದಗುತ್ತದೆ ಎಂಬ ಅನುಭಾವವಿದೆ; 'ಆನಂದ' ಎಂಬ ಶೀರ್ಷಿಕೆಯಡಿಯಲ್ಲಿ 'ಅಳವಲ್ಲದ ಲಿಂಗ । ಬಳಕೆಗೆ ತಂದನು ಚುಳುಕ ಮಾಡಿ ಕೈಗೆಕೊಟ್ಟನು - ಶ್ರೀಗುರು ಅಳಿಯದ ಅರಿವು ತುಂಬಿದ' ಎಂಬ ತ್ರಿಪದಿಯ ಮೂಲಕ ತಾಯಿಯವರು ಎಟುಕದ ಶಿವಕೃಪೆಯನ್ನು ಸಾಮಾನ್ಯರಿಗೂ ಸಲ್ಲಿಸುವ ಮಣಿಹ ಶ್ರೀಗುರುವಿನದು. ಅದು ಶಾಶ್ವತವಾದ ಅರಿವನ್ನು ತುಂಬಿಕೊಡುವಂಥಹದು ಅದನ್ನು ಸಾಧಿಸುವುದೇ ಒಂದು ಶಿವಯೋಗ, ಶರಣ, ಶರಣೆಯರ ಶಿವಸ್ಥಲ ತೃಪ್ತಿಯ ಸೊನೆ ಎಂಬ ಭಾವ ತೋರಿದ್ದಾರೆ; 'ಸಮರಸ' ಎಂಬ ತಲೆಬರಹದಲ್ಲಿ 'ನಾನೆತ್ತ ಹುಡುಕಲಿ । ತಾನೆ ನಾನಾದಾಗ ತನುವಿನ ಹಂಗು ಹರದಿತ್ತು - ದೇವನಲಿ ಮನಚಿತ್ತ ಒಂದಾಗಿ ಮೆರೆದಿತ್ತು', ಎಂಬ ತ್ರಿಪದಿಯ ಸಾಲುಗಳು ದೇವನಲ್ಲಿ ಒಂದಾಗಿಬಿಡುವ ಲಿಂಗಯ್ಯನಲ್ಲಿ ಅಂಗವೇ ಆಗಿಬಿಡುವ ಪರಿಪೂರ್ಣ ಐಕ್ಯ ಸ್ಥಿತಿಯನ್ನು ತೋರುವಂಥ ಶಿವಸೊಲ್ನುಡಿ, ಶಿವನೊಳ್ನುಡಿಯಾಗಿವೆ. ತನುವಿನ ಹಂಗು, ದೇವನಲ್ಲಿ ಅರ್ಥಾತ್ ಶಿವನಲ್ಲಿ ಬೆರೆತಾಗ ಸಂಗಮ ಸಾಗರದ ಬತ್ತದ, ಬಯಲಿನ ಬೆಳಗು ತುಂಬಿದ ನಿರಂಜನ ನೀಳ ನಿಲುವು, ಇಂಥ ಚಿತ್ತದ ದೇವ ಸಿರಿಯನ್ನು, ಶಿವಸೌಭಾಗ್ಯವನ್ನು ತಾಯಿಯವರ ಈ ಸಾಲುಗಳು ಮಿಡಿದವೆ, ಮಿಂದಿವೆ; ಐಕ್ಯರ ಐಸಿರಿಯನ್ನು ಐಬಿಲ್ಲದಂತೆ ವೈನವಾಗಿಸಿವೆ.

ಆದಿ-ಅಂತ್ಯಗಳ ನಡುವಣ ಮಾನವ ಬದುಕಿನ ವಿಕಸನವು ಷಟ್‌ಸ್ಥಲಗಳನ್ನು ಏರಿ ಅನಂತವಾಗುವ ಕ್ರಿಯೆಯನ್ನು ತಾಯಿಯವರು ಈ ಆರು ತಲೆಬರಹಗಳ ತ್ರಿಪದಿಗಳಲ್ಲಿ ಸಮರ್ಥವಾಗಿ, ಸಾನುವಾಗಿ, ಸಲ್ಲಿಸಿದ್ದಾರೆ.

'ಸಂಕೀರ್ಣ' ಎಂಬ ಶೀರ್ಷಿಕೆಯಡಿಯಲ್ಲಿ ನಿತ್ಯ ಬದುಕಿನ ಜನ ಜಂಗುಳಿಯ ವರ್ತನೆಗಳು, ಅರಿವಿನ ಹರವು, ಹೆತ್ತವರ ಸಂಕಟ-ಸಂಘರ್ಷ, ಬಡವರ ಬಾಳು, ನಿಂದಕರು, ಶರಣರಬಾಳ್ವೆ, ವರ್ತಮಾನದ ಆಯಾಮಗಳು, ಶರಣಸಾಹಿತ್ಯ, ಇತ್ಯಾದಿ ಕುರಿತ ವೈವಿಧ್ಯತೆಯ ತ್ರಿಪದಿಯ ಸಾಲುಗಳು ಹರಿದು ಬಂದಿವೆ.

'ಶರಣಗೀತೆಗುಚ್ಛ'ದಲ್ಲಿ ಸಿದ್ದರಾಮ, ಕಲ್ಯಾಣದ ಬಸವಣ್ಣ, ಅಕ್ಕನಾಗಮ್ಮ, ಚನ್ನಬಸವಣ್ಣ, ಗಾಂಧಿ, ಮೃತ್ಯುಂಜಯಪ್ಪ - ಮಹಂತಪ್ಪಸ್ವಾಮಿಗಳು ಇವರನ್ನೆಲ್ಲ ಕುರಿತ ಹಾಡುಗಳು ತಾಯಿಯವರ ಎದೆಯ ಹಾಡುಗಳಾಗಿ ಬಂದಿವೆ.

ಹೀಗೆ ಶ್ರೀಮತಿ ಜಯದೇವಿತಾಯಿ ಲಿಗಾಡೆಯವರ ಅರುವಿವಾಗರದ ಮುಕ್ತಾಫಲಗಳನ್ನು ಸಂಪಾದಕರು ಪ್ರತಿಭೆ ಪರಿಶ್ರಮಗಳಿಂದ ಓದುಗರಿಗೆ ಮುಂದಿಟ್ಟು

ಸವಿಯುಣಿಸಿದ್ದಾರೆ. ಅಕಾರಾದಿಯ ಪಟ್ಟಿ ನೀಡಿ ಪರಾಮರ್ಶೆಗೆ ಅನುಕೂಲ ಮಾಡಿದ್ದಾರೆ. ಆದರೆ ಒಂದೇ ತಲೆಬರಹದಡಿಯಲ್ಲಿ ಒಂದೇ ತ್ರಿಪದಿಯನ್ನು ಎರಡೆರಡು ಬಾರಿ ಕೊಟ್ಟು, ಸಂಖ್ಯೆಯನ್ನು ಬೇರೆಯಾಗಿ ಕೊಟ್ಟಿರುವುದು ಅನಗತ್ಯ (ಉದಾ. ಪು. ೧೮೪-೮೫ 'ಆನಂದ' ತಲೆಬರೆಹದಡಿ ಪದ್ಯಸಂಖ್ಯೆ ೯೫೯ ಮತ್ತು ೯೬೨ ಹೀಗೆಯೇ ಅನೇಕ ಕಡೆ ನೀಡಲಾಗಿದೆ) ವಾಗಿತ್ತು.

ಸಂಪಾದಕರ ಸಾಹಿತ್ಯ ಸಂಪದದಲ್ಲಿ ೫೬ ಕೃತಿಗಳ ಪಟ್ಟಿಯನ್ನು ವರ್ಷವಾರು ಪ್ರಕಟನೆಯ ಸಹಿತ ನಮೂದಿಸಿರುವುದು, ಸಂಪಾದಕರ ಬಹುಮುಖ ಪ್ರತಿಭೆ, ಬಹುಶ್ರುತತೆ ಹಾಗೂ ಚಾರಿತ್ರಿಕ ಹೊಳಹಿನ ಪರಿಚಯಸ್ಥ ಅನುಕೂಲವಾಗಿದೆ.

ಒಟ್ಟಾರೆ ಈ ಕೃತಿಯ ಸಂಪಾದನೆ, ಸಂಪಾದಕರ ಒಂದು 'ಮಹಾಮಣಿಹ' ವೆಂದಿರುವ ಪ್ರಕಾಶಕರ ಮಾತಿಗೆ ಸಮರ್ಥನೆ ಸಂಪಾದಿತ 'ಅರುವಿನಾಗರದ' ಕೃತಿಯೇ, ಆಗಿದೆ.

ಕನಕ ಸಾಹಿತ್ಯ ದರ್ಶನ (ಸಂಪುಟ-೨) (೧೯೯೧)

ಕನಕದಾಸ ವಿರಚಿತ ಹರಿಭಕ್ತಿಸಾರ, ರಾಮಧಾನ್ಯ ಚರಿತ್ರೆ ಮತ್ತು ನಳಚರಿತ್ರೆ, ಇವುಗಳ ಸಂಪಾದನೆಯ ತ್ರಿಕೂಟ ಕೃತಿ ಕನಕಸಾಹಿತ್ಯ ದರ್ಶನ. ರಾಮಾಯಣ, ಹರಿಪಾರಮ್ಯ, ನಳನ ಚರಿತ್ರೆಯ ಕಾವ್ಯ ಸ್ವರೂಪದಲ್ಲಿ ಕನಕದಾಸರ ಪ್ರತಿಭಾದರ್ಶನವಾಗಿದೆ.

ವ್ಯಾಸರಾಯರ ಪರಮ ವಾತ್ಸಲ್ಯದ ಶಿಷ್ಯ, ದಾಸಕೂಟದ ವೈಚಾರಿಕ ಪ್ರತಿಭೆ ಶ್ರೀಕನಕದಾಸರು ಶುದ್ಧಭಕ್ತಿಯ ಪ್ರಸಿದ್ಧ ಪ್ರತಿನಿಧಿ ಆಗಿದ್ದರೆನ್ನಬೇಕು. ಅವರ ಕೃತಿಗಳಲ್ಲಿ ಇದೆಲ್ಲ ಎದ್ದು ತೋರುವಲ್ಲಿ ಹರಿಪಾರಮ್ಯವನ್ನು ಕೇವಲ ಸಡಗರಿಸಿದರು ಎಂಬುದಕ್ಕಿಂತ ತಮ್ಮ ಅನುಭವಗಳ ಭಾವನೆಗಳ ಮಡಿಲಿನಿಂದ ವಿಕಾಸದ ನೆಲೆಗೊಯ್ದರು.

'ಹರಿಭಕ್ತಿಸಾರ' - ಹೆಸರೇ ಹೇಳುವಂತೆ ಹರಿಭಕ್ತಿಯ ಮಹತ್ತನ್ನು ಹೇಳುವ ಕೃತಿ. 'ವೇದಶಾಸ್ತ್ರ ಪುರಾಣ ಪುಣ್ಯದ ಹಾದಿಯನು ನಾನರಿಯೆ... ಆದಿಮೂರುತಿ.... ಹೃದಯಾಂಗಣದಿ ತೇರಿನಲ್ಲಿ ಜ್ಞಾನವೆ ಸಾರಥಿಯಾಗಿ ಬಂದು ಅರಿವಿನ ಬಾಗಿಲು ತೆರೆಯಲಿ' ಎಂಬ ಅಂತರಂಗದ ನೋಟವನ್ನು ಒದಗಿಸಿದೆ. 'ಸಿರಿಯು ಕುಲಸತಿ ಸುತನು ಕಮಲಜ ಹಿರಿಯ ಸೊಸೆ ಶಾರದೆ ಸಹೋದರಿ ಗಿರಿಜೆ ಮೈದುನ ಶಂಕರನ .. ಜಂಗಮ ಸ್ಥಾವರ ಕುಟುಂಬಿಗೆ.... ರಕ್ಷಿಸು ನಮ್ಮನನವರತ' ಎಂಬಲ್ಲಿ ತ್ರಿಮೂರ್ತಿ ಸಂಬಂಧವನ್ನು ಹರಿಯ ನೋಟದಲ್ಲಿ ಕಾಣಿಸಿದ್ದಾರೆ. 'ದೀನ ನಾನು ಸಮಸ್ತಲೋಕಕೆ, ದಾನಿ ನೀನು ವಿಚಾರಿಸಲು ಮತಿಹೀನ ನಾನು.... ಸುಜ್ಞಾನ ಮೂರುತಿ ನೀನು ನಿನ್ನ ಸಮಾನರುಂಟೆ ದೇವ ರಕ್ಷಿಸು ನಮ್ಮನನವರತ' ಎನ್ನುತ್ತ ದೈನ್ಯದ ಮಟ್ಟ, ಜ್ಞಾನದ ನೋಟವನ್ನು ನೀಡಿದ್ದಾರೆ ಕನಕದಾಸರು. 'ಎಂಜಲೆಂಜಲು ಎಂಬದಾ ನುಡಿ ಎಂಜಲಲ್ಲವೆ ವಾರಿ ಜಲಚರದೆಂಜಲಲ್ಲವೆ...' ಎಂಬ ಸಾಲಿನಲ್ಲಿ ಮೇಲಾಳಿಕೆ

ಮಾತುಗಳಿಗೆ ಕೊಟ್ಟಿರುವ ವಾಸ್ತವಗಳ ಛಡಿಏಟು ಪ್ರಜ್ಞೆಯ ಮೂಲಕ ತಾಗುತ್ತದೆ. ಭಕ್ತಿಯ ಸಾರ ಸೂರೆಹೋಗದಂತೆ ಕನಕರ ಬದುಕಿನ ದರ್ಶನ ನಮ್ಮಲ್ಲಿ ಹೀಗೆ ಅವಧಾನ ಭಕ್ತಿಯ ಸ್ಪರ್ಶಗಳನ್ನು ಮೊತ್ತಗೊಳಿಸುತ್ತ ಬರುತ್ತದೆ. ಹರಿಭಕ್ತಿಸಾರದ ಪುಣ್ಯ ಶ್ರಾವಣ ಶ್ರವಣವಾಗುವುದು ಹಾಗೆ.

ರಾಮಧಾನ್ಯಚರಿತ್ರೆ ಒಂದು ಕಥಾಪಲ್ಲವ. ಸರಳತೆಯ ಸಿರಿಸಾಲು ತುಂಬಿ ಬರುವ ಷಟ್ಪದ - ಉಣ್ಣುವ ಕಾಳುಗಳ ಪ್ರತಿಮೆಯಲ್ಲಿ 'ನರೆದೆಲೆಗ (ರಾಗಿ)ದ ಬೆಳಸು ಗೊಮ್ಮಟ ವ್ಯಕ್ತಿತ್ವವೆನಿಸುವಂತಿದೆ. ಕನಕರ ಎದೆಯಾಳದ ಒಳಗು ಸರಳತೆ, ಸಾಮಾನ್ಯದೊಳಗಣ ಅಸಾಮಾನ್ಯತೆಗೆ ಮಿಡಿದ ರಾಗ ರಾಮ ಧಾನ್ಯ ಚರಿತೆ. ನರೆದಲೆಗ ಹಾಗೂ ವ್ರಿಹಿಗ (ಬತ್ತ)ದ ನಡುವಣ ಸಂಭಾಷಣೆ ಕಡೆದ ಕಡೆಗೋಲು ತಂದಿಡುವ ನವನೀತದ ಸೊಂಪು ಎಂಬಂತಿದೆ. 'ನೆಲ್ಲು ನಾನಿರೆ.... ಬಲ್ಲಿದನು ನರೆದಲೆಗನಂಬುದಿದಾದವ ಮತ।' 'ನೀ ಶೂದ್ರಾನ್ನವಾದೆ', 'ಸುರನದಿಗೆ ತಾನರಿಯೆ ಕಾಡೊಳು ಹರಿವ ಹಳ್ಳದ ನೀರು', ಈ 'ನುಡಿಯ ಕೇಳುತ ಕನಲಿ ಕಂಗಳು.... ಸಿಡಿಲ ಘರ್ಜನೆಯಂತೆ ಸಭೆಯಲಿ ಜರೆದನಾ ವ್ರಿಹಿಯ..... ಕಡು ಜಡನಲಾ ನಿನ್ನೊಡನೆ ಮಾತೇಕೆಂಬ ನರೆದಲೆಗ' ಎಂದೆಲ್ಲ ರಾಮಕಥೆಯ ನಡುವ ಸಾಮಾಜಿಕ ಸಂಘರ್ಷದ ಚಿತ್ರ ಅತ್ಯಂತ ಢಾಳವಾಗಿ ಕಾಣಿಸುತ್ತದೆ. ಶಮನ ಸಾಂಗತ್ಯವನ್ನು ಮುಂದೆ ತೋರುತ್ತದೆ. ಇಲ್ಲಿನ ಪದ್ಯಗಳಲ್ಲಿ ಬರುವ 'ಹೊಡೆವ ತಮ್ಮಟ ಭೇರಿ ಡಮರುಗ ಗಿಡಿಗಿಡಿ ಡೌಡೆ ಡಿಂಡಿಮ ಢಕ್ಕೆ ನಿಡುವ ಶಂಕ ಮೃದಂಗ ಘನನಿಸ್ಸಾಳ.... ಬಡಿವ ನಾನಾ ವಾದ್ಯರವ... ಜಯರವದೊಡನೆ ರಘುನೃಪ..' ಎಂಬ ವಾದ್ಯ ವೈವಿಧ್ಯ ಹಾಗೂ ತಾತ್ವಿಕ ಸೊಗಡು ನಮ್ಮ ವಾದ್ಯಸಂಸ್ಕೃತಿಯ ಚರಿತ್ರೆಯನ್ನೇ ಮುಂದಿಡುವಂತೆ ಭಾಸವಾಗುತ್ತದೆ. ಚೋಳ ಗುರ್ಜ್ಜರ ದ್ರವಿಡ... ಸಿಂಹಳ ಹೂಣ ಸವ್ವೀರ.. ಪಾಂಚಾಳ ಬಹುದೇಶಾಧಿಪತಿಗಳು.... ನೇಪಾಳ ಬರ್ಬರಮತ್ಸ್ಯ ನೃಪ ಬಂಗಾಳ ಮಾಂದ್ರ ಕೋಸಲ ಕೊಡಗ.... ಚೇನ.... ಕಾಶ್ಮೀರ......' ಹೀಗೆ ಆ ಕಾಲದ ಭೌಗೋಳಿಕ ನೆಲೆಗಳ ನಾಮ ಮಾಹಿತಿ ಇಲ್ಲಿ ದೊರಕುವಲ್ಲಿ ಕನಕರ ಜ್ಞಾನ ವೈವಿಧ್ಯದ ಅರಿವು ಆಗುತ್ತದೆ.

ನಳಚರಿತ್ರೆ ಒಂದು ಪರಮ ಪುಣ್ಯ ಚರಿತ್ರೆ. ಆದರೆ ಪಾವನಶೀಲತೆಯ ಪಲ್ಲವದ ಜೊತೆಗೆ ಬದುಕಿನ ಪ್ರೇಮ, ಶೃಂಗಾರಗಳ ದೈವಿಕ ಸಮನ್ವಯ ಸಾಧಿಸಿರುವುದು, ಉಪಮಾ ರೂಪಕಗಳ ಲೀಲೋತ್ಸಾಹ ಕನಕದಾಸರ ಕವಿತಾಶಕ್ತಿಯ ಮಾರ್ದವವೆನಿಸುತ್ತದೆ. ಓದುತ್ತ ಹೋದಂತೆ ನಮ್ಮ ಹೃದಯ ಭಾವಾರ್ದ್ರವದೊಡನೆ ತಲ್ಲೀನವಾಗಿಬಿಡುತ್ತದೆ. ನಳ-ದಮಯಂತಿಯ ದಾಂಪತ್ಯಕ್ಕೆ ರಾಜ್ಯಕ್ಕೆ ಪುಷ್ಕರ ಜೂಜಿನ ಮೂಲಕ ಒಡ್ಡಿದ ಸವಾಲು, ನಳ ತನ್ನ ಸತಿಯಲ್ಲಿ ಕಂಡುಕೊಂಡ ಪತಿನಿಷ್ಠೆ ನಳ ಪುರುಷನಿಷ್ಠೆ ಅಲ್ಲದೆ ಅವನ ಕಷ್ಟಪಾಡುಗಳೆದುರು ಸಹನೆಯ ಅನುರಣನಗಳ ಪರೀಕ್ಷೆಯೂ ಹೌದು. ೯ ಸಂಧಿಗಳಲ್ಲಿ ಬಿತ್ತರಗೊಂಡಿರುವ ಈ ನಳಚರಿತ್ರೆ ನಮ್ಮ ಸಾಂಸ್ಕೃತಿಕ ಜಾಯಮಾನಕ್ಕೊಗ್ಗಿದ ಸಾರಸ್ವತ ಸಿಂಗಾರದ ಕಥಾ ಸಿರಿ.

ಈ ಮೂರು ಕೃತಿಗಳನ್ನು ಬಹು ಸಮರ್ಥವಾಗಿ ಸಂಪಾದಿಸಿಕೊಟ್ಟಿರುವ ಡಾ॥

ಸಾ.ಶಿ.ಮ. ಅವರು ಪ್ರಸ್ತಾವನೆಯಲ್ಲಿ ಕಾವ್ಯೋತ್ಕರ್ಷ ವಿಶ್ಲೇಷಣೆ ಮಾಡಿದ್ದಾರೆ. ತಮ್ಮ ಅಭಿಪ್ರಾಯವನ್ನು ನಿಖರವಾಗಿ ಮಂಡಿಸಿದ್ದಾರೆ. ಹರಿಶ್ಚಂದ್ರ ಕಾವ್ಯದಲ್ಲಿ ರಾಘವಾಂಕ ದಲಿತ ಸಮಸ್ಯೋದ್ಧಾರ ದೃಷ್ಟಿಯನ್ನು ಅಡಕಗೊಳಿಸಿದ್ದರೆ, ಎಂಬ ಭಾವದ ಆಧುನಿಕ ವಿಮರ್ಶಕರ ಅಭಾಸವಂತಿಕೆಯನ್ನು ನಿರ್ಭಿಡೆಯಿಂದ ಎತ್ತಿ ಹೇಳಿದ್ದಾರೆ. ಕನಕದಾಸರನ್ನು ಹಾಗೂ ಅವರ ಕೃತಿಗಳಲ್ಲಿನ ಮಾನವೀಯ ತಂತುಗಳಿಂದ ನೇಯ್ದುಕೊಳ್ಳಬೇಕಾದ ಭಾವದುಡಿಗೆ-ತೊಡುಗೆಗಳನ್ನು ಎತ್ತಿ ತೋರಿದ್ದಾರೆ. ರಾಗಿ ಹಾಗೂ ರಾಘವ ಶಬ್ದಗಳ ನಿಷ್ಪತ್ತಿ ದ್ರವ್ಯದ ಕುರಿತು ಮಂಡಿಸಿದ್ದಾರೆ. ತೌಲನಿಕವಾಗಿ ಅಭಿಪ್ರಾಯಗಳನ್ನು ಉದ್ಧರಿಸಿ, ತಮ್ಮ ನಿಲುವನ್ನು 'ರಾಮಧಾನ್ಯ ಚರಿತ್ರೆ'ಯಲ್ಲಿ ಗರ್ಭದಲ್ಲಿರುವುದು ರಾಮ ಮಹಿಮೆ ಸಾರುವ ಭಕ್ತಿ ಭಾವನೆ ಎಂದು ಸರಿಯಾಗಿಯೆ ನುಡಿದಿದ್ದಾರೆ. ಇದಕ್ಕೆ ವಿಜಯನಗರ ಕಾಲದ ವ್ಯಾಸರಾಯರ ಮಠದಲ್ಲಿತ್ತೆನ್ನಲಾದ ಸಂಸ್ಕೃತ ಭಾಷಿಕ ಮಡಿವಂತ ವರ್ಗದ ವ್ಯಾಸಕೂಟ ಕನ್ನಡ ಭಾಷಿಕ ಸಾಮಾನ್ಯ ವರ್ಗದ ದಾಸಕೂಟ - ಇವುಗಳ ನಡುವಣ ನಡೆದ ವಾಗ್ವಾದದಲ್ಲಿ ದಾಸಕೂಟಕ್ಕೆ ಸೇರಿದ ಕನ್ನಡದ ಹೇಮಕೂಟರೆನಿಸಿದ ಕನಕ ಪುರಂದರರ ಗೆಲುವು ರಾಮಧಾನ್ಯ ಚರಿತ್ರೆಯಾಗಿ ಪರಿಣಾಮಗೊಂಡಿರಬೇಕು ಎಂದಿದ್ದಾರೆ. ಕನಕದಾಸರ ವೈಶಾಲ್ಯತೆಯನ್ನು ತೋರಿಸಿದ್ದಾರೆ. ರಾಮಧಾನ್ಯ ಚರಿತ್ರೆಯ ಸಂಭಾಷಣಾ ಸೌಷ್ಠವದ, ನಾಟಕೀಯತೆಯ ಪುರುಷಗುಣದತ್ತ ಗಮನ ಸೆಳೆದಿದ್ದಾರೆ. 'ಗ್ರಾಮೀಣ ಸೊಗಡು ತುಂಬಿದ ಬನಿಯ ಭಾಷೆ' ಈ ಚರಿತ್ರೆಯದೆಂದಿದ್ದಾರೆ. ಸೋದ್ಧೃತ ಮಾಡಿದ್ದಾರೆ. 'ವೈಷ್ಣವ ಭಕ್ತಿಯ ವೈಭವದ ಜೊತೆಯಲ್ಲಿ ಕಾವ್ಯ ವೈಖರಿಯು ತೆಕ್ಕೆ ಬಿದ್ದಿರುವುದು ಕಂಡುಬರುತ್ತದೆ, ಎನ್ನುತ್ತಾ ಅವರು ನೀಡಿರುವ ಸೋದ್ಧೃತಗಳು ಚೆಲುವಾಗಿವೆ. ಕಾವ್ಯ ಭಾಷೆಯ ಸಮನ್ವಯವಿಟ್ಟು ಕನಕದಾಸರ 'ಕಮನೀಯ ಕಾವ್ಯಗುಣವನ್ನು ಎತ್ತಿ ತೋರಿರುವುದೂ ಗಮನಾರ್ಹ. ನಳ ಚರಿತ್ರೆ -ನಳನ ಕಥೆಯಾಗಿ ಅದರ ಜಾನಪದ ಚರಣ ಗಮನವನ್ನು ಗುರುತಿಸಿದ್ದಾರೆ. ವೇದಕ್ಕೂ ಮುನ್ನಿನ ಕಥೆ ಎಂದಿದ್ದಾರೆ. ವ್ಯಾಸನೂ ತನ್ನ ಮಹಾ ಕಾವ್ಯಕ್ಕೆ ಬಳಸಿಕೊಳ್ಳುವಷ್ಟು ಆಕರ್ಷಕವಾದ ಆದರ್ಶ ಪ್ರೇಮದ ಕಥೆ. ಮುಂದಿನ ಸಂಸ್ಕೃತ-ಕನ್ನಡ ಕವಿ ನಾಟಕಕಾರರಿಗೆ ಅದೊಂದು ಆಕರ ಕಥೆಯಾಯಿತು. ವ್ಯಾಸ ಭಾರತದ ನಳನ ಕಥೆಗೂ ರಾಮಚಂದ್ರ ಸೂರಿಯ ನಲವಿಲಾಸ ನಾಟಕಕ್ಕೂ ಇರುವ ವ್ಯತ್ಯಾಸವನ್ನು ದೈವವಾದ ದೂರ ಮಾಡಿ ಪುರುಷ ವಾದವನ್ನು ಪುರಸ್ಕರಿಸಿರುವ ಬಗ್ಗೆ ಹೇಳುವ ಮೂಲಕ ಶ್ರೀ ಮರುಳಯ್ಯನವರು ಸಮರ್ಥವಾಗಿ ಮನದಟ್ಟು ಮಾಡಿದ್ದಾರೆ. ಹಾಗೆಯೆ ಕನಕದಾಸರ ನಳಚರಿತ್ರೆಗೆ ಕನ್ನಡದಲ್ಲಿ ಒದಗಿರುವ ಗೌರವ ಸ್ಥಾನದ ಕುರಿತು ಕಾರಣವನ್ನು ಹೇಳುತ್ತ 'ಕನಕದಾಸರ ಕಥೆಗಾರಿಕೆ, ಅಭಿವ್ಯಕ್ತಿ ಜಾನಪದೀಯ ಸೊಗಡಿನಿಂದ ತುಂಬಿದೆ. ಸ್ವೋಪಜ್ಞತೆಯಿಂದ ಕೂಡಿದೆ ಎಂದು ನಳನ ಬೇಂಟೆಯ ಬಣ್ಣನೆಯ ಬಗ್ಗೆ ಗಮನವನ್ನು ದಟ್ಟವಾಗಿ ಸೆಳೆದಿದ್ದಾರೆ. ಶ್ರೀ ಹರ್ಷನ 'ನೈಷಧೀಯ ಚರಿತ' ದಂಥ ವರ್ಣನಾ ಪ್ರಧಾನ ಕಾವ್ಯ ಹಾಗೂ ಕನಕದಾಸರ ನಳಚರಿತೆಗಳ ನಡುವಣ ಮುಖ್ಯ ದೃಷ್ಟಿಕೋಣಗಳನ್ನು ವಿಮರ್ಶೆ, ವಿಶಿಷ್ಟ ಮಾನದಂಡದಿಂದ ನೋಡಿರುವ ಮರುಳಯ್ಯನವರ ವಿದ್ವತ್ತು, ವಿಮರ್ಶನಾ ಸೌಷ್ಠವ, ಸೃಜನಶೀಲ ವ್ಯಾಖ್ಯೆ

ಕಂಡು ಮನಸ್ಸು ಮೆಚ್ಚುತ್ತದೆ. ಪುಸ್ತಕದ ಕೊನೆಗೆ ನೀಡಿರುವ ಅಕಾರಾದಿ ಅರ್ಥಕೋಶ, ಕೃತಿಯ ಪದ್ಯಗಳ ಅರ್ಥವತ್ತಾದ ಓದಿಗೆ, ರಸಗ್ರಾಹ್ಯಕ್ಕೆ ಸಲ್ಲುವಂತಿದೆ.

ಕನಕ ಸಾಹಿತ್ಯ ದರ್ಶನ ಮಾಡಿಸುವ ಮರುಳಯ್ಯನವರ ಸಂಪಾದನೆಯ ಕೃತಿಯ ಪ್ರಸಾವನೆ ಅವರೊಳಗಿನ ಕವಿ, ವಿಮರ್ಶಕ, ಪಂಡಿತ, ವಿದ್ವಾಂಸ, ಸಾಹಿತಿ, ಸೃಜನಶೀಲ ಶೈಲಿ ಎಲ್ಲಕ್ಕೂ ಸಪ್ತಪದೀಯ ಮಂಗಳದ ಅಂಗವಾಗಿ ಸೃಷ್ಟಿಗೆಜ್ಜೆಯ ಹೆಜ್ಜೆಗಳನ್ನಿಟ್ಟು ಬಂದಿದ್ದಾರೆ. ವರ್ತಮಾನದ ವ್ಯಾಖ್ಯಾನ ಸಂಪದವನ್ನು ಸಮಷ್ಟಿಗೊಳಿಸಿದ್ದಾರೆ. ನಿರ್ವಿಕಾರದ ನಿರಂಜನ ನೋಟವನ್ನು ಸಲ್ಲಿಸಿದ್ದಾರೆ. ಸಂಪಾದನೆಯ ಸೊಂಪಿಗೆ ಪ್ರಸ್ತಾವನೆಯ ಪಕ್ವ ಫಲದ ಸಿರಿಯೊದಗಿಸಿದ್ದಾರೆ. ಸಮತೋಲನವನ್ನು ಸಾಧಿಸಿರುವ ಸೃಷ್ಟಿ ಡಾ|| ಸಾ.ಶಿ. ಮ ಅವರದು. ಸಂಪಾದನೆಯಲ್ಲೂ ವಿಮರ್ಶೆಯ ವೆಬ್‌ಸೈಟ್ ಸಾಧಿಸಿ ನಮ್ಮ ಮನಸ್ಸು, ಹೃದಯಗಳಿಗೆ ಈ-ಮೇಲ್ ಕಳುಹಿಸಿ ಸ್ಪಂದಿಸುವ ಮರುಕ್ಷಣಗಳನ್ನು ತುಂಬ ಕೊಟ್ಟಿರುವ ಅವರಿಗೆ ಅಭಿನಂದನೆಯೊಂದೇ ಸದ್ಯದ ಅಭಿಮಾನದ ಕಾಣಿಕೆ.

ನೀಲಮ್ಮನ ವಚನಗಳು (೧೯೯೩)

ನೀಲಮ್ಮ ಬಸವಣ್ಣನವರ ಮಡದಿ. ವಿಚಾರಪತ್ನಿ ಎಂದು ಹೆಸರಾದವಳು. ಯಾಜ್ಞವಲ್ಕನಿಗೆ ಮೈತ್ರೇಯಿ ವಿಚಾರಪತ್ನಿ, ಮೋಕ್ಷಪತ್ನಿ ಹೇಗೋ, ನೀಲಮ್ಮ ಬಸವಣ್ಣನಿಗೆ ಮೋಕ್ಷಪತ್ನಿ. ಅವನ ವಿಚಾರಗಳನ್ನು ಮೂಸೆಗಿಕ್ಕಿ ಬೆಳಗಿಸಿದಾಕೆ. ಹಾಗೆಯೆ ನಿರ್ಲಿಪ್ತ ನಿರಂಜನಿ. 'ನೋಡು, ನೋಡು ಲಿಂಗವೆ - ಇಲ್ಲಿ ತಾವಿನಲ್ಲವೆ ಸಂಗಯ್ಯನು' ಎಂಬ ವಚನದ ಸಾಲುಗಳೆ ಆಕೆಯ ವಿಚಾರಕ್ಕೆ, ನಿರಂಜನದೃಷ್ಟಿಗೆ ಸಾಕ್ಷಿ ಎನಿಸುತ್ತದೆ. ಡಾ|| ಸಾ.ಶಿ. ಮರುಳಯ್ಯ ಹಾಗೂ ಶ್ರೀ ಎಸ್. ಶಿವಣ್ಣನವರು ಹಸ್ತಪ್ರತಿಗಳ ಶೋಧ ಮಾಡಿ ನೀಲಮ್ಮನ ವಚನಗಳು ೨೮೮ ಇವೆ ಎಂದು ತೋರಿಸಿಕೊಡುವವರೆಗೆ ೧೨೬ (ಡಾ|| ಆರ್.ಸಿ. ಹಿರೇಮಠ ಸಂಪಾದಿತ ವಚನಗಳು) ಮಾತ್ರ ಲಭ್ಯವಾಗಿದ್ದುವು. ೧೨ನೆಯ ಶತಮಾನದ ಶಿವಶರಣೆಯರಲ್ಲಿ, ಅಧ್ಯಾತ್ಮ ಮತ್ತು ಕಾವ್ಯವನ್ನು ಸಮನ್ವಯಿಸಿಕೊಂಡಿದ್ದ ವಚನಗಾರ್ತಿ ಅಕ್ಕ. ಅವಳ ವಚನಗಳಲ್ಲಿ ಮಲ್ಲಿಕಾರ್ಜುನ ಭಕ್ತಿ ಪ್ರಕೃತಿ, ಅಧ್ಯಾತ್ಮ, ಕಾವ್ಯ ಈ ಮೂರರ ಲಯ ತ್ರಿವೇಣಿ ಸಂಗಮ ಕಾಣುತ್ತದೆ. ಡಾ|| ಸಾ.ಶಿ. ಮರುಳಯ್ಯ ಅವರು 'ಅಕ್ಕ ಕನ್ನಡದ ಕಾರಣ ಕನ್ಯೆ' ಎಂದಿರುವುದು ಈ ಕಾರಣವೆ ಎನಿಸುತ್ತದೆ. ಅಂಥ ವಚನಪ್ರಭೆಯ ನಡುವೆ ನೀಲಮ್ಮ, ಭಕ್ತಿಯ ಸಂಪದವನ್ನು, ತತ್ವದ ತೊಟ್ಟಿಲಲ್ಲಿ ಅಧ್ಯಾತ್ಮಿಕ ಅನುರಣದಲ್ಲಿ ತೂಗಿದ್ದಾಳೆ. ಇಂಥವಳ ವಚನಗಳನ್ನು ಸಂಪಾದಿಸಿಲು ತಾತ್ವಿಕ ಒಳನೋಟಗಳು ಬೇಕು. ಹಸ್ತಪ್ರತಿಯ ಅವಲಿಖಿತಗಳನ್ನು ಸರಿಪಡಿಸುವಲ್ಲಿ ಹೊಣೆಯಷ್ಟೇ ಅಲ್ಲ, ವಿದ್ವತ್ತಿನ ಇಡುಗಂಟೂ ಸೇರಿರಬೇಕು. ಕೃತಿಯ ಪ್ರಸ್ತಾವನೆಯಲ್ಲಿ ನೀಲಮ್ಮನದೆನ್ನುವ 'ಕಾಲಜ್ಞಾನ ವಚನಗಳು' 'ಪ್ರಸಾದ ಸಂಪಾದನೆ' ಕುರಿತು ಎಚ್ಚರದ ಮಾತುಗಳನ್ನಾಡಿದ್ದಾರೆ. ಆಕೆಯ ವಚನಗಳನ್ನು ಸೋದಾಹರಣವಾಗಿ ವ್ಯಾಖ್ಯಾನಿಸಿ ಬರೆದಿದ್ದಾರೆ. ಆ ವಚನಗಳ ಸೌಂದರ್ಯವನ್ನು ಬಿಡಿಸಿ ತೋರಿದ್ದಾರೆ.

ಕುರುಹಿಲ್ಲದ ಸಂಗಯ್ಯನೆಂಬ ಲಿಂಗವ ಸೇರಿ 'ಪರಂಜ್ಯೋತಿ' ಯಾಗಿ ಪರಿಣಾಮಿಸಿದೆ. ಅಂಗ ಲಿಂಗ ಕೂಡಿ ಸಮರಸದ ಸ್ಥಿತಿ. ಶಿವಾದ್ವೈತದ ದರ್ಶನವನ್ನು ಬೆಳಗಿದುದಕ್ಕೆ ನೀಲಮ್ಮ ಒಂದು ನಿದರ್ಶನವಾಗಿದ್ದಾಳೆ. ಮರುಳಯ್ಯನವರ ಭಾವದಲ್ಲಿ, ಚಿತ್ತದಲ್ಲಿ. ಡಾ|| ಆರ್.ಸಿ. ಹೀರೇಮಠರು ಸಂಪಾದಿಸಿದ ವಚನಗಳಿಂದ ಮತ್ತು ತಾವು ಸಂಪಾದಿಸಿದ ವಚನಗಳಿಂದ ಆಯ್ದು ವ್ಯಾಖ್ಯಾನ ನೀಡಿ, ನೀಲಮ್ಮನ ವಚನಗಳ ವೈಶಿಷ್ಟ್ಯವನ್ನು, ವೈವಿಧ್ಯತೆಯನ್ನು, ಸೌಂದರ್ಯವನ್ನು ಎಳೆಎಳೆ ಮಾಡಿ ಬಿಡಿಸಿ ಮಂಡಿಸಿದ್ದಾರೆ. 'ಸಂಗಯ್ಯನಲ್ಲ ಸಂಗಯ್ಯನಲ್ಲ ಹೆಸರಳಿದ ಬಸವಂಗೆ ಕುಱುಹಿಲ್ಲ' ಎಂಬಲ್ಲಿ ಸಾಮರಸ್ಯ, ಲಿಂಗದೊಡನೆ ಒಂದಾಗುವಿಕೆಯ ಅರ್ಥ ವಿಕಸಿಸುತ್ತದೆ. ಅದನ್ನೇ ಮರುಳಯ್ಯನವರು ಜೀವ ಮತ್ತು ದೇವರ ಐಕ್ಯಾನುಸಂಧಾನದಿಂದಾದ 'ಶಿವ'ದ ಸ್ಥಿತಿ, ಮಂಗಲದ ಮಹಾಮಜಲು, ಅಧ್ಯಾತ್ಮದ ತುರೀಯಸ್ತರ, ಆ ಸ್ಥಿತಿಯೆ ಶಿವಾದ್ವೈತ ದರ್ಶನ ಎಂದು ಲಯಬದ್ಧ ವ್ಯಾಖ್ಯಾನ ನೀಡಿದ್ದಾರೆ. ಶಿವ, ಶೂನ್ಯ, ಬಯಲು, ನಿಬ್ಬಯಲು ಇತ್ಯಾದಿ ಪಾರಿಭಾಷಿಕ ಶಬ್ದಗಳ ಅರ್ಥವನ್ನು, ''ಇದರಂಗ ಸಂಗ ಸುಖವಿಲ್ಲ... ಸುಖವ ಕಂಡೆನಯ್ಯ'', 'ಪುಣ್ಯದ ಫಲ ತೋರಿ ಬಯಲಿನ ಕೂಡಿತ್ತು.... ಸಂಗಯ್ಯದಲ್ಲಿ ಹಿತ ನಿಃಶೂನ್ಯವಾಯಿತ್ತಯ್ಯ', 'ಉರಿಯುಂಡ ಕರ್ಪೂರದಂತೆ ತೆವಹಿಲ್ಲದೆ ನಿಂದೆನಯ್ಯ, ಎಂದು ನಿರ್ವಯಲಾಗಿ.. ಶಿವನು ಸೂತ್ರಧಾರಿಯಾನಾದೆನು', 'ಸ್ವಯ ಸಮರಸದ ಇರವನಂಗವಿಸಿ....... ನಷ್ಟದ ಮಾತನೊಂದು ರೂಪ ಮಾಡಿ ಆ ರೂಪು ಉರಿಯುಂಡಿತ್ತಯ್ಯ ಸಂಗಯ್ಯ' - ಇಂಥ ಸಾಲುಗಳನ್ನು ಅವರ ಉದ್ಧೃತ ನೀಲಮ್ಮನ ವಚನಗಳಿಂದ ಹೆಕ್ಕಿ ನೋಡಿದಾಗ, ಮೊದಲ ನೋಟಕ್ಕೆ ನೀಲಮ್ಮನ ಅನುಭಾವದ ಅಂಗಳದಲ್ಲಿ ನಾವೂ ಆರೈಕೆಗೊಳ್ಳುವಂತೆ ಮಾಡಿದ್ದಾರೆ ಎನಿಸುತ್ತದೆ. ಸಂಗಯ್ಯ ಬಸವಯ್ಯ ಒಂದೇ ಎಂಬ ನೀಲಮ್ಮನ ನಿಲುವನ್ನು ಎತ್ತಿ ತೋರಿಸಿದ್ದಾರೆ. ''ಆನು ನಿಮ್ಮವಳಲ್ಲ ಸಂಗಯ್ಯ ಬಸವನ ಮನೆಯ ತೊತ್ತಿನ ಮಗಳು' ಎನ್ನುವ ನೀಲಮ್ಮ, ಬಸವಯ್ಯನಲ್ಲಿ ಸಲ್ಲುವಲ್ಲಿ, ಸಂಗಯ್ಯನಲ್ಲೂ ಸಲ್ಲುವಂತಾಗುತ್ತದೆ'' ಎಂಬ ಏಕೋಭಾವ, ವಿರೋಧ ಶಬ್ದಗಳ ನಡುವೆಯೂ ನಡೆದು ಬರುತ್ತದೆ. ಬಸವಣ್ಣ ಕಲ್ಯಾಣ ಬಿಟ್ಟು ಕೂಡಲಸಂಗಮವನ್ನು ಸೇರಿದಾಗ, ಬೌದ್ಧಿಕ ಗೆಳತಿ, ಬೌದ್ಧಿಕ ಪತ್ನಿ ನೀಲಮ್ಮನಿಗೆ ಅಪ್ಪಣ್ಣನ ಮೂಲಕ ಹೇಳಿಕಳುಹಿಸಿದಾಗ ಅನುಭಾವಿ ನೀಲವ್ವೆಗೆ ಅಣ್ಣನ ಬುದ್ಧಿ ಸಂಕಟದಲ್ಲಿರುವುದು ಅರಿವಿಗೆ ಬಂತು. ಆ ಅರಿವಿನ ನಿಲುವಿನಲ್ಲಿಯೆ 'ನೋಡು, ನೋಡು ಲಿಂಗವೆ.... ಇಲ್ಲಿ ತಾವಿಲ್ಲವೆ ಸಂಗಯ್ಯನು... ಸಂಗಮನಾಥನೆ ಈತನೆಂದು ಎನ್ನಂಗೈಯ ಲಿಂಗದೊಳಡಗುವೆನು' ಎಂದು ಹಾಡಿ ಕಲ್ಯಾಣದಲ್ಲಿಯೇ ಲಿಂಗಯ್ಯನಲ್ಲಿ ಐಕ್ಯಳಾಗುತ್ತಾಳೆ. ಈ ಸನ್ನಿವೇಶದ ಹಾಡನ್ನು ಬಹಳ ಸಮುಚಿತವಾಗಿ ಸಾಂದರ್ಭಿಕವಾಗಿ ಸಂಘಟಿಸಿ ಓದುಗರ ಮನಕ್ಕೆ ಅವ್ವೆಯ ಅನುಭಾವದ ಔನ್ನತ್ಯವನ್ನು ಪ್ರೇಮ ಪಲ್ಲವದ ಪರಾಕಾಷ್ಠೆಯನ್ನು ತೋರಿರುವ ಬಗೆ ಬಲುಹಿನದಾಗಿದೆ. ಇಡೀ ವಚನ ವಾಙ್ಮಯದಲ್ಲಿ ಇಂಥ ಒಲವು ತುಂಬಿದ, ಚಲನಶೀಲ, ಕ್ರಿಯಾಶೀಲ, ಶುಚಿಶುದ್ಧ, ಶೃಂಗಾರದ ಚಿತ್ರಣ', ನೀಲವ್ವನಲ್ಲದೆ ಅನ್ಯರಲ್ಲಿಲ್ಲ ಎಂಬುದನ್ನು ಎತ್ತಿ ತೋರಿದ್ದಾರೆ ಮರುಳಯ್ಯ. ನೀಲವ್ವನಲ್ಲಿ ಅಧ್ಯಾತ್ಮಪರ ವಚನ ರಚನೆಯೆ ಹೆಚ್ಚು,

ಕಾವ್ಯಾಂಶ ಕಡಿಮೆ ಎನ್ನುತ್ತ, 'ಬೆಳಗಿನ ಪ್ರಭೆ ಥಳಥಳಿಸಿ ಹೊಳೆಯಲು, ಆ ಬೆಳಗಿನೊಳಗೆ ಬೆಳೆದ ಶಿಶುವಾಸಯ್ಯ', ಸೃಷ್ಟಿ ವಿಲಾಸದ ಭಾವಗೀತವೆಂದು, 'ಎಸಳ ಪಂಜರದ ಪಕ್ಷಿಯೆ ನೀನೆಲ್ಲಿ ತೋಱಿ ಎಲ್ಲಿ ಅಡಗಿದೆ?... ಮನವೆತ್ತ? ತನುವೆತ್ತ? ಸಂಗಯ್ಯನತ್ತ ಹೋಗತ್ತ!', 'ಎಲೆಯಯ್ಯಗಳಿರಾ ಎಲೆಗಳಿದ ವೃಕ್ಷವ ಕಂಡಿರೆ ? ಎಲೆಯಯ್ಯಗಳಿರಾ ರೂಹಿಲ್ಲದ ಜೋದ್ಯವ ಕಂಡಿರೇ?', 'ಭಾವವಿಲ್ಲದ ರೂಪೆ ರೂಪಿಲ್ಲದೆಯಡಗಿದೆ' ಎಂದೆಲ್ಲ ಸೋದಾಹರಿಸಿ ಭಾವಚೆಲುಮೆ ಭಾವುಕರ ಹೃದಯ ವೇದಿಯಾಗಿದೆ. ಆತ್ಮಸಾಂತ್ವನದ ಅಪರೂಪ ಭಾವಗೀತೆಯಾಗಿದೆ ಎಂಬ ವ್ಯಾಖ್ಯಾನವಿಟ್ಟೂ 'ಅವ್ವೆಯ ವಚನಗಳಲ್ಲಿ ಕಾವ್ಯ ಸೊರಗಿದೆ. ಧರ್ಮ ಮೆರೆದಿದೆ' ಎಂಬ ಮಾತು ಅಷ್ಟು ಸಮಂಜಸವೆನ್ನಿಸುವುದಿಲ್ಲ. ಕಾರಣ ಕಾವ್ಯ ಎಲ್ಲಿ ಯಾವ ಸಾಲಿನಲ್ಲಿ ಮಿಂಚುಗೊಟ್ಟರೂ ಅದು ಕಾವ್ಯವೆ. ಅದರಲ್ಲಿಯೂ ಅಧ್ಯಾತ್ಮ ಕಾವ್ಯದ ಸೆಳೆಮಿಂಚಿನ ಹೃದಯದ ರಸಸೊಡೆಗೆ ಸೊಂಪೆನಿಸಿದಾಗ ಕಾವ್ಯ ಸೊರಗದು, ಕರಗದು. ಇದೇ ಧರ್ಮದ ಆವರಣದಲ್ಲೂ, ಅಧ್ಯಾತ್ಮದ ಘನ ಬೆಳಗಿನಲ್ಲೂ ಎದ್ದು ತೋರುವ ಕಾವ್ಯ ಜ್ಯೋತಿಸ್ತಂಭವಾಗಿ ನೀಲವ್ವನ ವಚನದ ಸಾಲುಗಳು ಸ್ರವಿಸಿ ನಮ್ಮನ್ನು ಆರ್ದ್ರಗೊಳಿಸುವುದು ವಿಶೇಷ.

'ನೀಲಮ್ಮನ ವಚನಗಳು ಹೆಚ್ಚಾಗಿ ಅಣ್ಣ ಐಕ್ಯನಾದ ಮೇಲೆ ಹುಟ್ಟಿದೆವು' ಎನ್ನುವ ಮರುಳಯ್ಯ ಅಟ್ಟಡವಿಯಲಿ ಬಿಟ್ಟು ಹೋದಿರಿ ಮಾತಿಲ್ಲದೆ ಮಥನವ ಮಾಡಿಮೆರೆದೆ... ನಿಮ್ಮಂಗ ಸಂಗಯ್ಯನಲ್ಲಿ ಸ್ವಯಲಿಂಗಿಯಾದೆಯಲ್ಲ' ಎಂದು ಸೋದಾಹರಿಸಿ ಆಕೆಯ ಮಾನವೀಯ ಮನೋದ್ವೇಗವನ್ನು ಗಮನಕ್ಕೆ ತಂದಿದ್ದಾರೆ. ನೀಲಮ್ಮನ 'ಎಸೆವಕ್ಷರಕೆ ಹೆಸರಿಲ್ಲ ಆ ಹೆಸರಿಂಗೆ ರೂಹಿಲ್ಲ' ಎಂಬ ವಚನ ಬೆಳಗನ್ನು ವಿಶ್ಲೇಷಿಸಿ ಅದರ ಲಿಂಗಾಂಗ ಸಾಮರಸ್ಯದ ಸಂಕೇತ ಬೆಡಗಾಗಿ ಬಂದಿರುವ ಬಗೆಯನ್ನು, 'ಬೆಡಗು, ಶಬ್ದದ ಅರ್ಥ ನೀಡಿ ವ್ಯಾಖ್ಯಾನಿಸಿದ್ದಾರೆ. ಹೀಗೆ ನೀಲವ್ವನ ವ್ಯಕ್ತಿತ್ವವನ್ನು ಅವಳ ವಚನಗಳ ಮೂಲಕವೇ ಕಡೆದು ಪ್ರಸ್ತಾವನೆಯಲ್ಲಿ ಪ್ರಚುರಗೊಳಿಸುವುದು ಪ್ರಬುದ್ಧ ಚಿಂತನೆಯ ಸಾಕ್ಷಿ ಎನಿಸುತ್ತದೆ. ತಮ್ಮ ವ್ಯಾಖ್ಯಾನ ಅರ್ಥದ ಅನುರಣನಕ್ಕೆ ೧೫ ಸಹಾಯಕ ಗ್ರಂಥಗಳನ್ನು ಬಳಸಿಕೊಂಡು ಸಂಪಾದಕನ ಹೊಣೆಗಾರಿಕೆಯನ್ನು ನಿರ್ವಹಿಸಿದ್ದಾರೆ. ಚೌಕ ಕಂಸಿನಲ್ಲಿ ಹಿಂದೆ ಸಂಪಾದಿತವಾದ ವಚನದ ಸಂಖ್ಯೆಯಿಟ್ಟು ತಮ್ಮ ಸಂಪಾದನೆಯ ಸಂಖ್ಯೆಯನ್ನು ಕ್ರಮಾಗತವಾಗಿ ನೀಡಿದ್ದಾರೆ.

ವಚನಗಳ ಜೋಡಣೆಯ ಕ್ರಮವು ಪಿಂಡಜ್ಞಾನಸ್ಥಲದಿಂದ ಆರಂಭವಾಗಿ ಷಟ್‌ಸ್ಥಲದ ಭಕ್ತಸ್ಥಲವನ್ನು ನಿರೂಪಿಸುವಂತೆ ಇದ್ದು ವೀರಶೈವರ ಅನುಭಾವಿಕ ನೆಲೆಗಳನ್ನು ನಿದರ್ಶಿಸುವ ರೀತಿಯಲ್ಲಿದೆ, ಅಚ್ಚುಕಟ್ಟಾಗಿದೆ. ೨೮೮ನೇ ವಚನದ 'ಅಂತರಂಗದಾಕೋ ಹಣೆಯ ಮಹಂತನೇ ಬಲ್ಲನೋ ಲಿಂಗಯ್ಯ... ಅಱುಹು ಸೋಂಕಿದ ಬಳಿಕ ನೋಡಲಿಲ್ಲ ಕೂಡಲಿಲ್ಲ ಸಂಗಯ್ಯನ' ಎಂದು ಕೊನೆ ಮಾಡಿರುವ ಸಾಲಿನಲ್ಲಿ ಅಂಗ ಲಿಂಗ ಸಾಮರಸ್ಯವನ್ನು ಹೇಳದೆ ಐಕ್ಯಸ್ಥಳದ ನಿಲವನ್ನು ನಿದರ್ಶಿಸಿದೆ. ಲಿಂಗ ಬೇರೆ, ಅಂಗ ಬೇರೆ ಎಂಬ ಭಾವನೆ ಹುಟ್ಟದಿರುವಾಗ, ಸಂಗಯ್ಯನೊಡನೆ

ಪ್ರತ್ಯೇಕವಾಗಿ ನೋಡುವುದು, ಕೂಡುವುದು, ಇತರೆ, ಸಂಗಯ್ಯನೇ ತಾನಾಗಿರುವ ಅನುಭಾವಿಕತೆ ಅಲ್ಲಿದೆ. ಮರುಳಯ್ಯನವರ ಶಕ್ತಿ ವಿಶಿಷ್ಟಾದ್ವೈತದ ಜ್ಞಾನಸೌಷ್ಠವ ಕೃತಿಯಲ್ಲಿ ಇಂಥ ಕ್ರಮಕ್ಕೆ ಮಹತ್ವ ತಂದುಕೊಟ್ಟಿದೆ ಎನಿಸುತ್ತದೆ. ಕೃತಿಯ ಕೊನೆಗೆ ನೀಲಮ್ಮನ ವಚನಗಳ ಅಕಾರಾದಿ ನೀಡಿರುವುದು ಈ ಕ್ರಮವನ್ನು ಗುರುತಿಸಲು ನೆರವಾಗುತ್ತದೆ. ೬೮ ಪುಟಗಳ ಈ ಕೃತಿ ೨೦ ಪುಟಗಳ ಸುಂದರ ಹಾಗೂ ಅಚ್ಚುಕಟ್ಟಿನ ಪ್ರಸ್ತಾವನೆ ಓದುಗನಿಗೆ ಓದಿಗೆ ಬಾಗಿನವಾಗಿದೆ.

ಅಕ್ಕನ ವಚನಗಳು (೧೯೬೩)

ತಿಪಟೂರು ತಾ ಹೊನ್ನವಳ್ಳಿಯ ಶ್ರೀ ಕರಿಸಿದ್ದೇಶ್ವರಸ್ವಾಮಿ ಮಠದ ಆರುಸಾವಿರ ವಚನಗಳ ಕಟ್ಟಿನಲ್ಲಿ 'ಅಕ್ಕನ ವಚನಗಳು' ೨೦೩ ಮತ್ತು ೧೨ ಹೆಚ್ಚಿನ ವಚನಗಳನ್ನು ಹೆಕ್ಕಿ ಈ ಕೃತಿಯನ್ನು ಸಂಪಾದಿಸಿಕೊಟ್ಟಿದ್ದಾರೆ. ೨೬ ಪುಟಗಳ ಪ್ರಸ್ತಾವನೆ ಇಟ್ಟು ಅಕ್ಕನ ವ್ಯಕ್ತಿತ್ವವನ್ನು, ಆಕೆಯ ಬದುಕನ್ನು ವಿವಿಧ ಘಟ್ಟಗಳ ನೈಜತೆಯ ಪರಿನಿವೇಶನದಲ್ಲಿ ವಿಮರ್ಶಿಸಿ, ಸಂಪಾದನೆಯ ಸೊಗಸನ್ನು ಸಲ್ಲಿಸಿದ್ದಾರೆ. ಅಕ್ಕ 'ಕನ್ನಡದ ಕಾರಣಕನ್ಯೆ' ಆದಂತೆ ವಿಶ್ವದ 'ಕ್ರಾಂತಿಕನ್ಯೆ' ಆಗಿದ್ದಾಳೆ. ತಮಿಳುನಾಡಿನ ಅಂಡಾಳ್, ಪರ್ಶಿಯಾದ ರಬಿಯಾ, ಆರ್ಕಿನ ಜೋನ್, ಮೇವಾಡದ ಮೀರಾ ಅವರೊಡನೆ ಹೋಲಿಸಿ ಮಹಿಳಾರತ್ನ, ಎಂದೆಲ್ಲ ಹೇಳಿದ್ದಾರೆ ಮರುಳಯ್ಯ. ಅಕ್ಕನ ವಿವಾಹ, ಅನುಭವ ಮಂಟಪಕ್ಕೆ ಬತ್ತಲೆ ಬಂದಾಕೆ, ಕೊನೆಗೆ ಕದಳಿ ಹೊಕ್ಕದ್ದು - ಈ ಬಗ್ಗೆ ಇರುವ ಸಮಸ್ಯೆಗಳನ್ನು ವಿಶ್ಲೇಷಿಸಲು ಆಕೆಯ ವಚನಗಳನ್ನು ಬಳಸಿಕೊಂಡು ತಮ್ಮ ಪರಿಹಾರಗಳನ್ನು ಮಂಡಿಸಿದ್ದಾರೆ.

ಅಕ್ಕನಿಗೆ ಮದುವೆ ಒತ್ತಾಯದಿಂದ ಆದದ್ದು ಎಂಬುದಕ್ಕೆ 'ಸಾವಿರ ಹೊನ್ನಿಂಗೆ ಸಾದಕೊಂಡು ಸುಣ್ಣವ ಬೆರೆಸಿದಂತೆ ಮಾಡಿದೆಯಯ್ಯ.... ಎನ್ನ ಮುಟ್ಟಿ ಪಾವನವ ಮಾಡಿ ಕಷ್ಟ ಸಂಸಾರಿಗೊಪ್ಪಿಸುವಂತೆ ಮಾಡಿದೆಯಯ್ಯ!' ಎಂಬ ವಚನವನ್ನು ತುಂಬ ಸಾಮಯಿಕ ಹಾಗೂ ಅರ್ಥಪೂರ್ಣವಾಗಿ ಉದ್ಧೃತ ಮಾಡಿ ವ್ಯಾಖ್ಯಾನಿಸಿದ್ದಾರೆ. ಬದುಕೊಂದು ಭಾವನಾ ಮೌಲ್ಯ, ಸಿರಿಮೌಲ್ಯ. ಅಂಥ ಬಾಳುವೆಗೆ ಸಲ್ಲದ ಸ್ನೇಹ, ದೈವದ ಕೃಪೆಗೊದಗದು. ಜೀವಗಳ ಸಂಗಮ ಸಮಭಂಗ ಸ್ಥಿತಿಯಾಗದು. ಓರೆಕೋರೆಗಳ ಹಂಗಿನಲ್ಲಿ ಬರಡಾಗುತ್ತದೆ. ಲಿಂಗದ ಸೊಬಗಿನ ಕಳೆಕೊಟ್ಟು, ಅದನ್ನು ಉಳಿಸಿಕೊಳ್ಳಲಾರದಂಥ ಭಂಗ ಬಂದಾಗ ಎಂಥ ನೋವಿನ ನೆಲೆ ಆಗುತ್ತದೆ. ಇದನ್ನು ಅತ್ಯಂತ ಭಾವಪೂರ್ಣವಾಗಿ ಈ ವಚನದಲ್ಲಿ ವಚನಸ್ವರೂಪಕ್ಕೇ ಕಳೆಯಾಗುವಂತೆ ಮಂಡಿಸಿದೆ. ಇದಕ್ಕೆ ಬಂಧುರ ಅನುಬಂಧದಂತೆ 'ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದಳು' ಎಂದು ಕಾವ್ಯದ ಧ್ವನಿ ವಚನ ಸತ್ವವಾಗಿ ಅಕ್ಕನ ಬದುಕನ್ನು ನಮ್ಮ ಹೃದಯದೊಳಕ್ಕೆ ತಾಗಿಸುತ್ತದೆ. ನೋಡುವವರಿಗೆ ಕಾಣದ ಬೆಂಕಿ ಅನುಭವಿಸುವವರಲ್ಲಿ ಒಳಗೇ ಸುಡುತ್ತ ಬರುತ್ತದೆ. ಆಗ ದಿಕ್ಕು ಲಿಂಗಯ್ಯನೇ, ಚೆನ್ನಮಲ್ಲಿಕಾರ್ಜುನನೇ! ಇಡೀ ನಮ್ಮ ಸಂಸ್ಕೃತಿಯ ಅನೇಕ ಸ್ತ್ರೀ ಬದುಕನ್ನು ನಾವು ಬಾಳಿಸಿರುವಂತೆ, ದೇವನ ಸಾನ್ನಿಧ್ಯದಿಂದ ವಂಚಿತಗೊಳಿಸಿದಂತೆ ಪ್ರತಿಧ್ವನಿಸಿರುವ ವಚನದ ಈ ಸಾಲು ಕಾವ್ಯ ಮೀಮಾಂಸೆಯ

'ಧ್ವನಿ'ಗೇ ಒಂದು ಅರ್ಥಪೂರ್ಣ ಕೊಡುಗೆ. ಅಕ್ಕನ ಮಾನಸ ಬದುಕನ್ನು ಅತ್ಯಂತ ಸಮರ್ಥವಾಗಿ, ಯಶಸ್ವಿಯಾಗಿ ಸೆರೆಹಿಡಿರುವ ವಚನದ ಸಾಲು. ಮರುಳಯ್ಯ ಇಂಥ ಸಾಲಿನ ಬಗ್ಗೆ ಸಂಪಾದಕರಾಗಿ ಓದುಗರ ಗಮನ ಸೆಳೆದಿರುವುದು ಸ್ವಾಗತಾರ್ಹ ವಿಪುಲ.

ಅಕ್ಕನ ಬತ್ತಲೆ ಬಂದ ಪ್ರಸಂಗವನ್ನು ಲೋಕ ಮರ್ಯಾದೆಗೆ ಮೀರಿದ ಮಾತು ಎಂಬುದನ್ನು ಸರಿಯಾಗಿಯೆ ಗಮನಿಸಿ ಗಂಡ ಹೆಂಡಿರ ಏಕಾಂತದ ಸಂದರ್ಭವನ್ನು, 'ಉಟ್ಟ ಉಡುಗೆಯ ಸೆಳೆದುಕೊಂಡರೆ ಮುಸುಕಿದ ನಿರ್ವಾಣವ ಸೆಳೆಯಬಹುದೆ?' ಎಂಬ ವಚನದ ಸಾಲನ್ನು ಸೋದಾಹರಿಸಿದ್ದಾರೆ. ಅಕ್ಕ ಮೈ ಬೋಳಾದವಳಲ್ಲ, ಸರ್ವಸಂಗ ಪರಿತ್ಯಾಗಿಯಾಗಿ 'ಬತ್ತಲೆ' ಶಬ್ದಕ್ಕೆ ಸಾಂಕೇತಿಕ ಅರ್ಥನೀಡಿರುವುದನ್ನು ಎತ್ತಿ ತೋರಿದ್ದಾರೆ. ಅಕ್ಕನ 'ಬತ್ತಲೆ'. ಉಡುಪು ತಡೆದು, ಬಟ್ಟೆಬಿಟ್ಟವಳಾಗಿ ಪಡೆದ 'ಉಡುತಡಿ' ಎಂಬ ಅರ್ಥ, ಜೈನರ ಔರಸ ದೀಕ್ಷಿತೆ ಹೆಣ್ಣು, ಸವಣಿ, ಕಂತಿ ಎನಿಸುವ ಕುರಿತ ಲೇಖನ ಹಾಗೂ ಅಭಿಪ್ರಾಯಗಳೊಡನೆ ಅಡಿಟಿಪ್ಪಣಿಗಳಲ್ಲಿ ವಿಶ್ಲೇಷಿಸಿ, ಜೈನಧರ್ಮದಲ್ಲಿ ಹೆಣ್ಣಿಗೆ ಮುಕ್ತಿ ಇಲ್ಲದಿರುವುದನ್ನು ಹೋಲಿಸಿ, ಅಕ್ಕ ಶುದ್ಧ ವೀರಶೈವಳಾಗಿದ್ದು, ಚೆನ್ನಮಲ್ಲಿಕಾರ್ಜುನನಲ್ಲಿ ಐಕ್ಯಳಾದ ಪರಿಪೂರ್ಣೆಯಾದವಳೆಂದು ಸಾಧಾರವಾಗಿ ನಿರೂಪಿಸಿರುವ ಬಗೆ ಗಮನಾರ್ಹ. ವಿದ್ವತ್ ಪ್ರಪಂಚಕ್ಕೆ ಮೆಚ್ಚು. ಸಂಪಾದಕ ಮಾಡಬೇಕಾದ ಕೆಲಸ ಇದೇ..

ಕದಳಿಯಲ್ಲಿ ಐಕ್ಯ ಸಂದರ್ಭವನ್ನು 'ಕದಳಿಯ ಕಳದಲ್ಲಿ ಒಳಹೊಕ್ಕು ನೋಡಲಾಗಿ ನೋಡಲು ತೊಳಗಿ ಬೆಳಗುವ ಜ್ಯೋತಿಯುಂಟು ಕೇಳಾ' ಎಂಬ ವಚನದ ಎಳೆ ಹಿಡಿದು, ಶಿವಸಮಯದ ಮಹಾಮಜಲಿನ ಶೂನ್ಯಸ್ಥಿತಿ ಎಂದು ಸಮರ್ಥವಾಗಿ ಮಂಡಿಸಿದ್ದಾರೆ. ಕದಳಿವನ ಅಕ್ಕನಗವಿ ಕುರಿತ ಅವರು ಎತ್ತಿರುವ ಪ್ರಶ್ನೆ, ಸೂಚಿಸಿರುವ ಅನುಮಾನ ವಿಚಾರಕ್ಕೆ ಗ್ರಾಸ ಒದಗಿಸಿದೆ. ಈ ಸಂದರ್ಭದಲ್ಲಿ ಹುಳಿಯಾರು ಕೆಂಚಮ್ಮ ಹಾಡಿರುವ ಜನಪದ ಹಾಡು ಕದಳಿ ಹೊಕ್ಕ ಪದವನ್ನು ತುಂಬ ಸಮುಚಿತವಾಗಿ ಸಾಂದರ್ಭಿಕ ಪರಾಮರ್ಶೆ ಮಾಡಿ, ಉದ್ಧೃತ ಮಾಡಿದ್ದಾರೆ. ಕದಳಿಯ ಅರ್ಥದ ಆಯಾಮ ವಿಸ್ತರಿಸಿದ್ದಾರೆ.

ಕಾವ್ಯ ಮೀಮಾಂಸೆಯ ವ್ಯಕ್ತಿತ್ವ ನಿರಸನ ಸಿದ್ಧಾಂತದ ಇಲ್ಲವಾಗುವಿಕೆ, ಅಂಗಲಿಂಗಬೆರೆತ ಸಮರಸ ಸ್ವರೂಪ, ಜೀವ, ದೇವರೊಂದಾದ ಸ್ವರೂಪ, ಶಿವ, ಇವುಗಳ ತೋಲನದ ಜೊತೆಗೆ ರಸನಿಷ್ಪತ್ತಿ ಕಾವ್ಯದ ಪರಮಗುರಿ, ಎಂಬ ಕಾವ್ಯ ಮೀಮಾಂಸೆಯ ನೆಲೆಯಲ್ಲಿ ಪರಿಶೀಲಿಸಿ ಅಕ್ಕನ ವಚನಗಳಲ್ಲಿ ಕಾವ್ಯಧರ್ಮ, ಹಾಗೂ ಧರ್ಮದ ಸಮೀಚೀನ, ಸಮೀಕರಣವನ್ನು ಶೋಧಿಸಿರುವ ಮರುಳಯ್ಯನವರು, 'ಅಂಗವ' ಲಿಂಗ ಮುಖದಲ್ಲಿ ಅರ್ಪಿಸಿ ಅಂಗ ಅಸಂಗವಾಯಿತ್ತು... ಭಾವವ ತೃಪ್ತಿಗರ್ಪಿಸಿ ಭಾವ ಬಯಲಾಯಿತ್ತು... ಎಂದು ಅಕ್ಕನ ವಚನದಲ್ಲಿ ಅದನ್ನು ಗುರುತಿಸಿದ್ದಾರೆ. ಇಲ್ಲಿ 'ಅಸಂಗ' ಹಾಗೂ 'ತೃಪ್ತಿಗರ್ಪಿಸುವುದು' ಹಾಗೂ 'ಬಯಲಾಗುವುದು' ಇವು ಅನುಕ್ರಮವಾಗಿ ಸಂತೋಷ, ರಸಸ್ರೋತ, ಆನಂದ ಅರ್ಥಾತ್ ನೆಮ್ಮದಿಯ ಸುಖಬಾಳು ಎಂಬ ಅರ್ಥ ಹೊರಡುತ್ತದೆ.

'ಚಿಲಿಮಿಲಿಯೆಂದು ಓದುವ ಗಿಳಿಗಳಿರಾ ನೀವು ಕಾಣಿರೆ, ಸರವೆತ್ತಿ ಹಾಡುವ ಕೋಗಿಲೆಗಳಿರಾ... ಎನ್ನೊಡೆಯ ಚೆನ್ನಮಲ್ಲಿಕಾರ್ಜುನ ದೇವರ ಕಂಡರೆ ಕರೆದು ತೋಱಿರೆ' - ಎಂಬ ವಚನದಲ್ಲಿ ಆರ್ತಭಾವದ ಪ್ರಾರ್ಥನಾಗೀತವಾದ ಭಾವಗೀತೆಯನ್ನು ಕಂಡಿದ್ದಾರೆ ಸಂಪಾದಕರು. ಬೆಳಗಿನ ಉಷೆಯ ಸುಂದರ ಪುಟ. ಅದರಲ್ಲಿ ಬರೆದಿರುವ ಸಂತೋಷವನ್ನು ಸೌಂದರ್ಯವನ್ನು, ಸರಳತೆ ತಾನು ತಾನು ಮುಂದು ಎಂದು ಮಾತಿನ ಶುಭ ಕಲರವ, ಬೆಡಗನ್ನಾಡುವ ಗಿಳಿಗಳು ಓದುವುದು, ಸಂತೋಷ ಕಂಡ ಕೋಗಿಲೆಗಳೂ ಸಮ ಸ್ಪಂದನದಲ್ಲಿ ಹಾಡುವುದು, ಚನ್ನಮಲ್ಲಿಕಾರ್ಜುನನ ನಿಸರ್ಗ ವ್ಯಾಪಕತೆಗೆ ಒಂದು ಆಧಾರ. ಅದನ್ನು ಅರಿತಿದ್ದ ಅಕ್ಕ ಹಾದಿಯಲ್ಲಿ ಅರಸಿ ಹೋಗುವಾಗ ಸಕಲ ಜೀವಿಗಳ ಹೃದಯದಲ್ಲಿ ಆ ಲಿಂಗಯ್ಯನನ್ನು ಕಾಣಲೆಳಸುತ್ತಾಳೆ. ಎಂಥ ಅವಿನಾಭಾವ ಲೋಕದ ಸಕಲ ಜೀವಿಗಳಲ್ಲಿ ಅಕ್ಕನಿಗೆ! ಇದರತ್ತ ಮರಳಯ್ಯ ಗಮನಸೆಳೆದಿರುವುದು ಅವರ ಲೇಖನಿಯ ಲಾಲಿತ್ಯ. ಹೀಗೆ 'ತನುಕರಗದವರಲ್ಲಿ ಮಜ್ಜನವನೊಲ್ಲೆಯಯ್ಯ ನೀನು'.. ಎನ್ನಲ್ಲಿ ಏನುಂಟೆಂದು ಕರಸ್ಥಲವನಿಂಬುಗೊಂಡೆಯಯ್ಯಾ' - ಎಂಬ ವಚನದಲ್ಲಿ ಪ್ರೇಮಗೀತೆ, ಭಕ್ತಿಗೀತವನ್ನೂ ಕಂಡು ಸ್ವಾನುಭವದ ಸರ್ವಸಮರ್ಪಣದ ಸಾಕ್ಷಾತ್ಕಾರ, ಅಕ್ಕನಿಗೆ ಸಿದ್ಧಿಸಿರುವ ಪರಿಯತ್ತ ಮರುಳಯ್ಯ ಗಮನಸೆಳೆದಿದ್ದಾರೆ. ಹಾಗೆಯೇ 'ಬೆಟ್ಟದ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ' ವಚನದ ಮೂಲಕ ಅಕ್ಕ ಲೋಕ ನಿರೀಕ್ಷಣ, ಲೋಕ ಪ್ರತಿಕ್ರಿಯೆ ತೋರಿರುವುದನ್ನು ತಿಳಿಸಿದ್ದಾರೆ. ಒಟ್ಟಾರೆ ಸಂಪಾದಕರ ಪ್ರಸ್ತಾವನೆ ಅಕ್ಕನ ಭಾವವನ್ನು ಭಕ್ತಿಯನ್ನು, ಬಯಲನ್ನು, ಔನ್ನತ್ಯದ ಸೊಲ್ಲನ್ನು ಶಿಲ್ಪದ ಜೀವಂತ ಕಳೆಯಾಗಿ ಕಡೆದು ತೋರಿದೆ.

ವಚನಗಳನ್ನು ಜೋಡಿಸಿರುವ ಕ್ರಮವೂ ಷಟ್‌ಸ್ಥಲಾಂತರ್ಗತ, ಭಾವಕ್ರಮದಲ್ಲಿದೆ. ಮೊದಲ ವಚನ ನೆಲದಮರೆಯ ನಿಧಾನದಂತೆ' ಇದ್ದು ಬೆಳೆದು 'ಚೆನ್ನಮಲ್ಲಿಕಾರ್ಜುನ ಹೃದಯ ಕಮಲದಲ್ಲಿ ಅಡಗಿದೆನು' ಎಂಬ ಕೊನೆಯ ವಚನಾನುಕ್ರಮಣಿಕೆಯೆ ಇದನ್ನು ನಿದರ್ಶಿಸುತ್ತದೆ. ಶಕ್ತಿವಿಶಿಷ್ಟಾದ್ವೈತಕ್ಕೆ, ಹೀಗೆ ಕಾವ್ಯದ ಅಭರಣ ಮಾಲೆ. ಇದರ ಜೊತೆಗೆ ಹೊಸದಾಗಿ ಕಂಡ ಕೆಲವು ಹೆಚ್ಚಿನವನ್ನು ಸೇರಿಸಿದ್ದಾರೆ. ಅಕ್ಕನ ಕುರಿತು ಸಮಕಾಲಿನ ಆದ್ಯರಾದ ಬಸವಣ್ಣ, ಅಲ್ಲಮ, ಚನ್ನಬಸವಣ್ಣ, ಸಿದ್ಧರಾಮ, ಮಡಿವಾಳ ಮಾಚಿದೇವ, ಕಿನ್ನರಿ ಬೊಮ್ಮಯ್ಯ ಮುಂತಾದವರು ಹೇಳಿರುವ ವಚನಗಳನ್ನು ಸೇರಿಸಿರುವುದು ಒಂದು ಉತ್ತಮ ಪ್ರಯತ್ನ, ಪರಾಮರ್ಶೆಗೆ ಪುಷ್ಟಿ. ಶಬ್ದಕೋಶವನ್ನು ನೀಡಿರುವುದು, ವಚನಗಳ ಪಾರಿಭಾಷಿಕ ಶಬ್ದಗಳ ಅರ್ಥೈಸುವಿಕೆಗೆ ನೆರವಾಗಿ, ವಚನದ ಭಾವವನ್ನು ಗ್ರಹಿಸಲು ಅನುಕೂಲವಾಗುತ್ತದೆ. ಅಕ್ಕಗಳ ವಚನಗಳ ಅಕಾರಾದಿ ಓದುಗರಿಗೆ ಸುಲಭ ಸಮಯದವತಾರಕ್ಕೆ ನೆರವಾಗಿದೆ. ಸಂಪಾದಕರ ಪರಿಶ್ರಮ, ವಿದ್ವತ್ತು, ಕಾವ್ಯಗ್ರಹಿಕೆ, ಮೀಮಾಂಸಾ ವೈದುಷ್ಯ, ವಚನ ಸಾಂದ್ರತೆ ಭಾವಗ್ರಹಿಕೆಯ ಯಶಸ್ವಿಯಾಗಿ ಪುಟಗೊಂಡಿವೆ ಈ ಕೃತಿಯಲ್ಲಿ.•

ಕಥಾಶ್ರಾವಣ ಮಾಡ್ಯೆ (೧೯೯೮)

ಹರಿಹರ ಕವಿಯಿಂದ ಸ್ಫೂರ್ತಿಗೊಂಡ ನಾಲ್ಕು ಕಥೆಗಳ ಸಂಕಲನವನ್ನು ಸಂಪಾದಿತವಾಗಿ ಬಂದಿರುವ ಕೃತಿ ಇದು. ಗುಪ್ತಭಕ್ತ ಅಮರನೀತಿ, ಭಕ್ತ ಸಿರಿಯಾಳ, ಕೋಳೂರು ಕೆಡಗೂಸು, ಮೈದುನ ರಾಮಣ್ಣ ಇವರ ಕಥೆಗಳ ಪದ್ಯರೂಪ ಮಾಲಿಕೆ ಇದು. ಕಥಾಶ್ರವಣ ಕಲೆಯತ್ತ ಕಾಳಜಿ ತೋರಬೇಕೆನ್ನುವ ಆಶಯ ಈ ಸಂಕಲನದಲ್ಲಿದೆ.

ಅಮರ ನೀತಿಗಳ ಕಥೆಯಲ್ಲಿ, ವಸ್ತ್ರನೇಯ್ಗೆ, ದಾನಕ್ಕೆ ಹೆಸರುವಾಸಿಯಾದ ಭಕ್ತ ಅಮರ ನೀತಿ ಶಿವನ ಪರೀಕ್ಷೆಗೆ ಕೌಪೀನದ ರಕ್ಷಣೆಯ ಸಂದರ್ಭವಾಗಿ ಒಳಗಾಗುತ್ತಾನೆ. ಅವನ ತ್ರಿವಿಧ ದಾಸೋಹದ ಭಕ್ತಿ ದೇಶದೇಶಗಳಲ್ಲಿ ಪ್ರಸಿದ್ಧಗೊಂಡು ಮುದಿ, ಮರುಳ ಜಂಗಮ ವೇಷದಲ್ಲಿ ಬಂದು ಶಿವ, ಅಮರನೀತಿಯ ನಿಷ್ಠಾಭಕ್ತಿಯ ಆಳವನ್ನು ಮತ್ತಷ್ಟು ಪ್ರಕಾಶಕ್ಕೆ ತರುವಂಥ ಈ ಕಥೆಯಲ್ಲಿ, ಒಂದು ಸಣ್ಣ ಹರಕಲು ಕೌಪೀನವನ್ನು ಜೋಪಾನವಾಗಿಟ್ಟು ನಂಬಿಕೆಯ ಔನ್ನತ್ಯವನ್ನೂ ತೋರುವಲ್ಲಿ, ಅಖಂಡ ವಸ್ತ್ರದಾನಿ ಅಮರನೀತಿ ತೋರುವ ಶಿವಕಾಳಜಿ, ಜಂಗಮನಿಷ್ಠೆ ಬಹಳ ಹೃದಯಸ್ಪರ್ಶಿಯಾಗಿ ಮೂಡಿಬಂದಿದೆ. ನಂಬಿಕೆಯನೆಲೆ ನಿಷ್ಠುರದ ಬಿತ್ತರದಲ್ಲೂ ನಿಷ್ಠೆಯ ಬಲುಹಾಗಿ ಬೆಳೆದಿರುವುದು ಇಲ್ಲಿ ಪ್ರಭಾವ. ಶಿವಭಕ್ತಿಯ ಕಾಳಜಿಯ ಆಳಕ್ಕೆ ಶಿವನೇ ಮೆಚ್ಚಿದ ಮಾಟ ಇಲ್ಲಿದೆ. ಸಂಗೀತದ ತಾಳವೈವಿಧ್ಯ, ಕಾವ್ಯದ ಬಗೆ, ಗದ್ಯದ ಸರಳತನ ತುಂಬಿಕೊಂಡ ಈ ಕಥಾ ರೂಪವನ್ನು ಅಚ್ಚುಕಟ್ಟಾಗಿ ಸಂಪಾದಿಸಿ ಶ್ರೀ ಮರುಳಯ್ಯ ಮುಂದಿಟ್ಟಿದ್ದಾರೆ. ಸಿರಿಯಾಳಪ್ಪನವರ ಕಥೆಯಲ್ಲೂ ಜಂಪೆ, ಏಕತಾಳ, ಯಾಲಪದ, ಕುರುಜಂಪೆ, ಅಟತಾಳ, ವಚನ ಇತ್ಯಾದಿ ಪ್ರಕಾರಗಳಲ್ಲಿ ಮೂಡಿಸಿರುವ ಭಾಗ ಕಥಾದೃಶ್ಯಮಾಲಿಕೆಯಾಗಿ, ನೃತ್ಯ ಹಾಗೂ ಸಂಗೀತ ರಾಗ ಮಾಲಿಕೆಯ ಸಹಯೋಗವಾಗಿ ಬಳಸಲು ಸಂಪಾದಕರು ಆಸಕ್ತರ ಗಮನ ಸೆಳೆದಿರುವುದು ಸ್ವಾಗತಾರ್ಹ. ಭಕ್ತ ಸಿರಿಯಾಳನ ಕಥೆಯಲ್ಲಿ ಸ್ವಂತ ಮಗನನ್ನು ಜಂಗಮನ ಆಪೇಕ್ಷೆಗಾಗಿ ಕೊಂದು ಬಡಿಸುವ ಪ್ರಸಂಗ, ಶಿವಭಕ್ತಿಯ ಸ್ವಚ್ಛ ಪ್ರಾಮಾಣಿಕ ನಿಷ್ಠಾವಂತ ಪರಾಕಾಷ್ಠೆಯ ಸೋದಾಹರಣೆ ಎನ್ನುವುದಿದೆ. ಶಿವನೇ ನರಬಲಿ ಬೇಡಿದ, ಮಗನ ಶಿರವನ್ನು ಒರಳಿಗೆ ಹಾಕಿ ಕುಟ್ಟುವ ಚಿತ್ರ ಮೃದು-ಕೋಮಲ ಸಂಕೇತದ ಭಕ್ತಿ ಹೃದಯಗಳಿಗೆ ರಸಸ್ಥಾಯಿಯಲ್ಲಿ ಭೀಕರವೆನಿಸಬಹುದು. ಪಂಚತಂತ್ರ ಶಿಲ್ಪಗಳಲ್ಲೂ ಇಂಥ ಚಿತ್ರಣವಿದ್ದರೂ ಕ್ರೌರ್ಯದ ಸ್ಪರ್ಶವಿದೆಯೆ ಎಂಬ ಅನುಮಾನ ಹುಟ್ಟಿಸುತ್ತವೆಯೆ? ಭಕ್ತಿಯ ಪ್ರದರ್ಶನಕ್ಕೆ ಇಂಥ ಪ್ರಸಂಗಗಳು ಯಾವ ಮಟ್ಟದಲ್ಲಿ ಎಂಥ ಪರಿಣಾಮ ಬೀರಬಲ್ಲವು ! ಮಹಾಕವಿಯ ದೃಷ್ಟಿ ಶಿವಭಕ್ತಿಗೆ ಏನು ಪ್ರಸಂಗವಾದರೂ ಆಗಬಹುದು. ಸಾಹಿತ್ಯಿಕ ಭೈರವ ಪ್ರದರ್ಶನವೂ ಬೇಕಾಗಬಹುದು. ಸಾಮಾನ್ಯ ಬದುಕು ಇದರಿಂದ ಪಡೆವ ಸಂದೇಶದಲ್ಲಿ ಶಿವಭಕ್ತಿಯ ಔನ್ನತ್ಯವೊಂದೇ ಗಮನಕ್ಕೆ ಏರುತ್ತದೆ ಎನ್ನಬಹುದೆ, ಎನ್ನುವ ಪ್ರಶ್ನೆಗಳಿಗೆ ಕಾವ್ಯಾನುಭವದ ನೆಲೆಯೊಂದೇ ಉತ್ತರಿಸಬೇಕಷ್ಟೆ. ಇದಕ್ಕೆ ಸಂವಾದಿಯಾಗಿ ಕೋಳೂರು ಕೊಡಗೂಸಿನ ಕತೆ ಅತ್ಯಂತ ಸರಳ ಸುಂದರ ಮುಗ್ಧ ಹಾಗೂ ಫಲಿತ ಭಕ್ತಿ

ಎನಿಸುತ್ತದೆ. ಸಂಸ್ಕೃತ ಶ್ಲೋಕ, ವೃತ್ತ, ರಾಗಸೂಚನೆ, ಕಾವ್ಯ ಛಂದಸ್ಸು ವಚನಗಳ ಮೂಲಕ ಬಹಳ ಚಲುವಾಗಿ ಮೂಡಿರುವ ಕಥೆಯನ್ನು ಸಂಪಾದಕರು ಓದುಗರಿಗೆ ನೀಡಿದ್ದಾರೆ. ಈಶ್ವರ ಪಾರ್ವತಿಯನ್ನು ಅಕ್ಕ ಭಾವರನ್ನಾಗಿಸಿಕೊಂಡು ಮೈದುನ ರಾಮಣ್ಣನ ಕಥೆಯನ್ನು ಮೂರು ಸಂಧಿಗಳಲ್ಲಿ ಸಾಂಗತ್ಯ ಪದವಾಗಿ ಸಂಪಾದಿಸಿಕೊಟ್ಟಿರುವ ಸಂಪಾದಕರು ಕಥೆಯ ಮಾನಸವನ್ನು ಮನಸ್ಸಿಗೆ ಅನುರಣನಿಸಿದ್ದಾರೆ. ಸಿರಿಯೆ ಶೃಂಗಾರವೆ ಹರಶರಣರ ಮುಂದೆ! ಶಿವನೆಂಬ ತುಂಬೆ ಕುಸುಮವೆ ॥ ಶಿವನೆಂಬ ತುಂಬೆ ಕುಸುಮವೆ । ನಿನ್ನ ಸಿರಿಮುಖವ್ಯಾಕೆ ಕಂದ ಬಳಲಿದವೋ॥ ಎಂಬಲ್ಲಿ ತುಂಬೆಯ ಸರಳ ಚೆಲುವಿನ ಶುಭ್ರ ಬದುಕಿಗೆ ಮೈದುನ ರಾಮಣ್ಣನ ಬದುಕೂ ಸರಳತೆಯ ಹುಲುಸು ಎಂಬ ಸಂವಾದಿ ರೂಪವೆನಿಸುವಂತೆ ಈ ಕತೆ ಬಂದಿದೆ. ಕೊಡಗೂಸು ಹಾಗೂ ರಾಮಣ್ಣನ ಕಥೆಗಳಲ್ಲಿ ಬರುವ ಭಕ್ಷ ಭೋಜ್ಯಗಳ ವೈವಿಧ್ಯಮಯ ವರ್ಣನೆ, ಕನ್ನಡನಾಡಿನ ಅಡುಗೆಗಳ ಅಧ್ಯಯನಕ್ಕೆ ಸೂಕ್ತ ಮಾದರಿ ಎನಿಸುವಂತಿವೆ.

ಕೊಡಗಿನ ಸೋಮವಾರಪೇಟೆ ಮಠದಲ್ಲಿ ನನಗೆ ದೊರೆತ ೨-೧೨-೧೮೯೨ರಲ್ಲಿ ಬರೆದಿಟ್ಟ (ಕ್ರಿ.ಶ. ೧೮೯೦ರ) ಮೈದುನ ರಾಮಯ್ಯನ ಸುವ್ವಿ ಪದಗಳ ಹಸ್ತಪ್ರತಿಯಲ್ಲಿ, ಮೈದುನ ರಾಮಣ್ಣನ ಕಥೆಯ ಪದ್ಯಗಳು ಕಂಡು ಬರುತ್ತವೆ. ಡಾ॥ ಸಾ.ಶಿ.ಮ. ಸಂಪಾದಿತ ೮೨, ೮೪ನೇ ಪದಗಳಿಗೂ, ಸುವ್ವಿಯಲ್ಲೂ ಬಂದಿರುವ ಅದೇ ಪದಗಳಿಗೂ ಸ್ಪಷ್ಟವಾದ ಪಾಠಾಂತರ ಎದ್ದು ಕಾಣುತ್ತದೆ.

<u>ಡಾ। ಸಾಶಿಮ ಸಂಪಾದಿತ ಸಾಲು</u> (ಬೇರೊಂದು ಪ್ರತಿ)	<u>ಹಸ್ತಪ್ರತಿಯ ಪದದಲ್ಲಿ</u>
ಅಕ್ಕಯಿಲ್ಲದ ಮನೆಯು ಅರ್ಕವಿಲ್ಲದ ಮೇಘ	ಅಕ್ಕನಿಲ್ಲದ ಹಬ್ಬ ಅರ್ಕವಿಲ್ಲದ ಮೇಘ
ಮಕ್ಕಳಿಲ್ಲದವರ ಮನಬಾಳು	ಮಕ್ಕಳಿಲ್ಲದವರ ಬಾಳೂ ಸುವ್ವಿ
ಮಕ್ಕಳಿಲ್ಲದವರ ಮನೆಬಾಳು ನಮ್ಮಮ್ಮ	ಮಕ್ಕಳಿಲ್ಲಾದವರ ಮನೆಬಾಳು ಯಂನಮ್ಮ
ಹೊಕ್ಕರೆ ಪುಣ್ಯ ಮೊದಲಲ್ಲಾ	ಹೊಕ್ಕಾರೆ ಮುಂನ ಫಲವಿಲ್ಲಾ ಸುವ್ವಿ

ಮರುಳಯ್ಯನವರ ಸಂಪಾದನೆಯ ಸತ್ವ ಛಂದೋಸಂದರ್ಭದ ಹಿನ್ನೆಲೆಯಲ್ಲಿಯೂ ಎದ್ದು ಕಾಣುತ್ತದೆ. ಗಮನಾರ್ಹ ವಿಷಯವಾಗಿ ರಾಮಣ್ಣನ ಸುವ್ವಿಯಲ್ಲಿಯೂ ಈ ಪದಗಳು ಬಂದಿರುವುದಾಗಿದೆ. ಸೋಮವಾರಪೇಟೆ ಹಸ್ತಪ್ರತಿಯಲ್ಲಿ ಇರುವ

'ಅಕ್ಕ ಬಾ ಅರಳಿ ಬಾ। ಚಿಕ್ಕ ಮುತ್ತೈದೆ ಬಾ।.... ಅಕ್ಕ ಬಾ ಅರಳಿಬಾ
ಪುಷ್ಪಗಿರಿಗೆ ವಡತಿ ಬಾ।... ಅಕ್ಕ ಮಹಾದೇವಿ ಕರದಾಳೂ ಸುವ್ವಿ'

- ಈ ಸಾಲುಗಳು ಕೊಡಗಿನ ಪುಷ್ಪಗಿರಿಗೆ ರಾಮಣ್ಣನ ಸಂಬಂಧಕ್ಕೂ ಅನ್ವಯಿಸಿ ಹೇಳಿರುವಲ್ಲಿ ಮರುಳಯ್ಯನವರ ಕೃತಿಯಲ್ಲಿ ಬರಲು ಸಹಜವಾಗಿ ಅವಕಾಶವಿಲ್ಲ. ಸೋಮವಾರಪೇಟೆ ಹಸ್ತಪ್ರತಿಯಲ್ಲಿ ತಾಯಿ ಮಗ ಇಬ್ಬರೂ ಸೇರಿ ಶಿವ ಗಿರಿಜೆಯರಿಗೆ ಹಬ್ಬದಡಿಗೆ ಮಾಡಿ ತಣಿಸಿದ ಚಿತ್ರ ಜನಪದ ಸರಸ ಸಾಂಗತ್ಯದಿಂದ ಕೂಡಿ ಬಂದಿದೆ. ಭಕ್ತಿ ಸಂಸ್ಕೃತಿಯ ಸರಳ ಹಾಡಾಗಿ ಬಂದಿದೆ. ಈ ಸುವ್ವಿಯಲ್ಲಿ ಅಂಕಿತವಿಲ್ಲದಿದ್ದರೂ,

ಐತಿಹಾಸಿಕ ಮೈದುನ ರಾಮಣ್ಣನ ಸುಪ್ವಿ ಇದಾಗಿದೆ ಎನಿಸುತ್ತದೆ. ಆದಾಗಿ ಅವನ ಐತಿಹಾಸಿಕತೆಗೆ ಪೋಷಕವಾಗಿ ಈ ಸುಪ್ವಿ ನಿಲ್ಲಬಹುದೆನಿಸುತ್ತದೆ. ಇನ್ನು ಭಕ್ತಕವಿ, ಕ್ರಾಂತಿಕವಿ ಹರಹರನಿಂದ ಪ್ರೇರಿತಗೊಂಡ ಈ ನಾಲ್ಕು ಕಥೆಗಳಿಗೆ ಭಕ್ತ್ಯಾಂಶವನ್ನಷ್ಟೆ ಸ್ವೀಕರಿಸಿ, ಮಹೇಶ್ವರ ಸ್ಥಲದ (ಷಟ್‌ಸ್ಥಲದ ಎರಡನೇ ಹಂತ) ನಿಷ್ಠಾಭಕ್ತಿದ್ಯೋತಕದ ಪಾತ್ರಗಳನ್ನು ಗಮನಿಸಿದೆ ಎಂದಿದ್ದಾರೆ ಸಂಪಾದಕರು. ಇವುಗಳಲ್ಲಿನ ಕಥಾ ಸ್ವಾರಸ್ಯ, ಕಾವ್ಯಾಂಶದ ಸೊಗಸು, ಬೋಧನೆ. ಹರವು, ಭಾವಾಂಶದ ಚೌಕಟ್ಟನ್ನೂ ಅವರು ಗುರುತಿಸಿ ಓದುಗರ ಮುಂದಿಟ್ಟಿದ್ದಾರೆ. ಪ್ರಸ್ತಾವನೆಯ ಈ ಅಂಶಗಳ ಜೊತೆಗೆ, ಕಥೆ, ಕವಿತೆಗಳ ಸ್ವರೂಪ ಕುರಿತು ಪಾಶ್ಚಾತ್ಯರ ನಿಲುವುಗಳನ್ನು ತೌಲನಿಕವಾಗಿ ವಿಮರ್ಶಿಸಿ, ಭಾರತದ ಕಥಾ ಪರಂಪರೆಯನ್ನು ಉಪನಿಷತ್ತುಗಳಲ್ಲಿಯೆ ಗುರುತಿಸಿದ್ದಾರೆ. ವಿಕಸನ ಹಾದಿಯನ್ನು ಮೆಲುಕು ಹಾಕಿ, ವಚನಕಾರರ ಪ್ರಭಾವ ಹರಿಹರನ ಕಥಾ ರಗಳೆಗಳ ಮೇಲೆ ಆಗಿರುವ ಬಗೆಯನ್ನೂ ತಿಳಿಸಿದ್ದಾರೆ. ಸಂಪಾದಕರಾಗಿ ಕೃತಿಯ ಕೊರಳ್ ಹಾಗೂ ಕರುಳ್ ಗುಣವನ್ನು ತೋರಿದ್ದಾರೆ.

ಸಿದ್ದರಾಮಯ್ಯ ದೇವರ ವಚನಗಳು (೧೯೭೮)

ತುಮಕೂರು ಜಿಲ್ಲೆ ತಿಪಟೂರು ತಾಲ್ಲೂಕು ಹೊನ್ನವಳ್ಳಿ ಗ್ರಾಮದ ಶ್ರೀ ಕರಿಸಿದ್ಧ ದೇವರ ಮಠದಲ್ಲಿ ದೊರೆತ ವಚನ ಕಟ್ಟುಗಳಲ್ಲಿ ೧೩೧೩ ರಕ್ಷಿದ್ದ ಸಿದ್ದರಾಮಯ್ಯ ದೇವರ ವಚನಗಳನ್ನು ಡಾ॥ ಸಾ.ಶಿ. ಮರುಳಯ್ಯನವರು, ಡಾ॥ ಎಂ.ಎಂ. ಕಲುಬುರ್ಗಿ ಅವರ ಸಹಯೋಗದಲ್ಲಿ ಸಂಪಾದಿಸಿ ಪ್ರಕಟಿಸಿರುವ ಕೃತಿ ಇದು. ಈ ಸಿದ್ಧರಾಮನ ವಚನಗಳ ಸಂಕಲನಕಾರರೇ ಬಹುಶಃ ಶ್ರಿ ಮಠದ ಪೂಜ್ಯ ಸ್ವಾಮೀಜಿಯವರೇ, ಸ್ವಹಸ್ತಪ್ರತಿ ಮಾಡಿಕೊಂಡವರಾಗಿ, ಹೊಸ ವಚನಗಳನ್ನು ಪ್ರತಿಮಾಡಿಟ್ಟಿದ್ದಿರಬಹುದೆಂಬ, ಊಹೆ ಸಂಪಾದಕರದು. ಷಟ್‌ಸ್ಥಲಗಳ ಕಲ್ಪನೆಗೆ ಬದಲು ರಾಗ ಸಂಯೋಜಿತ ಸ್ವರ ವಚನಗಳಂತೆ ಸಾರೋದ್ಧಾರದಿಂದ ಹಿಡಿದು ಬಸವಸ್ತುತಿವರೆಗೆ ೧೧ ಶೀರ್ಷಿಕೆಗಳಲ್ಲಿ ಅಧ್ಯಾಯಗೊಂಡಿವೆ. ಇಲ್ಲಿನ ಸಂಕಲಿತ ವಚನಗಳು. ಅದನ್ನು ಒಂದು ಕ್ರಮದಲ್ಲಿ ನಿರ್ದೇಶಿಸಿ ಸಂಪಾದಿಸಿಕೊಟ್ಟಿರುವ ದ್ವಯ ವಿದ್ವದ್ ಸಂಪಾದಕರ ಪರಿಶ್ರಮ ಮೆಚ್ಚುವಂತಹುದು. ಸಂಕಲನಕಾರನ ಆಧ್ಯಾತ್ಮಪರ ದೃಷ್ಟಿ, ಪ್ರಾಸಪ್ರಿಯತೆ, ಛಂದೋಬದ್ಧ ವಚನಗಳತ್ತ ಇರುವ ಒಲವು ಹೀಗಾಗಿ ಆ ಸಂಗ್ರಹಕಾರನ ವೈಶಿಷ್ಟವನ್ನು ಗುರುತಿಸಿ ಹೇಳಿದ್ದಾರೆ. ಸಿದ್ಧರಾಮನ ಬಹುಮುಖ ಪ್ರತಿಭೆಯ ಪರಿಚಯದತ್ತ ಅವರ ಪ್ರಯತ್ನ ಇಲ್ಲಿ ನಡೆದಿದೆ.

ಸಿದ್ದರಾಮ ಬದುಕಿನ ಧರ್ಮದಲ್ಲಿ ಒಲವಿಟ್ಟವನು. ಅಲೌಕಿಕಕ್ಕಿಂತ ನಿತ್ಯ ಇಹದ ಬಾಳಿಗೆ ತೆರೆದುಕೊಂಡವನು. ಇಳೆಯ ಸೊಗಸೇ ಅವನ ಬದುಕಿನ ಬೆಳಸು. ಕೈಲಾಸ ಎಲ್ಲಿಯೋ ಬೆಟ್ಟದ ಮೇಲಿರುವ ಜೀವಗಳ್ಳ ಮುನಿಗಳಿರುವ ನೆಲೆ ಅಲ್ಲ. ಸಿದ್ಧರಾಮನಿಗೆ 'ಲಿಂಗಾಂಗ ಸಾಮರಸ್ಯವ ತಿಳಿದು ನಿಮ್ಮ ಪಾದಪದ್ಮದೊಳು ಬಯಲಾದ ಪದವೆ ಕೈಲಾಸವಯ್ಯಾ ಕಪಿಲ ಸಿದ್ಧ ಮಲ್ಲಿಕಾರ್ಜುನಾ', ಎಂದರೆ ಅಂಗದ ಮೇಲಿನ ಲಿಂಗವೆ ಗುರುವು ಕರದೊಳಟ್ಟ ಲಿಂಗದ ಕ್ರಿಯಾ ಕುರುಹಿನ ನೆಲೆಯು ಕೈಲಾಸ, ಲಿಂಗದ

ನಿಜನಿವಾಸ. ಹಾಗೆ ಶ್ರೀಮುಖಗೊಂಡ ಲಿಂಗದ ಬೆಳಗಿನಲ್ಲಿ ತಾನಲ್ಲದೆ ಲೋಕದವರನ್ನು ಬೆಳಗಿಸಿಬೇಕೆನ್ನುವ ಹಂಬಲ ಅವನ ಹೃದಯದ ತುಂಬ ಹರಡಿಕೊಂಡಿದೆ. ಸಂಪಾದಕರು ಇಥ ಸಿದ್ಧರಾಮನ ವ್ಯಕ್ತಿತ್ವವನ್ನು ರಾಘವಾಂಕನಿಂದಲೂ ಹೆಕ್ಕಿ ಗುರುತಿಸಿದ್ದಾರೆ. ಕಾಯಕ ಶಿವಯೋಗದ ಸಿದ್ಧಿಗೆ ಚೈತನ್ಯದ ಮಂಗಳ ಕ್ರಿಯೆ ಎಂಬುದು ಸಿದ್ಧರಾಮನಲ್ಲಿಯ ಭಾವತುಂಬಿದ ಆಚಾರಕ್ರಿಯೆ. ಸೇವೆಯ ಭೌತಿಕ ಬಾಹುಳ್ಯದ ಮೊತ್ತಕ್ಕೆ ಮರದ ಆಧ್ಯಾತ್ಮಿಕ ಸತ್ವ ಅವನಿಗೆ ಸಂಗಮಗೊಂಡದ್ದು ಇಷ್ಟಲಿಂಗದೀಕ್ಷೆ ಪಡೆದಾಗಲೇ, ನಿಜೇಷ್ಟಲಿಂಗದ ವಿಶ್ವತೋ ಸಂಪತ್ತು ರೂಪವನ್ನು ಈ ಚೈತನ್ಯದ ಇಷ್ಟಲಿಂಗದ ಕುರುಹಿನಲ್ಲಿ ಕಂಡುಕೊಂಡಾಗಲೇ, ಅದರೊಡನೆ ಸ್ವಾಯತ್ತಗೊಂಡು ಸನ್ನಿಹಿತನಾದಾಗಲೇ. ಸಿದ್ಧರಾಮ ಲಿಂಗಕ್ಕೆ ಲಿಂಗವೇ ಆಧಾರವಾದ 'ಯೋಗಲಿಂಗ'ವನ್ನು ದರ್ಶಿಸಿಕೊಂಡವ. ಈ ಸ್ವಂತಿಕೆಯ ಸೊಲ್ಲು ಹೆಣ್ಣು, ಪುರುಷದೇವತೆಯ ಸಮಸಮ ನಿಂತು ತನಗೆ ತಾನೆ ಪ್ರತ್ಯಕ್ಷ ಕಪಿಲಸಿದ್ದಮಲ್ಲಿಕಾರ್ಜುನನೆನಿಸುವಲ್ಲಿ ಕಾಣುವಂತಿದೆ. ಇನ್ನು ಸಂಪಾದಕರು, ಕಪಿಲ ಸಿದ್ಧಮಲ್ಲಿಕಾರ್ಜುನ ಎಂಬ ಸಿದ್ಧರಾಮನ ವಚನಾಂಕಿತಕ್ಕೆ ಪ್ರಸ್ತಾವನೆಯಲ್ಲಿ, ವ್ಯಾಖ್ಯೆಯನ್ನು ಕೊಡುತ್ತ ಕಪಿಲಸಿದ್ಧ ಅಂದರೆ ಗೋವಿನ ರೂಪದ ಸಿದ್ಧ ಪುರುಷ, ಕಾಯಕದಲ್ಲಿ ಆರಾಧ್ಯ ದೈವವನ್ನು ಆರಾಧಿಸಿದವ, ಆತ್ಮಾನುಸಂಧಾನಕ್ಕೆ ಪಾತ್ರವಾದ ಕವಿಲೆ ಅಥವಾ ಕಪಿಲೆಸಿದ್ಧನೇ ಆರಾಧ್ಯದೈವ. ಅದೇ ಅಂಕಿತ ಎಂದಿದ್ದಾರೆ. ಆದರೆ ಪೌರಾಣಿಕ ಪ್ರತಿಮೆಯ ವಾಸನೆಗೆ ಬದ್ಧವಾಗಿ ಇಷ್ಟಲಿಂಗೋಪಾಸನೆಯ ನಂತರವೂ ಅದೇ ಕಲ್ಪನೆ ಅವನಲ್ಲಿ ಉಳಿದಿತ್ತೆ ಎಂಬ ಬಗ್ಗೆ ಪರಿಶೀಲಿಸಬೇಕಾಗುತ್ತದೆ. ಹಾಗೂ 'ಕಪಿಲ' ಶಬ್ದಕ್ಕೆ ನಿಲ್ಲದೆ 'ಸಿದ್ಧಮಲ್ಲಿಕಾರ್ಜುನ' ಶಬ್ದವೂ ಸೇರಿರುವ ಕಾರಣವನ್ನು ಪರಿಶೀಲಿಸಿ ಸಂಪಾದಕರು ಅರ್ಥೈಸಬೇಕಿತ್ತು ಎನಿಸುತ್ತದೆ.

ಸಿದ್ಧರಾಮನ ವಚನಗಳು ಹಾಗೂ 'ತ್ರಿವಿಧಿ'ಗಳ ಛಂದೋಬದ್ಧತೆಯನ್ನು ಲಯದ ನಿಯತತೆಯನ್ನು, ಪ್ರಾಸಪ್ರಿಯತೆಯನ್ನು ಗಮನಿಸಿ ಹೇಳಿರುವುದು ಆಸಕ್ತಿ ಕೆರಳಿಸುತ್ತದೆ. ಇವನ ''ತ್ರಿಪದಿಗಳು 'ಗುರುಲಿಂಗ ಜಂಗಮ' ಎಂಬ ವೀರಶೈವ ತ್ರಿವಿಧಿಗಳ ಸೃಷ್ಟೀಕರಣ' ಎಂದಿರುವ ಸಂಪಾದಕರು, ಇವನ ವಚನಗಳಲ್ಲಿಯ ತ್ರಿವಿಧಿಯ ನಡಿಗೆ, ಸಾಂಗತ್ಯದ ಧಾಟಿ, ಸೀಸಪದ್ಯಗಳ ಓಟ, ಕುಸುಮ ಷಟ್ಪದಿಯ ಸ್ವರೂಪ, ಅಂಶಗಣದ 'ಷಟ್ಪದಿ' ವಿನ್ಯಾಸವನ್ನು ಮಾತ್ರಾಗಣ ವಿನ್ಯಾಸಕ್ಕೆ ಪರಿವರ್ತಿಸುವ ಪ್ರಥಮ ಪ್ರಯತ್ನ ಸಿದ್ಧರಾಮನಲ್ಲಿದೆ, ಎಂದು ಹೇಳಿ, ಸೋದಾಹರಣೆಯೊಡನೆ ಶಾಸನ ಹಾಗೂ ಸಿದ್ಧರಾಮನ ತ್ರಿವಿಧಿಯನ್ನು ತೋಲನಿಸಿರುವುದು, ಕಾವ್ಯಾಸಕ್ತರಿಗೆ ಆಧುನಿಕ ವಚನಕಾರರಿಗೆ ಒಂದು ಸುಂದರ ತೌಲನಿಕ ಮುನ್ನುಡಿಯಂತೆ ಕಾಣಬರುತ್ತದೆ. ಸಿದ್ಧರಾಮನ ಷಟ್ಪದಿ ಪ್ರಯೋಗ ಕುಸುಮ ಷಟ್ಪದಿಯಾಗಿ ರೂಪುಗೊಂಡಂತೆಂದಿದ್ದಾರೆ ಸಂಪಾದಕರು. ಅಲ್ಲದೆ ಬಹುಶಃ ಕ್ರಿ.ಶ. ೧೧೬೦ದ ವಚನಕಾರ ಉಳುಮೆಯ ಚಿಕ್ಕಯ್ಯ ತನ್ನ ವಚನಗಳ ನಡುವೆ ವಾರ್ಧಕ ಷಟ್ಪದಿಯೊಂದನ್ನು ರಚಿಸಿದ ಬಗ್ಗೆ ಹೆಕ್ಕಿ ಉದ್ಧೃತ ಮಾಡಿರುವ ವಚನ 'ಭವಪಾಶ ಬಂಧದ್ದಿಂ ಬಿಗಿದು ಕಪಿಲೆಯ ಹುಲಿಯ । ಗವಿಯೊಳಗೆ ಕಟ್ಟಿದಂತಾದೆ ಸಂಸಾರವೇ । .... ಭವಭರಿತ ಪರಮೇಶ ಪಾಲಿಸೈ

ಸದ್ಗುರುವೆ ಉಳುಯುಮೇಶ್ವರ ಲಿಂಗವೇ ॥ ಆಗಿದೆ. ಇದೆಲ್ಲ ಕಾವ್ಯ ಸಂದರ್ಭದಲ್ಲಿ 'ವಾರ್ಧಕದಲ್ಲಿ ರಾಘವಾಂಕ, ಲಕ್ಷ್ಮೀಶ, ವಿರೂಪಾಕ್ಷ ಪಂಡಿತ, ಭಾಮಿನಿಯಲ್ಲಿ ಭೀಮಕವಿ, ಚಾಮರಸ, ಕುಮಾರವ್ಯಾಸ, ಕುಮಾರ ವಾಲ್ಮೀಕಿ' ಮೊದಲಾದ ಕವಿ ಶ್ರೇಷ್ಠರನ್ನು ಕೊಟ್ಟಿತು. ಸಿದ್ಧರಾಮನ ಪ್ರಯತ್ನ ಸಫಲ ಕವಿ ಪರಂಪರೆಯನ್ನು ನಿರ್ಮಿಸಿತು.' ಎಂಬ ಸಂಪಾದಕರ ಅಭಿಪ್ರಾಯ ಕೇವಲ ಅಭಿಪ್ರಾಯವೆನಿಸದೆ ಕಾವ್ಯ ವಿಕಸನ ಪರಂಪರೆಯ ಸಂಶೋಧನೆಯ ನವ ಆವಿಷ್ಕಾರವೆಂಬ ಭಾವ ಕಾವ್ಯಾಸಕ್ತರಲ್ಲಿ ಉದಿಸುತ್ತದೆ. ಇದಲ್ಲದ ಉದ್ಧೃತ ಮಾಡಿರುವ ಸಿದ್ಧರಾಮನ ವಚನಗಳನ್ನು ಗಮನಿಸಿದರೆ ಛಂದೋಪ್ರಯೋಗದ ನವ ಅಂಕಣದ ಪುಷ್ಪ ಪ್ರವೇಶವಷ್ಟಲ್ಲದೆ, ದೇಸಿ ರಚನೆಯ ಸೊಗಡು ಕಾವ್ಯಾಂಶದ ಪಲ್ಲವ, ಭಾವಗೀತೆಯ ಚೆಲುವು (ಕಾಮನನು ನೋಡಿದ ಕಂಗಳಲಿ ನೋಡದೆ । ಸೋಮ ನಯನದಿ ನೋಡಿ ಸಲಹು ತಂದೆ...)

('.. ರಂಭೆ ಎಂದೆಡೆ ನಿನ್ನಂಗನೆಯಾಗಲಿಲ್ಲವ್ವ । ಒಂದು ದಿನ ಸ್ವಪ್ನದಲ್ಲಿಯಾದರೂ ರತಿಸಲಿಲ್ಲ ನೋಡಾ ಕಪಿಲಸಿದ್ಧ ಮಲ್ಲಿಕಾರ್ಜುನಾ')

('ಬೀಸುವ' ಗಾಳಿ ಧೂಳ ನೆತ್ತಲು' ಮುಸುಳಿದನೆ ಸೂರ್ಯನು....'

ಇಲ್ಲೆಲ್ಲ ಹಾಸು ಹೊಕ್ಕು ಕಾವ್ಯ ತಂಬುಲದ ಕೆಂದುಟಿಯ ಕೆಂಪು ಚೆಲುವಿನಂತೆ ಮನಕ್ಕೆ ಮುದ, ಭಾವಕ್ಕೆ ಹದ ಬುದ್ಧಿಗೆ ಸೊದೆ ಮತ್ತು ಶೋಧಗಳನ್ನು ತುಂಬಿ ತರುವಂತಿವೆ. ಇವೆಲ್ಲ ಶಿವಭಾವದ ಮೈಸಿರಿಯ ಫಲವಾಗಿದೆ. ಬಸವಣ್ಣನ ವಚನಗಳ ಪ್ರಭಾವವನ್ನು ಸಿದ್ಧರಾಮನಲ್ಲಿ ಗುರುತಿಸಿ, ಆತನ ಆತ್ಮ ಸೌಂದರ್ಯದ ಬೆಳಗು ಹಂಚುವ ಬೆಳಕಿನತ್ತವೂ ಗಮನ ಸೆಳೆದಿದ್ದಾರೆ ಸಂಪಾದಕರು. ಸಿದ್ಧರಾಮನ ಧೀರ ಸ್ವಂತಿಕೆ, ಕ್ರಾಂತಿ ದೃಷ್ಟಿ, ಪ್ರಯೋಗಶೀಲ ಮನಸ್ಸು, ನೂತನ ಪದಪ್ರಯೋಗ, 'ಕಾಲನ ಕಮ್ಮಟ, ಮನಪುಷ್ಪ, ಕಂಜಕನ್ನಿಕೆ, ಇಚ್ಛಂದ) ಇತ್ಯಾದಿಗಳನ್ನು ಗಮನಿಸಿ ಕನ್ನಡದ ಕಾರಣಪುರುಷ ವಚನಕಾರರಲ್ಲೊಬ್ಬ ಎಂಬ ಹಿರಿಯ ಮೆಚ್ಚುಗೆಯನ್ನು ಸೂಚಿಸಿದ್ದಾರೆ. ಕಾವ್ಯ ಪುರುಷ ಸಿದ್ಧರಾಮನನ್ನು ಸಂಪಾದಕರು ವಚನಸುವರ್ಣಸೀಮೆಯೊಳಗೆ ಕಡೆದು ನಮ್ಮ ಮುಂದೆ ನಿಲ್ಲಿಸಿರುವ ಪರಿಶ್ರಮ ಅಭಿನಂದನಾರ್ಹ.

ಈ ವಚನ ಸಂಪಾದನೆಯಲ್ಲಿ ಭೂಪಾಳ, ಮಲಹರಿ ಇತ್ಯಾದಿ ಉದಯರಾಗಗಳಿಗೆ ಹೊಂದಿಕೊಳ್ಳುವ ವಚನಗಳನ್ನು ತೋರಿಸಿ ಪಾಠಾಂತರಗಳನ್ನು ಸಾಂದರ್ಭಿಕವಾಗಿ ನೀಡಿದ್ದಾರೆ.

ಸಂಕಲಿತ, ಸಂಪಾದಿತ ವಚನಗಳನ್ನು ಗಮನಿಸುವಾಗ 'ಶಿವಲಿಂಗಾರ್ಚನೆಯ ಮಾಡಿದ ಬಳಿಕ । ಸರ್ವವೂ ತಾವಾಗಿರಬೇಕು', 'ಚರಲಿಂಗಾರ್ಚನೆಯಿಂದೇ ಭಕ್ತನಿನಿಸುವ ಮಾಹೇಶ್ವರನೆನಿಸುವ ಪ್ರಾಣಲಿಂಗ, ಶರಣ ಪ್ರಸಾದಿ (ಸಂಪಾದಕರು, ಮಾಹೇಶ್ವರ ಬಳಿಕ ಬರಬೇಕಾದ ಪ್ರಸಾದಿ ಇಲ್ಲಿ ಬಂದಿದೆ ಎಂಬ ಅಡಿ ಟಿಪ್ಪಣಿಯನ್ನು ಸಂದೇಹ ನಿವಾರಣೆಗೆ ನೀಡಿರುವುದು ಉಚಿತ. ಅದು ಬಹುಶಃ ಲಿಪಿಕಾರನ ತಪ್ಪಿನಿಂದಾಗಿ ಅನುಕ್ರಮತೆ ವ್ಯತ್ಯಾಸವಾಗಿರಬಹುದು) ಐಕ್ಯನೆನಿಸುವ, 'ಅಪಾರ

ಪ್ರಾಣವಾದರೆ ಅನ್ಯಕ್ಕೆರಗದಿರಬೇಕು' ಅಯ್ಯಾ ನಿನ್ನವರೆ ಕಂಡು ಕರಗದನ್ನಕ್ಕ । ಅಯ್ಯಾ ನಿನ್ನವರ ಕಂಡು ನೀನೆಂದು ಕಾಣದನ್ನಕ್ಕ । ಎಂತೊಲಿವೆಯಯ್ಯಾ?। ಇತ್ಯಾದಿ ಸಾಲುಗಳಲ್ಲಿ ಸಿದ್ಧರಾಮನ ಹೃದಯ, ಬುದ್ಧಿ ವೈಶಾಲ್ಯ ಪಲ್ಲವಿಯನ್ನು ಶಿವಸಿರಿಯಲ್ಲಿ ಹೇಳುತ್ತಿರುವಂತೆ ಚೈತನ್ಯ ಸ್ಫುರಣ ಕಾಣಬರುತ್ತದೆ. ಇದಲ್ಲದೆ ಶೀರ್ಷಿಕಾ ವಿಭಾಗಗಳನ್ನು ಮಾಡಿ, ವೈರಾಗ್ಯ ಸಮತೆಯಲ್ಲಿ ತನುಗುಣದ ಮರೆವು, ಆಚಾರದ ಅರಿವು, ಶಿವಯೋಗ ಶ್ರೀರಾಮನಾಥ ಭಾಷೆಯಲ್ಲಿ ನಾದು ಬಿಂದು ಕಲೆಗಳ ಸಂಗಮದಲ್ಲಿ ಬಸವಣ್ಣನ ಸಂಗ, ಆ ಪಾದೋದಕಕ್ರಮದಲ್ಲಿ ಅಂಗಲಿಂಗ ಸಂಬಂಧದ ಸ್ವಾನುಭಾವ ನಿಷ್ಠೆಯಲ್ಲಿ ಸಂದಿಲ್ಲದ ನಿತ್ಯವಾಗುವಿಕೆ, ಲಿಂಗಮಹಾತ್ಮೆಯಲ್ಲಿ ಲಿಂಗದ ಅತಿಶಯ ಜ್ಯೋತಿರ್ಮಯತೆ, ಬಸವಸ್ತುತಿ-ಪ್ರಸಾದಸ್ಥಲದಲ್ಲಿ ಬಸವಣ್ಣನ ಅನಾದಿ ಸಂಸಿದ್ಧತೆ, ಅಕ್ಷರಾಂಕ-ಶಿವಯೋಗ ಮುದ್ರೆಯಲ್ಲಿ ಆರಕ್ಷರದ ಭೇದ ಮುವತ್ತಾರನು ಮಿರುವ ತಾತ್ವಿಕ ಅನುರಣನ, ಸೀಮಾಕ್ಷರ ಭಾಷೆಯಲ್ಲಿ ಬೀಜಾಕ್ಷರಗಳ ಸೀಮಾತೀತತೆ, ಪುರಾತನದ ಅನುಮತದಲ್ಲಿ ಬಸವಣ್ಣನೊಳಗಾಗುವ ಹದುಳ, ಸಮತೆಯಲ್ಲಿ ಸರ್ವಜೀವರುಗಳಲ್ಲಿರುವ ಯೋಗಿನಾಥನಿಂದಾಗಿ ಸರ್ವ ಜೀವಂಗಳು ತಾನೆಯೆಂಬ ಭಾವ - ಹೀಗೆ ಇರುವ ವಿಶಿಷ್ಟ ಶೀರ್ಷಿಕೆಗಳತ್ತ ಓದುಗರ ಗಮನವನ್ನು ಸಂಪಾದಕರು ಸೆಳೆಯುತ್ತ, ಸಿದ್ಧರಾಮನ ಅಧ್ಯಾತ್ಮಿಕ ಭಾವಗಳ ಕುಸುರಿಶಿಲ್ಪದ ಪರಿಚಯವು ದಟ್ಟವಾಗಿ ಆಗುವಂತೆ ಮಾಡಿದ್ದಾರೆ. ಸಿದ್ಧರಾಮನ ಆಧ್ಯಾತ್ಮಿಕ ವ್ಯಕ್ತಿತ್ವದ ದರ್ಶನ ಮಾಡಿಸಿದ್ದಾರೆ.

ಅಕ್ಕನ ವಚನಗಳು

ಪ್ರಕಾಶ. ಆರ್. ಕಮ್ಮಾರ್

ಸಾ.ಶಿ. ಮರುಳಯ್ಯನವರು ನಾಡಿನ ಉದ್ದಗಲಕ್ಕೂ ಕನ್ನಡ ಸಾಹಿತ್ಯದ ಕಂಪನ್ನು ಪಸರಿಸುವಂತೆ ಮಾಡಿ ಖ್ಯಾತಿಗಳಿಸಿದ ಸಾಹಿತಿ. ಖ್ಯಾತ ಕವಿಗಳೂ, ಶ್ರೇಷ್ಠ ವಿದ್ವಾಂಸರೂ ಹೌದು. ಇವರ ಸತತ ಅಭ್ಯಾಸ, ಅನನ್ಯ ಶ್ರದ್ಧೆ, ಅಪೂರ್ವವಾದ ಆಸಕ್ತಿಯ ಪರಿಣಾಮವಾಗಿ ''ಅಕ್ಕನ ವಚನಗಳು'' ಎಂಬ ಕಿರುಹೊತ್ತಿಗೆಯನ್ನು ಪ್ರಕಟಿಸಿದ್ದಾರೆ. ಈ ಹೊತ್ತಿಗೆಯು ೨೦೩ ವಚನಗಳು, ೧೨ ಇತರ ಹೆಚ್ಚಿನ ವಚನಗಳು ಮತ್ತು ಅಕ್ಕನ ಕುರಿತು ಇತರ ಶರಣರ ಕೆಲವು ವಚನಗಳ ಸಂಗ್ರಹರೂಪದ ಜೇನು ಹುಟ್ಟಾಗಿದೆ. ಇದೊಂದು ಕನ್ನಡ ಸಾರಸ್ವತ ಲೋಕಕ್ಕೆ ಕಮನೀಯ ಕಾಣಿಕೆಯಾಗಿದೆ.

ಇದರಲ್ಲಿನ ಪ್ರಸ್ತಾವನೆಯಿಂದ ಹಿಡಿದು ಎಲ್ಲಾ ವಚನಗಳನ್ನೂ ಹಲವಾರು ಬಾರಿ ಓದಿದೆ. ತುಂಬ ಆಕರ್ಷಣೀಯವಾಗಿದೆ. ಪ್ರಸ್ತಾವನೆಯಲ್ಲಿರುವಂತೆ ''ಅಕ್ಕ ಹೆಣ್ಣು ಕುಲದ ಹೆಮ್ಮೆ'' ಮತ್ತು ''ಕನ್ನಡದ ಕಾರಣ ಕನ್ಯೆ'' ಹಾಗೂ ''ಕ್ರಾಂತಿಕನ್ಯೆ'' ಸ್ತ್ರೀ ಶೋಷಣೆಯ ವಿರುದ್ಧ ಪುಟದೇಳುವ ಚತುರೆಯಾಗಿದ್ದಾಳೆ. ಇವೆಲ್ಲವೂ ಅಕ್ಕನ ವಾಸ್ತವಿಕ ಜೀವನದಲ್ಲಿ ನಡೆದ ನೈಜ ಘಟನೆಗಳಾಗಿವೆ.

''ಮನೆಗೆದ್ದು ಮಾರುಗೆಲ್ಲು'' ಎಂಬಂತೆ ಅಕ್ಕ ಆಡಿದಂತೆ ನುಡಿದಿದ್ದಾಳೆ. ನುಡಿದೆಡೆ ಆಡಿ ಸೋತಿಲ್ಲ. ಗೆದ್ದಿದ್ದಾಳೆ. ಈಕೆಯದು ಅನುಭಾವ ಸಾಹಿತ್ಯ. ಲೌಕಿಕದ ಅಸತ್ಯವನ್ನು ಮೀರಿ ಆಧ್ಯಾತ್ಮಿಕತೆಯಲ್ಲಿ ಸತ್ಯವನ್ನು ಕಂಡಿದ್ದಾಳೆ. ವಿಶ್ವ ಇತಿಹಾಸದ ಮಹಿಳಾ ಪುಟಗಳಲ್ಲಿ ಸುವರ್ಣ ಅಧ್ಯಾಯವನ್ನು ತೆರೆದಿದ್ದಾಳೆ. ಭಕ್ತಿಪಂಥ ಸಾಹಿತ್ಯದಲ್ಲಿ ಈಕೆಯದು ಭವ್ಯ (ವೀರತೆ) ಹೊಂದಿದ ವ್ಯಕ್ತಿತ್ವವಾಗಿದೆ.

''ಅರಮನೆಯಲ್ಲಿ ಗಂಡನ ಸುಖ, ಅಪಾರವಾದ ಸಂಪತ್ತುಗಳೂ, ಭೋಗ ಭಾಗ್ಯಗಳು ಕಾಲ ಕೆಳಗೆ ಬಿದ್ದಿದ್ದರೂ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ ಶ್ರೀಗಿರಿಯ ಮಲ್ಲಿಕಾರ್ಜುನನನ್ನು ಮೆಚ್ಚಿ ಅವನನ್ನರಸಿ ಅರಮನೆಯನ್ನು ತೊರೆದು, ಕಮನೀಯ ವಚನಗಳ ರಚನೆಗೆ ಕಾರಣಳಾಗುತ್ತಾಳೆ. ಆಕೆಯ ಪ್ರತಿಯೊಂದು ವಚನಗಳು (ಜೇನುಗೂಡಿನಲ್ಲಿನ ಪ್ರತೀ ಮನೆಯಲ್ಲಿರುವ) ಜೇನಿನ ಹಾಗಿವೆ. ಅಕ್ಕನ ವಚನಗಳನ್ನು ಓದುತ್ತಾ ಹೋದಂತೆಲ್ಲ ಲೌಕಿಕ ಸುಖದಿಂದ ಆಧ್ಯಾತ್ಮಿಕಕ್ಕೆ ಮನಸ್ಸು ಬದಲಾಗುತ್ತದೆ. ಅಷ್ಟೊಂದು ಕಲಾತ್ಮಕವಾಗಿವೆ, ವಚನಗಳು. ಆಕೆಗೆ ಇಷ್ಟವಿಲ್ಲದ 'ಕೌಶಿಕ' ಮಹಾರಾಜನೊಂದಿಗೆ ಮದುವೆ ಮಾಡುತ್ತಾರೆ. ಆದರೆ ಆಕೆ ಮಾತ್ರ ಆಧ್ಯಾತ್ಮ ಪತಿ ಚೆನ್ನಮಲ್ಲಿಕಾರ್ಜುನನ ಹೊರತು ನನಗೆ ಬೇರಾವ ಗಂಡನ ಅಗತ್ಯವಿಲ್ಲ ಎಂದು ಸಾರಿದ್ದಾಳೆ. ಅಕ್ಕನಿಗೆ ಇದೊಂದು ಬಲಾತ್ಕಾರದ ಮದುವೆಯಾಗಿದೆ. ಈ ಹಿನ್ನೆಲೆಯಲ್ಲಿ ಚೆನ್ನಮಲ್ಲಿಕಾರ್ಜುನನಲ್ಲಿ ನಾನು ಸೇರಿದ್ದೇನೆ. ಅವನು ನನ್ನ ಮನದಲ್ಲಿ ಹಾಸುಹೊಕ್ಕಿದ್ದಾನೆ. ನಾನು ಅವನು ಒಂದೇ. ತವಕವನ್ನು ವ್ಯಕ್ತಪಡಿಸುವ ಪರಿ

ಎಷ್ಟೊಂದು ಸ್ವಾರಸ್ಯವಾಗಿತ್ತೆಂಬುದಕ್ಕೆ ಈ ವಚನವೇ ಸಾಕ್ಷಿಯಾಗಿದೆ.

''ಹಾಲು ತುಪ್ಪವ ಕೂಡಿ ಬೇರಾಗಬಲ್ಲುದೆ ?
ಸೂರ್ಯಕಾಂತದಗ್ನಿಯನಾರು ಭೇದಿಸಬಲ್ಲರು ?
ಆಪಾರ ಮಹಿಮೆ ಚೆನ್ನಮಲ್ಲಿಕಾರ್ಜುನನೊಳಡಗಿಪ್ಪ
ಪರಿಯ ಬೇರಿಲ್ಲದೇ ಕಂಡು ಕಣ್ಣೆರೆದನು (ವ. ೩)

ನೋಡಿ, ಈ ವಚನದ ಸಾಲುಗಳು ಎಷ್ಟೊಂದು ಸ್ವಚ್ಛಂದವಾಗಿವೆ. ಅವುಗಳನ್ನು ಓದಿದಾಗ ಸುಲಭದಲ್ಲಿ ಮೋಡಿಗೊಳಗಾಗುತ್ತೇವೆ. ಹಾಲು ತುಪ್ಪ ಎರಡೂ ಒಂದರಲ್ಲೊಂದು ಲೀನವಾಗಿರುತ್ತದೆ. ಅವುಗಳನ್ನು ಬೇರೆ ಮಾಡಲೆಂದೂ ಸಾಧ್ಯವಿಲ್ಲ. ಹಾಗೇ ಅಪಾರ ಮಹಿಮಾಶಾಲಿಯಾದ ಆ ಚೆನ್ನಮಲ್ಲಿಕಾರ್ಜುನನು ನನ್ನೊಳಗೇನೇ ಅಡಗಿರುವ ಪರಿಯನ್ನು ಕಂಡು ನನ್ನ ಅಂತರಂಗದ ಕಣ್ದೆರೆಯಿತು ಎಂದು ಹೇಳಿದ್ದಾಳೆ. ಅಂದೇ ಅಕ್ಕ ಆಧ್ಯಾತ್ಮಿಕಕ್ಕೆ ಮನ ತಿರುಗಿಸುತ್ತಾಳೆ.

ತನ್ನ ಮನವನ್ನು ತಾನೇ ಹಳಿಯುತ್ತಾಳೆ. ನಾನು ಈ ಲೋಕದ ಜಂಜಾಟಕ್ಕೆ ಸಿಲುಕಿದ್ದೇನೆ. ಅದರಿಂದ ಉಳಿಸಿ, ಈ ಪ್ರಪಂಚದ ವ್ಯಾಮೋಹವ ಬಿಡಿಸಿರೆಂದು, ತನ್ನ ಅಮೋಘವಾದ ಮಾತುಗಳಿಂದ ಆಧ್ಯಾತ್ಮಿಕ ಪ್ರಿಯತಮನನ್ನು ಕೇಳಿಕೊಳ್ಳುವ ಪರಿಯಿಂತಿದೆ.

''ಎನ್ನ ಮಾಯದ ಮದವ ಮುರಿಯಯ್ಯ,
ಎನ್ನ ಕಾಯದ ಕಳವಳದ ಕಳೆಯಯ್ಯ,
ಎನ್ನ ಜೀವದ ಜಂಜಡವ ಬಿಡಿಸಯ್ಯ,
ಎನ್ನ ದೇವ ಮಲ್ಲಿಕಾರ್ಜುನಯ್ಯ,
ಎನ್ನ ಸುತ್ತಿದ ಪ್ರಪಂಚದ ಬಿಡಿಸಾ ನಿಮ್ಮಧರ್ಮ (ಪ. ೮)

ಎಂದು ಪರಿಪರಿಯಿಂದ ನಿವೇದಿಸಿಕೊಳ್ಳುತ್ತಾಳೆ ಅಕ್ಕ. ಇದರಲ್ಲೂ ಕೂಡ ಸಂಪೂರ್ಣವಾಗಿ ನನ್ನನ್ನು ಈ ಪ್ರಪಂಚದಿಂದ ಮುಕ್ತಳನ್ನಾಗಿಸು ದೇವ ಎಂದು ನೋವಿನಿಂದ ಗೋಗರೆದಿದ್ದಾಳೆ. ಈ ಪ್ರಪಂಚವು ಅನ್ಯಾಯ, ಅಧರ್ಮ, ಸ್ತ್ರೀ ಶೋಷಣೆ, ದಬ್ಬಾಳಿಕೆ ಭ್ರಷ್ಟರಿಂದ ತುಂಬಿದೆ ಎಂಬ ಸತ್ಯ ಇದರ ಹಿಂದೆ ಅಡಗಿದೆ. ವಚನದಲ್ಲಿ ಸರಳತೆಯಿದೆ. ಸಾಮಾನ್ಯ ಜನರಿಗೂ ಅದು ಅರ್ಥವಾಗುತ್ತದೆ. ಹಾಗಾಗಿಯೇ ಜನರ ಮನಸ್ಸನ್ನು ಅಕ್ಕ ಗೆಲ್ಲುತ್ತಾಳೆ.

ನನಗೆ ಬಲಾತ್ಕಾರದ ಮದುವೆ ಮಾಡಿದರೂ, ನಾನು ಸಂಸಾರವೆಂಬ ಕೊಳಕು ಬಾವಿಗೆ ಬಿದ್ದು ಸಾವನ್ನು ನಾನೇ ತಂದುಕೊಂಡೆ ಎಂದು ಗೋಳಾಡುತ್ತಾಳೆ. ಈ ಜೀವನದ ತನ್ನ ಅನುಭವವನ್ನು ಹೀಗೆ ಹೇಳುತ್ತಾಳೆ. 'ತರಣಿಯ ಹುಳು ತನ್ನ ಸ್ನೇಹದಲ್ಲಿ ಮನೆ ಮಾಡಿ, ತನ್ನ ಸುತ್ತ ಸಾವ ತೆರನಂತೆ, (ವ. ೧೩) ಎಂದು ಬೆಂದು ತೊಳಲಾಡುತ್ತಾಳೆ. ಈ ಸಂಸಾರವೇ ಎನಗೆ ಶತ್ರು, ನನ್ನನ್ನು ಸುಡುತ್ತಿದೆ ದೇವಾ, ನಿನ್ನನ್ನು ಮೊರೆ ಹೋಗಿದ್ದೇನೆ, ನನ್ನ ಕರುಣಿಸಯ್ಯಾ ನನ್ನನ್ನು ಆದರಿಸು ಎಂದು

ಚನ್ನಮಲ್ಲಿಕಾರ್ಜುನನ ಧ್ಯಾನ್ಯಂಬಡುತ್ತಾಳೆ.

ಹರನೇ ನೀ ನನ್ನ ಗಂಡನಾಗಬೇಕೆಂದು ಬೇಡಿಕೊಳ್ಳುತ್ತಾಳೆ. ಆಕೆಯ ಕನಸಿನ ಕಲ್ಪನಾ ತಿಳುವಳಿಕೆ ಎಷ್ಟಿತ್ತೆಂದರೆ ಕೆಳಗಿನ ವಚನವೇ ಹೇಳುತ್ತದೆ.

''ಕಾಣುತ್ತಾ ಕಾಣುತ್ತಾ ಕಣ್ಣುಮುಚ್ಚಿದೆ
ಕೇಳುತ್ತಾ ಕೇಳುತ್ತಾ ಮೈಮರೆದೊರಗಿದೆ.
ಹಾಸಿದ ಹಾಸಿಗೆಯ ಬೀಸಾಡಿ ಕಳೆದೆ
ಚನ್ನಮಲ್ಲಿಕಾರ್ಜುನನ ಇರುಳೆಲ್ಲ ಕೂಡಿ
ಬೆಳಗಾಗಿ ಕಾಣದೆ ಬೆಂಬಿದ್ದೆನು (ವ. ೩೫)

ಆದರೂ ತಡೆಯಲಾರದೆ ತಾನು ಕಂಡ ಕನಸನ್ನು ಹೇಳುತ್ತಾಳೆ.

''ಗಿರಿಯ ಮೇಲೊಬ್ಬ ಗೊರವ ಕುಂತಿದ್ದನ್ನು ಕಂಡೆ
ಆ ಗಿರಿಯೇ ಸಿರಿಶೈಲ, ಆ ಗೊರವನೇ ಚೆನ್ನಮಲ್ಲಿಕಾರ್ಜುನನಾಗಿದ್ದನು.''

ಎಂದು ಹೇಳುವ ಮಾತು ಚೆನ್ನಮಲ್ಲಿಕಾರ್ಜುನನ ಮೇಲಿನ ಪ್ರೇಮ, ಆಕೆಯಲ್ಲಿ ಉಚ್ಛ್ರಾಯಸ್ಥಿತಿಯಲ್ಲಿತ್ತು ಎಂಬುದನ್ನು ತಿಳಿಸುತ್ತದೆ. ಸತಿಪತಿಗಳೇ ಆಗಿದ್ದರೇನೋ ಎಂಬ ಭಾವನೆ ಮನದಲ್ಲಿ ಸುಳಿಯುತ್ತದೆ. ಅಷ್ಟೊಂದು ಮೋಹಕವಾಗಿವೆ. ಅಲ್ಲಿನ ಸಾಲುಗಳು. ವಚನ ೩೭ ರಲ್ಲಿ ಪ್ರಕೃತಿಯನ್ನು ಕಂಡು ಕನಸ ಬಗ್ಗೆ ಕೂಗಿ ಹೇಳುತ್ತಾಳೆ. ಬೇಡುತ್ತಾಳೆ. ಈ ಪದ್ಯದಲ್ಲಿ ಪ್ರಿಯತಮನ ಬಗ್ಗೆ ಬಳಸಿದ ಪದ ಪುಂಜಗಳು ಮನಸ್ಸಿಗೆ ಮುದ ನೀಡಿ ಭಾವುಕತೆಯನ್ನು ಬಿಂಬಿಸುತ್ತವೆ. ಅವುಗಳನ್ನು ಜೇನು ಸವಿಯಂತೆ ಸವಿಯಬಹುದು. ಆ ಸಾಲುಗಳು ಹೀಗಿವೆ.

''ನಾನೊಂದು ಕನಸ ಕಂಡೆ
ಚಿಕ್ಕ ಚಿಕ್ಕ ಕೆಂಜೆಡೆಗಳ ಸುಲಿಪಲ್ಲ ಗೊರವನು
ಬಂದೆನ್ನೆ ನೆರೆದ ನೋಡವ್ವಾ
ಆತನನಪ್ಪಿಕೊಂಡು ತಳವೆಳಗಾದೆನು.'' - ಚೆನ್ನಮಲ್ಲಿಕಾರ್ಜುನನ !

ವಚನ ಕನಸಾದರೂ ನನಸಿನಲ್ಲಿ ಕಂಡ ಚಿತ್ರಣವಿದೆ. ವಚನ ಓದಿದಾಗ ನಾವೇ ಕಂಡ ಕನಸೋ ಎಂಬ ಭಾವನೆ ಉಂಟಾಗುತ್ತದೆ. ಹಾಗಾಗಿ ಅದರಲ್ಲಿನ ಪದಗಳ ಪ್ರಯೋಗದಲ್ಲಿ ಚಮತ್ಕಾರವಿದೆ ಎಂದು ಹೇಳಬಹುದು.

ಆಕೆಯ ಸಂಸಾರ ಸರಿಯಾಗಿ ನಡೆಯಲಿಲ್ಲ. ದಾಂಪತ್ಯದಲ್ಲಿ ವಿರಸವುಂಟಾಯಿತು. ಇದಕ್ಕೆಲ್ಲಾ ಕಾರಣ ಬಲಾತ್ಕಾರದ ಮದುವೆ. ಹಾಗಾಗಿ 'ದಿಟಕ್ಕೊಬ್ಬ ಗಂಡ, ಸಟೆಗೊಬ್ಬ ಗಂಡ'' ಎಂದು ಪ್ರತಿಭಟಿಸಿದರೂ ಮದುವೆ ನಡೆದೇ ಹೋಯಿತು. ಇದರ ಪರಿಣಾಮ ದಾಂಪತ್ಯ ವಿರಸವು ವಿಕೋಪಕ್ಕೆ ಹೋಗಿ ಆಧ್ಯಾತ್ಮದ ತೆಕ್ಕೆಗೆ ಬಿದ್ದಳು. ಇಲ್ಲಿ ಗಮನಿಸಬೇಕಾದ ಅಂಶವು ಲೌಕಿಕ ಸುಖ, ಅಂದರೆ ಗಂಡ, ಸುಪ್ಪತ್ತಿಗೆ, ಅರಮನೆ, ಈ ಪ್ರಪಂಚದಲ್ಲಿ ನಡೆಯುವ ಅನಾಚಾರಗಳು, ಸುಖ ಸಂತೋಷಗಳು ಇವುಗಳನ್ನೆಲ್ಲಾ ಮೀರಿ ಹೋಗುವುದೇ ಆಧ್ಯಾತ್ಮಿಕತೆ. ಇಲ್ಲಿ ಆಧ್ಯಾತ್ಮಿಕತೆ

ಎಂದರೆ ಪರಮಾತ್ಮ ಚೆನ್ನಮಲ್ಲಿಕಾರ್ಜುನ. ಆತನನ್ನು ಸೇರುವುದು. ಈ ಪ್ರಪಂಚದ ಜಂಜಡವೇ ಬೇಡವೆಂದು ಯೋಚಿಸಿ ಗಂಡನನ್ನು ತೊರೆಯುವ ಸಂಕಲ್ಪ ಮಾಡುತ್ತಾಳೆ. ಹೆಣ್ಣಿನ ಶೋಷಣೆ ಮಾಡುವ ಗಂಡಸರ ವಿರುದ್ಧ ಬಂಡಾಯದ ಕಹಳೆಯನ್ನು ಊದುತ್ತಾಳೆ. ಇಲ್ಲಿ ಒಂದು ಜೀವಾತ್ಮವು ಪರಮಾತ್ಮನಲ್ಲಿ ಸೇರಲು ತವಕಿಸುತ್ತದೆ. ಹಾಗಾಗಿಯೇ -

ಸಾವಿಲ್ಲದ ಕೇಡಿಲ್ಲದ ರೂಹಿಲ್ಲದ ಚೆಲುವಂಗೆ
ಎಡೆಯಿಲ್ಲದ ತೆರಹಿಲ್ಲದ ಕುರುಹಿಲ್ಲದ ಚಲುವಂಗೆ ಒಲಿದೆ,
ಸೀಮೆಯಿಲ್ಲದ ನಿಸ್ಸೀಮಂಗೆ ಒಲಿದೆ ನಾನು
ಚೆನ್ನಮಲ್ಲಿಕಾರ್ಜುನನೇ ನನಗೆ ಗಂಡ (ವಚನ ೫೩)

ಎಂದು ಹೇಳುತ್ತಾಳೆ. ಈ ವಚನದ ಕೊನೆಯ ಸಾಲು ಇಲ್ಲಿದೆ ನೋಡಿ. ''ಈ ಸಾವ ಕೆಡುವ ಗಂಡರನೊಯ್ದು ಒಲೆಯೊಳಗಿಕ್ಕುವೆನು ಕೇಳಿರಿ'' ಎಂದು ಕ್ರಾಂತಿಯ ಕಹಳೆಯನ್ನು ಮೊಳಗಿಸಿ ವೀರ ವಿರಾಗಿಣಿಯಾಗಿದ್ದಾಳೆ.

ತಾಳ್ಮೆಗೆಟ್ಟ ಮನಸ್ಸಿನಿಂದ, ಗಂಡನಿಂದ ಬೇಸರಿಸಿ, ಅರಮನೆ ತೊರೆದು ಹೊರಡಲನುವಾಗುತ್ತಾಳೆ. ಆಗ ತಡೆಯಲೋಸುಗ ಆಕೆಯ ಸೆರಗನ್ನು 'ಕೌಶಿಕನು' ಹಿಡಿಯುತ್ತಾನೆ. ಅದನ್ನು ಕಂಡು ಆಕೆಯ ಬಾಯಿಯಿಂದ ಬರುವ ಅದ್ಭುತ ಮಾತನ್ನು ಕೇಳಿರಿ.

''ಉಡುಗೆಯ ಸೆಳೆದುಕೊಂಡಡೆ
ಮುಚ್ಚಿದ ಸೀರೆ ಹೋದರೆ ಅಂಜುವರೆ ಮರುಳೆ ? (ವ. ೧೬೩)

''ಕೈಯ ಧನವ ಕೊಂಡಡೆ ಮೈಯ ಭಾಷೆಯ ಕೊಳಬಹುದೇ ? ಉಟ್ಟ - ಉಡುಗೆಯ ಸೆಳೆದುಕೊಂಡರೆ ಮುಚ್ಚಿ ಮುಸುಕಿದ ನಿರ್ವಾಣವ'' ಸೆಳೆಯಬಹುದೆ. (ವ.೧೬೪)

ಅಕ್ಕನ ಮನಸ್ಸು ಎಷ್ಟು ನೊಂದಿದೆ. ಈ ಮಾತುಗಳನ್ನು ಕಂಡರೆ ಮೃಗದಂತೆ ವರ್ತಿಸುವ ಇತರ ಗಂಡಸರಿಗೂ ಚಾಟಿ ಏಟು ಬಿದ್ದಂತಾಗುತ್ತದೆ ಅಲ್ಲವೇ. ಆ ಸಾಲುಗಳಲ್ಲಿ ಆಧ್ಯಾತ್ಮಿಕತೆಯ ಪ್ರಭಾವ ಅದ್ಭುತವಾಗಿ ಅಡಗಿದೆ. ಸಾಕಲ್ಲವೇ ವಿರಾಗಿಣಿಗೆ. ಮತ್ತೇನು ಬೇಕು ಹೇಳಿ. ಅಕ್ಕ ಸಂಪೂರ್ಣವಾಗಿ ತೊರೆದು ಬಿಟ್ಟ ಬಯಲಲ್ಲಿ ಬೆತ್ತಲೆಯಾಗಿ ಕಲ್ಯಾಣದವರೆಗೂ ನಡೆದು ಹೋಗುತ್ತಾಳೆ. ಇಲ್ಲಿ ಲೋಕದ ಮರ್ಯಾದೆಗೆ ವಿರುದ್ಧವಾಗಿ ಅಕ್ಕ ನಡೆದುಕೊಂಡಿದ್ದಾಳೆ ಅನ್ನಿಸುತ್ತದೆ. ಇದೊಂದು ಆಕ್ಷೇಪ. ಆದರೆ ಅಕ್ಕ ''ಸರ್ವಸಂಗ ಪರಿತ್ಯಾಗ ಮಾಡಿದ್ದಾಳೆ'' ಜ್ಞಾನೇಂದ್ರಿಯಗಳನ್ನು, ಕರ್ಮೇಂದ್ರಿಯಗಳನ್ನು ಗೆದ್ದುಕೊಂಡಿದ್ದಾಳೆ. ಅದಕ್ಕಾಗಿ ''ಬೆತ್ತಲೆ'' ಎಂಬ ಪದವು ಸಾಂಕೇತಿಕವಾಗಿ ಉಪಯೋಗಿಸಿದೆ ಎಂದು ಅರ್ಥೈಸಿಕೊಳ್ಳಬಹುದು ಅಷ್ಟೆ. ಬೇರಾವ ಅಪಾರ್ಥ ಸಲ್ಲ.

ಮುಂದೆ ಕಲ್ಯಾಣದಲ್ಲಿ ಬಸವಣ್ಣ ಮತ್ತು ಅಲ್ಲಮನನ್ನು ಸಂಧಿಸುತ್ತಾಳೆ. ಆದರೂ ಕೂಡ ಆಕೆಯ ಭಕ್ತಿಯನ್ನು ಅನೇಕ ರೀತಿಯಲ್ಲಿ ಪರೀಕ್ಷೆಗೊಳಪಡಿಸುತ್ತಾರೆ. ಅದರಲ್ಲಿ ಅವನ ಮನ ಗೆಲ್ಲುತ್ತಾಳೆ ಅಕ್ಕ. ಅಲ್ಲಿ ಸ್ವಲ್ಪದಿನ ಜಿಟ್ಟು, ತನ್ನ ಐಕ್ಯತೆಯ ನೆಲೆಯನ್ನರುಹಬೇಕೆಂದು ಪ್ರಭುವನ್ನು ಅಕ್ಕ ಕೇಳಿಕೊಂಡಾಗ, ಪ್ರಭುದೇವ ಸೂಕ್ತವಾದ ಉತ್ತರವನ್ನು ನೀಡುತ್ತಾ -

''ನಾನು - ನೀನು 'ಅಂಗ-ಲಿಂಗ' ಎಂಬ ಭಿನ್ನವನ್ನು ದೂರ ಮಾಡಿ ಅವುಗಳ ಐಕ್ಯಸ್ಥಿತಿಯ'' 'ತ್ರಿಕೂಟ'ವನ್ನು ಮೆಚ್ಚಿ ನೋಡಿದರೆ, ಬಟ್ಟ ಬಯಲೆಂಬ ಕದಳಿ, ಆ ಕದಳಿಯ ಒಳ ಹೊಕ್ಕು ನೋಡಿದರೆ ತೊಳಗಿ ಬೆಳಗುವ ಜ್ಯೋತಿ.

ಪ್ರಭುವಿನ ಆದೇಶದಂತೆ ಕದಳಿವನವನ್ನು ಪ್ರವೇಶಿಸುತ್ತಾಳೆ. ''ಚೆನ್ನಮಲ್ಲಿಕಾರ್ಜುನಯ್ಯನ ನೆಚ್ಚಿನ ಗಿರಿಯ ಸುತ್ತ ನೋಡುತ್ತಾ ಬಂದು, ಕದಳಿಯ ಬನವ ಕಂಡೆ ನಾನು'' ಎಂದು ಅಕ್ಕ ನುಡಿಯುತ್ತಾಳೆ. ಕದಳಿಯ ಬಾಗಿಲಲ್ಲಿ ನಿಂದು ಕರಕಮಲದಿಷ್ಟಲಿಂಗವಂ, ತುರ್ಯದಿಂ, ಜ್ಞಾನಪ್ರಭಾವದೋಳ್ ಪೂಜಿಸುತ್ತಾ ಧ್ಯಾನಿಸುತ್ತಾ ತನ್ನ ಕೊನೇ ವಚನದಲ್ಲಿ ಹೀಗೆ ನುಡಿದಿದ್ದಾಳೆ -

ಕದಳಿ ಎಂಬುದು ತನು, ಕದಳಿ ಎಂಬುದು ಮನ,
ಕದಳಿ ಎಂಬುದು ವಿಷಯ ಸಂಕುಳಿ
ಕದಳಿ ಎಂಬುದು ಭವ ಘೋರಾರಣ್ಯ
ಕದಳಿ ಎಂಬುದು ಗೆದ್ದು ತವೆ ಬದುಕಿಬಂದು
ಕದಳಿ ವನದಲ್ಲಿ ಭವಹರನ ಕಂಡೆನ್ನು
ಭವಗೆಟ್ಟು ಬಂದ ಮಗಳೆಂದು ಕರುಣದಿಂದ
ತೆಗೆದಪ್ಪಿ ಬಿಗಿದೊಲಿದಪ್ಪಿದ
ಚೆನ್ನಮಲ್ಲಿಕಾರ್ಜುನನ, ಹೃದಯಕಮಲದಲ್ಲಡಗಿದನು.

ಈ ವಚನದಲ್ಲಿ 'ಕದಳಿ' ಎಂಬ ಪದವನ್ನು ಬಳಸಿದ್ದಾಳೆ ಅಕ್ಕ. ಅದಕ್ಕೆ ಬಾಳೆ ಅಥವಾ ಬಾಳೆ ವನ ಎಂದು ಅರ್ಥೈಸುವುದಕ್ಕಿಂತ ತನು, ಮನ, ವಿಷಯಸಂಕುಳ, ಭವ ಘೋರಾರಣ್ಯ, ಅದು ಲೌಕಿಕ ''ವಿಷಯ'' ಸಂಕೇತ ಎಂದು ತಿಳಿಯುವುದು ಮೇಲು. ಅಂತಹ ಭವವನ್ನು ದಾಟಿ, ಅದರಾಚೆಗಿನ ಬಯಲಲ್ಲಿ ಭವಹರನನ್ನು ಕಂಡು, ಅವನ ಹೃದಯ ಕಮಲದಲ್ಲಿ ಅಡಗಿದೆ, ಐಕ್ಯವಾಗಿದೆ ಎಂದು ಹೇಳಿದ್ದಾಳೆ.

ಅಕ್ಕನ ವಚನಗಳಲ್ಲಿ ಎರಡು ಅಂಶಗಳನ್ನು ಗುರ್ತಿಸುತ್ತೇವೆ. ಒಂದು ಕಾವ್ಯ, ಮತ್ತೊಂದು ಧರ್ಮ. ಇವುಗಳಲ್ಲಿ ಅಕ್ಕ ಯಶಸ್ಸನ್ನು ಸಾಧಿಸಿ ಕೊನೆಯಲ್ಲಿ ಸಿದ್ಧಿಯನ್ನು ಪಡೆದಿದ್ದಾಳೆ. ಆಕೆಯ ಪ್ರತಿಯೊಂದು ವಚನಗಳಲ್ಲಿ ಕ್ರಾಂತಿ, ಆಧ್ಯಾತ್ಮಿಕತೆಯ ಅನುಭವಾದ ಹರವನ್ನು ಕಾಣುತ್ತೇವೆ. ಅಕ್ಕನ ಪ್ರತಿಯೊಂದೂ ಘಟನಾವಳಿಗಳು ಯಾವುದೇ ನಾಟಕದಲ್ಲಿ, ಸಿನೇಮಾದಲ್ಲಿ ನಡೆದದ್ದಲ್ಲ. ಜೀವನ ಅನುಭಾವದ ನೈಜ ಘಟನೆಗಳಾಗಿವೆ. ಈ ಪ್ರಪಂಚದಲ್ಲಿಯೇ ಸ್ತ್ರೀ ಶೋಷಣೆಯ ವಿರುದ್ಧ ಕ್ರಾಂತಿ ಮಾಡಿದ

ಏಕೈಕ ಮಹಿಳೆಯಾಗಿದ್ದಾಳೆ ಎನ್ನುವುದರಲ್ಲಿ ಸಂಶಯವೇ ಇಲ್ಲ. ಹಾಗೆಯೇ ''ಅಕ್ಕ ಸ್ತ್ರೀ ಕುಲದ ಹೆಮ್ಮೆ'' ಯಾಗಿದ್ದಾಳೆ. ಆಕೆಯ ವಚನಗಳಲ್ಲಿ ಧ್ವನಿ, ರಂಜನೀಯ ವಕ್ರೋಕ್ತಿ ತುಂಬಿ ತುಳುಕುತ್ತವೆ. ಔಚಿತ್ಯಪೂರ್ಣ ಪದಪುಂಜಗಳು ಸರಳ ಶೈಲಿಯನ್ನು ವಚನಗಳು ಒಳಗೊಂಡಿವೆ. ಕೆಲವು ವಚನಗಳಲ್ಲಿ ಪ್ರಕೃತಿಯನ್ನು ಸಹ ತನ್ನ ಮಾತಿನ ಪದಗಳ ಮೋಡಿಯಿಂದ ಸೆರೆಹಿಡಿದಿದ್ದಾಳೆ. ಆ ವಚನವಂತೂ ಕಾವ್ಯದ ಸೃಷ್ಟಿಗೆ ಸೃಜನಶೀಲವಾಗಿದೆ. ಕಾವ್ಯದ ಕಳೆ ಕಾಂತಿಗಳು ಇಮ್ಮಡಿಯಾಗಿವೆ. ಇದಕ್ಕೆ ಪೂರಕವಾಗಿ ಒಂದು ವಚನ ಹೀಗಿದೆ ನೋಡಿ.

''ಒಡಲ ಕಳವಳಕ್ಕಾಗಿ ಅಡವಿಯ ಹೊಕ್ಕೆನು
ಗಿಡು ಗಿಡುದಪ್ಪದೆ ಬೇಡಿದನೆನ್ನಂಗಕ್ಕೆಂದು
ಅವು ನೀಡಿದವು ತಮ್ಮ ಲಿಂಗಕ್ಕೆಂದು (ವ. ೧೭೫)

ಚಿಲಿಮಿಲಿಯೆಂದು ಓದುವ ಗಿಳಿಗಳಿರಾ ನೀವು ಕಾಣಿರೆ
ಸರವೆತ್ತಿ ಹಾಡುವ ಕೋಗಿಲೆಗಳಿರಾ ನೀವು ಕಾಣಿರೆ
ಎರಗಿ ಬಂದಾಡುವ ತುಂಬಿಗಳಿರಾ ನೀವು ಕಾಣಿರೆ
ಎನ್ನ ಚೆನ್ನಮಲ್ಲಿಕಾರ್ಜುನನ (ವ. ೧೮೬)

ಎನ್ನುವುದರಲ್ಲಿ ತನ್ನ ಭಾವನೆಯ ಸೃಷ್ಟಿಯು ಪೂರ್ಣಾಭಿವ್ಯಕ್ತಿಗೆ ಪ್ರಕೃತಿಯನ್ನು ಬಳಸಿರುವುದು ತುಂಬಾ ಸೊಗಸಾಗಿದೆ. ರಮ್ಯವಾಗಿದೆ. ಮತ್ತು ಗಮನಾರ್ಹವಾಗಿದೆ. ಓದುವ ಗಿಳಿ, ಹಾಡುವ ಕೋಗಿಲೆ, ಬಂದಾಡುವ ದುಂಬಿ ಮುಂತಾದವುಗಳು ಮನ ರಂಜಿಸುತ್ತವೆ. ಪ್ರಕೃತಿಯನ್ನು ನನ್ನೊಡೆಯನನ್ನು ಕಂಡಿದ್ದರೆ, ಕರೆದು ತೋರಿರೆ ಎಂದು ಕೇಳುವುದರಲ್ಲಿ ಭಾವುಕತೆಯ ತೀವ್ರತೆ ಎದ್ದುಕಾಣುತ್ತದೆ. ಅಲ್ಲದೆ, ಕಾವ್ಯಾತ್ಮಕ ವಚನಗಳಿಗೆ ಇನ್ನೊಂದು ಉದಾಹರಣೆ ಆಯ್ದು ತೋರಿಸಬಹುದು. ಈ ವಚನಗಳ ಸಾಲುಗಳನ್ನು ನೋಡಿ -

''ಹೊಳೆವ ಕಂಜೆಡೆಗಳ ಮಣಿ - ಮುಕುಟ
ಒಪ್ಪುವ ಸುಲಿಪಲ್ಲ ನಗೆಮೊಗದ ಕಂಗಳ ಕಾಂತಿಯ,
ಈರೇಳು ಭುವನದ ಬೆಳಗುವ ದಿವ್ಯಸ್ವರೂಪದ ಕಂಡೆ ನಾನು (ವ. ೨೦೧)

ಎಂದು ಹೇಳುವಲ್ಲಿ ಆಕೆಯ ಮನಸ್ಸು ಎಷ್ಟೊಂದು ಪುಳಕಿತವಾಗಿರಬಹುದು. ನಾವು ಓದಿದಾಗಲೇ ಅದರಲ್ಲಿನ ಹೂರಣದ ರುಚಿ ತಿಳಿಯುವುದು. ಹೊಳೆವ ಕೆಂಜೆಡೆಗಳಂತೆ ನೋಡಿ, ಪಳ ಪಳನೆ ಹೊಳೆಯುವ ಕೆಂಪಾದ ಜಡೆ ಇನ್ಯಾರಿಗಿದೆ ಶಿವನ ಹೊರತು ? ಮಣಿಮುಕುಟನಂತೆ ಒಪ್ಪುವ ಸುಲಿಪಲ್ಲ. ಅಂದರೆ ಶುಭ್ರವಾದ, ಸುಂದರವಾದ ಹಲ್ಲುಳ್ಳವನೆ, ಕಣ್ಣಿನಲ್ಲಿ ಕಾಂತಿಯುಳ್ಳವನೆ, ಗಜಚರ್ಮಾಂಬರನೆಂದು ಹೇಳಲು ಬಹಳಷ್ಟು ಭಾವುಕಳಾಗುತ್ತಾಳೆಂದು ತೋರುತ್ತದೆ. ಇದೇ ರೀತಿಯಲ್ಲಿ ಮುಂದಿನ ಸಾಲುಗಳೂ ಕೂಡ ಕಾವ್ಯದ ಛಾಪನ್ನು ಬಿಂಬಿಸುತ್ತವೆ. ಹೀಗೆ ಹೇಳಲು ಬಹಳಷ್ಟು

ವಚನಗಳಿವೆ. ಅವುಗಳಲ್ಲಿ ಕೂಡ ಪದಪುಂಜಗಳ ಬಳಕೆ ಕಾವ್ಯಾತ್ಮಕವಾಗಿವೆ. ಪರಮಾತ್ಮನ ವರ್ಣನೆಗಾಗಿ ಅಕ್ಕ ಬಳಸಿದ ಚಮತ್ಕಾರ ಅಮೋಘವಾಗಿದೆ ಎಂದು ಹೇಳಬಹುದು.

ಅಕ್ಕನ ವಚನಗಳು ಕಾವ್ಯಧರ್ಮದಲ್ಲಿ ಹುದುಗಿರುವ ಮೂಲದ್ರವ್ಯಗಳನ್ನು ಬಿಂಬಿಸುತ್ತವೆ. ಇಂತಹ ಕಾವ್ಯಗಳು ಜನಸಮುದಾಯವನ್ನು ರಂಜಿಸುತ್ತವೆ. ಚಿಂತನ ಶೀಲತೆಗೆ ತೊಡಗಿಸುತ್ತವೆ. ಸಫಲ ಜೀವನದ ಬೆಸುಗೆಯಾಗುತ್ತವೆ. ಈ ಹಿನ್ನೆಲೆಯಲ್ಲಿಯೇ ಅಕ್ಕ ಎಲ್ಲರ ಮನದಲ್ಲಿ ಸ್ಥಿರಸ್ಥಾಯಿಯಾಗಿ ನಿಲ್ಲುತ್ತಾಳೆ.

ಈ ಸಂಗ್ರಹದಲ್ಲಿ ಇನ್ನೂ ಹೆಚ್ಚಿನ ಅಕ್ಕನ ವಚನಗಳಿವೆ. ಜೊತೆಗೆ ಅಕ್ಕನ ಬಗೆಗೆ ಇತರ ಶರಣರ ವಚನಗಳೂ ಇವೆ. ಅವುಗಳು ಕೂಡ ತಮ್ಮ ತಮ್ಮ ಸೊಗಸುಗಾರಿಕೆಯಿಂದ ಮೆರೆಯುತ್ತವೆ. ಎಲ್ಲಾ ವಚನಗಳು ಓದಿಸಿಕೊಂಡು ಹೋಗುವ ಸೊಗಸುಗಾರಿಕೆಯನ್ನು ಪಡೆದಿವೆ.

ಈ ವಚನಗಳ ಬಗ್ಗೆ ಏಕೆ ಇಷ್ಟೊಂದು ಹೇಳಿದ್ದೇನೆಂದರೆ, ಅವುಗಳ ಮಹತ್ವ ಹೆಚ್ಚಿದೆ. ಪ್ರತಿ ಹಂತದಲ್ಲೂ ವಚನಗಳನ್ನು ಓದುವಾಗ ಸಾ.ಶಿ. ಮರುಳಯ್ಯನವರು ಮನದಲ್ಲಿ ಸುಳಿಯುತ್ತಾರೆ. ಅವರು ಎಂತಹ ಅಮೂಲ್ಯವಾದ ಸಂಗ್ರಹ ಮಾಡಿದ್ದಾರೆ ಎಂದೆನಿಸುತ್ತದೆ. ಪ್ರಸ್ತುತ ಕೃತಿಯು ಸಂಗ್ರಹಿಸಲು ಯೋಗ್ಯವಾಗಿದೆ.

ಸುಮಾರು ಆರು ಸಾವಿರ ವಚನಗಳಿದ್ದ ಓಲೆಗರಿಗಳು ತಿಪಟೂರು ತಾಲ್ಲೂಕಿನ ಹೊನ್ನವಳ್ಳಿಯ ಶ್ರಿ ಕರಿಸಿದ್ದೇಶ್ವರ ಸ್ವಾಮಿಯ ಮಠದಲ್ಲಿ ದೊರೆತಿವೆ. ಅವುಗಳಲ್ಲಿ ಮಹತ್ವವಾದ ಮಹದೇವಿಯಕ್ಕನ ವಚನಗಳನ್ನು ಆರಿಸಿ, ಸಂಪಾದಿಸಿ ಈ ಪುಸ್ತಕವನ್ನು ಸಂಪಾದಿಸಿದ್ದಾರೆ. ಅವುಗಳ ರಮಣೀಯತೆಗೆ ಎಲ್ಲೂ ಕುಂದು ಬಾರದಂತೆ ಕೆಲಸ ನಿರ್ವಹಿಸಿದ್ದಾರೆ. ಈ ಕೃತಿಯ ಹಿಂದೆ ಅಪಾರವಾದ ಅಚ್ಚುಕಟ್ಟಿನ ಕೆಲಸ ನಡೆದಿದೆ. ವಿಚಾರ ವಿನಿಮಯ ನಡೆದಿದೆ. ಆದರೆ ಓಲೆಗರಿಯ ಕಾಲವನ್ನು ಮತ್ತು ಅವುಗಳಲ್ಲಿ ಹೊಸ ವಚನಗಳೇನಾದರೂ ಇವೆಯೋ ಎಂಬುದನ್ನು ಪ್ರಸ್ತಾವನೆಯಲ್ಲೆಲ್ಲೂ ಹೇಳಿಲ್ಲ. ಆದ್ದರಿಂದ ಅವುಗಳು ಪ್ರಶ್ನೆಯಾಗಿ ನಿಲ್ಲುತ್ತವೆ. ಆದರೂ ಕೂಡ ಇದೊಂದು ಸಾಹಸದ ಕೆಲಸವಾಗಿದೆ. ಇದರಲ್ಲಿ ಅವರ ಜಾಣ್ಮೆ ಅಡಗಿದೆ. ಇದೊಂದು ಅವರ ಒಳ್ಳೆಯ ಪ್ರಯತ್ನವೂ ಆಗಿದೆ. ಈ ಪುಸ್ತಕದಲ್ಲಿ ವಚನ ಸಂಗ್ರಹಕ್ಕೆ ಶ್ರಮಿಸಿದ ಸಾ.ಶಿ. ಮರುಳಯ್ಯನವರು ಹಾಗೂ ಅವರಿಗೆ ಸಹಾಯ ಹಸ್ತ ನೀಡಿದವರು ಅಭಿನಂದನಾರ್ಹವಾಗಿದ್ದಾರೆ.

ಸಾ.ಶಿ. ಮರುಳಯ್ಯನವರು ಅದ್ಭುತವಾದ ಸಂಗ್ರಹಕಾರರಾಗಿದ್ದಾರೆ ಎಂದು ಈ ಕೃತಿಯಿಂದ ತೋರುತ್ತದೆ. ಇದರಲ್ಲಿ ಅವರ ವ್ಯಕ್ತಿತ್ವವು ಎದ್ದು ಕಾಣುತ್ತದೆ. ಕನ್ನಡದ ಶ್ರೇಷ್ಠ ಸಂಗ್ರಹಕಾರ, ವಿದ್ವಾಂಸರು ಹಾಗೂ 'ಸಾಹಿತ್ಯಯೋಗಿ' ಎಂಬುದಕ್ಕೆ ಅಕ್ಕನ ವಚನಗಳು ಸಾಕ್ಷಿಯಾಗಿದೆ.

ಸುರಭಿ :

ಇದು ಇವರ ಹಲವಾರು ಕೃತಿಗಳಲ್ಲಿ ಒಂದಾಗಿದೆ. ಹೆಸರೇ ಸೂಚಿಸುವಂತೆ ಸುಗಂಧಭರಿತ ಹಾಡುಗಳ ಸಂಗ್ರಹ. ಸುಜ್ಞಾನಿಗಳ ಪರಿಚಯದ ಭಂಡಾರವಾಗಿದೆ. ಎಲ್ಲಾ ಸ್ವಾಮಿಗಳ ಅನುಭವಾಮೃತವನ್ನು ಉಣಿಸಲಣಿಯಾಗಿದೆ. ಇದೊಂದು ಕಾಮಧೇನುವಿದ್ದಂತೆ. ಬೇಡಿದ್ದನ್ನು ಕೊಡುವುದು. ಹಾಲಿನ ಧೆಯನ್ನು ಕೊಡುವುದು. ಇದರಲ್ಲಿ ಒಟ್ಟು ಏಳು ಭಾಗ ಮಾಡಿದ್ದಾರೆ.

ಮೊದಲನೇ ಭಾಗದ 'ಗೀತ ಗಂಗಾಧರ' ಪದ್ಯದಲ್ಲಿ ಜನ ಜಂಗುಳಿಯಿಂದ ಜೋಗುಳವ ಲಾಲಿಸಿ ಈ ಜಗತವತರಿಸಿದ ಮಹಿಮಾ ಪುರುಷ. ಓಂಕಾರಾತ್ಮನಾದ ರುದ್ರಮುನಿವರ್ಯರು ತಮ್ಮ ಗುರುಗಳಾದ ರೇಣುಕ ಮುನಿಗಳಾಶೀರ್ವಾದದೊಂದಿಗೆ ''ಶ್ರೀಮದ್ ರಂಭಾಪುರಿ ಪೀಠದಲ್ಲಿ ಸಿಂಹಾಸನಾಧೀಶ''ನಾಗಿ ವೀರಶೈವ ಪತಾಕೆಯನ್ನು ವಿಶ್ವದ ಶಿರದಲಿ ನೆಲೆಗೊಳಿಸಿದರು. ಕನ್ನಡ ನಾಡಿನ ತಾಣವನ್ನು ಪುಣ್ಯದ ಚೆಲುವಾಗಿಸಿದವರು. ಶುದ್ಧ ವಿರಾಗಿ, ತೇಜಮೂರ್ತಿಯಾಗಿ ವೀರಶೈವರನ್ನು ಬೆಳಗಿದರು. ಎಂಬುದಾಗಿ ಕವಿ ತಾ ಕಂಡ ಪೂಜ್ಯರನ್ನು ಹಾಡಿದ್ದಾರೆ. ಅದರ ಬಗ್ಗೆ ತಮಗಿದ್ದ ಭಕ್ತಿಯನ್ನು ತೋರಿಸಿದ್ದಾರೆ. ತುಂಬೆ ಹೂವು ಚಿಕ್ಕದು. ಅದು ಎಷ್ಟು ಚಿಕ್ಕದಾದರೂ ಶಿವರಾತ್ರಿಯಲ್ಲಿ ಶಿವನ ಮುಡಿ ಏರುವುದು; ಅದರ ಹೆಗ್ಗಳಿಕೆಯಾಗಿದೆ. ಹಾಗೆಯೇ ರಂಭಾಪುರದಲ್ಲಿ ತುಂಬೆ ಹೂವಾದವರು ಬೆಳವಲದ ನಾಡಿಗೆ ಬಿಲ್ವಪತ್ರೆಯಾಗುತ್ತಾರೆ. ''ಹೊಗೆಯಿಲ್ಲದ ದಗೆಯಿಲ್ಲದ'' ಬೆಳಕಾಗಿ ಎಡೆಯೂರ ಸ್ವಾಮಿಗಳ ಮುಡಿಗೆ ಹೂವಾಗಿ ಬಂದವರು, ಎಂಬುದಾಗಿ ''ಜಯವೀರ ರುದ್ರಮುನಿ ದೇಶಿಕೇಂದ್ರ'' ದಲ್ಲಿ ಕವಿ ಓ ಗೆಳತಿಯರೆ ಎಂದು ಭಕ್ತಾದಿಗಳನ್ನು ಸ್ವಾಗತಿಸಿದ್ದಾರೆ. ಗುರು ರೇಣುಕರ ದಿವ್ಯ ಮಾನಸ ಪುತ್ರನಾಗಿ ರುದ್ರಮುನಿಯೇ ಈ ಜಗಕೆ ಅವತರಿಸಿ ಬಂದು ಸಿಂಹಾಸನಾರೂಢರಾದ ದೇವರಿಗೆ ನಿತ್ಯ ಮಂಗಲವಾಗಲೆಂದು ಪ್ರಾರ್ಥಿಸಿದ್ದಾರೆ. ಇಂತಹ ಮಹಿಮಾಶಾಲಿಯಾದ ಶಿಷ್ಯೋತ್ತಮನನ್ನು ಕರುಣಿಸಿದ ಗುರುವನ್ನು ಕವಿ ಹೃದಯಪೂರ್ವಕವಾಗಿ ಮಂಗಳವನ್ನು ಬೇಡಿದ್ದಾರೆ. ಬಾಳೆಹಳ್ಳಿಯಲ್ಲಿ ನೆಲಸಿ ಪಾವನ ಮಾಡಿದ್ದಾರೆ. ಈ ಮಹಾಪುರುಷರನ್ನು ''ಸುಧಾ ಕುಂಡದಲಿ ಸೊದೆ ತುಂಬಿದಂತೆ'' ಎಂಬುದಾಗಿ ಹೇಳಿದ್ದಾರೆ. ಗುರು ರೇಣುಕರು ಅನೇಕ ಲೀಲೆಗಳನ್ನು ಪವಾಡಗಳನ್ನು ಮಾಡಿ ಜನರ ಉದ್ಧಾರ ಮಾಡಿ ಕಣ್ತೆರೆಸಿದ್ದಾರೆ. ದಲಿತ ಮುನಿವರ್ಯನಾದ ಅಗಸ್ತ್ಯನಿಗೆ ಷಟ್‌ಸ್ಥಲ ತತ್ವವನ್ನು ತಿಳಿಸಿದ್ದಾರೆ. ಶತಾನಂದ ಸತ್ಯೇಂದ್ರ, ಭದ್ರರನ್ನು ಉದ್ಧರಿಸಿದವರು. ಶಿಂಶುಮಾರ ರವರ ಡಿಂಡಿಮಾರರಿಗೆ ದಾಸೋಹತ್ವವನು ತೋರಿಸಿದವರು ಎಂದು ಮುಂತಾಗಿ ನಿವೇದಿಸಿ ಎಷ್ಟೊಂದು ಮಹಿಮಾಶಾಲಿಗಳು. ಎಂದು 'ಗುರುವಂದನ' ದಲ್ಲಿ ಕವಿ ವಂದಿಸುತ್ತಾರೆ.

ಶರಣ ಶರಣೆಯರ ತತ್ವಗಳು, ವಚನಗಳು, ಶಾಶ್ವತವಾಗಿರುತ್ತವೆ. ಅಕ್ಕ,

ಮುಕ್ತಾಯಕ್ಕ, ಬಸವಣ್ಣ, ಪ್ರಭುದೇವ, ಸೊನ್ನಲಿಗೆ, ಸಿದ್ಧರಾಮ, ಚೆನ್ನಬಸವಾದಿಗಳ ವಚನಗಳು, ತತ್ವಗಳು ಅವರು ಅಳಿದರೂ, ''ಆರದ ಹಣತೆಯಂತೆ ಎಂದೆಂದಿಗೂ ಹೊಸತಾಗಿರುತ್ತವೆ. ಮತ್ತು ಸರ್ವಕಾಲಿಕವಾಗಿರುತ್ತವೆ.''

'ಕೀರ್ತಿಸುವೆ ಮಂಗಲಂ ಗುರುವರ್ಯ' 'ಪಾಲಯ ಮಾಂ', ಪದ್ಯಗಳಲ್ಲಿ ಎಲ್ಲ ಗುರುವರ್ಯರಿಗೂ ಮಂಗಲವಾಗಲೆಂದು ಹಾರೈಸಿದ್ದಾರೆ.

ಸುತ್ತೂರಸಿರಿ :

ಇಂತಹದೇ ಚಿತ್ರಣವುಳ್ಳ ಮತ್ತೊಂದು ಮುಖ. ''ಸುತ್ತೂರ ಸಿರಿ'' ಭಾಗದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳ ಮಹತ್ತನ್ನು ಸ್ಮರಿಸಿದ್ದಾರೆ.

''ಗುರುವರನ ಕರಕಮಲ ಸಂಜಾತ

ಕರುಣೆಯೊಲವಿನ ಮೂರ್ತಿ ರಾಜೇಂದ್ರನೆ'' ಎಂದು ಹಾಡಿದ್ದಾರೆ.

ಕವಿ ತನ್ನ ಮನದ ಇಂಗಿತವನ್ನು ಹೀಗೆ ತೋಡಿಕೊಂಡಿದ್ದಾರೆ. ''ಕರುಣಾಸಾಗರನಾದ ಸ್ವಾಮಿಯೆ ಓಂಕಾರದಲಿ ಬಾಗಿದ ನಿಮ್ಮ ದೇಹ'' ದಲ್ಲಿನ 'ಕಣ್ಣುಗಳ ಕಾಂತಿಯು ಇಮ್ಮಡಿ' ಯಾಗಿತ್ತು. ನಿಮ್ಮ ಮುಖವು ಕರ್ಪೂರದಾರತಿಯಂತೆ ಪ್ರಜ್ವಲವಾಗಿ ಕಂಗೊಳಿಸುತ್ತಿತ್ತು. ತಾವು ಲೋಕ ಕಲ್ಯಾಣಕ್ಕಾಗಿ ಸವೆದ ಗಂಧದಂತೆ. ಇಂತಹ ಮಹಿಮಾ ಶಾಲಿಗಳು 'ಬೆಳಗು ಬೆಳಗಲಿ ಒಂದು ಕೂಡಿದಂತೆ', ಅಂದರೆ ಜ್ಯೋತಿಯಲಿ ಜ್ಯೋತಿಯಿದ್ದಂತೆ. ಎಂದು ಸ್ವಾಮಿಗಳ ಆಧ್ಯಾತ್ಮಿಕ ಜೀವನವನ್ನು ಬಿಂಬಿಸಿದ್ದಾರೆ ಕವಿ.

ಅವರ 'ಮಡಿಯಾಗಿ ಬಾಳಿದಿರಿ' ಎಂಬ ಕವನವು ನಿಜಕ್ಕೂ ಮನೋಜ್ಞವಾಗಿ ಮೂಡಿಬಂದಿದೆ. ಇದು ಸ್ವಾಮಿಗಳ ವ್ಯಕ್ತಿತ್ವವನ್ನು ತಿಳಿಸುತ್ತದೆ. ಮನುಷ್ಯನಲ್ಲಿ ನಿಷ್ಠೆಯಿಂದ ಕಾಯಕವು ಕೂಡಿರಬೇಕು. ಮಾತುಗಳಲ್ಲಿ ನಾವು ನಿಷ್ಠಾವಂತರು ಎಂಬ ಮಂತ್ರವಿರುತ್ತದೆ. ಆದರೆ ಮೂರು ಕಾಸಿನ ಕೆಲಸ ಮಾಡುವ ಯೋಗ್ಯತೆಯಿರುವುದಿಲ್ಲ. ಗುರುಗಳು ಸೂಕ್ಷ್ಮವಾಗಿ ಅಂತಹವರ ಕಣ್ಣು ತೆರೆಸುತ್ತಾರೆ. ಮೊದಲು ಮಾನವನಾಗಿ ಬಾಳು ಎಂದು ಮತ್ತೊಬ್ಬರಿಗೆ ಹೇಳುವ ಮೊದಲು ನಾನೆಷ್ಟು ಮಾನವತೆಯನ್ನು ಹೊಂದಿದ್ದೇನೆಂಬುದನ್ನು ಅರಿಯಬೇಕು. ಗುರುಗಳಾದ ನಾವು ಕಾವಿ ತೊಟ್ಟಿದ್ದೇವೆ. ಆ ಕಾವಿಯು ಸೇವೆಯ ಪ್ರತೀಕವಾಗಿದೆ. ನಾವು ಆಸೀನವಾದ ಪೀಠವು ಪವಿತ್ರವಾದದ್ದೆಂದು ಭಾವಿಸಬೇಕು. ಗುರುಗಳು 'ನೊಂದವರ ಎದೆಯ ಕೀಲಿ' ಯಾಗಬೇಕು. ವಿನಯಶೀಲವುಳ್ಳವರಾಗಿರಬೇಕು ಎಂದು ಸುತ್ತೂರಸ್ವಾಮಿಗಳ ಏರಿದ ಉತ್ತರವನ್ನು ಸಾ.ಶಿ. ಮರುಳಯ್ಯನವರು ಕಳೆ ಕಟ್ಟುವಂತೆ, ಮನತುಂಬುವಂತೆ ತಮ್ಮ ಕವನದಲ್ಲಿ ವಿವರಿಸಿದ್ದಾರೆ, ಕವನದ ಕೊನೆಯಲ್ಲಿ ಗುರುಗಳ ಕುರಿತು - ''ಶತಕೋಟಿ ಜೀವರಿಗೆ ಬದುಕು ಕೊಟ್ಟರಿ ದೇವ - ನಿಮ್ಮ ಕೀರ್ತಿಯ ಬೆಳಸು ನಾವಿಲ್ಲವೇ ?'' ಎಂದು ಕವಿಯು ಮಾರ್ಮಿಕವಾಗಿ ಕೇಳಿಕೊಂಡಿದ್ದಾರೆ.

ಮಡಿ ಎಂದರೆ ಸ್ನಾನ ಮಾಡುವುದು, ಶರಣರೆಂದು ಅಲಂಕಾರ ಮಾಡಿಕೊಳ್ಳುವುದು ಸಲ್ಲದು, ಕಾಯಕದಲ್ಲಿ ನಿಷ್ಠೆಯಿಂದಿರುವುದು, ಮನಸ್ಸು, ನಾಲಿಗೆ ಶುದ್ಧವಾಗಿರುವುದು. ಎಲ್ಲರಲ್ಲೂ ಪ್ರೇಮ ಭಾವದಿಂದಿರುವುದು. ನಿಜ ಭಕ್ತಿ ಹೃದಯದಲ್ಲಿರುವುದು. ಇದೇ ನಿಜವಾದ ಮಡಿ ಎಂದು ಸ್ವಾಮಿಗಳು ಹೇಳಿದ್ದಾರೆ. ಇದರ ಚಿತ್ರಣವನ್ನು ತಮ್ಮ ''ಮಡಿಯಾಗಿ ಬಾಳಿದಿರಿ'' ಎಂಬ ಕವನದಲ್ಲಿ ಕವಿ ಚಿತ್ರಿಸಿದ್ದಾರೆ.

ಬಸವಣ್ಣನ ಭಕ್ತಿ, ಅಕ್ಕನ ವಿರಕ್ತಿ, ಚನ್ನಬಸವಣ್ಣನ ಜ್ಞಾನದನುರಕ್ತಿ, ಸಿದ್ಧರಾಮನ ಕರ್ಮಯೋಗದಾಸಕ್ತಿ, ಅಲ್ಲಮನ ಅವಿರತವಾದ ಆಧ್ಯಾತ್ಮ ಪ್ರೀತಿ ಇವುಗಳನ್ನೆಲ್ಲಾ ಕೂಡಿ ಜ್ಯೋತಿ ಸ್ವರೂಪರಾಗಿದ್ದಿರಿ ಎಂದು 'ನಿನ್ನಲ್ಲಿ ನಾನೊಂದು ಬೆಳಕು ಕಂಡೆ' ಎಂದು ಕವಿ ತನ್ನ ಅಂತರಂಗದ ಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

ಸುತ್ತೂರ ಸಿರಿಯು ಶಿವೈಕ್ಯವಾದಾಗ ''ನಮ್ಮೆಲ್ಲರನು ಬಿಟ್ಟು ನೀ ಎಲ್ಲಿ ಹೋದೆ'' ಎಂದು ಕವಿಯು ಭಾವುಕರಾಗುತ್ತಾರೆ. ಆ ಸಂದರ್ಭದಲ್ಲಿ ಸುತ್ತೂರಿನ ಸುತ್ತಲಿರುವ ಹೊಲ ಗದ್ದೆ, ಸಾಲುಗುಡ್ಡಗಳು, ಮರಗಿಡಗಳು, ಬಿಕ್ಕಿ ಬಿಕ್ಕುತಲಿದ್ದವು. ಪ್ರಕೃತಿಯ ಕಣ್ಣೀರು ಕೋಡಿಯಾಗಿ ಹರಿಯುವುದನ್ನು ಕಪಿಲೆಯೋ ಕಣ್ಣೀರ ಹೊಳೆಯಾಗಿ ಹರಿದಿದ್ದಾಳೆ. ಅಲ್ಲಿನ ಜನಸ್ತೋಮ ಪ್ರಕೃತಿಯು ''ನನ್ನಪ್ಪನಿಲ್ಲಾದನೆ'' ಎಂಬುದಾಗಿ ಹೇಳುವಲ್ಲಿ ಕವಿಯು ತಮ್ಮ ಕವನದಲ್ಲಿ ಕಲ್ಪನಾ ವೈಭವವನ್ನು ಮೆರಸಿದ್ದಾರೆ. ಸುತ್ತೂರು ಸಿರಿಯಿಲ್ಲದಿರುವ ಕಾರಣ ಇಡೀ ಪ್ರಕೃತಿಯೇ ರೋದಿಸುತ್ತಿರುವಂತೆ ಭಾಸವಾಗುತ್ತಿತ್ತು. ಈ ಕೆಳಗಿನ ಪದ್ಯವನ್ನು ನೋಡಿ,

''ಸುತ್ತೂರ ಸುತ್ತಲಿನ ನಿಂತ ಭತ್ತದ ಗದ್ದೆ
ಬಿಕ್ಕಿ ಬಿಕ್ಕಳುತಲಿದೆ ಮತ್ತೆ ಮತ್ತೆ
ಕಪಿಲೆಯೂ ಕಣ್ಣೀರೇ ಹೊಳೆಯಾಗಿ ಹರಿಯುತಿದೆ
ನನ್ನಪ್ಪನಿಲ್ಲಾದನೆ ಎಂದೆನುತ್ತೆ''

ಈ ಕವನದಲ್ಲಿ ಪ್ರಕೃತಿಯನ್ನು ಕಾವ್ಯದ ಪ್ರತಿಮೆಗಳಾಗಿ ಉಪಯೋಗಿಸುವಲ್ಲಿ ಯಶಸ್ವಿಯಾಗಿದ್ದಾರೆ. ಸುತ್ತೂರ ಸಿರಿಯವರ ಬದುಕಿನ ಸ್ಥಿತಿ ಅವರ ಕಾರ್ಯಗಳನ್ನು ''ಜಯ ಜಯ ಶಿವರಾತ್ರಿ ರಾಜೇಂದ್ರನೇ'' ಕವನದಲ್ಲಿ ರೂಪಿಸಿದ್ದಾರೆ, ಬಣ್ಣಿಸಿದ್ದಾರೆ. ನಿತ್ಯನಿರ್ಮಲ ಜ್ಯೋತಿಯಾದ ಸ್ವಾಮಿಗಳು ಅಹರ್ನಿಶಿ ದುಡಿಯುವವರ ಸಕಲವೆಲ್ಲವೂ ಶಿವನಿತ್ತ ಕೊಡುಗೆ ಎಂದು 'ಅವ ಕೊಟ್ಟುದೆಲ್ಲವನ್ನು ಅವನಿಗೆ ಮುಟ್ಟಿಸುತ್ತೇನೆಂದು ಅರ್ಪಿಸಿದರು.' ದೀನನಿಗೆ ಬೆಳಕಾದೆ, ದಲಿತನಿಗೆ ತಾಯಾದೆ, ರಾಷ್ಟ್ರ ಹಿತ ಸಾಧನೆಯ ಹೊಂದೇರುವಾದೆ, ಎಂದು ಕವಿ ಸ್ತುತಿಸಿದ್ದಾರೆ. ಶ್ರೀ ಶಿವರಾತ್ರಿ ರಾಜೇಂದ್ರಸ್ವಾಮಿಗಳು ನೆಲೆಸಿದ ಸುತ್ತೂರಿನ ವೈಭವವನ್ನು ಅಲ್ಲಿನ ಪ್ರಕೃತಿಯು ಸುತ್ತಲೂ ಹೇಗಿತ್ತು ಎನ್ನುವುದನ್ನು ''ಸುತ್ತೂರು'' ಎಂಬ ಕವನದಲ್ಲಿ ಮೂಡಿಸಿದ್ದಾರೆ. ಬೆಳ್ಳಿ ಬೆಟ್ಟಗಳ ನಡುವೆ ಹರಿದ ಕಪಿಲೆಯನ್ನು ಹೇಳುವ ಸಾಲುಗಳ ಪರಿ ಇಂತಿವೆ.

''ಕಾಮಧೇನುವೆ ಒಲಿದು ಸೂರೆಬಿಟ್ಟು ಸುರಿದಾಗ
ಹಾಲು ಹೊಳೆಯಾಗಿಹುದು ಕಪಿಲೆಯಾಗಿ''

ಕಪಿಲೆಯಲ್ಲಿ ಹರಿಯುವ ನೀರು ಕಾಮಧೇನುವಿನ ಹಾಲು, ಗಗನದಲಿ ತೆಂಗುಗಳು ಜಾಗರವನಾಡುವವು. ಅಂದರೆ ನವಿಲಿನಂತೆ ನರ್ತಿಸುವವು ಎಂದು. ನೆಲದಲಿ ಹೊಂಬಾಳೆಗಳು ಕಂಗೊಳಿಸುತ್ತಿವೆಯಂತೆ. ಭತ್ತ ಬಂಗಾರಕ್ಕೆ ಕುಣಿಯುವ ಇಚ್ಛೆ. ಕತ್ತೆತ್ತಿ ಕೇಳಿದರೆ ಮುಗಿಲು ಮಾತನಾಡುವದು. ಎಲ್ಲೆಲ್ಲೂ ಹಸಿರು ಪಚ್ಚೆ. ಇವೆಲ್ಲವೂ ಶಿವರಾತ್ರಿ ಗುರುವರನ ಗದ್ದುಗೆಯಲ್ಲಿ ಪವಡಿಸಿದ ತಪಸ್ಸಿನ ಫಲವೋ ಎಂಬಂತೆ ಇದೆ. ಎಂದು ಕವಿ ವರ್ಣಿಸಿದ್ದಾರೆ. ಇಷ್ಟೆಲ್ಲಾ ಮಹಿಮಾಶಾಲಿಯಾದ ಗುರುವೇ ''ಮತ್ತೊಮ್ಮೆ ಮೂಡಿ ಬಾ'' ಎಂದು ಕವಿ ಆಹ್ವಾನಿಸಿದ್ದಾರೆ.

''ಜಗದೊಡೆಯ ನೀನಾಗಿ
ಜಗದೊಡಲ ಶಿವನಾಗಿ
ಶಿವರಾತ್ರಿ ಶಿವನಾಗಿ
ಶುಭ ತುಂಬಲು ಬಾ'' ಎಂದು ಕವಿಯು ಪ್ರಾರ್ಥಿಸುತ್ತಾರೆ.

ಪ್ರಪಂಚದಲ್ಲಿ ಮಾನವತೆ ಕಾಣದಾಗಿದೆ. ಸಾಮಾನ್ಯ ಜನರು ಬದುಕುವುದು ಕ್ಲಿಷ್ಟಕರವಾಗಿದೆ. ಅವರಿಗಾಗಿ ''ಮಾನವ ಕುಲದ ಮಾನವತೆ ಬಿತ್ತು ಬಿತ್ತಲು ಬಾ'' ''ಸುತ್ತೂರಿನ್ನೈಸಿರಿಯೇ ಸವಿಗನಸೆ ಬಾರಾ'' ಎಂದು ಕವಿಯ ಹೃದಯವು ಮಿಡಿಯುತ್ತದೆ. ಸುತ್ತೂರು ಸಿರಿಯು ಮತ್ತೊಮ್ಮೆ ಮೂಡಿ ಬಾ ಈ ಜಗವ ಬೆಳಗು ಬಾ. ನಮ್ಮ ಮನಸ್ಸನ್ನು ಸ್ವಚ್ಚಗೊಳಿಸಲು ಮೂಡಿಬಾ, ಬೆಳಗುಬಾ, ಎಂದು ಪುನಹ 'ಬೆಳಗು ಬಾ' ಕವನದಲ್ಲಿ ಹೇಳಿದ್ದಾರೆ. ನಂತರ ಮುಂದಿನ ಕವನ ''ಜಯವಾಗಲಿ ಸುತ್ತೂರ ಸಿರಿಗೆ'' ಇಲ್ಲಿ ಪುನರಾವರ್ತನೆಯಾಗಿದೆ. ಆದರೂ ಕೆಲವು ಸಾಲುಗಳನ್ನು ನೋಡಿ. ಅದರ ಮೋಡಿ.

''ಕಪಿಲಾನದಿ ಮಡಿಲಿನಲಿ ಪವಾಡವ ಮರೆದವಗೆ
ಪ್ರಣವ ಪಂಚಾಕ್ಷರಿಯನೆ ಪಠಿಸುತಲಿ ನಡೆದವಗೆ

ಸುತ್ತೂರಿನ ನೆತ್ತಿಯಲಿ ಸತ್ತಿಗೆಯನು ನಿಲಿಸಿದಗೆ ಜಯವಾಗಲಿ'' ಎಂಬುದಾಗಿ ಕವಿ ಹಾಡಿದ್ದಾರೆ.

ಕೊಡುವೆಯೇನೆ....?:

ಆಧ್ಯಾತ್ಮದಿಂದ ಜಾನಪದ ಹಾಡುಗಳಲ್ಲಿನ ಸತಿ ಪತಿ ಭಾವದ ಧರ್ಮಕ್ಕೆ ನಮ್ಮ ಮನಸ್ಸನ್ನು ಒಯ್ಯುತ್ತಾರೆ ಕವಿ. ''ಕೊಡುವೆಯೇನೆ'' ಇದೊಂದು ಜಾನಪದ ಶೈಲಿಯ ಪದ್ಯವಾಗಿದೆ. ಓದುತ್ತಾ ಹೋದಂತೆ ಗರತಿಯ ಹಾಡಿನ ನೆನಪು ತರುತ್ತದೆ. ಕವಿತೆಯಲ್ಲಿ ಹೊಸತಿಲ್ಲ, ಮಾವನ ಮಗಳ ಬಗ್ಗೆ ಹೇಳುವಾಗ ಅಶ್ಲೀಲಕ್ಕೆ ತೀರ ಹತ್ತಿರವೆನಿಸುತ್ತದೆ. ನೋಡಿ ಕೆಲವು ಸಾಲುಗಳು ಹೀಗಿವೆ. ''ಸೀರೆಯ ಸೆರಗ

ಸಡಲಿಸಿ'', ''ತಾವರೆಯ ಮೊಗ್ಗು ನಿನ್ನೆದೆಯ ಮ್ಯಾಲೆ'' ಮತ್ತು ''ಸೆರಗ್ಹಾಸಿ ಸುಖವ ನೀ ಕೊಡುವೆಯೇನೆ'' ಮುಂತಾದವುಗಳನ್ನು ಓದಿದಾಗ ನಮಗೇ ಅನ್ನಿಸುತ್ತದೆ ಅಲ್ಲವೇ. ಅದು ನಮ್ಮ ಕಲ್ಪನೆಗೆ ಬಿಟ್ಟಿದ್ದು. ''ತಂದಾನ ತಾನ'' ಈ ಕವನವು ಕೂಡ ಗರತಿಯ ಹಾಡಿನ ಅನುಕರಣೆಯಾಗಿದೆ. ''ನಮ್ಮೂರ ದಾರೀಲಿ'' ಈ ಕವನವು ಪ್ರಕೃತಿಯ ಕುರಿತದ್ದಾಗಿದೆ.

''ಮಾವು ಬೇವಿನ ಹೂವು ಜೋಕಾಲಿ ಜೀಕ್ಯಾವೆ
ಜೇನುಜೋಗುಳವಾ ಹಾಡ್ಯಾವೆ''

ಮುಂತಾದ ಸಾಲುಗಳು ಸರಳವಾಗಿವೆ. ಇವುಗಳು ಕೆ.ಎಸ್. ನರಸಿಂಹಸ್ವಾಮಿಯವರ ಕವನದ ನೆನಪನ್ನು ತರುತ್ತವೆ. ''ಚೆನ್ನ ಚೆಲುವ ಚಂದಗಾರ'' ಇದೊಂದು ಆಧ್ಯಾತ್ಮಿಕ ಅರ್ಥವನ್ನು ಹುದುಗಿಸಿಕೊಂಡ ಸತಿಪತಿ ಭಾವವನ್ನು ಬಿಂಬಿಸುವ ಸರ್ವವೂ ಶಿವಾರ್ಪಿತ ಎನ್ನುವ ಭಾವನೆ ಹೇಳುವ ಕವನವಾಗಿದೆ. ದಾಸರು ಸಂಸಾರದ ವಿರಕ್ತಿಯನ್ನು ಬಯಸುತ್ತಾರೆ. ಆದರೆ ಶರಣರು ರಿಕ್ತ (ಗೃಹಸ್ಥ) ವನ್ನು ಬಯಸುತ್ತಾರೆ. ಅದೇ ಸತಿಪತಿಯ ಧರ್ಮ. ಈ ಕವನದ ಕೊನೇ ಸಾಲು ಬಹಳ ಸೊಗಸಾಗಿವೆ.

''ತಂತಿಯು ಮಿಡಿಯುತ್ತೆ ಜಂಗಮಃ ಅದರ
ಚಿಂತೀಯ ದೂರ ಮಾಡೋ ಜಂಗಮ''

ನೋಡಿ ಈ ಸಾಲುಗಳು ಎಷ್ಟೊಂದು ಒಳಾರ್ಥವನ್ನು ಬಿಂಬಿಸುತ್ತವೆ. ಇವುಗಳಲ್ಲಿ ಎಂಷ್ಟೊಂದು ಭಕ್ತಿ, ಭಾವದ ಸುಧೆಯು ನೊರೆನೊರೆಯಾಗಿ ಹರಿಯುತ್ತದೆ. ದೇಹವೆಂಬ ತಂತಿಯು ಮಿಡಿಯುತ್ತದೆ. ಜೀವನದ ಜಂಜಡದಿಂದ ತೊಳಲಾಡುವುದು; ಹೆಚ್ಚಾಗಿದೆ. ಹಾಗಾಗಿ ಹೃದಯ ಮಿಡಿಯುತ್ತದೆ. ಈ ದೇಹಕ್ಕೆ ಮುಕ್ತಿಕೊಡು. ಈ ತಂತಿಗಿದ್ದ ಜಗದ ಚಿಂತೆಯ ದೂರ ಮಾಡೋ ಜಂಗಮ. ಎಂದು ಹೇಳುವಾಗ ಕವಿಯ ಆಧ್ಯಾತ್ಮಿಕತೆಯು ಉಕ್ಕಿ ಹರಿಯುತ್ತದೆ.

''ಮೇಟಿ ಇಲ್ದ ಮನೆ ಕಾಣೆ, ಬಾರೆ ಜಾಣೆ''

ಕಣದಲ್ಲಿ ಧಾನ್ಯವನ್ನು ಒಕ್ಕುವಾಗ ಒಂದು ಗೂಟ (ಕಂಬ)ದ ಸುತ್ತಲೂ ಧಾನ್ಯದ ಒಣಗಿದ ಗಿಡಗಳನ್ನು ಹರವಿ ಈ ಕಂಬಕ್ಕೆ ನಾಲ್ಕಾರು ಎತ್ತುಗಳನ್ನು ಕಟ್ಟಿ ಅವುಗಳಿಂದ ಆ ಗಿಡಗಳನ್ನು ತುಳಿಸುತ್ತಾರೆ. ಆ ಕಂಬಕ್ಕೆ ''ಮೇಟಿ'' ಎಂದು ಕರೆಯುತ್ತಾರೆ. ಆ ಮೇಟಿಯೆ ಇಲ್ಲದಿದ್ದ ಮೇಲೆ ಎತ್ತುಗಳು ಹೇಗೆ ಸುತ್ತಬೇಕು? ಆ ಮೇಟಿ ಇಲ್ಲದೆ ಕಾಳುಗಳ ಒಕ್ಕಲಾಟ ನಡೆಯುವುದಿಲ್ಲ. ಆದ್ದರಿಂದ ಮೇಟಿಯು ಬೇಕೆ ಬೇಕು. ಹಾಗಾಗಿ ಅದಕ್ಕೆ ಪ್ರಾಮುಖ್ಯತೆ ಬರುತ್ತದೆ. ಅದೇ ರೀತಿಯಲ್ಲಿ ಮೇಟಿ ಇಲ್ಲದ ಮನೆ ಎಂದರೆ ಯಜಮಾನನಿಲ್ಲದ ಮನೆ, ಅದಕ್ಕಾಗಿ ನೀನು ಯಜಮಾನನಾಗಿ ಬಾ ಎಂದು ಕವಿಯು ತನ್ನ ಗುರುವನ್ನು ಆಹ್ವಾನಿಸುತ್ತಾನೆ. ಜ್ಯೋತಿ ಇಲ್ಲದ ಮನೆಯು, ರೀತಿಗೆಟ್ಟು ಹೋಗುವುದು, ಇಂತಹ ಬರಿದಾದ ಮುರಿದು ಬಿದ್ದ ಮನೆಗೆ ತೆರೆ ಸರಿಸಿ ಬಾರೆ,

ಬೆಳಕಾಗಿ ಬಾ, ನನ್ನ ಮನಕೆ ಜ್ಯೋತಿಯಾಗಿ ಬಾ, ಜ್ಞಾನವನ್ನು ತಾ, ಸರಸ್ವತಿಯಾಗಿ ಬಾ, ಎನ್ನುವಲ್ಲಿ ಆಧ್ಯಾತ್ಮಿಕತೆ ಎದ್ದು ಕಾಣುತ್ತದೆ. ಇಲ್ಲಿ ಕವಿಯ ಜಾಣ್ಮೆ ಮೆರೆದಾಡುತ್ತದೆ.

''ದಿಬ್ಬಣ ಹೊರಟೈತೆ ಹೊಸ ಹಬ್ಬ'' ದಲ್ಲಿ ಪ್ರಕೃತಿಯ ವರ್ಣನೆಯನ್ನು ಮಾಡಿದ್ದಾರಷ್ಟೆ. ಈ ಪದ್ಯದಲ್ಲಿ ಕವಿಯು ಪ್ರತೀ ಸಾಲುಗಳಲ್ಲಿ ಬಳಸಿದ ಆಕರ್ಷಣೀಯ ಪದಪುಂಜಗಳಿಂದ ಓದುಗರ ಮನ ಕುಣಿಯುತ್ತದೆ. ಆ ಪದ್ಯದ ಸಾಲು ನೋಡಿ ಹೀಗಿವೆ ಅದರ ಚಲುವಿಕೆ.

''ಟೊಂಗೆ ಟೊಂಗೆಗೂ ಪ್ರಾಯ
ತುಂಬಿದೆ ಹೊಸ ಮಾಯ''

ಗಿಡದಲ್ಲಿನ ಪ್ರತಿ ಟೊಂಗೆಗೂ ಪ್ರಾಯ ಬಂದಿದೆಯಂತೆ. ಅವುಗಳಿಗೆ ಹೊಸ ಮಾಯೆಯು ತುಂಬಿದೆಯಂತೆ, ಮತ್ತೊಂದು ಕಡೆ ನೋಡಿ ''ಮಾವು ಬೇವುಗಳೆಲ್ಲಾ ಮಲ್ಲೀಗೆ ಮುಡಿದಾವೆ'' ಮಾವು ಬೇವಿನ ಗಿಡಗಳಲ್ಲಿ ಹೂವು ಬಿಟ್ಟಾಗಿನ ವರ್ಣನೆ. ಅವುಗಳ ತುಂಬ ಮಲ್ಲಿಗೆ ಹೂವು ಮುಡಿದಿವೆ ಎಂದು ಹೇಳುತ್ತಾ ಶ್ರಾವಣ ಮಾಸಕ್ಕೆ ಕವಿ ನಮ್ಮನು ಕೊಂಡೊಯ್ಯುತ್ತಾರೆ. ಇದು ಬೇಂದ್ರೆಯವರ ''ಶ್ರಾವಣಬಂತು ನಾಡೀಗೆ, ಶ್ರಾವಣ ಬಂತು ಕಾಡಿಗೆ'' ಎಂಬ ಕವನವನ್ನು ನೆನಪಿಗೆ ತರುತ್ತಿದೆ. ''ಕುಂಜರದ ಗೊಂಬೆ ಕೇಳೆ''. ಇದು ಕಥನ ಕವನವಾಗಿದೆ, ಇದರಲ್ಲಿ ಗೌಡರ ಮಗಳ ಕತೆ ಇದೆ. ಆಕೆ (ಯುವತಿ)ಯು ನೆರೆದು ನಿಂತಾಗಿನ ಸೊಬಗು. ಆಕೆಯ ಮೈಮಾಟದ ಉಬ್ಬು ತಗ್ಗುಗಳನ್ನು ಗಜನಿಂಬೆ, ರಸಬಾಳೆ ಎಂದು ಆಕೆಯ ಮೋಹಕ ಆಕರ್ಷಣೀಯ ದೇಹದ ಕುರಿತು ವರ್ಣನೆಯಿದೆ. ಇದರಲ್ಲಿ ಮತ್ತೆ ಅಷ್ಟೇನು ವಿಶೇಷತೆ ಕಾಣುವುದಿಲ್ಲ.

''ಮದುವೆ ಮದುವೆ ಮದುವೆ'' ''ಮದುವೆಯ ಮನೆ ಚೆಂದ''. ಇದರಲ್ಲಿ ಬರಿ ಮಧುವೆಮನೆಯ ಮತ್ತು ಮದುವೆಮನೆಗೆ ಬಂದ ಜನ, ಬೀಗರು, ನೆಂಟರು, ಅವರು ಕ್ಷೇಮಸಮಾಚಾರ ಮಾತಾಡಿಕೊಳ್ಳುವ ಚಿತ್ರಣವಿದೆ.

''ಊಟ ಊಟ ಊಟ'' ಎಂಬ ಕವನದಲ್ಲಿ ಮದುವೆಗೆ ಬಂದ ನೆಂಟರಿಗೆಲ್ಲ ಊಟದ ಆಸೆ, ಹೆಣ್ಣಿಗೆ ಗಂಡಿನ ಆಸೆ, ಗಂಡಿಗೆ ಹೆಣ್ಣೇ ಭಾಷೆ. ಮದುವೆ ಮನೆಯಲ್ಲಿ ಊಟದ ವಿಶೇಷತೆ ಇದ್ದೇ ಇರುತ್ತದೆ. ಜೊತೆಗೆ ಇದರಲ್ಲಿ ಹೆಣ್ಣು ಗಂಡಿನ ಬದುಕಿನ ಆಸೆ ವ್ಯಕ್ತವಾಗಿದೆ. ''ಹೋಗಿ ಬರುವೆನು'' - ಇದೊಂದು ಸಂಪ್ರದಾಯದ ಹಾಡಾಗಿದೆ. ಮದುವೆ ಮಾಡಿಕೊಟ್ಟ ಹೆಣ್ಣಿನ ಕಡೆಯವರು ಗಂಡಿನ ಮನೆಗೆ ತಮ್ಮ ಮಗಳನ್ನು ಮನೆ ತುಂಬಿಸುವಾಗ ಅವರ ಮನದ ಸಿಹಿ ಕಹಿಯನ್ನು ವ್ಯಕ್ತಪಡಿಸುತ್ತದೆ ಈ ಕವನ. ಈ ಭಾಗದಲ್ಲಿನ ಕವಿತೆಗಳನ್ನು ಹಿನ್ನೆಲೆ ಗಾಯಕಿಯಾದ ಬಿ.ಆರ್. ಛಾಯಾ ಅವರು, ಬಿ.ಆರ್. ಹೇಮಂತ್‌ಕುಮಾರ್ ಅವರ ಸಂಗೀತ ನಿರ್ದೇಶನದಲ್ಲಿ ಹಾಡಿದ್ದಾರೆ. ಇದರಿಂದ ಈ ಕವಿತೆಗಳು ಪ್ರಾಮುಖ್ಯತೆಯನ್ನು ಪಡೆದಿವೆ.

''ಕಲ್ಪನೆಯ ಕುಸುಮವೇ'' ದಲ್ಲಿ ಸ್ತ್ರೀ ಪುರುಷ ಸಹಯೋಗ ಸಹಕಾರ

ರೂಪದಲ್ಲಿರಬೇಕು. ಎಲ್ಲಿಯೋ ಹುಟ್ಟಿ ಮತ್ತೆಲ್ಲಿಯೋ ಬೆಳೆದು ಎರಡು ಜೀವಿಗಳಿಗೆ ಬಾಳದೀಕ್ಷೆ ಕೊಡುವುದು. ಪ್ರೇಮಿಗಳ ಬಗ್ಗೆ ಇದ್ದ ಕವಿತೆ, ಅವರ ಬದುಕಿನ ಬರಹವಾಗಿದೆ. ''ಬನ್ನಿ ಬನ್ನಿ ಕನಸುಗಳೇ'' ಇದರಲ್ಲಿ ನವ ದಂಪತಿಗಳ ಕಳವಳ, ತಳಮಳ, ವ್ಯಕ್ತವಾಗಿದೆ. ''ಮದುವೆ ಮದುವೆ ಮದುವೆ'' ಯಲ್ಲಿ ಮದುವೆ ಬಗ್ಗೆ ''ನವವಧುವಿನ'' ಮಾನಸಿಕ ಚಿತ್ರಣವಿದೆ. ಮದುವೆ ಎಂಬುದು ಮನಸ್ಸಿಗೆ ಮುದವನ್ನು ತರುತ್ತದೆ. ''ಹಾಲುಕ್ಕಿ ಜೇನು ಹರಿಯಲಿ'' ಮುಂದೆ ನಾ ಸೇರೋ ಮನೆಯಲಿ'' ಎಂದು ಹಾಡಿ ಹರಸುತ್ತ ನವ ವಧು ಗಂಡಿನ ಮನೆ ಸೇರುತ್ತಾಳೆ. ''ಸೋ ಎನ್ನೀರೆ ಸೋಬಾನೆ ಎನ್ನಿರೆ'' ಈ ಪದ್ಯವು ಸೋಬಾನೆ ಹಾಡಾಗಿದೆ. ಇದನ್ನು ಹೆಣ್ಣು ಗಂಡಿನ ಮನೆ ಸೇರುವಾಗ ''ನಿನ್ನ ಕೊಟ್ಟೇವು ಮನದುಂಬು ಎಂದು ಹಾಡುತ್ತಾರೆ. ''ಚೈತ್ರ ನಂದನದಲ್ಲಿ'' ಹೊಸದಾಗಿ ಮದುವೆಯಾದವರ ಮಧುಚಂದ್ರವು ಬಿಂಬಿತವಾಗಿದೆ. ಹೊಸ ಜೋಡಿಗಳು ಹ್ಯಾಗೆ ವರ್ತಿಸುತ್ತಾರೆ. ಎಂಬುದಕ್ಕೆ ಕವಿಯ ಭಾಷೆಯಲ್ಲಿ ಹೇಳುವುದಾದರೆ,

''ದುಂಬಿ ಚುಂಬನವೀಯೇ
ತುಟಿಯ ಸವರಿದೆ ಬಳ್ಳಿ
ತೆಕ್ಕೆಬಿದ್ದಿವೆ ಮಾವು-ಬೇವು ಇಲ್ಲಿ

ಇದರಲ್ಲಿ ನವದಂಪತಿಗಳು ಸ್ವಚ್ಛಂದವಾಗಿ ವರ್ತಿಸುವುದು, ದಿನದಲ್ಲಿ ನಡೆದರೆ ಕೊನೆಯಲ್ಲಿ ದಿನಕಳೆದಂತೆ ''ಸಾಕಿನ್ನು ಮಾತು ಸೋತಿದೆ, ನುಡಿಸಿ ಅಪ್ಪುಗೆಯ ಹೆಪ್ಪಿರಲಿ ಬಾರೆ ಮಳ್ಳಿ'' ಎಂದು ರಾತ್ರಿ ಗಂಡ ಎಳೆದಪ್ಪಿಕೊಳ್ಳುತ್ತಾನೆ. ಅವನ ಬಿಸಿ ಅಪ್ಪುಗೆಯಲ್ಲಿ ಸುಖದಿಂದ ಬಾಳಿಗೊಂದು ಬೆಳ್ಳಿಚುಕ್ಕೆ ಮೂಡಿಸಿಕೊಳ್ಳುತ್ತಾಳೆ. ಇದೊಂದು ಸೊಗಸಾದ ಮಧು ಚಂದ್ರದ ಚಿತ್ರಣವುಳ್ಳ ಕವನವಾಗಿದೆ.

ಅಷ್ಟಲಕ್ಷ್ಮೀಯರು - ಔಪಾಸನೆ :

ಸಕಲ ಸಂಕಷ್ಟಗಳನ್ನು ಕ್ಲಿಷ್ಟವಿಲ್ಲದೆ ಕಳೆದು ಇಷ್ಟಾರ್ಥಗಳನ್ನು ಪಡೆದು ಅಷ್ಟಲಕ್ಷ್ಮೀಯರ ಉಪಾಸನೆಗೆ ಹೆಣ್ಣುಮಕ್ಕಳು ತೊಡಗುತ್ತಾರೆ. ಮಡಿ, ಭಕ್ತಿಯಿಂದ ಅಷ್ಟಲಕ್ಷ್ಮೀಯರನ್ನು ಆರಾಧಿಸಿದರೆ ಸಕಲ ಸೌಭಾಗ್ಯವು ದೊರೆಯುವುದು. ಇದೊಂದು ಧಾರ್ಮಿಕ ಬದ್ಧವಾದ ನಿಷ್ಠೆಯಾಗಿದೆ.

ಧನಲಕ್ಷ್ಮಿ , ಧಾನ್ಯಲಕ್ಷ್ಮಿ , ಗಜಲಕ್ಷ್ಮಿ , ಆದಿಲಕ್ಷ್ಮಿ , ವೀರಲಕ್ಷ್ಮಿ , ವಿಜಯಲಕ್ಷ್ಮಿ , ಐಶ್ವರ್ಯಲಕ್ಷ್ಮಿ , ಮತ್ತು ಸಂತಾನಲಕ್ಷ್ಮಿ ಇವರೇ ಅಷ್ಟಲಕ್ಷ್ಮಿಯರಾಗಿದ್ದಾರೆ. ಪ್ರತಿಯೊಬ್ಬ ಲಕ್ಷ್ಮಿಯ ಸ್ಥಾನವು ಎಷ್ಟೊಂದು ಸುಂದರ. ಇದರ ಪ್ರಯೋಜನ ಪಡೆಯುವವರ್‍ಯಾರು ಇತ್ತೀಚಿನ ದಿನಗಳಲ್ಲಿ ? ದೇವರು ಬೇಡ, ಧರ್ಮಬೇಡ, ನಾಮಸ್ಮರಣೆ ಬೇಡ, ಯಾವುದರಲ್ಲೂ ವಿಶ್ವಾಸವಿಲ್ಲದಂತಾಗಿದೆ. ಎಲ್ಲಿ ನೋಡಿದರಲ್ಲಿ ಕೊಲೆ, ಸುಲಿಗೆ, ಹೊಡೆದಾಟ, ಭ್ರಷ್ಟಾಚಾರ, ಅನೀತಿ ತುಂಬಿದೆ. ಸ್ವಂತ

ಲಾಭಕ್ಕಾಗಿ ಒಡಹುಟ್ಟಿದವರ ಕತ್ತು ಹಿಸುಕಲು ಸಿದ್ಧರು. ಯಾರಿಗೂ ಯಾರ ಬಗ್ಗೆಯೂ ಚಿಂತೆಯಿಲ್ಲ ಧರ್ಮದ ವಿಚಾರವಿಲ್ಲ. ಸತ್ಯದ ಪರಿವೆಯಿಲ್ಲ; ವಿವೇಚನೆಯಿಲ್ಲ. ಎಲ್ಲರೂ ಇಷ್ಟೆಲ್ಲ ಅನ್ಯಾಯದ ಮಾರ್ಗದಲ್ಲಿ ಏತಕ್ಕಾಗಿ ಸಾಗುತ್ತಿದ್ದಾರೆ? ಕೇವಲ ಹಣಕ್ಕಾಗಿ, ಪ್ರಸ್ತುತ ಪರಿಸ್ಥಿತಿಯು ಹಾಗಿದೆ. ಏನ್ಮಾಡುವುದು. ಸ್ವಲ್ಪ ವಿವೇಕಶಾಲಿಗಳಾಗಿ ವಿಚಾರ ಮಾಡಿ ನಮ್ಮ ಭವ್ಯಪರಂಪರೆಯನ್ನು ಅವಲೋಕಿಸಿದಾಗ ಹಣ, ಅಧಿಕಾರ, ನಮ್ಮ ಜೀವನದ ಸರ್ವಸ್ವವಲ್ಲ. ಆದರೂ ಅವುಗಳನ್ನು ಪಡೆಯಲು ದುಷ್ಟಮಾರ್ಗ ಹಿಡಿಯುವುದು ಸಮಂಜಸವಲ್ಲ. ಆದಷ್ಟೂ ಸನ್ಮಾರ್ಗದಲ್ಲಿ ಹೋಗುವುದು ಔಚಿತ್ಯಪೂರ್ಣವೆಂದು ಕವಿ ಭಾವಿಸಿದ್ದಾರೆ. ಒಳ್ಳೆಯ ಮಾರ್ಗದಿಂದ ನಮ್ಮ ತೊಂದರೆಗಳನ್ನು ನಿವಾರಿಸಿಕೊಳ್ಳಲು ಅಷ್ಟಲಕ್ಷ್ಮಿಯರ ವ್ರತ ನಡೆಸಬೇಕು. ಈ ವ್ರತವನ್ನು ಆಚರಿಸುವುದು ಅತ್ಯಂತ ಸರಳ ಹಾಗೂ ಸುಲಭ. ಇದನ್ನು ಮಹಿಳೆಯರು, ಗೃಹಿಣಿಯರು ಆಚರಿಸಬಹುದು. ಇದಕ್ಕಾಗಿ ಉಪವಾಸ ಇರಬೇಕಾಗಿಲ್ಲ. ದೇವರ ಮುಂದೆ ಮೂಗು ಹಿಡಿದು ಕೂರಬೇಕಾಗಿಲ್ಲ. ಪ್ರತಿ ಶುಕ್ರವಾರ (ಶ್ರಾವಣಮಾಸವೂ ಆಗಬಹುದು) ಸಂಜೆ ಕೈಕಾಲು ತೊಳೆದು ದೇವರ ಮುಂದೆ ದೀಪ ಬೆಳಗಿಸಿ ಒಂದು ಲೋಟ ಅಥವಾ ತಂಬಿಗೆಯಲ್ಲಿ ಸ್ವಲ್ಪ ನೀರನ್ನು ಹಾಕಿ ಅದರಲ್ಲಿ ಮೂರು ಅಥವಾ ಐದು ಮಾವಿನ ಎಲೆ ಅಥವಾ ವೀಳ್ಯದ ಎಲೆಗಳ ತುದಿ ಮೇಲೆ ಬರುವಂತೆ ಇರಿಸಿ ಅದರಲ್ಲಿ ಒಂದು ತೆಂಗಿನಕಾಯಿಯನ್ನು ಇಡಬೇಕು. ಅದಕ್ಕೆ ಇದ್ದ ಸ್ವಲ್ಪ ಚಿನ್ನಾಭರಣ ಹಾಕಿ, ಅರಿಶಿಣ, ಕುಂಕುಮ ಹಚ್ಚಿ ಹೂವುಗಳನ್ನು ಏರಿಸಿ ಊದಿನಕಡ್ಡಿ ಹಚ್ಚಿ ಬೆಳಗಿಸಿ ಭಕ್ತಿಯಿಂದ ಪೂಜೆ ಮಾಡಿದರೆ ಸಾಕು. ''ಸಣ್ಣ ವ್ರತದಿಂದ ದೊಡ್ಡ ಫಲ'' ವನ್ನು ಪಡೆಯಲು ಸಾಧ್ಯ. ದೃಢ ಭಕ್ತಿ, ಭಾವ, ಮತ್ತು ವಿಶ್ವಾಸದಿಂದ ಪೂಜೆ ಮಾಡಬೇಕು ಅಷ್ಟೆ. ಈ ಅಷ್ಟಲಕ್ಷ್ಮೀಯರ ಸ್ತುತಿಯನ್ನು ಕವಿ ಅಷ್ಟಲಕ್ಷ್ಮಿಯರು ಭಾಗದಲ್ಲಿ ಮೂಡಿಸಿದ್ದಾರೆ. ಹೊಸದಾಗಿ ಮದುವೆಯಾದವರು ಸಂತಾನಲಕ್ಷ್ಮಿ ಪೂಜೆ ಮಾಡುತ್ತಾರೆ. ರೈತರು ಧಾನ್ಯಲಕ್ಷ್ಮಿ ಪೂಜೆ ಮಾಡುತ್ತಾರೆ. ವ್ಯಾಪಾರಸ್ಥರು ಧನಲಕ್ಷ್ಮಿ ಪೂಜೆ ನಡೆಸುತ್ತಾರೆ. ಹೀಗೆ ಯಾವ ಲಕ್ಷ್ಮಿ ಬೇಕು ಆ ಲಕ್ಷ್ಮಿಯ ಪೂಜೆ ಮಾಡಬೇಕು.

ಸಜ್ಜಲದ ಚಿಜ್ಯೋತಿ :

ಈ ಭಾಗದಲ್ಲಿ ಶರಣೆ ಸಜ್ಜಲದ ಸಾಧ್ವಿಯ ಭಕ್ತಿಭಾವವನ್ನು ಪ್ರತಿಧ್ವನಿಸುತ್ತವೆ. ಶರಣೆಯ ಬಗ್ಗೆ ಕವಿಯ ಭಾವನೆಗಳು ಕೂಡ ಮೋಡಿ ಮಾಡುತ್ತವೆ. ''ಇವಳು ಕಾರಣಕನ್ಯೆ'' ದಲ್ಲಿನ ಕೆಲವು ಸಾಲುಗಳು ಹೀಗಿವೆ. ''ಮೂಡಿದಳು ಮಹಾದೇವಿ ಮುಗಿಲೋಳಿಯಲಿ ತೇಲಿ ಜಗದ ಕತ್ತಲ ಹರಿಸಿ ಚೆಂಬೆಳಕನೀಯೆ ಸಜ್ಜಲದ ಗುಡ್ಡದಲಿ ತೇಜೋಮೂರ್ತಿಯು ತಾಯಿ ಶರಣವ್ವ ಧಾರಣೆಗೆ ಇಳಿದಳಲೆ ಮುದದಿ'' ಎಂದು ವರ್ಣಿಸುತ್ತಾರೆ ಕವಿ.

ನೋಡಿ ಈ ಸಾಲುಗಳಲ್ಲಿ ಆ ಸಾಧ್ವಿ ಹೇಗೆ ಧರೆಗಿಳಿದು ಬಂದಳೆಂದು ಕವಿ ತನ್ನ

ಮಾತಿನ ಚಮತ್ಕಾರದಿಂದ ಸೆರೆ ಹಿಡಿದಿದ್ದಾರೆ. ಆ ಮಹಾಮಾಯೆ ಮೂಡಿದಳು, ಮೋಡಗಳ ರಾಶಿಯಲಿ ತೇಲುತ್ತ ಇಳಿಯುವಾಗ ಜಗದ ಕತ್ತಲನ್ನು ಹೋಗಲಾಡಿಸಿ, ಬಂಗಾರದ ಬೆಳಕನ್ನು ನೀಡುತ್ತ ಸಜ್ಜಲದ ಗುಡ್ಡದಲ್ಲಿ ಇಳಿದಳು ಮುದದಿ. ಎಂದು ವರ್ಣಿಸುವಾಗ ಭಾವುಕರಾಗುತ್ತಾರೆ. ಆಕೆಯನ್ನು ಸ್ತುತಿಸುವಾಗ ಹೀಗೆ ಹೇಳುತ್ತಾರೆ ಕವಿ. ''ಗುಡದೂರ ಬಸವಾರ್ಯ ಬಸವ ತಾತರ ಕರುಣೆ'' ಯಾಗಿ ಲಿಂಗಮ್ಮನುದರದಲಿ ಭೃಂಗವಾದಳು ತಾಯಿ. ಮತ್ತು ಆಕೆಯು

''ಅಳುವವರ ಕಣ್ಣೀರ ತೊಡೆವುದೇ ಕಾಯಕವು
ಅದುವೇ ಕಾಯಕ ನಿಷ್ಠೆ ಎಂದಳಿವಳು''

ತೊಂದರೆಗೀಡಾದ ಜನರ ಕಣ್ಣೀರ ಒರೆಸುವುದೇ ನನ್ನ ಕಾಯಕವಾಗಿದೆ ಎಂದು ತನ್ನ ಕಾಯಕವನ್ನು ಹೇಳಿಕೊಂಡಿದ್ದಾಳೆ. ಯಮುನಮ್ಮನಾಗಿ ಕುರುಬರ ಹಾಡ್ಯಾಗ ಜನಿಸಿ ಗುಡದೂರಿನ ಬಸವಾರ್ಯನ ಶಿಷ್ಯಳಾಗಿ ಶುದ್ಧ ಸಜ್ಜಲ ಗುಡ್ಡದ ಶರಣಮ್ಮಳಾಗುತ್ತಾಳೆ. ಕವಿಯು ಆಕೆಯನ್ನು ''ಕರುಣೆ ಕಂಗಳ ತಾಯಿಯಾಗಿ ಮುಕ್ಕಣ್ಣನ ಮುಡಿಗೆ ಹಾವಾದಿರಿ'' ಎಂದು ಆಕೆಯ ಕಾಯಕವನ್ನು ತಿಳಿಸಿದ್ದಾರೆ.

ಗುಡದೂರ ಗುರುದೇವ ದೊಡ್ಡ ಬಸವಾರ್ಯನೆ ''ಎಲ್ಲೆಲ್ಲೂ ನಿನ್ನ ಪಾದ'' ನೀನೆ ಈ ಗುಡದೂರ ಬಸವಜ್ಜ ಎಂದು ಇದರಲ್ಲಿ ಅವರ ಹಿರಿತನವನ್ನು ಕವಿ ಕಂಡಿದ್ದಾರೆ. ಇದರಲ್ಲಿ ಅವರ ಸ್ತುತಿಯು ಅಡಗಿದೆ. ''ಚೇಳು ಬಂದಿದೆ'' ಎಂಬ ಕವನದಲ್ಲಿ ಕವಿ ಚೇಳನ್ನು ಮೋಹ, ಆಸೆ, ಮಾಯೆ, ಎಂಬುದಾಗಿ ಬಣ್ಣಿಸಿದ್ದಾರೆ. ಮನದಲ್ಲಿನ ಆಸೆಯು ದುಃಖಕ್ಕೆ ಮೂಲವಾಗಿದೆ. ಅದು ಚೇಳಿನಲ್ಲಿದ್ದ ವಿಷದಂತೆ, ಎಂದು ಹೇಳುವ ಸಾಲುಗಳು ಸೊಗಸಾಗಿವೆ ''ಮನದ ಮುಂದಣ, ಆಸೆ ಎಂದೆಂಬ ಚೇಳು'' ಎಂದು ಕವಿ ಹೇಳುತ್ತಾರೆ. ಆಸೆಗಳು ಹಲವಾರು ಇವೆ. ಹೊನ್ನಿನ ಹಂಬಲವು ಚೇಳು. ಮಣ್ಣಿನ ಆಸೆಯು ಚೇಳು. ಹೆಣ್ಣೆಂಬ ಮಾಯೆಯು ಚೇಳು. ಇಂತಹ ಚೇಳುಗಳಿಂದ ನನ್ನನ್ನು ಕಾಯು ಬಸವಾರ್ಯ ಎಂದು ಸ್ತುತಿಸುತ್ತಾರೆ ಕವಿ. 'ವಂದನೆ' ಕವನದಲ್ಲಿ ಶರಣಮ್ಮನ ಕಾರ್ಯ ಕಾಯಕವನ್ನು ಮೆಚ್ಚಿನ ಕವಿಯು

''ಸರ್ವ ಸಮತಾ ಭಾವದಲಿ
ಸಮದರ್ಶಿಯಾಗಿಯೆ ಬೆಳೆದಳು'' ಎಂದು ವಂದಿಸುತ್ತಾರೆ.

ಕವನ ''ಆಗಮನ'' ದಲ್ಲಿ ಶರಣಮ್ಮನ ಆಗಮನ ಅಥವಾ ಅವತಾರ ಏಕಾಯಿತು ಎಂದು ತಮ್ಮದೇ ಮಾತುಗಳಲ್ಲಿ ವಣಿಸಿದ್ದಾರೆ. ಜಗದುದ್ಧಾರಕ್ಕಾಗಿ ಅವತರಿಸಿದಳು. ಆ ತಾಯಿಯ ಮಾತುಗಳು ಮಂಗಳದ ಆಭರಣವಾಗಿವೆ. ಆತ್ಮಬಲದ ಮುಂದೆ ಯಾವ ಬಲವೂ ಇಲ್ಲಲಾರದು ಎಂಬುದು ಸ್ಫುಟವಾದುದು ಎಂದು ಹೇಳಿ ಜನರಿಗೆ ಅನೇಕ ಪವಾಡಗಳ ಮೂಲಕ ಕಣ್ಣು ತೆರೆಸಿದಳು. ಕಂಬಳಿಹಾಳ ತಿಮ್ಮನಗೌಡನ ಮಗಳ ರೋಗವನ್ನು ಹೋಗಲಾಡಿಸಿದ್ದು , ಕರಡಿ ಕೃಷ್ಣನ ಹೆಂಡತಿ

ಲಕ್ಷ್ಮಿಗೆ ಜೀವದಾನ ಮಾಡಿರುವುದು, ನಂದವಾಡಿಯ ಜಂಬಣ್ಣನಿಗೆ ಸಂತಾನವಿತ್ತದ್ದು. ಮುಂತಾದ ಸಂಗತಿಗಳನ್ನು ಕವಿ ತಮ್ಮ ಕವನದಲ್ಲಿ ದಾಖಲಿಸಿದ್ದಾರೆ. ಇದರಿಂದ ಶರಣಮ್ಮನ ಹಿರಿಮೆ ಹೆಚ್ಚುತ್ತದೆ.

''ಮೊರೆ'' ಯಲ್ಲಿ ನೀನೆಲ್ಲಿ ಅಡಗಿದೆ ಎಂದು ಶರಣಮ್ಮ ನಿಧನವಾದುದಕ್ಕೆ ಸಂತಾಪ ಹೇಳುತ್ತ ಶರಣೆಯ ಅಂತಿಮ ಯಾತ್ರೆಯಲ್ಲಿ ಜನರು ಎಷ್ಟೊಂದು ದುಃಖ ತಪ್ತರಾಗಿದ್ದರು. ಎನ್ನುವುದನ್ನು ಕವಿ ವ್ಯಕ್ತಪಡಿಸಿದ್ದಾರೆ.

''ಅವ್ವೆ ಹೊಂಟಾಳ್ರೆಪ್ಪೋ'' ಎಂಬ ರೋಧನ ತುಂಬಿ
ಅಳುತ್ತಿತ್ತು ಮುಗ್ಧ ಜನ ಕಣ್ಣೀರ ಹರಿಸಿ''

ಇಲ್ಲಿ ಕವಿ ಅಲ್ಲಿನ ಜೀವಿಗಳ ಮನಸ್ಸು ಎಷ್ಟೊಂದು ಮುಗ್ಧತೆಯಿಂದ ಕೂಡಿದೆ. ಎಂಬುದಾಗಿ ತಿಳಿಸಲು ಯಶಸ್ವಿಯಾಗಿದ್ದಾರೆ. ವಿವಿಧ ರೀತಿಯಲ್ಲಿ ಮೊರೆ ಹೋಗಿದ್ದಾರೆ. ''ಮಂಗಳಂ ಜಯಮಂಗಳಂ''ದಲ್ಲಿ ಬಸವಾರ್ಯರು ಮತ್ತು ಶರಣಮ್ಮನನ್ನು ಕುರಿತು ಕವಿ ಸ್ತುತಿಸಿದ್ದಾರೆ.

ಪುಷ್ಪಾಂಜಲಿ :

ಶಿವಬಸವ ಶಿವಯೋಗಿಯನ್ನು ಬಣ್ಣಿಸಿ ಅವರ ಮಹತ್ವವನ್ನು ಇದರಲ್ಲಿ ಹೇಳಿದ್ದಾರೆ. ಇವರು ನಾಗನೂರಿನಲ್ಲಿ ಜನಿಸಿದರು. ಇವರ ಬಗ್ಗೆ ಕವಿಯ ಹೇಳಿಕೆ ಹೀಗಿದೆ.

''ಅಕ್ಕರೆ ಉಕ್ಕುಕ್ಕಿ ಬರುವ ನಾಗನೂರ ಮಡಿಲಿನಲಿ
ಶರಣರ ಸಿರಿ ಸೋಗಿಲಲ್ಲಿ ಅವರುಸಿರಿನ ಹಸುರಿನಲ್ಲಿ''

ಹೆಸರು ಬರೆವ ರಸಯೋಗಿಯಾಗಿದ್ದಾರೆ, ಎಂದು ಬಣ್ಣಿಸುತ್ತಾರೆ ಕವಿ. ಇವರು ಮೌನಸ್ವಾಮಿಗಳಾಗಿದ್ದರು ಎಂಬುದನ್ನು ಕವಿಯು ''ಮೌನದಲ್ಲಿ ಮಹತ್ವವನ್ನು ಸಾಧಿಸುವವ'' ಎಂದು ಈ ಸ್ವಾಮಿಯನ್ನು ನೆನೆದು ಅವರಿಗೆ ನಮಿಸುತ್ತಾರೆ. ''ನನ್ನ ಭಕ್ತಿ ನಮನವು'' ಎಂದಿದ್ದಾರೆ. ಇವರು ಸೇವೆಯೇ ಶಿವಪೂಜೆಯೆಂದು, ಸೇವೆಯೇ ಶಿವನೆಂದು ತಿಳಿದಿದ್ದರು. ಈ ಕೆಳಗಿನ ಸಾಲುಗಳಿಂದ ತಮ್ಮ ಕಾಯಕದಲ್ಲಿ ಪರಮಾತ್ಮನನ್ನು ಕಂಡಿದ್ದರೆಂದು ಗೊತ್ತಾಗುತ್ತದೆ.

''ಕಲ್ಲಿನಲಿ ನಾರ ಸಿಗಿದು
ಮಣ್ಣಿನಲಿ ಎಣ್ಣೆ ತೆಗೆದು
ಮಾನವತೆಯ ಮೌಲ್ಯವಿತ್ತ''

ಯೋಗಿ ಎಂದು ಇವರ ಬಗ್ಗೆ ಹೇಳವಲ್ಲಿ ಕವಿಯು ಬಳಸಿದ ಜಾಣ್ಮೆ ಎದ್ದು ಕಾಣುತ್ತದೆ. ಇಂತಹ ಧೀಮಂತ ಸ್ವಾಮಿಗಳು ನಾಗನೂರಿನ ಸುಧೆಯಾಗಿದ್ದರೆಂದು ಭಕ್ತಿಭಾವಕದಿಂದ ಪರವಶರಾಗಿ ಅವರಿಗೆ ನಮಿಸುತ್ತಾರೆ. ''ನೀನೊಬ್ಬ ದೇವನನು ಕಂಡೆ'' ಕವನದಲ್ಲಿ ನಾಗನೂರು ಸ್ವಾಮಿಗಳು ಹೇಳಿದ್ದನ್ನು ಮತ್ತೊಮ್ಮೆ ನೆನಪಿಗೆ

ತರುತ್ತಾರೆ. ನೀವು ದೇವರನ್ನು ಕಂಡಿರಿ. ಅವರು ಬಹು ರೂಪವೆಯಾಗಿದ್ದಾರೆಂದು ಹೇಳಿದಿರಿ. ಅವರಿಗೆ ಈ ನೆಲದ ಪ್ರೀತಿ ಬಹಳವಿತ್ತು. ಅದಕ್ಕೆ ಈ ಸಾಲುಗಳೆ ಸಾಕ್ಷಿಯಾಗಿವೆ. ''ಹೆತ್ತವ್ವ ಬೇರಲ್ಲ, ಹೊತ್ತ ನೆಲ ಬೇರಲ್ಲ'' ನೋಡಿ ಈ ಸಾಲುಗಳಲ್ಲಿನ ಪದಗಳ ಮೋಡಿ ಹೇಗಿದೆ? ಹೆತ್ತ ತಾಯಿ ಎಂದು ಹೇಳುವಾಗ ಎಷ್ಟೊಂದು ಹೃದಯವಂತಿಕೆ ತೋರುತ್ತದೆ. ನಮ್ಮನ್ನು ಹೊತ್ತ ಈ ನೆಲ ಭೂತಾಯಿ, ನಮ್ಮ ಹಡೆದ ತಾಯಿ ಬೇರೆ ಅಲ್ಲ. ಇಬ್ಬರೂ ಒಂದೆ. ಎಂದು ಮಾತೃಭೂಮಿಯ ಬಗ್ಗೆ ಇರುವ ಪ್ರೀತಿ ಆಳವಾದುದ್ದಾಗಿದೆ. ಮುಂದಿನ ಸಾಲುಗಳು ಕೂಡ ಇದೇ ರೀತಿಯಾಗಿವೆ.

''ರಾಷ್ಟ್ರದುನ್ನತಿಗಾಗಿ ದುಡಿಯೊ ಮಡಿಯೊ
ಅದರ ಸೇವೆಯಲಿ ಪೂಜೆ''

ಎಂದು ಅವರು ರಾಷ್ಟ್ರಪ್ರೇಮದ ಬಗ್ಗೆ ನುಡಿದಿದ್ದನ್ನು ಕವಿ ಈ ಕವನದಲ್ಲಿ ಸೆರೆಹಿಡಿದಿದ್ದಾನೆ. ''ಎಚ್ಚರಾ'' ಕವನದಲ್ಲಿ ಸನ್ಯಾಸಿಗಳು, ಸ್ವಾಮಿಗಳು, ಗುರುಗಳು, ತಮ್ಮ ನಡೆನುಡಿಯಲ್ಲಿ ಎಚ್ಚರದಿಂದ ಇರಬೇಕು ಎಂದು ನಾಗನೂರರು ಹೇಳಿದಾ ನುಡಿಯನ್ನು ಕವಿಯ ಮಾತನಲ್ಲಿ ಹೇಳುವುದಾದರೆ

''ನಿಚ್ಚನಡೆ ನುಡಿಯಲ್ಲಿ ಸನ್ಯಾಸಿ ಎಚ್ಚರ'' ಹಾಗೆಯೇ
''ಹೆಜ್ಜೆ ಇಟ್ಟೆಡೆಯಲ್ಲಿ ಪಾಚಿ ಕಟ್ಟಿದ ಬಂಡೆ
ಕೊಚ್ಚೆ ರಚ್ಚೆನ ಹಾದಿ ಚೆಚ್ಚರವು, ಎಚ್ಚರ'' ಎಂದಿದ್ದಾರೆ ಸ್ವಾಮಿಗಳು.

ಈ ಪ್ರಪಂಚದಲ್ಲಿ ಎಲ್ಲಿ ಹೆಜ್ಜೆ ಇಟ್ಟರೂ ಕೂಡ ಅಲ್ಲಿ ಅನ್ಯಾಯ, ಅನಾಚಾರ, ಪಾಚಿಯಂತೆ ಬೆಳೆದಿದೆ. ಎಂಬುದನ್ನು ಸ್ವಾರಸ್ಯಕರವಾಗಿ ಹೇಳುತ್ತಾರೆ. ಹಾದಿಯಲ್ಲಿ ಕಲ್ಲುಮುಳ್ಳುಗಳು ತುಂಬಿರುತ್ತವೆ. ದಾರಿ ಅಂಕು ಡೊಂಕಾಗಿರುತ್ತವೆ. ಅವುಗಳನ್ನು ದಾಟಿ ನಡೆಯುವಾಗ ಜಾರದಂತೆ ಎಚ್ಚರದಿಂದಿರಬೇಕು. ಅವುಗಳನ್ನು ಗೆಲ್ಲಬೇಕೆಂದು ನುಡಿದಿದ್ದಾರೆ. ನಾಗನೂರು ಸ್ವಾಮಿಗಳು, ನುಡಿದಂತೆ ನಡೆದರು. ಹಾಗಾಗಿ ಕವಿಯು ''ನಾಗನೂರಜ್ಜಗಳೇ ನಡೆನುಡಿಯು ಮಡಿಯೆ'' ಎಂದು ಮುಕ್ತವಾಗಿ ತಮ್ಮ ಕವನದಲ್ಲಿ ನುಡಿದಿದ್ದಾರೆ. ನಾಗನೂರು ಸ್ವಾಮಿಗಳನ್ನು ''ದೇವ ಬಂದ ಧರೆಗೆ'' ಎಂಬುದಾಗಿ ಹಾಡಿ ಸ್ತುತಿಸಿದ್ದಾರೆ; ಕವಿಗಳು, ಈ ಸ್ವಾಮಿಗಳು ಈ ನಾಡಿಗೆ ಸಂಪತ್ತಿದ್ದ ಹಾಗೆ. ''ನಗನೂರ ನಿಧಿ'' ಎಂದು ಬಣ್ಣಿಸಿದ್ದಾರೆ. ಅದನ್ನೆ -

''ನಗನೂರ ನಿಧಿಯು ಬಂದ
ಜಗಬೆಳಗು ಜ್ಯೋತಿ ಬಂದ''

ಮತ್ತು

ಆಸೆಯನು ನಾಶಗೈದ
ಈಶಾನ ದೇವ ಬಂದ'' ಎಂದು ಕಾವ್ಯಾತ್ಮಕವಾಗಿ ಕವಿ ವರ್ಣಿಸಿದ್ದಾರೆ.

ಆಶೆ, ಆಕಾಂಕ್ಷೆಗಳನ್ನು ನಾಶಮಾಡಿ ವಿರಾಗಿಯಾಗಿದ್ದರು, ದಲಿತ

ದೇವನಾಗಿದ್ದರು, ದೀನರಿಗೆ ತಾಯಿಯಾಗಿದ್ದರು. ಪೂಜೆಯು ಹೇಗೆ ಏಕಾಂತದಲ್ಲಿ ನಡೆಯಬೇಕೋ ಹಾಗೆ ಸೇವೆಯು ಮಾತ್ರ ಲೋಕಾಂತರದಲ್ಲಿ ನಡೆಯಬೇಕು. ಎಂದು ಅವರ ಕಾಯಕವನ್ನು ಬಣ್ಣಿಸಿದ್ದಾರೆ. ''ನಾಗನೂರು'' ಕವನದಲ್ಲಿ ಈ ಪ್ರಭುಸ್ವಾಮಿಗಳಿದ್ದದ್ದರಿಂದ ಆ ಊರಿಗೆ ಮಹತ್ವ ಬಂದಿದೆ. ಏಳು ಮಠಗಳ ಮಹತ್ವದ ವರ್ಣನೆಯಿದೆ. ಹಾಗಾಗಿ ಬೆಳುವಲದಾ ಶಿವ ಬೆಳಸಿನ ನಾಗನೂರು ಮತ್ತು ಪ್ರಭು ಸ್ವಾಮಿಗುರುಗಳಿರುವ ನಾಗನೂರು ಎಂದು ಹೇಳಿದ್ದಾರೆ ಕವಿ. ಬೆಳಗಾವಿಗೆ ಬೆಳಕ ಕೊಟ್ಟರೆ ಇಲ್ಲಿ ಏಳು ನದಿ ಸೇರಿ ತೀರ್ಥವಾದ ಸ್ಥಳದಲ್ಲಿ ಏಳು ಮಠಗಳು ಮೇಳೈಸಿಕೊಂಡು ಬೆಳೆಯುತ್ತಿರುವ ನಾಡು, ಬೆಳಕಿನೊಳಗೆ ಬೆಳಕು ಸೇರಿ ಮಹಾಬೆಳಕಾಗಿ ಈ ನಾಡನ್ನು ಮೆರೆಸಿದ್ದಾರೆ ಸ್ವಾಮಿಗಳು.

ಇಲ್ಲಿನ ಕವಿತಾ ರಚನೆಗಳು, ಅಂದಿನ ಸ್ವಾಮಿಗಳ, ಜಗದ್ಗುರುಗಳ, ಸ್ಫೂರ್ತಿಯಿಂದ ರಚಿತವಾದವುಗಳು. ಸರಳ ಪದಗಳ ಬಳಕೆಯಿಂದ, ಸರಳ ಶೈಲಿಯಿಂದ ಮನದಭಕ್ತಿ ಭಾವವನ್ನು ಕವನಗಳನ್ನಾಗಿ ರಚಿಸಿ ಭಕ್ತರ ಹೃದಯ ಮಿಡಿಯುವಂತೆ ತೂಗಿ ತೇಲಿ ಬಿಟ್ಟಿದ್ದಾರೆ. ಇವುಗಳು ಪಾಂಡಿತ್ಯವನ್ನು ಸಾರದೆ, ಸರಳತೆಯ ಕಲಾತ್ಮಕತೆಯನ್ನು ಹೇಳುತ್ತವೆ. ಪ್ರತಿಯೊಬ್ಬ ಸ್ವಾಮಿಗಳ ಬಗ್ಗೆ ಬರೆಯುವಾಗ ಅವರ ಚರಿತ್ರೆಯನ್ನು ಸಾಕಷ್ಟು ತಿಳಿದಿರುವುದು ಅವಶ್ಯಕ. ಅದರಲ್ಲಿ ಸಾ.ಶಿ. ಮರುಳಯ್ಯನವರು ಸಾಧಿಸಿದ್ದಾರೆ.

''ಸುರಭಿ'' ಅನೇಕ ವೈವಿಧ್ಯತೆಯುಳ್ಳ ಕವನಗಳ ಗುಂಪುಗಳಿಂದ ಕೂಡಿದೆ. ಪ್ರತಿಯೊಂದು ಗುಂಪಿನಲ್ಲಿರುವ ಕವನಗಳು ಮೇಲುನೋಟಕ್ಕೆ ಜಾಳುಜಾಳು ಎಂದೆನಿಸಿದರೂ ಹೆಜ್ಜೆಹೆಜ್ಜೆಗೂ ಸ್ವಚ್ಛಂದವಾಗಿ ಅರಳಿ ಮೈದುಂಬಿ ನಿಂತಿವೆ. ಅವುಗಳಲ್ಲಿ ಕೆಲವು ಆಧ್ಯಾತ್ಮಿಕತೆಯಿಂದ ಕೂಡಿವೆ. ಇವುಗಳು ಮನಕೆ ಚೇತನವನ್ನು ಕಲ್ಪಿಸುವ ಮಾನ್ಯತೆ ಪಡೆದಿವೆ. ಇವುಗಳ ನಡುವೆ ಮದುವೆ ಹಾಡುಗಳು ಮತ್ತು ಜಾನಪದ ಶೈಲಿಯ ಹಾಡುಗಳ ಗುಂಪೂ ಸಹ ಇರುವವು.

ಜಾನಪದ ಹಾಡುಗಳಲ್ಲಿ ಅಶ್ಲೀಲತೆಯನ್ನು ನಿಸ್ಸಂಕೋಚವಾಗಿ ಸಾರಿದ್ದರೂ ಅದರಲ್ಲಿ ಮಧುರ ಪ್ರೇಮಸಲ್ಲಾಪವು ಎದ್ದು ಕಾಣುತ್ತದೆ. ಇದರಿಂದ ಸತಿಪತಿ ಭಾವನೆ ಬರುತ್ತದೆ. ಇವುಗಳಲ್ಲಿ ಕೆಲವು ಅನುಕರಣೀಯವಾಗಿವೆ. ಈ ಗುಂಪುಗಳ ಜೊತೆಗೆ ಅಷ್ಟಲಕ್ಷ್ಮಿಯರ ಸ್ತುತಿ ಕೂಡ ಬರುತ್ತದೆ. ಕೊನೆಯಲ್ಲಿ ಪುಷ್ಪಾಂಜಲಿ ಹೀಗೆ ''ಸುರಭಿ'' ಯು ಒಂದು ರೀತಿಯಲ್ಲಿ ಮಿಸಳಬಾಜಿಯಾಗಿ ನಿಂತಿದೆ.

ಸಾ.ಶಿ. ಮರುಳಯ್ಯನವರ ಸಾಹಿತ್ಯಕ ಕೃಷಿಗಳ ಬಗ್ಗೆ ನನಗೆ ತುಂಬಾ ಗೌರವವಿದೆ. ಇವರು ನಿರಾಡಂಬರದ ಸರಳ ಸಜ್ಜನಿಕೆಯ ವ್ಯಕ್ತಿಯಾಗಿದ್ದಾರೆ; ಇವರಿಗೆ ಸ್ವಲ್ಪ ಪರಿಚವಾದರೂ ಸಾಕು ಬಹಳ ಆತ್ಮೀಯರಾಗುತ್ತಾರೆ. ನಿಸ್ಸಂಕೋಚವುಳ್ಳ ಬರವಣಿಗೆ ಇವರದ್ದು. ಇವರ ಕವನಗಳಲ್ಲಿ ಎದ್ದುಕಾಣುವ ಗುಣಗಳೆಂದರೆ, ಸ್ವಾಮಿಗಳ ಬಗ್ಗೆ ಇದ್ದ ಅನನ್ಯಭಕ್ತಿ, ಅಪಾರ ಗೌರವ, ಆಧ್ಯಾತ್ಮಿಕತೆಯ ಅನುಭವ, ಒಲವು, ಪ್ರೀತಿ.

ಇವೆಲ್ಲವೂ ಅವರ ಕವನಗಳಲ್ಲಿ ತುಂಬಿ ತುಳುಕುತ್ತವೆ. ಸ್ವಾಮಿಗಳ ತತ್ವವನ್ನು ಜಗಕೆ ಚೆಲ್ಲಿದ ಕವಿ ಸಾ.ಶಿ. ಮರುಳಯ್ಯನವರಾಗಿದ್ದಾರೆ. ಈ ಕಾಲದ ಪರಿಮಿತಿಗಳನ್ನು ಮೀರಿ ಬೆಳೆದ ಕನ್ನಡದ ಅನುಭವಿ ವಿದ್ವಾಂಸ ಕವಿ - ಅಂದರೆ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ಎತ್ತರದ ವ್ಯಕ್ತಿಯಾಗಿದ್ದಾರೆ. ಹಾಗಾಗಿ ಅವರು ಸಾಹಿತ್ಯ ಸೃಷ್ಟಿಯಲ್ಲಿ ಕ್ಷೀರಸಾಗರವಿದ್ದಂತೆ.

ಸಾ.ಶಿ. ಮರುಳಯ್ಯನವರ ಕೊಡುಗೆ "ಗ್ರಂಥ ಸಂಪಾದನಾ ಕ್ಷೇತ್ರಕ್ಕೆ"

ಡಾ|| ಬಿ. ನಂಜುಂಡಸ್ವಾಮಿ

ಕನ್ನಡ ಸಾಹಿತ್ಯ ಪ್ರಸಾರಕ್ಕೆ ದುಡಿದ ಅನೇಕ ಹಿರಿಯ ವಿದ್ವಾಂಸರ ಸೇವೆಯನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿ ದಾಖಲು ಮಾಡುವ ಸಮಯ ಇದು. ಈ ಸಂಧಿಕಾಲದಲ್ಲಿ ಬಹಳ ಎಚ್ಚರಿಕೆಯಿಂದ ಯುವ ವಿದ್ವಾಂಸರು ತಮ್ಮ ಸೇವಾ ಪರಿಧಿಯನ್ನು ಮೀರಿ ದುಡಿಯಬೇಕಾಗಿದೆ. ಮುದ್ರಿತ ಪುಸ್ತಕಗಳ ವ್ಯವಸ್ಥಿತವಾದ ಅಧ್ಯಯನ, ಅಳಿದು ಉಳಿದಿರುವ ಹಸ್ತಪ್ರತಿಗಳ ರಕ್ಷಣೆ, ಅವುಗಳ ಸಂಪಾದನೆ ತ್ವರಿತವಾಗಿ ನಡೆಯಬೇಕು. ಗ್ರಂಥ ಸಂಪಾದನೆಯನ್ನು ಕುರಿತು ಎಂ.ಎ. ತರಗತಿಗಳಲ್ಲಿ ಪಾಠವನ್ನು ಕೇಳಿದ ನೂರಾರು ಜನ ವಿದ್ಯಾರ್ಥಿಗಳ ಪೈಕಿ ನಾಲ್ಕಾರೂ ಜನವಾದರೂ ಆಸಕ್ತಿಯಿಂದ ಹಸ್ತಪ್ರತಿಶಾಸ್ತ್ರವನ್ನು ಬೆಳೆಸುವಲ್ಲಿ ಆಸಕ್ತಿ ತೋರಿಸುತ್ತಿಲ್ಲ. ಈ ಬಗ್ಗೆ ಹಿರಿಯರು ವಿದ್ವಾಂಸರು ಸ್ವಲ್ಪ ಎಚ್ಚರಿಕೆ ವಹಿಸಿ ಕಿರಿಯ ಪೀಳಿಗೆಗೆ ಮಾರ್ಗದರ್ಶನ ಮಾಡಬೇಕು. ಕಿರಿಯರಲ್ಲಿ ಈ ಬಗ್ಗೆ ಆಸಕ್ತಿ ಮೂಡುವಂತೆ ವಿಶ್ವವಿದ್ಯಾನಿಲಯಗಳು, ಸರ್ಕಾರ ಏನಾದರೂ ಯೋಜನೆ ಹಾಕಬೇಕು.

ಕನ್ನಡ ಭಾಷೆಯ ಸೇವೆಯನ್ನು ಹಿರಿದಾಗಿ ಮಾಡಿದ ಮೈಸೂರು ದೇಶದ "ಧರ್ಮಪ್ರಭು" ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರ ಕಾಲದಲ್ಲಿ ಅರಮನೆಯ ಕಲ್ಲಚ್ಚು ಮುದ್ರಣದಿಂದ ಸಾಕಷ್ಟು ಕೃತಿಗಳು ಪ್ರಕಟವಾದವು. ಅರಮನೆಯ ವಿದ್ವಾಂಸರುಗಳು ಅನೇಕ ಕೃತಿಗಳನ್ನು ಓಲೆ ಮತ್ತು ಕಾಗದದ ಹಸ್ತಪ್ರತಿಗಳಿಂದ ಗ್ರಂಥವನ್ನು ಪರಿಶೋಧನೆ ಮಾಡಿ ಮುದ್ರಣಕ್ಕೆ ಅಣಿ ಮಾಡಿದರು. ಹೀಗೆ ದುಡಿದ ಹಿರಿಯ ವಿದ್ವಾಂಸರುಗಳ ಮತ್ತು ಪ್ರಕಟಿತ ಕೃತಿಗಳ ಅಧ್ಯಯನ ನಡೆಯಬೇಕಾಗಿದೆ.

ದೇಶದಲ್ಲೆಲ್ಲಾ ಮುದ್ರಣ ಯಂತ್ರ ಬಂದ ಮೇಲೆ, ಮಹಾಜನತೆ ತಮ್ಮ ಪರಿಸರದಲ್ಲಿ ಆಗಿಹೋದ ಕವಿಗಳ ಕೃತಿಗಳ ಪ್ರಕಟಣೆ ಬಗ್ಗೆ ಆಸಕ್ತಿ ವಹಿಸಿದರು. ಸುಮಾರು ೧೮೭೦-೧೯೩೦ರವರೆಗೆ ಪುಸ್ತಕ ಮುದ್ರಣ, ಮಾರಾಟವನ್ನು ವ್ಯಾಪಾರಿಗಳು ಒಂದು ಉದ್ಯಮದಂತೆ ನಡೆಸಿದರು. ಪ್ರತಿಯೊಬ್ಬ ಪುಸ್ತಕದ ವ್ಯಾಪಾರಿಯೂ ಅಂದಿನ ದಿನ ಮಾನದಲ್ಲಿ ಸಾಹಿತ್ಯ ಪ್ರಕಟಣೆಗೆ ಬಹು ಮುಖ್ಯವಾದ ಅಂಶವೆಂದರೆ "ಧರ್ಮ". ಆ ಕಾರಣಕ್ಕಾಗಿ ಶಕ್ತಿವಿಶಿಷ್ಟಾದ್ವೈತ, ಅದ್ವೈತ, ವಿಶಿಷ್ಟಾದ್ವೈತ, ದ್ವೈತ ಮತ್ತು ಜೈನ ಸಂಪ್ರದಾಯದ ವಿದ್ವಾಂಸರು ನೂರಾರು ಕೃತಿಗಳನ್ನು ಪ್ರಕಟಿಸಲು ಶ್ರಮ ವಹಿಸಿದರು.

ಗ್ರಂಥ ಸಂಪಾದನಾ ಶಾಸ್ತ್ರದ ಮೊದಲ ಘಟ್ಟದ ವಿದ್ವಾಂಸರ ಬಗ್ಗೆ ಮಾಹಿತಿ ಸಂಗ್ರಹಿಸುವುದೇ ಇಂದಿನ ಕಾಲಕ್ಕೆ ಬಹಳ ದುಸ್ತರವಾದದ್ದು. ಆಸ್ಥಾನ ವಿದ್ವಾನ್ ಸೋಸಲೇ ಗರಳಪುರೀ ಶಾಸ್ತ್ರಿಗಳು, ಆಸ್ಥಾನ ವಿದ್ವಾನ ಅಭಿನವ ಕಾಳಿದಾಸ ಬಸವಪ್ಪ ಶಾಸ್ತ್ರಿಗಳು, ವ್ಯಾಕರಣದ ಮಲ್ಲಪ್ಪನವರು, ಕರ್ನಾಟಕ ಭಾಷಾರತ್ನ ಪಿ.ಆರ್.

ಕರಿಬಸವಶಾಸ್ತ್ರಿಗಳು, ರೆ|| ಕಿಟಲ್, ರೈಸ್ ಸಾಹೇಬರು, ಆಸ್ಥಾನ ವಿದ್ವಾನ್ ಎನ್. ಆರ್. ಕರಿಬಸವಶಾಸ್ತ್ರಿಗಳು, ತಿಪ್ಪಯ್ಯ ಶಾಸ್ತ್ರಿಗಳು, ವೇ|| ವರದಾಚಾರ್ಯರು, ಮಹಾಮಹೋಪಾಧ್ಯಾಯ ಪ್ರಾಕ್ತನ ವಿಮರ್ಶ ವಿಚಕ್ಷಣ ರಾವ್ ಬಹದ್ದೂರ್, ಆರ್. ನರಸಿಂಹಾಚಾರ್ಯರು, ಎಂ.ಎ. ರಾಮಾನುಜ ಅಯ್ಯಂಗಾರ್, ಎಸ್.ಜಿ. ನರಸಿಂಹಾಚಾರ್, ಮೈಸೂರು ಹೊಸಮಠದ ಬಸವಲಿಂಗ ಸ್ವಾಮಿಗಳು, ಶ್ಯಾಮಾಶಾಸ್ತ್ರಿಗಳು, ಮೈಸೂರು ನಮಃಶಿವಾಯ ಮಠದ ಚರಮೂರ್ತಿ ಸೋಮಶೇಖರ ಸ್ವಾಮಿಗಳು, ಎ.ಆರ್. ಕೃಷ್ಣಶಾಸ್ತ್ರಿಗಳು, ತಳುಕಿನ ವೆಂಕಣ್ಣಯ್ಯನವರು ಮುಂತಾದ ಮಹನೀಯರು ಮೊದಲ ಘಟ್ಟದ ವಿದ್ವಾಂಸರು.

ದ್ವಿತೀಯ ಘಟ್ಟದಲ್ಲಿ ಆಸ್ಥಾನ ವಿದ್ವಾನ್ ಎರ್ತೂರು ಶಾಂತಿರಾಜ ಶಾಸ್ತ್ರಿಗಳು, ಎಂ. ಬಸವಲಿಂಗ ಶಾಸ್ತ್ರಿ ವೇ|| ಶಿ.ಶಿ. ಬಸವಲಿಂಗ ಶಾಸ್ತ್ರಿ ಎಂ.ಎಸ್. ಬಸವಲಿಂಗಯ್ಯ ಆಸ್ಥಾನ ವಿದ್ವಾನ್ ಶಿರಸಿ ಗುರುಶಾಂತ ಶಾಸ್ತ್ರಿಗಳು, ರಾವ್‌ಬಹದ್ದೂರ್ ಫ. ಗು. ಹಳಕಟ್ಟಿ, ಪ್ರೊ|| ಶಿ.ಶಿ. ಬಸವನಾಳರು, ಬೆನಗಲ್ ರಾಮರಾಯರು, ಡಾ. ಎಸ್.ಸಿ. ನಂದೀಮಠ, ಡಾ|| ಡಿ.ಎಲ್. ನರಸಿಂಹಾಚಾರ್, ತೀ.ನಂ. ಶ್ರೀಕಂಠಯ್ಯ, ಡಾ|| ಭೂಸನೂರ ಮಠ, ಸರ್ವದರ್ಶನ ತೀರ್ಥ ವೈ. ನಾಗೇಶ ಶಾಸ್ತ್ರಿಗಳು, ಪಂಡಿತ್ ನಾಗಭೂಷಣ ಶಾಸ್ತ್ರಿಗಳು, ಡಾ|| ಜ.ಚ.ನಿ., ಡಾ|| ಎಲ್. ಬಸವರಾಜು, ಚನ್ನಮಲ್ಲಿಕಾರ್ಜುನರು, ಡಾ|| ಆರ್.ಸಿ. ಹಿರೇಮಠ, ಡಾ|| ಎಂ.ಎಸ್. ಸುಂಕಾಪುರ, ಬಿ. ಶಿವಮೂರ್ತಿ ಶಾಸ್ತ್ರಿಗಳು, ಮುಂತಾದವರು.

ತೃತೀಯ ಘಟ್ಟದಲ್ಲಿ ಮೈಸೂರಿನ ಜಿ.ಎ. ಶಿವಲಿಂಗಯ್ಯ, ಪ್ರೊ|| ದೇವೀರಪ್ಪ, ಡಾ|| ಮರುಳಸಿದ್ಧಯ್ಯ, ಡಾ|| ಎಂ.ಎಂ. ಕಲಬುರ್ಗಿ, ಪ್ರೊ|| ಎನ್. ಬಸವಾರಾಧ್ಯ, ಎಸ್. ಶಿವಣ್ಣ, ಡಾ|| ವೈ.ಸಿ. ಭಾನುಮತಿ, ದಿ|| ನಗುವನಹಳ್ಳಿ ರತ್ನ, ಡಿ. ಸಿದ್ಧಗಂಗಯ್ಯ, ಶ್ರೀ ಕೃಷ್ಣಾಜೋಯಿಸ್, ಪ್ರೊ|| ಉಮಾಪತಿ, ಜಿ.ಜಿ. ಮಂಜುನಾಥ್, ಸಣ್ಣಯ್ಯ, ಡಾ|| ಪಿ.ವಿ. ನಾರಾಯಣ, ಪ್ರೊ|| ಹರಿಶಂಕರ್, ಡಾ|| ಸಾ.ಶಿ. ಮರುಳಯ್ಯ, ಮುಂತಾದವರು ತಮ್ಮ ಸೇವೆಯನ್ನು ಸಲ್ಲಿಸಿದ್ದಾರೆ.

ತುಮಕೂರಿನ ಪರಿಸರದ ಕಲ್ಪತರು ನಾಡಿನ ಸಾಸಲು ಗ್ರಾಮದ ಮರುಳಯ್ಯನವರ ಬಾಲ್ಯ ಜೀವನ ಬಹಳ ಕಷ್ಟಕರವಾದದ್ದು. ಸಾಸಲು ಗ್ರಾಮದಲ್ಲಿ ಇಂದಿಗೂ ಕವಿ ಹುಟ್ಟಿ ಬೆಳೆದ ಮನೆ ಇದೆ. ಊರಿನ ತುಂಬಾ ಶಿವಭಕ್ತರು. ''ಅರಿವು'' ''ಆಚರಣೆ'' ''ಅನುಭವ''ಕ್ಕೆ ಬಹಳ ಪ್ರಸಿದ್ಧ. ವೀರಶೈವ ಧರ್ಮದ 'ಲಿಂಗಾಂಗ ಸಾಮರಸ್ಯ' 'ಪಾದೋದಕ ಪ್ರಸಾದ'ಗಳ ವಿಧಿ ವಿಧಾನಗಳನ್ನು ನೋಡಬೇಕು ಎನ್ನುವವರು ''ಸಾಸಲು'' ''ಶೆಟ್ಟಿಕೆರೆ'' ''ಕಂದಿಗೆರೆ'' ''ಕುಪ್ಪೂರು'' ''ಪಂಚನಹಳ್ಳಿ'' ''ಚಿಕ್ಕನಾಯಕನ ಹಳ್ಳಿ'' ಮತ್ತು ''ತಿಪಟೂರು''ನ್ನು ಸಂದರ್ಶನ ಮಾಡಬೇಕು. ಕವಿಹೃದಯದ ಹಿರಿಯ ವಿದ್ವಾಂಸರಾದ ಸಾ.ಶಿ. ಮರುಳಯ್ಯನವರು ಸಂಪಾದಿಸಿದ ಮೊಟ್ಟ ಮೊದಲನೆಯ ಕೃತಿ,ತಮ್ಮ ಮನೆತನದ ಆರಾಧ್ಯ ದೈವ ''ಮರುಳ ಸಿದ್ಧೇಶ್ವರ''ರವರಿಗೆ ಸಂಬಂಧಪಟ್ಟದ್ದು.

ಶ್ರೀ ಮರುಳಸಿದ್ಧೇಶ್ವರ ಮಹಾಪುರಾಣ

ಶ್ರೀ ಸಿದ್ಧಬಸವ ಶಿವಯೋಗಿ ಪ್ರಣೀತ ''ಶ್ರೀಮತ್ ಕುಪ್ಪೂರು ಗದ್ದಿಗೆ ಶ್ರೀ ಮರುಳಸಿದ್ಧೇಶ್ವರ ಪ್ರಾಚ್ಯ ಪ್ರಕಾಶನ ಮಾಲೆ'' ಯಿಂದ ಪ್ರಕಟವಾಗಿದೆ. ಮೈಸೂರಿನ ''ಮಯೂರ ಮುದ್ರಣಾಲಯ''ನವರು ಮುದ್ರಿಸಿದ್ದಾರೆ. ಈ ಕೃತಿಯ ಕರ್ತೃಗಳಾದ ಸಿದ್ಧಬಸವಸ್ವಾಮಿಗಳ, ಇತಿ ವೃತ್ತವನ್ನು ಮರುಳಯ್ಯನವರು ಕವಿ ಕಾವ್ಯ ಪರಿಚಯದಲ್ಲಿ ನೀಡಿದ್ದಾರೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕ್ ಸಾಲ್ಕಟ್ಟೆ ಮುದ್ದೇನಹಳ್ಳಿ ಗ್ರಾಮದ ಹಿರೇಮಠದ ''ಮರುಳಯ್ಯ'' ಮತ್ತು ''ಮರುಳಮ್ಮ'' ದಂಪತಿಗಳ ದ್ವಿತೀಯ ಪುತ್ರನಾಗಿ ಜನಿಸಿದ ಶ್ರೀಸಿದ್ಧಬಸವ ಶಿವಯೋಗಿಗಳು ತಮ್ಮ ಬಾಲ್ಯ ವಿದ್ಯಾಭ್ಯಾಸವನ್ನು ಮುದ್ದೇನಹಳ್ಳಿಯಲ್ಲಿ ಇದ್ದ ಕೂಲೀಮಠ, ಶ್ರೀಕಂದಿಕೆರೆ ಕೃಷ್ಣಪ್ಪನವರ ಹತ್ತಿರ ಮುಗಿಸಿ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ''ಬಂದ್ರೇಹಳ್ಳಿ ಶ್ರೀಮುಪ್ಪಿನಯ್ಯ''ನವರಲ್ಲಿ ಹೋದರು. ಅಲ್ಲಿಂದ ಬೆಂಗಳೂರಿಗೆ ದಯಮಾಡಿಸಿ ಅಂದಿನ ದಿನಮಾನದ ಪ್ರಸಿದ್ಧ ವಿದ್ವಾಂಸರಾದ ಶ್ರೀನಾಗವೇದಿ ವೀರಸಂಗಶಾಸ್ತ್ರಿಗಳ ಹತ್ತಿರ ವೇದ, ವೇದಾಂತ, ಸಂಸ್ಕೃತ, ಆಗಮ ಸಾಹಿತ್ಯವನ್ನು ಅಭ್ಯಾಸಮಾಡಿ ''ಬಂದ್ರೇಹಳ್ಳಿ''ಗೆ ವಾಪಸ್ಸು ಬಂದು ಕೂಲೀಮಠವನ್ನು ಪ್ರಾರಂಭ ಮಾಡಿದರು. ಮುಂದೆ ಪರಿಸರದ ಜನ ವಿದ್ಯಾವಂತರಾಗಲಿ ಎಂದು ಬೊಮ್ಮೇನಹಳ್ಳಿ, ತುಡಕೇನಹಳ್ಳಿ, ಮೇಣೇನಹಳ್ಳಿ, ಕಾಮಸಮುದ್ರ, ಸೂಳೇಕೆರೆ, ಹಲ್ವಾರು, ಶಶಿವಾಳ, ಗ್ರಾಮಗಳಲ್ಲಿ ಕೂಲೀಮಠಗಳನ್ನು, ಪ್ರಾರಂಭ ಮಾಡಿದರು. ಪೌರೋಹಿತ್ಯ, ಕರಪಾಲ ಹೇಳುವುದು, ನಾಟಕ, ನಿರ್ದೇಶನ, ಪುರಾಣಗಳನ್ನು ಪಾರಾಯಣ ಮಾಡುತ್ತಾ ತಮ್ಮ ಜೀವನವನ್ನು ನಡೆಸುತ್ತಾ ಇದ್ದರು.

ಹಾಲ್ಕುರಿಕೆ ಮಠದ ನಿರಂಜನ ಸ್ವಾಮಿಗಳ ಅಪೇಕ್ಷೆಯಂತೆ ಹಾಲ್ಕುರಿಕೆ ಮಠದ ಸ್ವಾಮಿಗಳಾಗಿ ಅಧಿಕಾರ ಸ್ವೀಕರಿಸಿದರು. ಬೂದಿಹಾಲ್ ಗ್ರಾಮದ ದೈವದವರ ಅಪೇಕ್ಷೆಯಂತೆ ಬೂದಿಹಾಲ್ ಮಠದ (ಶ್ರೀರಾಮಪುರ) ಅಧಿಕಾರವನ್ನು ರಾಕ್ಷಸನಾಮ ಸಂವತ್ಸರದ ಜೇಷ್ಠ ಶುದ್ಧ ೧೩ ಕ್ರಿ.ಶ. ೧೯೧೫ನೇ ಶುಕ್ರವಾರ ಸ್ವೀಕಾರ ಮಾಡಿದರು. ಈ ಮಠವನ್ನು ಸಂಪೂರ್ಣವಾಗಿ ಜೀರ್ಣೋದ್ಧಾರ ಮಾಡಿ ದಾಸೋಹವನ್ನು ಪ್ರಾರಂಭಿಸಿದರು. ಕೆಂಕೆರೆ ಮತ್ತು ದೊಡ್ಡ ಮೇಟಿಕುರ್ಕೆ ಗ್ರಾಮಗಳಲ್ಲಿ ಮಠಗಳನ್ನು ಸ್ಥಾಪನೆ ಮಾಡಿದರು. ನಿ॥ ಪ್ರ॥ ಶಾಂತವೀರ ಸ್ವಾಮಿಗಳಿಗೆ ಅಧಿಕಾರವನ್ನು ಪ್ರಧಾನ ಮಾಡಿ ಶಿವೈಕ್ಯರಾದರು. ಸ್ವಾಮಿಗಳು 'ಶ್ರೀ ಬಿದರೆ ದೊಡ್ಡಜ್ಜಯ್ಯನವರ ಪುರಾಣ' ''ರಾಜಶೇಖರ'' ''ಲಿಖಿತಲೀಲಾ'' ಎಂಬ ನಾಟಕಗಳನ್ನು ರಚಿಸಿದ್ದಾರೆ. ಭಾಮಿನಿ ಷಟ್ಪದಿಯಲ್ಲಿ ರಚಿಸಿದ ಮರುಳಸಿದ್ಧೇಶ್ವರ ಪುರಾಣವನ್ನು ಸಮರ್ಥವಾಗಿ ಮರುಳಯ್ಯನವರು ಸಂಪಾದಿಸಿದ್ದಾರೆ. ಕವಿ ಮತ್ತು ಸಂಪಾದಕರು ಇಬ್ಬರು ಒಂದೇ ಪರಿಸರದವರು, ಪೀಠಿಕಾ ಸಂಧಿಯು ಸೇರಿ ಇಪ್ಪತ್ತು ಸಂಧಿಗಳು, ೯೩೧ ಪದ್ಯಗಳಿವೆ. ಹತ್ತು ಪುಟಗಳಲ್ಲಿ ಕಥೆಯ ಸಾರಾಂಶವನ್ನು ಕೊಟ್ಟಿದ್ದಾರೆ. ಮರುಳಸಿದ್ದೇಶ್ವರರು, ನಿಡುವಳ್ಳಿ ಗ್ರಾಮದ ಗುರುಮಠದ ಜಂಗಮ ಪರಂಪರೆಯ ವೇ॥ ಬಸವಲಿಂಗರಾಧ್ಯ ಮತ್ತು ಹ॥-

ಕುಂ|| ಸಿದ್ಧಾಂಬೆ ದಂಪತಿಗಳ ಸುಪುತ್ರರಾಗಿ ''ಜಂಗಮ ಯತಿ'' ಆಶೀರ್ವಾದದಿಂದ ಜನಿಸಿದರು. ಆ ಜಂಗಮ ಮೂರ್ತಿ ದಂಪತಿಗಳಿಗೆ ''ಶಿವನ ಚಿನ್ಮಯಾಂಶವೇ'' ಶಿಶುವಾಗಿ ಜನಿಸುತ್ತದೆ. ಆತನನ್ನು ಮರುಳಸಿದ್ಧನೆಂದು ಕರೆಯಿರಿ. ಜಗದ ಬೆಳಕಾಗಿ, ನಿಡುವಳ್ಳಿ ಮಠದ ಪಟ್ಟಾಧಿಕಾರಿಯಾಗುತ್ತಾನೆ. ಆತನ ತಮ್ಮನಾಗಿ ಸಿದ್ಧಲಿಂಗನು ಜನಿಸುತ್ತಾನೆ. ಆತನೇ ನಿಮ್ಮ ವಂಶದ ಕುಡಿದಾಂಗುಡಿಯಿಡಲು ಕಾರಣನಾಗುತ್ತಾನೆ'' ಎಂದು ಅಪ್ಪಣೆ ಕೊಟ್ಟಿದ್ದರು.

ಸಕಲಜ್ಞ ವಿದ್ಯಾಪಾರಂಗತನಾದ ಮರುಳಸಿದ್ಧನು ಭಕ್ತಾದಿಗಳ ಮನಸೆಳೆದ. ಶಿವನಿಚ್ಛೆ ಮಗುವಿನ ಹಂಬಲ ಎರಡೂ ಕೂಡಿ ಮಹಾ ವಿಭೂತಿಯನ್ನು ಪಡೆದವು. ನಿಡುವಳ್ಳಿ ಶ್ರೀಮಠಕ್ಕೆ ಸಕಲ ಜಂಗಮ ಜ್ಯೋತಿಗಳೂ, ಚರಮೂರ್ತಿಗಳೂ ದಯಮಾಡಿಸಿ ವಿದ್ಯುಕ್ತರೀತಿಯಲ್ಲಿ ಅತ್ಯಂತ ವೈಭವದಿಂದ ಪಟ್ಟಾಧಿಕಾರದ ಮಹಾ ಕಾರ್ಯವನ್ನು ನೆರವೇರಿಸಿದರು, ನಂತರ ಚರಜಂಗಮನಾಗಿ ಕಂಚಿ, ಕಾಳಹಸ್ತಿ,ಕಾಶಿ, ಕೇದಾರ, ಗೋಕರ್ಣ, ಕಲ್ಯಾಣ, ಉಳವಿ ಮೊದಲಾದ ಕಡೆ ಸಂಚಾರ ಮಾಡಿ, ಶ್ರೀಶೈಲದಲ್ಲಿ ಸಾಕಷ್ಟು ಕಾಲ, ಜಪ, ತಪ ಅನುಷ್ಠಾನ ಮಾಡುತ್ತಾ ಕ್ಷೇತ್ರನಾಥನಾದ ಮಲ್ಲಿಕಾರ್ಜುನ ಭ್ರಮರಾಂಬೆಯರ ಕೃಪೆಗೆ ಪಾತ್ರರಾದರು. ಹೀಗೆ ಸರ್ವಸಂಗ ಪರಿತ್ಯಾಗಿಯಾಗಿ, ತಪಶ್ಯಕ್ತಿಯನ್ನು ಪಡೆದು ಸ್ವಗ್ರಾಮದ ಕಡೆ ದಯಮಾಡಿಸಿದರು. ಕಲ್ಪತರು ಪರಿಸರದ ಹಿರೇಕಲ್, ಶಿಶಿವಾಳ, ದಬ್ಬೆಕಟ್ಟೆ, ಚಿಕ್ಕನಾಯಕನಹಳ್ಳಿ, ಮದನಮಡು, ಮುದ್ದೇನಹಳ್ಳಿ, ತಿಮ್ಮಲಾಪುರ, ಹುಳಿಯಾರು, ಪಟ್ಟಸಂದ್ರ, ಕೆಂಕೆರೆ ಗ್ರಾಮಗಳಲ್ಲಿ ಅನೇಕ ಮಹಿಮೆಗಳನ್ನು, ಪವಾಡಗಳನ್ನು ಮಾಡುತ್ತಾ, ಮಲ್ಲಿಕಾರ್ಜುನ ಬೆಟ್ಟದಲ್ಲಿ ಕೆಲಕಾಲ ತಪಸ್ಸು ಮಾಡಿ ಸಾಸಲು ಗ್ರಾಮದಲ್ಲಿ ಅನುಷ್ಠಾನ ಮಾಡಿ, ಕುಪ್ಪೂರು ಕೆರೆಯ ಹಿಂಬದಿಯಲ್ಲೇ ಯೋಗ ಸಮಾಧಿಯಲ್ಲಿ ಲೀನರಾದರು. ಭಕ್ತವೃಂದ ಗುರುವಿನಪ್ಪಣೆಯಂತೆ ಪರ್ಣಕುಟಿಯ ಪಕ್ಕದಲ್ಲೇ ದೊಡ್ಡ ಪ್ರಮಾಣದ ಸಹಸ್ರ ಸೋಪಾನ ನಿರ್ಮಿತ ನೆಲಮಾಳಿಗೆಯನ್ನು ನಿರ್ಮಿಸಲು ಶ್ರೀಗುರುವು ಅಲ್ಲಿಗೆ ದಯಮಾಡಿಸಿ ಯೋಗಮುದ್ರಾನಿದ್ರಿತರಾದರು. ಅವರ ಸಮಾಧಿ ಮೇಲೆ ಹೈದರ್‌ಖಾನನು ಕಲ್ಲಿನ ಮಂಟಪವನ್ನು ನಿರ್ಮಿಸಿದರು. ಇಷ್ಟು ವಿಷಯವನ್ನು ಶ್ರೀಗಳು ಪುರಾಣದಲ್ಲಿ ಹೇಳಿದ್ದಾರೆ.

ಈ ಪುರಾಣದ ಗದ್ಯಾನುವಾದ ''ಸಾಮರಸ್ಯದ ಶಿಲ್ಪಿ'' ೧೯೮೫ರಲ್ಲಿ ಸಾ.ಶಿ.ಮ. ರವರಿಂದ ರಚಿಸಲ್ಪಟ್ಟು ಮಠದಿಂದ ಪ್ರಕಟಗೊಂಡಿದೆ. ಕಾವ್ಯ ಹುಟ್ಟಿದ ಪರಿಸರದಲ್ಲೇ ಮರುಳಯ್ಯನವರು ಬೆಳೆದು ಬಂದಿರುವುದರಿಂದ ಗ್ರಾಮಗಳ ವರ್ಣನೆ ನೈಜವಾಗಿ ಬಂದಿದೆ. ಮಹಾಪುರಾಣದ ಹಸ್ತಪ್ರತಿ ಬಗ್ಗೆ ಯಾವ ವಿವರವನ್ನು ನೀಡಿಲ್ಲ. ಅವರ ಸ್ವರೂಪ ಮತ್ತು ವಿವರ ನೀಡಿದ್ದರೆ ಮುಂದಿನ ಸಂಶೋಧಕರಿಗೆ ಬಹಳ ಸಹಾಯವಾಗುತ್ತಾ ಇತ್ತು.

ಹರಿಹರನ ಹತ್ತು ರಗಳೆಗಳು

ಸಾ.ಶಿ. ಮರುಳಯ್ಯನವರು ತುಮಕೂರು ಸರಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾಗ ಪ್ರಕಟವಾದ ಈ ಪುಸ್ತಕವನ್ನು ಧಾರವಾಡದ ಕ್ವಾಲಿಟಿ ಪಬ್ಲಿಶರ್ಸ್

ರವರು ಪ್ರಕಟಿಸಿದ್ದಾರೆ. ಹರಿಹರನ ರಗಳೆಗಳನ್ನು ಕನ್ನಡ ನಾಡಿನ ಹಿರಿಯರು ಅಧ್ಯಯನ ಮಾಡುತ್ತಾ ಬಂದಿದ್ದಾರೆ. ಆಸ್ಥಾನ ವಿದ್ವಾನ್ ಯಂ. ಆರ್. ಕರಿಬಸವಶಾಸ್ತ್ರಿಗಳು ೧೯೦೮ರಲ್ಲಿ ''ಸೂಕ್ತಿಮುಕ್ತಾವಳಿಃ'' ಎಂಬ ಸ್ತೋತ್ರ ಕಾವ್ಯದ ಕಿರು ಹೊತ್ತಿಗೆಯನ್ನು ಪ್ರಕಟಿಸಿದರು. ಅದರಲ್ಲಿ ಹರಿಹರ ಕವಿಯ ವಿಭೂತಿ ರಗಳೆ, ರುದ್ರಾಕ್ಷಿ ರಗಳೆ, ಪಂಚಾಕ್ಷರಿ ರಗಳೆಯನ್ನು ಪ್ರಕಟಿಸಿ ರಗಳೆಗಳ ಪ್ರಕಟಣೆಗೆ ನಾಂದಿ ಹಾಕಿದರು. ಮುಂದೆ ಈ ಮಣಿಹವನ್ನು ಹಿರಿಯ ವಿದ್ವಾಂಸರಾದ ಪ್ರೊ॥ ಟಿ.ಎಸ್. ವೆಂಕಣ್ಣಯ್ಯ, ಡಾ. ಫ. ಗು. ಹಳಕಟ್ಟಿ, ಸದ್ಧರ್ಮ ದೀಪಿಕೆ ಚನ್ನಮಲ್ಲಿಕಾರ್ಜುನರು, ಮಲ್ಲಬಾವಿ ವೀರಭದ್ರಪ್ಪನವರು, ತೀ.ನಂ. ಶ್ರೀಕಂಠಯ್ಯ, ಡಾ॥ ಬಿ.ಸಿ. ಜವಳಿ, ಡಾ॥ ಆರ್.ಸಿ. ಹಿರೇಮಠ, ಡಾ॥ ಎಂ.ಎಸ್. ಸುಂಕಾಪುರ, ತ.ಸು. ಶಾಮರಾಯ, ಡಾ॥ ಎಂ.ಎಂ. ಕಲಬುರ್ಗಿಯವರು, ಡಾ॥ ಸಾ.ಶಿ. ಮರುಳಯ್ಯನವರು ಮುಂದುವರೆಸಿದರು.

''ಹರಿಹರನ ಹತ್ತು ರಗಳೆಗಳು'' ಕೃತಿಯಲ್ಲಿ ಮರುಳಯ್ಯನವರು ಚನ್ನಯ್ಯನ ರಗಳೆ, ಗುಂಡಯ್ಯನ ರಗಳೆ, ಮಲುಹಣನ ರಗಳೆ, ಹಲಾಯುಧಯ್ಯನ ರಗಳೆ, ಓಹಿಲಯ್ಯನ ರಗಳೆ, ಭೋಗಣ್ಣನ ರಗಳೆ, ಉದ್ಭಟಯ್ಯನ ರಗಳೆ, ಮಲಯರಾಜದೇವರ ರಗಳೆ, ಬಾಣನ ರಗಳೆ, ಮತ್ತು ಪ್ರಾರ್ಥನೆಯ ರಗಳೆಯನ್ನು ಸಂಪಾದಿಸಿದ್ದಾರೆ. ಪಾಠಾಂತರಗಳನ್ನು ಕೊಟ್ಟಿದ್ದರೂ ಹಸ್ತಪ್ರತಿ ಬಗ್ಗೆ ವಿವರ ಲಭ್ಯ ಇಲ್ಲ.

ತೋಂಟದಾರ್ಯ ವಚನ ವ್ಯಾಖ್ಯೆ

ತೋಂಟದ ಸಿದ್ಧಲಿಂಗೇಶ್ವರರ ''ಷಟ್‌ಸ್ಥಲಜ್ಞಾನಸಾರಾಮೃತ'', ೭೦೧ ವಚನಗಳ ಈ ಕೃತಿಯ ಎಲ್ಲಾ ವಚನಗಳಿಗೆ ಟೀಕೆಯನ್ನು ಬರೆದ ಅಜ್ಞಾತ ಟೀಕಾಕಾರನ ಟೀಕೆಯನ್ನು ಸಮರ್ಥವಾಗಿ ಸಂಪಾದಿಸಿ ಪ್ರಕಟಿಸಿದ ಕೀರ್ತಿ ಮರುಳಯ್ಯನವರದು. ೧೯೯೦ರಲ್ಲಿ ''ಶ್ರೀ ತೋಂಟದ ಸಿದ್ಧಲಿಂಗೇಶ್ವರ ಕೈಂಕರ್ಯ (ದಾಸೋಹ) ಸೇವಾಸಮಿತಿಯಿಂದ ೭೦೦ ಪುಟದ ಕೃತಿ ಪ್ರಕಟವಾಗಿದೆ. ಸಿದ್ಧಲಿಂಗೇಶ್ವರರ ಬೆಡಗಿನ ವಚನಗಳಿಗೆ ಷಟ್ಸ್ಥಲಜ್ಞಾನಿ ಸೋಮಶೇಖರಶಿವಯೋಗಿಗಳು (೧೫೨) ವಚನಗಳಿಗೆ ಟೀಕೆ ಬರೆದಿದ್ದಾರೆ. ಡಾ॥ ಶಿರೂರರವರು ಸಂಪಾದಿಸಿ ಗದಗಿನ ಮಠದಿಂದ ಪ್ರಕಟವಾಗಿದೆ. ಅಜ್ಞಾತ ಟೀಕಾಕಾರ (೨೬೬) ವಚನಗಳಿಗೆ ಟೀಕೆಯನ್ನು ಬರೆದಿದ್ದು ಈ ಟೀಕಾಕೃತಿಯನ್ನು ಡಾ॥ ಎಸ್. ವಿದ್ಯಾಶಂಕರರವರು ಸಂಪಾದಿಸಿ ೧೯೮೩ರಲ್ಲಿ ಪ್ರಕಟಿಸಿದ್ದಾರೆ. ಷಟ್‌ಸ್ಥಲಜ್ಞಾನಸಾರಾಮೃತವನ್ನು ೧೯೩೩ರಲ್ಲಿ ಸದ್ಧರ್ಮದೀಪಿಕೆ ಚನ್ನಮಲ್ಲಿಕಾರ್ಜುನವರು ಹುಬ್ಬಳ್ಳಿ ಮೂರುಸಾವಿರ ಮಠದ ಗ್ರಂಥಮಾಲೆಯಿಂದ ಪ್ರಕಟಿಸಿದರು. ಮತ್ತೆ ೧೯೫೧ರಲ್ಲಿ ಮೈಸೂರಿನಿಂದ ''ಸಿದ್ಧೇಶ್ವರ ವಚನ'' ಬೆಡಗಿನ ವಚನಗಳ ಟಿಪ್ಪಣಿ ಸಹಿತ ಪ್ರಕಟಿಸಿದರು. ಈ ಕೃತಿಯ ಸಂಪಾದನೆಗೆ ೪ ಟೀಕಾ ಪ್ರತಿಗಳನ್ನು ಚನ್ನಮಲ್ಲಿಕಾರ್ಜುನರು ಉಪಯೋಗಿಸಿ ಕೊಂಡಿದ್ದಾರೆ. ಒಂದು ಟೀಕೆ ಸೋಮಶೇಖರ ಶಿವಯೋಗಿಯದು ಉಳಿದ ಟೀಕೆಗಳ ಮೂಲ ಆಕರವನ್ನು ಸಂಶೋಧಿಸಬೇಕಾಗಿದೆ.

೭೦೧ ವಚನಗಳ ಟೀಕಾಕಾರ ''ಹುಮನಬಾದ್ ನಿರಂಜನ ಸ್ವಾಮಿ'' ಇರಬಹುದು

ಎಂದು ಡಾ|| ಎಂ.ಎಂ. ಕಲಬುರ್ಗಿಯವರು ಊಹಿಸಿದ್ದಾರೆ. ಈ ಟೀಕಾಕಾರ ಬಸವಣ್ಣನವರ ಷಟ್‌ಸ್ಥಲ ವಚನಗಳಿಗೂ ಟೀಕೆ ಬರೆದಿದ್ದಾನೆ. ನಿವೃತ್ತ ನ್ಯಾಯಾಧೀಶ ಹೊನ್ನುಡಿಕೆ ಮಹಂತಯ್ಯನವರು ಈ ಹಸ್ತಪ್ರತಿಯನ್ನು ಪತ್ತೆ ಹಚ್ಚಿ ಸಂಪಾದನೆ ಮಾಡಲು ಸಾ.ಶಿ. ಮರುಳಯ್ಯನವರಲ್ಲಿ ವಿನಂತಿಸಿಕೊಂಡಿದ್ದರು. ಹಸ್ತಪ್ರತಿ ಕೋರಿ ಕಾಗದದ ಮೇಲೆ ರಾಗಿ ಮನೆಯಿಂದ ಬರೆಯಲ್ಪಟ್ಟಿದ್ದನ್ನು ಮುನ್ನುಡಿಯಲ್ಲಿ ಸಾ.ಶಿ.ಮ. ಹೇಳಿದ್ದಾರೆ. ಹಸ್ತಪ್ರತಿಯ ಹೆಚ್ಚಿನ ವಿವರವನ್ನು ನೀಡಿಲ್ಲ. ಸಂಪಾದನೆ ಮಾಡಿ ಇಪ್ಪತ್ತು ವರ್ಷದ ನಂತರ ಕೃತಿ ಪ್ರಕಟವಾದದ್ದು.

ಮಾಗಡಿ ವೀರಪ್ಪ ಶಾಸ್ತ್ರಿ ವಿರಚಿತ "ಶ್ರೀಸಿದ್ಧಲಿಂಗೇಶ್ವರ ಶತಕಂ"

ಪರಮ ಪುಣ್ಯಕ್ಷೇತ್ರಮಾದೆಡೆಯೂರು ಷಟ್‌ಸ್ಥಲ ಸಾರ್ವಭೌಮ "ಸಿದ್ಧಲಿಂಗೇಶ್ವರ ಶತಕಂ" ಮಾಗಡಿ ವೀರಪ್ಪ ಶಾಸ್ತ್ರಿಗಳಿಂದ ರಚಿಸಿ ೧೯೧೨ರಲ್ಲಿ ಪ್ರಕಟಿಸಲ್ಪಟ್ಟಿತ್ತು. ಮುದ್ರಿತ ಗ್ರಂಥಗಳನ್ನು ಮತ್ತೆ ಓಲೆಗರಿಯ ಮೇಲೆ ಬರೆದ ಉದಾಹರಣೆಗಳಿವೆ. ಕಾಗದದ ಹಸ್ತಪ್ರತಿ ಲಭ್ಯವಾದ್ದರಿಂದ ಡಾ|| ಸಾ.ಶಿ. ಮರುಳಯ್ಯನವರು ಮತ್ತು ನಾಗರತ್ನ ಶಾಂತಮಲ್ಲಪ್ಪನವರು ಸಂಪಾದಿಸಿ, ಪ್ರತಿ ಪದ್ಯಕ್ಕೆ ಅರ್ಥ ವಿವರಣೆ ನೀಡಿ ಬೆಂಗಳೂರಿನ ರಾಗಿಣಿ ಪ್ರಕಾಶನದಿಂದ ೧೯೯೦ರಲ್ಲಿ ಪ್ರಕಟಿಸಲ್ಪಟ್ಟಿದೆ.

ಶ್ರೀ ತೋಂಟದಾರ್ಯ ರಗಳೆ

ರಾಗಿಣಿ ಪ್ರಕಾಶನದಿಂದ ೧೯೯೧ರಲ್ಲಿ ಡಾ|| ಸಾ.ಶಿ. ಮರುಳಯ್ಯನವರಿಂದ ಮತ್ತು ನಾಗರತ್ನ ಶಾಂತಮಲ್ಲಪ್ಪನವರಿಂದ ಸಂಪಾದಿತವಾಗಿ ಅರ್ಥ ವಿವರಣೆ ಸಹಿತ ಪವಾಡ ಕಥೆಗಳ ವಿವರಣೆ ಸಹಿತ ಪ್ರಕಟವಾಗಿದೆ. ವಿರಕ್ತ ತೋಂಟದಾರ್ಯರಿಂದ ರಚಿತವಾದ ಈ ಲಘು ಕೃತಿ ಮೊದಲು ಫ.ಗು. ಹಳಕಟ್ಟಿಯವರಿಂದ "ಶ್ರೀತೋಂಟದಾರ್ಯರ ರಗಳೆ" ಎಂಬ ಹೆಸರಿನಲ್ಲಿ ೧೯೩೬ರಲ್ಲಿ ಪ್ರಕಟವಾಗಿತ್ತು. ರಗಳೆಯು ಕೊನೆಯಲ್ಲಿ "ಸಿದ್ಧೇಶ್ವರ ಪವಾಡದ ರಗಳೆ" ಎಂದು ಇರುವುದರಿಂದ ಚ. ಸುಂದರೇಶನ್‌ರವರು ಶ್ರೀಸಿದ್ಧಲಿಂಗೇಶ್ವರ ಸ್ತೋತ್ರ ಸಾಹಿತ್ಯದಲ್ಲಿ ಅದೇ ಹೆಸರಿನಲ್ಲಿ ಕೃತಿಯನ್ನು ಪ್ರಕಟಿಸಿದ್ದಾರೆ. ೭೫ ಪವಾಡಗಳ ವಿವರಣೆ ಈ ರಗಳೆಯಲ್ಲಿ ಕಂಡುಬಂದಿದೆ. ೧೯೭೨ರಲ್ಲಿ ಬೆಂಗಳೂರು ವಿಶ್ವವಿದ್ಯಾನಿಲಯ ಪ್ರಕಟಿಸಿದ "ವಚನಕಾರ ಸಿದ್ಧಲಿಂಗಯತಿ" ಪ್ರಚಾರೋಪನ್ಯಾಸ ಕೃತಿಯಲ್ಲಿ ಪಂಪ ಪ್ರಶಸ್ತಿ ವಿಜೇತರಾದ ಡಾ|| ಎಲ್. ಬಸವರಾಜುರವರು ತೋಂಟದ ಸಿದ್ಧೇಶ್ವರ ರಗಳೆಯ ಸಂಪೂರ್ಣವಾದ ಗದ್ಯಾನುವಾದವನ್ನು ನೀಡಿದ್ದಾರೆ.

ಕಳೆದ ೮೦ ವರ್ಷದಿಂದ ಅಧ್ಯಯನಕ್ಕೆ ಒಳಪಟ್ಟ ಈ ಲಘುಕೃತಿಯನ್ನು ಅಧ್ಯಯನಕ್ಕೆ ದೊರಕಿಸಿಕೊಟ್ಟುದುದರಿಂದ, ಹೊಸಗನ್ನಡದ ಸಾರಾಂಶ ಸಾಮಾನ್ಯರಿಗೆ ಬಹಳಷ್ಟು ಸಹಾಯವಾಗಿದೆ. ಕೃತಿಯ ಅನುಬಂಧದಲ್ಲಿ "ಮಾಗಡಿ ಶ್ರೀವೀರಪ್ಪಶಾಸ್ತ್ರಿ ವಿರಚಿತ ಶ್ರೀ ಸಿದ್ಧಲಿಂಗೇಶ್ವರ ಸ್ತೋತ್ರಂ" ಲಘುಕೃತಿಯನ್ನು ಮುದ್ರಿಸಿ ನಾಡಿನ ಜನತೆಗೆ ಉಪಕಾರ ಮಾಡಿದ್ದಾರೆ.

ನೀಲಮ್ಮನ ವಚನಗಳು

ನೀಲಲೋಚನೆಯ ವಚನಗಳು ಮೊದಲು ಸಂಪಾದನೆಗೊಂಡು ಪ್ರಕಟಗೊಂಡಿದ್ದು ತುಮಕೂರು ಜಿಲ್ಲೆ ಹಾಗಲವಾಡಿಯಲ್ಲಿ ದೊರೆತ ಹಸ್ತಪ್ರತಿಯಿಂದ, ಈ ವಚನಗಳ ಸಂಪಾದಕರು ಸಿ.ಕೆ. ಪರಶುರಾಮಯ್ಯನವರು.ದ್ವಿತೀಯ ಘಟ್ಟದ ವಚನ ಚಳುವಳಿಯ ಕೆನೆ ಉಳಿದುಗೊಂಡಿದ್ದು ತುಮಕೂರು ಪರಿಸರದಲ್ಲಿ. ವಚನ ಸಾಹಿತ್ಯದ ಪ್ರಥಮ ಸಂಕಲನ ''ಗಣಭೂಷಿತ ರತ್ನಮಾಲೆ'' ಸಂಗ್ರಹಗೊಂಡದ್ದು ಅಮರಗೊಂಡ ಅರ್ಥಾತ್ ಗುಬ್ಬಿಯಲ್ಲಿ. ಸಂಪಾದನೆ ಸಮಯದ ಕೆಲಸ ಬಿರುಸಾಗಿ ಸಾಗಿ ವಚನ ಸಾಹಿತ್ಯದ ವ್ಯವಸ್ಥಿತ ಅಧ್ಯಯನ ಪ್ರಾರಂಭವಾಯಿತು. ಶೂನ್ಯಸಂಪಾದನೆಗಳ ಪರಿಷ್ಕಾರ ನಡೆದದ್ದು ಈ ಮಣ್ಣಿನಲ್ಲೇ ''ಶಿವಗಣಪ್ರಸಾದಿ ಮಹಾದೇವಯ್ಯ''ನ ಸ್ಥಳದ ಬಗ್ಗೆ ಸ್ವಲ್ಪ ಗೊಂದಲವಿದೆ. ಕೆಲವರು ಗುಬ್ಬಿ ಅಥವಾ ಶಿವಗಂಗೆ ಎಂದರೆ ಕೆಲವರು ಹಂಪೆ ಪರಿಸರದವನು ಎಂದು ಅಭಿಪ್ರಾಯಪಡುತ್ತಾರೆ. ಹಲಿಗೆಯಾರ್ಯ, ಕೆಂಚವೀರಣ್ಣೊಡೆಯ, ಗುಮ್ಮಾಳಪುರದ ಸಿದ್ಧಲಿಂಗ, ಗೂಳೂರು ಸಿದ್ಧವೀರಣ್ಣ ಒಡೆಯ ಈ ಎಲ್ಲಾ ಮಹನೀಯರು ತುಮಕೂರು ಪರಿಸರದವರೆ. ಇದುವರೆಗೆ ನಮಗೆ ಒಂದು ಸಾವಿರ, ಒಂದೂವರೆ ಸಾವಿರ, ಮೂರು ಸಾವಿರದ ಸರ್ವಪುರಾತನರ ವಚನಗಳು ದೊರೆತದ್ದು. ಆರು ಸಾವಿರದ ವಚನಕಟ್ಟು ಲಭ್ಯವಾಗಿರಲಿಲ್ಲ. ಹಿರಿಯ ಹಸ್ತಪ್ರತಿ ತಜ್ಞರಾದ ಎಸ್. ಶಿವಣ್ಣನವರು ಮತ್ತು ಡಾ॥ ಸಾ.ಶಿ. ಮರುಳಯ್ಯನವರು ತಿಪಟೂರು ತಾಲ್ಲೂಕು ಹೊನ್ನವಳ್ಳಿ ಮಠದ ಹಸ್ತಪ್ರತಿಗಳನ್ನು ಸೂಚಿ ಮಾಡುವಾಗ ಅಮೂಲ್ಯ ನಿಧಿ ಆರು ಸಾವಿರ ವಚನದ ಕಟ್ಟು ಲಭ್ಯವಾಗಿ ಆ ಕಟ್ಟಿನ ಸಂಗ್ರಹದಲ್ಲಿ ಇದ್ದ ೨೮೪ ವಚನಗಳನ್ನು ಸಂಪಾದನೆ ಮಾಡಿ ಬಸವ ಸಮಿತಿ ವತಿಯಿಂದ ೧೯೯೩ರಲ್ಲಿ ಪ್ರಕಟಿಸಿದರು.

ನೀಲಮ್ಮನ ವಚನಗಳು ಒಂದೇ ಕಟ್ಟಿನಲ್ಲಿ ಇಷ್ಟು ವಚನಗಳು ಲಭ್ಯವಾದದ್ದೇ ಮಹಾಭಾಗ್ಯ, ಈ ಕಟ್ಟಿನಿಂದ ನಮಗೆ ೧೫೭ ನೀಲಮ್ಮನ ಹೊಸ ವಚನಗಳು ಲಭ್ಯವಾದವು. ಅದೇ ಕೃತಿಯಲ್ಲಿ ಅನ್ಯ ಆಕರದಿಂದ ವಚನಗಳನ್ನು ಸಂಗ್ರಹಿಸಲಾಗಿದೆ. ನಮಗೆ ಒಟ್ಟು ೧೯೧ ಹೊಸ ವಚನಗಳು ಲಭ್ಯವಾದವು. ಈ ವಚನಗಳು ಮತ್ತೆ ಕರ್ನಾಟಕ ಸಾಹಿತ್ಯ ಅಕಾಡೆಮಿ ವತಿಯಿಂದ ೧೯೯೮ರಲ್ಲಿ ಎಸ್. ಶಿವಣ್ಣ ''ಹೊಸವಚನಗಳು'' ಎಂದು ನೀಲಮ್ಮನ ೧೯೧ ವಚನಗಳು ಪ್ರಕಟಗೊಂಡಿವೆ. ಬಸವ ಸಮಿತಿಯಿಂದ ಪ್ರಕಟವಾದ ನೀಲಮ್ಮನ ವಚನಗಳು ಕೃತಿಗೆ ಮರುಳಯ್ಯನವರು ವಿಸ್ತಾರವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ.

ಅಕ್ಕನ ವಚನಗಳು

ರಾಗಿಣಿ ಶಿಕ್ಷಣ ಪ್ರತಿಷ್ಠಾನದಿಂದ ೧೯೯೩ರಲ್ಲಿ ಡಾ॥ ಸಾ.ಶಿ. ಮರುಳಯ್ಯನವರಿಂದ ಸಂಪಾದನೆಗೊಂಡು ಪ್ರಕಟಗೊಂಡಿದೆ. ಹೊನ್ನವಳ್ಳಿ ಮಠದಲ್ಲಿ ದೊರೆತ ''ಆರು ಸಾವಿರ'' ವಚನದ ಕಟ್ಟಿನಲ್ಲಿ ದೊರೆತ ಅಕ್ಕಮಹಾದೇವಿ ೨೦೩ ವಚನಗಳಲ್ಲಿ ೬೭ ಹೊಸ ವಚನಗಳಿವೆ. ಬೇರೆ ಮೂಲದಿಂದ ದೊರೆತ ೧೨ ವಚನಗಳು

ಸೇರಿ ಈ ಕೃತಿಯಲ್ಲಿ ೭೯ ಹೊಸ ವಚನಗಳಿವೆ. ವಚನ, ಸಾಹಿತ್ಯ, ಸಂಗ್ರಹ ಸಂಪಾದನೆ ಪ್ರಕಟಣೆ ತ್ವರಿತವಾಗಿ ೧೯೪೦-೧೯೮೦ ರವರೆಗೆ ದುಡಿದ ಯಾವ ವಿದ್ವಾಂಸರಿಗೂ ಕಣ್ಣಿಗೆ ಬೀಳದ ಅಪೂರ್ವ ನಿಧಿ ಆರು ಸಾವಿರದ ಕಟ್ಟು ಸಾರ್ವಜನಿಕ ಗೊಂಡಿದ್ದು ನಮ್ಮಗಳ ಭಾಗ್ಯ. ಆ ಕಟ್ಟಿನಲ್ಲಿ ಸುಮಾರು ಒಂದು ಸಾವಿರ ವಚನದಷ್ಟು ಗರಿಗಳು ನಷ್ಟವಾಗಿದೆ. ಅಳಿದು ಉಳಿದ ಐದು ಸಾವಿರ ವಚನಗಳನ್ನು ಸಮರ್ಥವಾಗಿ ಸಂಶೋಧಿಸಿ ಕಟ್ಟಿನ ರೂಪದಲ್ಲೇ ಪ್ರಕಟಿಸಬೇಕು.

ಸುದೀರ್ಘವಾಗಿ ಪ್ರಸ್ತಾವನೆಯಲ್ಲಿ ಸಾ.ಶಿ. ಮರುಳಯ್ಯನವರು ಅಕ್ಕನ ವ್ಯಕ್ತಿಚಿತ್ರವನ್ನು ಆಕೆಯ ವಚನಗಳ ಸೂಕ್ಷ್ಮವಾದ ಅಧ್ಯಯನದಿಂದ ಪರಿಚಯ ಮಾಡಿಕೊಟ್ಟಿದ್ದಾರೆ. ಕಡೆಯಲ್ಲಿ ಶರಣರು ಅಕ್ಕನನ್ನು ಕುರಿತು ಹೇಳಿರುವ ಹದಿನೆಂಟು ವಚನಗಳನ್ನು ಕೊಟ್ಟಿದ್ದಾರೆ. ಅಕ್ಕನ ಸಮಗ್ರ ವಚನಗಳನ್ನು ಒಂದು ಕಡೆ ತಂದ ಕೀರ್ತಿ ಮರುಳಯ್ಯನವರದು.

ಆಲಿಸೆನ್ನ ಬಿನ್ನಪವ ಪಾಲಿಸೆನ್ನ ಬಿನ್ನಪವ
ಕೇಳೆನ್ನ ಮಾಹಿತಿಯ ನೋಡೆನ್ನ ದುಃಖವ
ಚನ್ನಮಲ್ಲಿಕಾರ್ಜುನಯ್ಯ
ನಿಮ್ಮಗೆತ್ತಿದ ಕಯ್ಯ ಅನ್ಯರು ಹಿಡಿದರೆ
ಕಿಚ್ಚಿಲ್ಲದ ಬೇಗೆಯಲ್ಲಿ ಬೆಂದೆ ಕಂಡಯ್ಯ ॥೬೯॥

ಇಂತಹ ಸುಂದರವಾದ ವಚನಗಳು ನಮಗೆ ಲಭ್ಯವಾಗಿವೆ. ಕರ್ನಾಟಕದ ಸಾಹಿತ್ಯ ಲೋಕದಲ್ಲಿ ಚರ್ಚೆಯ ವಸ್ತುವಾಗಬೇಕಾಗಿತ್ತು. ಆ ಮಟ್ಟದ ಪ್ರಚಾರವಾಗಲಿಲ್ಲ. ಹೊಸ ವಚನಗಳನ್ನು ಅಧ್ಯಯನ ಮಾಡುವ ಆಸೆ ನಮ್ಮ ಯುವ ವಿದ್ವಾಂಸರಲ್ಲಿ ಮೂಡಬೇಕು.

ಸಿದ್ಧರಾಮಯ್ಯದೇವರ ವಚನಗಳು

ಡಾ॥ ಎಂ.ಎಂ. ಕಲಬುರ್ಗಿ ಮತ್ತು ಡಾ॥ ಸಾ.ಶಿ. ಮರುಳಯ್ಯನವರಿಂದ ಸಂಪಾದನೆಗೊಂಡು, ಕನ್ನಡ ಸಾಹಿತ್ಯ ಪರಿಷತ್ತಿನಿಂದ ೧೯೮೮ರಲ್ಲಿ ಸಿರಿಗೆರೆ ಮಠದ ಡಾ॥ ಶ್ರೀಶ್ರೀಶ್ರೀ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳು ಇಟ್ಟಿರುವ ''ವಚನ ಸಾಹಿತ್ಯ ದತ್ತಿನಿಧಿ'' ಮಾಲೆಯಲ್ಲಿ ಪ್ರಕಟಗೊಂಡಿದೆ.

ಹೊನ್ನವಳ್ಳಿ ಕರಿಸಿದ್ದೇಶ್ವರ ಮಠದಲ್ಲಿ ದೊರೆತ ಆರು ಸಾವಿರ ವಚನದ ಕಟ್ಟಿನಲ್ಲಿ ೨೨೭-೨೮೨ ಗರಿಗಳಲ್ಲಿ ಅಡಗಿದ್ದ ಸಿದ್ಧರಾಮೇಶ್ವರ ದೇವರ ಸಾಹಿತ್ಯವನ್ನು ಸಂಪಾದಿಸಿ ಪ್ರಕಟಿಸಲಾಗಿದೆ. ಈ ಸಂಕಲನದಲ್ಲಿ ಹೊಸದಾದ 258 ವಚನಗಳು - ಯೋಗಿನಾಥ ಅಂಕಿತದ ತ್ರಿವಿಧಿಗಳು ಇವೆ. ಪ್ರಾರಂಭದ ಎರಡು ಸ್ವರವಚನಗಳು ''ಸೊನ್ನಲಿಗೆಯ ಸಿದ್ಧರಾಮಯ್ಯ'' ''ದಶಮುಖ ಸಿದ್ಧರಾಮಯ್ಯ'' ಅಂಕಿತದಲ್ಲಿ ಇವೆ. ಈ ಎರಡು ಸ್ವರವಚನಗಳನ್ನು ಲಿಪಿಗಾರನೆ ಬರೆದಿರುವ ಸಾಧ್ಯತೆ ಇದೆ.

ಸಿದ್ಧರಾಮೇಶ್ವರರ ೧೩೭೧೦ ವಚನಗಳು - ತ್ರಿವಿಧಿಗಳು ಒಂದೇ ಕಡೆ

ಲಿಖಿಸಲ್ಪಟ್ಟಿವೆ. ಇಷ್ಟು ಸಾಹಿತ್ಯ ಲಭ್ಯವಾದದ್ದು ಸಾಹಿತ್ಯ ಲೋಕದ ಭಾಗ್ಯವೇ ಸರಿ. ಆರು ಸಾವಿರ ವಚನ ಕಟ್ಟಿನಲ್ಲಿ ಒಂದು ಸಾವಿರದವಚನದ ಗರಿಗಳು ಲುಪ್ತವಾಗಿದ್ದು ಬಿಟ್ಟರೆ, ಮಿಕ್ಕ ಐದು ಸಾವಿರ ವಚನಗಳನ್ನು ಯಥಾವತ್ತಾಗಿ ಪ್ರಕಟಿಸುವ ಅವಶ್ಯಕತೆ ಇದೆ. ಹೊನ್ನವಳ್ಳಿ ಮಠದ ಹಸ್ತಪ್ರತಿಯನ್ನು ಉಪಯೋಗಿಸಿ ಕೊಂಡು ಮೈಸೂರಿನ ಶ್ರೀ ಪಿ.ಎಂ. ಗಿರಿರಾಜುರವರು ೧೯೯೮ರಲ್ಲಿ ''ಸಮಗ್ರ ಸಿದ್ಧರಾಮೇಶ್ವರ ಮಹಾವಚನಾಗಮ'' ಗ್ರಂಥದಲ್ಲಿಯೂ ಈ ವಚನಗಳು ಸಂಪಾದನೆಗೊಂಡು ಪ್ರಕಟವಾಗಿವೆ.

ಆದಿ ಆಧಾರ ಶೂನ್ಯವೇ,
ವೇದ ಹದಿನಾಲ್ಕಕ್ಕತೀತನೆ,
ನಿನ್ನ ಭೇದಿಸುವರಾರಯ್ಯಾ
ಸ್ವತಂತ್ರ, ಏಕೋದೇವ, ನೀನೇಕಾಣಾಯೋಗಿನಾಥಾ ॥೫೮೦॥

ಕಥಾಶ್ರವಣ ಮಾಡ್ಯೆ

ಡಾ॥ ಸಾ.ಶಿ. ಮರುಳಯ್ಯನವರಿಂದ ೧೯೯೮ರಲ್ಲಿ ಸಂಪಾದನೆಗೊಂಡು ಕನ್ನಡ ಸಾಹಿತ್ಯ ಪರಿಷತ್ತಿನಿಂದ ಪ್ರಕಟಿಸಲ್ಪಟ್ಟಿದೆ. ಮುನ್ನುಡಿಯಲ್ಲಿ ಈ ಮಾತುಗಳನ್ನು ಹೇಳಿದ್ದಾರೆ. ''ನಮ್ಮದು ಓಚಯ್ಯಗಳ ಮನೆತನ, ನನ್ನ ತಂದೆ, ದೊಡ್ಡಪ್ಪ, ಸೋದರ ಮಾವಂದಿರು ಎಲ್ಲರೂ ಕೂಲಿಮಠದ ಓಚಯ್ಯಗಳು. ನನ್ನಂತಹ ಎಳೆಯರಿಗೆ ತ್ರಿಕಾಂಡ ಅಮರಕೋಶವನ್ನು ಬಾಯಿಪಾಠ ಮಾಡಿಸಿದವರು. ಅವರು ಅವರಿಗೆ 'ಪುಸ್ತಕ ಓದುವುದು' ಉಪಕಸಬಾಗಿತ್ತು. 'ಪುಸ್ತಕ ಓದುವುದು' ಎಂದರೆ ಶ್ರಾವಣ ಶನಿವಾರಗಳಲ್ಲಿ ಶನಿಮಹಾತ್ಮೆ ಹೇಳುವುದು, ಯುಗಾದಿ ಪಾರಣೆಯಂದು ಪಂಚಾಂಗಶ್ರವಣ ಮಾಡುವುದು. ಜನ ಅಪೇಕ್ಷಿಸಿದಾಗ ಕರೆದವರ ಮನೆಗಳಿಗೆ ಹೋಗಿ ರಾತ್ರಿ ವೇಳೆಯಲ್ಲಿ ಪುಣ್ಯಪುರುಷರ ಕಥೆಗಳನ್ನು ಓದಿ, ಹಾಡಿ ಆನಂದಗೊಳಿಸಿ ಬರುವುದು.

ಇಂತಹ ಬೋಧಪ್ರದ ಸಾಹಿತ್ಯರಚನೆಗಳನ್ನು ನಮ್ಮ ಹಿರಿಯರು ತಮ್ಮ ವೃತ್ತಿಗಾಗಿ ಬಳಸಿಕೊಳ್ಳುತ್ತಿದ್ದುದರಿಂದ ಬರೆದಿಟ್ಟ ಕೆಲವನ್ನು ಇಲ್ಲಿ ಆಯ್ದು ಅಣಿ ಮಾಡಿದ್ದೇನೆ'' ಎಂದಿದ್ದಾರೆ. ೧. ಅಮರ ನೀತಿಗಳ ಕಥೆ, ೨. ಸಿರಿಯಾಳಪ್ಪನವರ ಕಥೆ ೩ ಕೋಳೂರು ಕೊಡಗೂಸು, ೪ ಮೈದುನ ರಾಮಣ್ಣನ ಕಥೆ (ಸಾಂಗತ್ಯ) ಈ ಕೃತಿಗಳ ಗುಚ್ಛವೇ ''ಕಥಾಶ್ರವಣ ಮಾಡ್ಯೆ'' ಕೃತಿ. ಮೊದಲ ಮೂರು ಯಕ್ಷಗಾನ ಕೃತಿಗಳು.

''ಕೋಳೂರು ಕೊಡಗೂಸು'' ಕೃತಿ ಮಾಗಡಿ ವೀರಪ್ಪ ಶಾಸ್ತ್ರಿಗಳು ರಚಿಸಿದ್ದು. ಶಿವಕಥೆಯನ್ನು ಮಾಡುವವರಿಗೆ ಉಪಯುಕ್ತವಾಗಿ ಆಯಾಯ ಸಂದರ್ಭಕ್ಕೆ ತಕ್ಕಂತೆ ಸರಸವಾದ ಕಂದ, ವೃತ್ತ, ಮಟ್ಟುಗಳೊಡನೆ ರಚನೆಯಾಗಿದೆ. ೧೯೧೯ರಲ್ಲಿ ದ್ವಿತೀಯ ಮುದ್ರಣವಾಗಿದೆ. ಮೊದಲ ಮುದ್ರಣದ ವಿವರ ಲಭ್ಯ ಇಲ್ಲ.

ಕಾಲಗರ್ಭದಲ್ಲಿ ಅಳಿದು ಹೋಗುತ್ತಾ ಇದ್ದ ಈ ಯಕ್ಷಗಾನ ಸಾಂಗತ್ಯ ಕೃತಿಗಳು ಮತ್ತೆ ಮರುಜೀವ ಪಡೆದಿವೆ. ಇಂದಿನ ದಿನಮಾನದಲ್ಲೂ ಕಾವ್ಯವನ್ನು ಓದುವವರಿಗೆ ಉಪಯುಕ್ತವಾದ ಗ್ರಂಥವಾಗಿದೆ.

ಬಹುಮುಖ ಪ್ರತಿಭೆಯ ಸಾಶಿಮುರವರು ಸಣ್ಣಕಥೆ, ಕವನ, ಕಾವ್ಯ, ನೃತ್ಯರೂಪಕಗಳನ್ನು ರಚಿಸಿ ಸೃಜನಶೀಲರು ಎಂದು, ನಾಡಿನ ಜನತೆ ''ಕವಿ'' ''ವಿದ್ವಾಂಸ'' ಎಂದು ಗುರುತಿಸಿದ್ದಾರೆ. ನಮ್ಮ ನಾಡಿನ ವಿದ್ವತ್ ಪರಂಪರೆಯ ವಿದ್ವಾಂಸರಂತೆ, ಗ್ರಂಥ ಸಂಪಾದನೆ ಮಾಡಿ ತಮ್ಮ ಸೇವಾ ಮಣಿಹವನ್ನು ಸಲ್ಲಿಸಿದ್ದಾರೆ. ಅಪ್ರಕಟಿತ ಕಾವ್ಯಗಳನ್ನು, ಓಲೆಗರಿಯಿಂದ, ಕೋರಿ ಕಾಗದದ ಹಸ್ತಪ್ರತಿಗಳಿಂದ ಇನ್ನು ಹೆಚ್ಚು ಕೃತಿಗಳನ್ನು ಸಂಪಾದನೆ ಮಾಡಲಿ ಎಂಬುದೆ ಲೇಖಕನ ಬಹು ದೊಡ್ಡ ಆಸೆ.

ಡಾ. ಸಾ.ಶಿ. ಮರುಳಯ್ಯನವರ ಕನ್ನಡ ಛಂದಃಪ್ರಬಂಧಗಳು

ಡಾ। ಟಿ.ವಿ. ವೆಂಕಟಾಚಲ ಶಾಸ್ತ್ರೀ

ಕವಿ ಪ್ರಕೃತಿ, ಪರಿಶೋಧಕರ ಶೋಧನ ಕುತೂಹಲ ಎರಡನ್ನೂ ಹದವಾಗಿ ತಮ್ಮಲ್ಲಿ ಮೈಗೂಡಿಸಿಕೊಂಡು ಸಾಹಿತ್ಯಲೋಕದ ಪಥಿಕರಾಗಿ ಖ್ಯಾತರಾಗಿರುವ ಗೋವಿಂದ ಪೈ, ಮುಳಿಯ ತಿಮ್ಮಪ್ಪಯ್ಯ, ಎಂ.ಆರ್. ಶ್ರೀನಿವಾಸಮೂರ್ತಿ, ತೀ.ನಂ. ಶ್ರೀಕಂಠಯ್ಯ, ಈ ಕೆಲವರು ವಿರಳರ ಹೆಜ್ಜೆ ಗುರುತುಗಳನ್ನು ಹಿಡಿದು ನಡೆದಿದ್ದಾರೆ, ಮಾನ್ಯ ಮಿತ್ರರಾದ ಪ್ರೊ. ಮರುಳಯ್ಯನವರು. ಅವರ 'ಕನ್ನಡ ಛಂದಃ ಪ್ರಬಂಧಗಳು' ಇದಕ್ಕೆ ಈಚೆಯ ಒಂದು ಸಾಕ್ಷ್ಯ. ಅವರ ಸಜ್ಜನಿಕೆ, ವಿದ್ವತ್ತೆಯ ಪ್ರೀತಿ, ವಾಗ್ಮಿತೆ ಇವುಗಳ ಬಗೆಗೆ ನನಗೆ ತುಂಬ ಮೆಚ್ಚಿಕೆಯಿದೆ, ಗೌರವವಿದೆ.

'ಕನ್ನಡ ಛಂದಃಪ್ರಬಂಧಗಳು' ಕನ್ನಡ ಭಾಷೆ ಸಾಹಿತ್ಯಗಳ ಪ್ರೌಢ ವಿದ್ಯಾರ್ಥಿಗಳನ್ನು ಲಕ್ಷ್ಯದಲ್ಲಿರಿಸಿಕೊಂಡು ಸಿದ್ಧವಾಗಿರುವ ಒಂದು ಭಾಷಣ ಲೇಖನಗಳ ಸಂಕಲನ. ಇದರಲ್ಲಿ ಪ್ರವೇಶಿಕೆ, ಛಂದಸ್ಸು ಎಂದರೇನು? ಕಾವ್ಯಕ್ಕೆ ಛಂದಸ್ಸು ಆವಶ್ಯಕವೆ? ಲಯ, ಛಂದಸ್ಸಿನ ಜೀವಜೀವಾಳ, ಗಣಗಳ ಸ್ವರೂಪ, ಅಂಶಗಣ ಮಾತ್ರಾಗಣವಾಗಿ, ಯತಿ ವಡಿ ಪ್ರಾಸಗಳವಿಚಾರ, ಕಂದ: ಆನಂದ, ರಗಳೆ : ತೊಡಕು, ಒಡಪು ಸಾಂಗತ್ಯ, ಖ್ಯಾತ ಕರ್ಣಾಟಕಗಳು, ಚಂಪೂಚರಿತ್ರೆ, ಹಳಗನ್ನಡದ ಮಟ್ಟುಗಳು, ಹೊಸಕಾವ್ಯದ ಹೊಸಲಯಗಳು, ಹೊಸಗನ್ನಡದ ಹೊಸಮಟ್ಟುಗಳು ಕೆಲವು, ಕನ್ನಡ ಛಂದೋಗ್ರಂಥಗಳು. ಹೀಗೆ ೧೬ ಬರಹಗಳಿವೆ. ಛಂದಸ್ಸಿನ ತತ್ತ್ವಗಳು, ಬಂಧಗಳ ಸ್ವರೂಪ ಇತಿಹಾಸಗಳು ಇವನ್ನು ಗಮನದಲ್ಲಿಟ್ಟುಕೊಂಡು ಹೇಳಬೇಕಾದವನ್ನೆಲ್ಲ ಬಲುಮಟ್ಟಿಗೆ ಹೇಳಿದ್ದರೂ ಇನ್ನೂ ಹೆಚ್ಚಿನ ವಿಚಕ್ಷಣೆ ಲೇಖನಗಳ ಜೊಡಣೆಯಲ್ಲಿ ಇರಬೇಕಾಗಿತ್ತು. ಹಾಗೆಯೇ ಶೀರ್ಷಿಕೆಗಳನ್ನು ಕೊಡುವಾಗ ಸಹ.

ಇದು ಹೇಗೇ ಇದ್ದರೂ ವಸ್ತು ವಿವರಣೆಯಲ್ಲಿ ಒಂದು ಸಾಕಲ್ಯ ದೃಷ್ಟಿಯಿದೆ, ವಿಶದತೆಯಿದೆ, ಸಮತೋಲನದ ಎಚ್ಚರವಿದೆ. ಈ ಗುಣಗಳಿಂದಾಗಿ ಅಭ್ಯಾಸಿಗಳು ಸಾಮಾನ್ಯವಾಗಿ ಗ್ರಹಿಸಬೇಕಾದ ಸಾರ್ವತ್ರಿಕ ಮನ್ನಣೆಯ ಸಂಗತಿಗಳೇ ವಿಶೇಷವಾಗಿ ಇಲ್ಲಿ ನಿರೂಪಿತವಾಗಿವೆ. ಖ್ಯಾತ ಕರ್ಣಾಟಕಗಳು, ಚಂಪೂವಿನ ಚರಿತ್ರೆ, ವಿಷಯವಾಗಿರುವ ಬರಹಗಳು ಹೊರತಾಗಿ ಉಳಿದವುಗಳಲ್ಲಿ ಬಲುಮಟ್ಟಿಗೆ ಸಮಗ್ರತೆ ಸಾಧ್ಯವಾಗಿದೆ. ವಿರಳವಾಗಿ ಹೊರತು ವಸ್ತು ವಿವೇಚನೆಯಲ್ಲಿ ವಾದ ವಿವಾದಗಳಿಗೆ ಹೆಚ್ಚು ಅವಕಾಶ ಕೊಡದೆ ಸಾರ್ವತ್ರಿಕವಾಗಿ ಉಪಾದೇಯವಾಗಿರುವ ನಿಲವು ನಿರ್ಣಯಗಳನ್ನೇ ಮಾನ್ಯ ಮಾಡಿರುವುದರಿಂದ ಅಭ್ಯಾಸಿಗಳಿಗೆ ಸೂಕ್ತವಾದ ಒಂದು ಮಾರ್ಗದರ್ಶಿಕೆಯಾಗಿದೆ, ಈ ಕೃತಿ. ಇದು ಚಿಂತನ ಮಂಥನಗಳ ಸಂಶೋಧನ ಗ್ರಂಥವಲ್ಲ, ವಿವಿಧ ಮೂಲಗಳಿಂದ ಎತ್ತಿದ ಸಂಗತಿಗಳನ್ನು ಸಮರ್ಥವಾಗಿ ಸರಳಗೊಳಿಸಿದ ಸಾರಗ್ರಂಥ.

ಈ ಸಂದರ್ಭದಲ್ಲಿ ಒಂದು ವಿಷಯವನ್ನು ಸ್ವಲ್ಪ ಸಂಕೋಚದಿಂದಲೇ ಅಥವಾ ನಿಸ್ಸಂಕೋಚವಾಗಿಯೇ ಹೇಳಬೇಕೆನಿಸುತ್ತದೆ. ಅದೆಂದರೆ ನಮ್ಮ ವಿದ್ವಾಂಸರು, ಸಂಶೋಧಕರು ಅಥವಾ ಹಾಗೆಂದು ತಮ್ಮನ್ನು ತಿಳಿದುಕೊಂಡಿರುವವರು ಇತರ ಸಹವ್ಯವಸಾಯಿಗಳ ಬರಹಗಳನ್ನು ತಾವು ಬರವಣಿಗೆ ಮಾಡುವಾಗ ಚರ್ಚೆ ಶೋಧನೆ ಫಲಿತಗಳಿಗಾಗಿಯೋ ಸಮಸ್ಯೆ ಸಮಾಧಾನಗಳಿಗಾಗಿಯೋ ನೋಡಬೇಕೆಂದು, ಬಳಸಬೇಕೆಂದು ಸಾರಿಸಾರಿ ಹೇಳುತ್ತಿರುತ್ತಾರೆ. ಆದರೆ ಹಾಗೆ ಮಾಡಿರುವುದಕ್ಕೆ ಅವರದೇ ಬರಹಗಳಲ್ಲಿ ಯಾವ ಸಾಕ್ಷ್ಯಗಳೂ ಇರುವುದಿಲ್ಲ. ನೋಡಿಯೂ ಬಳಸದಿರುವುದು ಕ್ಷಮಿಸಬಹುದಾದ್ದು; ಆದರೆ ನೋಡದೆಯೇ ತಿರಸ್ಕರಿಸುವುದು ಕ್ಷಮಿಸಲಾಗದ್ದು. ಆದರೆ ಇಲ್ಲಿಯ ವಿಪರ್ಯಾಸವೆಂದರೆ, ಇಂಥವರು ತಮ್ಮ ಬರಹಗಳನ್ನು ನೋಡಬೇಕು, ಬಳಸಬೇಕು ಎಂಬುದಾಗಿ ಸಹವ್ಯವಸಾಯಿಗಳ ವಿಷಯದಲ್ಲಿ ನಿರೀಕ್ಷಿಸುವುದು, ವ್ಯಗ್ರಗೊಳ್ಳುವುದು. ಇದು ಸಾಧುವಾದ ಕ್ರಮವಲ್ಲ. ಸಂಭಾವಿತ ವಿದ್ಯಮಾನವೂ ಅಲ್ಲ.

ಡಾ. ಮರುಳಯ್ಯನವರು ಈ ಬಗೆಯವರಲ್ಲ. ಅವರು ಇತರರ ಬರಹಗಳನ್ನು ಪ್ರಾಂಜಲ ಮನಸ್ಸಿನಿಂದ ಗಮನಿಸಿದ್ದಾರೆ. ಲಕ್ಷ್ಯವಿಟ್ಟು ಓದಿದ್ದಾರೆ. ಬೇಕಾದ ಕಡೆಗಳಲ್ಲಿ ಬಳಸಿದ್ದಾರೆ. ತಮ್ಮ ವಿಚಾರದ ಒರೆಗಲ್ಲಿನ ಮೇಲಿಟ್ಟು ಉಜ್ಜಿ ಸ್ವೀಕರಿಸಿದ್ದಾರೆ, ಸ್ವೀಕಾರಕ್ಕೆ ಯೋಗ್ಯವೆನ್ನಿಸದಿದ್ದಾಗ ವಿನಯದಿಂದ ನಿರಾಕರಿಸಿದ್ದಾರೆ. ಅವರ ಈ ಗುಣವನ್ನು ನಾನು ಮೆಚ್ಚಿದ್ದೇನೆ. ಸಂಶೋಧಕರಿಗೆ ತೆಗಳಿಕೆಗಿಂತ ಉಪೇಕ್ಷೆಯೇ ಹೆಚ್ಚು ದುಃಖಕರ; ತೆಗಳಿಕೆ ಪುನರ್ವಿಮರ್ಶೆ, ಶೋಧನೆಗಳಿಗೆ ಅವರನ್ನು ಪ್ರಚೋದಿಸುತ್ತದೆ, ಉಪೇಕ್ಷೆ ತಬ್ಬಲಿತನವನ್ನು ತಂದು ಕೊಲ್ಲುತ್ತದೆ.

ಈಗ ಕೆಲವು ವಿಮರ್ಶೆಯ ಮಾತುಗಳು : ಕನ್ನಡ ಛಂದಸ್ಸಿನ ಇತಿಹಾಸದ ಸಾಮಾನ್ಯ ಸ್ವರೂಪ ಬಂಧ ವೈವಿಧ್ಯಗಳ ಸಿಂಹಾವಲೋಕನವನ್ನು 'ಪ್ರವೇಶಿಕೆ'ಯಲ್ಲಿ ಮಾಡಿದೆ. ಇಲ್ಲಿ 'ನುಡಿಗೆಲ್ಲಂ ಸಲ್ಲದ' ಎಂಬ ಕವಿರಾಜಮಾರ್ಗದ ಕಂದ ಪದ್ಯಕ್ಕೆ ಮಾಡಿರುವ ಅರ್ಥವನ್ನು ಒಪ್ಪುವುದು ಕಷ್ಟ. 'ಛಂದಸ್ಸು ಎಂದರೇನು? ಕಾವ್ಯಕ್ಕೆ ಛಂದಸ್ಸು ಆವಶ್ಯಕವೇ?' ಈ ಪ್ರಶ್ನೆಗಳ ಲೇಖನ ಈ ಚರ್ಚೆ ಇನ್ನೂ ವ್ಯಾಪಕವಾಗಿ ನಡೆದಲ್ಲಿ ಮಾತ್ರ ಸಂವಹನ ಮಾಧ್ಯಮವಾಗಿ, ರಸಪ್ರಣಾಳಿಕೆಯಾಗಿ ಛಂದಸ್ಸು ತನ್ನ ಕರ್ತವ್ಯವನ್ನು ಹೇಗೆ ನಿರ್ವಹಿಸುತ್ತದೆ ಎಂಬ ರಹಸ್ಯ ಬಯಲಾಗುವುದು ಸಾಧ್ಯ. 'ಲಯ ಛಂದಸ್ಸಿನ ಜೀವಜೀವಾಳ' ಎಂಬುದರಲ್ಲಿ ಸೃಷ್ಟಿ ವ್ಯಾಪಾರದ ಹಿನ್ನೆಲೆಯಲ್ಲಿ ಪದ್ಯ ಲಯದ ಸ್ವರೂಪವನ್ನು ವಿವೇಚಿಸಿದೆ. ವಿವೇಚನೆ ಇನ್ನೂ ನಿಶಿತವಾಗಿರಬಹುದಾಗಿತ್ತು. ಆದರೆ ''ಛಂದಸ್ಸು ಸಮುದ್ರ, ಲಯ ಅದರ ಅಲೆ, ಗಣ ಅಲ್ಲಲ್ಲಿನ ದ್ವೀಪ ಸಮುಚ್ಚಯ'' ಈ ಅಲಂಕಾರೋಕ್ತಿಯಂತೂ ತುಂಬ ಸೊಗಸಾದುದು. 'ಗಣಗಳ ಸ್ವರೂಪ' ಎಂಬುದರಲ್ಲಿ ಕನ್ನಡ ಪದ್ಯಜಾತಿಗಳ ತ್ರಿವಿಧ ಗಣ ಪದ್ಧತಿಯ ಸಾಮಾನ್ಯಂಶಗಳನ್ನು ಹೇಳಿದೆ. 'ಅಂಶಗಣ ಮಾತ್ರಾಗಣವಾಗಿ' ಒಂದು ಪ್ರತ್ಯೇಕ ಪ್ರಬಂಧವಾಗಿರುವುದು ಸ್ವಾರಸ್ಯಕರವಾದ್ದು. ವಾಸ್ತವವಾಗಿ ಈ ವಿಷಯದ ಎಲ್ಲ ಆಯಾಮಗಳೂ ಇನ್ನೂ ವಿಸ್ತಾರವಾಗಿ ಚರ್ಚಿತವಾಗಬೇಕಾಗಿವೆ. ಅದಕ್ಕೆ ಪೀಠಿಕೆಯಾಗಿ ಮರುಳಯ್ಯನವರು ಕೆಲವು

ಹೊಳಹುಗಳನ್ನು ಇಲ್ಲಿ ಕಾಣಿಸಿದ್ದಾರೆ. ಯತಿ-ವಡಿ-ಪ್ರಾಸಗಳ ವಿಚಾರ ಮುಂದಿನ ಲೇಖನದ ವಿಷಯ. ಸೋದಾಹರಣವಾಗಿ ಮಾಡಿರುವ ಈ ಪರಿಭಾಷೆಗಳ ಚರ್ಚೆ ಹೃದ್ಯವಾಗಿದೆ. ಇಲ್ಲಿ ಕವಿಹೃದಯದ ಉನ್ಮೇಷ ಉತ್ಸಾಹಗಳು ಕೆಲಸಮಾಡಿವೆ. ಫಲವಾಗಿ ವಸ್ತುವಿನ ಚರ್ಚೆ ಚೆಂದನ ಚರ್ಚೆಯಾಗಿದೆ.

ಇಲ್ಲಿಂದ ಮುಂದೆ ಬಂಧಗಳ ವಿವೇಚನೆ, ಕಂದದ ಮೂಲವನ್ನು ಕುರಿತು ಹೇಳುವಾಗ ಪ್ರಾಕೃತ ಮೂಲವನ್ನು ಒಪ್ಪಿರುವುದು, ತೃಪ್ತಿಕರವಾಗಿ ಲಕ್ಷಣವನ್ನು ಹೇಳಿರುವುದು ಮೆಚ್ಚತಕ್ಕದ್ದಾಗಿವೆ. ಮುಂದಿನ ಲೇಖನ ರಗಳೆಗೆ ಸಂಬಂಧಿಸಿದ್ದು. ಆ ಬಂಧದ ವಿವಿಧ ರೂಪಗಳ ಬಗೆಗೆ ಇಲ್ಲಿ ವಿಚಾರವುಂಟು. ಕೆಲವು ವಿವಾದಾಸ್ಪದ ಸಂಗತಿಗಳಿವೆ, ಇನ್ನು ಕೆಲವು ಹೊಸ ಸಲಹೆ ಸೂಚನೆಗಳೂ ಇವೆ. ಮಂದಾನಿಲ ಮತ್ತು ಸರಳ ರಗಳೆಗಳ ಹುಟ್ಟಿನ ವಿಷಯದಲ್ಲಿ ಪ್ರಕಟವಾಗಿರುವ ಡಿ.ಎಲ್.ಎನ್. ಮತ್ತು ತೀ.ನಂ.ಶ್ರೀ. ಅವರ ಸೂಚನೆಗಳು ಮರುಳಯ್ಯನವರಿಗೆ ಒಪ್ಪಿತವಾಗಿಲ್ಲ, ಆದರೆ ಪ್ರತಿಯಾಗಿ ಅವರು ಕೊಡುವ ಸಮರ್ಥನೆಗಳಿಗೂ ಶಕ್ತಿಯುಕ್ತಿಗಳು ಸಾಲವು. ಮಾಸ್ತಿಯವರೇ ತಾವು ಜಿಡಿವೃತ್ತವೆಂದಿರುವ ಸರಳರಗಳೆಗೆ ಬ್ಯಾಂಕ್‌ವರ್ಸ್ ಮೂಲವನ್ನು ಒಪ್ಪಿರುವಾಗ ತೀ.ನಂ.ಶ್ರೀ. ಸೂಚನೆಯನ್ನು ನಿರಾಕರಿಸುವುದು ಹೇಗೆ? ಇನ್ನು ಮಹಾಛಂದಸ್ಸು, ನಿಸರ್ಗ ಛಂದಸ್ಸು, ಸಂಕೀರ್ಣಛಂದಸ್ಸು, ರಾಗಿಣಿ ಛಂದಸ್ಸು ಇಂತಹ ಹೆಸರುಗಳು ಆಯಾ ಕಾವ್ಯಪ್ರಯುಕ್ತ ಬಂಧಗಳ ಛಂದಃ ಸ್ವರೂಪವನ್ನು ಸವಿಯಾಗಿ ದ್ಯೋತನಮಾಡಲಾರವು.

'ಖ್ಯಾತ ಕರ್ಣಾಟಕಗಳು' ಎಂಬ ಲೇಖನದಲ್ಲಿ ಅವುಗಳ ಸಾಮಾನ್ಯ ಲಕ್ಷಣದ ನಿರ್ವಚನವಿದೆ. ಹಾಗೆಯೇ ಅವುಗಳ ಭಾವವಾಹಿತ್ವ ಗುಣದ ವಿಮರ್ಶೆಯೂ ಸ್ವಲ್ಪಮಟ್ಟಿಗೆ ಉಂಟು. ಚಂಪೂವಿನ ಚರಿತ್ರೆ ಎಂಬುದರಲ್ಲಿ ಅದರ ಸ್ವರೂಪ ಇತಿಹಾಸಗಳ ಬಗೆಗೆ ವಿವರಗಳು ಇನ್ನೂ ಬೇಕಾಗಿದ್ದುವು. ಆದರೆ ಕವಿರಾಜ ಮಾರ್ಗಕಾರನೆನ್ನುವ ಶ್ರೀವಿಜಯನಿಂದ ಭಿನ್ನನಾದ ಹಾಗೂ ಪ್ರಾಚೀನನಾದ ಇನ್ನೊಬ್ಬ ಶ್ರೀವಿಜಯನು (೧ನೆಯ ಪುಲಿಕೇಶಿಯ ಆಸ್ಥಾನದ ಕವಿ) 'ರಘುವಂಶ ಮಹಾಪುರಾಣ' ಹಾಗೂ ಜಯಕೀರ್ತಿ ಉಲ್ಲೇಖಿಸುವ 'ಕರ್ಣಾಟೇಶ್ವರ ಕಥಾ' ಎಂಬ ಆಗಮಿಕ ಲೌಕಿಕ ಕಾವ್ಯಗಳನ್ನು ರಚಿಸಿದ್ದಾನೆ ಎಂಬುದಾಗಿ ಮರುಳಯ್ಯನವರು ತಿಳಿಸಿರುವುದು ಕುತೂಹಲದ ಸಂಗತಿಯಾಗಿದೆ. ಈ ಸಂಗತಿ ಇನ್ನೂ ಗಾಢವಾಗಿ ಶೋಧಿತವಾಗುವುದು ಅವಶ್ಯ. ಮುಂದಿನ ಲೇಖನ ಹಳಗನ್ನಡ ಮಟ್ಟುಗಳನ್ನು ಕುರಿತಿದೆ. ನಾಗವರ್ಮನು ಗುರುತಿಸಿದ ಅಂಶಗಣದ ಮಟ್ಟುಗಳ ಮತ್ತು ಅವುಗಳಿಂದ ವಿಕಾಸಗೊಂಡ ಮಾತ್ರಾವೃತ್ತಗಳ ವಿಚಾರವನ್ನು ಇಲ್ಲಿ ಸಂಕ್ಷೇಪವಾಗಿ ನಿರೂಪಿಸಿದೆ. ಇದು ಒಂದು ರೀತಿಯಲ್ಲಿ ಒಟ್ಟುನೋಟದ ಲೇಖನ. ಈ ಲೇಖನದಲ್ಲಿ ''ಉಪಲಬ್ಧ ಸರ್ವಜ್ಞ ವಚನಗಳೆಲ್ಲವೂ ಮಾತ್ರಾಗಣ ತ್ರಿಪದಿಗಳು'' ಎಂದಿರುವುದು ನನಗೆ ಸಮಾಧಾನ ತಂದಿರುವ ನಿಲುವು. ಎಂದಿನಿಂದಲೂ ನನ್ನ ನಿಲುವು ಸಹ ಇದೇ ಆಗಿದೆ. ಕೆಲವು ವಿದ್ವಾಂಸರು, ಸೇಡಿಯಾಪು

ಕೃಷ್ಣಭಟ್ಟರು ಮೊದಲಾದವರು, ಸರ್ವಜ್ಞ ವಚನಗಳನ್ನು ಅಂಶಗಣಾತ್ಮಕಗಳೆಂದೇ ತಿಳಿದಿದ್ದಾರೆ.

ಮುಂದಿನ ಎರಡು ಲೇಖನಗಳಲ್ಲಿ ಹೊಸಗನ್ನಡ ಛಂದಸ್ಸಿನ ಸಮಾಲೋಚನೆಯಿದೆ. ಮೊದಲನೆಯದರಲ್ಲಿ ವಿಶೇಷವಾಗಿ ತೀ.ನಂ.ಶ್ರೀ.ಯವರ ಲೇಖನವನ್ನು ಅವಲಂಬಿಸಿ ಹೊಸಕಾವ್ಯದ ಲಯಗಳನ್ನು ವಿಶದಪಡಿಸಿದೆ. ಹೆಚ್ಚಾಗಿ ಹೊಸ ಉದಾಹರಣೆಗಳನ್ನು ಆಯ್ದು ಕೊಟ್ಟಿರುವುದರಿಂದ ಈ ಭಾಗದ ಲೇಖನದಲ್ಲಿ ಒಂದು ಲವಲವಿಕೆ ಕಾಣುತ್ತದೆ. ಸೊಗಸುಬಂದಿದೆ. ಪೀಠಿಕಾಭಾಗದಲ್ಲಿ ಬಂದಿರುವ ಶ್ರೀಯವರ ಬಗೆಗಿನ ಸಾರ್ವಜನಿಕ ಪ್ರಸ್ತಾವವನ್ನು ಬರೆಯದೆ ಇದ್ದಿದ್ದರೆ ಚೆನ್ನಾಗಿತ್ತು. ಇನ್ನು ಎರಡನೆಯ ಲೇಖನದಲ್ಲಿ ಹೊಸಗನ್ನಡ ಪದ್ಯಜಾತಿಗಳ ಬಗೆಗೆ ನಿರೂಪಣೆಯಿದ್ದು, ಸಾನೆಟ್, ಪ್ರಗಾಥಗಳ ಬಗೆಗೆ ಬರೆದ ಹಾಗೆಯೇ ಬಗೆಬಗೆಯ ಚತುಷ್ಪದಗಳ ಬಗೆಗೆ ಹಾಗೂ ಅನಿಯತ ಪಾದದ ಬಂಧಗಳ ಬಗೆಗೆ ಕೆಲವು ಮಾತುಗಳನ್ನು ಬರೆಯಬಹುದಾಗಿತ್ತು. ಬರೆಯಬೇಕಾಗಿತ್ತು ಎಂದೇ ಹೇಳಬೇಕಾಗಿದೆ. ಇನ್ನು ಶೋಕಗೀತ, ಮುಕ್ತಕ, 'ಹಿಡಿಕವಿತ' ಇವು ವಸ್ತುಸ್ವರೂಪದ ಪದ್ಯಜಾತಿಗಳಲ್ಲದೆ ಛಂದಃಪ್ರಕಾರದ ಪದ್ಯಬಂಧಗಳಲ್ಲ. ಆದರೂ ಇಲ್ಲಿ ಎಡೆಪಡೆದಿರುವುದನ್ನು ಸಮರ್ಥಿಸುವುದು ಸಾಧ್ಯವಿದೆ. ನಿರೂಪಣೆ ಮನವರಿಕೆಯಾಗುವಂತೆ ವಿಶದವಾಗಿದೆ. ಕೊನೆಯ ಲೇಖನದಲ್ಲಿ ಕನ್ನಡ ಛಂದೋಗ್ರಂಥಗಳ ಒಂದು ಸರಳವಾದ ಸಮೀಕ್ಷೆಯನ್ನು ಕೊಟ್ಟಿದೆ. ಈಚೆಗೆ ಕೇದಾರಭಟ್ಟನ ವೃತ್ತರತ್ನಾಕರದ ಕನ್ನಡ ಟೀಕೆಯು ಪ್ರಕಟವಾಗಿರುವುದನ್ನು ಮರುಳಯ್ಯನವರ ಗಮನಕ್ಕೆ ತರಬಹುದಾಗಿದೆ.

ಈ ಸಮೀಕ್ಷಾಗ್ರಂಥದ ಅರೆಕೊರೆಗಳೇನಿದ್ದರೂ ಕನ್ನಡ ಛಂದಸ್ಸಿನ ಅಧ್ಯಯನವನ್ನು ಜೀವಂತವಾಗಿಟ್ಟಿರುವ, ಮುನ್ನಡೆಸಿರುವ ಪ್ರೊ. ಮರುಳಯ್ಯನವರ ಪ್ರಯತ್ನ ಶ್ಲಾಘ್ಯವಾಗಿದೆ; ಅವರು ಅಭಿನಂದನಾರ್ಹರಾಗಿದ್ದಾರೆ.

ವ್ಯಾಕರಣ ಮತ್ತು ಭಾಷಾ ವಿಜ್ಞಾನಕ್ಕೆ ಸಂಬಂಧಿಸಿದ ಕೃತಿಗಳು : ಒಂದು ಅವಲೋಕನ

ಡಾ|| ಶಾಲಿನಿ ರಘುನಾಥ್

ಡಾ|| ಸಾ.ಶಿ. ಮರುಳಯ್ಯನವರು ವ್ಯಾಕರಣ ಮತ್ತು ಭಾಷಾ ವಿಜ್ಞಾನ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ರಚಿಸಿದ ಎರಡು ಮುಖ್ಯ ಕೃತಿಗಳ ಪರಿಚಯವನ್ನು ಇಲ್ಲಿ ಮಾಡಿಕೊಡುತ್ತಿದ್ದೇನೆ. ಸಾ.ಶಿ.ಯವರು ಮೂಲತಃ ಶಿಕ್ಷಕರು, ಯಾವುದೇ ಕ್ಲಿಷ್ಟ ವಿಷಯವಿರಲಿ ವಿದ್ಯಾರ್ಥಿಗಳ ಮನಂಬುಗುವಂತೆ ಹೇಳುವ ಕಲೆ ಅವರಿಗೆ ಕರಗತವಾಗಿದೆ. 'ಕೇಶಿರಾಜನ ಗರಡಿಯಲ್ಲಿ' ಎಂಬ ಕೃತಿಯನ್ನು ಡಾ|| ಶಾಲಿನಿ ಪ್ರಭು ಅವರೊಂದಿಗೆ ಕೂಡಿ ರಚಿಸಿದ್ದಾರೆ, 'ಕನ್ನಡ' ಭಾಷಾ ಚರಿತ್ರೆ' ಯು ಅವರೊಬ್ಬರದೇ ನಿರೂಪಣೆಯಾಗಿದೆ. ಇವೆರಡೂ ಕನ್ನಡ ಸಾಹಿತ್ಯದ ವಿದ್ಯಾರ್ಥಿಗಳನ್ನು ಅವರು ಗಮನದಲ್ಲಿಟ್ಟುಕೊಂಡು ರಚಿಸಿದವುಗಳು. ಆದ್ದರಿಂದ ವಿಷಯದ ಹರವು ವಿದ್ಯಾರ್ಥಿಗಳ ಪಠ್ಯಕ್ರಮವನ್ನು ಅನುಸರಿಸಿರುವುದು ಸಹಜವಾಗಿದೆ - ಜೊತೆಗೆ ಉಪಯುಕ್ತವಾಗಿದೆ.

'ಕೇಶಿರಾಜನ ಗರಡಿಯಲ್ಲಿ' ಪಳಗುವುದು ಸಾಮಾನ್ಯರಿಗೆ ಸಾಧ್ಯವಿಲ್ಲ. ವಿಶೇಷ ಪರಿಶ್ರಮ ಹಾಗೂ ಆಸಕ್ತಿಗಳ ಮೂಲಕವಾಗಿ ಕೆಲವರು ಮಾತ್ರ ಆ ಕ್ಷೇತ್ರ ಪ್ರವೇಶಿಸಲು ಸಾಧ್ಯವಿದೆ. ಕವಿಗಳಿಗೂ ವ್ಯಾಕರಣಕ್ಕೂ ಎಣ್ಣೆ-ಸೀಗೆಕಾಯಿಯ ನಂಟು, ಶಬ್ದ ಬ್ರಹ್ಮರಾದ ಅವರಿಗೆ ಕೇಶಿರಾಜ ಕನಸಿನಲ್ಲಿ ಕಾಣಿಸಿಕೊಂಡರೂ ಭಯವೇ. ಆದರೆ ಭಾಷೆಯ ಪರಂಪರೆಯನ್ನು ಅರಿಯಲು ಇಂಥ ಕೃತಿಗಳ ಅಧ್ಯಯನ ಅವಶ್ಯ. ಹಳಗನ್ನಡ ಭಾಷೆಯ ಸ್ವರೂಪವನ್ನು ಅಧಿಕೃತವಾಗಿ ಹಾಗೂ ಸಮಗ್ರವಾಗಿ ಕನ್ನಡ ಭಾಷೆಯಲ್ಲಿ ಅರುಹುವ ಕೃತಿ ಕೇಶಿರಾಜನ 'ಶಬ್ದಮಣಿದರ್ಪಣ', ಅವನ ನಿಷ್ಠೆ, ಪ್ರಾಮಾಣಿಕತೆ, ಕನ್ನಡದ ಬಗೆಗಿನ ಕಳಕಳಿ ಮತ್ತು ರಸಿಕ ಮನೋಧರ್ಮ ಇವು ಪ್ರಸ್ತುತ ಲೇಖಕರನ್ನು ವಿಶೇಷವಾಗಿ ಆಕರ್ಷಿಸಿವೆ.

'ಕೇಶಿರಾಜನ ಗರಡಿಯಲ್ಲಿ' ಎಂಬ ಕೃತಿಯಲ್ಲಿ ಒಟ್ಟು ಒಂಬತ್ತು ಲೇಖನಗಳಿವೆ. ಮೊದಲನೆಯ ಲೇಖನ 'ಪ್ರಸ್ತಾವನೆ' ಎಂಬ ಹೆಸರಿನಲ್ಲಿದೆ. ಅದರಲ್ಲಿ ವ್ಯಾಕರಣವೆಂದರೇನು? ವ್ಯಾಕರಣ ಪ್ರಭೇದಗಳು, ವ್ಯಾಕರಣ ಪ್ರಯೋಜನಗಳು, ಕನ್ನಡ ವ್ಯಾಕರಣ ಗ್ರಂಥಗಳು ಎಂಬ ಉಪಶೀರ್ಷಿಕೆಗಳಲ್ಲಿ ವಿಷಯವನ್ನು ವಿವೇಚಿಸುವ ಪ್ರಯತ್ನ ಮಾಡಿದ್ದಾರೆ. ವ್ಯಾಕರಣವು ನಾಮ ರೂಢಿಯಳಿಯದ ರೀತಿಯಲ್ಲಿ ಭಾಷೆಯ ಮರ್ಯಾದೆ ಕಾಪಾಡಬೇಕು, ಭಾಷೆಯೊಂದರ ವಿಕಾಸದ ವಿವಿಧ ಸ್ತರಗಳನ್ನು ಗುರುತಿಸಿ ಅದರ ರೂಪ-ಸ್ವರೂಪಗಳ ನಿರ್ಣಯ ನೀಡುವ ಕರ್ತವ್ಯ ಕೂಡ ವ್ಯಾಕರಣದ್ದು ಎಂದು ವ್ಯಾಕರಣದ ಕಾರ್ಯವನ್ನು ವಿವರಿಸಲಾಗಿದೆ. ವ್ಯಾಕರಣದ ಪ್ರಭೇದಗಳನ್ನು

ವರ್ಣನಾತ್ಮಕ. ಐತಿಹಾಸಿಕ ಮತ್ತ ತೌಲನಿಕವೆಂದು ಮೂರು ವಿಧಗಳಲ್ಲಿ ವಿಂಗಡಿಸಿ ಅವುಗಳ ಸ್ಥೂಲ ಪರಿಚಯ ನೀಡಿರುವುದು ಸೂಕ್ತವೆನಿಸುತ್ತದೆ. ವ್ಯಾಕರಣದ ಪ್ರಯೋಜನಗಳನ್ನು ವಿವರಿಸುವಾಗ ಶಬ್ದಶುದ್ಧಿ ವ್ಯಾಕರಣದ ಪರಮಗುರಿ, ಪದಾರ್ಥನಿರ್ಣಯವು ವ್ಯಾಕರಣ ಕಲಿಕೆಯಿಂದ ಸಾಧ್ಯವಾಗಬೇಕು. 'ವ್ಯಾಕರಣದಿಂದ ಪದ, ಪದದಿಂದ ಅರ್ಥ, ಅರ್ಥದಿಂದ ತತ್ವಜ್ಞಾನ, ತತ್ವಜ್ಞಾನದಿಂದ ಮೋಕ್ಷಪ್ರಾಪ್ತಿ'. ಎಂದಿದ್ದಾನೆ ಕೇಶಿರಾಜ, 'ಮೋಕ್ಷವೆಂದರೆ ಇಲ್ಲಿ ಭಾಷಾಜ್ಞಾನವೆಂದು ಭಾವಿಸಿದರೆ ಕೇಶಿರಾಜನ ಹೇಳಿಕೆ ಅರ್ಥಪೂರ್ಣವಾಗುತ್ತದೆ' ಎನ್ನುತ್ತಾರೆ ಲೇಖಕರು. ಕನ್ನಡ ವ್ಯಾಕರಣ ಗ್ರಂಥಗಳ ವಿವೇಚನೆಯಲ್ಲಿ ಕವಿರಾಜಮಾರ್ಗ, ಕಾವ್ಯಾವಲೋಕನ, ಶಬ್ದಸ್ಮೃತಿ, ಕರ್ನಾಟಕ ಭಾಷಾ ಭೂಷಣ, ಶಬ್ದಮಣಿದರ್ಪಣ, ಶಬ್ದಾನುಶಾಸನ, ಇತ್ಯಾದಿ ಹಳಗನ್ನಡ ಕೃತಿಗಳ ಜೊತೆಗೆ ಆಧುನಿಕ ವ್ಯಾಕರಣ ಗ್ರಂಥಗಳನ್ನು ಸೇರಿಸಿಕೊಳ್ಳಲಾಗಿದೆ. ಅವುಗಳ ಒಂದು ಇತಿಹಾಸವನ್ನು ಸಮಗ್ರವಾಗಿ ಗುರುತಿಸುವ ಕಾರ್ಯ ಈ ಲೇಖನದಲ್ಲಿ ಸಾಧಿಸಿದೆ ಎಂದು ಹೇಳಬಹುದು. ಹೀಗೆ, ಆರಂಭದಲ್ಲಿ ಕೇವಲ ಶಬ್ದ ಶಾಸ್ತ್ರವೆನಿಸಿದ ವ್ಯಾಕರಣ, ೧೯೫೦ರ ವೇಳೆಯಲ್ಲಿ ಭಾಷಾಶಾಸ್ತ್ರವಾಗಿ, ೧೯೬೫ರಿಂದ ಈಚೆಗೆ ಭಾಷಾವಿಜ್ಞಾನವೆನಿಸಿ ರೂಪುಗೊಂಡ ಬಗೆಯ ಸ್ಥೂಲ ಚಿತ್ರಣ ನಮಗೆ ಮೊದಲ ಲೇಖನದಲ್ಲಿ ದೊರೆಯುತ್ತದೆ.

ಕೇಶಿರಾಜ ಶುಷ್ಕ ವಯ್ಯಾಕರಣಿಯಾಗಿರದೆ, ವ್ಯಾಕರಣ ಸೂತ್ರ ನಿರೂಪಣೆಯಲ್ಲಿ ಸಾಕಷ್ಟು ರಸಿಕತೆಯನ್ನು ತೋರಿಸಿದ್ದಾನೆ. ಈ ಅಂಶವನ್ನು ಎರಡನೆಯ ಲೇಖನದಲ್ಲಿ ಎತ್ತಿ ತೋರಿಸಲಾಗಿದೆ. ಕೇಶಿರಾಜನ ಮನೆತನ ಹಾಗೂ ಪರಿಸರ ಸಾಹಿತ್ಯಕವಾದುದು, ಅವನ ಮನೆಯಲ್ಲಿ ತಂದೆ, ಸೋದರಮಾವ ಕವಿಗಳೂ, ಪಂಡಿತರೂ ಆಗಿದ್ದರು. ಇದರ ಪರಿಣಾಮವಾಗಿ ಅವನು ಸಾಹಿತ್ಯ ಸೃಷ್ಟಿಮಾಡಲು ಹೆಚ್ಚು ಅನುಕೂಲವಾಯಿತು. ಕೇಶಿರಾಜ ರಚಿಸಿರಬಹುದಾದ ಇತರ ಕೃತಿಗಳ ವಿಸ್ತೃತವಾದ ವಿವೇಚನೆ ಇಲ್ಲಿದೆ. ಶಬ್ದಮಣಿದರ್ಪಣ ಶುಷ್ಕವಾಗದೆ ಲವಲವಿಕೆ ಹಾಗೂ ಕುತೂಹಲಗಳಿಂದ ಕೂಡಿರಲು ಕೇಶಿರಾಜ ಮಾಡಿದ ಪ್ರಯತ್ನಗಳು, ಲಕ್ಷ್ಯ ಪದ್ಯಗಳ ಆಯ್ಕೆಯಲ್ಲಿ ಅವನು ತೋರಿಸಿದ ರಸಿಕತೆ ಮತ್ತು ಔಚಿತ್ಯ ಮುಂತಾದವುಗಳನ್ನು ಸ್ವಾರಸ್ಯಕರವಾಗಿ ಇಲ್ಲಿ ವಿವೇಚನೆ ಮಾಡಲಾಗಿದೆ. ಕೊನೆಯಲ್ಲಿ ಶಬ್ದಮಣಿದರ್ಪಣ ಕಾವ್ಯವೂ ಹೌದು, ಶಾಸ್ತ್ರವು ಹೌದು, ಕಾವ್ಯಲೇಪನವನ್ನು ಪಡೆದಿರುವ ಶಾಸ್ತ್ರವೆಂದರೂ ಸರಿಯೇ ಎಂದು ಬಣ್ಣಿಸುತ್ತ ಹಳಗನ್ನಡ ಭಾಷಾಸ್ವರೂಪವನ್ನು ಬಿತ್ತರಿಸುವಲ್ಲಿ ವೈಯಾಕರಣಿಯ ಪ್ರಮಾಣ ಪರಿಜ್ಞಾನ, ನಿಷ್ಠೆ, ಪ್ರಾಮಾಣಿಕತೆಗಳು ನಿಜಕ್ಕೂ ಪ್ರಶಂಸನೀಯ. ಪ್ರಯೋಗ ಬಲವನ್ನೆ ಅವಲಂಬಿಸಿದ ಅವನ ಶಾಸ್ತ್ರಪ್ರಜ್ಞೆ, ಸತ್ಯವನ್ನು ಹೇಳುವಲ್ಲಿ ಅವನ ದಿಟ್ಟ ನಿಲುವು, ಸಂದೇಹ ಬಂದಾಗ ತಳೆದ ತಾಟಸ್ಥ್ಯನೀತಿ, ಗುಣದೋಷಗಳನ್ನು ತೆರೆದು ತೋರುವಲ್ಲಿ ಅವನ ನಿಷ್ಪಕ್ಷಪಾತ ಮನೋಧರ್ಮ ಇವು ಶ್ರೇಷ್ಠ ವೈಯಾಕರಣಿಯ ವಿಶುದ್ಧ ಲಕ್ಷಣಗಳು ಎಂದು ಸಾರಲಾಗಿದೆ.

ಭಾಷಾಶಾಸ್ತ್ರ ಭಾಷಾವಿಜ್ಞಾನಗಳು ಭ್ರೂಣಾವಸ್ಥೆಯಲ್ಲಿಯೂ ಇಲ್ಲದಿದ್ದ ಕಾಲದಲ್ಲಿ ಕನ್ನಡ ಸಂಸ್ಕೃತಗಳನ್ನು ಬೇರ್ಪಡಿಸಿ ಕನ್ನಡದ ವೈಶಿಷ್ಟ್ಯ ವೈಭವಗಳನ್ನು ಮೆರೆದ ಪ್ರಕಾಂಡ ಪಂಡಿತ ಕೇಶಿರಾಜ. ಅನ್ಯ ಭಾಷಾ ಶಬ್ದಗಳಿಗೆ ಕನ್ನಡ ದೀಕ್ಷೆಯನ್ನಿತ್ತಿದ್ದಾನೆ. ವಿಷಯ ವಿಭಜನೆ, ವೈಜ್ಞಾನಿಕ ವಿಶ್ಲೇಷಣೆ ಒಂದಲ್ಲ ಹತ್ತು ಪ್ರಯೋಗಗಳಿಂದ ಅರ್ಥಸ್ಪಷ್ಟೀಕರಿಸುವ ವಿಧಾನ ಇಂಥವುಗಳಲ್ಲೆಲ್ಲ ಅದ್ವಿತೀಯನಾಗಿದ್ದಾನೆ. ಒಟ್ಟಿನಲ್ಲಿ ''ಕೇಶಿರಾಜ ಕನ್ನಡದಲ್ಲಿ ಬಹುದೊಡ್ಡ ಶಬ್ದಶಾಸ್ತ್ರಜ್ಞ. ಪ್ರಾಜ್ಞ, ಪ್ರಕಾಂಡ ಪಂಡಿತ ಅಷ್ಟೇ ಪ್ರಮಾಣದ ಪ್ರತಿಭಾ ಸಂಪನ್ನ, ಕವಿ''. ಇತ್ಯಾದಿ ಹೊಗಳುವಲ್ಲಿ ಕೇಶಿರಾಜನ ಬಗ್ಗೆ ಲೇಖಕರಿಗಿರುವ ಮೆಚ್ಚುಗೆಯ ದೃಷ್ಟಿ - ಗೌರವಗಳು ವಿಶೇಷವಾಗಿ ವ್ಯಕ್ತವಾಗಿದ್ದರೂ ಕೇಶಿರಾಜ ಹೊಗಳಿಕೆಗೆ ಪಾತ್ರನೆನ್ನುವದರಲ್ಲಿ ಸಂಶಯವಿಲ್ಲ.

ಕೇಶಿರಾಜನ ಕಾಲಕ್ಕೆ ಱ ೞ ಅಕ್ಷರ ಅಳಿಯತೊಡಗಿತ್ತು. ಕೇಶಿರಾಜ ಅದನ್ನು ಉಳಿಸಿಕೊಳ್ಳುವ ವ್ಯರ್ಥಪ್ರಯತ್ನ ಮಾಡಿದ್ದಾನೆ. ಮೂರನೆಯ ಲೇಖನದಲ್ಲಿ, ಅವನ ಕಾಲದ ಕನ್ನಡ ಸ್ವರೂಪದ ಚರ್ಚೆಯಿದೆ. ಲ ಳ ಪ್ರಯೋಗ ಪರಿವರ್ತನೆ, ಸ ಬಿಂದುಕ, ವಿಕಲ್ಪ ಬಿಂದುಗಳು, ನೆರವು, ಬರವು, ನೊಳವು ಮುಂತಾದ ಶಬ್ದಗಳಲ್ಲಾದ ಅಂತ್ಯ ವರ್ಣಲೋಪ, ಸಂಧಿಲೋಪ, ಇನಾಗಮ ದೋಷ ಮತ್ತು ಷಷ್ಠಿಗೆ ದೀರ್ಘಾದೇಶಗಳನ್ನು ಕೇಶಿರಾಜ ಕನ್ನಡದಲ್ಲಿ ದೋಷವೆಂದು ಪರಿಗಣಿಸಿದ್ದಾನೆ. ಋ ಇಕೆ, ಕೆ ಪ್ರತ್ಯಯಗಳ ಬಳಕೆ, 'ತನ' ತದ್ಧಿತ ಪ್ರಯೋಗಗಳನ್ನು ಕುರಿತು ವಿವೇಚಿಸಿದ್ದಾನೆ. ಮತ್ತು ಪ ಹ ಬದಲಾವಣೆಯನ್ನು 'ದೇಶಿಯೊಳ್ ಚೆಲ್ಪು'ವು ಎಂದು ಭಾವಿಸಿದ್ದಾನೆ. ಅವನು ಪ್ರಸ್ತಾಪಿಸಿರುವ ಬಳೆ - ಬೆಳೆ ಧಾತುಗಳ ಬಳಕೆ, ಅಲೋಡಂ, ಶಬ್ದಗಳ ಬಳಕೆ, ಉಪಧೆಗಳು, ಮುಂತಾದವುಗಳ ಚರ್ಚೆ ಈ ಲೇಖನದಲ್ಲಿದ್ದು ಕೇಶಿರಾಜ ಹಳೆಗನ್ನಡ ವ್ಯಾಕರಣವನ್ನು ಕುರಿತು ಬರೆಯುತ್ತಿದ್ದರೂ ತನ್ನ ಕಾಲದಲ್ಲಾಗುತ್ತಿದ್ದ ಮಾರ್ಪಾಟುಗಳನ್ನು ಸೂಕ್ಷ್ಮವಾಗಿ ಗಮನಿಸಿದ್ದಾನೆ. ಹಿರಿಯರು ಕೂಡ ಅವನ್ನು ಬಳಸಿದ್ದರೆ ಅನಿವಾರ್ಯವಾಗಿ ಒಪ್ಪಿಕೊಂಡಿದ್ದಾನೆ. ಹಾಗಲ್ಲದಿದ್ದಲ್ಲಿ ಅದು ತಪ್ಪು, ದೋಷ ಎಂದು ನಿರ್ದಾಕ್ಷಿಣ್ಯವಾಗಿ ಹೇಳುತ್ತಾನೆ. ಕೇಶಿರಾಜನ ಕಾಲದ ಕನ್ನಡ ಅರಿಯುವಲ್ಲಿ ಪ್ರಸ್ತುತ ಲೇಖನ ತುಂಬಾ ಸಹಾಯಕಾರಿಯಾಗಿದೆ.

ಮಾತು ಬಳಕೆ ಆಗುತ್ತ ಆಗುತ್ತ ಅದರಲ್ಲಿ ಮೂಲ ಸ್ವರೂಪದ ಬದಲಾಗಿ ಕೆಲವೊಮ್ಮೆ ಅಪಾರ್ಥ ಪ್ರಯೋಗವೂ ಕಾಣಿಸಿಕೊಳ್ಳುತ್ತದೆ. ಆಗದನ್ನು ತಿದ್ದುವ, ಶುದ್ಧಿಗೊಳಿಸುವ ಕೆಲಸ ವೈಯಾಕರಣರದ್ದು. ಅದನ್ನು ನಿಷ್ಠೆಯಿಂದ ಕೇಶಿರಾಜ ನಿರ್ವಹಿಸಿದ್ದಾನೆ. ಅವಕಾಶ ಸಿಕ್ಕೆಡೆಗಳಲ್ಲಿ 'ನಾಮರೂಢಿ ಅಳಿಯಬಾರದು ಲೋಕ ರೂಢಿ ಕೆಡದಂತೆ ಅರ್ಥವೃತ್ತಿ ಕೆಡುವುದಾದರೆ ಪ್ರಯೋಗ ಮಾಡಬಾರದು ಎಂದು ಎಚ್ಚರಿಸಿದ್ದಾನೆ. ತಾನೂ ಎಚ್ಚೆತ್ತಿದ್ದಾನೆ.' ಎಂಬ ಮಾತನ್ನು ಸಾ.ಶಿ. ಮರುಳಯ್ಯನವರು ಬಹು ಎಚ್ಚರಿಕೆಯಿಂದಲೇ ನಾಲ್ಕನೆಯ ಲೇಖನದಲ್ಲಿ ತಿಳಿಸುತ್ತಾರೆ. ಕೇಶಿರಾಜನ ಪ್ರಯೋಗಗಳನ್ನೇ ಆಧಾರವಾಗಿಟ್ಟುಕೊಂಡು ವಿಷಯ ವಿವೇಚನೆ ಮಾಡಿದ್ದಾರೆ.

ಸಂಧಿ, ವಿಸಂಧಿ, ಸಂಧಿದೋಷ ಇತ್ಯಾದಿಗಳ ಬಗ್ಗೆ ಸುದೀರ್ಘ ಚರ್ಚೆ ಇಲ್ಲಿದೆ. ಕೊನೆಯಲ್ಲಿ ಲೇಖಕರು, 'ಕೇಶಿರಾಜ, ನುಡಿಯ ನಾಡಿಯನ್ನು ಚೆನ್ನಾಗಿ ಬಲ್ಲವನಾಗಿದ್ದ. ಆದ್ದರಿಂದಲೇ ಭಾಷೆಗೆ ಅಪಚಾರವಾಗದಂತೆ ಅದರ ಮರ್ಯಾದೆಗೆ ಧಕ್ಕೆ ತರದಂತೆ ಎಚ್ಚರವಹಿಸಿದ್ದಾನೆ. ಕವಿ ಪ್ರಯೋಗಗಳಿಗಿಂತ ಜನರಾಡುವ ಮಾತುಗಳ ದೋಷಗಳನ್ನು ಗುರುತಿಸಿ ತಿದ್ದಲು ಯತ್ನಿಸಿದ್ದಾನೆ. ಭಾಷೆಯ ಪಾಕ ಕೆಡಬಾರದು ಎಂಬುದು ಕೇಶಿರಾಜನ ಸದಾಶಯ', ಎಂದು ಹೇಳಿದ್ದಾರೆ.

ಐದನೆಯ ಲೇಖನ ಒಟ್ಟು ಸಂಗ್ರಹದಲ್ಲಿಯೇ ಹೆಚ್ಚಿನ ಮಹತ್ವ ಪಡೆಯುತ್ತದೆ.

'ಅವಧರಿಪುದು ವಿಭುದರ್ ದೋ ।
ಷವಿದರೊಳೇನಾನುಮುಳ್ಳೊಡಂ ಪ್ರಿಯದಿಂತಿ ।
ರ್ದುವುದು ಗುಣಯುಕ್ತಮುಂದೋ ।
ಷ ವಿದೂರಮುಮಾಗೆ ಮೆಚ್ಚಿಕೊಳ್ಳುವುದಿದಂ ॥

ಇದು ಕೇಶಿರಾಜನ ಪ್ರಾಂಜಲ ಮನದ ಪ್ರಾರ್ಥನೆ. ಅವನ ವಿನಯ ಸ್ವಭಾವಕ್ಕೆ ದ್ಯೋತಕವೂ ಹೌದು. ಕೇಶಿರಾಜನಲ್ಲಿ ತನ್ನ ಕೃತಿಯ ಬಗ್ಗೆ ಆತ್ಮ ವಿಶ್ವಾಸವಿದ್ದರೂ 'ನಡೆವರೆಡಹದೆ ಕುಳಿತವರೆಡಹುವರೆ' ಎಂಬಂತೆ ದೋಷಗಳೂ ಅಲ್ಲಲ್ಲಿ ನುಸುಳಿವೆ. ಅದು ಅವನ ಅರಿವಿಗೆ ಬಂದಿಲ್ಲ ಎಂಬ ಪೀಠಿಕೆಯೊಂದಿಗೇ 'ಪ್ರಿಯದಿಂ ತಿರ್ದುವ' ಕೆಲಸ ಪ್ರಾರಂಭವಾಗುತ್ತದೆ.

ಕೇಶಿರಾಜ ಸಂಸ್ಕೃತದ ೫೨ ಅಕ್ಷರಗಳಿಗೆ ದೇಶಿಯವಾದ ೫ ಅಕ್ಷರಗಳನ್ನು ಸೇರಿಸಿ, ಅದರಲ್ಲಿ ಸಂಸ್ಕೃತದ್ದು ಮಾತ್ರ ಇರುವ ೧೦ ಅಕ್ಷರಗಳನ್ನು ತೆಗೆದು, ೪೭ ಶುದ್ಧಗೆಗಳನ್ನು ಕನ್ನಡದಲ್ಲಿ ಗುರುತಿಸುತ್ತಾನೆ. ಆದರೆ ಆಧುನಿಕ ಭಾಷಾವಿಜ್ಞಾನದ ದೃಷ್ಟಿಯಿಂದ ೩೧ ಶುದ್ಧಗೆಗಳು ಇರುವುದನ್ನು ಇಲ್ಲಿ ಲೇಖಕರು ವಿಶ್ಲೇಷಿಸಿ ತೋರಿಸಿರುತ್ತಾರೆ. ಪ ಹ ಬದಲಾವಣೆ ೧೨ನೇ ಶತಮಾನದಿಂದ ಇತ್ತೀಚೆಗೆ ಆದುದು. ಈಗ ಪ ಮತ್ತು ಹ ಎರಡೂ ಬಳಕೆಯಲ್ಲಿವೆ. ಆದರೆ ಕೆಲವು ಪ್ರದೇಶದ ಆಡುಮಾತಿನಲ್ಲಿ ಹ ಕಾರದ ಬಳಕೆಯಿಲ್ಲ ಎಂಬ ಕಾರಣಕ್ಕಾಗಿ ಲೇಖಕರು ಹ ಕಾರವನ್ನು ಬಿಟ್ಟುದು ಸರಿ ಎನ್ನಿಸುವುದಿಲ್ಲ. ಏಕೆಂದರೆ ಆದರ-ಹಾದರ, ಆಡು-ಹಾಡು ಇಂಥ ಶಬ್ದಗಳ ವ್ಯತ್ಯಾಸವನ್ನು ಕೇವಲ ಸಂದರ್ಭದ ಮೇಲಿಂದ ಅರ್ಥಮಾಡಿಕೊಳ್ಳುವುದು ಕಷ್ಟವಾಗಬಹುದು. ಆದ್ದರಿಂದ ಹ ಮತ್ತು ಪ ಎರಡನ್ನೂ ಕನ್ನಡ ಭಾಷೆಯಲ್ಲಿ ಇಟ್ಟುಕೊಳ್ಳುವುದು ಒಳಿತು.

ಶಿಷ್ಟ ಕವಿಗಳ ಪ್ರಯೋಗಗಳನ್ನು ಆಧಾರವಾಗಿಟ್ಟುಕೊಂಡು ಕೇಶಿರಾಜ ಶಬ್ದಮಣಿದರ್ಪಣ ಬರೆದಿದ್ದಾನೆ. ಆಧುನಿಕ ಭಾಷಾ ವಿಜ್ಞಾನಿಗಳ ದೃಷ್ಟಿಯಿಂದ ದೋಷವನ್ನು ಗುರುತಿಸುವಾಗ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ. ಹಳಗನ್ನಡ ನಡುಗನ್ನಡ ಭಾಷೆಗಳ ಸಂಕ್ರಮಣಾವಸ್ಥೆಯ ಕಾಲದಲ್ಲಿ ಜೀವಿಸಿದ್ದ ಕೇಶಿರಾಜನ ಭಾಷಾ

ಗೊಂದಲವನ್ನು ಮೊದಲು ಅರ್ಥಮಾಡಿಕೊಳ್ಳಬೇಕು. ಅವನ ಕಾಲಕ್ಕೆ 'ಱ ೞ' ಕೆಲವೆಡೆ ಹೋಗಿತ್ತು. ಕೆಲವೆಡೆ ಇತ್ತು. ಆದರೆ ಕೇಶಿರಾಜ ಅವುಗಳನ್ನು ಉಳಿಸಿಕೊಳ್ಳುವ ಪ್ರಯತ್ನ ಮಾಡಿದ್ದಾನೆ. ಏಕೆಂದರೆ ಱ ಳ ನಾಶವಾಗುವುದೆಂದರೆ ಆ ಅಕ್ಷರ ಘಟಿತ ಶಬ್ದಗಳನ್ನು ನಾವು ಕಳೆದುಕೊಂಡಂತೆ, ಆ ಕಳಕಳಿ ಕಾಳಜಿ ಅವನಲ್ಲಿರುವುದನ್ನು ಅರ್ಥಮಾಡಿಕೊಳ್ಳಬೇಕು. ಯವಲಗಳ ಅನುನಾಸಿಕತ್ವದ ಬಗ್ಗೆ ಕೇಶಿರಾಜ,

'ಅನುನಾಸಿಕಮಂ ಯವಲಮನನು ನಾಸಿಕಮುಂದರೆಂಬರ್'

ಎಂಬ ಸೂತ್ರ ಅನುನಾಸಿಕಗಳೂ ಹೌದು, ಅನನುನಾಸಿಕಗಳು ಹೌದು ಎಂದು ತಿಳಿಸುತ್ತದೆ. ಆದರೆ ಅವು ನಿರನುನಾಸಿಕಗಳೇ ಆಗಿದ್ದು, ಪಕ್ಕದಲ್ಲಿ ಅನುನಾಸಿಕ ಧ್ವನಿಗಳು ಬಂದಾಗ ಅವುಗಳ ಪ್ರಭಾವಕ್ಕೆ ಒಳಗಾಗಿ ಅನುನಾಸಿಕ ಧ್ವನಿಗಳಂತೆ ವರ್ತಿಸುತ್ತವೆ ಎಂಬುದಾಗಿ ಸ್ಪಷ್ಟೀಕರಿಸಿದ್ದಾರೆ.

ಶಿಥಿಲದ್ವಿತ್ವದ ವಿಚಾರ - ಛಂದಸ್ಸಿನ ಅಧ್ಯಯನದಲ್ಲಿ ಬರಬೇಕೇ ಹೊರತು ವ್ಯಾಕರಣದಲ್ಲಿ ಅಲ್ಲ ಎಂಬ ಅಭಿಪ್ರಾಯದ ಜೊತೆಗೆ 'ಕಾದಲರ್ಗಳ್' ಶಬ್ದ ವಾಸ್ತವ ಸಹಜ ಶಿಥಿಲದ್ವಿತ್ವವೆಂದು ತೋರಿಸಿಕೊಟ್ಟಿರುವುದು ಅವರ ಸೂಕ್ಷ್ಮ ಗ್ರಹಣಾಶಕ್ತಿಗೆ ನಿದರ್ಶನ.

ಸಂಧಿ ವಿಚಾರದಲ್ಲಿ ಕೇಶಿರಾಜ ಸ್ವಲ್ಪ ಗೊಂದಲಕ್ಕೆ ಒಳಗಾಗಿದ್ದಾನೆ. ಸ್ವರಕ್ಕೆ ಸ್ವರ ಅನ್ಯೋನ್ಯವಾಗಿ ಸೇರಿದಾಗ ಸಂಧಿಕಾರ್ಯ ಜರುಗುತ್ತದೆ. ಇದನ್ನು ಸ್ಪಷ್ಟವಾಗಿ ತಿಳಿದುಕೊಳ್ಳದೇ ಕೇಶಿರಾಜ 'ಎರಡು ರಲವುಂ ವರ್ಣಂ ಪರಸ್ಪರ ಕೂಡುವಂದವದೆ ಸಂಧಿವಲಂ'' ಎಂದಿದ್ದಾನೆ. 'ವಿದಗ್ಧರಿಂ ಸಂಧಿ ವಿಷಯವೆರಡಕ್ಕುಂ' ಎಂದು ಹೇಳಿ ಪದಮಧ್ಯ ಸಂಧಿ, ಪದಾಂತ್ಯ ಸಂಧಿ, ಎಂಬ ಭೇದ ತೋರಿಸುವ ವ್ಯರ್ಥಪ್ರಯತ್ನ ಮಾಡುತ್ತಾನೆ. ದ್ವಿತ್ವ ಸಂಧಿ ಎಂಬ ಪ್ರತ್ಯೇಕ ವಿಭಜನೆ ಅಗತ್ಯವಿದ್ದಲ್ಲ, ಏಕೆಂದರೆ ಅಲ್ಲಿ ಲೋಪ ಆಗಮ ಆದೇಶಗಳಾವುವೂ ಸಂಘಟಿಸದೆ ಸಂಧಿಕಾರ್ಯವೇ ನಡೆಯದ ಕೇವಲ ಪೂರ್ವಪದ ವ್ಯಂಜನ ದ್ವಿತ್ವಗೊಳ್ಳುವ ಸಾಮಾನ್ಯ ಪ್ರಕ್ರಿಯೆ ಅಲ್ಲಿ ನಡೆಯುತ್ತದೆ. ಹೀಗೆ ಸಂಧಿ ವಿಷಯದಲ್ಲಿ ಕೇಶಿರಾಜ ಮುಗ್ಗರಿಸಿದ್ದಾನೆ ಎಂದು ಲೇಖಕರು ಅಭಿಪ್ರಾಯಪಡುತ್ತಾರೆ, ಆದರೆ ಇದು ಚರ್ಚೆಯ ವಿಷಯ. ಕೇಶಿರಾಜನಿಗೆ ಕನ್ನಡದ ಮೇಲೆ ಎಲ್ಲಿಲ್ಲದ ಮೋಹ. ಸಂಸ್ಕೃತದಲ್ಲಿರುವುದೆಲ್ಲ ಕನ್ನಡದಲ್ಲಿ ಇದೆ ಎಂದು ತೋರಿಸ ಹೊರಟು ೯ ಲಿಂಗಗಳ ಉಲ್ಲೇಖ ಮಾಡಿದ್ದಾನೆ. ಅದರ ಚರ್ಚೆ ಈ ಲೇಖನದಲ್ಲಿದೆ. ಆದರೆ ಕೊನೆಯಲ್ಲಿ ಅವನೇ ಹೇಳುವಂತೆ, 'ಪುರುಷರೆ ಪುಲ್ಲಿಂಗಂ ಸ್ತ್ರೀಯರೇ ತಾಂ ಸ್ತ್ರೀಲಿಂಗಂ ಮುಳಿದುವೆಲ್ಲ ನಪ್ಪಾಗಿರೆ ಸಲ್ಗುಂ ಕನ್ನಡದೊಳ್' ಎಂಬ ಮಾತೇ ಸತ್ಯ ಎಂಬುದನ್ನು ಇತರ ದ್ರಾವಿಡ ಭಾಷೆಗಳ ಲಿಂಗವ್ಯವಸ್ಥೆಯ ಹಿನ್ನೆಲೆಯಲ್ಲಿ ವಿವೇಚಿಸಲಾಗಿದೆ.

ದ್ವಿವಚನದ ವಿಷಯದಲ್ಲಿಯೂ ಅಷ್ಟೆ. ಸಂಸ್ಕೃತದಂತೆ ಕನ್ನಡದಲ್ಲಿಯೂ

ದ್ವಿವಚನವನ್ನು ಉಚಿತವಾಗಿಯಾದರೂ ಬರುತ್ತದೆಂದು ಅವನ ಕಣ್ಣು ಗುರುತಿಸುವುದು ಕೇಶಿರಾಜನ ಚಾಪಲ್ಯವೆಂದೇ ಲೇಖಕರ ಅಭಿಪ್ರಾಯ.

ವಿಭಕ್ತಿಗಳ ವಿಚಾರವಾಗಿ ಕೇಶಿರಾಜ ಕೊಡುವ ಪ್ರಥಮೆಯನ್ನು ಬಿಟ್ಟು ಉಳಿದುವೆಲ್ಲವೂ ಸ್ವತಂತ್ರ ಪದಗಳೇ ಹೊರತು ಪ್ರತ್ಯಯಗಳಲ್ಲ ಎಂಬುದನ್ನು ವಿಶ್ಲೇಷಿಸಿ ತೋರಿಸಲಾಗಿದೆ. ಪದಗಳೇ ಪ್ರತ್ಯಯದ ಕೆಲಸ ಮಾಡುವುದರಿಂದ ಮತ್ತು ಕೆಲವು ಪ್ರತ್ಯಯಗಳ ಬಳಕೆಯೇ ರೂಢಿಯಲ್ಲಿಲ್ಲದಿರುವುದರಿಂದ ಕನ್ನಡದಲ್ಲಿ ಸಪ್ತ ವಿಭಕ್ತಿ ಪ್ರತ್ಯಯಗಳಿಲ್ಲ ಎಂದು ಸ್ಪಷ್ಟವಾಗಿ ವಾದಿಸಿದ್ದಾರೆ. ಮತ್ತು ಇದು 'ಕೇಶಿರಾಜನ ಸಿದ್ಧಾಂತದ ಮುಂದುವರಿದ ಸಂಶೋಧನೆ' ಎಂದಿದ್ದಾರೆ.

'ನೇಮದ ದೋಷ'ವೆಂಬುದು ಅಲಂಕಾರ ವಿಷಯಕ್ಕೆ ಸಂಬಂಧಿಸಿದುದು, ವ್ಯಾಕರಣ ಕೃತಿಯಲ್ಲಿ ಅದಕ್ಕೆ ಸ್ಥಾನವಿಲ್ಲ. ಹೀಗಾಗಿ ಅದರ ಪ್ರಸ್ತಾಪ, ಅಪ್ರಸ್ತುತವೆಂದೇ ಬಗೆಯಲಾಗಿದೆ.

ತೊಂಬತ್ತರ ವಿಷಯದಲ್ಲೂ ಸಾಕಷ್ಟು ಚರ್ಚೆ ಇದೆ. ಆ ಚರ್ಚೆಯ ಸಾರವನ್ನು ನಾವಿಲ್ಲಿ ಕಾಣುತ್ತೇವೆ. ಹತ್ತು ಪರವಾದ ಒಂಭತ್ತಕ್ಕೆ 'ತೊಮ್' ಆದೇಶ ಅಲ್ಲ, ಅದರ ನಿಷ್ಪತ್ತಿ 'ತೊಲ್' ನಲ್ಲಿದೆ. 'ತೊಲ್' ಅಥವಾ 'ತೊಮ್'-ತೊಲಿ ಅರ್ಥ 'ಮೊದಲು' ಎಂದು, ತೆಲುಗಿನಲ್ಲಿ ಮೊದಲವಾರಕ್ಕೆ ತೊಲಿವಾರ ಎನ್ನುತ್ತಾರೆ. ಅಂತಾದಾಗ 'ತೊಲ್ + ಪತ್ತು' - ತೊಂಬತ್ತು ಎಂಬುದು ಪತ್ತಕ್ಕೆ ಮೊದಲು ೯ ಎಂದು ಆಗಬೇಕೇ ಹೊರರ್ತು ೧೦ ಆಗಲಾರದು. ಆದರೆ ರೂಢಿಯಲ್ಲಿ ೧೦ಕ್ಕೆ ತೊಂಬತ್ತು ಎಂಬುದು ಬಳಕೆಯಲ್ಲಿ ತಪ್ಪಾಗಿ ಬಂದಿದೆ. ಆದರೆ ಕೇಶಿರಾಜ ಹೇಳುವಂತೆ ಒಂಬತ್ತಕ್ಕೆ 'ತೊಮ್', ಆದೇಶ ಅಲ್ಲ ಎಂದು ತರ್ಕಬದ್ಧವಾಗಿಯೇ ಹೇಳಿದ್ದಾರೆ.

ಕಾಲದ ಬಗ್ಗೆಯೂ ಚರ್ಚೆ ಮಾಡುತ್ತ, ಕನ್ನಡದಲ್ಲಿ ಕಾಲಗಳಿರುವುದೇ ಎರಡು, ಒಂದು ಭೂತ, ಇನ್ನೊಂದು ಅಭೂತ, ಸಂಸ್ಕೃತದ ಪ್ರಭಾವದಿಂದ ಕೇಶಿರಾಜ ಮೂರು ರೂಪಗಳಲ್ಲಿ ತೋರಿಸಲು ಯತ್ನಿಸಿದ್ದಾನೆ. ಆದರೆ ಕನ್ನಡದಲ್ಲಿ ಭೂತಕಾಲಕ್ಕಿರುವಂತೆ ವರ್ತಮಾನ ಮತ್ತು ಭವಿಷ್ಯತ್ ಕಾಲಗಳಿಗೆ ಪ್ರತ್ಯೇಕ ಕಾಲವಾಚಕ ಪ್ರತ್ಯಯಗಳಿಲ್ಲ.

ಪ್ರಸ್ತುತ ಸಂಗ್ರಹದಲ್ಲಿಯೇ ಇದೊಂದು ಬೆಲೆಯುಳ್ಳ ಲೇಖನ. ಕೇಶಿರಾಜನಲ್ಲಿರುವ ದೋಷಗಳನ್ನು ಪಟ್ಟಿ ಮಾಡಿದ್ದಕ್ಕಲ್ಲ. ಆದರೆ ಕೇಶಿರಾಜನನ್ನು ಆಧುನಿಕ ಭಾಷಾವಿಜ್ಞಾನದ ದೃಷ್ಟಿಯಿಂದ ನೋಡಿ, ಅದರಲ್ಲಿರುವ ಕೊರೆಯನ್ನು ಗುರುತಿಸಿರುವುದಕ್ಕಾಗಿ. ೨೦ ಶತಮಾನಗಳ ಸ್ಥಿತ್ಯಂತರ ಹೊಂದಿದ ಕನ್ನಡ ಹಾಗೂ ಅದರ ಸಹೋದರಿ ಭಾಷೆಗಳಾದ ಇತರ ದಕ್ಷಿಣದ ದ್ರಾವಿಡ ಭಾಷೆಗಳ ಬಗ್ಗೆ ಕಲ್ಪನೆಗಳನ್ನು ಹೊಂದಿದ ನಮಗೆ ವಚನ, ವಿಭಕ್ತಿ, ಕಾಲ ಇತ್ಯಾದಿ ಕುರಿತು ಅರಿವು ಸಾಧ್ಯವಿತ್ತೇ ? ಎಂಬ ಪ್ರಶ್ನೆಯನ್ನು ಹಾಕಿಕೊಂಡಾಗ, ಅವನ ಸಾಧನೆಯೇನು ಎಂಬುದು ಅರಿವಾಗುತ್ತದೆ. ಭಾಷೆಯನ್ನು ಬದಲಾಯಿಸಬಾರದು ಎಂದು ಅವನು

ಹೇಳಿದ್ದರೂ ಹಳಗನ್ನಡದಿಂದ ನಡುಗನ್ನಡಕ್ಕೆ ಭಾಷೆ ಬದಲಾಗುತ್ತಿದೆ ಎಂಬುದನ್ನು ಗುರುತಿಸಿದ್ದಂತೂ ನಿಜ. ಈ ದೃಷ್ಟಿಯಿಂದ ವರ್ಣನಾತ್ಮಕ ಭಾಷಾ ವಿಜ್ಞಾನಿಯ ಕೆಲಸವನ್ನು ಅವನು ತನಗರಿವಿಲ್ಲದಂತೆಯೇ ಮಾಡಿದ್ದಾನೆ ಎನ್ನಬೇಕಾಗುತ್ತದೆ. ಈ ಕಾರಣದಿಂದ 'ಪ್ರಿಯದಿಂ ತಿರ್ದುವುದು' ಎಂಬ ಲೇಖನದ ತಲೆಬರಹ ಓದುಗರಲ್ಲಿ ಕೇಶಿರಾಜನ ಬಗ್ಗೆ ತಪ್ಪು ಅಭಿಪ್ರಾಯಕ್ಕೆ ಎಡೆಯುಂಟು ಮಾಡಬಹುದು.

ಆರನೆಯ ಲೇಖನದಲ್ಲಿ ಸಂಸ್ಕೃತ ಶಬ್ದಗಳನ್ನು ಕನ್ನಡ ಸ್ವೀಕರಿಸುವಾಗ ಕೇಶಿರಾಜ ಕಂಡುಕೊಂಡ ನಿಯಮಗಳನ್ನು ಕುರಿತು ಚರ್ಚಿಸಲಾಗಿದೆ. ಕೊನೆಯಲ್ಲಿ 'ಹೀಗೆ ಸಂಸ್ಕೃತ ನಾಮ ಪ್ರಕೃತಿಯನ್ನು ಕನ್ನಡಕ್ಕೆ ಸರಿಮಾಡಿ 'ಸಮಸಂಸ್ಕೃತ' ವಾಗಿಸುವ ವಿಧಾನವು ಇಷ್ಟು ವಿಸ್ತಾರವಾಗಿ ತೆಲುಗಿನಲ್ಲಾಗಲಿ, ತಮಿಳಿನಲ್ಲಾಗಲಿ ಇಲ್ಲ. ಕನ್ನಡದಲ್ಲಿ ಸಮಮಸಂಸ್ಕೃತವೆಂದು ಹೇಳುವ ರೂಪವನ್ನು ತೆಲುಗರು 'ಸಂಸ್ಕೃತ ಸಮ' ವೆಂದೂ, ತಮಿಳರು 'ತತ್ಸಮ' ವೆಂದೂ, ಕರೆಯುವರು. ಇನ್ನು ಸಮಸಂಸ್ಕೃತ ಮಿಶ್ರ ಸಮಾಸದ ವಿಷಯದಲ್ಲಿ ಕನ್ನಡಕ್ಕಿರುವುವಷ್ಟು ವಿಧಿ-ನಿಷೇಧ ತೆಲುಗಿನಲ್ಲಿಲ್ಲ, ತಮಿಳಿನಲ್ಲಂತೂ ಈ ವಿಚಾರದಲ್ಲಿ ವಿಧಿಯೂ ಇಲ್ಲ ನಿಷೇಧವೂ ಇಲ್ಲ. ಈ ಕಾರಣದಿಂದ 'ಸಮಸಂಸ್ಕೃತೋಕ್ತಿ' ಯೆಂಬುದು ಅಸಾಧಾರಣ ಲಕ್ಷಣವೆಂದು ತಿಳಿಯಬೇಕು' ಎಂದು ತೌಲನಿಕವಾಗಿ ಕೆಲವು ಮಾತುಗಳನ್ನು ಹೇಳಿರುವುದನ್ನು ಗಮನಿಸಬಹುದು.

ಏಳನೆಯ ಲೇಖನ ಕೇಶಿರಾಜನ ಅಚ್ಚಗನ್ನಡ ವ್ಯಾಖ್ಯಾನ ವ್ಯವಸ್ಥೆಯನ್ನು ಕುರಿತದ್ದು. ಅಚ್ಚ ಗನ್ನಡವೆಂದರೆ ಸ್ವಚ್ಚ ಶುದ್ಧ ಅಥವಾ ಕನ್ನಡದ ಮಡಿಯಾದ ನುಡಿ ಎಂದೇನೂ ಅರ್ಥವಲ್ಲ, ಬಳಕೆಗನ್ನಡದ ಸ್ವಾಭಾವಿಕ ಶುದ್ಧ ಸ್ವರೂಪ, ಕೆಲವು ಅನ್ಯಭಾಷಾ ಶಬ್ದಗಳಿಗೆ ತನ್ನದಾದ ಸಂಸ್ಕಾರವಿತ್ತು ಅವುಗಳ ಮೇಲೆ ತನ್ನದೇ ಆದ ಸೋಪಜ್ಞಕೆಯ ಛಾಪು ಒತ್ತಿ ಅವುಗಳನ್ನು ತನ್ನ ಜಾಯಮಾನಕ್ಕೆ ತಕ್ಕ ಹಾಗೆ ಒಲಿಸಿ ಬಗ್ಗಿಸಿಕೊಂಡು ತನ್ನವನ್ನಾಗಿ ಮಾಡಿಕೊಳ್ಳುವ ವಿಧಾನ ವೈಖರಿ.

ಯಾವುದೇ ಒಂದು ಭಾಷೆ, ತನ್ನ ಸಂಪರ್ಕಕ್ಕೆ ಸಿಕ್ಕ ಅನ್ಯಭಾಷಾ ಶಬ್ದಗಳನ್ನು ಔಚಿತ್ಯವರಿತು ಸ್ವೀಕರಿಸಿ, ಸ್ವೀಕರಿಸುವ ವೇಳೆಯಲ್ಲಿ ತನ್ನ ಜಾಯಮಾನಕ್ಕನುಗುಣವಾಗಿ ಸಂಸ್ಕರಿಸಿ ತನ್ನ ಕೋಶದಲ್ಲಿ ಅವುಗಳನ್ನು ತುಂಬಿಕೊಳ್ಳುತ್ತದೆ. ಕನ್ನಡ ಸ್ವೀಕರಿಸಿದ ಅಂಥ ಶಬ್ದ ಸಂಪದವನ್ನು ಕೇಶಿರಾಜ 'ಅಚ್ಚಗನ್ನಡ' ಎಂದು ಕರೆದಿದ್ದಾನೆ.

ಕನ್ನಡ ಶ್ರೀಮಂತ ಭಾಷೆ ನಿಜ. ಆದರೆ ತನ್ನ ಶಬ್ದಶಕ್ತಿ ಮತ್ತು ಶಬ್ದಕೋಶವನ್ನು ವೃದ್ಧಿಪಡಿಸಿಕೊಳ್ಳಬೇಕಾದರೆ ಅದು ಅನ್ಯ ಭಾಷಾ ಕೋಶವನ್ನು ಕೊಳ್ಳೆಹೊಡೆಯಲೇ ಬೇಕು. ಆದರೆ ಆ ಕೊಳ್ಳೆ ಧರ್ಮಸಮ್ಮತವಾಗಿರಬೇಕು. ನ್ಯಾಯಬದ್ಧವೂ ಆಗಿರಬೇಕು ಎಂಬುದು ಕೇಶಿರಾಜನ ಮನೀಷೆ ಆದ್ದರಿಂದಲೇ ಅಪಭ್ರಂಶವೆಂಬ ಒಂದು ಪ್ರಕರಣವನ್ನೇ ತೆರೆದಿದ್ದಾನೆ. ೪೯ ಸೂತ್ರಗಳಲ್ಲಿ ಪ್ರಯೋಗ ಪೂರ್ವಕವಾಗಿ ಸಂಸ್ಕಾರಗೊಂಡು ಬಂದ ಸಂಸ್ಕೃತದ ಭಾಷಾ ಶಬ್ದಗಳ ತದ್ಭವ ರೂಪದ ಎಲ್ಲ

ಮಗ್ಗಲುಗಳನ್ನು ವೀಕ್ಷಿಸಿ ವಿಶ್ಲೇಷಿಸಿದ್ದಾನೆ ಎಂದಿದ್ದಾರೆ. ಇದು ಕೇಶಿರಾಜನ ಮಹತ್ವದ ಕೊಡುಗೆಗಳಲ್ಲೊಂದು ಎಂಬುದು ಲೇಖಕರ ಅಭಿಪ್ರಾಯ.

ಸಮಾಸದಲ್ಲಿ ಸಂಧಿಕಾರ್ಯ ನಡೆಯಬೇಕು. ಗಮಕ ಸಮಾಸಕ್ಕೆ ಕೇಶಿರಾಜ ಕೊಟ್ಟಿರುವ ಉದಾಹರಣೆಗಳನ್ನು ಅವಲೋಕಿಸಿದರೆ ಯಾವ ಪದದಲ್ಲೂ ಸಂಧಿಕಾರ್ಯ ನಡೆದಂತೆ ತೋರುವುದಿಲ್ಲ. ಆದರೆ ಕೇಶಿರಾಜ ಕನ್ನಡದ ನಾಡಿ ಹಿಡಿದು ನುಡಿದಿದ್ದಾನೆ. ಕನ್ನಡದ ಜಾಯಮಾನಕ್ಕೆ ಹೊಂದುವ ಭಾಷಾ ವ್ಯವಸ್ಥೆಯನ್ನು ಅದರ ವೈಶಿಷ್ಟ್ಯವೆಂದು ಗುರುತಿಸಿದ್ದಾನೆ. ಆದ್ದರಿಂದಲೇ ಅದು ವಿಶಿಷ್ಟ ಸಮಾಸವೆನಿಸಿರುವುದು ಎನ್ನುವ ಸಾ.ಶಿ. ಮರುಳಯ್ಯನವರು ಈ ಸಮಾಸದ ಸೊಗಸಿಗೆ ಮಾರು ಹೋದಂತಿದೆ. ಇಂತಹ ಸುಭಗವೂ ಶ್ರುತಿಸಹ್ಯವೂ ಕನ್ನಡ ಭಾಷಾ ಜಾಯಮಾನಕ್ಕೆ ತುಂಬು ಹೊಂದಿಕೊಳ್ಳುವಂಥದೂ ಆದ ಗಮಕಸಮಾಸ ನಿಜಕ್ಕೂ ಕನ್ನಡದ ವೈಶಿಷ್ಟ್ಯವೆಂದು ಅಭಿಪ್ರಾಯಪಟ್ಟಿರುವುದನ್ನು ಇಲ್ಲಿ ಗಮನಿಸಬೇಕು. ಮರುಳಯ್ಯನವರು ಈ ವಿಷಯದಲ್ಲಿ ಕೇಶಿರಾಜನನ್ನು ಬಿಟ್ಟುಕೊಡುವುದಿಲ್ಲ.

ಕುಳ, ಕ್ಷಳಗಳಿಗೆ ಕನ್ನಡ ಭಾಷಾ ಸಂದರ್ಭದಲ್ಲಿ ಸ್ಥಾನಮಾನ ಮೌಲ್ಯಗಳನ್ನು ದೊರಕಿಸಿ ಕೊಡುವ ಪ್ರತಿಜ್ಞಾಬದ್ಧನಾದ ಕೇಶಿರಾಜ ಇವು ಕನ್ನಡದ ವೈಶಿಷ್ಟ್ಯಗಳೆಂದು ಕರೆದ. ಆದರೆ ಕುಳವೊಂದನ್ನು ಬಿಟ್ಟರೆ ಉಳಿದವೆರಡೂ ಕನ್ನಡಿಗರ ಸ್ವಂತ ಆಸ್ತಿಗಳಲ್ಲ. ಎಲ್ಲ ದ್ರಾವಿಡ ಭಾಷೆಗಳಲ್ಲೂ ಱ ಟ ಮತ್ತು ಕುಳಗಳಿವೆ. ಆದ್ದರಿಂದ ಅವು ಕನ್ನಡದಲ್ಲಿ ವೈಶಿಷ್ಟ್ಯಗಳೆನಿಸುವುದಿಲ್ಲ.

ಕ್ಷಳ ಇದು ಕೇಶಿರಾಜನ ಸ್ವಂತ ಸಂಶೋಧನೆ, ಮೊದಲ ಕನ್ನಡದಲ್ಲಿ ಕುಳ 'ಳ' ಕಾರವಿದೆ. ಇದರ ಮೇಲೆ ಮತ್ತೊಂದು ಕ್ಷಳ 'ಳ' ಕಾರವನ್ನು ಹೇರಿರುವುದು ಕನ್ನಡಮ್ಮನಿಗೆ 'ತಲೆಶಿರೋಭಾರ' ಎಂದು ಮರುಳಯ್ಯನವರ ಅನಿಸಿಕೆ. ಅವರ ಅಭಿಪ್ರಾಯದಂತೆ ಕ್ಷಳ ಕನ್ನಡದ ವಿಶಿಷ್ಟ ವರ್ಣವೇ ಆಗಿದ್ದರೂ ಮಹತ್ವದ್ದನ್ನೇನ್ನೂ ಸಾಧಿಸದ ಉಪರಿವರ್ಣ. ಅಷ್ಟು ಅಗತ್ಯವಿಲ್ಲ.

ವಿರಹಿತಾವ್ಯಯ ಸಂಸ್ಕೃತದ ಲಿಂಗ ವಿಚಾರವೂ ಅಷ್ಟೇ. ಕೇಶಿರಾಜ ಪಾದ ಪೂರ್ಣಕ್ಕಾಗಿ ಆ ವಿಚಾರ ಪ್ರಸ್ತಾಪಿಸಿದಂತಿದೆ. ಇದರಲ್ಲಿ ಯಾವ ವೈಶಿಷ್ಟ್ಯವು ಕಾಣಿಸದು ಎಂದಿದ್ದಾರೆ. ಇನ್ನು ಶಿಥಿಲದ್ವಿತ್ವ ಉಚ್ಚಾರಣಾ ಸೌಲಭ್ಯದ ದೃಷ್ಟಿಯಿಂದ ಕೆಲಮಟ್ಟಿನ ಮಹತ್ವ ಪಡೆದುಕೊಳ್ಳುತ್ತದೆ ಎನ್ನಬಹುದು.

ಕೇಶಿರಾಜ ಕನ್ನಡದ ವೈಶಿಷ್ಟ್ಯಗಳನ್ನು ಎತ್ತಿ ಹಿಡಿದಿದ್ದಾನೆ. ಅವನು ಹೇಳದೆ ಇದ್ದರೂ ಇರುವುದು ಇನ್ನೆಷ್ಟೋ ವೈಶಿಷ್ಟ್ಯಗಳಿವೆ ಎಂಬ ಮಾತು ಸತ್ಯ. ಸ್ಥೂಲವಾಗಿ ಸಂಸ್ಕೃತದ ಕೆಲವು ಅಂಶಗಳೊಡನೆ ಹೋಲಿಸಿ ನೋಡಿದಾಗ ಕನ್ನಡದ ಭಿನ್ನತೆ ವೇದ್ಯವಾಗಿ ಅವು ಕನ್ನಡದ ವೈಶಿಷ್ಟ್ಯ ಎಂದು ಗುರುತಿಸಲಾಯಿತು. ಅದೇ ರೀತಿ 'ತಮಿಳು' ಮೊದಲಾದ ದ್ರಾವಿಡ ಭಾಷೆಗಳೊಡನೆ ಹೋಲಿಸಿ ನೋಡಿದಾಗ ಮೇಲು

ನೋಟಕ್ಕೆ ಕಾಣುವ ಕೆಲವು ವೈಶಿಷ್ಟ್ಯಗಳು ಕನ್ನಡದಲ್ಲಿವೆ. ಇವು ತೆಲುಗಿನ ವೈಶಿಷ್ಟ್ಯಗಳೂ ಹೌದು. ಆದರೆ ತಮಿಳು ತುಳು ಮೊದಲಾದ ಭಾಷೆಗಳಲ್ಲೂ ಮೂಲ ದ್ರಾವಿಡದ ಮೂಲರೂಪವೇ ಇರುವುದು ವೇದ್ಯ ಎಂದು ನುಡಿಯುತ್ತ ಇ ಉ ಒ ಪರಿವರ್ತನೆ, ಘೋಷ ಧ್ವನಿಗಳು, ತಾಲವ್ಯೀಕರಣ ಇತ್ಯಾದಿ ಅಂಶಗಳನ್ನು ವಿವರಿಸಿದ್ದಾರೆ. ಜೊತೆಗೆ 'ಇಸ್' ಇದು ಕನ್ನಡದಲ್ಲಿ ಉಪಧ್ವನಿಮಾ. ಆದರೆ ಮಲೆಯಾಳಂ ಮತ್ತು ತುಳುಗಳಲ್ಲಿ ಪ್ರಧಾನ ಧ್ವನಿಮಾ ಆಗಿರುವುದನ್ನು ಗುರುತಿಸಿದ್ದಾರೆ. ಹೀಗೆ ಇಂಥವೆನಿತೋ ವೈಶಿಷ್ಟ್ಯಗಳಿವೆ ಕನ್ನಡದಲ್ಲಿ ಎಂದಿದ್ದಾರೆ.

ಒಂಬತ್ತನೇ ಹಾಗೂ ಕೊನೆಯ ಲೇಖನ ಲಕ್ಷ್ಯ ಪದ್ಯಗಳನ್ನು ಕುರಿತದ್ದು. ಪ್ರಯೋಗ ಶರಣನಾದ ಕೇಶಿರಾಜ ತನ್ನ ಸಿದ್ಧಾಂತಕ್ಕೆ ಸಮರ್ಥನೆಯಾಗಿ ಸಾಂದರ್ಭಿಕ ಉದಾಹರಣೆಗಳನ್ನು ತನ್ನ ಸಮಕಾಲೀನ ಹಾಗೂ ಪ್ರಾಚೀನ ಕವಿ ಪ್ರಯೋಗಗಳಿಂದ ಸ್ವಕಪೋಲ ಕಲ್ಪಿತವಾಗಿ ಕೊಟ್ಟಿದ್ದಾನೆ. 'ಅಸಗನಗುಣನಂದಿಯ...............' ಈ ಪದ್ಯದಲ್ಲಿ ಕೇಶಿರಾಜ ಕೆಲವರನ್ನು ಹೆಸರಿಸಿದ್ದಾನೆ. ಅವರನ್ನು ಬಿಟ್ಟು ಹಲವರು ಇವನಿಗೆ ಆಕರವಾಗಿದ್ದಾರೆ. ಕ್ರಿ. ಶ. ೯ ರಿಂದ ೧೨ನೇ ಶತಮಾನದವರೆಗಿನ ಪ್ರಬುದ್ಧ ಕವಿಗಳು ಅವನಿಗೆ ಆಕರವಾಗಿದ್ದಾರೆ. ಪ್ರಸ್ತುತ ಲೇಖನದಲ್ಲಿ ಸಾ.ಶಿ. ಮರುಳಯ್ಯನವರು ಮತ್ತು ಶಾಲಿನಿ ಪ್ರಭು ಕೇಶಿರಾಜನ ಪ್ರಯೋಗಗಳು ಮತ್ತು ಅವುಗಳ ಆಕರಗಳ ಬಗ್ಗೆ ಲಭ್ಯವಿರುವ ಮಾಹಿತಿಯನ್ನು ಒದಗಿಸಿ ಕೊಟ್ಟಿದ್ದಾರೆ. ಪ್ರತಿಯೊಂದು ಸೂತ್ರ, ಪ್ರಯೋಗ, ಆಕರ ಛಂದಸ್ಸು, ಈ ತಲೆಬರಹಗಳಲ್ಲಿ ಮಾಹಿತಿ ಒದಗಿಸಿದ್ದಾರೆ. ಇಷ್ಟಿದ್ದರೂ ಕೆಲವು ಪದ್ಯಗಳ ಆಕರ ಇನ್ನೂ ತಿಳಿಯದು.

ಹೀಗೆ ಸಾ.ಶಿ. ಮರುಳಯ್ಯನವರ ಅನೇಕ ವರ್ಷಗಳ ಕೇಶಿರಾಜನ ಅಧ್ಯಯನ, ಅಧ್ಯಾಪನದ ಅನುಭವಗಳು, ಸಾಮಾನ್ಯ ವಿದ್ಯಾರ್ಥಿಗೂ ಅರಿವಾಗುವ ಸರಳ, ಸ್ಪಷ್ಟ ಆದರೆ, ಆಕರ್ಷಕ ಭಾಷೆಯಲ್ಲಿ ಇಲ್ಲಿಯ ಲೇಖನಗಳಲ್ಲಿ ಹಿಡಿದಿಡಲ್ಪಟ್ಟಿರುವುದನ್ನು ಗಮನಿಸಬಹುದು.

'ಕನ್ನಡ ಭಾಷೆಯ ಚರಿತ್ರೆ', ಸಾ.ಶಿ. ಮರುಳಯ್ಯನವರು ಭಾಷಾ ವಿಜ್ಞಾನ ವಿಷಯದಲ್ಲಿ ಪಡೆದಿರುವ ಆಳವಾದ ಜ್ಞಾನದ, ವ್ಯಾಪಕವಾದ ತಿಳುವಳಿಕೆಯ ಒಂದು ಫಲವೆಂದು ಹೇಳಬಹುದು. ಇದರಲ್ಲಿ ಮೂರು ಮುಖ್ಯ ಭಾಗಗಳನ್ನು ಮಾಡಿಕೊಳ್ಳಲಾಗಿದೆ. ಮೊದಲ ಭಾಗ, ಭಾಷೆಯನ್ನು ಕುರಿತ ಸಾಮಾನ್ಯ ಜ್ಞಾನವನ್ನು , ಎರಡನೆಯ ಭಾಗ ದ್ರಾವಿಡ ಭಾಷೆಯ ಬಗ್ಗೆ ಸ್ಥೂಲ ಮಾಹಿತಿಯನ್ನು ನೀಡುತ್ತದೆ. ಮೂರನೆಯ ಭಾಗದಲ್ಲಿ ಕನ್ನಡ ಭಾಷೆಯನ್ನು ಕುರಿತು ವ್ಯಾಪಕ ವಿವೇಚನೆ ಇದೆ. ಜಗತ್ತಿನ ಪ್ರಮುಖ ಭಾಷೆಗಳ ಪರಿವಾರಗಳಲ್ಲಿ ದ್ರಾವಿಡವೂ ಒಂದಾಗಿದ್ದು ಕನ್ನಡ, ಆ ಗುಂಪಿನ ಒಂದು ಮುಖ್ಯ ಭಾಷೆಯಾಗಿದೆ. ಹೀಗೆ ಮೇಲಿನ ಮೂರು ಭಾಗಗಳೂ ಪರಸ್ಪರ ಪೂರಕ ಸಂಬಂಧವನ್ನು ಹೊಂದಿವೆ. ಇದರಿಂದ ಕನ್ನಡ ಭಾಷೆಯನ್ನು ಸಮಗ್ರವಾಗಿ ಅರಿಯಲು ಸಾಧ್ಯವಾಗುತ್ತದೆ.

ಸಾ.ಶಿ. ಯವರು ಮೊದಲಿಗೆ ಭಾಷೆ ಎಂದರೇನು ? ಎಂಬ ಪ್ರಶ್ನೆಯನ್ನು ಎತ್ತಿಕೊಂಡು ಮೂಲತಃ ಭಾಷೆ ಎನ್ನುವುದು ಒಂದು ಶಬ್ದ ವ್ಯಾಪಾರ, ಧ್ವನಿ ಸಂಕೇತಗಳ ಮೊತ್ತ, ಅದೊಂದು ಶ್ರೇಷ್ಠ ಅಭಿವ್ಯಕ್ತಿ ಮಾಧ್ಯಮ, ಮುಂತಾಗಿ ವಿವರಣೆ ನೀಡಿದ್ದಾರೆ. ಭಾಷೆಯ ಬಾಹ್ಯ ಸ್ವರೂಪವನ್ನು ಸಮಗ್ರವಾಗಿ ಅರಿಯಲು ಸಾಧ್ಯವಿಲ್ಲ, ಅದರ ಅಂತರ್ಯ ನಿಗೂಢವಾಗಿದೆ ಎಂಬ ಅರಿವೂ ಅವರಿಗಿದೆ. ಧ್ವನ್ಯಂಗಗಳ ನೆರವಿನಿಂದ ಪ್ರಕಟವಾಗುವ ಧ್ವನಿ ಸಂಕೇತಗಳ ಸಮುದಾಯದ ಭಾಷೆಯನ್ನು ಕುರಿತು ವಿವಿಧ ವಿದ್ವಾಂಸರು ನೀಡಿರುವ ವ್ಯಾಖ್ಯೆಗಳನ್ನು ಅವರು ಚರ್ಚೆಗೆ ಎತ್ತಿಕೊಳ್ಳುತ್ತಾರೆ. ಸ್ವಾರಸ್ಯಕರವಾಗಿ ವಿದ್ವಾಂಸರ ಧೋರಣೆಗಳನ್ನು ವಿವರಿಸುತ್ತಾರೆ. ಸಾ.ಶಿ. ಮರುಳಯ್ಯನವರು ವಿಷಯವನ್ನು ವಿವರಿಸುವ ರೀತಿ, ಸರಳವೂ ಆಕರ್ಷಕವೂ ಆದುದು. ನಿರೂಪಣೆಯಲ್ಲಿ ಎಲ್ಲಿಯೂ ಸಂದಿಗ್ಧತೆಯನ್ನು ಅವರು ಉಳಿಯಗೊಡುವುದಿಲ್ಲ. ಬ್ಲಾಕ್ ಮತ್ತು ಟ್ಯಾಗರ್‌ರ ವ್ಯಾಖ್ಯೆ ಸರಳವೂ ಸಂಕ್ಷಿಪ್ತವೂ ಆಗಿದ್ದು ಹೆಚ್ಚು ಜನಮನ್ನಣೆಯನ್ನು ಪಡೆದುಕೊಂಡಿದೆ. ಆ ವ್ಯಾಖ್ಯೆಯ ಮೊದಲ ಭಾಗ, ಭಾಷೆಯ ರೂಪವನ್ನು ವರ್ಣಿಸಿದರೆ, ಎರಡನೇ ಭಾಗ ಭಾಷೆಯ ಕಾರ್ಯವನ್ನು ತಿಳಿಸುವುದನ್ನು ಅವರು ಬಹು ಚೆನ್ನಾಗಿ ವಿವರಿಸುತ್ತಾರೆ.

ಭಾಷೆಯ ಸ್ವರೂಪ ಮತ್ತು ಸಾಮರ್ಥ್ಯವನ್ನು ಕುರಿತು ಬರೆಯುತ್ತ, ಭಾಷೆ ಮಾನವನ ಅತ್ಯಮೂಲ್ಯ ಸಿದ್ಧಿಗಳಲ್ಲಿ ಒಂದು. ಅದು ದೈವನಿರ್ಮಿತಿ ಅಲ್ಲ, ಮಾನವಸೃಷ್ಟಿ ಎಂದು ಪ್ರತಿಪಾದಿಸುವುದರ ಜೊತೆಗೆ, ಭಾಷೆ ಕಲಿತಕ್ರಿಯೆ, ಅನುವಂಶಿಕ, ಅಷ್ಟೇ ಪರಿಸರ ಜನ್ಯ, ದ್ವಿವಿಧತೆ, ಉತ್ಪಾದಕತೆ, ಯಾದೃಚ್ಛಿಕತೆ, ವಿಶಿಷ್ಟ ಪ್ರಾವೀಣ್ಯ, ವಿನಿಮಯಗುಣ, ಸ್ಥಾನಪಲ್ಲಟತೆ, ಸಂಸ್ಕೃತಿ ವಾಹಕತೆ ಹೀಗೆ ಮಾನವನ ಭಾಷೆಯಲ್ಲಿ ಇತರ ಪ್ರಾಣಿ ಭಾಷೆಗಿಂತ ಭಿನ್ನವಾದ ಏಳು ವೈಶಿಷ್ಟ್ಯಗಳು ಇರುವುದನ್ನು ಹಾಕೆಟ್ ಗುರುತಿಸಿದ್ದಾರೆ. ಅವುಗಳ ವಿವರ ಸೂಕ್ತವಾದ ರೀತಿಯಲ್ಲಿ ಈ ಲೇಖನದಲ್ಲಿ ಬಂದಿದೆ. ಮಾನವ ಮಾನವನಾದದ್ದೇ ಮಾತಿನಿಂದ, ಅವನ ಜೀವನದಲ್ಲಿ ಭಾಷೆ ವಹಿಸುವ ಪಾತ್ರ ಅತ್ಯಂತ ಮಹತ್ವದ್ದು ಎನ್ನುತ್ತಾ ಭಾಷೆ ಮೂಲತಃ ಒಂದು ಪ್ರಮುಖ ಸಾಮಾಜಿಕ ಕ್ರಿಯೆ ಎನ್ನುವುದನ್ನು ಹೆಚ್ಚು ಒತ್ತು ಕೊಟ್ಟು ವಿವರಿಸುವುದನ್ನು ಇಲ್ಲಿ ಕಾಣುತ್ತೇವೆ.

ಪ್ರಪಂಚದಲ್ಲಿ ಸುಮಾರು ಮೂರು ಸಾವಿರಕ್ಕೂ ಮಿಕ್ಕು ಭಾಷೆಗಳು ಇವೆ ಎಂದು ಭಾಷಾ ವಿಜ್ಞಾನಿಗಳು ಊಹಿಸಿದ್ದಾರೆ. ಇವುಗಳನ್ನು ಭೌಗೋಳಿಕವಾಗಿ, ಜನಾಂಗಿಕವಾಗಿ, ರಾಚನಿಕವಾಗಿ, ಮತ್ತು ವಾಂಶಿಕವಾಗಿ ಭಾಷಾವಿಜ್ಞಾನಿಗಳು ವರ್ಗೀಕರಿಸಿದ್ದಾರೆ. ಸಾ.ಶಿ. ಮರುಳಯ್ಯನವರು ಪ್ರತಿಯೊಂದು ವರ್ಗೀಕರಣವನ್ನು ಇಟ್ಟುಕೊಂಡು ಅವುಗಳ ಗುಣ-ದೋಷಗಳನ್ನು ವಿವರಿಸುವ ಪ್ರಯತ್ನ ಮಾಡಿದ್ದಾರೆ. ಒಂದೇ ಪ್ರದೇಶದಲ್ಲಿ ಭಿನ್ನ ಮೂಲಗಳ ಭಾಷೆಗಳಿರುವ ಸಾಧ್ಯತೆ ಇರುವುದರಿಂದ ಭೌಗೋಳಿಕ ವರ್ಗೀಕರಣವು ಅಸಮರ್ಪಕವಾಗುತ್ತದೆ. ಅದೇ ರೀತಿ ಜನಾಂಗಿಕ ವರ್ಗೀಕರಣದಲ್ಲೂ ವಲಸೆ ಹೋದ ಜನ ತಮ್ಮ ಮೂಲಭಾಷೆಯನ್ನು

ಮರೆಯಬಹುದು. ಅಥವಾ ಅನ್ಯಭಾಷಾ ಪ್ರಭಾವಕ್ಕೆ ಒಳಗಾಗಿ ಒಂದು ಜನಾಂಗ ತನ್ನ ಮೂಲಭಾಷೆಯನ್ನು ಮರೆಯುವ ಸಾಧ್ಯತೆ ಇರುವುದರಿಂದ ಜನಾಂಗಿಕ ಅಧ್ಯಯನವೂ ಸಮರ್ಪಕವೆನ್ನಿಸಲಾರದು ಎಂದಿದ್ದಾರೆ. ಪ್ರಾರೂಪಕ ವರ್ಗೀಕರಣದಲ್ಲಿ ಐದು ಬಗೆಗಳನ್ನು ವಿದ್ವಾಂಸರು ಗುರುತಿಸಿದ್ದರೂ ಒಂದು ಭಾಷೆಯ ರಚನಾಕ್ರಮ ಮತ್ತೊಂದು ವರ್ಗದ ಭಾಷೆಯಲ್ಲಿ ಕಾಣಿಸಿಕೊಳ್ಳಲು ಸಾಧ್ಯವಿದೆ. ಆದ್ದರಿಂದ ಪ್ರಾರೂಪಕ ವರ್ಗೀಕರಣವೂ ದೋಷಮುಕ್ತವಾಗುವುದಿಲ್ಲ. ಇನ್ನು, ಕೊನೆಯದಾದ ವಾಂಶಿಕ ವರ್ಗೀಕರಣವು ಹೆಚ್ಚು ಸಮರ್ಪಕವಾದುದು ಮತ್ತು ಬಹುಜನ ಸ್ವೀಕೃತವಾದುದು ಎನ್ನುತ್ತಾರೆ. ಒಂದೇ ಭಾಷಾ ಪರಿವಾರಕ್ಕೆ ಸೇರಿದ ಭಾಷೆಗಳು ಬೇರೆ ಬೇರೆ ಕಡೆಗಳಲ್ಲಿ ಬೇರೆ ಬೇರೆ ರೂಪುತಳೆದಿದ್ದರೂ ಅವುಗಳಲ್ಲಿ ಬಾಹ್ಯ ಮತ್ತು ಆಂತರಿಕ ಸಾಮ್ಯತೆ ಇದ್ದೇ ಇರುತ್ತದೆ. ಅವುಗಳ ಆಧಾರದ ಮೇಲೆ ವಿದ್ವಾಂಸರು ಜಗತ್ತಿನಲ್ಲಿ ಸುಮಾರು ಮೂವತ್ತೈದು ಭಾಷಾ ಪರಿವಾರಗಳನ್ನು ಗುರುತಿಸಿದ್ದಾರೆ. ಅವುಗಳಲ್ಲಿ ಕೆಲವು ಮಹತ್ವದ ಭಾಷಾ ವರ್ಗದ ಪರಿಚಯ ಇಲ್ಲಿ ಕೊಡಲಾಗಿದೆ.

ಎರಡನೇ ಭಾಗ, ದ್ರಾವಿಡ ಭಾಷೆಗಳ ಕುರಿತಿದೆ. ಭಾರತದಲ್ಲಿ ಇಂಡೋ ಆರ್ಯನ್, ಆಸ್ಟ್ರೋ ಏಷ್ಯಾಟಿಕ್, ಟಿಬೆಟೋ ಬರ್ಮನ್, ದ್ರಾವಿಡ ಮತ್ತು ಯಾವ ವರ್ಗಕ್ಕೂ ಸೇರದ ಅವರ್ಗೀಕೃತ ಭಾಷೆಗಳ ಗುಂಪು ಇದ್ದು ಇವುಗಳಲ್ಲಿ ಇಂಡೋ ಆರ್ಯನ್ ಬಿಟ್ಟರೆ, ಎರಡನೇ ದೊಡ್ಡ ಗುಂಪೇ 'ದ್ರಾವಿಡ'. ಇದು ಆರ್ಯರು ಕೊಟ್ಟ ಹೆಸರು ಎನ್ನುವ ಮರುಳಸಿದ್ಧಯ್ಯನವರು ಇದು ಮೂಲತಃ ಸಂಸ್ಕೃತ ಶಬ್ದವೆನ್ನುತ್ತಾರೆ. ತಿರಮಿಡ - ತಿರವಿಡ - ದ್ರಮಿಡ - ದ್ರವಿಡ - ದ್ರಾವಿಡ ಆಗಿರಬಹುದು ಎನ್ನುತ್ತಾರೆ ಭಾಷಾ ವಿಜ್ಞಾನಿಗಳು. ಮೊದಲು ಸಿಂಧೂನದಿಯ ಬಯಲಿನಲ್ಲಿ ವಾಸವಾಗಿದ್ದ ದ್ರಾವಿಡರು ಜನಸಂಖ್ಯೆ ಹೆಚ್ಚಿದಂತೆ, ಉತ್ತರದಿಂದ ದಕ್ಷಿಣದಕಡೆಗೆ ವಲಸೆ ಬಂದರು. ಮೂಲಭಾಷೆ ಹಲವು ಉಪಭಾಷೆಗಳಾಗಿ ಒಡೆಯಿತು. ಆ ಉಪಭಾಷೆಗಳೇ ಕಾಲಕ್ರಮೇಣ ಸ್ವತಂತ್ರ ಭಾಷೆಗಳಾದವು. ಈ ದ್ರಾವಿಡ ಭಾಷೆಗಳು ಸುಮಾರು ೭೫ ರಷ್ಟಿವೆ. ಇವುಗಳಲ್ಲಿ 'ಬ್ರಾಹೂಈ' ಒಂದು ಮಾತ್ರ ಪಾಕಿಸ್ಥಾನದಲ್ಲಿದೆ. ಕನ್ನಡ, ತೆಲುಗು, ತಮಿಳು, ಮುಂತಾಗಿ ೨೫ ಭಾಷೆಗಳು ಮುಖ್ಯಪಟ್ಟಿಯಲ್ಲಿದ್ದರೆ, ಕಸಬ, ಜೇನುಕುರುಬ, ಬಳ್ಳಾರಿ ಮುಂತಾಗಿ ಐದು ಉಪಭಾಷೆಗಳ ಪಟ್ಟಿಯಲ್ಲಿವೆ.

ಒಟ್ಟು ದ್ರಾವಿಡ ಭಾಷೆಯಲ್ಲಿ ಕನ್ನಡ, ತೆಲುಗು, ತಮಿಳು ಮತ್ತು ಮಲೆಯಾಳಂ ಈ ನಾಲ್ಕು ಗ್ರಂಥಸ್ಥ ಭಾಷೆಗಳಾಗಿವೆ. ಉಳಿದವಕ್ಕೆ ಲಿಪಿ ಇಲ್ಲ, ದ್ರಾವಿಡ ಭಾಷೆಗಳನ್ನು ಅಧ್ಯಯನದ ಅನುಕೂಲಕ್ಕಾಗಿ ಉತ್ತರ ದ್ರಾವಿಡ, ಮಧ್ಯ ದ್ರಾವಿಡ ಮತ್ತು ದಕ್ಷಿಣ ದ್ರಾವಿಡ ಎಂದು ಮೂರು ಗುಂಪುಗಳಾಗಿ ವಿಭಜಿಸಲಾಗಿದೆ. ಬ್ರಾಹೂಈ, ಮಲ್ತೊ, ಮತ್ತು ಕುರುಖ಼ - ಇವು ಉತ್ತರ ದ್ರಾವಿಡ ಗುಂಪಿಗೆ ಸೇರುತ್ತವೆ. ಮಧ್ಯದ್ರಾವಿಡ ಭಾಷಾ ಗುಂಪು ಅತಿದೊಡ್ಡದಿದ್ದು , ತೆಲುಗು, ಕುಲಾಮಿ, ನಾಯಕಿ, ಪಿಂಗೋ, ಮುಂತಾದ ಭಾಷೆಗಳು ಈ ಗುಂಪಿಗೆ ಸೇರುತ್ತವೆ. ದಕ್ಷಿಣ ದ್ರಾವಿಡ ಗುಂಪಿಗೆ ಕನ್ನಡ,

ತಮಿಳು, ಮಲೆಯಾಳಂ, ತುಳು, ಕೊಡಗು, ತೊದ ಮುಂತಾಗಿ ಒಂಬತ್ತು ಪ್ರಮುಖ ಭಾಷೆಗಳೂ ಅವುಗಳ ಉಪಭಾಷೆಗಳೂ ಸೇರುತ್ತವೆ.

ಈ ವಿವರಣೆಗಳ ಜೊತೆಗೆ ಮೂರು ಗುಂಪಿನ ಭಾಷೆಗಳನ್ನು ಕುರಿತಂತೆ ಇದುವರೆಗೆ ಆದ ಮಹತ್ವದ ಅಧ್ಯಯನಗಳನ್ನು ತಿಳಿರುವುದು ಉಪಯುಕ್ತವೆನ್ನಿಸುತ್ತದೆ. ದ್ರಾವಿಡ ಭಾಷೆಗಳನ್ನು ಕುರಿತಂತೆ ಈ ಬಗೆಯ ಆವಶ್ಯಕ ಮಾಹಿತಿಗಳನ್ನು ಒದಗಿಸುವುದೊಂದಿಗೆ, ದ್ರಾವಿಡ ಭಾಷೆಗಳ ವೈಶಿಷ್ಟ್ಯಗಳನ್ನು ಕುರಿತು ಚರ್ಚಿಸಿರುವುದು ಹೆಚ್ಚು ಪ್ರಯೋಜನಕಾರಿಯಾಗಿದೆ.

ದ್ರಾವಿಡ ಭಾಷೆ ತನ್ನದೇ ಆದ ಹಲವು ವೈಲಕ್ಷಣಗಳನ್ನು ಹೊಂದಿದೆ. ಇವು ದ್ರಾವಿಡ ಸೋದರ ಭಾಷೆಗಳೊಡನೆ ಹೋಲಿಸಿದಾಗ ಸಾಮಾನ್ಯ ಲಕ್ಷಣಗಳೆನ್ನಿಸಿದರೆ, ಇಂಡೋ ಯೂರೋಪಿಯನ್ ಭಾಷಾ ಪರಿವಾರಗಳೊಂದಿಗೆ ಹೋಲಿಸಿದಾಗ ಅಸಾಮಾನ್ಯ ಹಾಗೂ ವಿಶಿಷ್ಟ ಗುಣಗಳಾಗಿ ಗೋಚರಿಸುತ್ತವೆ ಎಂಬ ಅರಿವಿನ ಹಿನ್ನಲೆಯಲ್ಲಿ , ಲೇಖಕರು ದ್ರಾವಿಡ ಭಾಷೆಗಳ ಸಾಮಾನ್ಯ ವೈಶಿಷ್ಟ್ಯಗಳನ್ನು ಧ್ವನಿಮಾ, ಆಕೃತಿಮಾ ಮತ್ತು ವಾಕ್ಯರಚನೆ ಈ ಮೂರೂ ಹಂತಗಳಲ್ಲಿ ಗುರುತಿಸಿದ್ದಾರೆ. ಧ್ವನಿಮಾ ವ್ಯವಸ್ಥೆಯಲ್ಲಿ ದ್ರಾವಿಡ ಧ್ವನಿಮಾಗಳ ಸ್ವರೂಪ, ಇ ಎ, ಉ ಒ, ಸ್ವರ ಪರಿವರ್ತನೆಗಳು, ತಾಲವ್ಯೀಕರಣ, ಚ ಸ ಪರಿವರ್ತನೆ, ಇತ್ಯಾದಿ ಕೆಲವು ಮಹತ್ವದ ಲಕ್ಷಣಗಳನ್ನು ಗುರುತಿಸಿದ್ದಾರೆ. ಅದೇ ರೀತಿ ದ್ರಾವಿಡ ಲಿಂಗವಿವಕ್ಷೆ, ವಚನವ್ಯವಸ್ಥೆ , ವಿಭಕ್ತಿ ಪ್ರತ್ಯಯಗಳು, ಸರ್ವನಾಮಗಳು, ಗುಣವಚನ, ಸಂಖ್ಯಾವಾಚಿಗಳು, ಕ್ರಿಯಾ ಪದಗಳು, ಕಾಲವಾಚಿಗಳು, ನಿಷೇಧಾರ್ಥಕಗಳು ಮುಂತಾದ ಅಂಶಗಳ ಸ್ವರೂಪ ಲಕ್ಷಣಗಳನ್ನು ವಿವೇಚಿಸಿ, ಸಂಸ್ಕೃತಕ್ಕಿಂತ ಅವು ಭಿನ್ನವೆಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಅನುಕ್ರಮವೇ ಸಹಜವಾದುದು ಎಂದು ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ.

ಗ್ರಂಥದ ಮೂರನೇ ಭಾಗ, ಕರ್ನಾಟಕ ನಾಡು-ನುಡಿಗೆ ಸಂಬಂಧಿಸಿದೆ. ಕರ್ನಾಟಕ ಶಬ್ದ ಕರುನಾಡು (ಉತ್ತರದ ಪ್ರದೇಶ) ದಿಂದ ಬಂದಿರಬೇಕು. ಈ ವಿಷಯದಲ್ಲಿ ಪ್ರದೇಶವಾಚಿ ವಿವಕ್ಷೆ ಅರ್ಥಪೂರ್ಣವೆಂದು ಸಾ. ಶಿ. ಮರುಳಯ್ಯನವರು ಅಭಿಪ್ರಾಯ ಪಡುತ್ತಾರೆ. ಕಾಲಗತಿಯಲ್ಲಿ ಕರ್ನಾಡ ಕರ್ಣಾಟ ಎಂದು ಸಂಸ್ಕೃತೀಕರಣವಾಯಿತೆಂದು ಊಹಿಸುವ ಅವರು 'ಎತ್ತರದ ನೆಲ' ಕರುನಾಡು, ಅಲ್ಲಿನ ಜನ ಕರುನಾಡವರು, ಅವರಾಡುವ ಭಾಷೆ ಕನ್ನಡ ಎಂದಿದ್ದಾರೆ.

ಕನ್ನಡ ಇಂದು ರಾಜ್ಯಭಾಷೆ, ನಾಲ್ಕು ಕೋಟಿ ಕನ್ನಡಿಗರ ತಾಯ್ನುಡಿಯಾಗಿದೆ. ಕನ್ನಡದ ಪ್ರಾಚೀನತೆಯನ್ನು ನಿರ್ಧರಿಸಲು ಸಾಮಾನ್ಯವಾಗಿ ಬಳಸುವ ಆಕರಗಳಾದ ಅಶೋಕನ ಬ್ರಹ್ಮಗಿರಿ ಶಾಸನದ ಇಸಿಲ ಶಬ್ದ, ಶಾತವಾಹನರ ಶಾಸನ ಮತ್ತು ನಾಣ್ಯಗಳ ಮೇಲಿನ ಬರಹಗಳು, ಗ್ರೀಕ ಪ್ರಹಸನದಲ್ಲಿ ಗೋಚರಿಸುವ ಗ್ರೀಕೇತರ ಭಾಷಾ ಪದಗಳು. ಹಾಲರಾಜನ ಗಾಥಾಸಪ್ತಶತಿಯಲ್ಲಿರುವ ಕೆಲವು ಶಬ್ದಗಳು, ಟಾಲಮಿ

ಹೆಸರಿಸಿರುವ ಕೆಲವು ಕನ್ನಡದ ಸ್ಥಳ ನಾಮಗಳು ಮುಂತಾದವನ್ನು ಇಲ್ಲಿಯೂ ಉಲ್ಲೇಖಿಸಲಾಗಿದೆ. ಗೋವಿಂದ ಪೈಯವರ ವಾದವನ್ನು ವಿಶ್ಲೇಷಿಸಿದಂತೆ ಉಳಿದವನ್ನು ಒರೆಗೆ ಹಚ್ಚಿದ್ದರೆ ವಿದ್ಯಾರ್ಥಿಗಳಿಗೆ ವಿಶೇಷ ಪ್ರಯೋಜನವಾಗುತ್ತಿತ್ತು.

ಕನ್ನಡ ಭಾಷೆಯ ವೈಶಿಷ್ಟ್ಯವನ್ನು ವಿವರಿಸುವಾಗ ಮೂಲ ದ್ರಾವಿಡ ಸ್ವರ ಕನ್ನಡದಲ್ಲಿ ಇ ಎ, ಉ ಒ ಆಗಿ ಪರಿವರ್ತನೆಗೊಳ್ಳುವುದನ್ನು, 'ಇಶ್' ಕನ್ನಡದಲ್ಲಿ ಉಪಧ್ವನಿಮಾ ಆಗಿರುವುದನ್ನು, ತಾಲವ್ಯಿಕರಣ ಕನ್ನಡಕ್ಕೆ ಸ್ವಾಭಾವಿಕವಲ್ಲ ಎಂಬ ಮಾತನ್ನು, ಕೆಲವೆಡೆ ಚ ಜ ಪರಿವರ್ತನೆ ಹೊಂದಿರುವುದನ್ನು, ಕ್ಷಳದ ಬಳಕೆ, ಪ ಹ ಕಾರ ಪ್ರಕ್ರಿಯೆಗಳ ಜೊತೆಗೆ, ಕೇಶಿರಾಜನ ಅಸಾಧಾರಣ ಲಕ್ಷಣಗಳನ್ನು ವಿವೇಚಿಸಿದ್ದಾರೆ.

ಕನ್ನಡ ಭಾಷೆಯ ಅವಸ್ಥಾ ಭೇದಗಳನ್ನು ಕುರಿತು ಇದುವರೆಗೆ ವಿದ್ವಾಂಸರು ನಡೆಸಿರುವ ಚರ್ಚೆಯನ್ನು ವಿವೇಚಿಸುತ್ತ ಪೂರ್ವದ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಎಂದು ನಾಲ್ಕು ಭೇದಗಳನ್ನು ಒಪ್ಪಿಕೊಳ್ಳುತ್ತಾರೆ. ಕನ್ನಡ ಭಾಷೆಯ ಬೆಳವಣಿಗೆಯ ಘಟ್ಟದಲ್ಲಿ ನಾಲ್ಕು ಭಿನ್ನ ರೂಪಗಳನ್ನು ಗುರುತಿಸಲು ಸಾಧ್ಯ. ಆ ಹಂತಗಳ ಅವಧಿಯನ್ನು

ಕ್ರಿ. ಪೂ. ೫ ರಿಂದ ಕ್ರಿ. ಶ. ೬ನೇ ಶತಮಾನದವರೆಗೆ ಪೂರ್ವದ ಹಳಗನ್ನಡ

ಕ್ರಿ. ಶ. ೭ನೇ ಶತಮಾನದಿಂದ ೧೧ನೇ ಶತಮಾನದವರೆಗೆ ಹಳಗನ್ನಡ

ಕ್ರಿ. ಶ. ೧೨ನೇ ಶತಮಾನದಿಂದ ೧೬ನೇ ಶತಮಾನದವರೆಗೆ ನಡುಗನ್ನಡ

ಕ್ರಿ. ಶ. ೧೭ನೇ ಶತಮಾನದಿಂದ ಹೊಸಗನ್ನಡ

ಎಂದು ಸ್ಥೂಲವಾದ ವಿಭಜನೆಯನ್ನು ಗುರುತಿಸಿದ್ದಾರೆ ಮತ್ತು ಆ ಘಟ್ಟಗಳ ವಿವೇಚನೆಯ ಸಂದರ್ಭದಲ್ಲಿ ಸೂಕ್ತ ಉದಾಹರಣೆಗಳನ್ನು ಒದಗಿಸಿದ್ದಾರೆ. ಪ್ರಾಂತಭೇದಗಳ ವಿಷಯದಲ್ಲಿಯೂ ಸಾಕಷ್ಟು ಚರ್ಚೆ ಇದೆ. ವ್ಯಕ್ತಿ , ಭಾಷೆ, ಉಪಭಾಷೆಗಳನ್ನು ಕುರಿತ ವಿವರಣೆ, ಪ್ರಾದೇಶಿಕ ಅಥವಾ ಸಾಮಾಜಿಕ ಉಪಭಾಷೆಗಳ ವಿವೇಚನೆಯೊಂದಿಗೆ ಅವುಗಳ ಸ್ಥೂಲ ಸ್ವರೂಪ ವಿವರಣೆಯೂ ಕೊಡಲ್ಪಟ್ಟಿರುವುದರಿಂದ ಉಪಭಾಷೆಗಳ ಕಲ್ಪನೆ ಮತ್ತು ಕನ್ನಡದಲ್ಲಿ ಅವುಗಳ ಅಸ್ತಿತ್ವದ ಕಲ್ಪನೆ ಓದುಗರಿಗೆ ನಿಚ್ಚಳವಾಗಿ ದೊರೆಯುವಂತೆ ಆಗಿದೆ.

ಭಾಷೆಯ ಬೆಳವಣಿಗೆಗೆ ಕಾರಣಗಳನ್ನು ಗುರುತಿಸುತ್ತ ಕನ್ನಡ ಭಾಷೆಯ ಬದಲಾವಣೆ ಅಥವಾ ಬೆಳವಣಿಗೆಯಲ್ಲಿ ಅವುಗಳ ಪಾತ್ರವನ್ನು ವಿವೇಚಿಸಲಾಗಿದೆ. ಆಂತರಿಕ ಮತ್ತು ಬಾಹ್ಯ ಕಾರಣಗಳನ್ನು ಗುರುತಿಸಲಾಗಿದೆ.

ಕನ್ನಡ ಭಾಷೆ ಪ್ರಾಚೀನ ಕಾಲದಿಂದಲೂ ಸಂಸ್ಕೃತ, ಪ್ರಾಕೃತಗಳಿಂದ ಸಾಕಷ್ಟು

ಪದಗಳನ್ನು ಸ್ವೀಕರಿಸಿದೆ. ನಂತರದ ಕಾಲಘಟ್ಟದಲ್ಲಿ ಫಾರಸಿ, ಉರ್ದು, ಪೋರ್ತುಗೀಜ್, ಇಂಗ್ಲಿಷ್ ಮುಂತಾದ ಭಾಷೆಯ ಶಬ್ದಗಳನ್ನು ವ್ಯಾಪಾರ, ಆಡಳಿತ, ಶಿಕ್ಷಣ ಹಾಗೂ ಸಾಂಸ್ಕೃತಿಕವಾದ ಕೊಡುಕೊಳೆಗಳ ಹಿನ್ನೆಲೆಯಲ್ಲಿ ಪಡೆದುಕೊಂಡಿದೆ. ಅವುಗಳ ಸುದೀರ್ಘ ವಿವರಣೆ ಈ ಲೇಖನದಲ್ಲಿದೆ.

ಒಟ್ಟಿನಲ್ಲಿ ಕನ್ನಡ ಭಾಷಾ ಚರಿತ್ರೆಯನ್ನು ಓದುವ ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿಯನ್ನು ಒದಗಿಸುವ ಅಮೂಲ್ಯ ಗ್ರಂಥ ಇದು. ಗ್ರಂಥದ ಕೊನೆಯಲ್ಲಿ ಮಾದರಿ ಉತ್ತರಗಳನ್ನು ಹಾಗೂ ಕೆಲವು ಐಎಎಸ್ ಪ್ರಶ್ನೆ ಪತ್ರಿಕೆಗಳನ್ನು ಕೊಡಲಾಗಿದೆ. ಈ ಉತ್ತರಗಳನ್ನು ಐಎಎಸ್ ಮಾಡಿಕೊಂಡಿರುವ ಕೆ. ಶಿವರಾಮು ಸಿದ್ಧಪಡಿಸಿರುತ್ತಾರೆ.

ಡಾ॥ ಸಾ.ಶಿ. ಮರುಳಯ್ಯನವರ ಆತ್ಮೇತಿಹಾಸ ಅಥವಾ ಸ್ವವಿವರಗಳು

೧. ಪ್ರಥಮೇತಿಹಾಸ :

ಹೆಸರು	:	ಸಾ.ಶಿ. ಮರುಳಯ್ಯ
ಜನನ	:	೨೯, ಜನವರಿ ೧೯೩೧
ಜನ್ಮಸ್ಥಳ	:	ಸಾಸಲು, ಚಿಕ್ಕನಾಯಕನಹಳ್ಳಿ ತಾಲ್ಲೂಕು, ತುಮಕೂರು ಜಿಲ್ಲೆ
ತಂದೆ	:	ಶ್ರೀ ಶಿವರುದ್ರಯ್ಯನವರು, ಕೂಲಿಮಠದ ಓಚಯ್ಯಗಳು
ತಾಯಿ	:	ಶ್ರೀಮತಿ ಸಿದ್ಧಮ್ಮನವರು
ಹೆಂಡತಿ	:	ಶ್ರೀಮತಿ ವೀಣಾ
ಮಕ್ಕಳು	:	ಎಂ. ಶಿವಪ್ರಸಾದ್, ಎಂ.ಎ.,
		ಎಂ. ರಾಗಿಣಿ ಸಂಗಮೇಶ್ವರ್, ಎಂ.ಎಸ್‌ಸಿ., (ಕ್ಯಾಲಿಫೋರ್ನಿಯ)
		ಎಂ. ರವಿಪ್ರಸಾದ್, ಬಿ.ಇ., ಎಂ.ಎಸ್., (ಕ್ಯಾಲಿಫೋರ್ನಿಯ)

೨. ಅಧ್ಯಯನ :

ಬಿ.ಎ. (ಆನರ್ಸ್) ಮೈಸೂರು ವಿಶ್ವವಿದ್ಯಾಲಯ - ೧೯೫೫
ಎಂ.ಎ. ಮೈಸೂರು ವಿಶ್ವವಿದ್ಯಾಲಯ - ೧೯೫೬
ಪಿಎಚ್.ಡಿ. ಕರ್ನಾಟಕ ವಿಶ್ವವಿದ್ಯಾಲಯ - ೧೯೭೧

೩. ಅಧ್ಯಾಪನ :

ಕನ್ನಡ ಅಧ್ಯಾಪಕ	:	ಇಂಟರ್ ಮೀಡಿಯೇಟ್ ಕಾಲೇಜು ಚಾಮರಾಜನಗರ, ೧೯೫೫-೫೬
,,		ಪ್ರಥಮ ದರ್ಜೆ ಕಾಲೇಜು, ತುಮಕೂರು - ೧೯೫೬-೫೭
,,		ಧ.ರಾ.ಮ. ಕಾಲೇಜು, ದಾವಣಗೆರೆ - ೧೯೫೭-೬೧
,,		ಸಹ್ಯಾದ್ರಿ ಕಾಲೇಜು, ಶಿವಮೊಗ್ಗ - ೧೯೬೧-೬೯
,,		ಸರ್ಕಾರಿ ಕಲಾ ಕಾಲೇಜು, ಬೆಂಗಳೂರು - ೧೯೬೯-೭೩
ಕನ್ನಡ ರೀಡರ್	:	ಸರ್ಕಾರಿ ವಿಜ್ಞಾನ ಕಾಲೇಜು, ತುಮಕೂರು - ೧೯೭೩-೭೬
ಪ್ರಾಂಶುಪಾಲರು	:	ಕುವೆಂಪು ಮಹಾವಿದ್ಯಾಲಯ, ಚನ್ನಪಟ್ಟಣ - ೧೯೭೬-೭೯
ಸಂಪಾದಕ	:	ವಿಶ್ವಕೋಶದ ಪ್ರಧಾನ ಸಂಪಾದಕ ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು - ೧೯೭೯-೮೩

ಕನ್ನಡ ಪ್ರಧ್ಯಾಪಕ : ಪ್ರಾಶುಪಾಲರು
ಸರ್ಕಾರಿ ಕಾಲೇಜು, ಮಂಗಳೂರು - ೧೯೮೩-೮೪

ಸದಸ್ಯ : ರಾಜ್ಯಭಾಷಾ (ವಿಧಾಯೀ) ಆಯೋಗ
ಬೆಂಗಳೂರು - ೧೯೮೪-೮೯

೪. **ನಿವೃತ್ತಿ** : ೨೮ ಜನವರಿ ೧೯೮೯

೫. ***ಗುರುಪರಂಪರೆ*** : ರಾಷ್ಟ್ರಕವಿ ಕುವೆಂಪು, ಡಾ. ಡಿ.ಎಲ್. ನರಸಿಂಹಾಚಾರ್
ಪ್ರೊ. ದೇಜಗೌ, ಡಾ. ಎಸ್. ಶ್ರೀಕಂಠಶಾಸ್ತ್ರೀ
ಕಂ.ವೆ. ರಾಘವಾಚಾರ್, ತ.ಸು. ಶಾಮರಾಯ
ಪ್ರೊ. ಎಸ್.ವಿ. ಪರಮೇಶ್ವರಭಟ್ಟ, ಎಸ್.ವಿ. ರಂಗಣ್ಣ
ಡಾ. ಆರ್.ಸಿ. ಹಿರೇಮಠ - ಮೊದಲಾದವರು

೬. **ಸಾಹಿತ್ಯ ಸೃಷ್ಟಿ** :

೧.	ಶಿವತಾಂಡವ	ಕವನಸಂಕಲನ	೧೯೫೪
೨.	ಮರೀಬೇಡಿ	ಪ್ರಹಸನ	೧೯೬೧
೩.	ಕೆಂಗನಕಲ್ಲು (ರಾಜ್ಯಸರ್ಕಾರದ ಪ್ರಶಸ್ತಿ ಪಡೆದ ಕೃತಿ)	ಕವನ ಸಂಕಲನ	೧೯೬೨
೪.	ಭಾಸನ ಮಕ್ಕಳು (ದೇವರಾಜ ಬಹದ್ದೂರ್ ಪ್ರಶಸ್ತಿ ಪಡೆದ ಕೃತಿ)	ವಿಮರ್ಶೆ	೧೯೬೨
೫.	ವಿಭೂತಿ ಪುರುಷರು	ಜೀವನ ಚಿತ್ರಣ	೧೯೬೩
೬.	ಭಾರತ ರತ್ನ	ಜೀವನ ಚಿತ್ರಣ	೧೯೬೫
೭.	ಪುರುಷ ಸಿಂಹ	ಐತಿಹಾಸಿಕ ಕಾದಂಬರಿ	೧೯೬೬
೮.	ಹೇಮಕೂಟ	ಐತಿಹಾಸಿಕ ಕಾದಂಬರಿ	೧೯೬೬
೯.	ವಿಜಯವಾತಾಪಿ	ರಂಗನಾಟಕ	೧೯೬೬
೧೦.	ಶ್ರೀ ಮರುಳಸಿದ್ಧೇಶ್ವರ ಮಹಾಪುರಾಣಂ	ಕಾವ್ಯ (ಸಂ.)	೧೯೬೭
೧೧.	ಹರಿಹರನ ಹತ್ತು ರಗಳೆಗಳು	ಕಾವ್ಯ (ಸಂ.)	೧೯೭೨
೧೨.	ವಿಪರ್ಯಾಸ	ಕವನ ಸಂಕಲನ	೧೯೭೨
೧೩.	ಘೋಷವತಿ	ಕವನ ಸಂಕಲನ	೧೯೭೨
೧೪.	ಸ್ವಪ್ನವಾಸವದತ್ತ (ನಾಟಕ)	(ಭಾಷಾಂತರ)	೧೯೭೩

೧೫.	ನೆಲದ ಸೊಗಡು	ಸಣ್ಣಕತೆಗಳ ಸಂಕಲನ	೧೯೭೬
೧೬.	ಕೆಳದಿಯ ಅರಸರು ಮತ್ತು ಕನ್ನಡ ಸಾಹಿತ್ಯ	ಪಿಎಚ್.ಡಿ. ಮಹಾಪ್ರಬಂಧ	೧೯೭೯
೧೭.	ಎರಡು ನಾಟಕಗಳು	ನಾಟಕ	೧೯೭೯
೧೮.	ಅವಸ್ಥಾ	ಸಾಹಿತ್ಯಿಕ ಲೇಖನಗಳು	೧೯೭೯
೧೯.	ಆತ್ಮೀಯ	ವ್ಯಕ್ತಿಚಿತ್ರ	೧೯೭೯
೨೦.	ಭಾರತೀಯ ಜ್ಞಾನಪೀಠ ಮತ್ತು ವಿಜೇತ ಕನ್ನಡಿಗರು	ಜ್ಞಾನಪೀಠ ಪ್ರಶಸ್ತಿ ಕುರಿತ ಸಮಗ್ರ ಪರಿಚಯಾತ್ಮಕ ಹಾಗೂ ವಿಮರ್ಶಾತ್ಮಕ ಕೃತಿ	೧೯೮೦
೨೧.	ಕಾವ್ಯಾನಂದ	ಡಿ. ಸಿದ್ಧಯ್ಯ ಪುರಾಣಿಕರ ಸಂಭಾವನಾಗ್ರಂಥ (ಸಂ.)	೧೯೮೨
೨೨.	ಜಾನಪದ ಕತೆಗಳು	ಜಾನಪದ	೧೯೮೩
೨೩.	ರೂಪಸಿ	ಕವನ ಸಂಕಲನ	೧೯೮೫
೨೪.	ಸಾಮರಸ್ಯದ ಶಿಲ್ಪಿ	ಆಧ್ಯಾತ್ಮಿಕ ಕಾದಂಬರಿ	೧೯೮೫
೨೫.	ಬಾರೋ ಮೈಲಾರಕೆ	ಭಕ್ತಿಗೀತ ಸಂಕಲನ	೧೯೮೫
೨೬.	ವೀರಶೈವ ವಿಚಾರ ಸಂಕಿರಣ	ತತ್ತ್ವದರ್ಶನ (ಸಂ.)	೧೯೮೬
೨೭.	ಮಳ್ಳಿಗೊಂದು ಒಳ್ಳೆಮಾತು	ಚಿಂತನಪರ ಲೇಖನಗಳು	೧೯೮೭
೨೮.	ಮಹಾಪ್ರಸಾದಿ	ಆಧ್ಯಾತ್ಮಿಕ ಕಾದಂಬರಿ	೧೯೮೭
೨೯.	ಸಾಹಿತ್ಯೋಪಾಸಕ	ಸಂಭಾವನಾ ಗ್ರಂಥ (ಸಂ.)	೧೯೮೮
೩೦.	ಶೂನ್ಯಸಂಪಾದನೆಗೊಂದು ಮುನ್ನುಡಿ	ಸಂಶೋಧನೆ	೧೯೮೮
೩೧.	ಶೂನ್ಯ ಸಂಪಾದನೆ : ಒಂದು ಅಧ್ಯಯನ	ತತ್ತ್ವದರ್ಶನ (ಸಂ.)	೧೯೮೮
೩೨.	ಶ್ರೀ ತೋಂಟದಾರ್ಯ ವಚನ : ವ್ಯಾಖ್ಯೆ	ವ್ಯಾಖ್ಯಾನ (ಸಂ.)	೧೯೯೦
೩೩.	ಶ್ರೀ ಸಿದ್ಧಲಿಂಗೇಶ್ವರ ಶತಕ	ಕಾವ್ಯ (ಸಂ.)	೧೯೯೦
೩೪.	ಅರುವಿನಾಗರದಲ್ಲಿ	ಕಾವ್ಯ (ಸಂ.)	೧೯೯೦
೩೫.	ಕನಕ ಸಂಪುಟ ೨	ಕಾವ್ಯ (ಸಂ.)	೧೯೯೦

೩೬.	ಮಾಸ್ತಿ ಕಾವ್ಯ	ವಿಮರ್ಶೆ	೧೯೯೧
೩೭.	ಸುರಭಿ	ಹಾಡುಗಳು	೧೯೯೨
೩೮.	ಕನ್ನಡ ಭಾಷೆಯ ಚರಿತ್ರೆ	ಭಾಷಾ ಇತಿಹಾಸ	೧೯೯೨
೩೯.	ಅಕ್ಕನ ವಚನಗಳು	ವಚನ (ಸಂ.)	೧೯೯೩
೪೦.	ನೀಲಮ್ಮನ ವಚನಗಳು	ವಚನ (ಸಂ.)	೧೯೯೩
೪೧.	ಸಿದ್ಧಗಿರಿ	ಕ್ಷೇತ್ರಪರಿಚಯ	೧೯೯೩
೪೨.	ಮಾಸ್ತಿ ಕಾವ್ಯ : ಒಂದು ಸಮೀಕ್ಷೆ	ವಿಮರ್ಶೆ	೧೯೯೪
೪೩.	ಬದುಕು ಕ್ರೀಡಾರಂಗ	ಚಿಂತನ ಸಾಹಿತ್ಯ	೧೯೯೫
೪೪..	ಅನುಶೀಲನ	ವಿಮರ್ಶೆ	೧೯೯೫
೪೫.	ಕೇಶಿರಾಜನ ಗರಡಿಯಲ್ಲಿ	ವ್ಯಾಕರಣ ಪ್ರಬಂಧಗಳು	೧೯೯೭
೪೬.	ಮೈದುನ ರಾಮಣ್ಣನ ಕಥೆ	ಸಂಪಾದಿತ	೧೯೯೭
೪೭.	ಏಪರೂಪದವರು	ವ್ಯಕ್ತಿಚಿತ್ರ	೧೯೯೭
೪೮.	ಸ್ನೋವೈಟ್ ಮತ್ತು ಇತರ ನೃತ್ಯರೂಪಕಗಳು	ನೃತ್ಯರೂಪಕ	೧೯೯೯
೪೯.	ಕೇಳು ಅನಿತಾ	ನೇತಾಜಿ ಜೀವನ ಚರಿತ್ರೆ	೨೦೦೦
೫೦.	ಛಂದೋಪ್ರಬಂಧಗಳು	ಛಂದಸ್ಸು	೨೦೦೦

ಸಾರ್ವಜನಿಕ ಸೇವೆಯಲ್ಲಿ :

೧. ಸಂಸ್ಥೆಯ ಸಂಸ್ಥಾಪಕ ಕಾರ್ಯದರ್ಶಿ :

ಅ) ತರುಣ ಭಾರತಿ (ಕಲಾ ಸಂಸ್ಥೆ), ಸಾಸಲು ೧೯೬೦

೨. ಸಂಸ್ಥಾಪಕ ಅಧ್ಯಕ್ಷ :

ಅ) ರಾಗಿಣಿ ಶಿಕ್ಷಣ ಪ್ರತಿಷ್ಠಾನ, ವಿಜಯನಗರ ೨ನೇ ಹಂತ, ಬೆಂಗಳೂರು - ೫೬೦ ೦೪೦

೩. ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ :

ಅ) ಬಳ್ಳಾರಿ ಸಾಹಿತ್ಯ ಸಮ್ಮೇಳನ, ಕವಿಗೋಷ್ಠಿಯಲ್ಲಿ ೧೯೫೮

ಆ) ಬೆಂಗಳೂರು ಸಾಹಿತ್ಯ ಸಮ್ಮೇಳನ, ೧೯೭೦
'ಅಂತರ ಭಾರತಿ' ಕನ್ನಡ ಭಾಷಾ ಪ್ರತಿನಿಧಿ

ಇ) ಶಿವಮೊಗ್ಗ ಸಾಹಿತ್ಯ ಸಮ್ಮೇಳನ, ೧೯೭೬
ಸಾಹಿತ್ಯ ಗೋಷ್ಠಿಯಲ್ಲಿ ಪ್ರಬಂಧ ಮಂಡನೆ

ಈ) ಚಿಕ್ಕಮಗಳೂರು ಸಾಹಿತ್ಯ, ೧೯೮೧ ಸಮ್ಮೇಳನದಲ್ಲಿ
ನಾಟಕ ಗೋಷ್ಠಿಯಲ್ಲಿ ಪ್ರಬಂಧ ಮಂಡನೆ

೪. ಅಧ್ಯಕ್ಷ :

ಅ) ತಿಪಟೂರಿನಲ್ಲಿ ನಡೆದ ತುಮಕೂರು ಜಿಲ್ಲಾ
ಸಾಹಿತ್ಯ ಸಮ್ಮೇಳನದ ಕವಿಗೋಷ್ಠಿ, ೧೯೮೦

ಆ) ತುಮಕೂರು ಜಿಲ್ಲಾ ಸಾಹಿತ್ಯ ಸಮ್ಮೇಳನಾಧ್ಯಕ್ಷ, ೧೯೮೯

ಇ) ರಂಗಭೂಮಿ ಕುರಿತ ವಿಚಾರ ಸಂಕಿರಣ, ಗುಲ್ಬರ್ಗ, ೧೯೮೭

೫. ಸಮಿತಿಗಳ ಅಧ್ಯಕ್ಷ :

ಅ) ತ್ರಿವಿಕ್ರಮ ಸನ್ಮಾನ ಸಮಿತಿ, ೧೯೮೮

ಆ) ಡಾ. ಎಂ. ಚಿದಾನಂದಮೂರ್ತಿ ಸನ್ಮಾನ ಸಮಿತಿ, ೧೯೯೧

೬. ಪತ್ರಿಕಾ ಸಂಪಾದಕ :

ಅ) ವೀರಶೈವ ಸಮನ್ವಯ (ಮಾಸಪತ್ರಿಕೆ), ಬೆಂಗಳೂರು ೧೯೮೭

೭. ಗೌರವ ಕಾರ್ಯದರ್ಶಿ :

ಅ) ಕನ್ನಡ ಸಾಹಿತ್ಯ ಪರಿಷತ್ತು , ಬೆಂಗಳೂರು, ೧೯೮೯-೯೦

೮. ಅಧ್ಯಕ್ಷ :

ಅ) ಕನ್ನಡ ಸಾಹಿತ್ಯ ಪರಿಷತ್ತು - ೧೯೯೫ ರಿಂದ ೧೯೯೮

೯. ಸನ್ಮಾನ :

ಅ) ೧೯೯೯ರ ಕನ್ನಡ ರಾಜ್ಯೋತ್ಸವ ಪ್ರಶಸ್ತಿ

ಆ) ೧೯೯೯ರ ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ

ಸ್ವಾಮಿ ಸೂಕ್ತಿಗಳು

ಅಸೂಯೆ ಪಡದ ಬಂಧುಗಳನ್ನು
ಪಡೆದವನೆ ಭಾಗ್ಯಶಾಲಿ

★

ಆತ್ಮ ನಿಂದೆ ಮಹಾಪಾಪ

★

ಆತ್ಮರತಿ ಅನಂತ ಪ್ರೀತಿ

★

ಆದ್ಯತನವನ್ನು ತಿಳಿಯ ಬೇಕಿದ್ದರೆ
ಪ್ರಾಚೀನವನ್ನು ನೆನೆಯಬೇಕು

★

ಇತಿಹಾಸವನ್ನೇ ರಚಿಸದ ಭಾರತೀಯರಿಗೆ
ಐತಿಹಾಸಿಕ ಸತ್ಯವೆನ್ನುವುದು ಒಂದು ಕಲ್ಪನೆಯ ವಸ್ತು

★

ಉಕ್ಕಿನ ಕತ್ತಿಗಿಂತ ಮಾತಿನ ಕತ್ತಿ ತುಂಬಾ ಘಾತುಕ
ಕತ್ತಿಯಿಂದಾದ ಗಾಯ ಕೆಲವು ಗಂಟೆಗಳ ಕಾಲ ಉರಿಯುತ್ತೆ
ಆದರೆ ಮಾತಿನಿಂದಾದ ಗಾಯ ಸಾಯುವವರೆಗೂ ಕೊರೆಯುತ್ತೆ.

★

ಒಮ್ಮೊಮ್ಮೆ ಸತ್ಯ ಕಲ್ಪನೆಗಿಂತಲೂ ಅದ್ಭುತ

★

ಕಲಾವಿದನಾಗುವವನಿಗೆ ಸಂಸ್ಕಾರ ತ್ರಯಗಳು ಬೇಕು;
ಸಂಸ್ಕಾರ ಸದ್ಗುರು ಅನುಗ್ರಹ ಸ್ವಯಂ ಶ್ರಮ ಸಾಧನೆ

★

ಕವಿ ಕಲಾವಿದರು ಬಹಳ ಜನ ಬಡವರು;
ಆದರೆ ಭಿಕ್ಷುಕರಲ್ಲ

★

ಕಾರ್ಯದಲ್ಲಿ ಸಂವೇದನೆ ಬದಲಾದರೆ
ಸಂವಹನ ಬದಲಾಗುತ್ತದೆ.

★

ಕೀರ್ತಿವಂತರನ್ನು ಗುರುತಿಸುವುದು ಸುಲಭ,

ಆದರೆ ಕೀರ್ತಿಶೇಷರನ್ನು ನೆನೆಯುವುದು ದುರ್ಲಭ

★

ಕೂಡಿ ಬಾಳಿದರಲ್ಲಿ ಕೈಲಾಸವಿರುವುದು

★

ಕೊಲ್ಲುವ ಕೈಗಿಂತ ಕಾಯುವ ಕೈಗೆ ಹೆಚ್ಚು ಶಕ್ತಿಬೇಕು

★

ಚಿತ್ರಗಾರನಿಗೆ ರೇಖೆ, ಕವಿಗೆ ಭಾಷೆ, ಸಂಗೀತಗಾರನಿಗೆ
ರಾಗ, ನೃತ್ಯಗಾರ್ತಿಗೆ ತಾಳ, ಶಿಲ್ಪಿಗೆ ಮುಖಭಾವ ಮುಖ್ಯ

★

ಚೆಲ್ಲಿದ ಹಾಲು ಬಳಿಯಲು ಬರುವುದಿಲ್ಲ

★

ಜನಪ್ರಿಯತೆ ಗಳಿಸಿದುದೆಲ್ಲವೂ ಶ್ರೇಷ್ಠವಲ್ಲ

★

ಜಾತ್ಯಾತೀತ ರಾಷ್ಟ್ರವಾದ ಭಾರತದಲ್ಲಿ
ಜಾತೀಯತೆ ರುದ್ರತಾಂಡವವಾಡುತ್ತಿರುವುದು ಒಂದು ವಿಪರ್ಯಾಸ

★

ಜೀವನದಲ್ಲಿ ಗೆಲವೇ ಸರ್ವಸ್ವ ಅಲ್ಲ;

★

ದಾನ ಪಡೆದದ್ದು ದಾರಿದ್ರ್ಯ ತರುತ್ತೆ

★

ಧಾರ್ಷ್ಟ್ಯಕ್ಕೆ ಎಂದಿದ್ದರೂ ದಯನೀಯ ಸೋಲು

★

ದ್ವೇಷಮಂ ತ್ವೇಷದಿಂ ಗೆಲ್ಲಬೇಕು

★

ಧರ್ಮ ಬೋಧಕ ಪ್ರವಾದಿ
ಕರ್ಮ ಪ್ರಚೋದಕ ಮಂತ್ರವಾದಿ
ಇವುಗಳ ಮರ್ಮ ತಿಳಿದವನೇ ಮುತ್ಸದ್ಧಿ

★

ನಮ್ಮ ಅವಿವೇಕಕ್ಕೆ ದೇವರನ್ನು ದೂರುವುದು,
ದೈವಕ್ಕೆ ಮಾಡಿದ ಅಪಚಾರವಲ್ಲದೆ ಬೇರಲ್ಲ

★

ನಮ್ಮ ಕೈಗೆ ಮೀರಿದ್ದೆಲ್ಲಾ ಆಕಸ್ಮಿಕ ಅಲ್ಲ

★

ನಮ್ಮ ಮನಸ್ಸು ಒಮ್ಮೊಮ್ಮೆ ಸೋಲುವುದುಂಟು
ಅದು ದೈವಾನುಗ್ರಹದ ಸಂಕೇತ

★

ನಾಳಿನ ಚಿಂತೆಗಾಗಿ ಇಂದೇ ಕೊರಗುವುದು ಬೇಡ

★

ನಿನ್ನೆ ನಾಳೆಗಳೊಂದಿಗೆ ಇಂದನ್ನು ಕಾಣುವುದು ಹಿರಿಯ ಗುಣ

★

ನೆನಪಿನಲಿ ಸವಿಯಹುದು

★

ನೋವಿಲ್ಲದ ಬಾಳಿಲ್ಲ;
ಬಾಳಿಲ್ಲಿದು ನೋವಿಲ್ಲ
ನೋವು ನಲಿವು ಸಮ್ಮಿಶ್ರಣ
ಇಂತೀ ಬಾಳು ನಂದನ

★

ಪರಂಪರೆ ಮತ್ತು ಸಂಪ್ರದಾಯಗಾರ
ಎಲ್ಲೆ ಕಟ್ಟನ್ನು ಮೀರುವುದು ಸಂಸ್ಕೃತಿಯನ್ನು
ತಿರಸ್ಕರಿಸಿದಂತೆ ಎಂದು ಅರ್ಥವಲ್ಲ, ಅದು
ಪ್ರಗತಿಯ ಸೂಚನೆ

★

ಪಾಪ ಇರುವುದು ಕೃತಿಯಲ್ಲಲ್ಲ, ಅಂಗಿತದಲ್ಲಿ
ಗಾಂಧೀಜಿ ಪಠಾಣನವನ್ನು ಕ್ಷಮಿಸಿದ್ದು ಈ ಅರ್ಥದಲ್ಲಿ.
ವಿಷವನ್ನು ದ್ವೇಷಿಸಿದ, ಹಾವನ್ನು ಪ್ರೀತಿಸಿದ ಗಾಂಧಿ

★

ಪೂವಾರ್ಜಿತ ಪರಿಕಲ್ಪನೆ ಸಾಮಾನ್ಯನ
ತಾತ್ಕಾಲಿಕ ಮಾನಸಿಕ ತೃಪ್ತಿಗಿತ್ತ ಸಮಾಧಾನ

★

ಪ್ರತಿಯೊಂದು ಮತಧರ್ಮವೂ ಬಿಡುಗಡೆಯ ಮಾರ್ಗವಾಗಿ
ಆರಂಭಗೊಂಡು ಅಂತ್ಯದಲ್ಲಿ ವಿಶಾಲ ಸೆರೆಮನೆಯಾಗಿ
ಪರಿಣಾಮಗೊಳ್ಳುತ್ತದೆ

★

ಪ್ರಭಾವ ಎನ್ನುವುದು ಬೌದ್ಧಿಕ ಸ್ತರದಲ್ಲಾಗುವ ನೆನಪಿನ ನೆರಳು

★

ಪ್ರಶಸ್ತಿಯೇ ಪ್ರತಿಭೆಯ ಒರೆಗಲ್ಲಲ್ಲ

★

ಪ್ರೇಮ ಎಂಬುದು ಸಂತೆಯಲ್ಲಿ ಮಾರುವ ಸರಕಲ್ಲ

★

ಬಡವರೆಲ್ಲರೂ ಕಳ್ಳರಲ್ಲ, ಶ್ರೀಮಂತರೆಲ್ಲರೂ ಸತ್ಯವಂತರಲ್ಲ

★

ಬಾಗಿಲು ಕಾಯುವ ನಾಯಿ ಒಡೆಯನ ಪರ ಬೊಗಳುವುದು ಸಹಜ

★

ಬೊಗಳಲೂ ತ್ರಾಣವಿಲ್ಲದ ನಾಯಿ
ಭಿಕ್ಷುಕನ ಕೈನೆಕ್ಕಲು ಹೋಗುತ್ತೆ

★

ಬ್ಲಡ್ಡು ಮತ್ತು ದುಡ್ಡು ಸದಾ ಹರಿಯುತ್ತಿಬೇಕು ಒಂದೆಡೆ ನಿಂತರೆ ಅಪಾಯ

★

ಭಾವದಲ್ಲಿ ಶುದ್ಧವಿದೆ, ಬಯಲೇನ ಮಾಡೀತು

★

ಮಕ್ಕಳಿದ್ದವರಿಗೆ ಮಾನವಿಲ್ಲ;
- ಗಾದೆ

ಅಹುದು
ಮಕ್ಕಳಿಲ್ಲದವರಿಗೆ ಬಾಳೇ ಇಲ್ಲ.

★

ಮನುಕುಲದ ಬಾಂಧವ್ಯ ಒಲವಧಾರಿಸಿ ನಿಂತಿಹುದು

★

ಮರಣವನ್ನು ಗೆಲ್ಲುವುದು ಮಾರನಿಗೂ ದುಸ್ಸಾಧ್ಯ

★

ಮಾನವತೆ ಎಂಬುದು ಮಾನವನ ಹೃದಯ ರತ್ನ

★

ಮಾನವನ ಕರ್ತವ್ಯ ಎರಡು:
ಪ್ರೀತಿ ಒಂದು ನೀತಿ ಮತ್ತೊಂದು

★

ಮೀಸಲಾತಿ ನೀತಿ ಜಾತಿಯ ಆಧಾರದ ಮೇಲೆ
ನಿರ್ಧರಿತವಾಗಬಾರದು; ಅದು ಉಳ್ಳವರು ಉಳ್ಳದವರು ಎಂಬ ಪರಿಗಣನೆಯಿಂದ
ನಿರ್ಧಾರಗೊಳ್ಳುವುದು ಸೂಕ್ತ

★

ಮೃತ್ಯು ದೇವತೆಗೆ ಮುದಿ ಮಾಂಸಕ್ಕಿಂತ ಎಳೆಯ ಮಾಂಸದ ಮೇಲೆ ಪ್ರೀತಿ ಹೆಚ್ಚು
ಆದ್ದರಿಂದಲೇ ಅಪ್ರಾಪ್ತ ವಯಸ್ಕರನ್ನು ಬಹುಬೇಗ ಕೊಂಡೊಯ್ಯುತ್ತಾನೆ.

★

ಮೃತ್ಯುವನ್ನು ವಂಚಿಸುವುದು ಯಾರಿಂದಲೂ ಸಾಧ್ಯವಿಲ್ಲ.

★

ಮೈಕೊಳೆಗಿಂತ ಮನಸ್ಸಿನ ಕೊಳೆ ತುಂಬಾ ಅಪಾಯಕಾರಿ

★

ಯಾವ ಮಾತನ್ನೂ ಅಲ್ಲವೆಂದು, ತಿರಸ್ಕರಿಸದಿರುವುದು ಬುದ್ದಿವಂತಿಕೆ;
ಸದ್ಭಾವನೆಯ ನಿರ್ಧಾರ ಅಪ್ಪಿಕೊಳ್ಳುವುದು ಹೃದಯವಂತಿಕೆ.

★

ವಿಚಾರದ ದಿಕ್ಕು ಆರಂಭದಲ್ಲಿ ಸ್ವಲ್ಪ ಬದಲಾದರೂ
ಆಗ ಇಡೀ ಜೀವನದ ಗುರಿಯೇ ಬದಲಾಗಿರುತ್ತೆ

★

ಸತ್ಯಕ್ಕೆ ಸಾವಿಲ್ಲ; ಮಿಥ್ಯಕ್ಕೆ ಬದುಕಿಲ್ಲ

★

ಸ್ವರ ಮೈತ್ರಿಯಿಂದ ಸಂಗೀತ;
ಸಮರಸತೆಯಿಂದ ಜೀವನ ಹಿತ

★

ಹೆಣ್ಣು ನನಗೆ ಬಿಡಿಸಲಾಗದ ಒಗಟು

ಸಾಹಿಮ ಸಂದರ್ಶನ

ಪ್ರಿಯರೇ,

ಸವಿನಯ ವಂದನೆಗಳು

ಕನ್ನಡದ - ಉದಯೋನ್ಮುಖ ಮುಖ್ಯವಾಗಿ - ಬರಹಗಾರರ ಸಚಿತ್ರ ಪರಿಚಯ ಸಂಗ್ರಹಿಸಿ, ಪ್ರಕಟಿಸುವ ಉದ್ದೇಶದಿಂದ ನಾನು ರೂಪಿಸಿದ ಯೋಜನೆಯನ್ವಯ ತಮಗೀ ಪತ್ರ ಬರೆಯುತ್ತಿದ್ದೇನೆ.

ದಯವಿಟ್ಟು ;

1. ಪ್ರಶ್ನೆಗಳಿಗೆ ಉತ್ತರಗಳನ್ನು ಬರೆದು ಶೀಘ್ರವಾಗಿ ರವಾನಿಸಿ
2. ನಿಮ್ಮ ಭಾವಚಿತ್ರದ ನಕಲೊಂದನ್ನು ಸಾಧ್ಯವಿದ್ದಲ್ಲಿ ಎರಡನ್ನು, ಪತ್ರಿಕೆಗೊಂದು ಪುಸ್ತಕ್ಕೊಂದು ಜೊತೆಗೆ ಕಳುಹಿಸಿ.
3. ನಿಮ್ಮ ಮಿತ್ರರ (ಲೇಖಕ) ವಿಳಾಸ ಒದಗಿಸಿ, ಈ ಯೋಜನೆಯ ಅಭಿವೃದ್ಧಿಗೆ ಸಹಕರಿಸಿ.

ಈ ಯೋಜನೆಯ ಬರಹಗಳು

1. ಪ್ರಸ್ತುತ ಕಿನ್ನಿಗೋಳಿಯ ''ಯುಗಪುರುಷ'' ಮಾಸದಲ್ಲಿ ಪ್ರಕಟವಾಗುತ್ತಾ ಇದೆ. ಅಲ್ಲದೆ

ಮುಂದೆ

1. ಕಾರ್ಕಳದ 'ಕೃಷಿಕರ ಸಂಘಟನೆ' ಸಾಪ್ತಾಹಿಕದಲ್ಲೂ
2. ಪರಿಷತ್ತಿನ 'ಕನ್ನಡ ನುಡಿ'ಯಲ್ಲೂ ಪ್ರಕಟಿಸಲಾಗುವ ಸಾಧ್ಯತೆಗಳಿವೆ.

ಪ್ರೀತಿ ಇರಲಿ,

ಆಗಾಗ ಬರೆಯುತ್ತಿರಬೇಕಾಗಿ ಅಪೇಕ್ಷೆ. ಇಂತಿ ತಮ್ಮ ಸ್ನೇಹಾಕಾಂಕ್ಷಿ

ಮೋಹನದಾಸ ಜಿ. ಕಿಣಿ.

ಪ್ರಶ್ನೆಗಳು

1. ನಿಮ್ಮ ಮನೆತನವು ನಿಮ್ಮ ಸಾಹಿತ್ಯ ಕ್ಷೇತ್ರದ ಪ್ರವೇಶಕ್ಕೆ ಕಾರಣವೇ?
2. ನಿಮ್ಮ ಜನ್ಮ, ವಿದ್ಯಾಭ್ಯಾಸ, ಮಾತಾಪಿತೃ ಮತ್ತಿತರ ವಿವರ ಒದಗಿಸಿ.
3. ನೀವು 'ಸಾಹಿತಿ' ಆದದ್ದು ಹೇಗೆ?
4. ನಿಮ್ಮ ಪ್ರಕಟಿತ ಪ್ರಥಮ ಕೃತಿಗಳು ಯಾವುವು? ಅವುಗಳ ಬಗ್ಗೆ ನಿಮ್ಮ ಸ್ವಂತ, ವಾಚಕವೃಂದದ, ವಿಮರ್ಶಕರ ಅಭಿಪ್ರಾಯವೇನು?
5. ನಿಮ್ಮ ಮೆಚ್ಚಿನ ಮಾರ್ಗದರ್ಶಕ, ಸಾಹಿತ್ಯ, ಸಾಹಿತಿ ಯಾರು? ಏಕೆ?
6. ನೀವು ಯಾವ ಬಗೆಯ ರಚನೆ ಬಯಸುತ್ತೀರಿ.? ಅವುಗಳ ವಸ್ತು ಯಾವುದು? ಏಕೆ?

7. ನಿಮ್ಮ ರಚನೆಗಳಲ್ಲಿ ನಿಮ್ಮ ಮೆಚ್ಚಿನ ತೃಪ್ತಿ ನೀಡಿದ ಗೌರವ ತಂದ ಕೃತಿ ಯಾವುವು? ಏಕೆ?

8. 'ಸಾಹಿತಿಯ ಕರ್ತವ್ಯ' ಮತ್ತು 'ಸಾಹಿತ್ಯದ ಸ್ವರೂಪ'ಗಳ ಬಗ್ಗೆ ನಿಮ್ಮ ಅಭಿಪ್ರಾಯ ನೀಡಿ.

9. ಕನ್ನಡ ಸಾಹಿತ್ಯ ಕ್ಷೇತ್ರ ಹೇಗಿತ್ತು? ಹೇಗಿದೆ? ಮತ್ತೆ ಮುಂದೆ ಹೇಗಾಗ ಬಹುದೆಂದು ಅಭಿಪ್ರಾಯ ಪಡುತ್ತೀರಿ?

10. ಕನ್ನಡದ, ಕನ್ನಡಿಗರ ಹಾಗೂ ಕನ್ನಡ ಸಾಹಿತ್ಯದ ಬಗ್ಗೆ ನಿಮ್ಮ ಬಿಚ್ಚು ಮನಸ್ಸಿನ ಅಭಿಪ್ರಾಯ ನೀಡಿ.

1. ನಮ್ಮದು ಓಚಯ್ಯಗಳ ಮನೆತನ. ನಮ್ಮ ತಂದೆ, ನಮ್ಮ ದೊಡ್ಡಪ್ಪ, ನಮ್ಮ ಸೋದರಮಾವ, ನಮ್ಮ ಬಳಗದಲ್ಲಿ ಅನೇಕರು"ಹಿಂದಿನ ಕಾಲದ ಕೂಲೀಮಠದ ಓಚಯ್ಯಗಳು. ಆ ಕಾಲದ ಉತ್ತಮ ವರ್ಗದ ವಿದ್ವಾಂಸರು ಅನ್ನಿಸಿಕೊಂಡವರು.

ಅವರ ಪ್ರಭಾವ ಅಪ್ರತ್ಯಕ್ಷವಾಗಿ ನನ್ನ ಮೇಲಾಗಿರಬಹುದು. ನಾನು ಸಾಹಿತ್ಯ ಕ್ಷೇತ್ರಕ್ಕೆ ಕಾಲಿಸಿರಿಸಲು ನಮ್ಮ ಪೂಜ್ಯ ತಂದೆ, ತಾಯಿ ಇಬ್ಬರೂ ಪ್ರೇರಕ ಶಕ್ತಿಗಳು.

2. 28-1-1931ರಲ್ಲಿ ಹುಟ್ಟಿದ್ದು

ಸ್ಥಳ : ಸಾಸಲು, ಚಿಕ್ಕ ನಾಯಕನ ಹಳ್ಳಿ, ತಾಲ್ಲೂಕು, ತುಮಕೂರು ಜಿಲ್ಲಾ

ತಂದೆ : ಪ್ರೊ. ಶಿವರುದ್ರಯ್ಯನವರು

ತಾಯಿ : ಶ್ರೀಮತಿ ಸಿದ್ದಮ್ಮನವರು.

ನಾನು ಮತ್ತು ನನ್ನ ತಮ್ಮ ಶ್ರೀ ಶಾಂತಮೂರ್ತಿ ಇಬ್ಬರೇ ಮಕ್ಕಳು.

ನಮ್ಮ ತಾಯಿಯವರ ತೌರೂರು ಶೆಟ್ಟೀಕೆರೆ, ಕುಮಾರ ಒಡೆಯರ ಕುಮಾರ್ತೆ.

ನಮ್ಮ ತಂದೆಯವರು ರೇವಣ್ಣಯ್ಯ ಮತ್ತು ರುದ್ರಮ್ಮ ಇವರ ಪುತ್ರರು. ತಮ್ಮ ತಂದೆಗೆ ಕಡೆಯ ಮಕ್ಕಳು. ಸಂಭಾವಿತರು, ಉತ್ತಮ ಜಂಗಮ ಜ್ಯೋತಿಗಳೆನ್ನಿಸಿದ್ದವರು.

3. ನಾನು ತುಂಬಾ ಕನಸುಣಿ. ಎಳಮೆಯಲ್ಲಿ ಅನೇಕ ರೀತಿಯ ಕನಸು ಕಂಡು ಅಂತಾಗ ಬಯಸಿದೆ. ಪ್ರಯತ್ನಿಸಿದೆ. ಆದೆ ನನ್ನ ಕಲೆಗೆ ನನ್ನ ಪೂಜ್ಯ ತಂದೆ ಮುಖ್ಯ ಕಾರಣರು.

4. ನನ್ನ ಚೊಚ್ಚಲ ಕವನ ಹಾಸ್ಟೆಲಿನಲ್ಲಿ ನನ್ನ ಸ್ನೇಹಿತನನ್ನು ಗೇಲಿ ಮಾಡಲು ಬರೆದವು. ಅವೆಲ್ಲಾ ವೈನೋದಿಕ ರಚನೆಗಳು ಅಷ್ಟೇ. ಆದರೆ ನಾನು ಮೊದಲು ಪ್ರಕಟಿಸಿದ ಗ್ರಂಥ 'ಶಿವತಾಂಡವ' (ಕವನ ಸಂಕಲನ) 1954ರಲ್ಲಿ ಬಿ.ಎ. ಆನರ್ಸ್ ತರಗತಿಯಲ್ಲಿ ಓದುತ್ತಿದ್ದಾಗ ಅನಂತರ 'ಮರೀಬೇಡಿ' ಎಂಬ ಪ್ರಹಸನ ಪ್ರಕಟಿಸಿದೆ ನಾನು ಲೆಕ್ಚರರ್ ಸೇರಿಕೊಂಡಮೇಲೆ. ಇವು ಸಾಧಾರಣ ಕೃತಿಗಳು. ನನ್ನ ಮೂರನೆಯ ಕೃತಿ ಕವನ ಸಂಕಲನ 'ಕೆಂಗನ ಕಲ್ಲು' ನನಗೆ ಕೀರ್ತಿ ತಂದ ಕೃತಿ. ಇದಕ್ಕೆ ರಾಜ್ಯ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಸಿಕ್ಕಿತು 1967ರಲ್ಲಿ.

ಅನಂತರ ಹತ್ತಾರು ಪುಸ್ತಕಗಳು ಹೊರಬಂದವು. ಕೆಲವು ವರ್ಷಗಳು ಡಾಕ್ಟರೇಟ್ ಪದವಿಗಾಗಿ ದುಡಿದೆ. ಆಗ ಸೃಜನಾತ್ಮಕ ಗ್ರಂಥಗಳು ಅಷ್ಟಾಗಿ ರಚನೆಯಾಗಲಿಲ್ಲ ಪಿ.ಎಚ್.ಡಿ. ಪಡೆದಮೇಲೆ ರಚನೆಗೆ ತೊಡಗಿದ್ದೇನೆ.

ನನ್ನ ಕೃತಿಗಳು ನನಗೆ ಮೆಚ್ಚು; ಬೇರೆಯವರಿಗೆ ಹಾಗೂ ಹೀಗೂ.

ನನ್ನ ಕೃತಿಗಳನ್ನು ನೋಡಿ ಮೆಚ್ಚದೆ, ಅಸೂಯೆಪಟ್ಟು ಅನ್ಯಾಯ ಮಾಡತೊಡಗಿದವರು ನನ್ನ ಅನೇಕ ಜನ ಗುರುಗಳು. ಈಗಲೂ ಬದುಕಿರುವ ಗುರುದೈವಗಳು.

5. ನನಗೆ ನಾನೇ ಗುರು; ಮಾರ್ಗದರ್ಶಕ. ಯಾರನ್ನೂ ನನಗೆ ಆದರ್ಶರಲ್ಲ, ಬೇಕಾಗಲೂ ಇಲ್ಲ. ಅದಕ್ಕಾಗಿ ಹೆಚ್ಚು ಕೃತಿಗಳನ್ನು ಓದಲಿಲ್ಲ. ಓದಿದರೆ ಎಲ್ಲ ಅವರ ಪ್ರಭಾವಕ್ಕೆ ಬಲಿಯಾಗಿ, ನನ್ನತನವನ್ನು ನೀಗಿಕೊಳ್ಳುತೆನೋ ಎಂದು. ಅಂದಮೇಲೆ ನನಗೆ ನಾನೇ ಆದರ್ಶ, ಮಾರ್ಗದರ್ಶಿ.

6. ಬದುಕಿನ ಸಹಜತೆ, ನೈಜತೆಗಳನ್ನೊಳಗೊಂಡ ಉದಾತ್ತತೆಯ ಕಡೆಯ ಸಾಗಿಸುವ ಶಕ್ತಿಶಾಲಿ ರಚನೆ ನನಗೆ ಪ್ರಿಯ.

7. 'ಕೆಂಗನಕಲ್ಲು' ಮತ್ತು 'ವಿಭೂತಿ ಪುರುಷರು' - ಇವು ನನಗೆ ಮೆಚ್ಚಿನ ಕೃತಿಗಳು.

8. ಸತ್ಯವನ್ನು ನಿರ್ಭೀತನಾಗಿ ನುಡಿಯುವ ಕೆಚ್ಚು ಬೇಕು ಸಾಹಿತಿಗೆ. ಇತ್ತೀಚೆಗೆ ಅದು ಮಾಯಾವಾಗುತ್ತಿರುವುದು ತುಂಬಾ ವಿಷಾದದ ಸಂಗತಿ. ಸಾಹಿತಿ ಇಂದು ಹೊಗಳುಭಟ್ಟನಾಗುತ್ತಿದ್ದಾನೆ. ತುಣುಕು ರೊಟ್ಟಿಗಾಗಿ ನಾಯಿಯಂತೆ ನಾಲಿಗೆಯಲ್ಲಿ ಜೊಲ್ಲು ಸುರಿಸಿ ಹೊಗಳಿಕೆಯ ಕಹಳೆ ಹಿಡಿದು ಹಾಳಾಗುತ್ತಿದ್ದಾನೆ.

9. ಕನ್ನಡ ಸಾಹಿತಿಗಳಲ್ಲಿ ಇಂದು ಸ್ವಾಭಿಮಾನ ಸತ್ತಿದೆ. ಸಾಹಿತಿಗಳ ಮತ್ತೊಂದು ವರ್ಗ mutual admiration committeeಗೆ ಸೇರಿದವರು. ಗುಂಪುಗಾರಿಕೆ ಬಹಳ. ಜಾತಿಜಾತಿಯವರದು ಒಂದುಗುಂಪು; ಕುಡುಕರಷ್ಟು ಒಂದು ಗುಂಪು; ಸತ್ಯದ ಹೆಸರಿನಲ್ಲಿ ಹಾದರ ಮಾಡುವವರದ್ದು ಒಂದು ಗುಂಪು; ಎತ್ತಲೂ ಮುಟ್ಟದ ಅಶಕ್ತರದ್ದು ಒಂದು ಗುಂಪು; ಗುಳ್ಳೇ ನರಿಗಳದ್ದು ಒಂದು ಗುಂಪು - ಹೀಗೆ ಗುಂಪುಗಾರರ ಸೂತ್ತು ಕನ್ನಡ ಸಾಹಿತ್ಯ.

10. ಇದರ ಭವಿಷ್ಯವನ್ನು ಬರೆಯಲು ಇನ್ನು ಕೆಲವು ದಿನಗಳು ಕಳೆಯಬೇಕು.

ಇಂದಿನ ಈರ್ಷ್ಯಾ ಸಾಹಿತ್ಯ ಮತ್ತು ಪ್ರಶಂಸಾ ಸಾಹಿತ್ಯ ಹಾಗೂ ದಿನಕ್ಕೊಬ್ಬನಂತೆ ಸಾಹಿತಿ ಅನ್ನಿಸಿಕೊಂಡವನು ಪಡೆಯುತ್ತಿರುವ 'ಸನ್ಮಾನ' - ಎಂಬ ಶಿರೋನಾಮೆಯ ರಾಜಕೀಯ - ಇವು ನಿಂತ ಮೇಲೆ ಹಲ ಕೆಲವು ತಲೆ ತಿರುಕ, ನಾಟಕಕಾರ, ನವ್ಯ ಕವಿ - ಅನ್ನಿಸಿಕೊಂಡ ಪುಡಾರಿಗಳ ಹುಳಿ ಮುರಿದ ಮೇಲೆ ಕನ್ನಡದ ಹೆಸರು ಹೇಳಿಕೊಂಡ ಅಧಿಕಾರಗಿಟ್ಟಿಸಿದ ಪುಂಡರು ಅಳಿಯಬೇಕು. ಅನಂತರ ಕನ್ನಡದ ಭವಿಷ್ಯವನ್ನು ನಿರ್ಧರಿಸಲು ಸಾಧ್ಯ. ಇಲ್ಲವಾದರೆ ಪತನ ನಮ್ಮ ಸಾಹಿತ್ಯಕ್ಕೆ ಕಟ್ಟಿಟ್ಟಬುತ್ತಿ - ಇದು ನನ್ನ ಅಭಿಪ್ರಾಯ.

ಪ್ರಶ್ನೆ : ನಿಮ್ಮ ಒಲವು ಸಾಹಿತ್ಯದತ್ತ ಹರಿಯಲು ಕಾರಣವಾದ ಪ್ರಭಾವ ಪ್ರೇರಣೆಗಳಾವುವು?

ಉತ್ತರ : ಈ ಪ್ರಶ್ನೆಗೆ ಸರಿಯಾದ ಉತ್ತರ ಎಷ್ಟು ಹುಡುಕಿದರೂ ಸಿಕ್ಕುತ್ತಿಲ್ಲ. ಆದರೆ ಇಷ್ಟು ಮಾತ್ರ ಹೇಳಬಲ್ಲೆ; ಚಿಕ್ಕಂದಿನಿಂದಲೂ ಏನನ್ನಾದರೂ ಒಳ್ಳೆಯದನ್ನು ಹೇಳಬೇಕು ಅನ್ನಿಸುತ್ತಿತ್ತು. ಅದೇ ರೀತಿ ಕಾವ್ಯ ರಚನೆ ಅಪೌರುಷೇಯ ಎಂಬ ಭಾವನೆಯೂ ಇತ್ತು. ನನ್ನ ತಂದೆ ಹಳ್ಳಿಯ ಕೂಲಿಮಠದ ಓಚಯ್ಯನವರು. ಅವರು ಎಲ್ಲರಿಗೆ ಹೇಳಿದಂತೆ ನನಗೂ ಅಮರಕೋಶ ಹೇಳಿ ಕಲಿಸುತ್ತಿದ್ದರು. ಅವರೇ ನನ್ನ ಮೊದಲ ಗುರು. ಒಂದು ದಿನ ಕೇಳಿದೆ 'ಈ ಕಥೆ ಕಾವ್ಯಗಳನ್ನು ಮನುಷ್ಯರು ಬರೆಯುತ್ತಾರೋ, ಅಥವಾ ದೇವರೋ' ಅಪ್ಪಾಜಿ ಹೇಳಿದರು, 'ಮನುಷ್ಯರೆ, ದೇವರಲ್ಲ' ಎಂದು 'ಹಾಗಾದರೆ ನಾನೂ ಬರೆಯಬಹುದಾ ಅಪ್ಪಾಜಿ?' 'ಅವಶ್ಯವಾಗಿ' ಎಂದರು.

ಅಂದಿನಿಂದಲೂ ನನಗೆ ಬರೆಯಬೇಕು ಬರೆಯಬೇಕು ಎಂದನ್ನಿಸುತ್ತಿತ್ತು. ಆ 'ಅನಿಸಿಕೆ' ಏಕೆ ಎಂದರಿಯೆ. ಒಟ್ಟಿನಲ್ಲಿ ಪ್ರಭಾವ ಅವ್ಯಕ್ತ. ಶಕ್ತಿ, ಪ್ರೇರಣೆ ನನ್ನ ಪೂಜ್ಯ ತಂದೆಯವರು.

ಪ್ರಶ್ನೆ : ಸಾಹಿತ್ಯ ಕೃಷಿ ಹೇಗೆ ದಾಂಗುಡಿ ಇಟ್ಟು ಪಲ್ಲವಿಸಿತು?

ಉತ್ತರ : ನನಗೆ ಬರೆಯಬೇಕು ಎಂದನ್ನಿಸುತ್ತಿತ್ತೇ ಹೊರತು ಹೇಗೆ ಬರೆಯಬೇಕು ಎಂಬುದು ಗೊತ್ತಿರಲಿಲ್ಲ. ಗೊತ್ತು ಮಾಡಿಕೊಟ್ಟವನು ಚಿತ್ರದುರ್ಗ ಇಂಟರ್ ಮೀಡಿಯೇಟ್ ಕಾಲೇಜಿನ ನನ್ನ ಸಹಾಧ್ಯಾಯಿ ಪಿ. ಈಶ್ವರಾಚಾರಿ. ಅವನು ನನ್ನ ಆತ್ಮೀಯ ಗೆಳೆಯನೂ ಹೌದು. ನನ್ನ ಸಾಹಿತ್ಯ ಕೃಷಿಯ ಮೊದಲ ಗುರುವೂ ಹೌದು. (ಅವನೀಗ ದಿವಂಗತ).

ನಾನು ನಮ್ಮ ಹಾಸ್ಟಲ್‌ನಲ್ಲಿದ್ದ (ಜಯದೇವ ಹಾಸ್ಟಲ್, ಚಿತ್ರದುರ್ಗ) ಓರ್ವ ಸ್ನೇಹಿತನ ಬಗ್ಗೆ ವೈನೋದಿಕ ಗೀತೆ ಬರೆದು ಊಟದ ಹಾಲ್‌ನಲ್ಲಿ ಅಂಟಿಸಿದೆ. ಆತ ಸಿಟ್ಟಿಗೆದ್ದು ಹಾಸ್ಟಲ್ ವಾರ್ಡನ್‌ರವರಿಗೆ ದೂರಿತ್ತ. ನನಗೆ ಮೂರು ದಿವಸ ಊಟ ಇಲ್ಲವಾಗಿಸಿದ್ದ. ನನಗೆ ದುಃಖ ಆಯಿತು. ಅಂದು ಮಿತ್ರ ಈಶ್ವರಾಚಾರಿ ಮುಂದೆ ಅವನಿದ್ದ ಹಾಸ್ಟಲ್‌ಗೆ ಹೋಗಿ ಎಲ್ಲ ಒದರಿದೆ. ಅವನು 'ನಿನ್ನಲ್ಲಿ ಕವಿತಾಶಕ್ತಿ ಇದೆ. ಅದನ್ನು ಹೀಗೆಲ್ಲ ಹಗುರ ವಿಷಯಗಳನ್ನು ಕುರಿತು ಬರೆದು ವ್ಯರ್ಥಮಾಡಿಕೊಳ್ಳಬೇಡ. ಉತ್ತಮ ವಸ್ತು ಆರಿಸಿಕೊ. ನಿನಗೆ ಪ್ರತಿಭೆ ಇದೆ. ಅಮರಕೋಶ ಓದಿದ್ದೀಯೆ. ಒಳ್ಳೆ ಭಾಷೆ ಇದೆ. ಸಾರ್ಥಕ ಪಡಿಸಿಕೊ. ಭಾವ ಸ್ಪಂದಿಸಿದಾಗ ಅದಕ್ಕೊಂದು ಭಾಷೆ ಕೊಡು. ಛಂದಸ್ಸಿಗಾಗಿ ಒದ್ದಾಡಬೇಡ. ಅದು ತನಗೆ ತಾನೇ ಬರುತ್ತೆ' ಅಂದ. ಅದರಂತೆ ಬರೆದೆ. 1950ರಿಂದ ನನ್ನ ಕಾವ್ಯ ಕೃಷಿ ಆರಂಭವಾಯಿತು. ನಾಲ್ಕು ದಶಕಗಳು ಕಳೆದಿದ್ದರೂ ಅದು ಇಂದೂ ಮುಂದುವರಿಯುತ್ತಲೇ ಇದೆ. ಇಂದಿನವರೆಗೆ ಎಂಟು ಕವನ ಸಂಕಲನಗಳನ್ನು ಹೊರತಂದಿದ್ದೇನೆ. 1952 ಡಿಸೆಂಬರ್‌ನಲ್ಲಿ ಪ್ರಕಟಿಸಿದ 'ಶಿವ-ತಾಂಡವ' ನನ್ನ ಮೊದಲ ಕವನ ಸಂಕಲನ. ನಾನಾಗ ಮೊದಲನೇ ಬಿ.ಎ. (ಆನರ್ಸ್) ತರಗತಿಯಲ್ಲಿ ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಓದುತ್ತಿದ್ದೆ.

ಪ್ರಶ್ನೆ : ತುಮಕೂರು ಜಿಲ್ಲೆಯ ಬಗ್ಗೆ ನಿಮ್ಮ ಮರೆಯದ ನೆನಪುಗಳಾವುವು?

ಉತ್ತರ : ಮೊದಲನೆಯದು ನನ್ನ ಅತ್ಯಂತ ಜನಪ್ರಿಯವಾದ 'ಸುಮ ಸುಂದರ ತರುಲತೆಗಳ ಬೃಂದಾವನ ಲೀಲೆ' ಎಂದು ಆರಂಭವಾಗುವ 'ಔಪಾಸನೆ' ಎಂಬ ಕವನ ಬರೆದದ್ದು. 1956ರಲ್ಲಿ ನಾನು ಕನ್ನಡ ಅಧ್ಯಾಪಕನಾಗಿ ತುಮಕೂರಿಗೆ ಬಂದಾಗ ಈಗಿನ ಸಿದ್ಧಗಂಗಾ ಪ್ರಥಮದರ್ಜೆ ಕಾಲೇಜು ಇರುವ ಬಳಿ ಸರ್ಕಾರಿ ಪ್ರಥಮದರ್ಜೆ ಕಾಲೇಜು ಇತ್ತು. ಜಯದೇವ ಹಾಸ್ಟಲ್ ಎದುರಿಗೆ ಒಂದು ಮಾವಿನ ತೋಪು. ಅಲ್ಲೊಂದು ಲೈಬ್ರರಿ ಬಿಲ್ಡಿಂಗ್. ಅದರ ನಾಲ್ಕೈದು ಕೊಠಡಿಗಳು. ಅವುಗಳಲ್ಲಿ ನಾವು ಏಳೆಂಟು ಜನ ಅಧ್ಯಾಪಕ ಬ್ರಹ್ಮಚಾರಿಗಳಿದ್ದೆವು. ಅದೊಂದು ರಾತ್ರಿ ಹಾಲ್ದಿಂಗಳು ಚೆಲ್ಲಿದ್ದ ಚೆಲುವಿನ ರಾತ್ರಿ. ನನ್ನ ಕೊಠಡಿಯ ಮುಂದೆ ಒಂದು ಹಾಸು ಬಂಡೆ. ಅದರ ಮೇಲೆ ಮಲಗಿ ವಿಶ್ವಾಂತರಾಳದಲ್ಲಿ ಪ್ರವಹಿಸುತ್ತಿರುವ ನೂತನ ಚೇತನ ಸ್ವರೂಪಿಯಾದ ಆದಿಶಕ್ತಿ, ಜಗತ್‌ಶಕ್ತಿ, ಪರಾತ್ಪರ ಶಕ್ತಿಯ ಪರಿಭಾವನೆಯಲ್ಲಿ ಭಾವಪರವಶನಾದೆ. ಆಗ ಕವಿತೆ ಮೂಡಿತು. ಆನಂದದಿಂದಲೇ ಬರೆದು ಮುಗಿಸಿದೆ. ಮುಗಿಸಿ ಕೊಠಡಿಗೆ ಬಂದಾಗ ಸರಿರಾತ್ರಿ ಮೀರಿತ್ತು. ಆ ಕವನವನ್ನು ಪ್ರಕಟಣೆಗೆ ಮುನ್ನ ನೂರಾರು ಬಾರಿ ಓದಿಕೊಂಡೆ, ಹಾಡಿಕೊಂಡೆ ಕೂಡ. ಎಲ್ಲ ವೇಳೆಯೂ ಅದು ನನಗೆ ಆನಂದಕೊಟ್ಟಿದೆ.

ಎರಡನೆಯದು ನಾನು ಮಾಡಿದ ಭಾಷಣ, ಆಗಸ್ಟ್ 15ರಂದು 1956ರಲ್ಲಿ ಆರ್ಯ ವೈಶ್ಯಾ ಹಾಸ್ಟಲಿನಲ್ಲಿ, ಅನಂತರ ಗುರುಕುಲ ಹಾಸ್ಟಲಿನಲ್ಲಿ, ಮತ್ತೊಮ್ಮೆ ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿ. ಶ್ರೀ ಸಿದ್ಧಗಂಗಾ ಕ್ಷೇತ್ರದಲ್ಲಿ ಬೃಂದಾವನ ಲೀಲೆ ಪದ್ಯ ಬರೆದಾಗ ಎಷ್ಟು ಆನಂದ ಆಯಿತೋ ಅಷ್ಟೇ ಪ್ರಮಾಣದ ಆಶ್ಚರ್ಯ ಆಯಿತು ಭಾಷಣ ಮಾಡಿದಾಗ. ಪತ್ರಿಕೋದ್ಯಮಿ ಶ್ರೀ ಗುಂಡೂರಾಯರು ಮತ್ತು ಶ್ರೀ ಶೇಷಾದ್ರಿಯವರು ಕೈಕುಲುಕಿ 'ಚೆನ್ನಾಗಿ ಮಾತನಾಡಿದಿರಿ' ಅಂದರು. ನಿಜ ಹೇಳಬೇಕೆಂದರೆ ಅಷ್ಟು ಚೆನ್ನಾಗಿ ಮಾತನಾಡ್ತೀನಿ ಅಂತಾ ನನಗೆ ಗೊತ್ತಿರಲಿಲ್ಲ. ಭಾಷಣವೂ ಒಂದು ಕಲೆ ಅಂತಾ ಅಂದುಕೊಂಡೆ.

ಮೂರನೆಯದು. ಚಿಕ್ಕತೊಟ್ಟಿಲಗೆರೆ ಸಮಾರಂಭ. ಒಮ್ಮೆ ನನ್ನ ವಿದ್ಯಾರ್ಥಿಯೊಬ್ಬ ಚಿಕ್ಕತೊಟ್ಟಿಲಗೆರೆ ಎಂಬ ಊರಿಗೆ ಒಂದು ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಅತಿಥಿಯಾಗಿ ಕರೆದುಕೊಂಡು ಹೋದ. ಊರು ಸೇರಿದಾಗ ಸಂಜೆ ಆಗಿತ್ತು. ಅತಿಥಿಗಳನ್ನು ಸ್ವಾಗತಿಸಲು ರಾತ್ರಿ ಸುಮಾರು 8 ಗಂಟೆಗೆ ಒಂದು ತಂಡ ಬಂತು. ಬಾಜಾ ಬಜಂತ್ರಿ ಬಾರಿಸಿಕೊಂಡು ನನ್ನನ್ನು ಊರ ಹೊರಗಿನ ಶಾಲೆಯಲ್ಲಿ ಕೂರಿಸಿದ್ದರು. ಪೆಟ್ರೋಮ್ಯಾಕ್ಸ್‌ಗಳನ್ನು ಹಚ್ಚಿಟ್ಟಿದ್ದರು. ಓರ್ವಹಿರಿಯ ನಾನಿದ್ದ ಕೊಠಡಿಗೆ ಬಂದ. ಆತನ ಜೊತೆಯಲ್ಲಿ ಸುಮಾರು 10-20 ಜನರು. ಆತ ಬಂದವನೇ ಒಂದು ರೂಪಾಯಿ ಅಗಲದ ಕರ್ಪೂರ ತೆಗೆದು ನೆಲದಲ್ಲಿಟ್ಟು ಹಚ್ಚಿ ತೆಂಗಿನಕಾಯಿ ಒಡೆದು, ನನ್ನ ಕೊರಳಿಗೆ ಹಾರ ಹಾಕಿ ಉದ್ದಕ್ಕೆ ಅಡ್ಡಬಿದ್ದ. ನನಗೆ ದಿಗ್ಭ್ರಮೆ ಆಯಿತು. ನಾಚಿಕೆಯೂ ಸಹ. ಅನಂತರ ದಯಮಾಡಿಸ ಬೇಕೆಂದು ವಿನಂತಿಸಿಕೊಂಡ. ಆತನ ಅಮಾಯಕ ಹಾಗೂ ಪ್ರಾಂಜಲ ಪ್ರೀತಿಗೆ ನಾನೇ ಮಣಿಯಬೇಕು ಎನ್ನಿಸಿತು. ಆತನ ಭಕ್ತಿಪೂರ್ವಕ ಸ್ವಾಗತಕ್ಕೆ ಬೆರಗಾಗಿ ನಡೆದೆ. 'ನಮ್ಮ ಸವಾರಿ' ರಾಜಬೀದಿಗೆ ಬಂತು. ನೂರಾರು ಜನರು ನೆರೆದಿದ್ದರು. ವಾದ್ಯಗಳು

ಭೋರ್ಗರೆಯುತ್ತಿದ್ದುವು. ಬಾಣ, ಬಿರುಸು ಮತಾಪುಗಳು ಹಾದಿಯುದ್ದಕ್ಕೂ ಉರಿದುವು. ನನಗೆ ಭಯ ಆಯ್ತು. ಬಹುಶಃ ಯಾವುದಾದರೂ ಹೆಣ್ಣಿಗೆ ತಾಳಿ ಕಟ್ಟಿಸಲು ನನ್ನನ್ನು ಮೆರವಣಿಗೆ ಕರೆದುಕೊಂಡು ಹೋಗುತ್ತಿರಬಹುದೇ? ಅನ್ನಿಸಿತು. ಊರ ಮಧ್ಯದಲ್ಲಿ ಒಂದು ಭವ್ಯ ಮಂಟಪ. ಸಭಾಕಾರ್ಯಕ್ರಮ. ಊರ ಹಿರಿಯರ ಅಧ್ಯಕ್ಷತೆಯಲ್ಲಿ ನನ್ನ ಭಾಷಣ. ಅಂದಿನ ಭಾಷಣ ಹೇಗಿತ್ತೋ ಗೊತ್ತಿಲ್ಲ. ಆದರೆ ಚಿಕ್ಕ ತೊಟ್ಟಿಲಗೆರೆಯ ನನ್ನ ಅನಿಮಿತ್ತ ಬಂಧುಗಳ ಆದರಾತಿಥ್ಯ ನಾನು ಮರೆಯಾಗದ್ದು.

ತಿಪಟೂರಿನಲ್ಲಿ ಎರಡನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನ ನಡೆಯಿತು. ಅಂದು ಕವಿಗೋಷ್ಠಿಯ ಅಧ್ಯಕ್ಷನಾಗಿದ್ದೆ. ಅದು ನನ್ನಲ್ಲಿ ಉಳಿದಿರುವ ಮೂರನೆಯ ಸವಿನೆನಪು.

ಪ್ರಶ್ನೆ : ನಿಮ್ಮ ಮೆಚ್ಚಿನ ಬರಹಗಾರರು ಯಾರಾರು?

ಉತ್ತರ : ಮೊದಲು ಆಕರ್ಷಿಸಿದವರು ಆಧುನಿಕ ಕನ್ನಡ ಸಾಹಿತ್ಯದ ರತ್ನತ್ರಯರಾದ ಕುವೆಂಪು, ಬೇಂದ್ರೆ ಮತ್ತು ಪುತಿನ. ಚೆನ್ನವೀರ ಕಣವಿಯವರು ಅನಂತರದಲ್ಲಿ ಪ್ರಭಾವ ಬೀರಿದರು. ಕಾದಂಬರಿಕಾರರಲ್ಲಿ ಅನಕೃ, ಅಧ್ಯಾಪಕನಾದ ಮೇಲೆ ಖಲೀಲ್ ಗಿಬ್ರಾನ್, ಚೆಕೋವ್, ಟಾಲ್‌ಸ್ಟಾಯ್, ಆಸ್ಕರ್ ವೈಲ್ಡ್, ಶರಚ್ಚಂದ್ರ ಚಟ್ಟೋಪಾಧ್ಯಾಯ ಮತ್ತು ಡಿವಿಜಿ - ಇವರು ನನ್ನ ನೆಚ್ಚಿನ ಮೆಚ್ಚಿನ ಸಾಹಿತಿಗಳು.

ಪ್ರಶ್ನೆ : ನಿಮಗೆ ತೃಪ್ತಿ ತಂದ ನಿಮ್ಮ ಕೃತಿಗಳಾವುವು?

ಉತ್ತರ : 'ಕೆಂಗನ ಕಲ್ಲು' ಕವನ ಸಂಕಲನ, 'ಮಳ್ಳಿಗೊಂದು ಒಳ್ಳೆ ಮಾತು' ಎಂಬ ಚಿಂತನ ರಚನೆ, 'ಶೂನ್ಯ ಸಂಪಾದನೆಗೊಂದು ಮುನ್ನುಡಿ' ಎಂಬ ವಿಮರ್ಶಾಕೃತಿ, 'ಮನಿಷಾ' ಎಂಬ ಕಾವ್ಯ ಪರಿಚಯ.

ಪ್ರಶ್ನೆ : ಕವಿತಾ ರಚನೆಗೆ ಹೆಸರಾದ ತಮಗೆ ಆ ಕಲೆ ಕರಗತವಾದದ್ದು ಹೇಗೆ?

ಉತ್ತರ : ದಯವಿಟ್ಟು ನಿಮ್ಮ ಮೊದಲನೆ ಮತ್ತು ಎರಡನೆಯ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳನ್ನು ಇದಕ್ಕೂ ಅನ್ವಯಿಸಿಕೊಳ್ಳಿ. ಅಂತೆಯೇ, ಸತತ ಸಾಧನೆಯಿಂದ ಸಿದ್ಧಿ ಅಲ್ಲವೆ? ಪ್ರತಿಭೆ ವ್ಯುತ್ಪತ್ತಿಗಳ ಜೊತೆಯಲ್ಲಿ ಸತತಾಭ್ಯಾಸವೂ ಬೇಕು. ಅವುಗಳನ್ನು ರೂಢಿಸಿಕೊಂಡೆ. ಸ್ಫೂರ್ತಿ ಬಂದಾಗ ಬರೆದೆ, ಪ್ರತಿಭೆ ಮೆರೆದಾಗ ಬರೆದೆ, ಆದರೆ ಪ್ರಕಟ ಆಗದೇ ಇದ್ದರೆ ಬರೆಯಲು ಉತ್ಸಾಹ ಇರೊಲ್ಲ ಅಲ್ವೆ. ಅಲ್ಲದೆ ನಾನಾಗ ಚಿಕ್ಕವನು. ಹಿರಿಯರ ಪ್ರೋತ್ಸಾಹದ ಅಗತ್ಯ ಇತ್ತು. ನನಗೆ ನನ್ನ ಕವನ ಪ್ರಕಟ ಆಗಲಿ. ನಾನು ಕವಿ ಅಂತಾ ಅನ್ನಿಸ್ಕೋಬೇಕು. ಅನ್ನೋ ಬಯಕೆ ನನಗೂ ಇತ್ತು. 'ರೇಣುಕ' ಅನ್ನೋ ಕಾವ್ಯನಾಮದಲ್ಲಿ ನನ್ನ ಕವನಗಳನ್ನು ಕೆಲವು ಪತ್ರಿಕೆಗಳಿಗೆ ಕಳುಹಿಸಿದೆ. ಬೆಂಗಳೂರಿನಿಂದ ಶ್ರೀ ವೆಂಕೋಬರಾಯರ 'ದೇಶಬಂಧು' ಅಂತಲೋ ಅಥವಾ 'ಪೌರವಾಣಿ' ಅಂತಲೋ ಒಂದು ಪತ್ರಿಕೆ ಹೊರಡುತ್ತಿತ್ತು. ಅದಕ್ಕೆ ಮತ್ತು ಬಿ. ಶಿವಮೂರ್ತಿಶಾಸ್ತ್ರಿಗಳ 'ಶರಣ ಸಾಹಿತ್ಯ' ಪತ್ರಿಕೆಗೆ ಕಳುಹಿಸಿದೆ. ಕವನಗಳು ಪ್ರಕಟ ಆದುವು. ನನ್ನ ಕವನ ಪತ್ರಿಕೆಯಲ್ಲಿ ಬಂದಾಗ ಸಿಕ್ಕಾಪಟ್ಟೆ ಹಿಗ್ಗಿದೆ. ಸಿಕ್ಕ ಸಿಕ್ಕವರಿಗೆಲ್ಲಾ ತೋರಿಸಿ ಈ ಕವನ ನನ್ನದು. 'ರೇಣುಕ' ಅನ್ನೋ ಹೆಸರಿನಲ್ಲಿ ಬರೀತಿದ್ದೀನಿ' ಎಂದೆಲ್ಲಾ ಹೇಳಿಕೊಂಡು ತಿರುಗಿದೆ. ಒಮ್ಮೆ ಸಂಪಾದಕ ಶ್ರೀ ವೆಂಕೋಬರಾಯರನ್ನು ಅವರ ಪ್ರೆಸ್ ಛೇಂಬರ್‌ನಲ್ಲಿ

ಭೇಟಿ ಮಾಡಿದೆ. ಅವರು 'ಶಹಬ್ಬಾಸ್' ಎಂದು ಬೆನ್ನು ತಟ್ಟಿ, ಕಾಫಿ ತರಿಸಿ ಕುಡಿಸಿ, ಹಿಂದೆ ಪ್ರಕಟವಾದ ಕವನಗಳ ಸಂಭಾವನೆ ಎಂದು ಐದು ರೂಪಾಯಿ ಕೊಟ್ಟರು. ಆಗ ನನಗೆ ಎಷ್ಟು ಸಂತೋಷ ಆಯಿತು ವರ್ಣಿಸಲಾರೆ. ನೂರಾರು ವರ್ಷ ಘೋರತಮ ತಪಸ್ಸು ಮಾಡುತ್ತಿದ್ದ ಮಹಾಯೋಗಿಗೆ ಭಗವಂತನ ಸಾಕ್ಷಾತ್ಕಾರ ಆದರೆ ಎಷ್ಟು ಆನಂದ ಆಗಬಹುದೋ ಅಂತಹ ಆನಂದ ನನಗಾಯಿತು! ಅವರಿಗೆ ಕೃತಜ್ಞತೆ ಅರ್ಪಿಸಿದೆ.

ಅನಂತರ ಮೈಸೂರಿನಲ್ಲಿ ಸರಸ್ವತೀಪುರದ ವಿದ್ಯಾಶ್ರಮದಲ್ಲಿ ಜೀ.ಶಂ. ಪರಮಶಿವಯ್ಯ, ಕೆ. ನಾಗಂದ್ರಪ್ಪ, ಪಿ.ಆರ್. ತಿಪ್ಪೇಸ್ವಾಮಿ, ಕ.ರಾ. ಕೃಷ್ಣೇಗೌಡ, ಅಬ್ದುಲ್ ನಜೀರ್ ಸಾಬ್ (ದಿವಂಗತ ಮಾಜಿ ಮಂತ್ರಿ) ನಾವೆಲ್ಲಾ ಇದ್ದೆವು. ಈ ಮಿತ್ರರ ಪ್ರೋತ್ಸಾಹದಿಂದ ನನ್ನ 'ಶಿವ-ತಾಂಡವ' ಮೊದಲ ಕವನ ಸಂಕಲನ 1952ರಲ್ಲಿ ಪ್ರಕಟ ಆಯಿತು. ಆಮೇಲೆ ರಂಗಭೂಮಿ ಕಲಾವಿದ ಸಿ.ಬಿ. ಜಯರಾವ್, ಆಕಾಶವಾಣಿಯ ವೈ.ಎಸ್. ಕುಮಾರಸ್ವಾಮಿ ರಾವ್ ಮೊದಲಾದವರ ಪ್ರೋತ್ಸಾಹದಿಂದ ನನ್ನ ಕೆಲವು ಕವನಗಳು ಆಕಾಶವಾಣಿ ಮೂಲಕ ಪ್ರಸಾರವಾದವು. ಶಿವಮೊಗ್ಗೆಯ ಸಹ್ಯಾದ್ರಿ ಕಾಲೇಜಿನಲ್ಲಿದ್ದಾಗ ನನ್ನ 'ಕೆಂಗನಕಲ್ಲು' ಪ್ರಕಟ ಆಯಿತು. ರಾಜ್ಯ ಸರ್ಕಾರ ಅದಕ್ಕೆ ಪ್ರಶಸ್ತಿ ನೀಡಿ ಪ್ರೋತ್ಸಾಹಿಸಿತು. ಅನೇಕ ಕಥೆ, ಕವನ, ವಿಮರ್ಶೆಗಳನ್ನು ಬರೆದೆ. ನನ್ನ 'ಭಾಸನ ಮಕ್ಕಳು' ಎಂಬ ವಿಮರ್ಶಾಕೃತಿಗೆ ದೇವರಾಜ ಬಹದ್ದೂರ್ ಬಹುಮಾನವೂ ಬಂತು. ಹಿರಿಯರ ಪ್ರೋತ್ಸಾಹ, ನನ್ನ ತಂದೆ ತಾಯಿಯರ ಆಶೀರ್ವಾದ, ನನ್ನ ಧರ್ಮಪತ್ನಿಯ ಸಹಕಾರ - ಇವು ಮುಪ್ಪುರಿಗೊಂಡು ನನ್ನಲ್ಲಿದ್ದ ಪ್ರತಿಭೆಯನ್ನು ಬಯಲಿಗೆಳೆದವು.

ಪ್ರಶ್ನೆ : ಶಿಕ್ಷಕ-ಲೇಖಕರಾಗಿ ದುಡಿದ ತಮ್ಮ ಅನುಭವವನ್ನು ಸಂಕ್ಷಿಪ್ತವಾಗಿ ಹೇಳುವಿರಾ?

ಉತ್ತರ : ಶಿಕ್ಷಕನಾಗಬೇಕೆಂಬ ಅದರಲ್ಲೂ ಕನ್ನಡ ಅಧ್ಯಾಪಕನಾಗಬೇಕೆಂಬ ಹಂಬಲ ಚಿಕ್ಕಂದಿನಿಂದಲೂ ಇತ್ತು. ಇದಕ್ಕೆ ಮೂಲ ಪ್ರೇರಣೆ ನಮ್ಮ ಮನೆತನ ಅಂತಾ ಕಾಣುತ್ತೆ. ನನ್ನ ತಂದೆ, ನಮ್ಮ ದೊಡ್ಡಪ್ಪಾಜಿ, ನಮ್ಮ ಸೋದರ ಮಾವ - ಎಲ್ಲರೂ ಕೂಲಿಮಠದ ಓಚಯ್ಯಗಳು. ಅವರು ಪಾಠ ಹೇಳಿದಂತೆ ನಾನೂ ಹೇಳಬೇಕು; ಪದ್ಯಗಳನ್ನು ಹಾಡಿ ವಿದ್ಯಾರ್ಥಿಗಳಿಗೂ ಕಲಿಸಬೇಕು, ನಾಟಕಗಳನ್ನು ಬರೆದು ಆಡಿಸಬೇಕು ಅನ್ನೋ ಗೀಳು. ಅಂದುಕೊಂಡಂತೆ ಆಗುವುದಿಲ್ಲ ಸಾಮಾನ್ಯವಾಗಿ. ಆದರೆ ನನ್ನಲ್ಲಾಯಿತು. ಶಿಕ್ಷಕ ಆದೆ, ಒಳ್ಳೆ ಮೇಷ್ಟ್ರು ಅನ್ನಿಸಿಕೊಂಡೆ. ತುಮಕೂರು, ದಾವಣಗೆರೆ, ಶಿವಮೊಗ್ಗ, ಬೆಂಗಳೂರು, ಚನ್ನಪಟ್ಟಣ, ಮಂಗಳೂರು ಎಲ್ಲೆಡೆಯೂ ನನ್ನ ವಿದ್ಯಾರ್ಥಿಗಳು ನನ್ನನ್ನು ಪ್ರೀತಿಸಿದರಷ್ಟೇ ಅಲ್ಲ ಪೂಜಿಸಿದರು! ಇದು ಉತ್ಪ್ರೇಕ್ಷೆ ಅನ್ನಿಸಬಹುದು. ಮರುಳಯ್ಯನ ಅಹಂಕಾರದ ನುಡಿ ಅನ್ನಿಸಬಹುದು. ಆದರೂ ಅದು ಸತ್ಯ. ನನ್ನ ವಿದ್ಯಾರ್ಥಿಗಳೂ ಅಂಥವರೆ. ಅಂಥ ಶಿಷ್ಯರನ್ನು ಪಡೆದ ಭಾಗ್ಯ ನನ್ನದು. ನನ್ನ ಸಹೋದ್ಯೋಗಿಗಳು ಹೊಟ್ಟೆ ಕಿಚ್ಚು ಪಡುವಷ್ಟರ ಮಟ್ಟಿನ ಖ್ಯಾತಿ ನನ್ನದು ಅಧ್ಯಾಪಕನಾಗಿ. ಪಾಠ ಹೇಳುವುದು ಪರಶಿವನ ಪೂಜೆ ಎಂದು ಭಾವಿಸಿಕೊಂಡೇ ನಡೆದಿದ್ದೇನೆ. ಇದಕ್ಕಿಂತ ಹೆಚ್ಚು ಹೇಳಲಾರೆ.

ನನ್ನ ವ್ಯಕ್ತಿತ್ವ ನನ್ನ ವಿದ್ಯಾರ್ಥಿಗಳ ಮೇಲೆ ಪರಿಣಾಮ ಬೀರದೆ ಇಲ್ಲ. ನಾನು ಮಂಗಳೂರು ಸರಕಾರೀ ಕಾಲೇಜಿನ ಪ್ರಿನ್ಸಿಪಾಲನಾಗಿದ್ದಾಗ ಅಲ್ಲಿನ ಹುಡುಗರಲ್ಲಿ

ವಯಸ್ಸಿಗೆ ಸಹಜವಾದ ಚೇಷ್ಟೆ ಇತ್ತು. ನನಗೇನೂ ಅದು ಹೊಸದಾಗಿರಲಿಲ್ಲ. ಆದರೆ ಯಾರೂ ಅವಿಧೇಯರಾಗಿರಲಿಲ್ಲ. ನನ್ನ ಗುಣಕ್ಕೆ ಮಾತಿಗೆ ಬೆಲೆ ಕೊಡುತ್ತಿದ್ದರು. 1983ನೇ ಇಸವಿ. ಒಂದು ದಿನ ಒಬ್ಬ ವಿದ್ಯಾರ್ಥಿ ನಾಯಕ, ಹೆಸರು ಅಶೋಕ ರೈ. ಕಾಲೇಜಿನ ಕಾರಿಡಾರ್‌ನಲ್ಲಿ ಸಿಗರೇಟು ಸೇದಿಕೊಳ್ತಾ ಬರ್‍ತಾ ಇದ್ದ. ತನ್ನ ಇಬ್ಬರು ಸ್ನೇಹಿತರ ಜೊತೆ ಮಾತಾನಾಡಿಕೊಂಡು. ಪ್ರಿನ್ಸಿಪಲ್ ಛೇಂಬರ್ ಕಸ ಗುಡಿಸುತ್ತಿದ್ದ ಜವಾನ. ನಾನು ಹೊರಗೆ ಬಂದು ನಿಂತಿದ್ದೆ. ಸಿಗರೇಟ್ ಹುಡುಗ ನಾನು ನಿಂತಿದ್ದನ್ನು ಗಮನಿಸಿರಲಿಲ್ಲ. ನಾನು ಅವನನ್ನು ಗಮನಿಸಿದ್ದೆ. ಹತ್ತಿರಕ್ಕೆ ಬರುವುದನ್ನೇ ಕಾಯುತ್ತಿದ್ದೆ. ಆ ಸಿಗರೇಟ್ ಉರಿದಂತೆ ನಾನೂ ಉರಿಯುತ್ತಿದ್ದೆ. ಹತ್ತಿರ ಬಂದ ಕೂಡಲೇ, 'ಅಯ್ಯೋ ಅಯೋಗ್ಯ' ಎಂದು ಫೇಡ್ ಅನ್ನೋ ಹಾಗೆ ಅವನ ಕೆನ್ನೆಗೆ ಹೊಡೆದೆ. ತುಟಿಗಳ ಮಧ್ಯೆ ಇದ್ದ ಸಿಗರೇಟ್ ಹಾರಿ ಅಷ್ಟು ದೂರ ಬಿತ್ತು. ಆ ಹುಡುಗ ನನ್ನ ಉಗ್ರ ರೂಪ ನೋಡಿ ನಿಲ್ಲಲಾರದೆ ಕಾಲೇಜು ಕೌಂಪೌಂಡ್ ಹಾರಿ ಓಡ್ತಾ ಇದ್ದ. ಓಡುವಾಗ ತುಳು ಭಾಷೆಯಲ್ಲಿ 'ಲೋ ನಾನು ಪ್ರಿನ್ಸಿಪಾಲರ ಕೈಯಲ್ಲಿ ಇವೊತ್ತು ಏಟು ತಿಂದುಬಿಟ್ಟೆ....' ಎಂದು ಕೂಗಿಕೊಂಡು ಓಡಿದ. ಅದು ಬಹುದೊಡ್ಡ ಕಾಲೇಜು. ಸುಮಾರು ಮೂರುವರೆ ಸಾವಿರ ವಿದ್ಯಾರ್ಥಿ ವಿದ್ಯಾರ್ಥಿನಿಯರಿರುವ ಸಂಸ್ಥೆ. ಆ ಕಾಲೇಜಿನಲ್ಲಿ ವಿದ್ಯಾರ್ಥಿಗಳನ್ನು ಹೊಡೆಯುವುದಿರಲಿ, ಮಾತನಾಡಿಸಿ ಸೈ' ಎನ್ನಿಸಿಕೊಂಡವರಿರಲಿಲ್ಲವಂತೆ. ನನ್ನ ಅಧ್ಯಾಪಕ ಮಿತ್ರರು 'ಏನ್ ಸಾರ್ ಅಶೋಕ್ ಸ್ಟೂಡೆಂಟ್ ಲೀಡರ್. ಅವನನ್ನು ಪಬ್ಲಿಕ್‌ನಲ್ಲಿ ಹೊಡೆಯೋದೆ!' ಅಂತ ಆಶ್ಚರ್ಯ ವ್ಯಕ್ತಪಡಿಸಿದರು. 'ಅಲ್ರೀ ನಾನು ಒಂದೇಟು ಕೊಟ್ಟದ್ದಕ್ಕೆ ಆಕ್ಷೇಪ ಎತ್ತುತ್ತೀರಿ. ಅವನು ಸಿಗರೇಟ್ ಸೇದಬಹುದಾ ಕಾಲೇಜ್ ಆವರಣದಲ್ಲಿ? ಅದಕ್ಕೇಕೆ ನೀವು ಬುದ್ಧಿ ಹೇಳೊಲ್ಲ ಅವನಿಗೆ' ಅಂದೆ. 'ಕಷ್ಟ ಸಾರ್, ಅವರು ತುಪಾಕಿಗಳು' ಅಂರು. 'ಹಾಗಂತಾ ನಾವು ಅವರಿಗೆ ಹೆದರಿ ಅವರಂತೆ ವರ್ತಿಸಬೇಕಾ? ನಾನು ಅಧ್ಯಾಪಕ. ಗುರು! ನನ್ನ ಶಿಷ್ಯನನ್ನು ತಿದ್ದುವ ಹಕ್ಕು ಅಧಿಕಾರ ನನಗಿದೆ. ಬಯ್ತೀನಿ, ಸಮಯ ಬಂದರೆ ಹೊಡೀತಿನೀ' ಅವರು 'ಏನೋ ಸಾರ್, ನೀವೊಬ್ಬರೇ ಹಾಗೆ ಹೊಡೆದು ಬಚಾವಾದೋರು' ಅಂದರು. ಆ ಹುಡುಗ ಮೂರು ದಿವಸ ಕಾಲೇಜಿಗೆ ಬರಲಿಲ್ಲ. ಒಂದು ದಿನ ರಸ್ತೆಯಲ್ಲಿ ಸಿಕ್ಕಿದ. ಅಲ್ಲಿಯೇ ಬಯ್ದೆ. 'ತಪ್ಪಾಯ್ತು ಸಾರ್' ಅಂದ. ಮಾರನೇ ದಿವಸದಿಂದ ಕಾಲೇಜಿಗೆ ಸರಿಯಾಗಿ ಬಂದ.

ನಾವು ಸರಿ ಇದ್ದರೆ ಊರು ಸರಿ ಇರುತ್ತೆ. ನಮ್ಮಲ್ಲೇ ದೋಷ ಇಟ್ಟುಕೊಂಡು ಬೇರೆಯವರಿಗೆ ಬುದ್ಧಿ ಹೇಳುವುದು ಗೌರವ ಅಲ್ಲ. ಇದು ನಾನು ಅಧ್ಯಾಪಕನಾಗಿ ಕಲಿತ ಪಾಠ. ಬೋಧಿಸಿದ ಬೋಧೆ!

ಅಧ್ಯಾಪಕನಾಗಿ ನನಗೆ ಸಿಕ್ಕಿದ ತೃಪ್ತಿ ಲೇಖಕನಾಗಿ ದೊರೆತಿಲ್ಲ. ಅದಕ್ಕೆ ದಯವಿಟ್ಟು ತಪ್ಪು ತಿಳಿಯಬೇಡಿ, ಸ್ಪಷ್ಟ ಹೇಳ್ತೇನೆ, ಅಸೂಯಾಪರ ಪರಿಸರ. ಆಸ್ಕರ್ ವೈಲ್ಡ್‌ನಂತಹ ಪ್ರತಿಭಾಶಾಲಿ ಹುಟ್ಟಿಲ್ಲ. ಅದೇ ರೀತಿ ಅವನಂತಹ ಹತಭಾಗ್ಯನೂ ಹುಟ್ಟಿಲ್ಲ. ಪ್ರತಿಭೆಯನ್ನು ಪರಮಾತ್ಮ ಅವನಿಗೆ ಕೊಟ್ಟು ಮರೆತಿದ್ದ. ಆದರೆ ಅದೃಷ್ಟವನ್ನು ಮಾತ್ರ ಕಿತ್ತು ತನ್ನಲ್ಲಿಯೇ ಬಚ್ಚಿಟ್ಟುಕೊಂಡಿದ್ದ. ಅಂತಹದೇ ಸ್ಥಿತಿ ನನ್ನದೂ. ಅಂದರೆ ಆಸ್ಕರ್‌ವೈಲ್ಡ್‌ನ ಸಮಾನ ಪ್ರತಿಭಾವಂತ ನಾನು ಅಂತ ಹೇಳಿಕೊಳ್ಳುತ್ತಿಲ್ಲ ಅಥವಾ ಅವನಂತೆ ಜೀವನವನ್ನು ಕೈಯಾರ

ಹಾಳುಮಾಡಿಕೊಂಡವನು ಅಂತಲೂ ಅಲ್ಲ. ದುರದೃಷ್ಟದಲ್ಲಿ ಇಬ್ಬರೂ ಸಮಭಾಗಿಗಳು ಎಂದಷ್ಟೇ ಹೇಳಲಿಚ್ಛಿಸುತ್ತೇನೆ.

ಪ್ರಶ್ನೆ : ಮೂರನೆಯ ಜಿಲ್ಲಾ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಆಯ್ಕೆಯಾದ ಸಂದರ್ಭದಲ್ಲಿ ನಿಮ್ಮ ಶುಭನುಡಿಗಳೇನು?

ಉತ್ತರ : ನನ್ನ ಜಿಲ್ಲೆಯ ನನ್ನ ಜನರು ಕನ್ನಡ ನಾಡಿನ ಹೊನ್ನಾಗಬೇಕು; ರಾಷ್ಟ್ರ ಹಿತಸಾಧನೆಯ ಹೊಂದೇರು ತಾವಾಗಬೇಕು. ಪಂಪ, ರನ್ನ, ಹರಿಹರ, ರಾಘವಾಂಕ, ಕುಮಾರವ್ಯಾಸ ಮೊದಲಾದವರಲ್ಲಿದ್ದಂತೆ ನನ್ನವರಲ್ಲೂ ಮಣ್ಣಿನ ಮೋಹ ಮಾಸದಿರಲಿ. ಅನ್ಯರು ಎಲ್ಲ ವಿಷಯಗಳಲ್ಲೂ ದುರಭಿಮಾನಿಗಳಿದ್ದರೆ, ಕನ್ನಡಿಗರು ನಿರಭಿಮಾನಿಗಳು, ಅಭಿಮಾನ ಶೂನ್ಯರು ಎಂಬ ಅಪವಾದ ಇದೆ. ನನ್ನ ಜಿಲ್ಲೆಯವರು ಆ ಅಪವಾದಕ್ಕೆ ಅಪವಾದವಾಗಲಿ. ನಾನವರಲ್ಲಿ ನಿರೀಕ್ಷಿಸುವುದು ಅವರ ಸಹಜ ಸ್ವಾಭಿಮಾನವನ್ನು. ನನ್ನವರು ಎಂದೆಂದಿಗೂ ಸ್ವಾಭಿಮಾನದ ಶಿಶುಗಳಾಗಲಿ, ರಾಷ್ಟ್ರಪ್ರೇಮ, ಕನ್ನಡ ಭಾಷಾ ಪ್ರೇಮ ನಂದಾದೀವಿಗೆಯಂತೆ ಅವರೂ ಎಂದೆಂದಿಗೂ ಬೆಳಗುತ್ತಿರಲಿ. ತಾವು ಬದುಕಿ, ಅನ್ಯರಿಗೂ ಬದುಕು ಕೊಡಲಿ. ಅವರಲ್ಲಿ 'ಬೇಕು' ಎಂಬ ಮೋಹವಾಗಲಿ 'ಬೇಡ' ಎಂಬ ವೈರಾಗ್ಯವಾಗಲಿ ಇರದ ನಿತ್ಯತೃಪ್ತಿ ಇರಲಿ, ಅವರ ಬಾಳಿನಲ್ಲಿ ಹಾಲುಕ್ಕಿ ಜೇನು ಹರಿಯಲಿ!

ನನ್ನ ಲೇಖಕ ಬಂಧು ಭಗಿನಿಯರಿಗೊಂದು ಮಾತು:

ಪರಿಸರಕ್ಕೆ ಸದಾ ಸ್ಪಂದಿಸಿ. ಪ್ರಭಾವಕ್ಕೆ ಮಣಿಯಬೇಡಿ. ಸೋಪಜ್ಞತೆ ನಿಮ್ಮ ಸ್ವತ್ತಾಗಿರಲಿ. ನಿಮ್ಮ ಬರೆವಣಿಗೆ ಮೊದಲು ನಿಮ್ಮೊಡನೆ ಸಂಭಾಷಿಸಲಿ, ಸಂವಾದಿಸಲಿ. ನಿಮ್ಮ ಭಾವಗಳು ತಿಳಿಯಾಗಿರಲಿ (ಹುಳಿಯಾಗುವುದು ಬೇಡ) ಅವನ್ನು ಸಮರ್ಥ ರೀತಿಯಲ್ಲಿ ಸಂವಹಿಸಬಲ್ಲ ಕಸುವು ತುಂಬಿದ ಭಾಷೆ ಸಿದ್ಧಿಸಲಿ. ನಮ್ಮವರು ಗೂಡಾರದ ಕವಿಗಳಾಗುವುದು ಬೇಡ, ಬೀಡಾರದ ಬಂಧುಗಳಾಗಿ, ಸ್ನೇಹ ಸಿಂಧುಗಳಾಗಲಿ.

-ನಮಸ್ಕಾರ -

ಸಾಹಿತ್ಯ ಸಂಚಾರ...

ಡಾ॥ ಸಾ.ಶಿ. ಮರುಳಯ್ಯ

ತಾಯಿಯ ತೊಡೆಯ ಮೇಲೆ ಹತ್ತಿ ಕುಳಿತುಕೊಳ್ಳಲು ಹಂಬಲಿಸುವ ಶಿಶುವಿನಂತೆ, ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಗಾದಿಯೇರಲು ಆಸೆಪಟ್ಟೆ; ಪಡೆದ ಮೇಲೆ ಭ್ರಮನಿರಸ ಆಯಿತು. ಸೋಲು ಗೆಲುವೆಂಬ ಎರಡು ದಡಗಳ ನಡುವೆ ಬದುಕು ಸಾಗಿತು. ಅಧಿಕಾರ ಸ್ವೀಕರಿಸಿದ ಆರೆಂಟು ತಿಂಗಳುಗಳಲ್ಲಿ ಅರುವತ್ತರ ಅನುಭವ ಪಡೆದೆ. ಅನುಭವ ಎಂದರೇನು? ಎಡಹುವುದು, ಎಚ್ಚೆತ್ತುಕೊಳ್ಳುವುದು. ಅಂದರೆ ಮೊದಲು ಮಾಡಿದ ತಪ್ಪನ್ನು ಅನಂತರ ತಿದ್ದಿಕೊಳ್ಳುವುದು. ಈ ಕೆಲಸವನ್ನು ನನ್ನ ಜೀವನದುದ್ದಕ್ಕೂ ಮಾಡಿಕೊಂಡು ಬಂದಿದ್ದೇನೆ; ಮಾಡುತ್ತಲೂ ಇದ್ದೇನೆ. ಜೀವನ, ನನ್ನ ಪಾಲಿಗೆ ಒಂದು ಅನುಭವದ ಶಾಲೆ. ಅಲ್ಲಿ ಸಾಕಷ್ಟು ಕಲಿತಿದ್ದೇನೆ; ಇರಲಿ.

ಚುನಾವಣೆಯಲ್ಲಿ ಗೆದ್ದು ಬಂದ ನನಗೆ ಅದರ ಸೋಲಿನ ನೋವೇನು ಎಂಬುದೂ ಗೊತ್ತು. ಸೋಲಿನ ಸವಿಯನ್ನು ನಾನುಂಡಿದ್ದೇನೆ. ಆದರೂ ಸೋತವನ ದೊಡ್ಡತನ ಗೆದ್ದವನನ್ನು ಅಭಿನಂದಿಸುವುದು. ಕಳೆದ ಪರಿಷತ್ ಚುನಾವಣೆಯಲ್ಲಿ ನನ್ನ ಎದುರಾಳಿಯಾಗಿದ್ದ ನನ್ನ ವಿದ್ಯಾರ್ಥಿ ಮಿತ್ರ ಶ್ರೀ ಟಿ.ಎನ್. ಕುಮಾರಸ್ವಾಮಿಯವರು ನಾನು ಅಧಿಕಾರ ಸ್ವೀಕರಿಸಿದ ಮಾರನೆಯ ದಿನವೇ ಪರಿಷತ್ತಿಗೆ ಬಂದು ಹಾರ ಹಾಕಿ ಅಭಿನಂದಿಸಿದರು. ಇದೇ ಬಗೆಯ ನುಡಿಕಾಣಿಕೆ ನನ್ನ ನಿಕಟಪೂರ್ವ ಅಧ್ಯಕ್ಷ ಶ್ರೀ ಗೊರುಚರವರಿಗೂ ಸಂದಿತ್ತು ನನ್ನಿಂದ. ಆದರೂ ಚುನಾವಣೆ ಚುನಾವಣೆಯೇ! ನ್ಯಾಯದೇವತೆಗೆ ಕಣ್ಣಿಲ್ಲ ಅನ್ನುತ್ತಾರೆ. ಚುನಾವಣೆಗೆ ತಳವೇ ಇಲ್ಲ. ಚುನಾವಣೆಗಳ ಮೂಲಕವೇ ಬಂದ ಸರ್ಕಾರಗಳಿಗಂತೂ ಕಿವಿಯೇ ಇಲ್ಲ, ಕರುಳೂ ಇಲ್ಲ. ಆದರೂ ಅವರೊಡನೆ ಕಿತ್ತಾಡಿಕೊಂಡೇ ಬದುಕು ಮಾಡಬೇಕು. ಇದು ಆರ್ಥಿಕ ಸ್ಥಾಯಿತ್ವವಿರದ ಸಾಹಿತ್ಯ ಪರಿಷತ್ತುಗಳಂತಹ ಸಂಸ್ಥೆಗಳ ಹಣೆಯಬರಹ.

ಪರಿಷತ್‌ನ ಅಧ್ಯಕ್ಷನಾದಾಗಿನಿಂದ ನನಗೆ ಬಿಡುವಿಲ್ಲದ ಸಾಹಿತ್ಯ ಪ್ರವಾಸಗಳು. ಮೊನ್ನೆ ಮೊನ್ನೆ ದಕ್ಷಿಣ ಕನ್ನಡ ಜಿಲ್ಲೆ, ಹಂಪೆ ಪ್ರವಾಸ ಮಾಡಿ ಬಂದೆ. ದಕ್ಷಿಣ ಕನ್ನಡ ಜಿಲ್ಲಾ ಸಾಹಿತ್ಯ ಸಮ್ಮೇಳನ ಮತ್ತಿತರ ಕಾರ್ಯಕ್ರಮಗಳಲ್ಲಿ ಭಾಗವಹಿಸಿದೆ. ಮಂಗಳೂರು ವಿಶ್ವವಿದ್ಯಾಲಯದಲ್ಲಿ ಕಾವ್ಯ ಕುರಿತು ನಡೆದ ಸಾಹಿತ್ಯ ಗೋಷ್ಠಿಯ ಅಧ್ಯಕ್ಷನಾಗಿದ್ದೆ. ಇವೆಲ್ಲ ತುಂಬಾ ಚೆನ್ನಾಗಿ ನಡೆದವು. ದಕ್ಷಿಣ ಕನ್ನಡ ಜಿಲ್ಲೆ ಜನ ಏನು ಮಾಡಿದರೂ ಅಚ್ಚುಕಟ್ಟಾಗಿ, ಅದ್ಭುತವಾಗಿ ಮಾಡುತ್ತಾರೆ. ಧರ್ಮಸ್ಥಳದಲ್ಲಿ ಜರುಗಿದ ಸರ್ವಧರ್ಮ ಸಮ್ಮೇಳನದಲ್ಲಿ 'ಸಾಹಿತ್ಯ ಸಮ್ಮೇಳನ'ದ ಅಧ್ಯಕ್ಷ ಪದವಿ ನನ್ನದಾಯಿತು. ಸಾಹಿತ್ಯ ಸಮ್ಮೇಳನ, ಧರ್ಮಸಮ್ಮೇಳನ ತುಂಬಾ ಚೆನ್ನಾಗಾಯಿತು. ಶ್ರೀ ವೀರೇಂದ್ರ ಹೆಗ್ಗಡೆಯವರು ತುಂಬಾ ಆಸಕ್ತಿ ಗೌರವಗಳಿಂದ ಪ್ರತಿವರ್ಷ ಇವನ್ನೆಲ್ಲ ನಡೆಸುತ್ತಾರೆ.

ಬಿಡುವಿಲ್ಲದ ಕೆಲಸಗಳಲ್ಲಿ ನನ್ನಲ್ಲಿರುವ ಕವಿ-ವಿಮರ್ಶಕ ಒಂದಿಷ್ಟು ಹಿಂದೆ ಬಿದ್ದಿದ್ದಾನೆನ್ನುವುದಂತೂ ನಿಜ. ಅಧ್ಯಯನ-ಬರೆವಣಿಗೆಗೆ ಸಮಯವೇ ಇಲ್ಲ. ಶಾಂತವಾಗಿ

ಕುಳಿತುಕೊಳ್ಳಲು ಸಾಧ್ಯವಾಗುತ್ತಿಲ್ಲ. ಛಂದಸ್ಸು, ವ್ಯಾಕರಣ, ಕಾವ್ಯ ಮೀಮಾಂಸೆ ಕುರಿತು ಒಂದೊಂದು ಕೃತಿ ರಚಿಸಬೇಕು ಎಂದು ಆಲೋಚನೆ ಇದೆ. ತೌಲನಿಕ ಕಾವ್ಯ ಮೀಮಾಂಸೆ, ಅನ್ವಯಿಕ ಕಾವ್ಯ ಮೀಮಾಂಸೆ, ತೌಲನಿಕ ಸಾಹಿತ್ಯ ಅಧ್ಯಯನ ಕುರಿತು ಕೃತಿಗಳ ರಚನೆಗೆ ಆಸೆ ಇದೆ. ಕನ್ನಡ ಸಾಹಿತ್ಯದ ಪ್ರಮುಖ ಹೆಜ್ಜೆ ಗುರುತುಗಳು ಕುರಿತು ಒಂದು ಕೃತಿ ರಚಿಸಬೇಕು. ಟಿಪ್ಪಣಿಗಳನ್ನು ಮಾಡಿಕೊಂಡಿದ್ದೇನೆ. ಗಟ್ಟಿಯಾಗಿ ಕೂತು ಬರೆಯಲು ಸಮಯಾವಕಾಶವಾಗುತ್ತಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಸೇವೆಯಲ್ಲಿ, ತನ್ಮೂಲಕ ಕನ್ನಡಿಗರ - ನಾಡು ನುಡಿ ಸೇವೆಯಲ್ಲಿ ನನ್ನ ಸಾಹಿತ್ಯ ಸೃಷ್ಟಿ ಒಂದಿಷ್ಟು ಹಿಂದೆ ಉಳಿದಿದೆ. ಆದಷ್ಟು ಸಮಯ ಹೊಂದಿಸಿಕೊಂಡು ಕೆಲಸ ಮಾಡಬೇಕೆಂದಿದ್ದೇನೆ.

11, 12, 13, ಮೇ ತಿಂಗಳಲ್ಲಿ ಹಾಸನದ ಅಖಿಲ ಭಾರತ ಸಾಹಿತ್ಯ ಸಮ್ಮೇಳನ ನಡೆಯುವುದಿದೆ. ಮನಸ್ಸೆಲ್ಲ ಅದರ ಮೇಲೆಯೇ ಇದೆ. ಜನ ಬೆಂಬಲ, ರಾಜ್ಯ ಸರ್ಕಾರದ ಬೆಂಬಲ ದೊರಕಿಸಿಕೊಂಡು ಈ ಕೆಲಸ ನಡೆಯಬೇಕು. ನಾನು ಅಧ್ಯಕ್ಷನಾದ ಮೇಲೆ ಆಚರಿಸಲಿರುವ ಮೊದಲ ದೊಡ್ಡ ಕನ್ನಡ ಸಮ್ಮೇಳನ ಇದು. ಇದೇ ಆಲೋಚನೆ ನನ್ನ ಮನಸ್ಸನ್ನೆಲ್ಲ ಆವರಿಸಿದೆ.

ಪರಿಷತ್ತಿಗೆ ಸ್ವಾಯತ್ತತೆ ದೊರಕಿಸಿಕೊಡಲು ತುಂಬಾ ಹೆಣಗಿದೆ, ಈಗಲೂ ಹೆಣಗುತ್ತಿದ್ದೇನೆ. ಹಗಲಿರುಳು ಅದೇ ಹಸಿವು, ಹಂಬಲ, ಪರಿಷತ್ತನ್ನು ಕಟ್ಟಿಕೊಂಡ ಮೇಲೆ ಶ್ರೀ ಗೊರುಚರವರಂತೆ ಮನೆ ಮರೆತಿದ್ದೇನೆ, ಆರೋಗ್ಯದ ಕಡೆ ಗಮನಕೊಡುವುದನ್ನೂ ಬಿಟ್ಟು ಬಿಟ್ಟಿದ್ದೇನೆ. ಪರಿಷತ್ತಿನಿಂದ ಒಂದೇ ಒಂದು ಪೈಸವನ್ನೂ ಯಾವ ರೂಪದಿಂದಲೂ ಸ್ವೀಕರಿಸದೆ ಅದರ ಪುರೋಭಿವೃದ್ಧಿಗಾಗಿ ನನ್ನನ್ನೇ ನಾನು ಅರ್ಪಿಸಿಕೊಂಡಿದ್ದೇನೆ. ಇದರಲ್ಲಿ ನನಗೆ ಹರ್ಷವಿದೆ; ತೃಪ್ತಿಯೂ ಇದೆ. ಕನ್ನಡ ಸಾಹಿತ್ಯ ಪರಿಷತ್ತಿನ ಸೇವೆ ಕನ್ನಡ ರಾಜರಾಜೇಶ್ವರಿಯ ಪೂಜೆ ಎಂದು ಭಾವಿಸಿ ಆಚರಿಸುತ್ತಿದ್ದೇನೆ. ನನ್ನ ಐದು ಕೋಟಿ ಕನ್ನಡ ಬಂಧುಭಗಿನಿಯರು ಆರಿಸಿ ಕಳುಹಿಸಿದ್ದೇಕೆ? ಮೋಜು ಮಾಡಲಲ್ಲ; ಕನ್ನಡಕ್ಕಾಗಿ, ನಾಡಿಗಾಗಿ, ಸಾಹಿತ್ಯ ಸಂಸ್ಕೃತಿಗಳಿಗಾಗಿ ಶ್ರಮಿಸಲಿ ಎಂದು. ಆ ಕೆಲಸವನ್ನು ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡುತ್ತಿದ್ದೇನೆ. ಇದಕ್ಕೆ ನನ್ನ ಅಂತರಾತ್ಮವೇ ಸಾಕ್ಷಿ. ಅಧಿಕಾರ ಎಂಬುದು ಸ್ವೇಚ್ಛಾಚಾರದ ವೇದಿಕೆ ಅಲ್ಲ, ಸೇವೆಯ ಕರ್ಮಭೂಮಿ ಎಂಬುದು ನನ್ನ ವ್ಯಾಖ್ಯೆ. ಅದನ್ನು ನಿಷ್ಠೆಯಿಂದ ಪಾಲಿಸಿಕೊಂಡು ಬರುತ್ತಿದ್ದೇನೆ. ಪರಿಷತ್ತಿನ ಆವರಣದಲ್ಲಿದ್ದ ಗುಡ್ಡದಷ್ಟಿದ್ದ ಮಣ್ಣು, ಮಸಿ, ತೆಗೆಸಿ ಆಗಿದೆ. ಒಂದು ಕೊಳವೆಬಾವಿ ತೆಗೆಸಿ 'ನೀರು ನಿರಂತರ ಧಾರೆ'ಯಾಗಿರಲು ವ್ಯವಸ್ಥೆ ಮಾಡಿ ಆಗಿದೆ. ಅಚ್ಚುಕಟ್ಟಾದ ನವೀಕರಣಕ್ಕಾಗಿ ನನ್ನ ಮಗಳು ರಾಗಿಣಿ, ಅಳಿಯ ಸಂಗಮೇಶ್ವರ ದಾನವಾಗಿ ಕೊಟ್ಟ ಮೂರು, ನಾಲ್ಕು ಲಕ್ಷ ರೂಪಾಯಿಗಳ ಕಂಪ್ಯೂಟರ್, ಲೇಸರ್ ಪ್ರಿಂಟರ್ ಇತ್ಯಾದಿಗಳನ್ನು ಅಳವಡಿಸಿ ಆಗಿದೆ. ಸುಮಾರು ಐವತ್ತು ವರ್ಷಗಳಿಂದಲೂ ಬೆಳೆದು ಬಂದ ನಿಘಂಟುವಿನ ಕಡೆಯದಾದ ಎಂಟನೆಯ ಸಂಪುಟವನ್ನು ಬಿಡುಗಡೆ ಮಾಡಿ ಆಗಿದೆ. ಇಷ್ಟಾದರೂ ಆದದ್ದು ಅಲ್ಪ ಎಂಬುದೇ ನನ್ನ ಭಾವನೆ. ಆಗುವುದು ಬಹಳ ಇದೆ, ಬೆಟ್ಟದಷ್ಟಿದೆ. ಅತೃಪ್ತಿಯೇ ಪ್ರಗತಿಯೇ ಹೆಬ್ಬಾಗಿಲು. ಆ ದಿಸೆಯಲ್ಲಿ ನಾನಿದ್ದೇನೆ. ಪರಿಷತ್ತಿಗೆ ಸಂಪೂರ್ಣ ಸ್ವಾವಲಂಬನೆ ದೊರಿಕಿಸಕೊಡುವ ಹೊರತು ನನಗೆ ಸಮಾಧಾನ ಇಲ್ಲ; ನಿದ್ದೆಯೂ ಇಲ್ಲ! ''ಇನ್ನೆಲ್ಲಿಯ ನಿದ್ದೆ!''

ಉತ್ತರಮುಖಿ

ನಿಮ್ಮ ಕಲ್ಪನೆಯಲ್ಲಿ 'ಪರಮ ಸುಖ' ಎಂದರೆ ಯಾವುದು?

-ಸಕಲ ಜೀವಾತ್ಮರಿಗೆ ಲೇಸನೇ ಬಯಸುವುದು

ನಿಮಗೆ ಅತ್ಯಂತ ಆತಂಕ ತರುವ ಸಂಗತಿ ಯಾವುದು?

-ನಿಂದಕ ಹಂದಿಗಳ ಕೆಟ್ಟ ಬಾಯಿ.

ನಿಮ್ಮ ಮೇಲೆ ಅತ್ಯಂತ ಗಾಢ ಪ್ರಭಾವ ಬೀರಿದ್ದು ಯಾರು?

- ನನ್ನ ತಂದೆ.

ಇತರರ ಯಾವ ಗುಣ ನಿಮಗೆ ಹಿಡಿಸುವುದಿಲ್ಲ?

-ಚಾಡಿ.

ನಿಮ್ಮ ಯಾವ ಗುಣ ನಿಮಗೆ ಬೇಸರ ತರಿಸುತ್ತದೆ?

-ಅಲಸ್ಯ.

ನಿಮ್ಮ ಅಮೂಲ್ಯ ಆಸ್ತಿ ಯಾವುದು?

- ನನ್ನ ಹೆಂಡತಿ ಮಕ್ಕಳು.

ನೀವು ಸದಾ ನಿಮ್ಮೊಡನೆ ಒಯ್ಯುವ ವಸ್ತು ಯಾವುದು?

-ಪೆನ್ನು ಪೇಪರ್ ಮತ್ತು ಪುಸ್ತಕ.

ನೀವು ಎಂದೂ ಮರೆಯಲಾಗದ ಮಾತು ಯಾವುದು?

-ನಿಮ್ಮ ತಲೆಗೆ ಹೂವ ತಹೆನಲ್ಲದೆ ಹುಲ್ಲತಾರೆ- ಎಂಬ ಅಕ್ಕನ ನುಡಿ.

ನಿಮ್ಮ ಮನಸ್ಸನ್ನು ಬಹುವಾಗಿ ಕುಗ್ಗಿಸುವ ಸಂಗತಿ ಯಾವುದು?

-ತಪ್ಪು ಗ್ರಹಿಕೆ.

ನಿಮ್ಮ ಅತ್ಯಂತ ಪ್ರಿಯವಾದ ಓಡಾಟದ ತಾಣ ಯಾವುದು?

-ಮಲೆನಾಡು

ನಿಮ್ಮ ಜೀವನದ ಅತ್ಯಂತ ಮಹತ್ವದ ನಿರ್ಣಯ ಯಾವುದಾಗಿತ್ತು?

-ಅಧ್ಯಾಪಕನೇ ಆಗಬೇಕು ಎಂಬುದು.

ನಿಮ್ಮ ಜೀವನದ ಅತ್ಯಂತ ಸಂತಸದ ಕ್ಷಣ ಯಾವುದಾಗಿತ್ತು?

-ಮದುವೆಗೆ ಮುಂಚೆ ನನ್ನವಳೊಡನೆ ಮಾತನಾಡಿದ್ದು.

ನೀವು ಮರೆಯಬೇಕೆಂದು ಬಯಸುವ ಕಹಿ ಕ್ಷಣ?

- ನನ್ನ ತಾಯಿಯ ಮರಣ.

ಎಂಥ ಸಂದರ್ಭಗಳಲ್ಲಿ ನೀವು ಸುಳ್ಳು ಹೇಳುತ್ತೀರಿ?

-ಭಾಷಣ ಮಾಡುವಾಗ.

ನಿಮ್ಮ ಅತ್ಯಂತ ಪ್ರೀತಿಯ ಕನಸು ಯಾವುದು?

-ಮಾನವೀಯತೆ

ನಿಮ್ಮ ವಿರಾಮದ ಕ್ಷಣಗಳನ್ನು ನೀವು ಹೇಗೆ ಕಳೆಯುತ್ತೀರಿ?

-ಓದುವ ಮೂಲಕ

ನೀವು ಎಂಥ ಸಾವನ್ನು ಬಯಸುತ್ತೀರಿ?

-ಹೆಂಡತಿಗೂ ತೊಂದರೆ ಕೊಡದಂಥದು.

ನಿಮ್ಮನ್ನು ಜನರು ಹೇಗೆ ನೆನಪಿಸಿಕೊಳ್ಳಬೇಕು?

-ಒಳ್ಳೆಯ ಮೇಷ್ಟ್ರು.

ಸಾಧ್ಯವಿದ್ದರೆ ನೀವು ಜಗತ್ತಿನ ಬೇರೆ ಏನಾಗಲು ಬಯಸುತ್ತೀರಿ?

-ಕಥೆಯಾಗಲು.

ದೇವರು ನಿಮಗೆ ಮೂರು ವರ ಕೊಟ್ಟರೆ ಮೂರನೆಯ ವರದಲ್ಲಿ ಏನನ್ನು ಕೇಳುತ್ತೀರಿ?

-ಮನುಷ್ಯನಾಗುವುದನ್ನು ಕಲಿಸು ಎಂದು.

ನಿಮಗೆ ಅತಿ ಕೋಪ ಬಂದಾಗ ಏನು ಮಾಡುತ್ತೀರಿ?

-ಆತ್ಮ ನಿಂದನೆ.

ನಿಮಗೆ ಅತಿ ದುಃಖವಾದಾಗ ಏನು ಮಾಡುತ್ತೀರಿ?

-ಏಕಾಂತ ಬಯಸುತ್ತೇನೆ.

ಚಿಕ್ಕವರಾಗಿದ್ದಾಗ ನೀವು ಏನಾಗಲು ಬಯಸಿದ್ದೀರಿ?

-ಕವಿಯಾಗಲು.

ನೀವು ಯಾರನ್ನಾದರೂ ಹೊಡೆದಿದ್ದೀರಾ? ಯಾಕೆ?

-ದನ ಬಡಿದಿದ್ದೇನೆ; ಕದ್ದು ಮೇಯಲು ಹೋದಾಗ.

ನೀವು ಸಾಯುವ ಮೊದಲು ಮಾಡಬಯಸುವ ಕೆಲಸವೇನು?

-ನನ್ನ ಹಳ್ಳಿಗರ ಸೇವೆ.

ನೀವು ನೀವಲ್ಲವಾಗಿದ್ದಿದ್ದರೆ ಬೇರೆ ಏನಾಗಲು ಬಯಸುತ್ತೀದ್ದೀರಿ ?

-ಸಂಗೀತಗಾರ.

ಯಾವ ಮೌಲ್ಯಕ್ಕಾಗಿ ನೀವು ನಿಮ್ಮ ಸರ್ವಸ್ವವನ್ನೂ ತ್ಯಾಗ ಮಾಡಲು ಸಿದ್ಧರಿದ್ದೀರಿ?

-ಸತ್ಯಕ್ಕಾಗಿ.

ನಿಮಗೆ ಒಂದು ಕೋಟಿ ರೂಪಾಯಿ ಸಿಕ್ಕರೆ ಏನು ಮಾಡುವಿರಿ?

- ಶ್ರೇಷ್ಠ ಕೃತಿ ಪ್ರಕಟಿಸುವೆ.

ನಿಮ್ಮ ಕುರಿತು ನಿಮಗೇ ನಾಚಿಕೆಯಾದ ಸಂದರ್ಭ ಯಾವುದು?

- ನಿರಪರಾಧಿಯನ್ನು ಬಯ್ದದ್ದು.

ಸಾಧನೆಯ ಮೂರು ಸಂವತ್ಸರಗಳು

ಡಾ॥ ಸಾ.ಶಿ. ಮರುಳಯ್ಯ

ತಾನು ಮುಂದೆ ಅಯೋಧ್ಯೆಯನ್ನಾಳಬೇಕಾಗುತ್ತದೆಂದು ತಿಳಿದಿದ್ದ ರಾಮ, ಆಡಳಿತ ವಿಚಾರವಾಗಿ ಅನುಭವಿ ರಾವಣನನ್ನು ಕೇಳಿ ತಿಳಿದುಕೊಂಡು ಬರಲು ಲಕ್ಷ್ಮಣನನ್ನು ಕಳುಹಿಸಿದನಂತೆ. ತನ್ನ ಬಳಿಗೆ ಬಂದ ಲಕ್ಷ್ಮಣನಿಗೆ ರಾವಣ ಹೇಳಿದನಂತೆ. ''ನೋಡಪ್ಪ, ಅಧಿಕಾರ ಸ್ವೀಕರಿಸಿದ ಕೂಡಲೆ ರಾಜನಾದವನು ಅತ್ಯಗತ್ಯ ಪ್ರಜಾಹಿತ ಕಾರ್ಯಗಳನ್ನು ಮೊದಲು ಮಾಡಿ ಮುಗಿಸಬೇಕು. ಪ್ರಜೆಗಳ ಒಲವು ಗಳಿಸಿ ಕೊಳ್ಳುವ ಕಾರ್ಯ ಮಾಡಬೇಕು. ಅದೇ ಆಡಳಿತದ ಮೊದಲ ಗುಟ್ಟು'' ಎಂದು. ನಾನು ಪರಿಷತ್ತಿನ ಅಧ್ಯಕ್ಷನಾಗಿ ಬಂದ ಕೂಡಲೆ ಇಂತಹ ಕೆಲವೊಂದು ಕರ್ತವ್ಯಗಳನ್ನು ನಿಷ್ಠೆಯಿಂದ ನಿರ್ವಹಿಸಿದ್ದೇನೆ. ಅಧ್ಯಕ್ಷ ಸ್ಥಾನದಿಂದ ನಿವೃತ್ತನಾಗುತ್ತಿರುವ ಈ ಹೊತ್ತಿನಲ್ಲಿ ನನ್ನ ಸೋಲು ಗೆಲುವುಗಳನ್ನು ಸಕಲ ಕನ್ನಡಿಗರ ಮುಂದೆ ತೆರೆದಿಡಲು ಇಚ್ಛಿಸುತ್ತೇನೆ.

ನಾನು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷನಾಗಿ ದಿನಾಂಕ 22-6-1995ರಂದು ಅಧಿಕಾರ ಸ್ವೀಕರಿಸಿದೆ. ಪರಿಷತ್ತಿಗಾಗಿ ಅನೇಕ ಕಾರ್ಯಯೋಜನೆಗಳ ಕನಸನ್ನಿಟ್ಟು ಕೊಂಡು ಕಾರ್ಯಪ್ರವೃತ್ತನಾದೆ. ಆದರೆ ಆರ್ಥಿಕ ಅನನುಕೂಲತೆಯಿಂದಾಗಿ ಎಣಿಸಿದಷ್ಟು ಕೆಲಸ ಸಾಧ್ಯವಾಗದಿದ್ದರೂ ತೃಪ್ತಿಕರ ಸಾಧನೆ ಮಾಡಿದ್ದೇನೆ ಎಂಬ ಸಮಾಧಾನ ನನಗಿದೆ. ಅವುಗಳಲ್ಲಿ ಕೆಲವನ್ನು ಇಲ್ಲಿ ಅವಲೋಕಿಸಬಹುದು.

ಶಾಶ್ವತ ಅನುದಾನ

ಪರಿಷತ್ತಿನ ಎಲ್ಲ ಸಿಬ್ಬಂದಿ ವರ್ಗವನ್ನೂ 1-6-96ರಿಂದ ಶಾಶ್ವತ ಅನುದಾನಕ್ಕೆ ಒಳಪಡಿಸುವ ಮೂಲಕ ಪರಿಷತ್ತಿನ ಬಲವರ್ಧನೆ ಸಾಧ್ಯವಾಗಿದೆ. ಪರಿಷತ್ತು ಹುಟ್ಟಿದಾಗಿನಿಂದ ಆರ್ಥಿಕ ಭದ್ರತೆ ಕಾಣದೆ ನರಳುತ್ತಿತ್ತು. ಸರ್ಕಾರದ ಕೃಪಾನುದಾನದಿಂದ ಪರಿಷತ್ತಿನ ನೌಕರರು, ಬಿ.ಎಂ. ಶ್ರೀ. ಅಚ್ಚುಕೂಟದ ಕಾರ್ಮಿಕರು ಹಾಗೂ ನಿಘಂಟು ವಿಭಾಗದ ಸಿಬ್ಬಂದಿ ಎಲ್ಲ ಸೇರಿ ಸುಮಾರು ಅರವತ್ತೆರಡು ಜನಕ್ಕೆ ಜೀವದಾನ ಮಾಡಿದಂತಾಗಿದೆ. ಶ್ರೀ ಹೆಚ್.ಡಿ. ದೇವೇಗೌಡರ ಸರಕಾರ ಶಾಶ್ವತಾನುದಾನ ನೀಡುವ ಮೂಲಕ ಅವರಿಗೆ ಬದುಕು ಕೊಟ್ಟಿದೆ, ಬದುಕಿಗೊಂದು ಬೆಳಕು ನೀಡಿದೆ. ಈ ಉಪಕೃತಿಗಾಗಿ ಶ್ರೀ ಹೆಚ್.ಡಿ. ದೇವೇಗೌಡರನ್ನೂ ಅವರ ಮಂತ್ರಿಮಂಡಲ ಹಾಗೂ ಅಧಿಕಾರ ವರ್ಗವನ್ನೂ ಮುಖ್ಯವಾಗಿ ಶ್ರೀ ಬಿ. ಈಶ್ವರಪ್ಪ, ಶ್ರೀ ಅ.ರಾ. ಚಂದ್ರಹಾಸ ಗುಪ್ತ ಹಾಗೂ ಶ್ರೀ ವೈ.ಕೆ. ಮುದ್ದುಕೃಷ್ಣ ಇವರನ್ನು ಪರಿಷತ್ತು ಹಾರ್ದಿಕವಾಗಿ ಅಭಿನಂದಿಸುತ್ತದೆ.

ಕಂಪ್ಯೂಟರೀಕರಣ

ಎರಡನೆಯದಾಗಿ, ನಾಗಾಲೋಟದಲ್ಲಿ ಓಡುತ್ತಿರುವ ಈ ವೈಜ್ಞಾನಿಕ ಯುಗದಲ್ಲಿ ಸಮಸ್ಪರ್ಧಿಯಾಗಿ ಭಾಗವಹಿಸುವಂತಾಗಲು ಪರಿಷತ್ತಿಗೆ ಈಗ ಕಂಪ್ಯೂಟರ್ ಒದಗಿಸುವ

ಮೂಲಕ ಮುದ್ರಣ ವಿಭಾಗಕ್ಕೊಂದು ಹೊಸ ಆಯಾಮವನ್ನೇ ನಿರ್ಮಿಸಲಾಗಿದೆ. ಲಕ್ಷಾಂತರ ರೂಪಾಯಿ ಬೆಲೆ ಬಾಳುವ ಕಂಪ್ಯೂಟರ್, ಲೇಸರ್ ಪ್ರಿಂಟರ್ ಮೊದಲಾದ ಉಪಕರಣಗಳನ್ನು ಅಮೇರಿಕದಲ್ಲಿರುವ ಅನಿವಾಸಿ ಭಾರತೀಯರಾದ, ನನ್ನ ಮಗಳು ಮತ್ತು ಅಳಿಯಂದಿರಾದ ಶ್ರೀಮತಿ ಎಂ. ರಾಗಿಣಿ ಸಂಗಮೇಶ್ವರ್ ಮತ್ತು ಶ್ರೀ ಎಸ್.ಜಿ. ಸಂಗಮೇಶ್ವರ್ 'ರಾಗಿಣಿ ಕಂಪ್ಯೂಟರ್ಸ್' ಎಂಬ ಹೆಸರಿನಲ್ಲಿ ಉದಾರ ಕಾಣಿಕೆಯಾಗಿ ನೀಡಿದ್ದಾರೆ. ಆ ಪುಣ್ಯ ದಂಪತಿಗಳಿಗೆ ಪರಿಷತ್ತು ಆಭಾರಿಯಾಗಿದೆ.

ಪರಿಷತ್ತಿನ ಸದಸ್ಯತ್ವ ಸಂಖ್ಯೆ ಇಪ್ಪತ್ತೈದು ಸಾವಿರಕ್ಕೆ ಹತ್ತಿರವಾಗುತ್ತಿದೆ. ಜಿಲ್ಲಾವಾರು, ತಾಲೂಕುವಾರು ವಿಭಾಗಿಸಿ ಸುವ್ಯವಸ್ಥೆಗೊಳಿಸಲಾಗುತ್ತಿದೆ. ಅದೇ ರೀತಿ ದತ್ತಿನಿಧಿ, ಅಮೃತ ನಿಧಿ, ಗ್ರಂಥ ಭಂಡಾರ, ಪರಿಷತ್ ಕಾರ್ಯಾಗಾರ, ಕನ್ನಡ ನುಡಿ, ಮತ್ತು ಪರಿಷತ್ಪತ್ರಿಕೆಗಳ ಪ್ರಕಟಣೆ, ನೂರಾರು ಪುಸ್ತಕಗಳ ಪ್ರಕಟಣೆ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳ ಆಹ್ವಾನ ಪತ್ರಿಕೆ ಪ್ರಕಟಣೆ - ಇವೇ ಮೊದಲಾದ ತಾಂತ್ರಿಕ ಕಾರ್ಯಗಳನ್ನು ಕ್ರಮಬದ್ಧಗೊಳಿಸಲು ಈ ಗಣಕ ಯಂತ್ರವನ್ನು ಬಳಸಿಕೊಳ್ಳಲಾಗುತ್ತಿದೆ.

ನಿಘಂಟು ಯೋಜನೆ

ಮೂರನೆಯದಾಗಿ ಸುಮಾರು ಅರ್ಧ ಶತಮಾನದಿಂದಲೂ ಸಾಗಿಬಂದ ಎಂಟು ಸಂಪುಟಗಳ ಕನ್ನಡ-ಕನ್ನಡ ನಿಘಂಟು ಯೋಜನೆಯನ್ನು ಪರಿಷತ್ತು ಈ ಅವಧಿಯಲ್ಲಿ ಪೂರ್ಣಗೊಳಿಸಿದೆ. ದಿನಾಂಕ 26-11-1995ರಂದು ತನ್ನ ಎಂಟನೆಯ ಸಂಪುಟವನ್ನು ಬಿಡುಗಡೆ ಮಾಡುವ ಮೂಲಕ ಧನ್ಯತೆ ತಳೆದಿದೆ. ಅಂತೆಯೇ, ನಿಘಂಟು ವರ್ಗವನ್ನು ತನ್ನ ಕಕ್ಷೆಗೆ ತೆಗೆದುಕೊಂಡು ನಿಘಂಟುವಿನ ಪುನರ್ ಪರಿಶೀಲನೆ ಮತ್ತು ಸಂಪಾದನೆಗಾಗಿ ಕನ್ನಡ ಶಬ್ದಗಳಿಗೆ ಲಿಪ್ಯಂತರ, ಭಾಷಾಂತರ ಅರ್ಥ ಕೊಡುವ ಮೂಲಕ ಹೊಸ ನಿಘಂಟುವಿನ ಪ್ರಥಮ ಸಂಪುಟವನ್ನು ಅಚ್ಚಿಗೆ ಸಿದ್ಧಪಡಿಸಿದೆ. ಇದಲ್ಲದೆ 'ಅ ಟ' ನಿಘಂಟು, 'ಅವಳಿ ಪಡೆನುಡಿ ಕೋಶ'ಗಳನ್ನೂ ಸಿದ್ಧಪಡಿಸಿದೆ.

ಪುಸ್ತಕ ಪ್ರಕಟಣೆ

ನಾಲ್ಕನೆಯದಾಗಿ, ಈ ಮೂರು ವರ್ಷದ ಅವಧಿಯಲ್ಲಿ ಸುಮಾರು ಎಪ್ಪತ್ತು ಮೌಲಿಕ ಗ್ರಂಥಗಳನ್ನು ಪರಿಷತ್ತು ಹೊರತಂದಿದೆ.

ನಿರಂತರ ನೀರು

ಐದನೆಯದಾಗಿ, ಬೆಂಗಳೂರಿನ ಜಲಮಂಡಲಿ ಪೂರೈಸುತ್ತಿದ್ದ ನೀರು ಪರಿಷತ್ತಿಗೆ ಸಾಕಾಗದೆ ಬಹಳ ತೊಂದರೆಯಾಗಿತ್ತು. ಅದರ ನಿವಾರಣಾರ್ಥವಾಗಿ ಆವರಣದಲ್ಲಿ ಕೊಳವೆ ಬಾವಿ ತೆಗೆಸಿ ಜಲಸಮೃದ್ಧಿ ಏರ್ಪಡಿಸಿದ ಅವಧಿ ಇದು. ಸುಮಾರು ಅರವತ್ತು ಸಾವಿರ ರೂಪಾಯಿ ವೆಚ್ಚದ ಈ ಕಾರ್ಯಕ್ಕೆ ಪರಿಷತ್ತು ತನ್ನ ಬೊಕ್ಕಸದಿಂದ ಒಂದು ಚಿಕ್ಕಾಸನ್ನೂ ಖರ್ಚುಮಾಡದೆ, ದಾನಿಗಳಿಂದಲೇ ಪೂರ್ಣಗೊಳಿಸಿದೆ ಎಂದು ಹೇಳಿಕೊಳ್ಳಲು ನಮಗೆ ಹೆಮ್ಮೆ ಎನಿಸಿದೆ ಈ ಮಹಾಮಣಿಹದಲ್ಲಿ ನೆರವಾದ ಖ್ಯಾತ ಕೈಗಾರಿಕೋದ್ಯಮಿ ಶ್ರೀ ಎಂ.ಎಸ್. ಶಿವಕುಮಾರ್ ಅವರನ್ನು ಪರಿಷತ್ತು ಕೃತಜ್ಞತೆಯಿಂದ ಸ್ಮರಿಸುತ್ತದೆ.

ವಾಹನ ಖರೀದಿ

ಆರನೆಯದಾಗಿ, ಇಂದು ಪರಿಷದಧ್ಯಕ್ಷರ ಕಾರ್ಯವ್ಯಾಪ್ತಿ ಬಹಳ ದೊಡ್ಡದಾಗಿದೆ. ದಿನನಿತ್ಯವೂ ರಾಜ್ಯಾದ್ಯಾಂತ ನಡೆಯುವ ಕಾರ್ಯ ಚಟುವಟಿಕೆಗಳಲ್ಲಿ ಅವರು ಭಾಗವಹಿಸಬೇಕಾಗಿದೆ. ಭಾಷಾಭಿಮಾನ, ಸಾಹಿತ್ಯಾಸಕ್ತಿ, ಗಡಿರಕ್ಷಣೆ, ಗಡಿಯಾಚೆಯ ಕನ್ನಡಿಗರಿಗೆ ಸಾಂತ್ವನ ಮೊದಲಾದುವನ್ನು ಒದಗಿಸುವ ಹೊಣೆ ಅಧ್ಯಕ್ಷರದ್ದು. ಅದರ ಸುಗಮತೆಗಾಗಿ ಸುಮಾರು ಮೂರು ಲಕ್ಷ ರೂಪಾಯಿಗಳ ಒಂದು ಅಂಬಾಸಿಡರ್ ಕಾರನ್ನು ಅಮೃತನಿಧಿಯ ಬಡ್ಡಿಯಿಂದ ಕೊಂಡುಕೊಳ್ಳಲಾಗಿದೆ.

ಇತರೆ ಚಟುವಟಿಕೆಗಳು

ಏಳನೆಯದಾಗಿ, ಯುವನಾಮ ಸಂವತ್ಸರದ ಆರಂಭದಲ್ಲಿ ಸುಮಾರು 27 ಜನ ಸಂಸತ್ ಸದಸ್ಯರನ್ನು ಪರಿಷತ್ತಿಗೆ ಆಹ್ವಾನಿಸಿ ಅವರಿಗೆ ನಾಡು-ನುಡಿಗಳ ಬಗ್ಗೆ ಕನ್ನಡಿಗರ ಪ್ರಸ್ತುತ ಸ್ಥಿತಿಗತಿಗಳ ಬಗ್ಗೆ ನಡೆಯುತ್ತಿರುವ ಕನ್ನಡೇತರರ ಹೀನ ವಿದ್ಯಮಾನಗಳ ಬಗ್ಗೆ ನಗ್ನ ದರ್ಶನವಿತ್ತು ಕನ್ನಡಮ್ಮನ ಮಕ್ಕಳ ಸಂರಕ್ಷಣೆ, ಸಂವರ್ಧನೆಗಳ ಕಡೆಗೆ ಅವರ ಗಮನ ಸೆಳೆಯಲಾಯಿತು. ಚಿತ್ರರಂಗದ ಧ್ರುವತಾರೆ ಡಾ॥ ರಾಜ್‌ಕುಮಾರ್‌ರವರ ನೇತೃತ್ವದಲ್ಲಿ ಕನ್ನಡ ಚಲನಚಿತ್ರ ನಿರ್ಮಾಪಕರ, ನಿರ್ದೇಶಕ ಹಾಗೂ ಕಲಾವಿದರನ್ನು ಒಂದೆಡೆ ಸಮಾವೇಶಗೊಳಿಸಿ, ಅವರ ಹಲವು ಹತ್ತೆಂಟು ಸಮಸ್ಯೆಗಳಿಗೆ ಪರಿಷತ್ತು ಪರಿಹಾರ ಸೂಚಿಸುವ ಮೂಲಕ ಅವರಿಗೆ ತನ್ನ ಸರ್ವವಿಧದ ಬೆಂಬಲ ಘೋಷಿಸಿತು. ರಾಜ್ಯದ ದಲಿತ ಉದಯೋನ್ಮುಖ ಲೇಖಕ ಲೇಖಕಿಯರಿಗಾಗಿ ಸಾಹಿತ್ಯ ಕಮ್ಮಟವನ್ನು ಬೆಂಗಳೂರು ಮತ್ತು ಗುಲ್ಬರ್ಗಾ ನಗರಗಳಲ್ಲಿ ಏರ್ಪಡಿಸಿ ಆಗಮಿಸಿದ್ದ 60-70 ಪ್ರತಿಭೆಗಳಿಗೆ ವ್ಯುತ್ಪತ್ತಿಯ ಉತ್ತಮ ತರಬೇತಿ ಮತ್ತು ಮಾರ್ಗದರ್ಶನ ಮಾಡಲಾಯಿತು.

ಮೂರು ವರ್ಷಗಳ ಅವಧಿಯಲ್ಲಿ ನೂರಾರು ಜಿಲ್ಲಾ ಹಾಗೂ ತಾಲ್ಲೂಕು ಸಾಹಿತ್ಯ ಸಮ್ಮೇಳನಗಳು, ದತ್ತಿ ಕಾರ್ಯಕ್ರಮಗಳು, ಹತ್ತಾರು ವಿಚಾರ ಸಂಕಿರಣಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಯೋಗದೊಂದಿಗೆ 'ಕಾವ್ಯ ಕಾವೇರಿ' - ಇವೇ ಮೊದಲಾದ ಶ್ರೇಷ್ಠಮಟ್ಟದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪರಿಷತ್ತು ಅತ್ಯಂತ ಅರ್ಥಪೂರ್ಣವಾಗಿ, ಔಚಿತ್ಯಪೂರ್ಣವಾಗಿ ನೆರವೇರಿಸಿದೆ. ಅಖಿಲ ಭಾರತಮಟ್ಟದ ಎರಡು ಸಮ್ಮೇಳನಗಳು, ಸುಮಾರು ಇಪ್ಪತ್ತು ಜಿಲ್ಲಾ ಸಮ್ಮೇಳನಗಳು ಹಾಗೂ ಸುಮಾರು ಎಂಭತ್ತೈದು ತಾಲ್ಲೂಕು ಸಮ್ಮೇಳನಗಳನ್ನು ನಡೆಸಿದ ಹೆಗ್ಗಳಿಕೆ ನಮ್ಮದು.

ಪರಿಷತ್ತಿನ ಅರ್ಥಕೋಶ ಸಂವರ್ಧನೆ

1. ದತ್ತಿ ನಿಧಿ : ಪರಿಷತ್ತಿನ ಅಧ್ಯಕ್ಷನಾಗಿ ಅಧಿಕಾರ ಸ್ವೀಕರಿಸಿದ ದಿನ, ಅಂದರೆ ದಿನಾಂಕ 22-6-95ರಿಂದ ಪರಿಷತ್ತಿನಲ್ಲಿದ್ದ ದತ್ತಿ ಹಣದ ಒಟ್ಟು ಮೊತ್ತ 21,91,105 ರೂಪಾಯಿಗಳು. ಇದೀಗ ಅಧಿಕಾರ ಬಿಟ್ಟುಹೋಗುತ್ತಿರುವಾಗಿನ ಒಟ್ಟು ದತ್ತಿ ಹಣದ ಮೊತ್ತ 42,90,056-00 ರೂಪಾಯಿಗಳು. ಪರಿಷತ್ತು ಸ್ಥಾಪನೆ ಅದಾಗಿನಿಂದ ಸಂಗ್ರಹವಾಗಿದ್ದ ದತ್ತಿ ಹಣದ ಒಟ್ಟು ಮೊತ್ತವನ್ನು ಈ ಮೂರು ವರ್ಷಗಳಲ್ಲಿ

ದ್ವಿಗುಣಗೊಳಿಸಲಾಗಿದೆ ಎಂಬುದನ್ನು ವಿನಮ್ರವಾಗಿ ನಿವೇದಿಸಬಯಸುತ್ತೇನೆ. ಈ ಅವಧಿಯಲ್ಲಿ ಪುಸ್ತಕ ಪ್ರಕಟಣೆಗಾಗಿಯೇ ದೊಡ್ಡ ಮೊತ್ತದ ಪ್ರತ್ಯೇಕ ದತ್ತಿಗಳನ್ನು ಸ್ಥಾಪಿಸಲಾಗಿದೆ.

2. ಅಜೀವ ಸದಸ್ಯತ್ವ : ಅಜೀವ ಸದಸ್ಯತ್ವದ ಶುಲ್ಕ ನಿಶ್ಚಿತ ಠೇವಣಿಯಲ್ಲಿರಬೇಕಾದ್ದು ನಿಯಮ. ಈ ಹಿಂದೆ ಈ ಠೇವಣಿಯಲ್ಲಿ ಸ್ವಲ್ಪ ಭಾಗವನ್ನು ಬಳಸಲಾಗಿತ್ತು. ನನ್ನ ಅಧಿಕಾರಾವಧಿಯಲ್ಲಿ 9.00 ಲಕ್ಷ ರೂಪಾಯಿಗಳನ್ನು ತುಂಬಿ ಈ ಕೊರತೆಯನ್ನು ಸಾಕಷ್ಟು ಮಟ್ಟಿಗೆ ನೀಗಿಸಲಾಗಿದೆ. ಜೂನ್ 1995ರಲ್ಲಿ 12,41,083-00 ರೂಪಾಯಿಗಳಿದ್ದಂತಹ ಅಜೀವ ಸದಸ್ಯತ್ವ ಶುಲ್ಕ ಇಂದು 31,15,854-00 ರೂಪಾಯಿಗಳಿಗೆ ವೃದ್ಧಿಯಾಗಿದೆ ಎಂದು ತಿಳಿಸಲು ಹರ್ಷವುಂಟಾಗುತ್ತದೆ. ಅಮೃತನಿಧಿಯ ಮೊತ್ತ ಇಂದು 28,79,844-00 ರೂಪಾಯಿಗಳಾಗಿವೆ.

ಹೀಗೆ ಪರಿಷತ್ತಿನ ಅರ್ಥಕೋಶ ಸಂವರ್ಧನೆಗೆ ಪ್ರಾಂಜಲ ಪ್ರಯತ್ನ ನಡೆಸಲಾಗಿದೆ.

ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯನಿರ್ವಹಣೆಗೆ ಅಧ್ಯಕ್ಷನ ಎರಡು ತೋಳು ಎತ್ತಲೂ ಸಾಕಾಗುವುದಿಲ್ಲ. ಆದ್ದರಿಂದ ನನಗೆ ನೂರು ತೋಳಾಗಿರುವ ಸಹ ನಿರ್ವಾಹಕರಾದ ಎಲ್ಲ ಪದಾಧಿಕಾರಿಗಳಿಗೆ, ನನ್ನ ಸಹಸ್ರ ಭುಜಗಳಾಗಿರುವ ಮೂವತ್ತೈದು ಜನ ಕಾರ್ಯಕಾರಿ ಸಮಿತಿ ಸದಸ್ಯೆ ಹಾಗೂ ಐದು ಕೋಟಿ ಕನ್ನಡ ಬಂಧುಭಗಿನಿಯರಿಗೆ ನನ್ನ ಅನಂತಾನಂತ ಪ್ರಣಾಮಗಳು.

ಪರಿಷತ್ತು ಮತ್ತು ನಾನು

ಕಡೆಯದಾಗಿ, ಜಗಜ್ಜೇತನಾದ ಅಲೆಗ್ಸಾಂಡರ್ ಭಾರತದಿಂದ ತನ್ನ ತಾಯ್ನಾಡಿಗೆ ಹಿಂದಿರುಗುವ ಮೊದಲು ತನ್ನವರಿಗಾಗಿ ಹೀಗೊಂದು ಸಂದೇಶ ನೀಡಿದ : ನನ್ನ ಪ್ರೀತಿಯ ಗ್ರೀಕ್ ಕಡುಗಲಿಗಳೇ, ನಿಮ್ಮೆದುರಿನಲ್ಲಿರುವ ಈ ವ್ಯಕ್ತಿ ಹಿಂದಿನ ಅಲೆಗ್ಸಾಂಡರ್ ಅಲ್ಲ. ಭಾರತಕ್ಕೆ ಕಾಲಿರಿಸಿದ ಮೇಲೆ ನಾನು ಇಲ್ಲಿನ ಅತ್ಯುತ್ಕೃಷ್ಟ ಸಂಸ್ಕೃತಿಯಿಂದ ತುಂಬಾ ಪ್ರಭಾವಿತನಾಗಿದ್ದೇನೆ. ನಾನಿಲ್ಲಿ ಕಲಿತ ಪಾಠವನ್ನು ನನ್ನ ತವರಿನಲ್ಲಿ ಒಪ್ಪಿಸುತ್ತೇನೆ. ನೀವು ಒಂದು ಸ್ತುತ್ಯ ಕಾರ್ಯ ಮಾಡಬೇಕು. ಅದು ನನ್ನ ಅಂತಿಮ ಸಂಸ್ಕಾರಕ್ಕೆ ಸಂಬಂಧಿಸಿದ್ದು. ನಾನು ನನ್ನೂರಾದ ಮ್ಯಾಸಿಡೋನಿಯಕ್ಕೆ ತಲುಪಲಿ, ಇಲ್ಲವೇ ಹಾದಿ ಮಧ್ಯದಲ್ಲಿ ಮಡಿಯಲಿ ಚಿಂತೆಯಿಲ್ಲ. ಎಲ್ಲಿಯೇ ಸಾಯಲಿ ನನ್ನೆರಡು ಕೈಗಳ ಹೊರತು ಉಳಿದ ದೇಹವನ್ನು ಶವಪೆಟ್ಟಿಗೆಯಲ್ಲಿ ಸಂಪೂರ್ಣ ಮುಚ್ಚಬೇಕು. ತೆರೆದ ಆ ನನ್ನ ಕೈಗಳು ಹೊರಗುಳಿದುದರ ಅರ್ಥ ನಾನು ನನ್ನ ತಾಯ ಗರ್ಭದಿಂದ ಈ ಜಗತ್ತಿಗೆ ಬರಿಗೈಯಲ್ಲಿ ಬಂದೆ, ಈಗ ಬರಿಗೈಯಲ್ಲಿ ಹಿಂತಿರುಗುತ್ತಿದ್ದೇನೆ. ಈ ಪ್ರಪಂಚಕ್ಕೆ ನಾನು ಏನನ್ನೂ ತರಲಿಲ್ಲ, ಈಗ ಏನನ್ನು ಕೊಂಡೊಯ್ಯುತ್ತಿಲ್ಲ. ಈ ಸಾಂಕೇತಿಕ ಸಂದೇಶವನ್ನು ಜಗತ್ತಿಗೆ ಗೊತ್ತುಪಡಿಸುವ ಹೊಣೆ ನಿಮ್ಮದು. ಇಲ್ಲಿ ದುಡಿದದ್ದನ್ನು ಇಲ್ಲಿಯೇ ಬಿಟ್ಟು ಹೋಗುತ್ತಿದ್ದೇನೆ. ಎರಡು ಅವ್ಯಕ್ತ ತೀರಗಳ ನಡುವಿನ ನನ್ನ ಜೀವವಾಹಿನಿ ತೀರ್ಥವೋ ಮಲಿನವೋ ನಾನರಿಯೆ. ಅದನ್ನು ಮುಂದಿನ ಇತಿಹಾಸಕಾರನಿಗೆ ಬಿಟ್ಟು ನಾನು ಬಯಲಾಗುತ್ತಿದ್ದೇನೆ.'

ಅಲೆಗ್ಸಾಂಡರಿನಿಂದ ಕಲಿತ ಪಾಠವನ್ನು ನಾನೀಗ ತಮ್ಮ ಮುಂದೆ ಒಪ್ಪಿಸುತ್ತೇನೆ.

ಪರಮ ಪಾವನವೂ ಪವಿತ್ರವೂ ಪೂಜ್ಯವೂ ಆದ ಕನ್ನಡ ಕುಲಕೋಟಿಯ ತವರಾದ ಕನ್ನಡ ಸಾಹಿತ್ಯ ಪರಿಷತ್ತಿಗೆ ಇಂದಿಗೆ ಮೂರು ವರ್ಷಗಳ ಹಿಂದೆ ಅಧ್ಯಕ್ಷನಾಗಿ ಆರಿಸಿಬಂದೆ. ಅವಧಿ ಮುಗಿದ ಇಂದು ಮನೆಗೆ ಹಿಂದಿರುಗುತ್ತಿದ್ದೇನೆ. ಅಂದು ಬಂದದ್ದೂ ಬರಿಗೈಯಲ್ಲಿ, ಇಂದು ಹೋಗುತ್ತಿರುವುದು ಬರಿಗೈಯಲ್ಲಿ. ಬರುವಾಗ ಏನನ್ನೂ ತರಲಿಲ್ಲ, ಹೋಗುವ ಈ ವೇಳೆಯಲ್ಲಿ ಏನನ್ನೂ ಪರಿಷತ್ತಿನಿಂದ ತೆಗೆದುಕೊಂಡು ಹೋಗುತ್ತಿಲ್ಲ. ಈ ಎರಡರ ನಡುವಣ ದಿನದಲ್ಲಿ ನಾಡು ನುಡಿಗಳಿಗಾಗಿ ಮಾತೃಸಂಸ್ಥೆಯಾದ ಕನ್ನಡ ಸಾಹಿತ್ಯ ಪರಿಷತ್ತಿಗಾಗಿ ತುಸು ಸೇವೆ ಸಲ್ಲಿಸಿದ್ದೇನೆ ಎಂಬ 'ಅಹಂ' ನನ್ನಲ್ಲಿಲ್ಲ. ನನ್ನ ಕರ್ತವ್ಯವನ್ನು ನಿಷ್ಠೆಯಿಂದ, ಪ್ರಾಮಾಣಿಕತನದಿಂದ, ಅನನ್ಯ ಭಾವದಿಂದ ನೆರವೇರಿಸಿದ್ದೇನೆ. ಕನ್ನಡದ ಸೇವೆಯನ್ನು ಕನ್ನಡ ರಾಜರಾಜೇಶ್ವರಿ ಸ್ವರೂಪರಾದ ನಿಮ್ಮೆಲ್ಲರ ಸೇವೆಯನ್ನು ಪೂಜೆ ಎಂದೇ ಭಾವಿಸಿ, ಮನೆ ಮಠ, ಹೆಂಡತಿ, ಮಕ್ಕಳು ಎಲ್ಲರನ್ನೂ ಮರೆತು ನಡೆದುಕೊಂಡಿದ್ದೇನೆ. ನಾನು ಅಧಿಕಾರ ವಹಿಸಿಕೊಂಡಂದಿನಿಂದ ಇಂದಿನವರೆಗೆ ಕನ್ನಡ ಸಾಹಿತ್ಯ ಪರಿಷತ್ತು ಒಂದೇ ನನ್ನ ಕಣ್ಣಲ್ಲಿ ಕಣ್ಣಿತ್ತು, ಮನವನ್ನು ತುಂಬಿತ್ತು. ಅದರ ಒಳಿತನ್ನೇ ನಾನು ಹಗಲು ಇರುಳು ಚಿಂತಿಸಿದೆ. ನಾನು ಹೇಳಿಕೊಳ್ಳುವಂತಹ ಕವಿ, ಸಾಹಿತಿ, ವಿಮರ್ಶಕ, ಸಂಶೋಧಕ ಅಲ್ಲದಿರಬಹುದು; ಆದರೆ ನಾನೋರ್ವ ಕನ್ನಡ ಸೇವಕ ಎಂಬುದನ್ನು ಸಾಬೀತುಪಡಿಸಿದ್ದೇನೆ. ಜನ ಮೆಚ್ಚದಿರಬಹುದು, ಆದರೆ ಮನಮೆಚ್ಚುವಂತೆ ನಡೆದುಕೊಂಡಿದ್ದೇನೆ. ನನ್ನ ಪಾಲಿಗೊದಗಿದ ಸಾಧನೆಯ ಸಂವತ್ಸರಗಳಲ್ಲಿ ಬಹು ಮುಖ್ಯವಾದದ್ದು — ಪರಿಷತ್ತಿನ ಸಿಬ್ಬಂದಿ ವರ್ಗವನ್ನು ಸರ್ಕಾರದ ಅನುದಾನ ಸಂಹಿತೆಯಲ್ಲಿ ಸೇರುವಂತೆ ಮಾಡಿದ್ದು. ಪರಿಷತ್ತು ಹುಟ್ಟಿದಂದಿನಿಂದ ಇಂದಿನವರೆಗೆ ಅಲ್ಲಿ ದುಡಿಯುವ ವ್ಯಕ್ತಿಗಳಿಗೆ ಭದ್ರತೆ ಇರಲಿಲ್ಲ. ಅನುದಾನಕ್ಕೊಳಪಡಿಸುವ ಮೂಲಕ, ಅವರ ಮನಸ್ಸಿಗೆ ನೆಮ್ಮದಿ ಉಂಟಾಗುವಂತೆ ಮಾಡಿದ್ದೇನೆ. ಈಗ ನಮ್ಮ ಸಿಬ್ಬಂದಿ ನಿರಾಳವಾಗಿ ಉಸಿರಾಡುತ್ತಿರುವುದು ಆನಂದದ ನೋಟ. ಇಲ್ಲಿನ ಅರವತ್ತೆರಡು ಆತ್ಮಗಳಿಗೆ ಬಾಳ ಭದ್ರತೆ ಒದಗಿಸಿದ್ದು ನನಗೆ ಸಂದ ಪುಣ್ಯವೆಂದು ಭಾವಿಸಿ ಧನ್ಯನಾಗಿದ್ದೇನೆ.

ಸಾ.ಶಿ.ಮ. ಕಾವ್ಯ ಕುರಿತು ಹಿರಿಯರು

ಡಾ|| ಕುವೆಂಪು

'ಉದಯರವಿ'
3004, ಐದನೆಯ ಮುಖ್ಯರಸ್ತೆ
ವಾಣೀ ವಿಲಾಸಪುರಂ
6ನೇ ಸೆಪ್ಟೆಂಬರ್ 1985

ಪ್ರಿಯ ಶ್ರೀ ಮರುಳಯ್ಯನವರಲ್ಲಿ ವಿಜ್ಞಾಪನೆಗಳು.

ತಮ್ಮ 23-8-85ರ ಪತ್ರ ತಲುಪಿತು. ವಂದನೆಗಳು.

ತಮ್ಮ ಸಮಗ್ರ ಕಾವ್ಯ ಬಿಡುಗಡೆಯ ಹಂತದಲ್ಲಿರುವುದನ್ನು ತಿಳಿದು ಸಂತೋಷವಾಯಿತು.

ತಾವು 'ವಿಶ್ವಮಾನವ ಸಂದೇಶ'ದ ಪ್ರಚಾರ ಕಾರ್ಯದಲ್ಲಿ ತೊಡಗಿರುವುದು ಸಂತೋಷದ ವಿಚಾರ. ತಾವೂ ಆ ದಾರಿಯಲ್ಲಿ ನಡೆಯುವುದಾದಲ್ಲಿ ತಮಗೆ ಶ್ರೇಯಸ್ಸು ಲಭ್ಯವಾಗುವುದೆಂದು ತಿಳಿಸಬಯಸುತ್ತೇನೆ.

ಶುಭಾಶೀರ್ವಾದಗಳೊಡನೆ,

ನಿಮ್ಮ
ಕುವೆಂಪು
(ಸಹಿ)

ಡಾ|| ವಿ.ಕೃ. ಗೋಕಾಕ್ ಬೆಂಗಳೂರು

ಡಾ|| ಸಾ.ಶಿ. ಮರುಳಯ್ಯನವರ ಈ ಕೃತಿ ಅವರು ಇಲ್ಲಿಯವರೆಗೆ ಬರೆದ ಕವನಗಳ ಸಮಗ್ರ ಸಂಗ್ರಹವಾಗಿದೆ. ಶಿವತಾಂಡವ, ಕೆಂಗನಕಲ್ಲು, ವಿಪರ್ಯಾಸ, ಘೋಷವತಿ, ರಾಸಲೀಲೆ, ರೂಪಸಿ, ಮೊದಲಾದ ಅವರ ಕವನ ಸಂಗ್ರಹಗಳು ಇದರಲ್ಲಿ ಅಡಕವಾಗಿವೆ. ಘೋಷವತಿ ಎಂಬುದು ಎಲ್ಲ ದೃಷ್ಟಿಯಿಂದ ಅವರ ಪ್ರೌಢ ಕವನ ಸಂಗ್ರಹವಾಗಿದೆ.

ಕವಿಗಳು ನವೋದಯದ ಪರಂಪರೆಯವರು. ಆದರೂ ಅವರು ಕೆಲವು ನವ್ಯ ಕವಿತೆಗಳನ್ನು ಬರೆದಿದ್ದಾರೆ. ಕಥನಕಾವ್ಯ, ಭಾವಗೀತೆ, ಹಾಡು, ಅಷ್ಟಷಟ್ಪದ, ಅನುವಾದ, ಚುಟುಕಗಳು - ಹೀಗೆ ಹಲವು ಕಾವ್ಯಪ್ರಕಾರಗಳಿಗೆ ಅವರು ಒಲಿದಿದ್ದಾರೆ. ಬೇಂದ್ರೆ, ಪರಮೇಶ್ವರಭಟ್ಟ ಮೊದಲಾದ ಸಮರ್ಥರು ಅವರ ಕವನ ಸಂಗ್ರಹಗಳಿಗೆ ಮುನ್ನುಡಿ ಬರೆದಿದ್ದಾರೆ.

ಈ ಕವಿಗೆ ಒಂದು ಸ್ಪಷ್ಟ ಕಾಣ್ಕೆಯಿದೆ. ಪರಂಪರೆಯ ಮೌಲ್ಯಗಳಲ್ಲಿ ಅವರಿಗೆ ಶ್ರದ್ಧೆಯಿದ್ದರೂ ನವೀನ ಮೌಲ್ಯಗಳ, ಶೋಧನವೂ ಅವರಿಗೆ ಪ್ರಿಯವಾಗಿದೆ. ನಿಸರ್ಗ ಸೌಂದರ್ಯ, ಸ್ವಾತಂತ್ರ್ಯ ಪ್ರೇಮ, ರಾಜ್ಯಾಭಿಮಾನ, ರಾಷ್ಟ್ರಾಭಿಮಾನ, ಗಣ್ಯವ್ಯಕ್ತಿಗಳು - ಹೀಗೆ ಅನೇಕ ಕಾವ್ಯವಸ್ತುಗಳನ್ನು ಕುರಿತು ಅವರು ಬರೆದಿದ್ದಾರೆ. ಅವರ ಎಲ್ಲ ಕೃತಿಗಳಲ್ಲಿಯೂ ಒಂದು ಎತ್ತರದ ನಿಲುವು ಗೋಚರವಾಗುತ್ತದೆ. ಇಲ್ಲಿಯ ಅವರ ಅನೇಕ ಕವಿತೆಗಳನ್ನೋದಿ ನಾನು ಸಂತೋಷಿಸಿದ್ದೇನೆ. ಒಂದು ಸರಸ ಸಜ್ಜನಿಕೆ ಹಾಗೂ ಒಂದು ಭಾವಮಾಧುರ್ಯ ಅವರ ಕವಿತೆಗಳಿಗೆ ಒಂದು ತೂಕವನ್ನು ತಂದುಕೊಡುತ್ತದೆ. ಈ ಕವಿ ಓರ್ವ ಸ್ನೇಹಾರ್ಹ ವ್ಯಕ್ತಿಯೆಂದೆನಿಸಿಕೊಳ್ಳುತ್ತಾರೆ.

ಕಾವ್ಯದ ಜಗತ್ತಿನಲ್ಲಿ ಅಲ್ಲದೆ ಉಳಿದ ಸಾಂಸ್ಕೃತಿಕ ಕ್ಷೇತ್ರಗಳಲ್ಲಿಯೂ ಅವರಿಂದ ಇನ್ನೂ ಹೆಚ್ಚು ಸೇವೆ ಸಲ್ಲಲಿ.

30-7-1985 -ವಿ.ಕೃ.ಗೋಕಾಕ್

ಡಾ॥ ಹಾ.ಮಾ. ನಾಯಕ
ಕುಲಪತಿ
ಗುಲ್ಬರ್ಗಾ ವಿಶ್ವವಿದ್ಯಾಲಯ

ಗುಲ್ಬರ್ಗಾ
25-8-85

ಪ್ರಿಯ ಮಿತ್ರರಾದ ಡಾ॥ ಸಾ.ಶಿ. ಮರುಳಯ್ಯನವರು ತಮ್ಮ ಸಮಗ್ರ ಕಾವ್ಯ ಸಂಪುಟವನ್ನು ಪ್ರಕಟಿಸುತ್ತಿರುವ ಈ ಸಂದರ್ಭದಲ್ಲಿ ಅವರಿಗೆ ಶುಭಾಶಯಗಳನ್ನು ಕೋರುವುದು ನನಗೆ ತುಂಬ ಸಂತೋಷದ ಸಂಗತಿ. ಮೂರು ದಶಕಗಳಿಗೂ ಹಿಂದೆ, ಮೂರು ವರ್ಷಗಳ ಕಾಲ, ನಾವಿಬ್ಬರೂ ಸಹಪಾಠಿಗಳಾಗಿದ್ದೆವು. ಮುಂದೆ ಇಬ್ಬರೂ ಒಂದೇ ವೃತ್ತಿಯನ್ನು ಅವಲಂಬಿಸಿದರೂ ನಮ್ಮ ದಾರಿಗಳು ಬೇರೆಯಾದವು. ಆದರೂ ಅವರ ಪ್ರಗತಿಯನ್ನು ನಾನು ಗಮನಿಸುತ್ತಲೇ ಇದ್ದೇನೆ. ವಾಗ್ಮಿಯಾಗಿ, ಅಧ್ಯಾಪಕನಾಗಿ, ಸಂಶೋಧಕರಾಗಿ, ಕವಿಯಾಗಿ ಅವರು ಸಾಕಷ್ಟು ಪ್ರಸಿದ್ಧರಿದ್ದಾರೆ. ಈ ತಮ್ಮ ಕ್ಷೇತ್ರಗಳ ಕೆಲಸದಿಂದ ಬಹು ಜನರ ಪ್ರೀತ್ಯಾದರಗಳನ್ನು ಸಂಪಾದಿಸಿದ್ದಾರೆ.

ಈ ಶೀರ್ಷಿಕೆಯಲ್ಲಿ ಅವರು ತಮ್ಮ ಎಲ್ಲ ಕವನ ಸಂಗ್ರಹಗಳನ್ನೂ ಒಂದೆಡೆ ತರುತ್ತಿದ್ದಾರೆ. ಹೀಗೆ ಒಬ್ಬ ಲೇಖಕರ ಸಮಗ್ರ ಸಾಹಿತ್ಯವನ್ನು ಒಂದೊಂದು ಸಂಪುಟದಲ್ಲಿ ಪ್ರಕಟಿಸುವ ಪ್ರವೃತ್ತಿ ಈಚಿನ ವರ್ಷಗಳದ್ದು. ಇದು ತುಂಬ ಉಪಯುಕ್ತವಾದದ್ದೂ ಹೌದು. ಡಾ॥ ಮರುಳಯ್ಯನವರು ಇಷ್ಟೊಂದು ದೊಡ್ಡ ಸಂಪುಟದಲ್ಲಿ ಅಳವಡಿಸುವಷ್ಟು ಕವಿತೆಗಳನ್ನು ರಚಿಸಿದ್ದಾರೆಂಬುದನ್ನು ನಾನು ಅಭಿಮಾನದಿಂದ ಗಮನಿಸಿದ್ದೇನೆ. ಈ ಸಂಪುಟದಲ್ಲಿ ಅವರ ಸ್ವಂತ ಕವಿತೆಗಳಲ್ಲದೆ ವಿವಿಧ ಭಾಷೆಗಳ ಅನುವಾದಗಳೂ ಸೇರಿವೆ, ಅವರ ಜನಪ್ರಿಯ ಹಾಡುಗಳೂ ಕೂಡಿವೆ. ಕಾವ್ಯಾಸಕ್ತರಿಗೆ ಇದೊಂದು ಕೊಡುಗೆಯಗಿದೆ.

ಅನಕ್ಷರಸ್ಥರೇ ಬಹುವಾಗಿರುವ ಈ ದೇಶದಲ್ಲಿ ಕಾವ್ಯ ಜನರನ್ನು ಸುಲಭವಾಗಿ ಮುಟ್ಟಲು ಇರುವ ಒಂದು ಮಾರ್ಗವೆಂದರೆ ಹಾಡುಗಾರಿಕೆ. ಈ ಮಾರ್ಗವನ್ನು ಡಾ॥ ಮರುಳಯ್ಯನವರು ಬಹು ಮೊದಲೇ ತಿಳಿದುಕೊಂಡರು. ಅವರ ರಚನೆಗಳು ಸಂಗೀತಕ್ಕೆ ಅಳವಟ್ಟು ಆಕಾಶವಾಣಿಯ ಮೂಲಕ, ಕ್ಯಾಸೆಟ್ಟುಗಳ ಮೂಲಕ ತುಂಬ ಜನಪ್ರಿಯವಾಗಿವೆ. ಅವರ 'ನಮ್ಮೂರ ದಾರೀಲಿ' ಎಂಬೊಂದು ರಚನೆಯನ್ನು ಜನಪದಗೀತೆಯೆಂದು ಹಾಡುವವರನ್ನೂ ನಾನು ಬಲ್ಲೆ. ಇದು ಕವಿಯೊಬ್ಬನ ಜನಪ್ರಿಯತೆಗೆ ಒಂದು ಸಾಕ್ಷಿಯಾಗಿದೆ. ಡಾ॥ ಮರುಳಯ್ಯನವರು ಈ ದೃಷ್ಟಿಯಲ್ಲಿ ಅದೃಷ್ಟವಂತರು.

ಡಾ॥ ಮರುಳಯ್ಯನವರ ಕವಿತೆಗಳು, ಹಾಡುಗಳು ಸರಳತೆಯ ಸೌಂದರ್ಯದಿಂದ ತುಂಬಿವೆ. ಅನುವಾದಗಳು ಮೂಲದ ಭಾವನೆಗಳನ್ನು ಗ್ರಹಿಸಿ ಅಭಿವ್ಯಕ್ತಿಸುವಲ್ಲಿ ಯಶಸ್ವಿಯಾಗಿವೆ. ಭಾವುಕತೆಯಿಂದ ತುಂಬಿರುವ ಈ ರಚನೆಗಳು ರಸಿಕರಿಗೆ ಉಲ್ಲಾಸದ ಕ್ಷಣಗಳನ್ನು ಒದಗಿಸುತ್ತವೆಂಬುದರಲ್ಲಿ ಅನುಮಾನವಿಲ್ಲ. ಉಲ್ಲಾಸವೂ ಕಲೆಯ ಒಂದು ಗುರಿಯೆಂಬುದನ್ನು ನಾವು ಮರೆಯಬಾರದು. ಇಲ್ಲಿನ ರಚನೆಗಳಲ್ಲಿ ಬುದ್ಧಿಯ

ಸರ್ಕಸ್ಸಿಗಿಂತ ಹೃದಯದ ಶ್ರೀಮಂತಿಕೆಯೇ ಪ್ರಧಾನವಾಗಿದೆ. ಹಾಡಿಗೆ ಶರಣಾಗಿ ಮಾತುಗಳ ಅರ್ಥ ಕುಸಿಯುವ ಅಪಾಯವೂ ಇದೆ. ಡಾ॥ ಮರುಳಯ್ಯನವರು ಇದರಿಂದ ಪಾರಾಗಲು ಯತ್ನಿಸಿರುವುದು ನೆಮ್ಮದಿಯ ವಿಚಾರ. ಭಕ್ತಿ, ದೇಶಪ್ರೇಮ, ಪ್ರಕೃತಿ, ಪ್ರಣಯ ಇವೆಲ್ಲ ಬತ್ತಲಾರದ ನಿತ್ಯ ಸೆಲೆಗಳು. ಡಾ॥ ಮರುಳಯ್ಯನವರ ರಚನೆಗಳಲ್ಲಿ ಅವು ಇನ್ನೊಮ್ಮೆ ಚಿಮ್ಮಿವೆ. ಬಹು ಸಂದರ್ಭಗಳಲ್ಲಿ ಚೆಲುವಾಗಿ ಚಿಮ್ಮಿವೆ.

- ಹಾ.ಮಾ. ನಾಯಕ

ಡಾ|| ಸಿ.ಪಿ. ಕೃಷ್ಣಕುಮಾರ್
ಕನ್ನಡ ಪ್ರಾಧ್ಯಾಪಕರು,
ಮಾನಸ ಗಂಗೋತ್ರಿ, ಮೈಸೂರು-6

ಖ್ಯಾತಕಕವಿ ಡಾ|| ಸಾ.ಶಿ. ಮರುಳಯ್ಯನವರ ಸಮಗ್ರ ಕಾವ್ಯ ನಮ್ಮ ಮುಂದಿದೆ. ಬೆರಗು ಮೂಡಿಸುವಂತೆ. ಇದು ಗಾತ್ರದಲ್ಲಿ ಮಾತ್ರವಲ್ಲ, ಗುಣದಲ್ಲೂ ಗಣ್ಯವಾದುದು. ಇಲ್ಲಿ ಭಾವಗೀತಗಳುಂಟು, ಕಥನ ಕಾವ್ಯವುಂಟು, ಅನುವಾದಿತ ಕವನಗಳುಂಟು. ವಿಶೇಷವಾಗಿ 'ರಮ್ಯ' ಪರಂಪರೆಯಲ್ಲಿ ಮೈದಾಳಿರುವ ಇಲ್ಲಿನ ಕವನಗಳಲ್ಲಿ ನಿರಾತಂಕ ಭಾವಸ್ಫುರಣವಿದೆ. ಬಂಧುರ ಕಲ್ಪನಾವಿಲಾಸವಿದೆ, ಶ್ರವಣಕಮನೀಯತೆಯಿದೆ. ಪ್ರತಿಭೆ, ವ್ಯುತ್ಪತ್ತಿಗಳ ಸಂಗಮವನ್ನಿಲ್ಲಿ ಕಾಣಬಹುದು; ಸತತಾಭ್ಯಾಸವಂತೂ ಸುಸ್ಪಷ್ಟ. ಕವಿಹೃದಯದ ಒಂದು ಹಂತದ ಬೆಳವಣಿಗೆಯನ್ನು ಈ ಕವಿತಾ ಸಂತಾನ ದಾಖಲಿಸುತ್ತದೆ. ಇದರ ಹಿಂದಿರುವ ವ್ಯಕ್ತಿತ್ವ ಶುಭ್ರವಾದುದು, ಉತ್ಸರ್ಪಿಣಿಯಾದುದು.

ಸಾಶಿಮ ಅವರ ಕಾವ್ಯದ ವಿಷಯ ವೈವಿಧ್ಯವೂ ಗಮನಾರ್ಹವಾದುದು. 'ತ್ರಿಕಾಲ ಸಾಹಿತ್ಯ' 'ಸಕಾಲ ಸಾಹಿತ್ಯ' ಎರಡು ಪ್ರಕಾರಗಳಿಗೂ ಸೇರುವ ರಚನೆಗಳು ಇಲ್ಲಿವೆ. ಒಟ್ಟಿನಲ್ಲಿ ನಮ್ಮ ಅಧುನಿಕ ಕಾವ್ಯದ ರಮ್ಯಸಂಪ್ರದಾಯದ ಒಂದು ಉತ್ತಮ ಮಾದರಿಯನ್ನು ಈ ಸಂಕಲನ ಕಾಣಿಸುತ್ತದೆ.

ಇಷ್ಟೊಂದು ಸಮೃದ್ಧವಾಗಿ ಮತ್ತು ಸಮರ್ಥವಾಗಿ ಕಾವ್ಯನಿರ್ಮಾಣ ಮಾಡಿರುವ ಶ್ರೀ ಮರುಳಯ್ಯನವರನ್ನು ವಿಮರ್ಶಕರು ಇನ್ನಷ್ಟು ಸಮರ್ಪಕವಾಗಿ ಗುರುತಿಸಿ, ಸಾಹಿತ್ಯ ಚರಿತ್ರೆಯಲ್ಲಿ ಅವರಿಗೆ ತಕ್ಕ ಸ್ಥಾನವನ್ನು ದೊರಕಿಸಿಕೊಡಬೇಕಾಗಿದೆ. ಈ ಬಗ್ಗೆ ಯಾರ ವಕೀಲಿಯ ಅಗತ್ಯವೂ ಇಲ್ಲ. ಈ ಕವನ ಸಂಪುಟ ತನ್ನ ಪರವಾಗಿ ತಾನೆ ವಾದಿಸಬಲ್ಲುದು.

15-7-1985 **-ಸಿ.ಪಿ.ಕೆ.**
ಭಾನುವಾರ

ಚೆನ್ನವೀರಕಣವಿ
'ಚೆಂಬೆಳಕು' ಕಲ್ಯಾಣನಗರ
ಧಾರವಾಡ-580 007

ಮೂರು ದಶಕಕ್ಕೂ ಮೇಲ್ಪಟ್ಟ ಅವಧಿಯಲ್ಲಿ ಹಬ್ಬಿ, ಹೆಸರಿಸಿ, ಹೂ ಬಿಡುತ್ತ ಬಂದ ತಮ್ಮ ಕಾವ್ಯಕುಂಜವನ್ನು ಶ್ರೀ ಸಾ.ಶಿ. ಮರುಳಯ್ಯನವರು ಈಗ ಒಂದೆಡೆಗೆ ಕಣ್ಣು ತುಂಬುವಂತೆ ಕಾವ್ಯ ಪ್ರೇಮಿಗಳಿಗೆ ಒದಗಿಸಿದ್ದಾರೆ. 'ಕೋಟಿ ದೀಪದ ನಡುವೆ ನಮ್ಮ ದೀವಿಗೆಯಿರಿಸಿ ಹಾಡೋಣ ಅನುರಾಗ ರಾಗವನ್ನು', ಎಂದು ತಮ್ಮ ಪ್ರಥಮ ಸಂಕಲನದಲ್ಲಿಯೇ ಅವರು ಹಾಡಿದ್ದುಂಟು.

ಪ್ರಕೃತಿ, ಪ್ರೇಮ, ಸಮಾಜ, ದೈವೀಶ್ರದ್ಧೆಯ ಪ್ರಾರಂಭದ ಪ್ರೇರಣೆಗಳೇ ಕಳೆಗೊಂಡು ಬೆಳೆದು, ಅವಶ್ಯವೆನಿಸಿದಾಗ ವಿಡಂಬನೆಯನ್ನೂ ಒಳಗೊಂಡು, ದೇಶಭಕ್ತಿಯನ್ನು ಮೈಗೂಡಿಸಿಕೊಂಡು, ಕಥನ ಕಲೆಯ ಹೊಳಪನ್ನು ತಳೆದು, ಗೇಯತೆಗೆ ಒಲಿದು ಭಾವಬಂಧುರವಾಗಿಯೇ ಅವರ ಕಾವ್ಯ ಪ್ರವಹಿಸಿದೆ. ಆಗೀಗ ಬೇರೆ ಧಾಟಿ ಹಿಡಿದಿಲ್ಲವೆಂದಲ್ಲ, ಆದರೆ ಅದು 'ವಿಪರ್ಯಾಸ'ದ್ದೆಂಬ ಭಾವನೆ ಅವರಿಗಿದೆ. ಮೊದಲೇ ಹೊರಹೊಮ್ಮಿದ ವಾತ್ಸಲ್ಯಭಾವ ಕೊನೆಯಲ್ಲಿ ಮಕ್ಕಳ ಸಾಹಿತ್ಯಕ್ಕೂ ಇಂಬುಗೊಟ್ಟಿದೆ.

ಸಂಸ್ಕೃತದಿಂದ ತಂದ ಸೊಗಸಾದ ಅನುವಾದಗಳ ಎಡಬಲದಲ್ಲಿಯೇ ಇತರ ಭಾರತೀಯ ಭಾಷೆಗಳ ಕಾವ್ಯಾನುವಾದವೂ ಕಂಗೊಳಿಸಿದೆ. ಕ್ಯಾಸೆಟ್ಟುಗಳು ತಮ್ಮ ಪ್ರತ್ಯೇಕತೆಯನ್ನು ಎತ್ತಿ ಹಿಡಿದಿವೆ. ಮೈಲಾರಲಿಂಗದಂಥ ಒಂದೇ ವಸ್ತುವನ್ನು ವಿವಿಧ ರೀತಿಯಲ್ಲಿ ಮಿದ್ದಿ, ಮಿಡಿದು, ಕೀರ್ತಿಸುವ ಕೌಶಲವನ್ನು ತೋರಿದ್ದಾರೆ.

ಇದನ್ನೆಲ್ಲ ಆಯ್ದು, ಆರಯ್ದು ನೋಡುವ ರಸಿಕರಿಗೆ ತಕ್ಕ ಪ್ರತಿಫಲವನ್ನು ಈ ಸಂಗ್ರಹ ನಿಸ್ಸಂದೇಹವಾಗಿ ನೀಡುತ್ತದೆ.

10-8-1985 -ಚೆನ್ನವೀರಕಣವಿ

ಡಾ|| ಎಚ್. ತಿಪ್ಪೇರುದ್ರಸ್ವಾಮಿ
ಪ್ರಾಧ್ಯಾಪಕರು ಮತ್ತು
ಕನ್ನಡ ಅಧ್ಯಯನ ಸಂಸ್ಥೆಯ ಅಧ್ಯಕ್ಷರು,
ಮಾನಸ ಗಂಗೋತ್ರಿ, ಮೈಸೂರು.

ಮಿತ್ರರಾದ ಡಾ|| ಸಾ.ಶಿ. ಮರುಳಯ್ಯ ಅವರ ಕವನಗಳೆಲ್ಲಾ ಒಟ್ಟಾಗಿ ಒಂದು ಹೆಬ್ಬೊತ್ತಿಗೆಯಲ್ಲಿ ಬರುತ್ತಿರುವುದು ಸಂತೋಷಕರವಾದ ಸಂಗತಿ. 1954ರಲ್ಲಿ 'ಶಿವತಾಂಡವ'ದಿಂದ ಕನ್ನಡ ಕಾವ್ಯಲೋಕಕ್ಕೆ ಪಾದಾರ್ಪಣ ಮಾಡಿದ ಅವರು ಈ ಮೂವತ್ತು ವರ್ಷಗಳಲ್ಲಿ ಬಹುಮುಖವಾಗಿ ಬೆಳೆದು ಬಂದಿದ್ದಾರೆ. ಸಾಹಿತ್ಯ ಸಂಶೋಧಕರಾಗಿ, ವಿಮರ್ಶಕರಾಗಿ, ವಿದ್ವಾಂಸರಾಗಿ, ಎಲ್ಲಕ್ಕಿಂತ ಮುಖ್ಯವಾಗಿ ಕವಿಗಳಾಗಿ ಕನ್ನಡ ಸಾಹಿತ್ಯ ಲೋಕದಲ್ಲಿ ತಮ್ಮದೇ ಆದ ಸ್ಥಾನವನ್ನು ಸ್ಥಾಪಿಸಿಕೊಂಡಿದ್ದಾರೆ. ಇಂತಹ ಪರಿಚಯದ ಅಥವಾ ಅಭಿಪ್ರಾಯದ ಮಾತುಗಳ ಅಗತ್ಯವನ್ನು ಮೀರಿ ಬೆಳೆದು ನಿಂತಿದ್ದಾರೆ. ಆದರೂ ಈ ಎರಡು ಮಾತುಗಳನ್ನು ಬರೆಯುವಂತೆ ಕೇಳಿರುವುದಕ್ಕೆ ಅವರ ವಿಶ್ವಾಸವೊಂದೇ ಕಾರಣ ಹೊರತು ಬೇರೇನೂ ಅಲ್ಲ.

ಅವರ 'ಶಿವತಾಂಡವ' ಕವನ ಸಂಕಲನಕ್ಕೆ ಮುನ್ನುಡಿ ಬರೆಯುತ್ತಾ ಶ್ರೀ ಎಸ್.ವಿ. ಪರಮೇಶ್ವರಭಟ್ಟರು ''ಎಲ್ಲೆಲ್ಲಿಯೂ ಶಿವನನ್ನು ಕಾಣುವ ಈ ಕವಿಯ ಕಾಣ್ಕೆ ದಿನದಿನಕ್ಕೆ ಹೆಚ್ಚು ಹೆಚ್ಚು ಸ್ಫುಟವಾಗುತ್ತಾ ವರ್ಧಿಸುತ್ತಾ ಬರಲಿ'' ಎಂದು ಹಾರೈಸಿದ್ದರು. ಅವರ ಆ ಹಾರೈಕೆ ಹುಸಿಯಾಗದ ರೀತಿಯಲ್ಲಿ ಶ್ರೀ ಸಾ.ಶಿ. ಮರುಳಯ್ಯನವರು ವರ್ಧಿಸುತ್ತಾ ಬಂದಿದ್ದಾರೆ. 1962ರಲ್ಲಿ ಬಂದ ಇವರ ಎರಡನೆಯ ಕವನ ಸಂಕಲನ ''ಕೆಂಗನಕಲ್ಲು'' ಅದೇ ಅವರ ಈ ಬೆಳವಣಿಗೆಗೆ ಸಾಕ್ಷಿಯನ್ನೊದಗಿಸಿತು. ಶ್ರೀ ದ.ರಾ. ಬೇಂದ್ರೆಯವರ ಮುನ್ನುಡಿಯಯೊಡನೆ ಬಂದ ಈ ಕೃತಿ 1962ನೇ ಸಾಲಿನ ರಾಜ್ಯ ಸರ್ಕಾರದ ಪ್ರಶಸ್ತಿಯನ್ನೂ ಪಡೆಯಿತು. ಅಲ್ಲಿ ಬರುವ ನೀಳ್ಗವನ ''ಕೆಂಗನ ಕಲ್ಲು'' ದಟ್ಟವಾದ ಪರಿಣಾಮವನ್ನು ಬೀರುವ ಕಥನ ಕವನವಾಗಿ ಇಂದಿಗೂ ತನ್ನ ಸತ್ವವನ್ನು ಉಳಿಸಿಕೊಂಡಿದೆ.

ಅವರ ಇತರ ಕೃತಿಗಳ ಜೊತೆಗೆ ಕವನಗಳ ರಚನೆಯೂ ಏಕ ಪ್ರಕಾರವಾಗಿ ಬೆಳೆದು ಬಂದಿದೆ ಎನ್ನುವುದಕ್ಕೆ ಈಗ ಪ್ರಕಟವಾಗುತ್ತಿರುವ ಈ ಹೆಬ್ಬೊತ್ತಗೆಯೇ ಸಾಕ್ಷಿ. ಈ ಮಧ್ಯದಲ್ಲಿ ಕನ್ನಡ ಕಾವ್ಯಪ್ರಪಂಚ ಕೆಲವು ಪ್ರಮುಖ ತಿರುವುಗಳನ್ನು ಪಡೆಯಿತು. ನವೋದಯ ನವ್ಯವಾಯಿತು; ಅದನ್ನೂ ದಾಟಿ ಬಂಡಾಯದ ಕಡೆಗೆ ತಿರುಗಿತು. ಈ ಯಾವುದಕ್ಕೂ ಸೇರದ ಕವಿ ತಮ್ಮದೇ ಆದ ಮಾರ್ಗದಲ್ಲಿ ಮುನ್ನಡೆಯನ್ನು ಸಾಧಿಸಿದ್ದಾರೆ. ಅನೇಕ ಕವಿಗಳು ತಮ್ಮ ಪ್ರಸ್ತುತತೆಯನ್ನು ಕಳೆದುಕೊಳ್ಳುವ ಅಳುಕಿನಿಂದ, ಅದು ತಮ್ಮ ಮಾರ್ಗವಲ್ಲದಿದ್ದರೂ, ನವ್ಯಕ್ಕೋ, ಬಂಡಾಯಕ್ಕೋ ತಮ್ಮನ್ನು ಅಂಟಿಸಿಕೊಂಡು ಉಳಿಯುವ ಪ್ರಯತ್ನ ಮಾಡಿದುದೂ ಉಂಟು. ಆದರೆ ಸಾ.ಶಿ. ಅವರು ಈ ಯಾವ ಅಳುಕಿಗೂ ಒಳಗಾಗದೆ ತಮ್ಮ ಪ್ರಾಮಾಣಿಕ ಅನುಭವದ ಸುಂದರ ಅಭಿವ್ಯಕ್ತಿಯ ನೇರವಾದ ಮಾರ್ಗದಲ್ಲಿ ನಡೆದುಬಂದಿದ್ದಾರೆ.

ಕವಿಗೆ ಬೇಕಾದದ್ದು ಗುಂಪುಗಾರಿಕೆಯಲ್ಲ; ಸಂಕುಚಿತ ತತ್ವಬದ್ಧತೆಯಲ್ಲ; ಆತನಿಗೆ

ಬೇಕಾದುದು ಒಟ್ಟು ಜೀವನ ನಿಷ್ಠೆ, ಸುತ್ತಲಿನ ಸೌಂದರ್ಯ ದೃಷ್ಟಿ, ತೆರೆದ ಕಣ್ಣುಗಳಿಂದ ಜೀವನವನ್ನು ನೋಡಿ ಅಲ್ಲಿನ ಒಳಿತು ಕೆಡಕುಗಳಿಗೆ ಮಿಡಿಯುವುದು, ತುಡಿಯುವುದು, ಆ ಮಿಡಿತ ತುಡಿತಗಳಿಗೆ ನುಡಿ ಕೊಡುವುದು ಒಂದು ಹಂತದಲ್ಲಿ ಅನಿವಾರ್ಯವಾಗುತ್ತದೆ. ಆ ಅನಿವಾರ್ಯತೆ ತೀವ್ರವಾದಾಗ ಕವನ ಮೂಡುತ್ತದೆ. ಹಾಗೆ ಮೂಡಿಬಂದ ಕೆಲವು ಕವನಗಳನ್ನಾದರೂ ಇಲ್ಲಿ ಕಾಣಬಹುದು. ಇವುಗಳಲ್ಲಿ ವೈವಿಧ್ಯವಿದೆ, ವಿಡಂಬನೆಯಿಂದ ಹಿಡಿದು ಆತ್ಮಾನುಸಂಧಾನದವರೆಗೂ, ಪ್ರಕೃತಿಗೀತೆಗಳಿಂದ ಶಿಶುಗೀತೆಗಳವರೆಗೂ ಇದರ ಹರವು ಹಬ್ಬಿದೆ. ಏನೇ ಬರೆದರೂ ಈ ಕವಿಯಲ್ಲಿರುವ ಒಂದು ಮುಖ್ಯಗುಣ ಅನುಭವದ ಜೀವಂತ ಮಿಡಿತ. ಅದರಿಂದ ಸಂವಹನ ಸ್ಪಷ್ಟತೆ ಮೂಡಿಬರುತ್ತದೆ. ಶ್ರೀ ಎಸ್.ವಿ. ಪರಮೇಶ್ವರಭಟ್ಟರು ಮೊದಲಸಂಕಲನದಲ್ಲಿಯೇ ಗುರುತಿಸಿರುವಂತೆ ಇವರು 'ಗೂಡಾರದ' ಕವಿಯಲ್ಲ! ಅಂತೆಯೇ ಪ್ರಚಾರದ ಅಬ್ಬರವೂ ಇವರಲ್ಲಿಲ್ಲ. ಸುಸಂಸ್ಕೃತ ಹೃದಯದ ಸುಮಧುರ ಅನುಭವಗಳ ಸುಂದರ ಅಭಿವ್ಯಕ್ತಿ ಇವರ ಕಾವ್ಯ ಗುರಿ. ಈ ಗುರಿಯತ್ತ ನೇರವಾಗಿ ನಡೆಯಬಲ್ಲ ಸಾಮರ್ಥ್ಯವೂ ಇವರಿಗಿದೆ. ಅದರಿಂದ ಇವರ ಕೆಲವು ಕವನಗಳು ತುಂಬಾ ಆಪ್ಯಾಯಮಾನವಾಗುತ್ತವೆ. ''ಸುಮಸುಂದರ ತರುಲತೆಗಳ ಬೃಂದಾವನ ಲೀಲೆ'' (ಔಪಾಸನೆ) ಎಂಬಂತಹ ಇವರ ಕೆಲವು ಗೀತೆಗಳು ಜನಪ್ರಿಯವಾಗಿರುವುದು ಈ ಕಾರಣಕ್ಕಾಗಿಯೇ.

ಇವರ ಪ್ರಕೃತಿ ಗೀತೆಗಳಂತೆ ಮಾನವ ಪ್ರಕೃತಿಯ ಅಂತರಿಕ ವಿಶ್ಲೇಷಣೆ, ಮಾನವ ಸ್ವಭಾವದ ಒಳಿತು ಕೆಡುಕುಗಳು, ಶಿವ ಅಶಿವಗಳ ಮಥನ, ಸಂಘರ್ಷಣೆ ಈ ಮೊದಲಾದವುಗಳ ಚಿತ್ರಗಳೂ ಇಲ್ಲಿ ಬರುತ್ತವೆ. ಆದರೆ ಅವು ಎಲ್ಲೂ ಉಲ್ಬಣಗೊಳ್ಳದೆ ಅವುಗಳ ಅಂತರ್ಯದಲ್ಲಿರುವ ಪ್ರಶಾಂತತೆಯ ಕಡೆಗೆ ಹೆಚ್ಚು ಒಲಿಯುತ್ತವೆ. ಆದ್ದರಿಂದ ಇವುಗಳಲ್ಲಿ ಆರ್ಭಟವಿಲ್ಲ, ಅಂತರ್ ನಿರೀಕ್ಷಣೆ ಇದೆ; ಪ್ರಚಾರದ ಅಬ್ಬರವಿಲ್ಲ, ಪ್ರಶಾಂತ ಪರಿಣತಿಯಿದೆ, ಉದಾತ್ತ ಆಶಯವಿದೆ, ಆದರ್ಶವಿದೆ, ಜೀವನದ ಅನುಭವವಿದೆ, ಅನುಕಂಪೆಯಿದೆ, ಪೂರ್ಣ ದೃಷ್ಟಿಯಿದೆ, ಸೃಷ್ಟಿ ಶಕ್ತಿಯಿದೆ, ಒಳ್ಳೆಯ ಕಾವ್ಯ ಮೂಡಿಬರಲು ಇನ್ನೇನುಬೇಕು? ಇಲ್ಲಿರುವ ಅನೇಕ ಕವನಗಳು ಈ ಸತ್ವದಿಂದ ಶ್ರೀಮಂತವಾಗಿವೆ; ಕೃತಿಗೆ ಸಾರ್ಥಕತೆಯನ್ನು ತಂದುಕೊಟ್ಟಿವೆ. ಸಹೃದಯರ ಅನುಭವದಲ್ಲಿ ಇವು ಪೂರ್ಣಗೊಳ್ಳಲಿ ಎಂದು ಹಾರೈಸುತ್ತೇನೆ.

- ತಿಪ್ಪೇರುದ್ರಸ್ವಾಮಿ

ಸರಸ್ವತಿಪುರಂ
ಮೈಸೂರು
26-6-85

ಪಿ.ಎಸ್. ರಾಮಾನುಜಂ ಮೈಸೂರು
ಡಿ.ಐ.ಜಿ. ಮೈಸೂರು ವಿಭಾಗ 10-7-85

ಸಾ.ಶಿ. ಮರುಳಯ್ಯನವರ ಕಾವ್ಯದಲ್ಲಿ ಆಧ್ಯಾತ್ಮಿಕತೆ ಮತ್ತು ಜೀವನೋತ್ಸಾಹಗಳೆರಡೂ ಸಮ್ಮಿಳಿತವಾಗಿ ಒಂದು ವಿಶಿಷ್ಟವಾದ ಜೀವನ ತತ್ವವೇ ರೂಪುಗೊಂಡಿದೆ. ಅವರ ವ್ಯಾಪಕವಾದ ಭಾವಗಳು ಸುಂದರವಾದ ಶಬ್ದಗಳಲ್ಲಿ ಮೈವೆತ್ತು ಮನಸ್ಸನ್ನು ಕುಣಿಸುತ್ತವೆ, ತಣಿಸುತ್ತವೆ. ಸಾಮಾನ್ಯವಾಗಿ ಲಯಬದ್ಧವಾಗಿಯೇ ಓಡುವ ಅವರ ಕಾವ್ಯ ಗೇಯತ್ವವನ್ನು ಮೈಗೂಡಿಸಿಕೊಂಡೇ ಹೋಗುತ್ತಾ ಮನಸ್ಸನ್ನು ಚಿಂತನಕ್ಕೆ ಹಚ್ಚುತ್ತದೆ. ಪ್ರಕೃತಿಯ ವರ್ಣನೆಯಾಗಲಿ, ಮನಸ್ಸಿನ ಭಾವಗಳನ್ನು ಪದರ ಪದರವಾಗಿ ಮೂಡಿಸಿ ಸ್ಪಷ್ಟಗೊಳಿಸುವುದರಲ್ಲಾಗಲಿ, ಹಬ್ಬ ಹರಿದಿನಗಳ ಉತ್ಸಾಹವನ್ನು ಮೂಡಿಸುವುದರಲ್ಲಾಗಲಿ, ಭಕ್ತಿಯ ಭಾವುಕತೆಯನ್ನು ತೋರುವುದರಲ್ಲಾಗಲಿ ಮರುಳಯ್ಯನವರ ಕಾವ್ಯವು ಎಲ್ಲೂ ಜಾಳಾಗುವುದಿಲ್ಲ; ಅರ್ಥವು ಎಲ್ಲೂ ಶಿಥಿಲವಾಗುವುದಿಲ್ಲ.

ಬಿತ್ತರದ ಬಾನಿನಲಿ ಬತ್ತಲೆಯ ಬಯಲಿನಲಿ
ನಂದನೋದ್ಯಾನವನೆ ಬೆಳೆಯ ಮನವಿಲ್ಲ

ಎಂಬಲ್ಲಿರುವ ಕವಿಯ ಹಂಬಲದ ವಿನಯಶೀಲತೆ ಕಾವ್ಯಶಕ್ತಿಯ ಮೂಲ ಸ್ರೋತವನ್ನು ತೂಗಿಸುತ್ತದೆ.

'ಕನ್ನಡದ ಕಹಳೆ' - ಕವಿಯ ಚಾರಿತ್ರಿಕ ಪ್ರಜ್ಞೆಯನ್ನು ಮೊಳಗಿಸುತ್ತದೆ. 'ಕೆಂಗನಕಲ್ಲು' ಕಾವ್ಯಪ್ರೌಢಿಮೆಯ ಹೆಗ್ಗುರುತಾಗಿ ನಿಲ್ಲುತ್ತದೆ. ಆ ಕಾವ್ಯ ಅರ್ಥ ಶಬ್ದಗಳ ಒಂದುಸುಂದರ ಸಮನ್ವಯ. ಏಳು ವರ್ಷಗಳ ದೀರ್ಘಕಾಲದ ಸಾರ್ಥಕ ಪ್ರಯತ್ನದ ಪರಿಪಕ್ವ ಫಲ.

ಕಾಲದಾ ತಲೆದೆಸೆಯೊಳಿಟ್ಟಿರುವ ಪೀಠದೊಳು
ಕುಳಿತು ಕಾಯುತ್ತಲಿದೆ ನಿಯತಿ

-ಎಂಬ ಕವಿವಾಕ್ಯದಲ್ಲಿ ಅಡಗಿರುವ ಒಂದು ದಾರ್ಶನಿಕ ಅನುಭವ ಮೈ ಜುಮ್ಮೆನಿಸುವಂತಹದು. ಶಬ್ದಗಳಲ್ಲಿ ಇಂತಹ ಅರ್ಥವುಂಟೇ, ಇರಬಲ್ಲುದೇ ಎಂದು ಚಕಿತಗೊಳಿಸುವಷ್ಟು ಬಿಗಿ ಶಬ್ದಗಳ ಪ್ರಯೋಗ, ಹಾಗೆಯೇ ಜೀವನ ಗೀತದಲ್ಲಿ ತತ್ವಜ್ಞಾನದ ಮೇಲೆ ಆಧಾರಿತವಾದ ಜೀವನ ತತ್ವ, ಮೈಲಾರಲಿಂಗನಲ್ಲಿ ಕಂಡುಬರುವ ಭಕ್ತಿ ವೈಭವ - ಹೀಗೆ ಒಂದು ವಿಸ್ತೃತವಾದ ಪ್ರಪಂಚದಲ್ಲಿ ಭಾವ ಪ್ರಯಾಣ ಮಾಡುವ ಕವಿ ಮರುಳಯ್ಯನವರು ಅರುಣೋದಯವಿಲ್ಲದೆಯೇ ದಿಗ್ಗನೆ ಎದ್ದು ಬಂದ ಸೂರ್ಯನಂತೆ ಇದ್ದಕ್ಕಿದ್ದಂತೆ ನಮ್ಮ ಮುಂದೆ ನಿಂತಿರುವ ಎತ್ತರದ ಸುಕವಿ. ಅವರ ಲೇಖನಿಯಿಂದ ಹೊರಬಂದಿರುವ ಸರಸ್ವತಿ ಪ್ರೌಢೆ. ಕವಿಯಾಗಿ ಶ್ರೀ ಮರುಳಯ್ಯನವರ ವ್ಯಕ್ತಿತ್ವ ಹೀಗೆಯೇ ಬೆಳೆಯಬೇಕೆಂಬುದು ನನ್ನ ಹಾರೈಕೆ.

-ರಾಮಾನುಜಂ

ಪ್ರೊ|| ಹಂಪ ನಾಗರಾಜಯ್ಯ
ಅಧ್ಯಕ್ಷರು
ಕನ್ನಡ ಸಾಹಿತ್ಯ ಪರಿಷತ್ತು

ಸಿಹಿ ನೆನಪು

ಡಾ|| ಸಾ.ಶಿ. ಮರುಳಯ್ಯನವರು ಕಳೆದ 25 ವರ್ಷಗಳಿಂದ ನನ್ನ ಆತ್ಮೀಯ ಸ್ನೇಹಿತರು. ಸಹೋದ್ಯೋಗಿಯಾಗಿ, ಸಹಭಾಷಣಕಾರನಾಗಿ, ಸನ್ಮಿತ್ರನಾಗಿ ಹಿತೈಷಿಯಾಗಿ ಅವರೊಡನೆ ಕಳೆದ ದಿನಗಳ ಮಧುರ ಸ್ಮರಣೆ ಎಂದೂ ಬತ್ತದ ಚಿಲುಮೆ. ನೆನಪು ಕಹಿಯಲ್ಲ, ಅವರ ಕವಿತೆಗಳನ್ನು ಶ್ರೀ ಹೆಚ್.ಕೆ. ನಾರಾಯಣ ಮೊದಲಾದ ಸುಗಮ ಸಂಗೀತಕಾರರು ಕನ್ನಡ ನಾಡಿನ ಉದ್ದಗಲಕ್ಕೂ ಹಾಡಿ ಸಹಸ್ರಾರು ಸಾಹಿತ್ಯ ಪ್ರೇಮಿಗಳನ್ನು ಸಂತೋಷಪಡಿಸಿದ್ದಾರೆ. ಮರುಳಯ್ಯನವರು ಒಳ್ಳೆಯ ಕವಿ. ನವೋದಯ ಮಾರ್ಗ ಧೋರಣೆಗೆ ಸೇರಿದ ಈ ಕವಿಯ ಏಳು ಸಂಕಲನಗಳು ಈ ಕಾಲು ಶತಮಾನದಲ್ಲಿ ಪ್ರಕಟವಾಗಿ ವಿಮರ್ಶಕರ ಮೆಚ್ಚುಗೆ ಗಳಿಸಿವೆ. ಇದೀಗ ಇವರ ಸಮಗ್ರ ಕಾವ್ಯ ಒಂದು ಬೃಹತ ಸಂಪುಟವಾಗಿ ಹೊರಬರುತ್ತಿರುವುದನ್ನು ಕಾವ್ಯಾಸಕ್ತರು ಸಂತೋಷದಿಂದ ಬರಮಾಡಿಕೊಳ್ಳುತ್ತಾರೆಂದು ನಿರೀಕ್ಷಿಸುತ್ತೇನೆ.

21-7-1985 -ಹಂಪನಾ

ಪ್ರೊ॥ ಕೆ.ಎಸ್. ನಿಸಾರ್ ಅಹಮದ್
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಬೆಂಗಳೂರು
15-10-1985

ನನ್ನ ಪ್ರಿಯ ಮಿತ್ರರೂ ಸಹೋದ್ಯೋಗಿಗಳೂ ಆದ ಡಾ॥ ಸಾ.ಶಿ. ಮರುಳಯ್ಯನವರು ಕಳೆದ 3 ದಶಕಗಳಿಗೆ ಮೀರಿ ಕಾವ್ಯ ಕೃಷಿಯನ್ನು ಮಾಡುತ್ತಾ ಬಂದಿದ್ದಾರೆ. ಇವರ ಪದ್ಯಗಳ ವೈವಿಧ್ಯ ಹಾಗೂ ವ್ಯಾಪ್ತಿ ಆಶ್ಚರ್ಯವೆನಿಸುತ್ತದೆ. ಅಭಿವ್ಯಕ್ತಿಯಲ್ಲಿ ನೇರತನ, ಖಚಿತತೆ ಮತ್ತು ಆತ್ಮೀಯ ಗುಣಗಳು ಇವರ ಅನೇಕ ಕವನಗಳಲ್ಲಿ ಎದ್ದು ಕಾಣುತ್ತವೆ. ಕನ್ನಡ ಮತ್ತು ಸಂಸ್ಕೃತಗಳನ್ನು ಹಿತಮಿತವಾಗಿ ಔಚಿತ್ಯಪೂರ್ಣವಾಗಿ ಬಳಸುವ ರೀತಿ, ಗೇಯ ಗುಣಕ್ಕೆ ಕೊಡುವ ಪ್ರಾಮುಖ್ಯ ಮತ್ತು ಬಿಗಿಯೂ ಬನಿಯೂ ಆದ ಲಯಬದ್ಧ ಸಾಲುಗಳನ್ನು ನಿರ್ಮಿಸುವಲ್ಲಿ ತೋರುವ ಎಚ್ಚರ ಸಾ.ಶಿ. ಮರುಳಯ್ಯನವರನ್ನು ಅನನ್ಯ ಭಾವಗೀತಕಾರ ಎನ್ನಿಸಿದೆ. ಇವರ ಪ್ರಾರಂಭಿಕ ಪದ್ಯಗಳಲ್ಲಿ ವಿರಾಜಿಸುತ್ತಿದ್ದ ವಾಗ್ಮಿತೆ ಹಾಗೂ ವಾಗಾಧಿಕ್ಯ ಈಚಿನ ಪದ್ಯಗಳಲ್ಲಿ ತಗ್ಗಿ ಅರ್ಥೈಕಗಾಮಿಯಾದ ಮಿತಮಾತುಗಳು ಶೋಭೆಯನ್ನು ತರುತ್ತವೆ. ಇವರು ಬೇರೆ ಭಾಷೆಗಳಿಂದ ಮಾಡಿರುವ ಅನುವಾದಗಳಲ್ಲಿ ಕನ್ನಡದ ಸೊಗಡು ಗಾಢವಾಗಿ ಅನುಭವಕ್ಕೆ ಬರುತ್ತದೆ.

ಸಾ.ಶಿ. ಮರುಳಯ್ಯ ಅವರದು ಸರಳ ಸುಸಂಸ್ಕೃತ ವ್ಯಕ್ತಿತ್ವ. ಪರಂಪರೆಯಿಂದ ಬಂದ ಒಳ್ಳೆಯ ಅಂಶಗಳನ್ನೂ ಸಮಕಾಲೀನ ಅರಿವಿನೊಂದಿಗೆ ಹೊಂದಿಸಿಕೊಂಡು ವಿಕಸಿತವಾಗುತ್ತಾ ಸಾಗುತ್ತಿರುವ ಇವರ ದೃಷ್ಟಿಕೋನದಲ್ಲಿ ಒಂದು ಸಮತ್ವ, ಹದ ಸಹಜವಾಗಿ ಕೂಡಿಕೊಂಡಿದೆ. ಉದ್ಯಾನವೆಂದರೆ ಕೇವಲ ಮಲ್ಲಿಗೆ ಸಂಪಿಗೆಗಳಲ್ಲವಷ್ಟೆ? ಇಲ್ಲಿ ಪದ್ಯಗಳಲ್ಲಿ ಕಳೆಯೂ ಇದೆ! ಅದು ಅಸಹಜವೇನಲ್ಲ.

ಮರುಳಯ್ಯನವರ ಸಮಗ್ರ ಕವನಗಳ ಈ ಕಾವ್ಯಕುಂಜ ಪ್ರಕಟವಾಗುತ್ತಿರುವುದು ನನ್ನಂತಹ ಮಿತ್ರನಿಗೆ ಅತ್ಯಂತ ಸಂತೋಷದ ಹಾಗೂ ಹೆಮ್ಮೆಯ ಸಂಗತಿ. ಇವರ ಪದ್ಯಗಳು ನಾಡಿನ ರಸಿಕರಿಗೆ ಮೆಚ್ಚಿಗೆಯಾಗುವುದರಲ್ಲಿ ಸಂದೇಹವಿಲ್ಲ.

15-10-1985

– ಕೆ.ಎಸ್ ನಿಸಾರ್ ಅಹಮದ್

ಪು.ತಿ. ನರಸಿಂಹಾಚಾರ್

ಪ್ರೊಫೆಸರ್ ಸಾ.ಶಿ. ಮರುಳಯ್ಯನವರು ತಮ್ಮ ಈ ಸಮಗ್ರ ಕಾವ್ಯ ಸಂಪುಟಕ್ಕೆ ನನ್ನಿಂದ ಎರಡು ಸಹೃದಯ ಮಾತುಗಳನ್ನು ಅಪೇಕ್ಷಿಸಿದ್ದಾರೆ. ಇದು ಅವರ ವಿಶ್ವಾಸವನ್ನೂ ಸೌಜನ್ಯವನ್ನೂ ತೋರುತ್ತದೆ. ಶ್ರೀಯುತರು ಈಗಾಗಲೇ ಪ್ರಸಿದ್ಧರು. ಇವರ ಮೊದಲಕವನ ಸಂಗ್ರಹಕ್ಕೆ ಶ್ರೀ ಪರಮೇಶ್ವರಭಟ್ಟರ ನಲ್ನುಡಿ ದೊರೆತಿವೆ. ದಿ॥ ಶ್ರೀ ಬೇಂದ್ರೆ ಮತ್ತು ಪ್ರೊ॥ ಗೋಕಾಕ್ ಅವರುಗಳ ಹರಕೆ ಹಾರೈಕೆಗಳನ್ನು ಇವರ ಕಾವ್ಯ ತಳೆದಿವೆ. ನಾನು ಈಗ ಹೇಳಬೇಕಾಗಿರುವ ಮುಖ್ಯವಾದ ಮಾತೇನೆಂದರೆ ಶ್ರೀಯುತರು ಈ ಸಮಗ್ರ ಕಾವ್ಯ ಪ್ರಕಾಶನದಿಂದ ತಮ್ಮ ಕಾವ್ಯ ಶ್ರಮಕ್ಕೆ ಇತಿಶ್ರೀ ಹಾಡಬಾರದೆಂದು, ಇನ್ನು ಮೇಲೆ ನಾನು ಬರೆಯುತ್ತೀನೋ ಇಲ್ಲವೋ ಎಂಬ ಸೂಚನೆಯನ್ನು ಅವರು ನನಗೆ ಕೊಟ್ಟರು. ತಾವಿನ್ನೂ ವಯಸ್ಸಿನಲ್ಲಿ ನಡುಪ್ರಾಯದಲ್ಲಿರುವುದನ್ನು ಅವರು ಮರೆತರೋ ಏನೋ. ಅಲ್ಲದೆ ಅವರ ಸ್ವಭಾವದಲ್ಲಿ ಕಾವ್ಯರಚನಾ ಪ್ರಚೋದನೆಯಿದೆ. ಇವರ ಪದ್ಯಗಳು ಕನ್ನಡ ಜನಕ್ಕೆ ಬೇಕು. ಸುಗಮಸಂಗೀತ ರಚನಕಾರರಿಗೆ ಇವರ ಗೀತೆಗಳು ಒಂದು ಗಣಿ. 'ಶ್ರುತಿಸುಖ ನಿನದೇ' ಎಂಬ ಹಾಡನ್ನು ಕೇಳಿ ಮೆಚ್ಚದವರಾರು? ಹಾಗೆಯೇ ಇವರ ದೇಶಭಕ್ತಿಗೀತೆಗಳೂ ಸಹ. ಈ ರಚನೆಗಳು ಸಿನಿಮಾ ಹಾಡುಗಳಂತಿಲ್ಲ. ಭಾವಗೀತೆಗಳ ಮಟ್ಟದಲ್ಲೂ ಉತ್ತಮ ನವೀನ ಸ್ವರ ಮಟ್ಟುಗಳನ್ನೂ ಧಾತುಗಾರರಿಂದ ಅಪೇಕ್ಷಿಸುವಂಥವು. ಆದರೆ ಕ್ಲಾಸಿಕಲ್ ಎಂಬ ಶಿಷ್ಟ ಸಂಪ್ರದಾಯದ ಕೌಶಲವನ್ನು ಬೇಡುವಂಥವಲ್ಲ. ಸಿನಿಮಾ ರಂಗದಲ್ಲಿ ವರ್ಣಮಟ್ಟುಗಳೇ ಪ್ರಧಾನ. ಮಾತುಗಳು ನೆಮ್ಮದಿ ಕುಳದ ಮನೆ ಅಳಿಯನಂತೆ. ನಾಟಕದ ಮಟ್ಟುಗಳೂ ಈ ವರ್ಗಕ್ಕೇ ಸೇರಿದವು. ಆ ಮಟ್ಟುಗಳನ್ನು ಬಿಟ್ಟು ಆ ಪದ ಗುಂಪುಗಳಿಗೆ ಸ್ವತಂತ್ರ ಅಸ್ತಿತ್ವವಿಲ್ಲ. ಭಾವಗೀತೆಗಳ ಅಂತಸ್ಸು ಇವೆಲ್ಲಕ್ಕಿಂತ ಹೆಚ್ಚಿನದು. ಸ್ವರಗಳ ಜೊತೆಗೂ ಶೋಭಿಸುತ್ತವೆ; ಹಾಗೆಯೇ ಓದಿಕೊಂಡರೂ ಸೊಗಸುತ್ತವೆ. ಕೆಲವು ತಮ್ಮ ಸತ್ವದಿಂದ ಬೇರೆ ಬೇರೆ ರಾಗಿಣಿಗಳನ್ನೂ ಲಯಗಳನ್ನೂ ಆಕರ್ಷಿಸಿ ರಂಜಕವಾಗಿವೆ. ನಮ್ಮಲ್ಲಿ ಬಹುಪತ್ನಿತ್ವಕ್ಕೆ ಈಗ ಪುರಸ್ಕಾರವಿಲ್ಲದಿದ್ದರೂ - ಹಿಂದೆ ಇತ್ತಲ್ಲವೆ - ಹಾಗೆ ಇಂಥ ಸತ್ವವುಳ್ಳ ಅನೇಕ ಪದ್ಯಗಳನ್ನು ಶ್ರೀಯುತರು ರಚಿಸಿದ್ದಾರೆ.

ಇವರ ಕಾವ್ಯವನ್ನು ಓದುವಾಗ ಬೇಕಾದವರಿಗೆ ಬೇಕಾದ್ದನ್ನು ಕೊಡುವ ಈ ಕವಿಯ ಔದಾರ್ಯಗುಣ ಎದ್ದು ಕಾಣುತ್ತದೆ. ಸ್ವಂತ ಸಂತೋಷವನ್ನು ಇವರು ಕಡೆಗಣಿಸಿಲ್ಲ. ಪ್ರಕೃತಿಪ್ರೇಮ, ದೇಶಭಕ್ತಿ, ಗೀತಿಕಾ ರಸಿಕತೆ, ಸಮಾಜದಲ್ಲಿ ಕಂಡುಬರುವ ಅನೀತಿ ಅಪ್ರಾಮಾಣಿಕತೆಗಳ ಭರ್ತ್ಸನೆ ಮತ್ತು ವಿಡಂಬನೆ, ಮುಗ್ಧ ಜನರ ಮನಸ್ಸನ್ನು ತಟ್ಟುವ ಔಪದೇಶಿಕ ಹಾಡುಗಳು, ವಿದ್ವದ್ರಸಿಕರನ್ನು ಆಕರ್ಷಿಸುವ ಸುದೀರ್ಘ ಕಥನ ಕವನ, ಮಕ್ಕಳಿಗೆ ಒಪ್ಪುವ ಪದ್ಯಗಳು, ಭಕ್ತರಿಗೆ ಬೇಕಾದ ಇಷ್ಟದೇವತಾ ಸ್ತುತಿರೂಪ ರಚನೆಗಳು, ಸಂಸ್ಕೃತ ಸುಭಾಷಿತಗಳ ಮನೋಜ್ಞವಾದ ಭಾಷಾಂತರಗಳು (ಅಶ್ವಘೋಷನ ಇಡೀ ಒಂದು ಸರ್ಗವನ್ನೇ ಭಾಷಾಂತರಿಸಿ ಕೊಟ್ಟಿದ್ದಾರೆ.) ಇತರ ಭಾಷೆಗಳ ಕೆಲವು ಪದ್ಯಗಳ ಭಾಷಾಂತರಗಳು, ನವ್ಯ ಶೈಲಿಯ ರಚನೆಗಳು, ಜನರ ಆಡುಮಾತಿನ ಧಾಟಿಯಲ್ಲಿರುವ ತ್ರಿಪದಿ, ಸಾಂಗತ್ಯ, ಲಾವಣಿಗಳು, ವ್ಯಕ್ತಿ ಪ್ರಶಂಸಾ ಸುನೀತಿಗಳು - ಹೀಗೆ ಇವರ ಕಾವ್ಯ

ಪರಿಶ್ರಮ ವಿಸ್ತಾರವಾಗಿ ಹರಡಿ ಸತ್‌ಫಲಗಳನ್ನು ಕೊಟ್ಟಿದೆ. ಇವು ವ್ಯುತ್ಪನ್ನನೂ ಹೃದಯವಂತನೂ ಆದ ರಸಿಕನ ಕವಿತೆಗಳು. ಇವರಿಗೆ ಸಂಸ್ಕೃತ ಪದಗಳನ್ನು ಕಂಡರೆ ತಿರಸ್ಕಾರವಿಲ್ಲ ಎಂಬಹುದನ್ನು 'ರಾಸಲೀಲೆ' ವಿಭಾಗದಲ್ಲಿ ಕಾಣಬಹುದು. ಈಗ ಸಂಸ್ಕೃತ ಇರುವುದೇ ದೇಶ ಭಾಷೆಗಳಿಗೆ ಪದಗಳನ್ನು ಒದಗಿಸುವುದಕ್ಕೆ. ಮರುಳಯ್ಯನವರು ಇದನ್ನು ಬಲ್ಲರು. ತಮ್ಮ 'ಹಂಬಲ' ಎಂಬ ಕವನದಲ್ಲಿ ತಾನೇನಾಗಬೇಕು ಎಂಬುದನ್ನು ಸೊಗಸಾಗಿ ವರ್ಣಿಸಿದ್ದಾರೆ. ಇಲ್ಲಿನ ಅನೇಕ ಕವನಗಳಲ್ಲಿ ಆ ಹಂಬಲು ತುಂಬಿದಂತೆ ಕಾಣುತ್ತದೆ. ಮುಖ್ಯವಾಗಿ ನಾನು ಮರುಳಾಗಿರುವುದು ಇವರ 'ಕೆಂಗನಕಲ್ಲು' ಎಂಬ ಖಂಡ ಕಾವ್ಯಕ್ಕೆ! ಇವರಲ್ಲಿನ ಕವಿ ಇಲ್ಲಿ ವೈಭವದಿಂದ ಮೆರೆಯುತ್ತಾನೆ. ಯಾವನೇ ಕವಿ ತನ್ನನ್ನು ಒರೆಗಲ್ಲಿಗೆ ಹಚ್ಚಿ ಬಣ್ಣ ನೋಡಿಕೊಳ್ಳುವುದು ಅವನ ನೀಳ್ಗವನದಲ್ಲಿ. ಎಂದರೆ ವಸ್ತುವಿನಲ್ಲಿ ಆತನ ಅಹಂಲೀನತೆಯ ಪರಿಪಾಕದಲ್ಲಿ. ಇವರ 'ಕೆಂಗನಕಲ್ಲು' ಒಂದು ಸಾರ್ಥಕವಾದ ಕಾವ್ಯ ಖಂಡ. ನಾನು ಇದನ್ನು ಓದಿ ಒಳ್ಳೆಯ ಕಾವ್ಯ ಹಾಗೂ ಕಲೆಯಿಂದ ಲಭಿಸುವ, ಬೇರೆಡೆ ಎಲ್ಲೂ ದೊರೆಯದ ಸಂತೋಷವನ್ನು ಪಟ್ಟಿದ್ದೇನೆ.

ಶ್ರೀ ಮರುಳಯ್ಯನವರು ಇದರ ಕೆಲವು ಭಾಗಗಳನ್ನು ಬಳ್ಳಾರಿಯ ಸಾಹಿತ್ಯ ಸಮ್ಮೇಳನದಲ್ಲಿ ಓದಿದ್ದರಂತೆ. ಅಲ್ಲಿನ ಕವಿಗೋಷ್ಠಿಗೆ ನಾನು ಅಧ್ಯಕ್ಷನಾಗಿದ್ದೆ. ನಾನು ಇವರ ಈ ಕವನವನ್ನು ಪ್ರಶಂಸಿಸಿ ಇವರನ್ನು ಅಭಿನಂದಿಸಿದ್ದನ್ನು ಈಗ ಇವರು ನನ್ನ ನೆನಪಿಗೆ ತಂದು ನನಗೆ ತುಂಬ ಖುಷಿ ಕೊಟ್ಟರು. ಇದಕ್ಕೆ ರಾಜ್ಯ ಪ್ರಶಸ್ತಿಯೂ ಸಿಕ್ಕಿದೆ. ನಮ್ಮವರು ಗುಣಜ್ಞರು.

ಅನೇಕ ಕವಿತಾ ಮಾರ್ಗಗಳಲ್ಲಿ ಸಂಚರಿಸಿ ಹಲವಾರು ರಚನೆಗಳಿಂದ ರಸಿಕರನ್ನು ತಣಿಸುತ್ತಿರುವ ಶ್ರೀ ಮರುಳಯ್ಯನವರನ್ನು ನಾನು ಹಾರ್ದಿಕವಾಗಿ ಅಭಿನಂದಿಸುತ್ತೇನೆ. ಹಿಂದೆ ಷಟ್ಪದಿಗಳು ತಮ್ಮ ತುಟ್ಟ ತುದಿಯನ್ನು ಮುಟ್ಟಿ ಕೃತಾರ್ಥವಾದಂತೆ ತೋರುತ್ತದೆ. ಶ್ರೀ ಮರುಳಯ್ಯನವರಿಗೆ ವೃತ್ತರೂಪದ ಛಂದಃ ಪ್ರಕಾರಗಳೂ ರಗಳೆಗಳೂ ತುಂಬ ಚೆನ್ನಾಗಿ ಒಗ್ಗಿವೆ. ಅವರು ಇನ್ನೂ ಹೆಚ್ಚಾಗಿ ಕಥನ ಕವನಗಳನ್ನು ರಚಿಸಬೇಕೆಂದು ನನ್ನ ಆಸೆ. ಹೊಳೆದಂತೆ ಓಡುವ ಸುಕ್ಕು ಸಿಕ್ಕಿಲ್ಲದ ಪದದೋಘ, ಪ್ರತಿಮಾ ರೂಪಗಳಲ್ಲಿ ವಿಷಯತ್ವವನ್ನು ಪಡೆಯುವ ಭಾವಗಳು, ತಾದಾತ್ಮ್ಯ ಕುಶಲವಾದ ವಿನೀತಾಹಂಕಾರ, ಬೆಚ್ಚನೆ ಹೃದಯ, ವ್ಯುತ್ಪನ್ನಮತಿ - ಇವುಗಳನ್ನೂ ಯಥೇಚ್ಛವಾಗಿ ಪಡೆದಿರುವ ಮರುಳಯ್ಯನವರು ತಮ್ಮ ಕೃತಿಗಳಿಂದ ರಸಿಕಲೋಕವನ್ನು ಮರಳು ಮಾಡುತ್ತಿರಲೆಂದು ನಾನು ಹಾರ್ದಿಕವಾಗಿ ಹಾರೈಸುತ್ತೇನೆ. ಸರಸ್ವತಿ ಇವರಿಗೆ ಸದಾ ಪ್ರಸನ್ನಳಾಗಿರಲಿ.

9-11-85 — ಪು.ತಿ.ನ.

ಡಾ॥ ಎಸ್.ಎಂ. ವೃಷಭೇಂದ್ರಸ್ವಾಮಿ

ಕವಿಸತ್ತ್ವದ ಸಂಪುಟ, ಸಹೃದಯ ರಸದೂಟ

ನವೋದಯ ಕವಿಗಳ ಕಿರಿಯ ತಲೆಮಾರಿನ ಕವಿಗಳಲ್ಲಿ ಗಮನಾರ್ಹ 'ಭಾವಕವಿ'ಯಾಗಿ ಪ್ರಸಿದ್ಧವಾಗಿರುವರು. ಜನಪ್ರಿಯವಾಗಿರುವರು ಮಿತ್ರ ಡಾ॥ ಸಾ.ಶಿ. ಮರುಳಯ್ಯ. ನಾಟಕಕಾರರಾಗಿ, ವಿಮರ್ಶಕರಾಗಿ, ಮಾತುಗಾರರಾಗಿ ಜನಮನವನ್ನು ಗೆದ್ದಿರುವರಲ್ಲದೆ, ಭಾವಗೀತಾ ಕವಿಯಾಗಿ ಸಹೃದಯರನ್ನು ಆಕರ್ಷಿಸಿರುವರು. ಆಮೋದಿಸಿರುವರು. ಕನ್ನಡ ನವೋದಯ ಕವಿ-ಲೇಖಕರ ಬರಹಗಳಿಗೆ ಮನಸೋತು, ಕುವೆಂಪು, ಬೇಂದ್ರೆ, ಪುತಿನ, ರಾಜರತ್ನಂ, ನರಸಿಂಹಸ್ವಾಮಿಯವರ ಸಾಹಿತಾಭ್ಯಾಸದಿಂದ ಪುಲಕಗೊಂಡು, ಗ್ರಾಮ ಜೀವನವದ ಅನುಭವಗಳಿಗೆ ತನ್ನ ಮನಸ್ಸನ್ನು ತೆರೆದುಕೊಂಡು, ಸ್ವ-ಅಭಿವ್ಯಕ್ತಿಯ ಪ್ರಯತ್ನಗಳಲ್ಲಿ ಬೆಳೆದು, ತನ್ನತನವನ್ನು ರೂಪಿಸಿಕೊಂಡು ಕವಿ, ತನ್ನ ವೈವಿಧ್ಯಮಯ ರಚನೆಗಳಲ್ಲಿ ತನ್ನನ್ನು ಅವಿಷ್ಕಾರಗೊಳಿಸಿಕೊಂಡಿರುವುದು ಈ ಎಲ್ಲ ಕವಿತೆಗಳಲ್ಲಿ ಕಾಣುವ ಒಟ್ಟು ದೃಶ್ಯ. ಇಲ್ಲಿ ವ್ಯಕ್ತಿತ್ವದ ಬೆಳವಣಿಗೆ, ಅಭಿವ್ಯಕ್ತಿಯ ಪರಿಣತಿ, ಒಟ್ಟಂದದ ಪ್ರಭಾವ ಮೈತಳೆದು ನಿಂತಿದೆ. ನವೋದಯ ಕವಿಗಳ ಅವಸರದ ಸಮೀಕ್ಷೆಯಲ್ಲಿಯೂ ಮರೆಯಲಾಗದ ಸ್ಥಾನ-ಮಾನವನ್ನು ಗಳಿಸಿರುವರು ಕವಿ ಡಾ॥ ಸಾ.ಶಿ. ಮರುಳಯ್ಯ.

ಡಾ॥ ಮರುಳಯ್ಯನವರ ಕವನ ಕೃಷಿಯಲ್ಲಿ ಎದ್ದು ಕಾಣುವ ಬೆಳೆಸು, ಅಲ್ಲಿ ಮೂಡಿ ನಿಂತಿರುವ ಜೀವನೋತ್ಸಾಹ ಹಾಗೂ ಸೌಂದರ್ಯಪ್ರಿಯತೆ ಅದನ್ನು ಬಿಂಬಿಸಲು ಕವಿ ಭಾಷೆಯನ್ನು ತಿದ್ದಿ, ತೀಡಿ, ದುಡಿಸಿಕೊಳ್ಳುವ ಹದ ಗಮನಾರ್ಹವಾದ ಅಂಶ. ತನ್ನದೇ ಆದ, ತನ್ನ ಹಳ್ಳಿ ಜೀವನದ್ದೇ ಆದ, ಕನ್ನಡ ಭಾಷೆಯನ್ನು ಅದರ ತಾಜಾ ರೀತಿಯಲ್ಲಿಯೇ ಬಳಸದೆ, ಅದಕ್ಕೆ ಸೌಂದರ್ಯದ ಸಾಣೆ ಹಿಡಿಯುತ್ತಾರೆ. ಅರ್ಥಭಾವದ ಕಿಡಿ ಪಳಂಚುವಂತೆ ಮಾಡುತ್ತಾರೆ. ಅಲ್ಲಿ ಕಾಣಬಹುದು ಶಬ್ದ ಸೌಂದರ್ಯವನ್ನು, ಅಲಂಕಾರಗಳ ನೂತನ ಸೊಬಗನ್ನು, ಛಂದೋ ವೈವಿಧ್ಯವನ್ನು, ಕವಿತೆಯ ತರಂಗಿತತೆಯನ್ನು, ಪರಿಣಾಮ ರಮಣೀಯತೆಯನ್ನು ! ಡಾ॥ ಮರುಳಯ್ಯನವರ ಕಾವ್ಯದ ಸಾರವತ್ತಾದ ಅಂಶ, ದೃಶ್ಯ ನಿರ್ಮಾಣ, ನಾಟಕೀಯತೆ ಹಾಗೂ ಭಾವರಮಣೀಯತೆ; ವೈವಿಧ್ಯತೆಯೂ ಅಷ್ಟೇ ಆಕರ್ಷಣೀಯ. ನವೋದಯ ಕಾವ್ಯದ ಎಲ್ಲ ಮುಖಗಳ, ಎಲ್ಲ ಮಜಲುಗಳ ಚಿತ್ರಣಕ್ಕೆ ಈ ರಚನೆಗಳು ನೇರ ಉದಾಹರಣೆಗಾಗಿವೆ.

ಪ್ರಕೃತಿ ರಮಣೀಯತೆಯನ್ನು ಮಾನವ ಪ್ರಕೃತಿಯೊಡನೆ ಸಮೀಕರಿಸಿ ಚಿತ್ರಿಸುವ ಕಲೆ, ಸಂಸಾರ ಜೀವನದ ಸರಸ-ವಿರಸ ಹಂಬಲ-ಆದರ್ಶಗಳನ್ನು ಎರಕ ಹೊಯ್ಯುವ ನಯ, ನಾಡು-ನುಡಿ-ರಾಷ್ಟ್ರ ಸಂಸ್ಕೃತಿಯನ್ನು ವೈಭವೀಕರಿಸುವ ನವೋದಯ ಸ್ಫೂರ್ತಿ, ಸಮಕಾಲೀನ ಸಮಾಜವನ್ನು ಕಣ್ಣಿಟ್ಟು ನೋಡಿ, ಅನುಕಂಪಿಸಿದರೂ, ಚುಚ್ಚದ-ಕೊಚ್ಚದ ಹೃದಯವಂತಿಕೆ, ಭಾರತ, ಕರ್ನಾಟಕ, ಗಾಂಧಿ, ಬುದ್ಧ, ಬಸವರನ್ನು ಗೌರವದಿಂದ

ಆರಾಧಿಸುವ ಮೆಚ್ಚುಗಾರಿಕೆ, ಡಾ॥ ಮರುಳಯ್ಯನವರ ಕಾವ್ಯದ ಹೂರಣ, ಅದೇ ಅದರ ತೋರಣ. ಕನ್ನಡ ಕಾವ್ಯ ಬಹು ವಾದಗಳ ಕಾದಾಟ ಕಂಡರೂ ಆ...ಈ.... ಕೊಂಬೆಗೆ ಹಾಯದೆ, ಹೃದಯ ಸ್ಫೂರ್ತಿ ಅಭಿವ್ಯಕ್ತಿ ರಮಣೀಯತೆ ನಂಬಿ, ತನ್ನತನವನ್ನೇ ಉಳಿಸಿಕೊಂಡಿದ್ದಾರೆ ಕವಿ ಮರುಳಯ್ಯ. ತಮ್ಮ ಮುಂದಿರುವ ಈ ಸಮಸ್ತ ಕವಿತಾ ಸಂಪುಟ, ಕವಿಯಾಗಿ ಶ್ರೀ ಮರುಳಯ್ಯ ಬೆಳೆದದ್ದು ಬಾಳಿದ್ದು ಆಳಿದ್ದು ಏನು ಎಂಬುದರ ಸೈಜ ಕನ್ನಡಿ.ಸಹೃದಯರ ಮುಖವೂ ಅಲ್ಲಿ ಕಾಣಿಸುತ್ತದೆ. ಕವಿ ಡಾ॥ ಮರುಳಯ್ಯ ಬಹುಕಾಲ ಬದುಕಬಲ್ಲ ಸತ್ವದ ಕವಿ ಎಂಬುದರ ಪುರಾವೆ ಈ ಸಂಪುಟ. ರಸಿಕರಿಗೆ, ಸಹೃದಯರಿಗೆ, ಪ್ರಿಯವಾಗುವ ರಸದೂಟ ಇಲ್ಲಿದೆ.

''ಶಿವಪ್ರಸಾದ'' **-ಎಸ್.ಎಂ. ವೃಷಭೇಂದ್ರಸ್ವಾಮಿ**

ಕಲ್ಯಾಣನಗರ, ಧಾರವಾಡ -7

ವೈಯಂ.ಸಿ. ಶರ್ಮ ಬೆಂಗಳೂರು
ಅಧ್ಯಕ್ಷರು
ರಾಜ ಭಾಷಾ (ವಿಧಾಯೀ) ಆಯೋಗ

ಹಿರಿಯ ಸಾಹಿತಿಗಳಾದ ಡಾ|| ಸಾ.ಶಿ. ಮರುಳಯ್ಯನವರ ಕೃತಿಯನ್ನು ಓದಿ ಆನಂದಪಟ್ಟಿದ್ದೇನೆ. ಶಿವತಾಂಡವ, ಕೆಂಗನಕಲ್ಲು, ರಾಸಲೀಲೆ, ರೂಪಸಿ ಮೊದಲಾದ ಕವನ ಸಂಕಲನಗಳು. ಅವರ ಮೂವತ್ತು ವರ್ಷಗಳ ಕಾವ್ಯ ಸಾಧನೆಯ ರಸಸರೋವರ; ಕವಿ ಜೀವನದ ಸುಗ್ಗಿ.

ಕವಿಯು ಚೈತನ್ಯಭರಿತನಾಗಿರಬೇಕು. ಹಾಗಿದ್ದರೆ ಮಾತ್ರ ಅವನು ಲೋಕಾನುಭವದ ನಾಡಿಯನ್ನು ಮಿಡಿಯಬಲ್ಲ. ಅದರ ಫಲ ಒಳ್ಳೆಯ ಕೃತಿ. ಡಾ|| ಸಾ.ಶಿ.ಯವರ ಕೃತಿ ಇಂತಹದು. ಈ ಕವನಗಳು ನನ್ನ ಮನಸ್ಸನ್ನು ಜಾಗೃತಗೊಳಿಸಿವೆ ಹಾಗೂ ಅದಕ್ಕೆ ಜ್ಞಾನಪ್ರಕಾಶವನ್ನು ತಂದುಕೊಟ್ಟಿವೆ. ಸಹೃದಯರ ಅಂತಃಕರಣದಲ್ಲಿ ಶಾಶ್ವತವಾಗಿ ಇವು ನಿಲ್ಲುತ್ತವೆ.

ಈ ಕೃತಿಯು ಶಿವನೊಲುಮೆ, ಗುರುಕೃಪೆ ಮತ್ತು ಕವಿತಾರಮಣಿಯ ವರದ ಹಸ್ತದಿಂದ ಹರಿದುಬಂದ ಕಾವ್ಯಧಾರೆಯಾಗಿದೆ.

ಆಂಗ್ಲ ಸಾಹಿತಿ ಬೇಕನ್ ಹೇಳಿದ್ದು ನೆನಪಾಗುತ್ತದೆ. :

"The Poets eye, in a fine frenzy rolling
Doth glance from heaven to earth to heaven,
And as imagination bodies forth,
The form of things unknown, the poet's pen,
Turns them to shapes and gives to airy nothing.
A local habitation and a name."

ಸಾ.ಶಿ.ಯವರ ಈ ಕೃತಿಯು ಪ್ರತಿಪುಟದದಲ್ಲೂ ಕವಿಯ ಮನಸ್ಸಿನ ತುಮುಲ, ಸೌಂದರ್ಯದೊಡನೆ ಅವನ ಸಹಾನುಭವ, ಅವನ ಸಂವೇದನೆಯಲ್ಲಿನ ಕೋಮಲತೆ ಮತ್ತು ಅವನ ಚಿಂತನೆಯಲ್ಲಿನ ಉದಾತತ್ತೆಯನ್ನು ಗುರುತಿಸಬಹುದಾಗಿದೆ.

13ನೇ ಸೆಪ್ಟೆಂಬರ್ 1985 -ವೈ.ಯಂ.ಸಿ. ಶರ್ಮ

ರಾಜಕುಮಾರ್ (ಮುತ್ತುರಾಜ) 16-1-1985
ಕನ್ನಡ ಚಿತ್ರನಟ ಬುಧವಾರ

'ಮಾನವ ಜನ್ಮ ದೊಡ್ಡದು ಎಂದಿದ್ದಾರೆ' ದಾಸರು.

ಏಕೆ?

ಮಾನವ ತನ್ನ ಹುಟ್ಟಿಗೆ ಕಾರಣ ಹುಡುಕುವುದಕ್ಕೆ,
ನೆರಳನಂತೆ ಹಿಂಬಾಲಿಸುತ್ತಿರುವ ಮೃತ್ಯುವನ್ನು ಎದುರಿಸಲಿಕ್ಕೆ
ಭಗವಂತನನ್ನು ಕುರಿತು ಸದಾ ಧ್ಯಾನಿಸುವುದಕ್ಕೆ;
ಭಕ್ತಿಯ ಆನಂದದಲ್ಲಿ ಮೈ ಮರೆಯುವುದಕ್ಕೆ,

ಕಡೆಗೆ,

ಕಲಾ ಸೇವೆ ಮಾಡಿ ಕೈವಲ್ಯ ಪಡೆಯುವುದಕ್ಕೆ
ನನ್ನ ತವರಿನವರಾದ ಡಾ|| ಸಾ.ಶಿ. ಮರುಳಯ್ಯನವರು
ಈ ಎಲ್ಲ ಗುಣಗಳನ್ನು ಮೈಗೂಡಿಸಿಕೊಂಡಿದ್ದಾರೆ
ಇವರು ಧನ್ಯರು.

ಹೂ ಬನಕ್ಕೆ ನುಗ್ಗಿದ ದುಂಬಿ ಯಾವ ಹೂವು ಮಧುಭರಿತವೆಂದು ತಿಳಿಯದೆ ಹುಡುಕುವುದುಂಟೆ? ಒಂದೊಂದು ಹೂವು ಒಂದೊಂದು ಮಧುತುಂಬಿದ ಪಾತ್ರೆ. ಅದೇ ರೀತಿ ಈ ಸಂಕಲನದಲ್ಲಿರುವ ಕವನಗಳೆಲ್ಲವೂ ಸುಗಂಧ ಕುಸುಮಗಳು. ಎಲ್ಲವೂ ಸುಂದರ, ಎಲ್ಲವೂ ಚೆನ್ನ. ನಾನು ಓದಿದೆ. ಆನಂದಿಸಿದೆ. ಆ ಆನಂದ ಈಗ ನಿಮ್ಮದಾಗಿದೆ.

ಮದರಾಸು -ರಾಜಕುಮಾರ್

The Versatile Septuagenarian Dr. SA SHI MA–a profile

– Prof. (Smt.) Vanamala Achar

Socrates, Plato and Aristotle are the pioneers we think of whenever we talk of the great tradition of teachers and their disciples who have immortalized one another. Of course, this is besides saluting those illustrious Gurus of the ancient Gurukula system of our land where the teacher and the taught had a harmonious relationship, a binding of affection, awe, respect and admiration. We, people of the teaching fraternity, are proud of belonging to that great stream of noble souls. We may not have the greatness of Sri Ramakrishna Paramahamsa or Swami Vivekananda, but we know that knowledge is like a mighty river and all other small streams pour their tributaries into the principal stream as it progresses towards the sea. Without these tributaries even the big river will dry up. Similarly, if all of us, who have become teachers by choice and not by chance, contribute our mite to this great field, education will not remain only a means to earn one's livelihood. The best teacher, besides imparting knowledge, concentrates on character development by inculcating truth and purity among his pupils. The youths must be made to realize that much depends upon their sincere efforts. Take the examples of Ekalavya, Arjuna and Duryodhana. Ekalavya became a great archer without learning directly from the teacher, Arjuna took the best advantage of the tacher's guidance whereas in spite of being with an illustrious teacher like Dronacharya, Duryodhana did not acquire the required skill. His own negative thinking hampered his success.

These simple thoughts on education flashed through my mind when I thought of our septuagenation professor Sa Shi Marulaiah, affectionately called SA SHI MA, who was felicitated on 8th February, this year. He has lived magnificent seventy summers!

Professor Marulaiah had his education under all time greats like Kuvempu, Dr. D.L. Narasimhachar Prof-De Ja Gow, Dr S. Shikantha Shastry, Prof, K.V. Raghava char, S.V. Ranganna, Dr. R.C. Hiremath, T.S. Shama Rao and many others. He has also taught innumerable students who remember him with gratitude. That accounts for his versatality and profundity of thoughts. Here is a brief resume of our beloved friend Dr. Marulaiah.

He was born on 28th January, 1931 at Sasalu, Chikka Nayakana Halli Taluk, Tumkur District. His parents - Shri Shivarudrayya and Smt. Siddamma. Wife - Smt. Veena

Children - M. Shivaprasad M.A.,
M. Ragini Sangameshwar M.Sc. (California)
M. Ravi Prasad, B.E.Ms (California)

He had his early education at Sasalu, an unknown village. He remembers with gratitude his first teacher, his father Shivarudrayya of Coolimath who initiated him into learning, and his mother Siddamma. As a teacher his father gave him a strong foundation inculcating love for learning and the teaching profession; his mother taught him to rely on the greatness of selfrespect, selfreliance, will power and determination. Facing all odds as one coming from the rural area, Sa Shi Ma emerged as a man of sterling character!

Young Sa Shi Ma had set a clear goal for himself. He took the decision to be teacher so early as 1956, after doing his B.A (Hons) from Mysore University in 1955, M.A from Mysore University in 1956. He got his Doctorate from Karnataka University in 1971.

Worked as a lecturer at different places, like Chamaraja Nagar, Tumkur, Davangere, Shimoga, Bangalore and Mangalore. After completing 34 years of fruitful service, prof Marulaiah retired on 28th Jan, 1989.

He had the honour to work as the Principal of Kuvempu First Grade College, Channapatna between 1976-79. During this time he edited the Kannada Encyclopedia as the Chief Editor.

Prof. Sa Shi Ma has also rendered social service working in different capacities as-

a) Founder Secretary of Taruna Bharati Kala Association, Sasalu, 1960.

b) Founder President - Ragini Shikshana Pratiṣhthana, Vijayanagar, Bangalore.

c) Participant in Sahitya Sammelan Seminars at Bellary, Bangalore, Shimaoga, Chikkamagalur, Tiptur, Gulbarga and other places from 1959 up to date.

d) The President of Sahitya Parishat between 1995-98. This prestigious post proved that this successful teacher could also be

a successful administrator! He rendered selfless service to Sahitya Parishat.

In recognition of all his contribution to literature and Education, the Government of Karnataka, Karnataka Sahitya Academy honoured him with Rajyotsava Prashasti, and Academy award in 1999. It was befitting that this staunch champion for the cause of Kannada was awarded that.

Prof. Marulaiah's contribution to literature is a buildering variety of 78 books comprising poetry, fiction, drama, dance dramas, criticism, short stories, travelogues, children's literature, spiritual discourse, biographies, grammar and other significant write ups. His dance dramas, cassettes and music albums are the favourites of lovers of art.

One looks at his publications and contribution to society as a teacher, research scholar, critic, actor, poet and orator with awe and admiration. To top it all he has a doctorate too! It all looks incredible how one individual could achieve so much of excellence. He published his first collection of poems in 1951, it was well received and there was no looking back after that! He strode like a giant! He has carved a comfortable niche for himself in Modern Kannada Literature. There is no form that he has not touched upon, like Oliver Goldsmith! and like Goldsmith, he wrote nothing that he has not adorned!

What is the secret of this tremendous energy? What made him a successful teacher, a write and an orator? Hard work and staunch will power? He has also been fortunate throughout his life and in his relationship and interaction with others. His positive thinking and positive approach have ensured him of all this glorious success.

Initially it was his parents and uncles who inspired him with love for learning. All his teachers moulded his solid personality. He is basically a dreamer with his feet firm on the ground. Like Robert Frost he seems to believe that one might wander in the realm of beauty for a while but the earth is the place to look for love, comfort and solace. He is a poet par excellence. His poems are full of haunting melody because he has flair for music. He is a romantic with a touch of realism.

All teachers are not poets and all poets are not teachers. A poet is a seer, an enlightened wise person. So, when a man of letters becomes a teacher, he will certainly have an endearing

personality which helps him win the hearts of his pupils, because literature ennobles the soul. We have a number of such stalwart literatures as teachers living at present amidst us. They have all enriched Kannada Literature with their profound thinking. We are lucky to have them with us who can guide the youth.

In order to know what a lovable person Prof. Marulaiah is, one should get close to him and listen to him. One cannot help coming under his influence. You will be bowled over by his gentleness, simplicity, genuine courtesy human attitude child like warmth and affability. Well, instead of concentrating on his positive qualities which are too many, let me talk of what he is not. He is not a hypocrite, not an autocrat, not a fanatic, not a poser. The absence of many more such negative aspects probably has made him a living legend!

Last but not the least, I should say a word of praise for his wife Smt. Veena. You should only get a chance to meet this equally pleasant, charming, affectionate, cool-looking lady and then our professors success will not be an enigma to you. Behind every successful man there is a woman - they say. It will sound like a cliche I know but still, I wish to quote it because she it solely responsible for his success and what is more heartening is, professor Marulaiah acknowledges her great support in all his endeavours. She is the source of his strength. There is total harmony and compatibility in their life. That accounts for their youthful looks. Hats off to you, Veena! And children! What gems of children! Two sons and a daughter-all highly educated and well placed.

Dr. Marulaiah candidly acknowledges that he owes his success to God Almighty, his parents and elders, wife and children, all his well-wishers, his own convictions, Sincerity and perseverance.

As Rudyard Kipling says

Have you played the game?
When the great scorer comes
To write against your name,
He writes not that you won or lost
But how you played the game.

Let's wish the couple long life and happiness. May God Bestow this choicest Blessings on them!



ಸಾ.ಶಿ. ಮರುಳಯ್ಯನವರದು ಅನೇಕ ಅರ್ಥಗಳಲ್ಲಿ ಸಮನ್ವಯ ವ್ಯಕ್ತಿತ್ವ. ಸೃಜನ-ವಿಮರ್ಶನ, ಹಳಗನ್ನಡ-ಹೊಸಗನ್ನಡ, ಪೌರ್ವಾತ್ಯ-ಪಾಶ್ಚಿಮಾತ್ಯ ಹೀಗೆ ಅನೇಕತೆಗಳನ್ನು ಏಕತೆಯಲ್ಲಿ ಅಳವಡಿಸಿಕೊಂಡ ಅವರ ಬರವಣಿಗೆಯ ಸ್ಥಾಯಿ ಬಹುಶ್ರುತತ್ವ. ಅದು ಬರೆಹಕ್ಕೆ ಇಳಿಯುವಾಗ ಗೊಂದಲವನ್ನು ನಿರ್ಮಿಸಿಕೊಳ್ಳದೆ ಗರಿಗರಿಯಾಗಿ ಬಿಚ್ಚಿಕೊಳ್ಳುತ್ತಿರುವುದು ಒಂದು ವಿಶೇಷ. ಈ ಮಾತಿಗೆ ಅವರ ವೈವಿಧ್ಯಮಯ ಅಭಿವ್ಯಕ್ತಿಯೇ ನಿದರ್ಶನ.

ಅಭಿವ್ಯಕ್ತಿಯಲ್ಲಿ ವ್ಯಕ್ತಿ ಕಾಣಿಸಿಕೊಳ್ಳುತ್ತಾನೆ, ಕಾಣಿಸಿಕೊಳ್ಳಬೇಕು. ವ್ಯಕ್ತಿನಿಷ್ಠ ಸೃಜನ ಸಾಹಿತ್ಯದಲ್ಲಿ ಅನಿವಾರ್ಯವಾಗಿರುವ ಇದು, ವಸ್ತುನಿಷ್ಠವಾಗಿರಬೇಕೆನ್ನುವ ವಿಮರ್ಶನ ಸಾಹಿತ್ಯದಲ್ಲಿಯೂ ಪ್ರಸರಿಸಿಕೊಳ್ಳುತ್ತದೆ. ಇದಕ್ಕೆ ನಿದರ್ಶನವೆನ್ನುವಂತೆ ವ್ಯಕ್ತಿ ಮರುಳಯ್ಯನವರ 'ರಸಪ್ರಜ್ಞೆ' ಮತ್ತು 'ವಿಚಾರಪರತೆ'ಗಳು ಇವರ ಸಾಹಿತ್ಯದಲ್ಲಿ ಓತಪ್ರೋತ. ಉಸಿರುಗಟ್ಟಿಸುವ 'ವೈಚಾರಿಕತೆ', ಮೈಮರೆಯಿಸುವ ' ಭಾವುಕತೆ'ಗಳ ಅತಿರೇಕಕ್ಕೆ ಹೋಗದ ಒಂದು ಸಮನ್ವಯ ನಿಲುವು ಇವರ ರಚನೆಯ ಹೃದಯವೆನಿಸಿದೆ.

— ಎಂ. ಎಂ. ಕಲಬುರ್ಗಿ